Estd. 1906

ಸ್ವದೇಶಾಭಿಮಾನಿ

SWADESHABHIMANI

ಜರ್ಮನಿ ಗಡಿಯನ್ನು ದಾಟಲು ಬ್ರಿಟಿಷ್ ಸೈನಿಕನು ಸಿದ್ಧನಾಗಿದ್ದಾನೆ

KANNADA ILLUSTRATED WEEKLY

ಭಾರತದ ಕುರಿತು

ಸ್ಪಷ್ಟೋಕ್ತಿಯಿಲ್ಲ!

ವೀರ ಸಾವರ್ಕರರ ಟೀಕೆ!

ಭಾರತದ ಸ್ಟೇಟ್ ಸೆಕ್ರೆಟರಿಗಳಾದ ಎಮರಿಯವರು ಕಳೆದ ತಿಂಗಳ ೧೫ರ ದಿನ ಕೊಟ್ಟ ಭಾಷಣದ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತ ಅಖಿಲಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ರಾಷ್ಟ್ರವೀರ ವಿ. ಡಿ. ಸಾವರಕಾರರು —"ಯುದ್ಧದಲ್ಲಿ ಬ್ರಿಟನು ಜೀವನ ಮರಣದ ಸಂಧಿಗ್ಧದಲ್ಲಿ ಬಿದ್ದಿರುವದಾದರೂ, ಹಿಂದುಸ್ಥಾನದ ವಿಷಯದಲ್ಲಿ ಅದು ಈಗಲೂ ಸ್ಪಷ್ಟವಾದ ಮಾತುಗಳನ್ನು ಆಡುತ್ತಿರುವುದಿಲ್ಲ" ಎಂದಿರುವರು.

"ಭಾರತವು ಇತರ ವಸಾಹತಗಳಂತೆ ಪೂರ್ಣ ಸ್ವರಾಜ್ಯವನ್ನು ಅನುಭವಿಸಬೇಕೆಂಬುದು ತಮ್ಮ ಆಶಯವಾಗಿರುವದೆಂದು ಎಮರಿಯವರು ಹೇಳುತ್ತಾರೆ. ಆದರೆ ಯಾವಾಗ? ಎಷ್ಟು ಶತಮಾನಗಳು ಕಳೆದ ಮೇಲೆ? ಈ ವಿಷಯಕ್ಕೆ ಅವರು ಮೌನವಾಗಿದ್ದಾರೆ. ೭೨೫ ವರ್ಷಗಳ ಹಿಂದೆ ಇದೇ ಜೂನ್ ೧೫ರ ದಿನ ಬ್ರಿಟಿಷ್ ಜನರು ತಮ್ಮ ಅರಸನಾದ ಜಾನನಿಂದ ನಿರಂಕುಶ ಶಾಸನಾಧಿಗಳನ್ನು ಕಿತ್ತುಕೊಂಡಿದ್ದರು. ಆ ಘಟನೆಯ ಸ್ಮಾರಕ ದಿನದಂದು ಎಮರಿಯವರು ಈ ಭಾಷಣವನ್ನು ಕೊಟ್ಟರು. ಯಾವ ನಿರಂಕುಶ ಅಧಿಕಾರಗಳನ್ನು ಬ್ರಿಟಿಷ್ ಜನರು ತಮ್ಮ ಅರಸನಿಂದ ಕಿತ್ತುಕೊಂಡಿದ್ದರೋ, ಅದೇ ನಿರಂಕುಶ ಅಧಿಕಾರಗಳನ್ನು ೭೨೫ ವರ್ಷಗಳು ಕಳೆದ ಅನಂತರವೂ ಭಾರತದ ಮೇಲೆ ತೋರಿಸುತ್ತಿರುವುದು ತುಂಬಾ ಖೇದಜನಕವಾಗಿದೆ.

ಬರಿಯ ನೆವನ

"ಹಿಂದುಸ್ಥಾನಕ್ಕೆ ಕೂಡಲೇ ಸ್ವರಾಜ್ಯವನ್ನು ಕೊಡದಿರಲಿಕ್ಕೆ ಬ್ರಿಟಿಷರು ಕೊಡುವ ಕಾರಣ ಯಾವುದು? ಎಮರಿಯವರ ಪೂರ್ವಾಧಿಕಾರಿಗಳು ಯಾವ ಕಂಠಸ್ವರದಿಂದ ಯಾವ ಮಾತುಗಳನ್ನು ಆಡಿದ್ದರೋ ಅವೇ ಮಾತುಗಳನ್ನು ಇವರೂ ಆಡುತ್ತಿದ್ದಾರೆ! ಹಿಂದುಸ್ಥಾನದೊಳಗಿನ ಧಾರ್ಮಿಕ, ಸಾಮಾಜಿಕ ಮತ್ತು ಐತಿಹಾಸಿಕ ಸಮಸ್ಯೆಗಳು ಬ್ರಿಟಿಷರು ಸ್ವರಾಜ್ಯವನ್ನು ಕೊಡುವದಕ್ಕೆ ದೊಡ್ಡ ವಿಘ್ನಗಳಾಗಿರುವವಂತೆ. ಆದರೆ ಇವೇ ಸಮಸ್ಯೆಗಳನ್ನು ಬಿಡಿಸುವದಕ್ಕೆ ಜನಾಂಗಸಂಘವು ಕೆಲವು ಸಿದ್ಧಾಂತಗಳನ್ನು ಒಪ್ಪಿಕೊಂಡು ನಿಯಮಗಳನ್ನು ಮಾಡಿರುವದಷ್ಟೆ? ಈ ಸಿದ್ಧಾಂತ ಮತ್ತು ನಿಯಮಗಳನ್ನು ಬ್ರಿಟಿಷ್ ಸರಕಾರವೂ ಭಾರತ ಸರಕಾರವೂ ಒಪ್ಪಿದೆ. ಹಾಗಿದ್ದ ಮೇಲೆ ನಿಯಮಗಳನ್ನು ಅನುಸರಿಸಿ ಒಂದು ಘಟನೆಯನ್ನು ತಯಾರಿಸಿ ಬ್ರಿಟನು ಹಿಂದುಸ್ಥಾನಕ್ಕೆ ಯಾಕೆ ಸ್ವರಾಜ್ಯವನ್ನು ಕೊಡುವದಿಲ್ಲ? ಇದೊಂದು ವಿಷಯಕ್ಕಾಗಿ ಮಾತ್ರ ಹಿಂದುಸ್ಥಾನದ ಎಲ್ಲಾ ಜಾತಿಮತ ಪಂಗಡಗಳು ಮೊದಲು ಒಂದಾಗಬೇಕೆಂದು ಹೇಳಿ ಒಂದು ಜಾತಿಯನ್ನು ಇನ್ನೊಂದರ ಮೇಲೆ ಎತ್ತಿಕಟ್ಟುವದೇಕೆ? ಹಿಂದುಸ್ಥಾನದಲ್ಲಿ ಜಾತೀಯ ಐಕ್ಯವು ಇಲ್ಲದೇನೇ ಅದನ್ನು ಸೈನ್ಯಬಲದಿಂದ ಗೆಲ್ಲಲಿಕ್ಕೆ ಬ್ರಿಟನು ಸಮರ್ಥವಾಗಿರುವುದೆಂದಾದರೆ, ಹಿಂದುಸ್ಥಾನದ ಹಲವು ಜನರ ಅಪೇಕ್ಷೆಗೆ ವಿರೋಧವಾಗಿ ಜಾತೀಯ ತೀರ್ಮಾನವನ್ನು ಹೊರಿಸಲಿಕ್ಕೆ ಬ್ರಿಟನು ಶಕ್ತವಾಗಿರುವುದೆಂದಾದರೆ, ಯುದ್ಧಾರಂಭವಾದೊಡನೆಯೇ ಪ್ರಾಂತ್ಯ ಮತ್ತು ಕೇಂದ್ರಗಳಲ್ಲಿ ನಿರಂಕುಶವಾದ ಕಾನೂನುಕ್ರಮವನ್ನೇ ಸ್ಥಾಪಿಸಲಿಕ್ಕೆ ಬ್ರಿಟನಿಗೆ ಬಲವಿರುವದೆಂದಾದರೆ, ಜನಾಂಗ ಸಂಘವು ಏರ್ಪಡಿಸಿದ ಅಂತರರಾಷ್ಟ್ರೀಯ ಕ್ರಮನಿಯಮಗಳನ್ನು ಅನುಸರಿಸಿ ಸ್ವರಾಜ್ಯವನ್ನು ಕೊಡಲಿಕ್ಕೆ ಮಾತ್ರ ಬ್ರಿಟನು ಹೆದರಬೇಕೆ? ಒಂದು ದೇಶ ಅಥವಾ ಅದರೊಳಗಿನ ಜಾತಿಪಂಗಡಗಳನ್ನು ತಪಿಸುವುದರಲ್ಲಿ ಯಾವ ನ್ಯಾಯವಿದೆಯೋ, ಅವುಗಳನ್ನು ಆಶೀರ್ವದಿಸುವುದರಲ್ಲಿ ಅದಕ್ಕೂ ಸಾವಿರಾರು ಪಾಲು ಹೆಚ್ಚಿಗೆ ಪುಣ್ಯವಿರುತ್ತದೆ. ಬ್ರಿಟನು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡದಿರುವದು ನ್ಯಾಯನೀತಿ ಅಥವಾ ದೇವರಿಗೆ ಅಂಜಿಯಲ್ಲ. ಬ್ರಿಟನಿನ ಭಾರತ ನೀತಿಯಲ್ಲಿ ಪ್ರಾಮಾಣಿಕತನದ ಅಭಾವವಿದೆ.

ವಿಶ್ವಾಸವು ಬೇಕು

"ಬ್ರಿಟನು ಹಿಂದುಸ್ಥಾನವನ್ನು ವಿಶ್ವಾಸದಿಂದ ಕಾಣುವದಿಲ್ಲ. ಅದು ಹಿಂದುಸ್ಥಾನದ ಮುಖಂಡರ ಮಾತುಗಳನ್ನು ನಂಬುವದಿಲ್ಲ. ಆದ್ದರಿಂದ ಅವರ ಮಾತುಗಳಲ್ಲಿ ಯಥಾರ್ಥತೆಯು ಕಂಡು ಬರುವದಿಲ್ಲ. ಎಷ್ಟರ ತನಕ ಬ್ರಿಟನು ಹಿಂದುಸ್ಥಾನಕ್ಕೆ ವಸಾಹತುಗಳಿಗೆ ಪ್ರಾಪ್ತವಾಗಿರುವಂಥ ಸಮಾನ ರಾಜ್ಯಾಧಿಕಾರಗಳನ್ನು ಕೊಡಲಿಕ್ಕೆ ಸಂಪೂರ್ಣ ಸಿದ್ಧವಾಗುವದಿಲ್ಲವೋ, ಅಷ್ಟರ ತನಕ ಮನಮೋಹಕವಾದ ಮಾತುಗಳನ್ನು ಆಡುತ್ತಿರುವದರಿಂದ ಮಾತ್ರ ಯುದ್ಧ ಕಾರ್ಯವನ್ನು ಮುಂದೊತ್ತುವದರಲ್ಲಿಯಾಗಲೀ, ಬ್ರಿಟನಿನ ಬೇರೆ ಆಪತ್ತುಗಳಲ್ಲಿಯಾಗಲೀ ಭಾರತದ ಹಾರ್ದಿಕ ಸಹಾಯ ಸಹಾನುಭೂತಿಗಳು ಪ್ರಾಪ್ತವಾಗಲಾರವು. ಭಾರತವು ಮಾತಿನ ಜಾಲದಲ್ಲಿ ಸಿಲುಕಿ ತನ್ನನ್ನೂ ತನ್ನ ಅವಸ್ಥೆಯನ್ನೂ ಮರೆಯುವ ದಿನಗಳು ಹಿಂದೆಯೇ ಕಳೆದು ಹೋಗಿವೆ. ಬ್ರಿಟನು ಭಾರತದ ರಾಜಕೀಯದ ಕುರಿತು ಪ್ರಾಮಾಣಿಕತೆಯನ್ನು ತೋರಿಸಬೇಕಾಗಿದೆ."

'ಓವಲ್‌ಟಿನ್'
ನಿಮ್ಮ ತ್ರಾಣವನ್ನೂ
ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್' ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ನಾಗಿ ನೆನೆಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೈಟ್ಸ್. ಇತರ ಬದಲಿ ಪಾನೀಯಗಳನು ದೂರಮಾಡಿರಿ.

'ಓವಲ್‌ಟಿನ್'

'OVALTINE ಎಂಬ ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು: ಮೆಸರ್ಸ್
ಗ್ರೇಹೆಮ್ಸ್ ಟ್ರೇಡಿಂಗ್ ಕೊ.(ಇಂಡಿಯಾ)ಲಿಮಿಟೆಡ್
ಕ್ರೈತನೆಸ್ ಹೋಲ್ ಥರ್ಡ್‌ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು, ಕಲ್ಕತ್ತಾ, ಕರಾಚಿ ಮತ್ತು ಬೊಂಬೈ.

'ಓವಲ್ಟಿನ್' ಬಿಸ್ಕತುಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕತುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.
OV/70/39

' ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ '

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

5—7—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೫—೭—೧೯೪೦

ಮಹಾತ್ಮಾಜಿಯವರ

' ಜಗತ್ತಿನ ಶಾಂತಿ ಮತ್ತು ಉದ್ಧಾರಕ್ಕೆ ಅಹಿಂಸೆಯೊಂದೇ ಉಪಾಯ. ಜಗತ್ತಿನ ದೊಡ್ಡ ದೊಡ್ಡ ಸೈನ್ಯಾಧಿಕಾರಿಗಳು ಕೂಡ ಈ ವಿಷಯವನ್ನು ಮನಗಾಣುತ್ತಿದ್ದಾರೆ. ಹಿಂಸೆಯಿಂದ ಅಹಿಂಸೆಗೆ ಹೃದಯ ಪರಿವರ್ತನವು ಕೇವಲ ವಿದ್ವನ್ಮಂಡಲಿಗಳಲ್ಲಿ ಮಾತ್ರವಲ್ಲ, ಎಲ್ಲಾ ಜಾತಿ, ಪಂಗಡ, ಸಂಘ ಸಂಸ್ಥೆ, ಧರ್ಮಮತ, ಮತ್ತು ಉದ್ಯೋಗ ವೃತ್ತಿಗಳ ಜನರಲ್ಲಿಯೂ ಆಗ ತೊಡಗಿರುವದು ಜಗತ್ತಿನ ಆಧುನಿಕ ಇತಿಹಾಸದಲ್ಲಿ ಹಿಂದೆ ಯಾವ ಕಾಲಕ್ಕೂ, ಈಗ ಹೇಳುತ್ತಿರುವ ಹಾಗೆ ಪ್ರಮುಖ ರಾಜಕಾರಣಿಗಳು ಹಿಂಸೆಯನ್ನು ತೆಗಳಿ ಅಹಿಂಸೆಯ ಸಾರ್ಥಕತೆಯನ್ನು ಸ್ಥಾಪಿಸಿದ್ದಿಲ್ಲ. ಈಗ ಹಳ್ಳಿಯ ಕೂಲಿಜನರ ಮೊದಲುಗೊಂಡು ಸೇನಾಧಿಕಾರಿಗಳು ಮತ್ತು ರಾಜಕೀಯ ಧುರೀಣರ ತನಕ ಪ್ರತಿಯೊಬ್ಬರೂ ಹಿಂಸೆಯಲ್ಲಿ ಅಡಕವಾಗಿರುವ ಮೂರ್ಖತೆ, ನಿರರ್ಥಕತೆ ಮತ್ತು ಭಯಂಕರ ಕಷ್ಟನಷ್ಟಗಳನ್ನು ತಿಳಿದು ಹಿಂಸೆಯನ್ನು ಖಂಡಿಸುತ್ತಿದ್ದಾರೆ. ಮಾನವ ಲೋಕದಲ್ಲಿ ಮನುಷ್ಯನು ಮನುಷ್ಯತ್ವವನ್ನು ಸ್ಥಾಪಿಸಿಕೊಳ್ಳಲಿಕ್ಕೆ ಅಹಿಂಸೆಯೊಂದೇ ರಾಜಮಾರ್ಗವಾಗಿರುವದೆಂದು ಸರ್ವರೂ ಏಕ ಕಂಠದಿಂದ ಸಾರುತ್ತಾರೆ

★ ಅಹಿಂಸೆಗೆ ವಿಶ್ವವೇ ತಲೆಬಾಗುವುದು! ★

ಗಾಂಧಿಜಿಯವರಿಗೆ ಒಂದು ಮಹತ್ವದ ಪತ್ರ'

ಪಶುಬಲದಿಂದ ಲೋಕ ಶಾಂತಿಯಿಲ್ಲ!

ಯುದ್ಧಾನಂತರ ಅಹಿಂಸೆಯೇ ಬೆಳಗಲಿದೆ!

ಯೂರೋಪಿಗೆ ಖಾದಿಯ ಸಂದೇಶ

ಹಾಲಂಡ ದೇಶದ ಪ್ರಮುಖ ಅಹಿಂಸಾವಾದಿಗಳಾದ ವಿಚಾರ್ಟ ಬಿ ಗ್ರೆಗರ ಮಹಾತ್ಮರಿಗೆ ಒಂದು ವಿಶೇಷ ಮಹತ್ವದ ಪತ್ರವನ್ನು ಬರೆದು ಮಹಾತ್ಮರ ವಿಚಾರ ಸರಣಿಗೆ ಯೂರೋಪ ಅಮೇರಿಕಗಳು ಹೇಗೆ ತಮ್ಮನ್ನು ಹೊಂದಿಸಿಕೊಳ್ಳುತ್ತಾ ಇವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಪತ್ರದಲ್ಲಿ—"ಹಿಂದುಸ್ಥಾನದಲ್ಲಿ ನ್ಯಾಯದ ಭಂಗದ ಒಂದು ಆಂದೋಲನವನ್ನು ಆರಂಭಿಸುವ ಮೊದಲು ಕಾಂಗ್ರೆಸ್ಸಿನಿಂದ ಖಾದಿ ಕಾರ್ಯಕ್ರಮವನ್ನು ಸಂಪೂರ್ಣ ಸಫಲಗೊಳಿಸಬೇಕೆಂದು ನೀವು ಹಠಹಿಡಿದಿರುವದು ನನಗೆ ಪರಮ ಸಂತೋಷವನ್ನುಂಟುಮಾಡಿದೆ. ಸತ್ಯಾಗ್ರಹದ ವಿಜಯಕ್ಕೆ ಖಾದಿಯ ಪ್ರಚಾರವು ಅತ್ಯಂತ ಅವಶ್ಯವಾಗಿರುವುದು. ಖಾದಿಯ ಕಾರ್ಯಕ್ರಮವು ಹಿಂದುಸ್ಥಾನಕ್ಕೆ ಮಾತ್ರವಲ್ಲ, ಯುದ್ಧಾನಂತರ ಯೂರೋಪಿಗೂ ಅಗತ್ಯವಾಗುವುದು. ಯುದ್ಧ ಮುಗಿದ ಮೇಲೆ ಪಾಶ್ಚಾತ್ಯ ದೇಶಗಳು ವರ್ಧಾ ಶಿಕ್ಷಣ ಪದ್ಧತಿಯನ್ನು ಅನುಸರಿಸಬೇಕಾಗುವುದು. ಹಿಂದುಸ್ಥಾನದ ಜನರಂತೆಯೇ ಯುದ್ಧಾನಂತರ ಪಾಶ್ಚಾತ್ಯ ದೇಶಗಳ ಜನರೂ ಬಡತನದಿಂದ ನರಳುತ್ತಿರಬೇಕಾಗುವದು. ಆಗ ಅವರಿಗೆ ಖಾದಿ, ಗ್ರಾಮೋದ್ಯೋಗ, ಮತ್ತು ಕಲೆ ಕೈಗಾರಿಕೆಗಳ ಮೂಲಕ ಸ್ವಾವಲಂಬಿ ಶಿಕ್ಷಣವಲ್ಲದೆ ಬೇರೆ ಉಪಾಯವೇ ಇರಲಾರದು; ಅಮೇರಿಕವು ಯೂರೋಪಿನ ಯುದ್ಧದಲ್ಲಿ ಸೇರಿದರೂ ಸೇರದಿದ್ದರೂ, ಯುದ್ಧದ ದುಷ್ಪರಿಣಾಮವನ್ನು ಅದೂ ಅನುಭವಿಸಬೇಕಾಗುವುದೆಂದೂ, ಆದರಿಂದ ನಿಮ್ಮ ವಿಧಾಯಕ ಕಾರ್ಯಕ್ರಮವೇ ಅಮೇರಿಕಕ್ಕೂ ಅಗತ್ಯವಾಗುವುದು ಎಂದು ಬರೆದಿದ್ದಾರೆ

ಅಹಿಂಸೆಯ ಭವಿಷ್ಯ

"ಯೂರೋಪಿನಲ್ಲಿ ಭಯಂಕರ ಯುದ್ಧವು ನಡೆಯುತ್ತಿರುವಾಗಲೂ ಅಹಿಂಸೆಯ ಭವಿಷ್ಯವು ಉಜ್ವಲವಾಗಿರುವದೆಂದು ತೋರುತ್ತದೆ. ಅಹಿಂಸೆಯಲ್ಲಿ ವಿಶ್ವಾಸ ಮತ್ತು ಶ್ರದ್ಧೆ ಇಟ್ಟಿರುವವರ ಸಂಖ್ಯೆಯು ಈಗ ಅತಿಶಯವಾಗಿ ಬೆಳೆದಿದೆ. ಸೇನಾಧಿಕಾರಿಗಳು ಕೂಡ ತಮ್ಮ ಹಿಂಸಾ ಪ್ರಯತ್ನಗಳ ನಿರರ್ಥಕತೆಯನ್ನು ಮನಗಂಡು, ಪಶುಬಲದ ಮೂಲಕ ಶಾಂತಿ ಸ್ಥಾಪನೆ ಮಾಡುವ ಕಾರ್ಯಕ್ರಮದಲ್ಲಿ ನಿರಾಶರಾಗಿದ್ದಾರೆ. ಕಳೆದ ಯುದ್ಧಾನಂತರ ಯುದ್ಧವಿರೋಧಿಗಳ ಒಂದು ದೊಡ್ಡ ಆಂದೋಲನವೇ ನಡೆದಿತ್ತು. ಆದರೆ ಇವರ ಯುದ್ಧದ ಭಯಂಕರ ಸ್ವರೂಪವನ್ನು ಕಂಡು ಬೆದರಿ ಯುದ್ಧ ವಿರೋಧಿಗಳಾಗಿದ್ದರೇ ಹೊರತು ಸತ್ಯ ಮತ್ತು ಅಹಿಂಸೆಯಲ್ಲಿ ವಿಶ್ವಾಸವನ್ನಿಟ್ಟಿರಲಿಲ್ಲ. ಈ ಬಾರಿಯ ಯುದ್ಧಾನಂತರ ಅಹಿಂಸಾ ವಾದಿಗಳು ಪ್ರಬಲರಾಗುವರು. ಅವರ ಪ್ರಭಾವವು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಕಾಣಿಸಿಕೊಳ್ಳುವದು

ನವಯುಗದ ಆರಂಭ

"ಈ ಯುದ್ಧದ ಪರಿಣಾಮವಾಗಿ ರಾಷ್ಟ್ರ ರಾಷ್ಟ್ರಗಳೊಳಗಿನ ದ್ವೇಷ ಮಾತ್ಸರ್ಯಗಳು ತೀವ್ರವಾಗಿ ಬೆಳೆಯುವದು ನಿಜ. ಆದರೆ ಅದೇ ಸಮಯಕ್ಕೆ ಈ ರಾಷ್ಟ್ರಗಳು ತಮ್ಮ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು, ತಮಗೆ ಪ್ರಾಪ್ತವಾದ ಸಮಾನ ಕಷ್ಟದಿಂದ ಪಾರಾಗಲಿಕ್ಕೆ ಒಂದು ಸಮಾನ ಕಾರ್ಯಕ್ರಮವನ್ನು ಅನಿವಾರ್ಯವಾಗಿ ರೂಪಿಸಿಕೊಳ್ಳಬೇಕಾಗುತ್ತದೆ. ಆಗ ಈ ರಾಷ್ಟ್ರಗಳಿಗೆ ಅಹಿಂಸೆಯ ಅವಲಂಬನವಲ್ಲದೆ ಬೇರೆ ಮಾರ್ಗ ತೋರುವುದಿಲ್ಲ. ಒಂದು ಬಾರಿಗೆ ಎಲ್ಲಾ ರಾಷ್ಟ್ರಗಳೂ ಅಹಿಂಸೆಯ ಹಾದಿಯನ್ನು ತುಳಿಯತೊಡಗಿದುವೆಂದರೆ ಮತ್ತೆ ಅದರ ಪ್ರಭಾವಕ್ಕೆ ಕಟ್ಟುಬಿದ್ದ ಈ ರಾಷ್ಟ್ರಗಳು ಪರಸ್ಪರವಾದ ದ್ವೇಷ ಮಾತ್ಸರ್ಯ ಇತ್ಯಾದಿ ದುಷ್ಟ ಗುಣಗಳನ್ನು ಬಿಟ್ಟು ಸ್ನೇಹ, ಪ್ರೇಮ, ವಾತ್ಸಲ್ಯ ಮೊದಲಾದ ಸಾತ್ವಿಕ ಗುಣಗಳನ್ನು ಬೆಳೆಸಿಕೊಳ್ಳುವವು. ಆಗ ನವಯುಗದ ಆರಂಭವು ಆಗುವದು. ದ್ವೇಷಕ್ಕಿಂತ ಪ್ರೇಮಭಾವನೆಯು ಮನುಷ್ಯನಲ್ಲಿ ಬಲವತ್ತರವಾಗಿರುವದು ನಿಜವಾದರೆ, ಜಗತ್ತಿನಲ್ಲಿ ಅಹಿಂಸೆಯ ಸ್ಥಾಪನೆ ಆಗಿಯೇ ಆಗಬೇಕಾಗುತ್ತದೆ" ಹೀಗೆಂದು ಅವರು ಪತ್ರದಲ್ಲಿ ಬರೆದಿರುವರು.

ಮಹಾತ್ಮಾಜಿಯವರ ಆಸೆ

' ಪ್ರಪಂಚದಲ್ಲಿ ಅಹಿಂಸೆಯೊಂದೇ ಶಾಂತಿ ಸ್ಥಾಪನೆಯ ಪ್ರಬಲ ಅಸ್ತ್ರವಾಗಿರುವದೆಂಬುದಕ್ಕೆ ಯಾವ ಸಂದೇಹವೂ ಬೇಡ. ಆದರೆ ಅಹಿಂಸೆಯ ಮೂಲಕವಾಗಿ ಸ್ವಾತಂತ್ರ್ಯವನ್ನು ಸಂಪಾದಿಸುವದು ಮಾತ್ರವಲ್ಲದೆ, ಅದನ್ನು ಉಳಿಸಿಕೊಂಡು ಹಿಂದುಸ್ಥಾನವು ಹಿಂಸಾಪೀಡಿತ ಜಗತ್ತಿಗೆ ಮಾರ್ಗದರ್ಶಕವಾಗಬೇಕಾಗಿದೆ" ಎಂಬುದು ಮಹಾತ್ಮಾಜಿಯವರು ಈ ಪತ್ರದ ಕುರಿತು 'ಹರಿಜನ'ದಲ್ಲಿ ಬರೆದಿರುವರು

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ಸರ್ವ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಖರ್ಚು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸದನ, ಪೆರ್ಡೂರು,
P. O. Perdoor (ಸೌತ್ ಕೆನರಾ).

ಸ್ಪಷ್ಟೋಕ್ತಿಯಿಲ್ಲ!

ವೀರ ಸಾವರ್ಕರರ ಟೀಕೆ!

ಭಾರತದ ಸ್ಟೇಟ್ ಸೆಕ್ರೆಟರಿಗಳಾದ ಎಮರಿಯವರು ಕಳೆದ ೩೦ ಗಳ ೧೫ರ ದಿನ ಕೊಟ್ಟ ಭಾಷಣದ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತ ಅಖಿಲಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ರಾಷ್ಟ್ರವೀರ ವಿ. ಡಿ. ಸಾವರಕರರು —"ಯುದ್ಧದಲ್ಲಿ ಬ್ರಿಟನು ಜೀವನ ಮರಣದ ಸಂಧಿಗ್ಧದಲ್ಲಿ ಬಿದ್ದಿರುವದಾದರೂ, ಹಿಂದುಸ್ಥಾನದ ವಿಷಯದಲ್ಲಿ ಅದು ಈಗಲೂ ಸ್ಪಷ್ಟವಾದ ಮಾತುಗಳನ್ನು ಆಡುತ್ತಿರುವುದಿಲ್ಲ" ಎಂದಿರುವರು.

"ಭಾರತವು ಇತರ ವಸಾಹತಗಳಂತೆ ಪೂರ್ಣ ಸ್ವರಾಜ್ಯವನ್ನು ಅನುಭವಿಸಬೇಕೆಂಬುದು ತಮ್ಮ ಆಶಯವಾಗಿರುವದೆಂದು ಎಮರಿಯವರು ಹೇಳುತ್ತಾರೆ. ಆದರೆ ಯಾವಾಗ? ಎಷ್ಟು ಶತಮಾನಗಳು ಕಳೆದ ಮೇಲೆ? ಈ ವಿಷಯಕ್ಕೆ ಅವರು ಮೌನ ತಾಳಿದ್ದಾರೆ. ೭೨೫ ವರ್ಷಗಳ ಹಿಂದೆ ಇದೇ ಜೂನ್ ೧೫ರ ದಿನ ಬ್ರಿಟಿಷ್ ಜನರು ತಮ್ಮ ಅರಸನಾದ ಜ್ಹಾನನಿಂದ ನಿರಂಕುಶ ಶಾಸನಾಧಿಗಳನ್ನು ಕಿತ್ತುಕೊಂಡಿದ್ದರು. ಆ ಘಟನೆಯ ಸ್ಮಾರಕ ದಿನದಂದು ಎಮರಿಯವರು ಈ ಭಾಷಣವನ್ನು ಕೊಟ್ಟರು. ಯಾವ ನಿರಂಕುಶ ಅಧಿಕಾರಗಳನ್ನು ಬ್ರಿಟಿಷ್ ಜನರು ತಮ್ಮ ಅರಸನಿಂದ ಕಿತ್ತುಕೊಂಡಿದ್ದರೋ, ಅದೇ ನಿರಂಕುಶ ಅಧಿಕಾರಗಳನ್ನು ೭೨೫ ವರ್ಷಗಳು ಕಳೆದ ಅನಂತರವೂ ಭಾರತದ ಮೇಲೆ ತೋರಿಸುತ್ತಿರುವುದು ತುಂಬಾ ಖೇದಜನಕವಾಗಿದೆ.

ಬರಿಯ ನೆವನ

"ಹಿಂದುಸ್ಥಾನಕ್ಕೆ ಕೂಡಲೇ ಸ್ವರಾಜ್ಯವನ್ನು ಕೊಡದಿರಲಿಕ್ಕೆ ಬ್ರಿಟಿಷರು ಕೊಡುವ ಕಾರಣ ಯಾವುದು? ಎಮರಿಯವರ ಪೂರ್ವಾಧಿಕಾರಿಗಳು ಯಾವ ಕಂಠಸ್ವರದಿಂದ ಯಾವ ಮಾತುಗಳನ್ನು ಆಡಿದ್ದರೋ ಅವೇ ಮಾತುಗಳನ್ನು ಇವರೂ ಆಡುತ್ತಿದ್ದಾರೆ! ಹಿಂದುಸ್ಥಾನದೊಳಗಿನ ಧಾರ್ಮಿಕ, ಸಾಮಾಜಿಕ ಮತ್ತು ಐತಿಹಾಸಿಕ ಸಮಸ್ಯೆಗಳು ಬ್ರಿಟಿಷರು ಸ್ವರಾಜ್ಯವನ್ನು ಕೊಡುವದಕ್ಕೆ ದೊಡ್ಡ ವಿಘ್ನಗಳಾಗಿರುವವಂತೆ. ಆದರೆ ಇವೇ ಸಮಸ್ಯೆಗಳನ್ನು ಬಿಡಿಸುವದಕ್ಕೆ ಜನಾಂಗಸಂಘವು ಕೆಲವು ಸಿದ್ಧಾಂತಗಳನ್ನು ಒಪ್ಪಿಕೊಂಡು ನಿಯಮಗಳನ್ನು ಮಾಡಿರುವದಷ್ಟೆ? ಈ ಸಿದ್ಧಾಂತ ಮತ್ತು ನಿಯಮಗಳನ್ನು ಬ್ರಿಟಿಷ್ ಸರಕಾರವೂ ಭಾರತ ಸರಕಾರವೂ ಒಪ್ಪಿದೆ. ಹಾಗಿದ್ದ ಮೇಲೆ ನಿಯಮಗಳನ್ನು ಅನುಸರಿಸಿ ಒಂದು ಘಟನೆಯನ್ನು ತಯಾರಿಸಿ ಬ್ರಿಟನು ಹಿಂದುಸ್ಥಾನಕ್ಕೆ ಯಾಕೆ ಸ್ವರಾಜ್ಯವನ್ನು ಕೊಡುವದಿಲ್ಲ? ಇದೊಂದು ವಿಷಯಕ್ಕಾಗಿ ಮಾತ್ರ ಹಿಂದುಸ್ಥಾನದ ಎಲ್ಲಾ ಜಾತಿ ಮತ ಪಂಗಡಗಳು ಮೊದಲು ಒಂದಾಗಬೇಕೆಂದು ಹೇಳಿ ಒಂದು ಜಾತಿಯನ್ನು ಇನ್ನೊಂದರ ಮೇಲೆ ಎತ್ತಿಕಟ್ಟುವದೇಕೆ? ಹಿಂದುಸ್ಥಾನದಲ್ಲಿ ಜಾತೀಯ ಐಕ್ಯವು ಇಲ್ಲದಿದ್ದರೆ ಅದನ್ನು ಸೈನ್ಯಬಲದಿಂದ ಗೆಲ್ಲಲಿಕ್ಕೆ ಬ್ರಿಟನು ಸಮರ್ಥವಾಗಿರುವುದೆಂದಾದರೆ, ಹಿಂದುಸ್ಥಾನದ ಹಲವು ಜನರ ಅಪೇಕ್ಷೆಗೆ ವಿರೋಧವಾಗಿ ಜಾತೀಯ ತೀರ್ಮಾನವನ್ನು ಹೊರಿಸಲಿಕ್ಕೆ ಬ್ರಿಟನು ಶಕ್ತವಾಗಿರುವುದೆಂದಾದರೆ, ಯುದ್ಧಾರಂಭವಾದೊಡನೆಯೇ ಪ್ರಾಂತ್ಯ ಮತ್ತು ಕೇಂದ್ರಗಳಲ್ಲಿ ನಿರಂಕುಶವಾದ ಕಾರ್ಯಕ್ರಮವನ್ನೇ ಸ್ಥಾಪಿಸಲಿಕ್ಕೆ ಬ್ರಿಟನಿಗೆ ಬಲವಿರುವದೆಂದಾದರೆ, ಜನಾಂಗ ಸಂಘವು ಏರ್ಪಡಿಸಿದ ಅಂತರರಾಷ್ಟ್ರೀಯ ಕ್ರಮ ನಿಯಮಗಳನ್ನು ಅನುಸರಿಸಿ ಸ್ವರಾಜ್ಯವನ್ನು ಕೊಡಲಿಕ್ಕೆ ಮಾತ್ರ ಬ್ರಿಟನು ಹೆದರಬೇಕೆ? ಒಂದು ದೇಶ ಅಥವಾ ಅದರೊಳಗಿನ ಜಾತಿಪಂಗಡಗಳನ್ನು ಶಿಕ್ಷಿಸುವುದರಲ್ಲಿ ಯಾವ ನ್ಯಾಯವಿದೆಯೋ, ಅವುಗಳನ್ನು ಆಶೀರ್ವದಿಸುವುದರಲ್ಲಿ ಅದಕ್ಕೂ ಸಾವಿರಾರು ಪಾಲು ಹೆಚ್ಚಿಗೆ ಪುಣ್ಯವಿರುತ್ತದೆ. ಬ್ರಿಟನು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡದಿರುವದು ನ್ಯಾಯ ನೀತಿ ಅಥವಾ ದೇವರಿಗೆ ಅಂಜಿಯಲ್ಲ. ಬ್ರಿಟನಿನ ಭಾರತ ನೀತಿಯಲ್ಲಿ ಪ್ರಾಮಾಣಿಕತನದ ಅಭಾವವಿದೆ.

ವಿಶ್ವಾಸವು ಬೇಕು

"ಬ್ರಿಟನು ಹಿಂದುಸ್ಥಾನವನ್ನು ವಿಶ್ವಾಸದಿಂದ ಕಾಣುವದಿಲ್ಲ. ಅದು ಹಿಂದುಸ್ಥಾನದ ಮುಖಂಡರ ಮಾತುಗಳನ್ನು ನಂಬುವದಿಲ್ಲ. ಆದ್ದರಿಂದ ಅವರ ಮಾತುಗಳಲ್ಲಿ ಯಥಾರ್ಥತೆಯು ಕಂಡುಬರುವದಿಲ್ಲ. ಎಷ್ಟರ ತನಕ ಬ್ರಿಟನು ಹಿಂದುಸ್ಥಾನಕ್ಕೆ ವಸಾಹತುಗಳಿಗೆ ಪ್ರಾಪ್ತವಾಗಿರುವಂಥ ಸಮಾನ ರಾಜ್ಯಾಧಿಕಾರಗಳನ್ನು ಕೊಡಲಿಕ್ಕೆ ಸಂಪೂರ್ಣ ಸಿದ್ಧವಾಗುವದಿಲ್ಲವೋ, ಅಷ್ಟರ ತನಕ ಮನಮೋಹಕವಾದ ಮಾತುಗಳನ್ನು ಆಡುತ್ತಿರುವದರಿಂದ ಮಾತ್ರ ಯುದ್ಧ ಕಾರ್ಯವನ್ನು ಮುಂದೊತ್ತುವದರಲ್ಲಿಯಾಗಲೀ, ಬ್ರಿಟನಿನ ಬೇರೆ ಆಪತ್ತುಗಳಲ್ಲಿಯಾಗಲೀ ಭಾರತದ ಹಾರ್ದಿಕ ಸಹಾಯ ಸಹಾನುಭೂತಿಗಳು ಪ್ರಾಪ್ತವಾಗಲಾರವು. ಭಾರತವು ಮಾತಿನ ಜಾಲದಲ್ಲಿ ಸಿಲುಕಿ ತನ್ನ ನಷ್ಟ ತನ್ನ ಅವಸ್ಥೆಯನ್ನೂ ಮರೆಯುವ ದಿನಗಳು ಹಿಂದೆಯೇ ಕಳೆದು ಹೋಗಿವೆ. ಬ್ರಿಟನು ಭಾರತದ ರಾಜಕೀಯದ ಕುರಿತು ಪ್ರಾಮಾಣಿಕತೆಯನ್ನು ತೋರಿಸಬೇಕಾಗಿದೆ."

'ಓವಲ್ಟಿನ್'
ನಿಮ್ಮ ತ್ರಾಣವನ್ನೂ
ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ನೀರಾಗಿ ನೆನೆ ಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೌಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೋಸ್ಫೈಟ್ಸ್. ಇತರ ಬದಲು ಪಾನೀಯಗಳನು ದೂರಮಾಡಿರಿ.

'ಓವಲ್ಟಿನ್'
'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು: ಮೆಸರ್ಸ್
ಗ್ರೇಹೆಮ್ಸ್ ಟ್ರೇಡಿಂಗ್ ಕೊ.(ಇಂಡಿಯಾ)ಲಿಮಿಟೆಡ್.
ಕೈತನೆಸ್ ಹೋಲ್ ಥರ್ಡ್‌ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು.
ಕಲ್ಕತ್ತಾ, ಕರಾಚಿ ಮತ್ತು ಬೊಂಬೈ.

'ಓವಲ್ಟಿನ್' ಬಿಸ್ಕುಟುಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.
OV/70/53

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[5-7-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೫-೭-೧೯೪೦]

★ ಅಹಿಂಸೆಗೆ ವಿಶ್ವವೇ ತಲೆಬಾಗುವುದು! ★

ಗಾಂಧಿಜಿಯವರಿಗೆ ಒಂದು ಮಹತ್ವದ ಪತ್ರ

ಪಶುಬಲದಿಂದ ಲೋಕ ಶಾಂತಿಯಿಲ್ಲ!

ಯುದ್ಧಾನಂತರ ಅಹಿಂಸೆಯೇ ಬೆಳಗಲಿದೆ!

ಮಹಾತ್ಮಾಜಿಯವರು

'ಜಗತ್ತಿನ ಶಾಂತಿ ಮತ್ತು ಉದ್ಧಾರಕ್ಕೆ ಅಹಿಂಸೆಯೊಂದೇ ಉಪಾಯ. ಜಗತ್ತಿನ ದೊಡ್ಡ ದೊಡ್ಡ ಸೈನ್ಯಾಧಿಕಾರಿಗಳು ಕೂಡ ಈ ವಿಷಯವನ್ನು ಮನಗಾಣುತ್ತಿದ್ದಾರೆ. ಹಿಂಸೆಯಿಂದ ಅಹಿಂಸೆಗೆ ಹೃದಯ ಪರಿವರ್ತನವು ಕೇವಲ ವಿದ್ವನ್ಮಂಡಲಿಗಳಲ್ಲಿ ಮಾತ್ರವಲ್ಲ, ಎಲ್ಲಾ ಜಾತಿ, ಪಂಗಡ, ಸಂಘ ಸಂಸ್ಥೆ, ಧರ್ಮಮತ, ಮತ್ತು ಉದ್ಯೋಗ ವೃತ್ತಿಗಳ ಜನರಲ್ಲಿಯೂ ಆಗ ತೊಡಗಿರುವುದು ಜಗತ್ತಿನ ಆಧುನಿಕ ಇತಿಹಾಸದಲ್ಲಿ ಹಿಂದೆ ಯಾವ ಕಾಲಕ್ಕೂ, ಈಗ ಹೇಳುತ್ತಿರುವ ಹಾಗೆ ಪ್ರಮುಖ ರಾಜಕಾರಣಿಗಳು ಹಿಂಸೆಯನ್ನು ತೆಗಳಿ ಅಹಿಂಸೆಯ ಶ್ರೇಷ್ಠತೆಯನ್ನು ಸ್ಥಾಪಿಸಿದ್ದಿಲ್ಲ. ಈಗ ಹಳ್ಳಿಯ ಕೂಲಿಜನರ ಮೊದಲುಗೊಂಡು ಸೇನಾಧಿಕಾರಿಗಳು ಮತ್ತು ರಾಜಕೀಯ ಧುರೀಣರ ತನಕ ಪ್ರತಿಯೊಬ್ಬರೂ ಹಿಂಸೆಯುಳ್ಳ ಅಡಕವಾಗಿರುವ ಮೂರ್ಖತೆ ನಿರರ್ಥಕತೆ ಮತ್ತು ಭಯಂಕರ ಕಷ್ಟನಷ್ಟಗಳನ್ನು ತಿಳಿದು ಹಿಂಸೆಯನ್ನು ಖಂಡಿಸುತ್ತಿದ್ದಾರೆ. ಮಾನವ ಲೋಕದಲ್ಲಿ ಮನುಷ್ಯನು ಮನುಷ್ಯತ್ವವನ್ನು ಸ್ಥಾಪಿಸಿಕೊಳ್ಳಲಿಕ್ಕೆ ಅಹಿಂಸೆಯೊಂದೇ ರಾಜಮಾರ್ಗವಾಗಿರುವದೆಂದು ಸರ್ವರೂ ಏಕ ಕಂಠದಿಂದ ಸಾರುತ್ತಾರೆ'

ಯೂರೋಪಿಗೆ ಖಾದಿಯ ಸಂದೇಶ

ಹೀಗೆಂದ ಪಾಶ್ಚಾತ್ಯ ಪ್ರಮುಖ ಅಹಿಂಸಾವಾದಿಗಳಾದ ರಿಚಾರ್ಡ ಬಿ ಗ್ರೆಗ ಮಹಾತ್ಮರಿಗೆ ಒಂದು ವಿಶೇಷ ಮಹತ್ವದ ಪತ್ರವನ್ನು ಬರೆದ ಮಹತ್ವರ ವಿಚಾರ ಸರಣಿಗೆ ಯುರೋಪ ಅಮೇರಿಕಗಳ ಹೇಗೆ ತಮ್ಮನ್ನು ಹೊಂದಿಸಿಕೊಳ್ಳುತ್ತಾ ಇವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಪತ್ರದಲ್ಲಿ 'ಹಿಂದುಸ್ಥಾನದಲ್ಲಿ ಕಾಯಿದೆ ಭಂಗದ ಧ ಒಂದು ಆಂದೋಲನವನ್ನು ಆರಂಭಿಸುವ ಮೊದಲು ಕಾಂಗ್ರೆಸ್ ಮುಂದಿನ ಖಾದಿ ಕಾರ್ಯಕ್ರಮವನ್ನು ಸಂಪೂರ್ಣ ಸಫಲವಾಗಬೇಕೆಂದು ನೀವು ಹಟಹಿಡಿದಿರುವದು ನನಗೆ ಪರಮ ಸಂತೋಷವನ್ನುಂಟುಮಾಡಿದೆ. ಸತ್ಯಾಗ್ರಹದ ವಿಜಯಕ್ಕೆ ಖಾದಿಯ ಪ್ರಚಾರವು ಅತ್ಯಂತ ಅವಶ್ಯವಾಗಿರುವುದು. ಖಾದಿಯ ಕಾರ್ಯಕ್ರಮವು ಹಿಂದುಸ್ಥಾನಕ್ಕೆ ಮಾತ್ರವಲ್ಲ ಯುದ್ಧಾನಂತರ ಯೂರೋಪಿಗೂ ಅಗತ್ಯವಾಗುವುದು. ಯುದ್ಧ ಮುಗಿದ ಮೇಲೆ ಪಾಶ್ಚಾತ್ಯ ದೇಶಗಳು ವರ್ಧಾ ಶಿಕ್ಷಣ ಪದ್ಧತಿಯನ್ನು ಅನುಸರಿಸಬೇಕಾಗುವುದು. ಹಿಂದುಸ್ಥಾನದ ಜನರಂತೆಯೇ ಯುದ್ಧಾನಂತರ ಪಾಶ್ಚಾತ್ಯ ದೇಶಗಳ ಜನರೂ ಬಡತನದಿಂದ ನರಳುತ್ತಿರಬೇಕಾಗುವದು. ಆಗ ಅವರಿಗೆ ಖಾದಿ, ಗ್ರಾಮೋದ್ಯೋಗ, ಮತ್ತು ಕಲೆ ಕೈಗಾರಿಕೆಗಳ ಮೂಲಕ ಸ್ವಾವಲಂಬಿ ಶಿಕ್ಷಣವಲ್ಲದೆ ಬೇರೆ ಉಪಾಯವೇ ಇರಲಾರದು. ಅಮೇರಿಕವು ಯೂರೋಪಿನ ಯುದ್ಧದಲ್ಲಿ ಸೇರಿದರೂ ಸೇರದಿದ್ದರೂ, ಯುದ್ಧದ ದುಷ್ಪರಿಣಾಮವನ್ನು ಅದೂ ಅನುಭವಿಸಬೇಕಾಗುವುದೆಂದೂ, ಅದರಿಂದ ಸಿದ್ಧ ವಿಧಾಯಕ ಕಾರ್ಯಕ್ರಮವೇ ಅಮೇರಿಕಕ್ಕೂ ಅಗತ್ಯವಾಗುವುದು. ಎಂದು ಬರೆದಿದ್ದಾರೆ

ಅಹಿಂಸೆಯ ಭವಿಷ್ಯ

"ಯುರೋಪಿನಲ್ಲಿ ಭಯಂಕರ ಯುದ್ಧವು ನಡೆಯುತ್ತಿರುವಾಗಲೂ ಅಹಿಂಸೆಯ ಭವಿಷ್ಯವು ಉಜ್ವಲವಾಗಿರುವದೆಂದು ತೋರುತ್ತದೆ. ಅಹಿಂಸೆಯಲ್ಲಿ ವಿಶ್ವಾಸ ಮತ್ತು ಶ್ರದ್ಧೆ ಇಟ್ಟಿರುವವರ ಸಂಖ್ಯೆಯೂ ಈಗ ಅತಿಶಯವಾಗಿ ಬೆಳೆದಿದೆ. ಸೇನಾಧಿಕಾರಿಗಳ ಕೂಡ ತಮ್ಮ ಹಿಂಸಾ ಪ್ರಯತ್ನಗಳ ನಿರರ್ಥಕತೆಯನ್ನು ಮನಗಂಡು, ಪಶುಬಲದ ಮೂಲಕ ಶಾಂತಿ ಸ್ಥಾಪನೆ ಮಾಡುವ ಕಾರ್ಯಕ್ರಮದಲ್ಲಿ ನಿರಾಶರಾಗಿದ್ದಾರೆ. ಕಳೆದ ಯುದ್ಧಾನಂತರ ಯುದ್ಧ ವಿರೋಧಿಗಳ ಒಂದು ದೊಡ್ಡ ಆಂದೋಲನವೇ ನಡೆದಿತ್ತು. ಆದರೆ ಇವರ ಯುದ್ಧದ ಭಯಂಕರ ಸ್ವರೂಪವನ್ನು ಕಂಡು ಬೆದರಿ ಯುದ್ಧ ವಿರೋಧಿಗಳಾಗಿದ್ದರೇ ಹೊರತು ಸತ್ಯ ಮತ್ತು ಅಹಿಂಸೆಯಲ್ಲಿ ವಿಶ್ವಾಸವನ್ನಿಟ್ಟಿರಲಿಲ್ಲ. ಈ ಬಾರಿಯ ಯುದ್ಧಾನಂತರ ಅಹಿಂಸಾ ವಾದಿಗಳು ಪ್ರಬಲರಾಗುವರು. ಅವರ ಪ್ರಭಾವವು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಕಾಣಿಸಿಕೊಳ್ಳುವದು.

ನವಯುಗದ ಆರಂಭ

"ಈ ಯುದ್ಧದ ಪರಿಣಾಮವಾಗಿ ರಾಷ್ಟ್ರ ರಾಷ್ಟ್ರಗಳೊಳಗಿನ ದ್ವೇಷ ಮಾತ್ಸರ್ಯಗಳು ತೀವ್ರವಾಗಿ ಬೆಳೆಯುವದು. ನಿಜ. ಆದರೆ ಅದೇ ಸಮಯಕ್ಕೆ ಈ ರಾಷ್ಟ್ರಗಳು ತಮ್ಮ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು, ತಮಗೆ ಪ್ರಾಪ್ತವಾದ ಸಮಾನ ಕಷ್ಟದಿಂದ ಪಾರಾಗಲಿಕ್ಕೆ ಒಂದು ಸಮಾನ ಕಾರ್ಯಕ್ರಮವನ್ನು ಅನಿವಾರ್ಯವಾಗಿ ರೂಪಿಸಿಕೊಳ್ಳಬೇಕಾಗುತ್ತದೆ. ಆಗ ಈ ರಾಷ್ಟ್ರಗಳಿಗೆ ಅಹಿಂಸೆಯ ಅವಲಂಬನವಲ್ಲದೆ ಬೇರೆ ಮಾರ್ಗ ತೋರುವುದಿಲ್ಲ. ಒಂದು ಬಾರಿಗೆ ಎಲ್ಲಾ ರಾಷ್ಟ್ರಗಳೂ ಅಹಿಂಸೆಯ ಹಾದಿಯನ್ನು ತುಳಿಯತೊಡಗಿದುವೆಂದರೆ ಮತ್ತೆ ಅದರ ಪ್ರಭಾವಕ್ಕೆ ಕಟ್ಟುಬಿದ್ದ ಈ ರಾಷ್ಟ್ರಗಳು ಪರಸ್ಪರವಾದ ದ್ವೇಷ ಮಾತ್ಸರ್ಯ ಇತ್ಯಾದಿ ದುಷ್ಟ ಗುಣಗಳನ್ನು ಬಿಟ್ಟು ಸ್ನೇಹ ಪ್ರೇಮ, ವಾತ್ಸಲ್ಯ ಮೊದಲಾದ ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಳ್ಳುವವು. ಆಗ ನವಯುಗದ ಆರಂಭವು ಆಗುವದು. ದ್ವೇಷಕ್ಕಿಂತ ಪ್ರೇಮ ಭಾವನೆಯು ಮನುಷ್ಯನಲ್ಲಿ ಬಲವತ್ತರವಾಗಿರುವುದು ನಿಜವಾದರೆ, ಜಗತ್ತಿನಲ್ಲಿ ಅಹಿಂಸೆಯ ಸ್ಥಾಪನ ಆಗಿಯೇ ಆಗಬೇಕಾಗುತ್ತದೆ' ಹೀಗೆಂದು ಅವರು ಪತ್ರದಲ್ಲಿ ಬರೆದಿರುವರು.

ಮಹಾತ್ಮಾಜಿಯವರ ಆಸೆ

'ಪ್ರಪಂಚದಲ್ಲಿ ಅಹಿಂಸೆಯೊಂದೇ ಶಾಂತಿ ಸ್ಥಾಪನೆಯ ಪ್ರಬಲ ಅಸ್ತ್ರವಾಗಿರುವದೆಂಬುದಕ್ಕೆ ಯಾವ ಸಂದೇಹವೂ ಬೇಡ. ಆದರೆ ಅಹಿಂಸೆಯ ಮೂಲಕವಾಗಿ ಸ್ವಾತಂತ್ರ್ಯವನ್ನು ಸಂಪಾದಿಸುವದ ಮಾತ್ರವಲ್ಲದೆ. ಅದನ್ನು ಕಾಯಿಟ್ಟುಕೊಂಡು ಹಿಂದುಸ್ಥಾನವು ಹಿಂಸಾಪೀಡಿತ ಜಗತ್ತಿಗೆ ಮಾರ್ಗದರ್ಶಕವಾಗಬೇಕಾಗಿದೆ' ಎಂಬುದು ಮಹಾತ್ಮಾಜಿಯವರು ಈ ಪತ್ರದ ಕುರಿತು 'ಹರಿಜನ'ದಲ್ಲಿ ಬರೆದಿರುವರು.

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ಗೋಲಿಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಪ್ಲಾಯ, ಪೆರಡೆಪಿ,
P. O. Peridepi (ಸೌತ್ ಕೆನರಾ).

ಸ್ವದೇಶಾಭಿಮಾನಿ

ತಾರೀಕು 5—7—1940

ಸುವರ್ಣ ಸಂಧಿಯೆ?

ಜಪಾನಿನ ಇಂದಿನ ನೀತಿಯನ್ನು ವಿಚಾರಿಸಿದರೆ, ಅದು ಯುರೋಪಿನ ರಾಷ್ಟ್ರಗಳು ಅನ್ಯತ್ರ ಯುದ್ಧಾಸಕ್ತವಾಗಿರುವಾಗ ತನ್ನ ಅಪೇಕ್ಷೆಯನ್ನು ಪೂರ್ತಿಗೊಳಿಸಲು, ಇದು ಸುವರ್ಣಸಂಧಿಯೆಂದು ವಿಚಾರಿಸಿ ಮುಂದಡಿಯಿಡುತ್ತಿರುವಂತೆ ಕಂಡುಬರುತ್ತದೆ.

ಇಂಡೋ ಚೈನದ ಗಡಿಯಲ್ಲಿ ಜಪಾನು ಸೈನ್ಯವನ್ನು ತಂದು ನಿಲ್ಲಿಸಿರುವುದು ಇಷ್ಟರ ವರೆಗೆ ಜಪಾನು ಮಾಡಿದ ಕಾರ್ಯಕ್ಕಿಂತ ಇನ್ನು ಮುಂದಿನ ಘಟನೆಗಳೇನೆಂಬ ಕುರಿತು ಕುತೂಹಲ ದೃಷ್ಟಿಯಿಂದ ನಾವು ನೋಡಬೇಕಾಗಿದೆ.

ಕಳೆದ ತಿಂಗಳ ಮಧ್ಯದಲ್ಲಿ ಜಪಾನು, ಫ್ರಾನ್ಸಿಗೆ ಫ್ರೆಂಚ್ ಇಂಡೋ ಚೈನದ ಮೂಲಕ ಸೈನ್ಯ ಸಾಮಗ್ರಿಯು ಚುಂಕಿಂಗಿಗೆ ಕಳುಹಿಸಕೂಡದಾಗಿ ಎಚ್ಚರಕೊಟ್ಟಿತು. ಫ್ರಾನ್ಸು ಆಗ ವಿಷಮ ವಿಪತ್ತಿಗೆ ಸಿಲುಕಿದ್ದರಿಂದ ಸಹಜವಾಗಿ ಜಪಾನಿನೊಡನೆ ಕಲಹ ಮಾಡಲು ಇಚ್ಛೆಪಡದೆ ಜಪಾನಿನ ಕೇಳಿಕೆಗೆ ಒಪ್ಪಿಕೊಂಡಿತು!

ಇದೊಂದು ಜಪಾನಿಗೆ ವಿಜಯದ ವಿಷಯವಾಯಿತು. ಇದರಿಂದ ಉಬ್ಬಿಕೊಂಡು ಜಪಾನು ಬ್ರಿಟನಿಗೂ ಎಚ್ಚರಿಕೆ ಕೊಟ್ಟಿದೆ. ಚೈನಕ್ಕೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವ ಬರ್ಮಾ ಯುನಾನ್ ದಾರಿಯನ್ನು ಬ್ರಿಟನು ಮುಚ್ಚಬೇಕೆಂದು—ಇದಕ್ಕೆ ಇದುವರೆಗೆ ಬ್ರಿಟನು ಉತ್ತರಕೊಟ್ಟಿಲ್ಲ.

ಇಂದು ಜಪಾನು ಇಂಡೋ ಚೈನದ ಗಡಿಯಲ್ಲಿ ಸೈನ್ಯವನ್ನು ತಂದಿರಿಸಿ ತಾ. ೩ರಿಂದ ಇಂಡೋ ಚೈನದ ಕರಾವಳಿಯನ್ನು ತಡೆಗಟ್ಟುವುದಾಗಿ ಪ್ರಕಟಿಸಿದೆ. ಹೊಂಕೋಂಗ್ ಮತ್ತು ಇಂಡೋ ಚೈನಗಳಿಂದ ಬ್ರಿಟಿಷ್ ಮತ್ತು ಫ್ರೆಂಚ್ ಅಧಿಕಾರಿಗಳು ಹೆಂಗುಸು ಮಕ್ಕಳೊಡನೆ ಹೊರಹೊರಟು ಹೋಗುತ್ತಿದ್ದಾರೆ. ಬ್ರಿಟಿಷರು ಸಿಂಗಾಪುರದ ರಕ್ಷಣೆಯನ್ನು ಇನ್ನಷ್ಟು ಭದ್ರವಾಗಿ ಮಾಡುವ ಕಾರ್ಯಕ್ರಮಗಳನ್ನು ಕೈಕೊಂಡಿರುವರು.

ಈ ಸಂದರ್ಭದಲ್ಲಿ ಜಪಾನಿನ ವಿದೇಶಾಂಗ ಮಂತ್ರಿಯಾದ ಅರಿಟರು ಮೊನ್ನೆ ಹೇಳಿದ ಮಾತು ವಿಚಾರಣೀಯವಾಗಿದೆ. ಅಮೇರಿಕವು ಹೇಗೆ ಅಮೇರಿಕನರಿಗೋ, ಯುರೋಪು ಹೇಗೆ ಯುರೋಪಿಯನರಿಗೋ ಹಾಗೆಯೇ ಏಶಿಯವು ಏಶಿಯನ್ನರಿಗೇ ಎಂಬ ನೀತಿಯು ಏಶಿಯದಲ್ಲಿ ಅನುಸರಿಸಬೇಕೆಂದು ಅವರು ಯುರೋಪಿನ ರಾಷ್ಟ್ರಗಳಿಗೆ ಎಚ್ಚರಿಕೆಯಿತ್ತಿರುವರು. ಬಹುಶಃ ಇದು ಅಮೇರಿಕವು ಜಪಾನಿನ ಕಾರ್ಯಗಳಲ್ಲಿ ಸೇರಬಾರದಾಗಿ ಮಾಡಿದ ಎಚ್ಚರಿಕೆಯೆಂದೇ ತಿಳಿಯಬಹುದಾಗಿದೆ.

ಅಂತೂ ಇಂದು ಜಪಾನು ಈ ಸುವರ್ಣ ಸಂಧಿಯನ್ನು ಸದುಪಯೋಗ ಪಡಿಸಿಕೊಳ್ಳುವ ಪ್ರಯತ್ನದಲ್ಲಿರುವಂತೆ ಕಂಡು ಬರುತ್ತದೆ. ರಶ್ಯವು ಸಾಮ್ರಾಜ್ಯ ವಿಸ್ತರಣೆ ಮಾಡುವಂತೆ, ತಾನೂ ಸಾಮ್ರಾಜ್ಯ ವಿಸ್ತರಣೆ ಮಾಡಲು ಜಪಾನು ಒಂದು ಕಡೆಯಿಂದ ಯತ್ನಿಸುತ್ತಿರುವುದಾಗಿ ಊಹಿಸಬಹುದಾಗಿದೆ.

ಆದರೆ, ಬ್ರಿಟನು ಮತ್ತು ಅಮೇರಿಕಗಳು ಜಪಾನಿನ ಈ ವರ್ತನೆಯನ್ನು ಸುಲಭವಾಗಿ ಮುಂದುವರಿಸ ಬಿಡುವುದು ಸಾಧ್ಯವಿಲ್ಲ. ಆದಕಾರಣವೇ ಜಪಾನು ಬಹಳ ಮುಂಜಾಗ್ರತೆ ತೆಗೆದುಕೊಂಡೇ ಮುಂದಡಿಯಿಡುತ್ತದೆ!

ಸಂಘಟಿತರಾಗಬೇಕು

ಮೊನ್ನೆಯ ವರ್ಕಿಂಗ್ ಕಮಿಟಿಯ ನಿರ್ಣಯದ ಕುರಿತು, ಕಾಂಗ್ರೆಸ್ ಸೆಕ್ರೆಟರಿಗಳಾದ ಆಚಾರ್ಯ ಕೃಪಾಲಾನಿಯವರು ಒಂದು ಸ್ಪಷ್ಟೀಕರಣದ ಹೇಳಿಕೆಯನ್ನು ಹೊರಡಿಸಿದ್ದಾರೆ.

"ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಕಾಂಗ್ರೆಸಿನ ಮೂಲತತ್ವದಲ್ಲಾಗಲಿ, ಧೋರಣೆಯಲ್ಲಾಗಲಿ ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಕಳೆದ ೨೦ ವರ್ಷಗಳಿಂದ ಮಹಾತ್ಮಾ ಗಾಂಧಿಜಿಯವರನ್ನೇ ಕಾಂಗ್ರೆಸು ನಾಯಕರನ್ನಾಗಿ ಒಪ್ಪಿಕೊಂಡಿರುವುದು. ಸತ್ಯ ಮತ್ತು ಅಹಿಂಸೆಗಳೇ ಕಾಂಗ್ರೆಸಿನ ತತ್ವಗಳಾಗಿವೆ.

"ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರದ ಸಾಮ್ರಾಜ್ಯಶಾಹೀ ಬಂಧನವಿರುವ ವರೆಗೆ ಮತ್ತು ಆಯುಧ ಸಾಮಗ್ರಿಗಳ ಸಿದ್ಧತೆಯಾಗುತ್ತಿರುವ ವರೆಗೆ ಈ ಲೋಕದಲ್ಲಿ ಶಾಂತಿಯು ಸಾಧ್ಯವಿಲ್ಲವೆಂಬ ವಿಷಯ ವರ್ಕಿಂಗ್ ಕಮಿಟಿಗೆ ತಿಳಿದಿದೆ. ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಹಿಂಸಾತ್ಮಕ ರೀತಿಯಿಂದ ಸಂಘಟನೆ ಮಾಡುವುದು ಪ್ರಯೋಜನವಿಲ್ಲನೆಂದೂ ವರ್ಕಿಂಗ್ ಕಮಿಟಿಗೆ ಚನ್ನಾಗಿ ಅರಿತಿದೆ.

"ಇಂದು ಮಹಾ ಲೋಕಯುದ್ಧವು ನಡೆಯುತ್ತಿದೆ: ವಿಷಮ ಸಂಕಟದ ಕಾಲವು ಬಂದಿದೆ. ಇದರಿಂದ ನಮ್ಮದೇಶವು ಆಂತರಿಕ ಅರಾಜಕತೆ ಅಶಾಂತಿಗಳಿಗೂ ಹೊರಗಿನ ಆಕ್ರಮಣಕ್ಕೂ ಒಳಗಾಗಬಹುದು. ಈ ಸಂದರ್ಭದಲ್ಲಿ ಜನರು ಪೂರ್ಣ ಅಹಿಂಸಾವಾದಿಗಳಾಗಿ ಆಂತರಿಕ ಶಾಂತಿಯನ್ನು ತರಲು ಸಮರ್ಥರಾಗಿಲ್ಲವೆಂದೂ ವರ್ಕಿಂಗ್ ಕಮಿಟಿಗೆ ಗೊತ್ತಿದೆ. ಅದರಿಂದಲೇ ಇಂತಹ ವಿಷಮಕಾಲ ಬಂದಿರುವಾಗ ಜನರು ಆತ್ಮರಕ್ಷಣೆಗಾಗಿ ಸಂಘಟಿತರಾಗಬೇಕೆಂದು ಕಾಂಗ್ರೆಸು ಹೇಳುತ್ತದೆ."

ಹೀಗೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಆಚಾರ್ಯ ಕೃಪಾಲಾನಿಯವರು ವ್ಯಾಖ್ಯಾನಿಸಿರುವರು. ಭಾರತೀಯರು ಈ ಕಡೆಗೆ ತಮ್ಮ ಲಕ್ಷ್ಯವನ್ನು ಹರಿಸುವುದು ಅವಶ್ಯವಾಗಿದೆ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at all our Branches.
For particulars call at or write to
Any of our nearest Branches

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 183/1939 R. E. P. 257/1940
R. E. A. 388/40

ಬೆಳಗಜೆ ತಿಮ್ಮಪ್ಪಯ್ಯ—Petitioner
1. ಕೆ. ಟಿ. ಶಂಕರನಾರಾಯಣ ರಾವ್
2. ಗಣಪಯ್ಯ— } Respondents

1ನೆ ಎದ್ರಿ—K. T. ಶಂಕರನಾರಾಯಣ ರಾವ್. ತಿಮ್ಮಪ್ಪಯ್ಯನ ಮಗ. ಕುಕುಂಜ ಗ್ರಾಮ.

ಮೇಲಿನ ಅಮ್ಲುಜಾರಿಯಲ್ಲಿ ಎದ್ರಿ ಬಾಬ್ತು ಆಪದಿನ ಹಕ್ಕು ಅರ್ಜಿದಾರನು ಏಲಮಿಗೆಂತ ಇಡಿಸಿಯೆ ಏಲಂ ಇಸ್ತಿಹಾರು ನಗೈಲೆ ಪ್ರಾಜ್ಯಪಡಿಸುವದೆ—ಅದಕ ಶರತ್ತುಗಳನ್ನು ನಿರ್ಣಯಿಸಲಿಕ್ಕೂ ಏಲಂ ಸಮಯ ಅರ್ಜಿದಾರನು ದರ್ಖಾಸ್ತಿಗೆ ನಿಲ್ಲುವರೆ ಪರ್ಮಿಶನಿಗೂ ಹುಕುಂ ಅಪೇಕ್ಷಿಸಿ ತಾ. 17-7-1940ಕ್ಕೆ ನೋಟೀಸಿನ ವ್ಯಾದೆ ನಿಶ್ಚಯಿಸಿರುವದರಿಂದ ಆ ಕುರಿತು ಎದ್ರಿಯು ಯೇನಾದರೂ ತನ್ನ ಆಕ್ಷೇಪಗಳನ್ನು ಹೇಳುವದಿದ್ದರೆ 11 ಘಂಟೆಗೆ ಕೋರ್ಟಿಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಆತನನ್ನು ಶಿಪ್ಪಾ ಎಂತ ಮಾಡಿ ವೆವಹರಣೆಯನ್ನು ಮುಂದರಿಸಲಾಗುವುದು. ಎಂತ ಈ ಕೋರ್ಟು ಹುಕುಂ ಮೇರೆಗೆ ಈ ನೋಟೀಸು ಮಾಡಿಸ್ಸಿಯದೆ.

B. Ramchandra Rao.
M. A. B. L.
Pleader For Petitioner
Puttur S. K. 26-6-1940

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 45/1940.

ವಾದಿಯು, ಯು. ನರಸಿಂಗರಾವ್ ಕೂಡಾ. ಪ್ರತಿವಾದಿಯು, ವೆಂಕಟರಮಣ ಯಾನೆ ವೆಂಕಟ್ರಣ ಭಟ್ಟ ಕೂಡಾ. 4ನೇ ಪ್ರತಿವಾದಿ, ಮುಂದಿಲ ಗಣಪತಿ ಭಟ್ಟ, ಮುಹಾಬಲೇಶ್ವರ ಭಟ್ಟ ಮಗ, ಕಲ್ಲಾಲ ಗ್ರಾಮ. 7ನೇ ಪ್ರತಿವಾದಿ ಮುಹಾಬಲ ಭಟ್ಟ ನಾರಾಯಣ ಭಟ್ಟ ಮಗ ಸೈವಲಿಕೆ ಗ್ರಾಮ. 8ನೇ ಪ್ರತಿವಾದಿ, ಕೈಂತಾಜೆ ರಾಮಚಂದ್ರ ಭಟ್ಟ. ಅಪ್ಪಣ್ಣ ಯಾನೆ ಈಶ್ವರ ಭಟ್ಟ ಮಗ—ಕೆದಿಲ ಗ್ರಾಮ ಕೈಂತಾಜೆ. ಈ ಮೂರು ಜನ ಪ್ರತಿವಾದಿಗೆ ಈ ನೋಟೀಸು ಮೂಲಕ ತಿಳಿಯಪಡಿಸುವದೇನಂದ್ರೆ:—

ಸದ್ರಿ ವಾದಿಯು ತಾ. 7—7—33ನೇ ಅಡವಿನ ದಸ್ತಾವೇಜು ಬಡ್ಡಿ ರೂಪಾಯಿ 2247-12-6 ನ್ನು ಬರಮಾಡಿಕೊಳ್ಳಲು ಸದ್ರಿ ದ್ಯಾಜ್ಯವನ್ನು ದಾಖಲು ಮಾಡಿದ್ದಾರೆ. ಸದ್ರಿ ವ್ಯಾಜ್ಯದಲ್ಲಿ ನಿಮ್ಮ ಕಡೆಯಿಂದ ಉಜರಿಸುವದಿದ್ದರೆ ತನ್ನ ವ್ಯಾದೆಯಾದ ತಾ 24—7—1940ನೇ ಹಗಲು 10 ಘಂಟೆಗೆ ತಪ್ಪದೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಪ್ರತಿವಾದಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿಪ್ಪಾ ಮಾಡಿ ವ್ಯಾಜ್ಯ ತೀರ್ಮಾನವಾಗುವದೆಂತ ಈ ನೋಟೀಸು ಮೂಲಕ ನಿಮಗೆ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

(By order of the Court)

Puttur S. K. 29-6-1940. } B. Achyuta Baliga, Vakil for Plaintiff

ಸುಂದರವಾದ ಮುದ್ರಣ! ಮನೋಹರ ಚಿತ್ರಗಳು!
ಭೂವಿವರ
6ನೇ 0—5—0 | 7ನೇ 0—6—0 | 8ನೇ ತರಗತಿಗಳಿಗೆ 0—7—0
ನೂತನ ಪಾಠಪಟ್ಟಿಗೆ ಅನುಸಾರವಾಗಿ
ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ಬರೆಯಲ್ಪಟ್ಟುದು.
ಅತ್ಯಂತ ಕಡಿಮೆ ಕ್ರಯದ ಉತ್ತಮ ಪುಸ್ತಕಗಳು!
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

“ನಾನು ಸುಖಿಯೂ ದುಃಖಿಯೂ ಆಗಿದ್ದೇನೆ”

ವರ್ಕಿಂಗ್ ಕಮಿಟಿಯ ನಿರ್ಣಯದ ಕುರಿತು

ಮಹಾತ್ಮಾ ಗಾಂಧಿಜಿಯವರ ಹೇಳಿಕೆ!

“ಫಲಿತಾಂಶದ ವಿಷಯವಾಗಿ ನಾನು ಸುಖಿಯೂ ಆಗಿದ್ದೇನೆ; ದುಃಖಿಯೂ ಆಗಿದ್ದೇನೆ; ಸುಖಿಯಾಕೆಂದರೆ, ಅಗಲುವಿಕೆಯ ಭಾರವನ್ನು ಸಹಿಸಲು ನಾನು ಶಕ್ತನಾಗಿದ್ದೇನೆ. ಒಬ್ಬನೇ ಸ್ಥಿರವಾಗಿ ನಿಲ್ಲುವ ಶಕ್ತಿಯನ್ನು ದೇವರು ನನಗೆ ದಯಪಾಲಿಸಿದ್ದಾನೆ. ಇಷ್ಟು ವರ್ಷಗಳ ತನಕ ನನ್ನ ಸಂಗಡ ಕರೆದುಕೊಂಡು ಹೋಗಲು ಶಕ್ತವಾದ ನನ್ನ ಶಬ್ದದ ಶಕ್ತಿಯು ಇಂದು ಕಡಿಮೆಯಾಯಿತೆಂಬ ವಿಚಾರದಲ್ಲಿ ದುಃಖಿಯಾಗಿದ್ದೇನೆ. ಸಮರ್ಥರ ಅಹಿಂಸೆಯನ್ನು ತೋರಿಸುವ ದಾರಿಯನ್ನು ದೇವರು ನನಗೆ ತೋರಿಸಿದರೆ, ನನ್ನ ಹಾಗೂ ವರ್ಕಿಂಗ್ ಕಮಿಟಿಯೊಳಗೆ ಭೇದವು ತಾತ್ಕಾಲಿಕವಾಗುದೆಂಬುದನ್ನು ನಾನು ಬಲ್ಲೆ” ಹೀಗೆಂದು ಮಹಾತ್ಮ ಗಾಂಧಿಜಿಯವರು ವರ್ಕಿಂಗ್ ಕಮಿಟಿಯ ನಿರ್ಣಯ ಮತ್ತು ತನ್ನ ಸಂಬಂಧದ ಕುರಿತು ಹರಿಜನದಲ್ಲಿ ಒಂದು ದೀರ್ಘವಾದ ಲೇಖನವನ್ನು ಬರೆದಿರುತ್ತಾರೆ.

ಅದರ ಸಾರಾಂಶವು ಹೀಗಿದೆ

‘ನಮ್ಮ ದೇಶದ ಸ್ವಾತಂತ್ರ್ಯವನ್ನು ಶಸ್ತ್ರಾಸ್ತ್ರಗಳಿಲ್ಲದೆ ಅಹಿಂಸೆಯಿಂದ ರಕ್ಷಿಸಬೇಕೆಂಬ ನನ್ನ ಪ್ರತಿಪಾದನೆಗೆ ಮೊನ್ನೆಯ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಸರಿಯಾದ ಕಾಂಗ್ರೆಸಿನ ಉತ್ತರ ದೊರಕಿತು. ನನ್ನ ಶ್ರದ್ಧೆಯನ್ನು ಕಾರ್ಯಕ್ಕಿಳಿಸುವುದು ಅಶಕ್ಯವೆಂದು ವರ್ಕಿಂಗ್ ಕಮಿಟಿಯು ವಿಚಾರಿಸಿತು. ಕಳೆದ ಸಭೆಯಲ್ಲಿ ಹೊರಗಿನ ದಾಳಿಯಿಂದ ರಾಷ್ಟ್ರವನ್ನು ರಕ್ಷಿಸುವ ಕುರಿತು ವಿಚಾರವು ಬಂದಿತ್ತು. ನಾನು ಆಗ ಅಹಿಂಸೆಯ ಕುರಿತು, ಸಶಕ್ತರ ಅಹಿಂಸೆಯ ಕುರಿತು ವಾದಿಸಿದ್ದೆ. ಎಲ್ಲರೂ ಅಹಿಂಸಾಬದ್ಧರಾದರೆ ಅರಾಜಕತೆಗೆ ಎಡೆಯಿಲ್ಲವೆಂದೂ, ಹೊರಗಿನ ದಾಳಿಗೆ ಶಸ್ತ್ರಾಸ್ತ್ರಗಳ ಸಿದ್ಧತೆಯ ಪ್ರಶ್ನೆಯೇ ಬರುವುದಿಲ್ಲವೆಂದೂ ನಾನು ವಾದಿಸಿದೆ.

ಆದರೆ ವರ್ಕಿಂಗ್ ಕಮಿಟಿಯ ಸದಸ್ಯರಿಗೆ ಅದು ಸರಿಯೆನಿಸಲಿಲ್ಲ. ಇಂತಹ ಅನುಭವವನ್ನು ಎದುರಿಸುವ ಸಂದರ್ಭವು ಅವರಿಗೆ ಇದಕ್ಕಿಂತ ಮೊದಲು ಬಂದಿರಲಿಲ್ಲ. ಕಾಂಗ್ರೆಸು ಅಹಿಂಸೆಯನ್ನು ಒಂದು ಧೋರಣವಾಗಿಟ್ಟುಕೊಂಡಿದೆ. ಅದು ಯಶಸ್ವಿಯಾಗದಿದ್ದರೆ ಅವರು ಧೋರಣವನ್ನು ಬದಲಾಯಿಸುವುದು ನ್ಯಾಯವಿದೆ. ರಾಜಕೀಯ ಸ್ವಾತಂತ್ರ್ಯವನ್ನು ಅಹಿಂಸೆಯು ತರಲಾರದೆ ಹೋದರೆ ಆ ಧೋರಣದಿಂದ ಪ್ರಯೋಜನವಿಲ್ಲ. ನನ್ನ ಮಟ್ಟಿಗೆ ಅಹಿಂಸೆಯು ಒಂದು ಧ್ಯೇಯ, ಧರ್ಮ. ಅಹಿಂಸೆಯ ಪ್ರಚಾರವು ನನ್ನ ಜೀವಿತೋದ್ದೇಶ. ದೇವರ ಮತ್ತು ಮನುಷ್ಯರ ಮುಂದೆ ನನ್ನ ಶ್ರದ್ಧೆಯನ್ನು ಪ್ರಮಾಣ ಮಾಡಿ ತೋರಿಸಲು ಇದೇ ಯೋಗ್ಯ ಸಮಯವೆಂದು ತೋರಿದುದರಿಂದ, ನನ್ನನ್ನು ವಿಮೋಚನಗೊಳಿಸಬೇಕೆಂದು ಕಮಿಟಿಯೊಡನೆ ನಾನು ಕೇಳಿಕೊಂಡೆನು. ಇದುವರೆಗೆ ಕಾಂಗ್ರೆಸಿನ ಧೋರಣವನ್ನು ರೂಪಿಸಲು ನಾನೂ ಹೊಣೆಗಾರನಾಗಿದ್ದೆನು. ಅವರ ಮತ್ತು ನನ್ನೊಳಗೆ ಮೂಲಭೂತ ಭೇದಗಳಿರುವಾಗ ಮುಂದೆ ಹಾಗೆ ಮಾಡುವುದು ಶಕ್ಯವಿಲ್ಲ. ಈ ನನ್ನ ವಿಚಾರವನ್ನು ಅವರು ಕೂಡಲೇ ಅರಿತುಕೊಂಡು ನನ್ನ ಬಿಡುಗಡೆ ಮಾಡಿದರು. ಅವರ ಹಾಗೂ ನನ್ನ ನಡುವಿನ ಈ ಮೌನ ಅಗಲುವಿಕೆಯು ಅದ್ಭುತವಾದುದು. ಧೋರಣೆಗಳಲ್ಲಿ ಹೀಗೆ ಬೇರಾಗಿದ್ದರೂ ನಮ್ಮ ಗೆಳೆತನದ ವಿಚ್ಛೇದನವಾಗಿಲ್ಲ.

“ಈ ತೀರ್ಮಾನವು ಕಾಂಗ್ರೆಸಿನ ಬಹುಮಂದಿಯ ಅಭಿಪ್ರಾಯವನ್ನು ವರ್ಕಿಂಗ್ ಕಮಿಟಿಯವರು ಪ್ರತಿನಿಧೀಕರಿಸಬೇಕೆಂಬ ಸಿದ್ಧಾಂತಕ್ಕೆ ಬದ್ಧವಿದೆ. ಸಮರ್ಥರ ಅಹಿಂಸೆಯನ್ನು ಸಮರ್ಥಿಸುವ ಜನರ ಸಂಖ್ಯೆಯು ಅತ್ಯಲ್ಪವಾಗಿದೆ. ಒಳಗಿನ ಅರಾಜಕತೆ ಮತ್ತು ಹೊರಗಿನ ದಾಳಿಗಳನ್ನು ಅಹಿಂಸೆಯಿಂದಲೇ ಪ್ರತಿಭಟಿಸಬಹುದೆಂದು ನಂಬುವ ಕಾಂಗ್ರೆಸಿನ ಜನರು ಅದನ್ನು ತಮ್ಮ ಕಾರ್ಯಗಳಿಂದ ತೋರ ಹೊಮ್ಮಿಸಲಿ. ಸಮರ್ಥರ ಅಹಿಂಸೆಯು ಒಂದು ಧೋರಣ ಮಾತ್ರವಲ್ಲ, ಅದು ಒಂದು ಧ್ಯೇಯವಾಗಿದೆ. ಅಂತಹವನು ಅದನ್ನು ತನ್ನ ಪ್ರತಿಯೊಂದು ಕೆಲಸದಲ್ಲಿಯೂ ತೋರ ಹೊಮ್ಮಿಸುವನು. ಕಾಂಗ್ರೆಸಿನ ಜನರು ಇದನ್ನು ತೋರಹೊಮ್ಮಿಸಲು ಸಿದ್ಧರಿಲ್ಲವೆಂಬುದರಿಂದಲೇ ವರ್ಕಿಂಗ್ ಕಮಿಟಿಯು ಆಂತರಿಕ ಅರಾಜಕತೆ ಮತ್ತು ಹೊರಗಿನ ದಾಳಿಗಳಲ್ಲಿ ಅಹಿಂಸೆಯನ್ನು ಬಿಡುವ ನಿರ್ಣಯ ಮಾಡಬೇಕಾಯಿತು. ಇಂತಹ ಸಮಯದಲ್ಲಿ ಬೇಕಾದ ಅಹಿಂಸೆಯು ಕಾಂಗ್ರೆಸು ಹಿಂದೆ ಅನುಭವಿಸದಂತಹ ಅಹಿಂಸೆ! ನಿಜವಾದ ಅಹಿಂಸೆಯು ಅಲ್ಲಿಯೇ ಇದೆ. ಅಂತಹ ಅಹಿಂಸೆಯೇ ವಿನಾಶದ ಪಥವನ್ನು ಮೇಲೆತ್ತುವುದು.’

ಜೀವವಿಮೆಯೇ ಸುಲಭವಾದ ಕಂತುಗಳಲ್ಲಿ ಹಣ ಪಾವತಿ ಮಾಡಿ, ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳಲು ಹಣ ಕೂಡಿಸಲು ಸಾಧ್ಯವಾದ ಮಾರ್ಗವು

ಪ್ರತಿ ವರ್ಷವೂ ವಿವೇಚನಾಶಕ್ತಿಯುಳ್ಳ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ ‘ಓರಿಯಂಟಲ್’ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ

★

‘ತಡಮಾಡಬೇಡಿರಿ’

ಇಂದೇ ಒಂದು ‘ಓರಿಯಂಟಲ್’ ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ,—

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್
ಸೌತ್ ಪೆರೇಡ್, ಬೆಂಗಳೂರು.

ಭಾರತದಲ್ಲೆಲ್ಲೂ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ

NACET
De Luxe
SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ. ಆದರೆ ಈ ಬಾರಿ ಕೆಲವು ಸುಧಾರಣೆಯೊಂದೊದಗೂಡಿದೆ. ಈ ಹೊಸ ಬ್ಲೇಡುಗಳ ನಡುವಿನಲ್ಲಿ “ಸಿಗಿಯಲ್ಪಟ್ಟಿವೆ” ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ. ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು. ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ

★ ★ ★

ಧರ್ಮಾರ್ಥ ಇಸ್ಪೀಟು ಪೆಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ಪೀಟು ಪೆಟ್ಟಿಗೆಯನ್ನು ಪಡೆಯಲು ‘NACET BLADES’ ಎಂದು ಓದುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇದೇ ಸೆಟ್ಟನ್ನು

ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

17, ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.



ಸ್ವಪ್ನಮಯಲೋಕದಲ್ಲಿ ವಿಹರಿಸುವ ಹಿಟ್ಲರ್!

ಇಂಗ್ಲೆಂಡಿಗೆ ಧಾಳಿ ಸಾಧ್ಯವಿಲ್ಲ!

ಸ್ವಾತಂತ್ರ್ಯವನ್ನು ಹಿಟ್ಲರನ ಪದಹತಿಯಲ್ಲಿ ನುಚ್ಚು ನೂರಾಯಿತು! ಹಿಟ್ಲರನು ಮುಂದೇನು ಮಾಡುವನು? ಅವನು ಬ್ರಿಟನಿನ ಮೇಲೆ ದಂಡೆತ್ತಿ ಹೋಗಬಲ್ಲನೇ? ಅವನು ವಿಜಯಿಯಾಗುವುದು ಸಾಧ್ಯವೆ? ಹಿಟ್ಲರನ ಪೂರ್ವಾಧಿಕಾರಿಗಳೂ ಹಿಂದಣ ಯುದ್ಧಗಳಲ್ಲಿ ಹಿಟ್ಲರನ ಹಾಗೆ ಇಂಗ್ಲಾಂಡನ್ನು ಆಕ್ರಮಿಸುವ ಆಲೋಚನೆಗಳನ್ನು ಮಾಡಿದ್ದರು. ಆದರೆ ಅವರ ಆಲೋಚನೆಗಳು ಕನಸಾಗಿ ಉಳಿದುವಲ್ಲದೆ ಕಾರ್ಯರೂಪಕ್ಕೆ ಬರಲಿಲ್ಲ. ಕಳೆದ ಯುದ್ಧದಲ್ಲಿಯೂ ಕೈಸರನು ಇಂಗ್ಲಾಂಡನ್ನು ಆಕ್ರಮಿಸುವ ಉಪಾಯಗಳನ್ನು ಮಾಡಿದ್ದನು. ದಂಡೆತ್ತಿ ಹೋಗಲಿಕ್ಕೆ ಸಿದ್ಧತೆಗಳೂ ಆಗಿದ್ದುವು. ಆದರೆ ನಾಲ್ಕೈದು ವರ್ಷಗಳ ಆ ಯುದ್ಧ ಕಾಲದಲ್ಲಿ ಒಬ್ಬನೇ ಒಬ್ಬ ಜರ್ಮನ ಸೈನಿಕನಾದರೂ ಇಂಗ್ಲಾಂಡಿನ ದಂಡೆಯ ಮೇಲೆ ಕಾಲಿಡಲು ಸಮರ್ಥನಾಗಲಿಲ್ಲ.

ಇಂಗ್ಲಾಂಡಿನ ಭದ್ರ ಸಿದ್ಧತೆ

ಹಿಂದಿನ ಯುದ್ಧದಲ್ಲಿ ಬ್ರಿಟಿಷರ ಜಲಸೇನೆಯು ಅಜೇಯವಾಗಿದ್ದಿತು. ಸಮುದ್ರದಲ್ಲಿ ಇಟ್ಟಿದ ಬ್ರಿಟಿಷರ ಯುದ್ಧ ಹಡಗುಗಳ ಕೋಟೆಯನ್ನು ಮುರಿದು ಇಂಗ್ಲಾಂಡಿನ ಕರಾವಳಿಯ ಮೇಲೆ ಕಾಲಿಡುವದು ಜರ್ಮನರಿಗೆ ದುಸ್ತರವಾಗಿದ್ದಿತು. ಈಗ ಜರ್ಮನರ ಯುದ್ಧೋಪಕರಣಗಳು ಮೊದಲಿಗಿಂತ ಬಹಳ ಹೆಚ್ಚು ವಿನಾಶಕಾರೀ ಶಕ್ತಿಯನ್ನು ಸಂಪಾದಿಸಿರುವದು ನಿಜ. ಈ ಸಂಗತಿ ಎಲ್ಲರಿಗಿಂತ ಚೆನ್ನಾಗಿ ಬ್ರಿಟಿಷರು ತಿಳಿದಿರುವರು ಆದ್ದರಿಂದ ಅವರು ಅದಕ್ಕನುಗುಣವಾಗಿ ತಮ್ಮ ದೇಶ ರಕ್ಷಣೆಯ ಸಿದ್ಧತೆಯನ್ನು ಮಾಡಿದ್ದಾರೆ. ಮೊದಲಿನಂತೆ ಈಗಲೂ ಬ್ರಿಟಿಷರ ನಾವಿಕ ಪಡೆಯು ಅಜೇಯವಾಗಿರುವದು. ಬ್ರಿಟನಿನ ಪ್ರತಿಯೊಬ್ಬನಿಗೆ ಶತ್ರುದಾಳಿಯಿಂದ ತನ್ನ ವ್ಯಕ್ತಿಗತ ರಕ್ಷಣೆಯನ್ನು ಮಾತ್ರವಲ್ಲ, ದೇಶರಕ್ಷಣೆಯನ್ನೂ ಮಾಡುವ ಉಪಾಯಗಳಲ್ಲಿ ಉತ್ತಮವಾದ ತರಬೇತಿಯು ದೊರಕಿದೆ. ಜರ್ಮನರು ದಂಡೆತ್ತಿ ಬಂದರೆ . . ?

ಹಿಟ್ಲರನು ಒಬ್ಬ ಅದ್ಭುತ ಮನುಷ್ಯ!

ಲೋಕ ಕಂಟಕ ಹಿಟ್ಲರ್

ತನ್ನ ಪಂಥವನ್ನು ಸಾಧಿಸಲಿಕ್ಕೆ ಅವನು ಎಂಥ ಕಷ್ಟ ನಷ್ಟಗಳಿಗಾದರೂ ತಲೆಗೊಡುವನು ಯುದ್ಧದಲ್ಲಿ ಪ್ರಾಣ ನಷ್ಟ, ಧನಹಾನಿಯನ್ನು ಲೆಕ್ಕಿಸುವವನಲ್ಲ. ಒಂದು ಲಕ್ಷಕ್ಕಿಂತ ಕಡಿಮೆ ಜರ್ಮನ ಸೈನಿಕರು ಇಂಗ್ಲಾಂಡಿನಲ್ಲಿ ಒಂದೇ ಬಾರಿಗೆ ಬಂದು ಇಳಿದ ಹೊರತು ಹಿಟ್ಲರನಿಗೆ ಯುದ್ಧದಲ್ಲಿ ಯಾವ ಪ್ರಯೋಜನವೂ ಆಗುವಂತಿಲ್ಲ. ಕಡಿಮೆ ಎಂದರೆ ಒಂದು ಲಕ್ಷ ಜರ್ಮನ ಸೈನಿಕರನ್ನು ಇಂಗ್ಲಾಂಡಿಗೆ ಕೊಂಡು ಹೋಗಲಿಕ್ಕೆ ಹಡಗುಗಳು ಎಷ್ಟು ಬೇಕು? ಈ ಸೈನಿಕರನ್ನು ಒಯ್ಯಲಿಕ್ಕೇ ಕಡಿಮೆ ಎಂದರೆ ೫೦ ಹಡಗುಗಳು ಬೇಕಾಗುವವು. ಸೈನ್ಯ ಸಾಧನಗಳನ್ನು ತರಲಿಕ್ಕೆ ಇನ್ನೂ ಹೆಚ್ಚಿಗೆ ಹಡಗುಗಳು ಬೇಕಾಗುವವು. ಇಷ್ಟೊಂದು ದೊಡ್ಡ ಹಡಗುಪಡೆಯು ಇಂಗ್ಲಾಂಡಿಗೆ ಪ್ರಯಾಣ ಬೆಳಸುವುದು ಇಂಗ್ಲಾಂಡಿನ ರಕ್ಷಕ ಪಡೆಗೆ ತಿಳಿಯದಿರುವದೆ? ಬ್ರಿಟನಿನ ಇಡೀ ಸಮುದ್ರದಲ್ಲಿ ಹಾಕಿರುವ ಸುರಂಗದ ಬೇಲಿ, ಕೋಟೆಗಳ ಜಾಲ, ಮೇಲೆ ವಿಮಾನಗಳ ಪಡೆ ಇವುಗಳಿಂದ ಸುರಕ್ಷಿತವಾಗಿ ಜರ್ಮನರ ಪಡೆಯು ಇಂಗ್ಲಾಂಡಿಗೆ ಸಮೀಪವಾಗುವದು ಅಸಂಭವ. ಏನಾದರೂ ಮಾಡಿ ಒಂದ ಲಕ್ಷ ಜರ್ಮನ ಸೈನಿಕರನ್ನು ಹಿಟ್ಲರನು ಬ್ರಿಟಿಷರ ಸಮುದ್ರ ದಂಡೆಯನ್ನು ಹೊಂದಿಸ ಬಲ್ಲನಾದರೂ ಬ್ರಿಟಿಷರ ಮೂವತ್ತು ಐವತ್ತು ಮೈಲು ದೂರದ ತನಕ ಗುಂಡು ಹಾರಿಸುವ ದೊಡ್ಡ ದೊಡ್ಡ ಫಿರಂಗಿಗಳು ಬೆಂಕಿಯನ್ನೇ ಕಾರಿ ಈ ಸೇನೆಯನ್ನು ಸುಟ್ಟು ಬೂದಿ ಮಾಡುವವು. ಆದ್ದರಿಂದ ಸಮುದ್ರದಲ್ಲಿ ಪ್ರಬಲ ಯುದ್ಧವು ಆಗಿ ಅದರಲ್ಲಿ ಹಿಟ್ಲರನಿಗೆ ನಿಶ್ಚಿತ ವಿಜಯವು ಪ್ರಾಪ್ತವಾದ ಹೊರತು ಹಿಟ್ಲರನು ಇಂಗ್ಲಾಂಡಿನ ಮೇಲೆ ದಂಡೆತ್ತಿ ಹೋಗುವದು ದುಸ್ಸಾಧ್ಯವಾಗಿದೆ.

ವಾಯು ಕೊಡೆಗಳಿಂದ ಇಳಿಯುವರೇ?

ಇಂಗ್ಲಾಂಡು ಜನನಿಬಿಡವಾದ ಪ್ರದೇಶವು ಜನರ ಕಣ್ಣು ಕಟ್ಟಿ ಯಾವ ವಿಮಾನವೂ ಇಂಗ್ಲಾಂಡಿನ ಮೇಲೆ ಎಲ್ಲಿಯೂ ಹಾರಾಡಲಾರದು. ಬೆಲ್ಜಿಯಮಿನಲ್ಲಿ ಮಾಡಿದಂತೆ ಇಂಗ್ಲಾಂಡಿನಲ್ಲಿ ವಾಯು ಕೊಡೆಗಳ ಮೂಲಕ ಸೇನೆಯನ್ನು ಇಳಿಸುವದು ಸಾಧ್ಯವಲ್ಲ. ಆಕಾಶ ಮಾರ್ಗವಾಗಿ ಒಂದೇ ಬಾರಿಗೆ ೩೦೦೦ ವಿಮಾನಗಳಿಂದ ಹಾರಿಬರವದೂ ವಾಯು ಕೊಡೆಗಳಿಂದ ಒಂದು ಲಕ್ಷ ಸೈನಿಕರು ಇಳಿಯುವದೂ ಕೇವಲ ಕನಸಿನ ಕಲ್ಪನೆಯೇ ಆಗಿದೆ

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೇನೇ ಬಂದು ವಿಚಾರಿಸಿರಿ.

THE
BANK OF MANGALORE LTD.,
MANGALORE.
ESTD 1931
Branches:-
Mudabidri & Padubidri.

Fixed Deposits will be received at following rates of interest.

For	3	months	3½%
„	6	„	4%
„	12	„	5%
„	24	„ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted



ಈ ವಾರದ ಕಥೆ:

ಅಮೃತಪಾನ!

ಲೇಖಕ ಕೆ. ಶ್ರೀನಿವಾಸ ಶೆಣೈ ಕಾರ್ಕಳ

ಅವಳಿಗೆ ವರ್ಷಕ್ಕೆಲ್ಲಿಯಾದರೂ ಒಂದೆರಡು ಬಾರಿ ಹರಿದ ಚಿಂದಿ ಬಟ್ಟೆಗಳು ದೊರೆಯುತ್ತಿದ್ದುವು—ಅದು ಕೂಡ ದೇಶೀದ್ದ ದಯೆ ಅಥವಾ ಮಹಾ ಉಪಕಾರ ಮಾಡಿದೆನೆಂಬ ಭಾವನೆಯಿಂದ! ಗಾಣದಂತೆ ಅವಳು ಹಗಲೂ ರಾತ್ರಿ ಕೆಲಸ ಮಾಡಬೇಕಾಗುತಿತ್ತು. ಆದರೂ ಅವಳ ಶಕ್ತಿ ಮೀರಿದ ಪರಿಶ್ರಮದಿಂದ ಅತ್ತೆ ನಾದಿನಿಯರಿಗೆ ಕೊಂಚವಾದರೂ ತೃಪ್ತಿಯಾಗುತ್ತಿರಲಿಲ್ಲ. ಯಾವಾಗ ಕಂಡರೂ ಅವಳನ್ನು ಭೂತ, ರಾಕ್ಷಸಿ, ಪಾಪಿನಿ, ತಾಟಕಿ ಎಂಬ ಬಿರುದುಗಳ ಉಪಾಧಿಗಳಿಂದ ಅತ್ತೆ ನಾದಿನಿಯರು ಬಯ್ಯುತ್ತಿದ್ದರು.

ದೇವರೇ ಅವಳಿಗೆ ಮುನಿದಿದ್ದನೆಂದ ಮೇಲೆ ಯಾರೇನು ಮಾಡಲು ಸಮರ್ಥರಾದಾರು? ಜೀವನ ಸುಖವೆಂದರೇನನ್ನು? ಸೌಭಾಗ್ಯ ತಿಲಕವೆಂದರೇನು? ಎಂಬುದನ್ನು ಅವಳು ತಿಲ ಮಾತ್ರ ಕೇಳಿರಲಿಲ್ಲ, ಸ್ವಲ್ಪವಾತ್ರವೂ ನೋಡಿರಲಿಲ್ಲ, ವಿವಾಹವಾಗಿ, ಪತಿ ಎಂದರೇನೆಂದು ತಿಳಿಯುವ ಮೊದಲೇ ಅವಳು ವಿಧವೆಯಾಗಿದ್ದಳು. ಅದರಲ್ಲೂ ಅವಳನ್ನು ತವರಿನಿಂದ ತಿಳಿಯುವ ಒಂದು ಜೀವಿಯಾದರೂ ತಾಯಿ ಮನೆಯಲ್ಲಿರಲಿಲ್ಲ. ಹೀಗೆ ದುರ್ಭಾಗ್ಯ ದೇವಿಯಾಗಿ ಆಕೆ ಕಾಲಯಾಪನೆ ಮಾಡುತ್ತಿದ್ದಳು.

ರಾಮಿ ಯಾವ ಜಲ ಸ್ಥಿತಿಯಲ್ಲಿ ತನ್ನ ಜೀವನ ನೌಕೆಯನ್ನು ಬಿಟ್ಟಿದ್ದಾಳೋ, ಅದು ಕೇವಲ ದುಃಖದಾಯಕವಾಗಿತ್ತು. ಆ ಮಹಾಸಾಗರದಲ್ಲಿ ಒಂದೊಂದು ವೇಳೆ ಕಷ್ಟ ವೇದನೆಗಳ ದೊಡ್ಡ ದೊಡ್ಡ ಅಲೆಗಳು ಎದ್ದು, ರಾಮಿ ಅವುಗಳಲ್ಲಿ ಬಿದ್ದು ಮುಳುಗಿ ನೂರು ನೂರು ಗುಟುಕು ನೀರು ಕುಡಿಯುತ್ತಿದ್ದಳು. ಆದರೂ ಅವಳ ಹೃದಯವು ಕಷ್ಟಗಳನ್ನು ಸಹಿಸಿ ಸಹಿಸಿ ಪಾಷಾಣದಂತಾಗಿತ್ತು. ಆದುದರಿಂದ ಕಷ್ಟಗಳ ಪರ್ವತವೇ ಅವಳ ಮೇಲೆ ಬಂದು ಬಿದ್ದರೂ, ಈಗೀಗ ಅವಳಿಗೆ ಅದರ ಭಾರದ ಹೆಚ್ಚಿನ ಅನುಭವವಾಗುತ್ತಿರಲಿಲ್ಲ.

ರಾಮಿ, ದಯಾಳನನ್ನು ಉಣ್ಣಿಸುವ ಕೆಲಸ ಮಾಡುತಿದ್ದಳು. ಅವಳು ದಯಾಳನನ್ನು ಬಹಳ ಪ್ರೇಮಿಸುತಿದ್ದಳು. ಹಿಡಿದ ಅಂಧಕಾರಮಯ ಕಾರ್ಮೋಡಗಳಿಂದ ಆಚ್ಛಾದಿತವಾದ ಭಾಗ್ಯಾಕಾಶದಲ್ಲಿ ಅವಳಿಗೆ ಆನಂದದ ಒಂದೇ ಒಂದು ಚಿಕ್ಕ ನಕ್ಷತ್ರವು ಮಿನುಗುತ್ತಿರಲಿಲ್ಲ. ಆದರೂ

ಕನ್ನನ್ ಮತ್ತು ಸನ್ಯಾಲ್

ದಯಾಳನ ಕಾರಣದಿಂದ ಈ ಕಾರ್ಮೋಡಗಳು ಛಿನ್ನ ವಿಛಿನ್ನವಾಗವುವು, ಮತ್ತೆ ಜೀವನದ ಕೊನೆಗಾಲದಲ್ಲಿಯಾದರೂ ತಾನು ಸೌಭಾಗ್ಯ ಸೂರ್ಯನ ಉದಯವನ್ನು ಕಂಡು ಸಂತೋಷಿಸಬಹುದು ಎಂದು ಅವಳು ಆಶಿಸಿದ್ದಳು. ಆದರೆ ಅದು ಅವಳ ಒರಿಯ ಕನಸು ಮಾತ್ರ ಆಗಿತ್ತು!

ದಯಾಳನನ್ನು ಕಂಡಾಗ ಅವನನ್ನು ಉಣ್ಣಿಸುವಾಗ, ಅವನ ತೊದಲ್ನುಡಿಗಳನ್ನು ಕೇಳುವಾಗ, ರಾಮಿ ತನ್ನ ಕಲ್ಪನೆಯ ಸುಖಸಾಮ್ರಾಜ್ಯದಲ್ಲಿ ವಿಹರಿಸುತಿದ್ದಳು. ಆದರೆ ಇದು ಯಾವುದೂ ಅತ್ತೆ ನಾದಿನಿಯರಿಗೆ ಇಷ್ಟವಿರಲಿಲ್ಲ. ಅವಳು ದಯಾಳನೊಂದಿಗೆ ಬರೇ ಒಂದು ಕ್ಷಣ ಕಾಲ ನಕ್ಕು ನಗಿಸಿ ಇರುವುದನ್ನು ನೋಡಿ ಅತ್ತೆ ನಾದಿನಿಯರು ಕಿಡಿ ಕಿಡಿಯಾಗುತಿದ್ದರು. 'ಸರಿ, ನಕ್ಕು ನಗಿಸಿ ಗಂಡನಿಗೆ ದಾರಿ ತೋರಿಸಿಯಾಯಿತು. ಈಗ ಇವನಿಗೂ ದಾರಿ ತೋರಿಸಲಿಕ್ಕೆ ಹೊರಟಿದ್ದಾಳೆ'' ಎಂದು ಅವರು ಆಗಲೇ ಸಹಸ್ರನಾಮದ ಜಪಕ್ಕೆ ಆರಂಭಿಸುತಿದ್ದರು. ರಾಮಿ ಹುಕ್ಕು ಬಟ್ಟೆಯಿಂದ ಕಣ್ಣೀರನ್ನು ಒರಸಿಕೊಳ್ಳುತ್ತ ಒಳಗೆ ಹೋಗುತಿದ್ದಳು.

★

ಹೀಗೆ ವರ್ಷಗಳು ಕಳೆದುವು. ಪಾಠ್ಯಕ್ರಮದ ಸಮ್ಮಯ ಶಾಲೆಯಿಂದ ಬಂದವನೇ ದಯಾಳ ರಾಮಿಯ ಬಳಿಗೆ ಓಡಿ ಹೋದ. ಆಗ ರಾಮಿ ದನಕರುಗಳಿಗೆ ಮೇವು ಹಾಕುತಿದ್ದಳು. ಅವನು ಹೋಗಿ 'ಅಮ್ಮಾ! ನಾನು ಪಾಸ' ಎಂದ.

ದಯಾಳನ ಮಾತು ಕೇಳಿ ರಾಮಿ ಪರಮಾತ್ಮನಿಗೆ ಧನ್ಯವಾದಗಳನ್ನು ಕೊಟ್ಟಳು.

ಅಮ್ಮಾ! ನಾನು ಪರೀಕ್ಷೆಯಲ್ಲಿ ಪಾಸು! ಪ್ರಸಾದ ಹಂಚಬೇಕು' ಎಂದು ದಯಾಳ ಹೇಳಿದ!

'ಆಗಬಹುದು, ದಯೂ! ಇನ್ನೇನು ಮಾಡುವೆ?'

'ಇನ್ನೂ ಕಲಿಯುತ್ತೇನೆ.'

'ಕಲಿತು ಏನು ಮಾಡುವೆ?'

'ಕಲಿತು ಕಲೆಕ್ಟರನಾಗುತ್ತೇನೆ ಅಮ್ಮಾ ಆ ಮೇಲೆ ನಿನ್ನನ್ನು ಕರಕೊಂಡು ಬೇರೆ ಬಿಡಾರ ಮಾಡುತ್ತೇನೆ, ನಿನಗೆ ಸುಖ ಕೊಡುತ್ತೇನೆ.'

ದಯಾಳನ ಕೊನೆಯ ಮಾತುಗಳನ್ನು ಕೇಳಿ ರಾಮಿಯ ಕಣ್ಣುಗಳು ನೀರಿನಿಂದ ತೋಯ್ದು ಹೋದುವು.

ದಯಾಳ ಕೇಳಿದ—'ಯಾಕೆ ಅಮ್ಮಾ, ನೀನು ಅಳುತ್ತಿ?'

'ಹೀಗೆಯೇ ಮಗೂ!' ಹೀಗೆಂದು ಹೇಳುತ್ತ ರಾಮಿ ಒಂದು ನಿಟ್ಟುಸಿರನ್ನು ಬಿಟ್ಟಳು.

ದಯಾಳ ಈಗ ಸ್ವಲ್ಪ ಸ್ವಲ್ಪ ತಿಳಿಯಲಾರಂಭಿಸಿದ್ದ. ರಾಮಿಯ ಮೇಲೆ ತಾಯಿ ಮತ್ತು ಅಜ್ಜಿಯಿಂದಾಗುವ ಅತ್ಯಾಚಾರಗಳು ಅವನಿಗೆ ಅಸಹನೀಯವೆಂದು ತೋರುತಿದ್ದವು. 'ಅಮ್ಮಾ! ನಾನು ಇಷ್ಟು ಮಾತ್ರಕ್ಕೆ ತಾಯಿ ಅಜ್ಜಿಯಂತೆ ನಿನಗೆ ಕಷ್ಟ ಕೊಡವುದಿಲ್ಲ' ಎಂದು ಹೇಳುತ್ತ ಅವನು ಮನೆಯೊಳಗೆ ಹೋದ.

★

ಇದಾಗಿ ಮತ್ತೆ ಕೆಲವು ವರ್ಷಗಳು ಕಳೆದುವು. ದಯಾಳ ಹೊರಗೆ ಓದಲಿಕ್ಕೆ ಹೋಗಿದ್ದ, ಮೆಟ್ರಿಕ್ ಪಾಸಾಗಿ ಮನೆಗೆ ಮರಳಿದ. ಆದರೆ ಇಷ್ಟು ಸಮಯವು ಕಳೆಯುವುದರೊಳಗಾಗಿ ಮನೆಯಲ್ಲಿ ಅನೇಕ ಪರಿವರ್ತನೆಗಳಾಗಿದ್ದುವು. ದಯಾಳನ ರಾಮಿ ಮಾನಸಿಕ ವೇದನೆಯಿಂದಲೂ ಶಾರೀರಿಕ ದುರ್ಬಲತೆಯಿಂದಲೂ ಹಾಸಿಗೆ ಹಿಡಿದಿದ್ದಳು. ಅವಳಿಗೆ ಪಕ್ಷವಾತವಾಗಿತ್ತು. ಹುಲ್ಲುಕಡ್ಡಿಯಂತಾಗಿದ್ದಳು. ಹೆಸರಿಗೆ ಮಾತ್ರ

[ಒಂಬತ್ತನೆಯ ಪುಟವನ್ನು ನೋಡಿ]

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA N. KANARA)

Stockist U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ, ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ್'

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, —ದ ಕನ್ನಡ

ಸ್ಥಳೀಯ ಸ್ಟೋಕಿಸ್ಟರು. (ಬ್ರಾಂಚ್: ಕುಮಟಿ, ಉತ್ತರ ಕನ್ನಡ.)

ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

ಭಾರತದ ರಕ್ಷಣಾ ಸಿದ್ಧತೆಗಳು!

ಸರಕಾರದ ಯೋಜನೆಗೆ ಜನರ ಬೆಂಬಲಬೇಕು!

— ಜನತೆಯ ಪ್ರತಿನಿಧಿಗಳಿಗೆ ಅಧಿಕಾರ ಕೊಡುವರೆ? —

ಭಾರತದಲ್ಲಿ ಸೈನ್ಯ ವಿಸ್ತರಣ ಯೋಜನೆಯ ಕುರಿತು ಭಾರತ ಸೇನಾಧಿಪತಿಗಳು ಮೊನ್ನೆ ಒಂದು ಭಾಷಣವಮಾಡಿದರು. ಇಂದು ಹಿಟ್ಲರನು ಜಗತ್ತಿನ ಪ್ರಳಯ ಸಾಧನೆಗೆ ಎಂಬಂತೆ ಮುಂದೊತ್ತಿ ಬರುತ್ತಿರುವಾಗ, ಭಾರತವೂ ಅನ್ಯರ ಆಕ್ರಮಣದಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದುದು ಅವಶ್ಯವೇ ಆಗಿದೆ. ಹಿಟ್ಲರನು ಗೆಲ್ಲುವುದರಿಂದ ಇಡೀ ಪ್ರಪಂಚಕ್ಕೆ ಮಾತ್ರವಲ್ಲ, ಅದರೊಡನೆ ಭಾರತಕ್ಕೂ ಮಹಾ ಅನರ್ಥವೇ ಆದೀತು. ವೈರಿಗಳು ಆಕ್ರಮಣ ಮಾಡುವ ಸ್ವಭಾವದವರಾಗಿರುವಾಗ, ಆಕ್ರಮಣವನ್ನು ತಡೆವ ಕಾರ್ಯಗಳನ್ನು ಕೈಕೊಳ್ಳುವುದು ಸರಕಾರದ ಹಾಗೂ ಪ್ರಜೆಗಳ ಆದ್ಯ ಕರ್ತವ್ಯವು. ಇದು ವರೆಗೆ ಸರಕಾರವು ಆ ಕುರಿತು ಗಮನಕೊಡದಿರುವುದೇ ಪ್ರಮಾದಕರವೆನ್ನಬೇಕು. ಸರಕಾರವು ತನ್ನ ಕರ್ತವ್ಯವನ್ನು ಪೂರೈಸಲು ಮುಂಬೆ ಬಂದಲ್ಲಿ, ಇಂತಹ ವಿಷಮ ಪರಿಸ್ಥಿತಿಯೊದಗಿರಲು ಪ್ರಜೆಗಳು ಅದಕ್ಕೆ ಸಂಪೂರ್ಣ ನೆರವಾಗುವರೆಂಬ ಕುರಿತು ಯಾವ ತರದ ಸಂದೇಹವೂ ಇರಲಾರದು.

ಇದು ತಕ್ಕ ಸಂದರ್ಭ

ತನ್ನ ಮುಂದಿನ ಅವಸ್ಥೆ ಕಾರ್ಯಕ್ರಮಗಳೇನೆಂದು ನಿರ್ಧಾರಕ್ಕೆ ಬರುವ ಕಾಲವು, ಸಂಧಿ ಕಾಲವು ಈಗ ಭಾರತಕ್ಕೆ ಬಂದೊದಗಿದೆ. ಮುಂದಿನ ಕಾರ್ಯಕ್ರಮಗಳಲ್ಲಿ ಇಂತಹ ಸಂದಿಯ ಸಮಯದಲ್ಲಿ ಭಿನ್ನಾಭಿಪ್ರಾಯವು ಇರಲಾರದು. ಅನೇಕ ಕ್ರಿಯೆ ಪ್ರತಿಕ್ರಿಯೆಗಳಿಂದ ಸರಕಾರವು ಭಾರತದ ರಕ್ಷಣೆಯ ಕುರಿತು ಯೋಜನೆ ಮಾಡುತ್ತಿದೆ, ಇದೇ ಭಾರತಕ್ಕೆ ಸುಸಂಧಿ ಸುಮುಹೂರ್ತವಾಗಿದೆ.

ಇಂದೊದಗಿದ ವಿಷಮತೆಯನ್ನು ಊಹಿಸಿದರೆ ಸರಕಾರವು ಇದುವರೆಗೆ ವಹಿಸಿದ ಆಲಸ್ಯಕ್ಕಾಗಿ, ಔದಾಸೀನ್ಯಕ್ಕಾಗಿ ಜನರು ಬೆರಗಾಗುತ್ತಾರೆ. ತೀರ್ವಿಯ ಬಹು ಪಾಲು ಸೈನ್ಯಕ್ಕೆಂದು ಪ್ರತಿವರ್ಷವೂ ವ್ಯಯವಾಗುವುದಾದರೂ ಭಾರತದ ರಕ್ಷಣೆಗೆ ಇಂದು ಸಾಕಷ್ಟು ಸೈನ್ಯವಿಲ್ಲದಿರುವುದು ಅತ್ಯಂತ ಆಶ್ಚರ್ಯಕರವಲ್ಲವೇ?

ಭಾರತದ ಸೈನ್ಯದಲ್ಲಿ ಭಾರತೀಯರು

ಭಾರತದಲ್ಲಿರುವ ಈ ಅಲ್ಪ ಸೈನ್ಯದಲ್ಲಿಯಾದರೂ ಬಹುಕಾಲದ ವರೆಗೆ ಜವಾಬ್ದಾರಿಯ ಉಚ್ಚ ಅಧಿಕಾರಗಳನ್ನು ಭಾರತೀಯರಿಗೆ ಕೊಡುತ್ತಿರಲಿಲ್ಲ. ಇತ್ತೀಚೆಗೆ ಮಾತ್ರ ಕೆಲವರಿಗೆ ಅಲ್ಪಸ್ವಲ್ಪ ಅಧಿಕಾರಗಳು ಸಿಕ್ಕಿವೆ. ರಾಯಲ್ ಆರ್ಟಿಲರಿಯಲ್ಲಿ ಭಾರತೀಯರು ಡ್ರೈವರರೇ ಮೊದಲಾದ ಕೆಲಸಗಳಲ್ಲಿ ಸೇರಿಸಲ್ಪಡುತ್ತಿದ್ದರು!

ಹಿಂದಿನ ಮಾತು ಹೇಗಿದ್ದರೂ ಯುದ್ಧನಾರಂಭವಾದ ಮೇಲೆ ಸೈನ್ಯ ವಿಭಾಗವು ಬಹಳ ಅಭಿವೃದ್ಧಿ ಹೊಂದಿರುವುದಾಗಿ ತಿಳಿದು ಬರುತ್ತದೆ. ಯುದ್ಧವಾರಂಭವಾದಂದಿನಿಂದ ಅಸಂಖ್ಯ ಜನರು ಸೈನ್ಯಕ್ಕೆ ಸೇರಿಸಲ್ಪಟ್ಟರು. ಇದರಲ್ಲಿ ಬಹು ಮಂದಿ ಭಾರತೀಯರೆಂಬುದಕ್ಕೆ ಸಂಶಯವಿಲ್ಲ.

ಜಲ ಆಕಾಶ ಸೈನ್ಯಗಳ ದೌರ್ಬಲ್ಯ

ಆಕಾಶ ಮಾರ್ಗವಾಗಿ ಭಯಂಕರ ಆಕ್ರಮಣವು ನಡೆದ ಪಕ್ಷದಲ್ಲಿ ಅದನ್ನು ತಡೆವರೆ ಇಂದು ಭಾರತೀಯ ವೈಮಾನಿಕ ಸೈನ್ಯವು ತೀರಾ ಅಸಮರ್ಥವಾಗಿದೆ. ಭಾರತದ ವೈಮಾನಿಕ ಸೈನ್ಯವು ಮೊದಲಾಗಿ ಸ್ಥಾಪಿತವಾದುದೇ ೧೯೩೨ರಲ್ಲಿ! ಅದಕಾರಣ ಇಂದಿನ ಈ ವಿಷಮ ಕಾಲದಲ್ಲಿ ಭಾರತದ ಯುವಕರನ್ನು ವೈಮಾನಿಕ ಸೈನಿಕರಾಗಿ ತರಬೇತಿ ಮಾಡುವುದು ಅತ್ಯಂತ ಅವಶ್ಯವಾಗಿದೆ. ಮಿ| ಆರ್ಥರ್ ಮೂರರು ತಮ್ಮೊಂದು ಲೇಖನದಲ್ಲಿ ಭಾರತದಲ್ಲಿ ಆಕಾಶ ಸೈನ್ಯವು ಬಹಳ ಹೆಚ್ಚಾಗಿ ತಯಾರಿಯಾಗಬೇಕಾದ ಅವಶ್ಯಕತೆಯನ್ನು ವಿವರಿಸಿರುವರು.

ಜಲ ಸೈನ್ಯವು ಅಂತೆಯೇ ದುರ್ಬಲವಾಗಿದೆ. ೧೯೩೪ರಿಂದ ಇಲ್ಲಿ ಜಲಸೈನ್ಯವು ಆರಂಭವಾಗಿತ್ತು. ೧೯೩೪ರ ವೇಳೆ ಆ ವಿಷಯದಲ್ಲಿ ಹೆಚ್ಚು ಹೆಚ್ಚು ಬದಲಾವಣೆಗಳಾದುವು; ಅಭಿವೃದ್ಧಿಗಳಾದುವು.

ಆದರೆ ಯುದ್ಧ ವಾರಂಭವಾದಂದಿನಿಂದ ಭಾರತದ ನೌಕಾ ಸೈನ್ಯವೂ ಬಹಳವಾಗಿ ಅಭಿವೃದ್ಧಿ ಹೊಂದಿದೆ. ದೊಡ್ಡ ದೊಡ್ಡ ಹಡಗುಗಳು, ಜಲಾಂತರ್ಗಾಮಿ ನಾವೆಗಳನ್ನು ಎದುರಿಸುವ ನೌಕೆಗಳು; ಕೋಟೆಗಳನ್ನು ತೆಗೆವ ಹಡಗಗಳು, ಮತ್ತು ಬಂದರಗಳೂ ಈಗ ಹೆಚ್ಚುತ್ತಿವೆ.

ಎಚ್ಚೆತ್ತಿರ ಬೇಕು

ಹಿಂದಿನ ವಿಷಯವು ಹೇಗೇ ಇರಲಿ; ನಮ್ಮ ಮುಂದಿರುವ ಸಂಕಷ್ಟವನ್ನು ವಿಚಾರಿಸಿ ಭಾರತದ ಯುವಕರು ಒಟ್ಟಾಗಬೇಕು. ಭಾರತವನ್ನು ಶತ್ರುದಾಳಿಯಿಂದ ರಕ್ಷಿಸುವ ಭಾರವು ಭಾರತೀಯರದೇ ಆಗಿದೆ. ಈ ಕಾರ್ಯದಲ್ಲಿ ಅನೇಕ ಎಡರು ತೊಡರುಗಳು ಇರಬಹುದು. ಅವುಗಳನ್ನು ಗ್ರಹಿಸಿ ಎದೆಗುಂದುವ ಕಾಲವು ಇದಲ್ಲ. ಅವುಗಳನ್ನು ಗೆದ್ದು ಮುಂದುವರಿಯ ಬೇಕು. ಭಾರತದ ಮುಖಂಡರಿಗೆ ಬೇಕಾದ ಅಧಿಕಾರವು ಕೊಡಲಾದಲ್ಲಿ ಭಾರತವನ್ನು ರಕ್ಷಿಸುವ ಸಲುವಾಗಿ ಅಸಂಖ್ಯಾತ ಯುವಕರು ನಾಮುಂದೆ ನಾಮುಂದೆ ಎಂದು ಮುನ್ನುಗ್ಗಿ ಬರುವರು. ಸರಕಾರವು ಆ ಕುರಿತು ಈಗ ವಿಚಾರಿಸಬೇಕಾಗಿದೆ.

ಪ್ರಜಾಸಮ್ಮತಿ ಖಂಡಿತವಾಗಿದೆ.

ವಿಮಾನಗಳನ್ನು ತಯಾರಿಸುವ, ಪೆಟ್ರೋಲುಗಳನ್ನು ಒದಗಿಸುವ, ವೈಮಾನಿಕರನ್ನು ತರಬೇತಿಗೊಳಿಸುವ ಈ ಸಮಸ್ಯೆಗಳನ್ನು ಪರಿಹರಿಸಿದಲ್ಲಿ ಮಿಕ್ಕ ಎಲ್ಲಾ ಕಾರ್ಯಗಳಿಗೂ ಜನತೆಯು ಎದ್ದೊಡ್ಡಿ ಮುಂದೆಬರುವುದು. ಹೊಸ ತೆರಿಗೆಗಳನ್ನಾದರೂ ದೇಶದ ಸಲುವಾಗಿ ಪಿಟ್ಟೆಂದು ಮಾತನಾಡದೆ ಕೊಡುವರು. ಆದರೆ ಈ ಕಾರ್ಯಗಳನ್ನು ಸರಕಾರವು ಪ್ರಜಾಪ್ರತಿನಿಧಿಗಳ ಮೂಲಕ ಮಾಡಿಸಲು ಸಮರ್ಥವಾದರೆ, ಪ್ರಜಾಪ್ರತಿನಿಧಿಗಳನ್ನು ಸಮಾಧಾನ ಪಡಿಸ ಬಲ್ಲುದಾದರೆ ಅತ್ಯಂತ ಸುಲಭವಾಗಿಯೇ ನೆರವೇರುವುದು. ರಾಷ್ಟ್ರೀಯ ಸರಕಾರವನ್ನು ಪ್ರಾಂತಗಳಲ್ಲಿಯೂ, ಕೇಂದ್ರದಲ್ಲಿಯೂ ಸ್ಥಾಪಿಸಿ ಭಾರತದ ರಕ್ಷಣೆಗೆ ಭಾರತೀಯರು ಎದೆಗೊಟ್ಟು ನಿಲ್ಲುವಂತೆ ಮಾಡುವ ಆದ್ಯ ಕರ್ತವ್ಯವು ಸರಕಾರದ್ದಾಗಿದೆ.

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
S. C. S. No. 109 of 1940
ಪಿ. ಶ್ರೀನಿವಾಸರಾವ್ – ವಾದಿ
ಮತ್ತು
ಚೆರ್ಡಪ್ಪ ಶ್ಯಾನಭಾಗ – ಪ್ರತಿವಾದಿ
ಇವರೊಳಗೆ.

ಉಡ್ಪಿತಾಲ್ಲೂಕು ಫಲ್ಮಾರು ಗ್ರಾಮದಲ್ಲಿರುವ ಪೇಟೆಗಿನ ಭಂಡ್ಸಾಲೆ ಕೃಷ್ಣರಾಯ ಶ್ಯಾನಭಾಗ್ರ ಮಗ ಪ್ರತಿವಾದಿ. ಚೆರ್ಡಪ್ಪ ಶ್ಯಾನಭಾಗ ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:–

ವಾದಿಯು ನಿಮ್ಮ ಮೇಲೆ ಮುಖ್ಯ ಗೇಣಿ ಗೇಣಿ ಬಾಕಿ ಬಡ್ಡಿ ಕೂಡಾ ರೂ. ೧೨-೪-೧ ಮುಂದಿನ ಬಡ್ಡಿ ಕೋರ್ಟು ಖರ್ಚು ಸಹ ಬರಮಾಡಿಕೊಳ್ಳುವ ಬಗ್ಗೆ ಸದ್ರಿ ದಾವೆ ಮಾಡಿದ್ದೇನೆ. ಸದ್ರಿ ದಾವೆಯು ತಾ. ೨೯-೭-೧೯೪೦ಕ್ಕೆ ಸದ್ರಿ ಕೋರ್ಟಿನಲ್ಲಿ ನಿಮ್ಮ ಹಾಜರಾತಿ ಬಗ್ಗೆ ಇಡೋಣಾಗಿಯದೆ. ಇದು ಕಾರಣ ತಾ. ೨೯-೭-೨೯೪೦ನೇ ದಿನ ಬೆಳಿಗ್ಗೆ ೧೧ ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದೆ ಇದ್ದಲ್ಲಿ ಸದ್ರಿ ದಾವೆಯು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ನೀವು ತಿಳಿದಿರತಕ್ಕದ್ದು—

ಕೋರ್ಟು ಹುಕುಂ ಪ್ರಕಾರ.

ಮೊಕ್ಕಾಂ ಕಾರ್ಕಳ ೩೦-೬-೧೯೪೦ } ಯು. ಯಸ್. ಅಧೀಕಾರಿ ವಾದಿಯ ಕಡೆ ವಕೀಲ್

A well-rounded programme of SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit if his labours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your af er years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:–UDIPI, S. India.

ಜಿಲ್ಲಾ ಸಮಾಚಾರ



ಮಂಗಳೂರು

ಪ್ರಚಾರ ಸಮಿತಿಯ ಸಭೆ:— ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ಏರ್ಪಟ್ಟಿರುವ ಪ್ರಚಾರ ಉಪಸಮಿತಿಯ ಸಭೆಯು ಜಿ ಕಲೆಕ್ಟರ್‌ರವರಾದ ಶ್ರೀ. ಎಂ. ಎ ಸುಬ್ರಹ್ಮಣ್ಯನ್ ಯಂ ಎ, ಐ, ಸಿ ಯಸ್ ಇವರ ಅಧ್ಯಕ್ಷತೆಯಲ್ಲಿ ಸೇರಿ ಮಂಗಳೂರಲ್ಲಿಯೂ ಮತ್ತು ತಾಲೂಕುಗಳಲ್ಲಿಯೂ ಅಧಿಕಾರಿಗಳಿಂದಲೂ ಅನಧಿಕಾರಿಗಳಿಂದಲೂ ಕೂಡಿದ ಪ್ರಚಾರ ಸಮಿತಿಗಳನ್ನು ಏರ್ಪಡಿಸಬೇಕೆಂದೂ ಆ ಸಮಿತಿಗಳು ಗ್ರಾಮಗಳಲ್ಲಿ ಪ್ರಚಾರಮಾಡಬೇಕಾಗಿಯೂ ಜನರು ಭೀತಿಗೊಳ್ಳದ ಹಾಗೆ ಕೆಲವು ಮುಖ್ಯ ಸಂಗತಿಗಳನ್ನು ಕರಪತ್ರಗಳ ಮೂಲಕ ಹಂಚಬೇಕಾಗಿಯೂ ನಿರ್ಧಾರವಾಯಿತು

ಮಹಾ ಜನರ ಸಭೆ:— ಪ್ರಚಾರ ಉಪಸಮಿತಿಯ ಆಶ್ರಯದಲ್ಲಿ ಮಂಗಳೂರು ಪುರಜನರ ಮಹಾ ಸಭೆಯೊಂದು ಜುಲೈ ತಾ ೧ನೇ ಸೋಮವಾರ ಸಾಯಂಕಾಲ ೫-೩೦ಕ್ಕೆ ಗವರ್ನಮೆಂಟ್ ಕಾಲೇಜಿನ ಹಾಲಿನಲ್ಲಿ ಜರಗಿತು. ಜಿಲ್ಲಾ ಕಲೆಕ್ಟರರಾದ ಶ್ರೀ. ಯಂ ಎ. ಸುಬ್ರಹ್ಮಣ್ಯನ್ ಯಂ ಎ ಐ ಸಿ ಯಸ್ ಇವರು ಅಧ್ಯಕ್ಷತೆಯನ್ನು ವಹಿಸಿದರು ಕನ್ನಡ, ಇಂಗ್ಲಿಷ್, ಕೊಂಕಣಿ ಭಾಷೆಗಳಲ್ಲಿ ಭಾಷಣಗಳಾದುವು

ದ. ಕ ಜಿಲ್ಲಾ ಕೊಂಗ್ರೆಸ್ ಕಮಿಟಿ ಮಹಾಸಭೆ

ಇದೇ ತಾ ೨೩-೬-೪೦ರಂದು ದ ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಮಹಾಸಭೆಯು ಶ್ರೀ. ಯು ಶ್ರೀನಿವಾಸ ಮಲ್ಯ, ಅವರ ಅಧ್ಯಕ್ಷತೆಯಲ್ಲಿ ಜರಗಿತು

ಜಿಲ್ಲೆಯ ೧೪ ಸರ್ಕಲುಗಳಲ್ಲಿ ಕಮಿಟಿ ಹಾಗೂ ಸತ್ಯಾಗ್ರಹ ಸಮಿತಿಗಳನ್ನು ಸ್ಥಾಪಿಸುವರೆ ನಿರ್ಣಯಿಸಲಾಯಿತು ಇಷ್ಟರವರೆಗೆ ಜೊತೆಕಾರ್ಯದರ್ಶಿಯಾಗಿದ್ದ ಶ್ರೀಮಾನ್ ಕಾರ್ಕಳ ಪಿ ಜನಾರ್ಧನ ಪ್ರಭು ಅವರ ಸ್ಥಾನಕ್ಕೆ ಶ್ರೀಮಾನ್ ಎಸ್. ಎಸ್ ಹೊಳ್ಳರನ್ನು ಚುನಾಯಿಸಲ್ಪಟ್ಟರು.

ಜಿಲ್ಲಾ ಸ್ವಯಂಸೇವಕದಳ ಹಾಗೂ ಚರಕಾ ಕ್ಲಬ್ಬುಗಳನ್ನು ವ್ಯವಸ್ಥೆಗೊಳಿಸುವ ಅಧಿಕಾರವನ್ನು ವರ್ಕಿಂಗ್ ಕಮಿಟಿಗೆ ಕೊಡಲಾಯಿತು.

ಮುನ್ಸಿಪಲ್ ಹೊಸ ಹೈಯರ್ ಎಲಿಮೆಂಟರಿ ಶಾಲೆ — ಸೆಂಟ್ರಲ್ ವಾರ್ಡಿನ ಮುನ್ಸಿಪಲ್ ಎಲಿಮೆಂಟರಿ ಶಾಲೆಯನ್ನು ಈ ವರ್ಷ ಹಯರ್ ಎಲಿಮೆಂಟರಿಯಾಗಿ ಮಾಡಿ, ಕಳೆದ ಸೋಮವಾರ ಆರನೇ ಕ್ಲಾಸು ತೆರೆದಿರುವರು. ಆರನೇ ಕ್ಲಾಸನ್ನು ಚ್ಯಾರ್‌ಮ್ಯಾನರಾದ ಶ್ರೀವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಿಂದ ತೆರೆಯೋಣಾಯಿತು.

"ದ ಕ. ನಿ ಭಾರತಿಯ ವೈದ್ಯ **ಸಂಘ:—** ದನಿರ್ದಿಷ್ಟ ಮಹಾಸಭೆಯಲ್ಲಿ ಸಂಘವು ವಕೀಲರಿಂದ ವೈದ್ಯರ ಕಷ್ಟ ನಿವಾರಣೆ ಬಗ್ಗೆ ತಯಾರಿಸಿದ ಮನವಿಯನ್ನು ಮಂಜೂರು ಮಾಡಿ ಸರಕಾರಕ್ಕೆ ಕಳುಹಿಸುವಂತೆ ನಿರ್ಣಯಿಸಲಾಯಿತು ಸಂಘದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಒಂದು ಸರ್ಕ್ಯುಲೇಟಿಂಗ್ ಪುಸ್ತಕ ಭಂಡಾರವನ್ನು ಮೆಂಬರರು ಪ್ರತ್ಯೇಕವಾಗಿ ಒದಗಿಸಲೊಪ್ಪಿದ ಸಹಾಯದಿಂದ ಸಂಘದ ಆಫೀಸಿನಲ್ಲಿ ಕೂಡಲೆ ಆರಂಭಿಸುವುದೆಂದು ನಿರ್ಣಯಿಸಲಾಯಿತು ಬರುವ ವರ್ಷಕ್ಕೆ ವೈದ್ಯರುಗಳಾದ ಕೆ ಗೋಪಾಲಾಚಾರ್ಯ, ಯಚ್ ತಿಮ್ಮಪ್ಪ ಪಂಡಿತ್, ಯಂ ಆರ್ ಭಟ್ಟ ಮತ್ತು ಪಿ ವೆಂಕಪ್ಪಯ್ಯ ಇವರುಗಳನ್ನು ಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕೋಶಾಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟಿತು"

ಮುಲ್ಕಿ — ಯೂನಿಯನ್ ಕ್ಲಬ್ಬಿನ ೨೬ನೇ ವರ್ಷ ವರ್ಧಂತ್ಯುತ್ಸವವು ದಿವಂಗತ ಡಾಕ್ಟರ್ ಬೋಳಶ್ಯಾಮರಾಯರ ಜನ್ಮ ದಿನಾಚರಣೆಯೂ ಇದೇ ಕಳೆದ ೧೬-೬-೪೦ನೇ ರವಿವಾರ ಅಪರಾಹ್ನ ಘಂಟೆ ೪-೩೦ಕ್ಕೆ ಕ್ಲಬ್ಬಿನ ಸಭಾಮಂದಿರದಲ್ಲಿ ವಿಶೇಷ ವಿಜೃಂಭಣೆಯಿಂದ ಜರಗಿತು ಡಾ। ಕೆ. ವಿಟ್ಠಲ್ ಸೆಟ್ಟರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು.

ಕಾರ್ಕಳ

ಪ್ರ್ಯಾಸ್ ಕಂಟ್ರೋಲ್ ಕಮಿಟಿ:— ಈ ತಾಲೂಕು ಪ್ರ್ಯಾಸ್‌ಕಂಟ್ರೋಲ್ ಕಮಿಟಿಯ ಒಂದು ಸಭೆಯು ತಾ ೨೮ರ ದಿನ ತಾಲೂಕು ಖಚೇರಿಯಲ್ಲಿ ಜರಗಿತು

ಯುದ್ಧ ಸಮಿತಿಯ ಸಭೆ.— ಕಾರ್ಕಳ ತಾಲೂಕಿನ ಬಗ್ಗೆ ಯುದ್ಧ ಸಹಾಯಕ ಸಮಿತಿಯನ್ನು ಸ್ಥಾಪಿಸುವ ಉದ್ದೇಶದಿಂದ ಒಂದು ಸಭೆಯು ತಾ. ೨೬-೬-೪೦ರ ದಿನ ಸಾಯಂಕಾಲ ಬೋರ್ಡು ಮೈನ ಎಲಿಮೆಂಟರಿ ಶಾಲೆಯಲ್ಲಿ ಕುಂದಾಪುರ ರೆವೆನ್ಯು ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗಿತು

ಉಡುಪಿ

ಉಡುಪಿಗೊಂದು ಸಬ್ ಕೋರ್ಟಿನ ಅವಶ್ಯಕತೆ— ವಕೀಲ ಕೂಟದ ಕೇಳಿಕೆ:— ದ. ಕ. ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ ಟಿ.ಎಸ್ ರಾಮಚಂದ್ರನ್ ಐ ಸಿ ಎಸ್ ಅವರು, ಇದೇ ತಾ ೨೩ನೇ ಆದಿತ್ಯವಾರ ಉಡುಪಿಗೆ ಚಿತ್ತೈಸಿ ಸ್ಥಳೀಯ ಮುನ್ಸಿಫ್ ಕೋರ್ಟಿನಲ್ಲಿ ಮೇಲ್ವಿಚಾರಣೆ ನಡಿಸಿದರು ಈ ಸಂದರ್ಭದಲ್ಲಿ ವಕೀಲ ಕೂಟದವರು ಒಂದು ಬಿನ್ನಹವನ್ನು ಮಾಡಿಕೊಂಡರು.

ಜಿಲ್ಲೆಯಲ್ಲಿ ಎರಡನೆಯದಾದ ಸಬ್ ಕೋರ್ಟಿಗೆ ಉಡುಪಿ ತಾಲೂಕಿನ ೧೧೬ ಗ್ರಾಮಗಳ ಪೈಕಿ ೬೬ ಗ್ರಾಮಗಳು ಮಾತ್ರ ಸೇರಿವೆ. ಇದರಿಂದಾಗಿ ಉಡುಪಿ ಕೋರ್ಟು ರದ್ದಾಗುವ ಆವಗಡ ಕೂಡ ಬಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ತಾಲೂಕಿನ ಎಲ್ಲಾ ಗ್ರಾಮಗಳೂ ಉಡುಪಿ ಕೋರ್ಟಿನ ವ್ಯವಹಾರ ಕ್ಷೇತ್ರಕ್ಕೆನೇ ಮರಳಿ ಸಿಗುವಂತಾಗಲು ತಮ್ಮ ಸಹಾಯವನ್ನು ಕೋರುವುದು ಅಪ್ರಾಸಂಗಿಕವಾಗಲಾರದು ಉಡುಪಿಗೊಂದು ಸಬ್ ಕೋರ್ಟು ಮೊದಲು ಆಗಬೇಕಾಗಿ ನಮ್ಮ ಸಂಘ ಕೂಟದ ಮತ್ತು ಕಕ್ಷಿಗಾರರ ಹಿರಿದಾದ ಬಯಕೆ ಎಂದು ಬಾರ್ ಎಸೋಸಿಯೇಶನಿನ ಅಧ್ಯಕ್ಷರು ಹೇಳಿದರು

ಶ್ರೀ ರಾಮಚಂದ್ರನ್ ಅವರು ಉತ್ತರವೀಯುತ್ತಾ ಆಡಳಿತೆಯ ಕಾರ್ಯಭಾರದಲ್ಲಿ ಕೆಲವು ಬದಲಾವಣೆಗಳು ಆಗದ ವಿನಹ ಪ್ರಕೃತ ಈ ವಿಷಯದಲ್ಲಿ ಏನು ಹೇಳಲೂ ಸಾಧ್ಯವಿಲ್ಲ ವೆಂದರು

ಕುಂದಾಪುರ

ಕುಂದಾಪುರದ ಸಬ್ ಕಲೆಕ್ಟರರಾದ ಶ್ರೀ. ಎಸ್ ಕೆ ಚಟ್ಟೂರ್ ಐ ಸಿ ಎಸ್. ರವರು ಕಳೆದ ತಾ ೨೩ರಲ್ಲಿ ಕುಂದಾಪುರ ಹರಿಜನ ವಿದ್ಯಾರ್ಥಿ ಭವನದ ಉದ್ಘಾಟನೆಯನ್ನು ನೆರವೇರಿಸಿದರು. ಬಾಲಕರು ರಾಷ್ಟ್ರಗೀತೆಯನ್ನು ಹಾಡಿದ ಬಳಿಕ ಜಿಲ್ಲಾ ಹರಿಜನ ಸೇವಕ ಸಂಘದ ಪ್ರಚಾರಕರಾದ ಶ್ರೀ ಎನ್ ಎಸ್ ಕಿಲ್ಲೆಯವರು ಹರಿಜನೋದ್ಧಾರದ ತತ್ವವನ್ನೂ ಅದರ ಇತಿಹಾಸವನ್ನೂ ತಿಳಿಸಿದರು ಅಧ್ಯಕ್ಷರು ತಮ್ಮ ದೀರ್ಘ ಭಾಷಣದಲ್ಲಿ ಹರಿಜನೋದ್ಧಾರದ ಮಹತ್ವವೇನೆಂದೂ, ಮುಂದಿಯ ಕರ್ತವ್ಯವೇನೆಂದೂ ತಿಳಿಸಿದರು. ಪ್ರಕೃತದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಬ್ರಿಟಿಷ್ ಸಾಮ್ರಾಜ್ಯದ ಶಕ್ತಿ ಜರ್ಮನಿಯನ್ನು ಹುಡಿಮಾಡುವುದು ನಿಶ್ಚಯವೆಂದರು. ಸಂಘದ ಉಪಾಧ್ಯಕ್ಷರಾದ ಶ್ರೀ. ಕಣ್ಣನ್ ನಂಬಿಯಾರರು ನಾಲು ಓಲೆ ಕೊಡೆಗಳನ್ನು ಮಕ್ಕಳಿಗೆ ಹಂಚಿದರು. ಶ್ರೀ. ಕೆ ಎಲ್. ಭಂಡಾರಿಯವರು ವಂದನಾರ್ಪಣೆ ನಡೆಸಿದರು.

ಸುಬ್ರಹ್ಮಣ್ಯ

ಸಹಕಾರಿ ಸ್ಟೋರ್ಸಿನ ಆರಂಭ:— ಸುಬ್ರಹ್ಮಣ್ಯ ಆದವ ಸುತ್ತು ಮುತ್ತಲಿನ ಸುಮಾರು ೧೦ ಗ್ರಾಮಗಳ ಪ್ರಯೋಜನಾರ್ಥವಾಗಿ ಸುಬ್ರಹ್ಮಣ್ಯದಲ್ಲಿ ಒಂದು ಸಹಕಾರಿ ಸ್ಟೋರ್ಸನ್ನು ತೆರೆಯುವ ವಿಚಾರದಲ್ಲಿ ಕಳೆದ ಒಂದು ವರೆ ವರ್ಷಗಳಿಂದ ಶ್ರೀ ದೇವಸ್ಥಾನದ ಮೆನೇಜರರು ಹಾಗೂ ಅಧಿಕಾರಿ ವರ್ಗದವರು ಪ್ರಯತ್ನ ತೆಗೆದುಕೊಂಡು ಕಳೆದ ೧೯೩೯ನೇ ಇಸ್ವಿಯ ಜುಲ್ಯಾ ತಿಂಗಳಲ್ಲಿ ಆ ಕಾಲದ ಡಿಪ್ಯುಟಿ ರಿಜಿಸ್ಟ್ರಾರರಾದ ಮಾನ್ಯ ಕೆ ಸರ್ವೋತ್ತಮ ರಾವ್ ಎಂ. ಎ ಇವರ ಶಿಫಾರಸಿನಂತೆ ರಿಜಿಸ್ಟರ್ ಮಾಡಲ್ಪಟ್ಟು ಇದೇ ೧೯೪೦ನೇ ಜೂನ್ ತಿಂಗಳ ತಾ ೨೨ರಲ್ಲು ಸುಬ್ರಹ್ಮಣ್ಯದ ತೇರು ಬೀದಿಯಲ್ಲಿ ಸ್ಟೋರ್ಸ್ ತೆರೆಯಲ್ಪಟ್ಟಿರುತ್ತದೆ ಪ್ರಕೃತ ಇದು ಅತ್ಯಲ್ಪ ಬಂಡುವಾಳದಿಂದ ಪ್ರಾರಂಭವಾಗಿರುವದಾದರೂ ಊರಿನ ಮತ್ತು ಸಮ್ಮಂಧಪಟ್ಟ ಗ್ರಾಮಸ್ಥರ ಪ್ರೋತ್ಸಾಹದಿಂದ ಇನ್ನೂ ಅತಿಶಯವಾಗಿ ಅಭಿವೃದ್ಧಿ ಹೊಂದ ಬಹುದಾಗಿ ನಿರೀಕ್ಷಿಸಲಾಗಿದೆ

NOTICE.

In the Court of District Munsif of Puttur

O P 70/40.

M Manjunath Mallya son of M Narayana Mallya, Mangalore Town — *Petitioner.*

vs

K N Mallya and another *Respondents*

Notice is hereby given to all that the abovenamed petitioner, M Manjunath Mallya, has applied to this court for grant of a Succession certificate to him, under the Indian Succession Act, in respect of the debts and securities of the late M. Narayana Mallya, and anyone, desiring to oppose the said application may do so in the above court on 17—7—40 either in person or by pleader, failing which the application will be finally heard and orders passed. Be it known.

H. P. Bhat,
Pleader for petitioner.

Puttur, S. K. 21—6—40

ಬ್ರಿಟನು ಜರ್ಮನುಗಳಲ್ಲಿ ಧಾಳಿ ಯತ್ನ!

ಜರ್ಮನ್ ವಿಮಾನವು ಕೆಳಗುರುಳಿತು!

ಜಪಾನು ಮುಂದೊತ್ತುತ್ತಿದೆ!

ರಶ್ಯದ ಇನ್ನೆರಡು ತುತ್ತುಗಳು!



ಜರ್ಮನಿಗೂ ದಾಳಿ

ಬ್ರಿಟಿಷ್ ವಿಮಾನಗಳು ಜರ್ಮನಿಯ ಮೇಲೆ ದಾಳಿ ನಡೆಸಲು ಅನೇಕ ಯತ್ನಗಳನ್ನು ಮಾಡುತ್ತಿವೆ. ಉತ್ತರಸಮುದ್ರ, ಸ್ಕಾಂಡಿನೇವಿಯಾ, ಮತ್ತು ಹಾಲೆಂಡಿನ ತೀರಗಳಲ್ಲಿ ಬ್ರಿಟಿಷ್ ವಿಮಾನಗಳು ದಾಳಿ ಮಾಡಿ ಅನೇಕ ನಷ್ಟಗಳನ್ನುಂಟುಮಾಡಿದವು. ಜರ್ಮನಿಯಲ್ಲಿ ಹಾನೋವರಿನವರೆಗೂ ಹಾರಿ ಎಣ್ಣೆಯ ಟ್ಯಾಂಕಿಗಳಿಗೆ ಬೆಂಕಿ ಹತ್ತಿಸಿದವೆಂದು ತಿಳಿದಿದೆ ೪, ೫. ವಿಮಾನಗಳು ಹಿಂತಿರುಗಲಿಲ್ಲ.

ಮಾಲ್ಟಾದ ಮೇಲೆ ಧಾಳಿ

ಮಾಲ್ಟಾದ ಮೇಲೆ ಕಳೆದ ವಾರ ಬಹಳ ಜೋರಾಗಿ ವಿಮಾನ ದಾಳಿ ನಡೆಯಿತು. ಇದರಿಂದ ಒಟ್ಟು ೨೫ ಜನರು ಸತ್ತರು ಅನೇಕರಿಗೆ ಗಾಯವಾಗಿದೆ ೨೦ ಬಾಂಬುಗಳು ಬಿದ್ದವೆ ಕೆಲವು ಸ್ಥಳವು ಹಾನಿಯಾಗಿದೆ ಬ್ರಿಟಿಷ್ ವಿಮಾನಗಳು ವೈರಿವಿಮಾನಗಳನ್ನು ಓಡಿಸಿದವು.

ಹಾಂಕಾಂಗ್ ಬರಿದಾಗಿದೆ

ಹಾಂಕಾಂಗ್‌ನ್ನು ಬಿಟ್ಟು ಹೊರಡಬೇಕೆಂದು ಸರಕಾರದ ಅಪ್ಪಣೆಯಾದುದರಿಂದ ಜನರು ಅಲ್ಲಿಂದ ಹೊರಡುತ್ತಿದ್ದಾರೆ. ಬ್ರಿಟಿಷ್ ರಾಯಭಾರಿಯ ಕಾರ್ಯಾಲಯದ ಮೇಲೆ ಒಂದು ಬಾಂಬು ಬಿತ್ತು ಅಲ್ಲಿನ ಒಬ್ಬ ಚೀನೀ ಉದ್ಯೋಗಿಗೆ ಮಾತ್ರ ಗಾಯವಾಗಿದೆ ಚುಂಕಿಂಗಗೂ ಜಪಾನೀಯರ ವಿಮಾನ ದಾಳಿ ನಡೆದಿದೆ. ಹಲವು ಆಫೀಸುಗಳು ಬಾಂಬುಗಳಿಂದ ಭಸ್ಮವಾಗಿವೆ.

ಜಪಾನಿನ ಬುದ್ಧಿ

ಜಪಾನು ಪೂರ್ವ ಏಶಿಯಾ ಮತ್ತು ದಕ್ಷಿಣ ಸಮುದ್ರಗಳ ಕಡೆಗೆ ಸಾಮ್ರಾಜ್ಯ ವಿಸ್ತರಣ ಮಾಡುವ ಅಭಿಲಾಷೆಯುಳ್ಳದ್ದಾಗಿದೆಯೆಂದೂ, ಹಾಂಕಾಂಗ್ ಡಚ್ ಇಂಡಿಯಾಗಳನ್ನು ಸ್ವಾಧೀನಪಡಿಸಲು ನೋಡುತ್ತಿದೆಯೆಂದೂ ತಿಳಿಯಲಾಗಿದೆ.

ಬ್ರಿಟನಿನೊಡನೆ ಜಪಾನಿನ ಕೇಳಿಕೆ

ಬರ್ಮಾ — ಯೂನಾನ್ ಮಾರ್ಗದ ಮೂಲಕ ಚೀನಕ್ಕೆ ಯುದ್ಧ ಸಾಮಗ್ರಿಗಳು ಹೋಗದಂತೆ ಬ್ರಿಟನು ಆ ಮಾರ್ಗವನ್ನು ಮುಚ್ಚಬೇಕೆಂದು ಬ್ರಿಟನಿನೊಡನೆ ಜಪಾನು ಕೇಳಿದೆ.

ಜಪಾನಿನ ಸೈನ್ಯವು ಮುಂದೊತ್ತುತ್ತಿದೆ

ಇಂಡೋ ಚೈನಾ ಗಡಿಯಲ್ಲಿ! ಮಲೆಯದಲ್ಲಿ ಎಚ್ಚರ!

ಜಪಾನ್ ಇತ್ತಿದು ಮುಂದುವರಿದು, ಇಂಡೋ ಚೈನಾ ಗಡಿಗೆ ಬಂದು ತನ್ನ ಸೈನ್ಯವನ್ನು ನಿಲ್ಲಿಸಿರುವದಾಗಿ ವಾರ್ತೆ!

ಪೂರ್ವದಲ್ಲಿ ಹೀಗೆ ಜಪಾನು ಮುಂದೊತ್ತುತ್ತಿರುವುದನ್ನು ನೋಡಿ ಸಿಂಗಾಪುರದಲ್ಲಿ ರಕ್ಷಣೆಯನ್ನು ಭದ್ರವಾಗಿ ಮಾಡಲು ಬ್ರಿಟಿಷ್ ಸರಕಾರವು ತೀವ್ರ ಮನಸ್ಸುಮಾಡಿದೆಯೆಂದು ತಿಳಿದಿದೆ.

ದಲಾಡಿಯವರ ಬಂಧನ

ಫ್ರಾನ್ಸಿನ ಮೊದಲಿನ ಮುಖ್ಯ ಮಂತ್ರಿ ದಲಾಡಿಯವರನ್ನು ಬಂಧಿಸಲಾಗಿದೆಯೆಂದು ತಿಳಿದುಬರುತ್ತದೆ

ರುಮೇನಿಯವನ್ನು ಹಂಗೇರಿ ಬಲ್ಗೇರಿಯಗಳು ಒತ್ತಾಯಪಡಿಸುವವೆ—?

ಈ ಕುರಿತು ಒಂದು ವಾರ್ತೆ ಹರಡಿದೆ ಬಲ್ಗೇರಿಯಕ್ಕೆ ಸೇರಿದ ದಕ್ಷಿಣ ಡೊಬ್ರೂಜಾವು ಮಹಾಯುದ್ಧದ ನಂತರ ರುಮೇನಿಯಕ್ಕೆ ಸೇರಿದೆ. ಅದನ್ನು ಅದು ತಿರುಗಿ ಕೇಳುವುದೆಂದೂ, ಹಂಗೇರಿಯು ಟ್ರಾನ್ಸಿಲ್ವೇನಿಯವನ್ನು ಕೇಳುವುದೆಂದೂ ವದಂತಿ ಅಂತೂ ರುಮೇನಿಯವು ಹರಿಹಂಚಾಗುವುದೋ ಎಂದು ಶಂಕೆ.

ಸೀರಿಯಾ ಮತ್ತು ಲೆಬನನ್ ಆಕ್ರಮಣ ಕೂಡದು!

ಬ್ರಿಟಿಷ್ ಸರಕಾರದ ಎಚ್ಚರಿಕೆ

ಸೀರಿಯಾ ಮತ್ತು ಲೇಬನಿನ್‌ಗಳಲ್ಲಿ ಯಾವುದೇ ಶತ್ರುವಿನ ಆಕ್ರಮಣವಾದರೂ ಆಗ ಕೂಡದೆಂದು, ಅವುಗಳ ಬ್ರಿಟಿಷ್ ಸರಕಾರವು ಈ ಪ್ರತಿಜ್ಞೆ ತೊಟ್ಟಿದೆಯೆಂದೂ ಬ್ರಿಟಿಷ್ ಸರಕಾರದ ಪ್ರಕಟಣೆಯಾಗಿದೆ.

ಫ್ರೆಂಚರ ಒಪ್ಪಂದಗಳು

ಫ್ರಾನ್ಸಿನ ಪೀಟನ್ ಸರಕಾರವು ಹಿಟ್ಲರನ ೨೪ ಕರಾರುಗಳಿಗೆ ಸಹಿಹಾಕಿ ಶರಣಾಯಿತು. ಮತ್ತೆ ಫ್ರಾನ್ಸು ಇಟಲಿಯೊಡನೆಯೂ ಒಪ್ಪಂದವನ್ನು ಮಾಡಿಕೊಂಡಿತು ತಾ. ೨೪–೬–೪೦ ರಾತ್ರಿ ೧೧–೪೦ಕ್ಕೆ ಫ್ರಾನ್ಸು–ಜರ್ಮನ್ ಯುದ್ಧವು ಕೊನೆಗೊಂಡಿತು

ಪೀಟಿನ್ ಸರಕಾರಕ್ಕೆ ವಿರೋಧ

ಪೀಟನ್ ಸರಕಾರವು ಹೀಗೆ ನಾಚಿಗೆಗೇಡಿಯಾಗಿ ಜರ್ಮನ್, ಇಟಲಿಗಳೊಡನೆ ಒಪ್ಪಂದ ಮಾಡಿಕೊಂಡಿರುವ ವಿಷಯವಾಗಿ ಫ್ರೆಂಚರೇ ಅಸಮ್ಮತಿಯಿಂದಿದ್ದಾರೆ. ಜನರಲ್ ಡಿಗೌಲೆ ಎಂಬವರು ಇಂಗ್ಲೆಂಡಿಗೆ ಬಂದಿದ್ದು ಅಲ್ಲಿ ಫ್ರಾನ್ಸು ಪುನರುಜ್ಜೀವನ ಕಮಿಟಿಯೊಂದನ್ನು ಸ್ಥಾಪಿಸಿ ಜರ್ಮನಿಯೊಡನೆ ಯುದ್ಧ ಮಾಡಲು ಅಣಿ ಮಾಡುತ್ತಿದ್ದಾರೆ. ಬ್ರಿಟಿಷ್ ಸರಕಾರವೂ ಪೀಟಿನ್ ಸರಕಾರದ ಒಪ್ಪಂದದ ಕುರಿತು ತನ್ನ ತೀವ್ರ ವಿರೋಧವನ್ನು ತೋರಿಸಿದೆ; ಮಾತ್ರವಲ್ಲದೆ ಇಂಗ್ಲೆಂಡಿನಲ್ಲಿ ಫ್ರಾನ್ಸು ಪುನರುಜ್ಜೀವನ ಕಮಿಟಿಗೆ ತನ್ನ ಸಹಾಯವನ್ನು ಕೊಡುವುದಾಗಿ ಪ್ರಕಟಿಸಿದೆ

ಒಪ್ಪಂದದ ಫಲಿತಾಂಶ

ಪೀಟಿನ್ ಸರಕಾರವು ಹೀಗೆ ಜರ್ಮನ್ ಇಟಲಿಗಳೊಡನೆ ಒಪ್ಪಂದ ಮಾಡಿಕೊಂಡುದರ ಪರಿಣಾಮವಾಗಿ ಉತ್ತರ ಫ್ರಾನ್ಸು ಜರ್ಮನಿಗೆ ಸೇರಿದೆ ಇಟಲಿಯು ಇದುವರೆಗೆ ಆಕ್ರಮಿಸಿದ ಸ್ಥಳವೆಲ್ಲಾ ಸೈನ್ಯ ರಹಿತವಾಗಿ ಕೆಲವು ಮುಖ್ಯ ಸ್ಥಳಗಳು ಇಟಲಿಯ ವಶವಾಗಿದೆ ಫ್ರೆಂಚ ವಸಾಹತ್ತುಗಳು ನಿಶ್ಶಸ್ತ್ರವಾಗಬೇಕೆಂದು ಇಟಲಿಯು ವಿಧಿಸಿದೆ ಆದರೆ ಫ್ರೆಂಚ ವಸಾಹತ್ತುಗಳು ಕೆಲವು ಇದಕ್ಕೆ ಅಸಮ್ಮತಿ ಸೂಚಿಸಿವೆ ಅಂತೂ ಇಷ್ಟೆಲ್ಲಾ ತ್ಯಾಗಮಾಡಿ ಫ್ರಾನ್ಸು ಯುದ್ಧದಿಂದ ತಪ್ಪಿಸಿಕೊಂಡಿತು!

ಇಂಗ್ಲೆಂಡಿನ ಮೇಲೆ ಶತ್ರು ವಿಮಾನಗಳು

ಇಂಗ್ಲೆಂಡಿನ ಮೇಲೆ ಅನೇಕಸಲ ಶತ್ರು ವಿಮಾನಗಳು ಹಾರಾಡಿ, ಅಲ್ಲಿ ಇಲ್ಲಿ ಬಾಂಬುಗಳನ್ನೆಸೆಯಲು ಯತ್ನಿಸಿದವು ಆದರೆ ಬ್ರಿಟಿಷ ವೈಮಾನಿಕರು ಅತ್ಯಂತ ಪರಾಕ್ರಮದಿಂದ ಶತ್ರು ವಿಮಾನಗಳನ್ನು ಓಡಿಸುತ್ತಾ ಇಂಗ್ಲೆಂಡನ್ನು ಭದ್ರವಾಗಿ ಕಾಯುತ್ತಿದ್ದಾರೆ

ರಶ್ಯದ ಇನ್ನೆರಡು ತುತ್ತುಗಳು

ಬೆಸರೇಬಿಯಾ ಮತ್ತು ಬುಕೊವಿನಾ

ರುಮೇನಿಯದ ಪಶ್ಚಿಮಕ್ಕಿರುವ ಬೆಸರೇಬಿಯಾ ಉತ್ತರಕ್ಕಿರುವ ಬುಕೊವಿನ ಪ್ರಾಂತಗಳನ್ನು ತನಗೆ ಕೂಡಲೇ ಬಿಟ್ಟುಕೊಡಬೇಕೆಂದು ರಶ್ಯವು ರುಮೇನಿಯಕ್ಕೆ ಎಚ್ಚರಕೊಟ್ಟಿತು ರುಮೇನಿಯವು ಮರು ಮಾತಾಡದೆ ಅವುಗಳನ್ನು ರಶ್ಯಕ್ಕೆ ಕೊಟ್ಟೇ ಬಿಟ್ಟಿತು!

ಆ ಪ್ರಾಂತಗಳಲ್ಲಿ ರಶ್ಯದ ಸೈನ್ಯಗಳು ಬಂದು ನಿಂತಿವೆ. ಅಲ್ಲಿಂದ ರುಮೇನಿಯದ ಸೈನ್ಯವು ಹಿಂದೆ ಹೋಗಿದೆ ಈ ರಶ್ಯದ ಕಾರ್ಯದಲ್ಲಿ ಇಟಲಿಯು ಆಕ್ಷೇಪವೆತ್ತಲಿಲ್ಲ.

ರುಮೇನಿಯಾ ಸರಕಾರವು ರಾಜಿನಾಮೆಕೊಟ್ಟು ಅಲ್ಲಿ ಹೊಸ ಸರಕಾರವು ಸ್ಥಾಪಿಸಲ್ಪಟ್ಟಿದೆ.

ಸುಭಾಸ ಬೋಸರನ್ನು ಬಂಧಿಸಿದರು!

ಅಖಿಲಭಾರತ ಕಾಂಗ್ರೆಸಿಗೆ ಎರಡು ಸಲ ಅಧ್ಯಕ್ಷರಾಗಿದ್ದ ಹಾಗೂ ಅಖಿಲ ಭಾರತ ಫಾರ್ವರ್ಡ ಬ್ಲಾಕಿನ ಸ್ಥಾಪಕರಾಗಿರುವ ಶ್ರೀ ಸುಭಾಸ ಚಂದ್ರಬೋಸರನ್ನು ತಾ ೨ ರಂದು ಕಲ್ಕತ್ತೆಯ ಅವರ ಮನೆಯಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಲಾಯಿತು.

ತಾ ೨ರಂದು ಅಪರಾಹ್ನ ೨ ೩೦ಕ್ಕೆ ಡಿಪ್ಯೂಟಿ ಪೋಲೀಸ್ ಕಮಿಶನರು ಬಂದು ಅವರನ್ನು ಬಂಧಿಸಿರುವುದಾಗಿ ತಿಳಿಸಿದರು ಬೋಸರನ್ನು ಆಲಿಪುರ ಸೆರೆಮನೆಗೆ ಕೊಂಡೊಯ್ದಿರುವರು

ವೈಸರಾಯರ ಕೌನ್ಸಿಲನ್ನು ಹೆಚ್ಚಿಸುವುದರಿಂದ ತೃಪ್ತಿಯಿಲ್ಲ

ರಾಜಾಜಿಯವರ ಹೇಳಿಕೆ

ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಭಾರತದ ಮುಖಂಡರನ್ನು ಸೇರಿಸಿಕೊಳ್ಳುವುದರಿಂದ ಯಾರೂ ತೃಪ್ತಿ ಹೊಂದುವ ಹಾಗಿಲ್ಲವೆಂದು ರಾಜಾಜಿಯವರು ಪತ್ರಿಕಾ ಪ್ರತಿನಿಧಿಯೊಡನೆ ಹೇಳಿದರು.

ಕೆಲಸಗಾರರ ಸಂಬಳದಿಂದ ಕಡಿತ

ಯುದ್ಧಯೋಜನೆಗೆ ಸಹಾಯ

ಯುದ್ಧ ಕಾರ್ಯಕ್ಕೆ ಸಹಾಯಮಾಡುವುದಕ್ಕಾಗಿ ಕೆಲಸಗಾರರ ಸಂಬಳದಿಂದ ಕಡಿತ ಮಾಡಬೇಕಾಗಿ ಸರಕಾರವು ಒಂದು ಹೊಸ ಕಾನೂನನ್ನು ಜಾರಿಗೆ ತಂದಿದೆ

ಈ ವಾರದ ಭಾರತದ ರಾಜಕೀಯದಲ್ಲಿ ವೈಸರಾಯರು ಜಿನ್ನಾ–ಗಾಂಧಿಜಿಯವರನ್ನು ಮಾತನಾಡಲು ಆಮಂತ್ರಿಸಿದ ವಿಷಯವು ಅತ್ಯಂತ ಮಹತ್ವದ್ದಾಗಿದೆ ಹಿಂದೂ ಮಹಾಸಭೆಯ ಅಧ್ಯಕ್ಷ ವೀರ ಸವರ್ಕಾರರಿಗೂ ಅವರ ಆಮಂತ್ರಣ ಹೋಗಿದೆ ಇಂದಿನ ಈ ಪರಿಸ್ಥಿತಿಯಲ್ಲಿ ಮುಖಂಡರನ್ನು ಆಮಂತ್ರಿಸಿದ್ದು ಅತ್ಯಂತ ಮಹತ್ವದ ವಿಚಾರವು.

ಜಿನ್ನ ವೈಸರಾಯ್ ಮಾತುಕತೆ

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನರು ತಾ ೩ರಂದು ಮಧ್ಯಾಹ್ನ ೩–೩೦ಕ್ಕೆ ವೈಸರಾಯರಿಗೆ ಭೇಟಿಯಿತ್ತರು ಸುಮಾರು ೨ ತಾಸುಗಳ ತನಕ ಅವರ ಮಾತುಕತೆ ನಡೆಯಿತು ಸದ್ಯದ ಭಾರತದ ರಾಜಕೀಯದ ಕುರಿತು ಮಾತುಕತೆ ಮಾಡಿದರು ಆದರೆ ಅದರ ವಿವರದ ಕುರಿತು ಜಿನ್ನಾಸಾಹೇಬರಾಗಲಿ, ವೈಸರಾಯರಾಗಲಿ ಏನೂ ಪ್ರಕಟಿಸಲಿಲ್ಲ.

ಗಾಂಧಿ ವೈಸರಾಯ ಭೇಟಿ

ಆ ಮೇಲೆ ತಾ ೪ರಂದು ಮಧ್ಯಾಹ್ನ ಮೂರು ತಾಸಿಗೆ ವೈಸರಾಯರನ್ನು ಗಾಂಧೀಜಿಯವರು ಭೇಟಿಯಾದರು ಸುಮಾರು ಮೂರು ತಾಸುಗಳ ತನಕ ಅವರೊಳಗೆ ಮಾತುಕತೆ ನಡೆಯಿತು ಆದರೆ ಅದರ ವಿವರವು ಏನೆಂದು ತಿಳಿದಿಲ್ಲ

ಆದರೆ, ಈ ಮಾತುಕತೆಯಲ್ಲಿ ಹೆಚ್ಚಿನ ಆಶಾದಾಯಕವಾದ ವಿಷಯಗಳಿಲ್ಲವೆಂದು ಮಹಾತ್ಮಾ ಗಾಂಧಿಜಿಯವರ ವ್ಯವಹಾರದಿಂದ ತಿಳಿದು ಬರುತ್ತಿದೆ ಯೆಂಬುದಾಗಿ ಅಲ್ಲಿನ ಪತ್ರಿಕೋದ್ಯಮಿಗಳ ಹೇಳಿಕೆ ಅಂತು ಕೂಡಲೇ ಜರಗುವ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಗಾಂಧಿಜಿಯವರು ವೈಸರಾಯರು ಸೂಚಿಸಿದ ವಿಷಯವನ್ನು ಮಂಡಿಸುವರೆಂದೂ, ಅದನ್ನು ಕಾಂಗ್ರೆಸು ಒಪ್ಪುವುದೋ ಇಲ್ಲವೋ ಎಂಬ ವಿಚಾರದಲ್ಲಿ ವೈಸರಾಯರಿಗೆ ತಿಳಿಸುವರೆಂದೂ ವಿಚಾರಿಸಲಾಗಿದೆ

ಗಾಂಧಿ ವೈಸರಾಯರು ಭೇಟಿಯಾದುದು ಯುದ್ಧವಾರಂಭವಾದ ಮೇಲೆ ಇದು ಆರನೇಯ ಸಲವಾಗಿದೆ ವೈಸರಾಯರು ಸಾಮಂತ ಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ಹಿಂದೆ ಹೇಳಿದ ಅಭಿಪ್ರಾಯಕ್ಕಿಂತ ಹೆಚ್ಚಿನದನ್ನು ಹೇಳಿರಲಾರರೆಂದೂ, ಗಾಂಧಿಜಿಯವರು ರಾಷ್ಟ್ರಘಟನಾ ಸಮಿತಿಯ ಹೇಳಿಕೆಯನ್ನು ವೈಸರಾಯರ ಮುಂದಿಟ್ಟಿರ ಬಹುದೆಂದೂ ತಿಳಿದಿದೆ.

ರಾಜಾಜಿಯವರ ಎಚ್ಚರ

ಮದ್ರಾಸಿನ ಒಂದು ಸಾರ್ವಜನಿಕ ಸಭೆಯಲ್ಲಿ (ಶ್ರೀ ಚಕ್ರವರ್ತಿ) ರಾಜಗೋಪಾಲಾಚಾರ್ಯರು ಒಂದು ಭಾಷಣ ಮಾಡುತ್ತಾ, ಸರಕಾರವು ರಾಷ್ಟ್ರೀಯವಾಗದ ವಿನಹ, ಭಾರತವು ಬ್ರಿಟನಿಗೆ ಸಹಕಾರ ಕೊಡುವುದು ಸಾಧ್ಯವಾಗಲಾರದೆಂದು ಒಂದು ಭಾವಾತ್ತ ಭಾಷಣವಮಾಡಿ, ಇಂದಿನ ಈ ವಿಷಮ ಕಾಲದಲ್ಲಿ ಭಾರತದ ಸಹಕಾರವನ್ನು ಅಪೇಕ್ಷಿಸುವ ಬ್ರಿಟನಿಗೆ ಒಳ್ಳೆಯ ಎಚ್ಚರಿಕೆಯೊಂದನ್ನು ಕೊಟ್ಟಿರುವರು.

ಯುದ್ಧ ಸಾಮಾಗ್ರಿಗಳನ್ನು ಹೆಚ್ಚಿಸುವುದು

ಹಿಂದುಸ್ಥಾನದಲ್ಲಿ ಯುದ್ಧ ಸಾಮಾಗ್ರಿಗಳನ್ನು ಹೆಚ್ಚಿಸಬೇಕಾಗಿ ಸರಕಾರವು ಯತ್ನಿಸುತ್ತಿದೆ. ಇ. ಯಂ. ಜೆಂಕಿನ್ಸರು ಡೈರೆಕ್ಟರಾಗಿ ನಿಯುಕ್ತರಾಗಿರುವರು

ಮುಂ
ಪಾರಾಗ
ದೇಶಾಯಿ
ಗೋಲಾ
ಒಫ್
ಸಲಾಗಿದೆ
ಹಿಂದಿ
ಟಿಯ ಅ
ವರನ್ನು
ಲಾಗಿದೆ.
ಯು
ಗಳನ್ನು
ಮೂವರ
ಪಂಜ
ಸಿಸ್ಸರನ್ನು
ಭಾರ
ಡಿಫೆನ್ಸ್
ಯಾಗಿದೆ
ಯಾಗಿತ
ರು ಅನು
ಪ
ಕಾಪ
ಎಚ್
ಪಟಗ
ಯಾಗಿದೆ
ಕಾವಲು
ಇಬ್ಬರು
ಅಧಿಕಾರ
ಮುಗಿದರು
ಇಬ್ಬರು
ದಿಂದ ಹ
ಹೇಳಿಕ
ತಿಳಿದಿದೆ
ಭಾ
ಭಾರ
ನುಕೂಲ
ತೆಗೆಯಲ್ಲ
ಹುದು,
ಅಧಿಕಾರ
ಲ್ಲಿರುವ
ಯದ ಸೈ
ಕಾನೂನಿ
ಮೆಂಟನ್ನು
ಭಾರ
ಭಾರ
ಮತ್ತು ವಿ
ವಾಗಿ ಸೇ



ಗಾಂಧಿ-ಜಿನ್ನಾ-ವೈಸರಾಯರ ಭೇಟಿ!

ಸುಭಾಸ ಬೋಸರ ಬಂಧನ!

ವರ್ಕಿಂಗ್ ಕಮಿಟಿಯ ಸಭೆ! ರಾಜಾಜಿಯವರ ಸೂಚನೆ!

ಬಂಧನಗಳು

ಮುಂಬಾಯಿಯಲ್ಲಿ ನನ್ನುಭಾಯಿ, ಪಾರಾಗಜಿ, ದೇಸಾಯಿ, ಹರಿಬಾಯಿ, ದೇಶಾಯಿ ಮತ್ತು ಉತ್ತಮ ಚಂದ ಗೋಲೀವಾಲಾ ಎಂಬವರನ್ನು ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ಬಂಧಿಸಲಾಗಿದೆ

ಹಿಂದಿನ ಬಂಗಾಲ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ದೇವರನ್ನು ಮೇಲಿನ ಕಾನೂನಿನಂತೆ ಬಂಧಿಸಲಾಗಿದೆ

'ಯುದ್ಧ ವಿರೋಧ ಚಟುವಟಿಕೆಗಳನ್ನು ನಡೆಸಿದಕ್ಕಾಗಿ ಲಖನೌದಲ್ಲಿ ಮೂವರನ್ನು ಬಂಧಿಸಲಾಗಿದೆ

ಪಂಜಾಬಿನಲ್ಲಿ ಒಹಳ ಮಂದಿ ಕಮ್ಯೂನಿಸ್ಟರನ್ನು ಸೆರೆಹಿಡಿಯಲಾಗಿದೆ

ಧಾರವಾಡ ಶ್ರೀ ಬಸರೂರು ಇವರಿಗೆ ಡಿಫೆನ್ಸ್ ಕಾನೂನಿನಂತೆ ೧೮ ತಿಂಗಳ ಶಿಕ್ಷೆಯಾಗಿದೆ ಹಿಂದೆ ೨ ವರ್ಷಗಳ ಶಿಕ್ಷೆಯಾಗಿತ್ತು ಇವೆರಡನ್ನೂ ಒಟ್ಟಿಗೆ ಅವರು ಅನುಭವಿಸಬೇಕು.

ಪರಾನ್ ಹಡಗು ಕಾಣೆ

ಕಾವಲು ಕೆಲಸವನ್ನು ನಡೆಸುತ್ತಿದ್ದ ಎಚ್ ಎಂ ಎಸ್ ಪೆರಾನ್ ಎಂಬ ಹಡಗು ಬೊಂಬಾಯಿಯ ಬಳಿ ಕಾಣೆಯಾಗಿದೆ ಇದು ಬೊಂಬಾಯಿಯ ಬಳಿ ಕಾವಲು ರಕ್ಷಣೆ ನಡೆಸುತ್ತಿತ್ತು ಇದರಲ್ಲಿ ಇಬ್ಬರು ಆಫೀಸರರೂ ಒಬ್ಬ ಸಾಮಾನ್ಯ ಅಧಿಕಾರಿಯೂ, ಇಬ್ಬರು ಕೆಲಸಗಾರರೂ ಇದ್ದರು ಈ ಹಡಗದಿಂದ ಬದುಕಿ ಇಬ್ಬರು ಬಂದಿರುವರು ಆಸ್ಫೋಟನದಿಂದ ಹಡಗು ಮುಳುಗಿದುದಾಗಿ ಅವರ ಹೇಳಿಕೆ ಕೋಟಗಳ ಉಪದ್ರವವೆಂದು ತಿಳಿದಿದೆ

ಭಾರತದ ವಿಶೇಷ ಶಾಸನ

ಭಾರತಕ್ಕೂ ಇಂಗ್ಲೆಂಡಿಗೂ ಮಾರಗಾನುಕೂಲ ಮತ್ತು ತಂತಿಗಳ ಸಂಬಂಧ ಕಡಿದು ಹೋಗಿರುವ ಸಂದರ್ಭ ಒದಗಬಹುದು, ಆಗ ವೈಸರಾಯರಿಗೆ ವಿಶೇಷ ಅಧಿಕಾರ ಕೊಡುವಂತೆಯೂ, ಭಾರತದಲ್ಲಿರುವ ಯೂರೋಪಿಯನರಿಗೆ ಒತ್ತಾಯದ ಸೈನಿಕವೃತ್ತಿಯಾಗುವಂತೆಯೂ ಈ ಕಾನೂನಿನ ಅಂಶವಾಗಿದೆ. ಇದು ಪಾರ್ಲಿಮೆಂಟಿನಲ್ಲಿಯೂ ಮಂಜೂರಾಯಿತು.

ಭಾರತೀಯ ಒತ್ತಾಯ ಸೈನಿಕ ವೃತ್ತಿ

ಭಾರತೀಯ ಪ್ರಜೆಗಳನ್ನು ಸಿವಿಲ್ ಮತ್ತು ಮಿಲಿಟರಿ ಸೈನ್ಯ ವೃತ್ತಿಗೆ ಒತ್ತಾಯವಾಗಿ ಸೇರಿಸುವ ವಿಚಾರ ಭಾರತ ಸರಕಾರವು ಅಧಿಕಾರವುಳ್ಳದ್ದಾಗಿದೆ. ಈ ವಿಷಯ ಸರಕಾರವು ಮುಂದೆ ಪ್ರಕಟಣೆ ಹೊರಡಿಸುವುದಾಗಿ ತಿಳಿದಿದೆ

ಬೊಂಬಾಯಿಯಲ್ಲಿ ವಿಮಾನ ಧಾಳಿಯ ಎಚ್ಚರಿಕೆ

ವಿಮಾನ ಧಾಳಿಯ ವಿಷಯದಲ್ಲಿ ಜನರು ಹೇಗೆ ಎಚ್ಚರಿರಬೇಕೆಂಬ ಕುರಿತು ಮುಂಬಾಯಿಯಲ್ಲಿ ಅದರ ಪರೀಕ್ಷಾ ಪ್ರಯೋಗವನ್ನು ಕೊಡಲಾಯಿತು

ಬೊಂಬಾಯಿ ಬಂದರವು ಮುಚ್ಚಲಾಗಿದೆ

ತಾತ್ಕಾಲಿಕವಾಗಿ ಬೊಂಬಯಿ ಬಂದರವು ಎಲ್ಲಾ ತರದ ಹಡಗುಗಳಿಗೂ ಮುಚ್ಚಲಾಗಿದೆ ಇತರ ಎಲ್ಲಾ ಹಿಂದೂಸ್ಥಾನದ ಬಂದರಗಳೂ ವ್ಯವಹಾರಕ್ಕೆ ತೆರೆದಿವೆ

೪ ಸಾವಿರ ಫ್ಯಾಕ್ಟರಿ ಕೆಲಸಗಾರರಿಗೆ ಕೆಡ್ಡಾಯ

ಯುದ್ಧಕಾಲದಲ್ಲಿ ಬೇಕಾದ ಯುದ್ಧ ಸಾಮಾಗ್ರಿಗಳನ್ನು ತಯಾರಿಸುವದೆ ಫ್ಯಾಕ್ಟರಿಗಳಲ್ಲಿ ಕೆಲಸಮಾಡುವ ೪ ಸಾವಿರ ಜನರು ಸರಕಾರಕ್ಕೆ ಬೇಕಾಗಿದ್ದಾರೆ ಅಂತಹವರನ್ನು ಕಡ್ಡಾಯವಾಗಿ ಸೇರಿಸಿಕೊಳ್ಳಲಾಗುವುದು ಅವರನ್ನು ಯುದ್ಧ ಮುಗಿದ ಮೇಲೆ ಫ್ಯಾಕ್ಟರಿಗಳಲ್ಲಿಯೇ ಸೇರಿಸಿಕೊಳ್ಳಲಾಗುವುದು ಎಂದು ಸರಕಾರವು ಪ್ರಕಟಿಸಿದೆ

ಕಮ್ಯೂನಿಸ್ಟರ ಬಂಧನ

ಪಂಜಾಬಿನಲ್ಲಿ ಕ್ರಾಂತಿ ಚಳವಳವನ್ನು ನಡೆಸುತ್ತಿರ ವರೆಂಬ ಆಲೋಚನೆ ಮೇಲೆ ೨೨ ಮಂದಿಯ ಬಂಧನವಾಗಿದೆ ಇವರಲ್ಲಿ ನಾಲ್ವರ ಪಂಜಾಬು ಶಾಸನ ಸಭೆಯ ಸದಸ್ಯರಾಗಿರುವರು ಕಾಂಗ್ರೆಸ್ ಪಕ್ಷದವರು ಇವರ ಹೆಸರು, ಕಾಬೂಲ್ ಸಿಂಗ್ ಹರಿಸಿಂಗ್, ಸರ್ದಾರ್ ಸೋಹನ್‌ಸಿಂಗ್, ಜೋಶ್, ಸರ್ದಾರ್ ಹರ್‌ಜಬ್ ಸಿಂಗ್ ಮತ್ತು ಬಾಬಾರೂರ್ ಸಿಂಗ್ ಇವರು ಸರಕಾರವನ್ನು ಕಿತ್ತು ಹಾಕುವ ಚಳವಳ ಹೂಡುತ್ತಿರುವರೆಂದು ಆಪಾದನೆ ಇವರಲ್ಲಿ ಹಲವರು ವಿದೇಶಗಳಲ್ಲಿ ಕಮ್ಯೂನಿಸ್ಟ್ ಶಿಕ್ಷಣವನ್ನು ಪಡೆದು ಬಂದವರೆಂದೂ ಹೇಳಲಾಗಿದೆ

ಪೂನಾದಲ್ಲಿ ಕಾಂಗ್ರೆಸ್ ಕಮಿಟಿ ಸಭೆ

ಅಖಿಲ ಭಾರತ ಕಾಂಗ್ರೆಸು ಕಮಿಟಿ ಬರುವ ಸಭೆಯು ಪೂನಾದಲ್ಲಿ ಜರಗುವ ಎಲ್ಲಾ ತರದ ಸಿದ್ಧತೆಗಳೂ ಆಗುತ್ತಿವೆ.

ಕರಾಚಿ-ಕಲ್ಕತ್ತಾ ವಿಮಾನ

ಈ ವಿಮಾನ ಸರ್ವಿಸು ಹೊಸತಾಗಿ ಆರಂಭವಾಗುವುದು. ಕರಾಚಿ, ಜೋಧಪುರ, ಹೈದರಾಬಾದ್, ಮುಲ್ತಾನ್, ಲಾಹೋರ್, ಡಿಲ್ಲಿ, ಕಾನ್ಪುರ್, ಅಲ್ಲಹಾಬಾದ್, ಕಲ್ಕತ್ತ ಇದು ಅದರ ಸಂಚಾರ ಮಾರ್ಗ.

ಜಿಲ್ಲಾ ಬೋರ್ಡು ಮುನ್ಸಿಪಾಲಿಟಿಗಳ ಆಯುಷ್ಯ ಹೆಚ್ಚಿತು

ಮದ್ರಾಸು ಅಧಿಪತ್ರದ ಚೆಂಗಲ್ಪೇಟ್, ಮಧುರೆ, ನೀಲಗಿರಿ, ಉತ್ತರ ಆರ್ಕಾಟ, ಬಳ್ಳಾರಿ, ದಕ್ಷಿಣಕನ್ನಡ, ತಿರುಚಿನಾಪಳ್ಳಿ ಜಿಲ್ಲಾಬೋರ್ಡುಗಳ ಮತ್ತು ಮುನ್ಸಿಪಾಲಿಟಿಗಳ ಚುನಾವಣೆಯು ಯುದ್ಧದ ನಿಮಿತ್ತ ಒಂದು ವರ್ಷ ಮುಂದಿರಿಸಲಾಗಿದೆ

ಅಸೆಂಬ್ಲಿ ಕೌನ್ಸಿಲ್ ಸದಸ್ಯರಿಗೆ ಸಂಬಳ ಇಲ್ಲ

ಜುಲಾಯಿ ಒಂದನೇಯ ತಾರೀಕಿನಿಂದ ಅಸೆಂಬ್ಲಿ ಕೌನ್ಸಿಲ್ ಸದಸ್ಯರ ಮತ್ತು ಅಧ್ಯಕ್ಷ ಉಪಾಧ್ಯಕ್ಷರ ಸಂಬಳ ಕೊಡಲಾಗದೆಂದು ಮದ್ರಾಸು ಸರಕಾರವು ಪ್ರಕಟಿಸಿದೆ

ಹಡಗು ಕಟ್ಟುವ ವಿಚಾರ

ವಿಶಾಖ ಪಟ್ಟಣ ಬಂದರದಲ್ಲಿ ಹಡಗ ಕಟ್ಟುವ ಕೆಲಸವನ್ನು ಪ್ರಾರಂಭಿಸಬೇಕೆಂದು ಒಂದು ಹಿಂದಿ ಕಂಪೆನಿಯವರು ನಿರ್ಧರಿಸಿದ್ದಾರೆ

ನೋಟೀಸು

ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ

R E A 162/40 O S 22/1937
R E I 4 40

ಚೋಮಕ್ಕೆ Petitioner

ನಾರಾಯಣ ಕಲ್ಲೂರಾಯ ಕೂಡಾ Respondents

2 ಫುಲ್ಲಡ್ಕ ಸುಬ್ರಾಯ್ ಶಜೆ
ಮೂಲೆ ವರ್ಷಪ್ಪಯ್ಯನವರಮಗ
-ಗುತ್ತಿಗಾರು ಗ್ರಾಮ
3 ಅಣ್ಣುಗೌಡ } ನಾಣ
5 ಮಂಜಪ್ಪ ಗೌಡ } ಗೌಡನ ಮಕ್ಕಳು
ಬಳ್ಪ ಗ್ರಾಮದ ವಿಷ್ಣುಮಂಗಲ-

ಮೇಲಿನ ಅಮಲ್ದಾರಿಯಲ್ಲಿ ಅಜಿದಾರರು ಎಸ್ಜಿರ ಬಾಬ್ತು ಸ್ಥಿರ ಆಸ್ತಿಯನ್ನು ಯೇಳುವಿಗೆ ಇಡಿಸಿ ಯೇಲಂ ಇಷ್ಟಾರು ವಸ್ತಿರ ನಾಜರು ವರ ಸಿರುತ್ತದೆ ಸದರಿ ಯೇಲಂ ಇಕ್ಷಿಸಬೇಕೆಂತ ಕರ್ತಾರ ಕನ್ನು ನಿರ್ಣಯಿಸಲಿಕ್ಕು, ಯೇಲಂನಕುರಿತು ಅರ್ಜದಾರರ ಕಡೆಯಿಂದ ಬರೆಕ್ಕಾಸ್ತಿಗೆ ಸಿಲ್ಲವದೆ ಫರ್ಮಿನ ಕನಿಗೂ, ಕೂಡಾ ಅರ್ಜಿಗಳು ಬರೆಕೆಂದು ಬದು ಆ. 25-7-1940ಕ್ಕೆ ಇಪ್ಪತಾರು ಬದ್ದು ನೋಟೀಸಿನ ವ್ಯಾದಿ ಆಗಿರುತ್ತದೆ. ಆದುದರಿಂದ ಆ ವ್ಯಾದೆಗೆ ಎದ್ರಿರು ತಮ್ಮ ಆಕ್ಷೇಪಗಳೇನಾದರೂ ಹೇಳಬೇಕಾದರೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಹಿನ್ಹಾ ಎಂತ ಮಾಡಿ ಮೇಲಿನ ವ್ಯವಹರಣೆಯನ್ನು ಮುಂದರಿಸಲಾಗುವುದು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

ತಾರೀಕು 28-6-1940 Puttur,S.K. | B. Ramachandra Rao, M. A, B. L, Pleader for petitioner

---

ಜನರು ಹಣವನ್ನು ಸುಮ್ಮನೆ ಕೂಡಿಸಿಡಬಾರದು

ಐದು ವರ್ಷಗಳ ಶಿಕ್ಷೆ!

ಸರಕಾರದ ಪ್ರಕಟಣೆ

ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಮೇರೆಗೆ ಇಂಡಿಯಾ ಸರಕಾರದವರು ಒಂದು ಹೊಸ ಕಾಯಿದೆಯನ್ನು ಏರ್ಪಡಿಸಿ ಪ್ರಕಟಿಸಿದ್ದಾರೆ ಈ ಕಾಯಿದೆ ಪ್ರಕಾರ ಬಂದರದಲಿ ಯಾವ ಉದ್ಯಮಿ ಯೂ, ಕಂಟ್ರಾಕ್ಟರನೂ ತನ್ನ ಅವಶ್ಯಕತೆಗೆ ಬೇಕಾಗ ವ್ಯದಕ್ಕಿಂತ ಹೆಚ್ಚಾಗಿ ಹಣವನ್ನು ನಾಣ್ಯ ರೂಪದಲ್ಲಿ ಇಟ್ಟುಕೊಳ್ಳಬಾರದು ಹಣವನ್ನು ಶೇಖರಿಸಿಡುವ ಉದ್ದೇಶದಿಂದ ನಾಣ್ಯಗಳನ್ನು ಯಾರೂ ತೆಗೆದುಕೊಳ್ಳಬಾರದು. ಈ ವಿಚಾರದಲ್ಲಿ ರಿಜರ್ವ್ ಬ್ಯಾಂಕಿನವರಿಂದ ಸರಿಯಾದ ತಿಳುವಳಿಕೆಯನ್ನು ಪಡೆದುಕೊಳ್ಳಬೇಕು. ನೋಟುಗಳನ್ನು ಹೆಚ್ಚು ಸಂಖ್ಯೆಯಲ್ಲಿ ನಾಣ್ಯವಾಗಿ ಪರಿವರ್ತನೆ ಮಾಡಲು ರಿಜರ್ವ್ ಬ್ಯಾಂಕಿಗೆ ಅರ್ಜಿ ಹಾಕಿಕೊಳ್ಳಬೇಕು ಹಣವನ್ನು ಕೂಡಿಡುವ ಅಭ್ಯಾಸವನ್ನು ಕಡಿಮೆ ಮಾಡಲು ಈ ಕಾಯಿದೆ ಏರ್ಪಡಿಸಲಾಗಿದೆ ಹಣವನ್ನು ಕೂಡಿಡುವುದರಿಂದ ದೇಶದ ಆರ್ಥಿಕ ಪ್ರಗತಿಗೆ ಕೊರತೆ ದರೆಯಾಗುತ್ತದೆ ಹಣವೂ, ನಾಣ್ಯವೂ ಯಾವಾಗಲೂ ಚಲಾವಣೆ ಇಲ್ಲಿರಬೇಕು. ಹಣ ಕೂಡಿಡುವ ದುರಭ್ಯಾಸದ ಅಪರಾಧಕ್ಕೆ ಐದು ವರ್ಷಗಳ ವರೆಗೆ ಶಿಕ್ಷೆ ಮಾಡಲಾಗುವುದು.

ನೋಟೀಸು

ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ

R E P 565/1939
In O S 562/1938

ಅರ್ಜಿದಾರ -ದಿ ಪ್ರೋವಿನ್ಸ್ ಫೋಫ್ ಮದ್ರಾಸು

ಎದ್ರಿರು:-ಶಂಕರ ಭಟ್ಟ ಕೂಡಾ,

5ನೇ ಎದ್ರಿರು, ವರದೇಶ್ವರ ಶಾನ ಗೋವಿಂದ ಭಟ್ಟ ಎಂಬವ, ಅಳ್ಕೆ ಗ್ರಾಮ 7ನೇ ಎದ್ರಿ ತಿಮ್ಮಪ್ಪ ಭಟ್ಟ ಗಿರಿ ಗೋವಿಂದ ಭಟ್ಟ ಮುಗುಳಿ ಕಬ್ಬಿ ಗ್ರಾಮ.

ಈ ಎರಡು ಜನ ಎದ್ರಿರಿಗೆ ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲೆ ಹೇಳಲಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರರು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಹಾಕಿದ್ದಾರೆ. ಅದ್ದರಿಂದ ವಿಕ್ರಯದ ಜಾಹೀರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ 1940ನೇ ಯಿಸವಿ ಜುಲಾಯಿ ತಿಂಗಳ 24ನೇ ತಾರೀಕು ನಿಶ್ಚಯಿಸಲ್ಪಟ್ಟಿದೆ ಆ ದಿವಸ ಹಾಜರಾಗತಕ್ಕದ್ದು. ನಿಮಗೆ ಇದರಿಂದ ತಿಳಿಸಲಾಗುತ್ತದೆ.

(By order of the Court)

Puttur S K 29—6—40 } B. Achyuta Baliga Pleader for Petr

ಶ್ರೀಮಾನ್ ಆಲೂರು ವೆಂಕಟರಾಯರ

೬೦ ವರ್ಷಗಳ ಆಯುಃಪೂರ್ತಿಯ ಶಾಂತಿಸಮಾರಂಭ.

"ಕರ್ನಾಟಕದಲ್ಲಿ ಸ್ವತಂತ್ರವೃತ್ತಿಯ ರಾಷ್ಟ್ರೀಯತ್ವದ ಆಕೃತಿಯೊಂದಿಗೆ "ಕರ್ನಾಟಕತ್ವ"ದ ಬೀಜವನ್ನು ಬಿತ್ತಿ, ಅನೇಕವಿಧವಾದ ತಮ್ಮ ಚಟುವಟಿಕೆಗಳಿಂದ ಕನ್ನಡ ಜನಾಂಗವನ್ನು ಎಚ್ಚರಿಸಿ, ಅಭ್ಯುದ್ಧಾರದ ಕೆಲಸಕ್ಕೆ ತೊಡಗಿಸಿ, ಅದನ್ನು ಇಂದಿನ ಸ್ವತಂತ್ರ ವಿಚಾರದ ಮೇಲುಮಟ್ಟಕ್ಕೆ ಮುಟ್ಟಿಸಿ, ಭಾರತೀಯ ಪ್ರಪಂಚದಲ್ಲಿ ಅದಕ್ಕೊಂದು ವಿಶಿಷ್ಟವಾದ, ಸ್ಪೃಹಣೀಯವಾದ, ಹೆಮ್ಮೆಪಡುವಂಥ ಸ್ಥಾನವನ್ನು ಸಂಪಾದಿಸಿಕೊಟ್ಟ ಶ್ರೇಯಸ್ಸಿನ ಹೆಚ್ಚಿನ ಭಾಗವು ಶ್ರೀಮಾನ್ ಆಲೂರ ವೆಂಕಟರಾಯರಿಗೇ ಸಲ್ಲತಕ್ಕದ್ದು. ಶ್ರೀಮಾನ್ ವೆಂಕಟರಾಯರು ಈ ಹಿಂದಿನ ಮೂರು ತಪಗಳ ಕಾಲದಲ್ಲಿ ಕನ್ನಡನಾಡಿಗೆ ಅಖಂಡವಾಗಿ ಸಲ್ಲಿಸಿದ ಅದ್ಭುತವಾದ ಸೇವೆಯನ್ನು ಅಂತಃಕರಣಪೂರ್ವಕವಾಗಿ ಸ್ಮರಿಸಿಕೊಂಡು ಕನ್ನಡ ಜನಾಂಗವು ಅವರಿಗೆ ತನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಬೇಕಾದುದು ಅತ್ಯಂತ ಇಷ್ಟವೂ ಸದಭಿಮಾನಪ್ರೇರಕವೂ ಆದ ಸಂಗತಿಯಾಗಿರುವುದು.

ಹೊಸಗನ್ನಡ ಸಾಹಿತ್ಯಕ್ಷೇತ್ರದಲ್ಲಿ ರಾಷ್ಟ್ರೀಯ ವಾಙ್ಮಯದ ಬೀಜಾರೋಪಣವನ್ನು ಮಾಡಿದ ಎಷ್ಟೋ ವರ್ಷಗಳ ವರೆಗೆ ಶ್ರೀಮಾನ್ ವೆಂಕಟರಾಯರು "ಜಯಕರ್ನಾಟಕ"ದ ಸಂಸ್ಥಾಪಕರೂ ಸಂಚಾಲಕರೂ ಸಂಪಾದಕರೂ ಆಗಿ ಬಹುದಿನಗಳ ವರೆಗೆ ಪರಿಶ್ರಮ ವಹಿಸಿ, ವಿವಿಧ ವಿಷಯಗಳ ಪ್ರಚಂಡವಾದ ಹೊಸ ಗ್ರಂಥಗಳ ರಾಶಿಯೇ ಹೊಸಗನ್ನಡದಲ್ಲಿ ಹುಟ್ಟಲು ಕಾರಣಪುರುಷರಾಗಿದ್ದಾರೆ. ಪ್ರಾಚೀನ ಕನ್ನಡನಾಡಿನ ತೇಜಸ್ವಿಯಾದ, ಓಜಸ್ವಿಯಾದ ಇತಿಹಾಸದ ಯಥಾರ್ಥಸ್ವರೂಪವನ್ನು ಶಿಲಾಲೇಖ-ತಾಮ್ರಪಟ-ಪ್ರಾಚೀನ ಗ್ರಂಥಗಳ ಆಧಾರದಿಂದ ಬಯಲಿಗೆ ತೆರೆದು, ಬಿಚ್ಚಿ ತೋರಿ, ಮೃತಪ್ರಾಯವಾಗಿದ್ದ ಕನ್ನಡ ಜನಾಂಗದಲ್ಲಿ ನವಚೈತನ್ಯವನ್ನು ಹುಟ್ಟಿಸಿದ ಮೂಲಗುರುಗಳಾಗಿದ್ದಾರೆ. ಛಿನ್ನ ವಿಛಿನ್ನವಾಗಿ ಬಿದ್ದುಕೊಂಡಿರುವ ಕರ್ನಾಟಕವು—ಒಂದಾಗಿ ಮೆರೆಯುವಂತಾಗಲು ಅನೇಕ ಉಪಕ್ರಮಗಳನ್ನು ಕೈಕೊಂಡು, ಕನ್ನಡ ಜನಾಂಗವೆಲ್ಲ ಒಂದುಗೂಡದೆ ಅದರ ಎಲ್ಲ ಬಗೆಯ ಏಳ್ಗೆಯಾಗುವದು ಶಕ್ಯವಿಲ್ಲೆಂಬ ಪ್ರಶಸ್ತಭಾವನೆಯನ್ನು ನಾಡಿನಲ್ಲೆಲ್ಲ ಹರಡಿ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ವ್ಯಾವಹಾರಿಕ, ಔದ್ಯೋಗಿಕ ಮೊದಲಾದ ಎಲ್ಲ ಸಂದರ್ಭಗಳಲ್ಲಿಯೂ ಕನ್ನಡಿಗರೆಲ್ಲರೂ ಒಂದೆಂಬ ವಿಚಾರದಿಂದ ಮುಂದುವರಿವಂತೆ ಹುರಿಗೊಳಿಸಿದ ಹಿರಿಮೆಗಳವರಾಗಿದ್ದಾರೆ. ಹಾಗೆಯೇ ಕನ್ನಡನಾಡಿನ ಪ್ರಾಚೀನ ಪರಂಪರೆಯ ಅಖಂಡವಾಗಿ ಹರಿದುಬಂದಿರುವ ಭಾರತೀಯ ಜೀವನ ಸಾರಸರ್ವಸ್ವವಾದ ಆಧ್ಯಾತ್ಮಿಕ ಪ್ರಗತಿಯ ಪ್ರವಾಹವು ಹರಿಗಡಿಯದೆ ಮುಂದುವರಿವಂತೆ ತಮ್ಮ ಪ್ರಶಾಂತವಾದ, ಗಂಭೀರವಾದ, ತೇಜಸ್ವಿಯಾದ, ಹೃದಯಸ್ಪರ್ಶಿಯಾದ ಲೇಖನಶೈಲಿಯಿಂದ ಅದನ್ನು ಹೊಸದಾರಿಗೊಯ್ದು ಪ್ರಾಚೀನ ಕನ್ನಡನಾಡಿನ ಜೀವಾಳವಾಗಿದ್ದ ಸರ್ವಧರ್ಮ ಸಮದೃಷ್ಟಿಯನ್ನು ಹೊಸಗನ್ನಡ ಜನಾಂಗದ ಜೀವನದಲ್ಲಿ ಒಡಮೂಡಿಸಲು ಪ್ರಯತ್ನಿಸುತ್ತಿರುವ ನೂತನ ಆಚಾರ್ಯರು ಇವರಾಗಿರುತ್ತಾರೆ.

ಹೀಗೆ ಹೊಸಗನ್ನಡನಾಡನ್ನು ನಿರ್ಮಿಸುವ ಕಾರ್ಯದಲ್ಲಿ ಕಳೆದ ೩೬ ವರ್ಷಗಳಿಂದಲೂ ತಮ್ಮ ಆಯುಷ್ಯವನ್ನೇ ಧಾರೆಯೆರೆದು, ತಮ್ಮ ಸರ್ವಸ್ವವನ್ನು ಸೂರೆಗೈದು, ತಮ್ಮ ದೇಹವನ್ನೇ ಚಂದನದ ಕೊರಡಿನಂತೆ ಸವೆಸಿರುವ ಶ್ರೀಮಾನ್ ಆಲೂರ ವೆಂಕಟರಾಯರಿಗೆ ಕನ್ನಡ ಜನಾಂಗವು ಎಷ್ಟೊಂದು ಬಗೆಯಿಂದ ಕೃತಜ್ಞವಾಗಿರಬೇಕಾಗಿರುವುದೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ಆದುದರಿಂದಲೇ ಅಖಂಡ ಕನ್ನಡ ಜನಾಂಗವು ಅವರ ಅರುವತ್ತೊಂದನೆಯ ಹುಟ್ಟಿದ ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸಿ, ಅವರ ಋಣವನ್ನು ಅಂಶಮಾತ್ರದಿಂದಲಾದರೂ ಪೂರೈಸಿತೆಂಬ ಅಂತಃಸಮಾಧಾನವನ್ನು ಹೊಂದಲು ಪ್ರಯತ್ನಿಸುವದು ಅದರ ಪರಂಪರಾಪ್ರಾಪ್ತವಾದ ಉದಾರ ಚಾರಿತ್ರ್ಯಕ್ಕೆ ಒಪ್ಪತಕ್ಕ ಮಾತಾಗಿದೆ. ಇದೇ ಜುಲೈ ೧೨ನೇ ತಾರೀಕು ಶುಕ್ರವಾರವು ಶ್ರೀ ವೆಂಕಟರಾಯರ ಆಯುರ್ಮಾನದ ೬೦ ವರ್ಷಗಳನ್ನು ಪೂರ್ಣಗೊಳಿಸಿ, ೬೧ನೆಯ ವರ್ಷಕ್ಕೆ ಆರಂಭವಾಡುವ ಸುದಿನವಾಗಿದೆ. ಆದುದರಿಂದ ಆ ದಿವಸ ಕನ್ನಡನಾಡಿನಲ್ಲೆಲ್ಲ ಕಡೆಗೆ ಸಾರ್ವಜನಿಕ ಸಭೆಗಳನ್ನು ಕೂಡಿಸಿ ವೆಂಕಟರಾಯರು ಕನ್ನಡ ಜನಾಂಗಕ್ಕೆ ಸಲ್ಲಿಸಿದ ಸೇವೆಗಾಗಿ ಎಲ್ಲರೂ ಕೃತಜ್ಞತೆಗಳನ್ನರ್ಪಿಸುವುದಲ್ಲದೆ, ಪರಮಾತ್ಮನು ಅವರಿಗೆ ಇನ್ನೂ ದೀರ್ಘಾಯುರಾರೋಗ್ಯವನ್ನು ಕೊಟ್ಟು ಅವರಿಂದ ಕನ್ನಡನಾಡ ಸೇವೆಯು ಇನ್ನೂ ಹೆಚ್ಚಾಗಿ ನೆರವೇರುವಂತೆ ಭಗವಂತನನ್ನು ಪ್ರಾರ್ಥಿಸಬೇಕೆಂದು ಈ ಮೂಲಕ ಎಲ್ಲ ಕಡೆಯ ಕನ್ನಡನಾಡ ಭಕ್ತರಿಗೆ ವಿನಯಪೂರ್ವಕ ಪ್ರಾರ್ಥನೆಯುಂಟು.

ಅವರ ನಿರ್ಹೇತುಕವಾದ ಸೇವೆಯನ್ನು ಮನದಂದು ಕನ್ನಡ ಜನಾಂಗವು ಅವರಿಗೆ ತನ್ನ ಕೈಲಾದ ಮಟ್ಟಿಗಿನ ನಿಧಿಯೊಂದನ್ನು ಸಮರ್ಪಿಸಬೇಕೆಂದೂ ಅವರ ಚಿರರಮ್ಯವಾದ, ಸ್ಫೂರ್ತಿದಾಯಕವಾದ ಜೀವನರಹಸ್ಯವನ್ನು ಚಿಕ್ಕದೊಂದು ಪುಸ್ತಕ ರೂಪದಿಂದ ಪ್ರಕಟಿಸಿ, ಕನ್ನಡನಾಡಿನ ತರುಣ ತರುಣಿಯರಿಗೆಲ್ಲ ಪರಿಶುದ್ಧ ಆದರ್ಶವಾಗಿರುವ ಅವರ ಪವಿತ್ರತಮವಾದ ಚರಿತ್ರೆಯ ಅಲ್ಪಪರಿಚಯವನ್ನು ಮಾಡಿಕೊಟ್ಟು ಅವರೆಲ್ಲರೂ ಶ್ರೀ ವೆಂಕಟರಾಯರ ದಿವ್ಯ ಆದರ್ಶದಂತೆ ನಡೆಯಲು ಅಣಿಯಾಗುವಂತೆ ಪ್ರಯತ್ನಿಸಬೇಕೆಂದೂ ಗೊತ್ತಾಗಿದೆ. ಈ ಮಹತ್ಕಾರ್ಯಕ್ಕೆ ಕನ್ನಡ ಜನಾಂಗದ ಕೊಡುಗೈ ಬಾಂಧವರೆಲ್ಲರೂ ಸಡಿಲುಗೈಯಿಂದ ಹಣವನ್ನು ಸಲ್ಲಿಸಿ ಕನ್ನಡಿಗರ ಔದಾರ್ಯಕ್ಕೆ ಅನುರೂಪವಾಗುವ ತೆರದಲ್ಲಿ ಈ ಸಂಕಲ್ಪವನ್ನು ನೆರವೇರಿಸುವುದಕ್ಕೆ ಸಹಾಯ ಮಾಡಬೇಕೆಂದು ಈ ಮೂಲಕವೇ ಬೇಡಿಕೊಳ್ಳಲಾಗಿದೆ. ಈ ನಿಧಿಗೆ ಧನಸಹಾಯವನ್ನು ಕಳಿಸಬಯಸುವವರು, ಶಾಂತಿಸಮಾರಂಭಸಮಿತಿಯ ಪ್ರಮುಖ ಕಾರ್ಯದರ್ಶಿಗಳಾದ, "ಜಯಕರ್ನಾಟಕ" ಮಾಸಪತ್ರಿಕೆಯ ಸಂಪಾದಕರೂ ಸಂಚಾಲಕರೂ ಆಗಿರುವ ಶ್ರೀ ಬೆಳಗಾಂವಿ ರಾಮಚಂದ್ರರಾಯರ ವಿಳಾಸಕ್ಕೆ, ಧಾರವಾಡಕ್ಕೆ ಕಳಿಸುವ ಅನುಗ್ರಹ ಮಾಡಬೇಕು. ಈ ಸಾರ್ವಜನಿಕ ಬಿನ್ನಹವನ್ನೇ ಎಲ್ಲರೂ ತಮಗೆ ಮಾಡಿದ ಬಿನ್ನಹವೆಂದು ಬಗೆದು, ಬೇಗನೇ ಹಣ ಕಳಿಸುವ ಏರ್ಪಾಡು ಮಾಡಬೇಕೆಂದು ವಿನಯಪೂರ್ವಕ ಪ್ರಾರ್ಥಿಸಲಾಗಿದೆ ಎಂದು ಅಧ್ಯಕ್ಷರಾದ ಶ್ರೀ ಮುದವೀಡು ಕೃಷ್ಣರಾಯರೂ, ಕಾರ್ಯದರ್ಶಿಗಳಾದ ಶ್ರೀ ಬೆಳಗಾಂವಿ ರಾಮಚಂದ್ರರಾಯರೂ ಕನ್ನಡಿಗರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

ಕಜ್ಜಿಯಿಂದ ಮೈಯ ಭಾಗವನ್ನು ತುರಿಸಬೇಡಿರಿ!

ಜಾಂಬಕಿನಿಂದ ವಿಷಾಣುಗಳನ್ನೂ ರೋಗವನ್ನೂ ನಿವಾರಿಸಿರಿ.

ತುರಿಸುವಿಕೆಯು ಚರ್ಮವನ್ನು ಗಾಯಗೊಳಿಸುತ್ತದೆ. ಆಗ ವಿಷಾಣುಗಳು ಆ ಗಾಯಗಳ ಮೂಲಕ ಮಾಂಸ ಖಂಡವನ್ನು ಪ್ರವೇಶಿಸಿ, ಗಜ್ಜಿ, ವ್ರಣ ಮೊದಲಾದ ಚರ್ಮವ್ಯಾಧಿಗಳನ್ನುಂಟು ಮಾಡುವುವು. ಇದಕ್ಕೆ ಜ್ಯಾಂಬಕು ಯೋಗ್ಯ ಔಷಧಿ. ಇದರಲ್ಲಿರುವ ಅಮೂಲ್ಯವಾದ ಗಿಡ ಮೂಲಿಕೆಗಳ ಎಣ್ಣೆಯು ನರನಾಡಿಗಳಿಂದ ಹೀರಲ್ಪಟ್ಟು ನೋವು ನಿವಾರಣೆಯಾಗುತ್ತದೆ, ಬಾತುವಿಕೆಯು ಕಡಿಮೆಯಾಗುತ್ತದೆ ಮತ್ತು ಅದರಿಂದ ಬರುವ ರಶಿಗೆಯು ಒಣಗುತ್ತದೆ. ಜ್ಯಾಂಬಕು ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುವುದು. ಗಾಯ, ತರಚುವಿಕೆ ವ್ರಣ ಸುಟ್ಟಗಾಯ ಮೊದಲಾದುವುಗಳಿಗೆ ಉತ್ತಮ. ಎಲ್ಲಾ ಔಷಧಿ ವ್ಯಾಪಾರಿಗಳು ರೂಪಾಯಿ 1 ಮತ್ತು ರೂ 2 4 0ರಂತೆ ಮಾರುತ್ತಾರೆ.

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಗಳ ಕೊಬ್ಬುಗಳಿಂದ ವಿರಹಿತವಾದುದು

WHAT MAKES A MAN RICH?

Luck? Rarely

Inheritance? Seldom

Speculation? Seldom

Gambling? Never

Hard Work? Often

Hard work and THRIFT Always

RESOURCES OF A CRORE

Estd. 1906

CANARA BANK LIMITED.

ಅಮೃತಪಾನ!

[೭ನೇ ಪುಟದಿಂದ ಮುಂದುವರಿದುದು]

ಚಿಕಿತ್ಸೆಯಾಗಿತ್ತು. ಆದರೆ ಯಾವ ವೈದ್ಯನೂ ಬಂದು ಅವಳನ್ನು ನೋಡಿದ್ದಿರಲಿಲ್ಲ. ಯಾರೂ ಔಷಧಿ ಕೊಟ್ಟಿದ್ದಿರಲಿಲ್ಲ. ಹಳ್ಳಿಯವ ಯಾರೋ ಒಬ್ಬ ತಂದು ಕೊಟ್ಟ ಏನೋ ಕೆಲವು ಗಡ್ಡೆ ಬೇರುಗಳನ್ನು ಹಾಕಿ ಓಷಧಿಯ ಹರಕೆಯನ್ನು ತೀರಿಸಿದ್ದಳು. ಯಾರಾದರೂ ಕೇಳಿದರೆ 'ಪಾಪಿ [illegible] ಗಂಜಿಯನ್ನು ತಿಂದಳು. ಈಗ [illegible]ಳೆ. ಮಾಡಿದ ಕೆಲಸದ ಫಲ [illegible] ಬೇರೆ ಯಾರು ಉಣ್ಣಬೇಕು [illegible] ಎಂದು ಅತ್ತೆನಾದಿನಿ ನಿಷ್ಠುರ [illegible]ನಾಡುತಿದ್ದರು.

ತಾಯಿ ಅಜ್ಜಿಯರ ಈ ದುರ್ವ್ಯವಹಾರವು ದಯಾಳನಿಂದ ನೋಡಲಾಗಲಿಲ್ಲ. ಅವನು ರಹಸ್ಯದಲ್ಲಿ ಅವರನ್ನು ಕಂಡು ಅನೇಕ ಬಾರಿ ಸಮಜಾಯಿಸಿದ ಡಾಕ್ಟರರನ್ನು ಕರೆದು ರಾಮಿಗೆ ಚಿಕಿತ್ಸೆ ಮಾಡಬೇಕೆಂದ ಕೊನೆಗೆ ಬೇರೆ ಏನಿಲ್ಲವಾದರೂ ಮನುಷ್ಯ ಜೀವಿ ಆಗಿರುವದಷ್ಟೆ? ಆದರೆ ಅವರು ಮಾತ್ರ ಮಾತುಗಳನ್ನು ಕೇಳಿ 'ನೋಡ, ದಯಾ, ನೀನು ಈ ಎಲ್ಲಾ ಗೊಂದಲಕ್ಕೆ ಬೀಳಕೂಡದು ಮುಟ್ರಿಕ ಪಾಸಾಗಿ ತಿಂಗಳುಗಳು ಕಳೆದುವು ಏನಾದರೂ ಉದ್ಯೋಗ ಹುಡಿಕಿಕೊಳ್ಳು, ಎಷ್ಟು ಚಿಕಿತ್ಸೆ ಮಾಡಿದರೂ ಸಾಯುವವರನ್ನು ಬದುಕಿಸಲಿಕ್ಕಾಗುವುದಿಲ್ಲ ಆಯುಷ್ಯವಿದ್ದರೆ ಔಷಧಿ ಇಲ್ಲದೆಯೇ ಬದುಕುತ್ತಾಳೆ ರಾಮಿ ತನ್ನ ಪಾಪದ ಫಲವನ್ನು ಉಣ್ಣುತಾಳಾದರೆ ನಾವೇನು ಮಾಡಬಹುದು?' ಎನ್ನುತಿದ್ದರು ಆದರೆ ಇದರಿಂದ ಅವನಿಗೆ ತೃಪ್ತಿಯಾಗುತ್ತಿರಲಿಲ್ಲ ಡಾಕ್ಟರರನ್ನು ಕರೆಸಬೇಕೆಂದು ಮತ್ತೆ ಮತ್ತೆ ಹೇಳುತ್ತಿದ್ದ. 'ನಿನ್ನೆಯ ಹುಡುಗ, ನಮಗೆ ಬುದ್ಧಿ ಕಲಿಸಲಿಕ್ಕೆ ಬರುತ್ತಾನೆ ರಾಮಿಗೆ ದಯೆ ತೋರಿಸ ಬೇಕಂತೆ!' ಎಂದವರು ಹಲ್ಲು ಕಡಿದು ಅವನನ್ನು ಜರಿಯುತಿದ್ದರು

ದಯಾಳನಿಗೆ ಅದೇ ಸಮಯಕ್ಕೆ ಹದಿನೈದು ರೂಪಾಯಿ ಮಾಸಿಕ ವೇತನದ ಒಂದು ನೌಕರಿ ಸಿಕ್ಕಿತು. ಅವನು ಪೇಟೆಯಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಅವನು ಅಲ್ಲಿಯೇ ಇರತೊಡಗಿದ. ರಾಮಿಯನ್ನು ತನ್ನ ಕೋಣೆಗೆ ಸಾಗಿಸಿದ. ಪೇಟೆಯ ಡಾಕ್ಟರರನ್ನು ಕರೆಸಿ ಔಷಧಿ ಕೊಡಿಸಿದ. ರಾತ್ರಿ ಹಗಲು ಅವಳ ಸೇವೆ ಶುಶ್ರೂಷೆ ಮಾಡಿದ ಅವಳ ಸೇವೆಯಲ್ಲಿ ಅವನು ನೌಕರಿಯನ್ನೂ ಬಿಟ್ಟ. ಜನರು ಅವನನ್ನು ಹುಚ್ಚನೆನ್ನತೊಡಗಿದರು. ತಾಯಿ ಅಜ್ಜಿಯರು ಆ ದುಷ್ಟೆ ದಯಾಳನಿಗೆ ಮಾಟ ಮಾಡಿದ್ದಾಳೆ ಎಂದು ಶಪಿಸತೊಡಗಿದರು. ಆದರೆ ದಯಾಳ ಯಾವುದನ್ನೂ ಯಾರನ್ನೂ ಲಕ್ಷಿಸಲಿಲ್ಲ.

ಹೀಗಿದ್ದರೂ ರಾಮಿಯ ರೋಗವು ಅಸಾಧ್ಯವಾಯಿತು. ಪ್ರಾರಂಭದಲ್ಲಿ ಎಚ್ಚರಿಕೆ ತೆಗೆದುಕೊಂಡಿದ್ದರೆ, ರಾಮಿ ಬದುಕುತಿದ್ದಳು. ಸಮಯ ಮೀರಿದ ದಯಾಳನ ಪ್ರಯತ್ನಗಳು ವ್ಯರ್ಥವಾದುವು. ಮನೆಗೆ ಬೆಂಕಿ ಬಿದ್ದಾದ ಮೇಲೆ ಬಾವಿ ತೋಡಲಿಕ್ಕೆ ಹೋಗುವವನ ಹಾಗೆ ದಯಾಳನಾಗಿದ್ದ. ಆದರೆ ಅವನು ಬೇಕೆಂದು ಹಾಗೆ ಮಾಡಲಿಲ್ಲ. ಸಕಾಲದಲ್ಲಿ ಚಿಕಿತ್ಸೆ ಮಾಡಲಿಕ್ಕೆ ಸಮಯವೂ ಪರಿಸ್ಥಿತಿಯೂ ದಯಾಳನಿಗೆ ಪ್ರತಿಕೂಲವಾಗಿದ್ದವು ಏನಾದರೇನು? ರಾಮಿಯು ಕೊನೆಗಾಲವಂತೂ ಸಮೀಪವಾಯಿತು. ಡಾಕ್ಟರರು ನಿರಾಶೆಯನ್ನು ಸೂಚಿಸಿ ಕೈಬಿಟ್ಟರು.

ಕೆಲವು ದಿನಗಳಿಂದ ದಯಾಳ ಅನ್ನಪಾನಗಳನ್ನು ಮುಟ್ಟಿರಲಿಲ್ಲ, ನಿದ್ದೆ ಆರಾಮ ಇರಲಿಲ್ಲ ಡಾಕ್ಟರರ ಮಾತು ಕೇಳಿ ಅವನ ಕಣ್ಣುಗಳಲ್ಲಿ ನೀರು ತುಂಬಿತು ತಾಯಿ ಅಜ್ಜಿಯರು ಅನಾಥೆ- ವಿಧವೆ-ರಾಮಿಯನ್ನು ಅನ್ಯಾಯವಾಗಿ ಹಿಂಸಿಸಿ ಹಿಂಸಿಸಿ ಕೊಂದರು ಅದಕ್ಕೆ ಅವನು ಏನಾದರೂ ಪ್ರಾಯಶ್ಚಿತ್ತ ಮಾಡಿ ಪಾಪ ಸಂಬಂಧವನ್ನು ಕಡಿದುಕೊಳ್ಳಬೇಡವೆ? ಅವನು ಇವೇ ವಿಚಾರಗಳಿಂದ ಮಗ್ನನಾಗಿ, ಕಣ್ಣುಗಳಲ್ಲಿ ನೀರು ತುಂಬಿಸಿಕೊಂಡ, ರಾಮಿಯ ಹಾಸಿಗೆಯ ಬಳಿ ಹೋಗಿ ಕೂತುಕೊಂಡ ಪಾತ್ರದಲ್ಲಿ ಶರಬತ್ತು ಇತ್ತು ಅದರೊಳಗೆ ಏನೋ ಬಿಳಿ ಹುಡಿ ಹಾಕಿ- 'ಅಪ್ಪಾ' ಎಂದ

ರಾಮಿ ಇದನ್ನೆಲ್ಲ ನೋಡುತಿದ್ದಳು. ಅವಳು ನಸುನಕ್ಕು ಬಾಯಿ-'ಆ' ಮಾಡಿದಳು ದಯಾಳ ಪಾತ್ರೆಯಿಂದ ಒಂದು ಗುಟುಕು ಶರಬತನ್ನು ಅವಳ ಬಾಯೊಳಗೆ ಹಾಕಿದ. ಅವಳು ಅದನ್ನು ಕುಡಿದಳು ಮಿಕ್ಕದನ್ನು ದಯಾಳ ತಾನೇ ಕುಡಿದ ದಯಾಳನ ಕೈಯಲ್ಲಿದ್ದ ಪಾತ್ರೆಯನ್ನು ಕಸಕೊಳ್ಳಬೇಕೆಂದು ಭಗೀರಥ ಪ್ರಯತ್ನ ಮಾಡಿದಳು ರಾಮಿ ಆದರೆ ವ್ಯರ್ಥವಾಯಿತು ದಯಾಳ ವಿಷವನ್ನು ರಾಮಿಗೂ ಕೊಟ್ಟು ತಾನೂ ತೆಗೆದುಕೊಂಡ'

*

ಪ್ರಭಾತದ ಸಮಯವಾಗಿತ್ತು ಸೂರ್ಯ ಕಿರಣಗಳು ಕೋಣೆಯ ಕಿಟಿಕಿಯ ಸಂದಿಸಿಂದ ಇಣುಕಿ ಅಪೂರ್ವ ದೃಶ್ಯವನ್ನು ನೋಡುತಿದ್ದುವು ರಾಮಿ ಮತ್ತು ದಯಾಳ-ಇಬ್ಬರೂ ಅಮೃತ ಪಾನಮಾಡಿ ಅನಂತದ ಮಡಿಲಲ್ಲಿ ಸುಖನಿದ್ರೆಯನ್ನು ಅನುಭವಿಸುತಿದ್ದರು

(ಒಂದು ಹಿಂದೀ ಕಥೆ)

HALFTONE & LINE
BLOCK MAKING
UNDERTAKEN

Sharada Press,
MANGALORE

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

'ನನಗೀಗ ಅಸಹ್ಯಕರ
ಪಾಪ ಹುಣ್ಣುಗಳಾಗಲಿ
ಛಿದ್ರಗಳಾಗಲಿ ಇರುವ
ಚರ್ಮವಿರವುದಿಲ್ಲ'

'ದುಬಾರಿ ಗುಣವುಳ್ಳ ಕುಟಿಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ ಇದು ನನ್ನ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು. ಪರಿಮಳತನ ಔಷಧಿಯುಕ್ತವಾದ ಈ ಸಾಬೂನಿನಲಿ ನೋವನ್ನು ಶಮನಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ನಿಮ್ಮ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡವುದು ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕೂರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು-ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮಿತವ್ಯಯಿ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ಕೆಮ್ಮು, ಶೀತ ಮೊದಲಾದ
ಬಾಧೆಗಳಿಂದ ಎದೆಯನ್ನು
ರಕ್ಷಿಸಿರಿ!

ನಿಮ್ಮ ಶ್ವಾಸಕೋಶಗಳನ್ನು ಒಂಗುಂದಿಸುವ ಶೀತ ಚಳಿಜ್ವರ ಮೊದಲಾದುವುಗಳಿಂದ ನರಳುವಿರಾದರೆ ಕೂಡಲೇ ಪೆಪ್ಸನ್ನು ಸೇವಿಸುವಂತೆ ಜಾಗ್ರತೆಯಾಗಿರಿ ಈ ವಿಷಹಾರಿ ಶ್ವಾಸನೀಯ ಗುಳಿಗೆಗಳು ಸೇವಿಸಲು ಬಹಳ ರುಚಿಕರ ಮತ್ತು ಯಾವತ್ತೂ ಬಾಧೆಗಳನ್ನು ಗುಣಪಡಿಸುವಷ್ಟು ಶಕ್ತಿಯುಳ್ಳದ್ದು

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೊಕ್ಕಿ ಅಲ್ಲಿರುವ ವಿಷಕಾರಿ ಕ್ರಿಮಿಗಳನ್ನು ನಾಶಮಾಡಿ ಗಂಟಲನ್ನೂ ಎದೆಯ ಬಾಧೆಯನ್ನೂ ಶಮನಗೊಳಿಸುತ್ತದೆ ಇವು ಶೀತ ಜ್ವರ ಮೊದಲಾದವುಗಳಿಗೆ ತಕ್ಕುದಾದ ಔಷಧಿ

ಎಲ್ಲಾ ಔಷಧ ವ್ಯಾಪಾರಿಗಳು ಪೆಪ್ಸನ್ನು ದೂ 1ರಂತೆ ಮಾರುತ್ತಾರೆ.

ಏಜಂಟ್ಸ್—
ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್
ಮದರಾಸು

ಯಾವಾಗಲೂ ಪೆಪ್ಸನ್ನುಪಯೋಗಿಸಿರಿ
PEPS
ವಿಷಹಾರಿ ಶ್ವಾಸನೀಯ ಮಾತ್ರೆಗಳು

ವಿಚಿತ್ರ - ಪ್ರಪಂಚ

ಹೆಣ್ಣಿಗಾಗಿ ೧೮ ವರ್ಷಗಳ ತನಕ ಹೋರಾಡುತ್ತ ಇದ್ದರು!

ಸನ್ ೧೭೬೪ರಲ್ಲಿ ಫ್ರಾನ್ಸಿನ ಒಂದು ಪ್ರಸಿದ್ಧ ನೃತ್ಯ ಶಾಲೆಯಲ್ಲಿ ಒಬ್ಬ ಸುಂದರ ಸ್ತ್ರೀಯ ಕುರಿತು ಕೆಪ್ಟನ್ ಪೊರಿಯರ ಮತ್ತು ಮೇಜರ ಡೋ ಪೊರಂಟ ಎಂಬಿಬ್ಬರು ಅಧಿಕಾರಿಗಳೊಳಗೆ ಕಲಹ ಹುಟ್ಟಿಯಿತು. ಇಬ್ಬರೂ ಆ ಸ್ತ್ರೀಯನ್ನು ಪ್ರೀತಿಸತೊಡಗಿದ್ದರು. ಆದ್ದರಿಂದ ಅವಳು ಯಾರ ಕೈಯನ್ನು ಹಿಡಿಯಬೇಕೆಂಬುದರ ಕುರಿತು ನಿಷ್ಕರ್ಷೆಯಾಗಲಿಲ್ಲ. ಇಬ್ಬರೂ ದೊಡ್ಡ ಹಠವಾದಿಗಳಾಗಿದ್ದರು. ಇಬ್ಬರೂ ಪ್ರೇಮ ವ್ಯವಹಾರದಿಂದ ನಿರಾಶರಾಗಿದ್ದರು. ಆದ್ದರಿಂದ ೨೦ ಮೈಲುಗಳ ತರ್ಕಲದಲ್ಲಿ ಅವರಿಬ್ಬರೂ ಎಲ್ಲಿ ಪರಸ್ಪರ ಸಂಧಿಸಿದ್ದರೂ ಪರಸ್ಪರ ಹೋರಾಡಬೇಕೆಂದು ಪ್ರತಿಕಾರದ ಪ್ರತಿಜ್ಞೆಯನ್ನು ಕೈಗೊಂಡರು. ಆ ಪ್ರಕಾರ ಅವರು ೧೮ ವರ್ಷಗಳ ತನಕ ಆ ನೃತ್ಯಶಾಲೆಯ ೨೮ ಮೈಲುಗಳ ಪರಿಸರದಲ್ಲಿ ಎಲ್ಲಿ ಸಂಧಿಸಿದರಲ್ಲಿ ಪರಸ್ಪರ ಹೋರಾಡುತ್ತ ಇದ್ದರು—ತಾವು ಮೆಚ್ಚಿದ ಒಬ್ಬ ನರ್ತಕಿಯು ಸಲುವಾಗಿ!

ವಿಚಿತ್ರ ಅಭಿರುಚಿ

ಅಭಿರುಚಿಯಲ್ಲಿಯೂ ವೈಚಿತ್ರ್ಯವಿದೆ! ವೈಚಿತ್ರಕ್ಕೂ ಒಂದು ಪಾರವಿಲ್ಲ. ಪಾಟಿಯಾಲಾ ಅರಸರು ತಮ್ಮ ನಾಯಿ ಪ್ರೇಮಕ್ಕಾಗಿ ಜಗತ್ಪ್ರಸಿದ್ಧರಾಗಿದ್ದಾರೆ! ಸರ್ ಆಗಖಾನರು ಕುದುರೆ ಓಟದಲ್ಲಿ ಹೆಸರು ಪಡೆದಿರುವರು. ಹೈದರಾಬಾದಿನ ನಿಜಾಮರಿಗೆ ಮನೆಕಟ್ಟುವುದರಲ್ಲಿ ಅತಿಶಯ ಪ್ರೇಮ! ಆದರೆ ಎಲ್ಲಕ್ಕೂ ವಿಚಿತ್ರ ಅಭಿರುಚಿಯವರು ಅಮೇರಿಕದ ಮಾಜಿ ಪ್ರೆಸಿಡೆಂಟ ಹೂವರ್‌ರಾಗಿದ್ದರು. ಅವರು ತಮ್ಮ ಪರವಾದ ವ್ಯಂಗ್ಯ ಚಿತ್ರಗಳನ್ನು ಬೆಲೆಕೊಟ್ಟು ಕೂಡ ಸಂಗ್ರಹಿಸಿ ಇಡುತಿದ್ದರಂತೆ. ಅವರಿಗೆ ಅನುಕೂಲವಾಗಿ ಮಾತ್ರವಲ್ಲ ಪ್ರತಿಕೂಲವಾಗಿ ಜಗತ್ತಿನ ಎಲ್ಲಾ ಕಡೆಗಳ ಪ್ರಸಿದ್ಧ ವ್ಯಂಗ ಚಿತ್ರಗಾರರು ಬರೆದ ೨೦೦೦೦ ವ್ಯಂಗ ಚಿತ್ರಗಳನ್ನು ಅವರು ತಮ್ಮ ಅಧ್ಯಕ್ಷತೆಯಲ್ಲಿ ಸಂಗ್ರಹಿಸಿದ್ದರು. ಆ ಸಂಗ್ರಹವನ್ನು ಅವರು ಒಂದು ಪ್ರತ್ಯೇಕ ಕೋಣೆಯಲ್ಲಿ ಭದ್ರವಾಗಿಟ್ಟು ಆ ಕೋಣೆಯನ್ನು 'ಭಯಂಕರ' ಕೋಣೆ ಎಂದು ಕರೆಯುತಿದ್ದರು!

ಸ್ವಾತಂತ್ರ್ಯ ದೇವಿಯ ಮೂರ್ತಿ!

ಅಮೇರಿಕದ ಮುಖ್ಯನಗರ—ನ್ಯೂಯೋರ್ಕದ ಸಮುದ್ರ ದಂಡೆಗೆ ಸಮೀಪದಲ್ಲಿ ಒಂದು ಸಣ್ಣ ದ್ವೀಪವಿದೆ. ಅದನ್ನು ಅಮೇರಿಕನರು ಸ್ವಾತಂತ್ರ್ಯ ದೀಪ' ವೆಂದು ಕರೆಯುತ್ತಿದ್ದಾರೆ. ಇದರಲ್ಲಿಯೇ ಸ್ವಾತಂತ್ರ್ಯ ದೇವಿಯ ಒಂದು ಭೀಮಾಕಾರ ಮೂರ್ತಿಯು ಸ್ಥಾಪಿತವಾಗಿರುವುದು, ಅಮೇರಿಕನರು ಬ್ರಿಟಿಷರ ವಿರುದ್ಧ ಯುದ್ಧ ಮಾಡಿ ಸ್ವತಂತ್ರರಾದೊಡನೆ ಫ್ರಾನ್ಸಿನ ಜನರು ಈ ದೊಡ್ಡ ಮೂರ್ತಿಯನ್ನು ಅಮೇರಿಕನರಿಗೆ ಉಪಹಾರವಾಗಿ ಕೊಟ್ಟಿದ್ದರು. ಮೂರ್ತಿ, ನೆಲದಿಂದ ಬಹು ಎತ್ತರದ ಒಂದು ಕಂಭದ ಮೇಲೆ ಇಡಲ್ಪಟ್ಟಿದೆ. ದೇವಿಯು ತನ್ನ ಕೈಗಳನ್ನು ಎತ್ತಿ ಹಿಡಿದಿರುವಳು. ರಾತ್ರಿಕಾಲದಲ್ಲಿ ಈ ಕೈಗಳಿಂದ ವಿದ್ಯುಚ್ಛಕ್ತಿಯು ಎರಡು ದೊಡ್ಡ ದೀಪಗಳು ಸುತ್ತಲೂ ಬಹು ದೂರದ ತನಕ ಮಹಾ ಪ್ರಕಾಶವನ್ನು ಬೀರುತ್ತವೆ. ಈ ದೀಪಗಳು ನೆಲದಿಂದ ೩೦೫ ಅಡಿ ಎತ್ತರದಲ್ಲಿರುವವು. ದೀಪದ ತನಕ ಹತ್ತಲಿಕ್ಕೆ ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಅಪ್ಪು ಇದೆ. ಮೂರ್ತಿಯ ಶರೀರದೊಳಗಿನಿಂದ ಮೇಲೆ ಕೆಳಗೆ ಹೋಗಿ ಬರಲಿಕ್ಕೂ ಏಣಿಗಳಿವೆ. ಈ ಮೂರ್ತಿಯು ಎಷ್ಟು ದೊಡ್ಡದಾಗಿರುವದೆಂದರೆ, ಇದರ ತಲೆಯ ಒಳಗಿನ ಪ್ರದೇಶದಲ್ಲಿ ೨೦ ಜನರು ಸುಖವಾಗಿ ನಿಂತುಕೊಂಡಿರಲಾಪರು! ಈ ತಲೆಯಲ್ಲಿ ನಿಂತುಕೊಂಡು ಜನರು ಒಂದು ಕಡೆಯಿಂದ ನ್ಯೂಯಾರ್ಕಿನ ಗಗನಚುಂಬಿ ನಗರಗಳನ್ನೂ ಇನ್ನೊಂದು ಕಡೆಯಿಂದ ಯಿಂದ ವಿಶಾಲವಾದ ಅಟ್ಲಾಂಟಿಕ ಮಹಾಸಾಗರವನ್ನೂ ನೋಡಿ ಕಣ್ಣುಗಳಿಗೆ ಹಬ್ಬ ಮಾಡಿಕೊಳ್ಳಲಾಪರು.

ಉದ್ದುದ್ದ ಮಹಿಳೆಯರು

ಸ್ವಾಭಾವಿಕವಾಗಿ ಪುರುಷರಿಗಿಂತ ಸ್ತ್ರೀಯರು ಗಿಡ್ಡವಾಗಿರುತ್ತಾರೆ. ಎಲ್ಲಿಯಾದರೂ ಅಪರೂಪವಾಗಿ ಅವರು ಪುರುಷರಿಗಿಂತ ಒಂದು ಎರಡು ಅಂಗುಲ ಎತ್ತರವಾಗಿರಬಹುದು. ಆದರೆ ಏಳೆಂಟು ವರ್ಷಗಳ ಮೊದಲು ಹೊಲ್ಲಾಂಡದಿಂದ ಇಬ್ಬರು ಮಹಿಳೆಯರು ಇಂಗ್ಲಾಂಡಿಗೆ ಬಂದಿದ್ದರು. ಅವರಲ್ಲಿ ಒಬ್ಬಳು ೮ಅಡಿ ೪ ಅಂಗುಲ ಮತ್ತು ಇನ್ನೊಬ್ಬಳು ೭ಅಡಿ ೪ ಅಂಗುಲ ಎತ್ತರವಾಗಿದ್ದರು. ಸಾಧಾರಣ ಮನುಷ್ಯರ ಎತ್ತರವು ೫ ಅಡಿ ೬ ಅಂಗುಲಕ್ಕಿಂತ ಹೆಚ್ಚಿಗೆ ಇರುವದಿಲ್ಲ. ಈ ಮಹಿಳೆಯರು ಪೇಟೆಯಲ್ಲಿ ಎಲ್ಲೆಲ್ಲಿ ಹೋಗುತಿದ್ದರೋ ಅಲ್ಲಲ್ಲಿ ಅವರನ್ನು ನೋಡುವ ಆತುರದಿಂದ ನೂರಾರು ದರ್ಶಕರ ಸಂದಣಿಯು ಕೂಡಿಬರುತಿತ್ತು. ಅವರೆಲ್ಲರಿಗೆ ಹಣಕೊಡದೆ ಪುಕ್ಕಟೆ ಮನೋರಂಜನೆಯಾಗುತಿತ್ತು. ಆದ್ದರಿಂದ ಅವರಲ್ಲಿ ಕೆಲವರು ಆ ಮಹಿಳೆಯರನ್ನು ಪ್ರದರ್ಶನಕ್ಕಿಟ್ಟು ಹಣಮಾಡುವ ಆಲೋಚನೆ ಕೂಡ ಮಾಡಿದ್ದರು. ಇಷ್ಟು ಉದ್ದದ ಮಹಿಳೆಯರು ಪ್ರಾಯಶಃ ಜಗತ್ತಿನಲ್ಲೇ ಇರಲಾರರು.

ದೀರ್ಘ ಜೀವನ!

೧೨೯ ವರ್ಷ ಆಯುಷ್ಯ!

ಬರ್ನಿಕ ವೀಮಾರಿಸ ಎಂಬಲ್ಲಿ ವಾಸಿಸುತ್ತಿದ್ದ ಪೀರಡೆಫೋರ್ನಲ್ ಎಂಬ ಹೆಸರಿನ ಒಬ್ಬ ವ್ಯಕ್ತಿಗೆ ಮೂವರು ಮಕ್ಕಳಿದ್ದರು. ಇವರು ಮೂವರು ಮಕ್ಕಳು ಮೂರು ಬೇರೆ ಬೇರೆ ಶತಮಾನಗಳಲ್ಲಿ ಹುಟ್ಟಿದ್ದರು! ಮೊದಲನೆಯ ಮಗನು ೧೬೯೯ರಲ್ಲಿ ಅಂದರೆ ೧೭ನೇ ಶತಮಾನದಲ್ಲಿ; ಎರಡನೆಯವನು ೧೭೩೪ರಲ್ಲಿ ಅಂದರೆ ೧೮ನೇ ಶತಮಾನದಲ್ಲಿ; ಮತ್ತು ಮೂರನೆಯವನು ೧೮೦೧ರಲ್ಲಿ ಅಂದರೆ ೧೯ನೇ ಶತಮಾನದಲ್ಲಿ ಹುಟ್ಟಿದ್ದನು. ಡೆಫೋರ್ನಲನು ೧೨೦ ವರ್ಷ ಪ್ರಾಯದಲ್ಲಿ ಮೂರನೆ ಬಾರಿಗೆ ಒಬ್ಬ ಹೆಂಗಸನ್ನು ಮದುವೆಯಾಗಿದ್ದನು. ೧೮೦೯ರಲ್ಲಿ ತನ್ನ ೧೨೯ನೇ ವರ್ಷ ಪ್ರಾಯದಲ್ಲಿ ಇವನು ಸ್ವರ್ಗವಾಸಿಯಾದನು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

GONO KILLER

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇಮೋನ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: Dr. D. N. JASANI, (S.B.M.) Vithalbhai Patel Road, BOMABY 4

Madras Agent: Appah & Co, China Bazar Madras.

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಯಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಉಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಸಿನೆಮಾ ಪ್ರಪಂಚ

ತಾಯಿ ಮಗನನ್ನು ಕೊಂದಳೆ?

ಹಳ್ಳಿಯ ಜೀವನದ ಒಂದು ಸ್ವೈಜಚಿತ್ರ

ಅಖಿಲ ಜಗತ್ತಿನಲ್ಲಿ ಒಂದು ಅತ್ಯಂತ ಅದ್ಭುತ ಶಕ್ತಿಯುಕ್ತ ವ್ಯಕ್ತಿಯೆಂದರೆ ತಾಯಿ! ತಾಯಿಯೆಂಬ ಮಾತಿನಲ್ಲಿಯೂ ಜಗದ ಸ್ವಾರಸ್ಯವು ಅಡಗಿದೆ! ಜೀವನದ ತತ್ವವು ಆ ಮಾತಿನಲ್ಲಿದೆ! ಜೀವಲೋಕದ ಇತಿಹಾಸವು ಆ ಎರಡು ಅಕ್ಷರಗಳಲ್ಲಿ ಅಡಗಿಯಲ್ಪಟ್ಟಿದೆ!

ಪಾಪಿಯಾಗಲಿ, ಪುಣ್ಯವಂತನಾಗಲಿ, ಜೀವಲೋಕದ ಆದಿಯಿಂದ ಪ್ರತಿಯೊಬ್ಬ ಪ್ರಾಣಿಯೂ ತಾಯಿಯ ಋಣವನ್ನು ಸಲ್ಲಿಸದೆ ಇರಲು ಸಾಧ್ಯವೇ ಇಲ್ಲ!

ಅಂತೆಯೇ, ಸುಂದರನಿರಲಿ, ಕುರೂಪಿಯಿರಲಿ, ಬಡವನಿರಲಿ, ರಾಜನಿರಲಿ, ಗುಣವಂತನಿರಲಿ, ಗುಣಹೀನನಿರಲಿ, ತಾಯಿಗೆ ಮಗನೆಂದರೆ ವಾತ್ಸಲ್ಯವೆಷ್ಟು?

ಜಗತ್ತೇ ಒಬ್ಬನನ್ನು ದ್ವೇಷಿಸಲಿ, ತಾಯಿ ಆತನ ತಪ್ಪುಮಾಡಲಾರನೆಂದು ಆತನನ್ನು ಬಿಕ್ಕಿದ ಮಮತೆಯಲ್ಲಿ ಪ್ರೀತಿಸುವಳು.

ಹೀಗೆ ತಾಯಿಯ ವಾತ್ಸಲ್ಯ ಒಂಥವಿದೆ! ಆದರೆ ನೇಶನಲ್ ಸ್ಟುಡಿಯೋದವರು ತಯಾರಿಸಿದ "ಹೆಂಗಸು" ಎಂಬ ಚಿತ್ರದಲ್ಲಿ ತಾಯಿ ತನ್ನ ಕೈಯಿಂದ ಮಗನನ್ನೇ ಕೊಂದಳೆಂದರೆ ಇದಕ್ಕಿಂತ ಬೆರಗಾದ ಆಶ್ಚರ್ಯವೆಲ್ಲಿ?

ಮಗನನ್ನು ತಾಯಿ ಹೇಗೆ ಕೊಲ್ಲಬಲ್ಲಳು? ಪ್ರತಿಯೊಬ್ಬನಿಗೂ ಇದೇ ಸಮಸ್ಯೆ! ಚಿತ್ರವನ್ನು ನೋಡಿದವರು, ಒಂದು ವಿಷಾದಕರ ಘಟನೆಯನ್ನು ಕಂಡು ಮನ ಮರುಗುವರು. ಅದರೊಡನೆಯೇ ಚಿತ್ರದ ನೈಜ ಸೌಂದರ್ಯಕ್ಕಾಗಿ ತಲೆ ದೂಗುವರು!

'ಹೆಂಗುಸು' ಚಿತ್ರದ ತಯಾರಿಯ ಕಥೆ

ನಿರ್ದೇಶಕ ಮೆಹಬೂಬರು ತಾನು ನಿರ್ದೇಶಿಸಿದ "ಹೆಂಗುಸು" ಎಂಬ ಹಳ್ಳಿಯ ಜೀವನವನ್ನು ಚಿತ್ರಿಸುವ ಆ ಕಥೆಯ ಕುರಿತು ಬಹಳ ಚಲೋ ಸುದ್ದಿಯೊಂದನ್ನು ಹೀಗೆ ತಿಳಿಸುತ್ತಾರೆ

"ಒಂದೇ ಮಾರ್ಗ" ಎಂಬ ಚಿತ್ರವನ್ನು ತಯಾರಿಸಿದ ಮೇಲೆ ಅವರು ತನ್ನ ಊರಿಗೆ ತೆರಳಿದರು. ಒಟ್ಟಿಗೆ ಒಬ್ಬ ಅವರ ಗೆಳೆಯರೂ ಇದ್ದರು. ಅವರ ಗೆಳೆಯರು ಪೇಟೆಯಲ್ಲಿಯೇ ಬೆಳೆದು, ಪಟ್ಟಣದ ಶಾಲೆಯಲ್ಲಿ ವಿದ್ಯಾಭ್ಯಾಸ ಹೊಂದಿದವರಾಗಿ, ಮೋಟಾರು ಕಾರಿನಲ್ಲಿಯೇ ತಿರುಗಾಡಿದವರಲ್ಲದೆ, ಹಳ್ಳಿಯ ಜೀವನದ ವಿಷಯ ಏನೂ ತಿಳಿದವರಾಗಿರಲಿಲ್ಲ.

ಶಾಂತಾ ಆಪ್ಟೆ ಮತ್ತು ರಾಮ ಮರಾಠೆ

ಹಳ್ಳಿಗೆ ಹತ್ತಿರ ಬಂದಂತೆ, ಅವರ ಗೆಳೆಯರು, ತಾವು ಉಣ್ಣುವ ಅಕ್ಕಿಯು ಆಗುವ 'ಮರ'ವನ್ನು ತನಗೆ ತೋರಿಸಬೇಕೆಂದರಂತೆ! ಮೆಹಬೂಬರು ತನ್ನ ಗೆಳೆಯನನ್ನು ಎರಡು ಸಲ ದಿಟ್ಟಿಸಿನೋಡಿದರಂತೆ! ತನ್ನನ್ನು ಗೆಳೆಯನು ತಮಾಷೆ ಮಾಡುವುದೇ ಎಂದು ಅವರ ಶಂಕೆಯಾಗಿತ್ತು!

ಒಂದು ಹೊಸ ವಿಚಾರ

ಆದರೆ ತನ್ನ ಗೆಳೆಯನು ಹೇಳಿದ ಮಾತು ತಮಾಷೆಯಾಗಿರದೆ, ಅಜ್ಞಾನದಿಂದು ತಿಳಿದಾಗ, ಅವರಿಗೆ ತನ್ನ ಗೆಳೆಯನ ಅಜ್ಞಾನದ ಕುರಿತು ನಿಜವಾಗಿ ಮರುಕಹುಟ್ಟಿತು

ಆಗ ಗದ್ದೆಗಳಲ್ಲಿ ಬೆಳೆ ತುಂಬಿತ್ತು ಕೊಯಿಲಿನ ಸಮಯ. ಮಿತ್ರನಿಗೆ ಅಕ್ಕಿಯುಂಟಾಗುವ 'ಮರ'ವನ್ನು ತೋರಿಸಿದರು! ಆತನು ಅದು ಬರಿಯ ಹುಲ್ಲಿನಂತಿರುವುದನ್ನು ನೋಡಿ ಅಚ್ಚರಿಗೊಂಡನು!

ಆಗ ಆ ಚಲಚ್ಚಿತ್ರ ನಿರ್ದೇಶಕರಿಗೆ 'ಹೆಂಗುಸು' (woman) ಚಿತ್ರದ ಕಥೆ ಹೊಳೆಯಿತು. ಅದರಲ್ಲಿ ಭಾರತದ ಹಳ್ಳಿಯ ಚಿತ್ರವೊಂದನ್ನು ಯಥಾವತ್ತಾಗಿ ಚಿತ್ರಿಸಿರುವರು. "ನಾನು ಈ ಪೇಟೆಯ ಜನಗಳಿಗೆ, ಹಳ್ಳಿಯ ನೈಜ ಸುಂದರ ಚಿತ್ರವನ್ನು ತೋರಿಸಬೇಕು; ನಿಜವಾದ ಭಾರತವು ಹೇಗಿದೆಯೆಂಬುದನ್ನು ನಾನು ಅವರ ಕಣ್ಣ ಮುಂದೆ ನಲಿಯುವಂತೆ ಮಾಡಬೇಕು. ಅವರ ಅಕ್ಕಿಯ 'ಮರ'ವು ನಿಜವಾಗಿ ಹೇಗಿರುತ್ತದೆಯೆಂಬುದನ್ನು ನಾನು ಅವರಿಗೆ ತೋರಿಸಬೇಕು. ನಾನು ಅದನ್ನು ಮಾಡುವೆನು" ಹೀಗೆಂದು ತಾನು ನಿರ್ದೇಶಿಸುವ ಚಿತ್ರದ ಕುರಿತು ಮೆಹಬೂಬರೇ ಬರೆಯುತ್ತಾರೆ.

ಪ್ರಭಾತ ನಗರದಿಂದ ಧ್ಯಾನೇಶ್ವರ.

ಧ್ಯಾನೇಶ್ವರವು ಉತ್ತರ ಹಿಂದೂಸ್ಥಾನದಲ್ಲಿ ಅತ್ಯಂತ ಜನಪ್ರಿಯವಾಗಿ ಪ್ರಚಲಿತವಾಗುತ್ತಿದೆ

ಸಂತಸಖೂ

"ಸಂತಸಖೂ" ಚಿತ್ರದ ಕಥೆಯ ಸ್ನ ಶ್ರೀ ವಶೀಕರರು ಈಗ ಬರೆದು ಮುಗಿಸಿರುವರು

ರಾಮಶಾಸ್ತ್ರಿ

ರಾಮ ಶಾಸ್ತ್ರಿ ಚಿತ್ರವು ತಯಾರಿಸಲು ಶ್ರೀ ಶಾಂತಾರಾಮರು ಸಿದ್ಧರಾಗಿರುವರು

ಶೇಜಾರಿ

ಪಡೋಶಿಯ ಮರಾಠೀ ರೂಪಾಂತರ ಶೇಜಾರಿಯು ತಯಾರಾಗುತ್ತಲಿದೆ

ತಮಿಳು ಚಿತ್ರದಲ್ಲಿ ಶಾಂತಾ ಆಪ್ಟೆ

ಪ್ರಭಾತ ಚಿತ್ರ ಕಂಪನಿಯ ಸುಪ್ರಸಿದ್ಧ ನಟಿ ಶಾಂತಾ ಆಪ್ಟೆಯು ಹರಿಶ್ಚಂದ್ರ ಎಂಬ ತಮಿಳು ಚಿತ್ರದಲ್ಲಿ ಪಾತ್ರವಹಿಸುವಳು. 'ರಾಯಲ್ ಟಾಕಿ ಡಿಸ್ಟ್ರಿಬ್ಯೂಟರ್ಸ್' ಈ ಚಿತ್ರದ ನಿರ್ಮಾಪಕರು ಶ್ರೀ ವೈ ವಿ ರಾವ್, ಇವರು ನಿರ್ದೇಶಿಸುವರು.

ಬಾಲ್ಯವಿವಾಹ

ಸಹಸ್ರಾಕೃತಿಯ ರಾಮಕುಮಾರರ (ಕನ್ನಡಿಗರು ಇವರ) ಚಿತ್ರ ಬಾಲ್ಯವಿವಾಹವು ಎಂ. ಪಿ ಸಿ ಸಿ.ಯಲ್ಲಿ ತಯಾರಾಗುತ್ತಿದೆ. ಈ ಕಥೆಯನ್ನು ಬರೆದವರೂ ಅವರೇ. ಇದು ತಮಿಳು ಚಿತ್ರ. ರಾಮಕುಮಾರರೂ ಇದರಲ್ಲಿ ಪಾತ್ರವಹಿಸುವರು

ಅಂಧಿ

ನ್ಯೂ ಥಿಯೇಟರ್‍ಸ್‌ನ 'ಅಂಧಿ'ಯು ಈ ವರ್ಷದ ಅತ್ಯುತ್ತಮ ಚಿತ್ರಗಳಲ್ಲಿ ಒಂದಾಗಿರುವುದಾಗಿ ತಿಳಿದಿದೆ.

ಪಂಡಿತ ತಾರಾನಾಥರ **ಸ್ವಲ್ಪ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ಕರಿಸುವವರಿಗೆ—ವಿ. ಪಿ. ಛಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ. ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ಸಮ್ಮತಿ ಚಾರ್ಜಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು. ಸೋಲ್ ಏಜೆಂಟ್ಸ್:

ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು. **ಪ್ರೇಮ ಮೆಡಿಕಲ್ ಹಾಲ್,** ಪುತ್ತೂರ್ ದ. ಕ.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು ಬ್ರಾಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ 1,00,000. ತೆರಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% " 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ವಿಚಿತ್ರ - ಪ್ರಪಂಚ

ಹೆಣ್ಣಿಗಾಗಿ ೧೯ ವರ್ಷಗಳ ತನಕ ಹೋರಾಡುತ್ತ ಇದ್ದರು!

ಸನ್ ೧೮೯೪ರಲ್ಲಿ ಫ್ರಾನ್ಸಿನ ಒಂದು ಸುಪ್ರಸಿದ್ಧ ನೃತ್ಯಶಾಲೆಯಲ್ಲಿ ಒಬ್ಬ ಸುಂದರ ಸ್ತ್ರೀಯ ಕುರಿತು ಕೆಪ್ಟನ್ ಪ್ರೊರನಿಯರ ಮತ್ತು ಮೇಜರ ಡೋ ಪೋರಟ ಎಂಬಿಬ್ಬರು ಅಧಿಕಾರಗಳೊಳಗೆ ಕಲಹ ಪ್ರಾರಂಭವಾಯಿತು. ಇಬ್ಬರೂ ಆ ಸ್ತ್ರೀಯನ್ನು ಪ್ರೀತಿಸುತ್ತಿದ್ದರು. ಆದ್ದರಿಂದ ಅವಳು ಯಾರ ಕೈಯನ್ನು ಹಿಡಿಯಬೇಕೆಂಬುದರ ಕುರಿತು ನಿಷ್ಕರ್ಷೆಯಾಗಲಿಲ್ಲ. ಇಬ್ಬರೂ ದೊಡ್ಡ ಹಠವಾದಿಗಳಾಗಿದ್ದರು ಇಬ್ಬರೂ ಪ್ರೇಮ ವ್ಯವಹಾರದಿಂದ ನಿರಾಶರಾಗಿದ್ದರು. ಆದ್ದರಿಂದ ೨೦ ಮೈಲುಗಳ ವರ್ತುಲದಲ್ಲಿ ಅವರಿಬ್ಬರೂ ಎಲ್ಲಿ ಪರಸ್ಪರ ಸಂಧಿಸಿದ್ದರೂ ಪರಸ್ಪರ ಹೋರಾಡುವೆವೆಂದು ಪ್ರತಿಕಾರದ ಪ್ರತಿಜ್ಞೆಯನ್ನು ತೆಗೆದುಕೊಂಡರು. ಆ ಪ್ರಕಾರ ಅವರು ೧೯ ವರ್ಷಗಳ ತನಕ ಆ ನೃತ್ಯಶಾಲೆಯ ೧೯ ಮೈಲುಗಳ ವರ್ತುಲದಲ್ಲಿ ಎಲ್ಲಿ ಸಂಧಿಸಿದರಲ್ಲಿ ಪರಸ್ಪರ ಹೋರಾಡುತ್ತ ಇದ್ದರು—ತಾವು ಮೆಚ್ಚಿನ ಒಬ್ಬ ನರ್ತಕಿಯ ಸಲುವಾಗಿ!

ವಿಚಿತ್ರ ಅಭಿರುಚಿ

ಅಭಿರುಚಿಯಲ್ಲಿಯೂ ವೈಚಿತ್ರ್ಯವಿದೆ! ವೈಚಿತ್ರಕ್ಕೂ ಒಂದು ಪಾರವಿಲ್ಲ. ಪಾಟಿಯಾಲಾ ಅರಸರು ತಮ್ಮ ನಾಯಿ ಪ್ರೇಮಕ್ಕಾಗಿ ಜಗತ್ಪ್ರಸಿದ್ಧರಾಗಿದ್ದಾರೆ! ಸರ್ ಆಗಖಾನರು ಕುದುರೆ ಓಟದಲ್ಲಿ ಹೆಸರು ಪಡೆದಿರುವರು. ಹೈದರಾಬಾದಿನ ನಿಜಾಮರಿಗೆ ಮನೆಕಟ್ಟುವುದರಲ್ಲಿ ಅತಿಶಯ ಪ್ರೇಮ! ಆದರೆ ಎಲ್ಲಕ್ಕೂ ವಿಚಿತ್ರ ಅಭಿಯವರು ಅಮೇರಿಕದ ಮಾಜಿ ಪ್ರೆಸಿಡೆಂಟ ಹೂವರರಾಗಿದ್ದರು. ಅವರು ತಮ್ಮ ಪರವಾದ ವ್ಯಂಗ್ಯ ಚಿತ್ರಗಳನ್ನು ಬೆಲೆಕೊಟ್ಟು ಕೂಡ ಸಂಗ್ರಹಿಸಿ ಇಡುತ್ತಿದ್ದರಂತೆ. ಅವರಿಗೆ ಅನುಕೂಲವಾಗಿ ಮಾತ್ರವಲ್ಲ ಪ್ರತಿಕೂಲವಾಗಿ ಜಗತ್ತಿನ ಎಲ್ಲಾ ಕಡೆಗಳ ಪ್ರಸಿದ್ಧ ವ್ಯಂಗ ಚಿತ್ರಗಾರರು ಬರೆದ ೨೦೦೦೦ ವ್ಯಂಗ ಚಿತ್ರಗಳನ್ನು ಅವರು ತಮ್ಮ ಅಧ್ಯಕ್ಷತೆಯಲ್ಲಿ ಸಂಗ್ರಹಿಸಿದ್ದರು. ಆ ಸಂಗ್ರಹವನ್ನು ಅವರು ಒಂದು ಪ್ರತ್ಯೇಕ ಕೋಣೆಯಲ್ಲಿ ಭದ್ರವಾಗಿಟ್ಟು ಆ ಕೋಣೆಯನ್ನು 'ಭಯಂಕರ' ಕೋಣೆ ಎಂದು ಕರೆಯುತ್ತಿದ್ದರು!

ಸ್ವಾತಂತ್ರ್ಯ ದೇವಿಯ ಮೂರ್ತಿ!

ಅಮೇರಿಕದ ಮುಖ್ಯನಗರ—ನ್ಯೂಯೋರ್ಕದ ಸಮುದ್ರ ದಂಡೆಗೆ ಸಮೀಪದಲ್ಲಿ ಒಂದು ಸಣ್ಣ ದ್ವೀಪವಿದೆ. ಅದನ್ನು ಅಮೇರಿಕನರ ಸ್ವಾತಂತ್ರ್ಯ ದ್ವೀಪ ವೆಂದು ಕರೆಯುತ್ತಿದ್ದಾರೆ. ಇದರಲ್ಲಿಯೇ ಸ್ವಾತಂತ್ರ್ಯ ದೇವಿಯ ಒಂದು ಭೀಮಕಾಯ ಮೂರ್ತಿಯು ಸ್ಥಾಪಿತವಾಗಿರುವುದು. ಅಮೇರಿಕನರು ಬ್ರಿಟನರ ವಿರುದ್ಧ ಯುದ್ಧ ಮಾಡಿ ಸ್ವತಂತ್ರರಾದೊಡನೆ ಫ್ರಾನ್ಸಿನ ಜನರು ಈ ದೊಡ್ಡ ಮೂರ್ತಿಯನ್ನು ಅಮೇರಿಕನರಿಗೆ ಉಪಹಾರವಾಗಿ ಕೊಟ್ಟಿದ್ದರು. ಮೂರ್ತಿ, ನೆಲದಿಂದ ಬಹು ಎತ್ತರ ಒಂದು ಕಂಭದ ಮೇಲೆ ಇಡಲ್ಪಟ್ಟಿದೆ. ದೇವಿಯು ತನ್ನ ಕೈಗಳನ್ನು ಎತ್ತಿ ಹಿಡಿದಿರುವಳು. ರಾತ್ರಿಕಾಲದಲ್ಲಿ ಈ ಕೈಗಳಿಂದ ವಿದ್ಯುಚ್ಛಕ್ತಿಯ ಎರಡು ದೊಡ್ಡ ದೀಪಗಳು ಸುತ್ತಲೂ ಬಹು ದೂರದ ತನಕ ಮಹಾ ಪ್ರಕಾಶವನ್ನು ಬೀರುತ್ತವೆ. ಈ ದೀಪಗಳು ನೆಲದಿಂದ ೩೦೫ ಅಡಿ ಎತ್ತರದಲ್ಲಿರುವವು. ದೀಪದ ತನಕ ಹತ್ತಲಿಕ್ಕೆ ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಅಷ್ಟು ಇದೆ. ಮೂರ್ತಿಯ ಶರೀರದೊಳಗಿನಿಂದ ಮೇಲೆ ಕೆಳಗೆ ಹೋಗಿ ಬರಲಿಕ್ಕೂ ಏಣಿಗಳಿವೆ. ಈ ಮೂರ್ತಿಯು ಎಷ್ಟು ದೊಡ್ಡದಾಗಿರುವದೆಂದರೆ, ಇದರ ತಲೆಯ ಒಳಗಿನ ಪ್ರದೇಶದಲ್ಲಿ ೨೦ ಜನರು ಸುಖವಾಗಿ ನಿಂತು ಕೊಂಡಿರಲಾಪರು! ಈ ತಲೆಯಲ್ಲಿ ನಿಂತುಕೊಂಡು ಜನರು ಹಿಂದಿನ ಕಡೆಯಿಂದ ನ್ಯೂ ಯಾರ್ಕಿನ ಗಗನಚುಂಬಿ ನಗರಗಳನ್ನೂ ಇನ್ನೊಂದು ಕಡೆಯಿಂದ ವಿಶಾಲವಾದ ಅಟ್ಲಾಂಟಿಕ ಮಹಾಸಾಗರವನ್ನೂ ನೋಡಿ ಕಣ್ಣುಗಳಿಗೆ ಹಬ್ಬ ಮಾಡಿಕೊಳ್ಳಲಾಪರು.

ಉದ್ದುದ್ದ ಮಹಿಳೆಯರು

ಸಾಮಾನ್ಯವಾಗಿ ಪುರುಷರಿಗಿಂತ ಸ್ತ್ರೀಯರು ಗಿಡ್ಡವಾಗಿರತ್ತಾರೆ. ಎಲ್ಲಿಯಾದರೂ ಅಪರೂಪವಾಗಿ ಅವರು ಪುರುಷರಿಗಿಂತ ಒಂದು ಎರಡು ಅಂಗುಲ ಎತ್ತರವಾಗಿರಬಹುದು. ಆದರೆ ಏಳೆಂಟು ವರ್ಷಗಳ ಮೊದಲು ಹೊಲ್ಲಾಂಡದಿಂದ ಇಬ್ಬರು ಮಹಿಳೆಯರು ಇಂಗ್ಲಾಂಡಿಗೆ ಬಂದಿದ್ದರು. ಅವರಲ್ಲಿ ಒಬ್ಬಳು ೮ ಅಡಿ ೪ ಅಂಗುಲ ಮತ್ತು ಇನ್ನೊಬ್ಬಳು ೭ ಅಡಿ ೪ ಅಂಗುಲ ಎತ್ತರವಾಗಿದ್ದರು. ಸಾಧಾರಣ ಮನುಷ್ಯರ ಎತ್ತರವು ೫ ಅಡಿ ೬ ಅಂಗುಲಕ್ಕಿಂತ ಹೆಚ್ಚಿಗೆ ಇರುವದಿಲ್ಲ. ಈ ಮಹಿಳೆಯರು ಪೇಟೆಯಲ್ಲಿ ಎಲ್ಲೆಲ್ಲಿ ಹೋಗುತ್ತಿದ್ದರೋ ಅಲ್ಲಲ್ಲಿ ಅವರನ್ನು ನೋಡುವ ಆತುರದಿಂದ ನೂರಾರು ದರ್ಶಕರ ಸಂದಣಿಯು ಕೂಡಿಬರುತ್ತಿತ್ತು. ಅವರೆಲ್ಲರಿಗೆ ಹಣಕೊಡದೆ ಪುಕ್ಕಟೆ ಮನೋರಂಜನೆಯಾಗುತ್ತಿತ್ತು. ಆದ್ದರಿಂದ ಅವರಲ್ಲಿ ಕೆಲವರು ಆ ಮಹಿಳೆಯರನ್ನು ಪ್ರದರ್ಶನಕ್ಕಿಟ್ಟು ಹಣಮಾಡುವ ಆಲೋಚನೆ ಕೂಡ ಮಾಡಿದ್ದರು. ಇಷ್ಟು ಉದ್ದದ ಮಹಿಳೆಯರು ಪ್ರಾಯಶಃ ಜಗತ್ತಿನಲ್ಲೇ ಇರಲಾರರ.

ದೀರ್ಘ ಜೀವನ!

೧೨೫ ವರ್ಷ ಆಯುಸ್ಸು!

ಓರ್ಗನ ಪೀಟಾರಿಸಬರ್ಗದಲ್ಲಿ ವಾಸಿಸುತ್ತಿದ್ದ ಲೀಡಡೆಫ್ಲೊರ್ನಲ್ ಎಂಬ ಹೆಸರಿನ ಒಬ್ಬ ವ್ಯಕ್ತಿಗೆ ಮೂವರು ಮಕ್ಕಳಿದ್ದರು. ಇವರ ಮೂವರು ಮಕ್ಕಳು ಮೂರು ಬೇರೆ ಬೇರೆ ಶತಮಾನಗಳಲ್ಲಿ ಹುಟ್ಟಿದ್ದರು! ಮೊದಲನೆಯ ಮಗನು ೧೭೯೯ರಲ್ಲಿ ಅಂದರೆ ೧೮ನೇ ಶತಮಾನದಲ್ಲಿ, ಎರಡನೆಯವನು ೧೮೩೦ರಲ್ಲಿ ಅಂದರೆ ೧೯ನೇ ಶತಮಾನದಲ್ಲಿ ಮತ್ತು ಮೂರನೆಯವನು ೧೯೦೧ರಲ್ಲಿ ಅಂದರೆ ೨೦ನೇ ಶತಮಾನದಲ್ಲಿ ಹುಟ್ಟಿದ್ದನು. ಡೆಫ್ಲೊರ್ನಲನು ೧೦೦ ವರ್ಷ ಪ್ರಾಯದಲ್ಲಿ ಮೂರನೆ ಬಾರಿಗೆ ಒಬ್ಬ ಹೆಂಗಸನ್ನು ಮದುವೆಯಾಗಿದ್ದನು. ೧೯೦೫ರಲ್ಲಿ ತನ್ನ ೧೨೫ನೇ ವರ್ಷ ಪ್ರಾಯದಲ್ಲಿ ಇವನು ಸ್ವರ್ಗವಾಸಿಯಾದನು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಪನ್ನಿ ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊರಿಯಾ ಎಂಬ ವಿಷಜ್ವರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಛಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4.

Sole Manufacturer: Dr. D. N. JASANI, (S.B.M.) Vithalbhai Patel Road, BOMABY 4

Madras Agent: Appah & Co, China Bazar Madras.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಯಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಉಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಮಂಗಳೂರಿನ ಪೇಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

ಸಿನೆಮಾ ಪುಟ

ತಾಯಿ ಮಗನನ್ನು ಕೊಂದಳೇ?

ಹಳ್ಳಿಯ ಜೀವನದ ಒಂದು ನೈಜಚಿತ್ರ

ಅಖಿಲ ಜಗತ್ತಿನಲ್ಲಿ ಒಂದು ಅತ್ಯಂತ ಅದ್ಭುತ ಶಕ್ತಿಯ ವ್ಯಕ್ತಿಯೆಂದರೆ ತಾಯಿ! ತಾಯಿಯೆಂಬ ಮಾತಿನಲ್ಲಿಯೂ ಜಗದ ಸ್ವಾರಸ್ಯವು ಅಡಗಿದೆ! ಜೀವನದ ಕಾವ್ಯವು ಆ ಮಾತಿನಲ್ಲಿದೆ! ಜೀವಲೋಕದ ಇತಿಹಾಸವು ಆ ಎರಡು ಅಕ್ಷರಗಳಲ್ಲಿ ಬರೆಯಲ್ಪಟ್ಟಿದೆ!

ಪಾಪಿಯಾಗಲಿ, ಪುಣ್ಯವಂತನಾಗಲಿ, ಜೀವಲೋಕದ ಆದಿಯಿಂದ ಪ್ರತಿಯೊಬ್ಬ ಪ್ರಾಣಿಯೂ ತಾಯಿಯ ಋಣವನ್ನು ಸಲ್ಲಿಸದೆ ಇರಲು ಸಾಧ್ಯವೇ ಇಲ್ಲ!

ಅಂತೆಯೇ, ಸುಂದರನಿರಲಿ, ಕುರೂಪಿಯಿರಲಿ, ಬಡವನಿರಲಿ, ರಾಜನಿರಲಿ, ಗುಣವಂತನಿರಲಿ, ಗುಣಹೀನರಲಿ, ತಾಯಿಗೆ ಮಗನೆಂದರೆ ವಾತ್ಸಲ್ಯವೆಷ್ಟು?

ಜಗತ್ತೇ ಒಬ್ಬನನ್ನು ದ್ವೇಷಿಸಲಿ, ತಾಯಿ ಆತನು ತಪ್ಪುಮಾಡಲಾರನೆಂದು ಆತನನ್ನು ನಿಃಕ್ಕಿದ ಮಮತೆಯಲ್ಲಿ ಪ್ರೀತಿಸುವಳು.

ಹೀಗೆ ತಾಯಿ ಮಕ್ಕಳ ಸಂಬಂಧವಿದೆ! ಆದರೆ ನೇಶನಲ್ ಸ್ಟುಡಿಯೋದವರು ತಯಾರಿಸಿದ "ಹೆಂಗಸು" ಎಂಬ ಚಿತ್ರದಲ್ಲಿ ತಾಯಿ ತನ್ನ ಕೈಯಿಂದ ಮಗನನ್ನೇ ಕೊಂದಳೆಂದರೆ?

ಇದಕ್ಕಿಂತ ಮಿಗಿಲಾದ ಆಶ್ಚರ್ಯವೆಲ್ಲಿ?

ಮಗನನ್ನು ತಾಯಿ ಹೇಗೆ ಕೊಲ್ಲಬಲ್ಲಳು? ಪ್ರತಿಯೊಬ್ಬನಿಗೂ ಇದೇ ಸಮಸ್ಯೆ! ಚಿತ್ರವನ್ನು ನೋಡಿದವರು, ಒಂದು ವಿಷಾದಕರ ಘಟನೆಯನ್ನು ಕಂಡು ಮನ ಮರುಗುವರು! ಅದರೊಡನೆಯೇ ಚಿತ್ರದ ನೈಜ ಸೌಂದರ್ಯಕ್ಕಾಗಿ ತಲೆದೂಗುವರು!

'ಹೆಂಗುಸು' ಚಿತ್ರದ ತಯಾರಿಯ ಕಥೆ

ನಿರ್ದೇಶಕ ಮೆಹಬೂಬರು ತಾನು ನಿರ್ದೇಶಿಸಿದ "ಹೆಂಗುಸು" ಎಂಬ ಹಳ್ಳಿಯ ಜೀವನವನ್ನು ಚಿತ್ರಿಸುವ ಆ ಕಥೆಯ ಕುರಿತು ಬಹಳ ಚಲೋ ಸುದ್ದಿಯೊಂದನ್ನು ಹೀಗೆ ತಿಳಿಸುತ್ತಾರೆ.

"ಒಂದೇ ಮಾರ್ಗ" ಎಂಬ ಚಿತ್ರವನ್ನು ತಯಾರಿಸಿದ ಮೇಲೆ ಅವರು ತಮ್ಮ ಊರಿಗೆ ತೆರಳಿದರು, ಒಟ್ಟಿಗೆ ಒಬ್ಬ ಅವರ ಗೆಳೆಯರೂ ಇದ್ದರು. ಅವರ ಗೆಳೆಯರು ಪೇಟೆಯಲ್ಲಿಯೇ ಬೆಳೆದು, ಪಟ್ಟಣದ ಶಾಲೆಯಲ್ಲಿ ವಿದ್ಯಾಭ್ಯಾಸ ಹೊಂದಿದವರಾಗಿ, ಮೋಟಾರು ಕಾರಿನಲ್ಲಿಯೇ ತಿರುಗಾಡಿದವರಲ್ಲದೆ, ಹಳ್ಳಿಯ ಜೀವನದ ವಿಷಯ ಏನೂ ತಿಳಿದವರಾಗಿರಲಿಲ್ಲ.

ಮಾಡುವುದೇ ಎಂದು ಅವರ ಶಂಕೆಯಾಗಿತ್ತು!

ಒಂದು ಹೊಸ ವಿಚಾರ

ಆದರೆ, ತನ್ನ ಗೆಳೆಯನು ಹೇಳಿದ ಮಾತು ತಮಾಷೆಯಾಗಿರದೆ, ಅಜ್ಞಾನದ್ದೆಂದು ತಿಳಿದಾಗ, ಅವರಿಗೆ ತನ್ನ ಗೆಳೆಯನ ಅಜ್ಞಾನದ ಕುರಿತು ನಿಜವಾಗಿ

ಶಾಂತಾ ಆಪ್ಟೆ ಮತ್ತು ರಾಮು ಮರಾಠೆ

ಹಳ್ಳಿಗೆ ಹತ್ತಿರ ಬಂದಂತೆ, ಅವರ ಗೆಳೆಯರು, ತಾವು ಉಣ್ಣುವ ಅಕ್ಕಿಯು ಆಗುವ 'ಮರ'ವನ್ನು ತನಗೆ ತೋರಿಸಬೇಕೆಂದರಂತೆ! ಮೆಹಬೂಬರು ತನ್ನ ಗೆಳೆಯನನ್ನು ಎರಡು ಸಲ ದಿಟ್ಟಿಸಿನೋಡಿದರಂತೆ! ತನ್ನನ್ನು ಗೆಳೆಯನು ತಮಾಷೆ

ಮರುಕಹುಟ್ಟಿತು.

ಆಗ ಗದ್ದೆಗಳಲ್ಲಿ ಬೆಳೆ ತುಂಬಿತ್ತು. ಕೊಯಿಲಿನ ಸಮಯ. ಮಿತ್ರನಿಗೆ ಅಕ್ಕಿಯುಂಟಾಗುವ 'ಮರ'ವನ್ನು ತೋರಿಸಿದರು! ಆತನು ಅದು ಬರಿಯ ಹುಲ್ಲಿನಂತಿರುವುದನ್ನು ನೋಡಿ ಆಶ್ಚರ್ಯಗೊಂಡನು!

ಆಗ ಆ ಚಲಚ್ಚಿತ್ರ ನಿರ್ದೇಶಕರಿಗೆ 'ಹೆಂಗುಸು' (woman) ಚಿತ್ರದ ಕಥೆ ಹೊಳೆಯಿತು. ಅದರಲ್ಲಿ ಭಾರತದ ಹಳ್ಳಿಯ ಚಿತ್ರವೊಂದನ್ನು ಯಥಾವತ್ತಾಗಿ ಚಿತ್ರಿಸಿರುವರು. 'ನಾನು ಈ ಪೇಟೆಯ ಜನರಿಗೆ, ಹಳ್ಳಿಯ ನೈಜ ಸುಂದರ ಚಿತ್ರವನ್ನು ತೋರಿಸಬೇಕು; ನಿಜವಾದ ಭಾರತವು ಹೇಗಿದೆಯೆಂಬುದನ್ನು ನಾನು ಅವರ ಕಣ್ಣು ಮುಂದೆ ನಲಿಯುವಂತೆ ಮಾಡಬೇಕು. ಅವರ ಅಕ್ಕಿಯ 'ಮರ'ವು ನಿಜವಾಗಿ ಹೇಗಿರುತ್ತದೆಯೆಂಬುದನ್ನು ನಾನು ಅವರಿಗೆ ತೋರಿಸಬೇಕು. ನಾನು ಅದನ್ನು ಮಾಡುವೆನು" ಹೀಗೆಂದು ತಾನು ನಿರ್ದೇಶಿಸುವ ಚಿತ್ರದ ಕುರಿತು ಮೆಹಬೂಬರೇ ಬರೆಯುತ್ತಾರೆ:

ಪ್ರಭಾತ ನಗರದಿಂದ ಧ್ಯಾನೇಶ್ವರ.

ಧ್ಯಾನೇಶ್ವರವು ಉತ್ತರ ಹಿಂದೂಸ್ಥಾನದಲ್ಲಿ ಅತ್ಯಂತ ಜನಪ್ರಿಯವಾಗಿ ಪ್ರಚಲಿತವಾಗುತ್ತಿದೆ.

ಸಂತಸಖೂ

"ಸಂತಸಖೂ" ಚಿತ್ರದ ಕಥೆಯನ್ನು ಶ್ರೀ ಪಠೀಕರರು ಈಗ ಬರೆದು ಮುಗಿಸಿರುವರು.

ರಾಮಶಾಸ್ತ್ರಿ

"ರಾಮಶಾಸ್ತ್ರಿ" ಚಿತ್ರವನ್ನು ತಯಾರಿಸಲು ಶ್ರೀ ವಿನಾಯಕರು ಸಿದ್ಧರಾಗಿರುವರು.

ಶೇಜಾರಿ

ಪ್ರಭಾತದ ಮರಾಠೀ ಭಾಷಾಂತರ ಶೇಜಾರಿಯು ತಯಾರಾಗುತ್ತಲಿದೆ.

ತಮಿಳು ಚಿತ್ರದಲ್ಲಿ ಶಾಂತಾ ಆಪ್ಟೆ

ಪ್ರಭಾತ ಚಿತ್ರ ಕಂಪನಿಯ ಸುಪ್ರಸಿದ್ಧ ನಟಿ ಶಾಂತಾ ಆಪ್ಟೆಯು ಹರಿಶ್ಚಂದ್ರ ಎಂಬ ತಮಿಳು ಚಿತ್ರದಲ್ಲಿ ಪಾತ್ರವಹಿಸುವಳು. 'ರಾಯಲ್ ಟಾಕಿ ಡಿಸ್ಟ್ರಿಬ್ಯೂಟರ್ಸ್' ಈ ಚಿತ್ರದ ನಿರ್ಮಾಪಕರು. ಶ್ರೀ ವೈ. ವಿ. ರಾವ್, ಇವರು ನಿರ್ದೇಶಿಸುವರು.

ಬಾಲ್ಯವಿವಾಹ

ಸಹಸ್ರಾಕೃತಿಯ ರಾಮಕುಮಾರರ (ಕನ್ನಡಿಗರು ಇವರು) ಚಿತ್ರ ಬಾಲ್ಯವಿವಾಹವು ಎಂ. ಪಿ. ಸಿ. ಸಿ.ಯಲ್ಲಿ ತಯಾರಾಗುತ್ತಿದೆ. ಈ ಕಥೆಯನ್ನು ಬರೆದವರೂ ಅವರೇ. ಇದು ತಮಿಳು ಚಿತ್ರ. ರಾಮಕುಮಾರರೂ ಇದರಲ್ಲಿ ಪಾತ್ರವಹಿಸುವರು.

ಅಂಧಿ

ನ್ಯೂ ಥಿಯೇಟರ್ಸ್ಸಿನ 'ಅಂಧಿ'ಯು ಈ ವರ್ಷದ ಅತ್ಯುತ್ತಮ ಚಿತ್ರಗಳಲ್ಲಿ ಒಂದಾಗಿರುವುದಾಗಿ ತಿಳಿದಿದೆ.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಆಗತ್ಯ ಇರಬೇಕಾದ ಪುಸ್ತಕ,
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲ್ಪಟ್ಟಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ಪೋಸ್ಟೇಜಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿನಾರ್ ದ. ಕ.

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು. ಬ್ರೇಂಚ್, ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಸಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚುರುಕಿನಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% " 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ಜೀವನಜ್ಯೋತಿಗಳು:

ಸ್ವಾಮಿ ವಿವೇಕಾನಂದರು

ಲೇಖಕ: ಕಯ್ಯಾರ ಕಿಞ್ಞಣ್ಣ ರೈ

ಪ್ರಪಂಚಕ್ಕೆ ಜೀವಲೋಕಕ್ಕೆ ಹೊಸ ಬೆಳಕನ್ನು ಪಸರಿಸಿ ಹಾರಿಹೋ[illegible] ದಿವ್ಯಶಕ್ತಿ ಪ್ರಾಚೀನ ಆರ್ಯ ಸಂಸ್ಕೃತಿಯಲ್ಲಿ ಅಡಗಿರುವುದನ್ನು ವಿಶಾಲ ವಿಶ್ವಕ್ಕೆ ಸಾರಿದ ವೀರ ವಿಭೂತಿ ಪ್ರಭಾವರು ಶ್ರೀ ಸ್ವಾಮಿ ವಿವೇಕಾನಂದರು. ಸನ್ಯಾಸಿಯಾಗಿ ತೀರ್ಥಯಾತ್ರೆ ಮಾಡಿದನಲ್ಲಿ, ಕಾಡಿನ ಏಕಾಂತದಲ್ಲಿ ಅಡಗಿದ್ದು ತಪಸ್ಸುಗೈವ ದೇಶ ಬಂಧನೆಗಿಂತ, ಜೀವರಾಶಿಯ ದಾರಿದ್ರ್ಯ, ಹೀನ, ತೊಳಲಾಟ ಮೊದಲಾದ ಸಂಕಟಗಳ ಕಡೆಗೆ ಕಣ್ಣೆತ್ತಿ ನೋಡಿ, ಅವರ ದಿನದಿನದ ಸಂತಾಪಗಳಲ್ಲಿ ಸಹಾನುಭೂತಿ ಸಹಾಯಗಳನ್ನು ತೋರುವುದೇ ನಿಜವಾದ ಧಾರ್ಮಿಕ ಕಾರ್ಯವೆಂದು ಎಚ್ಚರಿಸಿದ ವೀರ ಸನ್ಯಾಸಿಯೇ ಶ್ರೀ ವಿವೇಕಾನಂದರು. ಭಾರತೀಯರು ಅಜ್ಞಾನಪೂರ್ಣರೆಂದೂ ಭಾರತವು ತಮ್ಮ ಪ್ರಚಾರದ ಸ್ವಾರ್ಥ ಸಾಧನೆಗೆ ಯೋಗ್ಯ ಸ್ಥಳವೆಂದೂ ತಿಳಿದು, ವಿದೇಶಗಳಿಂದ ಗುಂಪು ಗುಂಪಾಗಿ ಬರುತ್ತಿದ್ದ "ಧರ್ಮ ಬೋಧಕ"ರಿಗೆ, ಅವರ ಕಾರ್ಯವು ಎಷ್ಟರ ಮಟ್ಟಿಗೆ ತಪ್ಪು ಮತ್ತು ಸ್ವಾರ್ಥಪೂರ್ಣವಾದುದೆಂಬುದನ್ನು ತಿಳಿಸಿ, ಭಾರತದ ಹೃದಯದಲ್ಲಿ ಅಡಗಿದ ಧರ್ಮ ಸಮನ್ವಯ ತತ್ವವು, ಅದರ ವಿಶ್ವವಿಶಾಲ "ವಸುಧೈವ ಕುಟುಂಬಕ"ವು [illegible] ಪವಿತ್ರ ಭೂಮಿಯಲ್ಲಿ ಸ್ವಾರ್ಥ [illegible] ಕಾರ್ಯವೆಂಬುದನ್ನೂ, [illegible] ತಿಳಿಸಿದವರೂ ಅವರು [illegible]!

ಜನನ ಮತ್ತು ಬಾಲ್ಯ

ಕ್ರಿಸ್ತಶಕ ೧೮೬೩ನೆಯ ಸಂವತ್ಸರದ ಜನವರಿ ತಿಂಗಳ ಹನ್ನೆರಡನೆಯ ದಿನ [illegible] ಬಂದಿತ್ತು! [illegible] ಅತ್ಯಂತ ಆನಂದದ ದಿನ! [illegible] ಕಲ್ಕತ್ತೆಯ ಪ್ರಸಿದ್ಧ [illegible] ವಿಶ್ವನಾಥ ದತ್ತನ [illegible] ಭುವನೇಶ್ವರೀ ದೇವಿಯ [illegible] ಗರ್ಭದಲ್ಲಿ ನರೇಂದ್ರನಾಥನು ಜನ್ಮವೆತ್ತಿದನು! [illegible] ಧರ್ಮಗಳನ್ನು [illegible]

[illegible]

ನರೇಂದ್ರನು ಅಂತಹ ಸ್ವತಂತ್ರ ವಾತಾವರಣದಲ್ಲಿಯೇ ಬೆಳೆದು ನಿರಂಕುಶನಾಗಿದ್ದನು! ವಿದ್ಯಾರ್ಥಿ ದೆಶೆಯಲ್ಲಿ ಕುಂಟ ಹುಡುಗರ ಮುಂದಾಳುತ್ವ, ಆಟಗಳಲ್ಲಿ ಆಸಕ್ತನೂ ಪಾಠಗಳಲ್ಲಿ ಪ್ರಮುಖನೂ ಆಗಿ ಸರ್ವಜನಪ್ರಿಯನಾಗಿದ್ದನು! ನರೇಂದ್ರನಿಗೆ ಇತಿಹಾಸ ಕಾವ್ಯಗಳಲ್ಲಿ ಅತ್ಯಂತ ಆಸಕ್ತಿಯಿತ್ತು! ಸಂಗೀತವು ಆತನ ಮೆಚ್ಚಿನ ವಿಷಯವಾಗಿತ್ತು.

ವಿದ್ಯಾರ್ಥಿಯಾಗಿರುವಾಗಲೇ ನರೇಂದ್ರನು ತನ್ನ ಅದ್ಭುತ ಬುದ್ಧಿಶಕ್ತಿ ವಾಕ್ಶಕ್ತಿಗಳನ್ನು ತೋರಿಸಿದ್ದನು! ಅನೇಕ ವ್ಯಕ್ತಿಗಳು ಮಹನೀಯರು ಆತನ ಮುಂದಿನ ಭವಿಷ್ಯ ಜೀವನವನ್ನು ಆಗಲೇ ಮನಗಂಡಿದ್ದರು!

ಮಹಿಮೆಯು [illegible] ಯುವಕನೆಂದು ನರೇಂದ್ರನು ಮುಂದೆ ಸ್ವಾಮಿ ವಿವೇಕಾನಂದರಾದಾಗ ತಮ್ಮ ತಾಯಿಯ ಕುರಿತು ಹೇಳುತ್ತಾ ಆಕೆಯು ತನ್ನ ಜೀವನವನ್ನು ಪ್ರಕಾಶವಾಗಿ ತಿದ್ದಿದವಳೆಂದು ಒಪ್ಪಿರುವನು.

ಸಮಾಜದಲ್ಲಿ ಕ್ರಾಂತಿ

ಆಗ ಹಿಂದೂ ಸಮಾಜದಲ್ಲಿ ಒಂದು ರೀತಿಯ ಕ್ರಾಂತಿಯುಂಟಾಗಿತ್ತು! ಪರಕೀಯರ ಆಕ್ರಮಣದಿಂದ, ಪರಕೀಯರ ವಿದ್ಯೆಯಿಂದ ಜನರು ಅಂಧರಾಗಿ ಸ್ವಮತವನ್ನು ಅಲ್ಪ ಮಾಡಿಕೊಳ್ಳುತ್ತ ಪರಮತವನ್ನು ಶ್ರೇಷ್ಠವೆಂದು ಪ್ರಶಂಸಿಸುತ್ತಿದ್ದರು. ಕೆಲವರು ನಾಸ್ತಿಕರಾಗಿದ್ದರು. ಅಂತಹ ಕಾಲದಲ್ಲಿ ರಾಜಾ ಮೋಹನ ರಾಯ್, ಕೇಶವ ಚಂದ್ರಸೇನ್, ರಾಮಕೃಷ್ಣ ಪರಮಹಂಸ ಮೊದಲಾದವರು ಹಿಂದೂ ಧರ್ಮ ಸಂಸ್ಕೃತಿಗಳ ಸತ್ವವನ್ನು ಸಾರುತ್ತಿದ್ದರು! ಇವರ ಆಂದೋಲನಗಳ ಮಧ್ಯದಲ್ಲಿ ನರೇಂದ್ರನು ತನ್ನ ಧೀಶಕ್ತಿಯನ್ನು ಸತ್ಯಾನ್ವೇಷಣ ಕಾರ್ಯದಲ್ಲಿ [illegible]! ದೇವರು, ಧರ್ಮ, ಮೊದಲಾದ [illegible] ಜ್ಞಾನ [illegible] ಆಧ್ಯಾತ್ಮಿಕ [illegible] ಇಂಗ್ಲೀಷು ವಿದ್ಯಾ [illegible] ಪಾಶ್ಚಾತ್ಯ [illegible] ತಕ್ಕ [illegible].

ತತ್ವ ಜಿಜ್ಞಾಸೆ

ಈಶ್ವರನು ಇರುವನೇ? ಇದ್ದರೆ ಆತನನ್ನು ಕಂಡವರಿದ್ದಾರೆಯೇ? ಈ ಪ್ರಶ್ನೆಗಳು ಆತನ ಮನಸ್ಸನ್ನು [illegible] ಬ್ರಹ್ಮಸಮಾಜ [illegible] ಸತ್ಯವನ್ನು [illegible].

ಆಧ್ಯಾತ್ಮಿಕ ತೃಷ್ಣೆಯು [illegible] ತಣಿಯಲಿಲ್ಲ. [illegible]?

ಶ್ರೀ ರಾಮಕೃಷ್ಣರ ದರ್ಶನ

ಅಷ್ಟರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರನ್ನು ಸಂದರ್ಶಿಸುವ ಸುಯೋಗವು ದೊರೆಯಿತು. ಪ್ರಥಮ ದರ್ಶನದಲ್ಲಿಯೇ ಗುರುಶಿಷ್ಯರು ಅನ್ಯೋನ್ಯ ಆಕರ್ಷಿಸಲ್ಪಟ್ಟರು. ದೇವರನ್ನು ಕಂಡವರುಂಟೆ? ಎಂಬ ಪ್ರಶ್ನೆಗೆ ನರೇಂದ್ರನಿಗೆ ಶ್ರೀ ರಾಮಕೃಷ್ಣರಲ್ಲಿ ಉಂಟು ಎಂಬ ಉತ್ತರವು ದೊರಕಿತು.

ನರೇಂದ್ರನ ತಂದೆಯು ಅಷ್ಟರಲ್ಲಿ ತೀರಿ ಹೋಗಲು, ಸಂಸಾರದ ಭಾರವು ಆತನ ತಲೆಯಮೇಲೆ ಬಿತ್ತು. ಉದ್ಯೋಗಕ್ಕೆ ಅಲೆದಾಡಬೇಕಾಯಿತು, ಗ್ರಹದುಃಖದಿಂದ ಬಂದ ಬವಣೆಗಳನ್ನೆಲ್ಲಾ ತಡೆದು ಧೈರ್ಯದಿಂದಲೂ, ಸಾಹಸದಿಂದಲೂ ಜೀವನದಲ್ಲಿ ಮುನ್ನುಗ್ಗಿ ನರೇಂದ್ರನು ತನ್ನ ಆದರ್ಶದ ಕಡೆಗೆ ಧಾವಿಸುತ್ತಿದ್ದನು.

ಬ್ರಹ್ಮಚಾರಿ— ಸನ್ಯಾಸಿ

ನರೇಂದ್ರನು ವಿವಾಹ ಬಂಧನವನ್ನು ತಿರಸ್ಕರಿಸಿಕೊಂಡನು. ಶ್ರೀ ರಾಮಕೃಷ್ಣರಿಂದ ಸನ್ಯಾಸದೀಕ್ಷೆಯನ್ನು ವಹಿಸಿದನು. ಅಖಿಲ ಭರತಖಂಡವನ್ನು ಸಂಚರಿಸಿ ಅಖಂಡ ಅನುಭವಗಳನ್ನು ಸಂಪಾದಿಸಿದನು. ಕೆಲವು ಕಡೆ ಕಷ್ಟಗಳಿಗೊಳಗಾಗಬೇಕಾಯಿತು. [illegible] ರಾಜಮರ್ಯಾದೆಯೂ ದೊರೆಯಿತು. ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಪ್ರಾಣಾಂತ [illegible]ದ್ದರು. ಅವರ ಧರ್ಮತತ್ವಗಳನ್ನು ಜಗತ್ತಿಗೆ ಸಾರುವ ಕಾರ್ಯವು ಅವರ ಪಟ್ಟಶಿಷ್ಯನಾದ ನರೇಂದ್ರನದಾಗಿತ್ತು. ಭರತಖಂಡದಲ್ಲಿ ಸರ್ವತ್ರ ಸಂಚರಿಸಿ ಅನೇಕ ಕಡೆಗಳಲ್ಲಿ ತನ್ನ ವಿಚಾರಗಳನ್ನು [illegible] ಖ್ಯಾತಿ ಪಡೆದನು. ಭಾರತದ ಸಂಸ್ಕೃತಿಯ ಬೆಳಕನ್ನು ವಿದೇಶಗಳಲ್ಲಿ ಪಸರಿಸಬೇಕೆಂಬ ಉತ್ಕಟ ಇಚ್ಛೆಯೊಂದು ನರೇಂದ್ರನ ಮನದಲ್ಲಿ ಸದಾ ಸ್ಫುರಿಸುತ್ತಿತ್ತು!

ಸರ್ವ ಧರ್ಮ ಸಮ್ಮೇಳನ

ಅಮೇರಿಕದಲ್ಲಿ "ಸರ್ವ ಧರ್ಮ ಸಮ್ಮೇಳನ"ವೊಂದು ನೆರೆಯುವುದಾಗಿ ಸುದ್ದಿ ಬಂತು! ಭಾರತದ ಪ್ರತಿನಿಧಿಯಾಗಿ ನರೇಂದ್ರನು ಹೋಗಬೇಕೆಂದು ಹಲವರು ಒತ್ತಾಯಿಸಿದರು. ನರೇಂದ್ರನು ಅಷ್ಟರಲ್ಲಿಯೇ ತನ್ನ ಹೆಸರನ್ನು "ವಿವೇಕಾನಂದ" ಎಂದು ಮಾರ್ಪಡಿಸಿದ್ದನು. ವಿವೇಕಾನಂದರು ತಮ್ಮ ಗುರುದೇವನನ್ನು ನೆನೆದು ಸರ್ವ ಧರ್ಮ ಸಮ್ಮೇಳನಕ್ಕೆ ಹೋಗಲು ಸಿದ್ಧರಾದರು!

ದಾರಿಯಲ್ಲಿ ಅನೇಕ ಕಷ್ಟಗಳನ್ನು ಪಡಬೇಕಾಯಿತು. ಮೊದಲು ಮೊದಲು ವಿದೇಶದಲ್ಲಿ ಸಾಕಷ್ಟು ಗೌರವ ದೊರೆಯಲಿಲ್ಲ. ಆದರೆ ಗುರು ಕೃಪೆಯಿಂದ ವಿವೇಕಾನಂದರಿಗೆ ಅಲ್ಲಿಯೂ ಸನ್ಮಿತ್ರರು ದೊರಕಿದರು! ಸರ್ವ ಧರ್ಮಸಮ್ಮೇಳನದಲ್ಲಿ ಮಾತನಾಡಲು ವಿವೇಕಾನಂದರಿಗೆ ಅವಕಾಶ ದೊರಕಿತು.

ಬೇರೆ ಬೇರೆ ಧರ್ಮದವರು ತಮ್ಮ ತಮ್ಮ ಧರ್ಮಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು. ಕೊನೆಗೆ ಭಾರತದ ಪ್ರತಿನಿಧಿ ವಿವೇಕಾನಂದರು ಎದ್ದು ನಿಂತರು! "ಬಂಧುಗಳೇ ಭಗಿನಿಯರೇ!" ಎಂಬ ಅವರ ಸಂಬೋಧನೆಯೇ ಪ್ರಚಂಡ ಕರತಾಡನದಿಂದ ಸ್ವಾಗತಿಸಲ್ಪಟ್ಟಿತು! ಸುಂದರ ಗಂಭೀರ ಆಕೃತಿಯ ವೀರ ಸನ್ಯಾಸಿಯು ತನ್ನ ಸಿಂಹನಾದದಂತಹ ಅಸ್ಖಲಿತ ವಾಕ್ಸರಣಿಯಿಂದ ಸಭಿಕರನ್ನು ಆಕರ್ಷಿಸಿ ಸರ್ವ ಮತಗಳ ಸಮನ್ವಯ ಸಿದ್ಧಾಂತವಾದ ಭಾರತೀಯ ಧರ್ಮ ತತ್ವವನ್ನು ಸಾರಿದನು! ಇದೇ ಯೂರೋಪಿನಲ್ಲಿ ಅಂದಿನಿಂದ ಅವರ ಕೀರ್ತಿ ದುಂದುಭಿಯು ಮೊಳಗಿತು!

ಯೂರೋಪಿನಲ್ಲಿ ಪ್ರಚಾರ

ಅಲ್ಲಿ ಅನೇಕ ಆಹ್ವಾನಗಳು ಬಂದವು. ಎಲ್ಲೆಡೆಗಳಲ್ಲಿಯೂ ಅವರು ಅಮೇರಿಕದಲ್ಲಿ ಭಾರತ ಧರ್ಮದ ಕುರಿತು ಪ್ರಚಂಡ ಭಾಷಣಗಳನ್ನು ಮಾಡಿ, ಭಾರತದ ಬಗ್ಗೆ ಪಾಶ್ಚಾತ್ಯರಿಗಿದ್ದ ತಪ್ಪುಅಭಿಪ್ರಾಯವನ್ನು ಹೋಗಲಾಡಿಸಿದರು! ಮುಂದೆ ಅವರು ಇಂಗ್ಲೆಂಡಿಗೆ ತೆರಳಿ ಅಲ್ಲಿಯೂ ಧರ್ಮಪ್ರಚಾರ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದರು. ಯೂರೋಪಿನ ಅನೇಕ ಮಹಾಮಹಾ ವಿದ್ವಾಂಸರು ಅವರ ಆಪ್ತ ಮಿತ್ರರಾದರು. ಹಲವರು ಅವರ ಶಿಷ್ಯರಾದರು! ಇಂತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೌರ್ವಾತ್ಯ ಸಂಸ್ಕೃತಿಯ ಬೆಳಕು ಪ್ರಚಂಡವಾಗಿ ಪಸರಿಸಿತು!

ಸಂಘಸ್ಥಾಪನೆ

ನಾಲ್ಕು ವರ್ಷಗಳ ತನಕ ಯೂರೋಪಿನಲ್ಲಿದ್ದ, ಅವರಿಗೆ ಮಾತೃಭೂಮಿಯು ನೆನಪಾಯಿತು! ಭಾರತಕ್ಕೆ ಮರಳಿ ಬಂದವರು ಸುಮ್ಮಗಿರಲಿಲ್ಲ! ಅಷ್ಟರಲ್ಲಿಯೇ ಭಾರತ ದೇಶದಲ್ಲಿ ವಿವೇಕಾನಂದರ ಹೆಸರು ಮನೆಯ ಮಾತಾಗಿತ್ತು! ತನ್ನ ಪ್ರೀತಿಯ ಪುತ್ರನನ್ನು ಭರತಮಾತೆ ಎಲ್ಲೆಡೆಗಳಲ್ಲಿಯೂ ಅತ್ಯಂತ ಆದರದಿಂದ ಸಂಭ್ರಮದಿಂದ ಸ್ವಾಗತಿಸಿದಳು!

ಬಂದವರು ಅನೇಕ ಕಡೆಗಳಲ್ಲಿ ಸಂಘಗಳನ್ನು ಸ್ಥಾಪಿಸಿದರು! "ಶ್ರೀ ರಾಮಕೃಷ್ಣ ಮಿಶನ್" ಎಂಬ ಹೆಸರಿನಿಂದ ಲೋಕ ಸೇವೆಯನ್ನು ಮಾಡುವುದು ಆ ಸಂಘಗಳ ಗುರಿಯಾಯಿತು!

ಮತ್ತೊಮ್ಮೆ ಅವರಿಗೆ ಯೂರೋಪಿನಿಂದ ಆಮಂತ್ರಣ ಬಂತು, ಅಲ್ಲಿಗೆ ಹೋಗಿ ಅಲ್ಲಿ ಮತ್ತೊಮ್ಮೆ ಧರ್ಮ ಪ್ರಚಾರ ಮಾಡಿದರು. ತಿರುಗಿ ಸ್ವದೇಶಕ್ಕೆ ಮರಳಿದವರಿಗೆ ಆರೋಗ್ಯ ಕೆಟ್ಟಿತು! ಅವಿಶ್ರಾಂತವಾದ ಕಾರ್ಯದಿಂದ ಅವರ ಆರೋಗ್ಯವು ಬಹಳವಾಗಿ ಕಂಗಾಲಾಯಿತು! ಶಿಷ್ಯರು, ಹಿತಚಿಂತಕರು, ಸ್ವಾಮಿಯವರಿಗೆ ಸಾಕಷ್ಟು ಉಪಚಾರ ಚಿಕಿತ್ಸೆ ನಡೆಸಿದರು.

ಜ್ಯೋತಿ ನಂದಿತು!

ಕೊನೆಗೆ ಅವರ ಅಂತಿಮಕಾಲವು ಸಮೀಪಿಸಿತು! ೧೯೦೨ನೆಯ ಇಸವಿ ಜುಲಾಯಿ ತಿಂಗಳ ೪ನೆಯ ದಿನ ಯೋಗಿವರ್ಯ ವಿವೇಕಾನಂದರು ಅನಂತ ನಿದ್ರೆಯಲ್ಲಿ ಪವಡಿಸಿದರು! ಧೀರ ವೀರ ರಾಜರ್ಷಿ ದುಡಿದು ದುಡಿದು ಚಿರ ವಿಶ್ರಾಂತಿ ಪಡೆದರು! ಭಾರತಿಯು ತನ್ನ ಭಾಗ್ಯಪುತ್ರನ ಅಕಾಲ ಮರಣಕ್ಕಾಗಿ ಬಾಷ್ಪಾಂಜಲಿ ಸುರಿಸಿದಳು! ಅಖಿಲ ಪ್ರಪಂಚವೇ ಶೋಕದ ಕಡಲಲ್ಲಿ ಅದ್ದಿತು!

ಹೀಗೆ, ಹೊಸಯುಗದ ನವನೂತನ ಇತಿಹಾಸ ನಿರ್ಮಾಣಕಾರರಾದ ಶ್ರೀ ವಿವೇಕಾನಂದರು ಅದ್ಭುತ ಕಾರ್ಯಗಳಿಂದ ಅಖಿಲ ಪ್ರಪಂಚಕ್ಕೆ ಭಾರತದ ಆಧ್ಯಾತ್ಮಿಕ ತತ್ವವನ್ನು ತಿಳಿಸಿ ಅಮೃತ ಪುತ್ರರನ್ನು [illegible] ದಾರಿ ತೋರಿಸಿದರು!

ನೋಟಗಳು!

ಯುದ್ಧವಾರಂಭವಾದ ಮೇಲೆ ಈಗ ಆರನೆಯ ಸಲ ಗಾಂಧಿಜಿಯವರು ವೈಸ ರಾಯರನ್ನು ಕಂಡುಮಾತನಾಡಿದರು!

—ವೈಸರಾಯರು ಕರೆಯು ತ್ತಾರೆ; ಗಾಂಧಿಜಿಯವರು ಹೋಗುತ್ತಾರೆ!

—ವೈಸರಾಯರು ಗಾಂಧಿಜಿಯವರೊಡನೆ ಯಾವ ವಿಷಯವಾಗಿ ಮಾತನಾಡಿದ ರೆಂಬುದು ಇನ್ನೂ ಪ್ರಕಟವಾಗಿಲ್ಲ.

—ಆದರೆ, ಇಷ್ಟರಲ್ಲಿ ಜನರು ಊಹೆ ಗಳನ್ನು ಹರಿಯಬಿಟ್ಟಿದ್ದಾರೆ!

—ವೈಸರಾಯರು ತನ್ನಮಂತ್ರಿಮಂಡಲ ವನ್ನು ವಿಸ್ತರಿಸಿ ಅದರಲ್ಲಿ ಭಾರತ ಮುಖಂಡರಿಗೆ, ಸ್ಥಾನ ಕೊಡುವರೆಂದು ಒಂದು ಊಹೆ!

—ಅಧಿಕಾರ ಸೂತ್ರವಿಲ್ಲದ, ಮಂತ್ರಿ ಸ್ಥಾನದಿಂದ ನಾವು ತೃಪ್ತಿ ಹೊಂದಲಾರ ವೆಂದು ಅದಕ್ಕೆ ರಾಜಾಜಿಯವರೇ ಎದು ರು ನುಡಿದಿದ್ದಾರೆ!

—ಅಂತೂ ಬರಿಯ ಮಾತುಕತೆ ನಡೆಸಿ ಬಿಟ್ಟರೆ ಜನರು ಸಂತೃಪ್ತರಾಗುವದಿಲ್ಲ. ಕೃತಿಯಿಂದ ತೋರಿಸಬೇಕು ಆಗ ಮಾತ್ರ ವಿಶ್ವಾಸವನ್ನು ಗಳಿಸಬಹುದು!

◈

ಬ್ರಿಟನಿನ ಆಪತ್ಕಾಲದಲ್ಲಿ ಭಾರತವು ಲಾಭ ಪಡೆಯಲು ಇಚ್ಛೆ ಪಡುವುದಿಲ್ಲ ವೆಂಬುದು ಕಾಂಗ್ರೆಸಿನ ಸ್ಪಷ್ಟ ಧೋರಣೆ ಯಾಗಿದೆ!

—ಈ ಯುದ್ಧದಲ್ಲಿ ಬ್ರಿಟನಿಗೆ ಗೆಲ ವಾಗಲೆಂಬುದು ಭಾರತೀಯರ ಹಾರೈಕೆ ಯೂ ಆಗಿದೆ.

—ಬ್ರಿಟನು ಮತ್ತು ಭಾರತೀಯರದು ಸುಮಾರು ಇನ್ನೂರು ವರ್ಷಗಳ ಸಂ ಬಂಧ.

—ಏನೋ ಅಂತಃಕಲಹಗಳು ಅನ ರ್ಥಗಳು ಉಂಟಾಗಿರಬಹುದು, ಆದರೆ ಈ ವಿಪತ್ಕಾಲದಲ್ಲಿ ಭಾರತೀಯರು ಎಲ್ಲ ವನ್ನು ಮರೆತು ಬಿಟ್ಟಿದ್ದಾರೆ!

—ಆದರೆ ಬ್ರಿಟನು ಭಾರತೀಯರಲ್ಲಿ ಇನ್ನೂ ಸಂಶಯಗೊಂಡಿದೆ

—ಭಾರತೀಯರು ಸ್ವತಂತ್ರ ಆಡಳಿತ ಕ್ಕೆ ಪಾತ್ರರೋ ಅಲ್ಲವೋ ಎಂಬ ವಿಷಯ ಇನ್ನೂ ಬ್ರಿಟನಿಗೆ ಸಂಶಯವಿದೆ.

—ಸರಕಾರದ ಸೂತ್ರವನ್ನು ವಹಿಸಿ ಕಾಂಗ್ರೆಸು ಮಂತ್ರಿಮಂಡಳಗಳು, ಅಖಿಲ ಭಾರತದಲ್ಲಿ ಪ್ರಶಂಸನೀಯವಾಗಿ ಆಡಳಿ ತವನ್ನು ನಡೆಸಿ ತೋರಿಸಿವೆ!

—ಆದರೂ, ಬ್ರಿಟಿಷ್ ಸರಕಾರವು ಕಾಂಗ್ರೆಸನ್ನು ನಂಬ[illegible] ಕಾರಣ ವಿಲ್ಲ!

ಸಂಶಯವು ಮಹಾನರ್ಥ ಕಾರಣ ವು! ಗೀತೆಯಲ್ಲಿ ಹೀಗೆ ಹೇಳಿದೆ:— "ಸಂಶಯಾತ್ಮಾ [illegible]"

ಪ್ರಕಟಣೆ

ಅಥಣಿಯ ಪ್ರ. ಕ್ಲಾಸ ಕೋರ್ಟಿನಲ್ಲಿ

[illegible] 40/10 R. I. A. No. 286 of 1940

[illegible] — ವಾದಿ

ವಿರುದ್ಧ

[illegible] — ಪ್ರತಿವಾದಿ ಇವರೆಲ್ಲರಿಗೆ.

[illegible]

RS. 36000

ಸರಿಯಾಗಿ ಉತ್ತರ ಕಳುಹಿಸಿದ 18 ಮಂದಿಗಳೊಳಗೆ ಹಂಚಲಾಗುವ್ವದು

ನಾವು ಸೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ. 100ರ ಬಹುಮಾನ. ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ. 20. ಉಳಿದ ಸಾಲಿನ ಎರಡು ಅಂಕೆ ಗಳನ್ನು ಹೋಲುವ ಆದೇ ಸಾಲಿನ ಉತ್ತರ ಕಳುಹಿಸಿದವರಿಗೆ ರೂ.5ರ ಕೊನ್ಸೊಲೇಷನ್ ಬಹುಮಾನ.

ಪ್ರತೀ ಸಾಲನ್ನೂ ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 42 ಬರುವಂತೆ ಖಾಲಿಯಿರುವ ಅಂಕಣಗಳಲ್ಲಿ 3ರಿಂದ 18ರ ವರೆಗೆ ಅಂಕೆಗಳನ್ನು ಬರೆಯಿರಿ ಒಂದು ಸಾರಿ ಉಪಯೋಗಿಸಿದ ಅಂಕೆ ಯನ್ನು ಪುನರಪಿ ಬರೆಯಕೂಡದು. ಉತ್ತರವನ್ನು ಕಳುಹಿಸುವ ಕಡೇ ದಿನ 17—7—1940. ಫಲಿತಾಂಶ 27—7—1940.

ಒಂದು ಉತ್ತರಕ್ಕೆ ರೂ. 1 ಪ್ರವೇಶಧನ, 3 ಉತ್ತರಗಳಿಗೆ ರೂ. 2. ರೂ. 5ಕ್ಕೆ 8 ಉತ್ತರಗಳು

ನಿಯಮಗಳು— ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಬಿಳೆ ಕಾಗದದ ಮೇಲೆ ಎಷ್ಟೂ ಉತ್ತರಗಳನ್ನು ಕಳುಹಿಸಬಹುದು. ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು. ಬಹುಮಾನದ ಮೌಲ್ಯವು ಪ್ರವೇಶದ ಹಣದ ಮೇಲೆ ಹೊಂದಿಕೊಂಡಿದೆ. ಆದರೆ ಕನಿಷ್ಠ ಎಂದರೆ ರೂ. 2000ವನ್ನು ನಾವು ದೊಡ್ಡ ಬ್ಯಾಂಕ್ ಒಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವದೆಂಬ ಭರವಸೆಯನ್ನೀಯುವೆವು. ಎಲ್ಲಾ ಕಳುಹಿಸುವ ಉತ್ತರಗಳು 1940ನೇ ಜುಲೈ 22ನೇ ತಾರೀಖಿನೊಳಗೆ ಬಂದು ಮುಟ್ಟಬೇಕು. ತಡವಾಗಿ ಬಂದ ಉತ್ತರಗಳಿಗೆ ಗಮನಕೊಡಲಾಗಲಿಕ್ಕಿಲ್ಲ. ನಿಮ್ಮ ಹೆಸರು ವಿಳಾಸ ಅಂಕೆಗಳನ್ನು ಇಂಗ್ಲಿಷಿನಲ್ಲೇ ಬರೆಯಿರಿ. ಉತ್ತರ ಬೇಕೆಂದಾದರೂ ಅಂಚೆಚೀಟಿಯನ್ನು ತಮ್ಮ ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿ. ಎಲ್ಲಾ ವಿಷಯಗಳಲ್ಲಿ ಮ್ಯಾನೇಜರರ ತೀರ್ಮಾನವೇ ಅಂತಿಮ ನ್ಯಾಯವಾ ದ್ದೂ ಆಗಿರುತ್ತದೆ.

ಕಳೆದ ಬಾರಿಯ ಸರಿಯಾದ ಉತ್ತರ.

ಎಲ್ಲಾ ಉತ್ತರವನ್ನು ಸ್ವದೇಶ ಹಾಕಿದ್ದೊಡನೆ ಈ ವಿಳಾಸಕ್ಕೆ ಕಳುಹಿಸಿ:

1ನೇ ಸಾಲು	14	11	17	19
2ನೇ "	10	15	13	16
3ನೇ "	9	8	18	10
4ನೇ "	31	30	6	7

ದಿ ಮ್ಯಾನೇಜರ್—

ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕಂ.,

'ಚಾಪೆಲ್ ಹೌಸ್' 103, ಹಾರ್ನಬಿ ರೋಡ್, ಫೋರ್ಟ ಮುಂಬಯಿ.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಅವರ

ಬಾಲಾಮೃತ

ವನ್ನು ಕೊಡುವುದ ರಿಂದ ಅವರು

ಶಕ್ತರೂ ತೇಜಃಪುಂಜ ರೂ ಆಗುತ್ತಾರೆ.

[illegible]

[illegible]

ಮಾ। ಪ್ರೊಪ್ರೈಟರ್ ಫಾರ್ಮಸಿ, [illegible]

ಮುಂಬಯಿಯು [illegible]

[illegible]



ಧನ್ವಂತರಿ ಯಶಸ್ವಿಯಾದ ಚಿಕಿತ್ಸಕ ಔಷಧ

ಜೀವಜ್ಯೋತಿಗಳು:

ಸ್ವಾಮಿ ವಿವೇಕಾನಂದರು

ಲೇಖಕ: ಕಯ್ಯಾರ ಕಿಞ್ಞಣ್ಣ ರೈ

ಪ್ರಪಂಚಕ್ಕೆ, ಜೀವಲೋಕಕ್ಕೆ, ಹೊಸ ಬೆಳಕನ್ನು ಹಸರಿಸಿ ದಾರಿತೋರಿಸಬಲ್ಲ ದಿವ್ಯಶಕ್ತಿ ಪುರಾತನ ಆರ್ಯ ಸಂಸ್ಕೃತಿಯಲ್ಲಿದೆಯೆಂಬುದನ್ನು ವಿಶಾಲ ವಿಶ್ವಕ್ಕೆ ಸಾರಿದ ವೀರ ವಿಭೂತಿ ಪುರುಷರು ಶ್ರೀ ಸ್ವಾಮಿ ವಿವೇಕಾನಂದರು. ಸನ್ಯಾಸಿಯಾಗಿ ಕತ್ತಲೆಯ ಕಾಡಿನಲ್ಲಿ, ಕಾಣದ ಏಕಾಂತದಲ್ಲಿ ಅಡಗಿದ್ದು ತಪಸ್ಸುಗೈವ ದೇಹ ದಂಡನೆಗಿಂತ, ಜೀವರಾಶಿಯ ದಾರಿದ್ರ್ಯ, ಬೇನೆ, ಗೋಳಲಾಟ ಮೊದಲಾದ ಸಂಕಟಗಳ ಕಡೆಗೆ ಕಣ್ಣೆತ್ತಿ ನೋಡಿ, ಅವರ ದಿನದಿನದ ಸಂತಾಪಗಳಲ್ಲಿ ಸಹಾನುಭೂತಿ ಸಹಾಯಗಳನ್ನುಕೊಡುವುದೇ ನಿಜವಾದ ಧಾರ್ಮಿಕ ಕಾರ್ಯವೆಂದು ಎಚ್ಚರಿಸಿದ ವೀರ ಸನ್ಯಾಸಿಯೇ ಶ್ರೀ ವಿವೇಕಾನಂದರು. ಭಾರತೀಯರು ಜ್ಞಾನಶೂನ್ಯರೆಂದೂ ಭಾರತವು ತಮ್ಮ ಪ್ರಚಾರ ಸ್ವಾರ್ಥ ಸಾಧನೆಗಳಿಗೆ ಯೋಗ್ಯ ಸ್ಥಳವೆಂದೂ ತಿಳಿದು, ವಿದೇಶಗಳಿಂದ ಗುಂಪು ಗುಂಪಾಗಿ ಬರುತ್ತಿದ್ದ "ಧರ್ಮ ಬೋಧಕ"ರಿಗೆ, ಅವರ ಕಾರ್ಯವು ಎಷ್ಟರ ಮಟ್ಟಿಗೆ ಟೊಳ್ಳು ಮತ್ತು ಸ್ವಾರ್ಥಪೂರ್ಣವಾದುದೆಂಬುದನ್ನು ತಿಳಿಸಿ, ಭಾರತದ ಹೃದಯದಲ್ಲಿ ಅಖಿಲ ಧರ್ಮ ಸಮನ್ವಯ ತತ್ವವು, ಅಂತಹ ವಿಶ್ವವಿಶಾಲ ಬಾಂಧವ್ಯ ಪ್ರೇಮವು ಅಡಕವಾಗಿರುವುದೆಂಬುದನ್ನೂ ಇಂತಹ ಪವಿತ್ರಭೂಮಿಯಲ್ಲಿ ಸ್ವಾರ್ಥ ಸಂಕುಚಿತ ಪ್ರಚಾರವು ಅಧಾರ್ಮಿಕ ಕಾರ್ಯವೆಂಬುದನ್ನೂ, ಘಂಟಾಘೋಷವಾಗಿ ತಿಳಿಸಿದವರು ಆ ಮಹಾಪುರುಷರು!

ಜನನ ಮತ್ತು ಬಾಲ್ಯ

ಕ್ರಿಸ್ತಶಕ ೧೮೬೩ನೆಯ ಸಂವತ್ಸರದ ಜನವರಿ ತಿಂಗಳ ಹದಿನೆರಡನೆಯ ದಿನ. ಪುಷ್ಯ ಸಂಕ್ರಾಂತಿಯ ಹಬ್ಬವೂ ಅದೇದಿನ ಬಂದಿತ್ತು! ಬಂಗಾಳದಲ್ಲಿ ಅದು ಅತ್ಯಂತ ಆನಂದದ ಹಬ್ಬ! ಆ ದಿನ, ಆ ಪವಿತ್ರ ಮುಹೂರ್ತದಲ್ಲಿ, ಕಾಯಸ್ಥ ಕ್ಷತ್ರಿಯ ಕುಲದ ಕಲ್ಕತ್ತದ ಪ್ರಸಿದ್ಧ ವಕೀಲನಾದ ವಿಶ್ವನಾಥ ದತ್ತನ ಧರ್ಮಪತ್ನಿ ಧರ್ಮಶೀಲೆಯಾದ ಭುವನೇಶ್ವರೀ ದೇವಿಯ ಪುಣ್ಯ ಗರ್ಭದಲ್ಲಿ ನರೇಂದ್ರನಾಥನು ಜನ್ಮವೆತ್ತಿದನು! ಹಲವು ಕಾಲದಿಂದ ಗಂಡು ಮಕ್ಕಳಿಲ್ಲವೆಂದು ಅದಕ್ಕಾಗಿ ಸಾವಿರಾರು ದಾನ ಧರ್ಮಗಳನ್ನು ಆಚರಿಸಿದ ಮೇಲೆ ಆ ದಂಪತಿಗಳ ಬಸುರಲ್ಲಿ ಈ ಪುತ್ರ ರತ್ನವು ಹುಟ್ಟಿತು.

ನರೇಂದ್ರನು ಹುಟ್ಟಿದಂದಿನಿಂದಲೂ ಸ್ವತಂತ್ರ ವಿಚಾರ ಶಕ್ತಿಯುಳ್ಳವನಾಗಿದ್ದನು. ನರೇಂದ್ರನೂ ಅಂತಹ ಸ್ವತಂತ್ರ ವಾತಾವರಣದಲ್ಲಿಯೇ ಬೆಳೆದು ನಿರಂಕುಶನಾಗಿದ್ದನು! ವಿದ್ಯಾರ್ಥಿ ದೆಶೆಯಲ್ಲಿ ತುಂಟ ಹುಡುಗರ ಮುಂದಾಳುವೂ, ಆಟಗಳಲ್ಲಿ ಆಸಕ್ತನೂ ನಾಟಕಗಳಲ್ಲಿ ಪ್ರಮುಖನೂ ಆಗಿ ಸರ್ವಜನಪ್ರಿಯನಾಗಿದ್ದನು! ನರೇಂದ್ರನಿಗೆ ಇತಿಹಾಸ ಕಾವ್ಯಗಳಲ್ಲಿ ಅತ್ಯಂತ ಆಸಕ್ತಿಯಿತ್ತು! ಸಂಗೀತವು ಆತನ ನೆಚ್ಚಿನ ವಿಷಯವಾಗಿತ್ತು.

ವಿದ್ಯಾರ್ಥಿಯಾಗಿರುವಾಗಲೇ ನರೇಂದ್ರನು ತನ್ನ ಅದ್ಭುತ ಬುದ್ಧಿಶಕ್ತಿ ವಾಕ್ ಶಕ್ತಿಗಳನ್ನು ತೋರಿಸಿದ್ದನು! ಅನೇಕ ಪ್ರಸಿದ್ಧ ಮಹನೀಯರು ಆತನ ಮುಂದಿನ ಭವಿಷ್ಯ ಜೀವನವನ್ನು ಆಗಲೇ ಮುನಗಂಡಿದ್ದರು!

ಮಾತೆಯ ಋಣವು ತೀರಿಸಲಾರದ ಋಣವೆಂದು ನರೇಂದ್ರನು ಮುಂದೆ ಸ್ವಾಮಿ ವಿವೇಕಾನಂದರಾದಾಗ ತಮ್ಮ ತಾಯಿಯ ಕುರಿತು ಹೇಳುತ್ತಾ ಆಕೆಯು ತನ್ನ ಜೀವನವನ್ನು ಬಹಳವಾಗಿ ತಿದ್ದಿರುವಳೆಂದು ಬರೆದಿರುವನು.

ಸಮಾಜದಲ್ಲಿ ಕ್ರಾಂತಿ

ಆಗ ಹಿಂದೂ ಸಮಾಜದಲ್ಲಿ ಒಂದು ರೀತಿಯ ಕ್ರಾಂತಿಯುಂಟಾಗಿತ್ತು! ಪರಕೀಯರ ಆಕ್ರಮಣದಿಂದ, ಪರಕೀಯ ವಿದ್ಯೆಯಿಂದ ಕೆಲವರು ಅಂಧರಾಗಿ ಸ್ವಮತವನ್ನು ಅರ್ಥ ಮಾಡಿಕೊಳ್ಳದೆ ಪರಮತವನ್ನು ಉತ್ತಮವೆಂದು ಪುರಸ್ಕರಿಸುತ್ತಿದ್ದರು. ಕೆಲವರು ನಾಸ್ತಿಕರಾಗಿದ್ದರು. ಅಂತಹ ಕಾಲದಲ್ಲಿ ರಾಮಮೋಹನ ರಾಯ್, ಕೇಶವ ಚಂದ್ರಸೇನ್, ರಾಮಕೃಷ್ಣ ಪರಮಹಂಸ ಮೊದಲಾದವರು ಹಿಂದೂ ಧರ್ಮ ಸಂಸ್ಕೃತಿಗಳ ಸತ್ವವನ್ನು ಸಾರುತ್ತಿದ್ದರು! ಹೀಗೆ ಅಂದೋಲನಗಳ ಮಧ್ಯದಲ್ಲಿ ನರೇಂದ್ರನು ತನ್ನ ಧೀಶಕ್ತಿಯನ್ನು ಸತ್ಯಾನ್ವೇಷಣ ಕಾರ್ಯದಲ್ಲಿ ಚೆನ್ನಾಗಿ ಉಪಯೋಗಿಸಿದನು! ದೇವರು, ಧರ್ಮ, ಮೊದಲಾದ ಪರತಂತ್ರ ಜ್ಞಾನ ಜಿಜ್ಞಾಸೆಗಾಗಿ ತಾನು ಅಭ್ಯಾಸಿಸಿದ ಆಂಗ್ಲೇಯ ವಿದ್ಯಾ ಪರಿಣತ ತಾರ್ಕಿಕ ಬುದ್ಧಿಯನ್ನು ವಿಚಾರದ ಒರೆಗಲ್ಲಿನಲ್ಲಿ ತಿಕ್ಕಿ ನೋಡುತ್ತಿದ್ದನು.

ತತ್ವ ವಿಜ್ಞಾನ

ಈಶ್ವರನಿರುವನೇ? ಆತನನ್ನು ಕಂಡವರಿದ್ದಾರೆಯೇ? ಈ ಪ್ರಶ್ನೆಗಳು ಆತನ ಮನಸ್ಸಿನಲ್ಲಿ ಯಾವಾಗಲೂ ಕಟಿಯುತ್ತಿತ್ತು. ವೇದ, ಖುರಾನ್, ಬೈಬಲುಗಳನ್ನೋದಿದನು. ಪಂಡಿತೋತ್ತಮರ, ಮಹರ್ಷಿಗಳ, ಸಾಧುಸಂತರ ಬಳಿ ಹೋಗಿ ಪ್ರಶ್ನಿಸಿದನು. ಆದರೆ ಯಾರೂ ಆತನ ಮನದ ಮಹಾ ಸಂಶಯವನ್ನು ಪರಿಹರಿಸಲಿಲ್ಲ. ಆಧ್ಯಾತ್ಮಿಕ ಕ್ಷುತ್ತೃಷೆಯು ಇಂಗಲಾರದಾಯಿತು. ಸಂದೇಹಗಳು ಹೆಚ್ಚುತ್ತಾ ಹೋದವು. ಇನ್ನೇನು ಮಾಡಲಿ? ಎತ್ತಿಂದ ಈ ಮನದ ದಾಹವನ್ನು ಇಂಗಿಸಲಿ?

ಶ್ರೀ ರಾಮಕೃಷ್ಣರ ದರ್ಶನ

ಇಷ್ಟರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರನ್ನು ಸಂದರ್ಶಿಸುವ ಸುಯೋಗವು ದೊರಕಿತು. ಪ್ರಥಮ ದರ್ಶನದಲ್ಲಿಯೇ ಗುರುಶಿಷ್ಯರು ಅನ್ಯೋನ್ಯ ಆಕರ್ಷಿಸಲ್ಪಟ್ಟರು. ದೇವರನ್ನು ಕಂಡವರುಂಟೆ? ಎಂಬ ಪ್ರಶ್ನೆಗೆ ನರೇಂದ್ರನಿಗೆ ಶ್ರೀ ರಾಮಕೃಷ್ಣರಲ್ಲಿ ಉಂಟು ಎಂಬ ಉತ್ತರವು ದೊರಕಿತು.

ನರೇಂದ್ರನ ತಂದೆಯು ಅಷ್ಟರಲ್ಲಿ ತೀರಿಹೋಗಲು, ಸಂಸಾರದ ಭಾರವು ಆತನ ತಲೆಯಮೇಲೆ ಬಿತ್ತು. ಉದ್ಯೋಗಕ್ಕೆ ಅಲೆದಾಟಹೆಚ್ಚಿತು; ಗುರುಕೃಪೆಯಿಂದ ಬಂದ ಬವಣೆಗಳನ್ನೆಲ್ಲಾ ತಡೆದು ಧೈರ್ಯದಿಂದಲೂ, ಸಾಹಸದಿಂದಲೂ ಜೀವನದಲ್ಲಿ ಮುನ್ನುಗ್ಗಿ ನರೇಂದ್ರನು ತನ್ನ ಆದರ್ಶದ ಕಡೆಗೆ ಧಾವಿಸುತ್ತಿದ್ದನು.

ಬ್ರಹ್ಮಚಾರಿ— ಸನ್ಯಾಸಿ

ನರೇಂದ್ರನು ವಿವಾಹ ಬಂಧನವನ್ನು ನಿರಾಕರಿಸಿಕೊಂಡನು. ಶ್ರೀ ರಾಮಕೃಷ್ಣರಿಂದ ಸನ್ಯಾಸದೀಕ್ಷೆಯನ್ನು ಪಡೆದನು. ಅಖಿಲ ಭರತಖಂಡವನ್ನು ಸಂಚರಿಸಿ ಅಖಂಡ ಅನುಭವಗಳನ್ನು ಸಂಪಾದಿಸಿದನು. ಹಲವು ಕಡೆ ಕಷ್ಟಗಳಿಗೊಳಗಾಗಬೇಕಾಯಿತು. ಹಲವೆಡೆ ರಾಜಮರ್ಯಾದೆಯೂ ದೊರೆಕಿತು! ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಪಾರ್ಥಿವ ಶರೀರವನ್ನಿಟ್ಟದ್ದರು! ಅವರ ಧರ್ಮತತ್ವಗಳನ್ನು ಜಗತ್ತಿಗೆ ಸಾರುವ ಕಾರ್ಯವು ಅವರ ಪಟ್ಟಶಿಷ್ಯನಾದ ನರೇಂದ್ರನದಾಗಿತ್ತು! ಭರತಖಂಡದಲ್ಲಿ ಸರ್ವತ್ರ ಸಂಚರಿಸಿ ಅನೇಕ ಕಡೆಗಳಲ್ಲಿ ತನ್ನ ವರ್ಚಸ್ಸನ್ನು ಬೀರಿ ಖ್ಯಾತಿ ಪಡೆದನು. ಭಾರತದ ಸಂಸ್ಕೃತಿಯ ಬೆಳಕನ್ನು ವಿದೇಶಗಳಲ್ಲಿ ಪಸರಿಸಬೇಕೆಂಬ ಉತ್ಕಟ ಇಚ್ಛೆಯೊಂದು ನರೇಂದ್ರನ ಮನದಲ್ಲಿ ಸದಾ ಸ್ಫುರಿಸುತ್ತಿತ್ತು!

ಸರ್ವ ಧರ್ಮ ಸಮ್ಮೇಳನ

ಅಮೇರಿಕದಲ್ಲಿ "ಸರ್ವ ಧರ್ಮ ಸಮ್ಮೇಳನ"ವೊಂದು ನೆರೆಯುವುದಾಗಿ ಸುದ್ದಿ ಬಂತು! ಭಾರತದ ಪ್ರತಿನಿಧಿಯಾಗಿ ನರೇಂದ್ರನು ಹೋಗಬೇಕೆಂದು ಹಲವರು ಹುರಿದುಂಬಿಸಿದರು. ನರೇಂದ್ರನು ಅಷ್ಟರಲ್ಲಿಯೇ ತನ್ನ ಹೆಸರನ್ನು "ವಿವೇಕಾನಂದ" ಎಂದು ಮಾರ್ಪಡಿಸಿದ್ದನು. ವಿವೇಕಾನಂದರು ತನ್ನ ಗುರುದೇವನನ್ನು ನೆನೆದು ಸರ್ವ ಧರ್ಮ ಸಮ್ಮೇಳನಕ್ಕೆ ಹೋಗಲು ಉದ್ಯುಕ್ತರಾದರು!

ದಾರಿಯಲ್ಲಿ ಅನೇಕ ಕಷ್ಟಗಳನ್ನು ಪಡಬೇಕಾಯಿತು. ಮೊದಲು ಮೊದಲು ವಿದೇಶದಲ್ಲಿ ಸಾಕಷ್ಟು ಗೌರವ ದೊರೆಯಲಿಲ್ಲ. ಆದರೆ ಗುರು ಕೃಪೆಯಿಂದ ವಿವೇಕಾನಂದರಿಗೆ ಅಲ್ಲಿಯೂ ಸನ್ಮಿತ್ರರು ದೊರಕಿದರು! ಸರ್ವ ಧರ್ಮಸಮ್ಮೇಳನದಲ್ಲಿ ಮಾತನಾಡಲು ವಿವೇಕಾನಂದರಿಗೆ ಅವಸರ ದೊರೆಕಿತು.

ಬೇರೆ ಬೇರೆ ಧರ್ಮದವರು ತಮ್ಮ ತಮ್ಮ ಧರ್ಮಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು. ಕೊನೆಗೆ ಭಾರತದ ಪ್ರತಿನಿಧಿ ವಿವೇಕಾನಂದರು ಎದ್ದು ನಿಂತರು! "ಬಂಧು ಭಗಿನಿಯರೇ!" ಎಂಬ ಅವರ ಸಂಬೋಧನೆಯೇ ಪ್ರಚಂಡ ಕರತಾಡನದಿಂದ ಶ್ಲಾಘಿಸಲ್ಪಟ್ಟಿತು! ಸುಂದರ ಗಂಭೀರ ಆಕೃತಿಯ ವೀರ ಸನ್ಯಾಸಿಯು ತನ್ನ ಸಿಂಹನಾದದಂತಹ ಅಸ್ಖಲಿತ ವಾಕ್ಸರಣಿಯಿಂದ ಸಭಿಕರನ್ನು ಆಕರ್ಷಿಸಿ ಸರ್ವ ಮತಗಳ ಸಮನ್ವಯ ಸಿದ್ಧಾಂತವಾದ ಭಾರತೀಯ ಧರ್ಮ ತತ್ವವನ್ನು ಸಾರಿದನು! ಇಡೀ ಯೂರೋಪಿನಲ್ಲಿ ಅಂದಿನಿಂದ ಅವರ ಕೀರ್ತಿ ದುಂದುಭಿಯು ಮೊಳಗಿತು!

ಯೂರೋಪಿನಲ್ಲಿ ಪ್ರಚಾರ

ಅಲ್ಲಿ ಅನೇಕ ಆಹ್ವಾನಗಳು ಬಂದವು. ಎಲ್ಲೆಡೆಗಳಲ್ಲಿಯೂ ಅವರು ಅಮೇರಿಕದಲ್ಲಿ ಭಾರತ ಧರ್ಮದ ಕುರಿತು ಪ್ರಚಂಡ ಭಾಷಣಗಳನ್ನು ಮಾಡಿ, ಭಾರತದ ಬಗ್ಗೆ ಪಾಶ್ಚಾತ್ಯರಿಗಿದ್ದ ತಪ್ಪುಅಭಿಪ್ರಾಯವನ್ನು ಹೋಗಲಾಡಿಸಿದರು! ಮುಂದೆ ಅವರು ಇಂಗ್ಲೆಂಡಿಗೆ ತೆರಳಿ ಅಲ್ಲಿಯೂ ಧರ್ಮಪ್ರಚಾರ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದರು. ಯೂರೋಪಿನ ಅನೇಕ ಮಹಾಮಹಾ ವಿದ್ವಾಂಸರು ಅವರ ಆಪ್ತ ಮಿತ್ರರಾದರು! ಹಲವರು ಅವರ ಶಿಷ್ಯರಾದರು! ಇಂತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೌರ್ವಾತ್ಯ ಸಂಸ್ಕೃತಿಯ ಬೆಳಕು ಪ್ರಚಂಡವಾಗಿ ಪಸರಿಸಿತು!

ಸಂಘಸ್ಥಾಪನೆ

ನಾಲ್ಕು ವರ್ಷಗಳ ತನಕ ಯುರೋಪಿನಲ್ಲಿದ್ದ, ಅವರಿಗೆ ಮಾತೃಭೂಮಿಯ ನೆನಪಾಯಿತು! ಭಾರತಕ್ಕೆ ಮರಳಿ ಬಂದವರು ಸುಮ್ಮನಿರಲಿಲ್ಲ! ಅಷ್ಟರಲ್ಲಿಯೇ ಭಾರತ ದೇಶದಲ್ಲಿ ವಿವೇಕಾನಂದರ ಹೆಸರು ಮನೆಯಮಾತಾಗಿತ್ತು! ತನ್ನ ಪ್ರೀತಿಯ ಪುತ್ರನನ್ನು ಭರತಮಾತೆ ಎಲ್ಲೆಡೆಗಳಲ್ಲಿಯೂ ಅತ್ಯಂತ ಆದರದಿಂದ ಸಂಭ್ರಮದಿಂದ ಸ್ವಾಗತಿಸಿದಳು!

ಬಂದವರು ಅನೇಕ ಕಡೆಗಳಲ್ಲಿ ಸಂಘಗಳನ್ನು ಸ್ಥಾಪಿಸಿದರು! "ಶ್ರೀ ರಾಮಕೃಷ್ಣ ಮಿಶನ್" ಎಂಬ ಹೆಸರಿನಿಂದ ಲೋಕ ಸೇವೆಯನ್ನು ಮಾಡುವುದು ಆ ಸಂಘಗಳ ಗುರಿಯಿತ್ತು!

ಮತ್ತೊಮ್ಮೆ ಅವರಿಗೆ ಯುರೋಪಿನಿಂದ ಆಮಂತ್ರಣ ಬಂತು; ಅಲ್ಲಿಗೆ ಹೋಗಿ ಅಲ್ಲಿ ಮತ್ತೊಮ್ಮೆ ಧರ್ಮ ಪ್ರಚಾರ ಮಾಡಿದರು. ತಿರಿಗಿ ಸ್ವದೇಶಕ್ಕೆ ಮರಳಿದವರಿಗೆ ಆರೋಗ್ಯ ಕೆಟ್ಟಿತು! ಅವಿಶ್ರಾಂತವಾದ ಕಾರ್ಯದಿಂದ ಅವರ ಆರೋಗ್ಯವು ಬಹಳವಾಗಿ ಕಂಗಾಲಾಯಿತು! ಶಿಷ್ಯರು, ಹಿತಚಿಂತಕರು, ಸ್ವಾಮಿಯವರಿಗೆ ಸಾಕಷ್ಟು ಉಪಚಾರ ಚಿಕಿತ್ಸೆ ನಡೆಸಿದರು.

ಜ್ಯೋತಿ ನಂದಿತು!

ಕೊನೆಗೆ ಅವರ ಅಂತಿಮಕಾಲವು ಸಮಿಪಿಸಿತು! ೧೯೦೨ನೆಯ ಇಸವಿ ಜೂಲಾಯಿ ತಿಂಗಳ ೪ನೆಯ ದಿನ ಯೋಗಿವರ್ಯ ವಿವೇಕಾನಂದರು ಅನಂತ ನಿದ್ರೆಯಲ್ಲಿ ಪವಡಿಸಿದರು! ಧೀರ ವೀರರಾದು ಶ್ರೀ ದುಡಿದು ದುಡಿದು ಚಿರ ವಿಶ್ರಾಂತಿ ಪಡೆದರು! ಭಾರತಿಯು ತನ್ನ ಭಾಗ್ಯ ಪುತ್ರನ ಅಕಾಲ ಮರಣಕ್ಕಾಗಿ ಬಾಷ್ಪಾಂಜಲಿ ಸುರಿಸಿದಳು! ಅಖಿಲ ಪ್ರಪಂಚವೇ ಶೋಕದ ಕಡಲಲ್ಲಿ ಅದ್ದಿತು!

ಹೀಗೆ, ಹೊಸಯುಗದ ನವನೂತನ ಇತಿಹಾಸ ನಿರ್ಮಾಣಕಾರರಾದ ಶ್ರೀ ವಿವೇಕಾನಂದರು ಅದ್ಭುತ ಕಾರ್ಯಗಳಿಂದ ಅಖಿಲ ಪ್ರಪಂಚಕ್ಕೆ ಭಾರತದ ಆಧ್ಯಾತ್ಮಿಕ ತತ್ವವನ್ನು ತಿಳಿಸಿ ಅಮೃತಪುತ್ರರನ್ನು ಅಮೃತಮಯವಾಣಿಯಿಂದ ಎಚ್ಚರಿಸಿ ದಾರಿ ತೋರಿಸಿದರು!

ನೋಟಗಳು!

ಯುದ್ಧವಾರಂಭವಾದ ಮೇಲೆ ಈಗ ಆರನೆಯ ಸಲ ಗಾಂಧಿಜಿಯವರು ವೈಸರಾಯರನ್ನು ಕಂಡುಮಾತನಾಡಿದರು!

—ವೈಸರಾಯರು ಕರೆಯುತ್ತಾರೆ, ಗಾಂಧಿಜಿಯವರು ಹೋಗುತ್ತಾರೆ!

—ವೈಸರಾಯರು ಗಾಂಧಿಜಿಯವರೊಡನೆ ಯಾವ ವಿಷಯವಾಗಿ ಮಾತನಾಡಿದರೆಂಬುದು ಇನ್ನೂ ಪ್ರಕಟವಾಗಿಲ್ಲ.

—ಆದರೆ, ಇಷ್ಟರಲ್ಲಿ ಜನರು ಊಹೆಗಳನ್ನು ಹರಿಯಬಿಟ್ಟಿದ್ದಾರೆ!

—ವೈಸರಾಯರು ತನ್ನಮಂತ್ರಿಮಂಡಲವನ್ನು ವಿಸ್ತರಿಸಿ ಅದರಲ್ಲಿ ಭಾರತ ಮುಖಂಡರಿಗೆ ಸ್ಥಾನ ಕೊಡುವರೆಂದು ಒಂದು ಊಹೆ!

—ಅಧಿಕಾರ ಸೂತ್ರವಿಲ್ಲದೆ, ಮಂತ್ರಿಸ್ಥಾನದಿಂದ ನಾವು ತೃಪ್ತಿ ಹೊಂದಲಾರೆವೆಂದು ಅದಕ್ಕೆ ರಾಜಾಜಿಯವರೇ ಎದುರು ನುಡಿದಿದ್ದಾರೆ!

—ಅಂಶೂ ಬರಿಯ ಮಾತುಕತೆ ನಡೆಸಿಬಿಟ್ಟರೆ ಜನರು ಏನೂ ತೃಪ್ತರಾಗುವದಿಲ್ಲ ಕೃತಿಯಿಂದ ತೋರಿಸಬೇಕು. ಆಗ ಮಾತ್ರ ವಿಶ್ವಾಸವನ್ನು ಗಳಿಸಬಹುದು!

◇

ಬ್ರಿಟನಿನ ಆಪತ್ಕಾಲದಲ್ಲಿ ಭಾರತವು ಲಾಭ ಪಡೆಯಲು ಇಚ್ಛೆ ಪಡುವುದಿಲ್ಲವೆಂಬುದು ಕಾಂಗ್ರೆಸಿನ ಸ್ಪಷ್ಟ ಧೋರಣೆಯಾಗಿದೆ!

—ಈ ಯುದ್ಧದಲ್ಲಿ ಬ್ರಿಟನಿಗೆ ಗೆಲವಾಗಲೆಂಬುದು ಭಾರತೀಯರ ಹಾರೈಕೆಯೂ ಆಗಿದೆ.

—ಬ್ರಿಟನು ಮತ್ತು ಭಾರತೀಯರದು ಸುಮಾರು ಇನ್ನೂರು ವರ್ಷಗಳ ಸಂಬಂಧ.

—ಎಷ್ಟೋ ಅಂತಃಕಲಹಗಳು ಅನರ್ಥಗಳು ಉಂಟಾಗಿರಬಹುದು, ಆದರೆ ಈ ವಿಪತ್ಕಾಲದಲ್ಲಿ ಭಾರತೀಯರು ಎಲ್ಲವನ್ನೂ ಮರೆತು ಬಿಟ್ಟಿದ್ದಾರೆ!

—ಆದರೆ ಬ್ರಿಟನು ಭಾರತೀಯರಲ್ಲಿ ಇನ್ನೂ ಸಂಶಯಗೊಂಡಿದೆ

— ಭಾರತೀಯರು ಸ್ವತಂತ್ರ ಆಡಳಿತಕ್ಕೆ ಪಾತ್ರರೋ ಅಲ್ಲವೋ ಎಂಬ ವಿಷಯ ಇನ್ನೂ ಬ್ರಿಟನಿಗೆ ಸಂಶಯವಿದೆ.

—ಸರಕಾರದ ಸೂತ್ರವನ್ನು ವಹಿಸಿ ಕಾಂಗ್ರೆಸು ಮಂತ್ರಿಮಂಡಳಗಳು, ಅಖಿಲ ಭಾರತದಲ್ಲಿ ಪ್ರಶಂಸನೀಯವಾಗಿ ಆಡಳಿತವನ್ನು ನಡೆಸಿ ತೋರಿಸಿವೆ!

—ಆದರೂ, ಬ್ರಿಟಿಷ್ ಸರಕಾರವು ಕಾಂಗ್ರೆಸನ್ನು ನಂಬುವ ಹಾಗೆ ಕಾಣುವುದಿಲ್ಲ!

ಸಂಶಯವು ಮಹಾನರ್ಥ ಕಾರಣವು! ಗೀತೆಯಲ್ಲಿ ಹೀಗೆ ಹೇಳಿದೆ: - "ಸಂಶಯಾತ್ಮಾ

ಪ್ರಕಟಣೆ

ಕಾರ್ಕಳ ದಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 40/40 R. I. A. No 236 of 1940

ನರಸಿಂಹ ಗಡಿಯಾರ—ವಾದಿ

ಮತ್ತು

ಇಂತ್ರ್ಯ ಸಿಂತ ಕೂಡಾ—ಪ್ರತಿವಾದಿ ಇವರೊಳಗೆ

ಮೈಸೂರು ಸಂಸ್ಥಾನದ ಕಡೂರು ಜಿಲ್ಲೆ ಚಿಕ್ಕಮಗ್ಳೂರು ತಾಲ್ಲೂಕು ಕೋಟಾರ ಖಾನ್ ಎಸ್ಟೇಟನಲ್ಲಿ ರೈಟರನಾಗಿರುವ ಬಾಲ್ತಿಜಾರ ಸಿಂತರ ಮಗ ೧ನೇ ಪ್ರತಿವಾದಿ ಇಂತ್ರ್ಯ ಸಿಂತರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ –

ವಾದಿಯು ನಿಮ್ಮ ಮೇಲೆ ಕೂಡಾ ಮೂಲಗೇಣಿ ಗೇಣಿ ಬಾಕಿ ಬಡ್ಡಿ ಕೂಡಾ ರೂ. ೪೨೦-೬-೯ ಮುಂದಿನ ಬಡ್ಡಿ ಮತ್ತು ಕೋರ್ಟು ಖರ್ಚು ಕೂಡಾ ಬರಮಾಡಿಕೊಳ್ಳುವ ಬಗ್ಗೆ ಸದ್ರಿ ದಾವೆ ದಾಖಲು ಮಾಡಿದ್ದಾನೆ ಮತ್ತು ಸದ್ರಿ ದಾವೆಯಲ್ಲಿ ನಿಮ್ಮ ಹಕ್ಕಿನ ಬಾಬ್ತು ಸ್ಥಿರ ಆಸ್ತಿ ಜಜ್ಮೆಂಟಿಗೆ ಮುಂಚೆ ಜಪ್ತಿ ಮಾಡಬೇಕಾಗಿ ಸಹಾ ಸದ್ರಿ ಅರ್ಜಿ ದಾಖಲು ಮಾಡಿದ್ದಾನೆ ಸದ್ರಿ ದಾವೆ ಮತ್ತು ಸದ್ರಿ ಅರ್ಜಿ ಕೂಡಾ ತಾರೀಕು ೨೯-೭-೧೯೪೦ನೇ ತಸ್ಸಿಗೆ ಇಡಲಾಗಿಯದೆ ಸದ್ರಿ ವ್ಯವಹಾರಗಳಿಗೆ ನಿಮ್ಮ ಆಕ್ಷೇಪ ಇರುವದಾದರೆ ಸದ್ರಿ ತಾರೀಕು ೨೯-೭-೧೯೪೦ನೇ [illegible] ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದೆ ಇದ್ದಲ್ಲಿ ಸದ್ರಿ ವ್ಯವಹಾರಗಳು ನಿಮ್ಮ [illegible] ಹಾಜರಿಯಲ್ಲಿ ತೀರ್ಮಾನಿಸಲ್ಪಡುವ [illegible] ಸಂಗ್ತಿ ನೀವು ತಿಳಿದಿರತಕ್ಕದ್ದು

ಕೋರ್ಟಿನ [illegible] ಪ್ರಕಾರ

ಮೊಕ್ಕಾಂ ಕಾರ್ಕಳ ೩೦-೬-೧೯೪೦ } ಯಂ. ಎನ್. ಅಧಿಕಾರಿ ವಾದಿಯಕಡೆ ವಕೀಲ್

ನೊರಗಿ ಕಡ್ಡಿಯರತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ

RS, 36000

ಸರಿಯಾಗಿ ಉತ್ತರ ಕಳುಹಿಸಿದ 18 ಮಂದಿಗಳೊಳಗೆ ಹಂಚಲಾಗುವುದು

ನಾವು ಕೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 100ರ ಬಹುಮಾನ ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 20 ಉದ್ದದ ಸಾಲಿನ ಎರಡು ಅಂಕೆಗಳನ್ನು ಹೋಲುವ ಅದೇ ಸಾಲಿನ ಉತ್ತರ ಕಳುಹಿಸಿದವರಿಗೆ ರೂ.5ರ ಕೊನ್ಸೊಲೇಷನ್ ಬಹುಮಾನ

ಪ್ರತೀ ಸಾಲನ್ನು ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 42 ಬರುವಂತೆ ಬಲಕ್ಕಿರುವ ಅಂಕಣಗಳಲ್ಲಿ 3ರಿಂದ 18ರ ವರೆಗೆ ಅಂಕೆಗಳನ್ನು ಬರೆಯಿರಿ ಒಂದು ಬಾರಿ ಉಪಯೋಗಿಸಿದ ಅಂಕೆಯನ್ನು ಪುನರಪಿ ಬರೆಯಕೂಡದು. ಉತ್ತರವನ್ನು ಕಳುಹಿಸುವ ಕಡೇ ದಿನ 17—7—1940. ಫಲಿತಾಂಶ 27—7—1940

ಒಂದು ಉತ್ತರಕ್ಕೆ ರೂ. 1 ಪ್ರವೇಶಧನ 3 ಉತ್ತರಗಳಿಗೆ ರೂ. 2. ರೂ 5ಕ್ಕೆ 8 ಉತ್ತರಗಳು

ನಿಯಮಗಳು— ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದ ಮೇಲೆ ಎಷ್ಟೂ ಉತ್ತರಗಳನ್ನು ಕಳುಹಿಸಬಹುದು ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು. ಬಹುಮಾನದ ಮೌಲ್ಯವು ಜಮೆಯಾದ ಹಣದ ಮೇಲೆ ಹೊಂದಿಕೊಂಡಿದೆ. ಆದರೆ ಕಡಿಮೆ ಎಂದರೆ, ರೂ 2000ನ್ನು ನಾವು ಬೋಂಬಾಯ ಪ್ರಾಮುಖ್ಯ ಬ್ಯಾಂಕೊಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವೆವೆಂಬ ಭರವಸೆಯನ್ನೀಯುವೆವು. ಎಲ್ಲಾ ಕಳುಹಿಸಿದ ಉತ್ತರಗಳು 1940ನೇ ಜುಲೈ 22ನೇ ತಾರೀಕಿನೊಳಗೆ ನಮಗೆ ಮುಟ್ಟತಕ್ಕದ್ದು. ತದನಂತರ ಬಂದ ಉತ್ತರಗಳಿಗೆ ಗಮನಕೊಡಲಾಗಲಿಕ್ಕಿಲ್ಲ. ನಿಮ್ಮ ಹೆಸರು, ಎಡ್ರೆಸು ಅಂಕೆಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಿರಿ. ಉತ್ತರ ಬೇಕೆಂದಾದರೂ ಅರ್ಧಾಣೆ ಟಿಕೇಟನ್ನು ತಮ್ಮ ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿರಿ. ಎಲ್ಲಾ ವಿಷಯಗಳಲ್ಲಿ ಮೆನೇಜರರ ತೀರ್ಮಾನವು ಅಂತಿಮವೂ ನ್ಯಾಯಬದ್ಧವೂ ಆಗಿರುತ್ತದೆ.

ಕಳೆದ ಬಾರಿಯ 54ರ ಉತ್ತರ.

1ನೇ ಸಾಲು	14	11	17	12
2ನೇ ,,	10	15	13	16
3ನೇ ,,	9	8	18	19
4ನೇ ,,	21	20	6	7

ಎಲ್ಲ ಉತ್ತರವನ್ನು ಪ್ರವೇಶ ಹಣದೊಂದಿಗೆ ಈ ವಿಳಾಸಕ್ಕೆ ಕಳುಹಿಸಿರಿ.

ದಿ ಮೆನೇಜರ್—

ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕೊ.,

'ಪಾವೆರ್ ಹೌಸ್' 199, ಹಾರ್ನಬಿ ರೋಡ್, ಫೋರ್ಟ ಬೊಂಬಾಯಿ.

ನಿಮಗೆ ನೆಟ್ಟಗಾಗದ ಕಾರಣ ಒಂದೇ ಅಂದರೆ ಗುಣಪಡಿಸುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳಿಲ್ಲ ನಿರುಪಯೋಗಿಯಾಗಿದ್ದವು 'ಪುರೋಹಿತ—ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ ಅದನ್ನು ತೆಗೆದುಕೊಳ್ಳುತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಕೇಳು ಕಡಿಮೆಯಾಗುವುದು, ಶ್ವಾಸತೂಂಪರೆ ಉಳಿಯುವುದಿಲ್ಲ ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಒಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ತಿರುಗಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು [illegible] ಮತ್ತು [illegible] ಬಾಟ್ಲಿಗಳಲ್ಲಿ ಕ್ರಮವಾಗಿ ರೂ. [illegible] ಮತ್ತು [illegible]ಗೆ ಎಲ್ಲಾ ಕಡೆ ಸಿಗುತ್ತದೆ ತರಿಸಿಕೊಳ್ಳುವ ವಿಳಾಸ.

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು.

ವನಮಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರಿ



ವಿಜ್ಞಾನಯುಗ

ಆಹಾರದಲ್ಲಿ ಜೇನಿನ ಉಪಯೋಗ

ಜೀವನಕ್ಕೆ ಸೂರ್ಯರಶ್ಮಿಯು ಎಷ್ಟು ಉಪಯುಕ್ತವೋ, ಜೇನೂ ಅಷ್ಟೇ ಉಪಯುಕ್ತವಾಗಿರುವದೆಂದು 'ಹೆಲ್ತ್ ಫೋರ್ ಆಲ್' ಎಂಬ ಪತ್ರಿಕೆಯಲ್ಲಿ ಒಬ್ಬ ವಿಜ್ಞಾನಿಯು ಬರೆದಿರುವರು. ಜೇನಿನಲ್ಲಿ ಹೊಟ್ಟೆಗೆ ತಗೊಂಡಾಕ್ಷಣ ರಕ್ತಗತವಾಗುವಂಥ ಸ್ಥಿತಿಯಲ್ಲಿ ಅನೇಕ ಅಮೂಲ್ಯ ಸಾಧನಗಳು ಸೇರಿಕೊಂಡಿರುತ್ತವೆ. ಜೇನನ್ನು ಆಹಾರದೊಂದಿಗೆ, ಅದರಲ್ಲೂ ಮುಖ್ಯವಾಗಿ ಒಳಗ್ಗೆ ತೆಗೆದುಕೊಳ್ಳುವುದರಿಂದ ಶರೀರಧಾರಣ ಮತ್ತು ಆರೋಗ್ಯಕ್ಕೆ ಅಪರಿಮಿತ ಲಾಭವಾಗುವುದು. ಆದರೆ ಒಂದೂಟವಾದ ಮೇಲೆ ಇನ್ನೊಂದೂಟವಾಗುವ ಸವಯದ ಮಧ್ಯಕಾಲದಲ್ಲಿ ಉಪಯೋಗಿಸುವುದು ಅಷ್ಟು ಹಿತಕಾರಿಯಾಗಿರುವುದಿಲ್ಲ. ಜೇನಿನಲ್ಲಿ ವಿಷಹಾರಿ ಗುಣಗಳೂ, ರೋಗಾಣುಗಳನ್ನು ತಡೆಯುವ ಶಕ್ತಿಯೂ ಇರುತ್ತದೆ. ರೋಗಾಣುಗಳು ಜೇನಿನಲ್ಲಿ ಹೆಚ್ಚು ಕಾಲ ಜೀವಿಸಲಾರವು. ಸುಟ್ಟ ಗಾಯ, ಬೊಕ್ಕೆ, ವ್ರಣ ಮೊದಲಾದುವುಗಳನ್ನು ಜೇನನ್ನು ಹಚ್ಚುವುದರಿಂದ ದೊರೆಯುವ ಅಪ್ರತಿಮ ಪ್ರಯೋಜನವು ದಿನಗಳು ಕಳೆದಂತೆ ಹೆಚ್ಚುಹೆಚ್ಚಾಗಿ ಜನರ ಅನುಭವಕ್ಕೆ ಬರುತ್ತವೆ. ಜೇನನ್ನು ಯಾರು ಬೇಕಾದರೂ ತಿನ್ನುತ್ತಿರಬಹುದು. ಆದರೆ ಮಧುಮೂತ್ರ ಮತ್ತು ಪಥ್ಯದಲ್ಲಿರುವವರು ಮಾತ್ರ ಇದನ್ನು ಹೊಟ್ಟೆಗೆ ತೆಗೆದುಕೊಳ್ಳುವ ಮೊದಲು ವೈದ್ಯರ ಅಭಿಪ್ರಾಯವನ್ನು ಕೇಳಿಕೊಳ್ಳಬೇಕು. ಆಟಗಾರರಿಗೆ ಜೇನು ಅದ್ಭುತ ಶಕ್ತಿದಾಯಕವಾಗಿರುವುದು. ಈಗೀಗ ವಿಮಾನ ಸಂಚಾಲಕರು ತಮ್ಮ ಆಹಾರದೊಂದಿಗೆ ಜೇನನ್ನು ಉಪಯೋಗಿಸುತ್ತಿದ್ದಾರೆ. ಮನುಷ್ಯ ಜೀವನಕ್ಕೆ ಜೇನು ಸಂಜೀವನದಂತಿರುವದೆಂಬುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಜಗತ್ತಿನಲ್ಲಿ ಅತಿ ವೃದ್ಧ!

ಪ್ರಪಂಚದಲ್ಲಿ ಅತಿ ವೃದ್ಧ ಮನುಷ್ಯನು ಮೆಕ್ಸಿಕೋದಲ್ಲಿರುವನೆಂದು ಅಲ್ಲಿನವರು ಹೇಳುತ್ತಾರೆ. ವಾಸಿಲಿಸಿಕಿ ಪ್ರೊರೊವಿನ್ ಇವಾನಾಲ್ ಎಂಬುದು ಅವನ ಹೆಸರು. ಈಗ ಅವನಿಗೆ ೧೪೨ ವರ್ಷ ವಯಸ್ಸಾಗಿದೆ. ೧೮೧೨ರಲ್ಲಿ ನಪೋಲಿಯನನು ಮೊಸ್ಕೋ ನಗರಕ್ಕೆ ದಂಡೆತ್ತಿ ಬಂದ ಸಂಗತಿಯು ಅವನಿಗೆ ಚೆನ್ನಾಗಿ ನೆನಪಿನಲ್ಲಿದೆ. ಈ ವೃದ್ಧಾಪ್ಯದಲ್ಲಿ ಕೂಡ ಅವನು ಬಹಳ ಆರೋಗ್ಯದಲ್ಲಿ ಇರುತ್ತಾನೆ!

ಬಾಯಿಯ ದುರ್ಗಂಧ!

ಎಲ್ಲಾ ಪ್ರಾಣಿಗಳ ಬಾಯಿಗಳಿಗಿಂತ ಮನುಷ್ಯನ ಬಾಯಿಯು ಹೆಚ್ಚು ದುರ್ಗಂಧವಾಗಿರುವುದೆಂದು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಮನುಷ್ಯನಿಗಿಂತ ಪ್ರಾಣಿಗಳು ತಮ್ಮ ಹಲ್ಲುಗಳನ್ನು ಚೆನ್ನಾಗಿ ತೊಳೆದು ಚೊಕ್ಕಟವಾಗಿಡುತ್ತವೆ ಎಂಬುದರಿಂದೇನೂ ಅವುಗಳ ಬಾಯಿ ಹೊಲಸಾಗಿಲ್ಲದಿರುವುದಿಲ್ಲ. ನಾಯಿ, ಬೆಕ್ಕು, ಹಂದಿ, ಕುದುರೆ, ಗಂಡಮೃಗ, ಆನೆ, ಸಿಂಹ, ಬೆಬೂನು ಮತ್ತು ಚಿಂಪಾಂಜಿ ಈ ಪ್ರಾಣಿಗಳ ಎಂಜಲನ್ನು ಪರೀಕ್ಷಿಸಿದಾಗ ಇವೆಲ್ಲವುಗಳಿಗಿಂತ ಮನುಷ್ಯನ ಎಂಜಲು ಹೆಚ್ಚು ದುರ್ಗಂಧಮಯವೂ ವಿಷಾಣುಗಳಿಂದ ಕೂಡಿದದೂ ಆಗಿರುವುದೆಂದು ಗೊತ್ತಾಗುತ್ತದೆ. ಇದರ ಮುಖ್ಯ ಕಾರಣ ಈ ಪ್ರಾಣಿಗಳ ಎಂಜಲಿನಲ್ಲಿ ಇರುವುದಕ್ಕಿಂತ ಮನುಷ್ಯನ ಎಂಜಲಿನಲ್ಲಿ ಸೋಡಿಯಂ ಕಾರ್ಬೊನೆಟ್ ಎಂಬುದು ಕಡಿಮೆಯಾಗಿರುವುದು. ಹಲ್ಲುಗಳ ರಕ್ಷಣೆಗೆ ಸೋಡಿಯಂ ಕಾರ್ಬೊನೇಟು ಮುಖ್ಯವಾಗಿ ಬೇಕಾದುದು. ಮನುಷ್ಯನ ಎಂಜಲಿನಲ್ಲಿ ಆ ಪದಾರ್ಥವೇ ಕಡಿಮೆಯಾಗಿರುವುದರಿಂದ ಹಲ್ಲುಗಳಲ್ಲಿ ಪದಾರ್ಥಗಳು ಕೊಳೆತು ಎಂಜಲು ದುರ್ಗಂಧಮಯವಾಗಿರುವುದು.

ಸೌಂದರ್ಯಕ್ಕಾಗಿ ತಿನ್ನಿರಿ!

ಎಂಬ ಕೂಗು ಅಮೆರಿಕದಲ್ಲೀಗ ವಿಶೇಷವಾಗುತ್ತಲಿದೆ. ಮೊದಲಾದರೆ ಆರೋಗ್ಯಕ್ಕಾಗಿ ತಿನ್ನಿರಿ ಎಂದಿರುತ್ತಿತ್ತು. ಈಗ ಸೌಂದರ್ಯಕ್ಕಾಗಿ ತಿನ್ನಿರಿ ಎಂದಾಗಿದೆ. ಅಮೆರಿಕದಲ್ಲಿ ಸೌಂದರ್ಯದ ಉಪಾಸಕರು ಹೆಚ್ಚಾಗಿರುವದೇ ಇದಕ್ಕೆ ಕಾರಣವೆಂದು ತಿಳಿಯಲಾಗಿದೆ. ಆಹಾರ ವಿಶೇಷಜ್ಞರು—ಸೌಂದರ್ಯಕ್ಕೆ ಹಣ್ಣು ಹಂಪಲುಗಳ ರಸವು ಬಹಳ ಸಹಾಯಕವಾಗುವವೆಂದು ಹೇಳಲಾರಂಭಿಸಿದಂದಿನಿಂದ ಅಲ್ಲಿ ಮದ್ಯದಂಗಡಿಗಳಲ್ಲಿ ಹಣ್ಣುರಸಗಳನ್ನು ಮಾರಲಾರಂಭಿಸಿರುವರು. ಸೌಂದರ್ಯ ಬೆಳವಣಿಗೆಗೆ ಜನರು ಕೊಂಡುಕೊಳ್ಳುವ ಈ ರಸಾದಿಗಳ ವ್ಯಾಪಾರವು ಈಗ ತುಂಬಾ ಜಗಿರುವದು. ಹಣ್ಣುರಸಗಳನ್ನುಹಿಂಡುವ ವಿದ್ಯುಚ್ಛಕ್ತಿಯ ಸಾಧನಗಳೂ ಬಹಳ ಮಾರಲ್ಪಡುತ್ತಲಿರುವವು.

ನಾವು ತೆಗೆದುಕೊಳ್ಳುತ್ತಿರುವ ಆಹಾರ ಒಂದೊಂದು ಅಂಗ ವಿಶೇಷಕ್ಕೆ ಉಪಯುಕ್ತವಾಗಿದೆಎಂಬ ತತ್ವವೆ ಈ ವ್ಯಾಪಾರಕ್ಕೆ ಪುಟಕೊಟ್ಟಿದೆ. ಆಹಾರ ಕ್ರಮದ ಬದಲಾವಣೆ ಮತ್ತು ಕೆಲವು ಸಾಮಾನ್ಯ ನಿಯಮಗಳನ್ನು ಬಹು ಚೆನ್ನಾಗಿ ಬೆಳೆಸಿಕೊಳ್ಳಬಹುದು. ಹಣ್ಣುಗಳ ಮತ್ತು ತರಕಾರಿಗಳ ರಸಗಳು ಸೌಂದರ್ಯ ಸಂವರ್ಧನೆಗೆ ಬಹಳ ಸಹಾಯಕವಾಗಿದೆ. ಚರ್ಮವು ಬೆಳೆದಾಗಲಿಕ್ಕೆ ಗಂಧಕವು ಬೇಕು. ಇದು ಸೀರಳೆ, ಕೆಂಪು ಕೋಬಿಜಗಳಲ್ಲಿ ಬಹಳ ಇದೆ. ಇದನ್ನು ತಿನ್ನುವುದರಿಂದ ಕಪ್ಪಾಗಿದ್ದವರು ಬೆಳ್ಳಗಾಗಬಹುದು. ಹಾಗೇಯೇ ಸಿಪ್ಪೆತೆಗೆಯದೆ ಹಣ್ಣುಗಳನ್ನು ತಿನ್ನುವದರಿಂದ ತಲೆಕೂದಲು ಚೆನ್ನಾಗಿ ಬೆಳೆಯುತ್ತದೆ. ಕೂದಲು ಬೆಳೆಸುವ ಗುಣ ಹಣ್ಣುಗಳ ಸಿಪ್ಪೆಗಳಲ್ಲಿದೆ. ಅನಾನಾಸಿನಲ್ಲಿ ಕೂದಲು ಬೆಳೆಸುವ ಶಕ್ತಿ ಬಹಳ ಇರುವದಂತೆ. ಕೂದಲು ಹಣ್ಣಾಗುವವರು ಅಕ್ಕಿ ಮತ್ತು ಅರ್ಧಬೆಂದ ತರಕಾರಿ ಇತ್ಯಾದಿಗಳನ್ನು ತಿನ್ನಬೇಕು. ಆಗ ವೃದ್ಧಾಪ್ಯದಲ್ಲಿಯೂ ಕೂದಲು ಹಣ್ಣಾಗುವದಿಲ್ಲ. ಹಣ್ಣು ಹಾಲು, ಕಿತ್ತಳೆ ಮೊದಲಾದುವುಗಳಲ್ಲಿ ಕೆಲ್ಸಿಯಮ್ ಎಂಬುದು ಇರುವದರಿಂದ ಅದನ್ನು ತಿನ್ನುತಿದ್ದರೆ ಹಲ್ಲುಗಳು ಕೆಡುವದಿಲ್ಲ, ತಲೆಸಾಶಿರೋಗವೂ ಬರುವದಿಲ್ಲ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.



ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮ ಔಷಧ ಮತ್ತು ಬಲವರ್ಧಕ.
ತಯ್ಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟ್ಟೆ :: ಮದರಾಸು.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars

K. R. GURU, *Managing Director*

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ತೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ–ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ವರ್ತಮಾನ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುತ್ತದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ನಮ್ಮ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಡಮಾಡಿರುವರು. ಅಲ್ಲದೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ರು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM.

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ ಕ್ರಿ. ಶ. 1858]

ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಚ್ಚು ಮುಡಿಗೆ	2—0—0	
" ದ್ವಯಂ " "	1—15—0	
" ಅವ್ವಲ್ ಸುಗ್ಗಿ "		
" ದುಯಂ " "		
ಅಕ್ಕಿ ಅವ್ವಲ್ ಗುಚ್ಚು "	4—14—0	4—15—0
" ದ್ವಯಂ " "	4—9—0	4—11—0
" ಅವ್ವಲ್ ಸುಗ್ಗಿ "	4—10—0	
" ದುಯಂ " "	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
ಸಿಪ್ಪೆ ಇದ್ದದ್ದು "	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	48—0—0	
" ದಿಲ್‌ಪಸಂದ್ "	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—11—0	8—11—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	4—4—0	4—8—0
ಗೇರುಬೀಜ ಮುಡಿಗೆ	8—0—0	8—4—0
ಕಬ್ಬಿನ ಬೆಲ್ಲ ಖಂಡಿಗೆ	35—0—0	48—12—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

Date 5-7-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M|3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 5-7-1940 [ಸಂಚಿಕೆ 27

The Bombay Life Assurance Company, Ltd.
(Estd. 1908)

LIFE INSURANCE

Dispels darkness of the mind and brings
Enlightenment and Courage, Immortalises
major portion of your Income whether you
survive or not and thus makes life worth
living to you and your dependants in reality

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay Life & Suburbs

The Bombay Life Building,

Sir Lalubhai Samaldas Road

Ganohi Nagar, UDIPI

OR ANY OF THEIR FOLLOWING OFFICES,

Puthavara	Car Street,	Central Station Road
Calicut	Mangalore	Ernakulam
Gautam Nivas Charni Road	Post Box No. 337	Visweswarapuram Circl
Girgaum Bombay No. 4	Mount Road Madras	Bangalore City

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿಯೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬ್ಯಾ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಬ್ರಿಟನಿನ ಬೆಂಬಲ ನಿಂತ ರಣಧೀರರು

KANNADA ILLUSTRATED WEEKLY

ಸಮರಾಗ್ನಿಯು ಪ್ರಶಾಂತಕ್ಕೂ ಹರಡುವುದೇ?

ಜಪಾನಿನ ಧೋರಣೆಯೇನು?

ಭಾರತದ ಸಮಸ್ಯೆಯು ಪರಿಹಾರವಾಗಬೇಕು

ಯೂರೋಪಿನ ಸಮರಾಗ್ನಿಯು ಪೂರ್ವ ದೇಶಗಳಿಗೂ ಹರಡುವ ಲಕ್ಷಣಗಳು ಕಾಣುತ್ತವೆ. ಪೂರ್ವದೇಶಗಳ ರಾಜಕಾರಣದಲ್ಲಿ ಪಾಶ್ಚಿಮಾತ್ಯ ದೇಶಗಳಿಗೆ ಯಾವ ಸಂಬಂಧವೂ ಇರುವುದಿಲ್ಲ ಎಂದು ಜಪಾನಿನ ಪರರಾಷ್ಟ್ರ ಸಚಿವ ಎರಿಟಾರವರು ಎಚ್ಚರಿಕೆಯ ಮಾತುಗಳನ್ನು ಆಡಿದ್ದಾರೆ. ಜಪಾನೀ ಸೇನೆಯು ಜಗಳವನ್ನು ಕೆದಕಲಿಕ್ಕೆ ಕಂಕಣಬದ್ಧವಾಗಿದೆ. ಜಪಾನಿನ ಪತ್ರಿಕೆಗಳು ಯುದ್ಧಾತುರವನ್ನು ಪ್ರದರ್ಶಿಸುತ್ತಲಿವೆ. ರಾಷ್ಟ್ರದ ಮಹತ್ವಾಕಾಂಕ್ಷೆಯನ್ನು ಪೂರೈಸಲಿಕ್ಕೆ ಇದು ಸುವರ್ಣ ಸಂಧಿ ಎಂದು ಅವು ಬರೆಯುತ್ತಿರುವುವು. ಆದ್ದರಿಂದ ಸಂಧರ್ಭವು ಜಪಾನಿನ ಸ್ವಾರ್ಥಸಾಧನೆಗೆ ಅನುಕೂಲವಾದರೆ ಅದು ರಣಕ್ಷೇತ್ರವನ್ನು ಸೇರಲಿಕ್ಕೆ ಹಿಂದು ಮುಂದೆ ನೋಡಲಿಕ್ಕಿಲ್ಲ.

ಶಾಂತಸಾಗರದಲ್ಲಿ ಬ್ರಿಟನಿನ ಆಸಕ್ತಿ!

ಶಾಂತಸಾಗರದಲ್ಲಿ ಬ್ರಿಟನಿಗೂ ಅಮೇರಿಕಕ್ಕೂ ಹಿತಾಸಕ್ತಿಗಳಿವೆ. ಜಪಾನು ಸ್ವಾರ್ಥಸಾಧನೆಗೆ ಹೊರಟರೆ ಅದಕ್ಕೂ ಬ್ರಿಟನು ಅಮೇರಿಕಗಳಿಗೂ ಸಂಘರ್ಷವಾಗಲೇ ಬೇಕು. ಆ ಸಂದರ್ಭದಲ್ಲಿ ಲೋಕಯುದ್ಧವು ಪೂರ್ವಕ್ಕೂ ಹರಡುವುದು. ಇದರ ಪೂರ್ವಸೂಚನೆ ಎಂಬಂತೆ ಬ್ರಿಟಿಷರು ಹಾಂಗಕಾಂಗಿನಲ್ಲಿರುವ ತಮ್ಮ ಜನರನ್ನು ಸಿಂಗಾಪುರಕ್ಕೆ ಕರೆಸಿಕೊಂಡಿರುವರು. ಸಿಂಗಾಪುರದಲ್ಲಿ ರಕ್ಷಣೆ ಮತ್ತು ಭದ್ರತೆಯ ಬಹಳ ತಯಾರಿಗಳಾಗಿವೆ. ಶಾಂತಸಾಗರದಲ್ಲಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲಿಕ್ಕೆ ಬ್ರಿಟನು ಮತ್ತು ಅಮೇರಿಕಗಳೊಳಗೆ ಒಂದು ಗುಪ್ತ ಒಡಂಬಡಿಕೆಯುಂಟಾಗಿರುವುದಾಗಿಯೂ ಒಂದು ಸುದ್ದಿ ಉಂಟಾಗಿದೆ. ಆ ಎರಡು ಸರಕಾರಗಳು ಒಡಂಬಡಿಕೆಯಾಗಿರುವ ವಿಚಾರವನ್ನು ನಿರಾಕರಿಸಿವೆಯಾದರೂ ಅವು ಆ ಕುರಿತು ಆಲೋಚಿಸುತ್ತಾ ಇವೆ ಎಂಬ ಕುರಿತು ಸಂದೇಹವಿಲ್ಲ.

ಹಿಂದೂಸಾಗರದಲ್ಲಿ ಚಲನವಲನ

ಶತ್ರುಪಕ್ಷದವರು ಹಿಂದೂಸಾಗರದಲ್ಲಿಯೂ ತಮ್ಮ ಯುದ್ಧಕ್ರಿಯೆಗಳನ್ನು ಆರಂಭಿಸಿರುವರು. ಕೆಲವೇ ದಿನಗಳ ಹಿಂದೆ ಪಠಾಣ ಎಂಬ ಒಂದು ಯುದ್ಧಹಡಗು ಶತ್ರುಗಳ ಯುದ್ಧಕ್ರಿಯೆಯಿಂದ ಅರಬಿ ಸಮುದ್ರದಲ್ಲಿ ಮುಳುಗಿ ಹೋಯಿತು. ಯುದ್ಧವು ಹಿಂದೂಸ್ಥಾನದ ಕರಾವಳಿಗೆ ಸಮೀಪವಾಗುತ್ತಿದೆ ಎಂಬುದಕ್ಕೆ ಇದೊಂದು ಎಚ್ಚರಿಕೆಯ ಸೂಚನೆಯಾಗಿದೆ.

ಸಮಸ್ಯೆಯ ತೀರ್ಮಾನ

ಹೀಗಿದ್ದರೂ ಭಾರತ ಸಮಸ್ಯೆಯನ್ನು ತೃಪ್ತಿಕರವಾಗಿ ಬಿಡಿಸಿ ಬ್ರಿಟಿಷರ ಪರವಾಗಿ ಯುದ್ಧಕಾರ್ಯವನ್ನು ಜಯಶೀಲವಾಗಿ ಮುಂದೊತ್ತಲಿಕ್ಕೆ ಭಾರತ ಸರಕಾರವು ಇನ್ನೂ ಮಾಡಬೇಕಾದಷ್ಟು ಕೆಲಸಗಳನ್ನು ಮಾಡಿಲ್ಲ. ಕಾಂಗ್ರೆಸ್ಸು ಮತ್ತು ಸರಕಾರಗಳೊಳಗೆ ಉಂಟಾದ ಬಿಕ್ಕಟ್ಟು ಹಾಗೆಯೇ ಇದೆ. ಭಾರತ ಸರಕಾರವು ಐತಿಹಾಸಿಕ ಘಟನೆಗಳಿಂದ ಯಾವ ಪಾಠವನ್ನೂ ಕಲಿಯುವಂತೆ ಕಾಣುವುದಿಲ್ಲ. ಭಾರತ ಸಮಸ್ಯೆಯ ಮತ್ತು ಸ್ವಾತಂತ್ರ್ಯ ವಿಷಯದ ಕುರಿತು ಬ್ರಿಟಿಷ ಸರಕಾರದೊಡನೆ ಒಡಂಬಡಿಕೆ ಮಾಡಿಕೊಳ್ಳುವ ಯೋಗ್ಯತೆ ಮತ್ತು ಸಾಮರ್ಥ್ಯ ಕಾಂಗ್ರೆಸ್ಸಿಗೆ ಇರುವುದು. ಭಾರತವನ್ನು ಸಮಾಧಾನ ಪಡಿಸಿ ಯುದ್ಧಕಾರ್ಯದಲ್ಲಿ ಭಾರತದ ಸ್ವೇಚ್ಛಾಪೂರ್ವಕವಾದ ಸಹಾಯ ಸಹಕಾರಗಳನ್ನು ಬ್ರಿಟನು ಅಪೇಕ್ಷಿಸುವುದಾದರೆ, ಸ್ವರಾಜ್ಯ ಸ್ವಾತಂತ್ರ್ಯಗಳ ವಿಷಯದಲ್ಲಿ ಕಾಂಗ್ರೆಸ್ಸನ್ನು ತೃಪ್ತಿಪಡಿಸಿ ಅದರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಅತಿ ಅಗತ್ಯವಾಗಿದೆ.

ಎಮ್ಮರಿಯವರು ಬರುವರೆ?

ನ್ಯೂ ಸ್ಟೇಟ್ಸಮನ್ ಮತ್ತು ನೇಶನ್ ಎಂಬ ಪತ್ರಿಕೆಯು ಹೀಗೆ ಬರೆಯುತ್ತದೆ: ಹಿಂದೂಸ್ಥಾನಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಮಾತುಕೊಟ್ಟು ಪ್ರಯೋಜನವಿಲ್ಲ. ಹಿಂದುಸ್ಥಾನವು ಈಗಲೇ ಡೊಮಿನಿಯನ್ ಸ್ಟೇಟಸ್ ಪಡೆದಿದೆ ಎಂದು ಬ್ರಿಟಿಷ ಪಾರ್ಲಿಮೆಂಟು ನಿರ್ಣಯಮಾಡಿ ಹಿಂದೂಸ್ಥಾನದ ಚುನಾಯಿತ ಮುಖಂಡರು ಅದರ ರಾಜಕೀಯ ಘಟನೆಯನ್ನು ತಯಾರಿಸುವಂತೆ ಅವರನ್ನು ಕೇಳಬೇಕು. ಯುದ್ಧ ಮುಗಿದ ಒಂದು ವರ್ಷದೊಳಗಾಗಿ ಬ್ರಿಟಿಷ ಪಾರ್ಲಿಮೆಂಟು ಆ ಘಟನೆಗೆ ತನ್ನ ಸಮ್ಮತಿಯ ಮುದ್ರೆಯನ್ನೊತ್ತುವುದಾಗಿಯೂ ಮಾತುಕೊಡಬೇಕು. ಅದಕ್ಕೋಸ್ಕರ ಕಾಂಗ್ರೆಸ್ಸಿನೊಡನೆ ಸಂಧಾನ ಮಾಡಲಿಕ್ಕೆ ಎಮ್ಮರಿಯವರು ಕೂಡಲೇ ಹಿಂದೂಸ್ಥಾನಕ್ಕೆ ಬರಬೇಕು.

ಈ ರೀತಿ ತೃಪ್ತಿಕರವಾದ ವ್ಯವಸ್ಥೆಯು ಆಗದಿದ್ದರೆ ಭವಿಷ್ಯವು ಹೇಗಾಗಬಹುದು ಎಂದು ಊಹಿಸಲಿಕ್ಕೆ ಕಷ್ಟವಿಲ್ಲ. ಆ ಸಂದರ್ಭದಲ್ಲಿ ಬ್ರಿಟನೂ ಅನಾವಶ್ಯಕ ಕಷ್ಟನಷ್ಟಗಳಿಗೆ ಬೀಳಬೇಕಾಗುವುದು. ಹಿಂದುಸ್ಥಾನವೂ ಮಹತ್ತಾದ ವಿಪತ್ತನ್ನು ಎದುರಿಸಬೇಕಾಗುವುದು.

ಅಮೃತ

ನರಗಳಿಗೆ ಬಲಕೊಡುವ ರಕ್ತಶುದ್ಧಿ ದ್ರಾವಕ.

ತಯಾರಿಸುವವರು:

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ಸ್ವೀಕಾರ—ವಿಮರ್ಶೆ

ಶರೀರ ಶಿಕ್ಷಣ:—ಬರೆದವರು: ನಾದಗೀರ ಕೃಷ್ಣರಾಯರು, ಪ್ರಕಾಶಕರು: ಮಲ್ಲಸಜ್ಜನ ವ್ಯಾಯಾಮ ಶಾಲೆ, ಧಾರವಾಡ.

ವ್ಯಾಯಾಮ ಪಟ್ಟಿ ಗ್ರಂಥಿಕರ್ತರು ಶರೀರ ಶಿಕ್ಷಣವೆಂಬ ಹೆಸರಿನಿಂದ ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ವ್ಯಾಯಾಮದಲ್ಲಿ ದೇಹದ ಬೆಳವಣಿಗೆ ಮಾತ್ರವಲ್ಲ, ಆತ್ಮ ಸಂಸ್ಕಾರ ಗುಣವಿದೆಯೆಂಬುದನ್ನು ತಿಳಿಸಿದ್ದಾರೆ. ವ್ಯಾಯಾಮದ ಪೂರ್ವಾಚಾರ, ಅದರ ಗುರಿ, ಮೂಲ ತತ್ವಗಳು, ಸಂಘಟನೆ, ರಚನಾಕ್ರಮ, ಶಿಕ್ಷಣ ಪದ್ಧತಿಗಳನ್ನು ಬೇರೆ ಬೇರೆ ಅಧ್ಯಾಯಗಳಲ್ಲಿ ಶಾಸ್ತ್ರೀಯವಾಗಿ ವಿಮರ್ಶಿಸಿದ್ದಾರೆ. ಶಾಲೆಗಳ ಅಧ್ಯಾಪಕರಿಗೆ ಅತ್ಯಂತ ಉಪಯೋಗವಾದ ಪುಸ್ತಕವಿದು. ವಿದ್ಯಾರ್ಥಿಗಳಿಗೆ ಅವಶ್ಯಕವಾದ ವ್ಯಾಯಾಮಗಳ ಕ್ರಮಗಳನ್ನು ಇದರಲ್ಲಿ ಕೊಟ್ಟಿದೆ. ಅಲ್ಲಲ್ಲಿ ಚಿತ್ರಗಳೂ ಇವೆ. ವ್ಯಾಯಾಮ ವಿಶಾರದರಾದ ಶ್ರೀ ಕೃಷ್ಣರಾಯರು ಶಾಸ್ತ್ರೀಯ ದೃಷ್ಟಿಯಿಂದ ಈ ಪುಸ್ತಕವನ್ನು ಬರೆದು ಕನ್ನಡಿಗರಿಗೆ ಬಹಳ ಉಪಕಾರ ಮಾಡಿದ್ದಾರೆ. ವ್ಯಾಯಾಮಪಟುಗಳಾದ ಪ್ರೋ. ಕೆ. ವಿ. ಅಯ್ಯರು ಇದಕ್ಕೆ ಮುನ್ನುಡಿಯನ್ನು ಬರೆದಿರುವರು.

ಬೆಳ್ಳಿಯ ಹಬ್ಬದ ಸವಿ ನೆನಪು--ಕನ್ನಡ ಸಾಹಿತ್ಯ ಪರಿಷತ್ತು ೨೫ ವರ್ಷಗಳ ತನಕ ನಾಡನುಡಿಯ ಸೇವೆ ಮಾಡಿ ಮೊನ್ನೆ ಅತ್ಯಂತ ಸಮಾರಂಭದಿಂದ ಬೆಂಗಳೂರಲ್ಲಿ ಬೆಳ್ಳಿಯ ಹಬ್ಬವನ್ನು ಆಚರಿಸಿತು. ಈ ಚಿಕ್ಕ ಹೊತ್ತಿಗೆಯಲ್ಲಿ ಇದುವರೆಗೆ ಪರಿಷತ್ತು ಮಾಡಿದ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿಯಿದೆ. ಪರಿಷತ್ತಿನ ಏಳಿಗೆಗಾಗಿ ದುಡಿದ ಶ್ರೀ ಬಿ. ಎಂ. ಶ್ರೀ ಕಂಠಯ್ಯ ಪ್ರಭೃತಿಗಳ ಭಾವ ಚಿತ್ರಗಳಿವೆ. ಇದು ವರೆಗೆ ಪರಿಷತ್ತಿನ ಅಧ್ಯಕ್ಷ ಪೀಠವನ್ನೇರಿದ ಕನ್ನಡ ಸಾಹಿತ್ಯ ಧುರಂಧರರ ಭಾವ ಚಿತ್ರಗಳಿವೆ. ಇಂದು ಪರಿಷತ್ತಿನ ಕಾರ್ಯವು ಅತ್ಯಂತಯ ಶಕ್ತಿಯಾಗಿ ನಡೆಯುತ್ತಿದೆ. ಕನ್ನಡಿಗರು ಈ ಸಂಸ್ಥೆಯನ್ನು ತಮ್ಮ ಸಂಸ್ಥೆಯೆಂಬ ಆತ್ಮೀಯತೆಯಿಂದ ಆದರಿಸಿ ಬೆಳೆಸಬೇಕು. ಪರಿಷತ್ ಸಂಸ್ಥೆಯು ನಾಡುನುಡಿಯನ್ನು ಊರ್ಜಿತಗೊಳಿಸುವುದಾಗಿ ಮಾತ್ರ ಕನ್ನಡ ಬಾವುಟವನ್ನು ಮೆರೆಸುವಂತಾಗಬೇಕು.

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಾಮಿನಿಂದ... ಗಳು ಬಜಾರ ಧಾರಣೆಗಿಂತ... ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತನ್ನನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

12-7-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೨-೭-೧೯೪೦

ವರ್ಕಿಂಗ್ ಕಮಿಟಿ ಮತ್ತು ಗಾಂಧಿಜಿ

ಮೊನ್ನೆ ವರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸಿನ ಇಡೀ ಇತಿಹಾಸದಲ್ಲಿಯೇ ಬಹಳ ಕ್ರಾಂತಿಕಾರಕವಾದೊಂದು ನಿರ್ಣಯವನ್ನು ಮಾಡಿತು. ಭಾರತದ ಆಂತರಿಕ ಮತ್ತು ಬಹಿರಂಗ ಅವ್ಯವಸ್ಥೆಗಳ ವಿಷಯದಲ್ಲಿ ಗಾಂಧಿಜಿಯವರ ಕಾರ್ಯಕ್ರಮಗಳನ್ನು ದೂರೀಕರಿಸಿ ಪ್ರತ್ಯೇಕ ಮಾರ್ಗವನ್ನನುಸರಿಸುವ ನಿರ್ಣಯ ಮಾಡಿರುವ ವಿಷಯವಾಗಿ ರಾಜಕೀಯ ವಾತಾವರಣದಲ್ಲಿ ಅನೇಕ ವಿಚಾರಗಳು ತಲೆದೋರಿವೆ. ವರ್ಕಿಂಗ್ ಕಮಿಟಿಯು ತನ್ನ ನಿರ್ಧಾರವನ್ನು ಸ್ಪಷ್ಟಪಡಿಸಲು ಬಹಳ ಪ್ರಯತ್ನ ಮಾಡಿ ಜನತೆಯನ್ನು ಖಚಿತಗೊಳಿಸಲು ತೊಡಗಿದೆ. ಅಹಿಂಸೆಯ ತತ್ವವನ್ನು ದೇಶದ ಒಳಗಿನ ಮತ್ತು ಹೊರಗಿನ, ಅವ್ಯವಸ್ಥೆಯನ್ನು ಕಾಯುವ ಕಾರ್ಯದಲ್ಲಿ ಬಿಟ್ಟುಕೊಡಬೇಕೆಂದು ಕಾಂಗ್ರೆಸು ನಿರ್ಣಯ ಮಾಡಿರುವುದನ್ನು ನೋಡಿದರೆ, ಅಂತರ್‌ರಾಷ್ಟ್ರೀಯ ಸಮಸ್ಯೆಯು ಕಾಂಗ್ರೆಸಿನ ಧುರೀಣರನ್ನು ಎಷ್ಟರ ಮಟ್ಟಿಗೆ ಎಚ್ಚರಿಸಿದೆಯೆಂದು ತಿಳಿಯದಿರದು. ವರ್ಕಿಂಗ್ ಕಮಿಟಿಯು ಅಹಿಂಸೆಯನ್ನು ತನ್ನ ತತ್ವದಿಂದ ಬಿಟ್ಟುಹಾಕಿರುವುದೆಂದು [illegible]ಸುವುದು ತಪ್ಪು; ಇಂದಿನ ಸಂದರ್ಭದಲ್ಲಿ ರಾಜಕೀಯ ತತ್ವವನ್ನು ಹೆಚ್ಚು ಕಾರ್ಯರೂಪಕ್ಕೆ ಇಳಿಸುವ ನಿರ್ಣಯವನ್ನು ಮಾತ್ರ ಕಾಂಗ್ರೆಸು ಮಾಡಿದೆಯೆಂದು ನಾವು ತಿಳಿದುಕೊಳ್ಳಬೇಕಾಗಿದೆ.

ತತ್ವ ದೃಷ್ಟಿಯಲ್ಲ; ಸತ್ಯ ದೃಷ್ಟಿ.

ಈ ನಿರ್ಣಯದ ಅರ್ಥವನ್ನು ತಿಳಿಯಬೇಕಾದರೆ, ನಾವು ಪ್ರಪಂಚದ ಸಕ್ಕ ಸ್ಥಿತಿಯನ್ನು ವಿಶಾಲ ದೃಷ್ಟಿಯಿಂದ ಪರೀಕ್ಷಿಸಬೇಕಾಗಿದೆ. ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆಯ ಹೋರಾಟದ ಬಗ್ಗೆ ಕಾಂಗ್ರೆಸು ಅಹಿಂಸೆಯನ್ನೇ ತನ್ನ ಮೂಲತತ್ವವನ್ನಾಗಿ ಅಂಗೀಕರಿಸಿ ಅದರಲ್ಲಿ ಪೂರ್ಣ ವಿಶ್ವಾಸವನ್ನು ಇಟ್ಟಿರುವುದೆಂಬುದು ಸಂಪೂರ್ಣ ತಿಳಿದ ವಿಷಯವಾಗಿದೆ. ಆದರೆ, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಅವ್ಯವಸ್ಥೆಯ ಕಾಲದಲ್ಲಿ ಕಾಂಗ್ರೆಸು ಗಾಂಧಿಜಿಯವರು ಹೇಳಿದಂತೆ ಪೂರ್ಣವಾಗಿ ಅನುಸರಿಸಿ ಹೋಗಲು ಸಿದ್ಧವಿಲ್ಲವೆಂಬುದನ್ನು ಮಾತ್ರ ಈ ನಿರ್ಣಯವು ವ್ಯಕ್ತಗೊಳಿಸಿದೆ.

ಅಭಿಪ್ರಾಯ ಭೇದವೆಲ್ಲಿ?

ಅಹಿಂಸೆಯೇ ಕಾಂಗ್ರೆಸಿನ ಆದರ್ಶ!

ಏಕೆಂದರೆ, ಗಾಂಧಿಜಿಯವರಿಗೆ ಅಹಿಂಸೆಯೆಂಬುದು ಒಂದು ತತ್ವ ಧರ್ಮವಾಗಿದೆ. ಗಾಂಧಿಜಿಯವರ ದೃಷ್ಟಿಯಿಂದ ಭಾರತದ ಸ್ವಾತಂತ್ರ್ಯವು ಅಹಿಂಸೆಯಿಂದ ಸಾಧನೆ. ಅವರ ಇತ್ತೀಚಿನ ಲೇಖನದಲ್ಲಿ ಹಿಟ್ಲರನನ್ನು ಎದುರಿಸಲು ಅಹಿಂಸೆಯು ಹೇಗೆ ಸಾಧನವಾಗುವುದೆಂದು ತಿಳಿಸಿದ ವಿಚಾರವೇ ಅವರ ಅಹಿಂಸಾ ಧರ್ಮ ದೃಷ್ಟಿಯನ್ನು ತೋರಿಸುತ್ತದೆ.

ಸತ್ಯವೆ? ಶಕ್ತಿಯೆ?

ಇಂದು ಲೋಕದ ನಾಗರಿಕತೆಯು ನಡುಗುತ್ತಿದೆ. ಕಳೆದ ಮಹಾಯುದ್ಧದಲ್ಲಿಯೂ ಹೀಗೆ ಲೋಕದ ಸ್ವಾತಂತ್ರ್ಯವು ತಳಮಳಗೊಳ್ಳಲಿಲ್ಲ. ರಾಷ್ಟ್ರದ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಾಗದ ಸಣ್ಣ ದೊಡ್ಡ ರಾಷ್ಟ್ರಗಳು ಆಕ್ರಮಣಕ್ಕೆ ಬಲಿಯಾಗುತ್ತಿವೆ. ಸತ್ಯವು ಶಕ್ತಿಯ ಎದುರು ನಿಲ್ಲದಂತಾಗಿದೆ! ಲೋಕವು ಗಾಂಧಿಜಿಯವರ ತತ್ವವನ್ನು ಎಷ್ಟು ಉದಾತ್ತವೆಂದು ಪ್ರಶಂಸಿಸಿದರೂ, ಲೋಕದ ಸರಕಾರಗಳು ಅವರ ತತ್ವವನ್ನು ಕಾರ್ಯರೂಪದಲ್ಲಿ ಕಿಂಚಿತ್ತಾದರೂ ಅನುಸರಿಸುವುದಿಲ್ಲ. ಅವುಗಳ ಹೃದಯಗಳಲ್ಲಿ ಪಶುಶಕ್ತಿಯೇ ತಾಂಡವವಾಡುತ್ತಿದೆ! ಈ ವಿಚಾರವೇ ಭಾರತದ ರಕ್ಷಣೆಯ ಕುರಿತು ಕಾಂಗ್ರೆಸನ್ನು ಸಮಸ್ಯೆಗೆ ಇಳಿಸಿತು. ಗಾಂಧಿಜಿಯವರು ಇಂತಹ ಸಮಯದಲ್ಲಿಯಾದರೂ, ಕಾಂಗ್ರೆಸು ಹೊರಗಿನ ಮತ್ತು ಒಳಗಿನ ಅವ್ಯವಸ್ಥೆಗಳನ್ನು ನಿಲ್ಲಿಸಲು ಸೈನ್ಯ ಸಹಾಯವನ್ನು ಪಡೆಯದೆ ಅಹಿಂಸೆಯಿಂದಲೇ ಮುಂದುವರಿಯಬೇಕೆಂದು ಹೇಳುವುದರಿಂದ, ಕಾಂಗ್ರೆಸು ಈ ವಿಷಯವಾಗಿ ವಿಚಾರಿಸಿ ಒಂದು ನಿರ್ಣಯಕ್ಕೆ ಬಂದಿತು.

ಸಂದೇಹಗಳು ತಲೆಯೆತ್ತಿದುವು

ಅಖಿಲ ಭಾರತದ ಏಕೈಕ ಸಮರ್ಥ ಧುರೀಣರೆಂದು ಸರ್ವರೂ ಮಹಾತ್ಮಾ ಗಾಂಧಿಯವರನ್ನು ಒಪ್ಪಿಕೊಳ್ಳುವವರಿದ್ದರೂ, ಈಗ ಪಶುಶಕ್ತಿಯು ತಾಂಡವವಾಡುತ್ತಿರುವಾಗ ಅಹಿಂಸೆಯು ಎಷ್ಟರ ಮಟ್ಟಿಗೆ ರಕ್ಷಣೆಗೆ ಸಹಾಯವಾದೀತೆಂಬ ವಿಚಾರ ಹಿರಿಯರ ಅವರ ಅನುಯಾಯಿಗಳೇ ಸಂದೇಹಗ್ರಸ್ತರಾಗಿ ಅವರನ್ನು ಪ್ರಶ್ನಿಸಿದರು. ಸ್ವತಂತ್ರ [illegible] ಬ್ರಿಟಿಷ [illegible] ಸ್ವಾತಂತ್ರ್ಯ ಸಂಗ್ರಾಮ [illegible] ಅಹಿಂಸೆ ಯೋಗ್ಯ ಮಾರ್ಗವೆಂಬ ವಿಷಯ [illegible] ಯವಾಗಿರುತ್ತದೆ. ಆದರೆ ಅದಕ್ಕಿಂತ [illegible] ಅಂತರ್‌ರಾಷ್ಟ್ರೀಯ [illegible] ರಾಷ್ಟ್ರೀಯ [illegible] ವಿಷಯದಲ್ಲಿ ಅಹಿಂಸೆಯು ಸಾರ್ಥಕವಾಗುವುದೆಂದು ಹೇಳುವರ [illegible]. ರಾಷ್ಟ್ರೀಯ ಸರಕಾರವು ಅಹಿಂಸಾ ಮೂಲವಾಗಿರಬೇಕೆಂದು ಕಾಂಗ್ರೆಸು ಅಪೇಕ್ಷೆಪಡುವುದಾದರೆ, ಅವರು ಸೈನ್ಯ ಶಿಕ್ಷಣದ ಮಾತನ್ನೇ ಬಿಟ್ಟುಬಿಡಬೇಕು. ಆದರೆ ಇಂದಿನ ಈ ಜಗತ್ತಿನಲ್ಲಿ ರಾಷ್ಟ್ರದ ಸ್ವಾತಂತ್ರ್ಯವನ್ನು ಸೈನ್ಯ ಸಹಾಯವಿಲ್ಲದೆ ರಕ್ಷಿಸುವುದು ಅಸಾಧ್ಯ ವಿಚಾರವಾಗಿದೆ. ಹಿಂದೆ ಈ ವಿಚಾರವು ಕಾಂಗ್ರೆಸಿನ ಮುಂದೆ ಬಂದಿರಲಿಲ್ಲ. ಆಗ ಬರಿಯ ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮವು ಮಾತ್ರ ಕಾಂಗ್ರೆಸಿನ ಮುಂದಿತ್ತು, ಆದರೆ ಈಗ ಅಂತರ್‌ರಾಷ್ಟ್ರೀಯ ವಿಚಾರವು ಭಾರತದ ಮುಂದೆ ಬಂದಿದೆ! ಆದಕಾರಣ, ಇಂದಿನ ಈ ಅಂತರ್‌ರಾಷ್ಟ್ರೀಯ ಗೊಂದಲದ ಕಾಲದಲ್ಲಿ ರಾಷ್ಟ್ರವನ್ನು ರಕ್ಷಣಾಹೀನವಾಗಿ ಬಿಡುವುದು ಪಾಪಕಾರ್ಯವೆಂದು ಕಾಂಗ್ರೆಸು ವಿಚಾರಿಸಿ ಧೈರ್ಯಪೂರ್ಣವಾದ ಈ ಹೆಜ್ಜೆಯನ್ನು ಇಟ್ಟಿರುತ್ತದೆ.

ಗಾಂಧಿಜಿಯವರ ಪ್ರಭಾವ!

ಗಾಂಧಿಜಿಯವರು ಮಹಾ ಪ್ರಭಾವಶಾಲಿಗಳು. ಕೇವಲ ಭಾರತದ ಮುಖಂಡರು ಮಾತ್ರವಲ್ಲ, ಅಖಿಲ ವಿಶ್ವಕ್ಕೆ ಆದರ್ಶವನ್ನು ತೋರಿಸುವ ಮುಂದಾಳು ಅವರು. ಅವರ ದೃಷ್ಟಿಯಲ್ಲಿ ಭಾರತದ ಸ್ವಾತಂತ್ರ್ಯವೂ ಅಹಿಂಸೆಯ ಅಂಗವೇ ಆಗಿದೆ. ಅವರ ದೃಷ್ಟಿಪಥದಲ್ಲಿ ವಿಶಾಲ ವಿಶ್ವದ ವ್ಯವಸ್ಥೆಯೇ ಇದೆ. ಆದ್ದರಿಂದಲೇ ಅವರ ಕಾಂಗ್ರೆಸ್ಸಿನ ನಿರ್ಣಯಕ್ಕೆ ಪ್ರತಿಭಟಿಸಿ [illegible]. ಏಕೆಂದರೆ ಅವರ ಕಾರ್ಯಕ್ಷೇತ್ರವು ಕೇವಲ ಭಾರತದ ವ್ಯವಸ್ಥೆಯಲ್ಲಿಯೇ ಪೂರ್ಣತೆ ಹೊಂದುವಂತಹದಲ್ಲ.

ಒಮ್ಮೆ ಇಂದಿನ ಯುದ್ಧದ ಅಂತ್ಯದಲ್ಲಿ ನವಯುಗವೇ ನಿರ್ಮಾಣವಾಗಲಿದೆ! ಇಂದಿನ ಆರ್ಥಿಕ ಅಡಚಣೆಗಳೇ [illegible], ನ್ಯಾಯವಾದ ಪರಿಹಾರವು ಆಗ [illegible] ಯುದ್ಧವು ಅಂತ್ಯವಾಗುವುದು ಸಾಧ್ಯವಿಲ್ಲ. ಆದರೆ, ಮುಂದಕ್ಕೆ ಸಮಸ್ಯೆಗಳು ಪರಿಹಾರವಾಗಿ ಲೋಕಶಾಂತಿಯು ಇಡೀ ಪ್ರಪಂಚಕ್ಕೆ ಬರಲೇಬೇಕು. ಆಗ ಅಹಿಂಸೆಯೊಂದೇ ಲೋಕಶಾಂತಿಗೆ ಸಾಧನವಾಗುವುದು. ಗಾಂಧಿಜಿಯವರ ಆಶೆ ಅಲ್ಲಿ ಪೂರ್ಣತೆಗೊಳ್ಳುವುದು.

ಕಾಂಗ್ರೆಸ್ಸು ಅಹಿಂಸೆಯನ್ನು ಬಿಟ್ಟಿಲ್ಲ. ಇಂದಿನ ಪರಿಸ್ಥಿತಿಗೆ ಸರಿಯಾದ ನಿರ್ಣಯವನ್ನು ಮಾತ್ರ ಮಾಡಿದೆ. ಸ್ವತಂತ್ರವಾದ ಭಾರತವು ಜಗತ್ತಿಗೆ ಅಹಿಂಸೆಯ ಮಾರ್ಗದರ್ಶಿಯಾಗಿಯೇ ಮುಂದುವರಿಯುವುದು. ಗಾಂಧಿಜಿಯವರ ತತ್ವವನ್ನು ಆಗ ಲೋಕದ ಜನಾಂಗಗಳು ನಿಶ್ಚಯವಾಗಿ ಅಂಗೀಕರಿಸುವವು. ಏಕೆಂದರೆ ಪರಮ ಶಾಂತಿಯು ಅಹಿಂಸೆಯಿಂದ ಮಾತ್ರ ದೊರಕುವುದು.

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ.

ಸ್ವದೇಶಾಭಿಮಾನಿ

ತಾರೀಕು 12—7—1940

ಬ್ರಿಟನು ಕಿವಿಗೊಡುವುದೆ?

"ಭಾರತದ ಸ್ವಾತಂತ್ರ್ಯವನ್ನು ಬ್ರಿಟನು ನ್ಯಾಯವೆಂದು ನಿರ್ಧರಿಸಿ, ಆ ಬಗ್ಗೆ ಸ್ಪಷ್ಟವಾದ ಭರವಸೆಯಿತ್ತು, ಅದನ್ನು ಕಾರ್ಯರೂಪದಲ್ಲಿ ತೋರಿಸಲು, ಕೂಡಲೇ ರಾಷ್ಟ್ರೀಯ ಸರಕಾರವನ್ನು ಯೋಜಿಸತಕ್ಕದ್ದು. ಇದು ತಾತ್ಕಾಲಿಕವಾಗಿದ್ದರೂ, ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳಿಂದ ರಚಿತವಾಗಬೇಕು; ಹೀಗೆ ಬ್ರಿಟನು ಮಾಡಿ ಕೂಡಲೇ, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸದಿದ್ದಲ್ಲಿ ಯಾವ ತೆರದ ಸಾಧನ, ಹಾಗೂ ನೈತಿಕ ಬೆಂಬಲಗಳೂ ಇಚ್ಛಾ ಪೂರ್ವಕವಾಗಿ, ಪರಿಣಾಮಕಾರಿಯಾಗಿ ರಕ್ಷಣಾ ಯತ್ನದಲ್ಲಿ ದೊರಕಲಾರದು. ಆದಕಾರಣ, ಬ್ರಿಟನು ಈ ರೀತಿಯುಚಿತ ಮಾಡುವ ಪಕ್ಷದಲ್ಲಿ ವರ್ಕಿಂಗ್ ಕಮಿಟಿಯು ತನ್ನ ಸಂಪೂರ್ಣ ಶಕ್ತಿಯನ್ನು ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ಉಪಯೋಗಿಸುವುದು" ಈ ಅಭಿಪ್ರಾಯದ ಒಂದು ನಿರ್ಣಯವನ್ನು ಮೊನ್ನೆ ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಮಾಡಿ, ಬ್ರಿಟನಿನ ಮುಂದೆ ರಾಷ್ಟ್ರದ ಸ್ಪಷ್ಟವಾದ ಕೇಳಿಕೆಯನ್ನಿಟ್ಟಿದೆ.

ಬ್ರಿಟನು ಭಾರತದ ಬಿಕ್ಕಟನ್ನು ಪರಿಹರಿಸಲು ಮನಸ್ಸು ಮಾಡುವುದಿದ್ದರೆ, ಕಾಂಗ್ರೆಸಿನ ಸಹಕಾರವನ್ನು ಪಡೆಯದೆ ಯಾವ ತರದ ಯತ್ನವೂ ಫಲಕಾರಿಯಾಗಲಾರದು. ದೇಶದ ಸ್ವಾತಂತ್ರ್ಯದ ಯಾವ ಉದಾತ್ತ ಧ್ಯೇಯಕ್ಕಾಗಿ ಕಾಂಗ್ರೆಸು ಪಣತೊಟ್ಟು ನಿಂತಿದೆಯೋ, ಅದರ ಕುರಿತು ಭರವಸೆ ಸಿಗದೆ ಕಾಂಗ್ರೆಸು ಸಹಕರಿಸಲಾರದು. ಬ್ರಿಟನು ಕಾಂಗ್ರೆಸಿನ ಕೇಳಿಕೆಗೆ ಕಿವಿಗೊಡಬೇಕು. ದೇಶದ ಎಲ್ಲಾ ಪಕ್ಷಗಳ ಚುನಾಯಿತ ಪ್ರತಿನಿಧಿಗಳನ್ನು ಒಟ್ಟು ಸೇರಿಸಬೇಕು; ಕಾಂಗ್ರೆಸು, ಮುಸ್ಲಿಂ ಲೀಗು, ಹಿಂದೂ ಮಹಾ ಸಭೆ ಇವುಗಳ ಸಹಕಾರದಿಂದ ರಾಷ್ಟ್ರೀಯ ಸರಕಾರವನ್ನು ರಚಿಸುವ ಕಾರ್ಯವನ್ನು ಕೂಡಲೇ ಕೈಕೊಳ್ಳಬೇಕು. ಇದರಿಂದ ಭಾರತದ ಬಿಕ್ಕಟ್ಟು ಪರಿಹಾರವಾಗುವುದು. ಬ್ರಿಟನು ರಾಷ್ಟ್ರದ ಈ ಕೇಳಿಕೆಗೆ ಕಿವಿಗೊಡುವುದೆ?

ಬೊಂಬಯಿಯಲ್ಲಿ ಪುನಃ ಮದ್ಯಪಾನ!

ಲೋಕ ಹಿತದೃಷ್ಟಿಯಿಂದ, ಕಾಂಗ್ರೆಸು ಪ್ರಾಂತಿಕ ಆಡಳಿತವನ್ನು ವಹಿಸಿ, ಎಲ್ಲಾ ಪ್ರಾಂತಗಳಲ್ಲಿಯೂ ಕ್ರಮಶಃ ಮದ್ಯಪಾನ ನಿಷೇಧವನ್ನು ಸಂಪೂರ್ಣ ಯಶಸ್ವಿಯಾಗಿ ಮಾಡಬೇಕೆಂದು ಬದ್ಧ ಕಂಕಣವಾಯಿತು. ಮದ್ಯಪಾನ ನಿಷೇಧದಿಂದ ಸರಕಾರಕ್ಕೆ ಒದಗಬಹುದಾದ ಆರ್ಥಿಕ ನಷ್ಟವನ್ನು ತುಂಬಿಸಲು ಮಾರಾಟದ ತೆರಿಗೆ ಮೊದಲಾದ ಹೊಸ ತೆರಿಗೆಗಳನ್ನೂ ಜಾರಿಗೆ ತಂದಿತು. ಕಾಂಗ್ರೆಸು ಕೈಕೊಂಡ ಈ ಉದಾತ್ತ ಕಾರ್ಯಕ್ಕೆ ಮಹಾಜನರು ಬೆಂಬಲವಿತ್ತರು.

ಬೊಂಬಾಯಿ ಪ್ರಾಂತದಲ್ಲಿ ಅಧಿಕಾರ ವಹಿಸಿದ್ದ ಕಾಂಗ್ರೆಸು ಸರಕಾರವೂ, ಬೊಂಬಯಿ ಪಟ್ಟಣದಲ್ಲಿಯೇ ಮದ್ಯಪಾನ ನಿಷೇಧವನ್ನು ಜಾರಿಗೆ ತಂದಿತು. ಇದು ಎಷ್ಟು ಸಾಹಸದ ಕಾರ್ಯವೆಂಬುದನ್ನು ಅಂದಿನ ಪರಿಸ್ಥಿತಿಯನ್ನು ಬಲ್ಲವರು ತಿಳಿಯದರರು. ಕಾಂಗ್ರೆಸು ಸರಕಾರವು ಬಹಳ ಪರಿಶ್ರಮದಿಂದ ಅಲ್ಲಿ ಮದ್ಯಪಾನ ನಿಷೇಧ ಕಾರ್ಯವನ್ನು ಯಶಸ್ವಿಯಾಗಿ ನಡಸಿತು. ಇದರ ಫಲವಾಗಿ ಸಾವಿರಾರು ಬಡ ಕೂಲಿಯ ಕುಟುಂಬಗಳು ದಾರಿದ್ರ್ಯ ಉಪವಾಸಗಳಿಂದ ಪಾರಾದುವು. ಕಳೆದುಹೋಗಿದ್ದ ಜೀವಸತ್ವವು ಅವರಲ್ಲಿ ತಿರಿಗಿ ಬಂದಂತಾಗಿತ್ತು.

ಈಗ ತಿರಿಗಿ ಮದ್ಯಪಾನವನ್ನು ಪ್ರಯೋಗಿಸಿದ್ದು ನಿಜವಾಗಿಯೂ ಜನತೆಯ ಹಿತಕ್ಕೆ ಆಘಾತವಾಗಿದೆ. ಮದ್ಯಪಾನವು ಯಾವಾಗಲೂ ನಿಷಿದ್ಧವೇ. ಅದನ್ನು ಸಾಧ್ಯವಾದಲ್ಲಿ ತಡೆಯುವುದು ಸರಕಾರದ ಕರ್ತವ್ಯ. ತಡೆದದ್ದನ್ನು ತಿರಿಗಿ ಪ್ರಯೋಗಿಸುವುದಂತೂ ಖಂಡಿತವಾಗಿಯೂ ಯೋಗ್ಯವೆನಿಸಲಾರದು. ಮದ್ಯಪಾನ ನಿಷೇಧಕ್ಕೆಂದು ಜಾರಿ ಮಾಡಿದ ವ್ಯಾಪಾರ ತೆರಿಗೆ ಮೊದಲಾದವುಗಳು ಮೊದಲಿನಂತೆಯೇ ಪ್ರಯೋಗದಲ್ಲಿದ್ದು ಮದ್ಯಪಾನವನ್ನು ತಿರಿಗಿ ಜಾರಿಗೆ ತಂದದ್ದು ಪ್ರಜೆಗಳಿಗೆ ಎರಡು ರೀತಿಯ ಹೊರೆಯಾಗಿದೆ.

ಯುದ್ಧ ಕಮಿಟಿಯ ವಿನಂತಿ

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರೂ ಯುದ್ಧ ಕಮಿಟಿಯ ಅಧ್ಯಕ್ಷರೂ ಆದ ಶ್ರೀ. ಯಂ. ವಿ. ಸುಬ್ರಹ್ಮಣ್ಯನ್ ಇವರು ಒಂದು ಪ್ರಕಟಣೆಯನ್ನು ಹೊರಡಿಸಿ ಅದರಲ್ಲಿ ಜಿಲ್ಲೆಯ ಮಹಾ ಜನರ ಅವಗಾಹನೆಯ ಬಗ್ಗೆ ಅನೇಕ ಸೂಚನೆಗಳನ್ನು ತಿಳಿಸಿರುವರು.

ಬ್ರಿಟನು ಇಂದಿನ ಯುದ್ಧದಲ್ಲಿ ಗೆಲ್ಲುವುದು ಸಂಪೂರ್ಣ ಸಾಧ್ಯವಿದೆಯೆಂದೂ, ಪ್ರಜೆಗಳು ಆ ವಿಷಯವಾಗಿ ಸುಳ್ಳು ಸುದ್ದಿಗಳನ್ನು ಕೇಳಿ ಧೈರ್ಯಗೆಡದೆ ಶಾಂತತೆಯಿಂದಿರಬೇಕೆಂದೂ, ಠೇವಣಾತಿ ಹಣವನ್ನು ಬ್ಯಾಂಕು, ಪೋಸ್ಟಾಫೀಸುಗಳಿಂದ ತೆಗೆಯುವುದರಿಂದ ಜನರು ಗಾಬರಿಗೊಳ್ಳಲು ಅವಕಾಶವಾಗುವುದೆಂದೂ, ಕರೆನ್ಸಿ ನೋಟನ್ನು ನಾಣ್ಯ ಮಾಡುವುದು ಬರಿಯ ಮೂರ್ಖತನವೆಂದೂ, ನೋಟುಗಳನ್ನು ತಕ್ಕ ಬೆಲೆಗೆ ತೆಗೆದುಕೊಳ್ಳಲು ಯಾರಾದರೂ ನಿರಾಕರಿಸಿದಲ್ಲಿ ಅಂತಹವರಿಗೆ ದಂಡನೆಯಾಗುವುದೆಂದೂ ತಿಳಿಸಿದ್ದಾರೆ.

ಬ್ರಿಟನಿನ ಈ ಯುದ್ಧವು ಲೋಕಕಂಟಕವಾದ ಹಿಟ್ಲರಿಸಮಿನ ನಾಶಕ್ಕಾಗಿದೆಯೆಂದೂ, ಆದಕಾರಣ ಬ್ರಿಟನಿಗೆ ಸಹಾಯ ಕೊಡುವುದು ಅಗತ್ಯವಾಗಿದೆಯೆಂದೂ ಯುದ್ಧಕ್ಕಾಗಿ ಸಾಧ್ಯವಾದಷ್ಟು ಹಣವನ್ನು ಕೊಡಬೇಕೆಂದೂ, ಇದು ಸಾಧ್ಯವಾಗದ ಪಕ್ಷದಲ್ಲಿ ವಾರ್ ಬಾಂಡುಗಳನ್ನೂ, ಸೇವಿಂಗ್ಸ್ ಸರ್ಟಿಫಿಕೇಟುಗಳನ್ನೂ, ಕೊಂಡುಕೊಳ್ಳುವುದರ ಮೂಲಕ ಹಣವನ್ನು ಬಡ್ಡಿಗೆ ಕೊಡಬೇಕಾಗಿಯೂ ಕೇಳಿಕೊಂಡಿದ್ದಾರೆ.

ಕೊನೆಗೆ ಎಲ್ಲರೂ ಧೈರ್ಯದಿಂದಿದ್ದು ಯುದ್ಧ ಕಮಿಟಿಯೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಿದ್ದಾರೆ

ದೇಶದ ಶಾಂತತಾ ರಕ್ಷಣೆಯ ಸಲುವಾಗಿ ಮಹಾಜನರು ಈ ವಿನಂತಿಯಂತೆ ನಡೆಯುವರಾಗಿ ನಂಬುತ್ತೇವೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿಪಡೆದ ಶಾಲಾಪುಸ್ತಕಗಳು

[1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದು ಮಂಜೂರಾದ ಶಾಲಾ ಪುಸ್ತಕಗಳು]

ಕ್ಲಾಸು ಉಪಯೋಗಕ್ಕೆ ಮಂಜೂರಾತಿಯಾದ ಪುಸ್ತಕಗಳು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
4ನೇ ದರ್ಜೆ	0-3-0
5ನೇ ,,	0-3-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
4ನೇ ದರ್ಜೆ	0—2—0
5ನೇ ,,	0—2—6

ಸಿವಿಕ್ಸ್ ಅಥವಾ ಪಂಚಾಯಿತ್

ಪುಸ್ತಕ	ಬೆಲೆ
4ನೇ ದರ್ಜೆ	0—2—0
5ನೇ ,,	0—2—6
6ನೇ ,,	0—3—0
7ನೇ ,,	0—3—0
8ನೇ ,,	0—3—0

ಶಾಲೆಗಳ ಅಧ್ಯಾಪಕರ ಉಪಯೋಗಕ್ಕೆ ಮಂಜೂರಾದ ಪುಸ್ತಕ

ಭೂ ವಿವರ

ಪುಸ್ತಕ	ಬೆಲೆ
4ನೇ	0—2—6
5ನೇ	0—3—6

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ: 1—0—0

ಶಾಲಾ ಉಪಯೋಗಕ್ಕೆ (ಲೈಬ್ರೆರಿ) ಮಂಜೂರಾತಿ ಪಡೆದ ನಮ್ಮ ಇತರ ಪುಸ್ತಕಗಳು

3ನೇ ದರ್ಜೆಯ ಪುಸ್ತಕಗಳು

ಪುಸ್ತಕ	ದರ್ಜೆ	ಬೆಲೆ
ಚರಿತ್ರೆ ಮತ್ತು ಕಥೆಗಳು	3ನೇ	0—2—6
ಪ್ರಕೃತಿ ಶಾಸ್ತ್ರ	,,	0—1—6
ಸಿವಿಕ್ಸ್	,,	0—1—6

ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

ಪುಸ್ತಕ	ಬೆಲೆ
4ನೇ ದರ್ಜೆಗೆ	0—2—6
5ನೇ ದರ್ಜೆಗೆ	0—3—6

ದೊರೆಯುವ ಸ್ಥಳ— ಶಾರದಾ ಛಾಪಖಾನೆ ಮಂಗಳೂರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 140/1940

ಸುಧೆಕಾರು ವೆಂಕಟ್ರಮಣಯ್ಯ—ವಾದಿ.

1. ದೇವಮ್ಮ ಹೆಂಗ್ಸು—ಅಯ್ಯಂಗಾರ ಸೊಸೆ, ... ಬೆಟ್ಟು ಗ್ರಾಮದ ಕಟ್ಟದ ಮನೆ, ಕುಟುಂಬದ ಯಜಮಾನತಿ 2. ಕೇಶವಾಜ—ಅಜ್ಜ ಸೊಗ್ರು ಚಂದಯ್ಯಾಳ್ವರ ಅಳಿಯ— ಮಣಿನಾಲ್ಕೂರು ಗ್ರಾಮ. } ಪ್ರತಿವಾದಿ

ವಾದಿಗೆ ಪ್ರತಿವಾದಿರು ಬರಕೊಟ್ಟ ... ಕೈಕಾಗದ ಪ್ರಕಾರ ಬಾಕಿ ಸವಲಿಗೆ ಮೋಲಿ ದಾವೆ ಹಾಕಿ ಅದರ ನೋಟೀಸಿನ ವ್ಯಾದೆಯು ಇದೇ ಬರುವ ತಾರೀಖು [illegible]—1940ಕ್ಕೆ ಇಟ್ಟಿರುತ್ತದೆ. ಆ ವ್ಯಾದೆಗೆ ಪ್ರತಿವಾದಿರು ತಮ್ಮ ಆಕ್ಷೇಪಣೆ ಏನಾದರೂ ಹೇಳುವದಿದ್ದರೆ ಸದ್ರಿ ಕೋರ್ಟಿಗೆ 10 ಘಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದು. ಇದಕ್ಕೆ ತಪ್ಪಿದರೆ ಅವರನ್ನು [illegible] ಈ ದಾವೆಯನ್ನು [illegible] ಮುಂದರಿಸಲಾದೀತು, ಎಂತ ಕೋರ್ಟು ಹುಕುಂ ಪ್ರಕಾರ ಪ್ರಕಟಿಸಿದೆ ಈ ನೋಟೀಸು ಮಾಡ್ಲಿಯದೆ.

ತಾ. 4-7-40 } B. RamachandraRao,
Puttur S.K. } M. A. B., L.
pleader for plaintiff.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 493/1938.

ವಾದಿ. ಬಪ್ಪಳಿಗೆ ಮೈದಿನ್ ಕುಂಞ [illegible]

ಪ್ರತಿವಾದಿರು. ಶಿವಣ್ಣ ಗೌಡ ಸಹ [illegible]

ಸದ್ರಿ ವ್ಯಾಜ್ಯದ 9ನೇ ಪ್ರತಿವಾದಿ [illegible] ಊರು ತಾಲೂಕು ಕದ್ರಿಯಾಳ ಗ್ರಾಮದಲ್ಲಿರುವ ಸುಬ್ರಾಯ ಸೋಮಯಾಜಿಗಳ ಮಗ ಕೆ. ವಿಷ್ಣುಮೂರ್ತಿ ಸೋಮಯಾಜಿ 1 ಮತ್ತು 13ನೇ ಪ್ರತಿವಾದಿ ಮಂಗಳೂರು ತಾಲೂಕು ಮಂಚಿ ಗ್ರಾಮದಲ್ಲಿರುವ ಪತ್ತಮುಡಿ ವೆಂಕಟ್ರಮಣಯ್ಯನವರ ಮಗ ವಾಸ್ತೇವಯ್ಯ 1 ಕೂಡಾ 2 ಜನರಿಗೆ.

ಸದ್ರಿ ಕೋರ್ಟು ಕ್ರಮನಂಬ್ರ 491/34ನೇ ಡಿಕ್ರಿ ರದ್ದು ವಗೈರೆ ಬಗ್ಗೆ ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಣ ವ್ಯಾಜ್ಯವು ತಾರೀಕು 22-7-1940ಕ್ಕೆ ತನಖಿಗೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ನಿಮ್ಮ ಉದಾಹರಣೆ ದಾಖಲು ಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವುದು, ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿಯದೆ.

H. Ganpathi Rao,
ವಾದಿ ಕಡೆ ವಕೀಲ

ಪುತ್ತೂರು, 3—7—1940.

"ಸ್ವಾತಂತ್ರ್ಯಕ್ಕಿಂತ ಕಡಿಮೆ ಬೇಕಾಗಿಲ್ಲ"

ಗಾಂಧಿಜಿಯವರ ತೀರ್ಮಾನ

ಕಾಂಗ್ರೆಸಿಗೆ ಹಿತೋಪದೇಶ! ಬ್ರಿಟನಿಗೆ ಅಹಿಂಸಾ ಸಂದೇಶ!

"ಭಾರತದ ಗುರಿಯು ಸ್ವಾತಂತ್ರ್ಯವೆಂಬ ವಿಷಯು ನನಗೆ ನಿಶ್ಚಯುವಾಗಿ ತಿಳಿದಿದೆ ಇದನ್ನು ಶಬ್ದಗಳಿಂದ ಅಡಗಿಸಿ ಪ್ರಯೋಜನವಿಲ್ಲ ಯಾವನೇ ಆಗಲಿ, ಆತನು ಸ್ವಾತಂತ್ರ್ಯವನ್ನು ಪಡೆಯ ಬಲ್ಲನಾದರೆ, ತನ್ನ ದೇಶಕ್ಕೆ ಸ್ವಾತಂತ್ರ್ಯಕ್ಕಿಂತ ಕಡಿಮೆಯುದನ್ನು ಪಡೆಯಬೇಕೆಂದು ಅಭಿಲಷಿಸುವವನು ಯಾರೂ ಇರಲಾರನು. ಯಾವುದೇ ದೇಶವಾದರೂ ಸ್ವಾತಂತ್ರ್ಯವನ್ನು, ಆ ದೇಶದ ಜನರು ಅದಕ್ಕಾಗಿ ಹೋರಾಡದೆ ಪಡೆದದ್ದಿಲ್ಲ, ಕಾಂಗ್ರೆಸು ಬಹು ಕಾಲದ ಹಿಂದೆ ತನ್ನ ನಿಶ್ಚಯುವನ್ನು ಮಾಡಿದೆ ಬ್ರಿಟನಿಗೆ ಪ್ರಯೋಜನವುಳ್ಳ ಸಹಾಯುವನ್ನು ಭಾರತವು ಕೊಡುವುದಿದ್ದರೆ, ಅದು ಸ್ವತಂತ್ರವಾದ ಮೇಲೆ ಮಾತ್ರ ಕೋಟ್ಯಾವಧಿ ಹಣವನ್ನು ಬಹುಮಂದಿ ಸಿಪಾಯಿಗಳನ್ನು .ಅತಂತ್ರ ಭಾರತದಿಂದ ಸೆಳೆದುಕೊಳ್ಳಬಹುದು; ಆದರೆ ಇದರಿಂದ ಬ್ರಿಟನಿನ ನೈತಿಕತನವು ಉಚ್ಚವೆನಿಸಲಾರದು" ಹೀಗೆಂದು ಮಹಾತ್ಮಾಗಾಂಧಿಜಿಯವರು ಹರಿಜನದಲ್ಲಿ ಬರೆಯುತ್ತಾ ಹೇಳಿರುವರು.

ಆದರ ಸಾರಾಂಶ ಹೀಗಿದೆ:—

"ವೈಸರಾಯರು ತಿರಿಗ ಪಕ್ಷಗಳ ಮುಖಂಡರನ್ನು ಕರೆದು ಮಾತನಾಡುತ್ತಾರೆ. ನಾನು ಒಂದು ಪಕ್ಷದ ಮುಖಂಡನಾಗಿಯಾಗಲಿ, ಅಥವಾ ಯಾವುದೇ ತೆರದ ಮುಖಂಡನೆಂದಾಗಲಿ ಆಮಂತ್ರಿತನಾದುದಲ್ಲ. ನಾನು ಒಬ್ಬ ಗೆಳೆಯನಂತೆ ಅವರಿಗೆ ಸಾಧ್ಯವಾದರೆ ಸಹಾಯ ಮಾಡಲು ಆಮಂತ್ರಿತನಾಗಿದ್ದೆನು. ಮುಖ್ಯವಾಗಿ ಕಾಂಗ್ರೆಸಿನ ವಿಚಾರವನ್ನು ಅವರಿಗೆ ತಿಳಿಸುವ ಸಲುವಾಗಿ ಆಮಂತ್ರಿತನಾಗಿದ್ದೆ.

"ಬ್ರಿಟನಿನ ಸಹಾನುಭೂತಿ ಪರವಾಗಿ ತಿರುಗಬಹುದಾಗಿದ್ದ ಕಾಂಗ್ರೆಸಿನ ನೈತಿಕ ಬೆಂಬಲವನ್ನು ಪಡೆಯಲು ಬ್ರಿಟಿಷ್ ರಾಜನೀತಿಜ್ಞರು ಆಲೋಚಿಸಲಿಲ್ಲವೆಂಬ ಕುರಿತು ನಾನು ಅತ್ಯಂತ ವಿಷಾದಪೂರ್ವಕ ಹೇಳಬೇಕಾಗಿದೆ. ಇದು ಬ್ರಿಟಿಷ ರಾಜನೀತಿಜ್ಞರ ತಪ್ಪೆನಲೂ ಆಗುವುದಿಲ್ಲ, ಏಕೆಂದರೆ ಅವರು ಅದರ ಆಗತ್ಯವನ್ನು ಕಾಣಲಿಲ್ಲ

ರಕ್ಷಣಾ ಸಮಸ್ಯೆ

'ಇಂದಿನ ಸಮಸ್ಯೆಯಿಂದ ಒಳಗಿನ ಮತ್ತು ಹೊರಗಿನ ಅವ್ಯವಸ್ಥೆಗಳನ್ನು ಸರಿಗೊಳಿಸುವುದಾಗಿದೆ ಯಾವುದೇ ರಾಜ್ಯ ಪರಬಲ ವಿದೇಶಿಯಾಗಲಿ ಸ್ವದೇಶಿಯಾಗಲಿ ಬೇರೊಂದು ಸೈನ್ಯವನ್ನು ಇಡಲು ಬಿಡಲಾರದ ಆದ್ದರಿಂದ ಭಾರತಕ್ಕೆ ಸೈನ್ಯ ಶಕ್ತಿ ಬೇಕೆಂದು ತಿಳಿದು ಕೆಲಸ ಮಾಡುವವರ ಕೊನೆಗೆ ಬ್ರಿಟಿಷರ ಅಧೀನಕ್ಕೇ ತರಲ್ಪಡುವರು. ವರ್ಕಿಂಗ್ ಕಮಿಟಿಯು ಈ ವಿಚಾರವಾಗಿ ನಿರ್ಣಯವನ್ನು ಮಾಡಿದೆ ಅದರ ನಿರ್ಣಯ ಪ್ರಕಾರ, ಅವರು ಕೂಡಲೇ ಕಾಂಗ್ರೆಸಿನವರನ್ನು ಸೈನ್ಯಕ್ಕೆ ಸಿದ್ಧರಾಗಿ ಮಾಡಬೇಕಾಗಿದೆ ಹಾಗೆ ಮಾಡುವುದೆಂದರೆ ಸ್ವಾತಂತ್ರ್ಯ ಮತ್ತು ಅಹಿಂಸೆಯ ಅಂತ್ಯವೇ ಆಗುವುದು ಆದ್ದರಿಂದ ಕಾಂಗ್ರೆಸಿನವರು, ಕಾಂಗ್ರೆಸಿನ ಒಳಿತಿಗಾಗಿಯೂ, ಭಾರತದ, ಬ್ರಿಟನಿನ ಹಾಗೂ ಮಾನವ ಲೋಕದ ಉಪಕಾರಕ್ಕಾಗಿಯೂ, ದೇಶದ ಒಳಗಿನ ಹಾಗೂ ಹೊರಗಿನ ರಕ್ಷಣೆಯ ವಿಷಯವಾಗಿ ಸೈನ್ಯವನ್ನು ಸಿದ್ಧಗೊಳಿಸುವ ವಿಷಯುವನ್ನು ಬಿಟ್ಟು ಬಿಡಬೇಕು. ಮುಂದಿನ ಮಾನವ ಲೋಕದ ಆದರ್ಶ ಮಾರ್ಗವು ಕಾಂಗ್ರೆಸಿನ ಕೈಯುಲ್ಲಿದೆ. ಆದ್ದರಿಂದ, ಸರದಾರಿಯಲ್ಲಿ ನಡೆವಂತೆ ದೇವರು ಕಾಂಗ್ರೆಸಿನವರಿಗೆ ಬುದ್ಧಿವಂತಿಕೆಯನ್ನೂ ಧೈರ್ಯವನ್ನೂ ದಯಪಾಲಿಸಲಿ.

ವೈಸರಾಯರ ಕೌನ್ಸಿಲಿನ ವಿಸ್ತಾರ

'ವೈಸರಾಯರ ಕೌನ್ಸಿಲನ್ನು ವಿಸ್ತರಿಸುವ ವಿಷಯು ಸ್ವಾತಂತ್ರ್ಯ ಮತ್ತು ಅಹಿಂಸೆಯ ಪ್ರತಿಜ್ಞೆಯನ್ನು ತೊಟ್ಟ ಕಾಂಗ್ರೆಸ್ಸು ತನ್ನ ಸಹಕಾರವನ್ನು ಕೊಡಲಾರದು. ಇದಲ್ಲವಾದರೆ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಮಂತ್ರಿಗಳನ್ನು ತಿರುಗಿ ಅಧಿಕಾರಕ್ಕೆ ಕರೆಯುವ ವಿಚಾರ ಎಂದರೆ ಕಾಂಗ್ರೆಸ್ಸು ಯುದ್ಧದಲ್ಲಿ ಪಾತ್ರ ವಹಿಸುವಂತೆ ಮಾಡುವುದು ಬ್ರಿಟನಿನ ರಕ್ಷಣೆಗಾಗಿ ಭಾರತವನ್ನು ತಯಾರಿಸುವುದಲ್ಲದೆ ಭಾರತ ಸರಕಾರಕ್ಕೆ ಬೇರೆ ಉದ್ದೇಶಗಳಿಲ್ಲ. ಭಾರತದ ರಕ್ಷಣೆಯ ವಿಷಯು ಮಾತನಾಡುವುದ ಬರಿಯ ಭವೆ ಭಾರತದ ಮೇಲೆ ಬ್ರಿಟಿಷ್ ರಾಜ್ಯದ ಅಧೀನವೆಂದಲ್ಲದೆ ಅನ್ಯಥಾ ಯಾವ ರಾಷ್ಟ್ರಕ್ಕೂ ಕಣ್ಣಿಲ್ಲ ಆದ್ದರಿಂದಲೇ ಅದು ಬಹಳ ಅಮೂಲ್ಯ ಬಹುಮಾನವಾಗಿದೆ. ಬ್ರಿಟಿಷ್‌ನ ಸಂಕಟದಲ್ಲಿ ಭಾರತವು ಏನು ರಕ್ಷನಲ್ಲವೇ? ಭಾರತವು ಯುದ್ಧ ನ್ಯಾಯಾರವನ್ನು ಮಾಡಬೇಕಾದರೆ ಇಂದು ಬ್ರಿಟನಿನೊಡನೆ ಸಮಬಿ ತರಬೇತಿ ಈಗ ಹೊಂದಬಹುದು.

ಗುರಿಯು ತಪ್ಪದಿರಲಿ

ಇಂದು ಕಾಂಗ್ರೆಸ್ಸಿನವರಿಗೆ ತಿರುಗಿ ಮಂತ್ರಿಪದವಿಯನ್ನೇರುವ ಆಸೆ ತಡೆಯದಿರಬಹುದು ಅವರು ಮಂತ್ರಿಗಳೂ ಮಧ್ಯ ಸರಕಾರದ ಸದಸ್ಯರೂ ಆಗಬಹುದ ಯುದ್ಧ ಯಂತ್ರದಲ್ಲಿ ಅವರು ಸೇರಬೇಕಾಗುವುದ ಕೋಟ್ಯಂತರ ರೂಪಾಯಿಗಳನ್ನೆತ್ತಿ ಯುದ್ಧ ಯಜ್ಞಕ್ಕೆ ಬಲಿಕೊಡಬೇಕಾಗುವುದು. ನಾನು ಹೇಳುವುದಿದ್ದರೆ ಕಾಂಗ್ರೆಸ್ಸಿನವರು ತಮ್ಮ ಅಪೇಕ್ಷೆಗಳನ್ನು ಬಿಗಿಹಿಡಿದು ಈ ಅಧಿಕಾರಗಳನ್ನು ಸ್ವೀಕರಿಸಬಾರದು ಸಂಪೂರ್ಣ ಸ್ವಾತಂತ್ರ್ಯವೇ ಗುರಿಯಾಗಿಟ್ಟುಕೊಂಡ ನಾವು ಧ್ಯೇಯದ ಕಡೆ ಲಕ್ಷ್ಯವಿರಿಸಬೇಕು. ಈ ಭಯಂಕರದಲ್ಲಿ ಕಾಂಗ್ರೆಸ್ಸು ಸೇರುವುದು ಅತ್ಯಂತ ಅನಾಹುತವಾಗಿದೆ. ಕಾಂಗ್ರೆಸ್ಸು ತನ್ನ ಧ್ಯೇಯುವನ್ನು ತಿಳಿದು ಅಹಿಂಸಾ ಮಾರ್ಗದಲ್ಲಿ ಬುದ್ಧ ಹೂಡುವುದಿದ್ದರೆ ತನ್ನ ಗುರಿಯುನ್ನು ಬೇಗನೇ ಹೊಂದಬಹುದು'

ಬ್ರಿಟನಿಗೆ ಮಹಾತ್ಮರ ಸಂದೇಶ

ಯುರೋಪಿನಲ್ಲಿ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಯಿತು. ಲಕ್ಷಾಂತರ ಮಕ್ಕಳು ಸ್ತ್ರೀಯರು ಅನಾಥರಾದರು ರಾಷ್ಟ್ರಗಳ ಉಜ್ವಲ ಭವಿಷ್ಯವೆಂಬಂತಿದ್ದ ಲಕ್ಷಾಂತರ ಯುವಕರ ಬಿಸಿರಕ್ತದ ಕಾಲುವೆಯು ಹರಿದು ಹೋಯಿತು. ಇಷ್ಟಾದರೂ ಕೂಡ ಯುದ್ಧದ ಪರಿಣಾಮವು ಬದಲಾಗಲಿಲ್ಲ. ಭಯಂಕರತೆಯು ಕಡಿಮೆಯಾಗಲಿಲ್ಲ ಯುದ್ಧವು ಮೊದಲಿಗಿಂತಲೂ ಹೆಚ್ಚಾದ ಪ್ರಳಯಕಾರಿ ಭಯಂಕರ ಸ್ವರೂಪದಿಂದ ನಡೆಯುತ್ತದೆ

ಮಹಾತ್ಮರ ವಿನಂತಿ

"ಅಹಿಂಸೆಗಿಂತ ಮಿಗಿಲಾದ ಧರ್ಮವಿಲ್ಲ, ಹಿಂಸೆಗಿಂತ ಮಿಗಿಲಾದ ಅಧರ್ಮವಿಲ್ಲ' ಎಂದು ಮಹಾತ್ಮರು ಹೇಳಿ, ಯುದ್ಧ ಪ್ರಸಂಗ ನಿಲ್ಲಿಸಬೇಕೆಂದೂ, ರಾಷ್ಟ್ರಗಳ ಪರಸ್ಪರ ವ್ಯವಹಾರ ಸಂಬಂಧವನ್ನು ರೂಪಿಸಿಕೊಳ್ಳಲಿಕ್ಕೆ ಅಹಿಂಸಾ ಮಾರ್ಗವನ್ನು ಅನುಸರಿಸಬೇಕೆಂದೂ ಬ್ರಿಟನಿಗೆ ಕಳಕಳಿಯ ವಿನಂತಿಮಾಡಿಕೊಂಡಿರುವರು. ಅಷ್ಟೇ ಅಲ್ಲ, ಬ್ರಿಟನು ಅಹಿಂಸಾಮಾರ್ಗವನ್ನು ಅನುಸರಿಸುವುದಾದರೆ ಬ್ರಿಟನಿಗೆ ತನ್ನ ಸೇವೆಯನ್ನು ಕೊಡಲಿಕ್ಕೂ ತಾನು ಸಿದ್ಧನಾಗಿರುವೆನೆಂದು ಅವರು ಹೇಳಿದ್ದಾರೆ ಕಾಂಗ್ರೆಸು ಕೂಡ ಅಹಿಂಸಾ ವ್ರತವನ್ನು ಕೈಗೊಳ್ಳಲಿಕ್ಕೆ ಹಿಂದುಮುಂದು ನೋಡುತ್ತಿರುವಾಗ, ಹಿಂಸಾಮಯ ಜೀವನವನ್ನು ಅನುಸರಿಸಿಕೊಂಡು ಬರುತ್ತಿರುವ ಬ್ರಿಟನಂಥ ರಾಷ್ಟ್ರಗಳಿಗೆ ಉಪದೇಶಿಸುವ ಮಹಾತ್ಮರು ಅಹಿಂಸೆಯಲ್ಲಿ ಅವರಿಗಿರುವ ಅಪ್ರತಿಮವಾದ ವಿಶ್ವಾಸವನ್ನು ವ್ಯಕ್ತಮಾಡುತ್ತಾರೆ.

ಜೀವನದ ಲಕ್ಷ್ಯ

ಅಹಿಂಸೆಯ ಸಂದೇಶವನ್ನು ಜೀರ್ಣಿಸಿ ರಕ್ತಗತ ಮಾಡಿಕೊಳ್ಳಲಿಕ್ಕೆ ಜಗತ್ತು ಇನ್ನೂ ತರಬೇತಿಯುನ್ನು ಪಡೆದಿರುವದಿಲ್ಲ. ಲೋಕಯುದ್ಧವು ಕೆಲವು ವರ್ಷಗಳ ತನಕ ಹೀಗೆಯೇ ಕಲೂ ಬಹುಭಯಂಕರವಾಗಿ ನಡೆದು ರಾಷ್ಟ್ರಗಳೆಲ್ಲವೂ ರಕ್ತಮಯ ಹೋರಾಟಗಳಿಂದ ದಣಿದು, ಅಸ್ತ್ರಗಳ ಭಯಂಕರತೆಯಿಂದ ತನಸುಮನಸುಗಳಲ್ಲಿ ಕಂಪಿಸುತ್ತಿರುವಾಗ, ಆಗಲೇ ಅವು ಮಹಾತ್ಮರ ಸಂದೇಶದ ಕಡೆಗೆ ಕಣ್ತೆರೆಯಬಹುದು. ಸತ್ಯ ಪ್ರೇಮ ಮತ್ತು ಅಹಿಂಸೆಯನ್ನು ಗ್ರಹಿಸಬಹುದು.

THE PIE-MONEY BANK LTD.
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction ... Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director*

ರಶ್ಯದ ಅಂತರಂಗವೇನು?

ಯೂರೋಪಿನ ಯುದ್ಧದಲ್ಲಿ ಸೇರುವುದೆ?

ರಶ್ಯವು ಹಿಟ್ಲರನೊಡನೆ ಸೇರುವುದೆ? ಅಥವಾ ಕಮ್ಯೂನಿಸಮ್ಮಿನ ಮಹಾಶತ್ರುಗಳು ಹೋರಾಡುತ್ತಿರುವಾಗ ತಟಸ್ಥವಾಗಿ ನಿಲ್ಲುವುದೆ? ಇವತ್ತು ಇಂಥ ಅಖಿಲ ಜಗತ್ತಿನ ರಾಜಕೀಯ ವಿಶಾರದರ ವಿಚಾರದಲ್ಲಿ ಮಹಾ ಸಮಸ್ಯೆಯನ್ನು ತಂದೊಡ್ಡಿದೆ. ಮ್ಯುನಿಕ್ ಒಪ್ಪಂದದ ಸಮಯದಲ್ಲಿ ಯುರೋಪಿನ ರಾಷ್ಟ್ರಗಳು ರಶ್ಯವನ್ನು ತೀರಾ ತಿರಸ್ಕರಿಸಿದ್ದರೂ ಇಂದು ಅದು ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಪ್ರಬಲವಾದ ಸ್ಥಾನವನ್ನು ಪಡೆದಿದೆ. ಆದರೆ ಇಂದು ರಶ್ಯದಲ್ಲಿ ಏನು ನಡೆಯುತ್ತದೆ? ಅಲ್ಲಿನ ವಿಷಯವಾಗಿ ಬರುವ ವಾರ್ತೆಗಳಂತೂ ಸಮಸ್ಯೆಯೊಳಗೆ ಸಮಸ್ಯೆಗಳನ್ನು ಹುಟ್ಟಿಸುವಷ್ಟು ಅಸ್ಪಷ್ಟವಾಗಿವೆ. ಹಿಟ್ಲರನೊಡನೆ ಕಲಹ ನಿವಾರಣಾ ಒಪ್ಪಂದವನ್ನು ಸ್ಟಾಲಿನನು ಮಾಡಿರುವನಾದರೂ ಪೋಲೆಂಡಿನಲ್ಲಿ ಹಿಟ್ಲರನ ಏಕಪ್ರಭುತ್ವವನ್ನು ಸ್ಥಾಪಿಸಗೊಡದೆ ತಾನೂ ಅದನ್ನು ಹಂಚಿಕೊಂಡಿದ್ದಾನೆ. ಫಿನ್ಲೆಂಡಿನ ವಿಷಯವಾಗಲಿ, ಅದರ ತಾಂತ್ರಿಕ ಸಂಬಂಧವೇನೆಂಬ ವಿಷಯವಾಗಿ ಬ್ರಿಟನು ಫ್ರಾನ್ಸುಗಳ ಮತ್ತು ರಶ್ಯದ ವಿಷಯವಾಗಿ ಸ್ಪಷ್ಟತೆಯನ್ನು ಮಾಡದಿರುವುದರಿಂದ ಈ ಸಂದೇಹವು ಸಹಜವಾಗಿ ಹುಟ್ಟುತ್ತದೆ

ಸಮಸ್ಯಾತ್ಮಕ ಸುದ್ದಿಗಳು

ಫ್ರಾನ್ಸು ಪತನವಾಯಿತೆಂಬ ವರ್ತಮಾನದೊಡನೆ, ರಶ್ಯವು ಪೋಲೆಂಡು ಜರ್ಮನ್ ಗಡಿಯಲ್ಲಿ ತನ್ನ ಸೈನ್ಯ ಸಮೂಹವನ್ನು ಒಟ್ಟುಗೂಡಿಸುತ್ತದೆಯೆಂಬ ಸುದ್ದಿಯೂ ಕೇಳುತ್ತದೆ. ಬಾಲ್ಟಿಕಿನಲ್ಲಿ ರಶ್ಯವು ತನ್ನ ಪ್ರಭಾವವನ್ನು ಗಟ್ಟಿಮಾಡುತ್ತದೆ. ಇದರೊಡನೆ ರಶ್ಯವು ಜರ್ಮನಿಯೂ ಒಪ್ಪಂದದ ಸಮಯದಲ್ಲಿರುವಂತೆಯೇ ಸ್ನೇಹದಿಂದಿರುವುದಾಗಿಯೂ ವಾರ್ತೆ ಬರುತ್ತಿದೆ ಆ ಮೇಲೆ ಇತ್ತೀಚೆಗೆ ರಷ್ಯಾ ಟರ್ಕಿ ಒಪ್ಪಂದದ ಕುರಿತು ಏನೇನೋ ಸುದ್ದಿ ಹರಡಿದೆ.

ಸರ್ ಕ್ರಿಪ್ಸ್ ಮತ್ತು ಡಾ॥ ಬೆನೆಸ ರವರು ಮಾಸ್ಕೋದಲ್ಲಿರುವ ವಿಚಾರವು ಇನ್ನೂ ಹಲವು ಊಹೆಗಳಿಗೆ ಆಸ್ಪದವಿತ್ತಿದೆ. ಅಂತೂ ಇಂದಿನ ಈ ಯುದ್ಧದಲ್ಲಿ ರಶ್ಯದ ವಿಚಾರವು ಒಂದು ದೊಡ್ಡ ಬಿಡಿಸಲಾರದ ಒಗಟಾಗಿದೆ.

ರಶ್ಯವು ಹಿಟ್ಲರನೊಡನೆ ಕಲಹನಿವಾರಣಾ ಒಪ್ಪಂದವನ್ನು ಮಾಡಿಕೊಂಡಿರುವುದಾದರೂ ಹಿಟ್ಲರನು ವಿಜಯಿಯಾದಲ್ಲಿ ಕಮ್ಯೂನಿಸಂ ತಕ್ಕೆಕ್ಕೊಡಗಬಹುದಾದ ಅವಸ್ಥೆಯನ್ನು ಸ್ಟಾಲಿನನು ತಿಳಿಯದಷ್ಟು ವಿಚಾರಶೂನ್ಯನಲ್ಲ. ಹಾಗಾಗಿ ಇದುವರೆಗೆ ರಶ್ಯವು ತಟಸ್ಥವಾಗಿರುವ ವಿಚಾರವಾಗಿ ಎಲ್ಲರ ದೃಷ್ಟಿಯೂ ಆ ಕಡೆ ತಿರುಗಿರುತ್ತದೆ ಅಂತೂ ಇಂದಿನ ಅಂತರ್ರಾಷ್ಟ್ರೀಯ ಕ್ರಾಂತಿಯಲ್ಲಿ ರಶ್ಯವು ಕೇಂದ್ರವಾಗಿ ನಿಂತಿದೆಯೆಂದರೆ ಏನೂ ಅತಿಶಯೋಕ್ತಿಯಾಗಲಾರದು

ಅಂತರಾಷ್ಟ್ರೀಯ ಕೇಂದ್ರ

ಮ್ಯುನಿಕ್ ಒಪ್ಪಂದದ ಸಮಯದಲ್ಲಿ ರಶ್ಯವನ್ನು ತೀರಾ ಅಲ್ಲಗಳೆದಾಗ ಚೆಂಬರ್ಲೇನರು ಮುಂದೆ ರಶ್ಯವೇ ಅಂತರ್ರಾಷ್ಟ್ರೀಯ ಕ್ರಾಂತಿ ಕೇಂದ್ರವಾಗಬಹುದೆಂದು ಸ್ವಲ್ಪವೂ ತಿಳಿದಿರಲಾರರು ಸ್ಟಾಲಿನನಾದರೂ ಹಿಟ್ಲರನು ಕಮ್ಯೂನಿಸಮ್ಮಿನ ಭಯಂಕರ ಶತ್ರುವೆಂಬುದನ್ನು ಚನ್ನಾಗಿ ತಿಳಿದಿದ್ದಾನೆ ಆದ ಕಾರಣವೇ ನಾಜೀ ವಿಜಯವಾಗುತ್ತಿರುವುದರೊಡನೆ ಸ್ಟಾಲಿನನು ಪಾಶ್ಚಾತ್ಯ ಪ್ರಭುತ್ವ ರಾಷ್ಟ್ರಗಳಾದ ಬ್ರಿಟನು ಫ್ರಾನ್ಸುಗಳ ಸ್ನೇಹವನ್ನು ಸಂಪಾದಿಸಲು ಪ್ರಯತ್ನಮಾಡಿದನು. ಆದರೆ ಬ್ರಿಟನ್ನಿನಲ್ಲಿ ಅಧಿಕಾರೀ ಪಕ್ಷವು ರಶ್ಯದ ಸಂಬಂಧವನ್ನು ಸಂಶಯ ದೃಷ್ಟಿಯಿಂದ ಕೆಳ ತಳ್ಳಿತು. ಮುಂದೆ ಹಿಟ್ಲರನ ತುತ್ತಿಗೆ ಚೆಕೋಸ್ಲೊವೇಕಿಯಾ ಪೋಲೆಂಡುಗಳು ಬಲಿಬಿದ್ದುವು

ಸ್ಟಾಲಿನನು ಈ ಸಂದರ್ಭದಲ್ಲಿ ಬಹಳ ಗೂಢ ತಂತ್ರವನ್ನು ಕೈಕೊಂಡನು. ರಶ್ಯದ ಆಜನ್ಮಶತ್ರುವಿನೊಡನೆ ಒಪ್ಪಂದ ಮಾಡಿಕೊಂಡ ವಿಚಾರವು ಇಡೀ ಪ್ರಪಂಚಕ್ಕೇ ಬಹಳ ಆಶ್ಚರ್ಯಕರವಾಯಿತು ಇದರಿಂದ ನಾಜಿಗಳು ಪ್ರೋತ್ಸಾಹಗೊಂಡು ತಮ್ಮ ದಾಳಿಯನ್ನು ಪ್ರಬಲಗೊಳಿಸಿದರು. ಇದರಿಂದಲೇ ರಶ್ಯವು ಇದುವರೆಗೆ ಇತಿಹಾಸದಲ್ಲಿ ಪಡೆಯದಿದ್ದಂತಹ ಪ್ರಾಮುಖ್ಯತೆಯನ್ನು ಪಡೆಯಿತು. ಆದರೆ ಹಿಟ್ಲರ ಸ್ಟಾಲಿನರ ಎಂದೆಂದೂ ಗೆಳೆಯರಾಗಿರುವರೆಂದೂ ಪರಂಪರೆಯ ದ್ವೇಷವು ಮಾಸಿತೆಂದೂ ಗ್ರಹಿಸುವುದು ಒರಿಯ ಹುಚ್ಚುತನವೇ ಸರಿ ಹಿಟ್ಲರನು ಯುರೋಪಿನ ಅಧಿಕಾರಿಯಾಗಿರುವುದನ್ನು ಸ್ಟಾಲಿನನ ಖಂಡಿತವಾಗಿಯೂ ಸಹಿಸಲಾರನು

ಸ್ಟಾಲಿನನ ದೂರಾಲೋಚನ

ಸ್ಟಾಲಿನನ ದೂರಲೋಚನೆಯ ವಿಷಯವಾಗಿ ಹಲವರ ಹಲವು ತರದ ಊಹೆಗಳನ್ನು ಮಾಡುತ್ತಿದ್ದಾರೆ. ಜರ್ಮನಿಯೊಡನೆ ಮಾಡಿಕೊಂಡ ಒಪ್ಪಂದಾನಂತರ, ಯುರೋಪಿನಲ್ಲಿರುವ ಕಮ್ಯೂನಿಸ್ಟ ವಿರೋಧ ರಾಷ್ಟ್ರಗಳು ತಮ್ಮ ತಮ್ಮೊಳಗೆ ಜಗಳಾಡಿ ನಿರ್ನಾಮ ಹೊಂದುವವೆಂದು ಅವನ ವಿಚಾರಿಸಿದ್ದನೆಂದು ಕೆಲವರು ಹೇಳುವರು ಆದರೆ ಇದು ನಂಬತಕ್ಕದ್ದಲ್ಲ ಅಂತೂ ಫ್ರಾನ್ಸಿನ ಪತನವು ರಶ್ಯವನ್ನು ಜಾಗೃತಿಗೊಳಿಸಿದೆ ಇಂದು ಯುರೋಪಿನಲ್ಲಿ ಜರ್ಮನಿಯು ಮಹಾ ಮಹಾ ಸಾಮ್ರಾಜ್ಯವೆನಿಸಬಹುದಾಗಿರುವುದನ್ನು ರಶ್ಯವು ಸಮ್ಮತಿಸಲಾರದು.

ಸ್ಟಾಲೀನ್

ಕ್ರಿಪ್ಸರ ಚಲನವಲನಗಳು ಬಹಳ ವಿಚಾರಗಳಿಗೆ ಆಸ್ಪದಕೊಟ್ಟವೆ ಅಂತೆಯೇ ರಶ್ಯದ ಯುದ್ಧಸಿದ್ಧತೆಯ ವಿಷಯ ಜರ್ಮನಿಯು ತಳೆದ ಧಗೊಂಡಿದೆ ರಶ್ಯವು ಬಾಲ್ಟಿಕಿನಲ್ಲಿ ಪ್ರಬಲವಾಗುತ್ತಿರುವುದು ಉದ್ದೇಶಹೀನವಾದ ಕಾರ್ಯವಲ್ಲ

ಕಲಹವು ಅನಿವಾರ್ಯ

ಮುಂದೆ ಜರ್ಮನಿ ರಶ್ಯಗಳೊಳಗೆ ಕಲಹವು ಅನಿವಾರ್ಯವೇ ಆಗಿದೆ ಹಿಟ್ಲರನಿಗೂ ಇದು ಗೊತ್ತಿದೆ ಆದರೆ ಹಿಟ್ಲರ್ ಈ ಸಂಧಿದಲ್ಲಿ ಅತ್ಯಂತ ಪ್ರಬಲ ರಾಷ್ಟ್ರದೊಡನೆ ಹೋರಾಟಕ್ಕಿಳಿದಿರುವ ಸಮಯ ರಶ್ಯದ ಕಲಹವನ್ನು ವಿಚಾರಿಸದೆ ಸುಮ್ಮಗೆ ಇದ್ದಾನೆ

ರಶ್ಯದ ಕ್ರಾಂತಿಯ ನಂತರ ಅಲ್ಲಿ ಸೈನ್ಯ ಸಿದ್ಧತೆಗಳು ಪ್ರಬಲವಾಗಿ ಆಗುತ್ತಿವೆ. ರಶ್ಯದಲ್ಲಿ ಅಗಣಿತ ವಿಮಾನ ಟ್ಯಾಂಕುಗಳಿವೆಯೆಂದು ತಿಳಿದಿದೆ ಸೈನ್ಯ ಸಾಮಗ್ರಿಗಳ ಕಾರ್ಖಾನೆಗಳು ಹಗಲಿರುಳು ದುಡಿಯುತ್ತವೆ ಸೈನಿಕ ಶಿಕ್ಷಣವು ತೀವ್ರವಾಗಿ ಸಾಗುತ್ತಿದೆ ಅಂತೂ ರಶ್ಯ ಜರ್ಮನಿಯೊಡನೆ ಕಾದಾಡಲು ಸರ್ವರೀತಿಯಿಂದಲೂ ಸಿದ್ಧವಾಗಿದೆ

ರಶ್ಯದ ಈ ಸಿದ್ಧತೆಗಳು ಯಾತಕ್ಕೆ? ಜರ್ಮನಿಯೊಡನೆ ಅದು ಸೇರುವುದಂತೂ ಅಸಂಭವ ಅಂದ ಮೇಲೆ ಜರ್ಮನಿಯ ವಿರುದ್ಧ ಹೊಡೆದಾಡಲು ಎಂದು ಊಹಿಸಬೇಕಾಗಿದೆ. ಹಿಟ್ಲರ್ ಮತ್ತು ಮುಸಲನಿಗಳು ಕಮ್ಯೂನಿಸಮ್ಮಿನ ಪ್ರಬಲ ಶತ್ರುಗಳು ಅವರ ವಿಜಯವು ರಶ್ಯದ ದೊಡ್ಡ ಅಪಜಯವು. ಬ್ರಿಟನಿನ ಹೊಡೆತದಿಂದ ಕಂಗಾಲಾದ ಹಿಟ್ಲರನ ಪತನಾಗಮನ ಕಾಲವನ್ನು ಸ್ಟಾಲಿನನು ಕಾಯುತ್ತಿರಬಹುದೇ?



ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟದ್ದು.

ನಡುವಿನಲ್ಲಿ ಸಿಗಿಯಲ್ಪಟ್ಟ ಈಗಿನ 7 ಓ ಕ್ಲಾಕ್ ಬ್ಲೇಡುಗಳು ಹಳೇ ಮಾದರಿಯ ಮೂರು ತೂತುಗಳ ಬ್ಲೇಡುಗಳಿಗಿಂತ ಸುಧಾರಣೆ ಹೊಂದಿವೆ. ಇದರ ಕ್ರಿಯೆಯು ಅಗ್ಗ ಮಾತ್ರವಲ್ಲದೆ ಚೆನ್ನಾಗಿ ಹರಿತವಾಗಿದ್ದು ಉತ್ತಮವೂ ನುಣುಪೂ ಆದ ಕ್ಷೌರವನ್ನು ಉಂಟುಮಾಡುವುದಲ್ಲದೆ ಅನೇಕ ಕಾಲದ ವರೆಗೆ ಬಾಳುವುದು 7 ಓ ಕ್ಲಾಕ್ ಬ್ಲೇಡುಗಳು ಹಳೇ ಮತ್ತು ಹೊಸ ಮಾದರಿಯ ಬ್ಲೇಡುಗಳಿಗೆ ಹೊಂದಿಕೊಳ್ಳುತ್ತವೆ.

ಈ ವಾರದ ಕಥೆ:

ಹೀಗೂ ಉಂಟೇ?

ಲೇಖಕ. ಶ್ರೀನಿವಾಸ ಶೆಟ್ಟಿ

ರಾಮರಾಯರು ಯಾವಾಗಲೂ ಹಾಸಿಗೆ ನೋಡಿ ಕಾಲು ನೀಡುವ ಸ್ವಭಾವದವರಾಗಿದ್ದರು; ಆದ್ದರಿಂದ ಹಿಂದು ಮುಂದು ನೋಡಿ, ಸ್ವಲ್ಪ ಮುಷ್ಟಿಯನ್ನು ಗಟ್ಟಿಯಾಗಿ ಹಿಡಿದೇ ಖರ್ಚು ಮಾಡುತ್ತಿದ್ದರು. ಆದರೆ ಭೀಮರಾಯ ಇದಕ್ಕೆ ತೀರ ವಿಪರೀತ ಸ್ವಭಾವದವನಾಗಿದ್ದ. ತಂದೆಯವರು ಅಸ್ವಸ್ಥ ಬಿದ್ದು ಅವರು ಬದುಕಿರುವ ತನಕ ಆಸ್ತಿ ಪಾಸ್ತಿ ಬದುಕುಬಾಳಿನ ಯಜಮಾನಿಕೆ ರಾಮರಾಯರ ಕೈಯಲ್ಲಿದ್ದುದರಿಂದ, ಭೀಮರಾಯನಿಗೆ ಮನಸಾರೆ ಖರ್ಚು ಮಾಡಲಿಕ್ಕೆ ತುಂಬಾ ವಿಘ್ನಗಳು ಬರುತ್ತಿದ್ದವು. ಆದ್ದರಿಂದ ಆಗಾಗ ಅವನು ಅಣ್ಣನ ಮೇಲೆ ಉರಿದು ಬೀಳುತ್ತಿದ್ದ, ಯಾವಾಗ ತಂದೆಯವರು ಸ್ವರ್ಗವಾಸಿಗಳಾಗುವರೋ ಯಾವಾಗ ತಾನು ಆಸ್ತಿ ಪಾಲು ಪಡೆದು ಬೇರೆಯಾಗುವೆನೋ ಎಂದು ಅವನು ಸಮಯ ಕಾದು ಇರುತ್ತಿದ್ದ. ಕೊನೆಗಂತೂ ಆ ದಿನ ಬಂದೇ ಬಂದಿತು. ತಂದೆಯ ಕ್ರಿಯಾ ಕರ್ಮಗಳು ಮುಗಿದ ತರುವಾಯ ಭೀಮರಾಯ ಅಣ್ಣನಿಂದ ಪಾಲು ತೆಗೆದುಕೊಂಡು ಬೇರೆಯಾದ

ಅಪ್ಪಾ ಮಕ್ಕಳು ಮರಿಗಳನ್ನು ಪಡೆದಿದ್ದೀ! ಸಂಸಾರ ಕಟ್ಟಿಕೊಂಡಿದ್ದೀ! ಹಿಂದು ಮುಂದು ನೋಡಿ ಖರ್ಚು ಮಾಡಬೇಕಪ್ಪಾ. ಮುಂದೆ ಮರಿಮಕ್ಕಳು ಇತರರ ಮುಖ ನೋಡುವಂತೆ ಆಗಬಾರದು, ಭೀಮೂ' ಎಂದು ರಾಮರಾಯರು ಹೇಳಿದ್ದರು 'ನಾನು ನಿನ್ನ ಹತ್ತಿರ ಕೈನೀಡಿ ಬಂದಾಗ' ನೀನು ಈ ಮಾತು ಹೇಳಬಹುದು ಎಂದು ಅವನು ಹೇಳಿ ಹೊರಟು ಹೋದ

ತಂದೆಯ ಜಮೀನು ರಾಮರಾಯರ ಪಾಲಿಗೆ ಬಂದಿತ್ತು. ಭೀಮರಾಯನೇ ಕೆಂಪೇ ಊರ ಮನೆಮಾಳಿಗೆಗಳನ್ನು ತನ್ನ ಪಾಲಿಗೆ ಇಟ್ಟುಕೊಂಡಿದ್ದ. ಬಾಡಿಗೆ ವಸೂಲಿ ಮಾಡಿ, ಆ ಹಣದಿಂದ ಸುಖವಾಗಿ ಕಾಲು ಚಾಚಿ ಕಾಲಯಾಪನೆ ಮಾಡಬಹುದೆಂಬ ಅಭಿಪ್ರಾಯದಿಂದಲೇ ಭೀಮರಾಯ ಅವುಗಳನ್ನು ತನ್ನ ಪಾಲಿಗೆ ತೆಗೆದುಕೊಂಡ. ಆದರೆ ರಾಮರಾಯರು ಹಗಲಿರುಳು ಒಂದು ಮಾಡಿ ಚೆನ್ನಾಗಿ ಪರಿಶ್ರಮ ಪಡುತ್ತಿದ್ದುದರಿಂದ ಅವರ ಕೈಯಲ್ಲಿ ನಾಲ್ಕು ಕಾಸು ಒಡಾಡತೊಡಗಿತು. ಭೀಮರಾಯನ ಖರ್ಚಿಗೆ ಮಿತಿ ಇರಲಿಲ್ಲ. ಆಗಾಗ ಸಾಲವನ್ನು ತೆಗೆದುಕೊಳ್ಳುತ್ತಿದ್ದ. ಕೆಲವೇ ವರ್ಷಗಳಲ್ಲಿ ಆಯಕ್ಕಿಂತ ವ್ಯಯವು ಹೆಚ್ಚಿತು. ಸಾಲದಿಂದ ಸೋಲುವಂತಾಯಿತು. ಒಂದೊಂದೇ ಮಳಿಗೆಯನ್ನು ಅಡವು ಹಾಕುತ್ತಾ ಬಂದ. ತಮ್ಮನ ಪತನವನ್ನು ನೋಡಿ ಸಹಿಸಲಾರದೆ ಬಂದು ರಾಮರಾಯರು— 'ಭೀಮೂ! ಮಳಿಗೆಗಳನ್ನು ಅಡವು ಹಾಕುವದಕ್ಕಿಂತ ಒಂದೆರಡನ್ನು ಮಾರಿ ಸಾಲದಿಂದ ಮುಕ್ತನಾಗುವದು ಒಳ್ಳೇದು' ಎಂದು ಬುದ್ಧಿವಾದ ಹೇಳಿದರು

ಅಣ್ಣನ ಮಾತು ಕೇಳಿ ಭೀಮರಾಯನಿಗೆ ಇಲ್ಲದ ಸಿಟ್ಟು ಬಂದಿತು, 'ನನಗೆ ನೀನು ಬುದ್ಧಿ ಹೇಳಬೇಕಾಗಿಲ್ಲ! ಯಾವಾಗ ಏನು ಮಾಡಬೇಕೆಂದು ನಾನು ಚೆನ್ನಾಗಿ ಬಲ್ಲೆ' ಎಂದು ಕಣ್ಣು ಕೆಂಪು ಕೆಂಪು ಮಾಡಿ ಅವನು ಹೇಳಿದ

ಇಬ್ಬರಿಗೂ ಮಕ್ಕಳು ಮರಿಗಳು ಇದ್ದವು. ರಾಮರಾಯರಿಗೆ ದಮಯಂತಿ ಒಬ್ಬ ಮಗಳು ಸುಬ್ಬು ಒಬ್ಬ ಮಗ. ಸುಬ್ಬು ಹುಟ್ಟುವಾಗಲೇ

ಹಾಸ್ಯಗಾರರಾದ ಲೋರೆಲ್ ಮತ್ತು ಹಾರ್ಡಿ

ತಾಯಿ ತೀರಿಕೊಂಡಳು. ಆದರೆ ರಾಮರಾಯರು ಎರಡನೆ ಮದುವೆ ಮಾಡಿಕೊಳ್ಳಲಿಲ್ಲ. ಭೀಮರಾಯನಿಗೆ ಇಬ್ಬರು ಗಂಡು ಮಕ್ಕಳು ಐವರು ಹೆಣ್ಣು ಮಕ್ಕಳು ಇದ್ದವು. ಸಾಲ ಕೊಡದ ಕಡಿಮೆಯಾಗಿ ಸಾಲಿಗರ ತಂಟೆ ಬೆಳೆಯುತ್ತ ಬಂದ ಹಾಗೆ ತನ್ನ ಹಾಳ ಸ್ಥಿತಿಗೆ ಅಣ್ಣನೇ ಕಾರಣವೆಂದು ಭೀಮರಾಯ ಎಣಿಸಿ ಅಣ್ಣನ ಹೆಸರು ತೆಗೆದಾಕ್ಷಣ ಕಿಡಿ ಕಿಡಿ ಆಗುತ್ತಿದ್ದ. ಕೊನೆಗೆ ಒಂದು ದಿನ ಆತನ ಹೆಂಡತಿ, ರಾಮರಾಯರ ಮನೆಗೆ ಹೋಗಿ—'ನೀವೇಕೆ ನಮ್ಮನ್ನು ಹೀಗೆ ಪೀಡಿಸುತ್ತೀರಿ? ನಾವು ನಿಮಗೆ ಏನು ಹಾಳು ಮಾಡಿದ್ದೇವೆ?' ಎಂದು ತನ್ನ ಕಷ್ಟಕತೆಯನ್ನು ಹೇಳಿದಳು. ಭೀಮನ ವಿರುದ್ಧ ತಾನೇನೂ ಮಾಡಿಲ್ಲವೆಂದು ರಾಮರಾಯರು ಅವಳನ್ನು ಬಹಳ ಸಮಜಾಯಿಸಿದರು. ಆದರೂ ಆಕೆಗ ಅವರ ಮಾತಿನ ವಿಶ್ವಾಸವಾಗಲಿಲ್ಲ. ಕೊನೆಗೆ ರಾಮರಾಯರು—'ಭೀಮನ ಎಲ್ಲಾ ಸಾಲವನ್ನು ನಾನೇ ತೀರಿಸುತ್ತೇನೆ' ಎಂದು ಹೇಳಿದರ. ಆಕೆ ಆ ಅಭಯವನ್ನು ತೆಗೆದುಕೊಂಡು ಮನೆಗೆ ಹೋದಳು

ರಾಮರಾಯರು ಸಾಲದ ಎಲ್ಲಾ ಹಣವನ್ನು ಸಂದಾಯ ಮಾಡಿ ಭೀಮರಾಯನನ್ನು ಸಾಲಿಗರ ಕಾಟದಿಂದ ದೂರ ಮಾಡಿದ್ದರು. ಅವರ ಆ ಹಣವನ್ನು ಭೀಮರಾಯನು ಮರಳಿ ಕೊಡುವ ಇಚ್ಛೆ ಭೀಮರಾಯನ ತಾಯಿಗೆ ಕೂಡ ಇರಲಿಲ್ಲ. ಹೀಗಿದ್ದರೂ ರಾಮರಾಯರ ಮೇಲೆ ಭೀಮರಾಯನ ಸಿಟ್ಟೇನೂ ಕಡಿಮೆಯಾಗಲಿಲ್ಲ. ರಾಮರಾಯರು ಕಾಯಿಲೆ ಬಿದ್ದು ಹಾಸಿಗೆ ಹಿಡಿದರು. ಎರಡು ತಿಂಗಳುಗಳಾದರೂ ಭೀಮರಾಯ ಒಮ್ಮೆಯೂ ಅವರನ್ನು ಕಾಣಲಿಕ್ಕೆ ಹೋಗಿರಲಿಲ್ಲ.

ಕಾಯಿಲೆ ಬೆಳೆಯುತ್ತ ಬಂದಿತು. ಡಾಕ್ಟರರ ಮೇಲೆ ಡಾಕ್ಟರರು ಬಂದು ಹೋಗುತ್ತಿದ್ದರು. ಒಂದರ ಮೇಲೊಂದು ಚಿಕಿತ್ಸೆ ನಡೆಯುತ್ತಿತ್ತು. ಆದರೂ ರಾಮರಾಯರು ಗುಣಮುಖರಾಗಲಿಲ್ಲ. ರಾಮರಾಯರ ಶುಶ್ರೂಷೆಯ ಭಾರ ಇವರಿಬ್ಬರು ಮಕ್ಕಳ ಮೇಲೆ ಬಿದ್ದಿತು. ಅವರು ಹಗಲೂ ರಾತ್ರಿ ರಾಮರಾಯರ ಸೇವೆ ಮಾಡುತ್ತಿದ್ದರು. ಎರಡು ಮೂರು ತಿಂಗಳು ನಿದ್ರಾಹಾರಗಳಿಲ್ಲದೆ ಕೆಲಸ ಮಾಡಿದುದರಿಂದ ಸುಬ್ಬು ಹಾಸಿಗೆ ಹಿಡಿದ. ಅವನ ಸ್ಥಿತಿ ತಂದೆಯವರಕ್ಕಿಂತಲೂ ಕೆಟ್ಟಿತು. ಆದರೂ ಒಂದು ಡಾಕ್ಟರರ ಲಕ್ಷ್ಯ ರಾಮರಾಯರ ಕಡೆಗೆ ಅಧಿಕವಾಗಿದ್ದಿತೇ ವಿನಾ, ಸುಬ್ಬುವಿನ ಕಡೆಗೆ ಇರಲಿಲ್ಲ. ಸುಬ್ಬು ಕೆಲವೇ ದಿನಗಳಲ್ಲಿ ಸತ್ತುಹೋದ. ದಮಯಂತಿ ಬಹಳ ಅತ್ತಳು. ಆದರೆ ಅತ್ತು ಏನು ಪ್ರಯೋಜನ? ರಾಮರಾಯರು ಅದೇ ದಿನ ತನ್ನ ಕಾಯಿಲೆಯು ಬೇಸಿಗಿಂತಲೂ ಹೆಚ್ಚಾದ ಪುತ್ರ ಶೋಕದಿಂದ ಸ್ವರ್ಗವಾಸಿಗಳಾದರು

ಮರು ದಿನ ಭೀಮರಾಯ ತಲೆ ಬಿಟ್ಟುಕೊಂಡು ಸಪ್ತ ತೀವ್ರವಾಗಿ ಅಲ್ಲಿಗೆ ಬಂದ. ಬಂದು ಅಳುವ ಹರಕೆಯನ್ನು ಸಲ್ಲಿಸಿದ ಮೇಲೆ ಅವರ ಉತ್ತರ ಕ್ರಿಯೆಗಳನ್ನು ಮಾಡಿದ. ಮೊದಲ ಸುಬ್ಬುವಿನ ಮರಣವಾಯಿತು. ತಂದೂ ಪುತ್ರಶೋಕದಿಂದ ತಂದೆಯವರು ಅಸ ತ ಸ್ವರ್ಗಸ್ಥರಾದರೆಂದೂ ದಮಯಂತಿ ಎಲ್ಲ ಸಮಾಚಾರಗಳನ್ನು ಚಿಕ್ಕಪ್ಪನಿಗೆ ತಿಳಿಸಿದಳು. ರಾಮರಾಯರ ಮರಣವು ಮೊದಲಾಯಿತೆಂದೂ ಅನಂತರ ಸುಬ್ಬು ಸತ್ತನೆಂದೂ ಡಾಕ್ಟರರು ಸರ್ಟಿಫಿಕೇಟು ಕೊಟ್ಟರು. ಹೀಗಾಗಿ ರಾಮರಾಯರ ಎಲ್ಲ ಸಂಪತ್ತನ್ನು ಭೀಮರಾಯ ಸ್ವೀಕರಿಸಿದ. ಅನಾಥವಾದ ದಮಯಂತಿಗೆ ತಂದೆಯ ಆಸ್ತಿಯಲ್ಲಿ ಒಂದು ಕಾಸಾದರೂ ದೊರೆಯಲಿಲ್ಲ.

(ಹಿಂದಿಯಿಂದ)

WHAT MAKES A MAN RICH?

Luck?	—	Very rarely
Inheritance?	—	Not often.
Speculation?	—	Once in a blue moon
Gambling?	—	Never
Hard Work?	—	Very Often
Hard work and THRIFT	—	Always

RESOURCES OF A CRORE.

Estd. 1906
CANARA BANK LIMITED.

ಮದನಕಾಮೇಶ್ವರಿ ಲೇಹ

ಆಶ್ಚರ್ಯಕರ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಪಿ
P. O. Pendepi (ನೆಲ್ಲೂರು ಜಿ.

ಜಿನ್ನರೂ ನಿವೃತ್ತರಾಗಬಾರದೆ?

ಗಾಂಧೀ—ಜಿನ್ನರ ರಾಜಕೀಯ!



ಪಾಕಿಸ್ಥಾನ ವಾದಿಗಳಾದ ಜಿನ್ನರು

ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದೊತ್ತುವ ಸಮಸ್ತ ಭಾರವನ್ನು ಹೊತ್ತುಕೊಂಡಿದ್ದ ಮಹಾತ್ಮಾ ಗಾಂಧಿಯವರು ಈಗ ಆ ಭಾರವನ್ನು ಪುನಃ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಮೇಲೆ ಹೊತ್ತು ಹಾಕಿದ್ದಾರೆ. ಕಾಂಗ್ರೆಸಿನ ಸಲಹೆಗಾರರಾಗ ಅವರು ಮುಂದಕ್ಕೂ ಇರುವರಾದರೂ, ಕಾಂಗ್ರೆಸಿನ ಭವಿಷ್ಯ ಕಾರ್ಯಕ್ರಮದಲ್ಲಿ ಅವರ ಯಾವ ಕೈಯೂ ಇರುವದಿಲ್ಲ. ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅವರ ಯಾವ ಜವಾಬ್ದಾರಿಯೂ ಇರುವದಿಲ್ಲ. ಅವರು ಕಾಂಗ್ರೆಸಿನಿಂದ ನಿವೃತ್ತರಾದ ಹಾಗೆ!

ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಬೇಕಾದರೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವಿರಬೇಕೆಂಬುದು ಮಹಾತ್ಮರ ಹಠ. ಆದರೆ ಯೂರೋಪಿನಲ್ಲಿ ಪ್ರಳಯಕಾರಿ ಲೋಕ ಯುದ್ಧವೊಂದು ನಡೆಯುತ್ತಿರುವಾಗ ಅದರ ದುಷ್ಟ ಛಾಯೆಯು ಹಿಂದುಸ್ಥಾನದ ಮೇಲೂ ಬೀಳದೆ ಇಲ್ಲ. ಆದ್ದರಿಂದ ಕಾಂಗ್ರೆಸು ಅಹಿಂಸೆಯನ್ನು ತನ್ನ ಧ್ಯೇಯವನ್ನಾಗಿಟ್ಟುಕೊಂಡಿದೆಯಾದರೂ, ಹೊರದೇಶ ವ್ಯವಹಾರಗಳ ವಿಷಯದಲ್ಲಿ, ಸದ್ಯದ ಪರಿಸ್ಥಿತಿ ಮತ್ತು ಹಿಂದುಸ್ಥಾನದ ಜನರ ಸಿದ್ಧತೆಯನ್ನು ಆಲೋಚನೆಗೆ ತರುವಾಗ—ಅಹಿಂಸೆಯು ವ್ಯಾವಹಾರಿಕವಾಗಲಾರದೆಂಬುದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ಯೂರೋಪಿನಲ್ಲಿ ಯುದ್ಧದ ಮೂಲಕ ನಿಮಿಷ ನಿಮಿಷಕ್ಕೆ ಬದಲಾಗುತ್ತಿರುವ ಪರಿಸ್ಥಿತಿಯ ಕಾರಣದಿಂದ, ಪರರಾಷ್ಟ್ರಗಳ ಆಕ್ರಮಣಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಸಿದ್ಧತೆಯನ್ನು ಈಗ ಹಿಂದುಸ್ಥಾನವು ಆಧುನಿಕ ಶಸ್ತ್ರೋಪಕರಣಗಳ ಮೂಲಕವಾಗಿಯೇ ಮಾಡಬೇಕಾಗಿದೆ. ಪರಿಸ್ಥಿತಿಯು ಹೀಗಿರುವದರಿಂದ, ಕಾಂಗ್ರೆಸು ಅಂಥ ಸಿದ್ಧತೆಗೆ ತನಗೆ ತೋರಿದ ರೀತಿಯ ಸಹಾನುಭೂತಿಯನ್ನು ತೋರಿಸದೆ, ಉಪಾಯವಿಲ್ಲ. ಮಹಾತ್ಮರು ಅನ್ನುವಂತೆ ಅಹಿಂಸೆಯನ್ನೇ ಕಾಂಗ್ರೆಸು ವ್ಯಾವಹಾರಿಕ ಉಪಾಯವನ್ನಾಗಿ ಇಟ್ಟುಕೊಳ್ಳುವದಾದರೆ, ಅದಕ್ಕೆ ಹಿಂಸಾತ್ಮಕ ಸಿದ್ಧತೆಗೆ ಸಹಾನುಭೂತಿಯನ್ನು ತೋರಿಸಲಿಕ್ಕಾಗುವದಿಲ್ಲ. ಈ ಧರ್ಮ-ಸಂಕಟವು ಪ್ರಾಪ್ತವಾದುದರಿಂದ, ಕಾಂಗ್ರೆಸು ನಿರುಪಾಯಿಯಾಗಿ ಮಹಾತ್ಮರಿಗೆ ಕೊಟ್ಟ ಸರ್ವಾಧಿಕಾರಗಳನ್ನು ಹಿಂದಕ್ಕೆ ತೆಗೆದುಕೊಂಡು ಅವರನ್ನು ಕಾಂಗ್ರೆಸ್ ಕಾರ್ಯಕಲಾಪಗಳ ಉತ್ತರದಾಯಿತ್ವದಿಂದ ಮುಕ್ತರನ್ನಾಗಿ ಮಾಡಬೇಕಾಯಿತು.

ಗಾಂಧಿ ಜಿನ್ನರ ಸಾಮ್ಯ

ಗಾಂಧಿಯವರು ಹೇಗೋ ಜಿನ್ನರೂ ಹಾಗೇ ಛಲವಾದಿಗಳು. ಗಾಂಧಿಯವರು ಸ್ಪಷ್ಟ ರಾಷ್ಟ್ರವಾದಿಗಳಾಗಿರುವರಾದರೆ, ಜಿನ್ನರು ಕಡು ಜಾತಿವಾದಿಗಳಾಗಿರುವರು. ಇದೊಂದೇ ಅವರಿಬ್ಬರೊಳಗಿನ ದೊಡ್ಡ ಭೇದವಾಗಿರುವದು. ಜಿನ್ನಾ ಸಾಹೇಬರೂ ಪರಿಸ್ಥಿತಿಯ ಕಡೆಗೆ ಕಣ್ಣು ಮುಚ್ಚಿ ಪಾಕಿಸ್ಥಾನದ ಯೋಜನೆಯನ್ನು, ಮಗುವನ್ನಾಡಿಸುವಂತೆ ಮುದ್ದಿಸಿ ಆಡಿಸುತ್ತಾ ಇದ್ದಾರೆ. ದೇಶದ ಅಧಿಕಾಂಶ ಜನತೆಗೆ, ಮುಸಲ್ಮಾನರಲ್ಲೇ ಬಹಳ ಮಂದಿಗೆ, ಈ ಯೋಜನೆಯು ಬೇಡವಾಗಿರುವದಾದರೂ, ಜಿನ್ನಾ ಸಾಹೇಬರಂತೂ ಅದನ್ನು ಹೀಗೆಯೇ ಬಿಟ್ಟುಕೊಡುವಹಾಗಿಲ್ಲ. ಜಿನ್ನಾ ಸಾಹೇಬರು ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳು, ಕಾಂಗ್ರೆಸಿನಲ್ಲಿ ಗಾಂಧಿಯವರಿಗೆ ಯಾವ ಸ್ಥಾನವೋ ಲೀಗಿನಲ್ಲಿ ಅದೇ ಸ್ಥಾನ ಜಿನ್ನಾ ಸಾಹೇಬರಿಗೆ. ಧರ್ಮ ಸಂಕಟವಾದುದರಿಂದ ಕಾಂಗ್ರೆಸು ಗಾಂಧಿಯವರನ್ನು ಜವಾಬುದಾರಿಯಿಂದ ಮುಕ್ತ ಮಾಡಿತು. ಮುಸ್ಲಿಂ ಲೀಗಿಗೂ ಧರ್ಮ ಸಂಕಟವಾಗಿದೆ. ಲೀಗಿನಲ್ಲಿ ಎಲ್ಲರೂ ಜಿನ್ನಾ ಸಾಹೇಬರನ್ನು ಸಮರ್ಥಿಸುವದಿಲ್ಲ. ಸರ್ ಸಿಕಂದರ ಹಯ್ಯಾತ್ ಖಾನರ ನೇತೃತ್ವದಲ್ಲಿ ಲೀಗಿನ ಒಂದು ದೊಡ್ಡ ತಂಡವೇ ಪಾಕಿಸ್ಥಾನ ಯೋಜನೆಯನ್ನು ವಿರೋಧಿಸುತ್ತದೆ; ಅದು ಮುಸಲ್ಮಾನರಿಗೂ, ದೇಶಕ್ಕೂ ಹಾನಿಕರವಾದುದೆಂದು ತಿಳಿಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಿಂದು ಮುಸಲ್ಮಾನ ಐಕ್ಯವು ಅನಿವಾರ್ಯವೆಂದು ಅದು ಎಣಿಸಿದೆ. ಆದರೆ ಜಿನ್ನಾ ಸಾಹೇಬರ ಪಾಕಿಸ್ತಾನದ ಹಠವು ಈ ಐಕ್ಯಕ್ಕೆ ದೊಡ್ಡ ವಿಘ್ನವಾಗಿದೆ. ಆದ್ದರಿಂದ ಜಿನ್ನರಿಗಾಗಿ ಪಾಕಿಸ್ಥಾನದ ಯೋಜನೆಯನ್ನು ಹಿಡಿದು ತೂಗುವದೋ ಅಥವಾ ಜಿನ್ನರನ್ನು ಅವರ ಸರ್ವಾಧಿಕಾರದಿಂದ ನಿವೃತ್ತರನ್ನಾಗಿ ಮಾಡಿ, ಹಿಂದೂ ಮುಸಲ್ಮಾನ ಐಕ್ಯ ಸಾಧನೆಗೆ ವ್ಯವಹಾರಿಕ ಪ್ರಯತ್ನಗಳನ್ನು ಮಾಡುವದೋ ಎಂಬ ಪ್ರಶ್ನೆಯು ಲೀಗಿಗೂ ಪ್ರಾಪ್ತವಾಗಿರುವದು.

ಸಂಕಟದಿಂದ ಪಾರಾಗುವ ಬಗೆ

ಮಹಾತ್ಮರು ಕಾಂಗ್ರೆಸ್ ಸರ್ವಾಧಿಕಾರದ ಪಟ್ಟದಿಂದ ನಿವೃತ್ತರಾದಂತೆ ಜಿನ್ನಾ ಸಾಹೇಬರೂ ಲೀಗಿನ ಸರ್ವಾಧಿಕಾರ ಪಟ್ಟದಿಂದ ಯಾಕೆ ನಿವೃತ್ತರಾಗಬಾರದು? ಮಹಾತ್ಮರು ಕಾಂಗ್ರೆಸಿನಿಂದ ನಿವೃತ್ತರಾದ ಮೇಲೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವನ್ನಿಡಲು ಕೆಲಸ ಮಾಡಲಿಕ್ಕೆ ಸ್ವತಂತ್ರರಿರುವಂತೆ, ಜಿನ್ನಾ ಸಾಹೇಬರಾದರೂ ಲೀಗಿನಿಂದ ನಿವೃತ್ತರಾದಮೇಲೂ ತಮ್ಮ ಅಚ್ಚುಮೆಚ್ಚಿನ ಪಾಕಿಸ್ತಾನ ಕೂಸನ್ನು ತಮಗೆ ಬೇಕಾದಂತೆ ಲಾಲಿಸಲಿಕ್ಕೂ ಪಾಲಿಸಲಿಕ್ಕೂ ಸ್ವತಂತ್ರರೇ ಸರಿ! ಆದರೆ ತಾವಾಗಿ ಕಾಂಗ್ರೆಸಿನಿಂದ ಹೊರಬರಲಿಕ್ಕೆ ಸಿದ್ಧರಾದ ಮಹಾತ್ಮರ ಉದಾರ ಭಾವ ಮತ್ತು ಮಹಾತ್ಮರಂಥ ವ್ಯಕ್ತಿತ್ವಗಳೂ ಕಾರ್ಯನಿರ್ವಾಹದ ಒಂದೇ ಉಚ್ಚ ದೃಷ್ಟಿಯಿಂದ, ನಿಂತಿರುವ ಕಾಂಗ್ರೆಸ ವರ್ಕಿಂಗ ಕಮಿಟಿಯ ಧೈರ್ಯವೂ-ಇವೆರಡು ಜಿನ್ನಾ ಸಾಹೇಬರಲ್ಲಿಯೂ ಮುಸ್ಲಿಂ ಲೀಗಿನ ಕಾರ್ಯನಿರ್ವಾಹಕ ಸಮಿತಿಯಲ್ಲಿಯೂ ಇರುವವೆ? ಮುಂದಿನ ಘಟನೆಗಳು ಈ ಪ್ರಶ್ನೆಗೆ ಉತ್ತರವನ್ನ ಕೊಡುವವು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿ ಯವರ ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್' ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ 'ಇಂಜೆಕ್ಷನ್' ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕಿಡಳಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4

Madras Agent: **Appah & Co, China Bazar Madras.**

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಜಿಲ್ಲಾ ಸಮಾಚಾರ



ಮಂಗಳೂರು

ಜಿಲ್ಲಾ ಬೋರ್ಡ್ ಸಭೆ:— ಈ ದಿವಸ ಪೂರ್ವಾಹ್ನ ೧೧ ಗಂಟೆಗೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡಿನ ಸಭೆಯು ಮಂಗಳೂರಲ್ಲಿ ಜರಗಿತು

ಶ್ರೀ ವಿವೇಕಾನಂದ ಸಭೆ:— ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ ರಿಂದ ೧೦ರ ವರೆಗೆ ಕೀರ್ತನೆ ಮತ್ತು ಈ ಕೆಳಗೆ ನಮೂದಿಸಿದಂತೆ ಪ್ರವಚನಗಳು ನಡೆಯುವುವು ಸರ್ವರಿಗೂ ಸ್ವಾಗತವಿದೆ.

ತಾ. ೧೪-೭-೧೯೪೦-ಶ್ರೀ. ಬಿ ಪುಂಡರೀಕ ಬಾಳಿಗರು-"ಗೀತಾ ಅಧ್ಯಾಯ ೧೮" ತಾ ೨೩-೭-೧೯೪೦—ಶ್ರೀ ವಿ ಗಣಪತಿ ಶಾಸ್ತ್ರಿಗಳು "ಗೀತೆಯ ಪ್ರತಿಪಾದ್ಯ ವಿಷಯವು ಯಾವುದು?" ತಾ. ೨೮-೭-೧೯೪೦ -ಶ್ರೀ ಎಸ್ ಮಾಧವ ಕಾಮತರು-ಗೀತಾ ಅಧ್ಯಾಯ I (೧೭)

ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿ

ಪ್ರಥಮ ಸಭೆಯು ಶ್ರೀ. ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ ೨೭-೬-೪೦ರಲ್ಲಿ ಸಂಜೆ ಕಾಂಗ್ರೆಸ್ ಹೌಸಿನಲ್ಲಿ ಜರಗಿತು ಕಾರ್ಯದರ್ಶಿಗಳಾದ ಶ್ರೀ ಕೆ. ಐತಪ್ಪಶೆಟ್ಟರು ಕಳೆದ ವರ್ಷದ ವರದಿ ಹಾಗೂ ಅಡಿಟ್ ಮಾಡಿದ ಲೆಕ್ಕಗಳ ವಿವರವನ್ನು ಓದಿಹೇಳಿದರು ಅದು ಸರ್ವಾನುಮತದಿಂದ ಮಂಜೂರಾಯಿತು ಹೊಸವರ್ಷಕ್ಕೆ ಈ ಕೆಳಗಿನ ಅಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು ಅಧ್ಯಕ್ಷರು —ಶ್ರೀ ಕೊಂಚಾಡಿ ಕೇಶವ ಶಣ್ಯೆ, ಕಾರ್ಯದರ್ಶಿ — ಶ್ರೀ. ಕೆ ಐತಪ್ಪ ಶೆಟ್ಟಿ, ಜತೆಕಾರ್ಯದರ್ಶಿ ಶ್ರೀ. ಬಿ. ರಾಮಕೃಷ್ಣ ರಾವ್, ಕೋಶಾಧಿಕಾರಿ: ಶ್ರೀ। ಯಂ ಬಿ ದೇವಡಿಗ, ಕಾರ್ಯಕಾರಿ ಮಂಡಲಿಗೆ ಶ್ರೀಗಳಾದ ಕೆ ಈಶ್ವರ ಎಂ. ಎಲ್. ಎ , ಜನಾಬ್ ಕೆ. ಎಸ್. ಅಹಮ್ಮದ್ ಬಾವಾ, ಎಚ್ ರಾಮಚಂದ್ರ ಪೈ, ಇವರು. ಕಾರ್ಯಕಾರೀ ಮಂಡಲಿಯೇ ಸತ್ಯಾಗ್ರಹ ಕಮಿಟಿಯಾಗಿರತಕ್ಕದೆಂದು ನಿರ್ಣಯವಾಯಿತು.

ಹರಿಜನ ವಿಧ್ಯಾರ್ಥಿ ಭವನ; ಉಡುಪಿ

ಕಳೆದ ೧೯೩೯ನೆ ನವಂಬರದಲ್ಲಿ ಉಡುಪಿಯ ಮಹಾ ಜನರ ಪ್ರೋತ್ಸಾಹದಿಂದ ಹೈಸ್ಕೂಲು ವಿದ್ಯಾಭ್ಯಾಸ ಮಾಡುವ ಹಳ್ಳಿಯ ಬಡ ಹರಿಜನ ವಿದ್ಯಾರ್ಥಿಗಳ ಊಟ ಮತ್ತು ವಸತಿಯ ಬಗ್ಗೆ ತೆರೆದ ಈ ಭವನದಲ್ಲಿ ೧೯೪೦ನೆ ಎಪ್ರಿಲ್ ತನಕ ೮ ಮಂದಿ ವಿಧ್ಯಾರ್ಥಿಗಳು ಮಾತ್ರ ವಿದ್ದು ೧೯೪೦ನೆ ಜೂನು ೧೬ನೆ ತಾರೀಕಿನಿಂದ ೧೩ ಮಂದಿ ಬಡ ವಿದ್ಯಾರ್ಥಿಗಳು ಆಶ್ರಯ ಪಡದಿರುತ್ತಾರೆ ಇನ್ನೂ ಕೆಲವರಿಗೆ ಆಶ್ರಯವೀಯಬೇಕಾಗಿಯದೆ ವಿದ್ಯಾರ್ಥಿ ಭವನವು ಕೇವಲ ಮಹಾ ಜನರ ಉದಾರಾಶ್ರಯದ ಮೇಲೆಯೇ ಅವಲಂಬಿಸಿಕೊಂಡಿರುವುದರಿಂದ ನಮಗೆ ಮಹಾ ಜನರು ಸಹಕರಿಸಿ ಸಹಾಯ ಮಾಡಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೂಲ್ಕಿ

ಗೌ ಸಾ. ಬ್ರಾಹ್ಮಣರ ಬಡ ವಿದ್ಯಾರ್ಥಿ ನಿಧಿ:— ಮೂಲ್ಕಿ ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ವರ್ಷಾವಧಿ ಜೂನ್ ತಾ ೨೩ಕ್ಕೆ ಕೂಡಿ ಬಂತು

ಈ ಸಂಸ್ಥೆಯ ಕಾರ್ಯಕಾರೀ ಸಭೆಯು ಜುಲೈ ತಾ. ೬ರಲ್ಲಿ ಕೂಡಿ ಬಂದು ಮೂಲ್ಕಿ ಬೋರ್ಡ ಹೈಸ್ಕೂಲಿನಲ್ಲಿ ಕಲಿಯುವ ಹತ್ತು ಮಂದಿ ಸ್ವಜಾತೀಯ ಬಡ ವಿದ್ಯಾರ್ಥಿಗಳ ಬಗ್ಗೆ ೧೯೪೦-೪೧ನೆ ಒಂದು ವರ್ಷದ ಬಗ್ಗೆ ಸ್ಕೊಲರ್ ಶಿಪ್ ರೂಪದಲ್ಲಿ ರೂ ೨೧೯-೧ ೦ರಷ್ಟು ಹಣವನ್ನು ಧನಸಹಾಯ ಮಾಡ ವರೆ ಮಂಜೂರು ಮಾಡಿಯದೆ ವಿದ್ಯಾಭಿಮಾನಿಗಳು ಇಂಥ ಸಂಸ್ಥೆಗೆ ಉದಾರಹಸ್ತದಿಂದ ಧನಸಹಾಯ ಮಾಡಬೇಕಾಗಿ ವಿನಂತಿ

ಕಾರ್ಕಳ

ಸತ್ಯಾಗ್ರಹ ಸಮಿತಿ ಕಳೆದ ವಾರ ಕಾರ್ಕಳ ಸರ್ಕಲ್ ಕಾಂಗ್ರೆಸ ಕಮಿಟಿಯ ಒಂದು ಸಭೆಯು ಜರಗಿ ಈ ಕಮಿಟಿಯನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲಾಯಿತು ಶ್ರೀಗಳಾದ ಸುಬ್ಬಣ್ಣ ಭಟ್ಟರು ಇದರ ಅಧ್ಯಕ್ಷರಾಗಿಯೂ ಯಂ ಡಿ ಅಧಿಕಾರಿ ಮತ್ತು ಕೆ ವಿ. ಪ್ರಭುಗಳವರು ಉಪಾಧ್ಯಕ್ಷ ಹಾಗೂ ಖಜಾನ್ಚಿಯರಾಗಿಯೂ, ಕೆ ಪಾಂಡುರಂಗ ಪೈ ಮತ್ತು ವಾಮನ ಪೈಯವರು ಕಾರ್ಯದರ್ಶಿಗಳಾಗಿಯೂ ಮಾಡಲ್ಪಟ್ಟಿದ್ದಾರೆ

ಯುದ್ಧಪ್ರಚಾರ ಕಮಿಟಿ.— ತಾ ೬-೭-೧೯೪೦ರ ದಿನ ಜಿಲ್ಲಾ ಕಲೆಕ್ಟರರವರು ತಾವು ಉಳಕೊಂಡಿದ್ದ ಲೋಕಲ್ ಬೋರ್ಡು ಬಂಗಲೆಗೆ ಸ್ಥಳೀಯ ಪ್ರಮುಖರನ್ನು ಕರೆಸಿ ಯುದ್ಧ ವಿಷಯವಾದ ಸುಳ್ಳು ವಾರ್ತೆಗಳು ಹರಡಿ ಜನರಲ್ಲಿ ವ್ಯರ್ಥಗಾಬರಿಗೆ ಆಸ್ಪದವಾಗದಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳುವದಕ್ಕೋಸ್ಕರ ಪರಾಮರ್ಶೆ, ತೆಗೆದುಕೊಳ್ಳಲು ಶ್ರೀಗಳಾದ ಕೆ. ಪಿ. ಶೇಷಗಿರಿ ಪ್ರಭು, ಪಂಡಿತ ರಮಾನಾಥರಾವ್ ಮತ್ತು ರೆವರೆಂಡ ಫಾದರ್ ಸೋಜಾರವರಿಂದ ಕೂಡಿದ ಒಂದು ತಾತ್ಕಾಲಿಕ ಪ್ರಚಾರ ಸಮಿತಿಯನ್ನು ರಚಿಸಿದ್ದಾರೆ ಈ ಸಮಿತಿಯು ಸಭೆ ಕೂಡಿ ಇತರರನ್ನು ಇದರ ಸದಸ್ಯರನ್ನಾಗಿ ಸೇರಿಸಿಕೊಂಡು ಪ್ರಚಾರ ಕಾರ್ಯವನ್ನು ಆರಂಭಿಸುವರು

ಕಟಪಾಡಿ:— ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಹೊಸ ಪಾರ್ಶ್ವವನ್ನು ತೆರೆಯುವ ಸಮಾರಂಭವು ಶ್ರೀ। ವಿಠ್ಠಲ ಶಾಂತಾರಾಮ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ತಾ ೨೨-೬-೪೦ನೇ ಶನಿವಾರ ಅಪರಾಹ್ನ ಜರಗಿತು

ಉಡುಪಿ

ಯುದ್ಧ ಸಹಾಯಕ ಸಮಿತಿ: ಉಡುಪಿ ತಾಲೂಕಿಗೊಂದು ಯುದ್ಧ ಸಹಾಯಕ ಸಮಿತಿಯು ಸ್ಥಾಪನೆಯಾಯಿತು ಜಿಲ್ಲಾ ಕಲೆಕ್ಟರ್ ಮತ್ತು ಸಬ್ ಕಲೆಕ್ಟರರ ನೇತೃತ್ವದಲ್ಲಿ ಯುದ್ಧ ಸಹಾಯಕ ಫಂಡಿಗೋಸ್ಕರ ಎರಡು ಸಿನೆಮಾ ಬೆನಿಫಿಟ್ ಪ್ರದರ್ಶನಗಳು ನಡೆದುವು

ನಗರ ಸಭೆ — ಉಡುಪಿ ಮುನಿಸಿಪಾಲಿಟಿಯ ೧೯೩೯-೪೦ನೆ ವರುಷದ ಆಡಳಿತ ವರದಿಯನ್ನು ಕಳೆದ ತಾ ೨೭ರಲ್ಲಿ ಜರಗಿದ ಮೀಟಿಂಗಿನಲ್ಲಿ ಅಂಗೀಕರಿಸಲಾಯಿತು.

ಪುತ್ತೂರು

ವರ್ಗಾವರ್ಗಿ — ಇಲ್ಲಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ವಿ. ಯಮ್ ಮಾರ್ಟಿಸರಿಗೆ ಮಂಗಳೂರಿಗೂ ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ನಜರತ್‌ರವರಿಗೆ ಇಲ್ಲಿಗೂ ವರ್ಗವಾಗಿರುತ್ತದೆ

ಹಯ್ಯರ್ ಗ್ರೇಡ್ ಟ್ರೈನಿಂಗಿಗೆ ಸಿಲೆಕ್ಶನ್ ಸಿಕ್ಕಿದ ವಿದ್ಯಾರ್ಥಿಗಳು

ಮಂಗಳೂರು ಗವರ್ನಮೆಂಟ್ ಹಾ ಎ ಟ್ರೈನಿಂಗ್ ಶಾಲೆಯಲ್ಲಿ ಟ್ರೈನಿಂಗ್‌ಗಾಗಿ ಜಿಲ್ಲೆಯಿಂದ ೧೨೦ ಮಂದಿ ಸ್ಟೈಪೆಂಡ್ ವಿದ್ಯಾರ್ಥಿಗಳಾಗಿ ಚುನಾಯಿತರಾಗಿದ್ದಾರೆ ಈ ವಿದ್ಯಾರ್ಥಿಗಳು ಜನರಲ್ ಎಜುಕೇಶನಲ್ ಸರ್ಟಿಫಿಕೇಟ್ ಸಹಿತ ಇದೇ ತಾ ೧೫ನೇ ಸೋಮವಾರ ೧೨ ಗಂಟೆಗೆ ಸರಿಯಾಗಿ ಟ್ರೈನಿಂಗ್ ಶಾಲಾ ಹೆಡ್ಮಾಸ್ತರರ ಮುಂದೆ ಹಾಜರಾಗಬೇಕು. ತಮ್ಮ ಆರೋಗ್ಯ ಹಾಗೂ ದೇಹದಾರ್ಢ್ಯತೆಗಾಗಿ ಸರ್ಟಿಫಿಕೇಟೊಂದನ್ನು ಶಾಲೆಗೆ ಸೇರಿದ ದಿನದಿಂದ ಮೂರು ದಿನಗಳೊಳಗೆ ಹಾಜರು ಪಡಿಸಬೇಕು.

ಚುನಾಯಿತರಾದ ಟ್ರೈನಿಂಗ್ ವಿದ್ಯಾರ್ಥಿಗಳು

ಸಂಸ್ಕೃತ ಶಾಲೆಯಿಂದ.— ಶ್ರೀ. ಪಿ. ನಾರಾಯಣ ಕಾರಂತ,

ಮಂಗಳೂರು ರೇಂಜಿನಿಂದ:— ಶ್ರೀ ಪಿ. ಶಿವ, ಕುಲ್ಕೇಶರ ಸುಬ್ಬ, ಟಿ. ಬಾಬು, ಎ. ರಾಮಕೃಷ್ಣ, ಕೆ. ಮುದ್ದು ಶೆಟ್ಟಾಡಿ, ಯಸ್. ಸಾದು ಪ್ಯಾರಿ, ಕೆ. ಅಬ್ದುಲ್ಲ, ಬಿ. ಕೆ. ತ್ಯಾಂಪಣ್ಣ, ಕೆ. ಕುಂಞಪ್ಪ ಪೂಜಾರಿ, ಆಯಿಲ್ ಕಣ್ಣ, ಶೀನಪ್ಪ ಪೂಜಾರಿ, ವಾಮನ ನಾೖಕ, ಕೆ. ಭುಜಂಗ ಶೆಟ್ಟಿ, ಮಾರಪ್ಪ ಶೆಟ್ಟಿ, ಬಿ. ಜೋಗಿ ಶೆಟ್ಟಿ, ಕೆ ವಾಸು ಶೆಟ್ಟಿ, ಯಚ್. ಜನಾರ್ಧನ ಜಿ ಲಕ್ಷ್ಮಣ ಕಾಮತ್, ದಾಸ್ರ ಕಾಮತ್ ಬಿ. ಶಂಕರ್ ರಾವ್, ಯಸ್. ಕೃಷ್ಣಯ್ಯ, ಟಿ ಸುಬ್ರಾಯ ಭಟ್, ವೈ ನಾರಾಯಣ ಭಟ್ ಎವರೆಸ್ಟ್ ಕೇಸ್ತಲೀನೋ, ಕೊರ್ನೇಲಿಯೋ ಪೀಗಾಸ್, ಅಂತ್ರೋನಿ ಜೋನ್ ತಾರೊ, ಜೋನ್ ರಿಚಾರ್ಡ ರೊಡ್ರಿಗಸ್, ಆಲ್ಬರ್ಟ ಮಾರ್ಕ ಫೆರ್ನಾಂಡಿಸ್, ಜೋಜ಼ೆಫ಼ ಬೆನೆಡಿಕ್ಟ್ ಲೋಬೋ, ವಿಕ್ಟರ್ ಡಿ'ಸೋಜ.

ಕಾಸರಗೋಡು ರೇಂಜಿನಿಂದ:— ಶೇಷಪ್ಪ ಶೆಟ್ಟಿ, ಪಿ ಸಂಕಪ್ಪ ರೈ, ವೈ ಸಂಕಪ್ಪ ಆಡ್ಯಂತಾಯ, ಹುಸ್ಸೈನ್ ಬ್ಯಾರಿ, ಮಾರ್ಸೆಲ್ ಎಸ್ ಡಿ'ಸೋಜ, ಟಿ ಜಿ ಶಂಕರನ್, ಎಚ್ ವಿ ಅಚ್ಯುತನ್, ಕೆ ಶ್ರೀನಿವಾಸ ಪುರುಷ ಪಿ ನಾರಾಯಣ, ಕೊಡ್ಲ ಮುಕುಂದ, ಪಿ ಎ ರಾಮಪ್ಪ ಕೆ ನರಸಿಂಹ ಯಸ್ ಸುಬ್ಬನ್ನಾಕ ಯಂ ಗಂಗಾಧರ, ಯನ್ ಅಂತಯ್ಯ, ಪಿ ಸುಬ್ರಹ್ಮಣ್ಯ ಭಟ್, ಟಿ ತಿರುಮಲೇಶ್ವರ ಭಟ್, ವೈ ಸುಬ್ರಾಯ ಭಟ್, ಪಿ ವೆಂಕಟ್ರಮಣ ಕೊಳತ್ತಾಯ ಮಹಲಿಂಗ ಭಟ್ ವಿ. ಕೇಶವ ಭಟ್ ಯನ್ ಮಹಾಬಲೇಶ್ವರ ಭಟ್, ಯು ರಾಮಣ್ಣ ಕೆದಿಲಾಯ.

ಪುತ್ತೂರು ರೇಂಜ್‌ನಿಂದ:— ಎಮ್ ಮೂಸ ಬ್ಯಾರಿ ಪೀಟರ್ ಡೆಮಿಯನ್ ಡಿ'ಸೋಜ ಜೆರೋಂ ಪಿಂಟೊ ಜಿ ಕುಂಞಪ್ಪ ಡಿ ಚಿನ್ನಪ್ಪ ಗೌಡ ಕೆ ಕಾಂತಪ್ಪ ಆಳ್ವ ಎಸ್. ಚೆನ್ನಪ್ಪ ರೈ ಕೆ ಶೇಷಪ್ಪಗೌಡ, ಎನ್ ವಾಸುದೇವಯ್ಯ, ಎಸ್. ಸುಬ್ರಾಯ ಭಟ್, ಜಿ ಕೃಷ್ಣ ಭಟ್

ಉಡುಪಿ ರೇಂಜ್‌ನಿಂದ — ಕೆ ರಾಮಕೃಷ್ಣ ಉಪಾಧ್ಯಾಯ ಕೆ ಶ್ರೀನಿವಾಸ ಭಾರ್ಗವ, ಯು ರಾಮಚಂದ್ರ ಮಯ್ಯ, ಕೆ. ರಾಜಗೋಪಾಲ ಹೆಬ್ಬಾರ ಪಿ ಕೃಷ್ಣ ಕಾರಂತ, ವೈ. ನಾರಾಯಣ ರಾವ್, ಐರೋಡಿ ನಾರಾಯಣ ಅಳ್ವ, ಕೆ ಮುದ್ದಣ್ಣ ಶೆಟ್ಟಿ ಯು. ಕೆ. ಜಗನ್ನಾಥ ಶೆಟ್ಟಿ ಎ ವೀರಣ್ಣ ಸೂಡಾ ಯು. ಮೋನಪ್ಪ ಶೆಟ್ಟಿ, ಬಿ ಶೀನ ಶೆಟ್ಟಿ ಕೆ ಶಂಕರಯ್ಯ ಶೆಟ್ಟಿ, ಐ ರಾಮಣ್ಣ ಶೆಟ್ಟಿ, ಪಿ ಗುಂಡ್ಡು ಶೆಟ್ಟಿ, ಎಚ್ ಮಹಾಬಲ ಶೆಟ್ಟಿ, ಕ್ಷೇವಿಯರ್ ಫೆರ್ನಾಂಡಿಸ್ ದೇವದತ್ತ ಸೋನ್ಸ್, ಸಿಲ್ವೆಸ್ಟರ್ ಮಾರ್ಟಿಸ್ ಪೀಟರ್ ಡಿ ಸೋಜ, ಕೆ ರಾಮಚಂದ್ರ ನಾಯಕ್, ಬಿ ಕರಿಯ ಪೂಜಾರಿ ಟಿ ರಾಮ ಬೆಲ್ಚಾಡ, ಎನ್. ಶ್ರೀನಿವಾಸ ನಾಯಕ್ ಯು. ಮುತ್ತಯ್ಯ ಬೆಲ್ಚಾಡ, ಪಿ ಮಂಜುನಾಥ ಆಚಾರಿ

ಕಾರ್ಕಳ ರೇಂಜ್‌ನಿಂದ:— ಕೆ. ಎಸ್ ಅಹಮದ್ ಪೀರಾನ್, ಕೆ. ಸೀತಾರಾಮ ಭಟ್ ವಿ ರಂಗಪ್ಪಯ್ಯ, ಎಸ್ ವೆಂಕಟ ರಾವ್, ಎಸ್ ಸದಾಶಿವ ಶೆಟ್ಟಿ, ಕೆ ಸಂಜೀವ ಹೆಗ್ಡೆ, ಎಸ್. ತಿಮ್ಮಪ್ಪ ಶೆಟ್ಟಿ, ಕೆ ಎ ಜಗನ್ನಾಥ ಶೆಟ್ಟಿ, ಬಿ. ದೇಜು ಶೆಟ್ಟಿಗಾರ, ವೈ ರಾಮಣ್ಣ ಹೆಗ್ಡೆ, ರೆಮಿಜಿಯಸ್ ಡಿ'ಸೋಜ, ಜೋನ್ ಜೇಪಿ ಪ್ರಸಾದ ಸೈಮನ್, ಜೋನ್ ಡೆಂತಿ, ಕೆ. ಎಸ್. ಉಬೇದುಲ್ಲಾ.

ಕುಂದಾಪುರ ರೇಂಜ್‌ನಿಂದ.— ಅರ್ಬಿನ್ ಡಿ'ಸೋಜ, ಬಿ. ಕೃಷ್ಣ ದೇವ ಹಂದೆ, ಬಿ. ವಿಠ್ಠಲ ಶೆಟ್ಟಿ, ಎಂ. ಜಿ. ಚಂದ್ರ ಶೇಖರನ್, ಪಿ. ರಾಮ, ಜಿ. ಕೃಷ್ಣ.

ಕೆನರಾ ಮುಹಮ್ಮದನ್ ರೇಂಜ್‌ನಿಂದ.— ಅಬ್ದುಲ್ ಲತೀಫ್, ಎಸ್. ಎ. ಮುಹಮ್ಮದ್ ಫಕೀರ್, ಕೆ. ಅಬ್ದುಲ್ ಖಾದರ್, ಶೇಖ್ ಮೊಹಿದ್ದೀನ್ ಬಿ., ಕೆ. ಸಯ್ಯದ್ ಫೀರೋಜ್ ಸಾಹೇಬ್, ಕೆ. ಮುಹಮ್ಮದ್ ಕುಂಞಿ, ಶೇಖ್ ಬುಡಾನ್, ಜಿ. ಬಾಬುಲ್ಲಾ ಸಾಹೇಬ್, ಬಿ. ಅಬ್ಬಾ ಬ್ಯಾರಿ.

ಜಿನ್ನರೂ ನಿವೃತ್ತರಾಗಬಾರದೆ?

ಗಾಂಧೀ—ಜಿನ್ನರ ರಾಜಕೀಯ!



ಪಾಕಿಸ್ತಾನ ವಾದಿಗಳಾದ ಜಿನ್ನರು

ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸುವ ಸಮಸ್ತ ಭಾರವನ್ನು ಹೊತ್ತುಕೊಂಡಿದ್ದ ಮಹಾತ್ಮಾ ಗಾಂಧಿಯವರು ಈಗ ಆ ಭಾರವನ್ನು ಪುನಃ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಮೇಲೆ ಹೊತ್ತು ಹಾಕಿದ್ದಾರೆ. ಕಾಂಗ್ರೆಸಿನ ಸಲಹೆಗಾರರಾಗಿ ಅವರು ಮುಂದಕ್ಕೂ ಇರುವರಾದರೂ, ಕಾಂಗ್ರೆಸಿನ ಭವಿಷ್ಯ ಕಾರ್ಯಕ್ರಮದಲ್ಲಿ ಅವರ ಯಾವ ಕೈಯೂ ಇರುವದಿಲ್ಲ. ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅವರ ಯಾವ ಜವಾಬ್ದಾರಿಯೂ ಇರುವದಿಲ್ಲ. ಅವರು ಕಾಂಗ್ರೆಸಿನಿಂದ ನಿವೃತ್ತರಾದ ಹಾಗೆ!

ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಬೇಕಾದರೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವಿರಬೇಕೆಂಬುದು ಮಹಾತ್ಮರ ಹಠ. ಆದರೆ ಯೂರೋಪಿನಲ್ಲಿ ಪ್ರಳಯಕಾರಿ ಲೋಕಯುದ್ಧವೊಂದು ನಡೆಯುತ್ತಿರುವಾಗ ಅದರ ದುಷ್ಟ ಭಾವವು ಹಿಂದುಸ್ಥಾನದ ಮೇಲೂ ಬೀಳದೆ ಇಲ್ಲ. ಆದ್ದರಿಂದ ಕಾಂಗ್ರೆಸು ಅಹಿಂಸೆಯನ್ನು ತನ್ನ ಧ್ಯೇಯವನ್ನಾಗಿಟ್ಟುಕೊಂಡಿದೆಯಾದರೂ, ಹೊರದೇಶ ವ್ಯವಹಾರಗಳ ವಿಷಯದಲ್ಲಿ, ಸದ್ಯದ ಪರಿಸ್ಥಿತಿ ಮತ್ತು ಹಿಂದುಸ್ಥಾನದ ಜನರ ಸಿದ್ಧತೆಯನ್ನು ಆಲೋಚನೆಗೆ ತರುವಾಗ—ಅಹಿಂಸೆಯು ವ್ಯಾವಹಾರಿಕವಾಗಲಾರದೆಂಬುದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ಯೂರೋಪಿನಲ್ಲಿ ಯುದ್ಧದ ಮೂಲಕ ನಿಮಿಷ ನಿಮಿಷಕ್ಕೆ ಬದಲಾಗುತ್ತಿರುವ ಪರಿಸ್ಥಿತಿಯ ಕಾರಣದಿಂದ, ಪರರಾಷ್ಟ್ರಗಳ ಆಕ್ರಮಣಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಸಿದ್ಧತೆಯನ್ನು ಈಗ ಹಿಂದುಸ್ಥಾನವು ಆಧುನಿಕ ಶಸ್ತ್ರೋಪಕರಣಗಳ ಮೂಲಕವಾಗಿಯೇ ಮಾಡಬೇಕಾಗಿದೆ. ಪರಿಸ್ಥಿತಿಯು ಹೀಗಿರುವದರಿಂದ, ಕಾಂಗ್ರೆಸು ಅಂಥ ಸಿದ್ಧತೆಗೆ ತನಗೆ ತೋರಿದ ರೀತಿಯ ಸಹಾನುಭೂತಿಯನ್ನು ತೋರಿಸದೆ ಉಪಾಯವಿಲ್ಲ. ಮಹಾತ್ಮರು ಅನ್ನುವಂತೆ ಅಹಿಂಸೆಯನ್ನೇ ಕಾಂಗ್ರೆಸು ವ್ಯಾವಹಾರಿಕ ಉಪಾಯವನ್ನಾಗಿ ಇಟ್ಟುಕೊಳ್ಳುವದಾದರೆ, ಅದಕ್ಕೆ ಹಿಂಸಾತ್ಮಕ ಸಿದ್ಧತೆಗೆ ಸಹಾನುಭೂತಿಯನ್ನು ತೋರಿಸಲಿಕ್ಕಾಗುವದಿಲ್ಲ. ಈ ಧರ್ಮ ಸಂಕಟವು ಪ್ರಾಪ್ತವಾದುದರಿಂದ, ಕಾಂಗ್ರೆಸು ನಿರುಪಾಯಯಾಗಿ ಮಹಾತ್ಮರಿಗೆ ಕೊಟ್ಟ ಸರ್ವಾಧಿಕಾರಗಳನ್ನು ಹಿಂದಕ್ಕೆ ತೆಗೆದುಕೊಂಡು ಅವರನ್ನು ಕಾಂಗ್ರೆಸ್ ಕಾರ್ಯಕಲಾಪಗಳ ಜವಾಬ್ದಾರಿಯಿಂದ ಮುಕ್ತರನ್ನಾಗಿ ಮಾಡಬೇಕಾಯಿತು.

ಗಾಂಧಿ ಜಿನ್ನರ ಸಾಮ್ಯ

ಗಾಂಧಿಯವರು ಹೇಗೋ ಜಿನ್ನರೂ ಹಾಗೇ ಛಲವಾದಿಗಳು. ಗಾಂಧಿಯವರು ಸ್ಪಷ್ಟ ರಾಷ್ಟ್ರವಾದಿಗಳಾಗಿರುವರಾದರೆ, ಜಿನ್ನರು ಕಡು ಜಾತಿವಾದಿಗಳಾಗಿರುವರು. ಇದೊಂದೇ ಅವರಿಬ್ಬರೊಳಗಿನ ದೊಡ್ಡ ಭೇದವಾಗಿರುವದು. ಜಿನ್ನಾ ಸಾಹೇಬರೂ ಪರಿಸ್ಥಿತಿಯ ಕಡೆಗೆ ಕಣ್ಣು ಮುಚ್ಚಿ ಪಾಕಿಸ್ಥಾನದ ಯೋಜನೆಯನ್ನು, ಮಗುವನ್ನಾಡಿಸುವಂತೆ ಮುದ್ದಿನಿಂದ ಆಡಿಸುತ್ತಾ ಇದ್ದಾರೆ. ದೇಶದ ಅಧಿಕಾಂಶ ಜನತೆಗೆ, ಮುಸಲ್ಮಾನರಲ್ಲೇ ಬಹಳ ಮಂದಿಗೆ, ಈ ಯೋಜನೆಯು ಬೇಡವಾಗಿರುವದಾದರೂ, ಜಿನ್ನಾ ಸಾಹೇಬರಂತೂ ಅದನ್ನು ಹೀಗೆಯೇ ಬಿಟ್ಟುಕೊಡುವಹಾಗಿಲ್ಲ. ಜಿನ್ನಾ ಸಾಹೇಬರು ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳು, ಕಾಂಗ್ರೆಸಿನಲ್ಲಿ ಗಾಂಧಿಯವರಿಗೆ ಯಾವ ಸ್ಥಾನವೋ ಲೀಗಿನಲ್ಲಿ ಅದೇ ಸ್ಥಾನ ಜಿನ್ನಾ ಸಾಹೇಬರಿಗೆ. ಧರ್ಮ ಸಂಕಟವಾದುದರಿಂದ ಕಾಂಗ್ರೆಸು ಗಾಂಧಿಯವರನ್ನು ಜವಾಬುದಾರಿಯಿಂದ ಮುಕ್ತ ಮಾಡಿತು. ಮುಸ್ಲಿಂ ಲೀಗಿಗೂ ಧರ್ಮಸಂಕಟವಾಗಿದೆ. ಲೀಗಿನಲ್ಲಿ ಎಲ್ಲರೂ ಜಿನ್ನಾ ಸಾಹೇಬರನ್ನು ಸಮರ್ಥಿಸುವದಿಲ್ಲ. ಸರ್ ಸಿಕಂದರ ಹಯ್ಯಾತ್ ಖಾನರ ನೇತೃತ್ವದಲ್ಲಿ ಲೀಗಿನ ಒಂದು ದೊಡ್ಡ ತಂಡವೇ ಪಾಕಿಸ್ಥಾನ ಯೋಜನೆಯನ್ನು ವಿರೋಧಿಸುತ್ತದೆ; ಅದು ಮುಸಲ್ಮಾನರಿಗೂ ದೇಶಕ್ಕೂ ಹಾನಿಕರವಾದುದೆಂದು ತಿಳಿಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಿಂದು ಮುಸಲ್ಮಾನ ಐಕ್ಯವು ಅನಿವಾರ್ಯವೆಂದು ಅದು ಎಣಿಸಿದೆ. ಆದರೆ ಜಿನ್ನಾ ಸಾಹೇಬರ ಪಾಕಿಸ್ತಾನದ ಹಠವು ಈ ಐಕ್ಯಕ್ಕೆ ದೊಡ್ಡ ವಿಘ್ನವಾಗಿದೆ. ಆದ್ದರಿಂದ ಜಿನ್ನರಿಗಾಗಿ ಪಾಕಿಸ್ಥಾನದ ಯೋಜನೆಯನ್ನು ಹಿಡಿದು ತೂಗುವದೋ ಅಥವಾ ಜಿನ್ನರನ್ನು ಅವರ ಸರ್ವಾಧಿಕಾರದಿಂದ ನಿವೃತ್ತರನ್ನಾಗಿ ಮಾಡಿ, ಹಿಂದೂ ಮುಸಲ್ಮಾನ ಐಕ್ಯ ಸಾಧನೆಗೆ ವ್ಯವಹಾರಿಕ ಪ್ರಯತ್ನಗಳನ್ನು ಮಾಡುವದೋ ಎಂಬ ಪ್ರಶ್ನೆಯು ಲೀಗಿಗೂ ಪ್ರಾಪ್ತವಾಗಿರುವದು.

ಸಂಕಟದಿಂದ ಪಾರಾಗುವ ಬಗೆ

ಮಹಾತ್ಮರು ಕಾಂಗ್ರೆಸ್ ಸರ್ವಾಧಿಕಾರ ಪಟ್ಟದಿಂದ ನಿವೃತ್ತರಾದಂತೆ ಜಿನ್ನಾ ಸಾಹೇಬರೂ ಲೀಗಿನ ಸರ್ವಾಧಿಕಾರ ಪಟ್ಟದಿಂದ ಯಾಕೆ ನಿವೃತ್ತರಾಗಬಾರದು? ಮಹಾತ್ಮರು ಕಾಂಗ್ರೆಸಿನಿಂದ ನಿವೃತ್ತರಾದ ಮೇಲೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವನ್ನಿಡಲು ಕೆಲಸ ಮಾಡಲಿಕ್ಕೆ ಸ್ವತಂತ್ರರಿರುವಂತೆ, ಜಿನ್ನಾ ಸಾಹೇಬರಾದರೂ ಲೀಗಿನಿಂದ ನಿವೃತ್ತರಾದಮೇಲೂ ತಮ್ಮ ಅಚ್ಚುಮೆಚ್ಚಿನ ಪಾಕಿಸ್ಥಾನ ಕೂಸನ್ನು ತಮಗೆ ಬೇಕಾದಂತೆ ಲಾಲಿಸಲಿಕ್ಕೂ ಪಾಲಿಸಲಿಕ್ಕೂ ಸ್ವತಂತ್ರರೇ ಸರಿ! ಆದರೆ ತಾವಾಗಿ ಕಾಂಗ್ರೆಸಿನಿಂದ ಹೊರಬರಲಿಕ್ಕೆ ಸಿದ್ಧರಾದ ಮಹಾತ್ಮರ ಉದಾರ ಭಾವ ಮತ್ತು ಮಹಾತ್ಮರಂಥ ವ್ಯಕ್ತಿತ್ವಗಳೂ ಕಾರ್ಯನಿರ್ವಾಹದ ಒಂದೇ ಉಚ್ಚ ದೃಷ್ಟಿಯಿಂದ, ನಿಂತಿರುವ ಕಾಂಗ್ರೆಸ ವರ್ಕಿಂಗ ಕಮಿಟಿಯ ಧೈರ್ಯವೂ—ಇವೆರಡು ಜಿನ್ನಾ ಸಾಹೇಬರಲ್ಲಿಯೂ ಮುಸ್ಲಿಂ ಲೀಗಿನ ಕಾರ್ಯನಿರ್ವಾಹಕ ಸಮಿತಿಯಲ್ಲಿಯೂ ಇರುವವೆ? ಮುಂದಿನ ಘಟನೆಗಳು ಈ ಪ್ರಶ್ನೆಗೆ ಉತ್ತರವನ್ನು ಕೊಡುವವು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನದಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ರೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ—ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಖದಾಯಕ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4

Madras Agent: **Appah & Co, China Bazar Madras.**

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಜಿಲ್ಲಾ ಸಮಾಚಾರ

★

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ:— ಈ ದಿವಸ ಪೂರ್ವಾಹ್ನ ೧೧ ಗಂಟೆಗೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡಿನ ಸಭೆಯು ಮಂಗಳೂರಲ್ಲಿ ಜರಗಿತು

ಶ್ರೀ ವಿವೇಕಾನಂದ ಸಭೆ:— ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ ರಿಂದ ೧೦ರ ವರೆಗೆ ಕೀರ್ತನೆ ಮತ್ತು ಈ ಕೆಳಗೆ ನಮೂದಿಸಿದಂತೆ ಪ್ರವಚನಗಳು ನಡೆಯುವುವು ಸರ್ವರಿಗೂ ಸ್ವಾಗತವಿದೆ.

ತಾ ೧೪-೭-೧೯೪೦—ಶ್ರೀ ಬಿ ಪುಂಡರೀಕ ಬಾಳಿಗರು—"ಗೀತಾ ಅಧ್ಯಾಯ ೧೪" ತಾ. ೨೧-೭-೧೯೪೦—ಶ್ರೀ ವಿ ಗಣಪತಿ ಶಾಸ್ತ್ರಿಗಳು -"ಗೀತೆಯ ಪ್ರತಿಪಾದ್ಯ ವಿಷಯವು ಯಾವುದು?" ತಾ. ೨೮-೭-೧೯೪೦—ಶ್ರೀ ಎಸ್ ಮಾಧವ ಕಾಮತರು—ಗೀತಾ ಅಧ್ಯಾಯ ೧೫ (೮೭)

ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿ

ಪ್ರಥಮ ಸಭೆಯು ಶ್ರೀ. ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ ೨೭-೬-೪೦ರಲ್ಲಿ, ಸಂಜೆ ಕಾಂಗ್ರೆಸ್ ಹೌಸಿನಲ್ಲಿ ಜರಗಿತು ಕಾರ್ಯದರ್ಶಿಗಳಾದ ಶ್ರೀ ಕೆ. ಐತಪ್ಪಶೆಟ್ಟರು ಕಳೆದ ವರ್ಷದ ವರದಿ ಹಾಗೂ ಅಡಿಟ್ ಮಾಡಿದ ಲೆಕ್ಕಗಳ ವಿವರವನ್ನು ಓದಿಹೇಳಿದರು ಅದು ಸರ್ವಾನುಮತದಿಂದ ಮಂಜೂರಾಯಿತು ಹೊಸವರ್ಷಕ್ಕೆ ಈ ಕೆಳಗಿನ ಅಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು ಅಧ್ಯಕ್ಷರು—ಶ್ರೀ ಕೊಂಚಾಡಿ ಕೇಶವ ಶೆಣೈ, ಕಾರ್ಯದರ್ಶಿ—ಶ್ರೀ. ಕೆ ಐತಪ್ಪ ಶೆಟ್ಟಿ, ಜತೆಕಾರ್ಯದರ್ಶಿ ಶ್ರೀ. ಬಿ. ರಾಮಕೃಷ್ಣ ರಾವ್, ಕೋಶಾಧಿಕಾರಿ: ಶ್ರೀ. ಯಂ ಬಿ ದೇವಡಿಗ, ಕಾರ್ಯಕಾರಿ ಮಂಡಲಿಗೆ ಶ್ರೀಗಳಾದ ಕೆ ಈಶ್ವರ ಎಂ. ಎಲ್. ಎ, ಜನಾಬ್ ಕೆ ಎಸ್. ಅಹಮ್ಮದ್ ಭಾವಾ, ಎಚ್ ರಾಮಚಂದ್ರ ಪೈ, ಇವರು. ಕಾರ್ಯಕಾರೀ ಮಂಡಲಿಯೇ ಸತ್ಯಾಗ್ರಹ ಕಮಿಟಿಯಾಗಿರತಕ್ಕದೆಂದು ನಿರ್ಣಯವಾಯಿತು

ಹರಿಜನ ವಿದ್ಯಾರ್ಥಿ ಭವನ; ಉಡುಪಿ

ಕಳೆದ ೧೯೩೯ನೆ ನವಂಬರದಲ್ಲಿ ಉಡುಪಿಯ ಮಹಾ ಜನರ ಪ್ರೋತ್ಸಾಹದಿಂದ ಹೈಸ್ಕೂಲು ವಿದ್ಯಾಭ್ಯಾಸ ಮಾಡುವ ಹಳ್ಳಿಯ ಬಡ ಹರಿಜನ ವಿದ್ಯಾರ್ಥಿಗಳ ಊಟ ಮತ್ತು ವಸತಿಯ ಬಗ್ಗೆ ತೆರೆದ ಈ ಭವನದಲ್ಲಿ ೧೯೪೦ನೆ ಎಪ್ರಿಲ್ ತನಕ ೮ ಮಂದಿ ವಿದ್ಯಾರ್ಥಿಗಳು ಮಾತ್ರ ವಿದ್ಯಾರ್ಥಿಗಳು ೧೯೪೦ನೆ ಜೂನು ೧೬ನೆ ತಾರೀಕಿನಿಂದ ೧೩ ಮಂದಿ ಬಡ ವಿದ್ಯಾರ್ಥಿಗಳು ಆಶ್ರಯ ಪಡೆದಿರುತ್ತಾರೆ ಇನ್ನೂ ಕೆಲವರಿಗೆ ಆಶ್ರಯವೀಯಬೇಕಾಗಿಯದೆ ವಿದ್ಯಾರ್ಥಿ ಭವನವು ಕೇವಲ ಮಹಾಜನರ ಉದಾರಾಶ್ರಯದ ಮೇಲೆಯೇ ಅವಲಂಬಿಸಿಕೊಂಡಿರುವುದರಿಂದ ನಮಗೆ ಮಹಾ ಜನರು ಸಹಕರಿಸಿ ಸಹಾಯ ಮಾಡಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೂಲ್ಕಿ

ಗೌ ಸಾ. ಬ್ರಾಹ್ಮಣರ ಬಡ ವಿದ್ಯಾರ್ಥಿ ನಿಧಿ:— ಮೂಲ್ಕಿ ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ವಾರ್ಷಿಕ ವರದಿ ಜೂನ ತಾ ೨೩ಕ್ಕೆ ಕೊಡಿ ಬಂತು

ಈ ಸಂಸ್ಥೆಯ ಕಾರ್ಯಕಾರೀ ಸಭೆಯು ಜುಲಾಯಿ ತಾ. ೬ರಲ್ಲು ಕೂಡಿ ಬಂದು ಮೂಲ್ಕಿ ಬೋರ್ಡ್ ಹೈಸ್ಕೂಲಿನಲ್ಲಿ ಕಲಿಯುವ ಹತ್ತು ಮಂದಿ ಸ್ವಜಾತೀಯ ಬಡ ವಿದ್ಯಾರ್ಥಿಗಳ ಬಗ್ಗೆ ೧೯೪೦-೪೧ನೆ ಒಂದು ವರ್ಷದ ಬಗ್ಗೆ ಸ್ಕೋಲರ್ ಶಿಪ್ ರೂಪದಲ್ಲಿ ರೂ ೨೦೯-೨-೧೦ರಷ್ಟು ಹಣವನ್ನು ಧನಸಹಾಯ ಮಾಡುವರೆ ಮಂಜೂರು ಮಾಡಿಯದೆ ವಿದ್ಯಾಭಿಮಾನಿಗಳು ಇಂಥ ಸಂಸ್ಥೆಗೆ ಉದಾರಹಸ್ತದಿಂದ ಧನಸಹಾಯ ಮಾಡಬೇಕಾಗಿ ವಿನಂತಿ

ಕಾರ್ಕಳ

ಸತ್ಯಾಗ್ರಹ ಸಮಿತಿ—ಕಳೆದ ವಾರ ಕಾರ್ಕಳ ಸರ್ಕಲ್ ಕಾಂಗ್ರೆಸ ಕಮಿಟಿಯ ಒಂದ ಸಭೆಯ ಜರಗಿ ಈ ಕಮಿಟಿಯನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲಾಯಿತು ಶ್ರೀಗಳಾದ ಸುಬ್ಬಣ್ಣ ಭಟ್ಟರು ಇದರ ಅಧ್ಯಕ್ಷರಾಗಿಯೂ ಯಂ ಡಿ. ಅಧಿಕಾರಿ ಮತ್ತು ಕೆ ವಿ. ಪ್ರಭುಗಳವರು ಉಪಾಧ್ಯಕ್ಷ ಹಾಗೂ ಖಜಾಂಚಿಯರಾಗಿಯೂ, ಕೆ ಪಾಂಡುರಂಗ ಪೈ ಮತ್ತು ವಾಮನ ಪೈಯವರು ಕಾರ್ಯದರ್ಶಿಗಳಾಗಿಯೂ ಮಾಡಲ್ಪಟ್ಟಿದ್ದಾರೆ

ಯುದ್ಧಪ್ರಚಾರ ಕಮಿಟಿ:—ತಾ. ೬-೭-೧೯೪೦ರ ದಿನ ಜಿಲ್ಲಾ ಕಲೆಕ್ಟರರವರು ತಾವು ಉಳಕೊಂಡಿದ್ದ ಲೋಕಲ್ ಬೋರ್ಡು ಬಂಗಲೆಗೆ ಸ್ಥಳೀಯ ಪ್ರಮುಖರನ್ನು ಕರೆಸಿ ಯುದ್ಧ ವಿಷಯವಾದ ಸುಳ್ಳು ವಾರ್ತೆಗಳು ಹರಡಿ ಜನರಲ್ಲಿ ವ್ಯರ್ಥಗಾಬರಿಗೆ ಆಸ್ಪದವಾಗದಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳುವದಕ್ಕೋಸ್ಕರ ಪರಾಮರ್ಶೆ ತೆಗೆದುಕೊಳ್ಳಲು. ಶ್ರೀಗಳಾದ ಕೆ. ವಿ. ಶೇಷಗಿರಿ ಪ್ರಭು, ಪಂಡಿತ ರಘುನಾಥರಾವ್ ಮತ್ತು ರೆವರೆಂಡ ಫಾದರ್ ಸೋಜಾರವರಿಂದ ಕೂಡಿದ ಒಂದು ತಾತ್ಕಾಲಿಕ ಪ್ರಚಾರ ಸಮಿತಿಯನ್ನು ರಚಿಸಿದ್ದಾರೆ ಈ ಸಮಿತಿಯು ಸಭೆ ಕೂಡಿ ಇತರರನ್ನು ಇದರ ಸದಸ್ಯರನ್ನಾಗಿ ಸೇರಿಸಿಕೊಂಡು ಪ್ರಚಾರ ಕಾರ್ಯವನ್ನು ಆರಂಭಿಸುವರು

ಕಟಪಾಡಿ:—ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಹೊಸ ಪಾರ್ಶ್ವವನ್ನು ತೆರೆಯುವ ಸಮಾರಂಭವು ಶ್ರೀ. ವಿಠ್ಠಲ ಶಾಂತಾರಾಮ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ತಾ ೨೨-೬-೪೦ನೇ ಶನಿವಾರ ಅಪರಾಹ್ನ ಜರಗಿತು.

ಉಡುಪಿ

ಯುದ್ಧ ಸಹಾಯಕ ಸಮಿತಿ: ಉಡುಪಿ ತಾಲೂಕಿಗೊಂದು ಯುದ್ಧ ಸಹಾಯಕ ಸಮಿತಿಯು ಸ್ಥಾಪನೆಯಾಯಿತು ಜಿಲ್ಲಾ ಕಲೆಕ್ಟರ್ ಮತ್ತು ಸಬ್ ಕಲೆಕ್ಟರರ ನೇತೃತ್ವದಲ್ಲಿ ಯುದ್ಧ ಸಹಾಯಕ ಫಂಡಿಗೋಸ್ಕರ ಎರಡು ಸಿನೆಮಾ ಬೆನಿಫಿಟ್ ಪ್ರದರ್ಶನಗಳ ನಡೆದುವು

ನಗರ ಸಭೆ—ಉಡುಪಿ ಮುನಿಸಿಪಾಲಿಟಿಯ ೧೯೩೯ ೪೦ನೆ ವರುಷದ ಆಡಳಿತ ವರದಿಯನ್ನು ಕಳೆದ ತಾ ೨೭ರಲ್ಲಿ ಜರಗಿದ ಮಿಟಿಂಗಿನಲ್ಲಿ ಅಂಗೀಕರಿಸಲಾಯಿತು.

ಪುತ್ತೂರು

ವರ್ಗಾವರ್ಗಿ—ಇಲ್ಲಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಿ. ಮಮ್ ಮಾರ್ಟಿನರಿಗೆ ಮಂಗಳೂರು ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ನಜರತ್‌ರವರಿಗೆ ಇಲ್ಲಿಗೂ ವರ್ಗವಾಗಿರತ್ತದೆ

ಹಯ್ಯರ್ ಗ್ರೇಡ್ ಟ್ರೈನಿಂಗಿಗೆ ಸಿಲೆಕ್ಶನ್ ಸಿಕ್ಕಿದ ವಿದ್ಯಾರ್ಥಿಗಳು

ಮಂಗಳೂರು ಗವರ್ನಮೆಂಟ್ ಹಾ ಎ ಟ್ರೈನಿಂಗ್ ಶಾಲೆಯಲ್ಲಿ ಟ್ರೈನಿಂಗ್‌ಗಾಗಿ ಜಿಲ್ಲೆಯಿಂದ ೧೨೦ ಮಂದಿ ಸ್ಟೈಪೆಂಡ್ ವಿದ್ಯಾರ್ಥಿಗಳಾಗಿ ಚುನಾಯಿತರಾಗಿದ್ದಾರೆ ಈ ವಿದ್ಯಾರ್ಥಿಗಳು ಜನರಲ್ ಎಜುಕೇಶನಲ್ ಸರ್ಟಿಫಿಕೇಟ್ ಸಹಿತ ಇದೇ ತಾ ೧೫ನೇ ಸೋಮವಾರ ೧೨ ಗಂಟೆಗೆ ಸರಿಯಾಗಿ ಟ್ರೈನಿಂಗ್ ಶಾಲಾ ಹೆಡ್ಮಾಸ್ತರರ ಮುಂದೆ ಹಾಜರಾಗಬೇಕು ತಮ್ಮ ಆರೋಗ್ಯ ಹಾಗೂ ದೇಹದಾರ್ಢ್ಯತೆಗಾಗಿ ಸರ್ಟಿಫಿಕೇಟೊಂದನ್ನು ಶಾಲೆಗೆ ಸೇರಿದ ದಿನದಿಂದ ಮೂರು ದಿನಗಳೊಳಗೆ ಹಾಜರು ಪಡಿಸಬೇಕು.

ಚುನಾಯಿತರಾದ ಟ್ರೈನಿಂಗ್ ವಿದ್ಯಾರ್ಥಿಗಳು

ಸಂಸ್ಕೃತ ಶಾಲೆಯಿಂದ:— ಶ್ರೀ. ಪಿ. ನಾರಾಯಣ ಕಾರಂತ.

ಮಂಗಳೂರು ರೇಂಜಿನಿಂದ:—ಶ್ರೀ ಪಿ. ಶಿವ, ಕುಲ್ಯೇಕರ ಸುಬ್ಬ, ಟಿ. ಬಾಬು, ಎ. ರಾಮಕೃಷ್ಣ, ಕೆ. ಮುದ್ದು ಕಟ್ಟಾರಿ, ಯಸ್. ಸಾದು ಬ್ಯಾರಿ, ಕೆ. ಅಬ್ಬುಲ್ಲ, ಬಿ. ಕೆ. ತ್ಯಾಂಪಣ್ಣ, ಕೆ. ಕುಂಞಪ್ಪ ಪೂಜಾರಿ, ಆಯಿಲ್ ಕಣ್ಣ ಶೀನಪ್ಪ ಪೂಜಾರಿ, ವಾಮನ ನಾಯಕ, ಕೆ. ಭುಜಂಗ ಶೆಟ್ಟಿ, ಮಾರಪ್ಪ ಶೆಟ್ಟಿ, ಬಿ ಜೋಗಿ ಶೆಟ್ಟಿ ಕೆ ವಾಸು ಶೆಟ್ಟಿ, ಯಚ್. ಜನಾರ್ಧನ, ಜಿ ಲಕ್ಷ್ಮೀಶ ಕಾಮತ್, ದಾಸ ಕಾಮತ್, ಬಿ ಶಂಕರ್ ರಾವ್, ಯಸ್. ಕೃಷ್ಣ ಮಯ್ಯ, ಟಿ ಸುಬ್ರಾಯ ಭಟ್, ವೈ ನಾರಾಯಣ ಭಟ್, ಎವರೆಸ್ಟ್ ಕೆಸ್ತಲೀನೋ, ಕೊರ್ನೇಲಿಯೋ ವೀಗಾಸ್, ಅಂತೋನಿ ಜೋನ್ ತಾರೊ, ಜೋನ್ ರಿಚಾರ್ಡ್ ರೊಡ್ರಿಗಸ್, ಆಲ್ಬರ್ಟ್ ಮಾರ್ಕ್ ಫೆರ್ನಾಂಡಿಸ್, ಜೋರ್ಜ್ ಬೆನೆಡಿಕ್ಟ್ ಲೋಬೋ, ವಿಕ್ಟರ್ ಡಿ'ಸೋಜ.

ಕಾಸರಗೋಡು ರೇಂಜಿನಿಂದ:— ಶೇಷಪ್ಪ ಶೆಟ್ಟಿ, ಪಿ ಸಂಕಪ್ಪ ರೈ, ವೈ ಸಂಕಪ್ಪ ಆಚ್ಚಂತಾಯ, ಹಸ್ಸನ್ಯರ್ ಬ್ಯಾರಿ, ಮಾರ್ಸೆಲ್ ಎಸ್ ಡಿ ಸೋಜ, ಟಿ ಜಿ ಶಂಕರನ್, ಎಚ್ ವಿ ಅಚ್ಯುತನ್, ಕೆ ಶ್ರೀನಿವಾಸ ಪುರುಷ ಪಿ ನಾರಾಯಣ, ಕೊಡ್ಲ ಮುಕುಂದ, ಸಿ ಎ ರಾಮಪ್ಪ, ಕೆ ನರಸಿಂಹ ಯಸ್ ಸುಬ್ಬನಾಯಕ ಯಂ ಗಂಗಾಧರ, ಯಸ್ ಅಂತಯ್ಯ, ಪಿ ಸುಬ್ರಹ್ಮಣ್ಯ ಭಟ್ ಪಿ ತಿರುಮಲೇಶ್ವರ ಭಟ್, ವೈ ಸುಬ್ರಾಯ ಭಟ್, ಪಿ ವೆಂಕಟ್ರಮಣ ಕೊಳತ್ತಾಯ, ಮಹಾಲಿಂಗ ಭಟ್, ವಿ ಕೇಶವ ಭಟ್, ಯಸ್ ಮಹಾಬಲೇಶ್ವರ ಭಟ್, ಯು ರಾಮಣ್ಣ ಕೆದಿಲಾಯ

ಪುತ್ತೂರು ರೇಂಜ್‌ನಿಂದ:—ಎಮ್ ಮ್ಯೂಸ ಬ್ಯಾರಿ ಪೀಟರ್ ಡೆಮಿಯನ್ ಡಿ, ಸೋಜ ಜೆರೋಮ ಪಿಂಟೊ, ಜಿ ಕುಂಞಪ್ಪ, ಡಿ. ಚನ್ನಪ್ಪ ಗೌಡ ಕೆ ಕಾಂತಪ್ಪ ಆಳ್ವ, ಎಸ್. ಚಿಕ್ಕಪ್ಪ ರೈ ಕೆ ಶೇಷಪ್ಪ ಗೌಡ, ಎಸ್ ವಾಸುದೇವಯ್ಯ ಎಸ್ ಸುಬ್ರಾಯ ಭಟ್, ಜಿ. ಕೃಷ್ಣ ಭಟ್

ಉಡುಪಿ ರೇಂಜ್‌ನಿಂದ—ಕೆ ರಾಮಕೃಷ್ಣ ಉಪಾಧ್ಯಾಯ ಕೆ ಶ್ರೀನಿವಾಸ ಭಾಗವತ್, ಯು ರಾಮಚಂದ್ರ ಮಯ್ಯ, ಕೆ ರಾಜಗೋಪಾಲ ಹೆಬ್ಬಾರ ಎ ಕೃಷ್ಣ ಕಾರಂತ, ವೈ ನಾರಾಯಣ ರಾವ್, ಐರೋಡಿ ನಾರಾಯಣ ಅಳ್ವ, ಕೆ ಮುದ್ದಣ್ಣ ಶೆಟ್ಟಿ, ಯು ಕೆ ಜಗನ್ನಾಥ ಶೆಟ್ಟಿ, ಎ ವೀರಣ್ಣ ಸೂಲಾ, ಯು ಸೋಮಪ್ಪ ಶೆಟ್ಟಿ ಬಿ ಶೀನ ಶೆಟ್ಟಿ ಕೆ ಸಂಕಯ್ಯ ಶೆಟ್ಟಿ, ಬಿ ರಾಮಣ್ಣ ಶೆಟ್ಟಿ ಪಿ ಗುಂಡು ಶೆಟ್ಟಿ, ಎಚ್ ಮಹಾಬಲ ಶೆಟ್ಟಿ, ಕ್ಸೇವಿಯರ್ ಫೆರ್ನಾಂಡಿಸ್, ದೇವದತ್ತ ಸೋನ್ಸ್, ಹಿಲಾರಿ ಮಾರ್ಟಿಸ್, ಪೀಟರ್ ಡಿ ಸೋಜ, ಕೆ. ರಾಮಚಂದ್ರ ನಾಯಕ್, ಬಿ ಕರಿಯ ಪೂಜಾರಿ, ಟಿ ರಾಮ ಬೆಲ್ಲಾಡ, ಎಸ್. ಶ್ರೀನಿವಾಸ ನಾಯಕ್, ಯು ಮುತ್ತಯ್ಯ ಬೆಲ್ಚಾಡ, ಪಿ. ಮಂಜುನಾಥ ಆಚಾರಿ.

ಕಾರ್ಕಳ ರೇಂಜ್‌ನಿಂದ:—ಕೆ. ಎಸ್ ಅಹಮದ್ ಸಿರಾನ್, ಕೆ ಸೀತಾರಾಮ ಭಟ್ ವಿ ರಂಗಪ್ಪಯ್ಯ, ಎಸ್ ವೆಂಕಟ ರಾವ್, ಎಸ್. ಸದಾಶಿವ ಶೆಟ್ಟಿ, ಕೆ ಸಂಜೀವ ಹೆಗ್ಡೆ, ಎಸ್. ತಿಮ್ಮಪ್ಪ ಶೆಟ್ಟಿ, ಕೆ ವಿ. ಜಗನ್ನಾಥ ಶೆಟ್ಟಿ, ಬಿ. ದೇಜು ಶೆಟ್ಟಿಗಾರ, ವೈ ರಾಮಣ್ಣ ಹೆಗ್ಡೆ, ರೆಮಿಜಿಯಸ್ ಡಿ'ಸೋಜ, ಜೋನ್ ದೇವಪ್ರಸಾದ ಸೈಮನ್, ಜೋನ್ ಡಿಂಕಿ, ಕೆ ಎಸ್ ಉಬೇದುಲ್ಲಾ.

ಕುಂದಾಪುರ ರೇಂಜ್‌ನಿಂದ:— ಆಲ್ಬನ್ ಡಿ'ಸೋಜ, ಬಿ. ಕೃಷ್ಣ ದೇವ ಹಂದೆ, ಬಿ. ವಿಠ್ಠಲ ಶೆಟ್ಟಿ, ಎಂ. ಬಿ. ಚಂದ್ರ ಕರುವನ್, ಪಿ. ರಾಮು, ಜಿ. ಕೃಷ್ಣ

ಕೆನರಾ ಮಹಮ್ಮದನ್ ರೇಂಜ್‌ನಿಂದ:—ಅಬ್ದುಲ್ ಲತೀಫ್, ಎಸ್. ಎ. ಮುಹಮ್ಮದ್ ಖಲೀಲ್, ಕೆ. ಅಬ್ದುಲ್ ಖಾದರ್, ಶೇಖ್ ಮೊಹಿದ್ದಿನ್ ಬಿ, ಕೆ. ಸಯ್ಯದ್ ಫಾರೂಕ್ ಸಾಹೇಬ್, ಕೆ. ಮುಹಮ್ಮದ್ ಕುಂಞಿ ಬಿ. ಶೇಖ್ ಭುಡಾನ್, ಟಿ. ಬಬುಲ್ಲಾಲ್ಲಾ ಸಾಹೇಬ್, ಬಿ. ಅಬ್ಬಾ ಬ್ಯಾರಿ.

ಜಿನ್ನರೂ ನಿವೃತ್ತರಾಗಬಾರದೆ?

ಗಾಂಧೀ—ಜಿನ್ನರ ರಾಜಕೀಯ!


ಪಾಕಿಸ್ಥಾನ ವಾದಿಗಳಾದ ಜಿನ್ನರು

ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದೊತ್ತುವ ಸಮಸ್ತ ಭಾರವನ್ನು ಹೊತ್ತುಕೊಂಡಿದ್ದ ಮಹಾತ್ಮಾ ಗಾಂಧಿಯವರು ಈಗ ಆ ಭಾರವನ್ನು ಪುನಃ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಮೇಲೆ ಹೊತ್ತು ಹಾಕಿದ್ದಾರೆ. ಕಾಂಗ್ರೆಸಿನ ಸಲಹೆಗಾರರಾಗಿ ಅವರು ಮುಂದಕ್ಕೂ ಇರುವರಾದರೂ, ಕಾಂಗ್ರೆಸಿನ ಭವಿಷ್ಯ ಕಾರ್ಯಕ್ರಮದಲ್ಲಿ ಅವರ ಯಾವ ಕೈಯೂ ಇರುವದಿಲ್ಲ. ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅವರ ಯಾವ ಜವಾಬ್ದಾರಿಯೂ ಇರುವದಿಲ್ಲ. ಅವರು ಕಾಂಗ್ರೆಸಿನಿಂದ ನಿವೃತ್ತರಾದ ಹಾಗೆ!

ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಬೇಕಾದರೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವಿರಬೇಕೆಂಬುದು ಮಹಾತ್ಮರ ಹಠ. ಆದರೆ ಯೂರೋಪಿನಲ್ಲಿ ಪ್ರಳಯಕಾರಿ ಲೋಕಯುದ್ಧವೊಂದು ನಡೆಯುತ್ತಿರುವಾಗ ಅದರ ದುಷ್ಟ ಭಾವವು ಹಿಂದುಸ್ಥಾನದ ಮೇಲೂ ಬೀಳದೆ ಇಲ್ಲ. ಆದ್ದರಿಂದ ಕಾಂಗ್ರೆಸು ಅಹಿಂಸೆಯನ್ನು ತನ್ನ ಧ್ಯೇಯವನ್ನಾಗಿಟ್ಟುಕೊಂಡಿದೆಯಾದರೂ, ಹೊರದೇಶ ವ್ಯವಹಾರಗಳ ವಿಷಯದಲ್ಲಿ, ಸದ್ಯದ ಪರಿಸ್ಥಿತಿ ಮತ್ತು ಹಿಂದುಸ್ಥಾನದ ಜನರ ಸಿದ್ಧತೆಯನ್ನು ಆಲೋಚನೆಗೆ ತರುವಾಗ—ಅಹಿಂಸೆಯು ವ್ಯಾವಹಾರಿಕವಾಗಲಾರದೆಂಬುದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ಯೂರೋಪಿನಲ್ಲಿ ಯುದ್ಧದ ಮೂಲಕ ನಿಮಿಷ ನಿಮಿಷಕ್ಕೆ ಬದಲಾಗುತ್ತಿರುವ ಪರಿಸ್ಥಿತಿಯ ಕಾರಣದಿಂದ, ಪರರಾಷ್ಟ್ರಗಳ ಆಕ್ರಮಣಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಸಿದ್ಧತೆಯನ್ನು ಈಗ ಹಿಂದುಸ್ಥಾನವು ಆಧುನಿಕ ಶಸ್ತ್ರೋಪಕರಣಗಳ ಮೂಲಕವಾಗಿಯೇ ಮಾಡಬೇಕಾಗಿದೆ. ಪರಿಸ್ಥಿತಿಯು ಹೀಗಿರುವದರಿಂದ, ಕಾಂಗ್ರೆಸು ಅಂಥ ಸಿದ್ಧತೆಗೆ ತನಗೆ ತೋರಿದ ರೀತಿಯ ಸಹಾನುಭೂತಿಯನ್ನು ತೋರಿಸದೆ ಉಪಾಯವಿಲ್ಲ. ಮಹಾತ್ಮರು ಅನ್ನುವಂತೆ ಅಹಿಂಸೆಯನ್ನೇ ಕಾಂಗ್ರೆಸು ವ್ಯಾವಹಾರಿಕ ಉಪಾಯವನ್ನಾಗಿ ಇಟ್ಟುಕೊಳ್ಳುವದಾದರೆ, ಅದಕ್ಕೆ ಹಿಂಸಾತ್ಮಕ ಸಿದ್ಧತೆಗೆ ಸಹಾನುಭೂತಿಯನ್ನು ತೋರಿಸಲಿಕ್ಕಾಗುವದಿಲ್ಲ. ಈ ಧರ್ಮ ಸಂಕಟವು ಪ್ರಾಪ್ತವಾದುದರಿಂದ, ಕಾಂಗ್ರೆಸು ನಿರುಪಾಯವಾಗಿ ಮಹಾತ್ಮರಿಗೆ ಕೊಟ್ಟ ಸರ್ವಾಧಿಕಾರಗಳನ್ನು ಹಿಂದಕ್ಕೆ ತೆಗೆದುಕೊಂಡು ಅವರನ್ನು ಕಾಂಗ್ರೆಸ್ ಕಾರ್ಯಕಲಾಪಗಳ ಉತ್ತರದಾಯಿತ್ವದಿಂದ ಮುಕ್ತರನ್ನಾಗಿ ಮಾಡಬೇಕಾಯಿತು.

ಗಾಂಧಿ ಜಿನ್ನರ ಸಾಮ್ಯ

ಗಾಂಧಿಯವರು ಹೇಗೋ ಜಿನ್ನರೂ ಹಾಗೇ ಛಲವಾದಿಗಳು. ಗಾಂಧಿಯವರು ಸ್ಪಷ್ಟ ರಾಷ್ಟ್ರವಾದಿಗಳಾಗಿರುವರಾದರೆ, ಜಿನ್ನರು ಕಡು ಜಾತಿವಾದಿಗಳಾಗಿರುವರು. ಇದೊಂದೇ ಅವರಿಬ್ಬರೊಳಗಿನ ದೊಡ್ಡ ಭೇದವಾಗಿರುವದು. ಜಿನ್ನಾ ಸಾಹೇಬರೂ ಪರಿಸ್ಥಿತಿಯ ಕಡೆಗೆ ಕಣ್ಣು ಮುಚ್ಚಿ ಪಾಕಿಸ್ಥಾನದ ಯೋಜನೆಯನ್ನು, ಮಗುವನ್ನಾಡಿಸುವಂತೆ ಮುದ್ದಿನಿಂದ ಆಡಿಸುತ್ತಾ ಇದ್ದಾರೆ. ದೇಶದ ಅಧಿಕಾಂಶ ಜನತೆಗೆ, ಮುಸಲ್ಮಾನರಲ್ಲೇ ಬಹಳ ಮಂದಿಗೆ, ಈ ಯೋಜನೆಯು ಬೇಡವಾಗಿರುವದಾದರೂ, ಜಿನ್ನಾ ಸಾಹೇಬರಂತೂ ಅದನ್ನು ಹೀಗೆಯೇ ಬಿಟ್ಟುಕೊಡುವಹಾಗಿಲ್ಲ. ಜಿನ್ನಾ ಸಾಹೇಬರು ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳು. ಕಾಂಗ್ರೆಸಿನಲ್ಲಿ ಗಾಂಧಿಯವರಿಗೆ ಯಾವ ಸ್ಥಾನವೋ ಲೀಗಿನಲ್ಲಿ ಅದೇ ಸ್ಥಾನ ಜಿನ್ನಾ ಸಾಹೇಬರಿಗೆ. ಧರ್ಮ ಸಂಕಟವಾದುದರಿಂದ ಕಾಂಗ್ರೆಸು ಗಾಂಧಿಯವರನ್ನು ಜವಾಬುದಾರಿಯಿಂದ ಮುಕ್ತ ಮಾಡಿತು. ಮುಸ್ಲಿಂ ಲೀಗಿಗೂ ಧರ್ಮ ಸಂಕಟವಾಗಿದೆ. ಲೀಗಿನಲ್ಲಿ ಎಲ್ಲರೂ ಜಿನ್ನಾ ಸಾಹೇಬರನ್ನು ಸಮರ್ಥಿಸುವದಿಲ್ಲ. ಸರ್ ಸಿಕಂದರ ಹಯ್ಯಾತ್ ಖಾನರ ನೇತೃತ್ವದಲ್ಲಿ ಲೀಗಿನ ಒಂದು ದೊಡ್ಡ ತಂಡವೇ ಪಾಕಿಸ್ಥಾನ ಯೋಜನೆಯನ್ನು ವಿರೋಧಿಸುತ್ತದೆ; ಅದು ಮುಸಲ್ಮಾನರಿಗೂ, ದೇಶಕ್ಕೂ ಹಾನಿಕರವಾದುದೆಂದು ತಿಳಿಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಿಂದು ಮುಸಲ್ಮಾನ ಐಕ್ಯವು ಅನಿವಾರ್ಯವೆಂದು ಅದು ಎಣಿಸಿದೆ. ಆದರೆ ಜಿನ್ನಾ ಸಾಹೇಬರ ಪಾಕಿಸ್ಥಾನದ ಹಠವು ಈ ಐಕ್ಯಕ್ಕೆ ದೊಡ್ಡ ವಿಘ್ನವಾಗಿದೆ. ಆದ್ದರಿಂದ ಜಿನ್ನರಿಗಾಗಿ ಪಾಕಿಸ್ಥಾನದ ಯೋಜನೆಯನ್ನು ಹಿಡಿದು ತೂಗುವದೋ ಅಥವಾ ಜಿನ್ನರನ್ನು ಅವರ ಸರ್ವಾಧಿಕಾರದಿಂದ ನಿವೃತ್ತರನ್ನಾಗಿ ಮಾಡಿ, ಹಿಂದೂ ಮುಸಲ್ಮಾನ ಐಕ್ಯ ಸಾಧನೆಗೆ ವ್ಯವಹಾರಿಕ ಪ್ರಯತ್ನಗಳನ್ನು ಮಾಡುವದೋ ಎಂಬ ಪ್ರಶ್ನೆಯು ಲೀಗಿಗೂ ಪ್ರಾಪ್ತವಾಗಿರುವದು.

ಸರಿಕಟಾದಿಂದ ಪಾರಾಗುವ ಬಗೆ?

ಮಹಾತ್ಮರು ಕಾಂಗ್ರೆಸ್ ಸರ್ವಾಧಿಕಾರ ಪಟ್ಟದಿಂದ ನಿವೃತ್ತರಾದಂತೆ ಜಿನ್ನಾ ಸಾಹೇಬರೂ ಲೀಗಿನ ಸರ್ವಾಧಿಕಾರ ಪಟ್ಟದಿಂದ ಯಾಕೆ ನಿವೃತ್ತರಾಗಬಾರದು? ಮಹಾತ್ಮರು ಕಾಂಗ್ರೆಸಿನಿಂದ ನಿವೃತ್ತರಾದ ಮೇಲೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವನ್ನಿಡಲು ಕೆಲಸ ಮಾಡಲಿಕ್ಕೆ ಸ್ವತಂತ್ರರಿರುವಂತೆ, ಜಿನ್ನಾ ಸಾಹೇಬರಾದರೂ ಲೀಗಿನಿಂದ ನಿವೃತ್ತರಾದ ಮೇಲೂ ತಮ್ಮ ಅಚ್ಚುಮೆಚ್ಚಿನ ಪಾಕಿಸ್ಥಾನ ಕೂಸನ್ನು ತಮಗೆ ಬೇಕಾದಂತೆ ಲಾಲಿಸಲಿಕ್ಕೂ ಪಾಲಿಸಲಿಕ್ಕೂ ಸ್ವತಂತ್ರರೇ ಸರಿ! ಆದರೆ ತಾವಾಗಿ ಕಾಂಗ್ರೆಸಿನಿಂದ ಹೊರಬರಲಿಕ್ಕೆ ಸಿದ್ಧರಾದ ಮಹಾತ್ಮರ ಉದಾರ ಭಾವ ಮತ್ತು ಮಹಾತ್ಮರಂಥ ವ್ಯಕ್ತಿತ್ವಗಳೂ ಕಾರ್ಯ ನಿರ್ವಾಹದ ಒಂದೇ ಉಚ್ಚ ದೃಷ್ಟಿಯಿಂದ, ನಿಂತಿರುವ ಕಾಂಗ್ರೆಸ ವರ್ಕಿಂಗ ಕಮಿಟಿಯ ಧೈರ್ಯವೂ-ಇವೆರಡು ಜಿನ್ನಾ ಸಾಹೇಬರಲ್ಲಿಯೂ ಮುಸ್ಲಿಂ ಲೀಗಿನ ಕಾರ್ಯ ನಿರ್ವಾಹಕ ಸಮಿತಿಯಲ್ಲಿಯೂ ಇರುವವೆ? ಮುಂದಿನ ಘಟನೆಗಳು ಈ ಪ್ರಶ್ನೆಗೆ ಉತ್ತರವನ್ನು ಕೊಡುವವು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸದಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.
ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.
ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷನಲ್ಲಿ
ತಯಾರಿಸುವ ವಿಕ್ರೇತೃ: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4
Sole Manufacturer: Dr. D. N. JASANI, (S.B.M.) Vithalbhai Patel Road, BOMABY 4
Madras Agent: Appah & Co. China Bazar Madras.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಜಿಲ್ಲಾ ಸಮಾಚಾರ

★

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ:—ಈ ದಿವಸ ಪೂರ್ವಾಹ್ನ ೧೧ ಗಂಟೆಗೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡಿನ ಸಭೆಯು ಮಂಗಳೂರಲ್ಲಿ ಜರಗಿತು

ಶ್ರೀ ವಿವೇಕಾನಂದ ಸಭೆ:—ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ ರಿಂದ ೧೦ರ ವರೆಗೆ ಕೀರ್ತನೆ ಮತ್ತು ಈ ಕೆಳಗೆ ನಮೂದಿಸಿದಂತೆ ಪ್ರವಚನಗಳು ನಡೆಯುವುವು ಸರ್ವರಿಗೂ ಸ್ವಾಗತವಿದೆ

ತಾ ೧೪-೭-೧೯೪೦-ಶ್ರೀ ಬಿ ಪುಂಡರೀಕ ಬಾಳಿಗರು—"ಗೀತಾ ಅಧ್ಯಾಯ ೧೪" ತಾ ೨೧-೭-೧೯೪೦—ಶ್ರೀ ವಿ ಗಣಪತಿ ಶಾಸ್ತ್ರಿಗಳು 'ಗೀತೆಯ ಪ್ರತಿಪಾದ್ಯ ವಿಷಯವು ಯಾವುದು?'' ತಾ ೨೮-೭-೧೯೪೦—ಶ್ರೀ ಎಸ್ ಮಾಧವ ಕಾಮತರು—ಗೀತಾ ಅಧ್ಯಾಯ (೧೫)

ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿ

ಪ್ರಥಮ ಸಭೆಯು ಶ್ರೀ. ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ ೨೭ ೬ ೪೦ರಲ್ಲಿ ಸಂಜೆ ಕಾಂಗ್ರೆಸ್ ಹೌಸಿನಲ್ಲಿ ಜರಗಿತು ಕಾರ್ಯದರ್ಶಿಗಳಾದ ಶ್ರೀ ಕೆ ಐತಪ್ಪಶೆಟ್ಟರು ಕಳೆದ ವರ್ಷದ ವರದಿ ಹಾಗೂ ಅಡಿಟ್ ಮಾಡಿದ ಲೆಕ್ಕಗಳ ವಿವರವನ್ನು ಓದಿಹೇಳಿದರು ಅದು ಸರ್ವಾನುಮತದಿಂದ ಮಂಜೂರಾಯಿತು ಹೊಸವರ್ಷಕ್ಕೆ ಈ ಕೆಳಗಿನ ಅಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು ಅಧ್ಯಕರು—ಶ್ರೀ ಕೊಂಚಾಡಿ ಕೇಶವ ಶೆಣೈ, ಕಾರ್ಯದರ್ಶಿ—ಶ್ರೀ. ಕೆ ಐತಪ್ಪ ಶೆಟ್ಟಿ, ಜತೆಕಾರ್ಯದರ್ಶಿ ಶ್ರೀ ಬಿ. ರಾಮಕೃಷ್ಣ ರಾವ್, ಕೋಶಾಧಿಕಾರಿ ಶ್ರೀ। ಯಂ ಬಿ ದೇವಡಿಗ, ಕಾರ್ಯಕಾರಿ ಮಂಡಲಿಗೆ ಶ್ರೀಗಳಾದ ಕೆ ಈಶ್ವರ ಎಂ ಎಲ್. ಎ, ಜನಾಬ್ ಕೆ ಎಸ್ ಅಹಮ್ಮದ್ ಬಾವಾ, ಎಚ್ ರಾಮಚಂದ್ರ ಪೈ, ಇವರು ಕಾರ್ಯಕಾರೀ ಮಂಡಲಿಯೇ ಸತ್ಯಾಗ್ರಹ ಕಮಿಟಿಯಾಗಿರತಕ್ಕದೆಂದು ನಿರ್ಣಯವಾಯಿತು.

ಹರಿಜನ ವಿಧ್ಯಾರ್ಥಿ ಭವನ; ಉಡುಪಿ

ಕಳೆದ ೧೯೩೯ನೆ ನವಂಬರದಲ್ಲಿ ಉಡುಪಿಯ ಮಹಾ ಜನರ ಪ್ರೋತ್ಸಾಹದಿಂದ ಹೈಸ್ಕೂಲು ವಿದ್ಯಾಭ್ಯಾಸ ಮಾಡುವ ಹಳ್ಳಿಯ ಬಡ ಹರಿಜನ ವಿದ್ಯಾರ್ಥಿಗಳ ಊಟ ಮತ್ತು ವಸತಿಯ ಬಗ್ಗೆ ತೆರೆದ ಈ ಭವನದಲ್ಲಿ ೧೯೪೦ನೆ ಎಪ್ರಿಲ್ ತನಕ ೮ ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದು ೧೯೪೦ನೆ ಜೂನು ೧೭ನೆ ತಾರೀಕಿನಿಂದ ೧೩ ಮಂದಿ ಬಡ ವಿದ್ಯಾರ್ಥಿಗಳು ಆಶ್ರಯ ಪಡೆದಿರುತ್ತಾರೆ ಇನ್ನೂ ಕೆಲವರಿಗೆ ಆಶ್ರಯವೀಯಬೇಕಾಗಿಯದೆ ವಿದ್ಯಾರ್ಥಿ ಭವನವು ಕೇವಲ ಮಹಾಜನರ ಉದಾರಾಶ್ರಯದ ಮೇಲೆಯೇ ಅವಲಂಬಿಸಿಕೊಂಡಿರುವುದರಿಂದ ನಮಗೆ ಮಹಾ ಜನರು ಸಹಕರಿಸಿ ಸಹಾಯ ಮಾಡಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಗಳು ತಿಳಿಸ ತ್ತಾರೆ

ಮೂಲ್ಕಿ

ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ನಿಧಿ:— ಮೂಲ್ಕಿ ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ವರ್ಷಾವಧಿ ಜೂನ್ ತಾ ೨೩ಕ್ಕೆ ಕೂಡಿ ಬಂತು

ಈ ಸಂಸ್ಥೆಯ ಕಾರ್ಯಕಾರೀ ಸಭೆಯು ಜುಲೈ ತಾ ೬ರಲ್ಲು ಕೂಡಿ ಒ ದು ಮೂಲ್ಕಿ ಬೋರ್ಡು ಹೈಸ್ಕೂಲಿನಲ್ಲಿ ಕಲಿಯುವ ಹತ್ತು ಮಂದಿ ಸ್ವಜಾತೀಯ ಬಡ ವಿದ್ಯಾರ್ಥಿಗಳ ಬಗ್ಗೆ ೧೯೪೦-೪೧ನೆ ಒಂದು ವರ್ಷದ ಬಗ್ಗೆ ಸ್ಕೋಲರ್ ಶಿಪ್ ರೂಪದಲ್ಲಿ ರೂ ೨೦೯-೬ ರಷ್ಟು ಹಣವನ್ನು ಧನಸಹಾಯ ಮಾಡ ವರೆ ಮಂಜೂರು ಮಾಡಿಯದೆ ವಿದ್ಯಾಭಿಮಾನಿಗಳು ಇಂಥ ಸಂಸ್ಥೆಗೆ ಉದಾರಹಸ್ತದಿಂದ ಧನಸಹಾಯವನಾಡಬೇಕಾಗಿ ವಿನಂತಿ

ಕಾರ್ಕಳ

ಸತ್ಯಾಗ್ರಹ ಸಮಿತಿ—ಕಳೆದ ವಾರ ಕಾರ್ಕಳ ಸರ್ಕಲ್ ಕಾಂಗ್ರೆಸ ಕಮಿಟಿಯ ಒಂದು ಸಭೆಯು ಜರಗಿ ಈ ಕಮಿಟಿಯನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲಾಯಿತು ಶ್ರೀಗಳಾದ ಸುಬ್ಬಣ್ಣ ಭಟ್ಟರು ಇದರ ಅಧ್ಯಕ್ಷರಾಗಿಯೂ ಯಂ ಡಿ ಅಧಿಕಾರಿ ಮತ್ತು ಕೆ ವಿ ಪ್ರಭುಗಳವರು ಉಪಾಧ್ಯಕ್ಷ ಹಾಗೂ ಖಜಾಂಚಿಯರಾಗಿಯೂ, ಕೆ ಪಾಂಡುರಂಗ ಪೈ ಮತ್ತು ವಾಮನ ಪೈಯವರು ಕಾರ್ಯದರ್ಶಿಗಳಾಗಿಯೂ ಮಾಡಲ್ಪಟ್ಟಿದ್ದಾರೆ

ಯುದ್ಧಪ್ರಚಾರ ಕಮಿಟಿ—ತಾ ೬-೭-೧೯೪೦ರ ದಿನ ಜಿಲ್ಲಾ ಕಲೆಕ್ಟರರವರು ತಾವು ಉಳಕೊಂಡಿದ್ದ ಲೋಕಲ್ ಬೋರ್ಡು ಬಂಗಲೆಗೆ ಸ್ಥಳೀಯ ಪ್ರಮುಖರನ್ನು ಕರೆಸಿ ಯುದ್ಧ ವಿಷಯವಾದ ಸುಳ್ಳು ವಾರ್ತೆಗಳು ಹರಡಿ ಜನರಲ್ಲಿ ವ್ಯರ್ಥಗಾಬರಿಗೆ ಅಸ್ಪದವಾಗದಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳುವಂತೆ ಹೊಸ್ಕರ ಸಮಾಮಶಿ ತೆಗೆದುಕೊಳ್ಳಲು ಶ್ರೀಗಳಾದ ಕೆ. ಪಿ. ಶೇಷಗಿರಿ ಪ್ರಭು, ಪಂಡಿತ ರಮಾನಾಥರಾವ್ ಮತ್ತು ರೆವೆರೆಂಡ ಫಾದರ್ ಸೋಜಾರವರಿಂದ ಕೂಡಿದ ಒಂದು ತಾತ್ಕಾಲಿಕ ಪ್ರಚಾರ ಸಮಿತಿಯನ್ನು ರಚಿಸಿದ್ದಾರೆ ಈ ಸಮಿತಿಯು ಸಭೆ ಕೂಡಿ ಇತರರನ್ನು ಇದರ ಸದಸ್ಯರನ್ನಾಗಿ ಸೇರಿಸಿಕೊಂಡು ಪ್ರಚಾರ ಕಾರ್ಯವನ್ನು ಆರಂಭಿಸುತ್ತರು

ಕಟಪಾಡಿ:—ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಹೊಸ ಪಾಕ್ಶ್ವವನ್ನು ತೆರೆಯುವ ಸಮಾರಂಭವು ಶ್ರೀ। ವಿಠ್ಠಲ ಶಾಂತಾರಾಮ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ತಾ ೨೨-೬-೪೦ನೇ ಶನಿವಾರ ಅಪರಾಹ್ನ ಜರಗಿತು

ಉಡುಪಿ

ಯುದ್ಧ ಸಹಾಯಕ ಸಮಿತಿ:—ಉಡುಪಿ ತಾಲೂಕಿಗೊಂದು ಯುದ್ಧ ಸಹಾಯಕ ಸಮಿತಿಯು ಸ್ಥಾಪನೆಯಾಯಿತು ಜಿಲ್ಲಾ ಕಲೆಕ್ಟರ್ ಮತ್ತು ಸಬ್ ಕಲೆಕ್ಟರರ ನೇತೃತ್ವದಲ್ಲಿ ಯುದ್ಧ ಸಹಾಯಕ ಫಂಡಿಗೋಸ್ಕರ ಎರಡು ಸಿನೆಮಾ ಬೆನಿಫಿಟ್ ಪ್ರದರ್ಶನಗಳು ನಡೆದುವು

ನಗರ ಸಭೆ ಉಡುಪಿ ಮುನಿಸಿಪಾಲಿಟಿಯ ೧೯೩೯ ೪೦ನೆ ವರುಷದ ಆಡಳಿತ ವರದಿಯನ್ನು ಕಳೆದ ತಾ ೨೭ರಲ್ಲಿ ಜರಗಿದ ಮೀಟಿಂಗಿನಲ್ಲಿ ಅಂಗೀಕರಿಸಲಾಯಿತು

ಪುತ್ತೂರು

ವರ್ಗಾವರ್ಗಿ ಇಲ್ಲಿಯ ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರ್ ಮಿ ಯಮ್ ಮಾರ್ಟಿನರಿಗೆ ಮಂಗಳೂರಿಗೂ ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ ನಜರತ್‌ರವರಿಗೆ ಇಲ್ಲಿಗೂ ವರ್ಗವಾಗಿರುತ್ತದೆ

ಹಯ್ಯರ್‌ಗ್ರೇಡ್ ಟ್ರೈನಿಂಗಿಗೆ ಸಿಲೆಕ್ಷನ್ ಸಿಕ್ಕಿದ ವಿದ್ಯಾರ್ಥಿಗಳು

ಮಂಗಳೂರು ಗವರ್ನಮೆಂಟ್ ಹಾ ಎ ಟ್ರೈನಿಂಗ್ ಶಾಲೆಯಲ್ಲಿ ಟ್ರೈನಿಂಗ್‌ಗಾಗಿ ಜಿಲ್ಲೆಯಿಂದ ೧೨೦ ಮಂದಿ ಸ್ಟೈಪೆಂಡ್ ವಿದ್ಯಾರ್ಥಿಗಳಾಗಿ ಚುನಾಯಿತರಾಗಿದ್ದಾರೆ ಈ ವಿದ್ಯಾರ್ಥಿಗಳು ಜನರಲ್ ಎಜುಕೇಶನಲ್ ಸರ್ಟಿಫಿಕೇಟ್ ಸಹಿತ ಇದೇ ತಾ ೧೫ನೇ ಸೋಮವಾರ ೧೨ ಗಂಟೆಗೆ ಸರಿಯಾಗಿ ಟ್ರೈನಿಂಗ್ ಶಾಲಾ ಹೆಡ್ಮಾಸ್ಟರರ ಮುಂದೆ ಹಾಜರಾಗಬೇಕು ತಮ್ಮ ಆರೋಗ್ಯ ಹಾಗೂ ದೇಹದಾರ್ಢ್ಯತೆಗಾಗಿ ಸರ್ಟಿಫಿಕೇಟೊಂದನ್ನು ಶಾಲೆಗೆ ಸೇರಿದ ದಿನದಿಂದ ಮೂರು ದಿನಗಳೊಳಗೆ ಹಾಜರು ಪಡಿಸಬೇಕು.

ಚುನಾಯಿತರಾದ ಟ್ರೈನಿಂಗ್ ವಿದ್ಯಾರ್ಥಿಗಳು

ಸಂಸ್ಕೃತ ಶಾಲೆಯಿಂದ.— ಶ್ರೀ, ಪಿ, ನಾರಾಯಣ ಕಾರಂತ

ಮಂಗಳೂರು ರೇಂಜಿನಿಂದ:—ಶ್ರೀ ಪಿ. ಶಿವ, ಕುಶ್ಯೇಶರ ಸುಬ್ಬ ಟಿ ಬಾಬು, ಎ. ರಾಮಕೃಷ್ಣ, ಕೆ, ಮುದ್ದು ಶೆಟ್ಟಾಡಿ, ಯಸ್, ಸಾಮ ಬ್ಯಾರಿ, ಕೆ, ಅಬ್ದುಲ್ಲ, ಬಿ. ಕೆ. ತ್ಯಾಂಪಣ್ಣ, ಕೆ, ಕುಂಞಪ್ಪ ಪೂಜಾರಿ, ಅಮುಲ್ ಕಣ್ಣ, ಶೀನಪ್ಪ ಪೂಜಾರಿ, ವಾಮನ ನಾಯ್ಕ, ಕೆ, ಭುಜಂಗ ಶೆಟ್ಟಿ, ದಾರಪ್ಪ ಶೆಟ್ಟಿ, ಜಿ. ಜೋಗಿ ಶೆಟ್ಟಿ ಕೆ ವಾಸು ಶೆಟ್ಟಿ, ಯಚ್ ಜನಾರ್ಧನ್, ಜಿ. ಲಕ್ಷ್ಮಣ ಕಾಮತ್, ದಾಸ ಕಾಮತ್, ಬಿ ಶಂಕರ್ ರಾವ್, ಯನ್ ಕೃಷ್ಣ ಮಯ್ಯ, ಟಿ ಸುಬ್ರಾಯ ಭಟ್, ವೈ ನಾರಾಯಣ ಭಟ್, ಎವರೆಸ್ಟ್ ಕೇಸ್ತಲೀನೋ, ಕೊನೇಶಲಿಯೋ ಪೀಗಾಸ್, ಅಂತೋನಿ ಜೋನ್ ತಾರೊ, ಜೋನ್ ರಿಚಾರ್ಡ್ ರೊಡ್ರಿಗಸ್, ಆಲ್ಬರ್ಟ್ ರೂರ್ ಫೆರ್ನಾಂಡಿಸ್, ಜೋಜ್ ಬೆನೆಡಿಕ್ಟ್ ಲೋಬೋ ವಿಕ್ಟರ್ ಡಿ ಸೋಜ

ಕಾಸರಗೋಡು ರೇಂಜಿನಿಂದ:—ಶೇಷಪ್ಪ ಶೆಟ್ಟಿ, ಪಿ ಸಂಕಪ್ಪ ರೈ, ವೈ ಸಂಕಪ್ಪ ಅಡ್ಯಂತಾಯ ಹಸ್ಸನ್ಯೆರ್ ಬ್ಯಾರಿ, ಮಾರ್ಸೆಲ್ ಎಸ್ ಡಿ ಸೋಜ, ಟಿ ಜಿ ಶಂಕರನ್, ಎಚ್ ವಿ ಅಚ್ಯುತನ್, ಕೆ ಶ್ರೀನಿವಾಸ ಪ್ರಭು, ಪಿ ನಾರಾಯಣ ಕೊಡ್ಲ ಮುಕುಂದ, ಪಿ ಎ ರಾಮಪ್ಪ ಕೆ ನರಸಿಂಹ ಯಸ್ ಸುಬ್ಬನಾಯ್ಕ, ಯಂ ಗಂಗಾಧರ ಯನ್ ಅಂತಯ್ಯ, ಪಿ ಸುಬ್ರಹ್ಮಣ್ಯ ಭಟ್ ಟಿ ತಿರುಮಲೇಶ್ವರ ಭಟ್ ವೈ ಸುಬ್ರಾಯ ಭಟ್ ಪಿ ವೆಂಕಟ್ರಮಣ ಕೊಳತ್ತಾಯ ಮಹಾಲಿಂಗ ಭಟ್ ವಿ ಕೇಶವ ಭಟ್ ಯನ್ ಮಹಾಬಲೇಶ್ವರ ಭಟ್, ಯು ರಾಮಣ್ಣ ಕೆದಿಲಾಯ

ಪುತ್ತೂರು ರೇಂಜ್‌ನಿಂದ:—ಎಮ್ ಮ್ಯೂಸ ಬ್ಯಾರಿ ಪೀಟರ್ ಡೆಮಿಯನ್ ಡಿ. ಸೋಜ ಜೆರೋಂ ಪಿಂಟೊ, ಜೆ ಕುಂಞಪ್ಪ, ಡಿ ಚಿನ್ನಪ್ಪ ಗೌಡ ಕೆ ಕಾಂತಪ್ಪ ಆಳ್ವ, ಎಸ್ ಚಿಕ್ಕಪ್ಪ ರೈ ಕೆ ಶೇಷಪ್ಪ ಗೌಡ, ಎಸ್ ವಾಸುದೇವಯ್ಯ ಎಸ್ ಸುಬ್ರಾಯ ಭಟ್, ಟಿ ಕೃಷ್ಣ ಭಟ್

ಉಡುಪಿ ರೇಂಜ್‌ನಿಂದ—ಕೆ ರಾಮಕೃಷ್ಣ ಉಪಾಧ್ಯಾಯ ಕೆ ಶ್ರೀನಿವಾಸ ಭಾಗವತ್, ಯು ರಾಮಚಂದ್ರ ಮೈಯ್ಯ, ಕೆ ರಾಜಗೋಪಾಲ ಹೆಬ್ಬಾರ ಎ ಕೃಷ್ಣ ಕಾರಂತ, ವೈ ನಾರಾಯಣ ರಾವ್, ಐರೋಡಿ ನಾರಾಯಣ ಆಳ್ವ, ಕೆ ಮುದ್ದಣ್ಣ ಶೆಟ್ಟಿ ಯು ಕೆ ಜಗನ್ನಾಥ ಶೆಟ್ಟಿ ಎ ವೀರಣ್ಣ ಸೂಡಾ, ಯು ಪೋನಪ್ಪ ಶೆಟ್ಟಿ ಬಿ ಶೀನ ಶೆಟ್ಟಿ ಕೆ ಸಂಕರಯ್ಯ ಶೆಟ್ಟಿ, ಬಿ ರಾಮಣ್ಣ ಶೆಟ್ಟಿ ಪಿ ಗುಂಡು ಶೆಟ್ಟಿ, ಎಚ್ ಮಹಾಬಲ ಶೆಟ್ಟಿ ಕ್ಲೇಮಿಯನ್ ಫೆರ್ನಾಂಡಿಸ್, ದೇವದತ್ತ ಸೋನ್ಸ್, ಹಿಲಾರಿ ಮಾರ್ಟಿನ್ಸ್, ಪೀಟರ್ ಡಿ ಸೋಜ ಕೆ ರಾಮಚಂದ್ರ ನಾಯಕ್, ಬಿ ಕರಿಯ ಪೂಜಾರಿ, ಟಿ ರಾಮ ಬೆಲ್ಚಾಡ, ಎಸ್. ಶ್ರೀನಿವಾಸ ನಾಯಕ್, ಯು ಮುತ್ತಯ್ಯ ಬೆಲ್ಚಾಡ, ಪಿ ಮಂಜುನಾಥ ಆಚಾರಿ

ಕಾರ್ಕಳ ರೇಂಜ್‌ನಿಂದ:—ಕೆ ಎಸ್ ಅಹಮದ್ ಪೀರಾನ್, ಕೆ. ಸೀತಾರಾಮ ಭಟ್ ವಿ ರಂಗಪ್ಪಯ್ಯ, ಎಸ್ ವೆಂಕಟ ರಾವ್, ಎಸ್ ಸದಾಶಿವ ಶೆಟ್ಟಿ, ಕೆ ಸಂಜೀವ ಹೆಗ್ಡೆ, ಎಸ್ ತಿಮ್ಮಪ್ಪ ಶೆಟ್ಟಿ, ಕೆ ವಿ ಜಗನ್ನಾಥ ಶೆಟ್ಟಿ, ಬಿ. ದೇಜು ಶೆಟ್ಟಿಗಾರ, ವೈ, ರಾಮಣ್ಣ ಹೆಗ್ಡೆ, ರೆಮಿಜಿಯಸ್ ಡಿ'ಸೋಜ, ಜೋನ್ ದೇವಪ್ರಸಾದ ಸೈಮನ್, ಜೋನ್ ದಂತಿ, ಕೆ. ಎಸ್ ಉಬೇದುಲ್ಲಾ.

ಕುಂದಾಪುರ ರೇಂಜ್‌ನಿಂದ—ಆರ್ಬನ್ ಡಿ ಸೋಜ, ಬಿ ಕೃಷ್ಣ ದೇವ ಹಂಡೆ, ಬಿ ವಿಠ್ಠಲ ಶೆಟ್ಟಿ, ಸಿ. ಜಿ. ಚಂದ್ರ ಕದುವನ್, ಪಿ. ರಾಮ ಜಿ. ಕೃಷ್ಣ,

ಕೆನರಾ ಮುಹಮ್ಮದನ್ ರೇಂಜ್‌ನಿಂದ—ಅಬುಲ್ ಅತೀಕ್, ಎಸ್. ಎ. ಮುಹಮ್ಮದ್ ಫಕೀರ್, ಕೆ. ಅಬ್ದುಲ್ ಖಾದರ್, ಶೇಕ್ ಮೊಹಿದ್ದಿನ್ ಬಿ, ಕೆ. ಸಯ್ಯದ್ ಫೌಜಿಕ್ ಸಾಹೇಬ್, ಕೆ. ಮುಹಮ್ಮದ್ ಕುಂಞ ಬಿ. ಶೇಕ್ ಬುಡಾನ್, ಟಿ. ಬಾಬುಲ್ಲಾ ಸಾಹೇಬ್, ಬಿ. ಅಬ್ಬಾ ಬ್ಯಾರಿ.

ಜಿನ್ನರೂ ನಿವೃತ್ತರಾಗಬಾರದೆ?

ಗಾಂಧೀ—ಜಿನ್ನರ ರಾಜಕೀಯ!



ಪಾಕಿಸ್ಥಾನ ವಾದಿಗಳಾದ ಜಿನ್ನರು

ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದೊತ್ತುವ ಸಮಸ್ತ ಭಾರವನ್ನು ಹೊತ್ತುಕೊಂಡಿದ್ದ ಮಹಾತ್ಮಾ ಗಾಂಧಿಯವರು ಈಗ ಆ ಭಾರವನ್ನು ಪುನಃ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಮೇಲೆ ಹೊತ್ತು ಹಾಕಿದ್ದಾರೆ. ಕಾಂಗ್ರೆಸಿನ ಸಲಹೆಗಾರರಾಗಿ ಅವರು ಮುಂದಕ್ಕೂ ಇರುವರಾದರೂ, ಕಾಂಗ್ರೆಸಿನ ಭವಿಷ್ಯ ಕಾರ್ಯಕ್ರಮದಲ್ಲಿ ಅವರ ಯಾವ ಕೈಯೂ ಇರುವದಿಲ್ಲ. ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅವರ ಯಾವ ಜವಾಬ್ದಾರಿಯೂ ಇರುವದಿಲ್ಲ. ಅವರು ಕಾಂಗ್ರೆಸಿನಿಂದ ನಿವೃತ್ತರಾದ ಹಾಗೆ!

ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಬೇಕಾದರೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವಿರಬೇಕೆಂಬುದು ಮಹಾತ್ಮರ ಹಠ. ಆದರೆ ಯೂರೋಪಿನಲ್ಲಿ ಪ್ರಳಯಕಾರಿ ಲೋಕಯುದ್ಧವೊಂದು ನಡೆಯುತ್ತಿರುವಾಗ ಅದರ ದುಷ್ಪ್ರಭಾವವು ಹಿಂದುಸ್ಥಾನದ ಮೇಲೂ ಬೀಳದೆ ಇಲ್ಲ. ಆದ್ದರಿಂದ ಕಾಂಗ್ರೆಸು ಅಹಿಂಸೆಯನ್ನು ತನ್ನ ಧ್ಯೇಯವನ್ನಾಗಿಟ್ಟುಕೊಂಡಿದೆಯಾದರೂ, ಹೊರದೇಶ ವ್ಯವಹಾರಗಳ ವಿಷಯದಲ್ಲಿ, ಸದ್ಯದ ಪರಿಸ್ಥಿತಿ ಮತ್ತು ಹಿಂದುಸ್ಥಾನದ ಜನರ ಸಿದ್ಧತೆಯನ್ನು ಆಲೋಚನೆಗೆ ತರುವಾಗ—ಅಹಿಂಸೆಯು ವ್ಯಾವಹಾರಿಕವಾಗಲಾರದೆಂಬುದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ಯೂರೋಪಿನಲ್ಲಿ ಯುದ್ಧದ ಮೂಲಕ ನಿಮಿಷ ನಿಮಿಷಕ್ಕೆ ಬದಲಾಗುತ್ತಿರುವ ಪರಿಸ್ಥಿತಿಯ ಕಾರಣದಿಂದ, ಪರರಾಷ್ಟ್ರಗಳ ಆಕ್ರಮಣಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಸಿದ್ಧತೆಯನ್ನು ಈಗ ಹಿಂದುಸ್ಥಾನವು ಆಧುನಿಕ ಶಸ್ತ್ರೋಪಕರಣಗಳ ಮೂಲಕವಾಗಿಯೇ ಮಾಡಬೇಕಾಗಿದೆ. ಪರಿಸ್ಥಿತಿಯು ಹೀಗಿರುವದರಿಂದ, ಕಾಂಗ್ರೆಸು ಅಂಥ ಸಿದ್ಧತೆಗೆ ತನಗೆ ತೋರಿದ ರೀತಿಯ ಸಹಾನುಭೂತಿಯನ್ನು ತೋರಿಸದೆ ಉಪಾಯವಿಲ್ಲ. ಮಹಾತ್ಮರು ಅನ್ನುವಂತೆ ಅಹಿಂಸೆಯನ್ನೇ ಕಾಂಗ್ರೆಸು ವ್ಯಾವಹಾರಿಕ ಉಪಾಯವನ್ನಾಗಿ ಇಟ್ಟುಕೊಳ್ಳುವದಾದರೆ, ಅದಕ್ಕೆ ಹಿಂಸಾತ್ಮಕ ಸಿದ್ಧತೆಗೆ ಸಹಾನುಭೂತಿಯನ್ನು ತೋರಿಸಲಿಕ್ಕಾಗುವದಿಲ್ಲ. ಈ ಧರ್ಮಸಂಕಟವು ಪ್ರಾಪ್ತವಾದುದರಿಂದ, ಕಾಂಗ್ರೆಸು ನಿರುಪಾಯವಾಗಿ ಮಹಾತ್ಮರಿಗೆ ಕೊಟ್ಟ ಸರ್ವಾಧಿಕಾರಗಳನ್ನು ಹಿಂದಕ್ಕೆ ತೆಗೆದುಕೊಂಡು ಅವರನ್ನು ಕಾಂಗ್ರೆಸ್ ಕಾರ್ಯಕಲಾಪಗಳ ಉತ್ತರದಾಯಿತ್ವದಿಂದ ಮುಕ್ತರನ್ನಾಗಿ ಮಾಡಬೇಕಾಯಿತು.

ಗಾಂಧಿ ಜಿನ್ನರ ಸಾಮ್ಯ

ಗಾಂಧಿಯವರು ಹೇಗೋ ಜಿನ್ನರೂ ಹಾಗೇ ಛಲವಾದಿಗಳು. ಗಾಂಧಿಯವರು ಸ್ಪಷ್ಟ ರಾಷ್ಟ್ರವಾದಿಗಳಾಗಿರುವರಾದರೆ, ಜಿನ್ನರು ಕಡು ಜಾತಿವಾದಿಗಳಾಗಿರುವರು. ಇದೊಂದೇ ಅವರಿಬ್ಬರೊಳಗಿನ ದೊಡ್ಡ ಭೇದವಾಗಿರುವದು. ಜಿನ್ನಾ ಸಾಹೇಬರೂ ಪರಿಸ್ಥಿತಿಯ ಕಡೆಗೆ ಕಣ್ಣು ಮುಚ್ಚಿ ಪಾಕಿಸ್ಥಾನದ ಯೋಜನೆಯನ್ನು ಮಾಗುವನ್ನಾಡಿಸುವಂತೆ ಮುದ್ದಿನಿಂದ ಆಡಿಸುತ್ತಾ ಇದ್ದಾರೆ. ದೇಶದ ಅಧಿಕಾಂಶ ಜನತೆಗೆ, ಮುಸಲ್ಮಾನರಲ್ಲೇ ಬಹಳ ಮಂದಿಗೆ, ಈ ಯೋಜನೆಯು ಬೇಡವಾಗಿರುವದಾದರೂ, ಜಿನ್ನಾಸಾಹೇಬರಂತೂ ಅದನ್ನು ಹೀಗೆಯೇ ಬಿಟ್ಟುಕೊಡುವಹಾಗಿಲ್ಲ. ಜಿನ್ನಾ ಸಾಹೇಬರು ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳು. ಕಾಂಗ್ರೆಸಿನಲ್ಲಿ ಗಾಂಧಿಯವರಿಗೆ ಯಾವ ಸ್ಥಾನವೋ ಲೀಗಿನಲ್ಲಿ ಅದೇ ಸ್ಥಾನ ಜಿನ್ನಾ ಸಾಹೇಬರಿಗೆ. ಧರ್ಮಸಂಕಟವಾದುದರಿಂದ ಕಾಂಗ್ರೆಸು ಗಾಂಧಿಯವರನ್ನು ಜವಾಬುದಾರಿಯಿಂದ ಮುಕ್ತ ಮಾಡಿತು. ಮುಸ್ಲಿಂ ಲೀಗಿಗೂ ಧರ್ಮಸಂಕಟವಾಗಿದೆ. ಲೀಗಿನಲ್ಲಿ ಎಲ್ಲರೂ ಜಿನ್ನಾ ಸಾಹೇಬರನ್ನು ಸಮರ್ಥಿಸುವದಿಲ್ಲ. ಸರ್ ಸಿಕಂದರ ಹಯ್ಯಾತ್ ಖಾನರ ನೇತೃತ್ವದಲ್ಲಿ ಲೀಗಿನ ಒಂದು ದೊಡ್ಡ ತಂಡವೇ ಪಾಕಿಸ್ಥಾನ ಯೋಜನೆಯನ್ನು ವಿರೋಧಿಸುತ್ತದೆ; ಅದು ಮುಸಲ್ಮಾನರಿಗೂ, ದೇಶಕ್ಕೂ ಹಾನಿಕರವಾದುದೆಂದು ತಿಳಿಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಿಂದು ಮುಸಲ್ಮಾನ ಐಕ್ಯವು ಅನಿವಾರ್ಯವೆಂದು ಅದು ಎಣಿಸಿದೆ. ಆದರೆ ಜಿನ್ನಾ ಸಾಹೇಬರ ಪಾಕಿಸ್ಥಾನದ ಹಠವು ಈ ಐಕ್ಯಕ್ಕೆ ದೊಡ್ಡ ವಿಘ್ನವಾಗಿದೆ. ಆದ್ದರಿಂದ ಜಿನ್ನರಿಗಾಗಿ ಪಾಕಿಸ್ಥಾನದ ಯೋಜನೆಯನ್ನು ಹಿಡಿದು ತೂಗುವದೋ ಅಥವಾ ಜಿನ್ನರನ್ನು ಅವರ ಸರ್ವಾಧಿಕಾರದಿಂದ ನಿವೃತ್ತರನ್ನಾಗಿ ಮಾಡಿ, ಹಿಂದೂ ಮುಸಲ್ಮಾನ ಐಕ್ಯ ಸಾಧನೆಗೆ ವ್ಯವಹಾರಿಕ ಪ್ರಯತ್ನಗಳನ್ನು ಮಾಡುವದೋ ಎಂಬ ಪ್ರಶ್ನೆಯು ಲೀಗಿಗೂ ಪ್ರಾಪ್ತವಾಗಿರುವದು.

ಸಂಕಟದಿಂದ ಪಾರಾಗುವ ಬಗೆ

ಮಹಾತ್ಮರು ಕಾಂಗ್ರೆಸ್ ಸರ್ವಾಧಿಕಾರ ಪಟ್ಟದಿಂದ ನಿವೃತ್ತರಾದಂತೆ ಜಿನ್ನಾ ಸಾಹೇಬರು ಲೀಗಿನ ಸರ್ವಾಧಿಕಾರ ಪಟ್ಟದಿಂದ ಯಾಕೆ ನಿವೃತ್ತರಾಗಬಾರದು? ಮಹಾತ್ಮರು ಕಾಂಗ್ರೆಸಿನಿಂದ ನಿವೃತ್ತರಾದ ಮೇಲೆ ದೇಶದಲ್ಲಿ ಸಂಪೂರ್ಣ ಅಹಿಂಸಾಮಯ ವಾತಾವರಣವನ್ನಿಡಲು ಕೆಲಸ ಮಾಡಲಿಕ್ಕೆ ಸ್ವತಂತ್ರರಿರುವಂತೆ, ಜಿನ್ನಾ ಸಾಹೇಬರಾದರೂ ಲೀಗಿನಿಂದ ನಿವೃತ್ತರಾದ ಮೇಲೂ ತಮ್ಮ ಅಚ್ಚುಮೆಚ್ಚಿನ ಪಾಕಿಸ್ಥಾನ ಕೂಸನ್ನು ತಮಗೆ ಬೇಕಾದಂತೆ ಲಾಲಿಸಲಿಕ್ಕೂ ಪಾಲಿಸಲಿಕ್ಕೂ ಸ್ವತಂತ್ರರೇ ಸರಿ! ಆದರೆ ತಾವಾಗಿ ಕಾಂಗ್ರೆಸಿನಿಂದ ಹೊರಬರಲಿಕ್ಕೆ ಸಿದ್ಧರಾದ ಮಹಾತ್ಮರ ಉದಾರ ಭಾವ ಮತ್ತು ಮಹಾತ್ಮರಂಥ ವ್ಯಕ್ತಿತ್ವಗಳೂ ಕಾರ್ಯನಿರ್ವಾಹದ ಒಂದೇ ಉಚ್ಚ ದೃಷ್ಟಿಯಿಂದ, ನಿಂತಿರುವ ಕಾಂಗ್ರೆಸ ವರ್ಕಿಂಗ ಕಮಿಟಿಯ ಧೈರ್ಯವೂ—ಇವೆರಡು ಜಿನ್ನಾಸಾಹೇಬರಲ್ಲಿಯೂ ಮುಸ್ಲಿಂ ಲೀಗಿನ ಕಾರ್ಯನಿರ್ವಾಹಕ ಸಮಿತಿಯಲ್ಲಿಯೂ ಇರುವವೆ? ಮುಂದಿನ ಘಟನೆಗಳು ಈ ಪ್ರಶ್ನೆಗೆ ಉತ್ತರವನ್ನು ಕೊಡುವವು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಕಾರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ಮೂಕವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ ಪಟೇಲ್ ರೋಡ್, ಮುಂಬಯಿ 4

Sole Manufacturer: Dr. D. N. JASANI, (S.B.M.) Vithalbhai Patel Road, BOMABY 4

Madras Agent: Appah & Co, China Bazar Madras.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಜಿಲ್ಲಾ ಸಮಾಚಾರ

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ:—ಈ ದಿವಸ ಪೂರ್ವಾಹ್ನ ೧೧ ಗಂಟೆಗೆ ಸರಿಯಾಗಿ ದ. ಕ. ಜಿಲ್ಲಾ ಬೋರ್ಡಿನ ಸಭೆಯು ಮಂಗಳೂರಲ್ಲಿ ಜರಗಿತು

ಶ್ರೀ ವಿವೇಕಾನಂದ ಸಭೆ:—ಕೆನರಾ ಹೈಸ್ಕೂಲಿನ ಶ್ರೀಕೃಷ್ಣ ಮಂದಿರದಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ ರಿಂದ ೧೦ರ ವರೆಗೆ ಕೀರ್ತನೆ ಮತ್ತು ಈ ಕೆಳಗೆ ನಮೂದಿಸಿದಂತೆ ಪ್ರವಚನಗಳು ನಡೆಯುವುವು ಸರ್ವರಿಗೂ ಸ್ವಾಗತವಿದೆ.

ತಾ ೧೪-೭-೧೯೪೦-ಶ್ರೀ ಬಿ ಪುಂಡರೀಕ ಬಾಳಿಗರು—"ಗೀತಾ ಅಧ್ಯಾಯ ೧೮" ತಾ ೨೩-೭-೧೯೪೦—ಶ್ರೀ ವಿ ಗಣಪತಿ ಶಾಸ್ತ್ರಿಗಳು -"ಗೀತೆಯ ಪ್ರತಿಪಾದ್ಯ ವಿಷಯವು ಯಾವುದು?" ತಾ. ೨೮-೭-೧೯೪೦—ಶ್ರೀ ಎಸ್ ಮಾಧವ ಕಾಮತರು—ಗೀತಾ ಅಧ್ಯಾಯ [illegible] (೪೭)

ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿ

ಪ್ರಥಮ ಸಭೆಯು ಶ್ರೀ. ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ ೨೭-೬-೪೦ರಲ್ಲಿ ಸಂಚೆ ಕಾಂಗ್ರೆಸ್ ಹೌಸಿನಲ್ಲಿ ಜರಗಿತು ಕಾರ್ಯದರ್ಶಿಗಳಾದ ಶ್ರೀ ಕೆ ಐತಪ್ಪಶೆಟ್ಟರು ಕಳೆದ ವರ್ಷದ ವರದಿ ಹಾಗೂ ಅಡಿಟ್ ಮಾಡಿದ ಲೆಕ್ಕಗಳ ವಿವರವನ್ನು ಓದಿಹೇಳಿದರು ಅದು ಸರ್ವಾನುಮತದಿಂದ ಮಂಜೂರಾಯಿತು ಹೊಸವರ್ಷಕ್ಕೆ ಈ ಕೆಳಗಿನ ಅಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು ಅಧ್ಯಕ್ಷರು—ಶ್ರೀ ಕೊಂಚಾಡಿ ಕೇಶವ ಶೆಣೈ, ಕಾರ್ಯದರ್ಶಿ—ಶ್ರೀ. ಕೆ ಐತಪ್ಪ ಶೆಟ್ಟಿ, ಜತೆಕಾರ್ಯದರ್ಶಿ ಶ್ರೀ. ಬಿ. ರಾಮಕೃಷ್ಣ ರಾವ್, ಕೋಶಾಧಿಕಾರಿ. ಶ್ರೀ ಯಂ ಬಿ ದೇವಡಿಗ, ಕಾರ್ಯಕಾರಿ ಮಂಡಲಿಗೆ ಶ್ರೀಗಳಾದ ಕೆ ಈಶ್ವರ ಎಂ. ಎಲ್. ಎ, ಜನಾಬ್ ಕೆ ಎಸ್. ಅಹಮ್ಮದ್ ಬಾವಾ, ಎಚ್ ರಾಮಚಂದ್ರ ಪೈ, ಇವರು ಕಾರ್ಯಕಾರೀ ಮಂಡಲಿಯೇ ಸತ್ಯಾಗ್ರಹ ಕಮಿಟಿಯಾಗಿರತಕ್ಕದೆಂದು ನಿರ್ಣಯವಾಯಿತು

ಹರಿಜನ ವಿಧ್ಯಾರ್ಥಿ ಭವನ; ಉಡುಪಿ

ಕಳೆದ ೧೯೩೯ನೆ ನವಂಭರದಲ್ಲಿ ಉಡ್ಪಿಯ ಮಹಾ ಜನರ ಪ್ರೋತ್ಸಾಹದಿಂದ ಹೈಸ್ಕೂಲು ವಿದ್ಯಾಭ್ಯಾಸ ಮಾಡುವ ಹಳ್ಳಿಯ ಬಡ ಹರಿಜನ ವಿದ್ಯಾರ್ಥಿಗಳ ಊಟ ಮತ್ತು ವಸತಿಯ ಬಗ್ಗೆ ತೆರೆದ ಈ ಭವನದಲ್ಲಿ ೧೯೪೦ನೆ ಎಪ್ರಿಲ್ ತನಕ ೮ ಮಂದಿ ವಿದ್ಯಾರ್ಥಿಗಳು ಮಾತ್ರ ವಿದ್ದು ೧೯೪೦ನೆ ಜೂನು ೧೬ನೆ ತಾರೀಕಿನಿಂದ ೧೩ ಮಂದಿ ಬಡ ವಿದ್ಯಾರ್ಥಿಗಳು ಆಶ್ರಯ ಪಡದಿರುತ್ತಾರೆ ಇನ್ನೂ ಕೆಲವರಿಗೆ ಆಶ್ರಯವೀಯಬೇಕಾಗಿಯದೆ ವಿದ್ಯಾರ್ಥಿ ಭವನವು ಕೇವಲ ಮಹಾಜನರ ಉದಾರಾಶ್ರಯದ ಮೇಲೆಯೇ ಅವಲಂಬಿಸಿಕೊಂಡಿರುವುದರಿಂದ ಮಹಾಜನರು ಸಹಕರಿಸಿ ಸಹಾಯ ಮಾಡಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೂಲ್ಕಿ

ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ನಿಧಿ:— ಮೂಲ್ಕಿ ಗೌ ಸಾ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ವಾರ್ಷಿಕ ವಧಿ ಜೂನ್ ತಾ ೨೩ಕ್ಕೆ ಕೂಡಿ ಬಂತು

ಈ ಸಂಸ್ಥೆಯ ಕಾರ್ಯಕಾರೀ ಸಭೆಯ ಜುಲೈ ತಾ. ೬ರಲ್ಲು ಕೂಡಿ ಒಂದು ಮೂಲ್ಕಿ ಬೋರ್ಡ ಹೈಸ್ಕೂಲಿನಲ್ಲಿ ಕಲಿಯುವ ಹತ್ತು ಮಂದಿ ಸ್ವಜಾತೀಯ ಬಡ ವಿದ್ಯಾರ್ಥಿಗಳ ಬಗ್ಗೆ ೧೯೪೦ ಳಾನೆ ಒಂದು ವರ್ಷದ ಬಗ್ಗೆ ಸ್ಕೋಲರ್‌ಶಿಪ್ ರೂಪದಲ್ಲಿ ರೂ ೨೦೯-೦-೦ರಷ್ಟು ಹಣವನ್ನು ಧನಸಹಾಯ ಮಾಡ ವರೆ ಮಂಜೂರು ಮಾಡಿಯದೆ ವಿದ್ಯಾಭಿಮಾನಿಗಳು ಇಂಥ ಸಂಸ್ಥೆಗೆ ಉದ್ಧಾರಹಸ್ತದಿಂದ ಧನಸಹಾಯ ಮಾಡಬೇಕಾಗಿ ವಿನಂತಿ

ಕಾರ್ಕಳ

ಸತ್ಯಾಗ್ರಹ ಸಮಿತಿ ಕಳೆದ ವಾರ ಕಾರ್ಕಳ ಸರ್ಕಲ್ ಕಾಂಗೆಸ ಕಮಿಟಿಯ ಒಂದ ಸಭೆಯ ಜರಗಿ ಈ ಕಮಿಟಿಯನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಪರಿವರ್ತಿಸಲಾಯಿತು ಶ್ರೀಗಳಾದ ಸುಬ್ಬಣ್ಣ ಭಟ್ಟರು ಇದರ ಅಧ್ಯಕ್ಷರಾಗಿಯೂ ಝುಂ ಡಿ ಅಧಿಕಾರಿ ಮತ್ತು ಕೆ ವಿ. ಪ್ರಭುಗಳವರು ಉಪಾಧ್ಯಕ್ಷ ಹಾಗೂ ಸಭಾಪತಿಯರಾಗಿಯೂ, ಕೆ ಪಾಂಡುರಂಗ ಪೈ ಮತ್ತು ವಾಮನ ಪೈಯವರು ಕಾರ್ಯದರ್ಶಿಗಳಾಗಿಯೂ ಮಾಡಲ್ಪಟ್ಟಿದ್ದಾರೆ

ಯುದ್ಧಪ್ರಚಾರ ಕಮಿಟಿ—ತಾ ೬-೭-೧೯೪೦ರ ದಿನ ಜಿಲ್ಲಾ ಕಲೆಕ್ಟರರವರು ತಾವು ಉಳಕೊಂಡಿದ್ದ ಲೋಕಲ್ ಬೋರ್ಡು ಬಂಗಲೆಗೆ ಸ್ಥಳೀಯ ಪ್ರಮುಖರನ್ನು ಕರೆಸಿ ಯುದ್ಧ ವಿಷಯವಾದ ಸುಳ್ಳು ವಾರ್ತೆಗಳು ಹರಡಿ ಜನರಲ್ಲಿ ವ್ಯರ್ಥಗಾಬರಿಗೆ ಆಸ್ಪದವಾಗದಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳುವದಕ್ಕೋಸ್ಕರ ಪರಾಮರ್ಶೆ ತೆಗೆದುಕೊಳ್ಳಲು ಶ್ರೀಗಳಾದ ಕೆ. ಪಿ. ಶೇಷಗಿರಿ ಪ್ರಭು, ಪಂಡಿತ ರಮಾನಾಥರಾವ್ ಮತ್ತು ರೆವರೆಂಡ ಫಾದರ್ ಸೋಜಾರವರಿಂದ ಕೂಡಿದ ಒಂದು ತಾತ್ಕಾಲಿಕ ಪ್ರಚಾರ ಸಮಿತಿಯನ್ನು ರಚಿಸಿದ್ದಾರೆ ಈ ಸಮಿತಿಯು ಸಭೆ ಕೂಡಿ ಇತರರನ್ನು ಇದರ ಸದಸ್ಯರನ್ನಾಗಿ ಸೇರಿಸಿಕೊಂಡು ಪ್ರಚಾರ ಕಾರ್ಯವನ್ನು ಆರಂಭಿಸುವರು

ಕಟಪಾಡಿ:—ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಹೊಸ ಪಾರ್ಶ್ವವನ್ನು ತೆರೆಯುವ ಸಮಾರಂಭವು ಶ್ರೀ ವಿಠ್ಠಲ ಶಾಂತಾರಾಮ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ತಾ ೨೭-೬-೪೦ನೇ ಶನಿವಾರ ಅಪರಾಹ್ನ ಜರಗಿತು

ಉಡುಪಿ

ಯುದ್ಧ ಸಹಾಯಕ ಸಮಿತಿ: ಉಡುಪಿ ತಾಲೂಕಿಗೊಂದು ಯುದ್ಧ ಸಹಾಯಕ ಸಮಿತಿಯು ಸ್ಥಾಪನೆಯಾಯಿತು ಜಿಲ್ಲಾ ಕಲೆಕ್ಟರ್ ಮತ್ತು ಸಬ್ ಕಲೆಕ್ಟರರ ನೇತೃತ್ವದಲ್ಲಿ ಯುದ್ಧ ಸಹಾಯಕ ಫಂಡಿಗೋಸ್ಕರ ಎರಡು ಸಿನೆಮಾ ಬೆನಿಫಿಟ್ ಪ್ರದರ್ಶನಗಳ ನಡೆದುವು

ನಗರ ಸಭೆ—ಉಡುಪಿ ಮುನಿಸಿಪಾಲಿಟಿಯ ೧೯೩೯ ೪೦ನೆ ವರುಷದ ಆಡಳಿತ ವರದಿಯನ್ನು ಕಳೆದ ತಾ ೨೭ರಲ್ಲಿ ಜರಗಿದ ಮೀಟಿಂಗಿನಲ್ಲಿ ಅಂಗೀಕರಿಸಲಾಯಿತು

ಪುತ್ತೂರು

ವರ್ಗಾವರ್ಗಿ ಇಲ್ಲಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಪಿ. ಯುವರ್ ವರ್ಮಾರಿಗೆ ಮಂಗಳೂರಿಗೂ ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ನಜರತ್‌ರವರಿಗೆ ಇಲ್ಲಿಗೂ ವರ್ಗವಾಗಿರತ್ತದೆ

ಹಯ್ಯರ್‌ಗ್ರೇಡ್ ಟ್ರೈನಿಂಗಿಗೆ ಎಲಿಕ್ಷನ್ ಸಿಕ್ಕಿದ ವಿದ್ಯಾರ್ಥಿಗಳು

ಮಂಗಳೂರು ಗವರ್ನಮೆಂಟ್ ಹಾ ಟ್ರೈನಿಂಗ್ ಶಾಲೆಯಲ್ಲಿ ಟ್ರೈನಿಂಗ್‌ಗಾಗಿ ಜಿಲ್ಲೆಯಿಂದ ೧೭ ಮಂದಿ ಸ್ಟೈಪೆಂಡ್ ವಿದ್ಯಾರ್ಥಿಗಳಾಗಿ ಚುನಾಯಿತರಾಗಿದ್ದಾರೆ ಈ ವಿದ್ಯಾರ್ಥಿಗಳು ಜನರಲ್ ಎಜುಕೇಶನಲ್ ಸರ್ಟಿಫಿಕೇಟ್ ಸಹಿತ ಇದೇ ತಾ ೧೫ನೇ ಸೋಮವಾರ ೧೨ ಗಂಟೆಗೆ ಸರಿಯಾಗಿ ಟ್ರೈನಿಂಗ್ ಶಾಲಾ ಹೆಡ್ಮಾಸ್ತರರ ಮುಂದೆ ಹಾಜರಾಗಬೇಕು. ತಮ್ಮ ಆರೋಗ್ಯ ಹಾಗೂ ದೇಹದಾರ್ಢ್ಯತೆಗಾಗಿ ಸರ್ಟಿಫಿಕೇಟೊಂದನ್ನು ಶಾಲೆಗೆ ಸೇರಿದ ದಿನದಿಂದ ಮೂರು ದಿನಗಳೊಳಗೆ ಹಾಜರು ಪಡಿಸಬೇಕು.

ಚುನಾಯಿತರಾದ ಟ್ರೈನಿಂಗ್ ವಿದ್ಯಾರ್ಥಿಗಳು

ಸಂಸ್ಕೃತ ಶಾಲೆಯಿಂದ:— ಶ್ರೀ. ಪಿ. ನಾರಾಯಣ ಕಾರಂತ.

ಮಂಗಳೂರು ರೇಂಜಿನಿಂದ:—ಶ್ರೀ ಪಿ. ಶಿವ, ಕುಳ್ಳೇಕರ ಸುಬ್ಬ, ಟಿ. ಬಾಬು, ಎ. ರಾಮಕೃಷ್ಣ, ಕೆ. ಮುದ್ದು ಕಟ್ಪಾಡಿ, ಯಸ್. ಸಾಧು ಬ್ಯಾರಿ, ಕೆ. ಅಬ್ಬುಲ್ಲ, ಪಿ. ಕೆ. ತ್ಯಾಂಪಣ್ಣ, ಕೆ. ಕುಂಞಪ್ಪ ಪೂಜಾರಿ, ಅಮುಲ್ ಕಣ್ಣ, ಶೀನಪ್ಪ ಪೂಜಾರಿ, ವಾಮನ ನ್ಯಾಕ, ಕೆ. ಭುಜಂಗ ಶೆಟ್ಟಿ, ಮಾಥಪ್ಪ ಶೆಟ್ಟಿ, ಪಿ. ಭೋಗಿ ಶೆಟ್ಟಿ, ಕೆ ವಾಸು ಶೆಟ್ಟಿ, ಯಚ್ ಜನಾರ್ಧನ, ಜಿ ಲಕ್ಷ್ಮಣ ಕಾಮತ್, ದಾಸ ಕಾಮತ್, ಬಿ ಶಂಕರ್ ರಾವ್, ಯನ್. ಕೃಷ್ಣ ಮಯ್ಯ, ಟಿ ಸುಬ್ರಾಯ ಭಟ್, ಪೈ ನಾರಾಯಣ ಭಟ್, ಎವರೆಸ್ಟ ಕೇಸ್ತಲೀನೋ, ಕೊರ್ನೇಲಿಯೋ ವೀಗಾಸ್, ಅಂತೋನಿ ಜೋನ್ ತಾರೊ, ಜೋನ್ ರಿಚಾರ್ಡ ರೊಡ್ರಿಗೆಸ್, ಅಲ್ಬರ್ಟ ಮಾರ್ಕ ಫೆರ್ನಾಂಡಿಸ್, ಜೋಜ ಬೆನೆಡಿಕ್ಟ ಲೋಬೋ ವಿಕ್ಟರ್ ಡಿ'ಸೋಜ.

ಕಾಸರಗೋಡು ರೇಂಜಿನಿಂದ:—ಶೇಷಪ್ಪ ಶೆಟ್ಟಿ, ಪಿ ಸಂಕಪ್ಪ ರೈ, ಪೈ ಸಂಕಪ್ಪ ಅಡ್ಯಂತಾಯ. ಹಸ್ಸನ್ಹೈನ್ ಬ್ಯಾರಿ, ಮಾರ್ಸೆಲ್ ಎಸ್ ಡಿ'ಸೋಜ, ಟಿ ಜಿ ಶಂಕರನ್ ಎಟ್ ವಿ ಅಚ್ಯುತನ್, ಕೆ ಶ್ರೀನಿವಾಸ ಪುರುಷ, ಪಿ ನಾರಾಯಣ ಕೊಡ್ಲ ಮುಕುಂದ, ಸಿ ಎ ರಾಮಪ್ಪ ಕೆ ನರಸಿಂಹ ಯಸ್ ಸುಬ್ಬ ನ್ಯಾಕ, ಯಂ ಗಂಗಾಧರ ಯನ್ ಅಂತಯ್ಯ, ಓ ಸುಬ್ರಮಣ್ಯ ಭಟ್ ಟಿ ತಿರುಮಲೇಶ್ವರ ಭಟ್ ಪೈ ಸುಬ್ರಾಯ ಭಟ್, ಓ ವೆಂಕಟ್ರಮಣ ಕೊಳತ್ತಾಯ ಮಹಲಿಂಗ ಭಟ್ ಪಿ ಕೇಶವ ಭಟ್ ಯನ್ ಮಹಾಬಲೇಶ್ವರ ಭಟ್, ಯು ರಾಮಣ್ಣ ಕೆದಿಲಾಯ

ಪುತ್ತೂರು ರೇಂಜ್‌ನಿಂದ:—ಎಮ್ ಮ್ಯೂಸ ಬ್ಯಾರಿ, ಪೀಟರ್ ಡೆಮಿಯನ್ ಡಿ. ಸೋಜ ಜೆರೋಂ ಪಿಂಟೊ ಜಿ ಕುಂಞಪ್ಪ ಡಿ ಚಿನ್ನಪ್ಪ ಗೌಡ ಕೆ ಶಾಂತಪ್ಪ ಆಳ್ವ, ಎಸ್ ಚೆಕ್ಕಪ್ಪ ರೈ ಕೆ ಶೇಷಪ್ಪ ಗೌಡ, ಎಸ್ ವಾಸುದೇವಯ್ಯ, ಎಸ್ ಸುಬ್ರಾಯ ಭಟ್, ಜಿ ಕೃಷ್ಣ ಭಟ್

ಉಡುಪಿ ರೇಂಜ್‌ನಿಂದ—ಕೆ ರಾಮಕೃಷ್ಣ ಉಪಾಧ್ಯಾಯ ಕೆ ಶ್ರೀನಿವಾಸ ಭಾಗ್ವತ್, ಯು ರಾಮಚಂದ್ರ ಮೈಯ್ಯ ಕೆ ರಾಜಗೋಪಾಲ ಹೆಬ್ಬಾರ ಪಿ ಕೃಷ್ಣ ಕಾರಂತ, ಪೈ ನಾರಾಯಣ ರಾವ್, ಐರೋಡಿ ನಾರಾಯಣ ಆಳ್ವ, ಕೆ ಮುದ್ದಣ್ಣ ಶೆಟ್ಟಿ ಯು ಕೆ ಜಗನ್ನಾಥ ಶೆಟ್ಟಿ ಎ ವೀರಣ್ಣ ಸೂಡಾ, ಯು. ಮೋನಪ್ಪ ಶೆಟ್ಟಿ ಬಿ ಶೀನ ಶೆಟ್ಟಿ ಕೆ ಸಂಕಯ್ಯ ಶೆಟ್ಟಿ, ಜಿ ರಾಮಣ್ಣ ಶೆಟ್ಟಿ ಓ ಗುಂಡು ಶೆಟ್ಟಿ ಎಚ್ ಮಹಾಬಲ ಶೆಟ್ಟಿ, ಕ್ಸೇವಿಯರ್ ಫೆರ್ನಾಂಡಿಸ್ ದೇವದತ್ತ ಸೋನ್ಸ್, ಹಿಲಾರಿ ಮಾರ್ಟಿನ್ ಪೀಟರ್ ಡಿ ಸೋಜ ಕೆ. ರಾಮಚಂದ್ರ ನಾಯಕ್, ಬಿ ಕರಿಯ ಪೂಜಾರಿ ಟಿ ರಾಮ ಬೆಲ್ಚಾಡ, ಎನ್ ಶ್ರೀನಿವಾಸ ನಾಯಕ್, ಯು ಮುತ್ತಯ್ಯ ಬೆಲ್ಚಾಡ, ಓ ಮಂಜುನಾಥ ಅಚಾರಿ

ಕಾರ್ಕಳ ರೇಂಜ್‌ನಿಂದ:—ಕೆ. ಎಸ್ ಅಹಮದ್ ಪೀರಾನ್, ಕೆ ಸೀತಾರಾಮ ಭಟ್ ವಿ ರಂಗಪ್ಪಯ್ಯ, ಎಸ್ ವೆಂಕಟ ರಾವ್, ಎನ್ ಸದಾಶಿವ ಶೆಟ್ಟಿ, ಕೆ ಸಂಜೀವ ಹೆಗ್ಡೆ, ಎಸ್. ತಿಮ್ಮಪ್ಪ ಶೆಟ್ಟಿ, ಕೆ ವಿ ಜಗನ್ನಾಥ ಶೆಟ್ಟಿ, ಬಿ. ದೇಜು ಶೆಟ್ಟಿಗಾರ, ಪೈ ರಾಮಣ್ಣ ಹೆಗ್ಡೆ, ರೆಮಿಜಿಯಸ್ ಡಿ'ಸೋಜ, ಜೋನ್ ಜ್ಞಾನಪ್ರಸಾದ ಸೈಮನ್, ಜೋನ್ ಡೆಂತಿ, ಕೆ. ಎಸ್. ಉಬೇದುಲ್ಲಾ.

ಕುಂದಾಪುರ ರೇಂಜ್‌ನಿಂದ:—ಅರ್ಬನ್ ಡಿಸೋಜ, ಬಿ. ಕೃಷ್ಣ ಧೇವ ಹಂಡೆ, ಬಿ. ವಿಠ್ಠಲ ಶೆಟ್ಟಿ ಎಂ. ಜಿ. ಚಂದ್ರ ಕದುವನ್, ಪಿ. ರಾಮು, ಜಿ. ಕೃಷ್ಣ.

ಕೆನರಾ ಮಹಮ್ಮದನ್ ರೇಂಜ್‌ನಿಂದ:—ಅಬ್ದುಲ್ ಲತೀಫ್, ಎಸ್. ಎ. ಮಹಮ್ಮದ್ ಫಕೀರ್, ಕೆ. ಅಬ್ದುಲ್ ಖಾದರ್, ಶೇಕ್ ಮೊಹಿದ್ದಿನ್ ಬಿ, ಕೆ. ಸಯ್ಯದ್ ಫೈರೋಜ್ ಸಾಹೇಬ್, ಕೆ. ಮುಹಮ್ಮದ್ ಕುಂಞಿ ಬಿ. ಶೇಕ್ ಬುಡಾನ್, ಟಿ. ಬಾಬುಲ್ಲಾ ಸಾಹೇಬ್, ಬಿ. ಅಬ್ಬಾ ಬ್ಯಾರಿ,

ಫ್ರೆಂಚ್ ಬ್ರಿಟನ್ ಸಂಬಂಧ ಮುರಿಯಿತು!

ಯುದ್ಧ ವಾರ್ತೆ



ಓರಾನ್ ಕಾಳಗದ ಪರಿಣಾಮ

ರುಮೇನಿಯದ ವಿಷಮ ಪರಿಸ್ಥಿತಿ

ಸ್ಪೈನಿಗೆ ಹಿಟ್ಲರನ ದಾಳಿಯೆ? ಜರ್ಮನ್ ಬ್ರಿಟನುಗಳ ಕಾದಾಟ!

ಸ್ಟಾಲಿನ್-ಹಿಟ್ಲರನ ಸಂಬಂಧ

ಈ ವಿಚಾರವಾಗಿ ರಾಜಕೀಯ ರಂಗದಲ್ಲಿ ಹಲವು ಮಾತುಕತೆಗಳು ಕೇಳಿಬರುತ್ತಿವೆ. ಕಳೆದ ವಾರ ರಶ್ಯವು ರುಮೇನಿಯದ ಕೆಲ ಪ್ರಾಂತಗಳನ್ನು ಹಿಡಕೊಂಡಿತಷ್ಟೆ? ರುಮೇನಿಯದ ಹಾನಿಯಿಂದ ಜರ್ಮನಿಯು ಕೋಪಗೊಳ್ಳಬೇಕಾಗಿದ್ದರೂ ಹಿಟ್ಲರನು ತಟಸ್ಥನಾಗಿದ್ದಾನೆ. ಬಾಲ್ಕನ್ ರಾಷ್ಟ್ರಗಳಲ್ಲಿ ಅಶಾಂತಿ ತಲೆದೋರ ಕೂಡದೆಂದು ಹಿಟ್ಲರನ ವಿಚಾರವಾಗಿರಬೇಕು. ರಶ್ಯವು ಜರ್ಮನಿಗೆ ಆಹಾರ ಸಾಮುಗ್ರಿಗಳನ್ನೊದಗಿಸುವುದರಿಂದ, ಬಾಲ್ಟಿಕ ರಾಷ್ಟ್ರಗಳಲ್ಲಿ ರಶ್ಯಕ್ಕೆ ಸ್ವಾತಂತ್ರ್ಯವನ್ನು ಹಿಟ್ಲರನು ಕೊಡುತ್ತಿರುವನೆಂದು ಊಹಿಸಲಾಗಿದೆ.

ರುಮೇನಿಯದ ದುರವಸ್ಥೆ

ರಶ್ಯವು ರುಮೇನಿಯವನ್ನು ಹರಿಹಂಚು ಮಾಡಲು ನೋಡುತ್ತಿರುವಾಗ, ಸಹಜವಾಗಿ ಅದು ಹಿಟ್ಲರನ ಸಹಾಯವನ್ನು ಹಾರೈಸುತ್ತಾ ಜರ್ಮನಿಯ ಸಲುವಾಗಿ ಅದು ಇಂಗ್ಲೆಂಡಿನೊಡನೆ ಮಾಡಿಕೊಂಡ ಒಪ್ಪಂದವನ್ನೂ ತೆಗೆದುಹಾಕಿತ್ತು ಆದರೆ ಹಿಟ್ಲರನು ರಶ್ಯದ ವಿರುದ್ಧ ರುಮೇನಿಯಕ್ಕೆ ಬೆಂಬಲ ಕೊಡದೆ ಅದನ್ನು ಸಂಕಟದಲ್ಲಿ ಕೆಡವಿದನು. ರಶ್ಯವು ಕೆಲ ಭಾಗಗಳನ್ನು ಸ್ವಾಧೀನಪಡಿಸಿಕೊಂಡದ್ದನ್ನು ನೋಡಿ, ಹಂಗೇರಿ ಬಲ್ಗೇರಿಯ ದೇಶಗಳೂ ರುಮೇನಿಯದ ಇನ್ನೂ ಕೆಲವು ಪ್ರಾಂತಗಳನ್ನು ಕೇಳುತ್ತಿವೆ

ಟರ್ಕಿಗೆ ಭಯ

ರಶ್ಯವು ಬೆಸರೇಬಿಯ ಪ್ರಾಂತವನ್ನು ಸ್ವಾಧೀನಪಡಿಸಿಕೊಂಡು ಕಪ್ಪು ಸಮುದ್ರದ ವರೆಗೆ ಕಾಲು ನೀಡಿದೆ. ಇದರಿಂದ ಟರ್ಕಿಗೆ ಭಯ ಹೆಚ್ಚಿರುತ್ತದೆ.

ಅಮೇರಿಕದಿಂದ ಶಸ್ತ್ರಸಾಮುಗ್ರಿಗಳ ಸಾಗಿಸುವಿಕೆಗೆ ಕಾನೂನಿನ ತಡೆ

ಅಮೇರಿಕದ ಸಂರಕ್ಷಣೆಗೆ ಬೇಕಾದಷ್ಟು ಶಸ್ತ್ರಾಸ್ತ್ರಗಳು ಇಟ್ಟುಕೊಂಡು ಹೆಚ್ಚಿನದನ್ನು ಮಾತ್ರ ಬ್ರಿಟನಿಗೆ ಕೊಡಬಹುದೆಂದು ಅಮೇರಿಕದಲ್ಲಿ ಒಂದು ಕಾಯಿದೆ ಪಾಸಾಗಿದೆ. ಇದರಿಂದ, ಅಲ್ಲಿನ ರಕ್ಷಣಾಧಿಕಾರಿಗಳು ಅಮೇರಿಕದ ಸಂರಕ್ಷಣೆಗೆ ಹೆಚ್ಚಿನ ಶಸ್ತ್ರಾಸ್ತ್ರಗಳು ಎಂದು ಸರ್ಟಿಫಿಕೇಟು ಕೊಡುವುದು ಅಸಂಭವವಾದುದರಿಂದ ಯುದ್ಧ ಸಾಮುಗ್ರಿಗಳ ಬಗ್ಗೆ ಅಮೇರಿಕದ ಮುಖನೋಡಿ ಕುಳಿತುಕೊಳ್ಳುವ ರಾಷ್ಟ್ರಗಳಿಗೆ ಬಹಳ ತೊಂದರೆಯೊದಗುವುದು.

ಸುವೇಜ್ ಕಾಲುವೆಯ ಬಗ್ಗೆ ಒಪ್ಪಂದವೇ?

ಫ್ರಾನ್ಸು, ಇಟಲಿ, ಜರ್ಮನಿಗಳು ಸುವೇಜ್ ಕಾಲುವೆಯ ವಿಷಯವಾಗಿ ಒಂದು ಗುಪ್ತ ಒಪ್ಪಂದವನ್ನು ಮಾಡಿಕೊಂಡಿರುವುದಾಗಿ ಸುದ್ದಿ.

ಬ್ರಿಟನು ಜರ್ಮನಿ ಯುದ್ಧ

ಈಗ ಬ್ರಿಟನು ಮತ್ತು ಜರ್ಮನಿಗಳೊಳಗೆ ಎದುರೆದುರು ಯುದ್ಧವು ಆರಂಭವಾಗಿದೆ ಆದರೆ ಕಳೆದ ಕೆಲವು ದಿನಗಳಿಂದ ಯುದ್ಧವು ಹಿಂದಿನಂತೆ ಭೀಕರವಾಗಿ ನಡೆಯುವುದಿಲ್ಲ ಎರಡು ಕಡೆಯವರೂ, ಅಲ್ಲೊಂದು ಇಲ್ಲೊಂದು ಬಾಂಬುಗಳನ್ನು ಶತ್ರುರಾಷ್ಟ್ರಗಳ ಮೇಲೆ ಎಸೆಯುತ್ತಿರುವರು ಇದರಿಂದ ಮಹಾನರ್ಥಗಳೇನೂ ಉಂಟಾಗಿಲ್ಲ.

ಇಟಲಿಗೂ ಪೆಟ್ಟು ಬಿದ್ದಿದೆ

ಯುದ್ಧದಲ್ಲಿ ಜರ್ಮನಿಯ ಸಹಾಯನಿಂತ ಇಟಲಿಯೂ ಪೆಟ್ಟು ತಿನ್ನದೆ ಇಲ್ಲ. ಇಟಲಿಯನ್ ಪೂರ್ವ ಆಫ್ರಿಕದಲ್ಲಿರುವ ಗಲಾಬ ನಿಲ್ದಾಣ, ಲಿಬ್ಯಾ ಪ್ರಾಂತ ಇವುಗಳಲ್ಲಿ ಬ್ರಿಟಿಷರ ವಿಮಾನಗಳು ಹಲವು ತೊಂದರೆಗಳನ್ನು ಕೊಟ್ಟಿವೆ ಇಟಲಿಯ ವಿಮಾನಗಳೂ, ಹಡಗುಗಳೂ ಕೆಲವು ಬ್ರಿಟಿಷರಿಂದ ನಾಶಗೊಳಿಸಲ್ಪಟ್ಟಿವೆ

ಸಿಯಾನೋ ಹಿಟ್ಲರ್ ಭೇಟಿ

ಬರ್ಲಿನಿಗೆ ತೆರಳಿ ಇಟಲಿಯ ಕೌಂಟ್ ಸಿಯಾನೋ ಹಿಟ್ಲರನೊಡನೆ ಮಾತುಕತೆ ನಡೆಸಿರುವನು ಬಹಳ ವಿಶೇಷವಾದ ರಾಜಕೀಯ ವಿಚಾರಗಳು ಮಾತುಕತೆ ಮಾಡಲಾಗಿವೆಯೆಂದು ತಿಳಿದಿದೆ

ಸ್ಪೈನಿಗೆ ಹಿಟ್ಲರನ ದಾಳಿಯೆ?

ಸ್ಪೈನಿನ ಗಡಿಯಲ್ಲಿ ಜರ್ಮನ್ ಸೈನ್ಯವು ಈಗಾಗಲೇ ಬಂದು ನಿಂತಿರುವುದು ಇದನ್ನು ನೋಡಿ ಹಿಟ್ಲರನು ಸ್ಪೈನಿಗೆ ದಾಳಿಯಿಡುವನೇ ಎಂಬ ಸಂಶಯವು ಹುಟ್ಟಿದೆ.

ರುಮೇನಿಯದ ಪರಿಸ್ಥಿತಿ

ಬ್ರಿಟಿಷ್ ವಿರೋಧ ಚಟುವಟಿಕೆಗಳು

ರುಮೇನಿಯ ಹೊಸ ಸರಕಾರವು ವಿದೇಶೀಯ ನೀತಿಯನ್ನು ಇವರು ಸ್ಪಷ್ಟಪಡಿಸಿದೆ. ಬ್ರಿಟನಿಗೆ ಹೋಗುವ ಎಣ್ಣೆಯನ್ನು ನಿಲ್ಲಿಸಿದೆ. ಜರ್ಮನಿಗೆ ಮೊದಲಿನಂತೆಯೇ ಎಣ್ಣೆಯು ಸಾಗುತ್ತಿದೆ. ಅಲ್ಲಿಯ ಇಂಗ್ಲಿಷರು ಆ ಊರನ್ನು ಬಿಟ್ಟು ತೆರಳುತ್ತಿದ್ದಾರೆ. ಬ್ರಿಟಿಷರ ವಿರುದ್ಧವಾಗಿ ಹಾಗೂ ಜರ್ಮನ್ ಸಹಾಯಕವಾಗಿ ರುಮೇನಿಯವು ಇಂದು ತನ್ನ ಕಾರ್ಯಕ್ರಮಗಳನ್ನು ಬದಲಾಯಿಸಿದೆ.

ಇರಾನಿನಲ್ಲಿ ಪ್ರಾಯಸ್ಥರ ವಿದ್ಯಾಭ್ಯಾಸ

ಇರಾನಿನಲ್ಲಿ ಪ್ರಾಯಸ್ಥರ ವಿದ್ಯಾಭ್ಯಾಸವು ಬಹು ತೀವ್ರವಾಗಿ ನಡೆಯುತ್ತದೆ. ವರ್ಷಕ್ಕೆ ೧೦,೦೦೦ರಿಂದ ೧೫,೦೦೦ದ ವರೆಗೆ ಪ್ರಾಥಮಿಕ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಶಾಲೆಗಳಿಂದ ಪರೀಕ್ಷೆ ಕೊಟ್ಟು ಹೊರ ಬರುತ್ತಾರೆ ಒಟ್ಟು ಅಲ್ಲಿ ೩೪ ರಾತ್ರಿ ಶಾಲೆಗಳಿವೆ. ಅವುಗಳಲ್ಲಿ ೧,೪೪೯೧ ವಿದ್ಯಾರ್ಥಿಗಳು ಕಲಿಯುತ್ತಾರೆ

ಚಿಯಾಂಗರ ವಿನಂತಿ

ಚೈನಾ ಜಪಾನ್ ಯುದ್ಧದ ಮೂರನೆಯ ವರ್ಷದ ಸಮಾರಂಭದಲ್ಲಿ ಮಾತನಾಡುತ್ತಾ ಚಿಯಾಂಗ್ ಕೈಶೇಕರು ತಮ್ಮ ಯುದ್ಧ ನಿರ್ಧಾರವನ್ನು ಸಾರುತ್ತಾ ಪ್ರಬಲ ರಾಷ್ಟ್ರಗಳಾದ ರಶ್ಯಾ, ಅಮೇರಿಕಗಳು ಚೈನಕ್ಕೆ ಬೆಂಬಲ ಕೊಡಬೇಕೆಂದು ವಿನಂತಿಮಾಡಿಕೊಂಡಿರುವರು

ಫ್ರೆಂಚ್—ಬ್ರಿಟಿಷ್ ಸ್ನೇಹ ಕಡಿದು ಹೋಯಿತು!

ಫ್ರೆಂಚ್ ನೌಕಾ ಬಲದ ವಿಚಾರವಾಗಿ ಬ್ರಿಟನು ಬಹಳ ತೀವ್ರವಾದ ಕಾರ್ಯಗಳನ್ನು ಕೈಗೊಂಡಿದೆ ಫ್ರಾನ್ಸು ಜರ್ಮನಿಯೊಡನೆ ಮಾಡಿದ ಒಪ್ಪಂದದಂತೆ, ಫ್ರಾನ್ಸಿನ ನೌಕಾಬಲವೆಲ್ಲವೂ ಜರ್ಮನಿಗೆ ಶರಣಾಗತವಾಗಬೇಕು. ಫ್ರಾನ್ಸು ಇಟಲಿ, ಜರ್ಮನಿಗಳ ನೌಕಾಬಲಗಳು ಒಟ್ಟಿನಲ್ಲಿ ಅದು, ಬ್ರಿಟನಿನ ನೌಕಾಬಲಕ್ಕೆ ಸಮಾನ ಸಾಮರ್ಥ್ಯವುಳ್ಳದ್ದಾಗುವುದು ಆದ್ದರಿಂದ ಫ್ರಾನ್ಸಿನ ನೌಕಾಬಲವು ಜರ್ಮನಿಯ ವಶವಾಗದಂತೆ ಬ್ರಿಟನು ಕಾರ್ಯಕ್ರಮವನ್ನು ಕೈಕೊಂಡಿತು ಕೆಲ ಬಂದರುಗಳಲ್ಲಿ ಫ್ರೆಂಚ್ ಅಧಿಕಾರಿಗಳು ಬ್ರಿಟನಿನ ವಶ ನೌಕಾ ಬಲವನ್ನು ಒಪ್ಪಿಸಿದರು ಆದರೆ ಓರಾನ್ ಬಂದರದಲ್ಲಿ ಫ್ರೆಂಚ್ ನೌಕಾ ಅಧಿಕಾರಿಗಳು ಬ್ರಿಟಿಷರ ಶರ್ತಗಳಿಗೆ ಒಪ್ಪಲಿಲ್ಲ ಹೀಗಾಗಿ ಅಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ನೌಕಾಬಲಗಳಿಗೆ ಕಾಳಗವಾಯಿತು ಫ್ರೆಂಚರ ಅನೇಕ ಹಡಗುಗಳು ಮುಳುಗಿದುವು ಹಲವು ಬ್ರಿಟನಿನ ವಶವಾದುವು. ಈ ಎಲ್ಲಾ ಹಡಗಗಳೂ ಜರ್ಮನಿಯ ವಶವಾಗಿದ್ದರೆ ಬ್ರಿಟನು ಬಹಳ ತೊಂದರೆಗೆ ಈಡಾಗುತ್ತಿತ್ತು.

ಚರ್ಚಿಲ್ಲರ ಭಾಷಣ

ಬ್ರಿಟಿಷ್ "ಪ್ರಧಾನ ಮಂತ್ರಿ ಚರ್ಚಿಲ್ಲರು ಒಂದು ಆವೇಶಪೂರ್ಣವಾದ ಭಾಷಣ ಮಾಡುತ್ತಾ ಅದರಲ್ಲಿ ಬ್ರಿಟನಿನ ಯುದ್ಧಸಿದ್ಧತೆಯ ವಿಷಯವನ್ನು ಪ್ರಕಟಪಡಿಸಿದರು — "ಜಯವು ಒದಗುವ ವರೆಗೆ ಯುದ್ಧವನ್ನು ನಿಲ್ಲಿಸುವುದಿಲ್ಲ, ಬ್ರಿಟಿಷರು ಸಂಧಾನಕ್ಕೆ ಯತ್ನಿಸುವರೆಂದು ಅಪಪ್ರಚಾರವಾಗುವುದನ್ನು ಯಾರೂ ನಂಬಬಾರದು ಯಾವ ಉದ್ದೇಶಕ್ಕಾಗಿ ಬ್ರಿಟನು ಸಂಗ್ರಾಮಕ್ಕಿಳಿಯಿತೋ ಆ ಉದ್ದೇಶವು ಈಡೇರುವ ವರೆಗೆ ಸಂಧಾನವಿಲ್ಲ" ಹೀಗೆಂದು ಅವರು ಹೇಳಿದರು ಚರ್ಚಿಲ್ಲರು ಬ್ರಿಟನಿನ ದೃಢಸಂಕಲ್ಪವನ್ನು ಸಾರುತ್ತಾ ಬ್ರಿಟಿಷ್ ನಾಗರಿಕರನ್ನು ಯುದ್ಧೋತ್ಸಾಹಿಗಳನ್ನಾಗಿ ಮಾಡುತ್ತಿದ್ದಾರೆ

ಯುಗೋಸ್ಲೇವಿಯ ಟರ್ಕಿಗಳಿಗೆ ಎಚ್ಚರಿಕೆ

ಈ ಎರಡು ದೇಶಗಳ ಸ್ವತಂತ್ರವಾದ ವಿದೇಶೀ ರಾಜನೀತಿಯನ್ನು ಅನಸರಿಸಿ ಇವುಗಳು ಬ್ರಿಟಿಷರಿಗೆ ಸಹಾಯ ಮಾಡಿಬಿಟ್ಟಿವೆಯೆಂದೂ, ಇಟಲಿ ಜರ್ಮನಿಗಳು ಈ ರಾಷ್ಟ್ರಗಳಿಗೆ ಎಚ್ಚರಿಕೆಯನ್ನಿತ್ತಿವೆ

ತಟಸ್ಥ ಐರ್ಲೆಂಡು

ಐರ್ಲೆಂಡ ಹಿಂದಿನಂತೆ ಮುಂದೆಯೂ ತಾಟಸ್ಥ್ಯ ಧೋರಣೆಯನ್ನೇ ವಹಿಸುವುದೆಂದು ಅಲ್ಲಿನ ಅಧ್ಯಕ್ಷರಾದ ಡಿ ವಲೆರಾ ಅವರು ಒಂದು ಹೇಳಿಕೆಯಿತ್ತಿರುವರು "ಈ ಸರಕಾರವು ತನ್ನ ದೇಶ ರಕ್ಷಣೆಯನ್ನ ... ಾದಿಕೊಳ್ಳುವುದು ಮಾತ್ರ ನಿಶ್ಚಯ" ಎಂದು ಆ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ

ಜಿಬ್ರಾಲ್ಟರಿಗೆ ದಾಳಿ

ಯುದ್ಧವಾರಂಭವಾದ ಮೇಲೆ ಇದೇ ಮೊದಲನೆಯ ಬಾರಿಯಾಗಿ ಜಿಬ್ರಾಲ್ಟರಿನ ಮೇಲೆ ಶತ್ರು ವಿಮಾನಗಳ ದಾಳಿಯಾಯಿತು. ಎಂಟು ಬಾಂಬುಗಳು ಬಿದ್ದವು

ಭಾರತಕ್ಕೆ ಸ್ವಾತಂತ್ರ್ಯ ಪ್ರಕಟಣೆಯಾಗಬೇಕು

ವರ್ಕಿಂಗ್ ಕಮಿಟಿಯ ನಿರ್ಣಯ

ಡಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನವು ಜರಗಿತು ಮಹಾತ್ಮರ ಈ ಅಧಿವೇಶನಕ್ಕೆ ಹಾಜರಾಗಿದ್ದು, ತನ್ನ ಮತ್ತು ವೈಸರಾಯರ ಭೇಟಿಯ ಮಾತುಕತೆಯ ವಿಷಯವನ್ನು ವಿವರಿಸಿದರು. ಪಂಡಿತ ಮದನ ಮೋಹನ ಮಾಲವೀಯರು ಡಿಲ್ಲಿಗೆ ಮಹಾತ್ಮರ ಭೇಟಿಗಾಗಿ ಬಂದಿದ್ದವರು ವರ್ಕಿಂಗ್ ಕಮಿಟಿಯ ಅಧಿವೇಶನಕ್ಕೆ ಹಾಜರಿದ್ದರು. ರಾಷ್ಟ್ರೀಯ ಸರಕಾರದ ಕುರಿತು ವೈಸರಾಯರು ಸಮರ್ಥಿಸಬಹುದಾದ ಸೂಚನೆಗಳನ್ನು ಕಾಂಗ್ರೆಸು ಬಿಟ್ಟುಬಿಡಬಾರದಾಗಿ ಮಾಲವೀಯರು ಹಿತಸೂಚನೆಯಿತ್ತಿರುವರಾಗಿ ತಿಳಿದುಬಂದಿದೆ.

ಶ್ರೀ ಅಣೆಯವರೂ ಗಾಂಧಿಜಿ ಮಾಲವೀಯರನ್ನು ಕಂಡು ರಾಜಕೀಯದ ವಿಷಯ ಚರ್ಚೆ ಮಾಡಿದರು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬ್ರಿಟನು ಭಾರತದ ಸ್ವಾತಂತ್ರ್ಯದ ವಿಷಯವಾಗಿ ಸ್ಪಷ್ಟವಾದ ಪ್ರಕಟಣೆಯೊಂದನ್ನು ಪ್ರಕಟಿಸಬೇಕೆಂದೂ, ಅದರ ಪೂರ್ವಸೂಚನೆಯಾಗಿ ರಾಷ್ಟ್ರೀಯ ಸರಕಾರವನ್ನು ಯೋಜಿಸಬೇಕೆಂದೂ ಹೇಳಿಕೆಯಿತ್ತು ನಿರ್ಣಯಮಾಡಿದೆ.

ಬೋಸರನ್ನು ಬಂಧಿಸಿದುದೇಕೆ?

'ಕಲ್ಕತ್ತೆಯ ಕತ್ತಲೆ ಕೋಣೆ' (Black Hall of Calcutta) ಎಂದು ಬ್ರಿಟಿಷರು ಇತಿಹಾಸದಲ್ಲಿ ಉಲ್ಲೇಖಿಸಿದ ಅಂಶವು ಸುಳ್ಳೇ ಸುಳ್ಳು. ಅದಕ್ಕಾಗಿ ಬ್ರಿಟಿಷರು ಒಂದು ಸ್ಮಾರಕವನ್ನು ಕಲ್ಕತ್ತೆಯಲ್ಲಿ ಸ್ಥಾಪಿಸಿರುವರು ಅದಕ್ಕೆ "ಹಾಲ್‌ವೆಲ್" ಎಂದು ಹೆಸರಿಟ್ಟಿರುತ್ತಾರೆ ಇಂತಹ ಸುಳ್ಳು ವಿಷಯದ ಸ್ಮಾರಕವನ್ನು ನಮ್ಮ ದೇಶದಲ್ಲಿ ಇಡುವುದು ಅನ್ಯಾಯ, ಅದನ್ನು ತೆಗೆಯಬೇಕೆಂದು' ಬೋಸರು ಸರಕಾರಕ್ಕೆ ಸೂಚಿಸಿದರು ಆದರೆ ಸರಕಾರದವರು ಅದನ್ನು ಒಪ್ಪದೆ ಇದ್ದ ಕಾರಣ ಬೋಸರು ಸತ್ಯಾಗ್ರಹ ಮಾಡಬೇಕಾಯಿತು ಈ ಸತ್ಯಾಗ್ರಹದ ಸಂಬಂಧದಲ್ಲಿ ಬೋಸರನ್ನು ಬಂಧಿಸಿದರು.

ಬೋಸರ ಬಂಧನವಾದ ಮೇಲೆ ಸತ್ಯಾಗ್ರಹವು ಅಲ್ಲಿ ಭರದಿಂದ ನಡೆಯುತ್ತಿದೆ ಅನೇಕ ರಾಜಕೀಯ ಮುಂದಾಳುಗಳನ್ನು ಬಂಧಿಸುತ್ತಿದ್ದಾರೆ ಹಲವರು ಸೆರೆಮನೆಯ ಕತ್ತಲು ಕೋಣೆಗೆ ಸೇರಿಸಲ್ಪಟ್ಟಿದ್ದಾರೆ.

ಕಲ್ಕತ್ತಾ ಕಾರ್ಪೊರೇಶನು ಮೂರನೆಯ ತಾರೀಕಿನ ದಿನ ಏನೂ ಕೆಲಸ ಮಾಡದೆ (ಬೋಸರ ಬಂಧನ ವಿಷಯವಾಗಿ) ಇತ್ತು. ಮೇಯರರಾದ ಸಿದ್ದಿಕಿಯವರು ಬೋಸರನ್ನು ಬಂಧಿಸಿದ್ದನ್ನು ನಿಷೇಧಿಸಿ ಸಭೆಯು ಒಂದು ನಿರ್ಣಯ ತಂದು ಅದು ಅನುಮೋದನವಾಗಿ ಪಾಸಾಯಿತು.

ಬಂಧನಗಳು

ಕಾಂಗ್ರೆಸು ಸೋಶಿಯಲಿಸ್ಟ್ ಕಾರ್ಯಕಾರೀ ಮಂಡಳದ ಸದಸ್ಯರಾದ ಶ್ರೀಗಳಾದ ಎಸ್. ಎಮ್. ಜೋಶಿ, ಮಾಧವ

ಲಿಮೆಯ
ಇವರ
ಕರಿಣ
ತೆರದದ್ದ
ವಿಧಿಸಲ
ಮಾಡಿದ
ಗಿದೆ

ವಿವ
ಬೋ
ಹಡಗು
ವಾಲ್ಟ
ತಜ್ಞರೊ
ನಿರ್ಮಾ
ಒಪ್ಪಣೆ

ಕಾ
ಕ್ತ ವಾ
ಸಹಕ
ಕಾಂಗ್ರೆಸ
ಗ್ರೆಸು ಎ
ಸಾ ಸದ
ಎರು.

ಗಾಂಧಿ
ಬಹಳ
ಮಾಲವೀ
ಮಾಲವಿ
ಭೇಟಿಗಾ
ಭೇಟಿಯೂ
ಮಾತನಾ
ರಾಜಕೀ
ರೆಂದೂ ಗ
ವರ್ಕಿಂಗ್
ರಾಗಿದ್ದರು

ದಿವಂ

ಕೇರಳ
ಹಲವು
ದೇಶಸೇವ
ಶ್ರೀ ಪರವೆ
ತಾ ೨೦ರಂ
ಹೊಂದಿದ
ಹೈಕೋಟ
ಸವರ್ಕಾರ
ವೈಸರಾ
ಯ ಅ
ಆಮಂತ್ರಣ
ತೆರಳಿ ವೈ



ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಬೇಕು!

ವರ್ಕಿಂಗ್ ಕಮಿಟಿಯ ನಿರ್ಣಯ

ಬ್ರಿಟನಿಗೆ ಮಹಾತ್ಮರ ಸಂದೇಶ

ಅಬ್ದುಲ್‌ಗಫರ್ ಖಾನರ ರಾಜಿನಾಮೆ! ಸಿಕಂದರ್-ಹಕ್ಕರ ಐಕ್ಯಪ್ರಯತ್ನ!

ಲಿಮಯೆ ಮತ್ತು ಕೇಶವರಾವ್ ಗೋಲೆ ಇವರನ್ನು ವಿಚಾರಿಸಿ ಒಂದೊಂದು ವರ್ಷ ಕಠಿಣ ಶಿಕ್ಷೆ ಮತ್ತು ೫೦ರೂ ದಂಡ ದಂಡ ತೆರದಿದ್ದಲ್ಲಿ ಮತ್ತೆರಡು ತಿಂಗಳ ಶಿಕ್ಷೆ ವಿಧಿಸಲಾಯಿತು. ಒಂದು ಭಾಷಣ ಮಾಡಿದ್ದಕ್ಕಾಗಿ ಇವರನ್ನು ಬಂಧಿಸಲಾಗಿದೆ.

ವಿಮಾನ ನಿರ್ಮಾಣಕ್ಕೆ ಅಪ್ಪಣೆ

ಬೊಂಬಯಿಯ ಪ್ರಸಿದ್ಧ ವರ್ತಕರ ಹಡಗು ಕಂಪನಿಗಳ ಮಾಲಕರೂ ಆದ ವಾಲ್ಚಂದ ಹೀರಾಚಂದರು ಅಮೇರಿಕನ್ ತಜ್ಞರೊಡನೆ ಸಿಮ್ಲಾಕ್ಕೆ ಹೋಗಿ, ವಿಮಾನ ನಿರ್ಮಾಣ ಮಾಡಲು ಸರಕಾರದ ಅಪ್ಪಣೆ ಕೇಳಿರುವರು

ಯುದ್ಧ ಕಮಿಟಿಯಲ್ಲಿ ಸಹಕರಿಸಿದ್ದಕ್ಕೆ

ಕಾಂಗ್ರೆಸಿನ ಅಪ್ಪಣೆ ಮೀರಿ ಸಂಯುಕ್ತ ಪ್ರಾಂತ್ಯದ ಯುದ್ಧ ಕಮಿಟಿಯಲ್ಲಿ ಸಹಕರಿಸಿದ್ದಕ್ಕೆ ಅಲ್ಲಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಒಬ್ಬ ಕಾಂಗ್ರೆಸು ಎಂ ಎಲ್ ಎ ಯನ್ನು ಕಾಂಗ್ರೆಸ್ ಸದಸ್ಯತ್ವದಿಂದ ತೆಗೆದು ಹಾಕಿರುವರು.

ಗಾಂಧಿ-ಮಾಲವೀಯರ ಭೇಟಿ

ಬಹಳ ಕಾಲದ ವರೆಗೆ ಗಾಂಧಿ ಮತ್ತು ಮಾಲವೀಯರು ಭೇಟಿಯಾಗಿರಲಿಲ್ಲ. ಮಾಲವೀಯರು ಗಾಂಧಿಜಿಯವರ ಭೇಟಿಗಾಗಿ ಡಿಲ್ಲಿಗೆ ಬಂದು ಅವರನ್ನು ಭೇಟಿಯಾಗಿ ಎರಡು ತಾಸುಗಳ ವರೆಗೆ ಮಾತನಾಡಿದರೆಂದೂ, ಅದರಲ್ಲಿ ಅವರು ರಾಜಕೀಯ ವಿಷಯವಾಗಿ ವಿಮರ್ಶಿಸಿದರೆಂದೂ ಗೊತ್ತಾಗಿದೆ ಮಾಲವೀಯರು ವರ್ಕಿಂಗ್ ಕಮಿಟಿಯ ಸಭೆಗೂ ಹಾಜರಾಗಿದ್ದರು

ದಿವಂಗತ ಪರಮೇಶ್ವರಪಿಳ್ಳೆ

ಹರಿಜನ ಸೇವಕರು

ಕೇರಳ ಹರಿಜನ ಸೇವಕ ಸಂಘಕ್ಕೆ ಹಲವು ವರ್ಷಗಳಿಂದ ಅಧ್ಯಕ್ಷರಾಗಿ, ದೇಶಸೇವಾ ಕಾರ್ಯದಲ್ಲಿ ನಿರತರಾಗಿದ್ದ ಶ್ರೀ ಪರಮೇಶ್ವರ ಪಿಳ್ಳೆಯವರು ಜೂನ್ ತಾ ೨೦ರಂದು ತ್ರಿವೇಂಡ್ರಮಿನಲ್ಲಿ ಮರಣ ಹೊಂದಿದರು. ಇವರು ಹಿಂದೆ ತ್ರಿವೇಂಡ್ರಂ ಹೈಕೋರ್ಟು ಜಡ್ಜರಾಗಿದ್ದರು.

ಸವರ್ಕಾರ್ ವೈಸರಾಯ್ ಭೇಟಿ

ವೈಸರಾಯರು ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಸಾವರ್ಕಾರರಿಗೆ ಆಮಂತ್ರಣವಿತ್ತಂತೆ ಅವರು ಅಲ್ಲಿಗೆ ತೆರಳಿ ವೈಸರಾಯರೊಡನೆ ೧½ ತಾಸಿನ ತನಕ ಸಂಭಾಷಣೆ ನಡೆಸಿದರು

ಮುಂಬಯಿ ಬಂದರ ತೆರೆಯಿತು

ಕೆಲದಿನಗಳಿಂದ ಮುಚ್ಚಲಾಗಿದ್ದ ಮುಂಬಯಿ ಬಂದರವು ತಾ ೪ರಿಂದ ತೆರೆಯಲ್ಪಟ್ಟಿದೆ

ಬೊಂಬಯಿಯಲ್ಲಿ ಮದ್ಯಪಾನ

ಬೊಂಬಯಿಯ ಹೈಕೋರ್ಟು ಮದ್ಯಪಾನ ನಿರೋಧದ ವಿಷಯ ಒಂದು ತೀರ್ಪನ್ನು ಕೊಟ್ಟು ಅದರ ಪ್ರಕಾರ ತಿರಿಗಿ ಅಲ್ಲಿ ಮದ್ಯಪಾನವು ಜಾರಿಗೆ ಬಂದಿದೆ ಜನರು ಕುಡಿಯ ಹತ್ತಿದ್ದಾರೆ ಬಡವರ ಕೈಯಲ್ಲಿ ಓಡಾಡುವ ಕಾಸು ಈ ತೀರ್ಮಾನದಿಂದ ಇನ್ನು ಮುಂದೆ ಮದ್ಯಪಾನಕ್ಕಾಗಿ ವ್ಯರ್ಥ ವ್ಯಯವಾಗಿ ಅವರು ಸಂಕಷ್ಟಕ್ಕೆ ಗುರಿಯಾಗುವಂತಾಯಿತು ಸರಕಾರದ ಮದ್ಯಪಾನ ನಿಷೇಧ ಕಾನೂನು ಬೊಂಬಯಿಯಲ್ಲಿ ಒಟ್ಟು ೧೧ ತಿಂಗಳು ೪ ದಿನಗಳ ತನಕ ಜಾರಿಯಲ್ಲಿತ್ತು

ಅಬ್ದುಲ್ ಗಫರ್ ಖಾನರ ರಾಜಿನಾಮೆ

ವರ್ಕಿಂಗ್ ಕಮಿಟಿಯು ರಾಷ್ಟ್ರರಕ್ಷಣೆಯ ಕುರಿತು ಅಹಿಂಸೆಯ ತತ್ವವನ್ನು ತೆಗೆದುಹಾಕಿರುವ ವಿಷಯ, ತನ್ನ ಅಭಿಪ್ರಾಯ ಭೇದದಿಂದ ವರ್ಕಿಂಗ್ ಕಮಿಟಿಯ ಸದಸ್ಯತ್ವಕ್ಕೆ ಗಡಿನಾಡಿನ ಗಾಂಧಿಗಳೆಂದು ಹೆಸರಾದ ಅಬ್ದುಲ್ ಗಫರ್ ಖಾನರು ರಾಜಿನಾಮೆಯಿತ್ತಿರುವರು!

ಸ್ವಯಂಸೇವಕರ ಮೆರವಣಿಗೆ

ಸಂಯುಕ್ತ ಪ್ರಾಂತದಲ್ಲಿ ಲಕ್ಷ ಮಂದಿ ಸ್ವಯಂಸೇವಕರ ಸಿದ್ಧತೆ

ಶಿಸ್ತಿನ ಉಡುಪನ್ನು ಧರಿಸಿದ ೫೦೦ ಮಂದಿ ಕಾಂಗ್ರೆಸ್ ಸ್ವಯಂಸೇವಕರು ಲಾಠಿಗಳನ್ನು ಹಿಡಿದುಕೊಂಡು ಅಲಹಾಬಾದ್ ನಗರದ ಬೀದಿಗಳಲ್ಲಿ ಜುಲೈ ೪ರಲ್ಲು ಸಾಮೂಹಿಕ ಮೆರವಣಿಗೆಯನು ನಡೆಸಿದರು ಪ್ರಾಂತ ಕಾಂಗ್ರೆಸ್ ಕಮಿಟಿಯವರು ಸಂಯುಕ್ತ ಪ್ರಾಂತಕ್ಕೆ ಸಂಬಂಧಪಟ್ಟ ಒಂದು ಲಕ್ಷ ಮಂದಿ ಕಾಂಗ್ರೆಸ್ ಸ್ವಯಂಸೇವಕರನ್ನು ಸಿದ್ಧಗೊಳಿಸುವರು ಇಡೀ ಪ್ರಾಂತದಲ್ಲಿ ಈ ಒಂದು ಲಕ್ಷ ಮಂದಿ ಸ್ವಯಂಸೇವಕರನ್ನು ಜನತೆಯ ರಕ್ಷಣೆಯ ಸಲುವಾಗಿ ವ್ಯವಸ್ಥೆ ಮಾಡಲಾಗುವುದು.

ವರ್ಕಿಂಗ್ ಕಮಿಟಿ ಸಭೆಗೆ ಸಿಕಂದರರು ಆಗಮಿಸಿದ್ದರು

ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗೆ ಸರ್ ಸಿಕಂದರ್ ಹಯ್ಯತ್ ಖಾನರು ಹತ್ತಿರದ ವರೆಗೆ ಬಂದು ಹಾಜರಿದ್ದರು

ಸಿಕಂದರರ ಅಭಿಪ್ರಾಯ

ವೈಸರಾಯರ ಮಂತ್ರಿಮಂಡಳವನ್ನು ವಿಸ್ತಾರಗೊಳಿಸುವ ವಿಷಯವಾಗಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಸಿಕಂದರರು ಭಾರತೀಯ ಬಹು ಪ್ರಾತಿನಿಧ್ಯವಿರುವಂತೆ ಅದು ಆಗಬೇಕೆಂದೂ, ಜನಪ್ರಿಯ ಮುಖಂಡರನ್ನೇ ಅದರ ಮುಖ್ಯ ವಿಭಾಗಗಳಿಗೆ ಆರಿಸಬೇಕೆಂದೂ ಹೇಳಿದರು

ಸಾವರ್ಕಾರರ ಅಭಿಪ್ರಾಯ

ವೈಸರಾಯರ ಮಂತ್ರಿ ಮಂಡಳವನ್ನು ವಿಸ್ತರಿಸುವ ವಿಚಾರದಲ್ಲಿ ಹಿಂದೂ ಮಹಾಸಭೆಯು ತನ್ನ ಪ್ರತಿನಿಧಿಯನ್ನು ಕಳುಹಿಸಲು ಅಪೇಕ್ಷೆ ಪಡುತ್ತದೆಯೆಂದು ಶ್ರೀ ಸಾವರ್ಕಾರರು ವೈಸರಾಯರ ಭೇಟಿಯ ನಂತರ ಹೇಳಿದರು. ರಾಷ್ಟ್ರೀಯ ಸರಕಾರದಲ್ಲಿ ಕಾಂಗ್ರೆಸು, ಹಿಂದೂ ಮಹಾಸಭೆ ಮುಸ್ಲಿಂ ಲೀಗು ಮತ್ತು ಆಶ್ರಿತ ರಾಜ್ಯಗಳ ಪ್ರಾತಿನಿಧ್ಯವಿರಬೇಕೆಂದು ಅವರು ಸಾರಿದರು

ಕಾಂಗ್ರೆಸು ಮುಖಂಡರು ಮುಸ್ಲಿಂ ಮುಖಂಡರನ್ನು ಸಂದರ್ಶಿಸಿದರು

ಇತ್ಯರ್ಥ ವಿಚಾರ ಮಾತುಕತೆಗೆ ಬಂಗಾಳದ ಪ್ರಧಾನರಾದ ಫಜಲುಲ್‌ಹಕ್ಕರೂ, ಪಂಜಾಬ್ ಪ್ರಧಾನರಾದ ಸಿಕಂದರ್ ಹಯ್ಯತ್ ಖಾನರೂ, ಡಿಲ್ಲಿಯಲ್ಲಿ ಕಾಂಗ್ರೆಸು ಮುಖಂಡರಾದ ಸಿ ರಾಜಗೋಪಾಲಚಾರಿ, ಸರೋಜಿನಿ ನಾಯುಡು ಡಾ। ಸಯ್ಯದ್ ಅಹಮ್ಮದ್, ಖಾನ್ ಅಬ್ದುಲ್ ಗಫರ್ ಖಾನ್ ಇವರೊಡನೆ ಸಂದರ್ಶಿಸಿ ಮಾತುಕತೆ ನಡಿಸಿದರು

ಲೀಗು ಮತ್ತು ಕಾಂಗ್ರೆಸಿನೊಳಗೆ ಇತ್ಯರ್ಥ ಮಾಡುವ ವಿಚಾರ ಇವರು ಪ್ರಯತ್ನಿಸುತ್ತಿರುವರೆಂದು ತಿಳಿದಿದೆ

ಖಾಕ್ಸಾರ ಚಳವಳವು ನಿಲ್ಲಿಸಲಾಯಿತು

ಜಿನ್ನರ ಮಾತುಕತೆಯಂತೆ ಖಾಕ್ಸಾರರು ಚಳವಳವನ್ನು ನಿಲ್ಲಿಸಿರುವರು. ಮುಂದಿನ ವಿಷಯವಾಗಿ ಜಿನ್ನರು ಮಾತುಕತೆ ನಡಸಿ ಇತ್ಯರ್ಥ ಮಾಡುವರೆಂದು ತಿಳಿದಿದೆ

ಜಿನ್ನರ ಪ್ರಕೋಪ

ಕಾಂಗ್ರೆಸು ಮುಖಂಡರೊಡನೆ ಬಂಗಾಳ ಮತ್ತು ಪಂಜಾಬದ ಪ್ರಧಾನರು ಮಾತುಕತೆ ಮಾಡಿದ ವಿಷಯ ಅವರಿಗೆ ಮುಸ್ಲಿಂ ಲೀಗೂ ಹಾಗೆ ಮಾತುಕತೆ ಮಾಡಲು ಯಾವ ಅಧಿಕಾರವನ್ನೂ ಕೊಟ್ಟಿಲ್ಲವೆಂದು ಜಿನ್ನರು ಹೇಳಿದರು.

ಸರಕಾರಿ ಉದ್ಯೋಗಸ್ಥರ ಸಂಬಳ

ಮದ್ರಾಸ ಆಧಿಪತ್ಯದ ಮಾನ್ಯ ಗವರ್ನರರು ತಿಂಗಳಿಗೆ ರೂ ೧೦೦ ಅಥವಾ ಅದಕ್ಕೆ ಮೇಲ್ಪಟ್ಟು ಸಂಬಳವಿರುವ ಉದ್ಯೋಗಸ್ಥರು, ತಿಂಗಳಿಗೊಂದು ದಿನದ ಸಂಬಳದಂತೆ ೬ ತಿಂಗಳ ವರೆಗೆ ಅವರವರ ಆತ್ಮಸಂತೋಷದಂತೆ ಗವರ್ನರರ ಈ ಯುದ್ಧ ನಿಧಿಗೆ ವಂತಿಗೆ ಕೊಡಬಹುದೆಂದು ಸೂಚಿಸಿರುತ್ತಾರೆ ಅಲ್ಲದೆ ಹಾಗೆ ಮಾಡಲು ಬಯಸುವವರ ಈ ವಂತಿಗೆ ಆ ನಿಧಿಗೆ ಮೊತ್ತವಾಗಿ ದೊರೆಯುವಂತೆ ಸರಕಾರವು ಇದನ್ನು ಮಂಗಡವಾಗಿ ತೆರುವುದೆಂದೂ, ಮುಂದೆ ೬ ಕಂತಿನಲ್ಲಿ ಅವರವರ ಸಂಬಳದಲ್ಲಿ ಅದನ್ನು ವಜಾ ಹಿಡಿಯಲಾಗುವುದೆಂದೂ ಪ್ರಕಟಣೆ ಹೊರಟಿದೆ

ಅಮೇರಿಯವರು ಪ್ರಕಟಣೆ ಕೊಡುವರೆ?

ಭಾರತದ ಒಕ್ಕಟ್ಟಿನ ಕುರಿತು ಒಂದು ವಾರದಲ್ಲಿ ಅಮೇರಿಯವರು ಪಾರ್ಲಿಮೆಂಟಿನಲ್ಲಿ ಒಂದು ಪ್ರಕಟಣೆ ಕೊಡುವರಾಗಿ ತಿಳಿದಿದೆ ಕೇಂದ್ರದ ಆಡಳಿತದಲ್ಲಿ ಬದಲಾವಣೆಗಳಾಗುವ ಸಂಭವವಿದೆಯೆಂದು ಸಿಮ್ಲಾದ ವದಂತಿ

ಹೊಸ ವಾರ್ತೆ

ಗಾಂಧಿಜಿಯವರು ಡಿಲ್ಲಿಯಲ್ಲಿ ಸೇರಿದ ವರ್ಕಿಂಗ್ ಕಮಿಟಿಯ ನಿರ್ಣಯದ ಕುರಿತು ಒಂದು ದೀರ್ಘ ಪ್ರಕಟಣೆ ಕೊಡುತ್ತಾ ಅದರಲ್ಲಿ ಬ್ರಿಟನಿನೊಡನೆ ಗೆಳೆತನಕ್ಕಾಗಿ ನೀಡಿದ ಹಸ್ತವನ್ನು ಬ್ರಿಟನು ತಿರಸ್ಕರಿಸಬಾರದು ಎಂದು ಸೂಚಿಸಿರುವರು

ರಾಷ್ಟ್ರಪತಿ ಅಜಾದರು ಒಂದು ಹೇಳಿಕೆಯಲ್ಲಿ ಕಾಂಗ್ರೆಸು ಅಹಿಂಸಾ ತತ್ವವನ್ನು ಬಿಟ್ಟಿಲ್ಲ ಎಂಬ ವಿಷಯವಾಗಿ ಸ್ಪಷ್ಟ ಸಾರಿದರು

ಅಬ್ದುಲ್ ಗಫರ್ ಖಾನರು ಕಾಂಗ್ರೆಸಿನಿಂದ ನಿವೃತ್ತರಾಗುವರೆಂದು ತಿಳಿದಿದೆ

ಇಂಗ್ಲೆಂಡಿಗೆ ದಾಳಿಯಿಡಲು ಬಂದ ಜರ್ಮನ್ ವಿಮಾನಗಳೊಡನೆ ಆರ್. ಎ ಎಫ್ ವಿಮಾನಗಳು ಭಯಂಕರ ಕಾದಾಡಿದವು. ಕೆಲವು ನಾಜಿ ವಿಮಾನಗಳನ್ನು ಕೆಳಗುರುಳಿಸಿದವು

ರುಮೇನಿಯದೊಡನೆ ಹಂಗೇರಿ ಮತ್ತು ಬಲ್ಗೇರಿಯಗಳು ಕೆಲವು ಪ್ರಾಂತಗಳನ್ನು ಬಿಟ್ಟುಕೊಡಲು ಒತ್ತಾಯ ಪಡಿಸುತ್ತವೆ.

ಫ್ರೆಂಚ್ ನೌಕಾಪಡೆಯೊಡನೆ ಬ್ರಿಟಿಷ್ ನೌಕಾಪಡೆಗಳಿಗೆ ಕಾದಾಟವಾಗುತ್ತಿದೆ.

ಜಿಬ್ರಾಲ್ಟರಿನ ಮೇಲೆ ಶತ್ರು ವಿಮಾನಗಳು ಹಾರಾಡಿದವು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸು ಸಮಿತಿ
ಕಾಂಗ್ರೆಸ ಸದಸ್ಯರಾಗಿರಿ

ಈ ವರುಷದಲ್ಲೇ ಎಲ್ಲಾ ಜಿಲ್ಲೆಗಳಿಗೂ ಕಾಂಗ್ರೆಸ ಸದಸ್ಯರನ್ನು ಮಾಡುವ ಪುಸ್ತಕಗಳನ್ನು ಕಳಿಸಿ ಎಷ್ಟೋ ದಿವಸಗಳಾದವು. ಆದರೂ ಇನ್ನೂ ಕಾಂಗ್ರೆಸ ಮೆಂಬರರನ್ನು ಮಾಡುವ ಕಾರ್ಯವನ್ನು ಯಾರೂ ಕೈಕೊಂಡಂತೆ ಕಾಣುವದಿಲ್ಲ. ಆದ್ದರಿಂದ ಎಲ್ಲಾ ಜಿಲ್ಲಾ ಕಾಂಗ್ರೆಸ ಸಮಿತಿಗಳಿಗೂ, ಜನತೆಗೂ ಅದರ ಬಗ್ಗೆ ಸೂಚಿಸಬೇಕಾಗಿದೆ.

ಈಗ ಎಲ್ಲರೂ ಕೂಡಲೇ ಕಾಂಗ್ರೆಸ ಪ್ರಾಥಮಿಕ ಸದಸ್ಯರನ್ನು ಮಾಡುವ ಕಾರ್ಯ ಕೈಕೊಳ್ಳಬೇಕು. ಕಾಂಗ್ರೆಸ ಸದಸ್ಯರ ಸಂಖ್ಯೆಯು ಈ ಸಲ ಆದಷ್ಟು ಹೆಚ್ಚು ಆಗುವಂತೆ ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

ದರಿದ್ರವಾಗಿ ಹೋಗಿದ್ದ ನಮ್ಮ ದೇಶದ ಹಿತ ಸಾಧಿಸುವ ಸಲುವಾಗಿ ಕಾಂಗ್ರೆಸ್ಸು ಎಷ್ಟು ವರುಷಗಳಿಂದ ಎಷ್ಟೆಷ್ಟು ಕಷ್ಟ ಪಡುತ್ತದೆ ಎಂಬುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿದೆ. ಅದರ ಪರಿಣಾಮದಿಂದ ಬಹುಕಾಲ ಮುಚ್ಚಿಗೊಂಡಿದ್ದ ದೇಶವು ಎಚ್ಚತ್ತು ಜನತೆಗೆ ತಮ್ಮ ಹಿತ ಹಾಗು ಹಕ್ಕು ಬಾಧ್ಯತೆಗಳ ಜ್ಞಾನ ಉಂಟಾಗುವಂತಾಗಿದೆ; ಉಚ್ಚ ಧ್ಯೇಯ ಮತ್ತು ಉದಾತ್ತ ತತ್ವಗಳ ಮೂಲಕ ಕಾಂಗ್ರೆಸ್ಸು ಜನತೆಯ ಸಹಾನುಭೂತಿಯನ್ನು ಪಡೆದು ದೊಡ್ಡ ಸಾಮರ್ಥ್ಯ ಉಳ್ಳದ್ದಾಗಿದೆ. ಆದಾಗ್ಯೂ ಜನತೆಯ ಸಂಪೂರ್ಣ ಹಿತಸಾಧಿಸಬೇಕಾದರೆ ಅದರ ಬಲವು ಇನ್ನೂ ಬೆಳೆಯಬೇಕಾಗಿದೆ.

ಜನತೆಯ ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವನ್ನು ದೊರಕಿಸಲು ಕಾಂಗ್ರೆಸ್ಸು ಹಲವು ದಿವಸಗಳಿಂದ ಹಲವು ವಿಧವಾಗಿ ಹೆಣಗಾಟ ನಡಿಸಿದೆ. ಹಿಂದುಸ್ಥಾನದಲ್ಲಿಯ ಸಮಸ್ತ ಸಮಾಜದ ಸಹೋದರರಿಗೆ ಹಿತ ಹಾಗು ಹಕ್ಕು ಸಿಗಬೇಕಾದರೆ ಘಟನಾ ಸಮಿತಿಯ ಹೊರತು ಇನ್ನಾವ ಯೋಜನೆಯೂ ಯೋಗ್ಯವಾದುದಲ್ಲವೆಂದು ಕಾಂಗ್ರೆಸ್ಸು ಕಂಡು ಹಿಡಿದಿದೆ. ಆದ್ದರಿಂದಲೇ ಯಾವತ್ತು ಮತದವರ ಎಲ್ಲ ಹಕ್ಕು (ಪಾಲು) ಸರಿಯಾಗಿ ಲಭಿಸುವಂತಾಗುವದೆಂದು ಎಲ್ಲ ಸಮಾಜದಲ್ಲಿಯ ಸಮದೃಷ್ಟಿಯ ಶಿಷ್ಟ ಜನರ ಅಭಿಮತವಾಗಿದೆ. ಆದ್ದರಿಂದ ಪ್ರತಿಯೊಬ್ಬರು ಕಾಂಗ್ರೆಸ ಮೆಂಬರರಾಗಿ ಕಾಂಗ್ರೆಸ ಶಕ್ತಿಯನ್ನು ಹೆಚ್ಚಾಗಿ ಬೆಳೆಸಿ ಎಲ್ಲರ ಪೂರ್ಣ ಹಿತವನ್ನು ದೊರಕಿಸಲು ಪ್ರಯತ್ನಿಸುತ್ತಿರುವ ಸಂಸ್ಥೆಯ ಕಾರ್ಯದಲ್ಲಿ ಸಹಭಾಗಿಗಳಾಗುವಂತೆ ಮಾಡಬೇಕು.

ಈ ಸಲ ಬೇಕಾದಂಥ ಕಷ್ಟವನ್ನು ಸಹಿಸುವ ಪ್ರಸಂಗ ಬಂದರೂ ಪರವಾಯಿಲ್ಲ. ಸಂಪೂರ್ಣ ಸ್ವರಾಜ್ಯಕ್ಕಾಗಿ [illegible] ಕಾಂಗ್ರೆಸ ನಡೆಸುವ ಈ ಮಹಾ ಕಾರ್ಯದಲ್ಲಿ ಕೈಕೊಳ್ಳಬೇಕಾದ ಸಹಾಯ ಮಾಡಿಯೇ ತೀರಬೇಕಾದುದು ಸರ್ವರ ಧರ್ಮವಾಗಿದೆ. ಹೆಚ್ಚು ಏನೂ ಮಾಡಲಿಕ್ಕೆ ಆಗದವರು, ಕಾಂಗ್ರೆಸ ಮೆಂಬರನಾದರೂ ಆಗಿರುವೆನೆಂದು ಎನಿಸಿಕೊಳ್ಳುವಷ್ಟು ಅಭಿಮಾನವನ್ನು ಪ್ರತಿಯೊಬ್ಬರು (ಸ್ತ್ರೀ ಪುರುಷರು) ಮನಸ್ಸಿನಲ್ಲಿ ತರುವದು ಯುಕ್ತವಾಗಿದೆ.

ಎಲ್ಲರ ಹಿತದ ದೃಷ್ಟಿಯಿಂದ ಕಾಂಗ್ರೆಸಿನ ಸಾಮಾನ್ಯ ಸದಸ್ಯರಾಗಿ ರಾಷ್ಟ್ರ ಕಾರ್ಯದ ಶ್ರೇಯಸ್ಸಿನಲ್ಲಿಯೂ ಕೀರ್ತಿಯಲ್ಲಿಯೂ ಎಷ್ಟೇ ಆಗಲಿ ಭಾಗಿಗಳಾಗುವಂತೆ ಮನಸ್ಸು ಮಾಡಬೇಕೆಂದು ಕಳಕಳಿಯ ಸೂಚನೆ ಎಂದು ಕೆ. ಪಿ. ಸಿ. ಸಿ.ಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕನ್ನಡ ಸಾಹಿತ್ಯಪರಿಷತ್ತಿನ ಬೆಳ್ಳಿ ಹಬ್ಬದಲ್ಲಿ ದಕ್ಷಿಣ ಕನ್ನಡದ ಯಕ್ಷಗಾನ ಪ್ರದರ್ಶನ

ಬೆಂಗಳೂರಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬದ ಸಮಾರಂಭದಲ್ಲಿ ಸ್ವಾಗತ ಸಮಿತಿಯವರ ಆಹ್ವಾನ ಪತ್ರಿಕೆಯ ಮೂಲಕ ದಕ್ಷಿಣ ಕನ್ನಡದಿಂದ ಹೋಗಿದ್ದ ಯಕ್ಷಗಾನ ಕೂಟದವರು ಮನ್ನಣೆ ಪಡೆದು ಮಂಗಳೂರಿಗೆ ಮರಳಿ ಬಂದಿರುತ್ತಾರೆ.

ತಾ. ೩೦—೬—೪೦ನೇ ಆದಿತ್ಯವಾರ ಬೆಂಗಳೂರಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಮಧ್ಯಾಹ್ನ ಘಂಟೆ ೪—೩೦ರಿಂದ ೬ರ ತನಕ ಕರ್ಣಾರ್ಜುನ ಕಾಳಗದ ಒಂದು ಭಾಗವನ್ನು ಪ್ರದರ್ಶಿಸಿದರು. ಸಂಗೀತ ವಿದ್ವಾನ್ ಶ್ರೀ ಮಹಾಬಲ ನ್ಯೋಂಡರ ಹಾಡುಗಾರಿಕೆ ಮತ್ತು ಕೇ. ರಾಮ ಭಟ್ಟರ ಮೃದಂಗವಾದನವು ನಡೆದಿತ್ತು. ಪಾತ್ರವರ್ಗದವರಲ್ಲಿ ಶ್ರೀಯುತರುಗಳಾದ ಕೇ. ಬಾಲಕೃಷ್ಣ ರಾವ್, ಎಡ್ವೋಕೇಟರು ಕರ್ಣ, ದೇಶಭಕ್ತ ನಾರಾಯಣ ಕಿಲ್ಲರು ಅರ್ಜುನ, ಶಂಕರನಾರಾಯಣ ಶಾಸ್ತ್ರಿ, ವಿದ್ವಾನ್ ಇವರು ಕೃಷ್ಣ ಮತ್ತು ಯಕ್ಷಗಾನಾಚಾರ್ಯರಾದ ಸುಬ್ರಾಯಾಚಾರ್ಯರು ಶಲ್ಯ ಈ ರೀತಿ ಭಾಗವಹಿಸಿದ್ದರು. ಆರಂಭದಲ್ಲೇ ಸಭೆಯು ಕಿಕ್ಕಿರಿದು ನೆರೆದಿತ್ತು. ಕೊನೆಗೆ ಸ್ಥಳಾಭಾವದಿಂದ ಕೊಂಚ ಗದ್ದಲವೂ ನಡೆದಿತ್ತು. ಹಾಗಾಗಿ ಕೆಲವರು ನಿರುತ್ಸಾಹದಿಂದ ಹೊರಟುಹೋಗಬೇಕಾಯಿತು. ಪುನಃ ಅದೇ ರಾತ್ರಿ ಧಾರವಾಡ, ಬೆಂಗಳೂರು ಮತ್ತು ಬೇರೆ ಬೇರೆ ಕಡೆಗಳ ಮಹನೀಯರೂ, ಮಹಿಳೆಯರೂ ಬಹಳವಾಗಿ ಒತ್ತಾಯಪಡಿಸಲು ಯಕ್ಷಗಾನ ಕೂಟವು ತಂಗಿದ್ದ ಸಜ್ಜನರಾಯ ಛತ್ರದಲ್ಲಿ ಸುಭದ್ರಾ ಕಲ್ಯಾಣದ ಪ್ರಥಮ ಭಾಗವನ್ನು ಅತ್ಯಂತ ಯಶಸ್ವಿಯಾಗಿ ಅಭಿನಯಿಸಿದರು. ಸಭೆಯಲ್ಲಿ ಶ್ರೀಯುತರುಗಳಾದ ಬಿ. ಎಂ. ಶ್ರೀಕಂಠಯ್ಯನವರೂ ಮುದವೀಡು ಕೃಷ್ಣರಾಯರೂ, ಸದಾಶಿವರಾವ್ ಗರುಡರೂ, ಬೆಳಗಾವಿ ರಾಮಚಂದ್ರರಾಯರೂ ಇನ್ನಿತರರೂ ಯಕ್ಷಗಾನದ ಮೂಲಕ ಸಾಹಿತ್ಯಸೇವೆಯ ನಿಜ ಮರ್ಯಾದೆಯನ್ನುಳಿಸಿ ಕೊಂಡು ಮಾಡುತ್ತಿರುವ ಸೇವೆಯು ಶ್ಲಾಘನೀಯವೆಂದೂ ಆಶ್ಚರ್ಯಕರವೆಂದೂ ತುಂಬಾ ಶ್ಲಾಘಿಸಿದರು. ಧಾರವಾಡದಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವಕ್ಕೂ, ಶಿವಮೊಗ್ಗಾ, ಚಿಕ್ಕಮಗಳೂರು ಮೊದಲಾದ ಸ್ಥಳಗಳಿಂದಲೂ ಆಹ್ವಾನವು ಬಂದಿರುತ್ತದೆ. ಇನ್ನೂ ಒಂದೆರಡು ದಿನ ನಿಲ್ಲಬೇಕೆಂದು ಒಂದೆರಡು ಪ್ರದರ್ಶನಗಳು ನಡೆಯಬೇಕೆಂದು ಬಹಳವಾದ ಒತ್ತಾಯವಿದ್ದರೂ ಸಮಯದ ಅಭಾವದಿಂದ ಕೂಟದವರು ಕೂಡಲೆ ಹೊರಟು ಬರಬೇಕಾಯಿತು. ಅತ್ಯಲ್ಪ ಕಾಲದಲ್ಲಿ ದೊರೆತ ಆಹ್ವಾನ ಪತ್ರಿಕೆಯ ಮೂಲಕ ಹೋಗಿಯೂ ಕರ್ನಾಟಕ ಎಲ್ಲಾ ಭಾಗಗಳಲ್ಲಿಯೂ ಇನ್ನೊಂದು ಪರಿಣಾಮಕಾರಿಯಾಗುವಂತೆ ಯಕ್ಷಗಾನದ ಸೇವೆಯನ್ನು ಮಾಡಿ ಬಂದದ್ದು ತುಂಬಾ ಶ್ಲಾಘನೀಯ.

ಬೆಂಗಳೂರು
ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬವು ತಾ. ೩೦ ಮತ್ತು ೧ನೆಯ ತಾರೀಕಿನ ದಿವಸ ಬೆಂಗಳೂರಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಮೈಸೂರು ಶ್ರೀ ಮನ್ಮಹಾರಾಜರವರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರು ಉತ್ಸವವನ್ನು ಪ್ರಾರಂಭಮಾಡಿದರು. ಅಖಿಲ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಅನೇಕ ಮಂದಿ ಪ್ರತಿನಿಧಿಗಳು ಬಂದಿದ್ದರು. ಶ್ರೀ ಮನ್ಮಹಾರಾಜರವರಿಗೆ ಬೆಳ್ಳಿಯ ಕರಂಡದಲ್ಲಿ ಬಿನ್ನವತ್ತಳೆಯು ಅರ್ಪಿಸಲ್ಪಟ್ಟಿತು. ಮಹಾರಾಜರು ಒಂದು ಉದಾತ್ತ ಭಾಷಣವನ್ನು ಮಾಡುತ್ತಾ ಅದರಲ್ಲಿ ಪರಿಷತ್ತು ಮಾಡುತ್ತಿರುವ ಕನ್ನಡದ ಸೇವೆಯನ್ನು ಪ್ರಶಂಸಿಸಿ 'ಮಾಧುರ್ಯಮಯವಾದ ಮಂಜುಳ ನಿನಾದದ' ಕನ್ನಡ ಭಾಷೆಯ ಅಭ್ಯುದಯ ಕಾರ್ಯದಲ್ಲಿ ತಮ್ಮ ವಂಶದಲ್ಲಿ ಹಲವರು ನೆರವಾಗಿರುವ ವಿಷಯವನ್ನು ಸ್ಮರಿಸಿ, ಕನ್ನಡ ಹಾಗೂ ಇತರ ಭಾಷೆಗಳ ತುಲನಾತ್ಮಕ ವಿಮರ್ಶೆಮಾಡಿ, ಕನ್ನಡದ ಪ್ರಾಚೀನ ವೈಭವವನ್ನು ಕೊಂಡಾಡಿ ಬೆಳವಣಿಗೆಯನ್ನು ಪ್ರಶಂಸಿಸಿ, ಕೊನೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯದ ವಿಚಾರವಾಗಿ ಹಲವು ಉಪಯುಕ್ತ ಸೂಚನೆಗಳನ್ನಿತ್ತರು. ಭಾಷೆಯಲ್ಲಿ ಸುಚಿತ್ವ ಮತ್ತು ಸರಳತೆಯಿರಬೇಕೆಂದೂ, ಹಳ್ಳಿಯ ಸಾಹಿತ್ಯವನ್ನು ಮೇಲೆತ್ತಬೇಕೆಂದೂ, ಕವನಗಳ ಮೂಲಕ ಜೀವನದ ಯೋಗ್ಯ ಮಾರ್ಗಗಳನ್ನು ಸೂಚಿಸಬೇಕೆಂದೂ ಹೇಳಿ ಸಿರಿಗನ್ನಡದ ಗೆಲವನ್ನು ಹಾರೈಸಿ ಭಾಷಣವನ್ನು ಕೊನೆಗೊಳಿಸಿದರು.

ನಾಟಕ, ನಾಟ್ಯ, ಕಾವ್ಯವಾಚನ, [illegible], ಗ್ರಂಥ ಪ್ರದರ್ಶನ ಮೊದಲಾದ ನಾನಾ ಉತ್ಸವಗಳು ಉತ್ಸಾಹದಿಂದ ನೆರವೇರಿದವು.

ಧಾರವಾಡ
ಕರ್ನಾಟಕ ಇತಿಹಾಸ ಸಂಶೋಧಕ ಮಂಡಳದ ರಜತ ಮಹೋತ್ಸವ

ಇದು ಕಳೆದ ತಾ. ೨೯ರಂದು ಶ್ರೀ ಕೆ. ಎನ್. ದೀಕ್ಷಿತ ಎಂ. ಎ., ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ ಆಲೂರು ವೆಂಕಟರಾಯರ ಭಾವಚಿತ್ರ ಅನಾವರಣ ಸಮಾರಂಭವೂ ನೆರವೇರಿತು. "ಜೈನ ಧರ್ಮ ಮತ್ತು ಕರ್ನಾಟಕ ಸಂಸ್ಕೃತಿ" (ಪ್ರೊ. ಎಸ್. ಆರ್. ಶರ್ಮ) ಮತ್ತು "ಕನ್ನಡ ನಾಡಿನ ಕಥೆಗಳು" (ಶ್ರೀ ನಾರಾಯಣ ಶರ್ಮ) ಈ ಎರಡು ರಜತ ಮಹೋತ್ಸವ ಗ್ರಂಥಮಾಲೆಯ ಪುಸ್ತಕಗಳು ಅಧ್ಯಕ್ಷರ ಹಸ್ತದಿಂದ ಪ್ರಕಟಿಸಲ್ಪಟ್ಟವು.

ಮೈಸೂರು
ಕಾಂಗ್ರೆಸ್ಸು ಮುಖಂಡರು ವಕೀಲರಾಗಲು ಅನರ್ಹರೇ?

'ಸತ್ಯವು ಈ ದೇಶದಲ್ಲಿ ಒಂದು ರಾಜಕೀಯ ಘೋಷಣೆಯ ಮಟ್ಟಕ್ಕಿಳಿದಿದೆ. ಅಲ್ಲದೆ ಪ್ರತಿವಾದಿಗೆ (ಶ್ರೀ ಎಚ್. ಸಿ. ದಾಸಪ್ಪನವರು) ಅದರ ಪೂಜ್ಯಭಾವನೆಯೇ ಇಲ್ಲದಂತಾಗಿದೆ' ಹೀಗೆಂದು ಜಸ್ಟಿಸ್ ನಾಗೇಶ್ವರ ಅಯ್ಯರವರ ವಿಚಾರಣೆಯ ಬಗ್ಗೆ ಅಸಹಕಾರ ನಿರ್ಧಾರ ಮಾಡಿದ ಕುರಿತು ಶ್ರೀ ಎಚ್. ಸಿ. ದಾಸಪ್ಪನವರ ಮೇಲೆ ಮೊಕದ್ದಮೆಯಾಗಿ ಅವರು ವಕೀಲಿ ವೃತ್ತಿಯಲ್ಲಿರಲು ಅನರ್ಹರೆಂದೂ, ಅವರು ಸಂಸ್ಥಾನದ ಯಾವ ಕೋರ್ಟಿನಲ್ಲಿಯೂ ಪ್ರಾಕ್ಟೀಸ್ ಮಾಡದಂತೆ 'ಡಿಬಾರ್' ಮಾಡಲಾಗಿದೆಯೆಂದೂ, ಅವರ ಹೆಸರನ್ನು ವಕೀಲರ ಪಟ್ಟಿಯಿಂದ ತೆಗೆದು ಹಾಕಲಾಗಿದೆಯೆಂದೂ ಚೀಫ್ ಜಸ್ಟಿಸ್ ಸರ್ ಡಾರ್ಸಿ ರೈಲಿಯವರು ತೀರ್ಪು ಬರೆದಿರುವರು.

ಶ್ರೀ ದಾಸಪ್ಪನವರು ಒಂದು ಹೇಳಿಕೆಯನ್ನು ಕೊಡುತ್ತಾ ಅದರಲ್ಲಿ ಜಸ್ಟಿಸ್ ನಾಗೇಶ್ವರಯ್ಯನ ವಿಚಾರಣೆಯಲ್ಲಿ ಸಹಕರಿಸದಿರುವ ವಿಷಯವು ಲೀಗಲ್ ಪ್ರಾಕ್ಟೀಶನರ್ ಆಕ್ಟಿನ ಪ್ರಕಾರ ಈಗ ಬಂದಿರುವ ಕೇಸಿಗೆ ಸಂಬಂಧಿಸಿದ್ದಲ್ಲವೆಂದೂ ಮಹಾತ್ಮಾ ಗಾಂಧಿಯವರ ಸಲಹೆಯಂತೆ ಆಗ್ಗೆ ಆ ವಿಚಾರಣೆಯಲ್ಲಿ ಅಸಹಕಾರ ಮಾಡಲಾಗಿತ್ತೆಂದೂ ತಿಳಿಸಿ ಆಗ ಸಹಕರಿಸದಿದ್ದ ಕುರಿತು ಕಾರಣಗಳನ್ನು ಕೊಟ್ಟು ವಿವರಿಸಿರುವರು.

ತುಮಕೂರಿನ ಪ್ರಮುಖ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಟಿ. ಸುಬ್ರಹ್ಮಣ್ಯಂ ಇವರಿಗೂ [illegible] ಬಗ್ಗೆ ಶಿಕ್ಷೆಯಾಗಿ, ಅವರೂ ಸಂಸ್ಥಾನದಲ್ಲಿ ೬ ತಿಂಗಳ ವರೆಗೆ ವಕೀಲಿಯನ್ನು ಮಾಡಬಾರದಾಗಿ ಹೈಕೋರ್ಟಿನ ತೀರ್ಪಾಗಿದೆ.

ಅಂತೂ ದೇಶಸೇವೆ ಮಾಡುವ ವಕೀಲರ ಮೇಲೆ ಮೈಸೂರು ಸರಕಾರವು ಹೀಗೆ ಗದಾಪ್ರಹಾರ ಮಾಡತೊಡಗಿದೆ.

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 116/1940.

ಲಕ್ಷ್ಮಿ ಅಮ್ಮಾ ಗಂ. ಕುಂಞಾಕೋರನ್ನಾರ ವಿಧವೆ ಕೊಳತ್ತೂರು ಗ್ರಾಮದ ಬರಿಕ್ಕಳದಲ್ಲಿರುವವಳು. } ಅರ್ಜಿದಾರಳು

ಮತ್ತು

(1) ಕಣ್ಣನ್ನಾರ (2) ಕೃಷ್ಣನ್ನಾರ (3) ಕುಂಞಮ್ಮನ್ನಾರು (4) ಕುಂಞಂಬು ನ್ನಾರ (5) ನಾರಾಯಣ ನ್ನಾರ } ಕುಂಞಂಬು ನ್ನಾರ ಅವರ ಮಕ್ಕಳು ನಂ. 3ನೇಯವಳು ಕೂಳಕ ಕುಂಞಂಬು ನ್ನಾರ ಹೆಂಡತಿ } ಪ್ರತಿವಾದಿಗಳು

ಎಲ್ಲರೂ ಕೊಳತ್ತೂರು ಗ್ರಾಮದ ಬರಿಕ್ಕಳದಲ್ಲಿರುವವರು. ಇವರೊಳಗೆ-

ಮೇಲ್ಕಂಡ ಅರ್ಜಿದಾರಳ ಗಂಡ ಇತ್ತೀಚೆಗೆ ಮೃತಪಟ್ಟ ಕೆ. ಕುಂಞಾಕೋರನ್ನಾರ ಬಾಬ್ತು "ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್"ನ ನಂಬ್ರ 579475ನೇ ಪೋಲೀಸಿಯ ಬಾಬ್ತು ಸದ್ರಿ ಕಂಪೆನಿಯಿಂದ ಬರಾ ರೂಪಾಯಿ 2072ನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 19-7-40ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಖೆಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ತಾರೀಕಿನ ಹಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳಬಹುದೆಂಬ ಸಂಗತಿ ಈ ಮೂಲಕ ತಿಳಿಸಲಾಗಿರುವುದು.

ಕಾಸರಗೋಡು ತಾ. 6—7—40. } C. M. Kamath ಅರ್ಜಿದಾರಳ ಕಡೆ ವಕೀಲ್.

ವಿಚಿತ್ರ-ಪ್ರಪಂಚ

ಕಂಠನಾಳ ಕಚ್ಚಿದ ಅದ್ಭುತ ಮನುಷ್ಯ!

ಅಮೇರಿಕದಲ್ಲಿ ವಿಚಿತ್ರ ಸಂಗತಿಗಳು ನಡೆಯುತ್ತವೆ. ಆದರೆ ಇಂಥ ಒಂದು ಅದ್ಭುತವು ಇದಕ್ಕೆ ಮೊದಲು ಯಾವಾಗಲೂ ನಡೆದಿರುವುದಿಲ್ಲ. ಅಲ್ಲಿಯ ಒಂದು ಜೀವ ವಿಮಾ ಕಂಪೆನಿಯು ಪ್ರಕಟಿಸಿರುವ ಪ್ರಕಾರ ಒಬ್ಬ ಆಟಗಾರನು ತನ್ನ ಹಲ್ಲುಗಳಿಂದಲೇ ತನ್ನ ಕಂಠನಾಳವನ್ನು ಕಡಿದು ಗಾಯಗೊಂಡಿರುವನು. ಅದು ಹೇಗೆ ಸಾಧ್ಯವೆಂದು ನೀವು ಆಶ್ಚರ್ಯ ಪಡಬಹುದು. ಅವನು ಒಂದು ದಿನ ಟೆನಿಸ್ ಆಡಲಿಕ್ಕೆ ಹೋಗಿದ್ದ. ಆಡುತ್ತಿರುವಾಗ ಕಾಲುಜಾರಿ ಅಂಗಾತ ಬಿದ್ದ. ಬೀಳುವಾಗ ಹೆದರಿ ಅವನ ಬಾಯಿ ತೆರೆದೇ ಇತ್ತು. ಅದನ್ನು ಅವನಿಗೆ ಮುಚ್ಚಲಿಕ್ಕಾಗಲಿಲ್ಲ. ಬಾಯೊಳಗಿದ್ದ ಕೃತ್ರಿಮ ಹಲ್ಲುಗಳ ಸಾಲು ಜಾರಿ ಕಂಠವನ್ನು ಸೇರಿಕೊಂಡಿತು. ಕೆಳಗಿಳಿಯುತ್ತಿರುವಾಗ ಒಂದಕ್ಕೊಂದು ಒತ್ತಿಕೊಂಡು ಹಲ್ಲುಗಳ ಆ ಸಾಲು ಮುರಿದು ಹೋಯಿತು. ಹಲ್ಲುಗಳು ಕಂಠವನ್ನು ಕಡಿದವು. ಈ ರೀತಿಯಲ್ಲಿ ತನ್ನ ಹಲ್ಲುಗಳಿಂದಲೇ ಆ ಮನುಷ್ಯ ತನ್ನ ಕಂಠವನ್ನು ಕಚ್ಚಿದ!

ಕಾವಲಿಗೆ ಅರ್ಧ ನಗ್ನ ಮನುಷ್ಯರು!

ಅಂಗಡಿಗಳಿಗೆ ಬರುವ ಗಿರಾಕಿಗಳ ಮನಸ್ಸನ್ನು ಆಕರ್ಷಿಸಲಿಕ್ಕೆ [illegible]ಯಲ್ಲಿ ಅರ್ಧ ನಗ್ನ ಮಹಿಳೆಯರು ವ್ಯಾಪಾರ ಮಾಡಲಿಕ್ಕೂ ಕಾವಲಿಗೂ ಇರುತ್ತಾರೆಂಬ ವಾರ್ತೆಯನ್ನು ನೀವು ಕೇಳಿರಬಹುದು. ಆದರೆ ಅಮೇರಿಕದಲ್ಲೀಗ ಅರ್ಧ ನಗ್ನ ಪುರುಷರು ಮಹಿಳೆಯರ [illegible] ಕೆಲಸಕ್ಕೆ ಬರಲಾರಂಭಿಸಿದ್ದಾರೆ. ಟೆಕ್ಸಸ ಜಿಲ್ಲೆಯ ಡಲ್ಲಸ ಎಂಬಲ್ಲಿ [illegible] ಬದಿಯಲ್ಲಿ ಒಬ್ಬನು ಒಂದು ಹೋಟೇಲನ್ನು ಇಟ್ಟು ಕಾಲಯಾಪನೆ ಮಾಡುತ್ತಿದ್ದ. ರೂಢಿಯಂತೆ ಅಲ್ಲಿಯೂ ಅರ್ಧ ನಗ್ನ ಯುವತಿಯರು ಗಿರಾಕಿಗಳನ್ನು ಎದುರುಗೊಂಡು ತಮ್ಮ ರೂಪ ಯೌವನಗಳಿಂದ ಅವರನ್ನು ಸತ್ಕರಿಸಲಿಕ್ಕೆ ಸಿದ್ಧರಾಗಿ ಇರುತ್ತಿದ್ದರು. ಆದರೆ ಅಲ್ಲಿಗೆ ಊಟಕ್ಕೆ ಹೋಗುತ್ತಿದ್ದ ಒಬ್ಬ ಶಾಲಾ ಉಪಾಧ್ಯಾಯಿನಿ ಶ್ರೀಮತಿ ಎಚ್. ಎಲ್. ಹಂಗರಫರ್ಡ ಎಂಬವಳಿಗೆ ಈ ಅರ್ಧ ನಗ್ನ ಯುವತಿಯರನ್ನು ನೋಡಿ ನೋಡಿ ಸಾಕಾಯಿತೆಂದು ಮಾಲೀಕನಲ್ಲಿ ದೂರಿಟ್ಟಳು. ಹೀಗೆ ಅರ್ಧ ನಗ್ನ ಯುವತಿಯರನ್ನು ನೋಡಿ ಬೇಸರಗೊಂಡ ಮಹಿಳೆಯರ ಮನಸ್ಸನ್ನು ಸಂತೋಷಪಡಿಸುವುದಕ್ಕೋಸ್ಕರ ಹೋಟೇಲಿನವನೊಂದು ಹೊಸ ಉಪಾಯವನ್ನು [illegible]ಕೊಂಡಿರುವನು. ಅವನೀಗ ತನ್ನ ಹೋಟೇಲಿನ ಎದುರುಗಡೆ ಒಂದು ಬದಿಯಲ್ಲಿ ಅರ್ಧ ನಗ್ನ ಯುವತಿಯನ್ನೂ ಇನ್ನೊಂದು ಬದಿಯಲ್ಲಿ ಅರ್ಧ ನಗ್ನ ಯುವಕನನ್ನೂ ಕಾವಲಿಗೆ ಇಟ್ಟಿರುತ್ತಾನೆ. ಹೋಟೇಲಿಗೆ ಬರುವ ಮಹಿಳೆಯರು ಅರ್ಧ ನಗ್ನ [illegible] ಅರ್ಧ ನಗ್ನ [illegible] ಸತ್ಕರಿಸಿಕೊಂಡು ತಮ್ಮ ಮನಸ್ಸನ್ನು [illegible] [illegible] ತೀವ್ರದಲ್ಲಿ [illegible] ಯಾಗಿದೆ!

ಪ್ರಪಂಚದ ಮಹಾ ಮೋಸಗಾರ!

ಜಗತ್ತಿನ ಮಹಾ ಮೋಸಗಾರನೆಂದು ಪ್ರಸಿದ್ಧನಾದ ಡಾಕ್ಟರ್ [illegible] ಈಗ ಮೃತ್ಯುವಶನಾಗಿ[illegible]. ಅವನ ಪೂರ್ಣ ಹೆಸರ ಡಾಕ್ಟರ್ ಫೆಡರಿಕ್ ಕುಕ್ [illegible] ಎಲ್ಲರಿಗಿಂತ [illegible] ಉತ್ತರ ಧ್ರುವವನ್ನು [illegible] ಅವನು ಸುಳ್ಳು ಹೇಳಿ ಕೆಲವು ದಿನಗಳ ತನಕ ಇಡೀ [illegible] ವಂಚಿಸಿದ್ದನು. ಹದಿನೆಂಟು ತಿಂಗಳುಗಳ ತನಕ ಅಜ್ಞಾತನಾಗಿ ಇದ್ದ ಬಳಿಕ ಒಂದು ದಿನ ಈ ಮಹಾಶಯನು ಕೋಪನ್ ಹೇಗನ್ ನಗರದಲ್ಲಿ ಕಾಣಿಸಿಕೊಂಡು ತಾನೇ ಪ್ರಥಮತ ಉತ್ತರ ಧ್ರುವವನ್ನು ಕಂಡುಕೊಂಡೆನೆಂದನು. ಆತನ ಮಾತುಗಳನ್ನು ಸತ್ಯವೆಂದು ನಂಬಿ ವಿದ್ವನ್ಮಂಡಲಿ ಅವನಿಗೆ ಉಡುಗೊರೆ ಬಹುಮಾನಾದಿಗಳನ್ನು ಕೊಟ್ಟು ಪುರಸ್ಕರಿಸಿತು. ಆದರೆ ಕೆಲವು ದಿನಗಳ ತರುವಾಯ ಕೆಪ್ಟನ್ ಪ್ಯಾರಿ ಎಂಬಾತನು ಬಂದು ತಾನು ಉತ್ತರ ಧ್ರುವಕ್ಕೆ ಹೋದಾಗ, ತನ್ನ ಮೊದಲು ಬೇರೆ ಯಾರೂ ಅದನ್ನು ಮುಟ್ಟಿದ್ದ ಯಾವ ನಿಶಾನೆಯೂ ಅಲ್ಲಿರಲಿಲ್ಲವೆಂದೂ ಆದುದರಿಂದ ಉತ್ತರ ಧ್ರುವವನ್ನು ಕಂಡು ಹಿಡಿದವರಲ್ಲಿ ತಾನು ಮೊದಲಿಗನೆಂದೂ ಸಾರಿದನು. ಉತ್ತರ ಧ್ರುವವನ್ನು ಕಂಡು ಹಿಡಿದವರಲ್ಲಿ ಯಾರು ಮೊದಲಿಗರೆಂಬ ಕುರಿತು ದೊಡ್ಡ ವಾಗ್ವಾದವು ನಡೆಯಿತು. ಕೊನೆಗೆ ತನ್ನೊಂದಿಗೆ ಒಯ್ದಿದ್ದ ಇಬ್ಬರು ಎಸ್ಕಿಮೋ ಕೂಲಿಗಳನ್ನು [illegible] ಎಂದು [illegible] ಹೇಳಿದನು. ಆದರೆ ಆ ಎಸ್ಕಿಮೋ[illegible] [illegible] ತೆರೆದು [illegible] ಆಗ ಆದೇ [illegible] ವೃದ್ಧಾಪ್ಯದ [illegible] ಇದ್ದು ಈಗ ಮರಣ [illegible].

ಶ್ರೀಮಂತರ ಸಭೆಯಲ್ಲಿ ೮ ಮಂದಿ ಸದಸ್ಯರು!

[illegible] ಹಿಂದೆ ಕೂಡಿದ ಒಂದು ಸಭೆಯಲ್ಲಿ ೮ ಮಂದಿ ಶ್ರೀಮಂತರು ಹಾಜರಿದ್ದರಂತೆ. ಈ ಸಭೆಯಲ್ಲಿರುವ ಒಟ್ಟು ಸದಸ್ಯ-ಶ್ರೀಮಂತರ ಸಂಖ್ಯೆ ೯೬೦. ಆದರೆ ಸಭೆಗೆ ಬಂದವರು ೮ ಮಂದಿ! ಇವರೂ ಕೂಡ ಸಭೆಯಲ್ಲಿ ಒಂದು ಮಿನುಟಿಗಿಂತ ಹೆಚ್ಚು ಸಮಯ ಕುಳಿತಿರಲಿಲ್ಲ! ಸರಕಾರವು ಯಾವ ಹೇಳಿಕೆಯನ್ನೂ ಕೊಡುವುದಿಲ್ಲವೆಂದು ಆಗ ಗೊತ್ತಾದುದರಿಂದ ಅವರು ಬಂದ ಹಾಗೇ ಹಿಂದಿರುಗಿದರು. [illegible] ೮ ಮಂದಿಯ ಹಾಜರಿ! ಅದ್ಭುತ ಹಾಜರಿ ಅಲ್ಲವೆ?

ಮೂರು ಜಿಲ್ಲೆಗಳಲ್ಲಿ ಒಂದು ಮನೆ!

ಅಮೇರಿಕದ ಮೂರು ಜಿಲ್ಲೆಗಳಲ್ಲಿ ಟೋಮ್ ಸ್ಮಿತ್ ಎಂಬಾತನು ತನ್ನ ವಾಸ್ತವ್ಯದ ಒಂದು ಮನೆಯನ್ನು ಕಟ್ಟಿಸಿರುವನು. ಈ ಮನೆ ಮೂರು ಜಿಲ್ಲೆಗಳ [illegible] ಗಡಿಗಳ ಕೇಂದ್ರದಲ್ಲಿದೆ. ಅವನು [illegible] ಅವನ ತಲೆ [illegible] ದಕ್ಷಿಣ [illegible] ಊಟ, [illegible] ಆಗುತ್ತದೆ.

HALFTONE & LINE BLOCK MAKING UNDERTAKEN

Sharada Press
MANGALORE

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

PHYSICAL FITNESS
is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ.

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, – ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಆ ಕಾಲ, ಭಾರತ ರಾಷ್ಟ್ರಸಭೆಯ ಕಾರ್ಯದರ್ಶಿಗಳಾಗಿ ಹಲವು ಕಾಲ ಕೆಲಸ ಮಾಡಿದ ರಾಜಾರಾಯರ ಹೆಸರನ್ನು ಅನೇಕರು ಕೇಳಿರಬಹುದು; ಆದರೆ ಅವರ ದಿವ್ಯ ವ್ಯಕ್ತಿತ್ವವನ್ನು ಅರಿತುಕೊಂಡವರು ತೀರ ಕಡಿಮೆ ಜನರು. ರಾಜಾರಾಯರಂತಹ ಜೀವಿಗಳು ಬೆಳಗಿಸಿದ ಆತ್ಮಜ್ಯೋತಿಗಳು, ಮಾನವಕೋಟಿಗಾಗಿ ಹಚ್ಚಿದ ಹಣತೆಗಳು.

ಜೀವನಜ್ಯೋತಿಗಳು:

★ ಬಾರು ರಾಜಾರಾವ್ ★

"ಹರಿಟಿಮಲ್ಲ"

'Rajarao, it seems you have topped the polls'—ಏನು ರಾಜಾರಾವ್ ಚುನಾವಣೆಯಲ್ಲಿ ನೀನು ಎಲ್ಲರಿಗಿಂತ ಮೇಲೆ ಬಂದೆಯಂತೆ!—ಎಂದು ಒಮ್ಮೆ ಸರಸವಾದ ಮಾತಿನಲ್ಲಿ, ೧೯೩೭ರ ಕಾಂಗ್ರೆಸ್ ಚುನಾವಣೆಗಳ ಕಾಲದಲ್ಲಿ ಆಂಧ್ರ ನಾಯಕರ ಗುಂಪಿನಲ್ಲಿದ್ದ ಸಾಮಾನ್ಯ ವ್ಯಕ್ತಿಯೊಬ್ಬರನ್ನು ಮುಗುಳುನಗೆ ನಗುತ್ತ ಅಭಿನಂದಿಸಿದರು. ಆ ಕಾಲದಲ್ಲೇ ಹಿಂದುಸ್ಥಾನದ ಕಣ್ಣಿಗೆ ಬಾರು ರಾಜಾರಾವು ಬಿದ್ದುದು. ಅಂಧ್ರರಾದರೂ ಅಷ್ಟು ಬೇಗನೇ ಅವರನ್ನು ಗುರುತಿಸಿಕೊಂಡುದು.

ಪ್ರತ್ಯಕ್ಷವೇ ಪ್ರಮಾಣವೆಂಬ ಚಾರ್ವಾಕ ಸಿದ್ಧಾಂತವು ವೇದಾಂತದಲ್ಲಿ ಅಲ್ಲಗಳೆಯಲ್ಪಟ್ಟಿದ್ದರೂ, ವ್ಯವಹಾರದಲ್ಲಿ ಮಾತ್ರ ಅದರದೇ ಏಕಚಕ್ರಾಧಿಪತ್ಯ. ಜನರಿಗೆ ಎಲ್ಲಕ್ಕಿಂತ ಕಣ್ಣೇ ಪ್ರಧಾನವಾದ ಇಂದ್ರಿಯ. ಗುಣಕ್ಕಿಂತ ರೂಪಕ್ಕೇ ಬೆಲೆ ಕೊಡುವ ಬುದ್ಧಿಗೆ ಇದೇ ಮೂಲ. ಅದರಲ್ಲೂ ಪರಸ್ಪರ ಗುಣಗ್ರಹಣದ ಸಂದರ್ಭವಾದರೆ ಸರಿ, ಆಸೆಯು ಕಣ್ಣೇ ನಮ್ಮದು. ಆ ಮಾತಿಗೆ ಬಂದರೆ, ನಮ್ಮ ಕಣ್ಣು ಕಿರಿದಿದ್ದಷ್ಟೇ ಬುದ್ಧಿಯೂ ಮಿದಡು. ನಾಟಕರಂಗದಲ್ಲಿ ನಿಂತು ಗೆಜ್ಜೆಗಾಲಿನಲ್ಲಿ ಕುಣಿವ ನಟಿಯನ್ನು ನಾವು ತಿಳಿದುಕೊಂಡಂತೆ ಸೂತ್ರಧಾರನನ್ನು ಅರಿತುಕೊಳ್ಳುತ್ತೇವೆಯೆ? ಪವಾಡವ ಮೆರೆಯಿಸುವ ತನಕ ಯಾವ ಭಕ್ತನನ್ನು ನಾವು ಒಪ್ಪಿದ್ದೇವೆ?

ಬಾರು ರಾಜಾರಾವು ಈ ಸೂಕ್ತಕ್ಕೆ ಸರಿಯಾದ ಸಾಕ್ಷಿ. ೧೯೨೦ರಿಂದ ೧೯೩೬ರ ವರೆಗೆ ಅವಿಚ್ಛಿನ್ನವಾಗಿ ಅವರು ಕಾಂಗ್ರೆಸ್ಸಿಗೆ ಸಹಾಯಕ ಕಾರ್ಯದರ್ಶಿಯಾಗಿಯೋ, ಅಂತು ಕಾಂಗ್ರೆಸ್ಸಿನ ಮುಖ್ಯ ಕಾರ್ಯಾಲಯದ ಸೂತ್ರಗಳನ್ನು ತಮ್ಮ ಕೈಯಲ್ಲಿ ಹಿಡಿದಿದ್ದರು. ಅಷ್ಟು ದೀರ್ಘ ಕಾಲ ಅದನ್ನು ತಮ್ಮದೇ ಗುತ್ತಿಗೆ ಮಾಡಿರುವುದು ಸಣ್ಣ ಮಾತಲ್ಲ, ಹಗುರಾದ ಕೆಲಸವಲ್ಲ. ಇದರಲ್ಲೂ ಆ ಹದಿನಾರು ವರ್ಷದ ಕಾಂಗ್ರೆಸ್ಸಿನ ಇತಿಹಾಸ ಸಾಧಾರಣವಾದುದಲ್ಲ. ಅದೊಂದು ಹಿಂದು ಮುಂದು ಇಲ್ಲದ ಕೋಲಾಹಲದ ರಣಕೇಳಿ; ಅತಿರಥ ಮಹಾರಥರು ಕಾಂಗ್ರೆಸ್ಸಿನ ರಥವನ್ನೇರಿ ತಮತಮಗೆ ತೋರಿದತ್ತ ನಡೆಯಿಸಿದರು. ಇವರೆಲ್ಲರ ಉತ್ಸಾಹ ಉದ್ರೇಕಗಳ ಗದ್ದಲದಲ್ಲಿ, ರಥವನ್ನು ಮುರಿಯದೆ ಮಣ್ಣಾಗದೆ ಕಾಪಾಡುತ್ತ ಅವರವರಿಗೆ ನೆರವಾಗುವ ಸಾರಥ್ಯ ಬಲು ಬಿಗುವಿನ ಕೆಲಸವೇ ಸರಿ. ರಾಜಾರಾಯರು ಆ ಸಾಹಸವ ಮಾಡಿ ಗೆದ್ದ ಧೀರರು. ಆ ಶ್ರದ್ಧೆ, ಆ ಸ್ಥೈರ್ಯ ಭಾರತೀಯರೆಲ್ಲರೂ—ಮುಖ್ಯವಾಗಿ ಕಾಂಗ್ರೆಸ್ಸು ಪ್ರೇಮಿಗಳೆಲ್ಲ—ಮೆಚ್ಚಿಸಬೇಕಾದ ಸಾಲ ತೀರಲಾರದಂಥದ, ಅಮರವಾದುದು.

ಆ ಹದಿನಾರು ವರ್ಷದಲ್ಲಿ ಅವರಿಗೆ ಪರಿಚಯವಾಗದ ನಾಯಕರಿಲ್ಲ. ಅವರು ಕಾಣದ ವಿಶೇಷ ಪ್ರಸಂಗವಿಲ್ಲ. ಪಂಡಿತ ಮದನ ಮೋಹನ ಮಾಳವೀಯರ ಪವಿತ್ರ ವರ್ತನೆ, ಮೋತಿಲಾಲರ ಅಖಂಡ ವೈಭವ, ಚಿತ್ತರಂಜನ ದಾಸರ ತ್ಯಾಗ ಜೀವನ, ಜವಹರಲಾಲರ ಧೀರೋದಾತ್ತತೆ, ವಲ್ಲಭಭಾಯಿಯ ಚತುರೋಪಾಯ ಸಮರ್ಥತೆ,—ಎಲ್ಲಕ್ಕಿಂತ ಹಿರಿದಾಗಿ ಗಾಂಧೀಜಿಯ ಪ್ರಶಾಂತ ರಮಣೀಯ ಜೀವನ—ಎಲ್ಲದರ ಅನುಭವವು ಅವರಿಗೆ ಆಯಿತು. ಎಲ್ಲರ ಅಭಿಮಾನ ಆದರಗಳೂ ದೊರೆತಿದ್ದುವು. ಮೋತಿಲಾಲರಿಗಂತೂ ರಾಜಾರಾವು ಮನೆಯ ಮಂದಿ ಅಷ್ಟು ಅಭಿಮಾನ. 'Raja-Rao is the power behind the throne'—ಈ ಸಿಂಹಾಸನದ ಆಧಾರ ಶಕ್ತಿ ರಾಜಾರಾವೇ—ಎನ್ನುತ್ತಿದ್ದರಂತೆ ಅವರು.

ಹೀಗಿದ್ದರೂ ರಾಜಾರಾವು ಚುನಾವಣೆಗೆ ನಿಂತರೆ ಸ್ಪರ್ಧೆ ತಪ್ಪಲಿಲ್ಲ. ಇತರ ದೇಶಗಳಲ್ಲಿ ಇಂಥ ತ್ಯಾಗಕ್ಕೆ ಆ ರೀತಿಯ ಗೌರವ ಮುಡಿಪಾಗಿ ಸಲ್ಲುತ್ತಿತ್ತು. ನಮ್ಮದು ಏನೆಂದರೂ ಭಾರತದೇಶ, ಧರ್ಮಭೂಮಿ. ರಾಜಾರಾವನ್ನು ಶಾಸನಸಭೆಗೆ ಹುರಿಯಾಳಾಗಿ ಕಳುಹಬೇಕೆಂದ ಕಾಂಗ್ರೆಸ್ ನಾಯಕರು ಕೇಳಲಿಲ್ಲ. ರಾಜಮಹೇಂದ್ರದ ಮುಂದಾಳುಗಳು ಕೆಲವು ಜನ ಹಾಗೆ ಮಾಡಿರೆಂದ ಪಟೇಲರಿಗೆ ಬಿನ್ನಹ ಕಳಿಸಬೇಕಾಯಿತು. [illegible] ಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳು ಇವರ ೧೬ ವರ್ಷದ ಸೇವೆಯನ್ನೇ ಒಂದು ಕೊರತೆಯಾಗಿ [illegible] ಅರ್ಥ ಮಾಡಿದರ. 'ಬಹಳ ಕಾಲದಿಂದ ಅವರು ಪ್ರಾಂತ್ಯದಲ್ಲಿರಲಿಲ್ಲ. ಅವರಿಗೆ ತಲೆಗೇಸ್‌ಯಾಗಿ ಬಾರದ' ಎಂದರು. ಒಬ್ಬ ಗಾಂಧಿಯನಿಗೆ ಹೊಸರಿನಲ್ಲಿ ಕೂಡಾ ಕಲ್ಲೇ 'ಇವರನ್ನು ನಿಲ್ಲಿಸಿದ ದೇನೋ ಆದ ಪಂ [illegible] ಇದ್ದರೆ [illegible] ಇಲ್ಲೋ. ಇವರನ್ನು ಯಾರೂ ಎಲ್ಲಿ ಅರಿಯರಲ್ಲ [illegible] ಕಾಂಗ್ರೆಸ್ಸು ಕಾರ್ಯಕರ್ತರಿಗೂ [illegible]

ಅದು ನಿಜ, ಚುನಾವಣೆಗೆ ಮೊದಲು ಒಂದೆರಡು ಪ್ರಸಂಗ ನಡೆಯದೆ ಇದ್ದರೆ ಆ ಹೆದರಿಕೆ ಹಣ್ಣೇ ಆಗಬಹುದಾಗಿತ್ತೋ ಏನೋ! ರಾಜಮಹೇಂದ್ರಕ್ಕೆ ಆ ನಡುವೆ ಜವಾಹರಲಾಲರು ಬಂದರು. ಅವರು ಬಂದಾಗ ವಿಶಾಲವಾಗಿರಲೆಂದು ಕಾಂಗ್ರೆಸು ಸಮಿತಿಯವರು ಅಲ್ಲಿಯ ಕಾಗದದ ಕಾರಖಾನೆಯ ಯಜಮಾನನಾದೊಬ್ಬ ಜಮೀನುದಾರನ ಮನೆಯಲ್ಲಿ ಬಿಡಾರಕ್ಕೆ ಏರ್ಪಾಡು ಮಾಡಿದರು. ರೈಲಿನಿಂದ ಇಳಿದವರೇ ಜವಾಹರರು ಬಿಡಾರದ ಸುದ್ದಿ ವಿಚಾರಿಸಿದರು. ಇದು ಕೇಳಿ, 'ರಾಜಾರಾವು ಈ ಊರಲ್ಲೇ ಅಲ್ಲವೇ ಇರುವುದು?' ಎಂದು ಕೇಳಿದರಂತೆ. ಹೌದೆಂದು ಯಾರೋ ಹೇಳಿದರು. 'ಹಾಗಾದರೆ ಅಲ್ಲೇಕೆ ಇಳಿಯುವ ಏರ್ಪಾಡು ಮಾಡಲಿಲ್ಲ?' ಒಂದು ಮತ್ತೆ ಕೇಳಿದರು. 'ಅವರ ಮನೆಯಲ್ಲಿ ಸ್ಥಳ ಬಹಳ ಸಂಕೋಚ. ತಮಗೆ ಅಸೌಕರ್ಯವಾದೀತೇನೋ ಎಂದು ಹೀಗೆ ಮಾಡಿದೆ' ಎಂದು ಏರ್ಪಾಟು ಮಾಡಿದ್ದವರು ಹೇಳಿ ಕೂಡಲೇ ಜವಾಹರರು ತೀವ್ರತೆಯಿಂದ 'ಇದ್ದಷ್ಟೇ ಸ್ಥಳ ಸಾಕು ನನಗೆ. ರಾಜಾರಾವೇ ತನ್ನ ಮನೆಯಲ್ಲಿ ಸ್ಥಳವಿಲ್ಲೆಂದರೆ ನೋಡೋಣ. ಇಲ್ಲದಿದ್ದರೆ ನಾನ ಅಲ್ಲೇ ಇಳಿಯುತ್ತೇನೆ'—ಎಂದರಂತೆ. ರಾಜಾರಾವು ಈ ಅಭ್ಯಾಗತನನ್ನು ಬೇಡವೆಂದಾರೆ? ಇಬ್ಬರೂ ಒಂದು ಓರಗೆಯವರು. ಬಹಳ ಕಾಲ ಒಟ್ಟಿಗೆ ಕೆಲಸ ಮಾಡಿದವರು. ಒಂದೇ ಕುಟುಂಬದವರಂತೆ ಇದ್ದವರು.

ಕೆಲವು ದಿನದ ಮೇಲೆ ಸರೋಜಿನಿ ಅಲ್ಲಿಗೆ ಬಂದರು. ಊರಲ್ಲಿ ಸಭೆ ಸೇರಿತು. ರಾಜಾರಾವು ಊರಲ್ಲಿರಲಿಲ್ಲ. ಓಟಿನ ಬೇಟೆಗೆ ಬಿಜಯಂಗೈದಿದ್ದರು. ಆ ಸಭೆಯಲ್ಲಿ ಸರೋಜಿನಿ ಅವರನ್ನು ಹೊಗಳಿದ ದು ಉತ್ಪ್ರೇಕ್ಷೆಯೇನೋ ಎಂಬ ಹಾಗಿತ್ತು.

೧೬ನೆಯ ಪುಟಕ್ಕೆ ಮುಂದುವರಿಯುವುದು.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ-ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ಸೊಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುತ್ತದು, ಶ್ರೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು, ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೩ ಔ., ೬ ಔ. ಮತ್ತು ೧೨ ಔ. ಬಾಟ್ಲಿಗಳಲ್ಲಿ ಕ್ರಮವಾಗಿ ರೂ.೨-೨-೦, ೩-೧೨-೦ ಮತ್ತು ೬-೮-೦ಗಳಿಗೆ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.



ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರಿ

★ ಸಿನಿಮಾ ಪುಟ ★

ದೇವಿಕಾರಾಣಿ ಪತಿಯ ಕಾರ್ಯವನ್ನೇ ಮುಂದುವರಿಸುವಳು

ಭಾರತದ ಪ್ರಸಿದ್ಧ ನಟಿಯಾದ ದೇವಿಕಾರಾಣಿಯು ತನ್ನ ಪತಿ ಹಿಮಾಂಶು ರೈಯು ತೀರಿಹೋದ ನಿಮಿತ್ತ ತಾನೇ

ಚಲಚ್ಚಿತ್ರ ನಿರ್ಮಾಪಕಳಾಗಿ ಆ ಕಾರ್ಯವನ್ನೇ ಮುಂದುವರಿಸುವಳೆಂದು ಬೊಂಬಯಿಯಿಂದ ಒಂದು ವಾರ್ತೆ ಬಂದಿದೆ

ದಕ್ಷಿಣ ಭಾರತವು ಉತ್ತರ ಭಾರತವನ್ನು ಅನುಕರಿಸಬಾರದು

"ರಾಜಕೀಯ ರಂಗದಲ್ಲಿ ರಾಜಾಜಿಯಂತಹ ರಾಜನೀತಿಜ್ಞರಿಂದಲೂ, ವಿಜ್ಞಾನದಲ್ಲಿ ರಾಮನ್ ಮತ್ತು ಕೃಷ್ಣನ್‌ರಂತಹ ಪ್ರಸಿದ್ಧ ವಿಜ್ಞಾನಿಗಳಿಂದಲೂ ಸಾಹಿತ್ಯದಲ್ಲಿ ಸಂಸ್ಕೃತದ ಸಹಾಯವಿಲ್ಲದ ದ್ರಾವಿಡ ಸಾಹಿತ್ಯದ ವಿಪುಲತೆಯಿಂದಲೂ ಸ್ವತಂತ್ರ ಸ್ಥಾನವನ್ನು ಪಡೆದ ದಕ್ಷಿಣ ಭಾರತವು ಇಂದು ಸಿನಿಮಾ ವಿಷಯದಲ್ಲಿ ಉತ್ತರ ಭಾರತದಿಂದ ಅನುಕರಣೆ ಮಾಡುತ್ತಿರುವುದು ನಿಜವಾಗಿಯೂ ಹಾಸ್ಯಾಸ್ಪದವಾದ ವಿಷಯವಾಗಿದೆ" ಹೀಗೆಂದು ಮದ್ರಾಸಿನ ಪತ್ರಿಕೆಯೊಂದು ದಕ್ಷಿಣಭಾರತದ ಚಲಚ್ಚಿತ್ರ ನಿರ್ಮಾಪಕರನ್ನು ಟೀಕಿಸುತ್ತದೆ.

೨೫೦೦೦ ರೂಪಾಯಿ ಒಂದು ತಿಂಗಳಿಗೆ

ಪುಷ್ಪವಲ್ಲಿಯು 'ತಾರಾ ಸಂಸಂಕಂ' ಎಂಬ ತೆಲುಗು ಚಿತ್ರದಲ್ಲಿ 'ತಾರಾ'ಳ ಪಾತ್ರವನ್ನು ವಹಿಸುವರೆ ಮೂರು ತಿಂಗಳ ತನಕ ತಿಂಗಳೊಂದಕ್ಕೆ ೨೫೦೦ ರೂಪಾಯಿಗಳಿಗೆ ಒಪ್ಪಿಗೆ ಮಾಡಿಕೊಂಡಿರುವಳು.

ಈ ಚಿತ್ರವನ್ನು ರಾಜ್ ಪ್ರಕಾಶರು ನಿರ್ದೇಶಿಸುವರು.

ಮದ್ರಾಸಿಗೆ ಒಂದು ಹೊಸ ಕಲಾಶಾಲೆ

ನೃತ್ಯ, ಸಂಗೀತ ಮತ್ತು ಕಲಾಭ್ಯಾಸಗಳು

ಶ್ರೀಮತಿ ಸರೋಜಿನಿ ನಾಯಿಡು ಅವರ ತಮ್ಮ ಪ್ರಸಿದ್ಧ ... ಮತ ಕವಿಗಳಾದ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ಮದ್ರಾಸಿನಲ್ಲಿ ಒಂದು ಕಲಾಕೇಂದ್ರವನ್ನು ಆರಂಭಮಾಡಲು ನಿಶ್ಚಯಮಾಡಿರುವರು. ಪಟ್ಟಣದ ಜನಸಂದಣಿಯಿಂದ ದೂರವಾಗಿ ಪ್ರಶಾಂತವಾದ ... ಸ್ಥಳದಲ್ಲಿ ... ಈ ಕಲಾಭವನವನ್ನು ಕಟ್ಟಿಸುವರು. ಅಲ್ಲಿ ನೃತ್ಯ ಸಂಗೀತ ಮತ್ತು ಇತರ ಕಲೆಗಳು ಕಲಿಸಲ್ಪಡುವುವು. ಭಾರತದ ಪ್ರಾಚೀನ ದಿವ್ಯ ಸಂಸ್ಕೃತಿಯನ್ನು ಎತ್ತಿಹಿಡಿದು ಅದರ ವೈಭವವನ್ನು ಜಗತ್ತಿಗೇ ಸಾರಬೇಕೆಂಬುದೇ ಅವರ ಮಹತ್ವಾಕಾಂಕ್ಷೆಯಾಗಿದೆಯಂತೆ.

'ರಷ್ಯ ಜರ್ಮನಿಯಂತಹ ರಾಜ್ಯಗಳಲ್ಲಿ ಕಲೆಗಾಗಿ ಪ್ರತ್ಯೇಕ ಮಂತ್ರಿಗಳೊಬ್ಬರು ನೇಮಿಸಲ್ಪಟ್ಟಿರಲು ನಾವು ಕಲೆಯಲ್ಲಿ ಪ್ರಾಚೀನಕಾಲದಿಂದಲೇ ಬಹಳ ಮುಂದುವರಿದವರೆನ್ನುವ ಭಾರತೀಯರು ನಮ್ಮ ರಾಷ್ಟ್ರೀಯ ಸರಕಾರದಲ್ಲಿ ಕಲೆಯ ಅಭಿವೃದ್ಧಿಯ ವಿಷಯ ಗಮನ ಕೊಡುವರೆ ಪ್ರತ್ಯೇಕ ಮಂತ್ರಿಯೊಬ್ಬರನ್ನು ನೇಮಿಸದಿರುವುದು ಮಹಾ ಪ್ರಮಾದವಾಗಿದೆ. ಈ ಕುರಿತು ಜನರು ಸರಕಾರವನ್ನು ಒತ್ತಾಯಪಡಿಸಬೇಕಾಗಿದೆ' ಹೀಗೆಂದು ಚಟ್ಟೋಪಾಧ್ಯಾಯರು ಹೇಳುತ್ತಾರೆ.

ಬೊಂಬಯಿ ಟಾಕೀಸ್

ಬೊಂಬಯಿ ಟಾಕೀಸಿನವರು 'ನಾರಾಯಣಿ' ಚಿತ್ರವನ್ನು ಬೇಗನೇ ಪೂರ್ತಿಗೊಳಿಸಲಿರುವರು. ಪತಿ ಹಿಮಾಂಶು ರೈಗಳವರ ಮರಣದಿಂದ ದೇವಿಕಾರಾಣಿಯು ದುಃಖಿತೆಯಾಗಿದ್ದು ಅದರ ರಚನೆಯು ಸ್ವಲ್ಪ ತಡವಾಯಿತು.

ಮೋಹನ್ ಪಿಕ್ಚರ್ಸ್

ಕಳೆದ ವಾರ ಮೋಹನ್ ಪಿಕ್ಚರ್ಸಿನವರು ಎರಡು ಚಿತ್ರಗಳನ್ನು ತೆಗೆಯಲು ಪ್ರಾರಂಭಮಾಡಿರುವರು. ಒಂದನೆಯ ಚಿತ್ರದ ಹೆಸರು 'ದೀಪಕ ಮಹಾಲ್' ಮಿಸ್. ಸರೋಜಿನಿ ಮತ್ತು ಅನಿಲಕುಮಾರ್ ಇವರು ಮುಖ್ಯ ಪಾತ್ರವಹಿಸುವರು. ಶ್ರೀ ನಾನುಭಾಯಿ ವಕೀಲರು ಇದನ್ನು ನಿರ್ದೇಶಿಸುವರು. ಇನ್ನೊಂದರ ಹೆಸರು ಇನ್ನೂ ಪ್ರಸಿದ್ಧವಾಗಿಲ್ಲ. ಅಮರನಾಥರು ಅದನ್ನು ನಿರ್ದೇಶಿಸುವರು. ಮಿಸ್. ಇಂದುರಾಣಿ ಮತ್ತು ಯಾಕೂಬ್ ಇವರು ಇದರಲ್ಲಿ ಮುಖ್ಯ ಪಾತ್ರವಹಿಸುವರು.

ನವಯುಗ ಚಿತ್ರಪಟ

ನವಯುಗ ಚಿತ್ರಪಟದವರು ಲಪನ್ ದೇವ ಚಿತ್ರವನ್ನು ತೆಗೆಯಲು ಪ್ರಾರಂಭ ಮಾಡಿರುವರು. ಮುಂದಿನ ಚಿತ್ರಕ್ಕೆ ಶ್ರೀ ಎಸ್. ಕಾಂಡೇಕರರ ಒಂದು ಸಾಮಾಜಿಕ ಕಥೆಯನ್ನು ಅವರು ಆರಿಸುವರು. ಬಾಬುರಾವ್ ಪೆಂಢಾರ್ಕರ್, ಮೀನಾಕ್ಷಿ, ಲಲಿತಾ ಪವಾರ್, ಸಾಳ್ವಿ, ಇವರು ಅಭಿನಯಿಸುವರು. ಶ್ರೀ ವಿನಾಯಕರು ನಿರ್ದೇಶಿಸುವರು ಮತ್ತು ಅಭಿನಯಿಸುವರು. ಒಂದೆರಡು ವಾರಗಳಲ್ಲಿ ಅದರ ಚಿತ್ರಗಳನ್ನು ತೆಗೆಯಲು ಪ್ರಾರಂಭವಾಗುವುದು.

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯಾ ಭಯಕರವಾದ ಗಾಯ—ಎರಡೂ ಒಂದೇ ಸಮನು ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿ ರಟಪುಟಾದ ವಿಷಕಾರಿ ಕ್ರಿಮಿಗಳನ್ನು ನಾಶಪಡಿಸಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ಬೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಯಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ದಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು ಚರ್ಮರೋಗ, ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/- & 5,000/-

are now issued at all our Branches

For particulars call at or write to

Any of our nearest Branches

★ ಚಾರು ರಾಜಾರಾವ್ ★

[illegible] ರಾಜಾರಾಯರು ಗೆದ್ದರು; ಎಲ್ಲರಿಗಿಂತ ಮೊದಲನೆಯವರಾಗಿ ಗೆದ್ದರು.

'ರಾಜಕಾರಣವು ಮಧ್ಯಮ ಜಾತಿಯ ಸಾಧನೆ'—Politics is the second best'—ಎಂದು ರಾಧಾಕೃಷ್ಣನ್ ಒಮ್ಮೆ ಹೇಳಿದರು. 'ರಾಜಕೀಯದಲ್ಲಿ ಧರ್ಮನೀತಿಗಳ ಗೊಂದಲವೇಕೆ?' ಎಂದು ಶ್ರೀನಿವಾಸಯ್ಯಂಗಾರ್ಯರೂ, ಸುಭಾಷ ಬಾಬುವೂ ಹೇಳುತ್ತಲೇ ಇದ್ದಾರೆ. ಕರಟಕ ದಮನಕರಾಗದೆ ರಾಜ್ಯಾಂಗ ನಿರ್ವಹಣ ಸಾಧ್ಯವಿಲ್ಲವೆಂಬ ಸಂಪ್ರದಾಯವೂ ನಮ್ಮಲ್ಲಿದೆ. ಈ ಎಳೆಗಳನ್ನು ಜೋಡಿಸಿ ಬಾಳನ್ನು ನೇಯುವುದಾದರೆ ರಾಜಾರಾವು ಗಾಂಧೀಜಿಗಿಂತಲೂ ಗೂಢ ವ್ಯಕ್ತಿಯೇ ಸರಿ.

ಕರಟಕ ಶಾಸ್ತ್ರಿಯ ಬ್ರಹ್ಮಾಸ್ತ್ರವಾದ 'ನುಡಿ ಜಾಣತನ' ಇವರಲ್ಲಿರಲಿಲ್ಲ. 'ನಡೆ ಬೇರೆ ನುಡಿ ಬೇರೆ ಮನವ ಶಿವನೇ ಬಲ್ಲ' ಎಂಬ ಹಾದಿ ಇವರದಲ್ಲ. ರಾಮಬಾಣಕ್ಕಿದ್ದಂತೆ ಇವರಿಗೆ ತ್ರಿಕರಣ ಲಕ್ಷ್ಯಶುದ್ಧಿ. 'ಸಿಕ್ಕರೆ ಮುಡಿ' ಸಿಗದಿರೆ ಅಡಿ' ಎಂಬ ನಡೆಜಾಣರೂ ಅಲ್ಲ. ಸದಾ ಸ್ವತಂತ್ರ ವ್ಯಕ್ತಿ. ಒಬ್ಬರಿಗೆ ಅಡಿಯಾಳಾಗಿ ಬಾಳುವುದು ಅವರ ಸ್ವಭಾವದಲ್ಲೇ ಇರಲಿಲ್ಲ. ಮಾತಿನಲ್ಲಿ ವಿಲಕ್ಷಣ ರಾಜಸ. ಹಿರಿಯರಾಗಲಿ, ಕಿರಿಯರಾಗಲಿ ಮಾತನಾಡಿದರೆ ಅಧಿಕಾರ ವಾಣಿಯೇ. ನುಡಿಯಲ್ಲಿ ನಿರ್ದಾಕ್ಷಿಣ್ಯ. ಪ್ರಿಯವಿರಲಿ, ಅಪ್ರಿಯವಿರಲಿ, ತಮ್ಮ ಅಭಿಪ್ರಾಯವನ್ನು ಅವರವರ ಮೋರೆಗೆ ಗಂಟೆ ಬಾರಿಸಿದಂತೆ ಅನ್ನುವುದೇ. ಜವಾಹರರಂಥವರೂ, 'ರಾಜಾರಾವ್ ಇಷ್ಟು ನಿಷ್ಕಪಟನಾದರೆ ನಡೆಯುವುದಿಲ್ಲವಯ್ಯ' ಎಂದು ಅವರಿಗೆ ಬುದ್ಧಿ ಹೇಳುತ್ತಿದ್ದರಂತೆ.

ಒಮ್ಮೆ ರಾಜಾರಾವು ಕಲಕತ್ತೆಗೆ ಹೋಗಿದ್ದರು. ಅಲ್ಲಿ ಚಿತ್ತರಂಜನ ದಾಸರ ಮನೆಯಲ್ಲೇ ಇವರ ಬಿಡಾರ. ಆ ಮಾತು ಈ ಮಾತು ಆಡುತ್ತ ಕಲಕತ್ತೆಯ ರಾಮಕೃಷ್ಣ ಮಠದ ಬಗ್ಗೆ, ಪರಮಹಂಸರ ಶಿಷ್ಯರ ಬಗ್ಗೆ ಇವರು ಪ್ರಸ್ತಾಪ ಮಾಡಿದರು. ದಾಸರು ಬಿಡುವಾದರೆ ತಾವೂ ಮಠವನ್ನು ನೋಡಬೇಕೆಂದು ಬಯಸಿದರಂತೆ. 'ಇಷ್ಟು ದಿನದಿಂದ ಇದೇ ಊರಿನಲ್ಲಿದ್ದು ಈ ಮಠದ ಬಗ್ಗೆ ನೀವು ಕೇಳಲೇ ಇಲ್ಲವೇ; ಆಶ್ಚರ್ಯ!' ಎಂದರಂತೆ ಇವರು. ರಾಜಾರಾವಲ್ಲದೆ ಬೇರೆಯವರಾಗಿದ್ದರೆ ಹೀಗೆ ಅನ್ನುತ್ತಿದ್ದರೆ? ಆದರೆ ರಾವಿನ ಚರಿತ್ರೆ ಅಕಳಂಕವಾದುದು. ಅದೇ ಇವರ ಸರ್ವಸ್ವ.

ರಾಮಕೃಷ್ಣ ಪರಮಹಂಸರ ಮಾತು ಬಂತು. ರಾಜಾರಾವಿಗೆ ಪರಮಹಂಸರಲ್ಲಿ ಅನನ್ಯಭಕ್ತಿ. ಇವರ ಕಾಲೇಜು ಓದು ಕಲಕತ್ತೆಯಲ್ಲಿ ಆಯಿತು. ಆಗ ಇವರಿಗೆ ರಾಮಕೃಷ್ಣ ಮಠದ ಸಂನ್ಯಾಸಿಗಳ ಸಾಂಗತ್ಯ ದೊರೆಯಿತು. ಆಗ ಇನ್ನೂ ಪರಮಹಂಸರ ಹೆಂಡತಿ ಶಾರದಾಮಣಿದೇವಿಯು ಬದುಕಿದ್ದಳು. ಪರಮಹಂಸರ ಶಿಷ್ಯರಲ್ಲಿ ವಿವೇಕಾನಂದರ ನಂತರ ಹೇಳಬಹುದಾದ ಸ್ವಾಮಿ ಬ್ರಹ್ಮಾನಂದರು (ರಾಖಾಲ) ಮತ್ತು ಹರಿಯರು. ಇವರಿಬ್ಬರನ್ನೂ ರಾಜಾರಾವು ಚೆನ್ನಾಗಿ ಬಲ್ಲರು. ಉಳಿದ ಶಿಷ್ಯರೂ ಇವರನ್ನು ಅಕ್ಕರೆಯಿಂದ ಕಾಣುತ್ತಿದ್ದರು. ರಾಮಕೃಷ್ಣ ಪರಮಹಂಸರೆಂದರೆ ರಾವಿಗೆ ಭಗವದವತಾರವೆಂದೇ ನಂಬುಗೆ. ಕಾಂಗ್ರೆಸ್ ಕೆಲಸದಲ್ಲಿ ಸ್ವಲ್ಪ ಬಿಡುವು ದೊರೆತರೆ ಸಾಕು, ಇವರು ಮಠಕ್ಕೆ ಓಡಿಹೋಗುತ್ತಿದ್ದರು.

ಆ ನಂಬಿಗೆಯೇ ಅವರ ಬಾಳಿನ ಭಂಡಾರ. ಅದೇ ಅವರ ತಾರಕಮಂತ್ರ.

'ಪರಿಸ್ಥಿತಿ ಅನುಕೂಲವಾಗಿಲ್ಲವಲ್ಲ' ಎಂದು ಅವರ ಗೆಳೆಯರು ಪೇಚಾಡಿದರೆ 'ಏಕೆ ಅಂಜಬೇಕು? ಎಲ್ಲಕ್ಕೂ ಠಾಕೂರು ಇದ್ದಾನೆ' ಎಂದು ಧೈರ್ಯವಾಗಿ ಹೇಳುತ್ತಿದ್ದರಂತೆ. ರಾಮಕೃಷ್ಣರನ್ನು ಬಂಗಾಲದಲ್ಲಿ ಠಾಕೂರ್ ಎಂದು ಕರೆಯುತ್ತಾರೆ. ಠಾಕೂರ್ ಎಂದರೆ ದೇವರು. ಆ ನಂಬಿಗೆಯಿಲ್ಲದ ಬಾಳಿನಲ್ಲಿ ರಾಜಾರಾವು ತೋರಿಸಿದ ಧೈರ್ಯ ತೋರುವುದು ಸಾಧ್ಯವಿಲ್ಲ. ಇವರ ಕುಟುಂಬ ದೊಡ್ಡದು. ಮನೆತುಂಬ ಮಕ್ಕಳು. ನಲವತ್ತಾರನೆಯ ವಯಸ್ಸಿನಲ್ಲಿ ಕಾಂಗ್ರೆಸ್ ಕಾರ್ಯದರ್ಶಿಯ ಉದ್ಯೋಗ ಬಿಟ್ಟರು. ಬಿಟ್ಟಾಗ ಏನಿದೆ? ಒಂದು ಕಾಸೂ ಇಲ್ಲ. ಚುನಾವಣೆಗೆ ನಿಲ್ಲಬೇಕಾಯಿತಲ್ಲ; ದುರ್ಭಿಕ್ಷದಲ್ಲಿ ಅಧಿಕಮಾಸ. ಯಾರೂ ಒಂದು ಕಪಡೆ ಕೊಡಲಿಲ್ಲ. ಸಾಲಮಾಡಬೇಕಾಯಿತು. ಹೀಗಿದ್ದರೂ ಅವರು ಎಂದೂ ಮೋರೆ ಗಂಟಿಕ್ಕಲಿಲ್ಲ. ಅದರಲ್ಲಿ ಸುಕ್ಕು ಕಾಣುತ್ತಿರಲಿಲ್ಲ. ಮುಂದೇನು ಎಂಬ ತಾಕಲಾಟವಿಲ್ಲ. ಯಾವಾಗಲೂ ಮುಗುಳು ಸೂಸುತ್ತ ಮಾತನಾಡುತ್ತಿದ್ದರು. ಸದಾ ವಿನೋದವಾಗಿ ಏನಾದರೊಂದು ಮಾತು ಆಡುವರೇ ಹೊರತು, ಕೊರಗು ಕಷ್ಟದ ಮಾತಿಲ್ಲ. ನಿರುತ್ಸಾಹವೆಂಬುದೇ ಅವರಿಗೆ ಗೊತ್ತಿರಲಿಲ್ಲ.

ಭರೀ ಬಣನಂಬಿಗೆಯ ಬಾಳಲ್ಲ ಅವರದು! ನಿರಂತರವೂ ಅವರ ಅಧ್ಯಾತ್ಮ ಸಾಧನೆ ನಡೆದಿತ್ತು. ಅವರಿಗೆ ಕೆಲವು ವಿಲಕ್ಷಣ ಅನುಭವಗಳೂ ಆಗಿದ್ದುವೆಂದು ತಿಳಿದಿದೆ. ಅಲಹಾಬಾದಿನಲ್ಲಿದ್ದಾಗ ಒಮ್ಮೆ ಇವರಿಗೆ ಆಮಶಂಕೆ ಇಟ್ಟುಕೊಂಡಿತು. ಒಂದೊಂದು ಸಲ ಬರೀ ರಕ್ತವೇ ಬರುತ್ತಿತ್ತು. ಎಲ್ಲರೂ ಇವರ ಆಸೆ ಬಿಟ್ಟರು. ತಾವೇ ಸ್ವತಃ ಆಸೆ ಬಿಟ್ಟುಕೊಂಡರಂತೆ. ಆಗ, ರಾತ್ರಿ ಪರಮಹಂಸರ ದಿವ್ಯದರ್ಶನ ಇವರ ಭಾವದೃಷ್ಟಿಗೆ ಆಗಿ, ಪರಮಹಂಸರು ಇವರಿಗೆ ಅಭಯ ಕೊಟ್ಟರಂತೆ. ಮರುದಿನವೇ ಗುಣಮುಖವಾಯಿತಂತೆ. ಇಂಥವು ಹಲವಾರು ಅನುಭವಗಳು.

ಭಾವಸಮಾಧಿ, ದಿವ್ಯದರ್ಶನಗಳನ್ನೂ ಇಂಥ ಅನುಭವಗಳನ್ನೂ ನಂಬುವವರುಂಟು, ನಂಬದವರೂ ಉಂಟು. ನಂಬಲಿ ಬಿಡಲಿ, ಈ ಅನುಭಾವೀ ಜೀವದ ಪವಿತ್ರತೆಯನ್ನೂ ಅಧ್ಯಾತ್ಮ ಪಿಪಾಸೆಯನ್ನೂ ಅರಿತುಕೊಳ್ಳಲಾರದವರುಂಟೆ? ವಿಶ್ವದ ಸತ್ಯಶೋಧನೆಯ ಹಾದಿಯಲ್ಲಿ ಇಂಥ ಜೀವಿಗಳು ಬೆಳಗಿಸಿದ ಆತ್ಮಜ್ಯೋತಿಗಳು ಮಾನವಕೋಟಿಗಾಗಿ ಹಚ್ಚಿದ ಹಣತೆಗಳೆಂದು ತಿಳಿಯದವರುಂಟೆ?

ರಾಜಾರಾವು ಬಹಳ ಅನುಭವಶಾಲಿ. ಕಾಂಗ್ರೆಸ್ಸಿನ ಮುಂದಿನ ಕಾರ್ಯರಂಗದಲ್ಲಿ ಅವರಿಂದ ಬಹಳ ಕೆಲಸವಾಗಬೇಕು. ನಾಡಿಗೆ ನಾಡೇ ಹೀಗೆ ಬಯಸಿಕೊಂಡಿತ್ತು. ಆದರೆ ನಾಡಿನ ಕೋರಿಕೆ ಈಡೇರಲಿಲ್ಲ. ಶಾಸನ ಸಭೆಗೆ ಆರಿಸಿಬಂದ ವರ್ಷದೊಳಗಾಗಿಯೇ ರಾಜಾರಾವು ಅಮರರಾದರು. ಅವರು ಕೀರ್ತಿಕಾಯರಾಗುವ ಮೊದಲು ೮-೧೦ ದಿನಗಳು ಮುಂಚೆ-ಅವರಿಗೆ ಭಾವಸಮಾಧಿಯೊಂದಾಗಿ, ಅದರಲ್ಲಿ ಒಂದು ಉರಿಯುತ್ತಿದ್ದ ಚಿತೆಯೂ ಅದರ ಪಕ್ಕದಲ್ಲೇ ಕೊಳಲೂದುತ್ತ ನಿಂತ ಕೃಷ್ಣನೂ ಕಂಡರಂತೆ.

(ಜಯಂತಿಯಿಂದ)

ಯುದ್ಧರಂಗದಲ್ಲಿ ಪರಾಕ್ರಮವನ್ನು ತೋರಿಸಿದುದಕ್ಕಾಗಿ ಇಬ್ಬರು ಫ್ರೆಂಚ್ ಸಿಪಾಯಿಗಳಿಗೆ ಬಹುಮಾನ ಕೊಡುವುದು

ವ್ಯಾಕರಣವು ಸುಲಭವಾಯಿತು!
ಪ್ರಬಂಧವು ಸುಂದರವಾಯಿತು

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

ವ್ಯಾಕರಣ ಮತ್ತು ಪ್ರಬಂಧ

(ನೂತನ ಪಾಠಪಟ್ಟಿಗೆ ಅನುಸಾರವಾಗಿ ಬರೆದುದು.)

4ನೆ ಮತ್ತು 5ನೆ ತರಗತಿಗಳಿಗೆ	ಬೆಲೆ	0—2—0
6ನೆ ತರಗತಿಗೆ	,,	0—2—0
7ನೆ ,,	,,	0—2—6
8ನೆ ,,	,,	0—3—0

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ ಉಪಯೋಗದ ಸಲುವಾಗಿ ರಚಿತವಾದ ವ್ಯಾಕರಣ ಮತ್ತು ಪ್ರಬಂಧ ಪುಸ್ತಕವು ಬೇಗನೇ ಪ್ರಕಟವಾಗಲಿದೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ನೋಟಗಳು

ಕಾಂಗ್ರೆಸಿನ ಈಗಿನ ಧೋರಣೆಯಿಂದ ಎಲ್ಲಾ ಪಕ್ಷದವರೂ ಒಟ್ಟಾಗುವಂತೆ ತೋರುತ್ತದೆ.

—ಸರ್ ಸಿಕಂದರರೂ, ಪಜಲುಲ್ ಹಕ್ಕರೂ ಡಿಲ್ಲಿಯಲ್ಲಿ ಕಾಂಗ್ರೆಸು ಧುರೀಣರನ್ನು ಸಂದರ್ಶಿಸಿ ಭಾರತದ ಬಿಕ್ಕಟ್ಟನ್ನು ಬಗೆಹರಿಸುವ ವಿಚಾರ ಮಾತನಾಡಿದರು

—ಹಿಂದೂ ಮುಸ್ಲಿಂ ಐಕ್ಯವಾಗಬೇಕೆಂದೂ, ರಾಷ್ಟ್ರೀಯ ಸರಕಾರದ ರಚನೆಯ ಬೇಡಿಕೆಯನ್ನು ಸರ್ವರೂ ಒಮ್ಮತದಿಂದ ಸರಕಾರದ ಮುಂದಿಡಬೇಕೆಂದೂ ಅವರು ನಿರ್ಧರಿಸಿರುವುದಾಗಿ ತಿಳಿಯುತ್ತದೆ

◇

ಜಿನ್ನರು ತನ್ನ ಮುಂದಾಳುತನವನ್ನು ಕಳೆದುಕೊಳ್ಳುವಂತೆ ಕಂಡು ಬರುತ್ತದೆ

ಜಿನ್ನರ ಅಪೇಕ್ಷೆಗೆ ವಿರುದ್ಧವಾಗಿ ಸಿಕಂದರ್ ಹಯತ್ ಖಾನರೂ ಹಕ್ಕರೂ ಕಾಂಗ್ರೆಸು ಧುರೀಣರೊಡನೆ ಸಂಧಿಯ ಮಾತುಕತೆ ನಡೆಸಿದರಷ್ಟೆ?

—ಜಿನ್ನರು ಇದರಿಂದ ಉದ್ವಿಗ್ನರಾಗಿದ್ದಾರೆ.

—ಮುಸ್ಲಿಮರ ಪರವಾಗಿ ಸಿಕಂದರರಿಗೂ ಹಕ್ಕರಿಗೂ ಕಾಂಗ್ರೆಸಿನೊಡನೆ ಮಾತುಕತೆ ನಡೆಸಲು ಅಧಿಕಾರವಿಲ್ಲವೆಂದು ಅವರ ಹೇಳಿಕೆ

—ಆದರೆ ಸಿಕಂದರರೂ ಹಕ್ಕರೂ ಈ ಸಂದರ್ಭದಲ್ಲಿ ಜಿನ್ನರನ್ನು ಗಣ್ಯಮಾಡಿದಂತೆಯೇ ತೋರುವುದಿಲ್ಲ

—ಪರಿಸ್ಥಿತಿಗೆ ಸರಿಯಾಗಿ ವರ್ತಿಸುವುದರಿಂದ ರಾಷ್ಟ್ರದ ಹಿತವಾಗಲಿದೆಯೆಂಬುದನ್ನು ಅವರು ಮನಗಂಡಿರಬೇಕು.

—ಆದರೆ ಜಿನ್ನರ ಕೂಗು ಒಂದೇ ಆಗಿದೆ!

—ರಾಷ್ಟ್ರವನ್ನು ಹಿಂದೂಸ್ತಾನ ಮತ್ತು ಪಾಕಿಸ್ತಾನವೆಂದು ಎರಡಾಗಿ ವಿಂಗಡಿಸದೆ ನಿರ್ವಾಹವಿಲ್ಲವೆಂದು ಅವರು ಇನ್ನೂ ಬೊಬ್ಬಿಡುತ್ತಾರೆ

—ಇಂದಿನ ರಾಜಕೀಯ ಕ್ಷೇತ್ರದಲ್ಲಿ ಜಾತೀಯತೆಯ ಸಂಕೋಚ ಬುದ್ಧಿಯವರಿಗೆ ಸ್ಥಾನವಿಲ್ಲ ಎಂಬುದನ್ನು ಜಿನ್ನರು ಇನ್ನೂ ತಿಳಿದುಕೊಂಡಿಲ್ಲ!

◇

ಸುಭಾಷಬೋಸರನ್ನು ಸೆರೆಮನೆಗೆ ಹಾಕಿದ ವಿಷಯವು ಚಾರಿತ್ರಿಕ ಮಹತ್ವವುಳ್ಳದ್ದಾಗಿದೆ

—ಸುರಾಜ್ ಉದ್ದೌಲನು ನೂರಾರು ಮಂದಿ ಆಂಗ್ಲೇಯರನ್ನು ಒಂದು ಕೋಣೆಯಲ್ಲಿ ಹಾಕಿ ಬಂಧಿಸಿಟ್ಟನೆಂದೂ, ಅದರಿಂದ ಅವರಲ್ಲಿ ಹಲವರು ಮರುದಿನ ಶ್ವಾಸಕಟ್ಟಿ ಸತ್ತು ಹೋದರೆಂದೂ ಇತಿಹಾಸದಲ್ಲಿ ಬರೆದು ಹಾಕಿರುವರು!

—ಆ ಸ್ಥಳಕ್ಕೆ ಬ್ರಿಟಿಷರು ಕಲ್ಕತ್ತದ ಕತ್ತಲೆಯ ಕೋಣೆ (Black Hall of Calcutta) ಎಂದ ಹೆಸರೂ ಇಟ್ಟಿರುವರು

—ಅದರ ಮುಂದುಗಡೆ 'ಹಾಲ್ ವೆಲ್' ಎಂಬ ಸ್ಮಾರಕವನ್ನೇ ಸ್ಥಾಪಿಸಿದ್ದಾರೆ

—ಅಷ್ಟು ಸಣ್ಣ ಕೋಣೆಯಲ್ಲಿ ನೂರಾರು ಮಂದಿ ಮನುಷ್ಯರನ್ನು ಕೊಚ್ಚಿ ಹಾಕಿದರೂ ತುಂಬಿಸುವುದು ಸಾಧ್ಯವಿಲ್ಲವಾದುದರಿಂದ ಆ ಐತಿಹಾಸಿಕ ಉಲ್ಲೇಖವೇ ಅಸತ್ಯವೆಂದು ಅನೇಕ ಮಂದಿ ಇತಿಹಾಸ ವಿಶಾರದರು ಸ್ಪಷ್ಟಪಡಿಸಿದ್ದಾರೆ

—ಆದಕಾರಣ ಅಸತ್ಯವನ್ನು ಉಲ್ಲೇಖಿಸಿ ಭಾರತೀಯರನ್ನು ಅವಮಾನಗೊಳಿಸುವ ಆ ಸ್ಮಾರಕವನ್ನು ಕಿತ್ತೆಸೆಗೆಯಬೇಕೆಂದು ಬೋಸರು ಸರಕಾರಕ್ಕೆ ತಿಳಿಸಿದರು

—ಆದರೆ ಸರಕಾರದವರು ಅದನ್ನು ಕಿತ್ತುಹಾಕಲು ಒಪ್ಪಲಿಲ್ಲ

—ಅದಕ್ಕಾಗಿ ಬೋಸರು ಸತ್ಯಾಗ್ರಹವನ್ನು ಆರಂಭಿಸಬೇಕಾಯಿತು.

—ಕತ್ತಲೆ ಕೋಣೆಯ ಸಂಬಂಧದ ಈ ಸತ್ಯಾಗ್ರಹದಲ್ಲಿ ಬೋಸರೂ ಅವರ ಅನುಯಾಯಿಗಳೂ ಈಗ ಕತ್ತಲೆ ಕತ್ತಲೆ ಕೋಣೆಗಳನ್ನು ಸೇರುತ್ತಿದ್ದಾರೆ!

—ಆದಕಾರಣ ಬೋಸರ ಇಂದಿನ ಬಂಧನವು ಐತಿಹಾಸಿಕ ಮಹತ್ವದ್ದಾಗಿದೆ!

—ರುಮೇನಿಯವು ಕಠಿಣ ಸಂಕಟಕ್ಕೀಡಾಗಿದೆ!

—ರಶ್ಯವು ಬೆಸರಬ್ಬಿಯಾ ಪ್ರಾಂತಗಳನ್ನು ಸ್ವಾಧೀನ ಮಾಡಿಕೊಂಡಿತು!

—ಈಗ ಬಲ್ಗೇರಿಯಾ ಮತ್ತು ಹಂಗೇರಿಗಳೂ ಕೆಲವು ಪ್ರಾಂತಗಳನ್ನು ತಮಗೆ ಬಿಟ್ಟುಕೊಡಬೇಕಾಗಿ ರುಮೇನಿಯವನ್ನು ಒತ್ತಾಯ ಪಡಿಸುತ್ತಿವೆ!

—ಹಲವು ಸಣ್ಣ ಸಣ್ಣ ಪ್ರಾಂತಗಳು ಸೇರಿ ರುಮೇನಿಯದ ರಚನೆಯಾಗಿದೆ

—ಆ ಪ್ರಾಂತಗಳನ್ನು ಹೀಗೆ ಇತರ ರಾಷ್ಟ್ರಗಳು ಹರಿಹಂಚಿಕೊಂಡ ಮೇಲೆ ರುಮೇನಿಯವೇ ಭೂಪಟದಿಂದ ಮಾಯವಾಗುವುದು!

—ರುಮೇನಿಯವು ತನ್ನ ಈ ಸಂಕಟದ ಸಮಯದಲ್ಲಿ ನಿವೃತ್ತಿಗೆ ಯಾವ ದಾರಿಯನ್ನೂ ಕಾಣದಾಗಿದೆ!

—ಯೂರೋಪಿನಲ್ಲಿ ನಡೆವ ಇಂತಹ ಅಮಾನುಷ ಘಟನೆಗಳಿಗೆ ಸಾಮ್ರಾಜ್ಯ ಲಾಲಸೆಯೇ ಪ್ರಬಲ ಕಾರಣವು

NOTICE

In the Court of the District Munsif of Coondapoor

O P N 18/1940

Between

1 K L Karanth
2 K N Karanth — **Petitioners**

AND

K R Karanth — **Respondent**

Notice is herby given to all whom it may concern that the Petitioners have applied for the grant of a Succession Certificate to collect the assets as executors under the terms of the will dated 12 2 1940 executed by the deceased Sheshi Karanth who died on 20 2 1940 This petition will be taken up by the court for orders on 25-7 1940 when objections, if any may be submitted

Coondapoor 8 7 1940 } **K S Karanth** Advocate for Petr

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R L A N 448 1940
(P F A N 400 1940)
R E P N 365 39

Between

ಜೆ ... ಮತ್ತ್ಯೂಸ್ ... ವಾದಿ ಅರ್ಜಿದಾರರು.

... — ಪ್ರತಿವಾದಿರು ರೆಸ್ಪೋಂಡೆಂಟರು.

ಮಂಗಳೂರು ತಾಲೂಕು ಮರೋಳಿ ಗ್ರಾಮದ ... ಪದ್ದಕ್ಷ ... ಆಳಿಯ ಕೋಚ ... 1 ಸದ್ರಿ ಕೋಚ ಪೂಜಾರಿಯವರ ಹೆಂಡತಿ ... 1 ಸದ್ರಿ ... ಮಕ್ಕಳು ... ಸುವರ್ಣ 1 ಕೂಸಮ್ಮ 1, ಕಮಲ 1 ದೇವಪ್ಪ 1 ಕೂಡಾ 1 6ರ ವರೆಗಿನ ಪ್ರತಿವಾದಿ ರೆಸ್ಪೋಂಡೆಂಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

... ಅಪ್ಪೀಲನ್ನು ... ಮುಂದರಿಸುವರೆ ವಗೈರೆ ಅರ್ಜಿದಾರರು ಮಾಡಿದ ... ಅರ್ಜಿಗಳು ... ತಿಂಗಳ ತಾರೀಕು 12ಕ್ಕೆ ತನಿಖೆಗೆ ಇಟ್ಟಿರುತ್ತದೆ ಆ ದಿವಸ ಪೂರ್ವಾಹ್ನ 11ಗಂಟೆಗೆ ನೀವು ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳುವರೆ ತಪ್ಪಿದರೆ ನಿಮ್ಮ ಹಾಜರು ಶಿವಾಯಿ ಸದ್ರಿ ಅರ್ಜಿಗಳು ತೀರ್ಮಾನಿಸಲಾದೀತು

ಮಂಗಳೂರು ತಾ 8 7-40 } **K Gopalakrishna Rao** Vakil for petitioner

ಇಂದಿನ ಮಕ್ಕಳೇ ಮುಂದಿನ ಜನಾಂಗ!
ಮುಂದಿನ ಜನಾಂಗಕ್ಕೆ ವಿಜ್ಞಾನವೇ ನಿಧಿ!

ಲಘುವಿಜ್ಞಾನ

6ನೇ 7ನೇ 8ನೇ ತರಗತಿಗಳಿಗೆ

ನೂತನ ಪಾಠಪಟ್ಟಿಗೆ ಅನುಸಾರವಾಗಿ
ಶ್ರೀ ಎಸ್ ರಾಮಕೃಷ್ಣಾಚಾರ್ ಬಿ. ಎ. ಎಲ್ ಟಿ
ಇವರಿಂದ ವಿರಚಿತವಾದುದು.
ಹಳ್ಳಿಯ ಶಾಲೆಗಳಲ್ಲೂ ಮಾಡಿತೋರಿಸಲು ಸುಲಭವಾಗುವಂತಹ ಪ್ರಯೋಗಗಳನ್ನು ಒಳಗೊಂಡಿವೆ.
ಸಚಿತ್ರವಾದ ವಿವರಣೆಗಳನ್ನೂ ಕೊಡಲಾಗಿದೆ.
ಬಡ ವಿದ್ಯಾರ್ಥಿಗಳು ಪಡೆಕೊಳ್ಳಲು ಸಾಧ್ಯವಾಗುವಂತೆ ಕ್ರಯವು ಅತ್ಯಂತ ಕಡಿಮೆಯಾಗಿರಿಸಿದೆ!
ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿವೆ!

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.
ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರೇಂಚ್ ಸೆಂಟ್ ಲೆಂಡ್ ಪೇಟೆ
ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 45
„ 6 ತಿಂಗಳಿಗೆ 4% — „ 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

ವಿಜ್ಞಾನಯುಗ

ನವೀನ ಯುದ್ಧೋಪಕರಣಗಳ ಎರಡು ಶೋಧಗಳು

ಜರ್ಮನಿಯ ವೈಜ್ಞಾನಿಕರು ಪ್ರಕೃತ ಯುದ್ಧದಲ್ಲಿ ಉಪಕಾರಿಯಾಗುವಂಥ ಎರಡು ಹೊಸ ಯುದ್ಧೋಪಕರಣಗಳನ್ನು ಕಂಡು ಹಿಡಿದಿರುವರಾಗಿ ವಾರ್ತೆ ಇದೆ. ಇವುಗಳಲ್ಲಿ ಮೊದಲನೆಯದು ಒಂದು ಹೊಸ ಮಾದರಿಯ ವಾಯು ವಿಮಾನ. ಈ ವಿಮಾನವು ಯಾವ ಶಬ್ದವನ್ನೂ ಮಾಡದೆ ೬೦೦೦೦ ಅಡಿಗಳ ತನಕ ಆಕಾಶದಲ್ಲಿ ಮೇಲೇರ ಬಲ್ಲುದು. ಅಷ್ಟು ಎತ್ತರದಲ್ಲಿ ಅದು ಕಣ್ಣಿಗೆ ಕಾಣಿಸುವದಿಲ್ಲ. ವಿಮಾನ ಧ್ವಂಸಕ ತೋಪಿಗಳ ಏಟೂ ಅವುಗಳಿಗೆ ನಾಟುವದಿಲ್ಲ. ಹೀಗೆ ಯಾರಿಗೂ ತಿಳಿಯದೆ ಆಕಾಶದಲ್ಲಿ ಹಾರಾಡುತ್ತ ಇದ್ದು, ಸಮಯ ಸಾಧಿಸಿ ಕೆಳಗೆ ಬಂದು ಇವು ವೈರಿಗಳ ಮೇಲೆ ಬಾಂಬುಗಳ ಮಳೆಗರೆಯ ಬಹುದು.

ಜರ್ಮನಿಯ ಎರಡನೆಯ ಶೋಧವೆಂದರೆ–ಮೂರು ಉದ್ದೇಶಗಳನ್ನು ಒಂದೇ ಬಾರಿಗೆ ಸಾಧಿಸುತ್ತ ಒಂದು ಹೊಸ ಬಗೆಯ ತೋಪಿ. ಈ ತೋಪಿನಿಂದ ಗುಂಡು ಹಾರಿಸಿ ಆಕಾಶದಲ್ಲಿ ಹಾರಾಡುತ್ತಿರುವ ವೈರಿ ವಿಮಾನಗಳನ್ನು ಕೆಳಕ್ಕೆ ಕೆಡವಿ ಹಾಕ ಬಹುದು. ರಣರಂಗದಲ್ಲಿ ಮೇಲೇರಿ ಬರುವ ಶತ್ರುಗಳನ್ನು ಹೊಡೆದು ಹಾಕಬಹುದು, ಅಥವಾ ದೊಡ್ಡ ದೊಡ್ಡ ಟ್ಯಾಂಕ್‌ಗಳನ್ನೂ ಧ್ವಂಸ ಮಾಡ ಬಹುದು. ಈಗ ಈ ಮೂರು ಕಾರ್ಯಗಳನ್ನು ಸಾಧಿಸಲಿಕ್ಕೆ ಪ್ರತ್ಯೇಕ ಪ್ರತ್ಯೇಕ ಸಾಧನಗಳಿರುವವೇ ಹೊರತು ಒಂದರಿಂದಲೇ ಮೂರು ಕಾರ್ಯಗಳನ್ನು ಸಾಧಿಸುವಂಥ ಯಂತ್ರೋಪಕರಣವು ಇರುವದಿಲ್ಲ.

ಶತ್ರು ಸಮಾಚಾರವನ್ನು ತಿಳಿಸುವ ಇನ್ನೊಂದು ಯಂತ್ರ

ಜರ್ಮನ್ ವೈಜ್ಞಾನಿಕರು ಇಂಥ ಹೊಸ ಹೊಸ ಯುದ್ಧ ಸಾಧನಗಳನ್ನು ಕಂಡು ಹಿಡಿಯುವದರಲ್ಲಿ ಮುಂದಾಗಿರುವಂತೆ ಬ್ರಿಟಿಷ ವೈಜ್ಞಾನಿಕರೂ ಮುಂದಾಗಿರುತ್ತಾರೆ. ಅವರೂ ಅದಕ್ಕೆ ಶೋಧಗಳನ್ನು ನಡೆಸಿರುವರು. ಈ ಬ್ರಿಟಿಷ ವೈಜ್ಞಾನಿಕರು ಟೆಲಿವಿಜನ್ ಕೆಮರಾಗಳೆನ್ನುವಂಥ ಒಂದು ಹೊಸ ಚಿತ್ರ ತೆಗೆಯುವ ಪೆಟ್ಟಿಗೆಯನ್ನು ತಯಾರಿಸಿರುತ್ತಾರೆ. ಈ ಪೆಟ್ಟಿಗೆಯು ಪ್ರಯಾಣ ಕಾಲದಲ್ಲಿ ಕೈಯಲ್ಲಿ ಹಿಡಕೊಂಡು ಹೋಗುವ ಕೈಪೆಟ್ಟಿಗೆಗಿಂತ ದೊಡ್ಡದಾಗಿರುವದಿಲ್ಲ. ವಿಮಾನಗಳಲ್ಲಿ ಶತ್ರು ಪ್ರದೇಶಗಳ ಮೇಲೆ ಹಾರಾಡುತ್ತಿರುವಾಗ, ಈ ಟೆಲಿವಿಜನ್ ಕೆಮರಗಳು ಆ ಪ್ರದೇಶಗಳ ಅತ್ಯಂತ ಸ್ಪಷ್ಟವಾದ ಚಿತ್ರಗಳನ್ನು ತೆಗೆದು ವಾಯುತರಂಗಗಳ ಮೂಲಕ ಬೇಕಾದಲ್ಲಿಗೆ ಕಳುಹಿಸುವವು. ಮಿತ್ರರಾಷ್ಟ್ರಗಳ ಸೈನಿಕ ಠಾಣೆಗಳು, ವೈಮಾನಿಕ ಮತ್ತು ನಾವಿಕ ಪಡೆಗಳೂ ಆ ಚಿತ್ರಗಳನ್ನು ಪಡೆದು, ಶತ್ರುವನ್ನು ಧ್ವಂಸಮಾಡುವ ಉಪಾಯಗಳನ್ನು ಶೀಘ್ರದಲ್ಲಿ ಕೈಕೊಳ್ಳುವವು. ಈಗಲಾದರೆ–ಶತ್ರುಗಳ ವಿಷಯವಾದ ಸಮಾಚಾರವು ಅದನ್ನು ಸಂಗ್ರಹಿಸಲಿಕ್ಕೆ ಹೋದ ವಿಮಾನಗಳು ಮರಳಿದ ಅನಂತರವೇ ಠಾಣೆಗಳಿಗೆ ಗೊತ್ತಾಗಬೇಕು. ಇವು ಮರಳುವ ಹೊತ್ತಿಗೆ ಶತ್ರು ಪ್ರದೇಶದಲ್ಲಿ ಅನೇಕ ಪರಿವರ್ತನೆಗಳೂ ಬದಲಾವಣೆಗಳೂ ಆಗಿ ಮಿತ್ರ ಪಕ್ಷವು ಕೈಕೊಂಡ ಉಪಾಯಗಳೆಲ್ಲ ವಿಫಲವಾಗಬಹುದು. ಆದರೆ ಟೆಲಿವಿಜನ್ ಕೆಮರಗಳ ಮೂಲಕ ಶತ್ರು ಸಂಬಂಧವಾದ ಸಮಾಚಾರವು, ವಿಮಾನಗಳು ಮರಳುವ ಬಹು ಕಾಲದ ಮೊದಲೇ ಚಿತ್ರಗಳ ರೂಪದಲ್ಲಿ ಠಾಣೆಗಳಿಗೆ ದೊರೆತು, ಶತ್ರುವನ್ನು ನಾಶಮಾಡುವ ಉಪಾಯಗಳನ್ನು ಅತಿ ಶೀಘ್ರ ಕೈಕೊಳ್ಳಲು ಅನುಕೂಲವಾಗುತ್ತದೆ. ಈ ಟೆಲಿವಿಜನ ಕೆಮರಾಗಳನ್ನು ಬ್ರಿಟಿಶರ ಪ್ರತಿಯೊಂದು ವಿಮಾನಕ್ಕೂ ಒದಗಿಸಿಕೊಡುವ ಏರ್ಪಾಡು ಆಗಿದೆ.

ಶಬ್ದ ಮಾಡದ ಲೋಹ

ಲೋಹಗಳನ್ನು ಬಡೆದರೆ ಅವು ಶಬ್ದ ಮಾಡುತ್ತವೆ. ಆದರೆ ಅಮೇರಿಕದ ಲೋಹಗನಿಗಳ ವೈಜ್ಞಾನಿಕರು ಬಡೆದರೆ ಶಬ್ದವಾಗದ ಲೋಹವನ್ನು ತಯಾರಿಸುವ ಕ್ರಮಗಳನ್ನು ಕಂಡು ಹಿಡಿದಿದ್ದಾರೆ. ಉಕ್ಕಿನಂತೆಯೇ ಈ ಹೊಸ ಲೋಹ ತಾಳುವಂಥದೂ ಬಾಳುವಂಥದೂ ಆಗಿರುವದು. ಮೆಂಗನೀಸ್ ಮತ್ತು ತಾಮ್ರದ ಸಮ್ಮಿಶ್ರಣದಿಂದ ಈ ಲೋಹವು ಆಗಿರುತ್ತದೆ. ಎತ್ತರದಿಂದ ನೆಲದ ಮೇಲೆ ಬಿಟ್ಟಾಗ ಗುದ್ದು ಹಾಕಿದಂತೆ ಬಹು ಸಣ್ಣದಾದ ಶಬ್ದವು ಮಾತ್ರ ಆಗುವದು.

ಕುಂಭಕರ್ಣರನ್ನು ಎಚ್ಚರಿಸುವ ಗಡಿಯಾರ

ಎಷ್ಟು ಹೊತ್ತು ನಿದ್ದೆ ಮಾಡಿದರೂ ತೃಪ್ತರಾಗದ ಕಲಿಯುಗದ ಕುಂಭಕರ್ಣರಿದ್ದಾರೆ. ಇವರಿಗೆ ನಿದ್ರಾರೋಗವು ಬಂದಿರುವದು ಅಲ್ಲವಾದರೆ, ಇವರು ಸಮಾಜದ ಉಪಯುಕ್ತ ಜೀವಿಗಳೇ ಆಗಿರುತ್ತಾರೆ. ಆದರೆ ಇವರ ನಿದ್ದೆಯು ಸಕಾಲದಲ್ಲಿ ಕೆಲಸಗಳನ್ನು ಮುಗಿಸಲಿಕ್ಕೆ ಇವರಿಗಿರುವ ದೊಡ್ಡ ವಿಘ್ನವಾಗಿರುವುದು. ಇಂಥವರ ಉಪಯೋಗಕ್ಕೋಸ್ಕರ ಅಮೇರಿಕದಲ್ಲಿ ಹೊಸ ಜಾತಿಯ ವಾಚುಗಳನ್ನೂ ಗಡಿಯಾರಗಳನ್ನೂ ತಯಾರಿಸಲಾರಂಭಿಸಿದ್ದಾರೆ. ವಾಚು ಮಣಿಗಂಟಿಗೆ ಕಟ್ಟುವಂಥದಿರುತ್ತದೆ. ಮಣಿಕಟ್ಟಿಗೆ ಕಟ್ಟಿದಾಗ ಈ ವಾಚು ಗಂಟೆಗೆ ಒಂದು ಬಾರಿ ಅವನ ಮಣಿಕಟ್ಟನ್ನು ಒತ್ತುತ್ತ ಇರುತ್ತದೆ. ಎದ್ದಿರಬೇಕಾದ [illegible] ಮನುಷ್ಯನು ಇದರ ಒತ್ತಡದಿಂದ ಎಚ್ಚರವಾಗಬಹುದು. ಹಾಗೆಯೇ [illegible] ಹೊಸ ಜಾತಿಯ ಗಡಿಯಾರವು ನಿರ್ದಿಷ್ಟ ಸಮಯದಲ್ಲಿ ಅದರೊಳಗೆ ಸೇರಿಸಲ್ಪಟ್ಟಿದ್ದ ಹಗ್ಗಗಳನ್ನು ಇಳಿಯಬಿಟ್ಟು, ನಿದ್ದೆ ಮಾಡುತ್ತಿರುವವನ ಮುಖದ ಮೇಲೆ ಆ ಹಗ್ಗದ ತುದಿಗಳನ್ನು ಆಡಿಸುತ್ತ ಇರುವದು. ಇದರಿಂದ ನಿದ್ರೆಯಲ್ಲಿರುವವನ ಮುಖದ ಮೇಲೆ ತುರಿಕೆ ಉಂಟಾಗಿ ಅವನು ಎಚ್ಚರವಾಗುವನು. ಹೊಸಬರನ್ನು ಎಚ್ಚರಿಸಲಿಕ್ಕೆ ಈ ವಾಚು ಮತ್ತು ಗಡಿಯಾರವು ತಕ್ಕ ಉಪಾಯವಾಗಬಹುದಾದರೂ ವಾಚಿನ ಒತ್ತಾಟ ಮತ್ತು ಗಡಿಯಾರದ ತುರಿಕೆಯ ಅಭ್ಯಾಸವಾದವರನ್ನು ಇವು ನಿದ್ದೆಯಿಂದ ಹೇಗೆ ಎಚ್ಚರಿಸಬಲ್ಲವೋ, ಎಂಬ ಸಂದೇಹವು ನಮಗಾಗುತ್ತದೆ.

ಕಾಫಿ ಹುಡಿ ಹಾಳಾಗದಂತೆ.

ಗಾಳಿಯಲ್ಲಿರುವ ಆಮ್ಲ ಅನಿಲವು ಕಾಫಿಹುಡಿಯ ಸವಿ ಮತ್ತು ಸುವಾಸನೆಯನ್ನು ಮೆಲ್ಲಗೆ ಕಡಿಮೆ ಮಾಡುತ್ತ ಬರುತ್ತದಾದದರಿಂದ, ಅದನ್ನು ಗಾಳಿ ಇಲ್ಲದ ಪೆಟ್ಟಿಗೆಗಳಲ್ಲಿ ತುಂಬಿಸಿ ಮಾರಾಟ ಮಾಡುತ್ತಾರೆ. ಇಂಥ ಪೊಟ್ಟಣಗಳಲ್ಲಿ ಅದು ಅನೇಕ ದಿನಗಳ ತನಕ ಕೆಟ್ಟು ಹೋಗುವದಿಲ್ಲ. ಆದರೆ ವೈಜ್ಞಾನಿಕರು ಕಾಫಿ ಹುಡಿಯನ್ನು ಹಾಳಾಗದಂತಿಡುವ ಇದಕ್ಕೂ ಹೆಚ್ಚು ಪರಿಣಾಮಕಾರಿಯಾದ ಉಪಾಯವನ್ನು ಕಂಡು ಹಿಡಿದಿರುತ್ತಾರೆ. ಆಗ ತಾನೇ ಹುಡಿ ಮಾಡಿದ ಕಾಫಿಯನ್ನು ಗಾಳಿಯಿಲ್ಲದ ಪೊಟ್ಟಣಗಳಲ್ಲಿ ನೀರಿನ ಆವಿಯೊಂದಿಗೆ ತುಂಬಿಸಿ ಇಡುವದರಿಂದ ಅದು ಕೆಲವು ತಿಂಗಳುಗಳ ತನಕವೂ ತನ್ನ ಹೊಸತನವನ್ನು ಕಳಕೊಳ್ಳುವದಿಲ್ಲವಂತೆ.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸ್ಲೂ ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು.

ಮಂಗಳೂರು ಏಜೆಂಟರು
ಯು. ಪಾಂಡುರಂಗ ನಾಯಕ್,
ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್:
ಪ್ರೇಮ ಮೆಡಿಕಲ್ ಹಾಲ್,
ಗುತ್ತಿಗಾರ್ ದ. ಕ.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ
ಡೋಂಗರೇ
ಇವರ
ಬಾಲಾಮೃತ
ವನ್ನು ಕೊಡುವುದರಿಂದ ಅವರು
ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವಾಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಟಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ ಕೊಪ್ಪ, ನರಸಿಂಹರಾಜಪುರ ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS.

The Combined Booking Agency,
MANGALORE

The Joint Booking Office
KODIALBAIL

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎ. ಕೆ. ರಜಪೂತ ಇವರ

<u>ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)</u>

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯವು ಅಶಕ್ತಿಯು ಉಂಟಾಗುತ್ತದೆ ... ದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುದುಧಿರುವುದು ಶರೀರಕ್ಕೆ ಏನೂ ಅಪಾಯವಾಗದೆ ... ಗರ್ಭಧಾರಣ ಬಂದಾಗುವದು ... ಮೊದಲೇ ... ಔಷಧ ಬೇಡಿರಿ ... ಸರ್ಟಿಫಿಕೇಟು ಡಾ ವೈದ್ಯ ಎಲ್. ... ಈ ಚೂರ್ಣದಿಂದ ಯಾವ ತರದ ಅಪಾಯವೂ ... ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ... ವಿಳಾಸ ಸಂಜೀವಿನೀ ಔಷಧಾಲಯ ಮು ಪೋ. ಮಿರಜಿ, S M C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಸಾವಕಾರ ಶ್ರೀನಿವಾಸರಂಗಪೈ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	2—0—0	
,, ದುಯಂ ,, ,,	1—16—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—14—0	1—15—0
,, ದುಯಂ ,, ,,	4—9—0	4—11—0
,, ಅವ್ವಲ್ ಸುಗ್ಗಿ ,,	4—10—0	
,, ದುಯಂ ,, ,,	4—6—0	4 7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	48—0—0	
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—11—0	8—11—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—4—0	4—8—0
ಗೇರುಬೀಜ ಮುಡಿಗೆ	3—0—0	3—4—0
ಕಬ್ಬಿನ ಬೆಲ್ಲ ಖಂಡಿಗೆ	35—0—0	48—12—0
ಒಳ್ಳೇಮೆಣಸು ಹಂಡ್ರಡ್ವೇಟಿಗೆ	14—0—0	14—8—0

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 12—7—1940 [ಸಂಚಿಕೆ 28

The Bombay Life Assurance Company, Ltd.

(Estd. 1908)

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality.

Ask us what particular scheme of Insurance will satisfy your requirements and your purse.

Agency Applications from Active and Influential Ladies & Gentlemen are invited.

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Central Station Road, Trivandrum.

Gautam Nivas, Charni Road, Girgaum, Bombay No. 4.

Post Box No. 337 Mount Road, Madras.

...swarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚೇಷ್ಟೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

"ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು"

ಜಿನ್ನರನ್ನು ಅಧಿಕಾರದಿಂದ ತಳ್ಳಹಾಕಬೇಕು

ಎಲ್ಲೆಲ್ಲೂ ಮುಸಲ್ಮಾನ ಮುಖಂಡರ ಚಳವಳಿ!

ರಾಷ್ಟ್ರಪತಿ ಆಜಾದರಿಗೆ ಕೊಟ್ಟ ಅಸಭ್ಯ ಉತ್ತರದ ಪರಿಣಾಮವೇ

ಭಾರತದ ಅತ್ಯಂತ ಗೌರವಾನ್ವಿತ ರಾಷ್ಟ್ರೀಯ ಮುಸಲ್ಮಾನ ಮುಖಂಡರನ್ನು ಹೀನೈಸಿ ಮಿ. ಜಿನ್ನರು ಬರೆದ ಉತ್ತರವು ಭಾರತೀಯ ಮುಸಲ್ಮಾನ ಸಮಾಜವನ್ನು ಸಂತಾಪ ಸಾಗರದಲ್ಲಿ ಮುಳುಗಿಸಿದೆ. ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಕುರಿತು ಕಾಂಗ್ರೆಸ ಅಧ್ಯಕ್ಷ ಶ್ರೀ ಅಬ್ದುಲ್ ಕಲಾಂ ಆಜಾದರು ಸಹಜವಾಗಿ ಕೇಳಿದ ಒಂದು ಸರಳ ಪ್ರಶ್ನೆಗೆ ಜಿನ್ನರು ವಿನಾ ಕಾರಣ ಸಿಟ್ಟಿಗೆದ್ದು, ಇಂಡಿಯೋ ಎಂದರೆ ಮುಂಡಾಸು ಮುವತ್ತು ಮೊಳ ಎಂದು ಯದ್ವಾ ತದ್ವಾ ಉತ್ತರವನ್ನು ಕೊಟ್ಟು ಶ್ರೀ ಆಜಾದರನ್ನು ನಿಂದಿಸಿದ್ದಾರೆ. ನ್ಯಾಯ ಪೂರ್ಣ ಮತ್ತು ಸಮಂಜಸವಾದ ತರ್ಕಕ್ಕೆ ಜಿನ್ನರು ಎಷ್ಟು ಮಾತ್ರಕ್ಕೂ ಬರುವದಿಲ್ಲ. ಈ ಪರಿಯ ಅವರ ಬಡಬಡಿಸುವಿಕೆಯು ಹದಮೀರಿ ಹೋಯಿತು. ಆದ್ದರಿಂದ ಮುಸಲ್ಮಾನೇತರು ಮಾತ್ರವಲ್ಲ, ಯಾವ ಮುಸಲ್ಮಾನರ ಹಿತಕ್ಕಾಗಿ ತಾನು ಹೋರಾಡುತ್ತಿರುವೆನೆಂದು ಈ ಜಿನ್ನರು ಜಂಭಕೊಚ್ಚಿಕೊಳ್ಳುತ್ತಿದ್ದಾರೋ, ಅವರೇ ಮುಸಲ್ಮಾನರ ಕ್ರೋಧಕ್ಕೆ ಅವರು ಪಾತ್ರರಾಗಿರುವರು. ಒಬ್ಬ ಮುಸಲ್ಮಾನ ಮುಖಂಡರು ಹೇಳಿದಂತೆ ಜಿನ್ನರು ತಮ್ಮ ಈ ದುರ್ವ್ಯವಹಾರದಿಂದ ಭಾರತೀಯ ಮುಸಲ್ಮಾನರ ವಿಶ್ವಾಸವನ್ನು ಕಳಗೊಂಡಿರುವರು.

ಜಿನ್ನರ ಮಹಾ ಪ್ರಮಾದ

ತಮ್ಮ ಪ್ರಬಲ ಅನುಯಾಯಿಗಳಾದ ಸರ್ ಸಿಕಂದರ ಹಯಾತ್ ಖಾನರು ಮತ್ತು ಫಜಲುಲ್ಲ ಹಕ್ಕರಂಥವರ ವಿಶ್ವಾಸಕ್ಕೆ ಶ್ರೀ ಅಬುಲ್ ಕಲಾಂ ಆಜಾದರು ಮಾನ್ಯರಾಗಿದ್ದಾರೆ. ಮತ್ತು ಹಿಂದು ಮುಸಲ್ಮಾನ ಐಕ್ಯಸ್ಥಾಪನೆಗೆ ಕಾಂಗ್ರೆಸಿನ ಕಡೆಯಿಂದ ಅವರೇ ಸಮರ್ಥರು ಎಂದು ಈ ಇಬ್ಬರು ಲೀಗು ಪ್ರಧಾನ ಮಂತ್ರಿಗಳು ಯಥಾರ್ಥವಾಗಿ ತಿಳಿದಿದ್ದಾರೆ ಎಂಬುದನ್ನು ಜಿನ್ನರು ತಮ್ಮ ಕ್ರೋಧದ ಪರಮಾವಸ್ಥೆಯಲ್ಲಿ ಮರೆತೇ ಹೋಗಿದ್ದಾರೆ. ಭಾರತೀಯ ಮುಸಲ್ಮಾನರು ಎಂದರೆ ತಾನು ಒಬ್ಬನೆ. ಮತ್ತು ಈ ಮುಸಲ್ಮಾನರ ಹಿತವೆಂದರೆ ತನ್ನ ಹಿತ ಮಾತ್ರ, ಎಂದು ಜಿನ್ನರು ತಿಳಕೊಂಡು ದೊಡ್ಡ ಪ್ರಮಾದ ಮಾಡಿರುವರು. ಈಗ ಅವರು ಕಣ್ಣಿದ್ದು ಮುಚ್ಚಿದ್ದ ತಮ್ಮ ಕಣ್ಣುಗಳನ್ನು ತೆರೆದು ನೋಡಿದರೆ, ಭಾರತೀಯ ಮುಸಲ್ಮಾನರೆಂದರೆ ಇತರರೂ ಇದ್ದಾರೆ ಎಂಬುದು ಗೊತ್ತಾದೀತು.

ಜಿನ್ನರನ್ನು ಹೊರದೊಬ್ಬಿರಿ

ಮುಸ್ಲಿಂ ಲೀಗಿನ ಮುಖ್ಯ ಠಾಣ್ಯ ಎಂದೆಂತಿರುವ ಬಂಗಾಳದಲ್ಲಿಯೇ ಜಿನ್ನರ ವಿರೋಧವು ಹೆಚ್ಚೆಚ್ಚು ಬೆಳೆಯುತ್ತಿದೆ. ಖಾನ್ ಬಹದೂರ್ ಯುಸೂ. ಎಮ್. ಜಾನ್, ರಂಗ್ಪುರ ಲೀಗಿನ ಆಧಾರ ಸ್ತಂಭಗಳೇ— ಈ ಮುವತ್ತು ವರ್ಷಗಳಲ್ಲಿ ಜಿನ್ನರು ಮುಸಲ್ಮಾನ ಸಮಾಜಕ್ಕೆ ಮಾಡಿದ ಸೇವೆಯನ್ನು ಅಳೆಯುವ ಸಮಯವೀಗ ಬಂದಿದೆ. ಇವರ ಅಧಿಕಾರ ಕಾಲದ[illegible]ಯೇ ಹಿಂದೂ ಮುಸಲ್ಮಾನ ಸಂಬಂಧವು ಬಹುದೂರಕ್ಕೆ ಕಡಿದು ಹೋಯಿತು ಮಾತ್ರವಲ್ಲ, ಮುಸಲ್ಮಾನರೊಳಗೆಯೇ ಅಂತಃ ಕಲಹಕ್ಕಾರಂಭವಾಯಿತು. ಜಿನ್ನರು ಮುಸಲ್ಮಾನ ಜಾತಿಗೆ ಯಾವ ಉಪಕಾರವನ್ನೂ ಮಾಡಲಿಲ್ಲ. ಆದ್ದರಿಂದ ಅವರನ್ನು ಅಧಿಕಾರಪದದಿಂದ ತಳ್ಳಿಹಾಕಬೇಕು' ಎಂದಿದ್ದಾರೆ. ಬೊಂಬಾಯಿ ಸರಕಾರದ ಮಂತ್ರಿಗಳಾಗಿದ್ದ ಸರ್ ರಫಿಉದ್ದೀನ ಅಹ್ಮದರವರು ಜಿನ್ನರ ಸಂಕುಚಿತತೆಯ ಕುರಿತು ಹೇಳುತ್ತಾ ಹೀಗೆಂದಿರುವರು— 'ಜಿನ್ನರು ಮಾಡಿದ ಮೌಲಾನಾ ಅಬುಲ್ ಕಲಾಂ ಆಜಾದರ ನಿಂದೆಯನ್ನು ಓದಿ ದುಃಖಿತನಾಗದ ಯಾವ ಮುಸಲ್ಮಾನ ಶಿಕ್ಷಿತನೂ ಇರುವದಿಲ್ಲ. ಮೌಲಾನಾ ಆಜಾದರಿಗೆ ನಿಂದಾತ್ಮಕ ಉತ್ತರವನ್ನು ಕೊಟ್ಟು, ಜಿನ್ನರು ಖಾದಾನಿಯನ್ನು ಕಪ್ಪೆಂದು ನಿಂದಿಸಿ ಸಂತೋಷಪಟ್ಟ ಮಣ್ಣಿನ ಮಡಕೆಯಂತೆ ಇದ್ದಾರೆ. 'ಮುಸಲ್ಮಾನ ಧರ್ಮ ದ್ರೋಹಿ' ಎಂದು ಈಗ ಯಾವ ಅಪವಾದವನ್ನು ಜಿನ್ನರು ಮೌಲಾನಾ ಆಜಾದರ ಮೇಲೆ ಹಾಕಿದ್ದಾರೋ, ಅದೇ ಅಪವಾದಕ್ಕೆ ಮುವತ್ತು ವರ್ಷಗಳ ಹಿಂದೆ ಜಿನ್ನರೇ ಪಾತ್ರರಾಗಿದ್ದರು ಎಂಬುದನ್ನು ಅವರು ಮರೆಯುತ್ತಕ್ಕದಲ್ಲ.'

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 49/1940

ಅರ್ಜಿದಾರಳು—ಸವಿಯಮ್ಮ ಯಾನೆ ಲಕ್ಷ್ಮಿ ಗೋವಿಂದ ನ್ಯಾಯ್ಕನ ವಿಧವೆ ಕುಂದಾಪುರ ತಾಲೂಕು ಹಾಲಾಡಿ ಗ್ರಾಮದಲ್ಲಿರುವವಳು.

ಎದುರು—1. ಮೈನರ ಸುಬ್ಬ [illegible]ಗೋವಿಂದ ನ್ಯಾ

2. ಮೈನರ ರಾಮ [illegible]ಕನ ಮಕ್ಕಳು.

ಇವರ ಗಾರ್ಡಿಯನ್ ಅಜ್ಜಿ ದುರ್ಗಿ ಅಂಗಪ್ಪ ನ್ಯಾಕ—ಲಕ್ಷ್ಮಣ ನ್ಯಾಕನ ಮಗ ಸದರಿ ಹಾಲಾಡಿ ಗ್ರಾಮದ ಕಟ್ಟುವಟ್ಟಿನಲ್ಲಿರುವವ.

ಅರ್ಜಿದಾರಳ ಗಂಡ ಇತ್ತಲಾಗಿ ಮೃತಪಟ್ಟ ಗೋವಿಂದ ನ್ಯಾಕನು ಹಿಂದುಸ್ತಾನ್ ಕೋ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್ ಕಲ್ಕತ್ತಾ ಕಂಪೆನಿಯಲ್ಲಿ ನಂಬ್ರ 189565ನೇಗೆ ರೂಪಾಯಿ 750ಕ್ಕೆ ಒಂದು ಪೋಲೀಸಿಯನ್ನು ಪಡೆದು, ಸದ್ರಿ ಪೋಲೀಸಿಯ ಬಾಬ್ತು ಹಣ ವಸೂಲು ಮಾಡುವ ಹಕ್ಕನ್ನು ತಾ. 9—5—40ರಲ್ಲಿ ಅರ್ಜಿದಾರಳ ಹೆಸರಲ್ಲಿ ಎಸೈನ ಮಾಡಿರುತ್ತಾನೆ. ಆತನು ತಾ. 15-5-40ರಲ್ಲಿ ಮೃತಪಟ್ಟಿರುವದರಿಂದ ಇನ್ಶೂರೆನ್ಸ್ ಪೋಲೀಸಿಯ ಹಣ ವಸೂಲು [illegible] ಹಕ್ಕುದಾರಳೆಂದು ಅರ್ಜಿದಾರಳು ಆ ಕುರಿತು ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಈ ಕೋರ್ಟಿನ O. P. No. 49/40ನೇಗೆ ದಾಖಲು ಮಾಡಿದ ಅರ್ಜಿಯು ತಾ. 29—7—40ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಯಾರದರೂ ಆಕ್ಷೇಪಗಳಿದ್ದರೆ ಆ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಕೊಳ್ಳತಕ್ಕದ್ದು ತಿಳಿಸಿರುವದು.

Kundapoor, 18—7—'40. S. S. Kolkebail, Advocate for Petitioner

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಲಸ್ಯಪಟ್ಟಾಗ, ಉದಾಸೀನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣುವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳು ಮಾಡವು.

'ಓವಲ್ಟಿನ್' ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಊಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು. ನೆನೆಹಾಕಿ ಹುರಿದ ಮಾಗಿದ ಬಾರ್ಲಿ, ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಧಾತು ಮತ್ತು ಫೊಸ್ಫಟೈಡ್ಸ್ ಇವುಗಳಿಂದ ತಯಾರಿಸಿಟ್ಟ 'ಓವಲ್ಟಿನ್' ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಕಾರರು:

ಮೆಸಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ., (ಇಂಡಿಯಾ) ಲಿಮಿಟೆಡ್

ಕೈಸನಸ್ ಹೋಲ್ ಫಸ್ಟ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು.

ಕಲ್ಕತ್ತಾ, ಕರಾಚಿ ಮತ್ತು ಬೊಂಬಾಯಿ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲಾ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ ಬೆಲೆಯ 'ಓವಲ್ಟಿನ್' ಸೇರಿರುವದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—7—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೭—೧೯೪೦

ಚೀನಕ್ಕೆ ದ್ರೋಹವೆನಿಸುವುದು ಸರಿಯಲ್ಲ!

ಪಂಡಿತ ನೆಹರುಗಳ ಎಚ್ಚರಿಕೆ

ಬ್ರಿಟಿಷ್-ಜಪಾನ ವ್ಯಾಪಾರ ಒಪ್ಪಂದ! ಕೈಶೇಕರ ವೀರವಾಣಿ!

'ಚೀನದಿಂದ ಅಶುಭಕರವಾದ ಸುದ್ದಿಯು ಬರುತ್ತದೆ. ಬ್ರಿಟಿಷ್ ಸರಕಾರವು ಮಳೆಗಾಲದಲ್ಲಿ ಬ್ರಹ್ಮದೇಶ ಚೀನದ ರಸ್ತೆಯನ್ನು ಮುಚ್ಚಲು ಒಪ್ಪಿರುವುದೆಂದು ಇತ್ತೀಚೆಗೆ ತಿಳಿದುಬಂದಿದೆ. ಈಗ ಬ್ರಿಟಿಷ್ ಸರಕಾರವು ಪೂರ್ವದಲ್ಲಿ ಸಂಧಾನ ನಡೆಸುವ ಯತ್ನಮಾಡುತ್ತಿದೆಯೆಂದೂ ತಿಳಿದುಬರುತ್ತದೆ. ಯುದ್ಧಕ್ಕಿಂತ ಶಾಂತತೆಯು ಮೇಲು. ಆದರೆ ಬ್ರಿಟಿಷರು ನಡೆಸಿದ ಪ್ರಯತ್ನದಲ್ಲಿ ಏನೋ ಒಂದು ಉದ್ದೇಶವಿದೆ' ಹೀಗೆಂದು ಪಂಡಿತ ನೆಹರುಗಳು ಒಂದು ಪ್ರಕಟಣೆ ಕೊಟ್ಟಿರುವರು. ಅವರು ಮತ್ತೂ ಹೀಗೆ ಹೇಳಿರುವರು:

'ಎರಡು ವರ್ಷಗಳ ಹಿಂದೆ ರನ್ಸಿಮನ್ ಶಿಷ್ಟಮಂಡಳವು ಜೆಕೋಸ್ಲವೇಕ್ಯದಲ್ಲಿ ಶಾಂತಿಮಾಡಲು ಯತ್ನಿಸಿದ ನೆನಪಾಗುತ್ತದೆ. ಇದರ ಪರಿಣಾಮವೆಂದರೆ ಆ ದೇಶವು ದಾಸ್ಯದಲ್ಲಿ ಮುಳುಗಬೇಕಾಯಿತು. ಇಂಗ್ಲೆಂಡು ಇಂದು ಗಂಡಾಂತರದ ಸ್ಥಿತಿಯಲ್ಲಿದೆ. ಆದುದರಿಂದ ಅದಕ್ಕೆ ಹೆಚ್ಚಿನ ತೊಂದರೆಗಳನ್ನು ಉಂಟುಮಾಡುವ ಇಚ್ಛೆ ಇರಲಿಲ್ಲ. ಆದರೆ ಚೀನದ ವಿಷಯ ದ್ರೋಹ ಬಗೆದರೆ ಅದಕ್ಕೆ ಪರಿಹಾರವು ದೊರೆಯಲಿಕ್ಕಿಲ್ಲ. ಇದರಿಂದ ಅಮೇರಿಕ ಮತ್ತು ಭಾರತದ ಜನರ ಮೇಲೆ ಅನಿಷ್ಟದ ಪರಿಣಾಮವಾಗದೆ ಹೋಗದು. ದಾಳಿಗಾರರನ್ನು ಸಂತಯಿಸುವ ಧೋರಣವು ಹಿಂದೆಯೂ ಅನಿಷ್ಟಕಾರಿಯಾಗಿ ಸಂಭವಿಸಿದೆ. ಬ್ರಿಟನಿನ ಈ ವರ್ತನೆಯಿಂದ ಬ್ರಿಟನು ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವಕ್ಕೆ ಬೆಂಬಲ ಕೊಡುವುದೆಂದು ಸ್ಪಷ್ಟವಾಯಿತು. ಭಾರತ ಮತ್ತು ಚೈನಗಳು ಎರಡೂ ಕೂಡಿಯೇ ಇದ್ದು ಅವೆರಡೂ ಕೂಡಿಯೇ ಮುಂದೆ ಸಾಗುವುವು. ಆ ಉಭಯ ರಾಷ್ಟ್ರಗಳ ಹಿತವೂ ಒಂದೇ ಆಗಿದೆ.'

ಅಂತರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಜಪಾನಿನೊಡನೆ ವಿರೋಧ ಕಟ್ಟಿಕೊಳ್ಳುವುದು ಕಷ್ಟತರವೆಂದು ಕಂಡುಬಂದುದರಿಂದ ಬರ್ಮಾ-ಚೀನ ಹೆದ್ದಾರಿಯನ್ನು ಮುಚ್ಚಬೇಕೆಂದು ಜಪಾನು ಕೇಳಿರುವುದನ್ನು ಬ್ರಿಟಿಷ ಸರಕಾರವು ಒಪ್ಪಿದೆ. ಚೀನದ ವಿರೋಧವಾಗಿ ಜಪಾನು ಚೀನ ಸಮುದ್ರದಲ್ಲಿ ವ್ಯಾಪಾರಕ್ಕೆ ತಡೆಕಟ್ಟು ಹಾಕಿದ್ದುದರಿಂದ, ಬರ್ಮಾ ಚೀನದ ಈ ಹೆದ್ದಾರಿಯಿಂದಾಗಿಯೇ ಚೀನಕ್ಕೆ ಬೇಕಾದ ಯುದ್ಧೋಪಕರಣಗಳೂ ಶಸ್ತ್ರಾಸ್ತ್ರಗಳೂ ಇತರ ವ್ಯಾಪಾರ ಸಾಮಾಗ್ರಿಗಳೂ ಅಮೇರಿಕ ಮತ್ತು ಬೇರೆ ಬೇರೆ ದೇಶಗಳಿಂದ ಚೀನಕ್ಕೆ ಹೋಗುತ್ತಿದ್ದುವು. ಬ್ರಿಟಿಷ ಸರಕಾರವು ಈ ಹೆದ್ದಾರಿಯನ್ನು ವ್ಯಾಪಾರಕ್ಕೆ ಮುಚ್ಚಿ ಬಿಟ್ಟುದರಿಂದ ಯುದ್ಧಾಸಕ್ತ ಚೀನದ ಕತ್ತು ಹಿಸುಕಿದಂತಾಗಿದೆ. ಇನ್ನು ಮುಂದೆ ಅದು ತನಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ಪಡೆಯಲಿಕ್ಕೆ ರಷ್ಯದ ಒಂದೇ ಒಂದು ಮಾರ್ಗವು ಉಳಿದಿರುವುದು. ಹೆದ್ದಾರಿಯನ್ನು ಮುಚ್ಚುವ ಜಪಾನಿನ ಕೇಳಿಕೆಯನ್ನು ಬ್ರಿಟಿಷ ಸರಕಾರವು ಮನ್ನಿಸಿದುದರಿಂದ ಜಪಾನಿನ ಅನ್ಯಾಯ ಪ್ರವರ್ತನೆಗೆ ಬ್ರಿಟಿಷ ಸರಕಾರವು ಪ್ರೋತ್ಸಾಹ ಕೊಟ್ಟಂತಾಯಿತು.

ಅಮೇರಿಕದ ಎಚ್ಚರಿಕೆ

ಬ್ರಿಟನು ಮಾತ್ರ ಚೀನದ ಮಾರ್ಗವಾಗಿ ಚೀನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿ ಕೊಡುತ್ತಿರುವದಲ್ಲ. ಇತರ ದೇಶಗಳು ಮುಖ್ಯವಾಗಿ ಅಮೇರಿಕವು—ಆ ಮಾರ್ಗವನ್ನು ಬಹುಕಾಲದಿಂದ ಉಪಯೋಗಿಸುತ್ತ ಬಂದಿವೆ. ಹೀಗಾದ್ದರಿಂದ ಬ್ರಿಟಿಷ ಸರಕಾರದ ಈ ನಿರ್ಧಾರದಿಂದ ಅಮೇರಿಕವು ಸಂತಪ್ತವಾಗಿದೆ. ಹೆದ್ದಾರಿಯನ್ನು ಮುಚ್ಚಿದುದರಿಂದ ಅಮೇರಿಕದ ವ್ಯಾಪಾರ ವಹಿವಾಟುಗಳಿಗೆ ಭಂಗ ಬಂದಿದೆ. ಪ್ರಪಂಚದ ವ್ಯಾಪಾರದ ಹೆದ್ದಾರಿಗಳಲ್ಲಿ ಎಲ್ಲಾ ರಾಷ್ಟ್ರಗಳ ಹಿತಾಸಕ್ತಿ ಇರುತ್ತದೆ. ಆದ್ದರಿಂದ ಬರ್ಮಾ ಚೀನಾ ಹೆದ್ದಾರಿಯನ್ನು ಮುಚ್ಚಿ ವ್ಯಾಪಾರ ವಹಿವಾಟುಗಳಿಗೆ ಭಂಗ ತರುವುದು ಜಗತ್ತಿನ ಶಾಂತಿಯನ್ನು ಕೆಡಿಸಲಿಕ್ಕೆ ಕಾರಣವಾಗುವುದು ಎಂದು ಅಮೇರಿಕ ಸರಕಾರವು ಎಚ್ಚರಿಕೆಯನ್ನು ಕೊಟ್ಟಿರುವುದು.

ಚೀನದ ಧೃತಿ ಕೆಟ್ಟಿಲ್ಲ

ಬ್ರಿಟಿಷ ಸರಕಾರದ ನಿರ್ಧಾರದಿಂದ ಚೀನದ ಬೆನ್ನಿಗೆ ಬಲವಾದ ಪೆಟ್ಟನ್ನು ಕೊಟ್ಟಂತೆ ಆಗಿದೆಯಾದರೂ ಅದು ಧೃತಿಗೆಟ್ಟಿರುವುದಿಲ್ಲ. ಈ ನಿರ್ಧಾರದಿಂದ ಚೀನವು ಅಕಾಲದಲ್ಲಿ ಅಥವಾ ಶೀಘ್ರದಲ್ಲಿ ಯುದ್ಧವನ್ನು ಕೊನೆಗಾಣಿಸುವುದೆಂದು ಯಾರಾದರೂ ತಿಳಿಯುವರಾದರೆ ಅದು ದೊಡ್ಡ ತಪ್ಪೇ ಸರಿ. ಚೀನ ಸರಕಾರದ ಕಡೆಯಿಂದ ಹೊರಟ ಒಂದು ಪ್ರಕಟನೆಯಲ್ಲಿ—'ವ್ಯಾಪಾರದ ಹೆದ್ದಾರಿಗಳನ್ನು ಮುಚ್ಚುವುದರಿಂದ ಚೀನವು ಜಪಾನಿನೊಡನೆ ಸಂಧಿ ಮಾಡಿಕೊಳ್ಳಲಿಕ್ಕೆ ಮುಂದಾಗಿ ಜಪಾನಿನ ಎಲ್ಲಾ ಶರ್ತಗಳನ್ನು ಒಪ್ಪಿಕೊಳ್ಳುವದೆಂದು ತಿಳಿಯುವುದು ಮೂಢತನವಾಗಿದೆ. ಈ ನಿರ್ಧಾರವು ಅನ್ಯಾಯ, ಅಕ್ರಮ ಮತ್ತು ಕಾನೂನಿಗೆ ವಿರೋಧವೆಂದೂ, ಸ್ನೇಹಾಚಾರಕ್ಕೆ ಭಂಗ ತರುವಂಥದ್ದೆಂದೂ ಚೀನ ಸರಕಾರವು ತಿಳಿಯುತ್ತದೆ. ಈ ನಿರ್ಧಾರದಿಂದ ತನ್ನ ಶತ್ರುವಿಗೆ ಸಹಾಯ ಮಾಡಿದಂತಾಗಿದೆಎಂದೂ ಚೀನವು ಅರ್ಥಮಾಡಿಕೊಂಡಿದೆ. ಏನು ಬೇಕಾದರೂ ಆಗಲಿ, ಚೀನವು ಹೋರಾಟವನ್ನು ಕೊನೆಯ ತನಕ ಮುಂದರಿಸುವುದು' ಎಂದಿದೆ.

ಚಿಯಾಂಗ್ ಕೈ ಶೇಕರ ವೀರವಾಕ್ಯಗಳು

ಬ್ರಿಟಿಷ ಸರಕಾರವು ಬರ್ಮಾ-ಚೀನ ಹೆದ್ದಾರಿಯನ್ನು ಮುಚ್ಚಿದುದರಿಂದ ಬ್ರಿಟನು ಚೀನದ ಸ್ನೇಹವನ್ನು ಕಳಕೊಂಡಿದೆ. ಅಷ್ಟು ಮಾತ್ರವಲ್ಲ, ಚೀನ ಜಪಾನ ಶಾಂತಿಸ್ಥಾಪನೆಗೆಂದು ಬ್ರಿಟನು ಈ ಹೆದ್ದಾರಿಯನ್ನು ಮುಚ್ಚುವುದಾದರೆ ಪೂರ್ವ ದೇಶಗಳಲ್ಲಿ ತನಗಿದ್ದ ಸ್ಥಾನವನ್ನು ಅದು ಕಳಕೊಳ್ಳುವುದು' ಎಂದಿದ್ದಾರೆ.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri

Fixed Deposits will be received at following rates of interest.

For	3 months	3½%
„	6	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

ಸ್ವದೇಶಾಭಿಮಾನಿ

ತಾರೀಕು 26—7—1940

ಬ್ರಿಟನು ವಿಚಾರಿಸಬೇಕು

ಯುರೋಪಿನಲ್ಲಿ ವಿಷಮ ವಾತಾವರಣವುಂಟಾಗಿರಲು, ಜೀವನ ಮರಣದ ಸಂಗ್ರಾಮದಲ್ಲಿ ತೊಡಗಿರುವ ಬ್ರಿಟನಿಗೆ ತನ್ನ ಸಂಪೂರ್ಣ ಬೆಂಬಲವನ್ನು ಕೊಡುವ ವಿಷಯದಾಗಿ ಬ್ರಿಟನಿನೊಡನೆ ಕಾಂಗ್ರೆಸು ಕೇಳಿದ ಕೇಳಿಕೆಗಳನ್ನು ಇಂದು ನಿರ್ಮಲ ಮನಸ್ಸಿನಿಂದ ಬ್ರಿಟನು ವಿಚಾರಿಸಬೇಕಾಗಿದೆ. ಹಾಗಾದರೆ ಮಾತ್ರ ಈಗ ಸರಕಾರವು ರಾಷ್ಟ್ರದ ರಕ್ಷಣೆಯ ಕುರಿತು ಮಾಡುವ ಹಲವು ವಿಧದ ಪ್ರಯತ್ನಗಳಿಗೆ ಕಾಂಗ್ರೆಸು ಪರಿಪೂರ್ಣ ಬೆಂಬಲವನ್ನು ಕೊಟ್ಟು ಆ ಕಾರ್ಯವು ಜನತೆಯ ಹೃತ್ಪೂರ್ವಕವಾದ ಸಹಾಯದಿಂದ ಯಶಸ್ವಿಯಾಗುವಂತೆ ನೆರವಾಗುವುದು. ಅನ್ಯೋನ್ಯ ಸಹಕಾರ, ವಿಚಾರ ವಿನಿಮಯದಿಂದಲೇ ರಾಷ್ಟ್ರದ ನಿಜವಾದ ಉತ್ಕರ್ಷೆಯು ಇಂದಿನ ವಿಷಮ ಕಾಲದಲ್ಲಿ ಆಗುವುದು ಸಾಧ್ಯವಿದೆ. ಬ್ರಿಟನಿಗಾದರೂ ಇಂದು ಅದು ಮಾಡುತ್ತಿರುವ ಹೋರಾಟದಲ್ಲಿ ಹೆಚ್ಚಿನ ಬೆಂಬಲವು ಶಕ್ತಿಯು ಸ್ವತಂತ್ರವಾದ ಭಾರತದ ಸಹಾಯದಿಂದ ಕೂಡಲಿದೆಯೆಂಬುದಾಗಿ ಮದ್ರಾಸಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ ಮಾನ್ಯ ರಾಜಾಜಿಯವರು ಬ್ರಿಟನಿಗೆ ಬಹಳ ವಿಚಾರ ಪೂರ್ಣವಾದ ಅನೇಕ ಸಲಹೆಗಳನ್ನಿತ್ತರು.

ಅವರು ತಮ್ಮ ಭಾಷಣದಲ್ಲಿ ಕಾಂಗ್ರೆಸು ಮೊನ್ನೆ ಮಾಡಿದ ನಿರ್ಣಯದ ವಿಷಯವನ್ನು ವಿಸ್ತಾರವಾಗಿ ವಿವರಿಸುತ್ತಾ, ವರ್ಕಿಂಗ್ ಕಮಿಟಿ ಮತ್ತು ಗಾಂಧಿಜಿಯವರೊಳಗೆ ಉಂಟಾದ ಮತಭೇದವೇನೆಂದು ಸಾಂಗವಾಗಿ ವಿಶದಗೊಳಿಸಿದರು. ಅದೇ ಸಂದರ್ಭದಲ್ಲಿ ಅವರು ಮುಂದುವರಿಸುತ್ತಾ, ಗಾಂಧಿಜಿಯವರ ಮತದಿಂದ ಭಿನ್ನಮತವಾಗಿ ಕಾಂಗ್ರೆಸು ಇಂದು ನಿರ್ಣಯ ಮಾಡಿ, ಬ್ರಿಟನಿಗೆ ಸಹಾಯ ಕೊಡಲು, ರಾಷ್ಟ್ರ ರಕ್ಷಣೆಯ ಬಗ್ಗೆ ಪ್ರಯತ್ನ ಮಾಡಲು ಮನಸ್ಸು ಮಾಡಿರುವಾಗ, ಸರಕಾರೀ ಅಧಿಕಾರಿಗಳು ಅತ್ತಿತ್ತ ಓಡಾಡಿ, ಹಣ ಶೇಖರಿಸಿ ಜನರನ್ನು ಸೈನ್ಯಕ್ಕೆ ಸೇರಿಸುವ ಈ ಕಾರ್ಯಕ್ಕಿಂತ, ರಾಷ್ಟ್ರ ರಕ್ಷಣೆಗೆಂದು ಉಜ್ವಲ ಉತ್ಸಾಹದಿಂದ ಜನವೂ ಧನವೂ ಮುಂದೆ ಬಂದು, ನಮ್ಮ ಇಂದಿನ ಉದ್ದಿಷ್ಟ ಕಾರ್ಯವು ಸಫಲವಾಗಬೇಕಾದರೆ ಜನತೆಯ ಪ್ರತಿನಿಧಿಗಳನ್ನು ಸರಕಾರದ ಅಧಿಕಾರದಲ್ಲಿ ನಿಯೋಗಿಸಿ, ಅವರಿಂದ ಕಾರ್ಯಗಳನ್ನು ಮಾಡಿಸಿರಿ ಎಂಬುದಾಗಿ ಬ್ರಿಟನಿಗೆ ಸಲಹೆಯನ್ನಿತ್ತರು. ಆ ಸಮಯದಲ್ಲಿಯೇ ರಾಜಾಜಿಯವರು ವೈಸರಾಯರ ಕೌನ್ಸಿಲಿನ ವಿಸ್ತರಣೆಯ ವಿಷಯವು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಲಾರದೆಂಬುದನ್ನೂ, ನಿಜವಾಗಿ ಜನತೆಗೆ ತೀವ್ರ ಉತ್ಸಾಹವೇರಬೇಕಾದರೆ ಜನತೆಯ ಪ್ರತಿನಿಧಿಗಳೇ ಅಧಿಕಾರದಲ್ಲಿರಬೇಕಾಗಿದೆಯೆಂಬ ವಿಷಯವನ್ನೂ ವಿವರಿಸಿ ಹೇಳಿದರು. ಇಂತಹ ಸಮಯದಲ್ಲಿ ಭಾರತದ ಕೇಳಿಕೆಗೆ ಬ್ರಿಟನು ಕಿವಿಗೊಡುವುದರಿಂದ ಅತ್ಯಂತ ವಿಜಯವು ಸಾಧಿಸಲಿದೆಯೆಂದೂ, ಹೀಗೆ ಮಾಡುವುದರಿಂದ ಭಾರತೀಯರು ತಮ್ಮ ಹಿಂದಿನ ಅಭಿಪ್ರಾಯ ಭೇದಗಳನ್ನು ಮರೆತು ಏಕಮತದಿಂದ ಬ್ರಿಟನಿನ ಬೆಂಬಲ ನಿಂತು ಪ್ರಪಂಚವನ್ನು ಆಕ್ರಮಿಸಿ ಮುಂದೊತ್ತಿ ಬರುತ್ತಿರುವ ದುಷ್ಟ ನಾಜೀ ಪದ್ಧತಿಯನ್ನು ಮುರಿಯಲು ನೆರವಾಗುವರೆಂದೂ ತಿಳಿಸಿದರು.

ಭಾರತದ ಸರ್ವಮಾನ್ಯರಾದ ಹೊಣೆಗಾರಿಕೆಯ ಮುಖಂಡರ ಇಂತಹ ಅಮೂಲ್ಯ ವಚನಗಳ ಕಡೆಗೆ ಬ್ರಿಟನು ಕಿವಿಗೊಡುವುದು ಅವಶ್ಯವಲ್ಲವೆ?

ಸಂಧಿಯೋ? ಸಂಗ್ರಾಮವೊ?

ಹಿಟ್ಲರನ ರೀಶ್‌ಸ್ಟಾಗಿನ ಮುಂದೆ ಒಂದು ಭಾಷಣ ಮಾಡುತ್ತ ಅದರಲ್ಲಿ ಹಲವು ವಿಷಯಗಳನ್ನು ವಿವರಿಸಿರುವನು. ಆತನ ಮಾತಿನ ಒಟ್ಟು ಮತಿತಾರ್ಥವು ಬ್ರಿಟನು ಶಾಂತಿ ಸಲಹೆಗೆ ಒಪ್ಪಬೇಕೆಂದಾಗಿರುತ್ತದೆ. ಆದರೆ ತನ್ನ ಮಾತನ್ನು ಕೃಪೆಯ ಭಿಕ್ಷೆ ಬೇಡುವವನಂತೆ ತಾನು ಹೇಳುವುದಿಲ್ಲವೆಂದೂ ವಿಜಯಿಯಾದವನು ಹೇಳುತ್ತಿರುವಂತೆ ಈಗ ತಾನು ಹೇಳುತ್ತಿರುವೆನೆಂದೂ ಆತನು ದರ್ಪೋಕ್ತಿಯನ್ನು ಆಡುತ್ತಾ ಇದ್ದಾನೆ. ತನ್ನ ಇಷ್ಟದಂತೆ ಬ್ರಿಟನು ಶಾಂತಿ ಸಲಹೆಗೆ ಒಪ್ಪಬೇಕೆಂದು ಆತನ ಅಪೇಕ್ಷೆಯಾಗಿದೆ. ಆದರೆ ಹಿಟ್ಲರನ ಇಚ್ಛೆಯಂತೆ ಬ್ರಿಟನು ಒಪ್ಪಿಕೊಂಡು ಸಂಧಾನ ಮಾಡುವುದು ಸಾಧ್ಯವಿಲ್ಲ. ಹಿಟ್ಲರನ ಮಾತ ಸಂಧಿ ಹಾಗೂ ಸಂಗ್ರಾಮ ಇವುಗಳೆರಡನ್ನೂ ಕೆರಳಿಸುವ ಸ್ವಭಾವದ್ದಾಗಿ ಹೃತ್ಪೂರ್ವಕವಾಗಿ ನಿರ್ಮಲ ಮನಸ್ಸಿನಿಂದ ಲೋಕಹಿತಾಕಾಂಕ್ಷೆಯಿಂದ ಬಂದುದೆಂದು ತಿಳಿಯುವಂತಿಲ್ಲ.

ಇದು ಹಿಟ್ಲರನ ಬರಿಯ ಅರ್ಭಟಿ ಮಾತ್ರ. ಇದು ವರೆಗಿನ ಯುದ್ಧಗಳಲ್ಲಿ ತಾನು ವಿಜಯ ಹೊಂದಿದೆನೆಂಬ ದರ್ಪದ, ಅಹಂಭಾವದ ದುರಭಿಪ್ರಾಯವೂ ಅದರಲ್ಲಿ ಚೆನ್ನಾಗಿ ಅಡಕವಾಗಿದೆ. ಅಷ್ಟು ಮಾತ್ರವಲ್ಲದೆ, ಇದುವರೆಗೆ ಸುಸಂಘಟಿತವಾಗಿರದ ಅಲ್ಪ ರಾಷ್ಟ್ರಗಳನ್ನು ಶರಣು ಮಾಡಿದಂತೆ, ಅಖಿಲ ಪ್ರಪಂಚದಲ್ಲಿ ಅತ್ಯಂತ ಪ್ರಬಲವೆನಿಸಿರುವ ಬ್ರಿಟಿಷ್ ಸರಕಾರವನ್ನು ಎದುರಿಸುವವುದು ಸಾಧ್ಯವಿಲ್ಲವೆಂಬ ವಿಷಯವು ತನಗೆ ಚೆನ್ನಾಗಿ ತಿಳಿದಿದ್ದು, ಬ್ರಿಟನನ್ನು ಕೆಣಕುವುದರಿಂದ ತನಗೆ ಒದಗಲಿರುವ ನಿಶ್ಚಿತ ವಿಪತ್ತನ್ನು ಮನಗಂಡು ಶಾಂತಿಗಾಗಿ ಬೇಡಿದ ಬೇಡಿಕೆಯ ಧ್ವನಿಯೂ ಅವನ ಮಾತುಗಳಲ್ಲಿ ವ್ಯಕ್ತವಾಗಿದೆ.

ಬ್ರಿಟಿಷ್ ಸರಕಾರವು ಹಿಟ್ಲರನ ಬೂಟಾಟಿಕೆಗೆ ಬೆದರುವಂತಿಲ್ಲ. ಮಾತ್ರವಲ್ಲದೆ ಹಿಟ್ಲರನ ಅಪೇಕ್ಷೆಯಂತೆ ಒಪ್ಪಿಕೊಂಡು ಸಂಧಿಮಾಡಲು ಒಪ್ಪಲಾರದು. ಹಿಟ್ಲರನು ಇಂತಹ ಬರಿಯ ಬೊಬ್ಬೆಯಿಂದ ಬ್ರಿಟನನ್ನು ವಂಚಿಸಿ ಕಾರ್ಯ ಸಾಧಿಸಿಕೊಳ್ಳುವೆನೆಂದು ಬಗೆದಿದ್ದರೆ, ಅದು ಆತನ ಬರಿಯ ಭ್ರಮೆಯಲ್ಲದೆ ಬೇರೇನೂ ಅಲ್ಲ. ಹಿಟ್ಲರನೇ ಅಂಜಿಕೊಂಡಿರುವಂತೆ, ಮುಂದಿನ ಸಂಗ್ರಾಮದಲ್ಲಿ ಜರ್ಮನಿಯ, ಹಿಟ್ಲರ್‌ಶಾಹಿಯ ಪತನವು ನಿಶ್ಚಯವಾಗಿಯೂ ಆಗಲಿದೆ!

ಬಾಲ್ಟಿಕ್ ರಾಷ್ಟ್ರಗಳು

ಬಾಲ್ಟಿಕಿನ ಲೇಟ್ವಿಯ, ಲಿಥುವೇನಿಯ ಮತ್ತು ಎಸ್ಟೋನಿಯ ಈ ಮೂರು ರಾಷ್ಟ್ರಗಳು ರಷ್ಯದ ಸಮತಾ ನೀತಿಯ ಸರಕಾರವನ್ನು ಅಂಗೀಕರಿಸಿಕೊಂಡಿವೆಯೆಂಬ ಆಶ್ಚರ್ಯದ ವಾರ್ತೆ ಬಂದಿದೆ. ಅಲ್ಲಿನ ಪಾರ್ಲಿಮೆಂಟುಗಳ ಈಗಾಗಲೇ ರಷ್ಯದ ರಾಜ್ಯಭರಣ ನೀತಿಯ, ರಾಜ್ಯರಚನಾ ಪದ್ಧತಿಯನ್ನು ಅಂಗೀಕರಿಸ ನಡೆದಿರುತ್ತದಾಗಿಯೂ ಗೊತ್ತಾಗಿದೆ. ರಷ್ಯದೊಡನೆ ಈ ರಾಷ್ಟ್ರಗಳ ಪರಸ್ಪರ ಸಹಾಯಕ ಒಪ್ಪಂದವನ್ನು ಮಾಡಿಕೊಂಡ ಕಾಲದಲ್ಲಿ ಹೀಗೆ ಇವುಗಳ ರಷ್ಯದ ವಶಕ್ಕೆ ಒಳಬೀಳಬಹುದೆಂಬ ವಿಚಾರವನ್ನು ಯಾರೂ ಮಾಡಿರಲಿಲ್ಲ.

ಮೊತ್ತಮೊದಲು ಅಲ್ಲಿ ರಷ್ಯದ ಹೆಚ್ಚಿನ ಚಟುವಟಿಕೆಗಳು ಕಂಡುಬರುತ್ತಿರಲಿಲ್ಲ. ಆದರೆ [illegible] ದಿನದಿಂದ ದಿನಕ್ಕೆ ಅಲ್ಲಿ ಬಲವಾಗತೊಡಗಿತು. ಕೆಲಸಗಾರರು ಆ ತತ್ವವನ್ನು ಅಂಗೀಕರಿಸಿಕೊಂಡರು. ಕೆಲಸಗಾರರ ಸಂಘಗಳು ಪ್ರಬಲವಾಗಿ ಸರಕಾರವನ್ನು ಒತ್ತಾಯಪಡಿಸಲು ಆರಂಭಿಸಿದುವು. ಇದರ ಪ್ರಾಬಲ್ಯದಿಂದ ಇಂದು, ಅವೆಲ್ಲವುಗಳ ಪರಿಣಾಮವಾಗಿ ಆ ರಾಷ್ಟ್ರಗಳು ರಷ್ಯದ ರಾಜನೀತಿಯನ್ನೇ ಅಂಗೀಕರಿಸಿಕೊಳ್ಳುವಂತೆ ಆಗಿದೆ. ಈ ಮೂರು ರಾಷ್ಟ್ರಗಳನ್ನು ತನ್ನ ನೀತಿಗೆ ಸೇರಿಸಿಕೊಳ್ಳುವ ಕಾರ್ಯವನ್ನು ಸೋವಿಯಟ್ ಯೂನಿಯನ್ ಬಹಳ ಚಾತುರ್ಯದಿಂದ ಯಶಸ್ವಿಯಾಗಿ ಸಾಧಿಸಿಕೊಂಡಿತು.

ಸ್ವೀಕಾರ ವಿಮರ್ಶೆ

ಪೌರುಷ—ಲೇಖಕರು ಡಾ| ಗೋಪಾಲಕೃಷ್ಣ ಘಾಯರು—ಪ್ರಕಾಶಕರು ಸಮಾಜ ಪುಸ್ತಕ ಮಾಲೆ ಧಾರವಾಡ, ಕ್ರೌನ್ ೧|೮ ಆಕಾರದ ೧೦೩ ಪುಟಗಳು, ಬೆಲೆ ಒಂದು ರೂಪಾಯಿ.

ಕಾವ್ಯದ ಗುಟ್ಟು, ಪ್ರೇಮಕಲೆ ಪುಸ್ತಕಗಳನ್ನು ಬರೆದು ಪ್ರಸಿದ್ಧರಾದ ಈ ಲೇಖಕರು ಈಗ ಈ ಮೂರನೆಯ ತಮ್ಮ ಕೃತಿಯನ್ನು ಕನ್ನಡಿಗರ ಮುಂದಿಟ್ಟಿರುತ್ತಾರೆ. ಹೆಣ್ಣು ಗಂಡಿನ ಸಂಬಂಧದ ಕುರಿತು ಶಾಸ್ತ್ರೀಯ ಜ್ಞಾನವನ್ನು ಕೊಡುವ ಪುಸ್ತಕಗಳು ಕನ್ನಡದಲ್ಲಿ ಅಪರೂಪ. ಈ ಲೇಖಕರು ಶಾಸ್ತ್ರೀಯ ಜ್ಞಾನವನ್ನುಂಟು ಮಾಡುವ ಲೈಂಗಿಕ ವಿಜ್ಞಾನದ ಕುರಿತು ಬರೆಯುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಲೈಂಗಿಕ ಶಿಕ್ಷಣದ ಅಭಾವದಿಂದ ಹಲವು ಪ್ರಮಾದಗಳು ಅನರ್ಥಗಳುಂಟಾಗುತ್ತವೆ. ಇಂತಹ ಪ್ರಮಾದಗಳಿಂದ ತಪ್ಪಿಸಿಕೊಂಡು ಪೌರುಷವನ್ನು ಸಿದ್ಧಿಸಿಕೊಳ್ಳುವ ಮಾರ್ಗವೇನೆಂಬುದನ್ನು ಸೂಕ್ಷ್ಮವಾಗಿ ಇದರಲ್ಲಿ ವಿವರಿಸಿ ಹೇಳಿರುತ್ತಾರೆ.

ನೋಟೀಸು

ದಕ್ಷಿಣ ಕನ್ನಡ ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 154/1940

ನಾರಾಯಣ ವೆಂಕಟೇಶ ಶೆಣೈ—ಇವರ ಜನರಲ್ ಏಜಂಟ್ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ, ಇವರ ಕಡೆಯಿಂದ ಡಿಕವರಿ ಆಫೀಸರ್— M S Bhandari } ವಾದಿ

ಮತ್ತು

ಕೊಜ್ಜಕಾರ ಪುರುಶೋತ್ತಮ ಪೈ ರಾಮಚಂದ್ರ ಪೈಗಳ ಮಗ ಉಡ್ಪಿ ತಾಲೂಕ ಬಾಳಕುದ್ರು ಗ್ರಾಮದ ಹಂಗಾರಕಟ್ಟೆ } ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯು ತನ್ನ ಭಾಗದ [illegible] ವಾದಿಯ ಉಡಿ ಅಂಗಡಿಯಲ್ಲಿ ತಾ 22—3—1938ರ ವರೆಗೆ ನಡಿಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ [illegible] ರೂಪಾಯಿ 500ಕ್ಕೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಫಿರ್ಯಾದು ತಾ 1 8 40ಕ್ಕೆ ಅಷ್ಟರ ತನಕ ಇಟ್ಟಿರುವದರಿಂದ ಆ ಕುರಿತು [illegible] ಪ್ರತಿವಾದಿಯು [illegible] ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದರಿ ದಾವೆಯು ಪ್ರತಿವಾದಿಯು ಗೈರುಹಾಜರಿಯಲ್ಲಿ ಫೈಸಲು ಮಾಡಲಾದೀತೆಂತ [illegible] ತಿಳಿಯಪಡಿಸೋಣಾಗುತದೆ

Udupi ೨ K } Damodar Kamath,
20—7—1940 } Advocate for Plaintiff

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 116/1938
R E P No 507/1940
R E A No 644/1940

ಲೋರಿಸ್ ರೆಬೇಲ್—ಅರ್ಜದಾರ
ಸಂತಾನ್ ಮಿನೇಜ್ ಸಹಾ—ಎದ್ರಿರು

7ನೇಎದ್ರಿ Ponkra Poojari. Son of Thowda Poojari Residing at Jogi Building cross line Ghoga Street, Bombay No 10 ಅರ್ಜದಾರನು ಮೇಲ್ಕಂಡ ಅಮ್ಲುಜಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ದಾಖಲು ಮಾಡಿದ ಏಲಂ ಇಸ್ತಿಹಾರಿನ ತಕ್ಕೆಯು ವ ಸದ್ರಿ ಏಲಂ ಸಮಯ ಏನಾದರು ಏರಿಸುವದರೆ ಅರ್ಜದಾರಗೆ ಬಿಡ್ ಪರ್ಮಿಶನ್ ವ set off ಕೊಡಿಸಬೇಕಾಗಿ ಸಹಾ ಕೊಟ್ಟ ಅರ್ಜಿಯು ಕೂಡಾ ತಾ 1-8 40ಕ್ಕೆ ಇಟ್ಟಿರುತ್ತದೆ. ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಯಿರುವದಾದರೆ ಅದನ್ನು ಸದ್ರಿ ತಾ 1-8-40 ನೇ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ತ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ತಿರ್ಮ ಮಾಡಿ ಸದರಿ ಅಮ್ಲುಜ್ಯಾರಿಯನ್ನು ಮುಂದರಿಸಲಾಗುವದು.

ಮುಕ್ಕಾಂ ಕಾರ್ಕಳ } I. N Naik,
ತಾ. 15-7-'40. } Pleader for Petr.

ಈ ವಾರದ ಕತೆ:

ಅಧಿಕಾರ!

ಅನುವಾದಕ ಕೆ. ಶ್ರೀನಿವಾಸ ಶೆಟ್ಟಿ

ರಮೇಶನ ವಿವಾಹವು ಸೋಮವತಿ ಯೊಡನೆ ಬಹು ವಿಜೃಂಭಣೆಯಿಂದ ಆಗಿತ್ತು. ಸೋಮವತಿ ಹಳ್ಳಿಯ ಹುಡುಗಿ ಯಾವ ಶಾಲೆಗೂ ಹೋದವಳಲ್ಲ. ಮೈ ಸ್ವಲ್ಪ ಕಪ್ಪು. ಸಿನೇಮಾ ತಾರೆಗಳಿಗೆ ಮನಸೋತ ರಮೇಶ ಸೋಮವತಿಯನ್ನು ಮೆಚ್ಚಲಿಲ್ಲ

ಶೋಭನವಾಯಿತು ಹೆಣ್ಣು ಅಷ್ಟು ರೂಪವತಿ ಅಲ್ಲದಿದ್ದರೂ ಶೋಭನವಾದ ಮೇಲೆ ಎಲ್ಲಾ ಸರಿಹೋಗುತ್ತೆ ಎಂದು ಎಲ್ಲರೂ ತಿಳಿದಿದ್ದರು ಆದು ಅವರ ಅಭಾವನೆ ತಪ್ಪಾಯಿತು ಅವನು ಅವಳನ್ನು ಕಣ್ಣೆತ್ತಿಯೂ ನೋಡಲಿಲ್ಲ

ಐದಾರು ದಿನಗಳು ಕಳೆದ ಮೇಲೆ ಸೋಮವತಿಯನ್ನು ತಾಯಿಮನೆಗೆ ಕರಕೊಂಡು ಹೋದರು. ಅವಳೂ ಹೊರಟು ಹೋದಳು ಆದರೆ ಹೃದಯದಲ್ಲೊಂದು ತೀವ್ರ ವೇದನೆಯು ಮರ್ಮ ಸ್ಥಳವನ್ನು ಭೇದಿಸುತ್ತ ಇತ್ತು

ರಮೇಶ, ಜಮೀನುದಾರರ ಮಗ ಮೂರು ವರ್ಷದ ಬಾಲಕನಾಗಿದ್ದಾಗಲೇ ಅವನ ತಾಯಿ ತೀರಿಕೊಂಡಿದ್ದಳು ಆದ್ದರಿಂದ ಅಜ್ಜಿ ಸಾಕಿದ ಮಗುವಿನಂತೆ ಸಾಕಲ್ಪಟ್ಟಿದ್ದನು ಅವನು ೧೭–೧೮ ವರ್ಷದವನಾದಾಗ ತಂದೆಯೂ ಸ್ವರ್ಗಸ್ಥನಾದನು ಆದ್ದರಿಂದ ಸಣ್ಣ ಪ್ರಾಯದಲ್ಲಿಯೇ ರಮೇಶ ಜಮೀನದಾರಿಯ ಒಡೆಯನಾದ ಬೇಕಾಬೇಕಾದಾಗ ಬೇಕಾದಷ್ಟು ಹಣವು ಖರ್ಚಿಗೆ ದೊರೆಯುತ್ತಿತ್ತು ಆದ್ದರಿಂದ ರಮೇಶನಿಗೆ ಸ್ನೇಹಿತರ ಸಂಖ್ಯೆ ಕಡಿಮೆಯಾಗಿರಲಿಲ್ಲ ಸಿನೇಮ ನಾಟಕ ನರ್ತನಾದಿಗಳನ್ನು ನೋಡಿ ನೋಡಿ ಅವನು ಸೌಂದರ್ಯದ ಪ್ರೇಮಿಯಾಗಿಬಿಟ್ಟಿದ್ದ.

ಈ ಬಾರಿಯ ಸೆಕೆಗಾಲವನ್ನು ಅವನು ಬೆಂಗಳೂರಲ್ಲಿ ಕಳೆಯಬೇಕೆಂದಿದ್ದ ಸರಿ, ಎಲ್ಲವೂ ಸಿದ್ಧವಾಯಿತು ಬೆಂಗಳೂರಿನ ದೊಡ್ಡ ಒಂದು ಹೊಟೇಲಿನ ಎರಡು ಕೋಣೆಗಳು ಬಾಡಿಗೆಗೆ ಕೊಳ್ಳಲ್ಪಟ್ಟವು ಅಲ್ಲಿಯೇ ಅವನಿಗೆ ವತ್ಸಲೆಯ ಪರಿಚಯವಾಯಿತು ಅವಳು ಕಾಲೇಜಿನಲ್ಲಿ ಓದುತಿದ್ದ ಹುಡುಗಿ, ಬಹಳ ರೂಪವತಿ ಸಲಿಗೆಗೂ ಕಡಿಮೆ ಇರಲಿಲ್ಲ ಪರಿಚಯವು ಸ್ನೇಹದಲ್ಲಿ ಪರಿವರ್ತಿತವಾಯಿತು ಇಬ್ಬರೂ ವಾಯುವಿಹಾರಕ್ಕೆ ಹೋಗುತಿದ್ದರು. ಬೆಂಗಳೂರಿನ ಪಾರ್ಕುಗಳಲ್ಲಿ ಇಬ್ಬರೇ ಆಗಿ ವಿಹರಿಸುತಿದ್ದರು ಎರಡು ತಿಂಗಳ ಸಮಯವು ಎರಡು ದಿನಗಳಂತೆ ಕಳೆದುಹೋಯಿತು

ಒಂದು ದಿನ ರಮೇಶ—'ನೀನು ಎಂದಾದರೂ ಉಡುಪಿಗೆ ಬಂದಿರುವಿಯಾ?' ಎಂದು ವತ್ಸಲೆಯನ್ನು ಕೇಳಿದ

'ಇಲ್ಲ' ಎಂದು ಅವಳು ನಸುನಗುತ್ತ ಉತ್ತರ ಕೊಟ್ಟಳು

'ಹಾಗಾದರೆ ಹೊರಡಬಾರದೆ ಉಡುಪಿಗೆ? ಅಲ್ಲಿ ನಮ್ಮ ಮನೆ ಇದೆ ಕೆಲವು ದಿನ ಇದ್ದು ಹೋಗಬಹುದು ಕೃಷ್ಣ ಮಂದಿರವು ನೋಡತಕ್ಕ ಕ್ಷೇತ್ರವಾಗಿದೆ.'

ಬಹಳ ಸಂತೋಷ, ನೀವು ಎಂದು ಹೊರಡುವಿರಿ?'

'ನಾಳೆಯೇ!'

ಉಡುಪಿಯಲ್ಲಿಯೇ ರಮೇಶ–ವತ್ಸಲೆಯರ ಪ್ರಣಯವು ತುತ್ತ ತುದಿಗೇರಿತು ವತ್ಸಲೆಯ ಕೈ ಹಿಡಿಯುವ ರಮೇಶನ ಭಾಗ್ಯವನ್ನು ಅವನ ಸ್ನೇಹಿತರು ಮುಕ್ತ ಕಂಠದಿಂದ ಹೊಗಳಿದರು

ಒಂದು ದಿನ ರಮೇಶ ಎಲ್ಲಿಯೋ ಹೊರಗೆ ಹೋಗಿದ್ದ ಮನೆಯಲ್ಲಿ ಚಾಕರರಲ್ಲದೆ ವತ್ಸಲೆ ಒಬ್ಬಳೇ ಇದ್ದಳು ಸಾಯಂಕಾಲ ಸುಮಾರು ನಾಲ್ಕು ಗಂಟೆಯ ಸಮಯಕ್ಕೆ ಯಾರೋ ಬಾಗಿಲು ತೆರೆದು ಒಳಗೆ ಬರುವುದನ್ನು ಅವಳು ಮಾಳಿಗೆಯಿಂದ ನೋಡಿದಳು ಯಾರಿರಬಹುದೆಂದು ಕೆಳಗಿಳಿದು ಬಂದಳು ಒಬ್ಬ ಯುವತಿ ನಿಂತು ನೋಡಿದಳು

ನೀನ ಯಾರು?' ಎಂದ ವತ್ಸಲೆ ಅವಳನ್ನು ಕೇಳಿದಳು

ರಮೇಶ ಸೋಮವತಿಯನ್ನು ತನ್ನಲ್ಲಿಗೆ ಇನ್ನೂ ಕರೆಸಿರದವನು ನೋಡಿ ತಾಯಿ ತಂದೆಗಳು ಅವಳನ್ನು 'ಭಾಗ್ಯ ಪರೀಕ್ಷೆ ಮಾಡಮ್ಮಾ' ಎಂದು ತಮ್ಮನೊಂದಿಗೆ ಕಳುಹಿಸಿಕೊಟ್ಟಿದ್ದರು ಅವನು ಅವಳನ್ನು ರಮೇಶನ ಮನೆಯಲ್ಲಿ ಬಿಟ್ಟು ಅಲ್ಲಿಂದಲೇ ತನ್ನ ಊರಿಗೆ ಮರಳಿದ ಸೋಮವತಿ ತನ್ನ ಎಲ್ಲಾ ಸಂಗತಿಗಳನ್ನು ವತ್ಸಲೆಯೊಡನೆ ಹೇಳಿ—'ಅಮ್ಮಾ! ನೀನೇ ನನ್ನನ್ನು ಕಾಪಾಡಬೇಕು' ಎಂದು ಆಕೆಯ ಕಾಲುಗಳ ಮೇಲೆ ಬಿದ್ದು ಕಣ್ಣೀರ ಗಳಿಂದ ಪಾದ ಪ್ರಕ್ಷಾಳನ ಮಾಡಿದಳು

ರಮೇಶನ ಈ ಮೊದಲ ವಿವಾಹವಾಗಿದ್ದ ವಿಚಾರವು ವತ್ಸಲೆಗೆ ತಿಳಿದೇ ಇರಲಿಲ್ಲ ಈಗ ಅದು ಅವಳಿಗೆ ತಿಳಿಯಿತು ಸೋಮವತಿಯ ದುರವಸ್ಥೆಯನ್ನು ನೋಡಿ ಅವಳ ಸ್ತ್ರೀ ಹೃದಯವು ಕರಗಿತು 'ತಂಗಿ! ಹೆದರಬೇಡ ನಾನು ನಿರ್ದೋಷಿ, ನಿರಪರಾಧಿ ಇಲ್ಲಿ ನಿನ್ನ ನ್ಯಾಯವಾದ ಅಧಿಕಾರಗಳಿಗೆ ಯಾವ ಹಾನಿಯೂ ತಟ್ಟಲ್ಲ ಇನ್ನು ಒಂದೆರಡು ದಿನಗಳಲ್ಲಿಯೇ ನನ್ನ ರಮೇಶರಾಯರ ವಿವಾಹವು ಆಗುವದರಲ್ಲಿತ್ತು ಆ ಮೇಲೆ ನನ್ನ ಪಾಡೂ ನಿನ್ನ ಹಾಗೆ ಆಗುತಿತ್ತೋ, ಯಾರು ಬಲ್ಲರು ನೀನು ಬಂದು ನನ್ನನ್ನು ಭಾರೀ ಆಪತ್ತುಗಳಿಂದ ಕಾಪಾಡಿದಿ ' ಎಂದಳು

ಅಷ್ಟರಲ್ಲಿ ದೀಪ ಹಚ್ಚುವ ಹೊತ್ತಾಯಿತ ವತ್ಸಲೆ—'ಆ ಕೋಣೆಯಲ್ಲಿ ಇರು ತಂಗಿ! ಈಗಲೇ ಬರುತ್ತೇನೆ' ಎಂದು ಹೇಳಿ ಒಳಗೆ ನಡೆದಳು ಆ ಸಮಯಕ್ಕೆ ರಮೇಶನೂ ಹೊರಗಿನಿಂದ ಒಳಗೆ ಬಂದ ತನ್ನ ಕೋಣೆಯಲ್ಲಿ ಯಾರೋ ಹೆಂಗಸು ಕೂತಿರುವುದನ್ನು ನೋಡಿ, ಅವನು ವತ್ಸಲೆಯನ್ನು ಕರೆದು—'ಅವಳು ಯಾರು' ಎಂದು ಕೇಳಿದ.

'ಒಬ್ಬ ದುಃಖಿನಿ'

'ಏನು?'

'ಅವಳ ಗಂಡ ಅವಳನ್ನು ತ್ಯಜಿಸಿದ್ದಾನೆ ಮತ್ತೆ ಅವನು ಇನ್ನೊಂದು ಮದುವೆ ಆಗಲಿಕ್ಕೆ ಇಚ್ಛಿಸಿದ್ದಾನೆ '

'ಬಹಳ ದುಷ್ಟನಾಗಿರಬಹುದು, ವತ್ಸಲೆ! ಇವಳಿಂದ ಏನಾದರೂ ಅಪರಾಧವಾಗಿರಬಹುದೆ?'

'ಏನೂ ಇಲ್ಲ, ಮೈಯಿಂದ ಕಪ್ಪಾಗಿರುವದೊಂದೇ ಅವಳ ಅಪರಾಧ! ರಮೇಶ! ಪ್ರಾಯ ಹೋದನಂತರ ನನ್ನ ಸೌಂದರ್ಯವೂ ಹೀಗೆ ಕೆಟ್ಟು ಹೋಗುವದು ಆಗ ನೀನೂ ಅವನ ಹಾಗೆ ನನ್ನನ್ನು ಬಿಟ್ಟು ಬಿಡುವೆಯಾ?

'ಛೆ ಎಂಥ ಮಾತ ಆಡತ್ತಿ, ವತ್ಸಲೆ! ಹಾಗೆ ಎಂದಾದರೂ ಆಗುವದಿದೆಯೆ' ನಾನು ರೂಪದ ಪೂಜಾರಿ ಅಲ್ಲ, ಪ್ರೇಮದ ಪೂಜಾರಿ ' ಎಂದು ರಮೇಶ ಉತ್ಸಾಹದಿಂದ ಆಡಿದ

ವತ್ಸಲೆಗೆ ರಮೇಶನ ಆ ಮಾತೇ ಬೇಕಾಗಿತ್ತು ಅವಳು ಕೇಳಿದಳ —'ರಮೇಶ! ನೀನ ಈ ಮಾತನ್ನು ಎದೆಯ ಮೇಲೆ ಕೈ ಇಟ್ಟು ಹೇಳ ಬಲ್ಲೆಯಾ

ಅದಕ್ಕೇನ ಸಂದೇಹ'' ಎಂದು ಪುನಃ ಹೇಳಿದ

ಅವಳ ರಮೇಶನನ್ನು ಸೋಮವತಿ ಕೂತಿದ್ದ ಕೋಣೆಗೆ ಕರಕೊಂಡು ಹೋದಳು ಅವರ ಬರವುದನ್ನು ನೋಡಿ ಸೋಮವತಿ ಎದ್ದು ನಿಂತಳ ವತ್ಸಲೆ ರಮೇಶನಿಗೆ ಸೋಮವತಿಯನ್ನು ತೋರಿಸಿ—'ರಮೇಶ' ನೀನು ಮೋಸಕೊಟ್ಟು ನನ್ನನ್ನು ಮದವೆಯಾಗಲಿದ್ದಿ ನನ್ನನ್ನು ಮದುವೆಯಾಗಿ ಒಬ್ಬ ನಿರಪರಾಧಿ ಬಾಲಿಕೆಯ ಜೀವನ ಕುಸುಮವನ್ನು ಕಾಲಡಿಯಲ್ಲಿ ಮೆಟ್ಟಿ ನಷ್ಟ ಮಾಡಲಿದ್ದಿ ಆದರೆ ನಾರಿ ಹೃದಯವನ್ನು ನೀನೇನು ಬಲ್ಲೆ? ಪತಿಯಿಂದ ಪರಿತ್ಯಕ್ತಳಾದ ಯುವತಿಯ ಹೃದಯದ ಬೇನೆಯನ್ನು ಸ್ತ್ರೀಯರಲ್ಲದೆ, ಸೌಂದರ್ಯೋಪಾಸಕರಾದ ಪುರುಷರು ತಿಲಮಾತ್ರ ಅನುಭವಿಸಲಾರರು. ರಮೇಶ! ಈಗಲಾದರೂ ಸಮಯ ಮಿಂಚಿ ಹೋಗಲಿಲ್ಲ. ಸೋಮವತಿಗೆ ನಿನ್ನ ಮೇಲೆ ಪ್ರೇಮವಿದೆ, ಭಕ್ತಿ ಇದೆ, ಶ್ರದ್ಧೆಯಿದೆ, ಇವುಗಳ ಮುಂದೆ ಸೌಂದರ್ಯವು ತೀರಾ ಅಲ್ಪವಾದುದು ಆದ್ದರಿಂದ ನಿನ್ನ ಪೂರ್ವ ಅಪರಾಧಗಳಿಗಾಗಿ ಅವಳ ಕ್ಷಮೆ ಕೇಳಿ ನೀವಿಬ್ಬರು ಸುಖವಾಗಿರಿ. ಸತಿಪತಿಯರ ಯಥಾರ್ಥ ಪ್ರೇಮದಲ್ಲಿಯೇ ಸ್ವರ್ಗೀಯ ಸೌಂದರ್ಯವಿದೆ ' ಎಂದಳು

ಅಷ್ಟರ ತನಕ ರಮೇಶ ಮೂರ್ತಿವತ್ ನಿಂತಿದ್ದ. ವತ್ಸಲೆಯ ಮಾತು ಮುಗಿದೊಡನೆ ಅವನು ಹೇಳಿದ—ವತ್ಸಲೇ ಕುರುಡನಾಗಿದ್ದ ನನಗೆ ನೀನು ಕಣ್ಣು ಕೊಟ್ಟೆ. ನಿನ್ನ ಮಾತು ಅಕ್ಷರಶಃ ನಿಜವಿರುವುದು ನಶ್ವರವಾದ ಈ ಜಗತ್ತಿನಲ್ಲಿ ಯಾವದು ರೂಪ, ಯಾವದು ಕುರೂಪ ಎಂದು ಯಾರು ಹೇಳಬಲ್ಲರು? ಈ ಜಗತ್ತಿನಲ್ಲಿ ರೂಪ ಕುರೂಪ ಎಂಬುದು ಇಲ್ಲವೇ ಇಲ್ಲ ಯಾವದರಲ್ಲಿ ಪ್ರೇಮವಿದೆಯೋ ಅದರಲ್ಲಿಯೇ ಸೌಂದರ್ಯವಿದೆ ನಾನು ಭ್ರಮೆಯಲ್ಲಿದ್ದೆ '

ಸೋಮವತಿ— ರಮೇಶನ ಕಾಲುಗಳಿಗೆ ಬಿದ್ದಳು ಪ್ರೇಮಾಶ್ರುಗಳನ್ನು ಸುರಿಸುತ್ತ ಅವನು ಅವಳನ್ನು ಎತ್ತಿಕೊಂಡು ಎದೆಗೆ ಅಪ್ಪಿಕೊಂಡ.

ಅವರ ಈ ದಿವ್ಯ ಮಿಲನವನ್ನು ನೋಡಿ ಕಣ್ಣಿಗೆ ಹಬ್ಬ ಮಾಡಿಕೊಂಡು ವತ್ಸಲೆ ಮರುದಿನವೇ ಬೆಂಗಳೂರಿಗೆ ಹೊರಟಳ ಉಡುಪಿ ಯಾತ್ರೆಯು ಯಥಾರ್ಥವಾಗಿಯೂ ಸಫಲವಾಯಿತು. ಎಂದು ಅವಳು ಅತ್ಯಂತ ಆನಂದವನ್ನು ಅನುಭವಿಸಿದಳ

(ಹಿಂದಿಯಿಂದ)

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಹಿಟ್ಲರನು
ರೋಗಾಣುಗಳ ಯುದ್ಧ ಹರಡುವನೆ?
ಹೆದರಿಕೆ ಹುಟ್ಟಿಸುವ ಆರ್ಭಟೆ!

ಬ್ರಿಟನನ್ನು ತನ್ನ ಸೈನಿಕ ಶಕ್ತಿ ಯಿಂದ ಸೋಲಿಸುವುದು ಅಸಾಧ್ಯ ವೆಂದು ತೋರಿದಾಗ, ಅದನ್ನು ನಾಶ ಮಾಡುವ ಕೊನೆಯ ಉಪಾಯ ವಾಗಿ ಹಿಟ್ಲರನು ಬ್ರಿಟನಿನಲ್ಲಿ ರೋಗಾಣು ಯುದ್ಧವನ್ನು ಆರಂಭಿ ಸುವನೆ? ಜ್ಞೋನ್ ಬುಲ್ ಎಂಬ ಪತ್ರಿಕೆಯು ಈ ವಿಷಯವನ್ನು ಚರ್ಚಿ ಸುತ್ತ ಅವನು ಈ ಯುದ್ಧವನ್ನು ಆರಂಭಿಸುವುದು ತೀರ ಕಷ್ಟವಾ ದರೂ, ಬ್ರಿಟನು ಅದಕ್ಕಾಗಿಯೂ ಸರ್ವ ಸಿದ್ಧತೆಗಳನ್ನು ಮಾಡಿದೆ ಎಂದು ಬರೆದಿದೆ.

ವ್ಯರ್ಥ ಭೀತಿ

ಬ್ರಿಟನಿನಲ್ಲಿ ರೋಗಾಣು ಯುದ್ಧ ವನ್ನು ಹೂಡಲಿಕ್ಕೆ ಜರ್ಮನಿಗೆ ಸಾಧ್ಯವೇ ಇಲ್ಲ. ಜನರಲ್ಲಿ ವ್ಯರ್ಥ ಭೀತಿಯನ್ನು ಹುಟ್ಟಿಸಿ ಅವರನ್ನು ಹೆದರಿಸಲಿಕ್ಕಾಗಿಯೇ ಜರ್ಮನಿ ಗೂಢಚಾರರು. ಈ ಸುದ್ದಿ ಯನ್ನು ಹರಡಿಸಿದ್ದಾರೆ. ಆದರೂ ಕೂಡ ಅಂತಹ ರೋಗಾಣುಗಳಿಂದ ಯಾವ ಉಪದ್ರವವೂ ಆಗದಂತೆ ಸ್ಥಳೀಯ ರಕ್ಷಣಾ ಸೇನೆಯ ಸೈನಿಕರು ಈಗಲೂ ರಾತ್ರಿ ಕಾವಲು ಕೊಡುತ್ತಿದ್ದಾರೆ. ನಾಝಿ ಗಳು ಬ್ರಿಟನಿನ ಮೇಲೆ ರೋಗಾಣು ಗಳನ್ನು ಚೆಲ್ಲುವುದಾದರೆ ವಿಮಾನಗಳ ಲ್ಲಿಯೂ ಪೆರಿಚೂಟ್ಸುಗಳಿಂದಲೂ ಬಂದು ಆ ಕಾರ್ಯವನ್ನು ಮಾಡಬೇಕು. ಈ ಕಾವಲಿನ ದೆಸೆಯಿಂದ ಅವರು ಹಾಗೆ ಬರುವುದು ಅಸಾಧ್ಯವಾಗಿದೆ. ಮಾತ್ರ ವಲ್ಲ, ನಿತ್ಯ ಉಪಯೋಗಕ್ಕೆ ತರುವ ಎಲ್ಲಾ ಜಲಾಶಯಗಳ ಕಡೆಗೆ ಅವುಗಳ ನೀರು ವಿಷಮಯವಾಗದಂತೆ ಬಹಳ ಜಾಗ್ರತೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ರೋಗಾಣುಗಳ ರೋಗಬಾಧೆ

ಶತ್ರುಪಕ್ಷದ ವಿಮಾನ, ಪೆರಿಚ್ಯೂಟು ಇತ್ಯಾದಿಗಳಿಂದ ಬ್ರಿಟಿಷ್ ದ್ವೀಪಗಳ ಜಲಾಶಯಗಳಲ್ಲಿ ಕೊಲೆರಾ, ಟೈಫಾಯಿಡ್ ಇತ್ಯಾದಿ ಭಯಂಕರ ರೋಗಗಳ ಅಣು ಗಳನ್ನು ಚೆಲ್ಲಬಂತೆ ಎರಡೂವರೆ ವರ್ಷ ಗಳ ಹಿಂದೆಯೇ ಉಪಾಯಗಳನ್ನು ಹೂ ಡಿದ್ದರು ಕೊಲೆರದ ಅಣುಗಳನ್ನು ಪರಿ ಶೋಧನಾಲಯಗಳಲ್ಲಿ ತಯಾರಿಸಬ ಹುದು. ಆದರೆ ಸ್ವಾಭಾವಿಕ ಅಣುಗಳ ಲ್ಲಿರುವಂತೆ ಕೃತ್ರಿಮವಾಗಿ ತಯಾರಿಸಿದ ಈ ಅಣುಗಳಲ್ಲಿ ರೋಗೋತ್ಪಾದಕ ಶಕ್ತಿಯು ಇರುವುದಿಲ್ಲ. ಪರಿಶೋಧ ನಾಲಯಗಳಲ್ಲಿ ಟೈಫಾಯಿಡ್, ಉಷ್ಣ ಹೊರಕಡೆ ಮೊದಲಾದವುಗಳ ಅಣು ಗಳನ್ನು ತಯಾರಿಸಿದಾಗ್ಯೂ ಅವುಗಳು ರೋಗೋತ್ಪಾದಕ ಶಕ್ತಿಯನ್ನು ಕಳ ಕೊಳ್ಳುತ್ತವೆ ಆದ್ದರಿಂದ ನಾಝಿಗಳು ರೋಗಾಣು ಯುದ್ಧವನ್ನು ಆರಂಭಿಸುವ ರೆಂಬುದು ಅಚ್ಚುಕಟ್ಟಿಯುಲ್ಲದೆ ಮತ್ತೇನಾ ಗಿರುವುದಿಲ್ಲ.

ನ್ಯೂಮೋನಿಯಾ, ಪ್ಲೇಗ್, ಸಿಡುಬು, ಮೊದಲಾದ ವಾಯುವಿನಲ್ಲಿ ಹುಟ್ಟಿ ಬೆಳೆಯುವ ಕೆಲವು ರೋಗಾಣುಗಳಿಂದ ಬ್ರಿಟನಿಗೆ ಯಥಾರ್ಥ ಭಯವಿದೆ. ಆದರೆ ಈ ರೋಗಾಣುಗಳನ್ನು ಶೋಧನಾಲಯ ಗಳಲ್ಲಿ ತಯಾರಿಸಬಹುದೆಂಬ ಕುರಿತು ಪ್ರೊಫೆಸರ ಹಲ್ಡೇನರಂಥ ಪ್ರಸಿದ್ಧ ಜೀವಾ ಣು ವಿಜ್ಞಾನಿಗಳಿಗೆ ಸಂದೇಹವಿದೆ.

ಬಯಲಭ್ರಮೆ

ಆದ್ದರಿಂದ ಇದೆಲ್ಲಾ ಹಿಟ್ಲರನ ಬೊಬ್ಬೆ ಯಲ್ಲದೆ ಮತ್ತೇನಲ್ಲ ಈ ರೋಗಾಣು ಚೆಲ್ಲುವ ಪ್ರಯತ್ನ ಮಾಡುವುದಕ್ಕಿಂತ ಜರ್ಮನರು ಬ್ರಿಟನಿನ ಹೊಲಗದ್ದೆಗಳಲ್ಲಿ ಬೆಳೆಯುವ ಆಹಾರ ವಸ್ತುಗಳಿಗೆ ಕ್ರಿಮಿ ಕೀಟಗಳು ಹಿಡಿಯುವಂತೆ ಮಾಡಬ ಹುದು ಕಾಲ್ನಡೆಗಳಿಗೆ ಅಂಟುರೋಗ ಗಳು ಬರುವಂತೆ ಮಾಡಿ ಅವುಗಳ ನಾಶ ಕಾರ್ಯದಲ್ಲಿ ತೊಡಗಬಹುದು ಆದರೆ ಇಂಥ ಉಪದ್ರವಗಳೇನ್ನೂ ಬಾರದಂತೆ ಬ್ರಿಟನಿನ ಕೃಷಿ ಮತ್ತು ಪಶು ಇಲಾಖೆಯ ಅಧಿಕಾರಿಗಳು ತುಂಬಾ ಜಾಗ್ರತೆಗಳನ್ನು ತೆಗೆದುಕೊಂಡಿದ್ದಾರೆ

ಎಲ್ಲೋ ಫಿವರ್ ಮತ್ತು ಬ್ಯುವ ಭೊನಿಕ್ ಪ್ಲೇಗಿನಂಥ ರೋಗಗಳ ಅಣು ಗಳನ್ನು ತಾವು ಬ್ರಿಟನಿನ ಮೇಲೆ ಚೆಲ್ಲು ವೆವೆನ್ನುವುದು ಬಯಲ ಭ್ರಮೆಯಾಗಿದೆ. ಮೊದಲನೆ ರೋಗದ ಅಣುಗಳನ್ನು ಸೊಳ ಗಳೂ ಎರಡನೆಯದರ ಅಣುಗಳನ್ನು ಚಿಕ್ಕಾಡುಗಳೂ ಹರಡಿಸುತ್ತವೆ ಈ ಸೊಳ ಮತ್ತು ಚಿಕ್ಕಾಡುಗಳಿಂದ ಅಲ್ಲದೆ ಬೇರೆ ಸಾಧನಗಳಿಂದ ಇವನ್ನು ಹರಡಿಸು ವುದು ಸಾಧ್ಯವಿಲ್ಲ. ವಿಸ್ತಾರವಾದ ಪ್ರದೇಶದಲ್ಲಿ ಒಂದೇ ಬಾರಿಗೆ ರೋಗಾ ಣುಗಳಿಂದ ಕೂಡಿದ ಈ ಸೊಳ ಮತ್ತು ಚಿಕ್ಕಾಡುಗಳನ್ನು ಬಿಡುವುದು ಜರ್ಮನ್ ವಿಜ್ಞಾನಿಗಳ ಕಲ್ಪನೆಗೂ ನಿಲುಕದ ವಿಷಯವಾಗಿದೆ.

ಹಿಟ್ಲರನ ಹೆಗ್ಗಳಿಕೆ

ಯುದ್ಧದ ಮಧ್ಯಾಹ್ನ ಕಾಲದಲಿ ನಾವೀ ಉಪಾಯಗಳನ್ನು ಕೈಕೊಳ್ಳುವೆ ವೆಂದು ಹಿಟ್ಲರನು ಉತ್ತರ ಕುಮಾರನ ಹಾಗೆ ಪೌರುಷ ಕೊಚ್ಚಿಕೊಂಡಿದ್ದನು. ಯುರೋಪಿನಲ್ಲಿ ಯುದ್ಧದ ಸಂಧ್ಯಾ ಕಾಲವು ಬಂದಿರುವುದಿಲ್ಲವಾದರೂ ಅದರ ಮಧ್ಯಾಹ್ನ ಕಾಲವು ಈಗಾಗಲೇ ಕಳೆದು ಹೋಗಿದೆ ಎಂಬುದು, ಈ ಕೆಲವು ದಿನ ಗಳಿಂದ ಅಲ್ಲಿ ನಡೆಯುತ್ತಿರುವ ವಿದ್ಯ ಮಾನಗಳಿಂದ ಸ್ಪಷ್ಟವಾಗುತ್ತದೆ ಆದ ರೂ ಹಿಟ್ಲರನು ಬ್ರಿಟನಿನ ಮೇಲೆ ರೋಗಾಣುಗಳನ್ನು ಚೆಲ್ಲುವ ತನ್ನ ಮಾತನ್ನೂ ಸತ್ಯಮಾಡಲಿಕ್ಕೆ ಹೋಗಿರು ವದಿಲ್ಲ ಮಾತ್ರವಲ್ಲ, ತಾನಿನ್ನು ಯು ದ್ಧ ಮುಗಿಯುವ ತನಕ ರೋಗಾಣು ಯುದ್ಧವನ್ನು ಮಾಡುವುದಿಲ್ಲವೆಂದೂ ಅವನು ಪ್ರತಿಜ್ಞೆ ತೆಗೆದುಕೊಂಡಿದ್ದಾನೆ. ಹಿಟ್ಲರನ ಪ್ರತಿಜ್ಞೆಯಲ್ಲಿ ವಿಶ್ವಾಸವನ್ನು ಇಡಲಿಕ್ಕಾಗುವುದಿಲ್ಲವೆಂದು ಹೇಳಬ ಹುದು ನಿಜ ಪರಂತು ಅವನ ಪೌರು ಷದ ಮಾತಿನಲ್ಲಿ ಯಾದರೂ ಹೇಗೆ ವಿಶ್ವಾ ಸವಿಡಬಹುದು? ಹಿಟ್ಲರನು ಪ್ರತಿಜ್ಞೆ ಹೇಗೋ, ಹೆಗ್ಗಳಿಕೆಯಲ್ಲಿಯೂ ವಿಶ್ವಾಸ ಯೋಗ್ಯನಾಗಿರುವುದಿಲ್ಲ

ಆದರೂ ಹಿಟ್ಲರನ ನಾಝಿ ಸೇನೆಗಳು ಕುಡಿಯುವ ನೀರಿನಲ್ಲಿ ವಿಷ ಬೆರೆಸುವುದಿ ಲ್ಲವೆಂದು ಹೇಳಲಾರೆವು ಅದಕ್ಕೋಸ್ಕರ ಬ್ರಿಟಿಷ್ ಸೇನೆಯು ಶುದ್ಧ ನೀರಿಗೆ ಸ್ವಂತದ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿದೆ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ!
ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ.

ಗೊನೊಕಿಲರ್ (ರಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ದನ್ನು ಹೊಗಳುತ್ತಿರುವರು, ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** (S.B.M.) Vithalbhai Patel Road, BOMABY 4

Madras Agent: **Appah & Co, China Bazar Madras.**

HALFTONE & LINE BLOCK MAKING UNDERTAKEN

Sharada Press,
MANGALORE

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಅಹಿಂಸೆಯಿಂದ ಜಯವು ಖಂಡಿತ

ಯುದ್ಧಾತುರರಿಗೆ ಮಹಾತ್ಮರ ಸಂದೇಶ

ಗಫರ್ ಖಾನರ ಅಹಿಂಸಾ ದೀಕ್ಷೆ! ಗಾಂಧಿಜಿಯವರ ಪ್ರಶಂಸೆ!

"ಪ್ರತಿಯೊಬ್ಬ ಬ್ರಿಟನನಿಗೂ ನಾನು ಮಾಡಿದ ವಿನಂತಿಯ ವಿಷಯದಲ್ಲಿ ನಾನು ಬಹಳ ಮಹತ್ವವಾದ ಕಾರ್ಯಭಾರವನ್ನು ತಲೆಮೇಲೆ ಹೊತ್ತುಕೊಂಡೆ. ದೇವರ ದಯೆಯಿಲ್ಲದೆ ನಾನು ಕಾರ್ಯವನ್ನು ಪೂರೈಸಲಾರೆ. ಆತನು, ನಾನು ಆ ಭಾರವನ್ನು ಹೊರಬೇಕೆಂದು ಅಪೇಕ್ಷಿಸುವುದಿದ್ದರೆ ಖಂಡಿತವಾಗಿ ಆತನೇ ನನಗೆ ಆ ಬಲವನ್ನೂ ಕೊಡುವನು. ನಾನು ಅಂತಹ ವಿನಂತಿಯನ್ನು ಮಾಡಬೇಕಾದೀತೆಂದು ಬಗೆದಿರಲಿಲ್ಲ. ಆದರೆ ಅದು ಒಂದು ಮಿಂಚಿನಂತೆ ಹೊಳೆಯಿತು. ಅದರೊಡನೆ ಆ ಬಲವೂ ಬಂತು. ನಾನು ಆತುರಗೊಂಡೆ; ಆದರೆ ಒಂದು ನಾನು ಒಮ್ಮೆ ವಿನಂತಿ ಮಾಡಿಕೊಂಡ ಮೇಲೆ ನನ್ನ ದಾರಿಯನ್ನು ಹಿಡಿದು ಮುಂದೆ ಹೋಗಬೇಕು. ಒಬ್ಬನು ಮಾತ್ರ ನಿಷ್ಠುರವಾದೊಂದು ತಂತಿ ಬಿಟ್ಟದ್ದಲ್ಲದೆ, ಮತ್ತೆಲ್ಲಾ ಯೂರೋಪಿನ ಲೇಖಕರೂ ನನಗೆ ಪ್ರೋತ್ಸಾಹದ ಪತ್ರಗಳನ್ನೇ ಬರೆದಿದ್ದಾರೆ" ಹೀಗೆಂದು ಗಾಂಧಿಜಿಯವರು ಹೊಸ ಲೋಕದ ನಿರ್ಮಾಣಕ್ಕಾಗಿ ಅಹಿಂಸೆಯ ಹೊಸ ದಾರಿಯ ಸಫಲತೆಯ ಕುರಿತು ಮಹತ್ವ ಲೇಖನವೊಂದನ್ನು ಬರೆದಿದ್ದಾರೆ.

ಅದರ ಸಾರಾಂಶವು ಇಂತಿದೆ:—

'ನನ್ನ ಬಿನ್ನಹವನ್ನು ಸಾರ್ವಭೌಮ ಸರಕಾರಕ್ಕೆ ಕಳುಹಿಸಿದಕ್ಕಾಗಿ ನಾನು ವೈಸರಾಯರಿಗೆ ಕೃತಜ್ಞನು. ಅದಕ್ಕಿಂತ ಹೆಚ್ಚಿನ ಉತ್ತರವನ್ನು ನಾನು ಹಾರೈಸಿರದಿದ್ದರೂ, ನಾನು ವಿನಂತಿ ಮಾಡಿದ್ದು ಯುದ್ಧವನ್ನು ವಿಜಯಿಯಾಗಿ ಮಾಡುವ ಸಲುವಾಗಿಯೇ ಆಗಿತ್ತು. ಅಹಿಂಸೆಯೆಂದರೆ ಮೂಕ ಶರಣಲ್ಲ. ಆದ್ದರಿಂದ ಹೊಸ ಲೋಕದ ನಿರ್ಮಾಣವಾಗಬೇಕೆಂಬ ಕನಸು ಸಾರ್ಥಕವಾಗುತ್ತಿತ್ತು. ಯುದ್ಧವು ಮುಂದುವರಿಯುತ್ತಿದ್ದರೆ ಹೊಸ ಜಗದ ನಿರ್ಮಾಣವೆಂಬುದು ಬರಿಯ ಕನಸೇ ಆಗಿ ಉಳಿಯುವುದು. ನನ್ನ ವಿನಂತಿಯ ಕುರಿತು ಒಬ್ಬ ಬ್ರಿಟಿಷ್ ಗೆಳೆಯರು ಬರೆಯುವುದೇನೆಂದರೆ ಬ್ರಿಟನಿಗೆ ನನ್ನ ವಿನಂತಿಯನ್ನು ಅರ್ಥ ಮಾಡಿಕೊಂಡರೂ ಅದನ್ನು ಪ್ರಯೋಗಿಸಿ ತೋರಿಸುವ ಎದೆಗಾರಿಕೆ ಮುಂದಾಳುತನವಿಲ್ಲವೆಂದು. ನನ್ನ ವಿನಂತಿ ತಾತ್ಕಾಲಿಕ ಪರಿಣಾಮವನ್ನು ಹುಟ್ಟಿಸದಿರಬಹುದು. ಅದು ನನ್ನ ನೊಂದ ಹೃದಯದಿಂದ ಬಂದಿದೆ. ಅದರಲ್ಲಿ ಅಮರ ಸತ್ವವು ನೆಲಸಿದೆಯೆಂದು ನನ್ನ ನಂಬುಗೆ.

ನಾನು ನನ್ನ ಜನರಲ್ಲಿ ನನ್ನ ವಿನಂತಿ ಮಾಡಿ ಅಪಜಯ ಹೊಂದಿದ್ದರೆ ಈಗ ಜೀವನ ಮರಣಗಳ ಹೋರಾಟದಲ್ಲಿರುವ ಬ್ರಿಟಿಷರಿಗೆ ನನ್ನ ವಿನಂತಿಯನ್ನು ಕಳುಹಿಸುವುದರಲ್ಲಿ ಅರ್ಥವಿಲ್ಲವೆಂದ ಕೆಲವರು ಹೇಳುತ್ತಾರೆ. ನಾನು ಒಂದು ಉಚ್ಚ ಕಾರ್ಯ ಧ್ಯೇಯವನ್ನು ಸಾಧಿಸಲು ಯತ್ನ ಮಾಡುವ ಮನುಷ್ಯ. ಭಾರತದ ಜನರಿಗೆ ಬ್ರಿಟಿಷರಂತೆ ನಿಜವಾದ ಯುದ್ಧದ ಸಂಕಷ್ಟವನ್ನು ಅನುಭವಿಸಿ ಗೊತ್ತಿಲ್ಲ. ಬ್ರಿಟನ ತನ್ನ ಧ್ಯೇಯವನ್ನು ಸಾಧಿಸಬೇಕಾದರೆ ಅದು ತನ್ನ ಹಿಂದಿನ ಧೋರಣೆಯನು ಪೂರ್ಣ ಬದಲಾಯಿಸಬೇಕು. ಇಂದು ಅಂತಹ ಬದಲಾವಣೆಯಾಗಬೇಕೆಂದು ನಾನು ಭಾವಿಸುತ್ತೇನೆ. ಭಾರತದ ವಿಷಯ ಮತ್ತು ಬ್ರಿಟನಿನ ವಿಷಯಗಳಲ್ಲಿ ಏನೂ ಸಂಬಂಧವಿಲ್ಲ. ಹಾಗಾಗಿ ನಾನು ಈ ಬಿನ್ನಹ ಮಾಡಿದ್ದಕ್ಕೆ ಪಶ್ಚಾತ್ತಾಪ ಪಡುವುದಿಲ್ಲ. ನಾನು ಬ್ರಿಟನಿಗೆ ಒಬ್ಬ ಮಿತ್ರನಾಗಿ ಆ ಬಿನ್ನಹವನ್ನು ಕಳುಹಿಸಿದ್ದೇನೆ. ಕೆಲವರು ನನ್ನೊಡನೆ ಹಿಟ್ಲರನಿಗೆ ವಿನಂತಿ ಮಾಡಬೇಕೆಂದು ಹೇಳಿದರು. ನಾನು ಹಾಗೆ ಮಾಡಿದ್ದೆ. ಅದು ಪತ್ರಿಕೆಯಲ್ಲಿ ಆ ಮೇಲೆ ಪ್ರಕಟವಾಗಿದೆ. ಆದರೆ ಇಂದು ವಿಜಯಿಯಾಗುತ್ತಾ ಬರುವ ಅವನಿಗೆ ನನ್ನ ಬಿನ್ನಹ ಕೇಳಲಾರದು. ಆದರೆ ಬ್ರಿಟಿಷರಿಗೆ ಇದು ಕೇಳಬಹುದು. ನಾನು ಎತ್ತಿದ ವಾದವು ಅಖಿಲ ವಿಶ್ವಕ್ಕೇ ಬಹಳ ಮಹತ್ವದ್ದೆಂದು ನಾನು ನಂಬುತ್ತೇನೆ. ಬ್ರಿಟಿಷರು ಅಹಿಂಸೆಯ ಪ್ರಯೋಜನದ ಕುರಿತು ಸಂಶಯಪಡಬೇಕಾಗಿಲ್ಲ. ಅವರು ಅದನ್ನು ಪ್ರಯೋಗಿಸಿಯೇ ನೋಡಿಲ್ಲ. ಪ್ರಯೋಗಿಸಿ ನೋಡಿದ ಕಡೆಗಳಲ್ಲಿ ಅದು ಪ್ರಯೋಜನವನ್ನು ಹೊಂದಿದೆ'

ಗಫರ್ ಖಾನರ ರಾಜಿನಾಮೆ

ಗಾಂಧಿಜಿಯವರ ಹೇಳಿಕೆ

ಗಡಿನಾಡಿನ ಗಾಂಧಿಯೆಂದು ಹೆಸರಾದ ಖಾನ್ ಅಬ್ದುಲ್ ಗಫರ್ ಖಾನರು ವರ್ಕಿಂಗ್ ಕಮಿಟಿಯು ಅಹಿಂಸೆಯ ಕುರಿತು ಭಿನ್ನಾಭಿಪ್ರಾಯದ ಠರಾವು ಮಾಡಿದ ಕುರಿತು ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವರಷ್ಟೆ? ಆ ವಿಷಯ ಗಾಂಧಿಜಿಯವರು ಹೀಗೆ ಬರೆಯುತ್ತಾರೆ:

'ಕಳೆದ ಇಪ್ಪತ್ತು ವರ್ಷಗಳಿಂದ ಹಿಂಸಾಮಯ ವಾತಾವರಣದಲ್ಲಿಯೇ ಹುಟ್ಟಿ ಬೆಳೆದ ಪಠಾಣರನ್ನು ಯಾವ ಅಹಿಂಸೆಯ ಮಾರ್ಗದಲ್ಲಿ ಶಿಕ್ಷಣ ಹೊಂದಿಸಿದರೋ ಅಂತಹ ಉಚ್ಚ ಧ್ಯೇಯದ ಸಲುವಾಗಿ ಅವರು ರಾಜಿನಾಮೆ ಕೊಟ್ಟದ್ದು ಅವರ ಪ್ರಕೃತಿಗೆ ಒಪ್ಪುವಂತಹುದೇ ಆಗಿದೆ. ಅವರಿಗೆ ಅಹಿಂಸೆಯೊಂದೇ ಮುಕ್ತಿಯ ಮಾರ್ಗವಾಗಿ ಗೋಚರವಾಗಿದೆ. ಹಿಂಸೆಯು ಅವರನ್ನು ನಿರ್ನಾಮಗೊಳಿಸುತ್ತಿತ್ತು. ಆದಕಾರಣ ಅಂತಹ ಹಿಂಸೆಯನ್ನು ಕಿತ್ತೊಗೆದು ಅವರನ್ನು ಇನ್ನಷ್ಟು ಧೀರರನ್ನಾಗಿ ಮಾಡಲು ಅಹಿಂಸೆಯನ್ನು ಅವರಿಗೆ ಕಲಿಸಿದರು. ಈ ಸಂದೇಶವನ್ನು ಅವರು ಅಂಗೀಕರಿಸಿದರು, ಅಂಗೀಕರಿಸಿ ವೀರ ಅಹಿಂಸಾವ್ರತಿಗಳಾದರು. ಹೀಗಾಗಿ ಅವರು ರಾಜಿನಾಮೆ ಕೊಡದೆ ಅವರಿಗೆ ಅನ್ಯಮಾರ್ಗವಿರಲಿಲ್ಲ. ಅವರು ತನ್ನ ಜನರಲ್ಲಿ ಅಹಿಂಸೆಯನ್ನು ಎಷ್ಟು ಚೆನ್ನಾಗಿ ಸ್ಥಾಪಿಸಿದ್ದಾರೆಂದು ನನಗೆ ಗೊತ್ತಿಲ್ಲ. ಆದರೆ ಅವರು ಅದನ್ನು ತನ್ನ ಜೀವನ ತತ್ವವನ್ನಾಗಿ ಮಾಡಿಕೊಂಡಿದ್ದಾರೆ. ಅವರನ್ನು ಯಾವುದೂ ಅದರಿಂದ ವಿಚಲಿತ ಮಾಡಲಾರದು. ಅದರ ಫಲಿತಾಂಶವು ದೇವರ ಕೈಯಲ್ಲಿದೆ. ಪವಿತ್ರ ಕುರಾನಿನಿಂದ ಅವರು ಅಹಿಂಸೆಯನ್ನು ಅಭ್ಯಾಸಿಸಿದರು. ಅವರು ಗೀತೆಯನ್ನೂ ಕಲಿತಿರುವರು. ಅಹಿಂಸೆಯಲ್ಲಿ ಅವರು ನಿಶ್ಚಲರಾಗಿರುವರು. ಅದರ ಮುಂದಿನ ಯಶಸ್ಸು ದೇವರ ಕೈಯಲ್ಲಿದೆ"

PROBABLY WE CAN HELP

Yes, if you are a business man requiring a temporary increase in your working capital. We grant loans at competitive rates, on gold, goods, produce, stocks and shares and other approved securities

RESOURCES OF A CRORE.

Estd: 1906

CANARA BANK LIMITED

ಶಾಲಾ ಪುಸ್ತಕಗಳು!

1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಚರಿತ್ರೆ ಮತ್ತು ಕಥೆಗಳು		ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ	
ಪುಸ್ತಕ	ಬೆಲೆ	ಪುಸ್ತಕ	ಬೆಲೆ
3ನೇ ದರ್ಜೆ	0 2 6	3ನೇ ದರ್ಜೆ	0-1 6
4ನೇ	0-3-0	4ನೇ ,,	0-2-0
5ನೇ ,,	0-3-6	5ನೇ ,,	0-2-6

ಸಿವಿಕ್ಸ್ ಅಥವಾ ಪ್ರಜಾಧರ್ಮ

3ನೇ ದರ್ಜೆ ಬೆಲೆ 0-1 6 4ನೇ ದರ್ಜೆ ಬೆಲೆ 0-2-0 5ನೇ ದರ್ಜೆ ಬೆಲೆ 0-2-6
6ನೇ ,, 0-3-0 7ನೇ 0-3-0 8ನೇ ,, 0-3-0

ಹೆಮ್ಮಕ್ಕಳ ಶಾಲೆಗಳಿಗಾಗಿ ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

4ನೇ ದರ್ಜೆಗೆ 0—2—6 5ನೇ ದರ್ಜೆಗೆ 0—3—6

ಪ್ರಾಥಮಿಕ ಭೂವಿವರ

(ಜಿಲ್ಲೆಯ ಒಬ್ಬ ಪ್ರಸಿದ್ಧ ಭೂಗೋಳ ಶಿಕ್ಷಕರಿಂದ ರಚಿತವಾದುದು)

4ನೇ ತರಗತಿಗೆ 0—2—6 5ನೇ ತರಗತಿಗೆ 0—3—6 6ನೇ ತರಗತಿಗೆ 0—5—0
7ನೇ ತರಗತಿಗೆ 0—6—0 8ನೇ ತರಗತಿಗೆ 0—7—0

ಪ್ರಾಥಮಿಕ ಲಘುವಿಜ್ಞಾನ

(ಶ್ರೀ. ಎಸ್. ರಾಮಸ್ವಾಮಿಆಚಾರ್, ಬಿ. ಎ., ಎಲ್. ಟಿ. ವಿರಚಿತ)

6ನೇ ತರಗತಿಗೆ 0-6-0 7ನೇ ತರಗತಿಗೆ 0-6-0 8ನೇ ತರಗತಿಗೆ 0-6-0

ವ್ಯಾಕರಣ ಮತ್ತು ಪ್ರಬಂಧ

(ವಿದ್ವಾನ್ ಶ್ರೀ. ಕೆ. ಕೆ. ದ್ವ ವಿರಚಿತ)

4ನೇ ಮತ್ತು 5ನೇ ತರಗತಿಗೆ 0—2—0 6ನೇ ತರಗತಿಗೆ 0—2—0
7ನೇ ,, 0—2—6 8ನೇ ,, 0—3—0

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ: 1—0—0

ದೊರೆಯುವ ಸ್ಥಳ— **ಶಾರದಾ ಛಾಪಖಾನೆ, ಮಂಗಳೂರು.**

ಹಿಟ್ಲರನು

ಬ್ರಿಟನಿಗೆ ಹಿಟ್ಲರನ ಶಾಂತಿಯ ಸಲಹೆ!

—ಹಿಟ್ಲರನ ಭಾಷಣ!—

ಮಿಲಿಯಾಂತರ ಜನರ ಶೋಕಕ್ಕೆ ಹೊಣೆಗಾರ ಚರ್ಚಿಲನಂತೆ!

ಹಿಟ್ಲರನು ಜರ್ಮನ್ ರೀಖ್‌ಸ್ಟಾಗಿನ ಮುಂದೆ ಒಂದು ಪ್ರಚಂಡ ಭಾಷಣ ಮಾಡುತ್ತಾ, ಅದರಲ್ಲಿ ವರ್ಸೇಲ್ಸ್ ಒಪ್ಪಂದವನ್ನು ದೂಷಿಸಿ, ಬ್ರಿಟನು ಮತ್ತು ಫ್ರಾನ್ಸುಗಳು ಆ ಒಪ್ಪಂದಕ್ಕೆ ಅನ್ವಯಿಸಿರುವ [illegible] ವಿರೋಧಿಸಿ, ತನ್ನ ಸಕಾರಣವಾದ ಅಂದಿನ ಕೋರಿಕೆಗೆ ಬ್ರಿಟನು ಕಿವಿಗೊಡದಿದ್ದಲ್ಲಿ, ಲಂಡನ್, ಮತ್ತು ಇಡೀ ಬ್ರಿಟಿಷ್ ಸಾಮ್ರಾಜ್ಯವನ್ನೇ ಧ್ವಂಸ ಮಾಡುವುದಾಗಿ ಹೇಳಿದನು; ತಾನು ಇಂದು ಬ್ರಿಟನು ಶಾಂತಿಗೆ ಬರಬೇಕೆಂದು ಕೇಳುವುದು ಹೆದರಿಕೆಯಿಂದಲ್ಲವೆಂದೂ, ತಾನು ವಿಜಯಿಯಾಗಿ ಮಾತನಾಡುತ್ತಿರುವೆನೆಂದೂ ಆದರೆ ಮುಂದಿನ ಯುದ್ಧದಲ್ಲಿ ಮಿಲಿಯಾಂತರ ಜನರು ಧ್ವಂಸವಾಗುವುದನ್ನು ಮಾತ್ರ ತಪ್ಪಿಸಲು ಅಪೇಕ್ಷಿಸುತ್ತೇನೆಂದೂ ಉದ್ಘೋಷಿಸಿದನು.

ಈ ಸಭೆಗೆ ಇಟಲಿಯ ಕೌಂಟ್ ಸಿಯಾನೋ ಬಂದಿದ್ದನು. ಆತನು ಮುಂಭಾಗದ ಆಸನದಲ್ಲಿ ಮಂಡಿತನಾಗಿದ್ದನು. ಪ್ರಾರಂಭದಲ್ಲಿ ಗೋರಿಂಗನು [illegible] ಯುದ್ಧರಂಗದಲ್ಲಿ ಮಡಿದವರ ಸಂತಾಪ [illegible] ಆ ಮೇಲೆ ಹಿಟ್ಲರನು ಭಾಷಣ ಮಾಡಲು ಎದ್ದುನಿಂತನು.

ಆತನ ಭಾಷಣದ ಸಾರಾಂಶವು ಹೀಗಿತ್ತು:-

ನಾನು ಜರ್ಮನ್ [illegible] ಕಾಲದಲ್ಲಿ ಈ ಸಭೆಯನ್ನು ಕರೆದಿದ್ದೇನೆ. [illegible] ನಾನು ಬ್ರಿಟನ್ [illegible]

[illegible] ಒಪ್ಪಂದದ ಪಾಲನೆಯನ್ನು ಮಾಡಿದೆ [illegible] ಮುಂದೆ ಬ್ರಿಟಿಷ್ ಫ್ರೆಂಚ್ ಸೈನ್ಯಗಳು ನಾರ್ವೆಯನ್ನು [illegible] ಸಿದ್ಧತೆ ಮಾಡಿದ್ದುವು. ಈ ಸಂದರ್ಭದಲ್ಲಿ ನಾವು ನಾರ್ವೆಯನ್ನು ಆಕ್ರಮಿಸಬೇಕಾಯಿತು. ಅಲ್ಲಿನ ಯುದ್ಧದಲ್ಲಿ ಜರ್ಮನ್ ಸೈನಿಕರು ಇತಿಹಾಸದಲ್ಲಿಯೇ ಅತ್ಯಂತ ವೀರತ್ವವನ್ನು [illegible] ಪರಾಕ್ರಮವನ್ನು ತೋರಿಸಿರುವರು.

ಮೆಜಿನೋ ದುರ್ಗವನ್ನು [illegible] ಹೋಗುವ [illegible] ಅದರ [illegible] ವನ್ನು [illegible] ರಣರಂಗದ ಪಶ್ಚಿಮಭಾಗದಲ್ಲಿ [illegible] ಬ್ರಿಟಿಷ್ [illegible] ಜರ್ಮನ್ [illegible] ನಾವು ಕಾರ್ಯಾಚರಣೆ ಮಾಡಿದ್ದೇವು. [illegible] ಗೋರಿಂಗ್ [illegible] ಸಾಹಸವು ಅಪಾರವಾದುದು. [illegible] ಆಯರ್ನ್ ಕ್ರಾಸ್ [illegible]

ಶಾಂತಿ ಪಕ್ಷವು ಆರಂಭದಿಂದಲೇ ಇಟಲಿಯೊಡನೆಯೂ ಬ್ರಿಟನಿನೊಡನೆಯೂ ಸೌಹಾರ್ದವನ್ನು [illegible] ಇಟ್ಟುಕೊಂಡಿತ್ತು. ಎಷ್ಟು ಪ್ರಯತ್ನಿಸಿದರೂ ಬ್ರಿಟನಿನೊಡನೆ ಸ್ನೇಹ ಬೆಳೆಯುವಲ್ಲಿ ನಾವು ಕೃತಾರ್ಥರಾಗಲಿಲ್ಲವೆಂದು [illegible] ಇಟಲಿಯು ಬಹಳ ಸಹಾಯ ಕೊಟ್ಟಿತು. ಇಟಲಿಯ ಸಹಾಯವೊದಗಿದೊಡನೆಯೇ [illegible] ಕಲಹವು ಮುಗಿಯಿತು [illegible] [illegible] ಜರ್ಮನಿ [illegible] ಬ್ರಿಟನ್ [illegible]

ಅದು ಅಲ್ಲಿನ ಜನತೆಯ ಕೈಗಳಲ್ಲ; ರಾಜಕೀಯ ತಜ್ಞರ ಕೈಗಳು. ನಾನೇನು ಚರ್ಚಿಲ್‌ರವರನ್ನು [illegible] ಜನತೆಗೆ [illegible] ಆದರೆ [illegible] ಚರ್ಚಿಲ್ಲರಿಗಿಲ್ಲ. [illegible] ದೊಡ್ಡದೊಡ್ಡವರು ತಮ್ಮ ದ್ರವ್ಯ [illegible] ಕೆನಡಕ್ಕೆ ಹೋಗಿ ನೆಲಸುತ್ತಾರೆ. ಆದರೆ [illegible] ಬಲಿಯಾಗುತ್ತಾರೆ. ದೊಡ್ಡ ಸಾಮ್ರಾಜ್ಯವು ಧ್ವಂಸವಾಗುವುದು. ಹೀಗೆ ಮಾಡು [illegible] ನನಗೆ ಇಷ್ಟವಿಲ್ಲ. ಆದರೆ [illegible] ನಮ್ಮಲ್ಲಿ [illegible] ಚರ್ಚಿಲ್ [illegible] ನಾಶವಾಗುವುದು ಜರ್ಮನಿಯಲ್ಲ [illegible] ನನಗೆ ಗೊತ್ತಿದೆ. [illegible]

[illegible] ಕೃಪೆಯ ಭಿಕ್ಷೆಯನ್ನು ಬೇಡುವುದಿಲ್ಲ. ನಾನು ವಿಜಯಿಯಂತೆ ಮಾತನಾಡುತ್ತೇನೆ. ಈ ಯುದ್ಧವು [illegible] ಮಿಲಿಯಾಂತರ ಜನರು [illegible] ಯುದ್ಧವನ್ನು ನಾವು ತಪ್ಪಿಸ [illegible] ನಾನು [illegible] ಚರ್ಚಿಲರು ನನ್ನ [illegible] ಹೇಳಿಕೆಯನ್ನು [illegible] ಹಾಗೆ [illegible] ನಡೆಯುವುದೋ [illegible]

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿ [illegible] 2 ಡಬ್ಬಿಗಳ [illegible] 20 ತೊಲೆಗಳ ಡಬ್ಬಿ ರೂ. 1-4-0 ([illegible] ಪ್ರತ್ಯೇಕ)

ಪಿ. ವಿ. ಅಂಡ್ ಕೋ., [illegible]

P. O. Perdepi ([illegible])

ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟದ್ದು





7 ಓ ಕ್ಲಾಕ್ ಬ್ಲೇಡುಗಳು [illegible] ಸುಪ್ರಸಿದ್ಧವಾಗಿವೆ. [illegible] ಬ್ಲೇಡುಗಳು ಅತ್ಯಂತ [illegible] ಬರುವುದು.

7 ಓ ಕ್ಲಾಕ್ ಬ್ಲೇಡುಗಳು [illegible]



ಜಿಲ್ಲಾ ಸಮಾಚಾರ



ಮಂಗಳೂರು

'ಲೋಕೌಟ್—ಅಪ್ರೂಟ್'

ಮಂಗಳೂರಿನ ನೇಯ್ಗೆ ಕಾರ್ಖಾನೆಗಳ [illegible] ಎಸ್. ಎಚ್. ಎಸ್. ಎಂಡ್ ಕೋ [illegible] ಕಾರ್ಖಾನೆಯು ಸಾಧಾರಣ ೧೩೫ ಜನ ಕೆಲಸಗಾರರನ್ನು ಕಡಿಮೆ ಸಂಬಳಕ್ಕೆ ಬಲತ್ಕಾರದಿಂದ [illegible] ಪ್ರಯತ್ನ ಮಾಡಿದ ಬಗ್ಗೆ [illegible] ತಾ. ೮-೬-'೪೦ರಿಂದ [illegible] ಲೋಕೌಟ್ ಅಪ್ರೂಟ್ [illegible] ಸರಕಾರದವರು [illegible] ರಾಜಿಯಾಗುವ ಬಗ್ಗೆ ಪ್ರಯತ್ನಿಸುತ್ತಿರುವರೆಂದು ತಿಳಿದು ಬರುತ್ತದೆ.

ದ. ಹಿಂದುಸ್ಥಾನದ ಉಪಾಧ್ಯಾಯರ ಸಂಘ:— ದ. ಹಿಂದುಸ್ಥಾನದ ಉಪಾಧ್ಯಾಯರ ಸಂಘದ (ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್) ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ತಾ. ೧೪ರಲ್ಲಿ ನಡೆಯಿತು. ಇದರಲ್ಲಿ ಪ್ರೊ. ಎಸ್. ರಾಮಚಂದ್ರ ಅಯ್ಯರವರು ಸಂಘದ [illegible] ಕಮಿಟಿಗೆ ಅತ್ಯಧಿಕ ಮತಗಳನ್ನು ಪಡೆದು ಆರಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ.

ಅಲೆರ ಬಿಡ್ಡಾಗಡೆ:— ಕಳೆದ ತಾ. ೨೮—೧೦ ಕ್ಕರಲ್ಲು [illegible] ಕತ್ತಿ ಪೂಜೆ ಉತ್ಸವವು ಮುಗಿದನಂತರ [illegible] ಮರಕಾಲನು ಬಾಳೆ ಹಣ್ಣು ವಸ್ತ್ರ [illegible] ದಲು ದೂಮ ಪೂಜಾರಿ ಎಂಬವನಿಗೂ ಅಂತ [illegible] ಜಗಳ ಹತ್ತಿ ಅಂಗರ [illegible] ದೂಮನಿಗೆ [illegible] ಎಂಬವನು ದೂಮನಿಗೆ [illegible] ಅಂಗರ ವಗ್ಗರೆ [illegible] ೧೫—೭—೪೦ರಲ್ಲಿ ದೂಮನು ಆಸ್ಪತ್ರೆಯಲ್ಲಿ ಮೃತಪಟ್ಟನು. [illegible] ರಿಪೋರ್ಟು ಮಾಡಿದರು. [illegible] ಸುಪರಿಂಟೆಂಡೆಂಟರವರ [illegible] ಸರ್ಕಲ್ ಇನ್ಸ್‌ಪೆಕ್ಟರವರು [illegible] ಅಲೆರನು [illegible] ಸೆಶನ್ ಕೋರ್ಟಿನಲ್ಲಿ ನಡಿಸಲ್ಪಟ್ಟಿತು. [illegible] ಎಲ್ಲಾ [illegible] ಮಂಗಳೂರು [illegible] ಸೆಶನ್ ಜಡ್ಜರಾದ ಶ್ರೀ ಟಿ. ಎಸ್. ರಾಮಚಂದ್ರನ್ [illegible]

ಎಸ್. [illegible] ತಾ. ೧೬—೭ ರಂದಲ್ಲಿ ಬಿಡುಗಡೆ ಮಾಡಿದರು.

ನಗರ ಸಭೆ

೧೯೪೬-೪೦ರ ಆಡಳಿತ ವರದಿಯ ಸ್ವೀಕಾರ:— ಮಂಗಳೂರು ನಗರ ಸಭೆಯ [illegible] ಕಳೆದ ತಾ. ೧೫ನೇ [illegible] ನಗರ ಸಭಾ ಭವನದಲ್ಲಿ [illegible] ಶ್ರೀ ಬಿ. ವಿ. ಬಾಳಿಗ, [illegible] ವಹಿಸಿದ್ದರು. [illegible] ವಿಷಯಗಳನ್ನು [illegible] ೧೯೩೯—೪೦ರ ಆಡಳಿತ ವರದಿಯು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಯುದ್ಧ ಸಹಾಯ ಸಮಿತಿ: [illegible] ಯುದ್ಧಕ್ಕೆ [illegible] ಸಹಾಯ [illegible] ಮಂಗಳೂರು [illegible] ಸ್ಥಾಪನೆಯಾಗಿದೆ [illegible] ಕಾರ್ಯ [illegible] ಸಂಗ್ರಹಿಸುವುದಕ್ಕೂ [illegible] ಅಧ್ಯಕ್ಷತೆಯಲ್ಲಿ [illegible] ಸಭೆ [illegible] ಸಂಗ್ರಹದ ಬಗ್ಗೆ [illegible] ಅವರಲ್ಲಿ [illegible] ಮಾಡಲು ಸಂಗ್ರಹವಾದ ಹಣವನ್ನು ಪ್ರತಿ ತಿಂಗಳು [illegible] ಮಂಗಳೂರು ತಾಲೂಕು ಸಮಿತಿಯ ಸಭೆಯು [illegible] ಬೆಂಚ್ ಕೋರ್ಟಿನಲ್ಲಿ [illegible] ಸಭಾಂತ್ಯವಾಯಿತು.

"ಅಡಿಕೆ ಸಿಪ್ಪೆಯಿಂದ ಕಾಗದ. ತೋಟಗಾರರಿಗೆ ಸಲಹೆ—ಅಡಿಕೆ ಸಿಪ್ಪೆ [illegible] ಪ್ರಯತ್ನಿಸಿದರೆ [illegible] ತೋಟಗಾರರು ಅಡಿಕೆಯ ಸಿಪ್ಪೆಯನ್ನು ವ್ಯರ್ಥ [illegible] ಬದಲು ಈ ಕುರಿತು [illegible] ಲಾಭದಾಯಕವಲ್ಲವೇ?

ಕಾರ್ಕಳ

ಮಂಜೂರಾತಿಗೆ ವಿರೋಧ:— ಕಳೆದ ವರ್ಷ [illegible] ಕೆಥೋಲಿಕರ [illegible] ಕ್ಲಾಸುಗಳಿಗೆ ಮಂಜೂರಾತಿಯನ್ನು [illegible] ವಿರೋಧಿಸಿ [illegible] ಮತ್ತು ಲೋವರ್ ಎಲಿಮೆಂಟರಿ ಶಾಲೆಗಳ [illegible] ಅಭಿವೃದ್ಧಿಗೆ ಭಂಗ [illegible] ವರ್ಷಕ್ಕೆ [illegible] ಮಾಡಿಗಿವೆ.

ಪಡುಬಿದ್ರೆ:— [illegible] ಶ್ರೀ [illegible] ಪ್ರಯತ್ನಿಸುವರು.

ಶಾಲೆಯೊಳಗೆ ಹರಿಜನರ ಪ್ರವೇಶ:— ಇದ್ದೆಯಲ್ಲಿ [illegible] ಶಾಲೆಯಲ್ಲಿ [illegible] ಈ ಹರಿಜನ ಬಾಲಕರಿಗೆ [illegible] ಶ್ರೀ ಕೆ. ಕೃಷ್ಣ [illegible] ಪ್ರೋತ್ಸಾಹ ಕೊಟ್ಟಿರುವರು [illegible] ಸ್ತುತ್ಯವಾಗಿರುವರು.

ಸಿವಿಕ್ ಗಾರ್ಡ್ಸ್ ದಳದ ಸ್ಥಾಪನೆ: ಕಳೆದ ತಾ. ೧೧ರಲ್ಲಿ ಸಿವಿಕ್ ಗಾರ್ಡ್ಸ್ ದಳದ ಸ್ಥಾಪನೆಯ ಬಗ್ಗೆ [illegible] ಸಭೆಯು [illegible] ಸಿವಿಕ್ ಗಾರ್ಡ್ಸ್ [illegible] ಕೆಲವರು [illegible] ಹೇಳಿದರು.

ಉಡುಪಿ

ಸ್ತುತ್ಯಾರ್ಹ ಕಾರ್ಯ:— [illegible] ಶ್ರೀ [illegible] ವಿದ್ಯಾರ್ಥಿ ಭವನದಲ್ಲಿ [illegible] ಸಮಾಜ ಮಂದಿರದಲ್ಲಿಯೂ [illegible]

ನಿರುದ್ಯೋಗಿಗಳ ಪ್ರತಿನಿಧಿ ಸಭೆ:— ಕಳೆದ [illegible] ವರ್ಷಗಳಿಂದ [illegible] ನಿರುದ್ಯೋಗಿ [illegible] ಸಂಸ್ಥೆಯು [illegible] ಸಭೆಯೊಂದು [illegible] ಭವನದ [illegible] ಸಂಸ್ಥೆಯ ಇತಿಹಾಸವನ್ನು [illegible]

[illegible] ಕಾರ್ಯವನ್ನು [illegible] ಆನಂದವಾಗುತ್ತದೆ.

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ

ವಿದ್ಯಾರ್ಥಿಗಳಿಗಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ರಚಿತವಾದ

ಭೂಗೋಳದ ಕೈಪಿಡಿ

ಎಂಬೀ ಅತ್ಯುತ್ಕೃಷ್ಟವಾದ ನೂತನ ಪುಸ್ತಕವೊಂದು ಸಿದ್ಧವಾಗಿದೆ!

ಸರಕಾರೀ ಪರೀಕ್ಷೆಗಳಲ್ಲಿ ಶೀಘ್ರದಲ್ಲಿ ಹೊಂದಬೇಕೆಂದು ಬಯಸುವ ಎಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ.

ಹೆಸರು ಕೈಪಿಡಿಯಾದರೂ ಇದೊಂದು ಭೂಗೋಳದ ಜ್ಞಾನ ಭಂಡಾರ!

ಸುಂದರವಾದ ಹಲವು ಚಿತ್ರಗಳು! ಪ್ರಸಿದ್ಧ ಭೂಪಟಗಳು!

ಅನೇಕ ಪ್ರಶ್ನಾವಳಿಗಳು!

ಅತ್ಯಂತ ಕಡಿಮೆ ಕ್ರಯ! ಬೆಲೆ ರೂ. ೦—೩—೦ ಮಾತ್ರ

ಶಾರದಾ ಛಾಪಖಾನೆ, ಮಂಗಳೂರು.

ಎಂಡ್ರೂಸ್ ಲಿವರ್ ಸೋಲ್ಟ್



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ

ಬ್ರಿಟನಿಗೆ ಹಿಟ್ಲರನ ಶಾಂತಿಯ ಸಲಹೆ!

ಹಿಟ್ಲರನ ಭಾಷಣ!

ಮಿಲಿಯಾಂತರ ಜನರ ಭೀಕರ ವಧೆಗಾಗಿ ಮರುಕವಂತೆ!

ಹಿಟ್ಲರನು

ಹಿಟ್ಲರನು ಜರ್ಮನಿಯ ರೀಶ್‌ಸ್ಟಾಗ್‌ನ ಮುಂದೆ ಒಂದು ಪ್ರಚಂಡ ಭಾಷಣ ಮಾಡುತ್ತಾ ಅದರಲ್ಲಿ ವರ್ಸೇಲಿ ಒಪ್ಪಂದವನ್ನು ದೂಷಿಸಿ, ಬ್ರಿಟನು ಮತ್ತು ಫ್ರಾನ್ಸುಗಳು ಆ ಒಪ್ಪಂದಕ್ಕೆ ಅನ್ವಯಿಸಿರುವುದಕ್ಕಾಗಿ ನಿಷೇಧಿಸಿ, ತನ್ನ ಸಕಾರಣವಾದ ಇಂದಿನ ಕೇಳಿಕೆಗೆ ಬ್ರಿಟನು ಕಿವಿಗೊಡದಿದ್ದಲ್ಲಿ ಲಂಡನ್, ಮತ್ತು ಇಡೀ ಬ್ರಿಟಿಷ್ ಸಾಮ್ರಾಜ್ಯವನ್ನೇ ಧ್ವಂಸ ಮಾಡುವುದಾಗಿ ಹೆದರಿಸಿದನು; ತಾನು ಇಂದು ಬ್ರಿಟನು ಶಾಂತಿಗೆ ಬರಬೇಕೆಂದು ಹೇಳುವುದು ಹೆದರಿಕೆಯಿಂದಲ್ಲವೆಂದೂ, ತಾನು ವಿಜಯಿಯಾಗಿ ಮಾತನಾಡುತ್ತಿರುವೆನೆಂದೂ ಆದರೆ ಮುಂದಿನ ಯುದ್ಧದಲ್ಲಿ ಮಿಲಿಯಾಂತರ ಬಡ ಜನರು ಧ್ವಂಸವಾಗುವುದನ್ನು ಮಾತ್ರ ತಪ್ಪಿಸಲು ಅಪೇಕ್ಷಿಸುತ್ತೇನೆಂದೂ ಉದ್ಘೋಷಿಸಿದನು.

ಈ ಸಭೆಗೆ ಇಟಲಿಯ ಕೌಂಟ್ ಸಿಯಾನೋ ಬಂದಿದ್ದನು. ಅವನೂ ಮುಂಭಾಗದ ಆಸನದಲ್ಲಿ ಮಂಡಿತನಾಗಿದ್ದನು. ಪ್ರಾರಂಭದಲ್ಲಿ ಗೋರಿಂಗನು ಮಾತನಾಡುತ್ತಾ ದೇಶಕ್ಕಾಗಿ ಜೀವಕೊತ್ತವರನ್ನು ಕೊಂಡಾಡಿದನು. ಯುದ್ಧರಂಗದಲ್ಲಿ ಮಡಿದವರ ಸಂತತಿಯು ಕಷ್ಟಕ್ಕೊಳಗಾಗದಂತೆ ಜರ್ಮನಿಯು ನೋಡುವುದು ಎಂದೂ ಸಾರಿದನು ಆ ಮೇಲೆ ಹಿಟ್ಲರನು ಭಾಷಣ ಮಾಡಲು ಎದ್ದು ನಿಂತನು.

"ಆತನ ಭಾಷಣದ ಸಾರಾಂಶವು ಹೀಗಿತ್ತು.

ನಾನು ಜರ್ಮನ್ ಜನಾಂಗಕ್ಕೆ ಭಯಾನಕ ಯುದ್ಧವೊಂದು ಭವಿಷ್ಯದಲ್ಲಿ ಬರಲಿರುವ ಮಧ್ಯಕಾಲದಲ್ಲಿ ಈ ಸಭೆಯನ್ನು ಕರೆದಿದ್ದೇನೆ. ಜರ್ಮನಿಯನ್ನು ಏಳಿಗೆಗೆ ತಂದ ನಾಜಿಗಳ ಅಭಿಪ್ರಾಯವೇನೆಂದರೆ ವರ್ಸೇಲಿ ಒಪ್ಪಂದದ ಬದಲಾವಣೆಯಾಗಿದೆ. ನಾನು ಬ್ರಿಟಿಷ್‌ಫ್ರೆಂಚರೊಡನೆ ಒಪ್ಪಂದದ ಮಾತನ್ನು ಮುಂದಿಟ್ಟೆನು. ನನ್ನನ್ನು ದೂಷಿಸಿದರು, ಚೆಂಬರ್ಲಿನ್ ಪ್ರಪಂಚವು ನೋಡುತ್ತಿದ್ದಂತೆ ನನ್ನ ಮುಖಕ್ಕೆ ಉಗುಳಿದರು. ಸ್ವೀಡನ್ನಿನ ಖನಿಜವನ್ನು ಪಡೆಯಲು ಬ್ರಿಟಿಷ್ ಫ್ರೆಂಚ್ ಸೈನ್ಯಗಳು ನಾರ್ವೆಯನ್ನು ದಾಟಿ ಸ್ವೀಡನಿಗೆ ಹೋಗುವ ಸಿದ್ಧತೆ ಮಾಡಿದ್ದವು. ಈ ಸಂದರ್ಭದಲ್ಲಿ ನಾವು ನಾರ್ವೆಯನ್ನು ಆಕ್ರಮಿಸಬೇಕಾಯಿತು ಅಲ್ಲಿನ ಯುದ್ಧದಲ್ಲಿ ಜರ್ಮನ್ ಸೈನಿಕರು ಇತಿಹಾಸದಲ್ಲಿಯೇ ಅತ್ಯಂತ ಧೀರತ್ವವನ್ನು ಸಾರಬಲ್ಲವಂತಹ ಪರಾಕ್ರಮವನ್ನು ತೋರಿಸಿರುವರು

ಮೆಜಿನೋ ದುರ್ಗವನ್ನು ಭೇದಿಸಿಕೊಂಡು ಹೋಗುವ ಯೋಚನೆಯಿತ್ತು, ಆದರೆ ಹಾಲೆಂಡು ಬೆಲ್ಜಿಯಮ್ಮುಗಳನ್ನು ಆಕ್ರಮಿಸುವ ಅವಶ್ಯಕತೆಯು ಬಂತು ರಣರಂಗದ ಪಶ್ಚಿಮಭಾಗದಲ್ಲಿ ಕಾರ್ಯಾಚರಣೆಯನ್ನು ಬಲಪಡಿಸಿದುದರಿಂದ ಬ್ರಿಟಿಷ್ ಎಕ್ಸ್‌ಪೆಡಿಶನರಿ ದಲವು ಪೂರ್ಣ ಭಗ್ನವಾದುದು. ಜರ್ಮನ್ ಮುಂದಾಳುತನಕ್ಕೆ ಬಂದಕೀರ್ತಿಯಾಗಿದೆ ಶತ್ರುಗಳ ವಾಯು ದಲವನ್ನು ನಿರ್ಮೂಲಗೊಳಿಸುವುದೇ ನಮ್ಮ ವಾಯು ದಲದ ಕರ್ತವ್ಯವಾಗಿತ್ತು ವೀರ ಚೂಟುಗಳಿಂದ ಆಕಾಶ ಮಾರ್ಗದಿಂದ ನಾವು ಕಾರ್ಯಾಚರಣೆ ಮಾಡಿದೆವು ನಾನು ರಿಬನ್‌ಟ್ರಪರನ್ನೂ ಗೋರಿಂಗರನ್ನೂ ಅಭಿನಂದಿಸುತ್ತೇನೆ ಗೋರಿಂಗರ ಸಾಹಸವು ಅಪಾರವಾದುದು ಅವರನ್ನು ರೀಶಿನ ಮಾರ್ಶಲ್ ಪದವಿಗೆ ಏರಿಸುತ್ತೇನೆ 'ಗ್ರೆಂಡ್ ಕ್ರಾಸ್ ಓಫ್ ದಿ ಅಯರ್ನ್ ಕ್ರೌಸ್' ಬಿರುದನ್ನು ಅರ್ಪಿಸುತ್ತೇನೆ

ನಾಜೀ ಪಕ್ಷವು ಆರಂಭದಿಂದಲೇ ಇಟಲಿಯೊಡನೆಯೂ ಬ್ರಿಟನಿನೊಡನೆಯೂ ಸೌಹಾರ್ದವನ್ನು ಮಾಡುವ ಎರಡು ಗುರಿಗಳನ್ನು ಇಟ್ಟುಕೊಂಡಿತ್ತು ಎಷ್ಟು ಪ್ರಯತ್ನಿಸಿದರೂ ಬ್ರಿಟನಿನೊಡನೆ ಸ್ನೇಹ ಬೆಳಸುವಲ್ಲಿ ನಾನು ಕೃತಾರ್ಥನಾಗಲಿಲ್ಲವೆಂದು ಖೇದಕರವಾಗಿದೆ ಇಟಲಿಯು ಬಹಳ ಸಹಾಯ ಕೊಟ್ಟಿತು. ಇಟಲಿಯ ಸಹಾಯವೊದಗಿದೊಡನೆಯೇ ಫ್ರಾನ್ಸಿನ ಕೆಲಸವು ಮುಗಿಯಿತು ನಾನು ಜಂಭದ ವಿಜೃಂಭಣೆಯಿಂದ ಮುಂದಿನ ವಿಷಯ ಮಾತಾಡತ್ತಿಲ್ಲ ಜಂಭದ ಮಾತುಗಳು ಚರ್ಚಿಲ್ಲರಂದವರಿಗೆ. ನಾನು ಮಾಡಿದುದ ನ್ಯಾಯವೆಂಬುದನ್ನು ಯುದ್ಧದ ಜಯವೇ ಸಿದ್ಧಪಡಿಸಿದೆ ಜರ್ಮನಿಯು ಸೈನ್ಯಶಕ್ತಿಯಲ್ಲಿ ಹಿಂದಿಗಿಂತಲೂ ಬಲಶಾಲಿಯಾಗಿದೆ ನಾವು ಗಣಿಸಿದಷ್ಟು ನಷ್ಟವು ಆಗಲಿಲ್ಲ ನಮಗೆ ಆಹಾರಸಾಮಾಗ್ರಿಗಳಿಲ್ಲವೆಂದು ಹೇಳುತ್ತಾರೆ ನಮ್ಮ ನಾಲ್ಕು ವರ್ಷಗಳ ಯೋಜನೆಯಿಂದಲಾಗಿ ನಾವು ನಿಶ್ಚಿಂತರಾಗಿದ್ದೇವೆ ಕಲಿದ್ದಲು ಕಬ್ಬಿಣವು ಹೇರಳವಾಗಿದೆ ಮಾತ್ರವಲ್ಲದೆ ನಾವು ಜಯಿಸಿದ ರಾಷ್ಟ್ರಗಳಿಂದಲೂ ಸಾರಾಳವಾಗಿ ಸಿಕ್ಕಿದೆ ಜರ್ಮನಿಯ ಸೈನ್ಯದಲ್ಲಿ ೨೦೦ ಮಿಲಿಯ ಸೈನಿಕರು ಈಗ ಇದ್ದಾರೆ ಎಷ್ಟು ಕಾಲ ಯುದ್ಧನಡೆದರೂ ನಾವು ಎದರಿಸಬಲ್ಲೆವು

ಬ್ರಿಟಿಷ್ ರಾಜನೀತಿಜ್ಞರ ರಾಷ್ಟ್ರ ಮತ್ತು ಜರ್ಮನಿಗಳೊಳಗೆ ಸರಿಯಿಲ್ಲವೆಂದು ತಪ್ಪು ತಿಳಿದುಕೊಂಡಿದ್ದಾರೆ ಯುರೋಪಿನಲ್ಲಿ ವೈಷಮ್ಯವನ್ನುಂಟು ಮಾಡಿ ತನ್ನ ಕಾರ್ಯವನ್ನು ಸಾಧಿಸಲು ಬ್ರಿಟನಿಗೆ ಆಶೆಯಾಗಿದೆ ಬ್ರಿಟನಿನಿಂದ ಈಗ ಒಂದೇ ಒಂದು ಕೂಗು ಕೇಳುತ್ತಿದೆ ಅದು ಅಲ್ಲಿನ ಜನತೆಯ ಕೂಗಲ್ಲ. ರಾಜಕೀಯ ತಜ್ಞರ ಕೂಗು. ನಾನು ಕಾರ್ಯವನ್ನು ಮುಂದರಿಸಿದರೆ ಜನತೆಗೆ ಕೊನೆಗಾಣದ ನಷ್ಟವುಂಟಾಗುವುದು. ಜನರಿಗೆ ಕಷ್ಟವೇ ಹೊರತು ಚರ್ಚಿಲ್ಲರಿಗಿಲ್ಲ ಏಕೆಂದರೆ ಆಗ ಅವರು ಕೆನಡಾದಲ್ಲಿರುತ್ತಾರೆ. ದೊಡ್ಡದೊಡ್ಡವರು ತಮ್ಮ ದ್ರವ್ಯ ಸಂತತಿಗಳೊಡನೆ ಕೆನಡಕ್ಕೆ ಹೋಗಿ ನೆಲಸುತ್ತಾರೆ. ಆದರೆ ಬಡವರು ಪೆಟ್ಟಿಗೆ ಬಲಿಯಾಗುತ್ತಾರೆ ದೊಡ್ಡ ಸಾಮ್ರಾಜ್ಯವು ಧ್ವಂಸವಾಗುವುದು ಹೀಗೆ ಮಾಡುವುದು ನನಗೆ ಇಷ್ಟವಿಲ್ಲ ಆದರೆ ಯುದ್ಧವು ಮುಂದುವರಿದಲ್ಲಿ ನಮ್ಮಲ್ಲಿ ಒಬ್ಬರು ನಿರ್ನಾಮನಾಗಲೇ ಬೇಕು ಚರ್ಚಿಲರನ್ನುತ್ತಾರೆ, ಹಾಗೆ ನಾಶವಾಗುವದು ಜರ್ಮನಿಯೆಂಬುದಾಗಿ ನನಗೆ ಗೊತ್ತಿದ್ದರೆ ಅದು ಬ್ರಿಟನೆಂದು

ನಾನು ಸೋತು ಕೃಪೆಯ ಭಿಕ್ಷೆಯನ್ನು ಬೇಡುವುದಿಲ್ಲ ನಾನು ವಿಜಯಿಯಂತೆ ಮಾತನಾಡುತ್ತೇನೆ ಈ ಯುದ್ಧವು ಏಕೆ ಮುಂದುವರಿಯಬೇಕೋ ನನಗೆ ತಿಳಿಯಲೊಲ್ಲದು. ಮಿಲಿಯಾಂತರ ಜನರು ನಾಶಹೊಂದುವ ಈ ಯುದ್ಧವನ್ನು ನಾವು ತಪ್ಪಿಸಬೇಕು. ನಾನು ಹೆದರಿಕೊಂಡು ಮಾತನಾಡುತ್ತೇನೆಂದು ಚರ್ಚಿಲರು ನನ್ನ ವಿವೇಕಯುಕ್ತವಾದ ಕೇಳಿಕೆಯನ್ನು ತೃಣೀಕರಿಸಬಹುದು ಹಾಗೆ ಮಾಡಿದರೆ ಮುಂದೆ ಏನೇನು ನಡೆಯುವುದೋ ಅದರ ಬಗ್ಗೆ ನನ್ನ ಆತ್ಮಸಾಕ್ಷಿಯು ನಿರ್ಮಲವಾಗಿರುವುದು

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದೌರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡತಕ್ಕದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ಕೊಳೆಗಳ ಡಬ್ಬಿ ರೂ. 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯರ್ವೇದಿಕ್ ಸಮಾಜ, ಪೆರಿಡೇಪಿ.
P O Peridepi (ನೆಲ್ಲೂರು ಡಿ.






ಜಿಲ್ಲಾ ಸಮಾಚಾರ



ಮಂಗಳೂರು

'ಲೋಕ್-ಅವುಟ್'

ಮಂಗಳೂರಿನ ನೇಯ್ಗೆ ಕಾರ್ಖಾನೆಗಳಲ್ಲೊಂದಾದ ಎಸ್. ಎಮ್. ಎಸ್. ಎಂಡ್ ಕೊ ನೇಯ್ಗೆ ಕಾರ್ಖಾನೆಯ ಸಾಧಾರಣ ೧೨೫ ಜನ ಕೆಲಸಗಾರರನ್ನು ಕಡಿಮೆ ಸಂಬಳಕ್ಕೆ ಬಲತ್ಕಾರದಿಂದ ಒಪ್ಪಿಸುವ ಪ್ರಯತ್ನ ಮಾಡಿದಬಗ್ಗೆ ಫೆಕ್ಟರಿಯ ಬಾಗಿಲನ್ನು ತಾ ೮-೭-'೪೦ರಿಂದ ಹಾಕಿ ಹಾಗೆ ಲೋಕ್-ಅವುಟ್ ಮಾಡಿರುತ್ತಾರೆ. ಸರಕಾರದವರು ಇತ್ತಂಡದವರಲ್ಲಿ ರಾಜಿಯಾಗುವ ಬಗ್ಗೆ ಪ್ರಯತ್ನಿಸುತ್ತಿರುವರೆಂದು ತಿಳಿದು ಬರುತ್ತದೆ.

ದ ಹಿಂದುಸ್ಥಾನದ ಉಪಾಧ್ಯಾಯರ ಸಂಘ:—ದ ಹಿಂದುಸ್ಥಾನದ ಉಪಾಧ್ಯಾಯರ ಸಂಘದ (ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್) ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ತಾ. ೧೪ರಲ್ಲಿ ನಡೆಯಿತು ಇದರಲ್ಲಿ ಪ್ರೊ. ಎಸ್ ರಾಮಚಂದ್ರ ಅಯ್ಯರ್‌ರವರು ಸಂಘದ ವರ್ಕಿಂಗ್ ಕಮಿಟಿಗೆ ಅತ್ಯಧಿಕ ಮತಗಳನ್ನು ಪಡೆದು ಆರಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ.

ಅಲೆರ ಬಿಡುಗಡೆ:-ಕಳೆದ ತಾ ೨೧-೧೦-೩೯ರಲ್ಲು ಬೋಳಾರ ಮಾರಿಗುಡಿಯಲ್ಲಿ ಕತ್ತಿ ಪೂಜೆ ಉತ್ಸವವು ಮುಗಿದನಂತರ ಅಂಗರ ಮರಕಾಲನು ಬಾಳೆ ಹಣ್ಣು ವಗೈರೆ ಹಂಚುತ್ತಿರಲು ದೂಮ ಪೂಜಾರಿ ಎಂಬವನಿಗೂ ಅಂಗರನಿಗೂ ಜಗಳ ಹತ್ತಿ ಅಂಗರ ಕೂಡ ೭ ಜನರು ಸದರಿ ದೂಮನಿಗೆ ಹೊಡೆದದ್ದಾಗಿಯೂ ಅವರ ಪೈಕಿ ಐತು ಎಂಬವನು ದೂಮನಿಗೆ ಕಡಿದನಾಗಿಯೂ ಅಂಗರ ವಗೈರೆ ಏಳು ಜನರ ಮೇಲೆ ಕೇಸಾಗಿತ್ತು. ೧೫-೧೨-೩೯ರಲ್ಲಿ ದೂಮನು ಆಸ್ಪತ್ರೆಯಲ್ಲಿ ಮೃತಪಟ್ಟನು. ಒಬ್ಬ ಸಬ್ ಇನ್ಸ್ಪೆಕ್ಟರರು ತನಿಖೆ ನಡಿಸಿ ಅಲೆರ ಮೇಲಿನ ಕೇಸು ಸುಳ್ಳೆಂಬದಾಗಿ ರಿಪೋರ್ಟು ಮಾಡಿದರು ಅನಂತರ ಡಿ. ಸುಪರಿಂಟೆಂಡೆಂಟರವರ ಪ್ರಕಾರ ಪ್ರಕಾರ ಸರ್ಕಲ್ ಇನ್ಸ್ಪೆಕ್ಟರರವರು ಪುನಃ ತನಿಖೆ ನಡಿಸಿ ಆಪಾದಿತರಿಗೆ ಅಲೆರು ಸೆಷ್ಯನಿಗೆ ಕಮಿಟು ಮಾಡಲ್ಪಟ್ಟು ಅವರ ತನ್ನಿಖೆಯು ಸೆಶ್ಯನ್ ಕೋರ್ಟಿನಲ್ಲಿ ನಡಿಸಲ್ಪಟ್ಟಿತು. ಆಲೆರು ತಮ್ಮ ಮೇಲಿನ ಮೊಕದ್ದಮೆಯು ಪೂರಾ ಸುಳ್ಳೆಂದು ಎಂಬದಾಗಿ ಸಾಧಿಸಿದ್ದರು. ಎಲ್ಲಾ ಎಸೆಸರರ ಅಭಿಪ್ರಾಯವನ್ನು ಮಂಜೂರು ಮಾಡಿ ಸೆಶನ್ ಜಡ್ಜರಾದ ಶ್ರೀ ಟಿ. ಎಸ್. ರಾಮಚಂದ್ರನ್ ಐ ಸಿ ಎಸ್. ರವರು ಆಲೆರನ್ನು ತಾ. ೧೬-೭-೪೦ರಲ್ಲಿ ಬಿಡುಗಡೆ ಮಾಡಿದರು

ನಗರ ಸಭೆ

೧೯೩೯-೪೦ರ ಆಡಳಿತ ವರದಿಯ ಸ್ವೀಕಾರ—ಮಂಗಳೂರು ನಗರ ಸಭೆಯ ಸಾಮಾನ್ಯ ಸಭೆಯೊಂದು ಕಳೆದ ತಾ ೧೫ನೇ ಸಾಯಂಕಾಲ ನಗರ ಸಭಾ ಭವನದಲ್ಲಿ ಸೇರಿತು. ಶ್ರೀ. ಬಿ ವಿ. ಬಾಳಿಗ, ಯಂ ಎಲ್ ಎ. ಯವರು ಅಗ್ರಾಸನ ವಹಿಸಿದ್ದರು. ಮೊದಲು ಕಾರ್ಯಕ್ರಮದ ಪಟ್ಟಿಯಲ್ಲಿದ್ದ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿದ ಬಳಿಕ ೧೯೩೯-೪೦ರ ಆಡಳಿತ ವರದಿಯು ಸರ್ವಾನುಮತಿಯಿಂದ ಸ್ವೀಕರಿಸಲ್ಪಟ್ಟಿತು

ಯುದ್ಧ ಸಹಾಯ ಸಮಿತಿ: ತಾಲೂಕು ಸಮಿತಿಯ ಸ್ಥಾಪನೆ—ಯುದ್ಧಕ್ಕೆ ಸಕಲ ವಿಧದಿಂದಲೂ ಸಹಾಯ ಮಾಡಲು ತಾಲೂಕು ಕಮಿಟಿಗಳ ಸ್ಥಾಪನೆ ಮಾಡುವ ಏರ್ಪಾಡು ನಡೆದಿದೆ ತಾ ೧೬ರಲ್ಲಿ ಮಂಗಳೂರು ನಗರ ಸಮಿತಿಯೊಂದು ಸ್ಥಾಪನೆಯಾಗಿದೆ. ಪ್ರಚಾರ ಕಾರ್ಯ ಕೈಕೊಳ್ಳುವುದಕ್ಕೂ, ನಿಧಿ ಸಂಗ್ರಹಿಸುವುದಕ್ಕೂ ಸದಸ್ಯರನ್ನು ನೇಮಿಸಿದ್ದಾರೆ ತಾ ೧೮ನೇ ಸಾಯಂಕಾಲ ರೆವಿನ್ಯೂ ಡಿವಿಜನ್ ಆಫೀಸರರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ತಾಲೂಕು ಕಮಿಟಿ (ನಿಧಿ ಸಂಗ್ರಹದ ಬಗ್ಗೆ) ಯ ಸ್ಥಾಪನೆಯಾಯಿತು ಅದರಲ್ಲಿ ತಾಲೂಕಿನ ಆಯಾ ಫಿರ್ಕಾಗಳಲ್ಲಿನ ಅಧ್ಯ ಮಹಾಶಯರನ್ನೂ ಎಲ್ಲಾ ಇಗರ್ಜಿಗಳ ಪಾದ್ರಿಗಳನ್ನೂ ಬೇರೆಕು ಮತ್ತು ಪಂಚಾಯತು ಬೋರ್ಡುಗಳ ಅಧ್ಯಕ್ಷರುಗಳನ್ನೂ ಇನ್ನಿತರರನ್ನೂ ಆರಿಸಲಾಯಿತು. ನಿಧಿ ಸಂಗ್ರಹ ಮಾಡಲು ಕೆಲವರಿಗೆ ಅಧಿಕಾರ ಕೊಡಬೇಕೆಂದಾಯಿತು ಸಂಗ್ರಹಿಸಿದ ಹಣವನ್ನು ಪ್ರತಿ ಮಂಗಳವಾರ ಆಯಾ ಸ್ಥಳಗಳ ಪಟೇಲರುಗಳ ಮೂಲಕ ಪ್ರೈವೆಟ್ ಡಿ ಕಲೆಕ್ಟರರಿಗೆ ಮುಟ್ಟಿಸುವ ಏರ್ಪಾಡು ಮಾಡಬೇಕೆಂದೂ ನಿರ್ಧಾರವಾಯಿತು ನಿಧಿ ಸಂಗ್ರಹದ ಬಗ್ಗೆ ರಶೀದಿ ಪುಸ್ತಕಗಳನ್ನೂ ಅಪೀಲುಗಳನ್ನೂ ಮುದ್ರಿಸಿ ನಿಧಿ ಸಂಗ್ರಾಹಕರಿಗೆ ಒದಗಿಸಬೇಕೆಂದಾಯಿತು. ಪ್ರತಿ ತಿಂಗಳ ಮೊದಲನೆಯ ಮಂಗಳವಾರ ತಾಲೂಕು ಸಮಿತಿಯ ಸಭೆಯು ಅಪರಾಹ್ನ ೩ ಘಂಟೆಗೆ ಬೆಂಚ್ ಕೋರ್ಟಿನಲ್ಲಿ ಸೇರಬೇಕೆಂದು ನಿಶ್ಚಯವಾದ ಬಳಿಕ ಸಭಾಂತ್ಯವಾಯಿತು

ಅಡಿಕೆ ಸಿಪ್ಪೆಯಿಂದ ಕಾಗದ ತೋಟಿಗಾರರಿಗೆ ಸಲಹೆ—ಅಡಿಕೆ ಸಿಪ್ಪೆಯಿಂದ ಮೈಸೂರಲ್ಲಿ ಕಾಗದವನ್ನು ತಯಾರಿಸುತ್ತಿರುವರೆಂದು ತಿಳಿದಿದೆ. ದಕ್ಷಿಣ ಕನ್ನಡದ ಪುತ್ತೂರು ಕಾಸರಗೋಡು ತಾಲೂಕಿನ ಅಡಿಕೆ ತೋಟಿಗಾರರು ಅಡಿಕೆಯ ಸಿಪ್ಪೆಯನ್ನು ವ್ಯರ್ಥ ಹಾಳು ಮಾಡುತ್ತಿರುವುದರ ಬದಲು ಈ ಕುರಿತು ವಿಚಾರ ನಡೆಸುವುದು ಲಾಭದಾಯಕವಲ್ಲವೆ?

ಕಾರ್ಕಳ

ಮಂಜೂರಾತಿಗೆ ವಿರೋಧ:-ಕಳೆದ ವರ್ಷ ಇಲಾಖಾಧಿಕಾರಿಗಳ ಅನುಮತಿಯಿಂದ ಸ್ಥಾಪಿಸಲ್ಪಟ್ಟ ರೋಮನ್ ಕಥೋಲಿಕ ಎಲಿಮೆಂಟರಿ ಶಾಲೆಯವರು ಈಗ ೧೦ರಿಂದ ೬ರ ತನಕ ಎಲ್ಲಾ ಕ್ಲಾಸುಗಳಿಗೆ ಮಂಜೂರಾತಿಯನ್ನು ಕೊಡಬೇಕೆಂದು ಅಪೇಕ್ಷಿಸಿ -ಅರ್ಜಿ ಮಾಡಿರುವದನ್ನು ತೀವ್ರವಾಗಿ ವಿರೋಧಿಸಿ, ಅಂಥ ಮಂಜೂರಾತಿಯು ದೊರೆತುದಾದರೆ ಸ್ಥಳೀಯ ಇತರ ಹಾಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳ ಕ್ರಮವಾದ ಉನ್ನತಿ ಮತ್ತು ಅಭಿವೃದ್ಧಿಗೆ ಭಂಗ ಬರುವುದೆಂದೂ, ಕಥೊಲಿಕ ಶಾಲೆಗೆ ೧೦ರಿಂದ ೪ರ ತನಕ ಮಾತ್ರ ವರ್ಷಕ್ಕೆ ಒಂದು ಕ್ಲಾಸಿನಂತೆ ಮಂಜೂರಾತಿ ಕೊಡಬಹುದಾಗಿಯೂ ಹೇಳಿ ಪ್ರಾರ್ಥನಾ ಪತ್ರಗಳು ಹೋಗಿವೆ

ಸಂದರ್ಶನ:—ಕಾರ್ಕಳ ರೇಂಜಿನ ಶಾಲಾ ಡಿ. ಇನ್ಸ್ಪೆಕ್ಟರರು ಶ್ರೀ ವೆಂಕಟರಮಣ ಹಾ. ಶಾಲೆಯನ್ನು ಸಂದರ್ಶಿಸಿ ಉತ್ತಮ ಅಭಿಪ್ರಾಯಪಟ್ಟಿರುವರು

ಶಾಲೆಯೊಳಗೆ ಹರಿಜನರ ಪ್ರವೇಶ:—ವಿದ್ಯೆಯಲ್ಲಿ ಹಿಂದುಳಿದಿರುವ ಹರಿಜನ ವರ್ಗಕ್ಕೆ ಸೇರಿದ ಹತ್ತಾರು ಮಂದಿ ಎಳೆಯ ಬಾಲಕರಿಗೆ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪ್ರವೇಶ ಕೊಟ್ಟಿರುತ್ತಾರೆ. ಈ ಬಡ ಬಾಲಕರಿಗೆ ಸ್ಲೇಟು, ಕಡ್ಡಿ ಪುಸ್ತಕ ಇತ್ಯಾದಿ ಸಾಮಾಗ್ರಿಗಳನ್ನು ತಮ್ಮ ಸ್ವಂತ ಖರ್ಚಿನಿಂದ ಹಂಚಿ ಶಾಲಾ ಮೆನೇಜರ ಶ್ರೀ ಕೆ. ಕೃಷ್ಣ ಪೈಗಳವರು ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಿರುವದು ತುಂಬಾ ಸ್ತುತ್ಯವಾಗಿರುವದು.

ಸಿವಿಕ್ ಗಾರ್ಡ್‌ದಳದ ಸ್ಥಾಪನೆ:-ಕಳೆದ ತಾ. ೧೭ರಲ್ಲಿ ಸಿವಿಕ್ ಗಾರ್ಡ್ ದಳದ ಸ್ಥಾಪನೆಯ ಬಗ್ಗೆ ಒಂದು ಸಭೆಯು ಜರಗಿತು. ಸಿವಿಕ್ ಗಾರ್ಡ್ ಎಂದರೇನು? ಮತ್ತು ನಾವು ಅದರಲ್ಲಿ ಏಕೆ ಭಾಗವಹಿಸಬೇಕು ಎಂಬುದನ್ನು ಕೆಲವರು ವಿವರಿಸಿ ಹೇಳಿದರು.

ಉಡುಪಿ

ಪ್ರಚಾರ ಕಾರ್ಯ: — ಕಾರ್ಕಳ ಆರ್ಯ ಸಮಾಜದ ಪ್ರಚಾರಕರಾದ ಶ್ರೀ ಆರ್. ಮಂಜುನಾಥ ಶೆಣೈಯವರು ೨೦ರಂದು ಹರಿಜನ ವಿದ್ಯಾರ್ಥಿ ಭವನದಲ್ಲಿ ಉಪನ್ಯಾಸವನ್ನು ಕೊಟ್ಟಿರಲ್ಲದೆ ಮರುದಿನ ಪ್ರಾತಃಕಾಲ ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿಯೂ ಇವರ ಭಾಷಣ ವಿದ್ದಿತು.

ಔದ್ಯೋಗಿಕ ಶಿಕ್ಷಣಾಲಯ:—ಕಳೆದ ಎಂಟು ವರ್ಷಗಳಿಂದ ಎಡೆಬಿಡದೆ ಔದ್ಯೋಗಿಕ ಶಿಕ್ಷಣವನ್ನು ಹರಡುತ್ತಿರುವ ಸ್ಥಳೀಯ "ದಿ. ನ್ಯೂ ಕಾಮರ್ಶಿಯಲ್ ಸ್ಕೂಲ್" ಎಂಬ ಸಂಸ್ಥೆಯನ್ನು "ದಿ ಐಡಿಯಲ್ ಸ್ಕೂಲ್ ಆಫ್ ಕಾಮರ್ಸ್" ವೆಂಬುದಾಗಿ ಮಾರ್ಪಡಿಸುವರೆ, ಸಭೆಯೊಂದು ಸದರಿ ಶಾಲೆಯ ಭವ್ಯಸದನದಲ್ಲಿ ಶ್ರೀ ಕೆ. ಕೇಶವ ಕಾಡುವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಕೂಡಿತು. ಸದರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ದಬ್ಲ್ಯೂ. ಎ ಸುಚಿತ್, ಎಫ್. ಐ. ಸಿ., ಎ. ರವರು ಸದರಿ ಶಾಲೆಯ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಿ ಈ ಶಾಲೆಗೆ ಸರ್ವರೂ ಅವರ ಯಶಸ್ಸನ್ನು ಕೋರಿ ತನುಮನಧನಗಳ ಪೂರ್ವಕ ಸಹಾಯವನ್ನೀಯಬೇಕೆಂದೂ ಕೇಳಿಕೊಂಡರು. ಶ್ರೀಯುತರುಗಳಾದ ಎಸ್ ಎಮ್. ಸಾಲೀಸ್, ಬಿ. ಕೃಷ್ಣಯ್ಯ ಮೊದಲಾದವರು ಶಾಲೆಯ ಅಭ್ಯುದಯವನ್ನು ಬಯಸಿ ಭಾಷಣಗಳನ್ನು ಕೊಟ್ಟರು.

ಸ್ಥಳೀಯ ಮುನಿಸಿಪಾಲಿಟಿಯು ತನ್ನ ಗಡಿಯೊಳಗಣ ಅಶ್ವತ್ಥ ಮರಗಳಿಗೆ ಕಟ್ಟೆಯನ್ನು ಕಟ್ಟಿಸುವ ಕಾರ್ಯವನ್ನು ಕೈಕೊಂಡಿರುವುದು ತುಂಬಾ ಅಭಿನಂದನೀಯವಿದೆ.

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ
ವಿದ್ಯಾರ್ಥಿಗಳಿಗಾಗಿ
ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ರಚಿತವಾದ
ಭೂಗೋಳದ ಕೈಪಿಡಿ
ಎಂಬೀ ಅತ್ಯುತ್ಕೃಷ್ಟವಾದ ನೂತನ ಪುಸ್ತಕವೊಂದು ಸಿದ್ಧವಾಗಿದೆ!
ಸರಕಾರೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕೆಂದು ಬಯಸುವ
ಎಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ.
ಹೆಸರು ಕೈಪಿಡಿಯಾದರೂ ವಿಶಾಲ ಭೂಗೋಳದ ಜ್ಞಾನ ಭಂಡಾರ!
ಸುಂದರವಾದ ಹಲವು ಚಿತ್ರಗಳು! ವಿವಿಧ ಭೂಪಟಗಳು!
ಅನೇಕ ಪ್ರಶ್ನಮಾಲೆಗಳು!
ಅತ್ಯಂತ ಕಡಿಮೆ ಕ್ರಯ! ಬೆಲೆ ರೂ. ೧-೩-೦ ಮಾತ್ರ
ಶಾರದಾ ಛಾಪಖಾನೆ, ಮಂಗಳೂರು.



ಹಿಟ್ಲರನ ದರ್ಪಕ್ಕೆ ಬ್ರಿಟನು ಬೆದರುವುದಿಲ್ಲ!



★ ಯುದ್ಧ ವಾರ್ತೆ

ಬ್ರಿಟನಿನ ಅಚಲ ನಿರ್ಧಾರ!

ಬಾಲ್ಟಿಕಿನಲ್ಲಿ ಸಮತಾನೀತಿ — ಬ್ರಿಟಿಷ್ ವೈಮಾನಿಕರ ಸಾಹಸ

ಜಪಾನಿನ ಮಂತ್ರಿಮಂಡಳದ ಬದಲಾವಣೆ

ಕಳೆದ ವಾರದ ಯುದ್ಧ

ಕಳೆದ ವಾರ ಯೂರೋಪಿನಲ್ಲಿ ಹೆಚ್ಚು ಮಹತ್ವದ ಘಟನೆಗಳೇನೂ ನಡೆದಿಲ್ಲ. ಬ್ರಿಟಿಷರ ಮೇಲೆ ಜರ್ಮನರು, ಜರ್ಮನರ ಮೇಲೆ ಬ್ರಿಟಿಷರು ಆಗಾಗ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ದಾಳಿ ನಡೆಸುತ್ತಿದ್ದಾರೆ. ವಿಶೇಷ ಅನಾಹುತಗಳು ಇಕ್ಕಡೆಗಳಲ್ಲಿಯೂ ಆಗಿಲ್ಲ.

ಹಿಟ್ಲರನ ಭಾಷಣ

ಹಿಟ್ಲರನು ಒಂದು ಮಹತ್ವದ ಭಾಷಣವಿತ್ತು ಅದರಲ್ಲಿ ಬ್ರಿಟನನ್ನು ಶಾಂತಿಗೊಪ್ಪಬೇಕೆಂದು ಸೂಚಿಸಿರುವನು. ತಾನು ಹೀಗೆ ಹೇಳುವುದು ಯುದ್ಧಕ್ಕೆ ಹೆದರಿ ಸೋತವನಾಗಿಯಲ್ಲವೆಂದೂ, ವಿಜಯಿಯಾಗಿಯೆ ಹೇಳುತ್ತಿರುವೆನೆಂದೂ, ಯುದ್ಧವು ಮುಂದುವರಿದಲ್ಲಿ ಅಸಂಖ್ಯ ಬಡ ಜನರು ಪ್ರಳಯ ಹೊಂದುವದರಿಂದ ಅದನ್ನು ಪರಿಹರಿಸುವ ಸಲುವಾಗಿ ತಾನು ಶಾಂತಿ ಸಲಹೆಯೆತ್ತಿರುವುದಾಗಿಯೂ ಆತನ ಹೇಳಿಕೆ. ಹಿಟ್ಲರನ ಈ ಆರ್ಭಟೆಗೆ ಬ್ರಿಟನು ಎದೆಗುಂದದೆ, ಎಂತಹ ಭಯಂಕರವನ್ನಾದರೂ ಎದುರಿಸಲು ಸಿದ್ಧವಾಗಿದೆ.

ಅಮೇರಿಕದ ಅಧ್ಯಕ್ಷ ಪದವಿ

ಬರುವ ಸಪ್ಟಂಬರ ತಿಂಗಳಲ್ಲಿ ಜರಗಲಿರುವ ಅಮೇರಿಕದ ಅಧ್ಯಕ್ಷ ಪದವಿಗೆ ತಿರಿಗಿ ರೂಸ್‌ವೆಲ್ಟರನ್ನೇ ಅಲ್ಲಿನ ಪ್ರಜಾಪ್ರಭುತ್ವ ಪಕ್ಷದವರು ಪ್ರತಿನಿಧಿಯಾಗಿ ಆರಿಸಿರುವರು.

ಆಂಗ್ಲ ಜಪಾನ್ ಒಪ್ಪಂದ

ಬರ್ಮಾ ಮೂಲಕ ಚೈನಕ್ಕೆ ಯುದ್ಧ ಸಾಮಗ್ರಿ ಕಳುಹಿಸುವ ಮಾರ್ಗವನ್ನು ಬ್ರಿಟನು ತಾತ್ಕಾಲಿಕ ಮುಚ್ಚಿದೆ. ಇದರಿಂದ ಚೈನವು ಖತಿಗೊಂಡಿದೆ. ಬ್ರಿಟನು ಪ್ರಜಾಪ್ರಭುತ್ವಕ್ಕೆ ಕಾದುವ ರಾಷ್ಟ್ರವೆಂಬ ತತ್ವವು ಇದರಿಂದ ಸಡಿಲಾಗಿದೆಯೆಂದು ಚೈನದ ಅಭಿಪ್ರಾಯ. ಆದರೆ ಜೀವನ ಘೋರತರ ಸಂಕಷ್ಟದಲ್ಲಿರುವ ಬ್ರಿಟನು ಜಪಾನಿನೊಡನೆ ಜಗಳವನ್ನು ಈಗ ಬಯಸುವುದಿಲ್ಲ.

ಏಡನಿನ ಮೇಲೆ ಶತ್ರುದಾಳಿ

ಜರ್ಮನಿ ವಿಮಾನಗಳು ಏಡನ್ ಬಂದರದ ಮೇಲೆ ವಿಮಾನದಾಳಿ ಮಾಡಿದವು. ವಿಶೇಷ ಹಾನಿಯಾಗಲಿಲ್ಲವೆಂದು ತಿಳಿದು ಬರುತ್ತದೆ.

ಅಮೇರಿಕದ ಯುದ್ಧಧೋರಣೆ

ಸ್ವದೇಶವನ್ನು ಪರರ ಆಕ್ರಮಣದಿಂದ ಭದ್ರವಾಗಿರಿಸುವುದು, ಕಷ್ಟದಲ್ಲಿರುವವರಿಗೆ ಸಾಧ್ಯವಾದ ಸಹಾಯ ಕೊಡುವುದು ಇದೇ ಅಮೇರಿಕದ ಧೋರಣೆಯೆಂದು ತಿಳಿದು ಬಂದಿದೆ.

ರುಮೇನಿಯಕ್ಕೆ ಹಿಟ್ಲರನ ಸೂಚನೆ

ರುಮೇನಿಯದಲ್ಲಿರುವ ಟ್ರಾನ್ಸಿಲವೇನಿಯ ಹಂಗೇರಿಗಳೊಳಗೆ ವಾದವುಂಟಾಗಿದೆ. ಈ ವಿಷಯದಲ್ಲಿ ಜರ್ಮನಿಯು ಮಧ್ಯಸ್ಥಿಕೆ ನಡೆಸುವುದಾಗಿ ತಿಳಿಸಿದೆ. ಈ ಮೂರು ಪ್ರಾಂತಗಳ ಪ್ರತಿನಿಧಿಗಳು ಈಗಾಗಲೇ ವಿಚಾರ ವಿನಿಮಯ ಮಾಡುತಿದ್ದಾರೆ. ರುಮೇನಿಯದಲ್ಲಿರುವ ೮೦೦೦೦ ಜರ್ಮನರ ಹಿತ ಸಂರಕ್ಷಣೆಯಾಗಬೇಕೆಂದೆ ಜರ್ಮನಿಯ ಉದ್ದೇಶ. ಆದ್ದರಿಂದ ಉಳಿದ ಪ್ರದೇಶಗಳಲ್ಲಿರುವ ಜರ್ಮನರನ್ನು ಅಲ್ಲಿಗೆ ಕಳುಹಿಸಿ, ಆ ಪ್ರಾಂತಕ್ಕೆ ಸ್ವಾಯತ್ತದೆ ಕೊಡಬೇಕೆಂದು ಜರ್ಮನ್ ಸೂಚನೆಯಂತೆ! ಆದರೆ ರುಮೇನಿಯವು ಯಾವುದನ್ನು ಬಿಟ್ಟುಕೊಡಲೂ ಸಿದ್ಧವಿಲ್ಲ.

ರೂಸ್‌ವೆಲ್ಟರ ಚುನಾವಣೆ

ಡೆಮೊಕ್ರೆಟಿಕ್ ಪಕ್ಷದ ನಿರ್ಣಯ

ಬರುವ ನವಂಬರದಲ್ಲಿ ಅಮೇರಿಕದ ಅಧ್ಯಕ್ಷ ಸ್ಥಾನದ ಚುನಾವಣೆಯು ನಡೆಯಲಿದೆ. ಅದಕ್ಕೆ ತಿರಿಗಿ ರೂಸ್‌ವೆಲ್ಟರನ್ನೇ ಅಧ್ಯಕ್ಷರಾಗಿ ನಿಯಮಿಸಬೇಕೆಂದು ಅಲ್ಲಿನ ಡೆಮೊಕ್ರೆಟಿಕ (ಪ್ರಜಾ ಪ್ರಭುತ್ವ) ಪಕ್ಷದವರು ಸರ್ವಾನುಮತದಿಂದ ನಿರ್ಣಯಿಸಿರುವರು.

ಬ್ರಿಟನಿನ ಯುದ್ಧ ನಿರ್ಧಾರ

ಬ್ರಿಟನಿನ ಯುದ್ಧ ನಿರ್ಧಾರದ ಕುರಿತು ಚರ್ಚಿಲ್ಲರು ಭಾಷಣ ಮಾಡುತ್ತಾ ಎಷ್ಟೇ ಭಯಂಕರಗಳಾದರೂ ನಾವು ಅದನ್ನು ಎದುರಿಸಿ ಕಾದಾಡುವೆವೆಂದು ಹೇಳಿರುವರು.

ಫ್ರಾಂಕೋ-ಮುಸಲನಿ ಭೇಟಿ

ಭೂಮಧ್ಯ ಸಮುದ್ರದ ವಿಷಯವಾಗಿ ಮಾತನಾಡಲು ಫ್ರಾಂಕೋ ಮುಸಲನಿಯನ್ನು ಆಗಸ್ಟು ತಿಂಗಳಲ್ಲಿ ಕಂಡು ಮಾತನಾಡುವನಾಗಿ ತಿಳಿದು ಬಂದಿದೆ.

ಹಿಟ್ಲರ ಶರತ್ತಗಳು ಯಾವವು?

ಹಿಟ್ಲರನು ಶಾಂತಿಯಾಗಬೇಕೆಂದು ಸಲಹೆಯುತ್ತಿರುವನಲ್ಲವೆ? ಇದರ ಶರತ್ತಗಳು ಯಾವವು ಎಂಬ ಕುರಿತು ಬರ್ಲಿನಿನ ವಾರ್ತೆ ಹೀಗಿದೆ. ೧. ಬ್ರಿಟಿಷ್ ಸರಕಾರದಿಂದ ಚರ್ಚಿಲ್ ನಿವೃತ್ತರಾಗಿ ಲಾಯಿಡ್ ಜಾರ್ಜರು ಮತ್ತು ಸರ್ ಓಸ್‌ವಾಲ್ಡ್ ಮೊಸ್ಲೆಯವರು ಮಂತ್ರಿ ಮಂಡಲದ ರಚನೆ ಮಾಡಬೇಕು. ೨. ಬ್ರಿಟಿಷರು ಆಯುಧಗಳನ್ನು ಕಡಿಮೆ ಮಾಡಿ ಯೂರೋಪ್ ಖಂಡದಲ್ಲಿ ಜರ್ಮನರ ಪ್ರಾಶಸ್ತ್ಯವನ್ನು ಒಪ್ಪಬೇಕು — ಇವೆರಡು ಸಾಧ್ಯವೆ?

ಜಪಾನಿನ ಮಂತ್ರಿ ಮಂಡಳದ ಬದಲಾವಣೆ

ಉದ್ದೇಶವೇನು?

ಜಪಾನಿನ ಅಡ್ಮಿರಲ್ ಯೋನಾಯಿಯವರ ಮಂತ್ರಿಮಂಡಳವು ರಾಜಿನಾಮೆ ಕೊಟ್ಟುದರಿಂದ ಜಪಾನಿನಲ್ಲಿ ಹೊಸ ಮಂತ್ರಿಮಂಡಳದ ರಚನೆಯಾಗಿದೆ. ಯುಸೂಕೆ ಮಟ್ಸೂಕಾ ಎಂಬವರು ಹೊಸ ಮಂತ್ರಿಮಂಡಳದ ವಿದೇಶಾಂಗ ಸಚಿವರು. ಜಪಾನಿನಲ್ಲಿ ಫ್ಯಾಸಿಸ್ಟ್ ಪ್ರಕೃತಿಯು ತಲೆಯೆತ್ತುತ್ತಿದೆ; ಸೈನಿಕರು ಹೇಳಿದಂತೆ ಸರಕಾರವು ಕುಣಿಯುತ್ತಿದೆಯೆಂಬ ಕೂಗು ಕೇಳಿಬರುತ್ತಿದೆ. ಚೀನವನ್ನು ಗೆದ್ದು ಡಚ್ ಇಂಡೀಸ್, ಇಂಡೋ ಚೈನವನ್ನು ವಶಪಡಿಸಿ ಮುಂದೆ ಭಾರತದ ಮೇಲೂ ಅದು ಕಣ್ಣಿಟ್ಟಿರುವುದಾಗಿ ವಾರ್ತೆ. ಏಶ್ಯಾಖಂಡದಲ್ಲಿ ಜಪಾನಿನ ಪ್ರಭಾವವು ಹೆಚ್ಚಬೇಕೆಂಬುದೇ ಅದರ ನೀತಿಯಾಗಿ ತಿಳಿದುಬರುತ್ತದೆ. ಇದಕ್ಕೆ ವಿರುದ್ಧವಾಗಿರುವ ಸರಕಾರವು ಅಲ್ಲಿ ನಿಲ್ಲುವಂತಿಲ್ಲ. ಅದಕ್ಕೆ ಅನುಕೂಲವಾದ ಮಂತ್ರಿಮಂಡಳವು ರಚಿತವಾಗುತ್ತಿದೆ.

ಕ್ರಿಪ್ಸ್ — ಸ್ಟ್ಯಾಲಿನ್ ಭೇಟಿ!

ಬ್ರಿಟನು ರಾಯಭಾರಿಯಾಗಿ ಕಳುಹಿಸಿದ್ದ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಸ್ಟ್ಯಾಲಿನರನ್ನು ಭೇಟಿಯಾದರು. ಸಾಮಾನ್ಯ ವಿಷಯಗಳ ಪ್ರಸ್ತಾವನೆ ನಡೆಯಿತು ಎಂದು ತಿಳಿಯುತ್ತದೆ.

ಓಡ್ವಾಯರ ಕೊಲೆಯ ಪ್ರತಿಧ್ವನಿ

ಉಧಾಮಸಿಂಗರ ಅರ್ಜಿ ತಿರಸ್ಕೃತವಾಯಿತು

ಸರ್ ಮೈಕೇಲ್ ಓಡ್ವಾಯರನ್ನು ಕೊಲೆಮಾಡಿದರೆಂಬ ಆರೋಪದ ಮೇಲೆ ಬಂಧಿಸಲ್ಪಟ್ಟಿರುವ ಉಧಾಮಸಿಂಗನ ಅರ್ಜಿಯನ್ನು ಕ್ರಿಮಿನಲ್ ಅಪೀಲ ಕೋರ್ಟಿನವರು ತೆಗೆದು ಹಾಕಿದರು.

ಯಾರನ್ನಾದರೂ ಗುಂಡಿನಿಂದ ಹೊಡೆಯಬೇಕೆಂಬ ಅಥವಾ ಕೊಲ್ಲಬೇಕೆಂಬ ಇಚ್ಛೆ ಉಧಾಮಸಿಂಗರಿಗಿರಲಿಲ್ಲವೆಂದು ಆರೋಪಿಯ ಕಡೆ ವಕೀಲರು ಹೇಳಿದರು. ಹಿಂದುಸ್ಥಾನದಲ್ಲಿ ಬ್ರಿಟಿಷ್ ಆಳಿಕೆಯನ್ನು ಕುರಿತು ಪ್ರತಿಭಟಿಸುವದಕ್ಕಾಗಿ ಅವರು ಕ್ಯಾಕ್ಸಟನ್ ಹಾಲಿಗೆ ಹೋದರೆಂದೂ ಮತ್ತು ಆಕಾಶದ ಕಡೆಗೆ ಗುಂಡು ಹಾರಿಸಿದರೆಂದೂ ಅವರು ವಾದಿಸಿದರು.

ನ್ಯಾಯಾಧೀಶ ಹಂಫ್ರಿಸರು ಮೇಲರ್ಜಿಯನ್ನು ತಳ್ಳಿಹಾಕುತ್ತಾ ಹೀಗೆ ಹೇಳಿದರು.

"ಉಧಾಮಸಿಂಗರು ಕೊಲೆಯನ್ನೇ ಮಾಡಿದರೆಂದು ಅಭಿಪ್ರಾಯ ಪಡುವದಕ್ಕೆ ಅನೇಕ ಆಧಾರಗಳಿವೆ. ಸಭೆಯಲ್ಲಿ ಓರಿಯಾಪರೂ ಪ್ರತಿಭಟನೆಯ ಶಬ್ದವನ್ನು ಅವರು ಆಡಲಿಲ್ಲ. ಪ್ರತಿಭಟಿಸುವದಕ್ಕಾಗಿ ಕೊಲೆಮಾಡಬಹುದು ಆದರೆ ಹೀಗೆ ಮಾಡುವ ಅವನು ಅವಿವೇಕಿ ಹಾಗೂ ಕ್ರೂರನಿರುತ್ತಾನೆ."

ಬಾಲ್ಟಿಕ್ ರಾಷ್ಟ್ರಗಳಲ್ಲಿ ಸಮತಾನೀತಿ!

ಬಾಲ್ಟಿಕ್ ರಾಷ್ಟ್ರಗಳಾದ ಲೇಟ್ವಿಯ, ಲಿಥ್ವೇನಿಯ ಮತ್ತು ಎಸ್ಟೋನಿಯಗಳು ತಮ್ಮ ರಾಷ್ಟ್ರದಲ್ಲಿ ರಶ್ಯದ ಸಮತಾನೀತಿಯನ್ನು ಅಂಗೀಕರಿಸಿ ಅದೇ ರೀತಿಯ ಸರಕಾರವನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ.

ಕಳೆದ ವಾರದ ಭಾರತದ ರಾಜಕೀಯದಲ್ಲಿಯೂ ವಿಶೇಷ ಘಟನೆಗಳೇನೂ ನಡೆದಿಲ್ಲ. ಕಾಂಗ್ರೆಸ್ ರಾಷ್ಟ್ರೀಯ ಸರಕಾರದ ಯೋಜನೆಗೆ ಸರಕಾರವು ಯಾವ ನಿರ್ಧಾರದ ಉತ್ತರವನ್ನೂ ಕೊಟ್ಟಿಲ್ಲ.

ಹಾಲ್‌ವೆಲ್ ಸತ್ಯಾಗ್ರಹ

ಹಾಲ್‌ವೆಲ್ ಪ್ರತಿಮೆಯು ಸುಳ್ಳಿರುವುದರಿಂದ ಅದನ್ನು ಕಿತ್ತೊಗೆಯಬೇಕೆಂದು ಬೋಸರು ಬಂಗಾಳದಲ್ಲಿ ಆರಂಭಿಸಿದ ಸತ್ಯಾಗ್ರಹವು ಭರದಿಂದ ನಡೆಯುತ್ತಿದೆ. ಅನೇಕರು ಸೆರೆಮನೆಗೊಯ್ಯಲ್ಪಟ್ಟಿದ್ದಾರೆ. ಸತ್ಯಾಗ್ರಹವನ್ನು ನಿಲ್ಲಿಸಿದ ಪಕ್ಷದಲ್ಲಿ ಆ ಕುರಿತು ವಿಚಾರಿಸಲಾಗುವುದೆಂದು ಬಂಗಾಳದ ಸರಕಾರವು ತಿಳಿಸಿದೆ. ಸತ್ಯಾಗ್ರಹವನ್ನು ಆರಂಭ ಮಾಡಬೇಕಾದರೆ ಸರಕಾರಕ್ಕೆ ತಿಳಿಸಿರುವುದರಿಂದ ಆರಂಭಿಸಿದ ಸತ್ಯಾಗ್ರಹವನ್ನು ನಿಲ್ಲಿಸುವ ವಿಚಾರವು ಸಂದೇಹಾಸ್ಪದವಾಗಿದೆ.

ಬ್ರಿಟನಿನ ಭಯಂಕರ ಭೂಹಡಗುಗಳು! (ಟ್ಯಾಂಕುಗಳು)

ಜಿನ್ನರ ಅವಿವೇಕ

ಜಿನ್ನರು ರಾಷ್ಟ್ರಪತಿ ಅಜಾದರಿಗೆ ಕೊಟ್ಟ ಉತ್ತರವು ಅಸಭ್ಯವೂ ಅವಿವೇಕದ್ದೂ ಎಂಬುದಾಗಿ ಅಖಿಲ ಭಾರತದ ಎಲ್ಲಾ ಪಕ್ಷದ ಮುಸಲ್ಮಾನ ಮುಖಂಡರೂ ಅವರನ್ನು ಬಹಳವಾಗಿ ಟೀಕಿಸಿ ಬರೆಯುತ್ತಿದ್ದಾರೆ. ಜಿನ್ನರಿಗೆ ಕನ್ನ ಸ್ಥಾನಗಳು ಎಷ್ಟಿವೆಯೆಂಬ ಕುರಿತು ನಿಜ ಜ್ಞಾನವು ಎಂದಿಗೆ ಆಗುವುದೊ?

ಎ. ಐ. ಸಿ. ಸಿ. ಅಧಿವೇಶನ

ಪೂನಾದಲ್ಲಿ ಬರುವ ತಾ. ೨೭ರಲ್ಲು ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸಭೆಯು ಜರಗುವುದು.

ಅಖಿಲ ಭ…
ಆಗಮಿಸಿ…
ಹಜ್ಜೆಯು…
ಡುವರು.
ಸಭೆಯು…
ಬಾಡೋ…

ಮಹಾತ…
ಯಂತೆ ಆ…
ವೀರರನ್ನು…
ವೊಂದು ಬ…
ವಾಗುವುದ…
ಪೃಥ್ವೀಸಿಂಗ…
ಅದರಲ್ಲಿ…
ಗೊತ್ತಾಗಿದೆ…
ಯುದ್ಧದ…
ಎಂ. ಎನ್…
ಪೂನೆಯ…
ಗೆ ಶ್ರೀ ಎ…
ಭಾರತವು…
ನಿಗೆ ಬೆಂಬ…
ತರಲಿರುವರ…
ತಿಲ…
ಮುಂಬ…
ತಾರೀಕಿಗೆ…
ದಿನಾಚರಣೆ…
ಸಾರ್ವಜನಿ…

ಪುತ್ತೂ…

ಅರ್ಜಿದಾರ—…
ಎದ್ರಿರು—1.…
ಸುಬ್ಬಂಮ ಹೆ…
ಹೊಸ ಗದ್ದೆ…
ಡ್ಡೂರು ಗ್ರಾಮ…
ಸದರ 2ನೆ…
ರಾಯಣಪ್ಪಯ…
ವುದೇನೆಂದರೆ…
ಸದ್ರಿ ಡಿಕ್ರಿ…
ಪಟಾಭಾರ ಬಾ…
ಅಮ್ಮಜ್ಜಾರಿನ…
ಅಪೇಕ್ಷಿಸುವ…
ಆಕ್ಷೇಪವಿದ್ದ…
29-7-40…
ದೇ ಹಾಜರಾ…
ತಪ್ಪಿದರೆ ಏ…
ದಂತ ಈ ಮ…
(By…
Puttur S…
23-7-…



ಪೂನೆಯಲ್ಲಿ ಎ. ಐ. ಸಿ. ಸಿ. ಅಧಿವೇಶನ!

ಬ್ರಿಟನಿಗೆ ರಾಜಾಜಿಯವರ ಸಲಹೆ!

ಸಿಂಧದ ರಾಜಕೀಯದ ಪರಿಸ್ಥಿತಿ — ಜಿನ್ನರು ಕ್ಷಮೆ ಕೇಳಲಿ

ಹಾಲ್‌ವೆಲ್ ಸತ್ಯಾಗ್ರಹದ ವಿಚಾರ! ಶ್ರೀ. ಎಚ್. ವಿ. ಕಾಮತರ ಬಂಧನ!

ಅಖಿಲ ಭಾರತದ ಮುಖಂಡರು ಆಗಮಿಸಿ ಕಾಂಗ್ರೆಸಿನ ಮುಂದಿನ ಹೆಜ್ಜೆಯ ಕುರಿತು ನಿರ್ಣಯ ಮಾಡುವರು. ವರ್ಕಿಂಗ್ ಕಮಿಟಿಯ ಸಭೆಯು ೨೬ರಲ್ಲಿ ಸೇರಿತು.

ಬಾಡೋರ್ಲಿಯಲ್ಲಿ ಅಹಿಂಸಾ ಶಿಬಿರ

ಮಹಾತ್ಮಾ ಗಾಂಧಿಯವರ ಸೂಚನೆಯಂತೆ ಅಹಿಂಸೆಯನ್ನು ಕಾಪಾಡುವ ವೀರರನ್ನು ತರಬೇತಿ ಮಾಡುವ ಶಿಬಿರವೊಂದು ಬಾಡೋರ್ಲಿಯಲ್ಲಿ ಪ್ರಾರಂಭವಾಗುವುದಾಗಿ ತಿಳಿದಿದೆ ಸರ್ದಾರ ಪೃಥ್ವೀಸಿಂಗರು (ಹಿಂದಿನ ಕ್ರಾಂತಿಕಾರಿ) ಅದರಲ್ಲಿ ಶಿಕ್ಷಣ ಕೊಡುವರೆಂದೂ ಗೊತ್ತಾಗಿದೆ.

ಯುದ್ಧದಲ್ಲಿ ಭಾಗವಹಿಸಬೇಕು ಎಂ. ಎಸ್. ರಾಯಿಗಳ ನಿರ್ಣಯ

ಪೂನೆಯಲ್ಲಿ ಸೇರುವ ಎ ಐ ಸಿ ಸಿ ಗೆ ಶ್ರೀ ಎಂ ಎಸ್ ರಾಯಿಯವರ ಭಾರತವು ಇಂದಿನ ಯುದ್ಧದಲ್ಲಿ ಬ್ರಿಟನಿಗೆ ಬೆಂಬಲ ಕೊಡಬೇಕೆಂಬ ಠರಾವು ತರಲಿರುವರು

ತಿಲಕರ ಪುಣ್ಯತಿಥಿ

ಮುಂಬಯಿಯಲ್ಲಿ ಅಗಸ್ಟ ೧ನೆಯ ತಾರೀಕಿಗೆ ಲೋಕಮಾನ್ಯ ತಿಲಕರ ಜನ್ಮ ದಿನಾಚರಣೆಯಾಗುವುದು ಆ ದಿನದ ಸಾರ್ವಜನಿಕ ಸಭೆಗೆ ಮೌಲಾನಾ ಆಜಾದರು ಅಧ್ಯಕ್ಷರಾಗುವರು.

ಪನ್ನೀರ ಸಲ್ವರ ಮಕ್ಕಳಿಗೆ

ಇಂಗ್ಲೆಂಡಿಗೆ ಭಾರತ ಮಂತ್ರಿಗಳ ಸಲಹೆಗಾರರಾಗಿ ತೆರಳಿದಾಗ ವೈಮಾನಿಕ ಅಪಗಡದಿಂದ ಮೃತ್ಯುವಶರಾದ ಪನ್ನೀರ ಸಲ್ವರ ಪಾರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬ್ರಿಟಿಷ್ ಮುಖ್ಯ ಮಂತ್ರಿಗಳು ಸಾವಿರ ಪವನು ಕೊಟ್ಟಿರುವರೆಂದು ತಿಳಿದು ಬರುತ್ತದೆ

ವಿಜಯ ಲಕ್ಷ್ಮಿ ಪಂಡಿತರು

ಪಂಡಿತ ವಿಜಯ ಲಕ್ಷ್ಮಿ ಪಂಡಿತರಿಗೆ ಚೈನಕ್ಕೆ ಬರಲು ಅಲ್ಲಿಂದ ಆಹ್ವಾನ ಬಂದಿರುವುದಾಗಿ ತಿಳಿದುಬರುತ್ತದೆ.

ಹಾಲ್‌ವೆಲ್ ಸತ್ಯಾಗ್ರಹ

ಸತ್ಯಾಗ್ರಹವು ಭರದಿಂದ ಸಾಗುತ್ತಿದೆ. ಅನೇಕ ಯುವಕ ಯುವತಿಯರು ದೇಶದ ಗೌರವದ ಸಲುವಾಗಿ ದಿನಂಪ್ರತಿ ಸೆರೆಮನೆಗೆ ಒಯ್ಯಲ್ಪಡುತ್ತಿದ್ದಾರೆ. ಹಾಲ್‌ವೆಲ್ ಸತ್ಯಾಗ್ರಹದ ಕುರಿತು ಯಾವ ಸುದ್ದಿಯನ್ನೂ ಪ್ರಕಟಿಸಬಾರದಾಗಿ ಬಂಗಾಳ ಸರಕಾರವು ಆಜ್ಞೆ ಹೊರಡಿಸಿದೆ

ಬೋಸರ ಸತ್ಯಾಗ್ರಹದ ಕುರಿತು ಕಾಂಗ್ರೆಸಿನ ಸಹಕಾರವಿಲ್ಲವೆ?

ಹೀಗೆಂದು ಗಾಂಧಿಜಿಯವರೊಡನೆ ಒಬ್ಬರು ಪ್ರಶ್ನಿಸಿದರು. ಅದಕ್ಕೆ ಅವರು ಬೋಸರು ಕಾಂಗ್ರೆಸಿನವರು ಎರಡು ಸಲ ಅಧ್ಯಕ್ಷ ಪೀಠವನ್ನೇರಿದವರು ಆದರೆ ಇಂದು ಅವರು ಕಾಂಗ್ರೆಸಿನ ಹೇಳಿಕೆಯಂತೆ ಸತ್ಯಾಗ್ರಹ ಮಾಡಿಲ್ಲ ಕಾಂಗ್ರೆಸಿನೊಡನೆ ಕೇಳುವ ಹಾಗೂ ಇಲ್ಲ ಏಕಾಂಗಿಯಾಗಿ ತನ್ನ ಧೋರಣವನ್ನು ನಿಶ್ಚಯಿಸಿ ಮುಂದುವರಿದಿದ್ದಾರೆ. ಅವರ ಇಚ್ಛೆಯಲ್ಲಿ ಕಾಂಗ್ರೆಸು ಸೇರುವ ಅಭಿಪ್ರಾಯ ತೋರಿಸುವುದು ಸರಿಯಲ್ಲವೆಂದರುವರು

ಹೊಸವಾರ್ತೆ

ಪೂನದಲ್ಲಿ ಎ. ಐ. ಸಿ ಅಧಿವೇಶನದ ಸಿದ್ಧತೆ ತೀವ್ರವಾಗಿ ನಡೆಯುತ್ತಿದೆ. ಗಾಂಧಿಜಿಯವರು ಸಭೆಗೆ ಹೋಗುವುದಿಲ್ಲವಾಗಿ ತಿಳಿದಿದೆ!

ರಾಜಾಜಿಯವರು ಬ್ರಿಟಿಷ್ ಸರಕಾರಕ್ಕೆ ಸೂಚನೆ ಕೊಡುತ್ತಾ ರಾಷ್ಟ್ರೀಯ ಸರಕಾರದ ಬೇಡಿಕೆಯನ್ನು ಬ್ರಿಟನು ಒಪ್ಪಿ ಕಾಂಗ್ರೆಸಿನ ಬೆಂಬಲವನ್ನು ಪಡೆಯುವುದು ಅವಶ್ಯವೆಂದಿರುವರು.

ಸಿಂಧದ ಮಂತ್ರಿಮಂಡಲದಲ್ಲಿ ಗೊಂದಲವೆದ್ದಿದೆ. ಹಿಂದಿನ ಪ್ರಧಾನ ಮಂತ್ರಿ ಅಲ್ಲಾ ಭಕ್ಷರು ಮಂತ್ರಿಮಂಡಳದ ಪಕ್ಷ ವಹಿಸಿರುವರು.

ಜಿನ್ನರು ಅಜಾದರ ಕ್ಷಮೆ ಕೇಳಬೇಕೆಂದು ಅಹಮ್ಮದಾಬಾದಿನ ಮುಸ್ಲಿಮರು ಜಿನ್ನರಿಗೆ ತಿಳಿಸಿದ್ದಾರೆ.

ಬ್ರಿಟಿಷ್ ವೈಮಾನಿಕರು ಜರ್ಮನಿಯ ಮೇಲೆ ದಾಳಿಯನ್ನು ಮಾಡಿದರು.

ಹೆಲಿಫೆಕ್ಸರು ಹಿಟ್ಲರನಿಗೆ ಉತ್ತರವೀಯುತ್ತಾ ಆತನ ಕೃತಿಯು ಅಧಾರ್ಮಿಕವೆಂದಿರುವರಲ್ಲದೆ ಬ್ರಿಟನಿನ ಅಚಲನಿರ್ಧಾರವನ್ನು ಸಾರಿರುವರು

ರಶ್ಯವು ರುಮೇನಿಯದ ಮೇಲೆ ಒತ್ತಾಯ ನಡಿಸುತ್ತಿದೆಯಂತೆ! ಬಾಲ್ಟಿಕ್ ರಾಷ್ಟ್ರದಲ್ಲಿ ಸಮತಾನೀತಿಯನ್ನು ಸ್ಥಾಪಿಸಬೇಕೆಂದು ಅದರ ಧೋರಣೆ!

ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿಗಳಾದ ಶ್ರೀ ಎಚ್ ವಿ ಕಾಮತರನ್ನು ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿನಂತೆ ಸರೆಯಲ್ಲಿಟ್ಟಿರುವರೆಂದು ತಿಳಿದಿದೆ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P 244/1940,
In O S 586/33

ಅರ್ಜಿದಾರ—ಬಿ. ಮುತ್ತಯ್ಯ.

ಎದ್ರಿರು—1. ಕಾವು ಶ್ರೀನಿವಾಸ ರಾವ್ 2. ಸುಬ್ಬಮ್ಮ ಹೆಂಗಸು ವಾರಿಸ್ದಾರ ಇವಳ ಗಂಡ ಹೊಸ ಗದ್ದೆ ಶಂಕರನಾರಾಯಣಪ್ಪಯ್ಯ, ಮುಡಿಪ್ಪುರು ಗ್ರಾಮ,

ಸದರಿ 2ನೇ ಎದ್ರಿ ಹೊಸ ಗದ್ದೆ ಶಂಕರನಾರಾಯಣಪ್ಪಯ್ಯನವರಿಗೆ ಈ ಮೂಲಕ ತಿಳಿಸುವುದೇನೆಂದರೆ.—

ಸದ್ರಿ ಡಿಕ್ರಿಯು ಅರ್ಜಿದಾರರಿಗೆ ರಜಿಸ್ಟ್ರಿ ನಿಶಿ ಪಟಾಭಾರ ಬಾಕಿ ಆಗಿ ಈ ಪ್ರಕಾರ ಮೇಲ್ಕಂಡ ಅಮಲ್ದಾರಿನ ಡಿಕ್ರಿ ಪಟಾಭಾರೆ ಮಂಜೂರಿಗೆ ಅಪೇಕ್ಷಿಸುವದರಿಂದ ಆ ಕುರಿತು ಸಹಾ ನಿಮ್ಮ ಆಕ್ಷೇಪವಿದ್ದರೆ ಸದರಿ ಕೋರ್ಟಿನಲ್ಲಿ ತಾರೀಕು 29-7-40ರಲ್ಲು ಹಗಲು 10 ಗಂಟೆಗೆ ತಪ್ಪದೇ ಹಾಜರಾಗಿ ತಿಳುವಳಿಕೆ ಉಪದರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನವಾಗುವದೆಂತ ಈ ಮೂಲಕ ತಿಳಿಸೋಣಾಗುತ್ತದೆ,

(By order of the Court)

Puttur S. K. 23-7-40. } B. Achyuta Baliga. Pleader for Petr.

AMRITA
Blood Purifier & Nervine Tonic
ಅಮೃತ
ನರಗಳಿಗೆ ಬಲಕೊಡುವ ರಕ್ತಶುದ್ಧಿ ದ್ರಾವಕ.
ತಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S L A 110/1940 S E P 28/40
in S. C. 206/37

ಕಾವೇರಮ್ಮ—ರಾಮಕೃಷ್ಣಯ್ಯ ನವರ ವಿಧವೆ ಪುತ್ತೂರು ಕಸ್ಬಾ } ಅರ್ಜಿದಾರಳು

ಅಪ್ಪುಹೆಂಗ್ಸು ಕೊರಗಪ್ಪೂಜಾರಿ ಸೊಸೆ ಮುಂಗಳೂರು ಕಪರು ಪದವು ಗ್ರಾಮದಲ್ಲಿ } ಎದ್ರಿ

ಅರ್ಜಿದಾರಳ ಕಡೆಯಿಂದ ತಿಳಿಯಪಡಿಸುವುದೇನಂದರೆ ಸದ್ರಿ ಅಮಲ್ಜಾರಿಯಲ್ಲಿ ಎದ್ರಿಯಳ ಪಕ್ಕಿನ ಬಾಬ್ತು C. P. C. ಬಸ್ ಲಿಮಿಟೆಡ್ ಲೆಕ್ಕದಲ್ಲಿರುವ ಕೇಸ್ಸು ಜಕ್ತು ಏಲಂ ಪಡಿಸಬೇಕಾಗಿ ಅರ್ಜಿ ಕೊಟ್ಟಿರುವುದರಿಂದ ಸದ್ರಿ ಡಿಕ್ರಿಯ ನಿರ್ಣಯ ಮಾಡುವ ಬಗ್ಗೆ ಪುತ್ತೂರು ಕೋರ್ಟಿನಲ್ಲಿ ಸಮಯ ನಿಲ್ಲಿಸುವ ಹಕ್ಕು ಕೂಡ ಕೊಡಿಸಬೇಕಾಗಿ ಅರ್ಜಿ ಹಾಕಿದ್ದರಿಂದ ಆ ಬಗ್ಗೆ ಎದ್ರಿಯಳ ಆಕ್ಷೇಪದ ಬಗ್ಗೆ ತಾ. 13-8-40ಕ್ಕೆ ಇಟ್ಟಿರುತ್ತದೆ. ಆಕ್ಷೇಪವಿದ್ದಲ್ಲಿ ಆ ದಿನ ಪೂರ್ವಾಹ್ನ ಘಂಟೆ 10ಕ್ಕೆ ಕೋರ್ಟಿಗೆ ಹಾಜರಾಗಿ ಉಪದರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದೆಂದು ತಿಳಿದಿರುವುದು.

ಕೋರ್ಟು ಹುಕುಂ ಪ್ರಕಾರ

Puttur. 19-7-40 } A. S. Mahabala Rai. Pleader for Petitioner

ಮುಂದಿನ ಮುಂದಾಳು ರಾಜಾಜಿಯವರೆ?

ಲೀಡರ್ ಪತ್ರಿಕೆಯ ಭವಿಷ್ಯ!

ರಾಜಾಜಿಯವರ ಅಪ್ರತಿಮಧೀಶಕ್ತಿ

ಮಹಾತ್ಮರು ಕಾಂಗ್ರೆಸ್ಸಿನಿಂದ ಸಂಪೂರ್ಣ ನಿವೃತ್ತರಾಗುತ್ತಿದ್ದಾರೆ. ಅವರು ಉಚ್ಚ ಆದರ್ಶವಾದಿಗಳು ಆದರ್ಶವನ್ನು ಬಿಟ್ಟು ಅವರು ವ್ಯವಹಾರದಲ್ಲಿ ಅವರು ಅತ್ತಿತ್ತ ಕದಲುವವರಲ್ಲ. ಅವರ ಆದರ್ಶಕ್ಕೆ ಸರಿಯಾಗಿರದಿದ್ದರೆ ಮುನ್ನಡೆಸುವುದು ಅವರಿಂದ ಅಸಾಧ್ಯವಾಗಿದೆ. ಇದು ಕಳೆದ ಬಾರಿಯ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಸ್ಪಷ್ಟವಾಗಿದೆ. ಅವರಿಗೆ ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ತಮ್ಮ ಹಠವನ್ನು ಸಾಧಿಸಿ ಒಡಕನ್ನು ಉಂಟುಮಾಡುವ ಇಚ್ಛೆಯೂ ಇರುವುದಿಲ್ಲ. ವಿರೋಧಿಸಬಹುದಾಗಿದ್ದರೂ ಅವರು ಶ್ರೀ| ರಾಜಗೋಪಾಲಾಚಾರ್ಯರು ವರ್ಕಿಂಗ್ ಕಮಿಟಿಯಲ್ಲಿ ತಂದ ಠರಾವನ್ನು ವಿರೋಧಿಸಲಿಲ್ಲ. ಅದರ ಬದಲಿಗೆ ಯುಕ್ತ ಕಂಡಂತೆ ವರ್ತಿಸಲಿಕ್ಕೆ ಅವರು ಕಮಿಟಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು

ಮುಂದಿನ ಸೂತ್ರಧಾರರು

ಮಹಾತ್ಮರು ಕಾಂಗ್ರೆಸ್ ರಾಜಕೀಯಗಳಿಂದ ಹಿಂದಕ್ಕೆ ಸರಿಯುವುದು ನಿಶ್ಚಯವೇ , ಎಂದಾದರೆ—ಮಹಾತ್ಮರು ನಿರೀಕ್ಷಿಸುವಷ್ಟು ದೂರದ ಕನಕ ಅಹಿಂಸೆಯ ವಾತಾವರಣವನ್ನು ಕಲ್ಪಿಸುವುದು ಅಸಾಧ್ಯವೆಂದು ವರ್ಕಿಂಗ್ ಕಮಿಟಿಗೆ ತೋರಿದ ಈ ಸಂದರ್ಭದಲ್ಲಿ ಮಹಾತ್ಮರ ಅನಂತರ ಕಾಂಗ್ರೆಸ್ಸಿನ ಸೂತ್ರಧಾರರು ಯಾರಾಗಬಹುದು? ಈ ಕುರಿತು ಈಗಾಗಲೇ ಅನೇಕಾನೇಕ ಊಹಾಪೋಹಗಳು ಎದ್ದಿವೆ. ಅಖಿಲ ಭಾರತ ಮುಖಂಡರ ಸ್ಥಾನವನ್ನು ಏರುವ ಶಕ್ತಿ, ಬಲ ಯೋಗ್ಯತೆಗಳು ಯಾರಲ್ಲಿವೆ ಎಂಬ ಕುರಿತು ಚರ್ಚೆಗಳು ನಡೆದಿವೆ

ರಾಜಾಜಿಯವರ ಯೋಗ್ಯತೆ

ಕಾಂಗ್ರೆಸ್ಸಿನ ಮುಂದಿನ ಮುಖಂಡರಾಗಿ ಚಕ್ರವರ್ತಿ ರಾಜಗೋಪಾಲಾಚಾರ್ಯರೇ ಪ್ರತಿಷ್ಠಿತರಾಗಬಹುದು ಎಂದು ಸ್ವಲ್ಪ ಸಮಯದ ಹಿಂದೆ ಲೀಡರ್ ಪತ್ರಿಕೆಯು ಭವಿಷ್ಯ ಸಾರಿತ್ತು. ಅಖಿಲ ಭಾರತ ಮುಖಂಡರಲ್ಲಿರಬೇಕಾದ ಆತ್ಮಬಲ, ಸಾಹಸ, ಶಕ್ತಿ, ವ್ಯಕ್ತಿತ್ವ, ಪ್ರತಿಭೆ, ಸ್ಫೂರ್ತಿ ಉತ್ಸಾಹ, ಎಲ್ಲಾ ಗುಣಗಳು ಅವರಲ್ಲಿ ತುಂಬಿ ತುಳುಕುತ್ತವೆ. ಅವರು ಮಹಾತ್ಮರ ವಿಶ್ವಾಸಪಾತ್ರ ಸ್ನೇಹಿತರೂ ಆಗಿದ್ದಾರೆ. ಶೀಘ್ರನಿರ್ಣಯ ಮತ್ತು ಕಾರ್ಯಪ್ರವೃತ್ತರಾಗುವದರಲ್ಲಿ ಅದ್ವಿತೀಯರಾಗಿರುವರು. ಆದರ್ಶವಾದಿಗಳಾಗಿರುವುದಕ್ಕಿಂತಲೂ ಹೆಚ್ಚಾಗಿ ಅವರು ವ್ಯವಹಾರವಾದಿಗಳಾಗಿರುವರು

ಮೊನ್ನೆ ನಡೆದ ವರ್ಕಿಂಗ್ ಕಮಿಟಿಯ ಸಭೆಯಲ್ಲಿಯೇ ಅವರು ಮಹಾತ್ಮರ ಸ್ಥಾನದಲ್ಲಿ ಅಖಿಲ ಭಾರತ ಮುಖಂಡರಾಗಿರುವರೆಂಬುದು ಸ್ಪಷ್ಟವಾಗಿದೆ. ಯುದ್ಧ ಸಂಬಂಧವಾದ ಆ ಮಹತ್ವದ ನಿರ್ಣಯವನ್ನು ಅವರೇ ರೂಪಿಸಿ ಮುಂತಂದರು, ಗಾಂಧಿಯವರು ಶುದ್ಧ ಅಹಿಂಸಾವಾದಕ್ಕೆ ಈ ಠರಾವು ವಿರೋಧವಾಗಿತ್ತು ಸ್ವರಾಜ್ಯ ಸಾಧನೆಗೆ ಅಹಿಂಸಾತ್ಮಕ ಉಪಾಯಗಳನ್ನೇ ಕೈಕೊಳ್ಳುವುದಾದರೂ ಪ್ರಕೃತ ಪರಿಸ್ಥಿತಿಯಲ್ಲಿ ದೇಶದ ಆಂತರಿಕ ಶಾಂತಿ ರಕ್ಷಣೆಗೆ ಹಿಂಸಾತ್ಮಕ ಉಪಾಯಗಳನ್ನು ಕೊಳ್ಳಲಿಕ್ಕೆ ಕಾಂಗ್ರೆಸ್ಸು ಅನುಕೂಲವಾಗಿದೆ ಎಂದು ಈ ಠರಾವಿನ ಅಭಿಪ್ರಾಯವಾಗಿತ್ತು. ಪ್ರಕೃತದ ಪರಿಸ್ಥಿತಿಯಲ್ಲಿ ಆಚಾರ್ಯರು ತಂದ ಠರಾವೇ ಯುಕ್ತಿಯುಕ್ತ ಮತ್ತು ಸಮಂಜಸವಾಗಿರುವುದೆಂದು ಬಗೆದು ಮಹಾತ್ಮರು ಅದನ್ನು ವಿರೋಧಿಸದೆ ಇದ್ದರು ಮಾತ್ರವಲ್ಲದೆ ಆ ಠರಾವನ್ನು ಮಂಜೂರು ಮಾಡಿಕೊಳ್ಳುವ ಆಚಾರ್ಯರ ಪ್ರಯತ್ನಗಳಲ್ಲಿ ಮಹಾತ್ಮರು ಅವರಿಗೆ ಒತ್ತಾಸೆಯನ್ನೂ ಕೊಟ್ಟರು ಆಚಾರ್ಯರ ಧೈರ್ಯ ಮತ್ತು ವಿನಯಗಳ ಸದಾಚಾರ ಪಟೇಲರಂಥ ಮಹಾತ್ಮರ ಪ್ರಚಂಡ ಅನುಯಾಯಿ ಮತ್ತು ಹಸ್ತಕರ ಹೃದಯ ಪರಿವರ್ತನೆ ಮಾಡಿದವು ಆಚಾರ್ಯರ ತರ್ಕಸರಣಿಯು ತಪ್ಪೆಂದು ತಮಗೆ ಹೊಳೆಯುತ್ತಿದ್ದಾಗಲೂ ಮಹಾತ್ಮರು ವಿರೋಧಿಸದೆ ಇದ್ದಿರಬೇಕಾದರೆ ಆಚಾರ್ಯರ ವ್ಯಕ್ತಿತ್ವದ ಪ್ರಭಾವವು ಎಷ್ಟಿರಬಹುದೆಂಬುದನ್ನು ನಾವು ಊಹಿಸಿಕೊಳ್ಳಬಹದು. ಆದ್ದರಿಂದ ಸದ್ಯದಲ್ಲಿ ಕಾಂಗ್ರೆಸ್ಸಿನ ಅನಭಿಷಿಕ್ತ ರಾಜರ ಪಟ್ಟಕ್ಕೆ ರಾಜಗೋಪಾಲಾಚಾರ್ಯರೇ ಬರಬಹುದೆಂದ ಲೀಡರ್ ಪತ್ರಿಕೆಯು ಹೇಳಿದ ಭವಿಷ್ಯವು ಸತ್ಯವಾಗಬಹುದೇ ಎಂದು ಊಹಿಸಲು ಅವಕಾಶವಿದೆ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R I A 529/1940
O S 291/1939

ಸುಬ್ರಾಯ ಭಟ್ಟ—ವಾದಿ—ಅರ್ಜಿದಾರ
ಮತ್ತು

ಈಶ್ವರ ಭಟ್ಟ ಮುತ್ತು ಯಾನೆ ಕೃಷ್ಣ ಭಟ್ಟರ ಮಗ, ಮಂಗಳೂರು ತಾಲೂಕು ಕ್ಷೇರಂಗ್ರ ಗ್ರಾಮದಲ್ಲಿರುವವರಿಗೆ } ರೆಸ್ಪೊಂಡೆಂಟ ಪ್ರತಿವಾದಿ

ಶಿಕ್ಷಿತ್ತಮ ನಂಬ್ರ 201/39ನೇ ನಂಬ್ರದಲ್ಲಿ ಆದ ಡಿಕ್ರಿಯಲ್ಲಿ ಫ್ಯಾನಲ್ ಡಿಕ್ರಿ ಕೊಡಬೇಕೆಂತ ಅರ್ಜಿದಾರ—ವಾದಿಯು ಅರ್ಜಿ ದಾಖಲು ಮಾಡಿರುವ ಅರ್ಜಿಯು ಅಷ್ಟರು ತಕ್ಕ ಬಗ್ಗೆ ತಾರೀಕು 3—8—40ಕ್ಕೆ ಇಟ್ಟಿರುತ್ತದೆ. ಆ ದಿವಸ ಸದರಿ ರೆಸ್ಪೊಂಡೆಂಟನು ಬೆಳಗ್ಗೆ ಗಂಟೆ 10-30ಕ್ಕೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸುವರೇ ತಪ್ಪಿದ್ದಲ್ಲಿ ಸದರಿ ಅರ್ಜಿಯಲ್ಲಿ ಎಕ್ಸ್‌ಪಾರ್ಟಿ ಮಾಡಿ ಅರ್ಜಿ ತಕ್ಕ ತೀರ್ಮಾನವಾಗುವದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಮಂಗಳೂರು } K. Suryanarayana Adiga
18-7-40 } Advocate for Petitioner

ನಿಮಗೆ ಗಂಟ್ಲು ಬೇನೆಯಿರುವುದೆ?

ಲಾರಿಂಜ್ಯಾಟಿಸ್, ಟೊನ್ಸಿಲ್ಯಾಟಿಸ್ ಮತ್ತು ಕ್ವಿನ್ಸಿ ಎಂಬ ಗಂಟ್ಲು ರೋಗಗಳಿಗೆ ಕಾರಣವಾಗುವ ರೋಗಾಣುಗಳು ನಿಮ್ಮ ದೇಹವನ್ನು ಪ್ರವೇಶಿಸುವುದು ಆಹಾರವು ಗಂಟ್ಲಿನ ಮೂಲಕ ಆದುದರಿಂದ ನಿಮ್ಮ ಗಂಟ್ಲು ಪೀಡೆಗಳನ್ನು ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಗುಣಪಡಿಸಿಕೊಳ್ಳಿರಿ

ಪೆಪ್ಸ್ ಗುಳಿಗೆಗಳು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ, ಹೊರಡುವ ಔಷಧಿಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು ಆದರಿಂದ ನಿಮ್ಮ ಶ್ವಾಸಕೋಶವು ರೋಗಗಳನ್ನು ತಡೆಯುವರೆ ಸಾಮರ್ಥ್ಯವನ್ನು ಹೊಂದುವುದು, ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಮೆಯಾಗುವುದು, ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು ಸಿಂಬಳವನ್ನು ಕಡಮೆ ಮಾಡುವುದು ಯಾವತ್ತು ಶೀತ ಸಮ್ಬಂಧ ರೋಗಗಳನ್ನು ಎದುರಿಸುವರೆ ನಿಮಗೆ ರೆಟ್ಟಿನ ಬಲವನ್ನು ಕೊಡುವುದು

ಎಲ್ಲಾ ದವಾಖಾನೆಗಳಲ್ಲಿ ರೂಪಾಯಿ ಒಂದರ ಪ್ರಕಾರ ಮಾರಾಟವಾಗುತ್ತದೆ.

ಏಜಂಟ್ಸ್

ಮೆಸರ್ಸ ದಾಥಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದರಾಸು

ಯಾವಾಗಲೂ ಪೆಪ್ಸನ್ನೆ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ ಅಂದರೆ ... ಪುರೋಹಿತ ಶ್ವಾಸಹಾರಿಯು ... ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ... ಕಡಿಮೆಯಾಗುವುದು ... ಪುಪ್ಪುಸವು ... ದಮ್ಮು ... ನೆಟ್ಟಗಾಗುವುದು ಪುರೋಹಿತ ಶ್ವಾಸಹಾರಿಯು ... ಬಾಟ್ಲಿಗಳಲ್ಲಿ ಕ್ರಮವಾಗಿ ... ಎಲ್ಲ ಕಡೆಗಳಲ್ಲಿ ದೊರೆಯುವುದು. ತರಿಸಿಕೊಳ್ಳುವ ವಿಳಾಸ

ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಮುಂಬಯಿಯ ಸೋಲ್ ಏಜಂಟರ

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್ ಮುಂಬಯಿ ೩

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

THE PIE-MONEY BANK LTD.,
Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines Unique Banking facilities to Businessmen and interested Public.

Apply for particulars—

K. R. GURU, *Managing Director*

ಸಿನೆಮಾ ಪುಟ

ದಕ್ಷಿಣ ಭಾರತದ ಚಿತ್ರ ನಿರ್ಮಾಪಕರಿಗೆ ಉದಾರತೆ ಯಿಲ್ಲ

'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಉತ್ತರ ಭಾರತದ ಚಿತ್ರಗಳ ಪ್ರಶಂಸೆಯೇ ಬರುತ್ತದಲ್ಲಾ? ದಕ್ಷಿಣ ಭಾರತ ಚಿತ್ರಗಳ ಕುರಿತು ಟೀಕೆ ಪ್ರಕಟಣೆ ಕೊಡುವುದಿಲ್ಲವೇಕೆ? ಹೀಗೆಂದು ಫಿಲ್ಮ್ ಇಂಡಿಯಾದ ಸಂಪಾದಕರಾದ ಬಾಬುರಾವ್ ಪಟೇಲರೊಡನೆ ಕೇಳಿದಾಗ ಅವರು ದಕ್ಷಿಣದ ಚಿತ್ರ ನಿರ್ಮಾಪಕರು ಬರೆದರೂ ತಮ್ಮ ಸುದ್ದಿಗಳನ್ನು ಕಳುಹಿಸುವುದಿಲ್ಲವೆಂದೂ ಅವರ ನಟ ನಟಿಯರದ್ದು ಬಿಟ್ಟು ತಮ್ಮದೇ ಫೋಟೋಗಳನ್ನೂ ಕಳುಹಿಸುವುದಿಲ್ಲವೆಂದೂ ಹೇಳಿದರು.

ಸಿನೆಮಾ ತಾರೆಯ ಉಪವಾಸ

ಮಿಸ್ ಮೆಹತಾಬ ಸುಲ್ತಾನಳು ತಾನು ನಟಿಸುವ ಹೊಸ ಚಿತ್ರದ ಪಾತ್ರಾಭಿನಯಕ್ಕೆ ತನ್ನ ಮುಖವು ಅನುಗುಣವಾಗಿರಬೇಕೆಂಬ ಸಲುವಾಗಿ ೨೧ ದಿನಗಳ ಉಪವಾಸ ಮಾಡಿರುವುದಾಗಿ ತಿಳಿದಿದೆ. ಇದರಿಂದ ಆಕೆಯು ಸುಂದರ ವದನಮಂಡಲವು ಬಹಳ ದುಃಖಪೂರ್ಣವಾಗಿ ಮಾರ್ಪಡುವಂತೆ ಆಕೆ ಮಾಡಿರುವಳೆಂದೂ ತಿಳಿದಿದೆ. ಈಗ ಮೊದಲಿಗಿಂತ ತೀರಾ ಭಿನ್ನ ಪ್ರಕೃತಿಯುಳ್ಳವಳಾಗಿರುವಳಂತೆ!

ಸುಮಂಗಲಿಯ ಕುರಿತು ಶಾಂತಾರಾಮರ ಹೇಳಿಕೆ

'ನೀವು ಸುಮಂಗಲಿ ಚಿತ್ರವನ್ನು ನೋಡಿದಿರೇ?' ಹೀಗೆಂದು ಒಬ್ಬ ಮೆಡಿಕಲ್ ವಿದ್ಯಾರ್ಥಿಯು ನಿರ್ದೇಶಕ ಶಾಂತಾರಾಮರೊಡನೆ ಅವರು ಟ್ರೈನಿಗೆ ಹತ್ತುವ ಹೊತ್ತಿಗೆ ಪ್ರಶ್ನಿಸಿದನು.

'ಅದೊಂದು ಬಹಳ ಸುಂದರ ಚಿತ್ರ' ಹೀಗೆಂದು ಮಂದಸ್ಮಿತರಾಗಿ ಶಾಂತಾರಾಮರು ಹೇಳಿದರು.

'ಅದು ಎಲ್ಲಾ ವಿಧದಿಂದಲೂ ಚೆನ್ನಾಗಿದೆಯೆಂದು ನಾನು ನಂಬುತ್ತೇನೆ' ವಿದ್ಯಾರ್ಥಿ ಹೇಳಿದ.

'ಖಂಡಿತವಾಗಿ. ಅದು ಬಹಳ ಚೆನ್ನಾಗಿದೆ ನೀವು ಅದರ ಕುರಿತು ಅಭಿಮಾನ ಪಡಬಹುದು' ಹೀಗೆಂದು ಶಾಂತಾರಾಮರು ಹೇಳಿದರು.

'ತಮಿಳಿನಲ್ಲಿಯೂ ಕೆಲವು ಚಂದದ ಚಿತ್ರಗಳು ತಯಾರಾಗಿವೆ' ಎಂದು ಅಭಿಪ್ರಾಯಪಟ್ಟರು.

ಸುಮಂಗಲಿ ಚಿತ್ರವನ್ನು ತಯಾರಿಸಿದ ವಾಹಿನಿ ಚಿತ್ರ ಕಂಪೆನಿಯವರು, ಅವರ ಮುಂದಿನ ಚಿತ್ರದ ತಯಾರಿಯಲ್ಲಿ ಈಗ ನಿರತರಾಗಿದ್ದಾರೆ.

ಅರ್ಧಾಂಗಿ

'ಹಂಸ' ಚಿತ್ರ ಕಂಪೆನಿಯ ಅರ್ಧಾಂಗಿಯಲ್ಲಿ ಮೀನಾಕ್ಷಿ ಮತ್ತು ವಿನಾಯಕ ಇವರು ನಾಯಿಕಾ ನಾಯಕರಾಗಿ ಅಭಿನಯಿಸುವರು. ಪ್ರಿನ್ಸಿಪಾಲ್ ಅತ್ರೆಯವರ ಕಥೆಗಳಲ್ಲಿ ಇದು ಅತ್ಯುತ್ತಮ ಕಥೆಯೆಂದು ಪ್ರಸಿದ್ಧವಾಗಿದೆ.

ಬೆಳ್ಳಾರಿ, ವಿಶಾಖ, ಕೋಕನಾಡುಗಳಲ್ಲಿ ಈ ಚಿತ್ರವು ಈಗ ಎರಡನೆಯ ವಾರಗಳಲ್ಲಿ ಪ್ರದರ್ಶಿತವಾಗುತ್ತಿದೆ

ರಾಜಾಜಿಯವರ ಮಾದರಿ

ಪ್ರಕಾಶ ಸ್ಟುಡಿಯೋದವರು ರಾಜಾಜಿಯವರ ಮಾದರಿಯನ್ನು ಅನುಸರಿಸಿದ್ದಾರೆ! ಸ್ಟುಡಿಯೋದಲ್ಲಿ ಅವರು ಹಿಂದಿಯನ್ನಲ್ಲದೆ ಬೇರೆ ಭಾಷೆಯನ್ನೇ ಆಡಕೂಡದಂತೆ!

ದ ಭಾರತದ ಚಲಚ್ಚಿತ್ರ ಪ್ರಿಯರಿಗೆ

ಶಾಂತಾರಾಮರ ಕೃತಜ್ಞತಾ ಸಮರ್ಪಣೆ

ಮೊನ್ನೆ ಮದ್ರಾಸಿನಲ್ಲಿ ಹೊಸತಾಗಿ ತೆರೆದ ಪ್ರಭಾತ ಟಾಕಿಯ ಉದ್ಘಾಟನಾ ಸಮಾರಂಭಕ್ಕೆ ಒಂದಿದ್ದ ಪ್ರಭಾತ ಚಿತ್ರ ಕಂಪನಿಯ ನಿರ್ದೇಶಕರಾದ ಶ್ರೀ ಶಾಂತಾರಾಮರಿಗೆ ಮದ್ರಾಸಿನಲ್ಲಿ ಅಲ್ಲಿನ ಸಿನೇಮಾ ಪ್ರಿಯರ ಬಹಳ ಸಂಭ್ರಮದ ಸ್ವಾಗತವಿತ್ತಿದ್ದರು. ಆ ಬಗ್ಗೆ ಅವರಿಗೆಲ್ಲಾ ತಾನ ಅತ್ಯಂತ ಕೃತಜ್ಞನಾಗಿರುವೆನೆಂದು ಅವರು ತಿಳಿಸುತ್ತಾರೆ.

ಗೋಪೀನಾಥ ಫಿಲ್ಮ್ಸ್ ಲಿಮಿಟೆಡ್

ಮದ್ರಾಸಿನಲ್ಲಿ ಗೋಪೀನಾಥ ಫಿಲ್ಮ್ಸ್ ಲಿಮಿಟೆಡ್ ಎಂಬ ಹೊಸ ಚಿತ್ರ ಕಂಪೆನಿಯೊಂದನ್ನು ತೆರೆದಿರುವರು. ಸ್ವಾಮಿ ಸುಧಾನಂದ ಭಾರತಿಯವರಿಂದ ರಚಿತವಾದ ಸಾಮಾಜಿಕ ಕಥೆಯನ್ನು ಅಭಿನಯಿಸುವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ

ಸತ್ಯನಾರಾಯಣ ಫಿಲ್ಮ್ಸ್

ಇದೊಂದು ಹೊಸ ಚಿತ್ರ ಕಂಪೆನಿ. ಮದ್ರಾಸಿನಲ್ಲಿಯೇ ಅವರು ತಮಿಳಿನಲ್ಲಿ ಮೂರು ತೆಲುಗಿನಲ್ಲಿ ಎರಡು ಚಿತ್ರಗಳನ್ನು ತಯಾರಿಸಲು ಯೋಚಿಸಿದ್ದಾರೆ.

ಶ್ರೀಮತಿ ನಂದಿತಾದೇವಿ

ನ್ಯೂ ಥಿಯೇಟರ್ಸಿನವರ ಹೊಸ ತಾರೆಯು ಶ್ರೀಮತಿ ನಂದಿತಾದೇವಿಯು, ಬಂಗಾಳದ ಒಂದು ಕುಲೀನ ಮನೆತನಕ್ಕೆ ಸೇರಿದವಳು. ಈಗ ಕಲಾಸೇವೆಗಾಗಿ ಚಿತ್ರ ಭೂಮಿಗೆ ಬಂದಿಳಿದಿದ್ದಾಳೆ. ಅವಳು ನಿತಿನ್ ಬೋಸರ ಸಾಮಾಜಿಕ ಚಿತ್ರದ ಬಂಗಾಳಿ ಕಥೆಯಲ್ಲಿ ಅಭಿನಯಿಸುವಳು. ನಿರ್ದೇಶಕ ಸುಧೀರ ಸೇನರ ಮುಂದಿನ ಚಿತ್ರದಲ್ಲಿಯೂ ಆಕೆ ಪಾತ್ರ ವಹಿಸುವಳೆಂದು ತಿಳಿದುಬಂದಿದೆ.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನನ್ನನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚುಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮ ರಂಧ್ರಗಳು ಧೂಳು, ತೈಲ್ಯ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯಕೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮು (Cuticura Ointment)ನಿಂದ ಮುದಣ, ಛಿದ್ರ, ಗಜ್ಜಿಗಳನ್ನು ನಾಶವಾದಿ ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಹಿತಕರವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರಯಾಣಕ್ಕೆ) ದೊರೆಯುತ್ತದೆ

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs. 50/-, 100/-, 500/-, 1,000/- & 5,000/-

are now issued at all our Branches

For particulars call at or write to

Any of our nearest Branches

ಶಾಂತಾ

ಬಕ್ರಾಸೀ ಚಿತ್ರದ ಶಾಂತಾದಲ್ಲಿ ಸಿ. ಎಸ್. ಶ್ರೀನಿವಾಸನ್ ಮತ್ತು ಕೆ. ಟಿ. ರುಕ್ಮಿಣಿ ಇವರು ನಾಯಕಾ ನಾಯಿಕೆಯರಾಗಿ ಬಹಳ ರಸಭರಿತವಾಗಿ ಅಭಿನಯಿಸಿರುವರು.

ವಾಸವದತ್ತಾ

ತಿರುವಾಂಕೂರಿನ ಕೊಟ್ಟಾಯಂ ಎಂಬಲ್ಲಿ ಪಾಣಿ ಚಂದ ಫಿಲ್ಮ್ಸ್ ಲಿಮಿಟೆಡ್ ಎಂಬ ಸಂಸ್ಥೆ ನಿರ್ಮಿತವಾಗಿದೆ. ಈ ಕಂಪೆನಿಯವರು ಮಲೆಯಾಳ ಭಾಷೆಯಲ್ಲಿ ಭವಸಕವಿಯ ವಾಸವದತ್ತಾ ಕಥೆಯನ್ನು ಸಿನೆಮಾ ಚಿತ್ರವಾಗಿ ತಯಾರಿಸುವರೆಂದು ತಿಳಿದು ಬರುತ್ತದೆ.

ಮುಂದಿನ ಮುಂದಾಳು ರಾಜಾಜಿಯವರೆ?

ಲೀಡರ್ ಪತ್ರಿಕೆಯ ಭವಿಷ್ಯ!

ರಾಜಾಜಿಯವರ ಅಪ್ರತಿಮಧೀಶಕ್ತಿ

ಮಹಾತ್ಮರು ಕಾಂಗ್ರೆಸ್ಸಿನಿಂದ ಸಂಪೂರ್ಣ ನಿವೃತ್ತರಾಗುತ್ತಿದ್ದಾರೆ. ಅವರು ಉಚ್ಚ ಆದರ್ಶವಾದಿಗಳು. ಆದರ್ಶವನ್ನು ಬಿಟ್ಟು ಅವರು ವ್ಯವಹಾರದಲ್ಲಿ ಅನರು ಅತ್ತಿತ್ತ ಕದಲುವವರಲ್ಲ. ಅವರ ಆದರ್ಶಕ್ಕೆ ಸರಿಯಾಗಿರದಿದ್ದರೆ ಮುನ್ನಡೆಸುವುದು ಅವರಿಂದ ಅಸಾಧ್ಯವಾಗಿದೆ. ಇದು ಕಳೆದ ಬಾರಿಯ ಕಾಂಗ್ರೆಸ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಸ್ಪಷ್ಟವಾಗಿದೆ. ಅವರಿಗೆ ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ತಮ್ಮ ಹಠವನ್ನು ಸಾಧಿಸಿ ಒಡಕನ್ನು ಉಂಟುಮಾಡುವ ಇಚ್ಛೆಯೂ ಇರುವುದಿಲ್ಲ. ವಿರೋಧಿಸಬಹುದಾಗಿದ್ದರೂ ಅವರು ಶ್ರೀ ರಾಜಗೋಪಾಲಾಚಾರ್ಯರು ವರ್ಕಿಂಗ್ ಕಮಿಟಿಯಲ್ಲಿ ತಂದ ಠರಾವನ್ನು ವಿರೋಧಿಸಲಿಲ್ಲ. ಅದರ ಬದಲಿಗೆ ಯುಕ್ತ ಕಂಡಂತೆ ವರ್ತಿಸಲಿಕ್ಕೆ ಅವರು ಕಮಿಟಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು.

ಮುಂದಿನ ಸೂತ್ರಧಾರರು

ಮಹಾತ್ಮರು ಕಾಂಗ್ರೆಸ್ ರಾಜಕೀಯಗಳಿಂದ ಹಿಂದಕ್ಕೆ ಸರಿಯುವುದು ನಿಶ್ಚಯವೇ ಎಂದಾದರೆ—ಮಹಾತ್ಮರು ನಿರೀಕ್ಷಿಸುವಷ್ಟು ದೂರದ ತನಕ ಅಹಿಂಸೆಯ ವಾತಾವರಣವನ್ನು ಕಲ್ಪಿಸುವುದು ಅಸಾಧ್ಯವೆಂದು ವರ್ಕಿಂಗ್ ಕಮಿಟಿಗೆ ತೋರಿದ ಈ ಸಂದರ್ಭದಲ್ಲಿ ಮಹಾತ್ಮರ ಅನಂತರ ಕಾಂಗ್ರೆಸ್ಸಿನ ಸೂತ್ರಧಾರರು ಯಾರಾಗಬಹುದು? ಈ ಕುರಿತು ಈಗಾಗಲೇ ಅನೇಕಾನೇಕ ಊಹಾಪೋಹೆಗಳು ಎದ್ದಿವೆ. ಅಖಿಲ ಭಾರತ ಮುಖಂಡರ ಸ್ಥಾನವನ್ನು ಏರುವ ಶಕ್ತಿ, ಬಲ ಯೋಗ್ಯತೆಗಳು ಯಾರಲ್ಲಿವೆ ಎಂಬ ಕುರಿತು ಚರ್ಚೆಗಳು ನಡೆದಿವೆ.

ರಾಜಾಜಿಯವರ ಯೋಗ್ಯತೆ

ಕಾಂಗ್ರೆಸ್ಸಿನ ಮುಂದಿನ ಮುಖಂಡರಾಗಿ ಚಕ್ರವರ್ತಿ ರಾಜಗೋಪಾಲಾಚಾರ್ಯರೇ ಪ್ರತಿಷ್ಠಿತರಾಗಬಹುದು ಎಂದು ಸ್ವಲ್ಪ ಸಮಯದ ಹಿಂದೆ ಲೀಡರ್ ಪತ್ರಿಕೆಯು ಭವಿಷ್ಯ ಸಾರಿತ್ತು. ಅಖಿಲ ಭಾರತ ಮುಖಂಡರಲ್ಲಿರಬೇಕಾದ ಆತ್ಮಬಲ, ಸಾಹಸ, ಶಕ್ತಿ, ವ್ಯಕ್ತಿತ್ವ, ಪ್ರತಿಭೆ, ಸ್ಫೂರ್ತಿ, ಉತ್ಸಾಹ, ಎಲ್ಲಾ ಗುಣಗಳು ಅವರಲ್ಲಿ ತುಂಬಿ ತುಳುಕುತ್ತವೆ. ಅವರು ಮಹಾತ್ಮರ ವಿಶ್ವಾಸಪಾತ್ರ ಸ್ನೇಹಿತರೂ ಆಗಿದ್ದಾರೆ. ಶೀಘ್ರನಿರ್ಣಯ ಮತ್ತು ಕಾರ್ಯಪ್ರವೃತ್ತರಾಗುವದರಲ್ಲಿ ಅದ್ವಿತೀಯರಾಗಿರುವರು. ಆದರ್ಶವಾದಿಗಳಾಗಿರುವುದಕ್ಕಿಂತಲೂ ಹೆಚ್ಚಾಗಿ ಅವರು ವ್ಯವಹಾರವಾದಿಗಳಾಗಿರುವರು.

ಮೊನ್ನೆ ನಡೆದ ವರ್ಕಿಂಗ್ ಕಮಿಟಿಯ ಸಭೆಯಲ್ಲಿಯೇ ಅವರು ಮಹಾತ್ಮರ ಸ್ಥಾನದಲ್ಲಿ ಅಖಿಲ ಭಾರತ ಮುಖಂಡರಾಗಿರುವರೆಂಬುದು ಸ್ಪಷ್ಟವಾಗಿದೆ. ಯುದ್ಧ ಸಂಬಂಧವಾದ ಆ ಮಹತ್ವದ ನಿರ್ಣಯವನ್ನು ಅವರೇ ರೂಪಿಸಿ ಮುಂತಂದರು. ಗಾಂಧಿಯವರು ಶುದ್ಧ ಅಹಿಂಸಾವಾದಕ್ಕೆ ಈ ಠರಾವು ವಿರೋಧವಾಗಿತ್ತು. ಸ್ವರಾಜ್ಯ ಸಾಧನೆಗೆ ಅಹಿಂಸಾತ್ಮಕ ಉಪಾಯಗಳನ್ನೇ ಕೈಕೊಳ್ಳುವುದಾದರೂ ಪ್ರಕೃತ ಪರಿಸ್ಥಿತಿಯಲ್ಲಿ ದೇಶದ ಆಂತರಿಕ ಶಾಂತಿ ರಕ್ಷಣೆಗೆ ಹಿಂಸಾತ್ಮಕ ಉಪಾಯಗಳನ್ನು ಕೊಳ್ಳಲಿಕ್ಕೆ ಕಾಂಗ್ರೆಸ್ಸು ಅನುಕೂಲವಾಗಿದೆ ಎಂದು ಈ ಠರಾವಿನ ಅಭಿಪ್ರಾಯವಾಗಿತ್ತು. ಪ್ರಕೃತದ ಪರಿಸ್ಥಿತಿಯಲ್ಲಿ ಆಚಾರ್ಯರು ತಂದ ಠರಾವೇ ಯುಕ್ತಿಯುಕ್ತ ಮತ್ತು ಸಮಂಜಸವಾಗಿರುವುದೆಂದು ಬಗೆದು ಮಹಾತ್ಮರು ಅದನ್ನು ವಿರೋಧಿಸದೆ ಇದ್ದರು ಮಾತ್ರವಲ್ಲದೆ ಆ ಠರಾವನ್ನು ಮಂಜೂರು ಮಾಡಿಕೊಳ್ಳುವ ಆಚಾರ್ಯರ ಪ್ರಯತ್ನಗಳಲ್ಲಿ ಮಹಾತ್ಮರು ಅವರಿಗೆ ಒತ್ತಾಸೆಯನ್ನೂ ಕೊಟ್ಟರು. ಆಚಾರ್ಯರ ಧೈರ್ಯ ಮತ್ತು ವಿನಯಗಳು ಸರ್ದಾರ ಪಟೇಲರಂಥ ಮಹಾತ್ಮರ ಪ್ರಚಂಡ ಅನುಯಾಯಿ ಮತ್ತು ಹಸ್ತಕರ ಹೃದಯ ಪರಿವರ್ತನೆ ಮಾಡಿದುವು. ಆಚಾರ್ಯರ ತರ್ಕಸರಣಿಯು ತಪ್ಪೆಂದು ತಮಗೆ ಹೊಳೆಯುತ್ತಿದ್ದಾಗಲೂ ಮಹಾತ್ಮರು ವಿರೋಧಿಸದೆ ಇದ್ದಿರಬೇಕಾದರೆ ಆಚಾರ್ಯರ ವ್ಯಕ್ತಿತ್ವದ ಪ್ರಭಾವವು ಎಷ್ಟಿರಬಹುದೆಂಬುದನ್ನು ನಾವು ಊಹಿಸಿಕೊಳ್ಳಬಹುದು. ಆದ್ದರಿಂದ ಸದ್ಯದಲ್ಲಿ ಕಾಂಗ್ರೆಸ್ಸಿನ ಅನಭಿಷಿಕ್ತ ರಾಜರ ಪಟ್ಟಕ್ಕೆ ರಾಜಗೋಪಾಲಾಚಾರ್ಯರೇ ಬರಬಹುದೆಂದು ಲೀಡರ್ ಪತ್ರಿಕೆಯು ಹೇಳಿದ ಭವಿಷ್ಯವು ಸತ್ಯವಾಗಬಹುದೇ ಎಂದು ಊಹಿಸಲು ಅವಕಾಶವಿದೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 529/1940.
O. S. 291/1939.

ಸುಬ್ರಾಯ ಭಟ್ಟ—ವಾದಿ—ಅರ್ಜಿದಾರ

ಮತ್ತು

ಈಶ್ವರ ಭಟ್ಟ—ಮುತ್ತು ಯಾನೆ ಕೃಷ್ಣ ಭಟ್ಟರ ಮಗ, ಮಂಗಳೂರು ತಾಲೂಕು ಕೈರಂಗಳ ಗ್ರಾಮದಲ್ಲಿರುವವರಿಗೆ } ರೆಸ್ಪೊಂಡೆಂಟ ಪ್ರತಿವಾದಿ

ಸದ್ರಿ ಕ್ರಮ ನಂಬ್ರ 291/39ನೇ ನಂಬ್ರದಲ್ಲಿ ಆದ ಡಿಕ್ರಿಯಲ್ಲಿ ಫ್ಯಾನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರ ವಾದಿಯು ಅರ್ಜಿ ದಾಖಲು ಮಾಡಿರುದ ಅರ್ಜಿಯು ಅಷ್ಟರು ತನ್ನಿ ಬಗ್ಗೆ ತಾರೀಕು 3—8—40ಕ್ಕೆ ಇಟ್ಟಿರುತ್ತದೆ. ಆ ದಿವಸ ಸದರಿ ರೆಸ್ಪೊಂಡೆಂಟನು ದಿನ್ನ ಗಂಟೆ 10-30ಕ್ಕೆ ಸದರಿ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸುವರೀ ತಪ್ಪಿದ್ದಲ್ಲಿ ಸದರಿ ಅರ್ಜಿಯಲ್ಲಿ ಎಕ್ಸಪಾರ್ಟಿ ಮಾಡಿ ಅರ್ಜಿ ತನ್ನಿ ಮಾಡಲಾಗುವದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಮಂಗಳೂರು 18-7-40 } K. Suryanarayana Adiga, Advocate for Petitioner.

ನಿಮಗೆ ಗಂಟ್ಲು ಬೇನೆಯಿರುವುದೆ?

ಲಾರಿಂಜ್ಯಾಟಿಸ್, ಟೊನ್ಸಿಲ್ಯಾಟಿಸ್ ಮತ್ತು ಕ್ವಿನ್ಸಿ ಎಂಬ ಗಂಟ್ಲು ರೋಗಗಳಿಗೆ ಕಾರಣವಾಗುವ ರೋಗಾಣುಗಳು ನಿಮ್ಮ ದೇಹವನ್ನು ಪ್ರವೇಶಿಸುವುದು ಅಪಾಯವು ಗಂಟ್ಲಿನ ಮೂಲಕ. ಅದುದರಿಂದ ನಿಮ್ಮ ಗಂಟ್ಲು ಪೀಡೆಗಳನ್ನು ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಗುಣಪಡಿಸಿಕೊಳ್ಳಿರಿ.

ಪೆಪ್ಸ್ ಗುಳಿಗೆಗಳು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ, ಹೊರಡುವ ಔಷಧಿಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು. ಅದರಿಂದ ನಿಮ್ಮ ಶ್ವಾಸಕೋಶವು ರೋಗಗಳನ್ನು ತಡೆಯುವರೆ ಸಾಮರ್ಥ್ಯವನ್ನು ಹೊಂದುವುದು. ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಮೆಯಾಗುವುದು, ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು, ಸಿಂಬಳವನ್ನು ಕಡಮೆ ಮಾಡುವುದು. ಯಾವತ್ತು ಶೀತ ಸಮ್ಬಂಧ ರೋಗಗಳನ್ನು ಎದುರಾಯಿಸುವರೆ ನಿಮಗೆ ಹೆಚ್ಚಿನ ಬಲವನ್ನು ಕೊಡುವುದು.

ಎಲ್ಲಾ ದವಾಖಾನೆಗಳಲ್ಲಿ ರೂಪ್ಯಾ ಒಂದರ ಪ್ರಕಾರ ಮಾರಾಟವಾಗುತ್ತದೆ.

ಏಜಂಟ್ಸ್:

ಮೆಸರ್ಸ್ ರಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಪೆಪ್ಸನ್ನೆ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಏನೇ, ಆದರೆ ಗುಣಪಡಿಸುವ ಆಶೆಯಿದ್ದರೆ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೀಕು ಕಡಿಮೆಯಾಗುವುದು, ಶೌಚದತೊಂದರೆ ಉಳಿಯುವುದಿಲ್ಲ, ಪಚನಶಕ್ತಿಯು ನೆಟ್ಟಗಾಗುವುದು, ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರು ಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೪ ಔ., ೬ ಔ. ಮತ್ತು ೧೨ ಔ. ಬಾಟ್ಲಿಗಳಲ್ಲಿ ಕ್ರಮವಾಗಿ ರೂ. ೧-೨-೦, ೧-೧೨-೦ ಮತ್ತು ೬-೮-೦ಗಳಿಗೆ ಎಲ್ಲ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars— K. R. GURU, *Managing Director*

ಸಿನೆಮಾ ಪ್ರಪಂಚ

ದಕ್ಷಿಣ ಭಾರತದ ಚಿತ್ರ ನಿರ್ಮಾಪಕರಿಗೆ ಉದಾರತೆಯಿಲ್ಲ

'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಉತ್ತರ ಭಾರತದ ಚಿತ್ರಗಳ ಪ್ರಶಂಸೆಯೇ ಬರುತ್ತದಲ್ಲಾ? ದಕ್ಷಿಣ ಭಾರತ ಚಿತ್ರಗಳ ಕುರಿತು ಟೀಕೆ ಪ್ರಕಟಣೆ ಕೊಡುವುದಿಲ್ಲವೇಕೆ? ಹೀಗೆಂದು ಫಿಲ್ಮ್ ಇಂಡಿಯಾದ ಸಂಪಾದಕರಾದ ಬಾಬುರಾವ್ ಪಟೇಲರೊಡನೆ ಕೇಳಿದಾಗ ಅವರು ದಕ್ಷಿಣದ ಚಿತ್ರ ನಿರ್ಮಾಪಕರು ಬರೆದ್ದರೂ ತಮ್ಮ ಸುದ್ದಿಗಳನ್ನು ಕಳುಹಿಸುವುದಿಲ್ಲವೆಂದೂ ಅವರ ನಟ ನಟಿಯರದ್ದು ಬಿಟ್ಟು ತಮ್ಮದೇ ಫೋಟೋಗಳನ್ನೂ ಕಳುಹಿಸುವುದಿಲ್ಲವೆಂದೂ ಹೇಳಿದರು.

ಸಿನೆಮಾ ತಾರೆಯ ಉಪವಾಸ

ಮಿಸ್ ಮೆಹರಾ ಸುಲ್ತಾನಳು ತಾನು ನಟಿಸುವ ಹೊಸ ಚಿತ್ರದ ಪಾತ್ರಾಭಿನಯಕ್ಕೆ ತನ್ನ ಮುಖವು ಅನುಗುಣವಾಗಿರಬೇಕೆಂಬ ಸಲುವಾಗಿ ೨೧ ದಿನಗಳ ಉಪವಾಸ ಮಾಡಿರುವುದಾಗಿ ತಿಳಿದಿದೆ. ಇದರಿಂದ ಅವಳು ಸುಂದರ ವದನಮಂಡಳವು ಬಹಳ ದುಃಖಪೂರ್ಣವಾಗಿ ಮಾರ್ಪಡುವಂತೆ ಆಕೆ ಮಾಡಿರುವಳೆಂದೂ ತಿಳಿದಿದೆ ಈಗ ಮೊದಲಿಗಿಂತ ತೀರಾ ಭಿನ್ನ ಪ್ರಕೃತಿಯುಳ್ಳವಳಾಗಿರುವಳಂತೆ!

ಸುಮಂಗಲಿಯ ಕುರಿತು ಶಾಂತಾರಾಮರ ಹೇಳಿಕೆ

'ನೀವು ಸುಮಂಗಲಿ ಚಿತ್ರವನ್ನು ನೋಡಿದಿರೇ?' ಹೀಗೆಂದ ಒಬ್ಬ ಮೆಡಿಕಲ್ ವಿದ್ಯಾರ್ಥಿಯು ನಿರ್ದೇಶಕ ಶಾಂತಾರಾಮರೊಡನೆ ಅವರು ಟ್ರೈನಿಗೆ ಹತ್ತುವ ಮಿತ್ರಿಗೆ ಪ್ರಶ್ನಿಸಿದನು.

'ಅದೊಂದು ಬಹಳ ಸುಂದರ ಚಿತ್ರ' ಹೀಗೆಂದು ಮಂದಸ್ಮಿತರಾಗಿ ಶಾಂತಾರಾಮರು ಹೇಳಿದರು.

'ಅದು ಎಲ್ಲಾ ವಿಧದಿಂದಲೂ ಚನ್ನಾಗಿದೆಯೆಂದು ನಾನು ನಂಬುತ್ತೇನೆ' ವಿದ್ಯಾರ್ಥಿ ಹೇಳಿದ.

'ಖಂಡಿತವಾಗಿ. ಅದು ಬಹಳ ಚನ್ನಾಗಿದೆ ನೀವು ಅದರ ಕುರಿತು ಅಭಿಮಾನ ಪಡಬಹುದು' ಹೀಗೆಂದು ಶಾಂತಾರಾಮರು ಹೇಳಿದರು.

'ತಮಿಳಿನಲ್ಲಿಯೂ ಕೆಲವು ಚಂದದ ಚಿತ್ರಗಳು ತಯಾರಾಗಿವೆ' ಎಂದು ಅಭಿಪ್ರಾಯಪಟ್ಟರು.

ಸುಮಂಗಲಿ ಚಿತ್ರವನ್ನು ತಯಾರಿಸಿದ ವಾಹಿನಿ ಚಿತ್ರ ಕಂಪೆನಿಯವರು, ಅವರ ಮುಂದಿನ ಚಿತ್ರದ ತಯಾರಿಯಲ್ಲಿ ಈಗ ನಿರತರಾಗಿದ್ದಾರೆ.

ಅರ್ಧಾಂಗಿ

'ಹಂಸ' ಚಿತ್ರ ಕಂಪೆನಿಯ ಅರ್ಧಾಂಗಿಯಲ್ಲಿ ಮೀನಾಕ್ಷಿ ಮತ್ತು ವಿನಾಯಕ ಇವರು ನಾಯಿಕಾ ನಾಯಕರಾಗಿ ಅಭಿನಯಿಸುವರು ಪ್ರಿನ್ಸಿಪಾಲ್ ಅತ್ರೆಯವರ ಕಥೆಗಳಲ್ಲಿ ಇದು ಅತ್ಯುತ್ತಮ ಕಥೆಯೆಂದು ಪ್ರಸಿದ್ಧವಾಗಿದೆ.

ಬೆಳ್ಳಾರಿ, ವಿಶಾಖ, ಕೋಕನಾಡು ಗಳಲ್ಲಿ ಈ ಚಿತ್ರವು ಈಗ ಎರಡನೆಯ ವಾರಗಳಲ್ಲಿ ಪ್ರದರ್ಶಿತವಾಗುತ್ತಿದೆ

ರಾಜಾಜಿಯವರ ಮಾದರಿ

ಪ್ರಕಾಶ ಸ್ಟುಡಿಯೋದವರು ರಾಜಾಜಿಯವರ ಮಾದರಿಯನ್ನು ಅನುಸರಿಸಿದ್ದಾರೆ ಸ್ಟುಡಿಯೋದಲ್ಲಿ ಅವರು ಹಿಂದಿಯ ಸ್ಥಳದಲ್ಲಿ ಬೇರೆ ಭಾಷೆಯನ್ನೇ ಉಪಯೋಗಿಸುವದಿಲ್ಲ.

ದ ಭಾರತದ ಚಲಚ್ಚಿತ್ರ ಪ್ರಿಯರಿಗೆ

ಶಾಂತಾರಾಮರ ಕೃತಜ್ಞತಾ ಸಮರ್ಪಣೆ

ಪೆನ್ನೆ ಮುಂಬಾಯಿನಲ್ಲಿ ಹೊಸತಾಗಿ ತೆರೆದ ಪ್ರಭಾತ ಟಾಕಿಯ ಉದ್ಘಾಟನಾ ಸಮಾರಂಭಕ್ಕೆ ಒಂದಿದ್ದ ಪ್ರಭಾತ ಚಿತ್ರ ಕಂಪನಿಯ ನಿರ್ದೇಶಕರಾದ ಶ್ರೀ ಶಾಂತಾರಾಮರಿಗೆ ಮದ್ರಾಸಿನಲ್ಲಿ ಅಲ್ಲಿನ ಸಿನೇಮಾ ಪ್ರಿಯರು ಬಹಳ ಸಂಭ್ರಮದ ಸ್ವಾಗತವನ್ನಿತ್ತಿದ್ದರು ಈ ಬಗೆ ಅವರಿಗೆಲ್ಲಾ ತಾನು ಅತ್ಯಂತ ಕೃತಜ್ಞನಾಗಿರುವನೆಂದು ಅವರು ತಿಳಿಸುತ್ತಾರೆ

ಗೋಪೀನಾಥ ಫಿಲ್ಮ್ಸ ಲಿಮಿಟೆಡ್

ಮದ್ರಾಸಿನಲ್ಲಿ ಗೋಪೀನಾಥ ಫಿಲ್ಮ್ಸ ಲಿಮಿಟೆಡ್ ಎಂಬ ಹೊಸ ಚಿತ್ರ ಕಂಪೆನಿಯೊಂದನ್ನು ತೆರೆದಿರುವರು ಸ್ವಾಮಿ ಸುಧಾನಂದ ಭಾರತಿಯವರಿಂದ ರಚಿತವಾದ ಸಾಮಾಜಿಕ ಕಥೆಯನ್ನು ಅಭಿನಯಿಸುವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ

ಸತ್ಯನಾರಾಯಣ ಫಿಲ್ಮ್ಸ

ಇದೊಂದು ಹೊಸ ಚಿತ್ರ ಕಂಪೆನಿ. ಮದ್ರಾಸಿನಲ್ಲಿಯೇ ಅವರು ತಮಿಳಿನಲ್ಲಿ ಮೂರು ತೆಲುಗಿನಲ್ಲಿ ಎರಡು ಚಿತ್ರಗಳನ್ನು ತಯಾರಿಸಲು ಯೋಚಿಸಿದ್ದಾರೆ.

ಶ್ರೀಮತಿ ನಂದಿತಾದೇವಿ

ನ್ಯೂ ಥಿಯೇಟರ್ಸಿನವರ ಹೊಸ ತಾರೆಯು ಶ್ರೀಮತಿ ನಂದಿತಾದೇವಿಯು. ಬಂಗಾಳದ ಒಂದು ಕುಲೀನ ಮನೆತನಕ್ಕೆ ಸೇರಿದವಳು. ಈಗ ಕಲಾಸೇವೆಗಾಗಿ ಚಿತ್ರ ಭೂಮಿಗೆ ಬಂದಿಳಿದಿದ್ದಾಳೆ. ಅವಳು ನಿತಿನ್ ಬೋಸರ ಸಾಮಾಜಿಕ ಚಿತ್ರದ ಬಂಗಾಳಿ ಕಥೆಯಲ್ಲಿ ಅಭಿನಯಿಸುವಳು. ನಿರ್ದೇಶಕ ಸುಧೀರ ಸೇನರ ಮುಂದಿನ ಚಿತ್ರದಲ್ಲಿಯೂ ಆಕೆ ಪಾತ್ರ ವಹಿಸುವಳೆಂದು ತಿಳಿದುಬಂದಿದೆ.

ಇಮ್ಮಡಿ ಉದ್ದೇಶವಿರುವ ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನಿಮ್ಮನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆಯಾ ಚುಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಜಿಡ್ಡು ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ. ಹಾದಿ ಕುಟಿಕೂರಾ ಮುಲಾಮು (Cuticura Ointment) ನಿಂದ ಮುದ್ರಾ ಛಿದ್ರ ಗಜ್ಜಿಗಳನ್ನು ನಾಶವಾಗಿ ಇದರ ವಿಷಹಾರಕ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು Cuticura Talcum Powder, ಬಹಳ ಹಿತಕರವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ ಸ್ನಾನಕ್ಕೆ, ಸಣ್ಣ ಸೈಜಿನಲ್ಲಿಯೂ ಪ್ರವಾಸಕ್ಕೆ ದೊರೆಯುತ್ತದೆ.

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/- & 5,000/-

are now issued at all our Branches

For particulars call at or write to

Any of our nearest Branches

ಶಾಂತಾ

ಬಕ್ಷಾನೀ ಚಿತ್ರದ ಶಾಂತಾದಲ್ಲಿ ಪಿ. ಎಸ್. ಶ್ರೀನಿವಾಸನ್ ಮತ್ತು ಕೆ. ಟಿ. ರುಕ್ಮಿಣಿ ಇವರು ನಾಯಿಕಾ ನಾಯಕರಾಗಿ ಬಹಳ ರಸಭರಿತವಾಗಿ ಅಭಿನಯಿಸುವರು.

ವಾಸವದತ್ತಾ

ತಿರುವಾಂಕೂರಿನ ಕೊಟ್ಟಯಂ ಎಂಬಲ್ಲಿ ವಾಣಿ ಚಂದ್ರ ಫಿಲ್ಮ್ಸ ಲಿಮಿಟೆಡ್ ಎಂಬ ಸಂಸ್ಥೆ ಏರ್ಪಟ್ಟಿದೆ. ಈ ಕಂಪೆನಿಯವರು ಮಲಿಯಾಳ ಭಾಷೆಯಲ್ಲಿ ಭಾಸಕವಿಯ ವಾಸವದತ್ತಾ ಕಥೆಯನ್ನು ಸಿನೆಮಾ ಚಿತ್ರವಾಗಿ ತಯಾರಿಸುವರೆಂದು ತಿಳಿದು ಬರುತ್ತದೆ.

ಭಾರತವನ್ನು ಸ್ವತಂತ್ರವನ್ನಾಗಿ ಮಾಡಿರಿ!

ಪಾರ್ಲಿಮೆಂಟ್ ಸದಸ್ಯರ ಉಜ್ವಲ ಲೇಖನ! ಬ್ರಿಟಿಷ್ ಪ್ರಮುಖರ ಅಭಿಪ್ರಾಯ!

…ಜೀವನ ಪ್ರಾರಂಭದ ಘಟ್ಟದಲ್ಲಿ ಸಿಲುಕಿರುವ ಬ್ರಿಟನಿಗೆ ಈಗ ಇರುವ ನೂತನವಾದ ಆವಶ್ಯಕತೆ ಎಂದರೆ— ಸ್ವತಂತ್ರ ಮತ್ತು ಸಂಘಟಿತ ಹಿಂದುಸ್ಥಾನವಾಗಿದೆ' ಎಂದು ಕೆಂಟರಬರಿಯ ಡೀನರವರು ಚೀನದೊಡನೆ ಸಹಾನುಭೂತಿಯನ್ನು ತೋರಿಸಲಿಕ್ಕೆ ಕೂಡಿದ ಒಂದು ಸಭೆಯಲ್ಲಿ ಭಾಷಣ ಕೊಡುತ್ತ ಹೇಳಿದರು. ಈ ಸಭೆಯಲ್ಲಿ ಚೀನ ಮತ್ತು ರಶ್ಯದ ರಾಯಭಾರಿಗಳು ಸನ್ಮಾನ್ಯ ಅತಿಥಿಗಳಾಗಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ತೆಗೆದುಕೊಂಡಿದ್ದ ಲಾರ್ಡ್ ಲಿಸ್ಟೊವೆಲರವರು—'ಜಪಾನಿನ ರಾಕ್ಷಸೀ ಹಿಡಿತದಿಂದ ರಕ್ಷಿಸಿಕೊಳ್ಳುವ ಕಾಪಾಡಿಕೆಗೆ ಚೀನವು ಹೋರಾಡುತ್ತ ಇದೆ. ಈ ಹೋರಾಟದಲ್ಲಿ ಹಿಂದುಸ್ಥಾನವೂ ರಶ್ಯವೂ ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸಿವೆ. ಆದರೆ ಸ್ವತಂತ್ರ ಹಿಂದುಸ್ಥಾನವು ಚೀನ ಮತ್ತು ಜಗತ್ತಿನ ನಾಗರಿಕತೆಯ ರಕ್ಷಣೆಗಾಗಿ ಇದಕ್ಕೂ ಹೆಚ್ಚಿಗೆ ಸಹಾಯ ಕೊಡಲು ಸಮರ್ಥವಾಗುವುದು' ಎಂದು ಭಾಷಣ ಮಾಡಿದರು.

'ಜಪಾನಿನ ವಿರೋಧವಾಗಿ ಅಮೇರಿಕ ಮತ್ತು ರಶ್ಯದೊಂದಿಗೆ ಬ್ರಿಟನೂ ಕೈಗೆ ಕೈಕೊಟ್ಟು ಚೀನದ ಸಹಾಯಕ್ಕೆ ಹೋಗುವದನ್ನು ನೋಡಬೇಕೆಂಬ ಆಸೆ ನನಗೆ ತುಂಬಾ ಇರುವದು. ಬರ್ಮಾದಿಂದ ಚೀನಕ್ಕೆ ಹೋಗುವ ಹೆದ್ದಾರಿಯಲ್ಲಿ ಭಾರತೀಯರು ತುಂಬಾ ಆಸಕ್ತಿವುಳ್ಳವರಾಗಿದ್ದಾರೆ. ಸ್ವತಂತ್ರ ಮತ್ತು ಸಂಘಟಿತ ಹಿಂದುಸ್ಥಾನದ ಅವಶ್ಯಕತೆಯು, ನಾಝಿ ಆಕ್ರಮಣದಿಂದ ಬೆದರಿಸಲ್ಪಟ್ಟಿರುವ ಬ್ರಿಟನಿಗೆ ತುಂಬಾ ಇರುವದನ್ನು ಬ್ರಿಟನು ಅನುಭವಕ್ಕೆ ತಂದೀತಾಗಿ ನಾನು ತಿಳಿಯುತ್ತೇನೆ.' ಎಂದು ಕೇಂಟರ್‌ಬರಿಯ ಡೀನರು ಹೇಳಿದರು.

ನಡೆದ ಘಟನೆಗಳಿಂದ ಕಲಿಯಬೇಕಾದ ಪಾಠಗಳು

ಮುಂದೆ ಮಿ. ಡಿ. ಎನ್. ಪ್ರಿಟ್‌ರವರು ಮಾತನಾಡುತ್ತ ಹೀಗೆಂದರು—'ಈ ಕೆಲವು ತಿಂಗಳುಗಳಲ್ಲಿ ನಡೆದ ಘಟನೆಗಳಿಂದ ನಾವು—ಬ್ರಿಟಿಷರು—ಕೆಲವು ಕಟು ಪಾಠಗಳನ್ನು ಕಲಿತಿರುವೆವು ಪ್ರತಿಯೊಂದು ರಾಷ್ಟ್ರವು, ಇನ್ನೊಂದು ರಾಷ್ಟ್ರ ಅಥವಾ ಅದರ ಕೆಲವು ಪ್ರತಿನಿಧಿಗಳ ಸಮೂಹದಿಂದ ಅಲ್ಲ, ಆದರೆ ಅದೇ ರಾಷ್ಟ್ರದ ಜನರಿಂದ ಆಳಿಸಿಕೊಳ್ಳಬೇಕೆಂಬುದು ನಾವು ಕಲಿತ ಅಂಥ ಒಂದು ಪಾಠವಾಗಿದೆ. ತಾನು ಯುದ್ಧದಲ್ಲಿ ಆಸಕ್ತವಾಗಿರುವದಾದರೂ ಚೀನವು ತನ್ನ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿದೆ ನಾವು—ಬ್ರಿಟಿಷರು—ಕೂಡ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನೂ ಸ್ವರಾಜ್ಯವನ್ನು ಕೊಡುವ ಸಮಯವು ಈಗ ಹತ್ತಿರವಾಗಿರುವುದು.'

'ಚೀನವು ಒಂಟಿಯಾಗಿ ಹೋರಾಡುತ್ತ ಇಲ್ಲ ಜಗತ್ತಿನ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಸಹಾಯವು ಚೀನಕ್ಕೆ ಇದೆ' ಎಂದು ಭಾಷಣ ಮಾಡುತ್ತ ಲೋರ್ಡ್ ಸ್ನಾಬೊಲಿಗೆಯವರು—'ಯೂರೋಪ ಮತ್ತು ವಿಶ್ವದಲ್ಲಿ ನಡೆಯುತ್ತಿರುವ ಈ ಸ್ವಾತಂತ್ರ್ಯ ಆಂದೋಲನಗಳಲ್ಲಿ ಹಿಂದುಸ್ಥಾನವೂ ಸೇರುವಂತೆ ಮಾಡಬಹುದು ಆದರೆ ತಾವು ಸ್ವಾತಂತ್ರ್ಯಕ್ಕಾಗಿಯೇ ಹೋರಾಡುತ್ತಿರುವೆವೆಂಬ ಭರವಸೆಯು ಹಿಂದುಸ್ಥಾನಕ್ಕೆ ಮೊದಲು ದೊರೆಯಬೇಕಾಗಿದೆ. ಆದುದರಿಂದ ಹೊರಗಿನ ಯಾವ ಒತ್ತಾಯವೂ ಇಲ್ಲದೆ ಯೂರೋಪಿನ ಯುದ್ಧದಲ್ಲಿ ತನ್ನ ಧೋರಣೆಯನ್ನು ನಿಶ್ಚಯಿಸುವ ಅಧಿಕಾರವು ಹಿಂದುಸ್ಥಾನಕ್ಕೆ ಇರಬೇಕಾಗಿದೆ' ಎಂದರು.

ಬ್ರಿಟನಿನಲ್ಲಿ ಎಡಪಕ್ಷದವರ ಪ್ರಾಬಲ್ಯ

ಇವರ ನಂತರ ಲೋರ್ಡ್ ಮೇರಿಯವರು ಭಾಷಣ ಮಾಡಿದರು ಅವರು ತನ್ನ ಮೊದಲು ಭಾಷಣ ಮಾಡಿದವರೊಡನೆ ತನ್ನ ಸಂಪೂರ್ಣ ಸಮ್ಮತಿಯನ್ನು ಪ್ರದರ್ಶಿಸಿ ಹೀಗೆಂದರು—'ಈ ಯುದ್ಧದ ಪರಿಣಾಮವಾಗಿ ಬ್ರಿಟನ್ನಿನಲ್ಲಿ ಎಡಪಕ್ಷದವರ ಪ್ರಬಲರಾಗಿ ಅಧಿಕಾರಕ್ಕೆ ಬರುವುದು ಖಂಡಿತವಾಗಿದೆ ಬ್ರಿಟನು ಎಡಪಕ್ಷದಾಗುವುದಾದರೆ ಚೀನ ಮತ್ತು ಭಾರತದ ಮಾತ್ರವಲ್ಲ, ಪ್ರಪಂಚದ ಭವಿಷ್ಯವೂ ಉಜ್ವಲವಾಗುವ ಆಶೆಯು ನನಗಿದೆ.

ಸೊರೆನ್ಸನರ ಲೇಖ

'ಭಾರತದ ರಾಜಕೀಯ ವಾತಾವರಣವು ಕಾಮ್ರೇಡುಗಳಿಂದ ಮುಚ್ಚಿಹೋಗಿದೆ. ನಾವು ಬ್ರಿಟಿಷರು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ಸ್ವರಾಜ್ಯಕ್ಕಾಗಿ ಹೋರಾಡುತ್ತಿದ್ದೇವೆಂದು ಹೇಳುತ್ತೇವೆ ನಾಝಿಗಳ ಅತ್ಯಾಚಾರವು ಅಸಹನೀಯವಾಗಿರುವದು ಎನ್ನುತ್ತೇವೆ ಆದರೆ ಹಿಂದುಸ್ಥಾನವು ಹೇಳುತ್ತಿರುವದು ನಮ್ಮ ಲಕ್ಷ್ಯಕ್ಕೆ ಬರುವದಿಲ್ಲ 'ನೀವು ಹೇಳುವ ಮಾತಿನಲ್ಲಿ ನಮಗೆ ನಂಬಿಕೆ ಇದೆ, ಆದರಿಂದ ನಿಮ್ಮ ಹೇಳಿಕೆಯನ್ನು ಹಿಂದುಸ್ಥಾನದ ವಿಷಯದಲ್ಲಿ ಸತ್ಯ ಮಾಡಿರಿ, ನೋಡೋಣ! ನಾವು ಸ್ವಾತಂತ್ರ್ಯವನ್ನು ಕೇಳುತ್ತೇವೆ. ನಮಗೂ ಪ್ರಜಾಸತ್ತೆ ಮತ್ತು ಸ್ವರಾಜ್ಯವು ಬೇಕು.' ಎಂದು ಭಾರತವು ಬ್ರಿಟನನ್ನು ಪ್ರಶ್ನಿಸುತ್ತದೆ.

"ಭಾರತೀಯರು ಬ್ರಿಟಿಷರಿಂದ ತಮ್ಮ ಜನ್ಮಸಿದ್ಧವಾದ ಅಧಿಕಾರವನ್ನು ಕೇಳುತಿದ್ದಾರೆ. ಪ್ರಾಣಕ್ಕಿಂತಲೂ ಪ್ರೀತಿಯದ್ದಾದ ಯಾವ ಸ್ವಾತಂತ್ರ್ಯವನ್ನು ರಕ್ಷಣೆಗಾಗಿ ಬ್ರಿಟನು ಯುದ್ಧಸನ್ನದ್ಧವಾಗಿದೆಯೋ ಕಳೆದು ಹೋದ ಅದೇ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕಾಗಿ ಹಿಂದುಸ್ಥಾನವು ಪ್ರಯತ್ನಿಸಿದೆ 'ನೀವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೀರೋ? ಹಾಗಾದರೆ ನಾವೂ ಅದಕ್ಕಾಗಿಯೇ ಹೋರಾಡುತ್ತಿರುವೆವು!' ಎಂದು ಭಾರತೀಯರು ಹೇಳುವರು ಇದಕ್ಕೆ ಬ್ರಿಟಿಷರು ಯಾವ ಸಮರ್ಪಕವಾದ ಉತ್ತರವನ್ನು ಕೊಡಬಹುದು?" ಎನ್ನುತ್ತಾ ಬ್ರಿಟಿಷ ಪಾರ್ಲಿಮೆಂಟಿನ ಒಬ್ಬ ಪ್ರಮುಖ ಸದಸ್ಯರಾದ ಸೊರೆನ್ಸನರು ಒಂದು ಲೇಖ ಬರೆದಿದ್ದಾರೆ ಇಂಥ ಲೇಖನ ಭಾಷಣಗಳ ಮೂಲಕ ಬ್ರಿಟನಿನಲ್ಲಿ ಹಿಂದುಸ್ಥಾನದ ಅನುಕೂಲ ಪ್ರಚಾರ ಕಾರ್ಯವು ನಡೆಯುತ್ತಾ ಇದೆ ಆದರೆ ಅಧಿಕಾರ ಪೀಠದಲ್ಲಿರುವವರು ಮಾತ್ರ ಆ ಕಡೆಗೆ ಪೂರ್ಣ ಲಕ್ಷ್ಯ ಕೊಟ್ಟಿರುವಂತೆ ತೋರುವದಿಲ್ಲ.

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯು ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/-
+
ಸರ್ವಸಾಧಾರಣ ಬೋನಸ್ ರೂ. 11/
—
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ

★ ★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ
ಅಥವಾ

…ಎನ್. ನಾಯಕ್
ಆರ್ಗನೈಸರ್
… ಮಂಗಳೂರು.

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲೈನ್ ಬೀಚ್ ಮದ್ರಾಸು

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಆಕ್ಷೇಪವಿಲ್ಲದೆ ಪರೀಕ್ಷಿಸಿನೋಡಿ. ಅದು ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು … ಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ವಿಚಿತ್ರ ಪ್ರಪಂಚ

ಹಲ್ಲು ಕಿತ್ತಾಗ ದೃಷ್ಟಿ ಬಂದಿತು

ಒಪ್ಪೆಸಿಯನ ಎಂಬ ನೇತ್ರ ಚಿಕಿತ್ಸೆಗೆ ಸಂಬಂಧಪಟ್ಟ ಒಂದು ಪತ್ರಿಕೆಯಲ್ಲಿ ವಿಚಿತ್ರ ವರ್ತಮಾನವು ಪ್ರಕಟವಾಗಿದೆ. ೩೪ ವರ್ಷ ಪ್ರಾಯದ ಒಬ್ಬ ಹೆಂಗಸು. ಅವಳ ಬಲದ ಕಣ್ಣಿನ ದೃಷ್ಟಿಯು ಕೆಡುತ್ತಾ ಬಂದಿತ್ತು. ಆ ಹೆಂಗಸು ಹೊಲಿಗೆ ಕೆಲಸಮಾಡಿ ದಿನಗಳನ್ನು ಕಳೆಯುತ್ತಿದ್ದಳು. ಆದರೆ ದೃಷ್ಟಿ ಮಂದವಾಗುತ್ತ ಬಂದುದರಿಂದ ಆ ವೃತ್ತಿಯನ್ನು ಬಿಟ್ಟಳು. ಪರಂತು ಅದರ ನಂತರವೂ ಅವಳ ಕಣ್ಣು ಸರಿಯಾಗಲಿಲ್ಲ. ಕೊನೆಗೆ ಒಬ್ಬ ನೇತ್ರ ಪರೀಕ್ಷಕನಿಗೆ ತನ್ನ ಕಣ್ಣನ್ನು ತೋರಿಸಿದಳು. ಕಣ್ಣಿನಲ್ಲಿ ಒಂದು ರಕ್ತನಾಡಿಯು ಒಡೆದುಹೋಗಿರುವದೆಂದು ಅವನು ಹೇಳಿದ.

ಕೆಲವು ದಿನಗಳ ಅನಂತರ ಅವಳಿಗೆ ಮೇಲ್ದವಡೆಯಲ್ಲಿ ನೋವು ಕಾಣಿಸಿತು. ಈ ನೋವಿಗೆ ಯಾವ ಕಾರಣವೂ ತಿಳಿಯಲಿಲ್ಲ. ಯಾಕೆಂದರೆ ಒಂದೆರಡು ವರ್ಷಗಳ ಮೊದಲು ಅವಳು ತನ್ನ ಬಾಯೊಳಗಿನ ಎಲ್ಲಾ ಹಲ್ಲುಗಳನ್ನು ಕೀಳಿಸಿಕೊಂಡು ಮುದುಕಿಯಾಗಿದ್ದಳು. ಆದರೂ ಅವಳು ಒಬ್ಬ ದಂತಚಿಕಿತ್ಸಕನಲ್ಲಿಗೆ ಹೋಗಿ ತನ್ನ ದವಡೆಗಳನ್ನು ತೋರಿಸಿದಳು. ಪರೀಕ್ಷೆ ಮಾಡಿದಾಗ, ಮೇಲ್ದವಡೆಯಲ್ಲಿ ಒಂದು ಹಲ್ಲು ಹುಟ್ಟಿ ಬೆಳೆಯುತ್ತಿರುವದು ಕಂಡು ಬಂದಿತು. ೫೦ ವರ್ಷಗಳ ವೃದ್ಧಾಪ್ಯದಲ್ಲಿ ಹೊಸ ಹಲ್ಲುಗಳು ಹುಟ್ಟಿ ಬೆಳೆಯುವದು ಆಶ್ಚರ್ಯವೆ? ಅದಕ್ಕೂ ಹೆಚ್ಚಾದ ಆಶ್ಚರ್ಯದ ಸಂಗತಿ ಅಂದರೆ—ಆ ದಂತಚಿಕಿತ್ಸಕನು ಅವಳ ಆ ಹಲ್ಲನ್ನು ಶಸ್ತ್ರಕ್ರಿಯೆಯಿಂದ ಕಿತ್ತು ತೆಗೆದ ಆಗಿನಿಂದ ಅವಳ ಕಳೆದುಹೋದ ಕಣ್ಣು ದೃಷ್ಟಿಯು ತಾನಾಗಿ ಮೆಲ್ಲಮೆಲ್ಲನೆ ಪುನಃ ಬರತೊಡಗಿತು!! ಕಣ್ಣಿಗೂ ಹಲ್ಲಿಗೂ ಯಾವ ಬಾದರಾಯಣ ಸಂಬಂಧವಿದೆಯೋ ಎಂದು ಎಲ್ಲರೂ ಆಶ್ಚರ್ಯಪಡುತ್ತಾರೆ!!

ರಣರಂಗದಲ್ಲಿ ಬಣ್ಣದ ವೀರರು

ಅರೇಬಿಯಾದ ಯಾರೋ ಒಬ್ಬ ಚಿಕ್ಕ ಪಾಳೆಯಗಾರನು ಯುರೋಪದ ಯುದ್ಧದಲ್ಲಿ ಇಂಗ್ಲೀಷರಿಗೆ ತನ್ನ ಸಹಾಯವನ್ನು ಕೊಟ್ಟು ಬರೆದ ಒಂದು ವಿಚಿತ್ರ ಪತ್ರವನ್ನು ಲಂಡನಿನ ಟೈಮ್ಸ್ ಪತ್ರಿಕೆಯು ಪ್ರಕಟಿಸಿದೆ. ಅದು ಹೀಗಿದೆ—

ಇಂಗ್ಲೀಷರು ದುಷ್ಟ ಹಿಟ್ಲರ ಮತ್ತು ಅವನ ರಾಕ್ಷಸೀ ಅನ್ಯಾಯಗಳನ್ನು ಸಂಪೂರ್ಣ ನಾಶಮಾಡಿದರು ಎಂಬ ಸಂತೋಷ ವಾರ್ತೆಯನ್ನು ಕೇಳಲಿಕ್ಕೆ ನಾನೂ ನಮ್ಮ ಜನರೂ ಬಹಳ ಆತುರದಲ್ಲಿ ಇರುತ್ತೇವೆ. ದುಷ್ಟ ಹಿಟ್ಲರನು ದುರ್ಬಲ ಮತ್ತು ಸಣ್ಣ ಜನಾಂಗಗಳ ಮೇಲೆ ಅನ್ಯಾಯವಾದ ಯುದ್ಧಗಳನ್ನು ಹೂಡಿ ವಸ್ತು ಒಡವೆಗಳ ಕ್ರಯ ಬಹಳ ಏರುವಂತೆ ಮಾಡಿದ್ದಾನೆ. ತನ್ನ ಮಾರ್ಗದಿಂದ ಹಿಟ್ಲರನು ಹಾದುಹೋಗುವನಾದರೆ, ಗುರಾಣಿಯು ಒಂದೇ ಒಂದು ಪ್ರಯೋಗದಿಂದ ಆತನ ರುಂಡ ಬೇರೆ ಮುಂಡ ಬೇರೆ ಮಾಡುವೆನು. ನನ್ನ ತೋಟಕ್ಕೆ ನೀರು ಹೊಯ್ಯುವ ಆಳು ಹೇಳುತ್ತಾನೆ, ನಾನು ಈ ಹಿಟ್ಲರನ ಕೈಕಾಲುಗಳನ್ನು ಸಂಕೋಲೆಗಳಿಂದ ಕಟ್ಟಿ ಅವನನ್ನು ಬಂಧಿಸಿ ಇಟ್ಟರೂ ತನಗೆ ಪರಮ ಸಂತೋಷವಾಗುವದೆಂದು ನನ್ನ ಆ ಆಳು ಹೇಳುತ್ತಾನೆ.

"ನಾವು ಹಣದ ರೂಪದಿಂದ ನಿಮಗೆ ಏನಾದರೂ ಸಹಾಯ ಮಾಡಲಿಕ್ಕೆ ಕೈಲಾಗದವರಾಗಿದ್ದೇವೆ. ಆದರೆ ನಿಮ್ಮ ಸೈನಿಕರು ಬಿಳಿಜೋಳವನ್ನು ತಿನ್ನುವರಾದರೆ ನಮಗೆ ತಿಳಿಸಿರಿ. ಇಲ್ಲಿ ಬೆಳೆಯುವ ಅದನ್ನಷ್ಟನ್ನು ಕಳುಹಿಸಿಕೊಡುವೆವು. ಮತ್ತೆ ರಣರಂಗದಲ್ಲಿ ಚಳಿಬಾಧೆ ಅಸಹನೀಯವಾಗಿರುವದಾದರೆ ಹೇಳಿರಿ. ಸ್ವಲ್ಪ ನೀಲಿಯನ್ನು ಕಳುಹಿಸಿಕೊಡುವೆವು. ಅದನ್ನು ಮೈಗೆ ಬಳಿದುಕೊಂಡಾಗ ಏನೂ ಚಳಿಯಾಗುವದಿಲ್ಲ!"

ಕಾಂಗ್ರೆಸ್ ಸಭೆಯಲ್ಲಿ ವಿಚಿತ್ರ ಘಟನೆ

ಅಮೇರಿಕದ ಕಾಂಗ್ರೆಸ್ ಸಭೆ ನಡೆಯುತ್ತಿದ್ದಾಗ ಕಿವುಡನೊಬ್ಬನು ಆಕಸ್ಮಿಕವಾಗಿ ಕೇಳುವ ಶಕ್ತಿಯನ್ನು ಸಂಪಾದಿಸಿದನು. ಜ್ಹೋನ ಚೇಂಬರನೆಂಬವನು ಅಧ್ಯಕ್ಷ ರೂಜವೆಲ್ಟರ ಶಾಸನ ನೀತಿಯ ಪರಮ ದ್ವೇಷಿಗ. ಅವನ ವಿಶೇಷತೆಯೆಂದರೆ ಏವತ್ತ ಮನುಷ್ಯರು ಒಂದೇ ಬಾರಿಗೆ ಗಟ್ಟಿಯಾಗಿ ಮಾತನಾಡುವಾಗ ಆಗುವಷ್ಟು ಜೋರ ಶಬ್ದಮಾಡಿ ಅವನು ಮಾತನಾಡಬಲ್ಲನು. ಕೊನೆಕಾಲದ [illegible] ಕಾಂಗ್ರೆಸ್ [illegible] ಜರೂರಾಗಿ ಕೊಡುವ ಕುರಿತ ಕಾಂಗ್ರೆಸ್ಸಿನಲ್ಲಿ ಚರ್ಚೆಯಾಗುತ್ತಿದ್ದಾಗ ಈ ಚೇಂಬರ್ಸನು ಅದರ ವಿರುದ್ಧ ಮಾತನಾಡುತ್ತ ಎಷ್ಟು ಗಟ್ಟಿಯಾಗಿ ಒದರಿದನೆಂದರೆ ಸ್ವಲ್ಪ ದೂರದಲ್ಲಿ ಕೂತಿದ್ದ [illegible] ಕೂಯೆಟ್ಸ ಎಂಬ ಜನ್ಮದಾರಭ್ಯ ಒಂದು ಕಿವಿ ಕಿವುಡಾಗಿದ್ದ ಇನ್ನೊಬ್ಬ ಸದಸ್ಯನಿಗೆ ಗುಡುಗು ಗುಡುಗಿಸಿದಂತೆ ಆಯಿತು. ಈ ಕೂಯೆಟ್ಸನು ತನ್ನ ಎಡಕಿವಿಯ ಕಿವುಡುತನವನ್ನು ಹೋಗಲಾಡಿಸಲಿಕ್ಕೆ ಸಾವಿರಾರು ಡಾಲರುಗಳನ್ನು ಖರ್ಚು ಮಾಡಿದ್ದನಾದರೂ ಅವನಿಗೆ ಫಲ ದೊರೆತಿರಲಿಲ್ಲ. ಚೇಂಬರನ ಅರಚುವಿಕೆಯು ಅಸಹನೀಯವಾಗಿ ಕೂಯೆಜನು ಮೊಗಸಾಲೆಯ ಇನ್ನೊಂದು ಕೋಣೆಗೆ ಓಡಿ ಮಂಚದ ಮೇಲೆ ಬಿದ್ದುಕೊಂಡ. ಆಗಲೇ ಮತ್ತೊಬ್ಬ ಸದಸ್ಯ ಬಾಗಿಲು ತೆರೆದ. ಆ ಕೋಣೆಯನ್ನು ಸಗ್ಗಿದ ಚೇಂಬರನು ಆಗಲೂ ಒದರಿ ಭಾಷಣ ಕೊಡುತ್ತಲಿದ್ದ. ಬಾಗಿಲು ತೆರೆಯುವ ಸರಿಯಕ್ಕೆ ಕೂಯೇಜನ ಕಿವಿಗೆ ಇನ್ನೊಂದು ಎರಡು ಧಪರಾಕು ಹೊಡೆದಂತಾಯಿತು. ಅನಂತ ಮೇಲೆ ವಿಮಾನದಿಂದ ಬಾಂಬು ಹಾಕಿದ ಶಬ್ದವಾದಂತೆ ಅವನಿಗೆ ಅನುಭವವಾಯಿತು. ಚೇಂಬರನ ಭಾಷಣವು ಮುಗಿಯಿತು. ಕೂಯೆಜನು ಕೋಣೆಯಿಂದ ಹೊರಗೆ ಬಂದ. ಆಶ್ಚರ್ಯವೆಂದರೆ ಚೇಂಬರನ ಕೂಗಿನಿಂದ ಕೂಯೆಜನಿಗೆ ಕೇಳುವ ಶಕ್ತಿ ಬಂದಿತ್ತು. ಔಷಧಿ ಚಿಕಿತ್ಸೆ ಏನೂ ಇಲ್ಲದೆ ಅವನ ಕಿವುಡ ಕಿವಿ ಸರಿಯಾಗಿತ್ತು! ರೂಜವೆಲ್ಟರ ಶಾಸನಕ್ರಮವನ್ನು ದ್ವೇಷಿಸಿದರೆ ಲೋಕಕ್ಕೆ ಪ್ರಯೋಜನವುಂಟು ಎಂದು ಚೇಂಬರ ಹೇಳಲಾರಂಭಿಸಿದ್ದಾನೆ!

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ

PHYSICAL FITNESS
is the first essential in games and in every social activity.
You need not worry hereafter for your impaired vitality premature old age and nervous break-down if you try
"BHUVANENDRA AMRITHPRASH"
which will tone the nervous system, build healthy tissues and enrich the blood.
Thus keeps you fresh and sprightly.
Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.
ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ
ಭುವನೇಂದ್ರ 'ಅಮೃತಪ್ರಾಶ'ವು
ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕೊಡುವುದು. ಯಾವಾಗಲೂ ನಿಮ್ಮನು ಉಲ್ಲಾಸಗೊಳಿಸುವುದು.
ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು. (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಜೀವಜ್ಯೋತಿಗಳು:

ಲೋಕಮಾನ್ಯ ತಿಲಕರು

ಲೇಖಕ: ಕೆ. ಕೆ. ಶೈ, ವಿದ್ವಾನ್.

ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಎಂಬ ಸಿಂಹನಾದವನ್ನು ಮಾಡಿ, ಸ್ವಾತಂತ್ರ್ಯದ ಹಾದಿಯಲ್ಲಿ ಬಂಧಿತರಾಗಿದ್ದ ಭಾರತೀಯರನ್ನು ಎಂಭತ್ತು ವರ್ಷಗಳ ಹಿಂದೆ ಜಡನಿದ್ರೆಯಿಂದ ಹೊಡೆದೆಬ್ಬಿಸಿದ್ದ ಮಹಾಪುರುಷರು ಲೋಕಮಾನ್ಯ ಬಾಲ ಗಂಗಾಧರ ತಿಲಕರು! ೧೯೨೦ನೆಯ ಇಸವಿ ಆಗಸ್ಟ್ ತಿಂಗಳ ಮೊದಲನೆಯ ದಿನ ಅವರ ಪಾರ್ಥಿವ ಶರೀರವು ಕಣ್ಮರೆಯಾಯಿತು. ಆದರೆ ಅವರು ಹೊತ್ತಿಸಿದ ದೇಶಾಭಿಮಾನದ ಜ್ಯೋತಿಯು ವಿಶಾಲ ಭಾರತದಲ್ಲಿಯೇ ಪ್ರಜ್ವಲಿಸುತ್ತಿದೆ. ಅಂದಿನ ಅವರ ರಣಗರ್ಜನೆಯು ಇಂದೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ. ಅವರ ಅಸಾಧಾರಣ ವ್ಯಕ್ತಿತ್ವ ಶಕ್ತಿಯು ಭಾರತೀಯರನ್ನು ಇಂದೂ ಸ್ವಾತಂತ್ರ್ಯಮಾರ್ಗದಲ್ಲಿ ಮುನ್ನಡೆಸುತ್ತದೆ! ಅವರ ಅವಿಶ್ರಾಂತ ದೇಶಸೇವಾ ದೀಕ್ಷೆಯು ಇಂದಿಗೂ ನಮಗೆ ಆದರ್ಶವಾಗಿದೆ! ಅವರ ಆತ್ಮವು ಸಮಸ್ತ ಭಾರತದ ವಿಶಾಲ ವಾತಾವರಣದಲ್ಲಿಯೇ ಹರಡಿದ್ದು ಎಂದೆಂದೂ ಸಹನೆಯಿಲ್ಲದೆ ರಣಾರಣಕವನ್ನು ಹುಟ್ಟಿಸುತ್ತದೆ! ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವು ದೊರೆಯುವತನಕ ಅವರ ಆತ್ಮಕ್ಕೆ ವಿಶ್ರಾಂತಿಯೆಲ್ಲಿಯದು?

ಲೋಕಮಾನ್ಯರು ಹುಟ್ಟಿದ ಕಾಲದ ಪರಿಸ್ಥಿತಿಯನ್ನು ವಿಚಾರಿಸಿದರೆ ಅವರ ಅಂದಿನ ಮಹತ್ವವು ಅರ್ಥವಾದೀತು. ಅಂದು ಜನರು ಆಂಗ್ಲೇಯ ವಿದ್ಯಾಬುದ್ಧಿಯಿಂದ ಮೋಹಿತರಾಗಿದ್ದರು. ಸರಕಾರದ ಅಧಿಕಾರ ಲಾಲಸೆಯು ಜನರ ಬಾಯಿಯಲ್ಲಿ ನೀರಿಳಿಸುತ್ತಿತ್ತು. ತಿಲಕರೂ ಇಂಗ್ಲಿಷನ್ನು ಚೆನ್ನಾಗಿ ಕಲಿತಿದ್ದರು. ವಕಾಲತ್ತನ್ನು ನಡೆಸದಿದ್ದರೂ ಕಾನೂನನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಅಂದಿನ ಕಾಲದಲ್ಲಿ ಒಬ್ಬನು ಅತ್ಯುಚ್ಚ ಅಧಿಕಾರಕ್ಕೆ ಏರಬೇಕಾದರೆ ಯಾವ ಯೋಗ್ಯತೆಗಳಿರಬೇಕಿತ್ತೋ ಅವೆಲ್ಲ ಅವರಲ್ಲಿ ತುಂಬಿದ್ದವು. ಆದರೆ ಅವರು ತಮ್ಮ ಜ್ಞಾನವನ್ನು ವಿದ್ಯಾಬುದ್ಧಿಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸದೆ ದೇಶಸೇವಾ ದೀಕ್ಷೆಗಾಗಿ ಧಾರೆಯೆರೆದರು! ಭರತಮಾತೆಯ ಪಾರತಂತ್ರ ಸಂವೇದನೆಯು ಅವರನ್ನು ರಾಜಕೀಯ ರಂಗಕ್ಕೆಳೆದು ಅವರಿಂದ ಮಹಾಸೇವೆಯು ಸಲ್ಲುವಂತೆ ಮಾಡಿತು. ಭಾರತದಲ್ಲಿ ರಾಜಕೀಯ ಕ್ರಾಂತಿಯ ಬೀಜವನ್ನು ಬಿತ್ತಿದ ಮೊತ್ತಮೊದಲಿಗರೆಂದರೆ ತಿಲಕರು!

ಮಹಾರಾಷ್ಟ್ರ ದೇಶದ ರತ್ನಗಿರಿಯೆಂಬಲ್ಲಿ ೧೮೫೬ನೆಯ ಇಸವಿ ಜುಲಾಯಿ ತಿಂಗಳ ೨೩ರಂದು ಕುಲೀನ ಬ್ರಾಹ್ಮಣ ದಂಪತಿಗಳ ಪುಣ್ಯ ಗರ್ಭದಲ್ಲಿ ತಿಲಕರು ಜನ್ಮವೆತ್ತಿದರು. ಪುನೆಯಲ್ಲಿ ಅವರಿಗೆ ವಿದ್ಯಾಭ್ಯಾಸವಾಯಿತು. ಆ ವಿದ್ಯೆಯು ಶುದ್ಧ ಭಾರತೀಯ ಪದ್ಧತಿಯದಾಗಿದ್ದುದರಿಂದ ಅದೇ ಮುಂದೆ ಅವರ ಜೀವನದಲ್ಲಿ ಮಹತ್ವದ ಪರಿಣಾಮವನ್ನು ಉಂಟುಮಾಡಿತು. ಅವರು ಸಂಸ್ಕೃತದಲ್ಲಿ ಮಹಾ ವಿದ್ವಾಂಸರಾಗಿದ್ದರು. ಆದುದರಿಂದಲೇ ಮುಂದೆ ಅವರು ಕಾರಾಗೃಹದಲ್ಲಿ ಬಂಧಿತರಾದಾಗ ಗೀತೆಯ ಕುರಿತು ವಿಸ್ತಾರವಾದ, ಅರ್ಥಗರ್ಭಿತವಾದ, ಅಧಿಕಾರಯುಕ್ತವಾದ 'ಗೀತಾ ರಹಸ್ಯ'ವೆಂಬ ಪುಸ್ತಕವೊಂದನ್ನು ಒರೆದು ಭಾರತೀಯ ಜ್ಞಾನಭಂಡಾರದ ಅಮೂಲ್ಯತೆಯನ್ನು ಜಗತ್ತಿಗೆ ಸಾರಿ ಪ್ರಪಂಚವನ್ನೇ ಬೆರಗುಗೊಳಿಸಿದರು! ವೈದಿಕ ಸಾಹಿತ್ಯದ ಕುರಿತೂ ಅವರಿಗೆ ಪ್ರಗಲ್ಭವಾದ ಪಾಂಡಿತ್ಯವಿತ್ತು. ತಿಲಕರಿಗೆ ಗಣಿತ ಜ್ಯೋತಿಷ್ಯಗಳಲ್ಲಿಯೂ ಪರಿಪೂರ್ಣ ಜ್ಞಾನವಿತ್ತು. ಅವರು ಉಜ್ವಲ ವಾಗ್ಮಿಗಳಾಗಿದ್ದರು ಮಾತ್ರವಲ್ಲದೆ ಪ್ರಭಾವಶಾಲಿಗಳಾದ ಲೇಖಕರೂ ಆಗಿದ್ದರು. ಯಾವುದೇ ವಿಷಯದಲ್ಲಾಗಲೀ, ವಿಚಕ್ಷಣತೆಯಿಂದಲೂ ಪರಿಪೂರ್ಣತೆಯಿಂದಲೂ ವಿಮರ್ಶಿಸಿ ಬರೆವ ಲೇಖನ ಸಿದ್ಧಿಯು ಅವರ ಕೈವಶವಾಗಿತ್ತು. ಅಂತೆಯೇ ಅವರು ಪ್ರಸಿದ್ಧರಾದ ಗ್ರಂಥಕರ್ತರೂ ಆಗಿದ್ದರು. ಇಂಗ್ಲಿಷಿನಲ್ಲಿ ಅಚ್ಚಾಗುವ 'ಮರಾಠಾ' ವಾರಪತ್ರಿಕೆ ಮರಾಠಿಯಲ್ಲಿ ಅಚ್ಚಾಗುವ 'ಕೇಸರೀ' ವಾರಪತ್ರಿಕೆ ಇವೆರಡರ ಮೂಲ ಸ್ಥಾಪಕರೂ ಸಂಪಾದಕರೂ ಅವರೇ.

ಭಾರತದಲ್ಲಿ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆಯು ತಿಲಕರಿಗಿಂತ ಮೊದಲೇ ತಲೆಯೆತ್ತಿತ್ತು. ಪಾರತಂತ್ರ್ಯದ ಸ್ವರಾಜ್ಯದ ಪ್ರಶ್ನೆಯನ್ನು ಧೈರ್ಯಪೂರ್ವಕವಾಗಿ ಎದುರಿಸಿದವರು ಯಾರಿರಲಿಲ್ಲ! ಕೇವಲ ಮನವಿ ಬಿನ್ನಹಗಳಿಂದ ಭಾರತದ ಮುಖಂಡರು ಬ್ರಿಟಿಷ ಸರಕಾರದೊಡನೆ ಮೊರೆಯಿಡುತ್ತಿದ್ದರು. ಲೋಕಮಾನ್ಯರು ಅಂದಿನ ಸ್ವಾತಂತ್ರ್ಯ ಆಂದೋಲನಕ್ಕೆ ನೂತನ ಚೇತನವನ್ನು ಕೊಟ್ಟರು. ಬ್ರಿಟಿಷ್ ರಾಜ್ಯಭಾರದ ರೀತಿಯನ್ನು ಕಟುವಾಗಿ ಖಂಡಿಸಿದರು. ಪ್ರತ್ಯಕ್ಷವಾಗಿ ಎದುರಿಸಿದರು. ಇದರಿಂದ ಸಾರ್ವಜನಿಕರಲ್ಲಿ ನಿರ್ಭಯ ಸ್ವಾತಂತ್ರ್ಯದ ವಾತಾವರಣವನ್ನು ಹುಟ್ಟಿಸಿದರು! ಇಂತಹ ಪ್ರತ್ಯಕ್ಷ ಚಳವಳದ ನಿಮಿತ್ತವಾಗಿ ಲೋಕಮಾನ್ಯರನ್ನು ಸರಕಾರವು ಬಂಧನದಲ್ಲಿರಿಸದೆ ಬಿಡಲಿಲ್ಲ.

ಜನತೆಯ ಮುಖಂಡರಲ್ಲಿರಬೇಕಾದ ಗುಣಗಳು ತಿಲಕರಲ್ಲಿ ತುಂಬಿದ್ದುವು. ಅವರ ಒಂದು ಭಾಷಣದ ನಿಮಿತ್ತವಾಗಿಯೇ ೧೮೯೭ನೆಯ ಇಸವಿಯಲ್ಲಿ ಅವರು ಹದಿನೆಂಟು ತಿಂಗಳ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. 'ಹೋಂರೂಲ್' ಚಳವಳದಲ್ಲಿ ಮುಂದಾಳುಗಳಾಗಿ ಕೆಲಸಮಾಡಿ ಆ ಮೇಲೆ ಅವರು ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿಯೂ ತಮ್ಮ ಪ್ರಭಾವವನ್ನು ಸ್ಥಾಪಿಸಿದ್ದರು.

ತಿಲಕರು ಮತ್ತು ಗೋಖಲೆಯವರಲ್ಲಿ ಅಭಿಪ್ರಾಯ ಭೇದವು ಹುಟ್ಟುತ್ತಿತ್ತು. ಆದರೆ ಅವರ ಉದ್ದೇಶಗಳು ಒಂದೇ ಆಗಿದ್ದುವು. ಆದುದರಿಂದಲೇ ಅವರು ಕೊನೆತನಕವೂ ಮಿತ್ರರೇ ಆಗಿದ್ದರು. ಇವರಲ್ಲಿ ಯಾರು ಹೆಚ್ಚು ಯಾರು ಕಡಿಮೆಯೆನ್ನುವುದು ಸಾಧ್ಯವಿಲ್ಲ. ತಿಲಕರು ಪ್ರತ್ಯಕ್ಷವಾಗಿ ಟೀಕಿಸುವ ದೇಶಾಭಿಮಾನಿಗಳಾದರೆ, ಗೋಖಲೆಯವರು ಸರಕಾರದೊಡನೆ ಸೇರಿ ಸ್ನೇಹಿತರಾಗಿ ದೇಶಸೇವೆ ಸಲ್ಲಿಸುತ್ತಿದ್ದರು. ಒಬ್ಬರು ದೇಶಾಭಿಮಾನಿಗಳಾಗಿ ಸರಕಾರದ ನಿಷ್ಠುರಕ್ಕೆ ಪಾತ್ರರಾದರೆ ಇನ್ನೊಬ್ಬರು ಸರಕಾರದ ಮಿತ್ರವರ್ಗದಲ್ಲಿ ಸೇರಿದ್ದರು. ಅವರ ಧೋರಣೆಗಳು ಉಗ್ರ–ಮಂದವಾಗಿದ್ದುವಲ್ಲದೆ ಉದ್ದೇಶಗಳಲ್ಲಿ ಭೇದವಿರಲಿಲ್ಲ.

ತಿಲಕರ ಶಾಸ್ತ್ರೀಯ ಜ್ಞಾನ, ರಾಜಕೀಯದ ನಿರ್ಭಯ ಧುರೀಣತೆ, ಅಸದೃಶವಾದ ಮೇಧಾಶಕ್ತಿ, ಅಪ್ರತಿಹತವಾದ ಲೇಖನ ಸಾಮರ್ಥ್ಯ, ಅನುಪಮ ವಿಷ್ಕರಣ, ಇವೆಲ್ಲವುಗಳ ಫಲವಾಗಿ ಅವರಿಗೆ ಲೋಕಮಾನ್ಯ ಎಂಬ ಗೌರವದ ಹೆಸರು ಅತ್ಯಂತ ಗೌರವವಾಗಿ ಒಪ್ಪುತ್ತಿತ್ತು. ಎಂತಹ ವಿಪತ್ತುಗಳು ಬಂದರೂ ಅವುಗಳನ್ನು ಎದುರಿಸಿ ದೇಶಸೇವೆಗಾಗಿ ಮುಂದೊತ್ತಿ ಹೋಗುವ ಮಹಾ ಯೋಧರು ಅವರಾಗಿದ್ದರು. ಲೋಕದಲ್ಲಿ ನಿಜವಾದ ಮಾನ್ಯತೆ ದೊರಕಬೇಕಾದರೆ ಅಂತಹ ಆತ್ಮಶಕ್ತಿಯು ಇರಬೇಕಲ್ಲವೇ!

ನಿದ್ರಿತ ಭಾರತವನ್ನು ಎಚ್ಚರಿಸಲು ಶಕ್ತಿಮೀರಿ ದುಡಿದ ಮೂಲ ಪುರುಷರಲ್ಲಿ ತಿಲಕರು ಒಬ್ಬರು! ಸ್ವರಾಜ್ಯದ ಕನಸನ್ನು ಕಂಡ ಅದರ ಸಾಧನೆಗಾಗಿಯೇ ತಮ್ಮ ಜೀವವನ್ನು ಧಾರೆಯೆರೆದರು! ಅವರನ್ನು ಯಾವ ಮಹೋದ್ದೇಶವು–ಸ್ವಾತಂತ್ರ್ಯ ಸ್ವರಾಜ್ಯದ ಪ್ರೇಮವು ಹಾಗೆ ಅವಿಶ್ರಾಂತವಾಗಿ ದುಡಿಯುವಂತೆ ಮಾಡಿತೋ ಆ ಧ್ಯೇಯವಾದ–ಭಾರತದ ಸ್ವರಾಜ್ಯದ–ಸಾಧನೆಯ ಕಾರ್ಯದಲ್ಲಿ ನಾವು ಕಿಂಚಿತ್ತಾದರೂ ನೆರವಾದರೇನೇ ಅವರ ಪುಣ್ಯದಿನದ ಸ್ಮರಣೆಯನ್ನು ಯಥಾರ್ಥವಾಗಿ ಮಾಡಿದಂತಾಗುವುದು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಉದಾರ ಕಮಿಶನು.

[illegible] ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಎಮ್. ಪಾಂಡುರಂಗ ನಾಯಕ್, [illegible]

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, [illegible]

The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರೆಂಚ್: ಸೆಂಟ್‌ಲೆಂಡ್‌ಪೇಟೆ

ರಿಜಿಸ್ಟರ್ಡ ಮೂಲಧನ ರೂ. 1,00,000,   ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಆಸ್ತಿ ಭರವಸೆಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ, ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%   ನಿರಖು ಠೇವಣಾತಿ 12 ತಿಂಗಳಿಗೆ 45

6 ತಿಂಗಳಿಗೆ 4%   24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

ನೋಟಗಳು!

—ಹಿಟ್ಲರನು ಈ ವಾರದಲ್ಲಿ ಭಯಂಕರ ವಾದ ಭಾಷಣವೊಂದನ್ನು ಮಾಡಿದ'

—ಬ್ರಿಟನಿನೊಡನೆ ಶಾಂತಿ ಸಲಹೆಯು ಆ ಭಾಷಣದ ತಿರುಳಾಗಿತ್ತು!

—ತಾನು ದಯೆಯ ಭಿಕ್ಷೆಯನ್ನು ಬೇಡುವವನಂತೆ ಮಾತನಾಡುವುದಿಲ್ಲ ವೆಂದೂ, ವಿಜಯಿಯಾಗಿ ಮಾತನಾಡು ತ್ತಿರುವೆನೆಂದೂ ಆತನ ಆರ್ಭಟೆ!

—ಹಿಟ್ಲರನು ವಿಜಯಿಯಾಗಿಯೇ ಮುಂದೊತ್ತಿ ಬಂದಿರುವುದರಿಂದ ವಿಜಯಿ ಯಾಗಿ ಮಾತನಾಡುವುದು ಸ್ವಾಭಾವಿ ಕವೇ!

—ಆತನ ಭಾಷಣದಲ್ಲಿ ಕೃಪೆಯ ಮತ್ತು ಬೆದರಿಕೆಯ ಧ್ವನಿಗಳೆರಡೂ ಅಡ ಕವಾಗಿದ್ದುವು!

—ಶಾಂತಿ ಸಲಹೆಗೆ ಒಪ್ಪದಿದ್ದಲ್ಲಿ ಲಂಡನ್ ಇಂಗ್ಲೆಂಡು ಬ್ರಿಟಿಷ್ ಸಾಮ್ರಾಜ್ಯ ವನ್ನೇ ಧ್ವಂಸಮಾಡುವೆನೆಂಬುದು ಆತನು ಹುಟ್ಟಿಸಿದ ಬೆದರಿಕೆ

—ಹೀಗೆ ಬೆದರಿಕೆಯ ಮಾತಿನಿಂದ ಲಾದರೂ ಬ್ರಿಟನ ಸಮ್ಮತಿಸಿದ್ದಲ್ಲಿ ಮುಂದಿನ ನಿಶ್ಚಯವಾದ ತನ್ನ ವಿಪತ್ತು ತಪ್ಪಿ ಹೋಗುವುದೇ ಎಂಬುದ ಒಳ ಗಿನ ಆಸೆ!

❖

ಕಲ್ಕತ್ತೆಯಲ್ಲಿ ಬೋಸರಿಂದ ಆರಂಭಿಸ ಲ್ಪಟ್ಟ ಹಾಲ್‌ವೆಲ್ ಸತ್ಯಾಗ್ರಹದ ಕುರಿತು ಬಂಗಾಳ ಸರಕಾರವು ಒಂದು ಹೇಳಿಕೆ ಕೊಟ್ಟಿದೆ

—ಸತ್ಯಾಗ್ರಹವನ್ನು ನಿಲ್ಲಿಸಿದಲ್ಲಿ ಮುಂದೆ ಆ ಪ್ರತಿಮೆಯನ್ನು ತೆಗೆಯುವ ವಿಚಾರವನ್ನು ಮಾಡಲಾಗುವುದೆಂದು

—ಬೋಸರು ಸರಕಾರಕ್ಕೆ ತಿಳಿಸದೆ ಅಕಸ್ಮಾತ್ತಾಗಿ ಸತ್ಯಾಗ್ರಹವನ್ನು ಆರಂಭಿಸ ಲಿಲ್ಲ

—ಅಂತಹ ಸುಳ್ಳು ಸ್ಮಾರಕವಿರ ಕೂಡದು, ಅದು ಭಾರತೀಯರಿಗೆ ಅವ ಮಾನಕರವಾದುದು, ಅದನ್ನು ಸರಕಾ ರವು ತೆಗೆದುಹಾಕಬೇಕು, ಇಲ್ಲದಿದ್ದಲ್ಲಿ ಸತ್ಯಾಗ್ರಹವನ್ನು ಆರಂಭಿಸುವೆವೆಂದು ಬೋಸರು ಮೊದಲೇ ತಿಳಿಸಿದ್ದರು

—ಇದಕ್ಕೆ ಬಂಗಾಳ ಸರಕಾರವು ಆಗ ಕಿವಿಗೊಡಲಿಲ್ಲ. ಸತ್ಯಾಗ್ರಹವು ಆ ಮೇಲೆ ಆರಂಭವಾಯಿತು.

—ಈಗ ತಿರಿಗಿ, ಸತ್ಯಾಗ್ರಹವನ್ನು ಅವರು ನಿಲ್ಲಿಸಲಿ ಮತ್ತೆ ವಿಚಾರಿಸು ತ್ತೇವೆ ಎಂದು ಹೇಳುವ ಮಾತಿಗೆ ಏನನ್ನು ಬೇಕು?

—ಸತ್ಯಾಗ್ರಹವನ್ನು ಆರಂಭಿಸಮಾ ಡುವ ಮೊದಲು ಬೋಸರು ತಿಳಿಸಿದ್ದರೂ ಆಗ ಹಕ್ಕರ ಸರಕಾರವು ಕೊಕಡಿಸು ತ್ತಿತ್ತೆನ್ನಬೇಕೆ?

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S 87/40

ಲಕ್ಷ್ಮಿಮತಿ ಕೂಡಾ—ವಾದಿರು
ಸಿದ್ಧಮ ಕೂಡಾ—ಪ್ರತಿವಾದಿರು,

ಸದ್ರಿ ವ್ಯಾಜ್ಯದ 5ನೇ ಪ್ರತಿವಾದಿ ಶ್ರೀಮತಿಗೆ ವ ಇತರರಿಗೆ ಕೂಡಾ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯದ ಇತ್ಯರ್ಥ ವ್ಯಾದೆಯು ಇದೇ ಬರುವ ತಾ 30–7–40ಕ್ಕೆ ಇಟ್ಟಿದೆ. ಆದುದರಿಂದ ಆ ದಿವಸ 10ಗಂಟೆಗೆ ಸರಿಯಾಗಿ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾದೀತು. ತಿಳಿದಿರಲಿ.

ಪುತ್ತೂರು 24–7–40 } C. S. Shastri, Vakil for Plaintiff.



ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುವುದು.

ಕಡಿತ ಮತ್ತು ವ್ರಣಗಳಿಗೆ ಅತ್ಯುತ್ತಮ ಮುಲಾಮು.

ಬೇನೆಯಾದ ಚರ್ಮದ ಭಾಗಕ್ಕೆ ಜ್ಯಾಂಬಕು ಮುಲಾಮನ್ನು ಸವರಿಸಿದೊಡನೆ ಮೇಲ್ಕಿನಂತೆ ಗುಣಪಡಿಸುವುದು. ಜ್ಯಾಂಬಕಿನಲ್ಲಿರುವ ಆ ಮೂಲ್ಯವಾದ ಔಷಧೀಯ ಗಿಡ ಬೇರುಗಳ ತೈಲ್ಯವು ಸೂಕ್ಷ್ಮ ನರನಾಡಿಗಳನ್ನು ಪ್ರವೇಶಿಸಿ ಬೇನೆಯು ಕಡಿಮೆಯಾಗಿ, ಬಾತುವಿಕೆಯು ಮಾಯವಾಗಿ ಅವುಗಳಿಂದ ಬರುವ ರಸಿಗೆಯು ನಿಲ್ಲುತ್ತದೆ ಜ್ಯಾಂಬಕು ವಿಷಾಣುಗಳನ್ನು ನಾಶಪಡಿಸಿ, ಚರ್ಮಕ್ಕೆ ಚೈತನ್ಯವನ್ನುಂಟುಮಾಡಿ ಒಂದೂ ಕಲೆಯುಂಟಾಗದಂತೆ ಗುಣಪಡಿಸುವುದು ಗಾಯ, ಕಡಿತ ಸುಟ್ಟಗಾಯ, ರಿಂಗ್‌ವರ್ಮ್ ಮೊದಲಾದ ಎಲ್ಲಾ ಚರ್ಮರೋಗಗಳಿಗೂ ಇದನ್ನು ಸರಿಗಟ್ಟುವ ಮುಲಾಮು ಬೇರೊಂದಿಲ್ಲ ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ದಬ್ಬಾ 1-0-0 ಮತ್ತು 2-4-0ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ ಟಿ ಮದರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬಿನಿಂದ ವಿರಹಿತವಾಗಿದೆ



ಸ್ಪರ್ಧಾ ನಂಬ್ರ 11

ಸರಿಯಾಗಿ ಉತ್ತರ ಕಳುಹಿಸಿದ 13 ಮಂದಿಗಳೊಳಗೆ ಹಂಚಲಾಗುವುದು

ನಾವು ಸೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 2000ರ ಬಹುಮಾನ ನಮ್ಮ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಅದೇ ಸ್ಥಾನ ಉತ್ತರವನ್ನು ಕಳುಹಿಸಿದವರಿಗೆ ರೂ 100 ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 20 ಉದ್ದದ ಸ್ಥಾನ ಎರಡು ಅಂಕೆಗಳನ್ನು ಹೋಲುವ ಅದೇ ಸ್ಥಾನ ಉತ್ತರ ಕಳುಹಿಸಿದವರಿಗೆ ರೂ 5ರ ಕೊನ್ಸೊಲೇಷನ್ ಬಹುಮಾನ

ಪ್ರತಿ ಸಾಲನ್ನೂ ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 46 ಬರುವಂತೆ ಖಾಲಿ ಇರುವ ಅಂಕಣಗಳಲ್ಲಿ 4ರಿಂದ 19ರ ವರೆಗೆ ಅಂಕೆಗಳನ್ನು ಬರೆಯಿರಿ ಒಂದು ಬಾರಿ ಉಪಯೋಗಿಸಿದ ಅಂಕೆಯನ್ನು ಪುನಃ ಬರೆಯಕೂಡದು. ಉತ್ತರವನ್ನು ಕಳುಹಿಸುವ ಕಡೇ ದಿನ 8—8—1940 ಫಲಾಂಶ 19—8—1940

ಒಂದು ಉತ್ತರಕ್ಕೆ ರೂ 1 ಪ್ರವೇಶಧನ 8 ಉತ್ತರಗಳಿಗೆ ರೂ 2 ರೂ 5ಕ್ಕೆ 8 ಉತ್ತರಗಳು

ನಿಯಮಗಳು— ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದ ಮೇಲೆ ಎಷ್ಟು ಉತ್ತರಗಳನ್ನು ಕಳುಹಿಸಬಹುದು ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು ಬಹುಮಾನದ ಮೌಲ್ಯವು ಜಮೆಯಾದ ಹಣದ ಮೇಲೆ ಹೊಂದಿಕೊಂಡಿದೆ ಆದರೆ ಕಡಿಮೆ ಎಂದರೆ, ರೂ 2000ನ್ನು ನಾವು ಜೊಂಡ್ಸಾಯ ಪ್ರಾಮುಖ್ಯ ಬೇಂಕೊಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವೆವೆಂಬ ಭರವಸೆಯನ್ನೀಯುವೆವು. ಎಲ್ಲಾ ಕಳುಹಿಸಿದ ಉತ್ತರಗಳು 1940ನೇ ಆಗೋಸ್ತು 18ನೇ ತಾರೀಕಿನೊಳಗೆ ಬಂದು ಮುಟ್ಟತಕ್ಕದ್ದು. ತದನಂತರ ಬಂದ ಉತ್ತರಗಳಿಗೆ ಗಮನಕೊಡಲಾಗಲಿಕ್ಕಿಲ್ಲ ನಿಮ್ಮ ಹೆಸರು, ಎಡ್ರೆಸು ಅಂಕೆಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಿರಿ ಉತ್ತರ ಬೇಕೆಂದಾದರೂ ಅಂಚೆಚೀಟಿಷ್ಟು ತಮ್ಮ ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿರಿ ಎಲ್ಲಾ ವಿಷಯಗಳಲ್ಲಿ ಮೆನೇಜರರ ತೀರ್ಮಾನವು ಅಂತಿಮವೂ ನ್ಯಾಯಬದ್ಧವೂ ಆಗಿರುತ್ತದೆ.

ಕಳೆದ ಬಾರಿಯ 38ರ ಉತ್ತರ

1ನೇ ಸಾಲು	6	18	10	9
2ನೇ ,,	16	8	4	15
3ನೇ ,,	5	14	17	2
4ನೇ ,,	11	8	7	12

ಎಲ್ಲ ಉತ್ತರಗಳನ್ನು ಪ್ರವೇಶ ಧನದೊಂದಿಗೆ ಈ ವಿಳಾಸಕ್ಕೆ ಕಳುಹಿಸಿರಿ.

ದಿ ಮೆನೇಜರ್—
ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕೊ.,
'ದಾವೆರ್ ಹೌಸ್' 199, ಹಾರ್ನ್‌ಬಿ ರೋಡ್,
ಫೋರ್ಟ್ ಬೊಂಬಾಯಿ.





ಕೃತ್ರಿಮ ರೀತಿಯಿಂ

ಒಂದು ಕ್ರಾಂತಿಕಾರಿ ಪ್ರಯೋಗ

ಅಮೇರಿಕದ ಮೊದಲಾದ ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಪ್ರಯೋಗ ನಳಿಗೆಗಳಲ್ಲಿ ಪುರುಷನ ವೀರ್ಯವನ್ನು ಸಂಗ್ರಹಿಸಿ, ಅದನ್ನು ಸ್ತ್ರೀಯ ಗರ್ಭಕೋಶದಲ್ಲಿಟ್ಟು, ಕೃತ್ರಿಮ ಉಪಾಯಗಳಿಂದ ಮಕ್ಕಳನ್ನು ಪಡೆದಿರುವಂತೆ, ಹಿಂದುಸ್ಥಾನದಲ್ಲಿ ಇದೇ ಪ್ರಥಮ ಬಾರಿಗೆ, ಈ ಕೃತ್ರಿಮ ಉಪಾಯಗಳಿಂದ ಮೈಸೂರು ಅರಸರ ಹೈನದ ಮನೆಯಲ್ಲಿ ಕಾಲ್ನಡೆಗಳಿಂದ ಸಂತಾನೋತ್ಪತ್ತಿಯನ್ನು ಮಾಡಿರುವರು. ಈ ಹೈನದ ಮನೆಯ ಮೇಲಧಿಕಾರಿಗಳಾಗಿರುವ ಡಾಕ್ಟರ ಜೆ. ಡಿ. ಸಂಪತ್ಕುಮಾರನರವರು ಈ ಪ್ರಯೋಗಗಳನ್ನು ನಡೆಸಿ ಕೃತಕೃತ್ಯರಾಗಿರುವುದು ಈಗ ಪ್ರಕಟವಾಗಿದೆ.

ಹಳೆಯ ನೆನಪು

ಪಶುಪಾಲನ ಕ್ರಮಗಳನ್ನು ನೋಡಿ ಕಲಿತು, ಅವುಗಳನ್ನು ಇಲ್ಲಿಯೂ ಪ್ರಯೋಗಕ್ಕೆ ತರುವುದಕ್ಕೋಸ್ಕರ ಮೈಸೂರು ಮಹಾರಾಜರು ಡಾಕ್ಟರ ಕುಮಾರನನ್ನು ಪೆಲೆಸ್ತೀನಿಗೆ ಕಳುಹಿಸಿಕೊಟ್ಟಿದ್ದರು. ಅಲ್ಲಿ ಅವರು ಕೃತ್ರಿಮ ರೀತಿಗಳಿಂದ ಪಶುಪ್ರಾಣಿಗಳ ಸಂತಾನೋತ್ಪತ್ತಿ ಮಾಡುವುದರಿಂದ ಆಗುವ ಮಹತ್ವದ ಲಾಭಗಳನ್ನು ಅನುಭವಕ್ಕೆ ತಂದುಕೊಂಡರು.

ಪಶುಪ್ರಾಣಿಗಳ ಸಂತಾನೋತ್ಪತ್ತಿಯ ಮಟ್ಟಿಗೆ ಈ ಕೃತ್ರಿಮ ಉಪಾಯಗಳು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಪ್ರಚಾರದಲ್ಲಿ ಇರುತ್ತವೆ. ಆದರೆ ಇದು ನವೀನ ವಿಜ್ಞಾನ ವಿಷಯವೇನೂ ಅಲ್ಲ. ಪಶುಗಳು ಬಂಜೆಯಾಗುವುದನ್ನು ತಪ್ಪಿಸುವುದಕ್ಕೋಸ್ಕರ ಕೃತ್ರಿಮ ವೀರ್ಯ ಪ್ರಯೋಗವು ಅರಬರಲ್ಲಿ ಬಹು ಪುರಾತನ ಕಾಲದಿಂದಲೂ ಬಳಕೆಯಲ್ಲಿದ್ದಿತು. ಯೂರೋಪದಲ್ಲಿ ಹದಿನೆಂಟನೆ ಶತಮಾನದ ಕೊನೆಯ ಭಾಗದಲ್ಲಿ ಇಟಲಿಯ ಒಬ್ಬ ಪಾದ್ರಿಯು ವೀರ್ಯದ ಕೃತ್ರಿಮ ಪ್ರಯೋಗವನ್ನು ಮಾಡಿ ಜಯಶೀಲನಾಗಿದ್ದನು.

ಹದಿನೆಂಟನೆ ಶತಮಾನದ ಅನಂತರ

ಹತ್ತೊಂಭತ್ತನೆ ಶತಮಾನದಲ್ಲಿ ವೈದ್ಯರೂ ವಿಜ್ಞಾನಿಗಳೂ ಈ ಕ್ರಮಗಳನ್ನು ಅನುಸರಣೆಯಲ್ಲಿ ಇಟ್ಟುಕೊಂಡಿದ್ದರು, ಆದರೆ ಅವು ಸರ್ವತ್ರ ಪ್ರಚಾರದಲ್ಲಿ ಇದ್ದಿರಲಿಲ್ಲ. ಆದರೆ ಕಳೆದ ಶತಮಾನದ ಅಂತ್ಯದಲ್ಲಿ ರಷ್ಯ, ಅಸ್ಟ್ರೀಯ ಮತ್ತು ಆಂಗ್ಲೇಯ ವಿಜ್ಞಾನಿಗಳು ಅನೇಕ ಅದ್ಭುತ ಪ್ರಯೋಗಗಳನ್ನು ಮಾಡಿ, ಎಲ್ಲೆಡೆಗಳಲ್ಲಿ ಸಂತಾನವನ್ನು ಪಡೆಯುವುದು ಸಾಧ್ಯವಿದೆ ಎಂಬುದನ್ನು ಕಂಡುಕೊಂಡರು. ಆದರಿಂದ ಆ ದೇಶಗಳ ಪಶುಪಾಲನಾ ಕ್ಷೇತ್ರದಲ್ಲಿ ದೊಡ್ಡದೊಂದು ಕ್ರಾಂತಿಯೇ ಆಯಿತು. ಮತ್ತೆ ಈ ಕ್ರಮವಿಧಾನಗಳು ಪಾಶ್ಚಾತ್ಯ ಇತರ ದೇಶಗಳಲ್ಲಿಯೂ ಬಳಕೆಗೆ ಬಂದುವು.

ನಮ್ಮ ದೇಶದಲ್ಲಿ

ನಮ್ಮ ದೇಶದಲ್ಲಿಯೂ ಕಾಲ್ನಡೆಗಳ ಮಟ್ಟಿಗೆ ಈ ಕೃತ್ರಿಮ ಉಪಾಯಗಳನ್ನು ಅನುಸರಿಸುವುದರಿಂದ ಮಹತ್ವದ ಲಾಭವಾಗುವುದೆಂದು ಡಾಕ್ಟರ್ ಕುಮಾರನರು ಹೇಳಿದ್ದಾರೆ. ದನಗಳಲ್ಲಿ ಸಂಭೋಗಾಸಕ್ತಿಯು ಬಹು ಸ್ವಲ್ಪ ಕಾಲದ ತನಕ ಮಾತ್ರ ಇರುತ್ತದೆ. ಸಂಭೋಗಾಸಕ್ತಿಯು ಇದ್ದಾಗ ಮಾತ್ರ ದನಗಳು ಬೀಜದೆತ್ತುಗಳೊಂದಿಗೆ ಕೂಡುತ್ತವೆ. ಆದುದರಿಂದ ಸಕಾಲದಲ್ಲಿ ಗರ್ಭದಾನವಾಗಬೇಕಾದರೆ ಪಶುಪಾಲಕರು ಆತ್ಯಗತ್ಯವಾಗಿ ಬೇಕಾಗಿರುವದಕ್ಕಿಂತ ಹೆಚ್ಚು ಬೀಜದೆತ್ತುಗಳನ್ನು ಸಾಕಿಕೊಂಡು ಇರಬೇಕು. ಮಾತ್ರವಲ್ಲ ಒಂದು ಕಡೆ ಬೇಕಾದ್ದಕ್ಕಿಂತ ಹೆಚ್ಚಿಗೆ ಬೀಜದೆತ್ತುಗಳು ಇರುವುದರಿಂದ ಅವುಗಳ ಶರೀರ ಬಲವೂ ವೀರ್ಯಬಲವೂ ಅತ್ಯಾಸಕ್ತಿಯಿಂದ ಬಹಳ ಕುಂದಿ ಹೋಗುತ್ತದೆ. ಆದರೆ ದನಗಳಲ್ಲಿ ಸಂಭೋಗಾಸಕ್ತಿ ಉಂ...

ದ್ದಾದರೆ, ಅದು ೧೮ರಿಂದ ೬೪ರ ತನಕ ದನಗಳಿಗೆ ಗರ್ಭದಾನ ಮಾಡಲಿಕ್ಕೆ ಸಾಕಾಗುವುದು. ಆದುದರಿಂದ ಈಗ ಒಂದು ಬೀಜದೆತ್ತಿನ ಒಂದು ಬಾರಿಯ ಸಂಭೋಗದಿಂದ ಕೇವಲ ಒಂದು ದನಕ್ಕೆ ಗರ್ಭದಾನವಾಗುವುದಾದರೆ, ಕೃತ್ರಿಮ ಉಪಾಯದ ಮೂಲಕ ೧೮ರಿಂದ ೬೪ ದನಗಳ ತನಕ ಗರ್ಭದಾನ ಮಾಡಬಹುದು. ಆದುದರಿಂದ ಕೃತ್ರಿಮ ಉಪಾಯಗಳನ್ನು ಅನುಸರಿಸಿ ನಾವು ಈಗ ದುರ್ಲಭ್ಯವಾಗುತ್ತಿರುವ ಎಷ್ಟೋ ಉತ್ತಮ ಜಾತಿಯ ಬೀಜದೆತ್ತುಗಳ ಅನುಕೂಲ್ಯ ವೀರ್ಯ ಮತ್ತು ಸಂತಾನೋತ್ಪತ್ತಿ ಶಕ್ತಿಯನ್ನು ಕಾದಿಡಬಹುದಾಗಿದ್ದು ನಮ್ಮ ದೇಶದ ಪಶುಬಲವನ್ನು ಪಶುಸಂಪತ್ತಿಯನ್ನೂ ಬೆಳೆಸಬಹುದಾಗಿದೆ. ಕೃತ್ರಿಮ ಉಪಾಯಗಳನ್ನು ಅನುಸರಿಸುವುದರಿಂದ ಒಂದು ಬೀಜದೆತ್ತಿನ ವರ್ಷಾವಧಿ ವೀರ್ಯ ಉತ್ಪತ್ತಿಯನ್ನು ಸಂಗ್ರಹಿಸಿ ೨೦೦೦ಗಳ ತನಕ ದನಗಳಿಗೆ ಗರ್ಭಾದಾನ ಮಾಡಬಹುದೆಂದು ರಷ್ಯದಲ್ಲಿ ನಡೆದಿರುವ ಪ್ರಯೋಗಗಳಿಂದ ತಿಳಿಯುತ್ತದೆ. ನಮ್ಮ ದೇಶದಲ್ಲಿ ಪಶುಪಾಲನೆಯು ಬಹಳ ಹೀನಸ್ಥಿತಿಯಲ್ಲಿರುವುದರಿಂದ ಕೃತ್ರಿಮ ಸಂತಾನೋತ್ಪತ್ತಿ ಕ್ರಮಗಳನ್ನು ಅನುಸರಿಸುವುದರಿಂದ ಬಹಳ ಆರ್ಥಿಕ ಲಾಭವಾಗುವದೆಂಬುದರಲ್ಲಿ ಏನೂ ಸಂದೇಹವಿರುವುದಿಲ್ಲ.

ಪಂಚ ವಾರ್ಷಿಕ ಯೋಜನೆ

ಬೀಜದೆತ್ತುಗಳ ವೀರ್ಯವನ್ನು ಅದರ ಶಕ್ತಿ ಬಲಗಳು ಕುಂದದಂತೆ ಪ್ರಯೋಗ ನಳಿಗೆಗಳಲ್ಲಿ ಸಂಗ್ರಹಿಸಿಟ್ಟು, ಸಮಯ ಬಂದಾಗ, ಅಂದರೆ ದನಗಳಲ್ಲಿ ಭೋಗಾಸಕ್ತಿಯು ತೀವ್ರವಾದಾಗ ಆ ವೀರ್ಯವನ್ನು ಅವುಗಳ ಗರ್ಭಕೋಶದಲ್ಲಿ ಸೇರಿಸಿ ಗರ್ಭಾದಾನ ಮಾಡುವುದೇ ಕೃತ್ರಿಮ ಉಪಾಯವಾಗಿದೆ. ಈ ರೀತಿ ಗರ್ಭದಾನ ಮಾಡಲಿಕ್ಕೆ ಬೀಜದೆತ್ತುಗಳನ್ನು ಹುಡುಕಿ ಹೋಗುವ ಶ್ರಮವಿರುವುದಿಲ್ಲ. ಮತ್ತು ಬೀಜದೆತ್ತುಗಳು ಸಕಾಲದಲ್ಲಿ ದೊರೆಯದಿದ್ದ ಕಾರಣ ದನಗಳು ಗರ್ಭತಾಳದೆ ಬಂಜೆಯಾಗಿ ಉಳಿಯಬೇಕಾದ್ದೂ ಇಲ್ಲ. ಆದುದರಿಂದ ಈ ಕೃತ್ರಿಮ ಉಪಾಯಗಳ ಪರಿಶೋಧನೆಗಾಗಿ ಇಜತ್ ನಗರದ ಇಂಪೀರಿಯಲ್ ವೆಟರ್ನರಿ ರಿಸರ್ಚ್ ಇನ್ಸ್ಟಿಟ್ಯೂಟಿನವರು ಒಂದು ಪಂಚ ವಾರ್ಷಿಕ ಯೋಜನೆಯನ್ನು ತಯಾರಿಸಿ ಅದಕ್ಕೆ ೯೩೦೦೦ ರೂಪಾಯಿಗಳನ್ನು ಖರ್ಚಿಗೆ ಮಂಜೂರು ಮಾಡಿದ್ದಾರೆ.

ಶ್ರೀ ಜಿ. ಎನ್. ಲಕ್ಷ್ಮಣ...

ಪದ್ಯ ಪು...

[ಈ ಮೂರು ಪುಸ್ತಕಗಳೂ ಮದರಾಸು ಟೆಕ್ಸ್...

ಯೋಗದ ಬಗ್ಗೆ ಮಂಜೂರಾಗಿರುತ್ತವೆ.

dated List of Text Books – 1940 – Fort...

೧. ಶಿಶುಗೀ...

ಶಿಶುಗೀತಗಳನ್ನೂ ಅಭಿನಯಗೀತಗಳನ್ನೂ...

ದರ್ಜೆಗಳ ಪದ್ಯಪಾಠಕ್ಕೂ ಸಂಗೀತ ಪಾ...

೨. ಅಭಿನಯ...

ಅಭಿನಯಗೀತಗಳನ್ನೂ ಸಂಭಾಷಣಾರ...

ಪುಸ್ತಕವು 3, 4ನೇ ದರ್ಜೆಗಳ ಪದ್ಯಪಾ...

ಕ್ರಯ. 3 ಆಣೆ.

(ಡಿಸ್ಟ್ರಿಕ್ಟ್ ಎಡ್ಯುಕೇಷನಲ್ ಆಫೀಸರ್, ಬಳ್ಳಾರಿ— ಇವರು ತಮ್ಮ N Dis No. 409-6 C/1939ನೆ 29-9-39 ಪ್ರೊಸಿಡಿಂಗ್ಸ್ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಎಲ್ಲಾ ಕನ್ನಡ ಶಾಲೆಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲಿಕ್ಕೆ ಶಿಫಾರಸು ಮಾಡಿದ್ದಾರೆ.)

೩. ಕನ್ನಡ ಪದ್ಯರತ್ನಾವಳಿ (ಸಚಿತ್ರ)

(ಪ್ರಥಮ ಭಾಗ)

ವಿವಿಧ ವಿಷಯಗಳ ಕುರಿತು ವಿವಿಧ ಪಾಠಗಳನ್ನೊಳಗೊಂಡ ಈ ಪುಸ್ತಕವು 4, 5ನೇ ದರ್ಜೆಗಳ ಪದ್ಯಪಾಠಕ್ಕೆ ತಕ್ಕುದಾಗಿದೆ. ಕ್ರಯ 3 ಆಣೆ.

ಪುಸ್ತಕಗಳು ಸಿಗುವ ಸ್ಥಳ:

ಹರಿಹರ ಪುಸ್ತಕಾಲಯ, ಪುತ್ತೂರು. **ಸ್ಕೂಲ್ ಬುಕ್ ಕಂಪೆನಿ,** ಮಂಗಳೂರು.

ಮತ್ತು ಎಲ್ಲಾ ಪ್ರಮುಖ ಪುಸ್ತಕವ್ಯಾಪಾರಿಗಳಲ್ಲಿ

ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು, ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಟು ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕ ವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ, ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೋಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ನಮ್ಮ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ ಎಸ್. ಕೆಳವಾವಮಾಹಿಮ, ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೦ ವಿ ಪಿ. ೦-೨

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ವಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯು

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ಇಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	2—0—0	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	4—8—0	4—10—0
,, ದುಯಂ ,, ,,	4—8—0	4—10—0
,, ಅವ್ವಲ್ ಸುಗ್ಗಿ ,,	4—10—0	
,, ದುಯಂ ,, ,,	4—4—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	40—0—0
ಕೊಬ್ಬರಿ ಆಫೀಸು ಖಂಡಿಗೆ	47—8—0	
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—10—0	8—10—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	4—4—0	4—8—0
ಗೇರುಬೀಜ ಮುಡಿಗೆ	2—12—0	3—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	41—4—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 19—7—1940 [ಸಂಚಿಕೆ 29

The Bombay Life Assurance Company, Ltd.,

(Estd. 1908)

LIFE INSURANCE

Dispels darkness of the mind and brings Enlightenment and Courage, Immortalises major portion of your Income whether you survive or not and thus makes life worth living to you and your dependants in reality

Ask us what particular scheme of Insurance will satisfy your requirements and your purse

Agency Applications from Active and Influential Ladies & Gentlemen are invited.

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES AND

[illegible]

The Bombay Life Building,

Sir Lalubhai Samaldas Road

Gandhi Nagar, UDIPI

OR ANY OF THEIR FOLLOWING OFFICES

Puthiyara Calicut	[illegible] [illegible]	Central Station Road Trivandrum
Gautam Nivas, Charni Road Girgaum, Bombay No. 4	Post Box No. 337 Mount Road, Madras	[illegible] Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906



ಬ್ರಿಟಿಷ್ ರಾಯಲ್ ಏರ್‌ಫೋರ್ಸಿನ ಮೂರು ವಿಮಾನಗಳು

ಇಂಗ್ಲೆಂಡು ಭಾರತಕ್ಕೆ ಮಾಡಿದ ಮೋಸ!

ಅಮೇರಿಕನ್ ಪತ್ರಿಕೆಯ ಹೇಳಿಕೆ!

ಭಾರತದ ಪರಿಸ್ಥಿತಿಯ ಕುರಿತು [illegible] ಪತ್ರಿಕೆ ಅಮೇರಿಕದ [illegible] ಎಂಬುದು ಆಗಿದೆ. 'ಇಂಗ್ಲಾಂಡು ಭಾರತಕ್ಕೆ ಮಾಡಿದ ಮೋಸ' ಎಂಬ ಶಿರೋನಾಮೆಯಿಂದ ಒಂದು ಮಹತ್ವಪೂರ್ಣ ಲೇಖನವನ್ನು ಪ್ರಕಟಿಸಿರುವುದನ್ನು ಎತ್ತಿಕೊಂಡು ಅಮೇರಿಕದ 'ಯೂನಿಟಿ' ಎಂಬ ದೊಡ್ಡ ಪತ್ರಿಕೆಯು 'ಇಂಗ್ಲಾಂಡಿನ ಕಾರ್ಯಕ್ರಮವು ಅದರ ಯುದ್ಧ ನೀತಿಗೆ ವಿರೋಧವಾಗಿರುವುದು' ಎಂದಿದೆ.

ಜಗತ್ತಿನಲ್ಲಿ ಬಹುದೂರದಲ್ಲಿರುವ ಹಿಂದುಸ್ಥಾನದಲ್ಲಿ ಜರ್ಮನಿಯಲ್ಲಿರುವುದಕ್ಕಿಂತ ನಾಲ್ಕು ಪಾಲು ಹೆಚ್ಚಿಗೆ ಜನರು ವಾಸವಾಗಿದ್ದಾರೆ. ಆದರೆ ಯುರೋಪಿನ ಯಾವ ಸ್ವಾತಂತ್ರ್ಯ ಪ್ರಜಾಸತ್ತೆಯನ್ನು ಕಾಪಾಡಲಿಕ್ಕೆ ಇಂಗ್ಲಾಂಡು ಜರ್ಮನಿಯ ಮೇಲೆ ಯುದ್ಧಕ್ಕೆ ಹೊರಟಿದೆಯೋ, ಅದೇ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಇಂಗ್ಲಾಂಡು ಹಿಂದೂಸ್ಥಾನಕ್ಕೆ ಧಿಕ್ಕರಿಸಿದೆ. ಇಂಗ್ಲೆಂಡು ಸಾಮ್ರಾಜ್ಯ ತೃಷ್ಣೆಯನ್ನು ತಣಿಸಲಿಕ್ಕಾಗಿಯೇ ಯುದ್ಧದಲ್ಲಿ ಪ್ರವೃತ್ತವಾಗಿರುವುದಲ್ಲವಾದರೆ, ಈ ಧಿಕ್ಕಾರದಿಂದ ನಾವು ಮತ್ತೇನನ್ನು ತಿಳಕೊಳ್ಳಬಹುದು?

ಭಯಪ್ರದರ್ಶನ

ಇಂಗ್ಲಾಂಡು ಇದರಿಂದಲೇ ತೃಪ್ತವಾಗಿಲ್ಲ. ಗಾಂಧಿ ಅಥವಾ ಕಾಂಗ್ರೆಸ್ಸು ಸ್ವಾತಂತ್ರ್ಯಸಂಪಾದನೆಗಾಗಿ ಕಾಯದೆ ಭಂಗದಂಥ ಯಾವ ಕಾರ್ಯಕ್ರಮವನ್ನು ಕೈಕೊಂಡರೂ ಅದನ್ನು ವಿರೋಧಿಸಲಿಕ್ಕೆ ಸರಕಾರವು ಎಲ್ಲಾ ಉಪಾಯಗಳನ್ನು ಕೈಕೊಳ್ಳಲಿಕ್ಕೆ ಹಿಂಜರಿಯುವುದಿಲ್ಲವೆಂದು ಹೆದರಿಕೆಯನ್ನು ಹಾಕಿದೆ. ಇದರ ಅರ್ಥವೇನೆಂದರೆ ಹಿಂದೂಸ್ಥಾನದ ಕ್ರಿಯಾತ್ಮಕ ಸ್ವಾತಂತ್ರ ಪ್ರಯತ್ನವನ್ನು, ಜರ್ಮನಿಯು ಜೆಕೊಸ್ಲೊವೇಕಿಯಾ ಮತ್ತು ಪೋಲರ ಅಥವಾ ರಷ್ಯವು ಫಿನ್ಲಾಂಡಿನ ಜನರ ಪ್ರಯತ್ನಗಳನ್ನು ತಡೆದಂತೆಯೇ ಇಂಗ್ಲಾಂಡು ಪಶುಬಲದ ಮೂಲಕ ತಡೆಯುವುದು. 'ನಾವು ಹೇಳಿದಂತೆ ನೀವು ಕೇಳಲೇ ಬೇಕು. ನಮ್ಮ ಆಜ್ಞಾಪಾಲಕರಾಗಿ ನೀವು ಇರಬೇಕು. ಅಲ್ಲವಾದರೆ ವಿರೋಧದ ಪರಿಣಾಮವನ್ನು ಅನುಭವಿಸಲು ಸಿದ್ಧರಾಗಬೇಕು' ಎಂದು ಹಿಟ್ಲರ ಮತ್ತು ಸ್ಟಾಲೀನರು ಆ ದುರ್ಬಲ ರಾಷ್ಟ್ರಗಳಿಗೆ ಹೇಳಿದ ಹಾಗೆಯೇ ಬ್ರಿಟಿಷ್ ಸರಕಾರವು ಹಿಂದೂಸ್ಥಾನಕ್ಕೆ ಹೇಳುತ್ತದೆ!

ಪರಿಸ್ಥಿತಿಯ ಪರಿವರ್ತನ

ಆದರೆ ೧೫೦-೨೦೦ ವರ್ಷಗಳ ಮೊದಲು ಇಂಗ್ಲಾಂಡು ಹಿಂದುಸ್ಥಾನದ ಮೇಲೆ ಅಧಿಕಾರ ಸ್ಥಾಪನೆ ಮಾಡುವಾಗ ಹಿಂದುಸ್ಥಾನದಲ್ಲಿ ಯಾವ ಪರಿಸ್ಥಿತಿಯು ಹುಟ್ಟಿದ್ದಿತೋ ಈಗ ಅಲ್ಲಿರುವುದಿಲ್ಲ. ಹಿಂದುಸ್ಥಾನದ ಜನರು ಇಷ್ಟು ವರ್ಷಗಳಿಂದ ಗುಲಾಮರಾಗಿ ಬದುಕಿ ಬಂದಿದ್ದಾರೆ. ಆದರೆ ಫಿನ್ನರು, ಪೋಲರು ಮತ್ತು ಜೆಕ್ಕರು ಗುಲಾಮರಾಗಿ ವರ್ಷ ಕೂಡಾ ತುಂಬಿಲ್ಲ. ಆದ್ದರಿಂದ ಹಿಂದೂಸ್ಥಾನದ ಜನರು ಅವರಿಗಿಂತ ದೀನರೂ ದುರ್ಬಲರೂ ಆಗಿರುವರು. ಈ ಪರಿಸ್ಥಿತಿಯಲ್ಲಿ ಹಿಂದೂಸ್ಥಾನವು ಸ್ವಾತಂತ್ರ್ಯಕ್ಕಾಗಿ ಎಂದು ಇಂಗ್ಲಾಂಡಿನ ವಿರುದ್ಧ ನಿಲ್ಲುವದೆಂದು ಹೇಳುವುದು ಕಠಿನವಾಗಿದೆ.

ಸರಕಾರದ ಪ್ರತೀಕಾರ

ಗಾಂಧಿಯವರು ಸಾಮುದಾಯಿಕ ಕಾಯದೆಭಂಗಕ್ಕಾಗಿ ಜನರನ್ನು ಸಿದ್ಧ ಮಾಡುತ್ತಾ ಇದ್ದಾರೆ. ಕಾಂಗ್ರೆಸ್ಸಿನ ಎಂಟು ಪ್ರಾಂತ್ಯಗಳ ಮಂತ್ರಿಮಂಡಲಗಳು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿವೆ. ಇನ್ನು ಕಾಯದೆ ಭಂಗವು ಆಗುವುದೊಂದೇ ಉಳಿದಿದೆ. ಹಿಂದೂಸ್ಥಾನದಲ್ಲಿ ಸಾಮುದಾಯಿಕ ಸೆರೆಗಳು, ನಾಗರಿಕ ಜನರ ಮೇಲೆ ಗೋಳಿಬಾರು, ಮತ್ತೆ ಕೊನೆಯದಾಗಿ ಪ್ರಾಯಶಃ ಪೇಟೆ, ಪಟ್ಟಣ, ಹಳ್ಳಿಹಳ್ಳಿಗಳ ಮೇಲೆ ಆಕಾಶದಿಂದ ಬಾಂಬುಗಳ ಸುರಿಮಳೆ—ಆ ಬಹು ಭಯಂಕರ ರೋಮಾಂಚಕಾರಿ ದೃಶ್ಯಗಳನ್ನೂ ಕಾಣಬಹುದು. ಆಗಲೇ ಅಮೇರಿಕದ ಜನಮತದಲ್ಲಿ ಹಿಂದೂಸ್ಥಾನಕ್ಕೆ ಅನುಕೂಲವಾಗಿ ಭಯಂಕರ ಕ್ರಾಂತಿಯು ಆಗುವುದು."

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 11/24. R. E. P. 1304/39

ಪಡುಬಿದ್ರೆ ಮಹಾಲಿಂಗೇಶ್ವರ ದೇವರು ಇದರ ಪ್ರಕೃತದ ಮುಕ್ತೇಸರರು; ಪಿ. ಭುಜಂಗ ರಾವ್ ಸಹಾ—ಅರ್ಜಿದಾರರು.

ಮತ್ತು

ದುರ್ಗಿ ಶ್ರೀನಿವಾಸಯ್ಯ ಸಹಾ—ಎದ್ರಿರು.

1ನೇ ಎದ್ರಿ:—ದುರ್ಗಿ ಶ್ರೀನಿವಾಸಯ್ಯ—ಕೃಷ್ಣಯ್ಯನವರ ಮಗ ಉಡುಪಿ ತಾಲೂಕು ನಡ್ಸಾಲು ಗ್ರಾಮದ ಪಡುಬಿದ್ರೆಯಲ್ಲಿರುವವ.

ಮೇಲ್ಕಂಡ ಅಮಲ್ಜಾರಿಯಲ್ಲಿ 1ನೇ ಎದ್ರಿಯು ಹಕ್ಕಿನ ಪತ್ತಿಯಾದ ಗೇಣಿ ವಸೂಲು ಹಕ್ಕು ಏಲಂಮಿಗೆ ಅಪೇಕ್ಷಿಸಿ ಅರ್ಜಿದಾರರು ಹಾಜರು ಪಡಿಸಿದ ಇಸ್ತಿಹಾರು ದೃಷ್ಟ ಕುರಿತು ಆಕ್ಷೇಪಯಿದ್ದರೆ ತಾ. 10–8–40ಕ್ಕೆ ಬೆಳಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಹ್ಯಾಹೀರು ಮಾಡತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಶಿವಾಯ್ ಹೂಡಿ ಕ್ರಮದಂತೆ ತೀರ್ಮಾನಿಸಲಾದೀತು ಎಂತ ಸದ್ರಿ 1ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

Karkal 29-7-40. (Sd.) I. S. Rao, Advocate for Petrs.

ಜೀವವಿಮೆಯೇ ಸುಲಭವಾದ [illegible] ಹಣ [illegible] ಮಾಡಿ ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಲು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್'ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗ॥ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್

ಸೌತ್ ಪೆರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

PROBABLY WE CAN HELP

Yes, if you are a business man requiring a temporary increase in your working capital. We grant loans at competitive rates, on gold, goods, produce, stocks and shares and other approved securities

RESOURCES OF A CRORE.

Estd: 1906 CANARA BANK LIMITED.

NACET BLADES

3ಗೂಟಗಳ ರೇಜರುಗಳಿ

ನೆಸೆಟ್ ಬ್ಲೇಡುಗಳು ತಮ್ಮ ವಿಶಿಷ್ಟ ಗುಣಕ್ಕೂ, ಕಡಿಮೆ ಕ್ರಯಕ್ಕೂ ಶಾಶ್ವತವಾದ ಖ್ಯಾತಿಯನ್ನು ಪಡೆದಿವೆ. ಇವುಗಳ ಪೂರ್ಣವಾದ ಭರವಸೆಯಿಂದಾಗಿ ಇವು ಜನಪ್ರಿಯವಾಗಿವೆ. ಪ್ರತಿ ಬ್ಲೇಡುಗಳು ಉತ್ತಮ ಮತ್ತು ಆದ [illegible]ವನ್ನುಂಟುಮಾಡುವುವು.

NT

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ".

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

2—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨—೮—೧೯೪೦

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನ!

ಪೂನೆಯಲ್ಲಿ ಧುರೀಣರ ರಾಜಕೀಯ ಚರ್ಚೆ

ರಾಜಾಜಿಯವರು ಮುಖ್ಯ ಪಾತ್ರ ವಹಿಸಿದರು!

ಡಿಲ್ಲಿಯ ನಿರ್ಣಯವು ಮಂಜೂರಾಯಿತು!

ಎಷ್ಟರ ತನಕ ಕಾಯಬೇಕಾಗುವುದು!

ರಾಷ್ಟ್ರಪತಿ ಆಜಾದರು

ಜುಲಾಯಿ ಕೊನೆಯವಾರ ಪೂನೆಯಲ್ಲಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಅಧಿವೇಶನವು ಅತ್ಯಂತ ಉತ್ಸಾಹದಿಂದ ಪ್ರಾರಂಭವಾಯಿತು. ದೇಶದ ನಾನಾ ಭಾಗದಿಂದ ರಾಷ್ಟ್ರೀಯ ಮುಖಂಡರು ಅಲ್ಲಿಗೆ ಆಗಮಿಸಿದ್ದರು. ಸಭಾಭವನವು ಅತ್ಯಂತ ಅಲಂಕೃತವಾಗಿತ್ತು. ಪೂನೆಯ ಮಹಾಜನರು ರಾಷ್ಟ್ರಪತಿಗಳಿಗೂ ಇತರ ಕಡೆಯಿಂದ ಒಂದ ಪ್ರತಿನಿಧಿಗಳಿಗೂ ಅತ್ಯಂತ ವಿಜೃಂಭಣೆಯ ಸ್ವಾಗತವಿತ್ತರು. ಗಾಂಧಿಜಿಯವರೂ ಅಬ್ದುಲ್ ಗಫರ್ ಖಾನರೂ ಈ ಸಭೆಗೆ ಬರಲಿಲ್ಲ! ತಾ. ೨೫ರಂದು ಕಾಂಗ್ರೆಸು ವರ್ಕಿಂಗ್ ಕಮಿಟಿಯು ಸೇರಿತು. ಅದು ಡಿಲ್ಲಿಯ ನಿರ್ಣಯದ ವಿಚಾರ, ಗಾಂಧಿಜಿಯವರ ಲೇಖನಗಳ ವಿಚಾರ, ಬ್ರಿಟಿಷ್ ಸರಕಾರವು ಕಾಂಗ್ರೆಸಿನ ಕೇಳಿಕೆಯ ಕುರಿತು ಲಕ್ಷ್ಯ ಕೊಡದ ವಿಷಯವಾಗಿ ವಿಚಾರಣೆಯಾಯಿತು. ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಮುಂದೆ ಡಿಲ್ಲಿಯ ನಿರ್ಣಯವನ್ನು ಇಡುವುದಾಗಿ ನಿಶ್ಚಯ ಮಾಡಲಾಯಿತು. ವರ್ಕಿಂಗ್ ಕಮಿಟಿಯು ಐದು ತಾಸುಗಳ ತನಕ ಸಭೆ ಕೂಡಿತ್ತು.

ನಿರ್ಣಯಗಳು

(೧) ವರ್ಧಾದಿಂದ ವರ್ಕಿಂಗ್ ಕಮಿಟಿಯು ಹೊರಡಿಸಿದ (ಜೂನ್ ೨೧ ೧೯೪೦) ಪ್ರಕಟಣೆಯನ್ನು ಒಪ್ಪುವುದು ಮಾತ್ರವಲ್ಲದೆ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಅಹಿಂಸಾ ತತ್ವವನ್ನು ಪೂರ್ಣವಾಗಿ ಅಂಗೀಕರಿಸುವುದೆಂದೂ ಹೊರಗಿನ ದಾಳಿ ಮತ್ತು ಒಳಗಿನ ಕಲಹಗಳ ವಿಷಯದಲ್ಲಿ ಅಹಿಂಸೆಯ ಪ್ರಯೋಗವನ್ನು ಮಾಡಲು ಸಾಧ್ಯವಾಗಲಿಲ್ಲವೆಂದೂ ಅಭಿಪ್ರಾಯಪಡುತ್ತದೆ. ಕಾಂಗ್ರೆಸು ಸಂಸ್ಥೆಗಳು ಅಹಿಂಸಾ ಮೂಲಕವಾಗಿಯೇ ಕಾರ್ಯಗಳನ್ನು ಮಾಡಬೇಕೆಂದು ಸಾರುತ್ತದೆ! ಕಾಂಗ್ರೆಸು ಸ್ವಯಂಸೇವಕದಳಗಳ ಅಹಿಂಸೆಯನ್ನೇ ಪಾಲಿಸತಕ್ಕದಾಗಿ ಅಭಿಪ್ರಾಯಪಡುತ್ತದೆ.

(೨) ಡಿಲ್ಲಿಯಿಂದ ವರ್ಕಿಂಗ್ ಕಮಿಟಿಯು ಹೊರಡಿಸಿದ (ಜುಲಾಯಿ ೭ ೧೯೪೦) ಪ್ರಕಟಣೆಯನ್ನು ಒಪ್ಪುವುದು ಮಾತ್ರವಲ್ಲದೆ ಇಂದು ಬ್ರಿಟನಿಗೆ ಸಹಾಯ ಮಾಡುವ ವಿಷಯದಲ್ಲಿ ಭಾರತದ ಸ್ವಾತಂತ್ರ್ಯ ಪ್ರಕಟಣೆಯು ಆಗಬೇಕಾಗಿದೆಯೆಂದೂ, ಅದರಪೂರ್ವವಾಗಿ ರಾಷ್ಟ್ರೀಯ ಸರಕಾರದ ಯೋಜನೆಯಾಗಬೇಕೆಂದೂ ಅಭಿಪ್ರಾಯಪಡುತ್ತದೆ. ಹೀಗೆ ಮಾಡದ ಪಕ್ಷದಲ್ಲಿ ಬ್ರಿಟನಿಗೆ ನೆರವನ್ನು ಕೊಡುವುದು ಸಾಧ್ಯವಿಲ್ಲವೆಂದೂ ತಿಳಿಸುತ್ತದೆ.

ಈ ಸಂದರ್ಭದಲ್ಲಿ ಕೆಲವು ಕಾಂಗ್ರೆಸ್ ಮುಖಂಡರು, ಬ್ರಿಟನು ಇದು ವರೆಗೆ ಕಾಂಗ್ರೆಸಿನ ಕೇಳಿಕೆಯನ್ನು ವಿಚಾರಿಸದಿರುವ ನಿಮಿತ್ತ, ಸರಕಾರಕ್ಕೆ ಅವಧಿ ಕೊಟ್ಟು ಅದರೊಳಗೆ ಕೇಳಿಕೆಯನ್ನು ಪೂರ್ತಿಗೊಳಿಸದಿದ್ದಲ್ಲಿ ಮುಂದೆ ಆಂದೋಳನವನ್ನು ಆರಂಭಿಸಬೇಕಾಗಿ ನಿರ್ಣಯದಲ್ಲಿ ಸೇರಿಸಬೇಕೆಂದು ಅಭಿಪ್ರಾಯ ಪಟ್ಟಿದ್ದರು. ಆದರೆ ಆ ಅಭಿಪ್ರಾಯವು ಮುಂದು ಬರಲಿಲ್ಲ.

ಎ. ಐ. ಸಿ. ಸಿ. ಅಧಿವೇಶನ

ಮರುದಿನ ಎ. ಐ. ಸಿ. ಸಿ. ಅಧಿವೇಶನವು ಆರಂಭವಾಯಿತು. ಮೊದಲ ನಿರ್ಣಯವನ್ನು ನೆಹರುಗಳು ಸಭೆಯ ಮುಂದೆ ಮಂಡಿಸಿದರು. ಭುಲಾಬಾಯಿಯವರು ಸಮರ್ಥಿಸಿದರು. ಇಬ್ಬರೂ ಕಾಂಗ್ರೆಸು ಅಹಿಂಸಾತತ್ವವನ್ನು ಗಾಂಧಿಜಿಯವರ ನಾಯಕತ್ವವನ್ನೂ ಬಿಟ್ಟಿಲ್ಲವೆಂದೂ ಸ್ಪಷ್ಟಪಡಿಸಿದರು.

ಡಿಲ್ಲಿ ನಿರ್ಣಯವನ್ನು ರಾಜಾಜಿಯವರು ಮಂಡಿಸಿದರು. ಅವರ ತನ್ನ ಸಹಜ ತರ್ಕಪೂರ್ಣ ಶೈಲಿಯಲ್ಲಿ ಕಾಂಗ್ರೆಸಿನ ನಿರ್ಣಯದ ಮಹತ್ವವನ್ನೂ [illegible] ಗಾಂಧಿ [illegible] ಗಳ ಸಂಬಂಧವನ್ನೂ ವಿಶದಪಡಿಸಿದರು. ಅವರ ಭಾಷಣದ ಪರಿಣಾಮವಾಗಿ [illegible] ವಿರುದ್ಧವಿದ್ದ [illegible] ವಾದೀ ಧುರೀಣರ [illegible] ನ್ನು ಸರ್ದಾರ ಪಟೇಲರು [illegible] ತ್ತ ಅರ್ಥಪೂರ್ಣವಾದೆಂದು ಭಾಷಣ [illegible] ಪ್ರತಿನಿಧಿಗಳು ಈ ಇಬ್ಬರ ಭಾಷಣಗಳನ್ನೂ ಬಹಳ ಕುತೂಹಲದಿಂದ ಕೇಳುತ್ತಿದ್ದರು. ರಾಜಾಜಿಯವರು ತನ್ನ ಭಾಷಣದಲ್ಲಿ ಕಾಂಗ್ರೆಸಿನ ಇಂದಿನ ಕಾರ್ಯಕಲಾಪಗಳನ್ನು ವಿವರಿಸುತ್ತಾ, ಈ ನಿರ್ಣಯದಿಂದ ಕಾಂಗ್ರೆಸು ತನ್ನ ತತ್ವ ಬಿಟ್ಟು ಕೊಟ್ಟ ಹಾಗೆ ಆಗಲಿಲ್ಲವೆಂದೂ, ತನ್ನ ಉದ್ದೇಶವನ್ನು ಮತ್ತಷ್ಟು ಸ್ಪಷ್ಟಪಡಿಸಿದಂತಾಗಿದೆಯೆಂದೂ ಹೇಳಿದರು. ಸರ್ದಾರ ಪಟೇಲರು ಠರಾವನ್ನು ಸಮರ್ಥಿಸಿ ಮುಂದುವರಿಸುತ್ತ ಗಾಂಧಿ ಸೇವಾ ಸಂಘಕ್ಕೆ ತಾನು ರಾಜಿನಾಮೆ ಕೊಟ್ಟ ವಿಷಯವಾಗಿ ಹೇಳುತ್ತಾ, ವರ್ಧಾದ ಠರಾವಿನಂತೆ ನಾವು ಬ್ರಿಟನಿನ ಯುದ್ಧದಲ್ಲಿ ಸಹಾಯ ಮಾಡಬಹುದಾದದರಿಂದ ನಾನು ಸೇವಾ ಸಂಘಕ್ಕೆ ರಾಜಿನಾಮೆ ಕೊಡಬೇಕಾಯಿತೆಂದರು. ಬಳಿಕ ಡಿಲ್ಲಿಯ ಠರಾವು ಓಟಿಗೆ ಬಿತ್ತು. ಅದು ಬಹುಮತದಿಂದ ಅಂಗೀಕಾರವಾಯಿತು.

ಇದಕ್ಕೆ ಉಪಸೂಚನೆಯಾಗಿ ಸೋಶಿಯಲಿಸ್ಟ್ ಕಮ್ಯುನಿಸ್ಟರಿಂದ ಹಲವು ಠರಾವುಗಳು [illegible] ಅವುಗಳಲ್ಲಿ [illegible] ಸೋಲಿಸಲ್ಪಟ್ಟವು. [illegible] ಈ [illegible] ತಾಸುಗಳ ತನಕ ನಡೆಯಿತು.

ಕಾಂಗ್ರೆಸಿನ ಸಮಪ್ರಧಾನಿ ರಾಜಾಜಿ

ರಾಜಗೋಪಾಲಾಚಾರಿಯವರೊಡನೆ ವಿವರಗಳ [illegible] ಕಾಂಗ್ರೆಸಿನ ಈ ಕೇಳಿಕೆಯನ್ನು ಬ್ರಿಟಿಷ್ ಸರಕಾರವು ಮಾನ್ಯ ಮಾಡದಿದ್ದಲ್ಲಿ ಮುಂದಿನ ಹೆಜ್ಜೆಯೇನು ಎಂಬ ವಿಷಯವಾಗಿ ಸ್ಪಷ್ಟೀಕರಣ ಮಾಡಬೇಕೆಂದು ಕೇಳಿದರು. ಅದಕ್ಕೆ ರಾಜಾಜಿಯವರು ಇದನ್ನು ಸರಕಾರವು ತಿರಸ್ಕರಿಸಿದಲ್ಲಿ ಮುಂದಿನ ವಿಷಯವಾಗಿ ಮುಂದೆ ಎ ಐ ಸಿ ಸಿ ಯು ವಿಚಾರಿಸತಕ್ಕದ್ದಿದೆಯೆಂದು ಉತ್ತರವಿತ್ತರು. ಹೀಗೆ ಈ ಸಭೆಯು, ತಾ ೨೮ರಂದು ಕೊನೆಗಂಡಿತು.

ಬರುವ ಕಾಂಗ್ರೆಸ್ ಮಹಾಧಿವೇಶನವು ತಮಿಳುನಾಡಿನಲ್ಲಿ ಜರಗುವುದಾಗಿ ತಿಳಿದುಬರುತ್ತದೆ.

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ತಾರೀಕು 2—8—1940

ಪೂನದ ನಿರ್ಣಯ!

ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಅಧಿವೇಶನವು ಜುಲಾಯಿ ಅಂತ್ಯದ ವಾರದಲ್ಲಿ ಪೂನಾದಲ್ಲಿ ಸೇರಿತು ಭಾರತದ ರಾಜಕೀಯದ ಕುರಿತು ಅನೇಕ ಮಹತ್ವದ ಚರ್ಚೆಗಳನ್ನು ಮಾಡಿತು. ಅದರಲ್ಲಿ ಮುಖ್ಯವಾಗಿ ಚರ್ಚೆಗೆ ಬಂದ ವಿಷಯವೆಂದರೆ, ಡಿಲ್ಲಿಯಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯು, ರಾಷ್ಟ್ರರಕ್ಷಣೆ, ಆಂತರಿಕ ಜಗಳ ಮೊದಲಾದೆಡೆಗಳಲ್ಲಿ ಅಹಿಂಸೆಯನ್ನು ಪಾಲಿಸಲು ಅಸಮರ್ಥವಾಗುವುದೆಂದು ಮಾಡಿದ ನಿರ್ಣಯ ಮತ್ತು ಬ್ರಿಟಿಷ ಸರಕಾರವು ರಾಷ್ಟ್ರೀಯ ಸರಕಾರದ ಯೋಜನೆಗೆ ಸಮ್ಮತಿಸುವಲ್ಲಿ ಕಾಂಗ್ರೆಸು ಸಹಾಯ ಕೊಡಬೇಕೆಂಬ ವಿಷಯ ಇವುಗಳ ಕುರಿತು ಹಲವು ಮುಖಂಡರು ಭಿನ್ನಾಭಿಪ್ರಾಯವುಳ್ಳವರಾಗಿದ್ದು ಹಲವು ಜನರು ಈ ಚರ್ಚೆಯಲ್ಲಿ ಭಾಗವಹಿಸಿದರು, ಆದರೆ ಕೊನೆಗೆ ಡಿಲ್ಲಿಯ ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು

ಡಿಲ್ಲಿಯ ನಿರ್ಣಯವನ್ನು ಮತಕ್ಕೆ ಹಾಕಲು ಇದಕ್ಕೆ 95 ಜನರು ಅನುಕೂಲರಾಗಿಯೂ 47 ಜನರು ಪ್ರತಿಕೂಲರಾಗಿಯೂ ಇದ್ದರು ಆದಕಾರಣ ಡಿಲ್ಲಿಯ ನಿರ್ಣಯವು ಹೇಗಾದರೂ ಬಹುಮತವನ್ನು ಸಂಪಾದಿಸಿಕೊಂಡಿದೆಯೆಂದು ಮಾತ್ರ ಹೇಳಬಹುದು. ಹೀಗೆ ಡಿಲ್ಲಿಯ ನಿರ್ಣಯಕ್ಕೆ ವಿರೋಧವಾಗಿಯೂ ಮತಗಳು ಸಿಕ್ಕಿದ ವಿಷಯವು ಚಾರಿತ್ರಿಕ ಮಹತ್ವದ ಒಂದು ಬದಲಾವಣೆಯೆಂದ ಆಗಿದೆ ಕಾಂಗ್ರೆಸ್ಸು ಅಹಿಂಸೆಯನ್ನು—ಗಾಂಧಿಜಿಯವರ ಮುಂದಾಳುತನದಿಂದ—ತನ್ನ ಜೀವ ಜೀವಾಳವಾಗಿ ಮಾಡಿಕೊಂಡ ಸಂಸ್ಥೆಯಾಗಿರುವುದು. ಆದರೆ ಡಿಲ್ಲಿಯಲ್ಲಿ ಮಾಡಿದ ನಿರ್ಣಯವು ಅಹಿಂಸೆಯ ಕಾಂಗ್ರೆಸ್ಸಿನ ಪ್ರಸಿದ್ಧವಾದ ತತ್ವದಲ್ಲಿ ತಂದ ಬದಲಾವಣೆಯಾಗಿದೆ. ಹಾಗೆಂದೇ ಕಾಂಗ್ರೆಸ್ಸು ಮಹಾತ್ಮಾ ಗಾಂಧಿಜಿಯವರ ಕುರಿತು ತೋರಿಸಿದ, ಸ್ವಲ್ಪ ಅವಿಧೇಯತ್ವವೆಂದೂ ಟೀಕೆಗೆ ಗುರಿಯಾಗಿದೆ. ಕಾಂಗ್ರೆಸ್ ಪ್ರತಿನಿಧಿಗಳ ಹಲವರ ಮನಸ್ಸಿನಲ್ಲಿದ್ದ ಈ ಅಭಿಪ್ರಾಯ ಭೇದವೇ ಈ ನಿರ್ಣಯಕ್ಕೆ ಅಷ್ಟು ವಿರೋಧ ಸಿಗಲು ಕಾರಣವಾಯಿತೆನ್ನಬೇಕು. ಒಂದು ಕಡೆಯಿಂದ ರಾಜೇಂದ್ರ ಪ್ರಸಾದ, ಕೃಪಲಾನಿಯವರಂತಹವರೇ ಆ ನಿರ್ಣಯವನ್ನು ವಿರೋಧಿಸಿ ಕೆಲಸಮಾಡುತ್ತಿರುವಾಗ ಇನ್ನೊಂದು ಕಡೆಯಿಂದ ರಾಜಾಜಿಯಂತಹವರು ಅದರ ಸಮರ್ಥನೆಗಾಗಿ ಟೊಂಕಕಟ್ಟಿ ನಿಂತರು. ಆ ಸಂದರ್ಭದಲ್ಲಿ ಯಾವುದು ಕಾರ್ಯರೂಪಕ್ಕಿಳಿಯಬಹುದು ಎಂಬುದನ್ನರಿತು ರಾಜಾಜಿಯವರು ಅತ್ಯುತ್ತಮ ಸಲಹೆಗಳನ್ನಿತ್ತರು. ರಾಜಾಜಿಯವರ ಸಲಹೆ, ಸರ್ದಾರರ ಸೂಚನೆ, ನೆಹರುಗಳ ಐಕ್ಯಸಂದೇಶ ಇದೇ ಮೊದಲಾದುವುಗಳಿಂದ ನಿರ್ಣಯ ಮಂಜೂರಾಯಿತೆನ್ನಬೇಕು. ಲೋಕದ ಮತ್ತು ಕಾಂಗ್ರೆಸ್ಸಿನ ಜನರ ಮನಸ್ಸಾಕ್ಷಿಗೆ ಸರಿಯಾಗಿ ಅವರು ಆ ನಿರ್ಣಯವನ್ನು ಮುಂತಂದು ಚರ್ಚಿಸಿದರು. ಅದನ್ನು ಸಮರ್ಥಿಸಿದರು, ಕಾಂಗ್ರೆಸ್ಸು ಇಂದು ತನ್ನ ಹೋರಾಟದ ಕಾರ್ಯಕ್ರಮವನ್ನು ದೂರ ಸರಿಸಿ ಬ್ರಿಟನನ್ನು ಬಹಳ ಆಧರಪೂರ್ವಕ ನ್ಯಾಯಮಾರ್ಗದಲ್ಲಿ ಸಮೀಪಿಸುತ್ತದೆ ಇಂತಹ ನ್ಯಾಯದ ಮಾತುಗಳಿಗೆ ಬ್ರಿಟನು ಕಿವಿಗೊಟ್ಟು ಭಾರತದ ಮುತ್ತು ತನ್ನ ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳುವುದು ಉಚಿತವಾಗಿದೆ

ಮಶ್ರೂವಾಲರ ಸಂದೇಹ

ಗಾಂಧಿ ಸೇವಾ ಸಂಘದ ಹಿಂದಿನ ಅಧ್ಯಕ್ಷರಾದ ಶ್ರೀ ಮಶ್ರೂವಾಲರ ಒಂದು ಹೇಳಿಕೆಯನ್ನು ಹೊರಡಿಸುತ್ತಾ, ವರ್ಕಿಂಗ್ ಕಮಿಟಿಯು ಯುದ್ಧದ ಕುರಿತು ಮಾಡಿದ ನಿರ್ಣಯವು ದೇಶದ ಹಿತದ ದೃಷ್ಟಿಯಿಂದ ಸಮಂಜಸವಾಗಿದೆಯೋ ಎಂಬ ಪ್ರಶ್ನೆಯನ್ನೆತ್ತಿದ್ದಾರೆ ಗಾಂಧಿಜಿಯವರು ನಿವೃತ್ತರಾದ ವಿಷಯವನ್ನು ಬಿಟ್ಟರೂ ವರ್ಕಿಂಗ್ ಕಮಿಟಿಯವರು ತೆಗೆದುಕೊಂಡ ಹೆಜ್ಜೆಯು ಬದ್ಧಿವಂತಿಕೆಯುಳ್ಳದ್ದೇ ಎಂದು ಸಂದೇಹಗೊಂಡಿದ್ದಾರೆ

ಅವರು ಹೀಗೆಂದ ಅಭಿಪ್ರಾಯ ಪಡುತ್ತಾರೆ —

"ನನ್ನ ಹಾಗಿದ್ದವರು ಕಾಂಗ್ರೆಸನ್ನು ಸೇರಿದ್ದು ಇದೀ ಜಗತ್ತಿನಲ್ಲಿ ದರಿದ್ರನಾರಾಯಣನ ಸೇವೆಗೆ ನಿಂತ ಸಂಸ್ಥೆ ಅದೊಂದೇ ಎಂಬುದರಿಂದ ದರಿದ್ರರ ಸಲುವಾಗಿಯೇ ಕಾಂಗ್ರೆಸು, ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಮಧ್ಯಪಾನ ನಿಷೇಧ ಮೊದಲಾದ ಕಾರ್ಯಕ್ರಮಗಳನ್ನು ಕೈಕೊಂಡಿತು

"ಈಗ ಕಾಂಗ್ರೆಸಿನ ಕೇಳಿಕೆಯನ್ನು ಬ್ರಿಟನು ಒಪ್ಪಿದರೆ, ಅದು ಕೂಡಲೇ ಯುದ್ಧ ರಂಗಕ್ಕೆ ಇಳಿಯ ಬೇಕಲ್ಲವೆ? ಹಾಗೆ ಮಾಡಿದರೆ ಅದು ದರಿದ್ರರ ಸೇವೆ ಮಾಡಿದಂತಾಗುವುದೆ? ಬ್ರಿಟಿಷ್ ಸರಕಾರವು ಈಗ ಸಂಧಾನ ಮಾಡಿಕೊಂಡರೆ, ಯುದ್ಧಕ್ಕಾಗಿ, ಧನ, ಜನ, ಸಹಾಯಗಳನ್ನು ಹೆಚ್ಚು ಹೆಚ್ಚು ಪಡೆವ ಸಲುವಾಗಿ ಎಂಬುದು ಸ್ಪಷ್ಟವೇ ಆಗಿದೆ

"ಸರಕಾರವು ಒಂದು ತೀರ್ಮಾನ ಮಾಡಿದರೆ ಕೂಡಲೇ ರಾಷ್ಟ್ರೀಯ ಸರಕಾರವೆಂಬ ಹೆಸರಿನಿಂದ ಹೊಸ ತೆರಿಗೆ-ಹೊಸ ಕಾನೂನುಗಳು ಹೊರಡುವವು: ಅದರಲ್ಲಿ ಕಾಂಗ್ರೆಸೂ ಭಾಗವಹಿಸುವುದು; ಮದ್ಯಪಾನ ನಿಷೇಧವು ನಿಲ್ಲಿಸಲ್ಪಡಬಹುದು; ಉಪ್ಪಿಗೆ ಹೆಚ್ಚು ಕರವು ಹಾಕಲ್ಪಡಬಹುದು; ಪೋಸ್ಟಲ್ ಕಾರ್ಡ ಕವರುಗಳಿಗೆ ಕ್ರಯ ಹೆಚ್ಚಾಗಬಹುದು ಸರಕಾರೀ ಆಫೀಸರರು ಹಣ ಸಂಗ್ರಹಿಸುವುದರಲ್ಲಿ ನಿರತರಾಗಬಹುದು. ಇದನ್ನು ರಾಷ್ಟ್ರೀಯ ಸರಕಾರವು ಮೆಚ್ಚಬಹುದು; ಇದಕ್ಕೆ ಕಾಂಗ್ರೆಸೂ ಭಾಗಿಯಾಗಬೇಕಾಗುವುದು, ವರ್ಕಿಂಗ್ ಕಮಿಟಿಯ ಇಂದಿನ ನಿರ್ಣಯದಿಂದ ಅಹಿಂಸೆಯು ನಿರ್ಮೂಲವಾಗಿ ಜನತೆಗೆ ಹೆಚ್ಚಿನ ಅನಿಷ್ಟವಾಗುವುದೋ ಎಂದು ನನ್ನ ಹೆದರಿಕೆ."

"ಈಗ ಕೆಲವರು ಭಯಗ್ರಸ್ತರಾಗಿದ್ದಾರೆಂದು ಹೇಳುತ್ತಾರೆ ಆದರೆ ದೊಡ್ಡದೊಡ್ಡ ಪೇಟೆಗಳಲ್ಲಿರುವ ದೊಡ್ಡವರು ಬಾಂಬುಗಳ ಸಿಡಿತಕ್ಕೆ ಹೆದರಿರಬಹುದು ಬಡವರು ಅಂಜುವುದಿಲ್ಲ ಆದರೆ ರಾಷ್ಟ್ರೀಯ ಸರಕಾರವೆಂಬ ಹೆಸರಿನಿಂದ, ಹೊಸ ಸರಕಾರವು ಸ್ಥಾಪಿತವಾದಾಗ, ಜನತೆಯು ಬೆದರಬೇಕಾಗುವುದು ದರಿದ್ರರು ಯುದ್ಧಕ್ಕೆ ಹೋಗಬೇಕಾಗುವುದು, ಇದಕ್ಕೆ ಕಾಂಗ್ರೆಸು ಭಾಗಿಯಾಗುವುದು ಹಾಗಾದ ಕಾರಣ, ವರ್ಕಿಂಗ್ ಕಮಿಟಿಯು ತನ್ನ ಘೋಷಣೆಯನ್ನು ಯುದ್ಧದ ಕುರಿತು ಬದಲು ಮಾಡುವುದು ರಾಷ್ಟ್ರದ ಹಿತದ ದೃಷ್ಟಿಯಿಂದ ಹಿತವಾಗಿದೆ"

ವರ್ಕಿಂಗ್ ಕಮಿಟಿಯು ಡಿಲ್ಲಿಯಲ್ಲಿ ಮಾಡಿದ ನಿರ್ಣಯ ಗಾಂಧೀಜಿಯವರ ಅಹಿಂಸೆಯನ್ನು ಅಂಗೀಕರಿಸದ ವಿಷಯವಾಗಿ ಇವರ ಎಷ್ಟೊಂದುಗೊಂಡು ಒರೆಯುತ್ತಾರೆ

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C S No 81/1940

ಬಿ ಗೋವಿಂದರಾಯ— ವಾದಿ

ಮತ್ತು

ಗಂಗು ಮ್ಯೊಲಿ— ಪ್ರತಿವಾದಿ

ಇವರೊಳಗೆ

ಮಂಗಳೂರು ತಾಲೂಕು ತಾಳಿಪಾಡಿ ಗ್ರಾಮದ ಪುನರೂರು ಎಂಬಲ್ಲಿರುವ ಬಾಲಮ್ಮ ಹೆಂಗಸಿನ ಮಗ ಪ್ರತಿವಾದಿ ಗಂಗು ಮ್ಯೊಲಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ —

ಇದೇ ಕಳದ ತಾ 5-4-1937ರಲ್ಲಿ ನೀವು ಪ್ರತಿವಾದಿಗೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ರೂಪ್ಯಾ 82-3-0. ಮುಂದಿನ ಬಡ್ಡಿ ಕೋರ್ಟು ಖರ್ಚು ಸಹಾ ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ 26-8-1940ಕ್ಕೆ ತಖ್ತಿಗೆ ಇಟ್ಟಿದೆ. ಆ ಬಗ್ಗೆ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ಆ ದಿವಸ ಘಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು, ಇಲ್ಲವಾದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು.

ಕೋರ್ಟು ಹುಕುಂ ಪ್ರಕಾರ.

ಯಂ. ಯಸ್. ಅಧಿಕಾರಿ.
ವಾದಿಯ ಕಡೆ ವಕೀಲ.

ಕಾರ್ಕಳ ತಾ. 27-7-1940.

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. No 34/1937

R. E P No 199/40

ಲಕ್ಷ್ಮಪ್ಪಕ್ಕ ಕುಂದ ಹೆಗ್ಗಡೆ —ಅರ್ಜಿದಾರರು

ಭಾವಾ ಸೆಟ್ಟಿ ಕೂಡಾ —ಎದ್ರಿರು

ಇವರೊಳಗೆ

ಸದ್ರಿ ಅಮ್ಮಣ್ಣಾರಿಯ ಎದ್ರಿರು

(1) 1ನೇ ಪ್ರತಿವಾದಿ ಭಾವಾಸೆಟ್ಟಿ, ಮುದು ಸೆಟ್ಟಿ ಮಗಳು, (2) 2ನೇಪ್ರತಿವಾದಿ ಲೋಕು ಸೆಟ್ಟಿ, ವೀರು ಸೆಟ್ಟಿ ಮಗ (3) 3ನೇ ಪ್ರತಿವಾದಿ ಮೋಹು ಸೆಟ್ಟಿ, ವೀರು ಸೆಟ್ಟಿ ಮಗಳು (4) 4ನೇ ಪ್ರತಿವಾದಿ ರಾಧು ಸೆಟ್ಟಿ, ಲಕ್ಷ್ಮಿ ಸೆಟ್ಟಿ ಮಗಳು (5) 6ನೇ ಪ್ರತಿವಾದಿ ಅಚ್ಚಣ್ಣ ಸೆಟ್ಟಿ, 3ನೇ ಪ್ರತಿವಾದಿಯ ಮಗ ಉಡ್ಪಿ ತಾಲೂಕು ನೆರಿಯೂರು ಗ್ರಾಮದ ಪಟ್ಟಮನೆಯಲ್ಲಿರುವವರು ಈ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ಅಮ್ಮಣ್ಣಾರಿಯಲ್ಲಿಯ ಎದ್ರಿರ ಕುಟುಂಬದ ಸ್ಥಿರಾಸ್ತಿಯನ್ನು ಏಲಂ ಮಾಡುವ ಬಗ್ಗೆ ಅರ್ಜಿದಾರ್ರು ಏಲಂ ಇಸ್ತಿಹಾರು ಹಾಜರು ಮಾಡಿರುವದನ್ನು ಮತ್ತು ಸದ್ರಿ ಏಲಂ ಸಮಯ ಬಿಡ್ ಮತ್ತು set off ಪರ್ಮಿಶನ್ ಕೇಳಿ ಅರ್ಜಿ ದಾಖಲ್ಲು ಮಾಡಿರುವುದರಿಂದ ಕೂಡಾ ಅವುಗಳ ಕುರಿತು ನಿಮ್ಮ ಆಕ್ಷೇಪಣೆಗಳು ಇರುವುದಾದರೆ ತಾ 26-8-40ಕ್ಕೆ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳದೆ ಇದ್ದಲ್ಲಿ ಸದ್ರಿ ವ್ಯವಹರಣೆ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸುತ್ತೇನೆ

ಕೋರ್ಟು ಹುಕ್ಕುಂ ಪ್ರಕಾರ

ಯಂ ಯಸ್. ಅಧಿಕಾರಿ,
ಅರ್ಜಿದಾರನ ಕಡೆ ವಕೀಲ

ತಾ 2. 7-40 ಮೊಕ್ಕಾಂ ಕಾರ್ಕಳ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 33 1940.

ಅರ್ಜಿದಾರರು —1 ನಾಗಿ ಹೆಂಗಸು 2 ಗೋವಿಂದ } ಬಿಲ್ಲ ಸುಬ್ಬ ಹೆಂಗಸಿನ ಮಕ್ಕಳು,

ಚಿಕ್ಕ ಹೆಂಗಸು 3ನೆ ಅರ್ಜಿದಾರಳ ಮಗಳು

ಕುಂದಾಪುರ ತಾಲೂಕು ಬಸರೂರು ಗ್ರಾಮದ ಕುಪ್ಪನ ಮನೆಯಲ್ಲಿರುತ್ತಾರೆ

ಎದ್ರಿರು— ಇಲ್ಲಾ

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

1, 2ನೇ ಅರ್ಜಿದಾರರ ಸಹೋದರ ವ 3ನೇ ಅರ್ಜಿದಾರಳ ಮಾವ ಮಂಜನು ಈ ಕೋರ್ಟ ಚಿಕ್ ಬಂಧಿಗೆ ಸೇರಿದ ಕುಂದಾಪುರ ತಾಲೂಕು ಬಸರೂರು ಗ್ರಾಮದಲ್ಲಿ ತಾ 21-7-39ರಲ್ಲು ಮೃತಪಟ್ಟಿರುವುದರಿಂದ ಅವನಿಗೆ ಡಿ ವಿಜಯಾ ಬೇಂಕ್ ಲಿಮಿಟೆಡ್ ಇದರ ಕುಂದಾಪುರ ಬ್ರೆಂಚಿನಲ್ಲಿ F D. R No 74/38ಕ್ಕೆ ತಾರೀಕು 25-2-39ರಲ್ಲು ವ್ಯಕ್ತ ಮಂಜನು ಡಿಪೋಜಿಟು ಇಟ್ಟ ಬಾಬ್ತು ಚಕ ಅಸಲು ರೂ 300 ವ ಇದರ ಮೇಲಿನ ಬಡ್ಡಿ ವಗೈರೆಯನ್ನು ವಸೂಲು ಮಾಡುವರೆ ಅರ್ಜಿದಾರರ ಬಗ್ಗೆ 2ನೇ ಅರ್ಜಿದಾರ ಗೋವಿಂದನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡತಕ್ಕದೆಂತ ವಗೈರೆ ಖಾಷ್ಟೆ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿ ತಾ. 19-8-40ಕ್ಕೆ ಮೇಲೆ ಕಾಣುವ ಕೋರ್ಟಿನಲ್ಲಿ ತಖ್ತಿಗೆ ಇಡಲಾಗಿಯದೆ ಎಂಬ ಸಂಗತಿ ಈ ಮೂಲಕ ಎಲ್ಲಾ ಜನರಿಗೆ ತಿಳಿಸಲಾಗಿದೆ.

Coondapur 28-7-1940 } **B. S. Shetty**
B. A., B. L.
Vakil for Petitioners

ಅಹಿಂಸೆಯನ್ನು ಮೂರು ಕ್ಷೇತ್ರಗಳಲ್ಲಿ ಹೇಗೆ ಪ್ರಯೋಗಿಸಬಹುದೆಂಬ ವಿಷಯವನ್ನು ನಾನು ಹಿಂದೆ ತಿಳಿಸಿದ್ದೇನೆ. ಈಗ ಅತ್ಯಂತ ಮುಖ್ಯವಾದ ನಾಲ್ಕನೆಯ ಕ್ಷೇತ್ರದಲ್ಲಿ ಅಹಿಂಸೆಯ ಪ್ರಯೋಗದ ಕುರಿತು ಬರೆಯುತ್ತೇನೆ. ಇದೇ ನಮ್ಮ ಕುಟುಂಬದ ಕ್ಷೇತ್ರ. ಅಹಿಂಸೆಯನ್ನು ಉಪಯೋಗಿಸಲು ಇದು ಅತ್ಯುತ್ತಮ ಕ್ಷೇತ್ರವಾಗಿದೆ. ಒಂದು ಸಂಸ್ಥೆಯ ಸರ್ವ ಸದಸ್ಯರೂ ತಾವು ಒಂದು ಕುಟುಂಬದ ಸದಸ್ಯರೆಂದು ತಿಳಿದುಕೊಂಡರೆ ಕಾರ್ಯವು ಆಗ ಸುಲಭವಾಗುವುದು. ಕುಟುಂಬದಲ್ಲಿ ಅಹಿಂಸೆಯ ಪ್ರಯೋಗ ಮಾಡುವ ಕಾರ್ಯದಲ್ಲಿ ನಾವು ಜಯಶೀಲರಾಗದಿದ್ದರೆ, ನಮ್ಮ ಕುಟುಂಬದ ಸದಸ್ಯರಲ್ಲಿ, 'ಅಪ್ತೇಷ್ಟರಲ್ಲಿ ನಾವು ಅಹಿಂಸೆಯನ್ನು ಪ್ರಯೋಗಿಸಲಾರೆವಾದರೆ ನಾವು ಹೋರಾಟವನ್ನು ಹೇಗೆ ಇದಿರಿಸಬಲ್ಲೆವು'?

ಕುಟುಂಬವೇ ಅಹಿಂಸೆಯ ಪ್ರಯೋಗ ಶಾಲೆ!

— ಗಾಂಧಿಜಿಯವರ ಲೇಖನ —

ಇನ್ನೊಬ್ಬ ಉಪದೇಶಕನು ಉದಿಸುವ ವರೆಗೆ

ಹೀಗೆಂದು ಗಾಂಧಿಜಿಯವರು ಒಂದು ಮಹತ್ವದ ಲೇಖನವನ್ನು ಬರೆಯುತ್ತಾ ಹೀಗೆಂದು ವಿವರಿಸುತ್ತಾರೆ —

'ಕುಟುಂಬದೊಳಗೆ ನಾವು ಅಹಿಂಸೆಯನ್ನು ಪ್ರಯೋಗಿಸಲು ಸಾಧ್ಯವಿಲ್ಲದಿದ್ದರೂ, ರಾಜಕೀಯದಲ್ಲಿ ಅದನ್ನು ಉಪಯೋಗಿಸಬಹುದೆಂದು ತಿಳಿಯುವುದು ಶುದ್ಧ ತಪ್ಪು ಭಾವನೆಯಾಗಿದೆ. ಅಹಿಂಸೆಯು ನಿರಂತರ ಅಭ್ಯಾಸಬಲದಿಂದ ನಮ್ಮಲ್ಲಿ ಬರಬೇಕಾಗಿದೆ. ಹಾಗೆ ಅಭ್ಯಾಸ ಮಾಡಿದಾಗ ಮಾತ್ರ ಅಹಿಂಸೆಯನ್ನು ಬೇಕಾದಲ್ಲಿ ಉಪಯೋಗಿಸಲು ಒದಗಬಹುದು. ಒಂದು ಕಡೆಯಲ್ಲಿ ಅದು ಉಪಯೋಗಿಸಿದಲ್ಲಿ ಅಪ್ರಯೋಜಕವಾಗುವುದಾದರೆ ಇನ್ನೊಂದು ಕಡೆ ಅದು ಪ್ರಯೋಜನಕಾರಿಯಾಗಿ ಹೇಗೆ ಆದೀತು? ಅಹಿಂಸೆಯ ಮೊದಲ ಪಾಠವು ಮನೆಯಲ್ಲಿಯೇ ಆಗಬೇಕು. ಅಹಿಂಸೆಯನ್ನು ಅಭ್ಯಸಿಸಿಕೊಂಡವನಿಗೆ ಇಡಿಯ ಲೋಕವೇ ಒಂದು ಕುಟುಂಬವಾಗುವುದು. ಅಂತಹವನು ಯಾರಿಗೂ ಹೆದರುವುದಿಲ್ಲ. ಅವನಿಗೂ ಯಾರೂ ಹೆದರುವುದಿಲ್ಲ.

'ಇಂತಹ ರೀತಿಯಲ್ಲಿ ಅಹಿಂಸೆಯ ಶಿಕ್ಷಣ ಪಡೆಯುವವರ ಸಂಖ್ಯೆಯು ಅತ್ಯಲ್ಪವಾಗಿದೆ. ಆದರೆ ಇಂತಹ ಶಿಕ್ಷಣವನ್ನು ಪಡೆಯುವುದು ಸಂಪೂರ್ಣ ಸಾಧ್ಯವಿದ್ದುದಾಗಿದೆ. ಅಹಿಂಸಾ ಸೈನ್ಯವು ಬಹಳ ಚಿಕ್ಕದಿರಬಹುದು. ಆದರೆ ಒಂದು ದಿನ ಪ್ರಬಲವಾಗದೆ ಇರಲಾರದು. ಸಂಪೂರ್ಣ ಅಹಿಂಸೆಯನ್ನು ಅಭ್ಯಸಿಸಿದವರ ಸೈನ್ಯವು ಇಂದಿಷ್ಟು ಪ್ರಬಲವಾಗಿ ಕಂಡುಬಂದರೂ ಅದರಿಂದ ಲೋಕಕ್ಕೆ ಹೆಚ್ಚಿನ ಪ್ರಯೋಜನವು ಒದಗಲಾರದು.

'ಹೀಗಾದುದರಿಂದ ತಮ್ಮ ಜೀವನವನ್ನು ಅಹಿಂಸೆಯಲ್ಲಿ ಯಾರು ಎರಕಹೊಯ್ಯಬಲ್ಲರೋ ಅಂತಹವರು ಮಾತ್ರ ಅಹಿಂಸಾ ಸೈನಿಕರಾಗಬಹುದು ಎಂದು ತಿಳಿಯಬಾರದು. ಅದನ್ನು ಸಾಧಿಸಲು ಪ್ರಯತ್ನಿಸುವವರು ತಮ್ಮಿಂದಾದ ಎಲ್ಲಾ ಪ್ರಯತ್ನದಿಂದಲೂ ಅದನ್ನು ನಡೆಸುವವರು ಅಹಿಂಸಾ ಸೈನಿಕರಾಗಿರಲು ಅಧಿಕಾರವುಳ್ಳವರಾಗುತ್ತಾರೆ. ಸಂಪೂರ್ಣ ಅಹಿಂಸಾತ್ಮಕ ಸೈನ್ಯವು ಎಂದಿಗೂ ಇರಲಾರದು. ಆದರೆ ಅದಕ್ಕಾಗಿ ಪ್ರಯತ್ನಿಸುವುದರಿಂದ ಅದನ್ನು ತಯಾರಿಸಲು ಸಂಪೂರ್ಣ ಸಾಧ್ಯವಿದೆ. ಕಳೆದ ಐವತ್ತು ವರ್ಷಗಳಿಂದ ನಾನು ಪೂರ್ಣ ಅಹಿಂಸಾ ವ್ರತಿಯಾಗಿ ಆ ಮೂಲಕ ಕಾರ್ಯಗಳನ್ನು ಮಾಡಿ ಆದರ್ಶನಾಗಲು ಪ್ರಯತ್ನಿಸಿ ಸಾಮಾನ್ಯ ಕೃತಕೃತ್ಯನಾಗಿರುವೆನು. ನನ್ನ ಸುತ್ತಲೂ ತುಂಬುತ್ತಿರುವ ಕತ್ತಲೆಯು ನನ್ನ ವಿಶ್ವಾಸವನ್ನು ಮತ್ತೂ ದೃಢಪಡಿಸುತ್ತದೆ. ಅಹಿಂಸೆಯ ಪ್ರಯೋಜನವು ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ.

ಇನ್ನೊಬ್ಬ ಅಹಿಂಸಾಚಾರ್ಯನು ಉದಯಿಸುವ ವರೆಗೆ

ಕಾಂಗ್ರೆಸ್ಸಿನ ಸದಸ್ಯರಾಗಿರುವವರ ಮತ್ತು ಅಹಿಂಸೆಯಲ್ಲಿ ವಿಶ್ವಾಸವುಳ್ಳವರು ತಮಗೆ ಅಹಿಂಸೆಯಲ್ಲಿ ವಿಶ್ವಾಸವುಂಟೆಂಬುದನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದೆ, ಸಮಯ ಬಂದರೆ, ಕಾಂಗ್ರೆಸ್ ಮಹಾ ಸಮ್ಮೇಳನದ ಮುಂದೆ ಪ್ರಕಟಪಡಿಸುವುದೇ ಅವರ ಕರ್ತವ್ಯವಾಗಿದೆ. ಹೀಗೆಂದು ಗಾಂಧಿಸೇವಾ ಸಂಘದ ಸದಸ್ಯರಿಗೆ ಗಾಂಧಿಜಿಯವರು ಉಪದೇಶವಿತ್ತಿರುವರು.

ಗಾಂಧಿಜಿಯವರು ಹೀಗೆಂದರು —

'ನಿಮ್ಮ ಅಹಿಂಸಾ ಶ್ರದ್ಧೆಯು ನಿಜವಾಗಿದ್ದರೆ ಅದು ನಿಮ್ಮ ನಿತ್ಯ ಜೀವನದ ಒಂದು ಅಂಗವೇ ಆಗಿರಬೇಕು. ನಿಮ್ಮ ಮನೋವಾಕ್ಕಾಯಗಳಲ್ಲಿ ಅದನ್ನು ಆಚರಿಸಬೇಕು. ಹಾಗಾದರೆ, ಆಗ ಮಾತ್ರ ನೀವು ಅಹಿಂಸೆಯಲ್ಲಿ ವಿಶ್ವಾಸವುಳ್ಳವರೆಂದು ವರ್ಕಿಂಗ್ ಕಮಿಟಿಗೆ ಬರವಸೆಯಿತ್ತಂತಾಗುವುದು. ಆಗ ಮಾತ್ರ ಅವರ ನಿರ್ಧಾರವನ್ನು ಬದಲಾಯಿಸಲು ನೀವು ಒತ್ತಾಯ ಮಾಡಬಹುದು.

'ಆದರೆ ಇಂತಹ ಅಹಿಂಸೆಯ ಸಾಧನೆಗೆ ಸಾವಿರಾರು ವರ್ಷಗಳು ಹಿಡಿಯಬಹುದೆಂದು ಹೇಳುವಿರಿ. ಕೆಲವರಿಗೆ ಸಾವಿರಾರು ವರ್ಷಗಳು ಹಿಡಿಯಬಹುದು. ಕೆಲವರಿಗೆ ಒಂದೇ ವರ್ಷದಲ್ಲಿ ಸಿದ್ಧಿಸಬಹುದು. ನಾನು ಐವತ್ತು ವರ್ಷಗಳ ಪ್ರಯತ್ನದ ಇನ್ನೂ ಸಂಪೂರ್ಣ ಅಹಿಂಸೆಯುಳ್ಳವನಾಗಿಲ್ಲವೆಂಬುದರಿಂದ ನಿಮಗೆ ನಿರಾಶೆ ಬೇಕಾಗಿರುವುದೇ? ವಿಚಾರಿಸಬೇಡಿ. ಹಾಗೆಂದು ಯಾವ ನಿಯಮವೂ ಇಲ್ಲ. ನನಗಿಂತ ಮೊದಲು ನೀವು ಕೃತಾರ್ಥರಾಗಬಹುದು.

'ನಾನು ವಿಚಾರಿಸಿದ್ದನ್ನು ವರ್ಕಿಂಗರಿಗೆ ಹೇಳಿದ್ದೇನೆ. ನಿಮ್ಮಲ್ಲಿ ವೀರರ ಹಿಂಸೆಯಿದೆ; ನನ್ನಲ್ಲಿ ಅದಿರಲಿಲ್ಲ. ನೀವು ಅಹಿಂಸೆಯನ್ನು ಅಭ್ಯಸಿಸಬೇಕೆಂದು ವಿಶ್ವಾಸವಿಟ್ಟರೆ ವೀರರ ಅಹಿಂಸೆಯನ್ನು ಅಭ್ಯಸಿಸಬಲ್ಲಿರಿ. ನನಗಿಂತ ಬೇಗನೇ ನೀವದನ್ನು ಕಲಿಯಬಹುದು' ಇದನ್ನು ನಾನು ನಿಮಗೆಲ್ಲರಿಗೂ ಹೇಳುತ್ತೇನೆ. ಆಫ್ರಿಕದಲ್ಲಿ ಮೊದಲಾಗಿ ಜೋಡು ಹೊಲಿಯಲು ನಾನು ಕಲಿತೆ. ನನ್ನ ನಂತರದವರು ನನ್ನನ್ನು ಅದರಲ್ಲಿ ಮೀರಿಸಿದರು. ನಾನು ಅಹಿಂಸೆಯಲ್ಲಿಯೂ ಸತ್ಯವಂತನಾದ ಉಪದೇಶಕನಾದರೆ ನೀವೆಲ್ಲರೂ ನನ್ನನ್ನು ಹಿಂದೆ ಹಾಕುವಿರಿ. ಇದಾಗದಿದ್ದರೆ ನಾನು ಉಪದೇಶಕನಾಗಲು ಅಯೋಗ್ಯನೆಂದಾಯಿತು. ಹಿಟ್ಲರನು ಹಿಂಸೆಯಲ್ಲಿಯೇ ತನ್ಮಯನಾಗಿರುವಂತೆ ನೀವು ಅಹಿಂಸೆಯಲ್ಲಿಯೇ ತನ್ಮಯರಾಗಿರಬೇಕು.

'ವರ್ಕಿಂಗ್ ಕಮಿಟಿಯ ನಿರ್ಣಯವು ನಮ್ಮ ಸುತ್ತುಮುತ್ತಲಿನ ಪ್ರತಿಧ್ವನಿ ಮಾತ್ರ. ನನ್ನ ನಿರ್ಣಯವು ಅದರ ಪ್ರತಿಧ್ವನಿಯಾಗಕೂಡದು. ಅಂದರೆ ಅಹಿಂಸೆಯೇ ನನ್ನ ಜೀವನ ಸಾಧನೆ; ಕಾಂಗ್ರೆಸ್ಸಿನದಲ್ಲ. ನಾನು ವರ್ಕಿಂಗ್ ಕಮಿಟಿಯವರನ್ನು ಅವರ ಪ್ರಾಮಾಣಿಕತೆಗೆ ಅಭಿನಂದಿಸುತ್ತೇನೆ. ಅವರೊಡನೆ ಅವರನ್ನು ಅಹಿಂಸೆಯಲ್ಲಿ ಪಳಗಿಸಲಾರದ ನನ್ನ ದೌರ್ಬಲ್ಯಕ್ಕಾಗಿ ವಿಷಾದಿಸುತ್ತೇನೆ.

'ನಾವು ಅಹಿಂಸೆಯಲ್ಲಿ ವಿಶ್ವಾಸ ತೋರಿಸಬೇಕಾದರೆ ರಚನಾತ್ಮಕ ಕಾರ್ಯಗಳನ್ನು ಮಾಡಬೇಕು. ಅಹಿಂಸೆಯ ಕಾರ್ಯಕ್ರಮವೇ ಅದಾಗಿದೆ. ರಚನಾತ್ಮಕ ಕಾರ್ಯಗಳನ್ನು ಮಾಡುವ ಮೊದಲು ಅಹಿಂಸೆಯನ್ನು ಮುಂದಿಟ್ಟದ್ದು ನನ್ನ ತಪ್ಪು. ಆ ದೊಡ್ಡ ತಪ್ಪಿನಿಂದ ನನಗೆ ಲಾಭ ಸಿಗಲಿಲ್ಲ. ನಾನು ಆ ತಪ್ಪಿಗಾಗಿ ದುಃಖಿಸುವುದಿಲ್ಲ. ಅಪಜಯ ಮತ್ತು ಅಪೂರ್ಣತೆಗಳು ನನಗೆ ಆಶೀರ್ವಾದವನ್ನು ಕೊಟ್ಟಿವೆ. ನಾನು ನನ್ನ ಜಯದಂತೆ ಅಪಜಯವನ್ನೂ ಆತನ ಅಡಿಯಲ್ಲಿ ಅರ್ಪಿಸುತ್ತೇನೆ.

'ಇಂತಹ ಪ್ರಬಲ ಪ್ರಯೋಗದಲ್ಲಿ ನನ್ನಂತಹ ಅಪೂರ್ಣನನ್ನು ಯಾಕೆ ನೇಮಿಸಿದನೋ ತಿಳಿಯುವುದಿಲ್ಲ. ಬಹುಶಃ ಆತನು ಉದ್ದೇಶಪೂರ್ವಕವಾಗಿ ಹಾಗೆ ಮಾಡಿರಬೇಕು. ಒಬ್ಬ ಪೂರ್ಣತೆಯನ್ನು ಹೊಂದಿದವನು ಬಂದಿದ್ದರೆ ಅವನನ್ನು ಜನರು ತಿಳಿದುಕೊಳ್ಳಲು ಅಸಮರ್ಥರಾಗುತ್ತಿದ್ದರು. ಆದರೆ ಅಪೂರ್ಣನೊಬ್ಬನು, ಅವರ ಮನೋಭಾವನೆಯುಳ್ಳಂತಹವನೊಬ್ಬನು ಅಹಿಂಸೆಯ ಆದರ್ಶದ ಕಡೆಗೆ ಧಾವಿಸುತ್ತಿರುವಾಗ ಅವರು ಅದನ್ನು ಅರಿತುಕೊಳ್ಳಬಹುದು. ಒಬ್ಬ ಪೂರ್ಣತೆಯನ್ನು ಹೊಂದಿದವನು ಬಂದಿದ್ದರೆ ನಾವು ಆತನನ್ನು ಗುಹೆಗೆ ಕಳುಹಿಸುತ್ತಿದ್ದೆವು. ನನ್ನನ್ನು ಹಿಂಬಾಲಿಸುವವನು ನನಗಿಂತ ಹೆಚ್ಚು ಪೂರ್ಣನಾಗುವಂತಾಗಲಿ! ನೀವು ಆತನ ಸಂದೇಶವನ್ನು ಪಡೆಯುವಿರಿ. ಅಂತಹ ಪೂರ್ಣತೆಯ ಉಪದೇಶಕನು ನಿಮ್ಮಲ್ಲಿ ಯಾರಾದರೂ ಒಬ್ಬನು ಆಗುವಂತಾಗಲಿ!'



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ-ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದಕ್ಕೊಂದರೆ ಉಳಿಯುವುದಿಲ್ಲ, ಜೀರ್ಣಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರು ಕೂಡ ಉಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೩ ಔ, ೬ ಔ ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ. ೨-೨-೦, ೩-೧೨-೦ ಮತ್ತು ೬-೮-೦ಗಳಿಗೆ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಮುಂಬಯಿಯ ಸೋಲ್ ಏಜಂಟರು

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

ಹಿಟ್ಲರನು ಎಂದಾದರೂ ಬ್ರಿಟನನ್ನು ಆಕ್ರಮಿಸಬಲ್ಲನೇ?

ನೆಲ-ಜಲ-ಆಕಾಶಮಾರ್ಗಗಳಲ್ಲಿ ಭದ್ರವಾಗಿರುವ ಬ್ರಿಟನು!

ಫ್ರಾನ್ಸಿನ ಪತನವಾದ ನಂತರ, ಬ್ರಿಟನಿಗೆ ಹಿಟ್ಲರನು ದಾಳಿಯಿಡಬಹುದೋ ಎಂಬೀ ವಿಷಯವು ಇಂದು ಜಗತ್ತಿನ ಜನರ ವಿಚಾರಧಾರೆಯಲ್ಲಿ ನಿರಂತರ ಹರಿಯತೊಡಗಿದೆ. ಯುರೋಪಿನಲ್ಲಿರುವ ಸ್ವತಂತ್ರ ರಾಷ್ಟ್ರಗಳು ಹಲವನ್ನು ಒಂದರ ಮೇಲೊಂದಾಗಿ ನುಂಗಿ ನೀರ್ಕುಡಿದ ಹಿಟ್ಲರನ ಸ್ವಭಾವ ಪರೀಕ್ಷೆಯಿದ್ದವರಿಗೆ ಆತನು ಯಾವುದೇ ತರದ ದಾಳಿಯ ಯತ್ನವನ್ನು ಮಾಡಿದರೂ ಅದು ಆಶ್ಚರ್ಯವೆನಿಸಲಾರದು. ಆದರೆ, ಬ್ರಿಟನು ತಾನು ಬಹುಕಾಲದ ಹಿಂದಿನಿಂದಲೇ ಇದ್ದಂತೆ, ಇಂದೂ ಕೂಡಾ ಅತ್ಯಂತ ಪ್ರಬಲವಾಗಿ, ಬಲಿಷ್ಠವಾಗಿ ದುರ್ಭೇದ್ಯವಾಗಿಯೇ ಇದೆ. ಆದಕಾರಣ ಇಂದು ಬ್ರಿಟನಿನ ಮೇಲೆ ದಾಳಿಯಿಡುವ ಹಿಟ್ಲರನ ಮಹತ್ವಾಕಾಂಕ್ಷೆಯ ಪರಿಣಾಮದ ಕುರಿತು ಇತಿಹಾಸದ ಮುಂದಿನ ಘಟನೆಗಳೇ ಸ್ಪಷ್ಟ ತಿಳಿಸಬಲ್ಲವು

ಹಿಟ್ಲರನು ಯುರೋಪಿನ ಹಲಕೆಲವು ರಾಷ್ಟ್ರಗಳನ್ನು ಪತನಗೊಳಿಸಿದನೆಂಬುದನ್ನು ನೋಡಿ, ಆತನು ಇಂದು ಯುರೋಪಿನ ರಾಜಕಾರಣದಲ್ಲಿ ಅತ್ಯಂತ ಬಲಿಷ್ಠನೆಂದು ವಿಚಾರಿಸುವುದು ಸರಿಯಲ್ಲ. ಪೋಲೆಂಡು, ಬೆಲ್ಜಿಯಂ, ಹಾಲೆಂಡು, ಫ್ರಾನ್ಸು ಮೊದಲಾದ ರಾಷ್ಟ್ರಗಳನ್ನು ಗೆದ್ದು, ಯುರೋಪಿನ ವಿಶಾಲ ಭೂಕ್ಷೇತ್ರವನ್ನು ಹಿಟ್ಲರನು ಸ್ವಾಧೀನಪಡಿಸಿಕೊಂಡಿರುವನೆಂಬುದೂ, ಆತನು ಇದರಿಂದ ಬ್ರಿಟನಿನ ದಾಳಿಗೆ ಯತ್ನಿಸುತ್ತಿರುವನೆಂಬುದೂ ಸತ್ಯವಾದುದಾಗಿದೆ

ಹಿಟ್ಲರನು ಬ್ರಿಟನನ್ನು ಆಕ್ರಮಿಸುವುದರಿಂದ ಮಾತ್ರ ಯುದ್ಧದಲ್ಲಿ ಜಯಿಸಬಹುದಾಗಿದೆ ಆದರೆ ಹಿಟ್ಲರನಿಗೆ ಹಾಗೆ ಆಕ್ರಮಣ ಮಾಡುವ ಯಾವ ಸುಲಭ ಉಪಾಯಗಳು ಇಲ್ಲ. ಹಿಟ್ಲರನನ್ನು ಸರ್ವತ್ರ ಬಂಧನ ಮಾಡಿದ ಬ್ರಿಟಿಷ್ ರಾಜನೀತಿಯಿಂದ ಮುಂದಕ್ಕೆ ಯಾವುದೇ ರೀತಿಯ ಸಹಾಯ ಸಾಮಗ್ರಿಗಳೂ ಪ್ರಪಂಚದ ಯಾವುದೇ ಭಾಗದಿಂದಲೂ ಹಿಟ್ಲರನಿಗೆ ಬರುವಂತಿಲ್ಲ. ರುಮೇನಿಯದಲ್ಲಿ—ಬಾಲ್ಕನಿನಲ್ಲಿ ರಶ್ಯವು ತೆಗೆದುಕೊಳ್ಳುವ ಹಜ್ಜೆಯನ್ನು ನೋಡಿದರೆ ರಶ್ಯವು ಇಂದಿನ ಜರ್ಮನಿಯ ಧೋರಣೆಯಲ್ಲಿ ಸಮ್ಮತಿಯಿಂದಿರುವುದಾಗಿ ಅರ್ಥವಾಗುವುದಿಲ್ಲ. ಹಿಂದೆ ಯಾವುದರ ಆಕ್ರಮಣಕ್ಕಾಗಿ ನೆಪೋಲಿಯನ್ ಯತ್ನಿಸಿ ಸೋತಿದ್ದನೋ ಅದನ್ನು ಆಕ್ರಮಿಸಲು ಹಿಟ್ಲರನೂ ಹಠತೊಟ್ಟಿದ್ದಾನೆ. ಅಗಸ್ಟ್ ೧೫ರ ಒಳಗೆ ಆಕ್ರಮಿಸುವೆನೆಂದಿದ್ದಾನೆ. ಆದರೆ ಇಂಗ್ಲಾಂಡಿನಂತಹ ಪ್ರಬಲ ಭೂಮಿಯನ್ನು ಆಕ್ರಮಿಸುವುದು ಅಷ್ಟು ಸುಲಭವೇ?

ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್

ಜಲಮಾರ್ಗದಿಂದ ಹಿಟ್ಲರನು ಬ್ರಿಟನಿನ ದಾಳಿಗೆ ಬೇಕಾದಷ್ಟು ಸೈನ್ಯವನ್ನು ತೆಗೆದುಕೊಂಡು ಹೋಗಲು ಸಿದ್ಧತೆ ಮಾಡಿರಬಹುದು. ಆತನಿಗೆ ಅದಕ್ಕೆ ಸಾಕಾದಷ್ಟು ಸೈನ್ಯವೂ ಹಡಗೂ ಇವೆ ಮಾತ್ರವಲ್ಲದೆ ಈಗ ಬೇಕಾದ ಬಂದರಗಳೂ ಹೊರಡಲಿಕ್ಕೆ ಅನುಕೂಲ ಇವೆ. ಪ್ರಪಂಚದಲ್ಲಿ ಮಿಗಿಸಲಾರದ ಪರಾಕ್ರಮಶಾಲಿಗಳಾದ ಬ್ರಿಟಿಷ್ ನೌಕಾಪಡೆಯವರನ್ನು ಹಿಂದಟ್ಟಿ ಜರ್ಮನ್ ನೌಕಾಪಡೆಯವರು ಮುಂದೊತ್ತಿ ಬರುವರೆಂಬ ವಿಚಾರವು ಮಾತ್ರ ಬರಿಯ ಕನಸಿನ ಮಾತಾಗಿದೆ

ಇಂದಿನ ಯುದ್ಧದಲ್ಲಿ ಹಡಗುಪಡೆಯು ಪ್ರಯೋಜನವಿಲ್ಲ ವಿಮಾನ ಸೈನ್ಯವು ಮುಖ್ಯ, ಜರ್ಮನರು ಅದರಲ್ಲಿ ಪ್ರಬಲರೆಂದು, ನಾರ್ವೆಯನ್ನು ಆಕ್ರಮಣ ಮಾಡಿದ ಉದಾಹರಣೆಯೆತ್ತಿ ಜರ್ಮನರೇ ಪ್ರಚಾರ ಮಾಡುತ್ತಾರೆ ಅಲ್ಲಿ ಬ್ರಿಟಿಷ್ ಸೈನಿಕರಿದ್ದರೂ, ಜರ್ಮನರನ್ನು ತಡೆಯಲಾಗಲಿಲ್ಲವೆಂಬುದು ಸತ್ಯ. ನಾರ್ವೆಯು ಹಿಂದಿನಿಂದಲೇ ಜಾಗ್ರತೆ ವಹಿಸಿಕೊಂಡಿದ್ದರೆ ಅದರ ಇಂದಿನ ಕಥೆಯೇ ಬೇರಿತ್ತು. ಬ್ರಿಟಿಷ್ ಹಡಗು ಪಡೆಯು ಅಲ್ಲಿ ಬಂದು ತಳವೂರುವ ಮೊದಲೇ ಜರ್ಮನರ ಕಾರಭಾರವು ನಡೆದಿತ್ತು. ಮಾತ್ರವಲ್ಲದೆ ಡಂಕರ್ಕಿನಲ್ಲಿ ಬ್ರಿಟಿಷ್ ವೈಮಾನಿಕ ಪಡೆಯು ತೋರಿದ ಸಾಹಸದಿಂದ, ವಿಮಾನ ದಾಳಿಯನ್ನು ತಡೆವ ಶಕ್ತಿ ಬ್ರಿಟಿಷ್ ನೌಕಾಪಡೆಗಿದೆಯೆಂಬುದು ವ್ಯಕ್ತವಾಗಿದೆ ಇದು ಹಿಟ್ಲರನಿಗೂ ಚೆನ್ನಾಗಿ ತಿಳಿದೇ ಇದೆ

ಬ್ರಿಟಿಷ್ ನೌಕಾ ಸೈನ್ಯದ ಈ ಪ್ರಾಮುಖ್ಯತೆಯನ್ನು ಅರಿತೇ ಹಿಟ್ಲರನು ಫ್ರಾನ್ಸಿನ ನೌಕಾ ಸೈನ್ಯವನ್ನು ವಶಪಡಿಸಬೇಕಾಗಿ ಅಪೇಕ್ಷಿಸಿದನು ಆದರೆ ಫ್ರೆಂಚ ನೌಕಾಪಡೆಯನ್ನು ಜರ್ಮನರ ವಶಪಡಿಸದಂತೆ, ಬ್ರಿಟಿಷರು ಮಾಡಿದ ಯತ್ನದ ಸಫಲತೆಯಿಂದ ಹಿಟ್ಲರನು ಬಲಗುಂದಿದವನಾಗಿದ್ದಾನೆ. ಆದಕಾರಣ, ಮುಂದೆ ಹಿಟ್ಲರನು ವಿಮಾನದಾಳಿಯೊಂದನ್ನೇ ಅವಲಂಬಿಸಿ ಇರಬೇಕಾಗಿದೆಯಲ್ಲದೆ ಬೇರೆ ದಾರಿಯಿಲ್ಲ.

ಆ ಮೇಲೆ ಜರ್ಮನ್ ಸೈನಿಕರು ಹೋಗಿ ಇಳಿಯುವ ಸ್ಥಳಗಳ ವಿಷಯವಾದ ಸಮಸ್ಯೆಯಿದೆ. ಬ್ರಿಟಿಷ್ ವಿಮಾನದಳವು ಇದನ್ನು ಮಾಡಬಿಡಲಾರದು. ಮಾತ್ರವಲ್ಲದೆ ಬ್ರಿಟಿಷ್ ಕರಾವಳಿಯ ಸುತ್ತು ಬಿಕ್ಕಿರುವ ಕೋಟೆಗಳನ್ನು ದಾಟಿ ಜರ್ಮನ್ ಹಡಗುಗಳೂ ಬ್ರಿಟನಿಗೆ ಬರುವುದು ಅಸಾಧ್ಯ ವಿಚಾರವಾಗಿದೆ ಇಷ್ಟೆಲ್ಲಾ ಆದರೂ ಕೂಡಾ, ಬಂದಿಳಿದ ಸೈನ್ಯಗಳಿಗೆ ಮುಂದಕ್ಕೆ ಆಹಾರ ಸಾಧನ ಸಾಮಗ್ರಿಗಳನ್ನು ತರಿಸುವ ಯೋಜನೆಯು ಕಷ್ಟವೇ ಆಗಿದೆ ರಾತ್ರಿಕಾಲದಲ್ಲಿಯೇ ಹೇಗಾದರೂ ಬಂದು ಜರ್ಮನ್ ಸೈನಿಕರು ಇಳಿದರೂ, ಬ್ರಿಟನಿನ ಪ್ರಬಲ ಸೈನ್ಯವು ಯುದ್ಧಕ್ಕೆ ತೊಡಗಿದರೆ, ಜರ್ಮನ್ ಸೈನಿಕರಿಗೆ ಹೊರಗಿನ ಸಹಾಯ ಒದಗಿ ಬರುವುದು ಅತ್ಯಂತ ಅಸಾಧ್ಯವಾದುದು. ಆದಕಾರಣ ಹಿಟ್ಲರನು ಯಾವುದೇ ದಾರಿಯಿಂದಲಾಗಲಿ ಬ್ರಿಟನನ್ನು ಎಂದಾದರೂ ಆಕ್ರಮಿಸಿ ಸೋಲಿಸಿ ಬಿಡಬಹುದೆಂದು ತಿಳಕೊಳ್ಳುವುದು ಬರಿಯ ಭ್ರಮೆಯ ಕಲ್ಪನೆಯೇ ಆಗಿದೆ

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,— ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಈ ವಾರದ ಕಥೆ:

ವಿಶ್ವಾಸಘಾತ!

ಕತೆಗಾರ್ತಿಯರು. 'ಶ್ರೀಮತಿ ಲಕ್ಷ್ಮಿ'

ನಾನು ನನ್ನ ಮಿತ್ರ ರಮೇಶನ ಮನೆಯಿಂದ ಹಿಂದಿರುಗುತ್ತಿದ್ದೆ. ಮಾರ್ಗ ತಿರುಗುವಲ್ಲಿ ಡಾ। ಸುಧಾಕರನು ನನಗೆ ಭೇಟಿಯಾದನು. ನಾವಿಬ್ಬರೂ ಸ್ಯಾಕಲಿನಿಂದ ಕೆಳಗಿಳಿದು ಮುಂದುವರಿದೆವು.

ಸುಧಾಕರನ ಸ್ಯಾಕಲಿನ ಮುಂಭಾಗಕ್ಕೆ ಒಂದು ಗುಲಾಬಿ ಹೂವಿನ 'ಬುಕ್ಕೆ' ಕಟ್ಟಿದ್ದಿತು. ಅವನಿಗೆ ಗುಲಾಬಿ ಹೂ ಎಂದರೆ ಪ್ರಾಣ. ಇದನ್ನರಿತವರು ತಮ್ಮ ಮನೆಗೆ ಅವನನ್ನು ಕರಕೊಂಡು ಹೋದಾಗ ಮನೆಯಲ್ಲಿ ಹೂ ಇದ್ದರೆ ಒಂದೊಂದು ಬುಕ್ಕೆಯನ್ನು ಕಟ್ಟಿಕೊಡುತ್ತಿದ್ದರು. ಈ ದಿನ ಕೂಡಾ ಯಾರೋ ಹಾಗೆಯೇ ಅವನಿಗೆ ಅದನ್ನು ಕೊಟ್ಟಿರಲಿಕ್ಕೆ ಸಾಕು.

ನಾವು ಮುಂದುವರಿಯುತ್ತಾ ಇದ್ದಾಗ ಮಾರ್ಗದ ಬದಿಯಿಂದ ಕೋಮಲೆಯಾದ ಬಾಲೆಯೊಬ್ಬಳು ಬಂದು 'ಮಾಮಾ ಆ ಹೂವನ್ನು ನನಗೆ ಕೊಡು.' ಎಂದು ಕೇಳಿದಳು. ಅವಳ ಮಾತನ್ನು ಸುಧಾಕರನಿಂದ ಅಲ್ಲಗಳೆಯಲು ಆಗಲಿಲ್ಲ. ಹೂವಿನ ಬುಕ್ಕೆಯನ್ನು ತೆಗೆದುಕೊಂಡು ಬಾಲೆಯು ನಲಿಯುತ್ತಾ ಕುಣಿಯುತ್ತಾ ಆನಂದದಿಂದ ತನ್ನ ಮನೆಯ ಕಡೆಗೆ ತಿರುಗಿದಳು. ನಾನು ಅತ್ತ ನೋಡಿದಾಗ ಕಿಟಿಕಿಯಿಂದ ಓರ್ವ ತರುಣಿಯು ಇಣಿಕಿ ನಗುತ್ತಿದ್ದಳು.

ಇಷ್ಟರಲ್ಲಿ ನಾವು ಒಂದು ಅಂಗಡಿಯಲ್ಲಿ ಸಿಗರೇಟು ತಕ್ಕೊಂಡು ಮುಂದುವರಿದೆವು. ಆದರೆ ಸುಧಾಕರನು ಮುಂಚಿನ ಹಾಗೆ ಸಂತೋಷದಿಂದ ಇರಲಿಲ್ಲ. ಯೋಚನಾ ಪರವಶನಾಗಿದ್ದ. ಅವನ ಮೋರೆಯಲ್ಲಿ ಉದಾಸೀನತೆ ಕಾಣುತ್ತಿತ್ತು. ಇದನ್ನು ಕಂಡು ನಾನು ಅವನನ್ನು ಕೇಳಿದೆ 'ಮಿತ್ರಾ ಆ ಹೂವನ್ನು ನೀನಿಷ್ಟು ಪ್ರೀತಿಸುತ್ತಿದ್ದರೆ ಅದನ್ನು ಆ ಬಾಲೆಗೆ ಏಕೆ ಕೊಟ್ಟೆ?'

'ನಾನು ಹೂವಿಗೋಸ್ಕರ ಉದಾಸೀನನಾಗಲಿಲ್ಲ. ನನಗೆ ಕೆಲವು ವರ್ಷಗಳ ಹಿಂದೆ ನಡೆದಿರುವ ಘಟನೆ ಈಗ ನೆನಪಾಗಿ ಮಾಸಿಹೋದ ಗಾಯಕ್ಕೆ ಬರೆ ಎಳೆದಂತಾಯಿತು' ಎಂದು ಸುಧಾಕರನು ಹೇಳತೊಡಗಿದನು.

'ನಾನು ಆಗ ಕಲ್ಕತ್ತೆಯ ಒಂದು ಆಸ್ಪತ್ರೆಯಲ್ಲಿ ಗೌರವಾರ್ಥ (ಸಂಬಳವಿಲ್ಲದ) ಕೆಲಸಮಾಡುತ್ತಿದ್ದೆ. ಒಂದು ದಿನ ಇದೇ ರೀತಿಯ ಬಾಲಿಕೆಯನ್ನು ಕರಕೊಂಡು ಒಬ್ಬ ಯುವತಿಯು ಬಂದಳು. ಅವಳಿಗೆ ಗುಪ್ತರೋಗದ ಸಲುವಾಗಿ ಮದ್ದು ಬೇಕಾಗಿತ್ತು. ನಾನು ಅವಳನ್ನು ವಿಚಾರಿಸಿ ಮದ್ದು ಬರಕೊಟ್ಟೆ. ಅವಳು ನೋಡಲು ಸುಂದರಿಯಾಗಿದ್ದು ನೋಡುವವರ ಮನಸ್ಸನ್ನು ಆಕರ್ಷಣ ಮಾಡುವ ಶಕ್ತಿಯು ಅವಳಲ್ಲಿದ್ದಿತು. ಆಗ ಕೂಡಾ ಗುಲಾಬಿ ಹೂವೆಂದರೆ ನನಗೆ ಬಹಳ ಪ್ರೀತಿ. ನರ್ಸಳು ತಂದಿಟ್ಟ ಗುಲಾಬಿ ಹೂ ನನ್ನ ಕೋಟಿನ ಕಾಲರಿನಲ್ಲಿದ್ದಿತು. ಹೋಗುವ ಹೊತ್ತಿಗೆ ಈ ದಿನ ನಡೆದ ಘಟನೆಯ ಹಾಗೆ ಆ ದಿನವೂ ಆ ಪುಟ್ಟ ಬಾಲಿಕೆಯು 'ಮಾಮಾ ಆ ಹೂವನ್ನು ನನಗೆ ಕೊಡು' ಎಂದು ಕೇಳಿದಳು. ನಾನು ಅದನ್ನು ಅವಳಿಗೆ ಕೊಟ್ಟು ಅವಳ ಕೋಮಲವಾದ ಗಲ್ಲವನ್ನು ಚುಂಬಿಸಿದೆ.

'ಹೀಗೆ ಎರಡು ಮೂರು ದಿನಗಳ ತನಕ ಆ ಯುವತಿಯು ಬಾಲೆಯನ್ನು ಕರಕೊಂಡು ಮದ್ದಿಗೆ ಬರುತ್ತಿದ್ದಳು. ನಾನು ಕೂಡಾ ಆ ಯುವತಿಯನ್ನು ವಿಶೇಷ ರೀತಿಯ ರೋಗಿಯ ಹಾಗೆ ಆಸ್ಥೆಯಿಂದ ವಿಚಾರಿಸಿ ಕೊಡುತ್ತಿದ್ದೆ. ಹೀಗಿರುವಾಗ ಒಂದು ದಿನ ಆ ಯುವತಿಯು ತನ್ನ ಮನೆಗೆ ನಾನು ಬರಬೇಕೆಂತಲೂ ಮನೆಯಲ್ಲಿ ಅಸೌಖ್ಯವೆಂತಲೂ ಹೇಳಿದಳು. ನಾನು ಕೆಲಸದ ಗಲಾಟೆಯಲ್ಲಿದ್ದುದರಿಂದ ಅವಳ ಮನೆಯ ನಂಬ್ರ ಮತ್ತು ಬೀದಿಯು ಯಾವುದೆಂತ ಕೇಳಿ ಬರೆದಿಟ್ಟುಕೊಂಡೆ.

'ಸಾಯಂಕಾಲ ಬಾಡಿಗೆ ಮೋಟಾರು ಮಾಡಿ ಮನೆ ಹುಡುಕಿ ಮೋಟರಿನಿಂದ ಕೆಳಗಿಳಿದು ನೋಡುವಾಗ ಮನೆ ಬಾಗಿಲು ಹಾಕಿತ್ತು. ಮೋಟರ್ ಹಾರ್ನು ಮಾಡಿದ ಕೂಡಲೇ ಆ ಪುಟ್ಟ ಬಾಲಿಕೆಯು ಬಂದು ಕದ ತೆರೆದು 'ಅಕ್ಕ ಡಾಕ್ಟರು ಬಂದರು' ಎಂತ ಹೇಳಿದಳು. ಅಷ್ಟರಲ್ಲೇ ಆ ಯುವತಿಯು ಬಂದ ನನ್ನನ್ನು ಒಳಗೆ ಕರಕೊಂಡು ಹೋದಳು. ಅವರಿರುವ ಮನೆ ಮತ್ತು ಆಸುಪಾಸಿನ ವಠಾರ ನೋಡಿ ಇವರು ಉದರ ಜ್ವಾಲೆ ಶಾಂತ ಮಾಡಲಿಕ್ಕೆ ತಮ್ಮ ಶರೀರವನ್ನು ಮಾರುವ ವೇಶ್ಯೆಯರೆಂತ ನನಗೆ ತಿಳಿದು ಬಂತು. ಕೂಡಲೇ ನನ್ನ ಮನಸ್ಸಿಗೆ ಜುಗುಪ್ಸೆಯಾಯಿತು. ಆದರೂ ಮನಸ್ಸನ್ನು ಬಿಗಿ ಹಿಡಿದೆ. ಹೇಗೂ ಬಂದುದಾಗಿದೆ, ರೋಗಿಯನ್ನು ನೋಡಲು ಕರೆದಾಗ ಪ್ರತಿಯೊಬ್ಬನ ಮನೆಗೆ ಹೋಗುವುದು ನನ್ನ ಕರ್ತವ್ಯವೆಂದು ಮನಸ್ಸನ್ನು ಸಮಾಧಾನಪಡಿಸಿಕೊಂಡು ಅವಳನ್ನು ಕೇಳಿದೆ 'ನೀವಾದರೋ ನಿನ್ನೆ ಮೊನ್ನೆಗಿಂತ ಈ ದಿನ ಆರೋಗ್ಯದಲ್ಲಿದ್ದೀರಿ. ನನ್ನನ್ನು ಯಾಕೆ ಬರಹೇಳಿದ್ದು?' ಎಂದ ಕೂಡಲೇ ಅವಳು 'ನನ್ನ ತಾಯಿಗೆ ಹುಷಾರಿಲ್ಲದ್ದರಿಂದ ನಿಮ್ಮನ್ನು ಕರಸಬೇಕಾಯಿತು' ಎಂದು ಹಾವಭಾವದಿಂದ ಕೂಡಿ ಹೇಳಿದಳು.

'ಮೊನ್ನೆಯಿಂದ ನನ್ನ ತಾಯಿಗೆ ಜ್ವರ ಬರುತ್ತದೆ. ರಾತ್ರಿಯಲ್ಲಿ ಜ್ವರದ ತಾಪದಿಂದ ಏನೇನೊ ಮಾತಾಡುತ್ತಾಳೆ. ನನ್ನ ಸ್ಥಿತಿ ತಮಗೆ ಗೊತ್ತೇ ಇದೆ. ಹೊಟ್ಟೆಯ ಹಸಿವೆಗಾಗಿ ಇಷ್ಟವಿಲ್ಲದಿದ್ದರೂ ತನುವನ್ನೇ ಮಾರಿದರೂ ಒಪ್ಪತ್ತು ಊಟಕ್ಕೆ ಸಿಕ್ಕುವುದು ದುರ್ಲಭ. ಆದುದರಿಂದ ತಾವು ತಮ್ಮನ್ನು ಹೇಗೂ ಇದರಿಂದ ಪಾರುಮಾಡಬೇಕು' ಎಂದು ದೀನತೆಯಿಂದ ಹೇಳಿದಳು.

ಒಳಗಿನ ಕೋಣೆಯಲ್ಲಿ ಮುದುಕಿಯೊಬ್ಬಳು ಮಲಗಿದ್ದಳು. ಅವಳನ್ನು ಪರೀಕ್ಷಿಸಿ ಔಷಧಿ ಬರಕೊಟ್ಟು ಮರುದಿನ ಯುವತಿಯನ್ನು ಆಸ್ಪತ್ರೆಗೆ ಬರಲಿಕ್ಕೆ ಹೇಳಿದೆ. ಬರುವಾಗ ಅವಳು ನನ್ನ ಫೀಸನ್ನು ತಂದು ಚೀಲದಲ್ಲಿ ಹಾಕಿದಳು ಮತ್ತು 'ಡಾಕ್ಟರೇ ನಾಳೆ ಕೂಡ ತಮ್ಮ ದರ್ಶನ ಲಾಭವನ್ನು ದಯಪಾಲಿಸುವಿರಾ?' ಎಂದು ದೈನ್ಯದಿಂದ ಕೇಳಿದಳು. ಸುಂದರ ಯುವತಿ, ಅದರಲ್ಲೂ ಕಷ್ಟದಲ್ಲಿ ಸಿಕ್ಕಿಬಿದ್ದವಳು. ಕರುಣೆಯಿಂದಲೊ, ಪ್ರೇಮದಿಂದಲೊ ನಾನು ಅವಳನ್ನು ಸಮಾಧಾನಪಡಿಸಿದೆ 'ಏನೂ ಹೆದರಬೇಡ. ನಾಳೆಯೊಳಗೆ ನಿನ್ನ ತಾಯಿ ಹುಶಾರಾಗುವಳು' ಎಂದು ಹೇಳಿ ಅಲ್ಲಿಂದ ಹೊರಬಿದ್ದೆ.

'ಇದೀ ರಾತ್ರಿ ನನಗೆ ಅವಳ ಆ ಕರುಣಾಪೂರ್ಣವಾದ ಮುಖವೇ ತೋರುತಿತ್ತು. ಮರುದಿನ ಆಸ್ಪತ್ರೆಯ ಕೆಲಸ ಮುಗಿಸಿ ಅವಳ ಮನೆಗೆ ಹೋದೆ. ರೋಗಿಯು ಸ್ವಲ್ಪ ಸುಧಾರಿಸಿದ್ದಳು. ಆ ದಿನ ಸ್ವಲ್ಪ ಅಲ್ಲಿ ಕೂತುಕೊಂಡು ಆ ಯುವತಿಯೊಡನೆ ಅಲ್ಲಿ ಇಲ್ಲಿಯ ಮಾತುಕತೆಯಾಡುವಾಗ ನಾನು ಇಲ್ಲಿ ಡಾಕ್ಟರನೇ, ನಾನು ಬೇರೊಬ್ಬನೆ ಆಗಿದ್ದೇನೆ ಎಂತ ನನ್ನ ಮನಸ್ಸು ನನಗೆ ಹೇಳತೊಡಗಿತು. ಆ ದಿನ ನಾನು ನನ್ನ ಫೀಸು ತೆಗೆದುಕೊಳ್ಳಲಿಕ್ಕೆ ಒಪ್ಪಲಿಲ್ಲ. ಅವಳು ಕೂಡ ಕೃತಜ್ಞತೆಯಿಂದ 'ಡಾಕ್ಟರ್ ಸಾಹೇಬರೇ ತಾವು ನಮಗೆ ಬಹಳ ಉಪಕಾರ ಮಾಡಿದ್ದೀರಿ. ನಾನು ತಮ್ಮ ಋಣವನ್ನು ಹೇಗೆ ತೀರಿಸಲಿ' ಎಂದು ಕೇಳಿದಳು.

'ನಾನು ನಗುತ್ತಾ ನಿಂತಿಲ ತಾಯಿ ಹುಶಾರಾದ ಕೂಡಲೇ ಒಟ್ಟಿಗೆ ಸಮೇತ ಫೀಸನ್ನು ತಕ್ಕೊಳ್ಳುತ್ತೇನೆ' ಎಂದು ಹೇಳಿ ಮನೆಯತ್ತ ಬಂದೆನು.

ಕೆಲವು ದಿನಗಳೊಳಗೆ ಅವಳ ತಾಯಿ ಪೂರ್ಣ ಹುಶಾರಾದಳು. ಆದರೆ ನಾನು ಅಲ್ಲಿ ಹೋಗುತ್ತಾ ಇದ್ದೆನು. ಮುಂಚೆಗಿಂತ ಆಗ ಸಲಿಗೆ ಹೆಚ್ಚಿತ್ತು. ಅವಳ ಈ ಹಾವಭಾವಗಳೆಲ್ಲಾ ಹೊಟ್ಟೆಗೋಸ್ಕರ ಮಾಡುವುದಾಗಿ ನನಗೆ ತಿಳಿದು ಬಂತು. ಅವಳ ಸಾಂಪತ್ತಿಕ ಸ್ಥಿತಿಯು ಒಳ್ಳೆದಾಗಿರಲಿಲ್ಲ. ನಾಲ್ಕೈದು ತಿಂಗಳ ಮನೆ ಬಾಡಿಗೆ ಬಾಕಿ ಇತ್ತು. ಮನೆಯ ಯಜಮಾನನು ಆಗಾಗ್ಗೆ ಬಂದು ಮನೆ ಬಿಟ್ಟುಕೊಡಬೇಕೆಂತ ಗದರಿಸುತ್ತಿದ್ದನು. ನಾನು ಅವಳಿಗೆ ಕಷ್ಟಕಾಲದಲ್ಲಿ ಹಣದ ಸಹಾಯ ಮಾಡಿದ್ದು, ನನ್ನ ಸವಿಮಾತಿನಿಂದ ಅವಳನ್ನು ಮರುಳುಮಾಡಿ ನನ್ನ ಸಣ್ಣ ಉಪಕಾರದ ಬದಲಿಗೆ ಅವಳ ಯೌವನವನ್ನು ಮನದಣಿಯೆ ಉಪಭೋಗಿಸುತ್ತಿದ್ದೆನು.

ದಿನಗಳು ಕಳೆದಂತೆ ನಾನು ಅತಿಥಿಯಾಗಿಯೇ ಉಳಿಯದೆ ಅವರ ಮನೆಯ ಒಬ್ಬ ಸದಸ್ಯನಾಗಿ ಗೃಹಸುಖವನ್ನು ಅನುಭವಿಸುತ್ತಿದ್ದೆನು. ಅವಳು ಒಂದು ದಿನ ನಗುತ್ತಾ ಮನೆ ಬಾಡಿಗೆ ವಿಷಯ ಹೇಳಿದಳು. ನಾನು ದೊಡ್ಡ ದೊಡ್ಡ ಮಾತಿನಿಂದ ಅವಳನ್ನು ಸಮಾಧಾನ ಪಡಿಸಿ ತಿಂಗಳ ಕೊನೆಗೆ ನನಗೆ ವೇತನ ಸಿಕ್ಕಿದ ಕೂಡಲೇ ಎಲ್ಲಾ ಸರಿಪಡಿಸುವೆನೆಂದು ಹೇಳಿಬಿಟ್ಟೆನು. ಬಂದ ಮನೆಯ ಯಜಮಾನನನ್ನು ಆ ದಿನದ ಮಟ್ಟಿಗೆ ಅವಳು ಸಮಾಧಾನಪಡಿಸಿ ಕಳಿಸಿಕೊಟ್ಟಳು. ಹಾಯ್! ಅವಳಿಗೇನು ಗೊತ್ತು ನನ್ನ ಸ್ಥಿತಿ? ನಾನು ಆಸ್ಪತ್ರೆಯಲ್ಲಿ ನನ್ನ ಕರ್ಚಿನಿಂದ ಟ್ರೈನಿಂಗ್ ಕಲಿಯುತ್ತಿದ್ದೆ. ಅದು ಕೂಡ ಗೌರವಾರ್ಥ ಮಾಡುವ ಕೆಲಸ. ಕೆಲಸದ ಅವಧಿ ಈ ತಿಂಗಳ ಕೊನೆತನಕ ಇತ್ತು. ಮತ್ತು ನನ್ನ ಹಾದಿ ನಾನು ಹುಡುಕಬೇಕಾಗಿತ್ತು.

ತಾಯಿಯ ಕಾಹಿಲೆಯಿಂದ, ಸಣ್ಣ ಸಣ್ಣ ಭಂಗಾರದ ಒಡವೆಗಳು ಸರಾಫ಼ ಕಟ್ಟೆಯಲ್ಲಿ ಸೇರಿದ್ದವು. ದಿನ ಕಳೆದಂತೆ ಉಣ್ಣುವುದು ಕಷ್ಟವಾಗಿತ್ತು. ಆದರೆ ನನಗೇನು? ಐದು ವರ್ಷ ಕಲ್ಕತ್ತೆಯಲ್ಲಿದ್ದು ನಾನು ಒಬ್ಬ ಡಾಕ್ಟರನಾಗಿಬಿಟ್ಟಿದ್ದೆ. ನನ್ನ ಸೀತಿಯಾದರೂ ಯಾರ ಮನೆ ಸುಟ್ಟುಹೋದರೆ ನನಗೇನು? ನನ್ನ ಚಳಿಹೋದರೆ ಸೈ ಎಂಬ ಹಾಗಿತ್ತು.

'ನನ್ನ ಶಿಕ್ಷಣದ ಅವಧಿ ಮುಗಿಯಿತು. ಒಂದನೆಯ ತಾರೀಕಿನ ಮುಂಚಿನ ರಾತ್ರಿಯೇ ನಾನು ಕಲ್ಕತ್ತೆಯಿಂದ ಪ್ರಯಾಣ ಮಾಡಿದೆ. ಅದರ ನಂತರ ಅವಳ ಗತಿಯೇನಾಯಿತೆಂದು ನನಗೆ ಇಷ್ಟರವರೆಗೆ ಗೊತ್ತಿಲ್ಲ. ಆದರೆ ಇಂದಿನ ಘಟನೆ ನನಗೆ ಅಂದಿನ ನೆನಪನ್ನು ಮಾಡಿಕೊಟ್ಟಿತು. ಮಾಸಿಹೋದ ಗಾಯಕ್ಕೆ ಬರೆ ಎಳೆದಂತಾಯಿತು' ಎಂದು ಸುಧಾಕರನು ದುಃಖದಿಂದ ಹೇಳಿದನು.

ಇಷ್ಟು ಹೇಳಿ ಆಗುವುದರೊಳಗೆ ನಾವು ಅವನ ಆಸ್ಪತ್ರೆಯ ಹತ್ತಿರ ಬಂದೆವು. ಸಿನಿಮಾ ನೋಟಿಸಿನ ಗಾಡಿಯೊಂದು ಬ್ಯಾಂಡ್ ವಾದ್ಯದೊಡನೆ ಹಾದುಹೋಯಿತು. ಅದರ ಹಿಂದೆ ದೊಡ್ಡ ಅಕ್ಷರದಿಂದ 'ವಿಶ್ವಾಸಘಾತ' ಎಂಬ ಚಿತ್ರವು 'ಚಿತ್ರಾ ಟಾಕಿಸಿ'ನಲ್ಲಿ ಈ ದಿನ ಆರು ಗಂಟೆಗೆ ಪ್ರದರ್ಶಿಸಲ್ಪಡುವುದೆಂತ ಬರೆಯಲ್ಪಟ್ಟಿತ್ತು. ಸುಧಾಕರನು ಆಸ್ಪತ್ರೆಗೆ ಹೋದನು. ನಾನು ಚಿತ್ರಾ ಟಾಕಿಸಿನತ್ತ ಕಡೆ ಹೊರಟೆ.

—ಆಧಾರದಿಂದ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಭರತಖಂಡದ ಉಜ್ವಲ ಆತ್ಮಶಕ್ತಿ!

ಪಾಶ್ಚಾತ್ಯ ರಾಷ್ಟ್ರಗಳ ಪತನ ಕಾರಣವೇನು?

ಪಂಡಿತ ರಘುನಾಥ ಪ್ರಸಾದ ಪಾರಕರ ಲೇಖನ

...ಯುರೋಪಿನ, ಯುದ್ಧರಂಗ ದಲ್ಲಿ ಯಾವ ನರ ಸಂಹಾರದ ಭೀಭತ್ಸಕಾಂಡವು ನಡೆಯುತ್ತಾ ಇದೆ ಯೋ ಅದನ್ನು ಚಿಕ್ಕದೊಂದು ಮಗುವೂ ತಿಳಿದಿದೆ. ಕೆಲವೇ ತಿಂಗಳುಗಳ ಅವಧಿಯಲ್ಲಿ ಲಕ್ಷಾಂತರ ಜನರು ಮೃತ್ಯುವಶರಾದರು. ಆದರೂ ಈ ರಕ್ತಪಾತವು ಎಂದಿಗೆ ಮುಗಿಯುವುದೆಂಬುದನ್ನು ಯಾರೂ ಹೇಳಲಾರರು. ಜನರು ಭಯ ಮತ್ತು ಅಪಾಯಾವಸ್ಥೆಯಿಂದ ಗ್ರಸ್ತರಾಗಿದ್ದಾರೆ ಅವರಿಗೆ ತಮ್ಮ ಮತ್ತು ಮಾನವ ಸಮಾಜದ ಭವಿಷ್ಯವು ಅಂಧಕಾರಮಯವಾಗಿ ತೋರುತ್ತದೆ. ಯುದ್ಧವನ್ನು ಕೊನೆಗಾಣಿಸುವುದಕ್ಕಾಗಿಯೇ ಗತಗಳಿಕರ ಮಹಾಯುದ್ಧವು ಆರಂಭವಾಗಿತ್ತೆಂದು ಹೇಳುತ್ತಾರೆ. ಆದರೆ ಅದಕ್ಕೂ ಸಾವಿರಪಾಲು ಭಯಂಕರವಾಗಿ ನಡೆಯುತ್ತಿರುವ ಈಗಿನ ಯುದ್ಧವನ್ನು ನೋಡಿದರೆ ಆ ಮಾತಿನ ನಿಸ್ಸಾರತೆಯು ಬೋಧೆಯಾಗುತ್ತದೆ

ಧರ್ಮಯುದ್ಧವೆಂದರೇನು?

"ಅತ್ಯಾಚಾರಗಳ ಉನ್ಮೂಲನಮಾಡಿ ನಿರ್ಬಲರ ರಕ್ಷಣೆಗಾಗಿ ಯುದ್ಧಮಾಡುವುದರಲ್ಲಿ ಅರ್ಥವಿದೆ ಇಂಥ ಧರ್ಮಯುದ್ಧಗಳ ವರ್ಣನೆಯು ಇತಿಹಾಸದಲ್ಲಿ ದೊರೆಯುತ್ತದೆ. ಅವು ನಿಯಮಪೂರ್ಣವಾದ ಯುದ್ಧಗಳಾಗಿದ್ದುವು ಆದರೆ ತಮ್ಮ ಮಾಲುಗಳನ್ನು ಬಲಾತ್ಕಾರದಿಂದ ಮಾರಲಿಕ್ಕಾಗಿ, ಮತ್ತು ಅಂಥ ತಮ್ಮ ಪಾಲಿಗೆ ಬಂದ ವ್ಯಾಪಾರದ ಸಂತೆಗಳನ್ನು ತಮ್ಮದಾಗಿಯೇ ಇಟ್ಟುಕೊಳ್ಳಲಿಕ್ಕಾಗಿ, ಪಕ್ಷಿದ ಕಾಲುವೆಗಳನ್ನೇ ಹರಿಸುವ ಅನ್ಯಾಯ ಯುದ್ಧದ ಅರ್ಥವೇ ಆಗುವುದಿಲ್ಲ. ಈ ಯುದ್ಧಗಳಲ್ಲಿ, ಶಾಂತರಾದ ನಾಗರಿಕ ಜನರೂ ಸುರಕ್ಷಿತರಾಗಿ ಇರುವುದಿಲ್ಲ. ದೀನಹೀನ ಅನಾಥರಾಗಿ ಪಲಾಯನ ಮಾಡುತ್ತಿರುವ ಸ್ತ್ರೀಯರು ಮಕ್ಕಳ ಮೇಲೂ ಬಾಂಬುಗಳನ್ನು ಚೆಲ್ಲುತ್ತಾರೆ. ಈಗಿನ ಯುದ್ಧಗಳ ಮತ್ತು ಯೋಧರ ಭಯಂಕರತೆ ಹಾಗೂ ಬರ್ಬರತೆಯನ್ನು ನೋಡಿದರೆ ರೋಮಾಂಚನವಾಗುತ್ತದೆ.

ಅಮಾನುಷಿಕ ವ್ಯವಹಾರ

"ಈಗಿನಯುದ್ಧಗಳಲ್ಲಿ ಅಮಾನುಷಿಕ ವ್ಯವಹಾರವು ಕಂಡುಬರುತ್ತದೆ. ಸಂಪತ್ಸಮೃದ್ಧಿ ಮತ್ತು ಉನ್ನತಿ ಅಭಿವೃದ್ಧಿಗಳಿದ್ದು ಪ್ರಪಂಚದಲ್ಲಿ ನಿರಾಶೆ ಮತ್ತು ಅಶಾಂತಿಯೇಕೆ? ಇಷ್ಟೆಲ್ಲ ವೈಜ್ಞಾನಿಕ ಉನ್ನತಿ ಮತ್ತು ವಿಶಿಷ್ಟ ಚಮತ್ಕಾರಗಳಿದ್ದು ಜಗತ್ತಿನಲ್ಲಿ ಅಂಧಕಾರ ತುಂಬಿರುವದೇಕೆ? ಇದರ ಒಂದು ಕಾರಣವೆಂದರೆ ಮನುಷ್ಯನು ಜೀವನೋದ್ದೇಶಗಳನ್ನು ತಪ್ಪಾಗಿ ತಿಳಕೊಂಡು ತನ್ನ ಆತ್ಮವನ್ನು ಮರೆತಿದ್ದಾನೆ. ಅವನ ಜೀವನ ದೃಷ್ಟಿಯು ಕೇವಲ ಶರೀರದ ಮೇಲೆ ಇದೆ- ಆತ್ಮದ ಮೇಲೆ ಇಲ್ಲ. ಭೋಗವೇ ಅವನ ಜೀವನದ ಲಕ್ಷ್ಯವಾಗಿದೆ. ಈಗ ಭೌತಿಕ ಉನ್ನತಿಯಾಗಿರುವುದೂ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಭಾವನೆಗಳು ಜಾಗೃತವಾಗಿರುವುದೂ ನಿಜ. ಆದರೆ ಆಧ್ಯಾತ್ಮಿಕ ಮತ್ತು ನೈತಿಕ ಆದರ್ಶಗಳು ನಮ್ಮ ಜೀವನವನ್ನು ಪ್ರಭಾವಿತಮತ್ತು ನಮ್ಮ ದೃಷ್ಟಿಕೋನವನ್ನು ಉದ್ಧಾರ ಮಾಡಿರುವುದಿಲ್ಲ ಆದುದರಿಂದ ನಮ್ಮ ಭೌತಿಕ ಉನ್ನತಿಯು ಜಗತ್ತಿನ ಪ್ರಳಯಕ್ಕೆ ಕಾರಣವಾಗಿದೆ. ಈಗ ಕ್ರಾಂತಿಕಾರಿ ಪರಿವರ್ತನವಾಗುವುದು ಆಗತ್ಯವಾಗಿದೆ ನಮ್ಮ ಪ್ರತಿಯೊಂದು ವ್ಯವಹಾರವು ಮಾನವ ಸಮಾಜದ ಸುಖ, ಆನಂದ, ಹಾಗೂ ಸೃಷ್ಟಿ ಸೌಂದರ್ಯವನ್ನು ಬೆಳೆಸಲಿಕ್ಕೆ ಸಹಕಾರಿಗಳಾಗಬೇಕು

ಪ್ರಕೃತಿಯ ಎಚ್ಚರಿಕೆ

"ಸ್ವಾರ್ಥಪೂರ್ಣ ಮತ್ತು ಮದಮತ್ತ ರಾಜನೀತಿಜ್ಞರು ತಮ್ಮ ವಿಚಾರಧಾರೆಯನ್ನು ಹೀಗೆ ಬದಲಾಯಿಸದಿದ್ದರೆ ಪ್ರಕೃತಿಯೇ ತನ್ನ ರಕ್ಷಣೆಗಾಗಿ ಪ್ರತೀಕಾರೋಪಾಯಗಳನ್ನು ಕೈಕೊಳ್ಳಬೇಕಾಗುವುದು ವೈಭವದಿಂದ ಮೆರೆದಾಡುತಿದ್ದ ಆ ಪ್ರಾಚೀನ ಈಜಿಪ್ಟ, ಬೆಬಿಲೋನಿಯ ಮತ್ತು ಅಸ್ಸೀರಿಯಗಳು ಈಗೆಲ್ಲಿ? ಗ್ರೀಸ ಮತ್ತು ರೋಮ ಸಾಮ್ರಾಜ್ಯಗಳು ಈಗೆಲ್ಲಿ? ಅದೇ ಸ್ಥಿತಿ ಈಗಲೂ ಅಧಿಕಾರ ಮತ್ತು ಶಕ್ತಿ ಉನ್ಮತ್ತರಾಷ್ಟ್ರಗಳಿಗೆ ಬರುವುದಿಲ್ಲವೆಂದು ಯಾರು ಹೇಳಬಲ್ಲರು? ಆತ್ಮಶಕ್ತಿಯು ಲೋಪವಾದಾಗ ಅವು ನಾಶೋನ್ಮುಖವಾಗುತ್ತವೆ ಭಾರತ ಮತ್ತು ಚೀನಗಳು ಬಹು ಭಯಂಕರ ವಿಪ್ಲವಗಳಿಗೆ ಎಡೆಕೊಟ್ಟು, ಸಹಸ್ರಾರು ವರ್ಷಗಳ ತನಕವೂ ಬದುಕಿರುವ ರಹಸ್ಯವೆಂದರೆ, ಅವುಗಳ ಆತ್ಮಶಕ್ತಿಯು ಇಂದಿನ ತನಕವೂ ಪೂರ್ಣಲೋಪವಾಗದಿರುವುದೇ. ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಆತ್ಮಶಕ್ತಿಯು ಕ್ಷಯಿಸುತ್ತಿರುವುದನ್ನು ನೋಡಿ ಅವುಗಳ ಭವಿಷ್ಯದ ಕುರಿತು ಭಯವೂ ನಿರಾಶೆಯೂ ಆಗುತ್ತದೆ

ಭಾರತದ ಆದರ್ಶ

"ಭಾರತದ ರಾಷ್ಟ್ರೀಯ ಆತ್ಮವು ಹಿಂಸೆ ಅಸತ್ಯ ಮತ್ತು ಅನ್ಯಾಯಗಳನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತದೆ ಸಮಸ್ತ ಜಗತ್ತನ್ನು ಒಬ್ಬ ಪರಮ ಪಿತಾ ಪರಮಾತ್ಮನ ಸಂತಾನವೆಂದು ತಿಳಿದು ಪ್ರೇಮ ಮತ್ತು ಸಹಾನುಭೂತಿ ಪೂರ್ಣ ಸಾಮಾಜಿಕ ವ್ಯವಹಾರಗಳನ್ನು ಇಟ್ಟುಕೊಂಡಿದೆ ರಾಜನೀತಿ ಮತ್ತು ಧರ್ಮನೀತಿಯನ್ನು ಒಂದೊಂದು ಮಾಡಿ ಮನಷ್ಯ ಜೀವನವನ್ನು ಪರಮಪವಿತ್ರ ಪರಮಾತ್ಮನ ನಿವಾಸಸ್ಥಾನವನ್ನಾಗಿ ಮಾಡಲು ಯತ್ನಿಸುತ್ತದೆ ಆದರೆ ಪಾಶ್ಚಾತ್ಯ ರಾಷ್ಟ್ರಗಳು ಇದಕ್ಕೆ ತೀರ ಪ್ರತಿಕೂಲವಾಗಿರುವುದು ತೋರುತ್ತದೆ ಎಂಥ ಸಂದರ್ಭದಲ್ಲಿಯೂ ತನ್ನ ಉತ್ಕೃಷ್ಟ ಜೀವನಾದರ್ಶವನ್ನು ಎತ್ತಿ ಹಿಡಿಯುವ ಮಹಾತ್ಮರಂತವರು ಯೂರೋಪಿನಲ್ಲಿ ಇರುವುದಿಲ್ಲ ಆದುದರಿಂದ ಪಾಶ್ಚಾತ್ಯ ರಾಷ್ಟ್ರಗಳು ಭೌತಿಕ ಸಂಪತ್ತು, ಅಧಿಕಾರ, ಬಲ, ದರ್ಪಗಳ ಪರಾಕಾಷ್ಠತೆಯನ್ನು ಪಡೆದಿರುವವಾದರೂ ಅವುಗಳ ಮುಂದಿನ ಪತನವು ಸಂಭಾವ್ಯವಿದೆ

ಈಗಿನ ಯುದ್ಧದ ಪರಿಣಾಮ

"ಇಂದಿನ ಯುದ್ಧದಿಂದ ಸಂಸ್ಕೃತಿಯ ಪೂರ್ಣ ವಿನಾಶವಾಗುವುದರಿಂದ ಆ ಯುದ್ಧವನ್ನು ತಡೆಯುವ ಪ್ರಯತ್ನಗಳು ಅಲ್ಲಲ್ಲಿ ಆಗುತ್ತಲಿವೆ. ಆದರೆ ಯಾವಸಂಸ್ಕೃತಿಯು ಭೋಗವಾದದಿಂದ ಹುಟ್ಟಿ ಬೆಳೆದು ಬಂದಿದೆಯೋ ಅದರ ವಿನಾಶವು ಒಂದಲ್ಲ ಒಂದು ರೀತಿಯಿಂದ ಶೀಘ್ರ ಆಗಲೇಬೇಕು. ಆ ವಿನಾಶವನ್ನು ಯಾರೂ, ಯಾವ ಶಕ್ತಿಯೂ ತಡೆಯಲಾರದು. ಅದು ನಷ್ಟವಾದರೆ ದುಃಖವೇಕೆ? ಈ ಯುದ್ಧದ ಪರಿಣಾಮವಾಗಿ ಭಾರತೀಯ ಜೀವನಾದರ್ಶವನ್ನು ಒಪ್ಪುವ ನವೀನ ಸಮಾಜಸ್ಥಾಪನೆಯು ಯೂರೋಪಿನಲ್ಲಿ ಆಗದಿದ್ದರೆ ಇಂಥ ಯುದ್ಧಗಳು ಈಗ ನಿಂತರೂ, ಮತ್ತೆ ಆಗಾಗ ಆಗುತ್ತಲೇ ಇರಬೇಕಾಗುವುದು ಆದುದರಿಂದ ವರ್ತಮಾನ ಮನುಷ್ಯ ಸಂತತಿಗೆ ಈ ಸಮಯವು ಬಹು ವಿಷಮ ಸಮಯವಾಗಿರುವುದು. ಭಾರತ ವರ್ಷದ ಅವಸ್ಥೆಯು ವಿಚಿತ್ರ ಮತ್ತು ಸಂಕಟಾಪನ್ನವಾಗಿರವುದು ಭಾರತೀಯರು ನಿಶಸ್ತ್ರರಾಗಿರುವರು ಆಧುನಿಕ ಯುದ್ಧೋಪಕರಣ ಮತ್ತು ಶಸ್ತ್ರಾಸ್ತ್ರಗಳನ್ನು ಕೈಗಳಿಂದ ಮುಟ್ಟಿನೋಡಿದವರು ಕೂಡ ಅವರಲ್ಲ, ಅವುಗಳ ಉಪಯೋಗದ ಮಾತು ದೂರವೇ ಉಳಿಯಿತು. ಆದರೂ ಭಾರತವು ಹಿಂದಿನಂತೆ ಇಂದೂ ಮುಂದೂ ಜಗತ್ತಿಗೆ ಆದರ್ಶವಾಗಬಹುದು, ತನ್ನನ್ನು ಪ್ರಳಯದಿಂದ ಕಾಪಾಡಿಕೊಳ್ಳಬಹುದು ಬೇರಲ್ಲಿಯೂ ಕಂಡು ಬಾರದಂಥ ಆತ್ಮಬಲದ ಅಮೋಘ ಅಸ್ತ್ರವು ಭಾರತಗರ್ಭದಲ್ಲಿ ಅಡಕವಾಗಿದೆ ಸಂದರ್ಭಬಂದಾಗ ಅದರ ಸರ್ವೋತ್ಕೃಷ್ಟತೆಯನ್ನು ಜಗತ್ತಿಗೆ ತೋರಿಸಿ ಕೊಡುವುದು ಅದರ ಕರ್ತವ್ಯವಾಗಿದೆ ಅಂತಹ ಪುಣ್ಯಕಾಲವು ಇಂದು ಪ್ರಾಪ್ತವಾಗಿದೆ. ಆತ್ಮಬಲ ಮತ್ತು ಅಹಿಂಸೆಯಿಂದಲೇ ಭಾರತದ ರಕ್ಷಣೆಯಾಗುವುದು ಅವುಗಳಿಂದಲೇ ಪ್ರಪಂಚದ ಉದ್ಧಾರವಾಗುವುದು"

THE

BANK OF MANGALORE LTD.,

MANGALORE

ESTD 1931

Branches - **Mudabidri & Padubidri.**

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು, ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O Peridepi (ನೆಲ್ಲೂರು ಜಿ.



ಜಿಲ್ಲಾ ಸಮಾಚಾರ

ಮಂಗಳೂರು

ಪ್ರಖ್ಯಾತ, ಲಾಠಿ ಆಟಗಾರರಾದ ಉಸ್ತಾದ್ ಅಬ್ದುಲ್ ಹಕ್‌ರವರು ಕಳೆದ ಸೋಮವಾರ ಮಂಗಳೂರಿಗೆ ಬಂದಿದ್ದರು. ಸ್ಥಳೀಯ ಸ್ವಾಸ್ಥ್ಯ ಸಂಘದಲ್ಲಿ, ಅವರನ್ನು ಸ್ವಾಗತಿಸಲಾಯಿತು. ಲಾಠೀ ಮತ್ತು ಖಡ್ಗವಿದ್ಯೆಯು ಆತ್ಮರಕ್ಷಣೆ ಮತ್ತು ವ್ಯಾಯಾಮವಾಗಿದೆಯೆಂದು ಹಕ್‌ರವರು ಹೇಳಿ, ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ ಭಾರತದ ಏಳಿಗೆಯ ದೃಷ್ಟಿಯಿಂದ ಎಲ್ಲರೂ ಅದನ್ನರಿತಿರಬೇಕೆಂದು ನುಡಿದರು. ಸಂಘದ ಚಾಲಕರಾದ ಶ್ರೀ ಕೆ ಕೆ ಶೆಟ್ಟರು ಅವರಿಗೆ ವಂದನೆಯನ್ನರ್ಪಿಸಿದರು.

ಲೋಕಮಾನ್ಯ ತಿಲಕರ ಪುಣ್ಯತಿಥಿಯು ಸ್ಥಳೀಯ ಹಿಂದೂ ಮಹಾಸಭೆಯ ಆಶ್ರಯದಲ್ಲಿ ಇದೇ ಆಗೋಸ್ತು ತಾ. ೧ನೇ ಗುರುವಾರ ಸಾಯಂಕಾಲ ೫ಘಂಟೆಗೆ ಶದ್ರು ವಿದ್ಯಾದಾಯಿನಿ ಶಾಲಾ ಭವನದಲ್ಲಿ ಜರಗಿತು.

ಕಾಂಗ್ರೆಸ್ ಸದಸ್ಯರಾಗಿರಿ:—ಮಂಗಳೂರು ಶಹರಿನ ಮಹಾಜನರಲ್ಲಿ ವಿನಂತಿ — ರಾಷ್ಟ್ರೀಯ ಮಹಾ ಸಭೆಗೆ ಸದಸ್ಯರನ್ನು ಸೇರಿಸಲು ಕಾಂಗ್ರೆಸ್ ಕಾರ್ಯಕರ್ತರು ಅಧಿಕೃತರಿರುವರು. ಮಂಗಳೂರು ಶಹರಿನ ಮಹಾಜನರೆಲ್ಲರೂ ಕಾಂಗ್ರೆಸ್ ಸದಸ್ಯರಾಗಿ ಸೇರಬೇಕಾಗಿ ಈ ಮೂಲಕ ವಿನಂತಿಸಲಾಗುತ್ತದೆ. ಕಳೆದ ವರುಷಕ್ಕಿಂತಲೂ ಹೆಚ್ಚಾಗಿ ಜನರು ಸದಸ್ಯರಾಗಿ ಸೇರಿ, ಸಂಸ್ಥೆಯನ್ನು ಬಲಪಡಿಸುವರಾಗಿ ನಂಬಲಾಗಿದೆ. ಕಾಂಗ್ರೆಸ್ ಕಾರ್ಯಕರ್ತರು ಸದಸ್ಯತ್ವಕ್ಕಾಗಿ ಜನರ ಬಳಿಗೆ ಯಾವುದಾದರೂ ಕಾರಣದಿಂದ ಬರಲಾಗದಿದ್ದರೆ ಅಂಥವರು ಫೆಲಿಕ್ಸ್ ಪೈ ಬಜಾರದಲ್ಲಿರುವ ಕಾಂಗ್ರೆಸ್ ಕಮಿಟಿ ಆಫೀಸಿಗೆ ಬಂದು ತಮ್ಮ ಹೆಸರುಗಳನ್ನು ದಾಖಲು ಪಡಿಸಿ ಕೊಳ್ಳಬಹುದು. ಸದಸ್ಯರನ್ನು ಸೇರಿಸುವ ಅವಧಿಯು ಇನ್ನು ಕೆಲವೇ ವಾರಗಳಿರುವುದರಿಂದ ಮಹಾ ಜನರು ಕೂಡಲೇ ತಮ್ಮ ಹೆಸರುಗಳನ್ನು ದಾಖಲು ಪಡಿಸಿಕೊಳ್ಳಬೇಕಾಗಿ ವಿನಂತಿ ಎಂದು ಮಂಗಳೂರು ಟೌ. ಕಾ. ಕಮಿಟಿಯ ಅಧ್ಯಕ್ಷರು ತಿಳಿಸುತ್ತಾರೆ.

ಕೊಂಚಾಡಿ ಸಾಹಿತ್ಯ ಸಂಘ — ಈ ಸಂಘದ ಪ್ರಥಮ ವರ್ಧಂತ್ಯುತ್ಸವವು ತಾ. ೨೮–೭–೪೦ನೇ ರವಿವಾರ ಕೊಂಚಾಡಿ ಶ್ರೀ ರಾಮಾಶ್ರಮ ಹೈ. ಎ. ಶಾಲೆಯಲ್ಲಿ ಶ್ರೀ ಟಿ. ಆರ್. ಶೆಣೈ ಎಮ್. ಎ ಎಲ್ ಟಿ. ಇವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು.

ಹಿಂದೀ ಕ್ಲಾಸುಗಳು: — ಶ್ರೀ ರಾಮಕೃಷ್ಣ ನರಸಿಂಗ್ ಹೋಮಿನ ಮುಂದಿನ ಮನೆ ಮಾಳಿಗೆಯ ಹಿಂದೀ ಮಂದಿರದಲ್ಲಿ ಹಿಂದಿಯನ್ನು ಕಲಿಯ ಬಯಸುವ ವಿದ್ಯಾರ್ಥಿಗಳಿಗೆ ಸುಶಿಕ್ಷಿತರೂ ಹಾಗೂ ದಕ್ಷಿಣ ಹಿಂದೀ ಪ್ರಚಾರಕ ಸಭೆಯವರ ಮಂಜೂರಾತಿಯನ್ನು ಪಡೆದ ಯೋಗ್ಯ ಶಿಕ್ಷಕರು ಪ್ರಾಥಮಿಕ ಮೊದಲುಗೊಂಡು ವಿಶಾರದದ ವರೆಗಿನ ಕ್ಲಾಸುಗಳನ್ನೇ ಮಾತ್ರವಲ್ಲದೆ ಇನ್ನಿತರ ಯುನಿವರ್ಸಿಟಿ ಮತ್ತು ಗವರ್ನ್‌ಮೆಂಟ್ ಪರೀಕ್ಷಾರ್ಥಿಗಳಿಗೂ ಶಿಕ್ಷಣವನ್ನು ಕೊಡುವರು.

ಕಾರ್ಕಳ

ಹಿಂದಿ ಕ್ಲಾಸುಗಳು:—ಬರುವ ಫೆಬ್ರವರಿ ೧೯೪೧ರ ಹಿಂದಿ ಪ್ರಾಥಮಿಕ, ಮಧ್ಯಮಾ, ರಾಷ್ಟ್ರಭಾಷಾ ಪರೀಕ್ಷೆಗಳನ್ನು ಕೊಡಲಿರುವವರ ಬಗ್ಗೆ ಹಿಂದೀ ಕ್ಲಾಸುಗಳು ಇದೇ ತಿಂಗಳಲ್ಲಿ ಆರಂಭಿಸಲ್ಪಡುವವು. ಸೇರಬಿಚ್ಛಿಸುವವರು ನಿಯಮಾದಿಗಳನ್ನು ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ವಿಶಾರದ ಇವರಿಂದ ಪಡೆಯಬಹುದು.

ಸುಮಾರು ೧೦–೧೫ ಮೈಲು ವಿಸ್ತೀರ್ಣದೊಳಗೆ ಬೇರೆ ಯಾವ ವಿಧದ ವೈದ್ಯಕೀಯ ಸಹಾಯವೇ ಇಲ್ಲದಿರುವುದನ್ನೂ, ಗ್ರಾಮಸ್ಥರು ಅಧಿಕಾರಿಗಳಿಗೆ ಹಲವು ಬಾರಿ ಬಿನ್ನವಿಸಿ ಕೊಂಡ ಫಲವಾಗಿ, ಸರಕಾರದವರೂ, ದ. ಕ ಜಿಲ್ಲಾ ಬೋರ್ಡಿನವರೂ ರೂರಲ್ ಡಿಸ್ಪೆನ್ಸರಿಯ ಆವಶ್ಯಕತೆಯನ್ನು ಹಿಂದೆಯೇ ಮನಗಂಡಿದ್ದರು. ಶೀಘ್ರದಲ್ಲೇ ರೂರಲ್ ಡಿಸ್ಪೆನ್ಸರಿಯನ್ನು ತೆರೆದು ನಮ್ಮ ದೀರ್ಘಕಾಲದ ಬೇಡಿಕೆಯನ್ನು ಪೂರೈಸಬೇಕೆಂದು ಒಬ್ಬ ಗ್ರಾಮಸ್ಥರು ಬರೆಯುತ್ತಾರೆ.

ಅಜೆಕಾರು: - ಕಾರ್ಕಳ ತಾಲೂಕಿನ ಘಟ್ಟಗಳ ಸರಹದ್ದಿನ ಸುಮಾರು ೮–೯ ಗ್ರಾಮಗಳಿಗೆ ಕೇಂದ್ರ ಸ್ಥಳವಾಗಿ, ಅನೇಕ ಚಟುವಟಿಕೆಗಳ ಮತ್ತು ವ್ಯಾಪಾರ ವಹಿವಾಟಿನ ಒಂದು ಪ್ರಾಮುಖ್ಯ ಸ್ಥಳವಾಗಿರುವುದು ಈ ಮಲೆನಾಡು ಪ್ರಾಂತ್ಯವು ಮಲೇರಿಯಾ ಜ್ವರದ ತವರು ಬೀಡಾಗಿ ಜನರನ್ನು ಪೀಡಿಸುತ್ತಿರುವುದನ್ನೂ,

ಉಡುಪಿ

ಹರಿಜನ ಸೇವಕ ಸಂಘ: ತಾರೀಕು ೨೮–೭ ೪೦ನೇ ಆದಿತ್ಯವಾರ ಸ್ಥಳೀಯ ಮೋರ್ಡನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ತಾಲೂಕು ತಹಶಿಲ್ದಾರ್ ಶ್ರೀಯುತ ಬಿ ಗಣೇಶ ಬಿ ಎ ರವರ ಅಧ್ಯಕ್ಷತೆಯಲ್ಲಿ ಸದರಿ ಸಂಘದ ಮೆಂಬರರ ಮಹಾಸಭೆಯು ಕೂಡಿ, ಈ ಕೆಳಗಿನ ಮಹನೀಯರನ್ನು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರನ್ನಾಗಿ ಆರಿಸಲಾಯಿತು ಶ್ರೀಯುತರುಗಳಾದ ಕೆ ಬಿ ಬಲ್ಲಾಳ ಬಿ ಎ ಎಲ್ ಎಲ್ ಬಿ ಯವರು ಅಧ್ಯಕ್ಷ. ಯು ವೆಂಕಟರಾವ್, ಬಿ ಎ, ಎಲ್. ಟಿ ಯವರು ಉಪಾಧ್ಯಕ್ಷ, ಟಿ ವಾಸುದೇವ ಶೆಣೈ ಮತ್ತು ಕೆ ಜಗನ್ನಾಥ ನಾಯಕ್ ರವರು ಜತೆಕಾರ್ಯದರ್ಶಿಗಳು, ನಾಗಪ್ಪ ಕಮ್ಮಿಯವರು ಹರಿಜನ ವಿದ್ಯಾರ್ಥಿ ಭವನದ ಸುಪರಿಂಟೆಂಡೆಂಟರು, ಬಿ ಅಂತಯ್ಯ ಶೆಟ್ಟಿಯವರು ತಾಲೂಕು ಆರ್ಗನೈಜರರು, ಎಮ್ ಪಿ. ದೇವರಾವ್, ಬಿ ಎ ಎಲ್ ಟಿ, ಸುಬೇರ್ ಸಂಜೀವ ರಾವ್, ಎಸ್ ವಾಮನ ಭಟ್, ಪಿ ವೈ ರಾಮನ್ ಗುರಿಕಾರ್, ಯು ರಾಮಚಂದ್ರ, ಟಿ, ರಘುನಾಥ ಪೈ ಇವರು ಸದಸ್ಯರು ಶ್ರೀಯುತ ಯು ರಾಮಚಂದ್ರರವರ ಆಡಳಿತೆಯಲ್ಲಿದ್ದ ಆದಿದ್ರಾವಿಡ ಉದ್ಧಾರ ಏಯಿಡೆಡ್ ಎಲಿಮೆಂಟರಿ ಶಾಲೆಯ ಆಡಳಿತವನ್ನು ಸದರಿ ಸಂಘವು ವಹಿಸಬೇಕಾಗಿ ನಿರ್ಣಯಿಸಲಾಯಿತು ಉಡುಪಿ ಹರಿಜನ ವಿದ್ಯಾರ್ಥಿ ಭವನದ ಆಡಳಿತೆಯು ಇನ್ನು ಮುಂದೆ ಈ ಸಂಘವೇ ವಹಿಸಿಕೊಳ್ಳುವ ನಿರ್ಧಾರವಾಯಿತು. ತಾರೀಕು ೧ನೇ ಗುರುವಾರ ಹರಿಜನ ವಿದ್ಯಾರ್ಥಿ ಭವನದಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಪುಣ್ಯ ದಿನಾಚರಣೆಯೂ ನಡೆಯಿತು.

ತುಳುನಾಡ್ ಬೇಂಕ್ — ಜನರಲ್ ಸಪ್ಲಾಯ್ಸ್ ಲಿಮಿಟೆಡ್, ಉಡುಪಿ ತುಳುನಾಡ್ ಬೇಂಕ್ ಲಿಮಿಟೆಡ್ ಈ ಸಂಸ್ಥೆಗಳ ಮೆನೇಜಿಂಗ್ ಡ್ಯಾರೆಕ್ಟರರಾದ ಶ್ರೀ ಎಸ್ ಯು ಪಣಿಯಾಡಿಯವರು ಬೇಂಕಿನ ಮೆನೇಜಿಂಗ್ ಡ್ಯಾರೆಕ್ಟರ್ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟಿರುವರೆಂದು ತಿಳಿದಿದೆ. ಬೇಂಕಿನ ಚೆಯರ್‌ಮೆನರಾದ ಶ್ರೀ ಮಿಯ್ಯಾರ ನರಸಿಂಹಾಚಾರ್ಯರೇ ಪ್ರಕೃತ ಮೆನೇಜಿಂಗ್ ಡ್ಯಾರೆಕ್ಟರರಾಗಿರುವರೆಂದೂ ಜನರಲ್ ಸಪ್ಲಾಯ್ಸ್ ಲಿಮಿಟೆಡ್ ಸಂಸ್ಥೆಯ ಮೆನೇಜಿಂಗ್ ಡ್ಯಾರೆಕ್ಟರರಾಗಿ ಶ್ರೀ ಆರ್, ಆರ್, ಕುಂಜೂರರವರು ನೇಮಿಸಲ್ಪಟ್ಟಿರುವರೆಂದೂ ಬೇಂಕಿನ ಲೇವಾದೇವಿಯು ಒಂದು ತಿಂಗಳ ತನಕ ನಿಲ್ಲಿಸಲ್ಪಟ್ಟು ಆಫೀಸು ಮುಚ್ಚಲ್ಪಟ್ಟಿದೆಯೆಂದೂ ತಿಳಿದಿದೆ ಜನರಲ್ ಸಪ್ಲಾಯ್ಸ್ ಲಿಮಿಟೆಡ್, ಇದಕ್ಕೆ ಸಂಬಂಧಿಸಿದ ಮಣಿಪಾಲ ಪ್ರೆಸ್ಸು ಬಂದು ಮಾಡಲಾಗಿತ್ತೆಂದೂ, ತುಳುನಾಡ್ ಛಾಪಖಾನೆ ಈಗ ತೆರೆಯಲ್ಪಟ್ಟು ಎಂದಿನಂತೆಯೆ ಕೆಲಸಮಾಡುತ್ತಲಿರುವುದೆಂದೂ ಬೇಂಕು ಮುಂಚಿನಂತೆಯೇ ತನ್ನ ಕಾರ್ಯಕಲಾಪಗಳನ್ನು ಮುಂದರಿಸುವಂತೆ ಚೆಯರ್‌ಮೇನರಾದ ಶ್ರೀ ನರಸಿಂಹಾಚಾರ್ಯರು ಪ್ರಯತ್ನಿಸುವರೆಂದೂ ತಿಳಿದುಬಂದಿದೆ.

ಫಿರಂಗಿ ಸ್ಥಾಪನೆ: — ತಾ ೧೯ರಲ್ಲಿ ಜರಗಿದ ಉಡುಪಿ ನಗರ ಸಭೆಯಲ್ಲಿ ದರಿಯಾ ಬಹಾದರಗಡದಲ್ಲಿರುವ ಟಿಪ್ಪುಸುಲ್ತಾನನ ಕಾಲದ ಫಿರಂಗಿಯನ್ನು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ತಯಾರಾಗಲಿರುವ ಕ್ರೀಡಾವನ ಮಧ್ಯದಲ್ಲಿರಿಸಲು ಸಂಬಂಧ ಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿ ಠರಾವಾಯಿತು.

ಕಾಸರಗೋಡು

ರಾತ್ರಿಶಾಲೆ — ಕಾಸರಗೋಡು ಯುವಕ ಜನಸಂಘದ ಆಶ್ರಯದಲ್ಲಿ ತೆರೆಯಲ್ಪಡುವ ರಾತ್ರಿ ಶಾಲೆ ಮತ್ತು ವಾಚನಾಲಯದ ಕಾರ್ಯಕ್ರಮದ ಬಗ್ಗೆ ೨೮ನೇ ಆದಿತ್ಯವಾರ ಸಂಘದ ಭವನದಲ್ಲಿ ಸಭೆಗೂಡಿ ಕಲಿಸತಕ್ಕ ವಿಷಯಗಳನ್ನು ಚರ್ಚಿಸಿ ಕನ್ನಡ, ಹಿಂದಿ, ಇಂಗ್ಲಿಷ್, ಮಲೆಯಾಳ ನಾಲ್ಕು ಭಾಷೆಗಳನ್ನೂ ಮತ್ತು ಸಮಾಜನೀತಿ, ಅರ್ಥಶಾಸ್ತ್ರ ಮೊದಲಾದುವುಗಳನ್ನೂ ಬೇರೆ ವಾರಕ್ಕೆ ಒಂದಾವರ್ತಿ ಪ್ರಸಿದ್ಧ ಉಪನ್ಯಾಸಕರಿಂದ ಒಂದೊಂದು ಉಪನ್ಯಾಸಗಳನ್ನೂ ಕೊಡಿಸುವಂತೆಯೂ ನಿಶ್ಚಯವಾಯಿತು. ಶಾಲೆಯು ಆಗೋಸ್ತು ತಿಂಗಳ ಮೊದಲನೆಯ ತಾರೀಕಿಗೆ ತೆರೆಯಲ್ಪಡುವುದು. ವಾಚನಾಲಯಕ್ಕೆ ಇಂಗ್ಲಿಷ್, ಕನ್ನಡ ಮಲೆಯಾಳ ಪತ್ರಿಕೆಗಳನ್ನು ತರಿಸುವುದಕ್ಕೂ ನಿಶ್ಚಯಿಸಿರುತ್ತದೆ.

ಹೊಸದುರ್ಗ

ಮುಂದಾಳುಗಳ ಬಂಧನ:— ಹಿಂದೆ ಹೊಸದುರ್ಗ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿದ್ದವರೂ, ಕೃಷಿಕರ ಮುಂದಾಳುಗಳೂ ಆದ ಶ್ರೀ ಟಿ ಸುಬ್ರಹ್ಮಣ್ಯ ತಿರುಮುಂಪುರವರನ್ನು ಹೊಸದುರ್ಗದ ಪೋಲೀಸರು ಕಳೆದ ತಾ. ೨೦ರಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಬಂಧಿಸಿದ್ದರು.

ಮುಂಬಯಿ

ಬಿಲ್ಲವರ ಎಸೋಸಿಯೇಶನ್ ಮುಂಬಯಿ. — ಈ ಸಂಸ್ಥೆಯ ಅಷ್ಟಮ ವಾರ್ಷಿಕ ಸಮಾರಂಭವು ತಾ ೧೧–೮–೪೦ನೇ ರವಿವಾರ ಅಪರಾಹ್ನ ಘಂಟೆ ೩–೩೦ಕ್ಕೆ ಸರ್ ಕವಾಸ್ಜಿ ಜೆಹಾಂಗೀರ್ ಸಾರ್ವಜನಿಕ ಸಭೆ ಭವನದಲ್ಲಿ ಡಾ। ಯಂ ವೆಂಕಟ್‌ರಾವ್ ಜೆ. ಪಿ. ಮೇನೇಜಿಂಗ್ ಡೈರೆಕ್ಟರ್ ಪೋವೆಲ್ಸ್ ಲಿಮಿಟೆಡ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಒಂದು ರೂಪಾಯಿ ನೋಟು:— ಹೊಸ ಒಂದು ರೂಪಾಯಿ ನೋಟುಗಳು ಇದೇ ತಾ. ೨೫ರಿಂದ ಮುಂಬಾಯಿಯಲ್ಲಿ ಚಲಾವಣೆಗೆ ತರಲ್ಪಡುವವೆಂದು ತಿಳಿಯಬರುತ್ತದೆ. ಈ ನೋಟುಗಳು ೧೯೩೫ರಲ್ಲಿ ಮುದ್ರಿಸಲ್ಪಟ್ಟಿದ್ದು, ಆ ಸಮಯದಲ್ಲಿ ಕಾರಣಾಂತರದಿಂದ ಚಲಾವಣೆಗೆ ಹಾಕದೆ ಇರಿಸಲ್ಪಟ್ಟಿದ್ದುವು. ಈ ಬಾರಿಯ ನೋಟುಗಳು ಇಷ್ಟರ ತನಕ ಚಲಾವಣೆಗೆ ಹಾಕಿದ ನೋಟುಗಳಿಗಿಂತ ಸಣ್ಣ ಆಕಾರದಲ್ಲಿರುವುದಾಗಿ ತಿಳಿದು ಬರುತ್ತದೆ.

ಶಾಲಾ ಪುಸ್ತಕಗಳು!

1939ನೇ ಇಸವಿ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದುದು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
3ನೇ ದರ್ಜೆ	0 2 6
4ನೇ ,,	0–3–0
5ನೇ	0–3–6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
3ನೇ ದರ್ಜೆ	0 1 6
4ನೇ ,,	0–2 0
5ನೇ ,,	0–2–6

ಸಿವಿಕ್ಸ್ ಅಥವಾ ಪ್ರಜಾಧರ್ಮ

3ನೇ ದರ್ಜೆ ಬೆಲೆ 0 1 6 4ನೇ ದರ್ಜೆ ಬೆಲೆ 0–2–0 5ನೇ ದರ್ಜೆ ಬೆಲೆ 0–2–6
6ನೇ ,, 0–3–0 7ನೇ ,, 0–3–0 8ನೇ ,, 0–3–0

ಹೆಣ್ಮಕ್ಕಳ ಶಾಲೆಗಳಿಗಾಗಿ ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

4ನೇ ದರ್ಜೆಗೆ 0—2—6 5ನೇ ದರ್ಜೆಗೆ 0—3—6

ಪ್ರಾಥಮಿಕ ಭೂವಿವರ

(ಜಿಲ್ಲೆಯ ಒಬ್ಬ ಪ್ರಸಿದ್ಧ ಭೂಗೋಳ ಶಿಕ್ಷಕರಿಂದ ರಚಿತವಾದುದು)

4ನೇ ತರಗತಿಗೆ 0–2–6 5ನೇ ತರಗತಿಗೆ 0–3–6 6ನೇ ತರಗತಿಗೆ 0–5–0
7ನೇ ತರಗತಿಗೆ 0–6–0 8ನೇ ತರಗತಿಗೆ 0–7–0

ಪ್ರಾಥಮಿಕ ಲಘುವಿಜ್ಞಾನ

(ಶ್ರೀ ಎಸ್. ರಾಮಕೃಷ್ಣಾಚಾರ್, ಬಿ ಎ, ಎಲ್. ಟಿ. ವಿರಚಿತ)

6ನೇ ತರಗತಿಗೆ 0–6–0 7ನೇ ತರಗತಿಗೆ 0–6–0 8ನೇ ತರಗತಿಗೆ 0–6–0

ವ್ಯಾಕರಣ ಮತ್ತು ಪ್ರಬಂಧ

(ವಿದ್ವಾನ್ ಶ್ರೀ. ಕೆ. ಕೆ. ಕೈ ವಿರಚಿತ)

4ನೇ ಮತ್ತು 5ನೇ ತರಗತಿಗೆ 0—2—0 6ನೇ ತರಗತಿಗೆ 0—2—0
7ನೇ ,, 0—2—6 8ನೇ ,, 0—3—0

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ: 1—0—0

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಡೋವರ್ ಬಂದರಿಗೆ ವಿಮಾನ ದಾಳಿ!

15 ಜರ್ಮನ್ ವಿಮಾನಗಳುರುಳಿದುವು!

ಜಪಾನಿನಲ್ಲಿ ಬ್ರಿಟಿಷರ ಬಂಧನ!

ಬಾಲ್ಟಿಕ್ ರಾಷ್ಟ್ರಗಳಲ್ಲಿ ರಶ್ಯ!   ಇಟಲಿಯ ಚಟುವಟಿಕೆಗಳು!

ಬ್ರಿಟಿಷ್ ಕಡಲ್ಗಾಲಿವೆಯಲ್ಲಿ ಕಾದಾಟ!



★ ಯುದ್ಧ ವಾರ್ತೆ

ಈ ವಾರದ ಯುದ್ಧ

ಈ ವಾರದಲ್ಲಿ ಹೆಚ್ಚಿನ ಯುದ್ಧ ಚಟುವಟಿಕೆಗಳು ಆಗಲಿಲ್ಲ. ಶತ್ರು ರಾಷ್ಟ್ರಗಳ ಮೇಲೆ ವಿಮಾನಗಳು ಕೆಲವೊನ್ನು ಹಾರಿ ದಾಳಿಮಾಡಿದುವು. ವಿಶೇಷ ಘಟನೆಗಳು ಯಾವುವೂ ನಡೆಯಲಿಲ್ಲ.

ಡೋವರಿನ ಮೇಲೆ ದಾಳಿ

ಡೋವರಿನ ಬಂದರದ ಮೇಲೆ ಜರ್ಮನ್ ವೈಮಾನಿಕರು ದಾಳಿಯೆಸಗಿದರು. ಈ ದಾಳಿಯಿಂದ ಜರ್ಮನ್ ವೈಮಾನಿಕರಲ್ಲಿ ಹದಿನೈದು ವಿಮಾನಗಳು ಬ್ರಿಟಿಷರಿಂದ ಕೆಳಗುರುಳಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ.

ಇಟಲಿಯ ಏಡನ್ ದಾಳಿ

ಏಡನಿನ ಮೇಲೆ ಇಟಲಿಯ ವಿಮಾನಗಳು ಹಾರಿ ದಾಳಿಮಾಡಿದವು. ನಾಲ್ಕು ಮಂದಿ ನಾಗರಿಕರು ಹತರಾದರು. ಹದಿನೈದು ಮಂದಿಗೆ ಗಾಯವಾಗಿದೆಯೆಂದು ತಿಳಿದು ಬಂದಿದೆ.

ಸ್ವಿಜರ್ಲೆಂಡಿಗೆ ಜರ್ಮನಿಯ ಬೆದರಿಕೆ

ಸ್ವಿಜರ್ಲೆಂಡಿನಲ್ಲಿರುವ ಎಣ್ಣೆ ಧಾನ್ಯ ಮತ್ತು ಆಹಾರಗಳನ್ನು ಜರ್ಮನಿಗೆ ಬಿಟ್ಟುಕೊಡಬೇಕಾಗಿ ಜರ್ಮನಿಯು ಸ್ವಿಜರ್ಲೆಂಡನ್ನು ಬೆದರಿಸಿ ಕೇಳಿರುವುದಾಗಿ ಸುದ್ದಿ

ಜಪಾನಿನಲ್ಲಿ ಬ್ರಿಟಿಷರ ಬಂಧನ

ಜಪಾನಿನಲ್ಲಿರುವ ಹಲವು ಮಂದಿ ಪ್ರಾಮುಖ್ಯ ಬ್ರಿಟಿಷರನ್ನು ಜಪಾನ್ ಸರಕಾರವು ಸೆರೆಯಲ್ಲಿಟ್ಟಿರುವುದೆಂದು ತಿಳಿದಿದೆ. ಜಪಾನಿನಲ್ಲಿ ಗುಪ್ತ ಕ್ರಾಂತಿಕಾರಕ ಚಳವಳಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕಾರಣ ಹಾಗೆ ಮಾಡಲಾಯಿತೆಂದು ಪ್ರಕಟಣೆ.

ಬಾಲ್ಕನಿನಲ್ಲಿ ರಶ್ಯದ ಪ್ರಾಬಲ್ಯ

ಬಾಲ್ಕನ್ ರಾಷ್ಟ್ರಗಳಲ್ಲಿ ರಶ್ಯವು ದಿನದಿಂದ ದಿನಕ್ಕೆ ಪ್ರಬಲವಾಗುತ್ತಾ ಬರುತ್ತದೆ. ಕೆಲವು ರಾಷ್ಟ್ರಗಳು ಈಗಾಗಲೇ ರಶ್ಯದ ಸ್ವಾಧೀನವಾಗಿವೆ. ರುಮೇನಿಯದ ಕೂಡೆಯೂ ಈಗ ರಶ್ಯವು ಜಗಳವನ್ನು ಹುಟ್ಟಿಸಿಕೊಂಡು ಅದನ್ನು ಶರಣು ಮಾಡುವ ಹಂಚಿಕೆಯಲ್ಲಿರುವುದಾಗಿ ತಿಳಿದಿದೆ.

ಬ್ರಿಟಿಷ್ ಕಡಲ್ಗಾಲಿವೆಯಲ್ಲಿ ಕಾದಾಟ

ಬ್ರಿಟಿಷ್ ಕಡಲ್ಗಾಲಿವೆಯಲ್ಲಿ ಕಾದಾಟ ನಡೆದು ೯ ನಾಜಿ ವಿಮಾನಗಳು ಕೆಳಗುರುಳಿಸಲ್ಪಟ್ಟಿವೆ ಜರ್ಮನರು ಯಾರಿಗೂ ತಿಳಿಯದಂತೆ ಅಕಸ್ಮಾತ್ತಾಗಿ ದಾಳಿಯಿಡಬೇಕೆಂದು ಮಾಡಿದರೂ ಯತ್ನವು ವ್ಯರ್ಥವಾಯಿತು.

ಏರ್ ಮಾರ್ಶಲ್ ಜಿ. ಎಪ್ ಎ ಪಾರ್ಟೋಲ್ (ಎಡಗಡೆ) ಮತ್ತು ಎಪ್. ಎಲ್ ಕೋನೇಜ್

ಅಮೆರಿಯವರ ಹೇಳಿಕೆ

ಭಾರತ ಸಮಸ್ಯೆಯೇನೂ ಅಷ್ಟು ಉಗ್ರವಾಗಿಲ್ಲ. ಅದಕ್ಕಾಗಿ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡಬೇಕಾದಂತಹ ಆವಶ್ಯಕತೆಯೇನೂ ನನಗೆ ಕಂಡು ಬಂದಿಲ್ಲವೆಂದು ೨೫ನೇ ತಾರೀಕಿನ ದಿನ ಅಮೆರಿ (ಭಾರತಸಚಿವ)ಯವರು ಪಾರ್ಲಿಮೆಂಟಿನಲ್ಲಿ ನುಡಿದರು.

ಬ್ರಿಟನಿನಲ್ಲಿ ತೆರಿಗೆ ಹೆಚ್ಚಿದೆ

ಬ್ರಿಟನಿನ ಆದಾಯ ವ್ಯಯವನ್ನು ಸರಿಮಾಡಲು ತೆರಿಗೆಯನ್ನು ಹೆಚ್ಚಿಸದೆ ನಿರ್ವಾಹವಿಲ್ಲದಿರುವುದರಿಂದ ಆದಾಯ ತೆರಿಗೆಯನ್ನು ಹೆಚ್ಚಿಸುವರಾಗಿ ತಿಳಿದಿದೆ

ತುರ್ಕಿ—ಜರ್ಮನಿ ಒಪ್ಪಂದ

ತುರ್ಕಿ ಜರ್ಮನಿಗಳೊಳಗೆ ಒಂದು ವ್ಯಾಪಾರದ ಒಪ್ಪಂದವಾಗಿದೆ ಈ ಎರಡು ದೇಶಗಳೊಳಗೆ ೨೧ ಮಿಲಿಯ ಟರ್ಕಿ ಪವನುಗಳು ಬೆಲೆಬಾಳುವ ಸಾಮಗ್ರಿಗಳ ವ್ಯವಹಾರ ನಡೆಸಬಹುದೆಂದು ಕರಾರಿನಲ್ಲಿ ತಿಳಿಸಿದೆ. ಇದರಿಂದ ತುರ್ಕಿ ಮತ್ತು ಬ್ರಿಟನಿನ ಸ್ನೇಹಹಸ್ತಕ್ಕೆ ಕುಂದಿಲ್ಲವೆಂದೂ ತಿಳಿದಿದೆ.

ಪೆಲೆಸ್ಟೈನಿನ ಮೇಲೆ ಇಟಲಿಯ ಕಣ್ಣೇ?

ಪೆಲೆಸ್ಟೈನನ್ನು ಇಟಲಿಯ ಸಾಮ್ರಾಜ್ಯದೊಳಗೆ ಸೇರಿಸಿಕೊಳ್ಳುವುದು ಇಟಲಿಯ ಯುದ್ಧೋದ್ದೇಶಗಳಲ್ಲಿ ಒಂದಾಗಿದೆಯೆಂದು ಈಗ ಹೊಸತೊಂದು ಚಳವಳಿವು ಆರಂಭವಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಅಧಿವೇಶನ

ಭಾರತದ ರಾಜಕೀಯದಲ್ಲಿ ಈ ವಾರ ಮಹತ್ವವಾದೊಂದು ಘಟನೆ ನಡೆಯಿತು ಪೂನೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಜರಗಿತು. ಅಂತರ್ ರಾಷ್ಟ್ರೀಯ ಪರಿಸ್ಥಿತಿಯು ದಿನದಿಂದ ದಿನಕ್ಕೆ ವಿಷಮವಾಗುತ್ತಾ ಬರುತ್ತಿರುವ ಈ ಕಾಲದಲ್ಲಿ, ಯುದ್ಧ ಪ್ರವೃತ್ತ ರಾಷ್ಟ್ರವಾದ ಬ್ರಿಟನಿನೊಡನೆ ಭಾರತವು ಸ್ವಾತಂತ್ರ್ಯ ಪ್ರಶ್ನೆಯನ್ನು ಹೇಗೆ ಮುಂದಿಡಬೇಕೆಂಬ ವಿಷಯವಾಗಿ ಧುರೀಣರು. ಹಲಕಾಲದಿಂದ ವಿಚಾರ ಮಾಡುತ್ತಿದ್ದರು ಡಿಲ್ಲಿಯಲ್ಲಿ ಒಂದು ನಿರ್ಣಯ ಮಾಡಿದರು ಅದರಲ್ಲಿ ಕಾಂಗ್ರೆಸಿನ ರಾಷ್ಟ್ರೀಯ ಸರಕಾರದ ಕೇಳಿಕೆಯನ್ನು ಬ್ರಿಟನು ತತ್ಕಾಲಕ್ಕೆ ಪೂರೈಸಿಕೊಡುವಲ್ಲಿ ಅದಕ್ಕೆ ಯುದ್ಧದಲ್ಲಿ ಬೆಂಬಲಕೊಡಬಹುದೆಂದೂ, ಹೊರಗಿನ ದಾಳಿ, ಒಳಗಿನ ಜಗಳಗಳಿಗೆ ಅಹಿಂಸಾ ತತ್ವವು ಸಲ್ಲದೆಂದೂ ಕಾಂಗ್ರೆಸು ನಿಶ್ಚಯಮಾಡಿತು ಈ ವಿಷಯವಾಗಿ ಬೇರೆ ಬೇರೆ ಪಂಗಡದವರು ಅನೇಕ ಅಭಿಪ್ರಾಯವಿತ್ತರು ಆದರೆ ಈಗಿನ ಸಮಯಕ್ಕೆ ಇದೇ ಧೋರಣೆಯು ಒಪ್ಪತಕ್ಕದ್ದೆಂದು ಮುಖಂಡರು ಡಿಲ್ಲಿಯ ನಿರ್ಣಯವನ್ನೇ ಅಂಗೀಕಾರ ಮಾಡಿದರು

ಹಾಲ್‌ವೆಲ್ ಸತ್ಯಾಗ್ರಹ ನಿಂತಿತು

ಬಂಗಾಳದಲ್ಲಿ ಬೋಸರಿಂದ ಆರಂಭಿಸಲ್ಪಟ್ಟ ಹಾಲ್‌ವೆಲ್ ಪ್ರತಿಮೆಯನ್ನು ಕಿತ್ತುಹಾಕಬೇಕೆಂಬ ಸಲುವಾಗಿ ತೊಡಗಿದ ಸತ್ಯಾಗ್ರಹ ನಿಲ್ಲಿಸಲ್ಪಟ್ಟಿತು ಸರಕಾರವು ಆ ಪ್ರತಿಮೆಯನ್ನು ಕಿತ್ತುಹಾಕಲು ಒಪ್ಪಿಗೆ ಕೊಟ್ಟುದೇ ಸತ್ಯಾಗ್ರಹವನ್ನು ನಿಲ್ಲಿಸಲು ಕಾರಣವಾಯಿತು.

ಮದ್ರಾಸಿನಲ್ಲಿ ವೈಸರಾಯರು

ವೈಸರಾಯರು ಪತ್ನೀ ಕುಟುಂಬ ಸಮೇತರಾಗಿ ಸಿಮ್ಲಾದಿಂದ ಹೊರಟು ಭಾರತದ ಬೇರೆ ಬೇರೆ ಪ್ರಾಂತಗಳನ್ನು ಸಂಚರಿಸಲಿದ್ದಾರೆ. ಅವರು ಈ ವಾರ ಮದ್ರಾಸಿಗೆ ಬಂದಿರುವರು. ಗವರ್ನರರು ಅವರಿಗೆ ವಿಶೇಷ ಸತ್ಕಾರಗಳನ್ನು ಮಾಡಿದರು.

ಮದ್ಯಪಾನ ನಿಷೇದವನ್ನು ತೆಗೆಯದಿರಿ

ಬೊಂಬಯಿಯಲ್ಲಿ ಕಾಂಗ್ರೆಸ್ ಸರಕಾರವು ಮಾಡಿದ ಮದ್ಯಪಾನ ನಿಷೇಧವನ್ನು ಈಗ ರದ್ದುಮಾಡಲಾಗಿದೆಯಷ್ಟೆ? ಅದು ಕೂಡದೆಂದು ಮುಂಬಯಿ ಪ್ರಾಂತದ ಹಲವು ಕಡೆಗಳಲ್ಲಿ ಚಳವಳಿವು ಆಗುತ್ತಿದೆ ಸ್ಥಳೀಯ ಸಂಸ್ಥೆಗಳಲ್ಲಿ ಮದ್ಯಪಾನ ನಿಷೇಧವನ್ನು ಸಮರ್ಥಿಸಿ ನಿರ್ಣಯಗಳಾಗುತ್ತಿವೆ

ವರ್ಧಾದಲ್ಲಿ ಮುಂದಾಳಗಳು

ಪೂನೆಗೆ ಕಾಂಗ್ರೆಸ್ ಅಧಿವೇಶನಕ್ಕೆ

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.



ಡಿಲ್ಲಿಯ ನಿರ್ಣಯವು ಸ್ವೀಕಾರವಾಯಿತು

ಪೂನೆಯಲ್ಲಿ ರಾಷ್ಟ್ರೀಯ ಮುಖಂಡರು

ಬಂಗಾಳದ ಸತ್ಯಾಗ್ರಹ ನಿಂತಿತು

ಒರಿಸ್ಸಾ ಮಂತ್ರಿಮಂಡಳದ ವಿಚಾರ — ಮದ್ರಾಸಿನಲ್ಲಿ ನೈಸರಾಯರು

ಶ್ರೀ ಎಚ್ ವಿ. ಕಾಮತರಿಗೆ ಕಠಿಣ ಶಿಕ್ಷೆ!

ಹೋಗಿದ್ದ ರಾಜೇಂದ್ರ ಪ್ರಸಾದ, ಡಾ। ಪ್ರಫುಲ್ಲ ಚಂದ್ರ, ಗೋಪಿನಾಥ ಬಾರ್ಡೋಲಿ ಇವರು ವರ್ಧಾಕ್ಕೆ ತೆರಳಿ ಮಹಾತ್ಮಾಜಿಯವರ ಸಂದರ್ಶನ ಮಾಡಿದರು.

ಒರಿಸಾದ ಘಟನೆ

ಒರಿಸ್ಸಾದಲ್ಲಿ ಮಿಶ್ರ ಮಂತ್ರಿ ಮಂಡಳವನ್ನು ಮಾಡುವ ಸಲುವಾಗಿ ಕಾಂಗ್ರೆಸ್ಸಿನ ಹೇಳಿಕೆಗೆ ವಿರುದ್ಧ ಪಂಡಿತ ಗೋದಾವರಿ ಮಿಶ್ರರು ಕೆಲಸಮಾಡುತ್ತಿರುವುದರಿಂದ ಅವರ ಮೇಲೆ ಪೂನಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ಸು ಕಮಿಟಿಯು ಮೂರು ವರ್ಷಗಳ ವರೆಗಿನ ಶಿಸ್ತುಭಂಗದ ಕ್ರಮ ನಡೆಸಿದೆ. ಕೂಡಲೇ ಅವರು ಅಸೆಂಬ್ಲಿ ಸಭ್ಯಸ್ವತ್ವಕ್ಕೆ ರಾಜೀನಾಮೆ ಕೊಡಬೇಕೆಂದೂ ತಿಳಿಸಿದೆ



ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ. ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ. ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ. ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ' ಸೇವನೆ ಬಿಟ್ಟರೆ ಬೇರೆ ದಾರಿಯಿಲ್ಲ. ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು 'ಜೀವವಿಮೆ' ಮಾಡುವುದೆಂದರೆ

'ಲೋಧ್ರ'

ಕೇಸರಿ ಕುಟೀರಂ

ರಾಯಪೇಟೆ :: ಮದರಾಸು.

ಮಂಗಳೂರು ಪ್ರವರ್ತಕರು.

ಪೊಪ್ಯುಲರ್ ಸ್ಟೋರ್ಸ್ ರಥಬೀದಿ

ಒತ್ತಾಯದಿಂದ ಯುದ್ಧಕ್ಕೆ ಸಹಾಯಕೊಡಿಸಬಾರದು

ಪೂನಾದಲ್ಲಿ ಸೇರಿದ ಕಾಂಗ್ರೆಸ್ಸು ಕಮಿಟಿಯು ಒತ್ತಾಯದಿಂದ ಯುದ್ಧಕ್ಕೆ ಸಹಾಯಕೊಡಿಸಬಾರದಾಗಿಯೂ, ಅದು ಯುದ್ಧ ನೀತಿಗೇ ವಿರುದ್ಧವಾಗಿದೆಯೆಂದೂ ನಿರ್ಣಯವನ್ನು ಮಾಡಿದೆ

ಶ್ರೀ। ಎಚ್. ವಿ. ಕಾಮತರಿಗೆ ೯ ತಿಂಗಳ ಕಠಿಣ ಶಿಕ್ಷೆ

೨೦೦ ಜುಲ್ಮಾನೆ!

ಭಾರತ ರಕ್ಷಣಾ ಕಾನೂನಿನ ಪ್ರಕಾರ ದಸ್ತಗಿರಿಯಾದ ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿಗಳಾದ ಶ್ರೀ। ಎಚ್. ವಿ. ಕಾಮತರಿಗೆ ಒಂಭತ್ತು ತಿಂಗಳು ಕಠಿಣ ಶಿಕ್ಷೆಯನ್ನೂ ೨೦೦ ರೂ ಜುಲ್ಮಾನೆಯನ್ನೂ ಮತ್ತು ಜುಲ್ಮಾನೆ ತಪ್ಪಿದರೆ ಮತ್ತೆರಡು ತಿಂಗಳು ಶಿಕ್ಷೆಯನ್ನನುಭವಿಸಬೇಕೆಂದೂ ತೀರ್ಪನ್ನು ಕೊಡಲಾಯಿತು.

ಶ್ರೀ। ಬಿ. ಜಿ. ಖೇರರು ಬೀದಿಯನ್ನು ಗುಡಿಸಿದರು

ಕೈಯಲ್ಲಿ ಕಸಪರಿಕೆಯನ್ನು ಹಿಡಿದುಕೊಂಡು ಬೊಂಬಾಯಿ ಪ್ರಾಂತ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ। ಬಿ. ಜಿ. ಖೇರ್‌ರವರು ಕುರ್ಲಾ ಎಂಬ ಬೊಂಬಾಯಿ ನಗರದ ಬಡಾವಣೆಯಲ್ಲಿರುವ ಹರಿಜನ ಕೇರಿಯ ಬೀದಿಗಳನ್ನು ಗುಡಿಸಿದರು. ಇವರ ಜೊತೆಯಲ್ಲಿ ೩೫ ಮಂದಿ ಸತ್ಯಾಗ್ರಹಿಗಳೂ ಕೆಲಸಕ್ಕೆ ಆರಂಭಿಸಿದರು. ಕುರ್ಲಾ ಬಡಾವಣೆಯ ಅನೇಕ ಮಂದಿ ಪೌರಸಭಾ ಸದಸ್ಯರೂ ಮತ್ತು ಇತರ ಸಾರ್ವಜನಿಕ ಸೇವಕರೂ ಈ ಕಾರ್ಯದಲ್ಲಿ ಭಾಗವಹಿಸಿದ್ದರು

ಡಾ। ಅಟಾಲರು

ಕಾಂಗ್ರೆಸ್ಸು ಸಂಸ್ಥೆಯು ಹಿಂದೀಯ ರಾಷ್ಟ್ರದ ಪರವಾಗಿ ಚೈನಾಕ್ಕೆ ಕಳುಹಿಸಿದ ವೈದ್ಯಕೀಯ ನಿಯೋಗ ಮಂಡಳಿಯ ಅಧ್ಯಕ್ಷರಾದ ಡಾ। ಅಟಾಲ್ ಅವರು ಚೈನಾದಿಂದ ಹಿಂತಿರುಗಿರುವರು. ಅವರಿಗೆ ಅಲ್ಲಹಾಬಾದ್ ಪೌರಜನರು ಸುಸ್ವಾಗತವನ್ನಿತ್ತರು. ಈ ಸಂಬಂಧ ನಡೆದ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಪಂಡಿತ ನೆಹರುಗಳು ಕಾಂಗ್ರೆಸ್ಸು ಧೋರಣೆಯನ್ನು ವಿವರಿಸಿದರು.

ಶಾಂತಿನಿಕೇತನ

ರವೀಂದ್ರರ ಶಾಂತಿನಿಕೇತನ ಟ್ರಂಕ್ ಟೆಲಿಫೋನಿನ ಸಂಬಂಧವು ಈಗ ಜೋಡಿಸಲಾಗಿದೆ

ಅರ್ಧ ರೂಪಾಯಿ ನಾಣ್ಯದಲ್ಲಿ ಲೋಹಮಿಶ್ರಣ

ಅರ್ಧ ರೂಪಾಯಿಯ ಬೆಳ್ಳಿಯ ನಾಣ್ಯದಲ್ಲಿ ಬೆಳ್ಳಿಯ ಅಂಶವನ್ನು ಕಡಿಮೆ ಮಾಡಿ ಬೇರೆ ಲೋಹದ ಮಿಶ್ರಣವನ್ನು ಸೇರಿಸುವರಾಗಿ ತಿಳಿದು ಬಂದಿದೆ.

ಮಾಲವಿಯರ ಶಾಂತಿಯಜ್ಞ

ಪ್ರಪಂಚದಲ್ಲಿ ಶಾಂತಿಯುಕ್ತ ನ್ಯಾಯಗಳು ನೆಲಸಲು, ಭಾರತೀಯರು ಶಾಂತರೀತಿಯಿಂದ ಸ್ವಾತಂತ್ರ್ಯ ಹೊಂದಲು, ಭಾರತದಲ್ಲಿ ಹಿಂದುಗಳಿಗೆ ಗೌರವದಿಂದ ಜೀವಿಸುವಂತ ದೇವರು ಅನುಗ್ರಹ ಮಾಡಲು, ದೇವರನ್ನು ಪ್ರಾರ್ಥಿಸುವ ಸಲುವಾಗಿ ಹತ್ತು ದಿನಗಳ ವರೆಗೆ ಪಂಡಿತ ಮದನಮೋಹನ ಮಾಲವೀಯರು ಕಾಶಿ ದಶಾಶ್ವಮೇಧ ಘಾಟಿನ ಚಿತ್ತರಂಜನ ಉದ್ಯಾನದಲ್ಲಿ ಬರುವ ಆಗೋಸ್ತು ತಿಂಗಳ ಎಂಟನೇ ತಾರೀಕಿನಿಂದ ಒಂದು ಯಜ್ಞವನ್ನು ಪ್ರಾರಂಭಿಸುವವರು.



ಬ್ರಿಟನಿನ ಕರಾವಳಿಯಲ್ಲಿ ನಿಲ್ಲಿಸಿರುವ ನಾವಿಕರಿಲ್ಲದ ಹಡಗುಗಳು. ಇವುಗಳ ಮೇಲೆ ಕಾಣುವ ದೀಪಗಳು ಎರಡು ತಿಂಗಳ ತನಕ ಬಿಡದೆ ಉರಿಯುವವು

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಾಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚೊನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C No 156/1940.

ಕೆ ಉಗ್ಗಪ್ಪ ಶೆಟ್ಟಿ ರಿಸೀವರ್ appointed in R C P 156/30 on the file of the Subordiate Judg of S. Kanara,—ವಾದಿ

ಮತ್ತು

ಜಾಬಿಯಾನ್, ಸಿನೋಮು ಸೋಜ, ಜೋಕಿ ಸೋಜರ ಮಗ ಮಂಗಳೂರು ತಾಲೂಕು ಬೊಂದಂತಿಲ ಗ್ರಾಮಸ್ಥ—ಪ್ರತಿವಾದಿ,

ಮೇಲ್ಕಾಣಿಸಿದ ವಾದಿಯು ದಾವಾ ನಿವೃತ್ತಿಗೋಸ್ಕರ ನಿಮ್ಮ ಮೇಲೆ ಮಾಡಿದ ವ್ಯಾಜ್ಯವು ಶನ್ವಾಯ್ಗೆ ತಾರೀಕು 12-8-40ಕ್ಕೆ ಇಟ್ಟಿರುತ್ತದೆ. ಸದ್ರಿ ತಾರೀಕಿಗೆ ನೀವು ಖುದ್ದಾಗಿಯಾಗಲೀ ವಕೀಲರ ಮುಖಾಂತರವಾಗಿಯಾಗಲೀ ಈ ಕೋರ್ಟ ಮುಂದೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರ್ ಮಾಡಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು ತಿಳಿದಿರಲಿ.

ಮಂಗಳೂರು 29-7-40 — B. K. Hegde ವಾದಿ ಪರ ಎಡ್ವೋಕೇಟ್.

ಬ್ರಿಟನನ್ನು ಬೆದರಿಸಲು

ಜರ್ಮನಿಯ ಅಪಪ್ರಚಾರಗಳು!

★ ಭಯಂಕರ ಯಂತ್ರಗಳಂತೆ!

★ ನಾಲ್ಕು ಹೊಸ ಶಸ್ತ್ರಗಳಂತೆ!

★ ವಿಷಮಯ ಗೇಸುಗಳಂತೆ!

★ ಬ್ರಿಟನಿಗೆ ಮುತ್ತಿಗೆಯ ಯತ್ನವಂತೆ!

ಒಂದು ಮುತ್ತಿಗೆಯು ಆಗಿಯೇ ಆಗುವದೆಂಬ ಭಯವನ್ನು ಹುಟ್ಟಿಸಿ ಬ್ರಿಟನಿನ ಧೃತಿ ಕೆಡಿಸುವ ಮತ್ತು ಉಪಾಯದಿಂದ ತಾನು ಗೆಲ್ಲುವ ಪ್ರಚಾರ ಕಾರ್ಯವನ್ನೀಗ ಹಿಟ್ಲರನು ಆರಂಭಿಸಿದ್ದಾನೆ. ಬ್ರಿಟನಿಗೆ ಜರ್ಮನ್ ಮುತ್ತಿಗೆಯ ವಿಷಯವಾದ ರೋಮಾಂಚನಕಾರೀ ಸಮಾಚಾರಗಳನ್ನು ಬ್ರಿಟನಿನ ಜನರು ನಂಬಬೇಕೆಂದು ಹಿಟ್ಲರನು ಆ ಸಮಾಚಾರಗಳನ್ನು ತಟಸ್ಥ ರಾಷ್ಟ್ರಗಳ ಮೂಲಕ ಅಲ್ಲಿ ಕಳುಹಿಸಿ ಕೊಡುವ ಏರ್ಪಾಡು ಮಾಡುತ್ತಾನೆ.

ಭಯಂಕರ ಯಂತ್ರ ಸಾಧನ

ಬ್ರಿಟಿಷ ದ್ವೀಪಗಳನ್ನು, ಅವುಗಳೊಳಗಿರುವ ಮನೆ ಮರ ಜನ ಜಾನುವಾರು, ಹಣ ಸಂಪತ್ತಿಯ ಸಮೇತ, ಸುಟ್ಟು ಭಸ್ಮಮಾಡುವದಕ್ಕಾಗಿ ಜರ್ಮನಿಯಲ್ಲಿ ಒಂದು ಅದ್ಭುತ ಯಂತ್ರ ಸಾಧನವು ಸಿದ್ಧವಾಗಿ ಹಿಟ್ಲರನ ಆಜ್ಞೆಯನ್ನು ನಿರೀಕ್ಷಿಸಿಕೊಂಡಿದೆಯಂತೆ. ಹಿಟ್ಲರ ನಾಝೀ ಸೇನೆಯು ನೆಲ ಜಲ ಆಕಾಶ ಮೂರು ಮಾರ್ಗಗಳಿಂದ ಬ್ರಿಟನನ್ನು ಮುತ್ತುವದಕ್ಕೋಸ್ಕರ ಸಂಪೂರ್ಣ ತಯಾರಿ ಈಗಾಗಲೇ ಆಗಿದೆಯಂತೆ.

ಈ ಮುತ್ತಿಗೆಯು ಇನ್ನೆರಡು ತಿಂಗಳುಗಳ ತನಕ ಇರುವದಂತೆ' ಆ ಅವಧಿಗೆ ಬೇಕಾದಷ್ಟು ಜನಬಲ, ಧನಬಲ, ಮತ್ತು ಶಸ್ತ್ರಾಸ್ತ್ರಗಳ 'ಬಲವು ಜರ್ಮನಿಗೆ ಸಂಪೂರ್ಣವಾಗಿ ಇದೆಯೆಂದೂ ಎರಡು ತಿಂಗಳ ಅವಧಿ ಮುಗಿಯುವಾಗ, ನವಂಬರ ಮೊದಲುಗೊಂಡು ಯುರೋಪಿನಲ್ಲಿ ಹಿಮಬೀಳಲಾರಂಭಿಸುವದರಿಂದ, ಆ ಮುತ್ತಿಗೆಯಿಂದ ಬ್ರಿಟನನ್ನು ಸೋಲಿಸಲಿಕ್ಕಾಗದಿದ್ದರೂ, ಛಳಿಗಾಲದಲ್ಲಿ ಪುನಃ ತಯಾರಿ ಮಾಡಿಕೊಳ್ಳಲಿಕ್ಕೆ ಸಮಯ ಸಿಕ್ಕುವದಾದ್ದರಿಂದ ಹಿಟ್ಲರನು ಮುತ್ತಿಗೆಗೆ ಇದೇ ಸಮಯವನ್ನು ಆರಿಸಿಕೊಂಡಿದ್ದಾನೆಯೆಂದೂ ಪ್ರಚಾರವಾಗಿದೆ.

ನಾಲ್ಕು ಹೊಸ ಶಸ್ತ್ರಗಳು

ಮುತ್ತಿಗೆಯು ಸಫಲವಾಗುವುದಕ್ಕೋಸ್ಕರ ಜರ್ಮನಿಯ ವಿಜ್ಞಾನಿಗಳು ಹೊಸ ಜಾತಿಯ ವಿಮಾನ, ಸಬ್‌ಮೇರಿನು ಹಡಗು ಮತ್ತು ಗೇಸನ್ನು ತಯಾರಿಸಿರುವರೆಂದೂ ಇವುಗಳ ರಚನಾ ಕ್ರಮವನ್ನು ನಾಝೀ ಯುದ್ಧ ಖಾತೆಯವರಲ್ಲದೆ ಮತ್ತೆ ಯಾರೂ ತಿಳಿದಿರುವದಿಲ್ಲವೆಂದೂ ಆ ಹೊಸಜಾತಿಯ ವಿಮಾನವು ತಾಸಿಗೆ ೪೫೦ ಮೈಲುಗಳಷ್ಟು ದೂರ ಹಾರಬಲ್ಲುದೆಂದೂ ಅದು ಸಣ್ಣದಾಗಿ, ಈಗಿನ ವಿಮಾನಗಳ ಅರ್ಧದಷ್ಟು ಅಂದರೆ ಸುಮಾರು ಎರಡುಟನ್ ಸ್ಫೋಟನ ದ್ರವ್ಯಗಳನ್ನು ಹೊತ್ತುಕೊಳ್ಳುವದಾದರೂ, ಆ ದ್ರವ್ಯಗಳು ಮಾತ್ರ ಅದ್ಭುತ ವಿನಾಶಕಾರಿ ಶಕ್ತಿಯುಳ್ಳವುಗಳಾಗಿರುವೆಂದೂ ಪ್ರಕಟಿಸಲ್ಪಟ್ಟಿದೆ. ಬಹು ಚಿಕ್ಕದಾಗಿರುವ ಸಬ್‌ಮೆರಿನುಗಳು ಸಮುದ್ರದಲ್ಲಿ ನೂರಾರು ಸಂಚರಿಸುತಿದ್ದರೂ, ಅವುಗಳನ್ನು ಗುರುತಿಸುವದು ಶತ್ರುಗಳಿಗೆ ಅಸಾಧ್ಯವಾಗಿ ಅದರಂತೆ ೫೦ ರಿಂದ ೧೦೦ರ ತನಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ನಾಝೀ ಸೈನಿಕರನ್ನು ಕೊಂಡು ಹೋಗುವ ಚಿಕ್ಕ ಚಿಕ್ಕ ವಿಜಾತೀಯ ಹಡಗುಗಳೂ ಸಾವಿರಾರು ಕಟ್ಟಲ್ಪಟ್ಟು ಸಿದ್ಧವಾಗಿದೆಯೆಂದೂ ಪ್ರಚಾರವಾಗಿದೆ.

ಹೊಸ, ಗೇಸು

ಬ್ರಿಟನನ್ನು ಮುತ್ತಲಿಕ್ಕೆ ಜರ್ಮನ ವಿಜ್ಞಾನಿಗಳು ಕಂಡು ಹಿಡಿದ ಆ ಹೊಸ ಗೇಸು ಹಿಟ್ಟಿನ ರೂಪದಲ್ಲಿ ಇರುತ್ತದೆಯಂತೆ ಆ ಹಿಟ್ಟು ನೀರಿನ ಪಸೆಯ ಸಂಸರ್ಗವಾದೊಡನೆ ಪ್ರಾಣಘಾತುಕ ಅನಿಲವನ್ನು ಹೊರಡಿಸುವದೆಂದೂ ಅಷ್ಟರ ತನಕ ಅದು ಎಲ್ಲಿ ಬಿದ್ದಿದ್ದರೂ ಕೆಡುವದಿಲ್ಲವೆಂದೂ ಜನರಿಂದ ಅದನ್ನು ಗುರುತಿಸಲಿಕ್ಕೂ ಆಗುವದಿಲ್ಲವೆಂದೂ ಸುದ್ದಿ. ವಿಮಾನ, ಹಡಗು, ಸಬ್ ಮೆರೀನು ಇವುಗಳು ವ್ಯವಸ್ಥಿತ ಕ್ರಮದಲ್ಲಿ ಒಂದೇ ಬಾರಿಗೆ ಹೊರಟು, ಒಂದು ಇನ್ನೊಂದನ್ನು ರಕ್ಷಣೆ ಮಾಡಿಕೊಳ್ಳುತ್ತ ಉತ್ತರ ಸಮುದ್ರ ಮಾರ್ಗವಾಗಿ ಬ್ರಿಟನನ್ನು ಆಕ್ರಮಿಸುವವೆಂದೂ, ಆ ಸ್ಫೋಟನ ದ್ರಾವಕ ಮತ್ತು ಹೊಸಜಾತಿಯ ಗೇಸಿನ ಪ್ರಯೋಗದಿಂದ ಹಿಟ್ಲರನಿಗೆ ಜಯವು ಖಂಡಿತವೆಂದೂ ಹೇಳಲಾಗುತ್ತದೆ.

ಹೇಳಿಕೆಯ ಆದಿ

ಇಂಥ ವರ್ತಮಾನಗಳನ್ನು ಬ್ರಿಟಿಷರ ಧೈರ್ಯ ಕೆಡಿಸಿ ಆ ಮೂಲಕ ತಾವು ಯುದ್ಧದಲ್ಲಿ ಸುಲಭವಾಗಿ ಗೆಲ್ಲಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಜರ್ಮನಿಯ ನಾಝೀ ಪ್ರಚಾರ ಖಾತೆಯವರು ಹರಡಿಸುತಿದ್ದಾರೆ ಎಂಬುದು ಆ ವರ್ತಮಾನಗಳಲ್ಲಿ ತುಂಬಿರುವ ನಂಬಲಾಗದ ಹಲವು ವಿಷಯಗಳಿಂದ ಚೆನ್ನಾಗಿ ತಿಳಿಯುವದು.

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ
ವಿದ್ಯಾರ್ಥಿಗಳಿಗಾಗಿ

ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ರಚಿತವಾದ

ಭೂಗೋಳದ ಕೈಪಿಡಿ

ಎಂಬೀ ಅತ್ಯುತ್ತಮವಾದ ನೂತನ ಪುಸ್ತಕವೊಂದು ಸಿದ್ಧವಾಗಿದೆ!
ಸರಕಾರೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕೆಂದು ಬಯಸುವ ಎಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ.
ಹೆಸರು ಕೈಪಿಡಿಯಾದರೂ ವಿಶಾಲ ಭೂಗೋಳದ ಜ್ಞಾನ ಭಂಡಾರ!
ಸುಂದರವಾದ ಹಲವು ಚಿತ್ರಗಳು! ವಿವಿಧ ಭೂಪಟಗಳು!
ಅನೇಕ ಪ್ರಶ್ನಾವಳಿಗಳು!
ಅತ್ಯಂತ ಕಡಿಮೆ ಕ್ರಯ! ಬೆಲೆ ರೂ. ೧-೨-೦ ಮಾತ್ರ
ಶಾರದಾ ಛಾಪಖಾನೆ, ಮಂಗಳೂರು.

ಆಯುರ್ವೇದಾಶ್ರಮಂ
1898ರಲ್ಲಿ ಸ್ಥಾಪಿತವಾದುದು ಮದರಾಸು.
K A I.

The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.
ಹೆಡ್ ಆಫೀಸು, ಕೆನರಾ ಹೈಸ್ಕೂಲ್ ರೋಡು ಬ್ರೆಂಚ್ ಸೆಂಟ್ರಲ್ ಮಾರ್ಕೆಟ್
ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½
" 6 ತಿಂಗಳಿಗೆ 4% " 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್

ವಿಚಿತ್ರ ಪ್ರಪಂಚ

ಸಮುದ್ರದೊಳಗೆ ಕಲ್ಲು ಕಂಭ

ಚಿಲಿಯಿಂದ ಸ್ವಲ್ಪ ದೂರ, ಶಾಂತ ಸಾಗರದಲ್ಲಿ ೫೦೦೦ ಅಡಿ ಆಳದಲ್ಲಿರುವ ಸಮುದ್ರತಳದಲ್ಲಿ ಅಷ್ಟೇ ಎತ್ತರದ ಸೂಜಿ ಆಕಾರದ ಒಂದು ಅದ್ಭುತ ಶಿಲಾಸ್ತಂಭವು ಎದ್ದು ನಿಂತಿರುವದು. ತಳದಲ್ಲಿ ಈ ಕಂಭದ ಸುತ್ತಳತೆಯು ೮೦ ಗಜವಾಗಿದೆ ತುದಿಯಲ್ಲಿ ಅದರ ಸುತ್ತಳತೆಯು ಒಂದು ಗಾಡಿ ಚಕ್ರಕ್ಕಿಂತ ಹೆಚ್ಚಾಗಿರುವದಿಲ್ಲ ಇಂಥ ಸ್ತಂಭವು ಅಲ್ಲಿ ಹೇಗೆ ಯಾವಾಗ ಉಂಟಾಯಿತು ಅಥವಾ ಬಂದಿತೆಂಬುದು ಯಾರಿಗೂ ತಿಳಿಯದ ವಿಷಯವಾಗಿದೆ. ನೆಲದ ಮೇಲಂತೂ ಅಷ್ಟು ಎತ್ತರದ ಕಂಬವನ್ನು ನಿಲ್ಲಿಸುವುದು ಯಾರಿಗೂ ಅಸಾಧ್ಯವಾದ ಸಂಗತಿಯಾಗಿದ

ಬುರುಬುಡಿಕೆ ಹಾವು ಅಮೆರಿಕನರ ಆಹಾರ

ಅಮೆರಿಕದ ಜೋರ್ಜ್ ಎಂಡ್ ವ ತು ಳವನ ಕೆಲಸಗಾರರು ವಿಚಿತ್ರವ್ಯಾಪಾರದಿಂದ ಜೀವನ ನಿರ್ವಾಹ ಮಾಡುತ್ತಲಿರುವರು ಅವರೊಂದು ಬುಡಬುಡಿಕೆ ಹಾವು ಕಾರಖಾನೆಯನ್ನು ಸ್ಥಾಪಿಸಿದ್ದಾರೆ ಕೆಲಸಗಾರರು ದೇಶವನ್ನೆಲ್ಲ ಸಂಚರಿಸಿ ಈ ಹಾವುಗಳನ್ನು ಹಿಡಿದು ಕಾರಖಾನೆಗೆ ಕಳುಹಿಸುವರು. ಅಲ್ಲಿ ಆ ಹಾವುಗಳನ್ನು ಕೊಂದು ಬಾಲದಿಂದ ತೂಗಿಸುವರು ರಕ್ತವೆಲ್ಲಾ ಇಳಿದು ಹೋದ ಮೇಲೆ ಅದನ್ನು ಗೊಬ್ಬರವಾಗಿ ಉಪಯೋಗಿಸುವರು ಹಾವಿನ ಯಾವ ಅಂಶವನ್ನೂ ಹಾಳು ಮಾಡುವದಿಲ್ಲ. ಈ ಹಾವುಗಳಲ್ಲಿರುವ ವಿಷವನ್ನು ದ್ರಾವಕ ವ್ಯಾಪಾರಿಗಳಿಗೆ ಮಾರುವರ ಇದು ಔಷಧ ಮಾಡಲಿಕ್ಕೆ ಬೇಕಾಗುತ್ತದೆ ಹಾವಿನ ಬಾಲದಲ್ಲಿರುವ ಬುಡುಬುಡಿಕೆಗಳನ್ನು ವಿಚಿತ್ರ ವಸ್ತುಗಳಂತೆಯೂ, ಯಂತ್ರ ಕಾಯಿತಗಳಂತೆಯೂ ಪ್ರದರ್ಶಕರಿಗೂ ಇತರರಿಗೂ ಮಾರುವರ ಈ ಹಾವಿನ ಶರೀರದಲ್ಲಿ ಒಂದು ತರದ ಕಸ್ತೂರಿಯು ದೊರೆಯುತ್ತದೆ ಅದನ್ನು ಸಂಗ್ರಹಿಸಿ ಅತ್ತರ ವ್ಯಾಪಾರಿಗಳಿಗೆ ಕ್ರಯಕ್ಕೆ ಕೊಡುವರ ಚರ್ಮವನ್ನು ಹದಮಾಡಿ ಚರ್ಮವ್ಯಾಪಾರಿಗಳಿಗೆ ಕೊಡುವರು ಈ ಚರ್ಮದಿಂದ ಸುಂದರವಾದ ಪಟ್ಟು ಬೂಟ್ಸು ಜೋತೆಗಳು ಆಗುತ್ತವೆ ಮಾಂಸವನ್ನು ಬಿಸುಡುವದಿಲ್ಲ ಅದರಿಂದಲೂ ಅವರು ಲಾಭ ಸಂಪಾದಿಸುತ್ತಾರೆ ಈ ಹಾವಿನ ಮಾಂಸವು ಪರಿಮಳವಾಗಿಯೂ, ರುಚಿಕರವಾಗಿಯೂ ಇರುವದಂತೆ ಆದ್ದರಿಂದ ಅದನ್ನು ಅಡಿಗೆ ಮಾಡಿ ದಬ್ಬಿಗಳಲ್ಲಿ ತುಂಬಿಸಿ ಮಾರುವರಂತೆ ಇದನ್ನು ಅಮೆರಿಕನರೂ ಕಾಯಿಪಲ್ಯಗಳೊಂದಿಗೆ ಬಾಯಿ ಚಪ್ಪರಿಸಿ ತಿನ್ನುವರಂತೆ, ವಿ ಜೋರ್ಜ್ ಎಂಡರು ಅಮೆರಿಕದ ಒಬ್ಬರೇ ಒಬ್ಬ ಬುಡುಬುಡಿ ಹಾವಿನ ವ್ಯಾಪಾರಿಗಳಾಗಿದ್ದಾರೆ!

ಪ್ರಪಂಚದ ಪ್ರಕಾಂಡ ಲೋಹ ವಿಗ್ರಹ

ಜಪಾನಿನ ಕಾಮಕೂರಾ ಎಂಬಲ್ಲಿ ಪ್ರಪಂಚದ ಪ್ರಕಾಂಡ ಬುದ್ಧ ವಿಗ್ರಹವಿದೆ ಇದರ ಮುಖವೊಂದೇ, ಕಿವಿಯಿಂದ ಕಿವಿಗೆ ಹದಿನೆಂಟು ಅಡಿ ಅಗಲವಾಗಿರುವದು ಇದರ ತಲೆಯ ಸುತ್ತಳತೆ ಮೂವತ್ತೆರಡು ಅಡಿ ಇರುವದು ಬಾಯಿ ಮೂರಡಿ ಅಗಲವಾಗಿದೆ ಪ್ರತಿಮೆಯು ಚಿನ್ನ, ತವರ ಮತ್ತು ತಾಮ್ರದ ಸಂಯೋಗದಿಂದ ಆಗಿದೆ ಇದ ಹದಿನೆರಡನೆಯ ಶತಮಾನದಲ್ಲಿ ಅಲ್ಲಿ ಪ್ರತಿಷ್ಠಿಸಲ್ಪಟ್ಟಿತು ಎಂದು ಐತಿಹ್ಯವಿರುವದು

ಪಾರ್ಲಿಮೆಂಟಿನಲ್ಲಿ ಅತ್ತರಿಗೆ ವಿರೋಧ

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಅತ್ತರು, ಸೆಂಟು ಮೊದಲಾದ ಪರಿಮಳ ದ್ರವ್ಯಗಳ ಉಪಯೋಗವನ್ನು ವಿರೋಧಿಸಿ ಮಸೂದೆಗಳು ಬರುವವು ಎಂದು ಕಾಲವಿದ್ದಿತು. ಪ್ರಾಚೀನ ವಿವಾಹ ಕಾಲದಲ್ಲಿ ಅತ್ತರುಗಳನ್ನು ಉಪಯೋಗಿಸುವರೋ ಅವರು ಮಾಟ ಮೋಡಿ ತಂತ್ರ ಮಂತ್ರ ಮೊದಲಾದ ಉಪಾಯಗಳಿಂದ ದಂಪತಿಗಳ ವಶೀಕರಣ ಮಾಡಿದ ಅಪರಾಧಕ್ಕೆ ಗುರಿಯಾಗುವರು ಎಂದು ಒಬ್ಬ ಸದಸ್ಯರು ಪಾರ್ಲಿಮೆಂಟಿನಲ್ಲಿ ಬಾದು ವ ಸೂದೆಯನ್ನು ತಂದ ಉಲ್ಲೇಖವಿದೆ ಇದು ಮಾತ್ರ ಕಾನೂನಾಗಿ ಚೆಂಜೂರಾಗಲಿಲ್ಲ ಪರಂತು ಅನಂತರ ಇಂಗ್ಲಾಂಡಿನಲಿ ಈ ಅತ್ತರುಗಳು ದೊರೆಯುವದು ಬಹು ಕಠಿನವಾದಾಗ ಹೆಂಗಸರು ಯಾರೂ ಅತ್ತರುಗಳನ್ನು ಉಪಯೋಗಿಸಬಾರದೆಂದು ನಿಷೇಧಿಸಿ ಒಂದು ಕಾನೂನ ಪಾರ್ಲಿಮೆಂಟಿನಲ್ಲಿ ಆಗಿತ್ತು ಅತ್ತರಗಳಿಗೆ ಬರಗಾಲ ಬಂದಾಗ, ಅವುಗಳನ್ನು ಅವು ಮಾತ್ರ ಉಪಯೋಗಿಸಬಹುದೆಂಬುದು ಈ ಕಾನೂನು ಮಾಡಿದ ಸ್ತ್ರೀ ವಿರೋಧಿ ಪುರುಷರ ಸ್ವಾರ್ಥವಾಗಿತ್ತು

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ್ಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊರೋಕಸ ಎಂಬ ವಿಷಜಾತಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ಶೀಘ್ರವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ. 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲಭಾಯಿ ಪಟೇಲ ರೋಡ, ಮುಂಬಾಯಿ4

Sole Manufacturer: **Dr. D. N. JASANI,** (S.D.M.) Vithalbhai Patel Road, BOMABY4

Madras Agent: **Appah & Co, ChinaBazar Madras.**

NOTICE

In the Court of the Subordinate Judge of South Kanara.

A. S. No. 721 of 1939

Between

The Ashwathapur Kalanidhi Co-operative Society by President and Secretary *Appellants*

Bhoja Rai & others— *Respondents*

Please take notice that the above appeal preferred by the appellants against the decree and judgment of the court of the District Munsif of Karkal in O. S. No. 430/1936 dated 14-8-1939 stands posted to **12-8-1940 for final bisposal.**

You are hereby requested to appear either by person or by a duly instructed pleader to contest the above matter failing which the same shall be heard and determined ex parte.

Published as per order in R. I. A. No. 640/1940 dated 24-7-40.

To Venkanna Govinda Mallya, C/o Govinda Rao, Mangalore. Sahitya Bhandar, Hubli.

G. Somasheker Rao,
Vakil for appellants.
Mangalor, 25-7-1940.

ಜೀವನಜ್ಯೋತಿಗಳು:

ಶ್ರೀ ಆಲೂರ ವೆಂಕಟರಾಯರು

ಶ್ರೀಮಾನ್ ಆಲೂರ ವೆಂಕಟರಾಯರು ಕನ್ನಡಿಗರಿಗೆಲ್ಲ ಚಿರಪರಿಚಿತರು; ಕರ್ನಾಟಕದ ಕುಲಪುರೋಹಿತರೆನಿಸಿದವರು. ಗಾಢ ನಿದ್ರೆಯಲ್ಲಿದ್ದ ಕನ್ನಡಿಗರನ್ನು ಬಡಿದೆಬ್ಬಿಸಿ "ಕರ್ನಾಟಕ ಗತವೈಭವ" ವನ್ನು ತಿಳಿಸಿ ತಾಯಿ ಸೇವೆಗಾಗಿ ಕನ್ನಡ ಜನತೆಯನ್ನು ಪ್ರೇರೇಪಿಸಿದ ಹಿರಿಯಾಳುಗಳಿವರು. ನಾಡಸೇವೆ, ನುಡಿಯಸೇವೆ, ದೇಶಸೇವೆ, ಈಶಸೇವೆ ಎಲ್ಲವೂ ಒಂದೇ ಎನ್ನುವ ದಿವ್ಯ ದೃಷ್ಟಿಯುಳ್ಳವರಿವರು. ಯಾವಾಗಲೂ ನಗುಮೋರೆಯುಳ್ಳವರಾಗಿರುತ್ತಾರೆ. ಗೊಡ್ಡು ಹರಟೆ ಇವರಿಗೆ ಸೇರದು. ಒಂದಲ್ಲೊಂದು ಬಗೆಯಿಂದ ಸಾರ್ವಜನಿಕ ಸೇವೆಯಲ್ಲಿ ಇವರು ತೊಡಗಿಕೊಂಡಿರುತ್ತಾರೆ. ಇವರು ಮಾಡಿದ ಕಾರ್ಯಗಳನ್ನೆಲ್ಲ ವಿವರಿಸುತ್ತ ಹೋದರೆ ಅದೊಂದು ಮಹಾ ಗ್ರಂಥವೇ ಆಗಬಹುದು.

೧೯೦೫ ರಿಂದ ಇಲ್ಲಿಯ ವರೆಗೆ ಅವರು ಮಾಡಿರುವ ಸಾರ್ವಜನಿಕ ಚಟುವಟಿಕೆಗಳು ವಿಪುಲವಾಗಿವೆ. ಲೋಕಮಾನ್ಯ ತಿಲಕರ ಕಾಲದಲ್ಲಿ ಹೋಮರೂಲ್ ಲೀಗಿನ ಶಾಖೆಯನ್ನು ಕರ್ನಾಟಕದಲ್ಲಿ ಸ್ಥಾಪಿಸಿ, ಕಾರ್ಯದರ್ಶಿಗಳಾಗಿ ಶ್ರೀ ವೆಂಕಟರಾಯರು ದುಡಿದರು. ಇವರು ಎರಡು ಸಲ ವಕಾಲತ್ತಿಗೆ ರಾಜೀನಾಮೆ ಕೊಟ್ಟು ರಾಷ್ಟ್ರೀಯ ಆಂದೋಲನದಲ್ಲಿ ಧುಮುಕಿದರು. ೧೯೦೫ ರಿಂದ ೧೯೨೦ರ ವರೆಗೆ ಇವರು ಕನ್ನಡನಾಡಿನ ರಾಜಕೀಯ ಮುಖಂಡರಲ್ಲಿ ಅಗ್ರಗಣ್ಯರಾಗಿದ್ದರೆಂದು ಹೇಳಬಹುದು. ಮುಂದೆ ಕೆಲವೊಂದು ಮತಭೇದಗಳ ಮೂಲಕ ಪ್ರತ್ಯಕ್ಷ ಕಾರ್ಯದಿಂದ ಹಿಂದೆ ಸರಿದುಕೊಂಡಿದ್ದರೂ ಅಪ್ರತ್ಯಕ್ಷವಾಗಿ ಶಕ್ತಿ ಮೀರಿ ದೇಶಸೇವೆ ಮಾಡುತ್ತಲೇ ಇರುವರು. ಅಂತೆಯೇ ಸರಕಾರದವರು ೧೯೩೦ರ ಸತ್ಯಾಗ್ರಹ ಆಂದೋಲನದ ಕಾಲಕ್ಕೆ ಇವರನ್ನು ಕಲಘಟಗಿಯಲ್ಲಿಟ್ಟು ಎಲ್ಲಿಯೂ ಹೋಗ ಕೂಡದೆಂದು ಬಂಧನವನ್ನು ಹಾಕಿದ್ದರು.

ಕನ್ನಡನಾಡಿನಲ್ಲಿ ಕರ್ನಾಟಕದ ಏಳ್ಗೆಗಾಗಿ ಹೆಣಗುತ್ತಿರುವ ಪ್ರತಿಯೊಂದು ಸಂಸ್ಥೆಯಲ್ಲಿ ಶ್ರೀ ಆಲೂರರ ಅಂಗವಿದೆ. ಬಹುಶಃ ಅನೇಕ ಸಂಘ ಸಂಸ್ಥೆಗಳ ಸ್ಥಾಪನೆಯ ಕಾರ್ಯದಲ್ಲಿ ಇವರೇ ಪ್ರಮುಖರು. ಪತ್ರಿಕೋದ್ಯಮದ ವಿಚಾರವಾಗಿ ಹೇಳುವುದಾದರೂ ಇವರೇ ಶ್ರೇಷ್ಠರೆಂದು ಹೇಳಬೇಕಾಗುವದು. ಕನ್ನಡನಾಡಿನ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಇವರು ಸೂತ್ರಧಾರರಂತೆ ಕಾರ್ಯವೆಸಗಿದ್ದಾರೆ. ಅನೇಕ ಪತ್ರಿಕೆಗಳ ಸಂಪಾದಕರಾಗಿ ಒಂದೇ ಸಮನೆ ಲೇಖನ ಕಾರ್ಯವನ್ನು ಮಾಡಿದ್ದಾರೆ. ಕರ್ನಾಟಕ ಪತ್ರಿಕೆ, ಕರ್ನಾಟಕ ವೃತ್ತ, ಕರ್ಮವೀರ, ಪ್ರಾಚೀನ ಕರ್ನಾಟಕ, ವಿಜಯ, ರಾಜಹಂಸ, ಕನ್ನಡಿಗ, ಜಯಕರ್ನಾಟಕ, ವಾಗ್ಭೂಷಣ ಮೊದಲಾದ ಅನೇಕ ಪತ್ರಿಕೆಗಳು ಇವರ ಉಜ್ವಲವಾದ ಲೇಖನಗಳಿಂದ ಕನ್ನಡನಾಡಿನಲ್ಲೆಲ್ಲ ಬೆಳಗಿವೆ. ಶ್ರೀ ಆಲೂರರವರು ಬರೆದ ಗ್ರಂಥಗಳಾದರೂ ಧಾರಾಳವಾಗಿವೆ. ನೀತಿ ಮೀಮಾಂಸೆ, ಶಿಕ್ಷಣ ಮೀಮಾಂಸೆ, ಸ್ವಾತಂತ್ರ್ಯ, ಕರ್ನಾಟಕ ಗತವೈಭವ, ಕರ್ನಾಟಕವೀರರತ್ನಗಳು, ವಿದ್ಯಾರಣ್ಯ ಚರಿತ್ರೆ ಮೊದಲಾದ ಅನೇಕ ಉತ್ತಮ ಕೋಟಿಯ ಪುಸ್ತಕಗಳನ್ನು ಬರೆದಿರುವದಲ್ಲದೆ ಇತ್ತೀಚೆಗೆ ಭಗವದ್ಗೀತೆಯ ವಿಚಾರವಾಗಿ ಒಂದು ಸಾವಿರ ಪುಟದ ೫ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರು 'ನವಜೀವನ ಗ್ರಂಥಭಾಂಡಾರ'ದ ಮುಖಾಂತರ ಕನ್ನಡಿಗರಿಗೆ ಸಲ್ಲಿಸಿದ ಕಾಣಿಕೆಗಳಾದರೂ ಸಾಮಾನ್ಯವಾದವುಗಳಲ್ಲ.

ಶಿಕ್ಷಣ ಕಾರ್ಯದಲ್ಲಿ ಇವರು ಬರೀ ಪುಸ್ತಕ ಬರೆಯುವುದರಿಂದಷ್ಟೇ ಸೇವೆಯನ್ನು ಸಲ್ಲಿಸಿಲ್ಲ. ಪ್ರತ್ಯಕ್ಷವಾಗಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸುವ ಸಾಹಸ ಕಾರ್ಯವನ್ನು ಕೂಡ ಮಾಡಿದ್ದಾರೆ. ೧೯೦೬ ರಿಂದ ೧೯೧೧ರ ವರೆಗೆ ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿದ್ದಲ್ಲದೆ ಮುಂದೆ ೧೯೨೦-೨೧ರಲ್ಲಿ ಕೂಡ ಧಾರವಾಡ, ಹುಬ್ಬಳ್ಳಿಗಳಲ್ಲಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಹೆಣಗಿದರು. ಅದೇ ರೀತಿ ಕರ್ನಾಟಕದಲ್ಲಿ ವಾಚನಾಲಯದ ಚಳವಳಿಯನ್ನು ಕೂಡ ಮಾಡಿ ವಿದ್ಯಾಪ್ರಸಾರಕ್ಕಾಗಿ ಯತ್ನಿಸಿದ್ದಾರೆ. ಅಂತೆಯೇ ಇವರಿಗೆ ಅನೇಕ ವರ್ಷಗಳ ವರೆಗೆ ಸಾರ್ವಜನಿಕ ವಾಚನಾಲಯ, ಧಾರವಾಡ ಸಂಸ್ಕೃತ ಪಾಠಶಾಲೆ, ಕರ್ನಾಟಕ ಸಭೆ, ಕನ್ನಡಿಗರ ಸಭೆ, ಮೊದಲಾದ ಸಂಸ್ಥೆಗಳ ಅಧ್ಯಕ್ಷಪದವು ದೊರಕಿದ್ದು; ೧೯೩೦ ರಲ್ಲಿ ಮೈಸೂರಿನಲ್ಲಿ ಕೂಡಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದವಿ ಕೂಡ ಇವರಿಗೆ ದೊರಕಿತ್ತು.

ಕಾಂಗ್ರೆಸಿನ ಮುಖಾಂತರವಾಗಿಯಾದರೂ ಇವರು ಮಾಡಿದ ಸೇವೆ ಗಣನೀಯವಾಗಿದೆ. ಧಾರವಾಡ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅನೇಕ ವರ್ಷ ಇವರು ಉಪಾಧ್ಯಕ್ಷರಾಗಿದ್ದರು.

ಶ್ರೀ ಆಲೂರ ವೆಂಕಟರಾಯರು ಕನ್ನಡಿಗರೆಲ್ಲರ ಮೆಚ್ಚಿನವರಾಗಲಿಕ್ಕೆ ಕಾರಣವೆಂದರೆ ಇವರ ನಿಸ್ವಾರ್ಥ ಸೇವೆ. "ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮಚಾಖಿಲಂ" ಎಂಬ ಉಕ್ತಿಯನ್ನು ಕಣ್ಣೆದುರಿನಲ್ಲಿಟ್ಟುಕೊಂಡು ಪ್ರತಿಯೊಂದು ಕೆಲಸದಲ್ಲಿ ಕೈ ಹಾಕುತ್ತಿರುವದರಿಂದ ಇವರಿಗೆ ಕೀರ್ತಿದೇವಿಯು ಮಾಲೆಯನ್ನು ಹಾಕುತಿದ್ದಾಳೆ.

ಬಡತನದ ಬಾಳುವೆ ಇವರದಾಗಿದ್ದರೂ ಇದ್ದುದರಲ್ಲಿಯೇ ದಾನವ ಮಾಡುವ ಬುದ್ಧಿಯೂ ಇವರಲ್ಲಿದೆ. ಅನೇಕ ಸಂಘ-ಸಂಸ್ಥೆ, ಲಾಯಬ್ರರಿಗಳಿಗೆ ಇವರು ನೂರಾರು ಪುಸ್ತಕಗಳನ್ನು ಉಚಿತವಾಗಿ ಕೊಟ್ಟಿದ್ದಾರೆ.

ಕ್ರಾಂತಿಕಾರರೆಂದು ಖ್ಯಾತಿಹೊಂದಿದ ಬ್ಯಾ. ಸಾವರಕರ, ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ ಡಾ॥ ಹರ್ಡೀಕರರಿಗೆ ಕೂಡ ಇವರು ತನು-ಮನ-ಧನದಿಂದ ನೆರವಾಗಿದ್ದಾರೆಂಬ ಸಂಗತಿಯಂತೂ ತುಂಬಾ ಉಲ್ಲೇಖನೀಯವಾಗಿದೆ.

ಕನ್ನಡನಾಡಿನಲ್ಲಿಯೇ ನಿಂತು ಕನ್ನಡ ಜನತೆಯ ಸೇವೆಯನ್ನು ಮಾಡಬೇಕೆಂಬ ಹಂಬಲವು ಇವರಿಗೆ ಬಹಳ. ಇಲ್ಲದೆ ಹೋಗಿದ್ದರೆ ಬಡೋದೆಯ ಭಾರತೀಯ ಗಂಗಾವಿದ್ಯಾಲಯಕ್ಕೆ ಸುಪರಿಂಟೆಂಡೆಂಟರಾಗಬೇಕೆಂದು ಕರೆಬಂದುದನ್ನು ಇವರು ನಿರಾಕರಿಸುತ್ತಿರಲಿಲ್ಲ.

ಕರ್ನಾಟಕ ಏಕೀಕರಣವಾಗದ ಹೊರತು ಇವರಿಗೆ ಶಾಂತತೆ ದೊರೆಯುವದಿಲ್ಲ. ಕರ್ನಾಟಕವು ಒಂದಾಗದೆ ಮುಂದಾಗದು, ಸ್ವಾತಂತ್ರ್ಯ, ವಿಶ್ವವಿದ್ಯಾಲಯವಿಲ್ಲದೆ ಅದು ಹಿರಿದಾಗದು—ಎಂಬುದು ಇವರ ದೃಢವಿಶ್ವಾಸ! ಅದಕ್ಕಾಗಿ ಇವರು ವೈ. ನಾ. ಕಡಪಾ ರಾಘವೇಂದ್ರರಾಯರೊಡನೆ ದುಡಿದಿದ್ದಾರೆ. ಈಗಲೂ ಅದಕ್ಕಾಗಿ ದುಡಿಯುತ್ತಿದ್ದಾರೆ. ಕರ್ನಾಟಕವು ಎಲ್ಲ ಬಗೆಯಿಂದಲೂ ಉನ್ನತಿಹೊಂದಬೇಕೆಂಬುದೇ ಇವರ ಆಕಾಂಕ್ಷೆ!

ಇಂಥ ವಿಶಾಲ ದೃಷ್ಟಿಯುಳ್ಳ ಕರ್ನಾಟಕ ಕುಲಪುರೋಹಿತರಾದ ಶ್ರೀ ಆಲೂರ ವೆಂಕಟರಾಯರನ್ನು ಗೌರವಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಕಳೆದ ಜುಲೈ ೧೨ನೇ ತಾರೀಖಿಗೆ ಇವರ ಷಷ್ಠ್ಯಬ್ದಿಪೂರ್ತಿಯ ಶಾಂತಿ ಸಮಾರಂಭವು ನೆರವೇರಿತು. ಇದೇ ಮೇರೆಗೆ ಪರಮಾತ್ಮನು ಅವರಿಗೆ ದೀರ್ಘಾಯುರಾರೋಗ್ಯವನ್ನು ಕೊಟ್ಟು ಅವರಿಂದ ಕನ್ನಡನಾಡಿನ ಉತ್ಕರ್ಷೆಯ ಅನೇಕ ಕಾರ್ಯಗಳನ್ನು ನೆರವೇರಿಸಿ ಅವರ ಶತಾಬ್ದಿಪೂರ್ತಿಯ ಆನಂದೋತ್ಸವವನ್ನಾದರೂ ನೋಡುವ ಭಾಗ್ಯವು ನಮಗೆ ದೊರಕುವಂತೆ ಮಾಡಲೆಂದು ಹಾರೈಸುತ್ತೇವೆ.

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
—
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ★
ಹೆಡ್ ಆಫೀಸ್—ಬೊಂಬಾಯಿ
ಕೆ. ಎನ್. ನಾಯಕ್ ಆರ್ಗನೈಸರ್ ಪ್ರೆಂಡ್ಸ್ ಸ್ಟ್ರೀಟ್ ಮಂಗಳೂರು.
ಅಥವಾ
ಕೆ. ಶ್ರೀನಿವಾಸನ್ ಬ್ರಾಂಚ್ ಮ್ಯಾನೇಜರ್ 4/5 ಫಸ್ಟ್ ಲೈನ್ ಬೀಚ್ ಮದ್ರಾಸು

★ ಸಿನೆಮಾ ಪುಟ ★

ಸೈನಿಕರಿಗೆ ಭಾರತದ ಚಿತ್ರಗಳು

ಯುದ್ಧರಂಗದಲ್ಲಿರುವ ಭಾರತೀಯ ಸೈನಿಕರಿಗೆ ಇಂಡು ಭಾರತದ ಚಲಚ್ಚಿತ್ರಗಳನ್ನು ತೋರಿಸುವ ಏರ್ಪಾಡು ಆಗಿದೆ ಇದಕ್ಕಾಗಿ ಮೋಶನ್ ಪಿಕ್ಚರ್ ಪ್ರೊಡ್ಯೂಸರ್ಸ್ ಎಸೋಸಿಯೇಶನಿನವರು ಹೆಚ್ಚು ಕೆಲವಳ ನಡೆಸಬೇಕಾಯಿತು ಹಿಂದೆ ಸೈನಿಕರಿಗೆ ಅಮೇರಿಕ ಮತ್ತು ಬ್ರಿಟಿಷ್ ಚಿತ್ರಗಳು ಮಾತ್ರ ತೋರಿಸಲ್ಪಡುತ್ತಿದ್ದವು ಈ ಯೋಜನೆಯಿಂದ ನಮ್ಮ ದೇಶದ ಸಿನೆಮಾ ನಿರ್ಮಾಪಕರಿಗೆ ೫೦,೦೦೦ ರೂಪಾಯಿಗಳ ಲಾಭವಿದೆ

ಮಾಲವಿಕಾಗ್ನಿ ಮಿತ್ರ

ಕಾಳಿದಾಸ ಮಹಾಕವಿಯ ಪ್ರಸಿದ್ಧ ನಾಟಕವಾದ ಮಾಳವಿಕಾಗ್ನಿಮಿತ್ರವನ್ನು ಪ್ರೇಮಾ ಪಿಕ್ಚರ್ಸಿನವರು ಬೇಗನೇ ಚಲಚ್ಚಿತ್ರವಾಗಿ ರೂಪಿಸಿಕೊಳ್ಳುವರೆಂದು ತಿಳಿದುಬಂದಿದೆ ಈ ಯೋಜನೆಗೆ ಬೇಕಾದ ಸಿದ್ಧತೆಗಳೆಲ್ಲವೂ ಈಗಾಗಲೇ ಪೂರ್ಣವಾಗಿವೆ. ಹೊಸಕಲಾವಿದರು ಇದರಲ್ಲಿ ಪಾತ್ರವಹಿಸುವರು

ಶಾಂತಾ

ಬೊಂಬಾಯಿ ಭಾರತೀಯ ಸ್ಟುಡಿಯೋದಲ್ಲಿ ಶಾಂತಾ ಎಂಬ ಕವಿಳ ಸಾಮಾಜಿಕ ಚಿತ್ರವೊಂದು ಸಿದ್ಧವಾಗುತ್ತಲಿದೆ. ಪಿ ಎಸ್. ಶ್ರೀನಿವಾಸನ್ ಮತ್ತು ಕೆ. ಟಿ. ರುಕ್ಮಿಣಿ ಇವರು ನಾಯಕ ನಾಯಕಿಯರಾಗಿ ಪಾತ್ರವಹಿಸುವರು. ಅಂತರ್ಜಾತೀಯ ವಿವಾಹ, ಸ್ತ್ರೀ ವಿದ್ಯಾಭ್ಯಾಸ, ನರ್ತನ ಕಲೆಗಳಲ್ಲಿ ಸ್ತ್ರೀಯ ಸ್ಥಾನ ಮೊದಲಾದ ಇಂದಿನ ಸಾಮಾಜಿಕ ಸಮಸ್ಯೆಗಳ ಕುರಿತು ಬರೆದ ಕಥೆಯಿದು.

ಪುನರ್ಜನ್ಮ

ಓಂಕಾರ ಫಿಲ್ಮ್ಸಿನವರು 'ಪುನರ್ಜನ್ಮ' ವೆಂಬ ಕಥೆಯ ಚಿತ್ರವನ್ನು ತಯಾರಿಸುವುದಾಗಿ ನಿಶ್ಚಯಿಸಿದ್ದಾರೆ. ಡಿಸ್ಟ್ರಿಕ್ಟ್ ಜಡ್ಜರ ಮಗಳಾದ ಕುಮಾರಿ ಕಮಲಾ ಬಿ. ಎ., ಎಂಬ ಕುಲೀನ ಸ್ತ್ರೀಯು ಇದರಲ್ಲಿ ಪಾತ್ರವಹಿಸುವಳು.

ಬಂಗಾಳದ ಬುಲ್‌ಬುಲ್

"ಬಂಗಾಳದ ಬುಲ್ ಬುಲ್ ಎಂದು ಹೆಸರಾದ ಕುಮಾರಿ ಪದ್ಮಾ ಕೆಲಕಾಲದ ವರೆಗೆ ಬೊಂಬಯಿ ಸ್ಟುಡಿಯೋ ಒಂದರಲ್ಲಿ ಕೆಲಸ ಮಾಡುತ್ತಿದ್ದು ಈಗ ತಿರಿಗಿ ಕಲ್ಕತ್ತದ ಒಂದು ಸ್ಟುಡಿಯೋದಲ್ಲಿ 'ಶಾಪಮುಕ್ತಿ' ಎಂಬ ಚಿತ್ರವೊಂದರಲ್ಲಿ ಭಾಗವಹಿಸಲು ಬಂದಿರುವಳು. ಆಕೆಯೊಡನೆ 'ನೀನು ಬಾಬುರಾವ್ ಪಟೇಲನನ್ನು ಇನ್ನೂ ಮೆಚ್ಚುತ್ತೀಯಾ?' ಎಂದು ಕೇಳಿದ್ದಕ್ಕೆ ಆಕೆ ಒಂದು ಚಮತ್ಕಾರದ ಉತ್ತರ ಕೊಟ್ಟಳು. "ಯಾಕೆ ನಾವು ಗೆಳೆಯರಾಗಿರಬಾರದು? ಹಳೆಯ ಕಟ್ಟಿಗೆ ಉರಿಸಲು ಸುಲಭ, ಹಳೆಯ ಕುದುರೆ ಸವಾರಿ ಮಾಡಲು ಖುಶಿ, ಹಳೆಯ ಪುಸ್ತಕಗಳು ಓದಲು ಆನಂದ, ಹಳೆಯ ದ್ರಾಕ್ಷಾರಸ ಕುಡಿಯಲು ಸವಿ, ಹಳೆಯ ಗೆಳೆಯರು ವಿಶ್ವಾಸಕ್ಕೆ ಪಾತ್ರರು"

ಬೊಂಬಯಿ ಸಿನೆಮಾ ತಾರೆಯ ಬಿನ್ನಹ

"ಸಿವಿಲ್ ಮ್ಯಾರೇಜ್' ಚಿತ್ರದಲ್ಲಿ ಅದ್ಭುತ ನಟನಾ ಸಾಮರ್ಥ್ಯವನ್ನು ತೋರಿಸಿ ಪ್ರಸಿದ್ಧಳಾದ ಕುಮಾರಿ ಸ್ನೇಹಪ್ರಭಾ ಸಿನೆಮಾದ ಕುರಿತ ತನ್ನ ಅಭಿಪ್ರಾಯವನ್ನು ಹೇಳುತ್ತಾ ಇಂದು ಸಿನೇಮಾ ರಂಗದಲ್ಲಿ ವಿದ್ಯಾವಂತ ಯುವಕ ಯುವತಿಯರು ಹೆಚ್ಚಾಗಿ ಪ್ರವೇಶಿಸ ಬೇಕು, ವಿದ್ಯಾವಂತರಾದ ಯುವಕ ಯುವತಿಯರೇ ಹೆಚ್ಚಾಗಿ ರಂಗಭೂಮಿಗೆ ಪ್ರವೇಶಿಸಬೇಕು ಆಗ ಮಾತ್ರ ಅಲ್ಲಿ ಒಂದು ಒಳ್ಳೆಯ ವಾತಾವರಣವು ಕಲ್ಪಿಸಲ್ಪಡುವುದು. ಹಾಗಾದರೆ ಮಾತ್ರ ನಾವು ಉತ್ತಮ ಚಿತ್ರಗಳನ್ನು ಜನರಿಗೆ ತೋರಿಸಬಹುದು, ಅದರಿಂದ ಉತ್ತಮ ಫಲಿತಾಂಶವನ್ನು ಹುಟ್ಟಿಸ ಬಹುದು

ಆದರೆ ಸಿನಮಾ ತಾರೆಯ ಜೀವನವು ಯಾವಾಗಲೂ ದುರ್ಭಾಗ್ಯದ್ದಾಗಿದೆ ಪ್ರಾರಂಭದಲ್ಲಿ ಆಕೆ ಒಂದು ರೀತಿಯ ಕೃತ್ರಿಮ ಜೀವನ ದರ್ಜೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಅಂತ್ಯದಲ್ಲಿ ಒಂದು ದಿನ ಅವಳನ್ನು ಮಾಲಕನು ಬೇಡವೆಂದು ಹೊರಹಾಕಬಹುದು, ಏಕೆಂದರೆ ಅವಳ ರೂಪ ಸೌಂದರ್ಯಗಳು ಕುಂದಿ ಹೋಗಬಹುದು, ಅಥವಾ ಮಾಲಕನು ದಿವಾಳಿಯಾದನೆಂದು ಅವಳ ೬ ತಿಂಗಳ ಸಂಬಳವಿಲ್ಲದೆ ಹೊರಗೆ ಹಾಕಬಹುದು, ಹೀಗಾಗಿ ಹಲವರು ತಿಳಕೊಂಡಿರುವಂತೆ ಸಿನೆಮಾ ತಾರೆಗಳ ಜೀವನವು ಸುಮದ ಹಾಸಿಗೆಯ ಜೀವನವಲ್ಲ; ಸುಮದ ಎಡೆಯಲ್ಲಿಯೂ ತೀಕ್ಷ್ಣವಾದ ಮುಳ್ಳುಗಳಿವೆ ಯೆಂಬುದನ್ನು ಯಾರೂ ಮರೆಯಬಾರದು.'

ನೇಶನಲ್ ಸ್ಟುಡಿಯೋ ಲಿಮಿಟೆಡ್

ನೇಶನಲ್ ಸ್ಟುಡಿಯೋದವರು ತಯಾರಿಸುವ "ಸ್ತ್ರೀ" ಯೆಂಬ ಭಾವನಾ ಪ್ರಧಾನವಾದ ಚಿತ್ರದಲ್ಲಿ ಸರ್ದಾರ ಅಖ್ತರಳು ನಾಯಿಕಾ ಪಾತ್ರವನ್ನು ಅತ್ಯಂತ ಪ್ರಭಾವಿತವಾಗಿ ಅಭಿನಯಿಸುವಳು. ಆಕೆಯ ಸಂಗೀತವು ಬಹು ಮನೋಹರವಾದುದು!

ಈ ಚಿತ್ರವು ನಾಗಪುರದ ರಿಜೆಂಟ್ ಟಾಕಿಯಲ್ಲಿ ಮೊದಲನೆಯ ಬಾರಿಯಾಗಿ ಪ್ರದರ್ಶಿಸಲ್ಪಟ್ಟಿತು. ಸಂಯುಕ್ತ ಪ್ರಾಂತದ ಗವರ್ನರರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಇದು ಎಲ್ಲ ವಿಧದಿಂದಲೂ ಜನರ ಅತ್ಯಂತ ಮೆಚ್ಚಿಗೆಗೆ ಪಾತ್ರವಾಗಿರುತ್ತದಾಗಿ ತಿಳಿಯುತ್ತದೆ.

ಪ್ರಭಾತ ನಗರದಿಂದ

ನಿರ್ದೇಶಕ ಶಾಂತಾರಾಮರವರು ಮದ್ರಾಸಿನ ಪ್ರಯಾಣವನ್ನು ನೆರವೇರಿಸಿ ಪೂನಾಕ್ಕೆ ಬಂದಿದ್ದಾರೆ. "ಪಡೋಸಿ" ಚಿತ್ರದ ತಯಾರಿಯು ಆಗುತ್ತಾ ಇದೆ

ಚಿತ್ರದ ಸುಲಭ ಪರೀಕ್ಷೆ

ಒಂದು ಚಿತ್ರವನ್ನು ನೋಡಿದ ಕೂಡಲೇ ನಾವು ನಮ್ಮೊಳಗೆ ಆ ಚಿತ್ರದ ಯಾವುದೇ ಒಂದು ಘಟನೆಯಾದರೂ ಜನತೆಯ ನೈತಿಕ, ಬೌದ್ಧಿಕ, ಮತ್ತು ಆಧ್ಯಾತ್ಮಿಕ ಉನ್ನತಿಗಳಿಗೆ ಸಹಾಯ ಮಾಡುವಂತಹುದಿದೆಯೇ ಎಂದು ಪ್ರಶ್ನಿಸಿರಿ. ಪ್ರಶ್ನೆಗೆ ಸರಿಯಾದ ಉತ್ತರ ಇದ್ದರೆ ಆ ಚಿತ್ರವು ಒಳ್ಳೇಯದೇ ಆಗಿದೆ ಹೀಗೆಂದು ನಿರ್ದೇಶಕ ಶಾಂತಾರಾಮರು ಹೇಳಿದರು!

'ನನಗೀಗ ಅಸಹ್ಯಕರ ವಾಸದ ಹುಣ್ಣುಗಳಾಗಲಿ ಛಿದ್ರಗಳಾಗಲಿ ಇರುವ ಚರ್ಮವಿರವುದಿಲ್ಲ!'



'ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು ಪರಿಮಳತನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂಕವಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆದುವುದು ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ವರ್ಣವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು-ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ, ಮಾಮೂಲಿಕ್ಕಿಂತ ಸಣ್ಣ ಬಿಲ್ಲೆಯ ಪರಿಚಯದ ಸೈಜು, ಆಕಾರದಲ್ಲಿಯೂ ದೊರಕುವುದು.

THE PIE-MONEY BANK LTD,

Marlan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 year 4½% For 6 months 4% 3 months 3½%

Auction ranging from Rs 100/ to Rs. 5000/ run regularly on systematic lines Unique Banking facilities to Business men and interested Public.

Apply for particulars—

K R. GURU, *Managing Director*

ಹಾಲ್ವೆಲ್ ಸತ್ಯಾಗ್ರಹ ನಿಲ್ಲಿಸಲಾಯಿತು! ಜಿನ್ನರು ಮುಸಲ್ಮಾನರ ಹಿತಸಾಧಿಸಲಿಲ್ಲ!

ಭಾರತೀಯ ಸೈನ್ಯವಿಸ್ತರಣ!

ಲಕ್ಷಾಂತರಮಂದಿಯನ್ನು ಸೇರಿಸುವರು!

ಹಾಲ್ವೆಲ್ ಸ್ಮಾರಕವನ್ನು ತೆಗೆದುಹಾಕಲು ಸತ್ಯಾಗ್ರಹ ಚಳವಳಿಯನ್ನು ಜುಲೈ ೩ರಲ್ಲಿ ಆರಂಭಿಸಲಾಗಿತ್ತು. ಬಂಗಾಳಾ ಶಾಸನ ಸಭೆಯಲ್ಲಿ ಈ ಸ್ಮಾರಕವನ್ನು ಈ ಕೂಡಲೆ ತೆಗೆದುಹಾಕುವುದಾಗಿ ಏರ್ಪಾಡು ಮಾಡಲಾಗುವದೆಂದು ಮುಖ್ಯಮಂತ್ರಿ ಮಿ। ಎ. ಕೆ. ಫಜಲುಲ್ ಹಖ್‌ರವರು ೩ನೇ ತಾರೀಕಿನಂದು ತಿಳಿಸಿದ್ದರಿಂದ ಹಾಲ್ವೆಲ್ ಸತ್ಯಾಗ್ರಹವನ್ನು ೫ನೇ ತಾರೀಕಿನಿಂದ ನಿಲ್ಲಿಸಲಾಗಿದೆ.

ಹಾಲ್ವೆಲ್ ಯಾರು?

ಕಲ್ಕತ್ತಾದಲ್ಲಿ ಇತ್ತೀಚೆಗೆ ಹಾಲ್ವೆಲ್ ಸ್ಮಾರಕ ಸತ್ಯಾಗ್ರಹವು ನಡೆಯಿತಷ್ಟೆ. ಈ ಸ್ಮಾರಕವನ್ನು ಪಡೆದ ವ್ಯಕ್ತಿಯು ಐರ್ಲೆಂಡ್ ದೇಶದವನು. ಇವನು ಲಂಡನಿನಲ್ಲಿ ವೈದ್ಯನಾಗಿದ್ದು, ಆ ಮೇಲೆ ಭಾರತಕ್ಕೆ ಬಂದು ಬಂಗಾಳಾದಲ್ಲಿ ವೈದ್ಯನಾಗಿ ನೆಲೆಸಿದನು ೧೭೫೦ರಲ್ಲಿ, ಇವನು ಕಲ್ಕತ್ತಾದಲ್ಲಿ, ವೈದ್ಯವೃತ್ತಿಯಲ್ಲಿ ತಲೆ ಎತ್ತಿದೆ, ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ವ್ಯಾಪಾರಕ್ಕೆ ಸೇರಿಕೊಂಡು, ಕ್ರಮೇಣ ಆ ಕಂಪೆನಿಯ ಸೈನ್ಯದಳದ ಮುಖ್ಯಾಧಿಕಾರಿಯಾದನು. ಫೋರ್ಟ್ ವಿಲಿಯಂನಲ್ಲಿ ಇವನು ಸಿರಾಜದ್ದೌಲನ ಆಕ್ರಮಣವನ್ನು ಕಂಡು ಬೆದರಿ, ಸೈನ್ಯದೊಂದಿಗೆ ಶರಣಾಗತನಾದ. ಆ ಮೇಲೆ ಇವನನ್ನೂ ಮತ್ತು ಇತರ ನೂರಾರು ಮಂದಿ ಬ್ರಿಟಿಷರನ್ನೂ ಒಂದು ಸಣ್ಣ ಕೋಣೆಯಲ್ಲಿ ಕೂಡಿ ಹಾಕಲಾಯಿತೆಂದೂ, ಗಾಳಿ ಇಲ್ಲದೆ ಅನೇಕರು ಕೋಣೆಯಲ್ಲಿ ಸತ್ತರೆಂದೂ ಬದುಕಿಬಂದ ಈ ಹಾಲ್ವೆಲ್ ಹೇಳಿದ. ಕಿಟಿಕಿಯ ಹತ್ತಿರ ಸ್ವಾರ್ಥತೆಯಿಂದ ಕೂತು ಇತರರಿಗೆ ಗಾಳಿಸೇವನೆಗೆ ಸ್ವಲ್ಪವೂ ಅವಕಾಶ ಕೊಡದೆ ಒಬ್ಬ ಹೆಂಗಸೂ ಮತ್ತು ಅನೇಕ ಮಂದಿ ಕೈದಿಗಳೂ ಸಾಯುವಂತೆ ಮಾಡಿದ ವ್ಯಕ್ತಿ ಇವನು. ಇವನ ಈ ಧೈರ್ಯ ಸಾಹಸಗಳನ್ನು ಮೆಚ್ಚಿ ಬ್ರಿಟಿಷರು ಕಲ್ಕತ್ತಾ ನಗರದ ಮಧ್ಯದಲ್ಲಿ ಇವನ ಸ್ಮಾರಕವೊಂದನ್ನು ಸ್ಥಾಪಿಸಿದರು!

ಲಕ್ಷ ಮಂದಿ ಸೇರುವರು
ಮತ್ತೊಂದು ಲಕ್ಷ ಮಂದಿಯನ್ನು ಸೇರಿಸಲಾಗುವುದು

ಭಾರತದ ರಕ್ಷಣಾ ವ್ಯವಸ್ಥಾಕ್ರಮವನ್ನು ವಿಸ್ತರಿಸುವುದಕ್ಕಾಗಿ ಸರಕಾರದವರು ಸೈನ್ಯವನ್ನು ಹೆಚ್ಚಾಗಿ ಸಿದ್ಧಗೊಳಿಸುತ್ತಲಿದ್ದಾರೆ. ಈಗಾಗಲೇ ಮೊದಲನೆಯ ಒಂದು ಲಕ್ಷ ಮಂದಿಯನ್ನು ಸೇರಿಸಿಕೊಳ್ಳುತ್ತಲಾಗುತ್ತಿದೆ. ೧೯೪೧ನೆಯ ಇಸವಿ ಆರಂಭವಾಗುವುದರಲ್ಲಿ ಒಂದು ಲಕ್ಷ ಮಂದಿಯನ್ನು ಪೂರ್ತಿಯಾಗಿ ಸೇರಿಸಿಕೊಳ್ಳಲಾಗುವುದು. ಯುದ್ಧಕ್ಕೆ ಮುಂಚೆ ಸೈನ್ಯಕ್ಕೆ ಕೆಲವು ಜಾತಿ ಜನರನ್ನು ಸೇರಿಸಿಕೊಳ್ಳುತ್ತಲಾಗುತ್ತಿರಲಿಲ್ಲ. ಈಗ ಅವರಲ್ಲಿಯ ಜನರನ್ನು ಸೇರಿಸಿಕೊಳ್ಳಲಾಗುತ್ತಿದೆ. ಯೋಧ ಜಾತಿಯ ಜನಾಂಗಗಳಿಂದ ಹೆಚ್ಚು ಮಂದಿಯನ್ನು ಆ ಪ್ರಾಂತಗಳಿಂದ ಹೆಚ್ಚಾಗಿ ಸೇರಿಸಿಕೊಳ್ಳಲಾಗುವುದೆಂದು ನಂಬಲು ಕಾರಣವಿಲ್ಲ. ಹೊಸದಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವುದರಲ್ಲಿ ಜಾತಿಬೇಧವನ್ನು ಎಣಿಸುವುದಿಲ್ಲ. ಯೋಧ ಜಾತಿಯವರೂ, ಇತರ ಜಾತಿಯವರೂ ಎಂಬ ವ್ಯತ್ಯಾಸವನ್ನು ಹೆಚ್ಚಾಗಿ ಪರಿಗಣಿಸುವುದಿಲ್ಲ. ಎಲ್ಲಾ ಪ್ರಾಂತಗಳಿಂದ ಯೋಧರನ್ನು ತೆಗೆದುಕೊಳ್ಳಲಾಗುವುದು.

ಈಗಿರುವ ಸೈನ್ಯಗಳಿಗೆ ಹೆಚ್ಚು ಮಂದಿಯನ್ನು ಸೇರಿಸಿಕೊಂಡು ಇವುಗಳನ್ನು ಕೇಂದ್ರ ದಳಗಳನ್ನಾಗಿ ಏರ್ಪಡಿಸಲಾಗುವುದು. ಆಯಾ ಪ್ರಾಂತಗಳ ಭಾಷೆ ಜನರ ವಿದ್ಯಾಭ್ಯಾಸ ಮೊದಲಾಗಿ ಗಮನಿಸಿ ಯೋಧರನ್ನು ಚುನಾಯಿಸಬೇಕಾಗುತ್ತದೆ. ಆಂಧ್ರ ದೇಶದಲ್ಲಿ ಯೋಧರನ್ನು ತೆಗೆದುಕೊಳ್ಳುವ ಏರ್ಪಾಡು ವಿಮರ್ಶೆಯಲ್ಲಿದೆ. ದೀರ್ಘಕಾಲ ಸೈನ್ಯಕ್ಕೆ ಯುದ್ಧ ಶಿಕ್ಷಣ ಹೊಂದಲು ವ್ಯವಸ್ಥೆ ಮಾಡಲಾಗುವುದು. ಎಲ್ಲಾ ಪ್ರಾಂತಗಳಿಂದಲೂ ಸೈನಿಕರನ್ನು ಚುನಾಯಿಸಲು ವ್ಯವಸ್ಥೆ ಮಾಡಿದೆ. ಯುದ್ಧ ಆರಂಭವಾದ ಮೇಲೆ, ಪಂಜಾಬು, ಬಂಗಾಳ, ರಾಜಪುತಾನ, ಮಹಾರಾಷ್ಟ್ರ, ಜಾಟ್ ಮತ್ತು ಡೋಗ್ರಾ ಜನರಿಂದ ಮತ್ತು ಮದ್ರಾಸ್ ಈ ಪ್ರಾಂತಗಳಿಂದ ಯೋಧರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿದೆ.

ಯುರೋಪಿಯನ್ ಪತ್ರಿಕೆಯ ಅಭಿಪ್ರಾಯ!

ಜಿನ್ನರು ತನ್ನ ಕೋಳಿಗೆ ಮೂರು ಕಾಲು ಎಂದು ಹಠ ತೊಟ್ಟು ಮುಸಲ್ಮಾನ ಸಮಾಜದ ಯಾವ ಹಿತವನ್ನು ಸಾಧಿಸಲಿದ್ದಾರೆ ಎಂಬುದು ತಮಗೆ ತಿಳಿಯುವುದಿಲ್ಲವೆಂದು ಕಲ್ಕತ್ತದ ಆಂಗ್ಲೋ ಇಂಡಿಯಾನ ಸುಪ್ರಸಿದ್ಧ ಪತ್ರಿಕೆ 'ಸ್ಟೇಟ್ಸ್‌ಮೇನ್' ಬರೆಯುತ್ತದೆ.

ಪಂಜಾಬದಲ್ಲಿ ಸರ್ ಸಿಕಂದರ ಹಯ್ಯಾತಖಾನರೂ, ಬಂಗಾಳದಲ್ಲಿ ಫಜಲುಲ್ ಹಕ್ಕರೂ ದಿನದಿಂದ ದಿನಕ್ಕೆ ಜಿನ್ನರಿಂದ ದೂರ ದೂರ ಸರಿದು ತಮಗೆ ಯುಕ್ತ ಕಂಡ ಸ್ವತಂತ್ರ ಮಾರ್ಗವನ್ನು ಅನುಸರಿಸುತ್ತಿರುವುದರಿಂದ, ಆ ಎರಡು ಪ್ರಾಂತ್ಯಗಳಲ್ಲಿ ಬಹುಸಂಖ್ಯಾಕರಾಗಿರುವ ಮುಸಲ್ಮಾನರು ಅವರಿಬ್ಬರನ್ನು ಅನುಸರಿಸುವುದು ಸಮಂಜಸವೂ ಸ್ವಾಭಾವಿಕವೂ ಆಗಿದೆ. ಆದ್ದರಿಂದ ಅಲ್ಲಿಯ ಮುಸಲ್ಮಾನರಿಗೆ ಜಿನ್ನರ ಮುಖಂಡತನವು ಬೇಕಾಗಿಲ್ಲ. ಅವರು ತಮ್ಮ ಹಿತಾಸಕ್ತಿಗಳನ್ನು ತಾವೇ ಕಾಪಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಜಿನ್ನರು ಮುಸಲ್ಮಾನ ಸಮಾಜದ ಹಿತವನ್ನೇ ಇಚ್ಛಿಸುವವರು ಇದಕ್ಕೂ ಆಗಿರುವರಾದರೆ ತಮ್ಮ ಕಾರ್ಯಧೋರಣೆಯಿಂದ ಎಲ್ಲಿ ಮುಸಲ್ಮಾನರು ಅಲ್ಪಸಂಖ್ಯಾಕರಾಗಿದ್ದಾರೋ, ಅಲ್ಲಿ ಅವರ ಮೇಲೆ ಯಾವ ಪರಿಣಾಮವಾಗಬಹುದೆಂಬುದನ್ನು ಯೋಚಿಸಬೇಕಾಗಿದೆ. ಜಿನ್ನರ ಪಾಕಿಸ್ತಾನವು ಕಾರ್ಯರೂಪಕ್ಕೆ ಬರುವದಾದರೆ, ಎಲ್ಲಕ್ಕೂ ಹೆಚ್ಚಾಗಿ ಈ ಅಲ್ಪಸಂಖ್ಯಾಕ ಮುಸಲ್ಮಾನರಿಗೆ ಆ ಯೋಜನೆಯಿಂದ ಹಾನಿ ತಟ್ಟುವುದು.

ಪಾಕಿಸ್ತಾನದ ಪರಿಣಾಮ

ಸಂಯುಕ್ತ ಹಿಂದುಸ್ತಾನದಲ್ಲಿ ಒಂದು ಪ್ರಾಂತ್ಯದ ಅಲ್ಪಸಂಖ್ಯಾಕ ಮುಸಲ್ಮಾನರಾಗಿರುವುದಕ್ಕಿಂತಲೂ ವಿಭಕ್ತ ಹಿಂದುಸ್ತಾನದ ಒಂದು ಸ್ವತಂತ್ರ ವಿಭಾಗದಲ್ಲಿರುವ ಅಲ್ಪಸಂಖ್ಯಾಕ ಮುಸಲ್ಮಾನರಿಗೆ ಹೆಚ್ಚು ಕಷ್ಟಗಳು ಇರುವವು; ಮತ್ತು ಜಾತಿ ಮತಾಭಿಮಾನವು ಬೆಳೆದು ಬಂದಾಗ ಆ ಸ್ವತಂತ್ರ ವಿಭಾಗದ ಅಲ್ಪ ಸಂಖ್ಯಾಕ ಮುಸಲ್ಮಾನರ ಕಷ್ಟಗಳನ್ನು ದೂರಮಾಡುವದೂ ಬಹು ಪ್ರಯಾಸದ ಕೆಲಸವಾಗುವದು. ಆದ್ದರಿಂದ ಜಿನ್ನರು ಹೇಳುವಂತೆ ದೇಶವನ್ನು ವಿಭಾಗಿಸಿ ಹಿಂದು ಮತ್ತು ಮುಸಲ್ಮಾನ ಹಿಂದುಸ್ತಾನಗಳ ಎರಡು ಸ್ವತಂತ್ರ ಸರಕಾರಗಳನ್ನು ಸ್ಥಾಪಿಸುವುದಕ್ಕಿಂತಲೂ, ಒಂದು ಸಂಯುಕ್ತ ಸ್ವತಂತ್ರ ಹಿಂದುಸ್ಥಾನ ಸರಕಾರದ ಛತ್ರಛಾಯೆಯಲ್ಲಿ ಮುಸಲ್ಮಾನ ಅಲ್ಪಸಂಖ್ಯಾಕರು ಹೆಚ್ಚು ಸುಖದಿಂದ ತಮ್ಮ ಹಕ್ಕು ಅಧಿಕಾರಗಳನ್ನು ಕಾಪಾಡಿಕೊಂಡು ಇರಲಾಪರು. ಜಿನ್ನರು ಪಾಕಿಸ್ಥಾನ ಸ್ಥಾಪನೆಯ ಹಠ ತೊಟ್ಟಿರುವದರಿಂದ ಅವರು ಯಥಾರ್ಥವಾಗಿಯೂ ಮುಸಲ್ಮಾನರ ಕೈಬಿಟ್ಟಂತೆ ಆಗಿದೆ. ಕಾಂಗ್ರೆಸು ಬಹುಸಂಖ್ಯಾಕವಾಗಿರುವ ಪ್ರಾಂತ್ಯಗಳಲ್ಲಿ ಲೀಗ ಕಾಂಗ್ರೆಸ ಸಮ್ಮಿಳಿತ ಮಂತ್ರಿಮಂಡಳಗಳು ಸ್ಥಾಪಿತವಾಗಬೇಕೆಂದು ಮುಸ್ಲಿಂ ಲೀಗು ಪ್ರಯತ್ನಿಸುತ್ತದೆ. ಆದರೆ ಜಿನ್ನರ ಒರಟುತನವು ಇದು ಸಾಧ್ಯವಾಗದ ಹಾಗೆ ಮಾಡುತ್ತದೆ.

ಸಿಕಂದರರ ಮೇಲೆ ಭರವಸೆ

ಜಿನ್ನರು ಈಗಲಾದರೂ ಕಣ್ತೆರೆದು ಸರಿಮಾರ್ಗಕ್ಕೆ ಬಾರದಿರುವರಾದರೆ; ಅಲ್ಪಸಂಖ್ಯಾಕ ಮುಸಲ್ಮಾನರು ಸರ ಸಿಕಂದರ ಹಯಾತ ಖಾನರನ್ನು ತಮ್ಮ ಮುಖಂಡರನ್ನಾಗಿ ಆರಿಸುವದರಲ್ಲಿ ಸಂದೇಹವಿಲ್ಲ. ಸತ್ಯವನ್ನು ಹೇಳುವದಾದರೆ ಅದೇ ಮಾರ್ಗದಲ್ಲಿ ಮುಸಲ್ಮಾನರ ಹಿತವಿರುವುದು. ಈಗ ಪರಿಸ್ಥಿತಿಯನ್ನು ನೋಡುವಾಗ ಈ ಪರಿವರ್ತನೆಯು ಅವಶ್ಯವಾಗಿಯೂ ಆಗತಕ್ಕದ್ದಿದೆಯಾಗಿ ತಿಳಿಯಬಹುದು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯಂ. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್ ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of

Rs. 50/-, 100/-, 500/-, 1,000/- & 5,000/-
are now issued at all our Branches.

For particulars call at or write to
Any of our nearest Branches

ನೋಟಗಳು!

ಭಾರತದ ಪರಿಸ್ಥಿತಿಯಲ್ಲಿ ಅಂತಹ ವಿಶೇಷವೀಗ ಏನೂ ಇಲ್ಲವೆಂದು ಭಾರತ ಸಚಿವರಾದ ಅಮೆರಿಯವರು ಮೊನ್ನೆ ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆಯಿತ್ತರು.

— ಇಂದು ಭಾರತದಲ್ಲಿ ಯಾವ ವಿಶೇಷವನ್ನೂ ಅಮೆರಿಯವರು ಕಾಣದಿರುವುದು ನಿಜವಾಗಿಯೂ ಶೋಚನೀಯವಾಗಿದೆ.

—ಡಿಲ್ಲಿಯಲ್ಲಿ ಮಾಡಿದ ನಿರ್ಣಯದಂತೆ ಬ್ರಿಟನು ಕಾಂಗ್ರೆಸಿನ ಕೇಳಿಕೆಗೆ ಮಾನ್ಯತೆ ಕೊಡುವುದೇ ಎಂದು ಭಾರತದ ರಾಜಕೀಯ ಧುರೀಣರು ಕುತೂಹಲಗೊಂಡಿದ್ದರು!

—ಗಾಂಧಿಜಿಯವರ ಅಹಿಂಸಾ ತತ್ವವನ್ನ ಸಡಿಲುಮಾಡಬೇಕಾದರೆ, ಸೋಶಿಯಲಿಸ್ಟ ವಿರೋಧವನ್ನು ತಡೆಯಬೇಕಾದರೆ, ರಾಜಾಜಿ ಮತ್ತು ಅವರ ಅನುಯಾಯಿಗಳು ತಗೆದುಕೊಂಡ ಪರಿಶ್ರಮಗಳೆಲ್ಲಾ ಏನೂ ವಿಶೇಷವಲ್ಲವೆಂದು ಅಮೆರಿಯವರು ತಿಳಿಯುವುದು ಅತ್ಯಂತ ಶೋಚನೀಯವಾಗಿದೆ.

—ಗಾಂಧಿಜಿಯವರ ಮುಂದಾಳತನವನ್ನು ಕಾಂಗ್ರೆಸು ಕಳಕೊಂಡಿತು ಅದು ಕಾಂಗ್ರೆಸಿನವರಿಗೆ ಎಂತಹ ನೋವನ್ನುಂಟುಮಾಡತಕ್ಕ ವಿಷಯ! ಅದನ್ನಾದರೂ ಯಾತಕ್ಕಾಗಿ ಮಾಡಬೇಕಾಯಿತು ಇದರಲ್ಲೆಲ್ಲಾ ಏನೂ ವಿಶೇಷವಿಲ್ಲವೆಂದು ಅಮೆರಿಯವರು ಭಾವಿಸುವುದು ಬಹಳ ದುಃಖದ ವಿಚಾರ!

—ಕಾಂಗ್ರೆಸು ಬ್ರಿಟನಿಗೆ ಸ್ನೇಹ ಹಸ್ತವನ್ನು ನೀಡಬೇಕಾದರೆ, ಬಹಳ ಸ್ವಾರ್ಥತ್ಯಾಗ ಮಾಡಬೇಕಾಯಿತು ಕಾಂಗ್ರೆಸಿನ ಸ್ನೇಹ ಹಸ್ತವು ಏನೂ ವಿಶೇಷವಲ್ಲವೆಂದು ಅಮೆರಿಯವರು ಭಾವಿಸುವರೆ?

— ಭಾರತದ ವಿಷಯ ಉದಾಸೀನತೆಯನ್ನು ತೋರಿಸುವ ಬ್ರಿಟಿಷ ರಾಜನೀತಿಜ್ಞರು ಭಾರತಕ್ಕೆ ಮಾತ್ರವಲ್ಲ ಬ್ರಿಟನಿಗೂ ಅನ್ಯಾಯಮಾಡುತ್ತಿದ್ದಾರೆ

◈

ಮದ್ರಾಸಿನ ನೈಲ್ ಪ್ರತಿಮೆಯನ್ನು ರಾಜಾಜಿಯವರು ಒಂದು ಚಾಟೂ ಸದ್ದಿಲ್ಲದೆ ಕಿತ್ತೆಸೆದಿದ್ದರು

—ಆದರೆ ಕಲ್ಕತ್ತದ ಹಾಲ್‌ವೆಲ್ ಪ್ರತಿಮೆಯನ್ನು ತೆಗೆಯುವ ಬೋಸರ ಚಳವಳಿದಿಂದ ೩೦೦ ಮಂದಿ ಸತ್ಯಾಗ್ರಹಿಗಳು ಸೆರೆಮನೆ ಸೇರಬೇಕಾಯಿತು! ವಿದ್ಯಾರ್ಥಿಗಳು ಕ್ರೂರವಾದ ಲಾಟಿ ಪೆಟ್ಟು ತಿನ್ನಬೇಕಾಯಿತು!

—ಹೀಗೆಲ್ಲಾ ಆದ ಮೇಲೆ ಬಂಗಾಳ ಅಸೆಂಬ್ಲಿಯಲ್ಲಿ ಬಹಳ ವಿವಾದವೆದ್ದು ಕೊನೆಗೆ ಆ ಪ್ರತಿಮೆಯನ್ನು ತೆಗೆಯುವ ವಿಚಾರವನ್ನು ಸರಕಾರವು ಮಾಡುವುದಾಗಿ ಹೇಗಾದರೂ ಕಡೆಗೆ ಭರವಸೆ ಬಂತು!

ಸ್ವೀಕಾರ—ವಿಮರ್ಶೆ

ಕರ್ನಾಟಕ ಕಾದಂಬರಿ:—ಬರೆದವರು: ವಿ. ಸೀತಾರಾಮಯ್ಯ ಎಂ. ಎ; ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ ೧೭ನೆಯ ಪುಸ್ತಕ. ಬೆಲೆ ಎರಡಾಣೆ.

ಸಂಸ್ಕೃತ ವಾಙ್ಮಯದಲ್ಲಿ ಭಟ್ಟಬಾಣನ ಕಾದಂಬರಿಯು ಅತ್ಯಂತ ಉಜ್ವಲವಾದೊಂದು ಕಾವ್ಯ ಅದನ್ನು ನಾಗವರ್ಮನು ಕನ್ನಡಕ್ಕೆ ಭಟ್ಟಿಯಿಳಿಸಿದನು ಅದರ ಕುರಿತು ಸೂಕ್ಷ್ಮ ಪರಿಚಯವನ್ನು ಈ ಪುಸ್ತಕದಲ್ಲಿ ಶ್ರೀಮಾನ್ ಸೀತಾರಾಮಯ್ಯನವರು ತಮ್ಮ ಸಹಜ ಸುಂದರ ಶೈಲಿಯನ್ನು ಮನೋಹರವಾಗಿ ತಿಳಿಸಿ ಸಾಹಿತ್ಯಾಭ್ಯಾಸಿಗಳಿಗೆ ಸಹಾಯಮಾಡಿದ್ದಾರೆ

ಈ ಚಿಕ್ಕ ಹೊತ್ತಿಗೆಯಲ್ಲಿ ಕರ್ನಾಟಕದ ಕಾದಂಬರಿಯ ವಿಷಯ ಪರಿಚಯವನ್ನು ಮೂರು ವಿಭಾಗಮಾಡಿ ತಿಳಿಸಿದ್ದಾರೆ ಮೊದಲ ಭಾಗದಲ್ಲಿ ಕಥೆಯ ಸಂಗ್ರಹ ಕವಿಯ ನೆನಪು, ಕೃತಿಯ ಪರಿಚಯ ಇವಿಷ್ಟು ಇವೆ ಎರಡನೆಯದರಲ್ಲಿ ಕಾದಂಬರಿಯಲ್ಲಿ ಬರುವ ಹಲವು ಚಿತ್ರಗಳು, ಸುಂದರ ಸನ್ನಿವೇಶಗಳ ಅವುಗಳಿಗೆಲ್ಲಾ ಆಧಾರವಾಗಿರುವ ವ್ಯಕ್ತಿಗಳ ಕುರಿತು ಹೇಳಿದ್ದಾರೆ ಕೊನೆಯ ಭಾಗವು ಒಂದೆರಡು ವಿಶೇಷ ಸಂಗತಿಗಳಿಂದ ಒಡಗೂಡಿದೆ. ಈ ವಿಶೇಷ ಸಂಗತಿಗಳಲ್ಲಿ ಮೊದಲನೆಯದಾಗಿ ಇಡೀ ಕಾದಂಬರೀ ಕಥೆಯನ್ನು ಸಂಪೂರ್ಣ ಸತ್ವ ಒಳಸಿನಿಂದ ಪ್ರೇಮದ ಶಕ್ತಿಯ ಎಷ್ಟು ದಿವ್ಯವೆಂಬುದನ್ನು ವಿಮರ್ಶನಾ ದೃಷ್ಟಿಯಿಂದ ವಿವರಿಸಿದ್ದಾರೆ ಈ ಸಂದರ್ಭದಲ್ಲಿ ಕಾದಂಬರಿಯ ಮೊದಲ ಪದ್ಯದ ಕುರಿತು ಸ್ವಲ್ಪ ಕಟು ಟೀಕೆಯನ್ನು ಮಾಡಿದ್ದಾರೆ ಆ ಪದ್ಯದ ಶ್ಲೇಷೆ ಅಂಶ ಅಂಶವು ಅನಾವರ್ಯವಾಗಿದೆಯೆಂದು ನಿರ್ಧರಿಸಿದ್ದಾರೆ ರಾಜರ ಹೆಂಡಿರು ವಿಧವೆಯರಾಗಬೇಕೆಂದು ಹರಸುವುದು ಹಿಂದುಸಮಾಜದಲ್ಲಿ ಅಮಂಗಲವೆಂದಿದ್ದಾರೆ ವೈರಿಗಳ ಸ್ತ್ರೀಯರ ವೈಧವ್ಯದಿಂದ ರಾಜನಿಗೆ ಮಂಗಳವಾಗಲೆಂದು ಹರಸುವುದು, ಗಿಳಿ—ವೈಶಂಪಾಯನ - ಪುಂಡರೀಕ,—ಪ್ರೇಮವು ಎಷ್ಟು ಬಲವತ್ತರವೆಂದು ಲೋಕದಲ್ಲಿ ಅನುಭವಿಸಿ ಸುಖ್ಯಾದ ವ್ಯಕ್ತಿ! ಪ್ರೇಮದ ಸೌಭಾಗ್ಯವನ್ನು ಸಾರಿದ ಈ ಕಾವ್ಯದಲ್ಲಿ ಪ್ರೇಮದ ಭಂಗವನ್ನು ಸೂಚಿಸುವ ಈ ಮಂಗಲಾಚರಣವು ಅಶುಚಿಯಾಗಿದೆಯೆಂದು ನಿಶ್ಚಯವಾಗಿ ನುಡಿದಿದ್ದಾರೆ. ಕೊನೆಗೆ ಕಾದಂಬರಿಯಿಂದ ಚಂದ್ರಾಪೀಡನು ಬೀಳ್ಕೊಳ್ಳಲು ಬಂದಾಗ ಮಹಾಶ್ವೇತೆಯ ಬಾಯಲ್ಲಿ ಹೇಳಿದ ಭಿನ್ನವಾದ ಮಾತುಗಳ ಸ್ವಾರಸ್ಯವನ್ನು ವಿವರಿಸಿದ್ದಾರೆ. ಅಂತೂ ಇಷ್ಟು ಚಿಕ್ಕ ಹೊತ್ತಿಗೆಯಲ್ಲಿ ಕರ್ನಾಟಕ ಕಾದಂಬರಿಯನ್ನು ಎಷ್ಟು ಸಾಂಗವಾಗಿ ಪರಿಚಯಮಾಡಿ ಕೊಡಬಹುದೋ ಅಷ್ಟು ಚೆನ್ನಾಗಿ ಲೇಖಕರು ಮಾಡಿಕೊಟ್ಟಿದ್ದಾರೆ.



ಆದರೆ ಈ ಪ್ರಚಾರ ಪುಸ್ತಕಮಾಲೆಯ ಗ್ರಂಥ ಪಂಚಯ ಪುಸ್ತಕಗಳನ್ನು ಓದುವಾಗ ಮೂಲ ಗ್ರಂಥದ ಅಭ್ಯಾಸವಿಲ್ಲದವರಿಗೆ ಏನೂ ವಿಷಯ ಗ್ರಹಣವಾಗಲಾರದೆಂಬುದು ನಾವು ಕಂಡ ಕೊರತೆಯಾಗಿದೆ.

— ಕಯ್ಯಾರ

ಕುಮಾರವ್ಯಾಸ ಪ್ರಶಸ್ತಿ.—(ವಿವಿಧ ಲೇಖಕರಿಂದ) ಮೈಸೂರು ಮಹಾರಾಜರ ಕಾಲೇಜಿನ ಕರ್ನಾಟಕಸಂಘಪ್ರಕಟಣೆ, ವಿಮರ್ಶೆ ಯಥಾವಕಾಶ.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ವಿಜ್ಞಾನಯುಗ

ಭವಿಷ್ಯತ್ಕಾಲದ ಯುದ್ಧೋಪಕರಣ!

ಭೂಮಿಯ ಮೇಲೆ ಟೇಂಕು ಆಗಿದ್ದುದು ಸಮುದ್ರದಲ್ಲಿ ಜಲಾಂತರ್ಗಾಮಿ!

ಕೆಲವೇ ದಿವಸಗಳ ಹಿಂದೆ ಜಪಾನು ಮಾಡಿದ ಒಂದು ಅದ್ಭುತ ಶೋಧನೆಯನ್ನು ಕುರಿತು ಕೇಳಿದ್ದೆವು. ಅದು ಒಂದು ವಿಚಿತ್ರ ಯುದ್ಧೋಪಕರಣ; ಸಮುದ್ರದಲ್ಲಿ ಜಲಾಂತರ್ಗಾಮಿ ಅಥವಾ ಸಬ್‌ಮೆರೀನು ಆಗಿದ್ದುದ್ದುಟು, ಸಮುದ್ರದಿಂದ ಮೇಲಕ್ಕೆದ್ದು ಬಂದೊಡನೆ ವಿಮಾನವಾಗಿ ಹಾರಾಡತೊಡಗುವುದು! ಅದೂ, ಎಷ್ಟು ಚಿಕ್ಕದಾಗಿರುವದೆಂದರೆ ಸ್ವಲ್ಪ ದೂರದಲ್ಲಿರುವ ಯುದ್ಧದ ಹಡಗಿಂದ, ದುರ್ಬಿನು ಮೂಲಕವೂ ಅದನ್ನು ಗುರುತಿಸಲಿಕ್ಕಾಗುವದಿಲ್ಲ! ಈಗ ಅಮೇರಿಕದ ವಿಜ್ಞಾನಿಗಳು ಇದಕ್ಕೂ ಮಿಗಿಲಾದ ಇನ್ನೊಂದು ಯುದ್ಧೋಪಕರಣವನ್ನು ಕಂಡು ಹಿಡಿದಿದ್ದಾರೆ. ನೆಲದ ಮೇಲೆ ಟ್ಯಾಂಕಿನಂತೆ ಇರುವದು. ಆದರೆ ನೀರಿನಲ್ಲಿ ಇದೇ ಟ್ಯಾಂಕು, ಸಬ್ ಮೇರಿನಿನ ಹಾಗೆ ಮನಸ್ಸು ಬಂದಾಗ ಮುಳುಗುತ್ತಾ ಮನಸ್ಸು ಬಂದಾಗ ಮೇಲಕ್ಕೆ ಬರುತ್ತಾ ಇರುವದು ಮತ್ತೆ ಇದರಲ್ಲಿ ಶತ್ರುಪಕ್ಷವನ್ನು ಬಗ್ಗುಬಡಿಸುವ ಎಲ್ಲಾ ಆಧುನಿಕ ಶಸ್ತ್ರಾಸ್ತ್ರಗಳೂ ಉಪಯೋಗಕ್ಕೆ ಸಿದ್ಧವಾಗಿ ಇರುವವು. ಇದರ ವೇಗವು ಕೂಡ ಸಾಧಾರಣ ಮೋಟರ ಕಾರುಗಳ ವೇಗವನ್ನು ಮೀರಿಸುತ್ತದೆ! ಅಮೇರಿಕದ ಸರಕಾರವು ಇದನ್ನು ಭವಿಷ್ಯತ್ಕಾಲದ ಯುದ್ಧೋಪಕರಣವೆಂಬಂತೆ ಪರೀಕ್ಷಿಸುತ್ತಾ ಇದೆ.

ಭಾರತದಲ್ಲಿ ಹೊಸ ಕೈಗಾರಿಕೆಯ ಶೋಧಗಳು!

ವಿಜ್ಞಾನ ಪ್ರಪಂಚದಲ್ಲಿ ಭಾರತವೂ ತನ್ನ ಸೇವೆಯನ್ನು ಸಲ್ಲಿಸುತ್ತ ಇದೆ. ಕೆಲವರು ಭಾರತೀಯ ವಿಜ್ಞಾನಿಗಳು ಭಾರತದ ವಿಶಿಷ್ಟ ಹವಾಗುಣಕ್ಕೆ ಒಪ್ಪುವ ರೇಡಿಯೋ ಸೆಟ್ಟುಗಳನ್ನು ತಯಾರಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಒಬ್ಬಿಬ್ಬರು ಹೊಸ ತರದ ಸೆಟ್ಟುಗಳನ್ನು ತಯಾರಿಸಿ, ಅವುಗಳ ಬಗ್ಗೆ ಪೇಟೆಂಟು ಪಡೆಯಲಿಕ್ಕೆ ಅರ್ಜಿ ಹಾಕಿರುವರು. ಇನ್ನು ಕೆಲವರು ವಿಜ್ಞಾನಿಗಳು ಸ್ವಯಂಚಲ ಮೋಟರುಗಳ ರಬ್ಬರು ಟಾಯರುಗಳ ಸುಧಾರಣೆಯಲ್ಲಿ ತಲ್ಲೀನರಾಗಿದ್ದಾರೆ. ಈ ಹೊಸ ಟಾಯರುಗಳ ಭಾರತದ ಭೂಸ್ಥಿತಿಗೆ ತಕ್ಕುದಾಗಿ ಹೆಚ್ಚಿನ ಚಲನದಿಂದ ಕಡಿಮೆ ಸವೆಯುವಂತೆ ಪಯತ್ನ ಮಾಡಲಾಗಿದೆ. ನೂಲುವ ಕೈಗಾರಿಕೆಯ ಸಾಮಗ್ರಿಗಳಲ್ಲಿ ಹೊಸ ವಿಧಾನಗಳನ್ನು ಕಂಡು ಹಿಡಿಯುವ ಪ್ರಯತ್ನಗಳ ಈಚೆಗೆ ಸ್ವಲ್ಪ ಕಡಿಮೆಯಾಗಿದೆಯಾದರೂ, ನೇಯುವ ಸಾಧನೋಪಕರಣಗಳಲ್ಲಿ ಈ ಶೋಧಗಳು ಬಹಳ ಬೆಳೆದಿರುವವು. ಅವರೆ ಈಗ ತಾನೇ ನೂಲುವ ಚರಕದಲ್ಲಿ ಒಂದು ಸುಧಾರಣೆಯು ಅದ್ಭುತವಾಗಿರುತ್ತದೆ. ಅದರ ಪ್ರಕಾರ ತಯಾರಾದ ಚರಕದಿಂದ ಕಡಿಮೆ ಸಮಯದಲ್ಲಿ ಉತ್ತಮವಾದ ಬಹಳ ನೂಲನ್ನು ನೂಲಲಿಕ್ಕಾಗುತ್ತದೆ.

ರಸ್ಯ ಸರ್ಜನನ ಅದ್ಭುತ ಕೈ ಚಮತ್ಕಾರ!

ಅಮೇರಿಕಾಕ್ಕೆ ಒಳಪಟ್ಟಿರುವ ರೇವಿಯಾದಲ್ಲಿರುವ ಒಬ್ಬ ರಸ್ಯ ಸರ್ಜನನು ಒಬ್ಬ ದೇಶೀಯನ ಬಲಕೈಯ ಒಂದು ಬೆರಳಿನ ಸ್ಥಾನದಲ್ಲಿ ಕಾಲಿನ ಹೆಬ್ಬೆಟ್ಟನ್ನು ಕಸಿಕಟ್ಟಿ ಯಶಸ್ವಿಯಾಗಿದ್ದಾನೆ. ಒಂದು ಅವಗಡದಲ್ಲಿ ಆ ದೇಶೀಯನು ತನ್ನ ಬಲಕೈಯ ಹೆಬ್ಬೆಟ್ಟನ್ನು ಕಳಕೊಂಡಿದ್ದನು ಅವನು ಚಿಕಿತ್ಸೆಗಾಗಿ ಆ ಸರ್ಜನ ವೈದ್ಯನ ಬಳಿಗೆ ಹೋದನು ಸರ್ಜನ ವೈದ್ಯನು ಹಿಂದೊಮ್ಮೆ ಒಂಬತ್ತೇ ಬೆರಳುಗಳಿಂದ ಹುಟ್ಟಿದ ಒಬ್ಬ ಹುಡುಗನಿಗೆ ತಾನು ಹತ್ತನೇ ಬೆರಳನ್ನು ಕಸಿಕಟ್ಟಿದ ವಿಚಾರವನ್ನು ಹೇಳಿದನು. ದೇಶೀಯನು ಶಸ್ತ್ರಕ್ರಿಯೆಗೆ ಒಪ್ಪಿದನು ಈಗ ಅವನು ಕಾಲಬೆರಳನ್ನು ಕಳಕೊಂಡಿದ್ದನಾದರೂ ಅದು ತನ್ನ ನವೀನ ಸ್ಥಾನದಲ್ಲಿ ಕೈಬೆರಳಿನಂತೆಯೇ ಕೆಲಸ ಕೊಡುತ್ತಾ ಇದೆ. ಕೈ ಚಮತ್ಕಾರವೆಂದರೆ ಹೀಗಿರಬೇಕು!

ನಾಝಿಗಳ ಟ್ಯಾಂಕು ರಾಕ್ಷಸ

ಈಗ ನಡೆಯುತ್ತಿರುವ ಯುದ್ಧದಲ್ಲಿ ಜರ್ಮನ ನಾಝಿಗಳು ಫ್ರಾನ್ಸಿನ ರಣರಂಗದಲ್ಲಿ ಉಪಯೋಗಿಸಿದ ಟ್ಯಾಂಕುಗಳ ಸ್ವಲ್ಪ ಸ್ವಲ್ಪ ವಿವರವು ಈಗ ತಿಳಿಯುತ್ತಾ ಇದೆ ಈ ಟ್ಯಾಂಕುಗಳಂತೂ ಬ್ರಹ್ಮರಾಕ್ಷಸನಂತೆ ಇದ್ದವು ಇವು ಒಂದೊಂದು ೮೦ ಟನ್ ಭಾರವಾಗಿದ್ದವು. ಅವುಗಳೊಂದರಲ್ಲಿ ೧೦೦೦ ಅಶ್ವಶಕ್ತಿಯ ಇಂಜಿನುಗಳು ಕೆಲಸ ಮಾಡುತಿದ್ದುವು. ೧೫ ಮಂದಿ ಯುದ್ಧ ವೀರರು ಇರುತಿದ್ದರು ಟ್ಯಾಂಕಿನ ಕವಚಗಳು ಸಾಧಾರಣ ದೂರದಿಂದ ಬರುವ ಫಿರಂಗಿ ಗುಂಡುಗಳನ್ನು ತಡೆಯುವಷ್ಟು ಬಲಿಕೆಯವುಗಳಾಗಿದ್ದುವು ಈ ಒಂದೊಂದು ಬ್ರಹ್ಮರಾಕ್ಷಸನನ್ನು ಒಂದೊಂದು ಮೈಲು ದೂರ ಓಡಿಸಲಿಕ್ಕೆ ಆರಾರು ಗೆಲನು ಪೆಟ್ರೋಲು ಖರ್ಚಾಗುತಿತ್ತು ಇಂಥ ಹಲವು ಟ್ಯಾಂಕುಗಳನ್ನು ಜರ್ಮನರು ಫ್ರಾನ್ಸಿನ ವಿರುದ್ಧ ಉಪಯೋಗಿಸಿದ್ದರಂತೆ.

ಅಪರಾಧಿಗಳನ್ನು ಕಂಡುಹಿಡಿಯುವ ಹೊಸ ಉಪಾಯ!

ಅಪರಾಧಿಗಳನ್ನು ಕಂಡು ಹಿಡಿಯಲಿಕ್ಕೆ ಇಷ್ಟರ ತನಕ ಹೆಬ್ಬೆಟ್ಟು ಮುದ್ರೆಗಳನ್ನು ತಕ್ಕೊಳ್ಳುತ್ತಿದ್ದರು. ಈಗ ಲಂಡನಿನ ಪೋಲೀಸ ಇಲಾಖೆಯ ಅಧಿಕಾರಿಗಳು ಹೊಸತೊಂದು ಉಪಾಯವನ್ನು ಕಂಡು ಹಿಡಿದಿದ್ದಾರೆ. ಈ ಉಪಾಯವನ್ನು ಅನುಸರಿಸುವದಾದರೆ ಒಬ್ಬನನ್ನು ಇನ್ನೊಬ್ಬನೆಂದು ಭ್ರಮಿಸಲಿಕ್ಕೆ ಎಡೆಯೇ ಇರುವದಿಲ್ಲ. ವೇಷ ಪಲ್ಲಟಿಸಿಕೊಂಡಿರುವ ಅಪರಾಧಿಗಳನ್ನೂ ಸುಲಭದಲ್ಲಿ ಗೊತ್ತು ಹಚ್ಚಬಹುದು. ಒಬ್ಬನ ಕಣ್ಣುಗಳು ಇನ್ನೊಬ್ಬನ ಕಣ್ಣುಗಳ ಹಾಗೆ ಇರುವುದಿಲ್ಲ. ಹೆಬ್ಬೆಟ್ಟು ಮುದ್ರೆಗಳಲ್ಲಿಯಾದರೂ ಅತಿ ಸೂಕ್ಷ್ಮದೃಷ್ಟಿಗೆ ಮಾತ್ರ ತಿಳಿಯುವ ಭೇದವು ಇದ್ದು, ಒಬ್ಬನ ಹೆಬ್ಬೆಟ್ಟು ಮುದ್ರೆಯು ಇನ್ನೊಬ್ಬನ ಹಾಗೆಯೇ ಇವೆ ಎಂದು ಭ್ರಮಿಸಲಿಕ್ಕೆ ಅವಕಾಶವುಂಟಾಗುತಿತ್ತು. ಕಣ್ಣಿನ ಹಿಂಭಾಗದಲ್ಲಿರುವ ನರನಾಡಿಗಳ ರಚನಾಕ್ರಮದ ಪರೀಕ್ಷೆಯಲ್ಲಿ ಈ ಭ್ರಮೆಗೆ ಕೂಡ ಅವಕಾಶವಿರುವುದಿಲ್ಲ. ಅನೇಕ ಮಂದಿ ಅಪರಾಧಿಗಳು ಪೋಲೀಸರಿಗೆ ತಮ್ಮ ಗುರುತು ಹತ್ತಬಾರದೆಂದು ಮುಖಭಾವವನ್ನು ಪರಿಣಾಮಕಾರಿಯಾಗಿ ಬದಲಾಯಿಸುವುದಿದೆ. ಹೆಬ್ಬೆಟ್ಟು ರೇಖೆಗಳು ಅಳಿಸಿಹೋಗುವಂತೆ ಅವುಗಳನ್ನು ಕೆಲವು ಎಸಿಡುಗಳಲ್ಲಿ ಮುಳುಗಿಸುವುದಿದೆ. ಇದರಿಂದ ಅವರನ್ನು ಗುರುತಿಸಲಿಕ್ಕಾಗದೆ ಪೋಲೀಸರು ಮೋಸ ಹೋಗುತ್ತಾರೆ. ಆದರೆ ಪೋಲೀಸರಿಗೆ ಗುರುತು ಸಿಕ್ಕಬಾರದೆಂದು, ಕಣ್ಣಿನ ರಚನೆ ಕೆಡುವಂತೆ ಪ್ರಯತ್ನಿಸಿ ಕಣ್ಣುಗಳನ್ನೇ ಕೆಡಿಸಿಕೊಳ್ಳುವ ಸಾಹಸಕ್ಕೆ ಹೋಗಲಾರರು. ಯಾಕೆಂದರೆ ಕಣ್ಣು ಭೇದದಿಂದ ಪೋಲೀಸರಿಗೆ ಗುರುತು ಸಿಕ್ಕದಿರಬೇಕಾದರೆ ಕಳ್ಳರು ತಮ್ಮ ಕಣ್ಣೊಳಗಿನ ನರನಾಡಿಗಳನ್ನು ಕೆಡಿಸಿಕೊಳ್ಳಬೇಕಾಗುತ್ತದೆ. ಕಣ್ಣುಗಳನ್ನು ಕೆಡಿಸಿಕೊಳ್ಳುವುದೇ ಇದರ ಅರ್ಥವಾಗುತ್ತದೆ.

A well-rounded programme of SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time-tested thrift-schemes for guaranteed security.

We have a few select plans which enable any man to fully enjoy the fruit of his labours. Study them, join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:-UDIPI, S. India.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣಸ್ಥಳಗಳಿಗೆ ನಮ್ಮಲ್ಲಿಂದ ತೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಅಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಹಾಳಿಬರಿಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS.

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ನಂಬಿಕ್ಕ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮೂಹಿಮ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವಾ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦ ವಿ. ಪಿ. ೨ ೮

ವಿಳಾಸ: ಸಂಜೀವಿನೀ ಔಷಧಾಲಯು ಮು. ಪೊ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವುಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯು

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	2—0—0	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	4—8—0	4—10—0
,, ದುಯಂ ,, ,,	4—8—0	4—10—0
,, ಅವ್ವಲ್ ಸುಗ್ಗಿ ,,	4—10—0	
,, ದುಯಂ ,, ,,	4—4—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	37—8—0
,, ಸಿಪ್ಪೆ ಇದ್ದದು ,,	37—8—0	40—0—0
ಕೊಬ್ಬರಿ ಆಫೀಸು ಖಂಡಿಗೆ	47—8—0	
,, ದಿಲ್‌ಪಸಂದ ,,	57—8—0	—
ತೆಂಗಿನ ಎಣ್ಣೆ ಮುಡಿಗೆ	8—10—0	8—10—0
ಸಿಪ್ಪೆಯಿದ್ದ ಅಡಕೆ 1000ಕ್ಕೆ	4—4—0	4—8—0
ಗೇರುಬೀಜ ಮುಡಿಗೆ	2—12—0	3—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	41—4—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 2-8-1940 [ಸಂಚಿಕೆ 31

The Bombay Life Assurance Company, Ltd.,
(Estd. 1908)

LIFE INSURANCE

Dispels darkness of the mind and brings
Enlightenment and Courage, Immortalises
major portion of your Income whether you
survive or not and thus makes life worth
living to you and your dependants in reality

Ask us what particular scheme of Insurance will satisfy your requirements and your purse

Agency Applications from Active and Influential Ladies & Gentlemen are invited.

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES AND

Chief Agents for Bombay & Suburbs

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF THEIR FOLLOWING OFFICES

Puthiyara	Car Street,	Central Station Road,
Calicut	Mangalore	Trivandrum
Gautam Nivas, Charni Road	Post Box No 337	Visweswarapuram Circle
Girgaum Bombay No 4	Mount Road Madras	Bangalore City

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್.

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

ಕಣ್ಮರೆಯಾದ ಕನ್ನಡ ಸಿಂಹಾಸನಾಧೀಶ್ವರರು

ಜನನ 4—6—1884 ನಿಧನ 3—8—1940

KANNADA ILLUSTRATED WEEKLY!

ಜರ್ಮನಿಯ ಗೆಳೆತನದೊಡನೆ ವಿಶ್ವಾಸಘಾತವೆ?

ಸ್ಟಾಲಿನ್-ಹಿಟ್ಲರರ ಸ್ನೇಹ ಕಡಿಯುವುದು!

ಸ್ವಕಾರ್ಯಸಾಧನೆಗಾಗಿ ಮಾತ್ರ ಹಿಟ್ಲರನು ರಷ್ಯದ ಸರ್ವಾಧಿಕಾರಿ ಸ್ಟಾಲೀನನೊಡನೆ ಸ್ನೇಹದಿಂದಿರುವ ನೆಂಬುದಕ್ಕೆ ಈಗ ತಾನೆ ಒಂದು ಹೊಸ ದೃಷ್ಟಾಂತವು ದೊರೆತಿರುವದು. ತಾನು ಒಡಂಬಡಿಕೆ ಮಾಡಿಕೊಂಡು ಸ್ನೇಹದಿಂದಿರುವ ರಷ್ಯದ ಅಧಿಕಾರ ಪದವಿಯಿಂದ ತಳ್ಳಿಹಾಕಿ ಆ ಪದವಿಗೆ ಹಿಂದಿನ ಝಾರ ರಾಜಕುಟುಂಬವನ್ನು ಏರಿಸಬೇಕೆಂದು ಹಿಟ್ಲರನು ರಹಸ್ಯದಲ್ಲಿ ಪ್ರಯತ್ನಿಸುತ್ತಿದ್ದಾನಂತೆ!

ಪ್ರಬಲ ಪ್ರಚಾರ ಮತ್ತು ಹಣದ ಆಸೆಯನ್ನು ತೋರಿಸಿ ಹಿಟ್ಲರನು ಸ್ಟಾಲೀನನ ಶಾಸನದಿಂದ ಅತೃಪ್ತರಾದ ಕೆಲವಂದಿ ರಷ್ಯದ ಪ್ರಮುಖರನ್ನು ತನ್ನ ಕಡೆಗೆ ಒಲಿಸಿಕೊಂಡು ಅವರ ಮೂಲಕ ರಷ್ಯದಲ್ಲಿ ನಾಝಿ ದಳದ ಬೀಜಾರೋಪಣ ಮಾಡಿರುವನು. ಈ ದಳಕ್ಕೆ ಸೇರಿರುವರೆಲ್ಲರೂ ಮೊದಲು ಜರ್ಮನಿ, ಜೆಕೋಸ್ಲೋವೇಕಿಯ ಆಸ್ಟ್ರಿಯ ಮತ್ತು ಸುತ್ತಮುತ್ತಲಿನ ಇತರ ರಾಜ್ಯಗಳಲ್ಲಿ ವಾಸಮಾಡಿಕೊಂಡಿರುವವರೇ ಆಗಿರುವರು. ಇವರೆಲ್ಲರ ಸಂಘಟನೆ ಮಾಡಿ ಹಿಟ್ಲರನು ಸಧ್ಯದಲ್ಲಿ ನಾಝಿ ದಳದ ಅಸ್ತಿವಾರ ಹಾಕಿದ್ದಾನೆ. ಇವರು ಮೊದಲಿನಿಂದಲೂ ರಷ್ಯದ ಬೋಲ್ಶೆವಿಕ ಪ್ರಭುತ್ವದೊಡನೆ ಯಾವ ಸಹಾನುಭೂತಿಯೂ ಇಲ್ಲದವರಾದುದರಿಂದ ಇವರನ್ನು ಸ್ಟಾಲೀನನ ವಿರುದ್ಧ ಎತ್ತಿ ಕಟ್ಟಲಿಕ್ಕೆ ಹಿಟ್ಲರನಿಗೆ ಕಷ್ಟವಾಗಿಲ್ಲ.

ಸಂಪೂರ್ಣ ಸಹಾಯ

ರಷ್ಯದ ಈ ನಾಝಿ ದಳವನ್ನು ಹಿಟ್ಲರನು ತನುಮನಧನ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದಾನೆ. ಅವರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿ ಕೊಟ್ಟಿರುವನು. ರಷ್ಯದ ಸ್ವತಂತ್ರ ನೀತಿಯು ಹಿಟ್ಲರನ ಕಣ್ಣು ಕುಕ್ಕುತ್ತಲಿರುವುದು. ಹಿಟ್ಲರನು ಬ್ರಿಟಿಷರಂಥ ಪ್ರಬಲ ಜನಾಂಗದವರೊಡನೆ ಯುದ್ಧಾಸಕ್ತನಾಗಿ ದುರ್ಬಲನಾಗುತ್ತಿರುವ ಸಮಯ ಸಾಧಿಸಿ ಸ್ಟಾಲೀನನು ಬಾಲ್ಟಿಕ ಮತ್ತು ಬಾಲ್ಕನ ರಾಷ್ಟ್ರಗಳನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ಪ್ರಬಲವಾಗುತ್ತಿರುವುದು ಅವನ ರಾಜನೀತಿ ನೈಪುಣ್ಯವನ್ನು ತೋರಿಸುತ್ತದೆ. ಮಧ್ಯ ಯುರೋಪಿನಲ್ಲಿ ಈಗ ನಡೆಯುತ್ತಿರುವ ಘಟನೆಗಳಿಂದ ರಷ್ಯಕ್ಕೂ ಜರ್ಮನಿಗೂ ಯುದ್ಧವು ಅನಿವಾರ್ಯವಾಗಿದೆ. ಬಾಲ್ಕನ ರಾಷ್ಟ್ರಗಳಲ್ಲಿ ತನ್ನ ಬೇಳೆಯನ್ನು ಬೇಯಿಸಿ, ಸ್ಟಾಲೀನನು, ಪೂರ್ವ ಯುರೋಪಿನಲ್ಲಿ ಸಾಮ್ರಾಜ್ಯ ವಿಸ್ತರಣೆ ನಡೆಸುವ ಹಿಟ್ಲರನ ಮಹತ್ವಾಕಾಂಕ್ಷೆಯನ್ನು ಮಣ್ಣುಗೂಡಿಸಿರುವನು. ಆದ್ದರಿಂದ ಅವನೀಗ ಒಳಗಿಂದೊಳಗೇ ಸ್ಟಾಲೀನನ ಮೇಲೆ ಸಿಟ್ಟುಗೊಂಡಿರುವನು.

ಹಿಟ್ಲರನ ವಿಶ್ವಾಸಘಾತ

ಜರ್ಮನಿಯ ಸಹಾಯದಿಂದ ರಷ್ಯದ ನಾಝಿಗಳು ಸ್ಟಾಲೀನನನ್ನು ಪದಚ್ಯುತನನ್ನಾಗಿ ಮಾಡಬಹುದೆಂಬ ಭರವಸೆಯನ್ನು ಅವನು ಅವರಿಗೆ ಕೊಟ್ಟಿರುವ ವಿಷಯವು ಸ್ಟಾಲೀನನಿಗೆ ತಿಳಿದು ಅವನು ಅವರನ್ನೆಲ್ಲ ಬಂಧಿಸುವ ಅಥವಾ ಗಡಿಪಾರು ಮಾಡುವ ಆಲೋಚನೆ ಮಾಡಿರುವನು. ತನ್ನ ಶಾಸನಕ್ಕೆ ಪ್ರತಿಕೂಲವಾಗಿರುವ ಎಲ್ಲಾ ರಷ್ಯನರ ವಿವರಗಳನ್ನು ಸ್ಟಾಲೀನನು ಪಡೆಯಲಾರಂಭಿಸಿದ್ದಾನೆ. ಈ ವಿವರಗಳು ಪೂರ್ಣ ತಿಳಿದುಬಂದೊಡನೆ ರಷ್ಯದಲ್ಲಿ ಭಯಂಕರ ಹತ್ಯಾಕಾಂಡವು ನಡೆಯುವ ಸಂಭವವಿದೆ. ಹೇಗಿದ್ದರೂ ಹಿಟ್ಲರನ ಮಿತ್ರದ್ರೋಹವು ಸ್ಟಾಲೀನನಿಗೆ ಬಹಳ ವ್ಯಸನವನ್ನುಂಟುಮಾಡಿರುವುದು. ಇದರ ಫಲವಾಗಿ ಸಧ್ಯದಲ್ಲಿಯೇ ಹಿಟ್ಲರ ಸ್ಟಾಲೀನ ಸ್ನೇಹ ಸಂಬಂಧವು ಕಡಿದು ಹೋಗಲೂ ಬಹುದು.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯ 57/1934
R. E. P. No. 382/1940.

ಅರ್ಜದಾರರು ವಾದಿಗಳು, 1. ಮಹಾಬಲಯ್ಯ ಕೋಟಿ ಕಾರಿಸ್ತರರು, 2. ವೈನರ ಮಂಜುನಾಥ, 3. ವೈನರ ಅಪ್ಪ — ರಕ್ಷಕಳು ಅಜ್ಜ ಮಹಾಲಕ್ಷ್ಮಿ ಅಮ್ಮ ಮಂಜುನಾಥಯ್ಯನ ಪತ್ನಿ, ಕುಂದಾಪುರ ತಾಲೂಕು ಅಸಗಳ್ಳಿ ಗ್ರಾಮದಲ್ಲಿರುವವರು.

ಎದುರು ಪ್ರತಿವಾದಿಗಳು 4. ವೈನರ ನಾಗಪ್ಪಯ್ಯ, 5. ವೈನರ ತಿಮ್ಮಪ್ಪಯ್ಯ. — 3ನೇ ಪ್ರತಿವಾದಿ ಅಸಂತಬಾಳ್ತನ ಮಕ್ಕಳು

ಇದರ ಗುಡಿಯ ತಾಯಿ ಕೇಶಮ್ಮ ನಪ್ಪಿ ಅಸಂತಬಾಳ್ತನ ವಿಧವೆ ಕುಂದಾಪುರ ತಾಲೂಕು ಹಳ್ಳಿಹೊಳೆ ಗ್ರಾಮದಲ್ಲಿರುವವರು ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ನಡೆದ ಮೇಲಿನ ವ್ಯವಹಾರದಲ್ಲಿ ಎದುರು ಪಾರ್ಟಿ ಸ್ಥಿರ ಆಸ್ತಿಯ ಏಲಮಿಗೆ ಅಪೇಕ್ಷಿಸಿರುತ್ತಾರೆ. ನಪ್ಪಿ ಅಮ್ಮನವರಲ್ಲಿ ಇಸ್ತಿಹಾರ ಶರ್ತನಿರ್ಣಯಿಸುವ ಬಗ್ಗೆ ತಾರೀಕು 20-8-40ಕ್ಕೆ ಇಡೋಣಾಗಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆಯೇನಾದರೂ ಇದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹಾಜರು ಮಾಡತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅಮಲ್ಜಾರಿಯನ್ನು ತೀರ್ಮಾನಿಸಲಾಗುತ್ತದೆಂತ ಈ ಮೂಲಕ ತಿಳುಹಿಸಿರುತ್ತದೆ.

M. Mahabala Hebbar
Advocate for Petitioners

ಮುಕ್ಕಾಂ ಕುಂದಾಪುರ 2-8-'40.

ಒಂದು ರುಚಿಕರವಾದ

ಪಾನೀಯ

ತಂಪಾದ, ಪೋಷಿಸುವ
ಮತ್ತು
ಸಂರಕ್ಷಿಸುವ

ತಣ್ಣಗಾದ "ಓವಲ್ಟಿನ್" ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚೆನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು. ಇದರ ಗುಣವು ಮೆಚ್ಚುಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನು ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ.

ಒಂದು ಗ್ಲಾಸು ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ. 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ತೆರನಾಗಿರುತ್ತದೆ. ಅದು ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು, ಅಮೂಲ್ಯವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ. 'ಓವಲ್ಟಿನ್'ನೊಡನೆ ಗುಣದಲ್ಲಿಯೂ, ಪರಿಮಾಣದಲ್ಲಿಯೂ, ಬೆಲೆಯಲ್ಲಿಯೂ ಇದರ ಹೋಲಿಕೆಯ ಬೇರೆ ಪಾನೀಯಗಳೇ ಇಲ್ಲ. ಬದಲಿ ಪಾನೀಯಗಳ ಗೊಡವೆಯನ್ನೇ ಬಿಡಿರಿ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು: ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್,
ಕೆಥೆಸ್ ಹೋಟೆಲ್, ಫರ್ಸ್ಟ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್, ಮದ್ರಾಸು,
ಕಲ್ಕತ್ತ, ಬೊಂಬಾಯಿ, ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕತುಗಳು. ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕತುಗಳು. ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. ನಾಲ್ಕು ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತ್ತಲ-ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

9—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೯—೮—೧೯೪೦

ಮಹಾತ್ಮರನ್ನು ಗಡಿನಾಡು ಬರಮಾಡುವುದೆ?

ಗಾಂಧಿಜಿಯವರು ಸೇವಾಗ್ರಾಮವನ್ನು ಬಿಟ್ಟು ಗುಜರಾಥಿಗೆ ತೆರಳುವರೆಂಬ ವಾರ್ತೆಯ ವಿಷಯದಲ್ಲಿ ಒಬ್ಬರು ಅವರಿಗೆ ಪತ್ರ ಬರೆದು ಕೇಳಿದರು ಅದಕ್ಕೆ ಉತ್ತರವಾಗಿ ಬರೆಯುತ್ತಾ ಗಾಂಧಿಜಿಯವರು ತಾನು ಸೇವಾಗ್ರಾಮವನ್ನು ಬಿಡುವುದಿಲ್ಲವೆಂದೂ, ಆದರೆ ಗಡಿನಾಡಿನ ಕರೆ ಬಂದರೆ ಅಲ್ಲಿಗೆ ತಾನು ಹೋಗಬೇಕಾಗಬಹುದೆಂದೂ ಬರೆಯುತ್ತಾರೆ. ಕೆಳಗೆ ಅವರ ಲೇಖನದ ಸಾರಾಂಶವಿದೆ

"ಗುಜರಾಥಿನವರನ್ನು ಪ್ರತಿಹಟ್ಟಿಗೂ ನಡೆಸಬಲ್ಲ ಸರ್ದಾರರಂತಹ ನುರಿತ ಮುಖಂಡರೊಬ್ಬರು ಅಲ್ಲಿಇದ್ದಾರೆ ನಾನಲ್ಲಿಗೆ ಹೋದರೆ ನನ್ನ ಕಾರ್ಯಕ್ಷೇತ್ರವು ಕುಂಠಿತವಾಗುವುದೆಂದು ನಾನು ವಿಚಾರಿಸುತ್ತೇನೆ ದೇವರು ನನ್ನನ್ನು ಸೇವಾಗ್ರಾಮಕ್ಕೆ ಕರೆತಂದನು ಇದು ಕೆಲಸ ಮಾಡಲು ಬಹಳ ಕಷ್ಟವಾದ ಕಾರ್ಯಕ್ಷೇತ್ರವಾಗಿರಬಹುದು ಆದರೆ ನಾನದಕ್ಕೆ ಹಿಂಜರಿಯುವುದಿಲ್ಲ ನಾನು ಇಲ್ಲಿನ ಅಲ್ಪರು ಮಂದಿಯೊಡನೆ ಒಬ್ಬನಾಗಿ, ರಚನಾತ್ಮಕ ಕಾರ್ಯಗಳನ್ನು ನಾನವರಿಗೆ ತಿಳಿಸಬಲ್ಲೆನಾದರೆ, ನಾನವರನ್ನು ಸತ್ಯಾಗ್ರಹೀ ವೀರರನ್ನಾಗಿ ಮಾಡಬಲ್ಲೆನಾದರೆ, ಅಖಿಲ ಭಾರತವನ್ನು ಉದ್ಧರಿಸುವ ಮಾರ್ಗವನ್ನೇ ನಾನು ಕಂಡ ಹಾಗೆ ಆಗುವುದು ನಾನು ಒಂದು ದೊಡ್ಡ ನಗರದಲ್ಲಿರಲು ಆರಿಸಿದರೆ ಅಲ್ಲಿ ನಾನು ಗೊಂದಲಕ್ಕೆ ಬೀಳಬೇಕಾಗುವುದು. ನಾನು ಸೇವಾಗ್ರಾಮದಲ್ಲಿ ಮಾಡುವ ಹೆಚ್ಚಿನ ಕಾರ್ಯಗಳೆಲ್ಲ ಅಖಿಲ ಭಾರತದ ವಿಶಾಲ ಕ್ಷೇತ್ರದ ದೃಷ್ಟಿಯಿಂದಾಗಿದೆ. ಹಾಗಾಗಿ ನಾನು ಸೇವಾಗ್ರಾಮದಲ್ಲಿದ್ದೇ ಗುಜರಾತಿಯಲ್ಲಿ ನನ್ನ ಸಂದೇಶಗಳನ್ನು ಸಾರುವೆನು

ವೀರರ ಭೂಮಿ—ಗಡಿನಾಡು

"ಆದರೆ, ಸೇವಾಶ್ರಮದಲ್ಲಿದ್ದೇ ಈ ಪ್ರಯೋಗವನ್ನು ಸಾಧಿಸಬೇಕೆಂಬ ನನ್ನ ಹಂಚಿಕೆಯನ್ನೆಲ್ಲ ತಲೆ ಕೆಳಗು ಮಾಡುವ ಒಂದು ವಿಷಯವಿದೆ ಗಡಿನಾಡಿನ ಖಾನ್ ಸಾಹೇಬರು ನನ್ನನ್ನು ಬೇಕಾದಾಗ ಅವರ ಪ್ರಾಂತಕ್ಕೆ ಅವರ ಕೆಲಸ ಮಾಡಲು ಕರೆಯಬಹುದು, ಏಕೆಂದರೆ ಅವರ ಕೆಲಸವು ನನ್ನ ಕೆಲಸವೇ ಆಗಿದೆ ಅವರು ನಿಜವಾದ ಅಹಿಂಸೆಯನ್ನು ಅಲ್ಲಿ ಸ್ಥಾಪಿಸಲು ಪ್ರಚಾರ ಪಡಿಸಲು ಸಮರ್ಥರಾದರೆ ಇಡೀ ದೇಶವೇ ಜಯ ಹೊಂದಿದಂತೆ ಏಕೆಂದರೆ, ಅಲ್ಲಿ ಮಾಡುವ ಪ್ರಯೋಗವು ವೀರರಿಗೆ ಬೋಧಿಸುವ ಅಹಿಂಸೆಯಾಗಿದೆ ಇದೆಲ್ಲಾ ದೇವರಿಗೆ ಗೊತ್ತು ಆದರೆ ಎಲ್ಲಿಗೇ ನಾನು ಹೋಗಲಿ ಅಲ್ಲಿ ನಾನು ಆತನ ಕೆಲಸವನ್ನೇ ಮಾಡುವೆನು. ಭಾರತದ ಸ್ವಾತಂತ್ರ್ಯವನ್ನು ಪಡೆಯುವ ಕೆಲಸವು ದೇವರ ಸ್ವಂತ ಕೆಲಸವೆಂದು ನಾನು ಭಾವಿಸುತ್ತೇನೆ ಅದು ಹೊಂದಿತೆಂದರೆ, ಇಡೀ ಜಗತ್ತೇ ರಕ್ತದ ಕಡಲಲ್ಲಿ ಮುಳುಗುವುದರಿಂದ ಪಾರಾದಂತೆ!

ಪಠಾಣರ ಅಹಿಂಸೆ ವೀರರ ಅಹಿಂಸೆ!

ಗಾಂಧಿಜಿಯವರ ಪ್ರಶಂಸೆ!

ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಿನಂತಿ!

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಕರ್ನಾಟಕ ಪ್ರಾಂತೀಯ ಸತ್ಯಾಗ್ರಹ ಸಮಿತಿಯು ಯುದ್ಧ ನಿಧಿಯ ಸಂಬಂಧ ಈ ಕೆಳಗಿನ ಪ್ರಕಟನೆಯನ್ನು ಹೊರಡಿಸುತ್ತದೆ:—

ನಮ್ಮ ದೇಶದ ಜನತೆಯು ಬಿತರಕ್ಷಣೆಯ ದೃಷ್ಟಿಯಿಂದ ಕಾಂಗ್ರೆಸ್ಸಿನ ... ವಿರೋಧ ... ವೇಳಿಂದ ... ಗೊತ್ತುವಳಿಗಳನ್ನು ಮಾಡುತ್ತ ಜನರ ಲಕ್ಷ್ಯವನ್ನು ಅತ್ತ ಕಡೆಗೆ ಹಚ್ಚಿಸಬೇಕೆಂದು ... ಪಡಿಸುತ್ತಿರುವರು ಆದರೆ ಅವರದ ಯೋಗ್ಯರೀತಿಯಿಂದ ಪ್ರಸಾರವಾಗದಿದ್ದುದು ಜನರ ಲಕ್ಷ್ಯಕ್ಕೆ ಬರದಿದ್ದುದು ಕಂಡುಬರುತ್ತದೆ ಆದ್ದರಿಂದ ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಯವರೂ (ಜವಾಬದಾರಿ ಜನರೂ) ರಾಮಗಢ ಕಾಂಗ್ರೆಸ್ ನಿರ್ಣಯ ಮತ್ತು ಆಗಾಗ್ಗೆ ವರ್ಕಿಂಗ ಕಮಿಟಿಯವರು ಮಾಡುತ್ತಿರುವ ಠರಾವು ಇತ್ಯಾದಿಗಳನ್ನು ಯೋಗ್ಯ ರೀತಿಯಿಂದ ಎಲ್ಲ ಜನರೂ ಅರಿಯುವಂತೆ ಮಾಡುವ ಕಾರ್ಯವನ್ನು ತೀವ್ರ ಕೈಕೊಳ್ಳಬೇಕು

"ಇಂದಿನ ಸಂದರ್ಭದಲ್ಲಿ ಯುದ್ಧ ನಿಧಿ ಮತ್ತು ಯುದ್ಧ ಸಾಲ ಮುಂತಾದ ನಿಧಿ ಕೂಡಿಸ ... ಭರದಿಂದ ಸಾಗುತ್ತಿರುವಷ್ಟೇ ಈ ಯುದ್ಧ ನಿಧಿ, ಯುದ್ಧ ಸಾಲ ಇತ್ಯಾದಿಗಳನ್ನು ಎತ್ತುವ ವಿಷಯದಲ್ಲಿ ಜನರಿಗೆ ಒತ್ತಾಯ, ಹಾಗು ತ್ರಾಸ ಆಗುವಂತ ನಡೆಯಬೇಕೆಂಬುದು ಸರಕಾರದ ಧೋರಣೆಯಲ್ಲವೆಂದು ಹೇಳಬಹುದು ಈಗಿನ ಕಾಯಿದೆ ಪ್ರಕಾರ ಈ ಯುದ್ಧ ಸಂಬಂಧದ ನಿಧಿ ಎತ್ತಲು ಯಾವುದೇ ರೀತಿ ಒತ್ತಾಯ ಮಾಡುವಂತಹ ಪರಿಸ್ಥಿತಿ ಇರುವದಿಲ್ಲ ಈ ಕಾರಣದಿಂದ ನಮ್ಮ ಪ್ರಾಂತದಲ್ಲಿ ಈ ಬಗ್ಗೆ ಯಾವುದೇ ರೀತಿಯಲ್ಲಿ ಬಲವಂತದಿಂದ ಯುದ್ಧ ನಿಧಿ, ಮತ್ತು ಯುದ್ಧ ಸಾಲ ಎತ್ತುವ ಪ್ರಸಂಗಗಳಾದಲ್ಲಿ ಸಂಬಂಧಪಟ್ಟವರು ತಮ್ಮ ಸಮೀಪದ ಕಾಂಗ್ರೆಸ್ ಕಚೇರಿಗಳಿಗೆ ತಿಳುವಳಿಕೆಕೊಟ್ಟು ಅದರ ಸೂಚನೆಗಳಂತೆ ಕಾಂಗ್ರೆಸ್ಸಿನ ತತ್ವಗಳಿಗೆ ಒಳಪಟ್ಟು ನಡೆದುಕೊಳ್ಳುವದು ಯೋಗ್ಯವಾಗುತ್ತದೆ

"ಈಗ ನಾವು ನಮ್ಮ ದೇಶದ ಪ್ರಶ್ನೆಯ ಬಗ್ಗೆ ಸದಾ ಆಲೋಚನೆಯುಳ್ಳವರಾಗಬೇಕಾಗಿದೆ. ಪ್ರಸಂಗದಲ್ಲಿ ನಮ್ಮ ದೇಶದ ಹಿತಸಂಬಂಧದ ರಕ್ಷಣಾರ್ಥವಾಗಿ ಸನ್ನದ್ಧರಾಗಿರುವದೇ ನಮ್ಮ ಕರ್ತವ್ಯವೆಂದು ತಿಳಿದಿರತಕ್ಕದ್ದು ಇಂದಿನ ಸಮಯದಲ್ಲಿ ಯಾರೂ ಸುಸ್ತು ಹಾಗು ಆಲಸಿಗರಾಗಿರತಕ್ಕದ್ದಲ್ಲ. ಹೀಗೆ ಯಾರಾದರೂ ನಿಷ್ಕ್ರಿಯರಾಗಿರುವದೆಂದರೆ ನಿರುಪಯೋಗಿಗಳೆಂತಾಗುವದರಿಂದ ನಮ್ಮ ಮುಖಂಡರು ಅನ್ನುತ್ತಿದ್ದುದನ್ನೇ ಎಲ್ಲರೂ ಗಮನಿಸುವಂತಹದಾಗಿದೆ."

THE

BANK OF MANGALORE LTD.,

MANGALORE

ESTD 1931

Branches -

Mudabidri & Padubidri.

Fixed Deposits will be received at following rates of interest

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

ಸ್ವದೇಶಾಭಿಮಾನಿ

ಶುಕ್ರವಾರ ೯-೮-೧೯೪೦

ಸಂಧಿ ಕಾಲ

'ಭಾರತದ ರಾಜಕೀಯದಲ್ಲಿ ಇಂದು ಪರ್ವಕಾಲವು ಬಂದೊದಗಿದೆ; ಒಂದು ತೆರೆಯು ಕೆಳಗೆ ಇಳಿಯುತ್ತದೆ; ಇನ್ನೊಂದು ತೆರೆಯು ಮೇಲೇರುತ್ತದೆ; ಇಪ್ಪತ್ತು ವರ್ಷಗಳ ಹಿಂದೆ ತಿಲಕರ ಅಂತ್ಯಕಾಲದಂದು ಭಾರತ ರಾಜಕೀಯದಲ್ಲಿ ಇಂತಹುದೇ ಪರಿಸ್ಥಿತಿಯು ಉಂಟಾಗಿತ್ತು ಇಂದಿನ ಪರಿಸ್ಥಿತಿಯೂ ಅಂದಿನಂತೆಯೇ ಇದೆ. ಅದು ಮಹಾ ಸತ್ಯಾಗ್ರಹವೊಂದನ್ನು ಆರಂಭಿಸಿದ ಕಾಲವಾಗಿತ್ತು ಇಂದು ಅದೇ ರೀತಿಯ ಸಂದರ್ಭವನ್ನು ಎದುರಿಸುತ್ತೇವೆ. ನಾವಿಂದು ಮಹಾ ಘಟನೆಗಳ ಪರ್ವಕಾಲವನ್ನು ಸಮೀಪಿಸಿರುವೆವು ಜಗತ್ತು ಪ್ರಬಲ ಪರಿವರ್ತನೆಗಳನ್ನು ಕಂಡಿದೆ ಇದ್ದ ನಾಗರಿಕತೆಯು ತಲೆಕೆಳಗಾಗಿದೆ ಈ ಪರಿವರ್ತನೆಯ ವಿಷಯ ಹೆಚ್ಚು ನಿರಾಶರಾಗುವುದೂ, ಹೆಚ್ಚು ಆಶಾತುರರಾಗುವುದೂ ಅವಶ್ಯವಿಲ್ಲ ನಾವಿದನ್ನು ಧೈರ್ಯದಿಂದಲೂ ಬುದ್ಧಿವಂತಿಕೆಯಿಂದಲೂ ಎದುರಿಸಬೇಕಾಗಿದೆ' ಹೀಗೆಂದು ಪಂಡಿತ ಜವಾಹಿರಲಾಲ ನೆಹರುಗಳು ತಿಲಕ ದಿನಾಚರಣೆಯಂದು ಮಾತನಾಡುತ್ತಾ ಇಂದಿನ ಭಾರತ ಮತ್ತು ಪ್ರಪಂಚದ ರಾಜಕೀಯ ಪರಿವರ್ತನೆಗಳನ್ನು ಹೋಲಿಸಿ ಅತ್ಯಂತ ಅರ್ಥಗರ್ಭಿತವಾದ ಭಾಷಣವೊಂದನ್ನಿತ್ತರು

ಮಹಾತ್ಮರ ಮುಂದಾಳುತನ!

ಪೂನದ ಅಧಿವೇಶನದಲ್ಲಿ ವಾರ್ಧಾ ದಿಲ್ಲಿಗಳ ಠರಾವೇ ಅಂಗೀಕೃತವಾದುದಷ್ಟೆ? ಇದರಿಂದ ಗಾಂಧಿಜಿಯವರ ಮುಂದಾಳುತನದಿಂದ ಕಾಂಗ್ರೆಸು ಸರಿದು ನಿಂದಿದೆ; ಇಂದು ಭಾರತವನ್ನು ಆ ಮಹಾತ್ಮರಲ್ಲದೆ ಬೇರೆ ಯಾರು ಯೋಗ್ಯ ಮಾರ್ಗದಲ್ಲಿ ಮುನ್ನಡೆಸಬಲ್ಲರು, ಕಾಂಗ್ರೆಸಿನ, ಈ ನಿರ್ಧಾರವು ಯೋಗ್ಯವಾದುದೇ ಎಂದು ಹಲವರು ಹಲವು ಬಗೆಗಳಿಂದ ಶಂಕಿಸಿ ಟೀಕಿಸಿದ್ದಾರೆ. ಇವೆಲ್ಲಾ ಊಹನೆ ಟೀಕೆಗಳು ಬಹಳ ಮುಂದಾಗಿಯೇ ಆಯಿತು. ನಿಜವಾದ ಪರಿಸ್ಥಿತಿಯನ್ನು, ಕೂಲಂಕಷವಾಗಿ, ಸಾವಧಾನದಿಂದ ಯೋಚಿಸುವವರಿಗೆ ಈ ಸಂದೇಹ ಗೊಂದಲಗಳುಂಟಾಗಲು ಎಡೆಯಿಲ್ಲ.

ಮಹಾತ್ಮಾಜಿಯವರು ಮಹತ್ತಾದ ಒಂದು ತತ್ವಕ್ಕಾಗಿ ಸಾಧಿಸುವವರು. ಪ್ರಪಂಚವನ್ನೇ ಆ ತತ್ವದ ಕಡೆಗೆ ಒಲಿಸುವುದು ಅವರ ಧ್ಯೇಯ. ಕಾಂಗ್ರೆಸು ಕೇವಲ ಒಂದು ರಾಜಕೀಯ ಸಂಸ್ಥೆ. ಭಾರತದ ಸ್ವಾತಂತ್ರ್ಯಕ್ಕೆ ಬೇಕಾದ ಸಿದ್ಧತೆಗಳನ್ನು ಅದು ಮಾಡಬೇಕಾಗಿದೆ. ಅದಕ್ಕಾಗಿ ಹೋರಾಡಬೇಕು. ಅದಕ್ಕೆ ಬೇಕಾದ ಸರ್ವ ವಿಧದ ಸಿದ್ಧತೆಗಳನ್ನು ಮಾಡಬೇಕಾಗಿದೆ. ಶೀಘ್ರದಿಂದಾಗ, ಆ ಮಾರ್ಗದಲ್ಲಿ ಕುಶಲತೆಯಿಂದ ಮುಂದುವರಿದು ಧ್ಯೇಯವನ್ನು ಸಮೀಪಿಸಲು ಇಂದು ಕಾಂಗ್ರೆಸಿನವರು ನಿಶ್ಚಯಿಸಿದ್ದಾರೆ; ಗಾಂಧೀಜಿಯವರು ಇದಕ್ಕೆ ತಮ್ಮ ಸಮ್ಮತಿಯಿತ್ತಿದ್ದಾರೆ; ಗಾಂಧಿಜಿಯವರ ಪಟ್ಟಶಿಷ್ಯರಾದಂತಹವರೇ, ರಾಜಾಜಿ ಪಟೇಲರಂತಹವರೇ ಈ ಹೊಸ ಪ್ರಯೋಗವನ್ನು ಮಾಡಲು ಮುಂದಾಳುತನ ವಹಿಸಿದ್ದಾರೆ. ಇದರಿಂದ ಕಾಂಗ್ರೆಸಿನೊಳಗೆ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ ಕಾಂಗ್ರೆಸಿನ ಧ್ಯೇಯದಲ್ಲಿ ತಪ್ಪು ದಾರಿಯನ್ನು ಸಾಧಿಸಲು ಸಾಧ್ಯವಿಲ್ಲ

ಮಹಾತ್ಮಾಜಿಯವರು ಕಳೆದೊಂದು ಪ್ರಕಟಣೆಯಲ್ಲಿ ತಾನು ಕಾಂಗ್ರೆಸಿನಿಂದ ದೂರ ನಿಂತ ವಿಷಯವಾಗಿ ಜನತೆಗೆ ಇರಬಹುದಾದ ಸಂದೇಹವನ್ನು ಪರಿಹರಿಸಿದ್ದಾರೆ, ಹೆಚ್ಚು ಹೆಚ್ಚಿನ ಸೇವೆಯನ್ನು ಸಲ್ಲಿಸುವುದೇ ಅವರ ಉದ್ದೇಶವೆಂದಿದ್ದಾರೆ ಕಾಂಗ್ರೆಸು ಮಹಾತ್ಮಾಜಿಯವರನ್ನು ಬಿಟ್ಟಿಲ್ಲ ಮಹಾತ್ಮರು ಕಾಂಗ್ರೆಸನ್ನು ಬಿಟ್ಟಿರುವುದಿಲ್ಲ, ಈ ವಿಷಯದಲ್ಲಿ ವ್ಯರ್ಥ ಭಿನ್ನಾಭಿಪ್ರಾಯವೆಣಿಸುವುದು ನ್ಯಾಯವಲ್ಲ,

ಎಷ್ಟು ಕಾಲ?

ಕಾಂಗ್ರೆಸು ಎಷ್ಟು ಕಾಲ ಕಾದಿರಬಹುದು? ಕಾಂಗ್ರೆಸು ಶಾಸನಭಂಗ ಚಳವಳವನ್ನು ಮಾಡದೆ, ಇಂದಿನ ಈ ಬ್ರಿಟನಿನ ವಿಷಮ ಕಾಲದಲ್ಲಿ ಅದನ್ನು ಪೇಚಿಗೆ ಹಾಕುವುದು ಬೇಡವೆಂದ ಸಮಯವನ್ನು ಮುಂದೊಡ್ಡಿದುದರಿಂದ ಏನು ಪ್ರಯೋಜನವಾಗಲಿದೆ? ಹೀಗೆ ಅಶಾಂತರಾಗಿ ಕೇಳುವ ಮಂದಿ ಹಲವರಿದ್ದಾರೆ ಈ ಕುರಿತು ಗಾಂಧಿಜಿಯವರೂ ಒಂದು ಎಚ್ಚರಿಕೆಯ ಮಾತನ್ನ ಬ್ರಿಟನಿಗೆ ತಿಳಿದಿದ್ದಾರೆ

ಕಾಂಗ್ರೆಸು ಇಂದು ಶಾಸನಭಂಗ ಚಳವಳದ ಅವಧಿಯನ್ನ ಬ್ರಿಟನಿನ ಪರಿಸ್ಥಿತಿಯನ್ನು ವಿಚಾರಿಸಿ ಮುಂದೊತ್ತಿರುವುದಾದರೂ ಅದು ಇಂದು ಕಾಂಗ್ರೆಸು ಸಂಸ್ಥೆಯನ್ನು ಸರ್ವ ವಿಧದಿಂದಲೂ ತಡೆಗಟ್ಟುತ್ತಿರುವುದನ್ನು ನೋಡಿದರೆ, ನಮ್ಮ ಈ ತಾಟಸ್ಥ್ಯದ ಲಾಭವನ್ನು ಬ್ರಿಟನು ಪಡೆಯುತ್ತಿದೆಯೆಂದು ಹಲವರು ಸಂಶಯಗೊಂಡಿದ್ದಾರೆ. ಇದಕ್ಕಾಗಿ ಪೂನೆಯ ಠರಾವಿಗೆ ಅಷ್ಟು ವಿರೋಧವಿತ್ತು, ಇಂತಹ ಹಲವು ಸಂದೇಹಗಳು ಇನ್ನೂ ಇವೆ ಅವುಗಳನ್ನು ನಾನು ಸಾರ್ವಜನಿಕ ತಿಳಿಸುವುದು ಸರಿಯಲ್ಲ, ಕಾಂಗ್ರೆಸಿನವರ ಈ ಸಂದೇಹಗಳು ರುಜುವಾದಲ್ಲಿ ಅವರನ್ನು ಯಾರೂ ತಡೆಯಲಾರರು ಎಂದೀ ರೀತಿ ಗಾಂಧಿಜಿಯವರು ಎಚ್ಚರಿಸಿರುವರು. ಯುದ್ಧವು ಆರಂಭವಾಗಿ ವರ್ಷವು ಸಮೀಪಿಸುತ್ತಿದ್ದರೂ ಭಾರತದ ರಾಜಕೀಯದ ಕುರಿತು ತೀರಾ ಆಲಸ್ಯವನ್ನು ತೋರಿಸುತ್ತಿರುವ ಬ್ರಿಟನು, ಜಾಣತನವನ್ನು ತೋರಿಸುವುದಾಗಿ ಗ್ರಹಿಸುವುದು ತಪ್ಪು ' ಈ ಲೋಕದ ಅಶಾಂತಿಯ ಕಾಲದಲ್ಲಿ ಭಾರತದ ಜನರ ಮನಸ್ಸಿನಲ್ಲಿಯೂ ಅಶಾಂತಿಯು ಹೆಚ್ಚದಂತೆ ನೋಡುವ ಕರ್ತವ್ಯ ಭಾರವು ಬ್ರಿಟನಿನ ತಲೆಯ ಮೇಲಿದೆ.

- [illegible] -

ಸ್ವೀಕಾರ - ವಿಮರ್ಶೆ

ಸಂಗೀತ ಕಲಾ ಪ್ರವೇಶ:—ಲೇಖಕರು: ಭಾಸ್ಕರರಾವ, ಬ್ಯಾಂಕರ್. ಶ್ರೀ ಸರಸ್ವತಿ ಸಂಗೀತ ವಿದ್ಯಾಲಯ. ಬೆಲೆ, ಹತ್ತಾಣೆ.

ಪುಸ್ತಕದ ಹೆಸರೇ ಸೂಚಿಸುವಂತೆ ಸಂಗೀತ ಕಲೆಯ ಅಭ್ಯಾಸಕ್ಕಾಗಿ ಸಂಗೀತ ಅಧ್ಯಾಪಕರಾದ ಲೇಖಕರೊಬ್ಬರು ಇದರಲ್ಲಿ ಹಾರ್ಮೋನಿಯಂ, ಸತಾರ, ಢೊಲ್ಕು, ತಬಲಾ, ಮೊದಲಾದ ಸಂಗೀತಗಳನ್ನು ಜಲತರಂಗ, ಕಲಿಯುವ ಕ್ರಮಗಳನ್ನು ವಿವರಿಸಿ ಹೇಳಿದ್ದಾರೆ. ಸಂಗೀತ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಲು ಈ ಪುಸ್ತಕವು ಅತ್ಯುಪಯುಕ್ತವಾದುದು

ಸ್ತ್ರೀಧರ್ಮ:—ಮೂಲ ಲೇಖಕರು. ಸ್ವಾಮಿ ಶಿವಾನಂದ ಸರಸ್ವತಿ ಅನುವಾದಕರು ಎಚ್ ಶೇಷಗಿರಿ ಪ್ರಭು ಮೂಡಬಿದ್ರೆಯ ದಿವ್ಯ ಜೀವನ ಸಂಘದ ಅಧ್ಯಕ್ಷರಿಂದ ಪ್ರಕಟಿಸಲ್ಪಟ್ಟಿತು. ಬೆಲೆ ಉಚಿತ

ಇದರಲ್ಲಿ ಸ್ತ್ರೀಧರ್ಮದ ಕುರಿತು ಪ್ರಾಚೀನ ಮುನಿಗಳು, ಶಾಸ್ತ್ರಾಚಾರ್ಯರ ಬರೆದ ಆಧಾರಗಳನ್ನಿತ್ತು ಲೇಖಕರು ಸ್ತ್ರೀ ಧರ್ಮವನ್ನ ವಿವರಿಸಿದ್ದಾರೆ

ದ್ವೈತದರ್ಶನ —ಬರೆದವರ ಶ್ರೀ ಶೀರೂರು ಶ್ರೀ ಲಕ್ಷ್ಮೀಂದ್ರ ಶ್ರೀಪಾದಂಗಳವರು ಪ್ರಕಾಶಕರು ಎಂ. ಆರ್ ರಾವ್ ಎಂ ಎ, ಪ್ರಿನ್ಸಿಪಾಲ್, ಸಂಸ್ಕೃತ ಕಾಲೇಜ್, ಉಡುಪಿ ಭಕ್ತರ ಜ್ಞಾನೋದಯ ವೇ ಬೆಲೆ

ಇದರಲ್ಲಿ ದ್ವೈತ ಸಿದ್ಧಾಂತದ ವಿಷಯ ಅಧಿಕಾರ ವಾಣಿಯಿಂದ ಅನುಭವಸ್ಥರಾದ ಶ್ರೀಪಾದಂಗಳವರು ದ್ವೈತದರ್ಶನವನ್ನು ಸಾಂಗವಾಗಿ ವಿವರಿಸಿದ್ದಾರೆ ದ್ವೈತಸಿದ್ಧಾಂತವನ್ನು ಅರಿಯಲು ಆತುರವುಳ್ಳವರಿಗೆ ಅತ್ಯುಪಯುಕ್ತವಾಗ ಪುದಿದು

ದೇಶಭಕ್ತ:—(ಕನ್ನಡ ವಾರಪತ್ರಿಕೆ) ಮಂಗಳೂರಿನಿಂದ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ಪುಣ್ಯಸ್ಮರಣೆಗಾಗಿ ಅವರ ತತ್ವಗಳನ್ನು ಮುಂದಿಟ್ಟು ಹೊರಟ ಹೊಸ ರಾಷ್ಟ್ರೀಯ ವಾರಪತ್ರಿಕೆ. ಸಂಪಾದಕರು ಶ್ರೀ ಜಯದೇವಜಿಯವರು ಪತ್ರಿಕೆಯು ಸಾರಿದ ಉನ್ನತ ಧ್ಯೇಯಗಳಿಗಾಗಿ ದಿವಂಗತ ಸದಾಶಿವರಾಯರ ಆದರ್ಶಕ್ಕಾಗಿ ದುಡಿದು ಹೆಚ್ಚಿನ ಜನಸೇವೆಯನ್ನು ಮಾಡುವಂತಾಗಲೆಂದು ಬಯಸಿ ನಾವು ಈ ಹೊಸ ಪತ್ರಿಕೆಯನ್ನ ಆದರದಿಂದ ಸ್ವಾಗತಿಸುತ್ತೇವೆ

ನವನೀತ ರಾಮಾಯಣ:—ಬರೆದವರು: ಮುಳಿಯ ತಿಮ್ಮಪ್ಪಯ್ಯ. ಪ್ರಕಾಶಕರು: ಕನ್ನಡ ಸೇವಾಸಂಘ ಅಮ್ಮೆಂಬಳ ಬೆಲೆ:—ಒಂದು ರೂಪಾಯಿ ವಿಮರ್ಶೆ ಯಥಾವಕಾಶ.

ಫ್ರಾನ್ಸಿನ ಮಹಾ ಕ್ರಾಂತಿ: ಬರೆದವರು ಶ್ರೀ ಪಿ. ಆರ್. ರಾಮಯ್ಯ ಸಂಪಾದಕ ತಾಯಿನಾಡು. ಬೆಲೆ ಒಂದು ರೂಪಾಯಿ.

ಕಂದನ ಕೂಗು: ಬರೆದವರು: ಯೋಗಹಾಸನ, ಪ್ರಕಾಶಕರು, ಮನೋಹರ ಗ್ರಂಥ ಭಂಡಾರ, ಧಾರವಾಡ, ಬೆಲೆ ಒಂದಾಣೆ.

ವಿಮರ್ಶೆ ಯಥಾವಕಾಶ.

ಅಡಿಕೆ ತೋಟಗಾರರ ಸಂಕಷ್ಟ!

ತಾ. ೩ರಲ್ಲು [illegible] ಸಂಕಷ್ಟ ನಿವಾರಣಾ ಸಮಿತಿಯ ಸಭೆಯು ಜರಗಿ ಈ ನಿರ್ಣಯಗಳನ್ನು ಮಾಡಲಾಯಿತು.

ಈ ಊರಿನಲ್ಲಿ ಜೂನ್ ೧೫ರಿಂದ ಶುರುಮಾಡಿ ಅತಿಕ್ಷಣ ಸುಸ್ತಿ ಇಲ್ಲದೆ ಈ ವರೆಗೆ ಮದ್ದು ಹಾಕಿಸಿದರೂ ಅಡಿಕೆ ಫಸಲು ಈಗಲೇ ಅಂದಾಜು ಅರ್ಧಕ್ಕೆ ಮಿಕ್ಕಿ ನಾಶವಾಗಬಹುದು. ಹಕ್ಕಡ್ಕ ಪ್ರಾಂತದ ವಿಚಾರವು ತುಂಬಾ ಕಷ್ಟವಾಗಿದೆ ೧೯೩೬ನೇ ಇಸವಿಯಂತೆ ಇಂದು ಕೇಳಿಕೊಂಡ ರಿಯಾಯಿತಿಗಳು ಚಾಲ್ತಿ ವರ್ಷದಲ್ಲಿ ಅಗತ್ಯ ದೊರಕಿಯೆ ಬೇಕಾಗುತ್ತದೆ ಮಿಶ್ರಣ ಪ್ರಯೋಗಿಸಿದರೂ ಇಮ್ಮಡಿ ಆಗಲು ಪಕ್ರಮಿಸಿದೆ, ಆದ್ದರಿಂದ ಈ ಸಮ್ಮಂದಪಟ್ಟವರಿಂ ಶೋಧ ಆಗಬೇಕು ೧೯೩೬ನೇ ವರ್ಷ ನಮ್ಮ ಅಡಿಕೆ ಸಂಕಷ್ಟಗಳು ಮಾನ್ಯ ಸರಕಾರಕ್ಕ್ಯ ಜನತಾ ಸೇವಾ ತತ್ಪರರಾದ ಮ ಖಂಡರಿಗೂ ಸರ್ವರಿಗೂ ಗೊತ್ತೇ ಇದೆ ಆಗ್ಗೆ ಈ ಊರಿನವರು ನಿರ್ಗತಿಕರಾಗಿ ಇದ್ದ ಈ ಸಮಯದಲ್ಲಿ ಪುನಹ ಸಂಕಷ್ಟವೊದಗಿದ್ದರಿಂದ ಮುಂದಿನ ವ್ಯವಹಾರಾದಿಗಳಲ್ಲಿ ನೊಂದಿಕೊಂಡಿರುತ್ತಾರೆ ಆದ್ದರಿಂದ ೧೯೩೬ನೇ ವರ್ಷದಂತೆ ತೀರ್ವೆಯಲಿ ಮಾಫಿಯ ಸಿವಿಲ್ ಕೋರ್ಟುಗಳಲ್ಲಿ ಈ ಪ್ರಾಂತ್ಯದ ಅಡಿಕೆ ತೋಟಗಾರರ ಡಿಕ್ರಿ ಅಮಲ್ ಜ್ಯಾರಿಗಳಲ್ಲಿ ಮುಂದರಿಸದಂತೆಯೂ ಸಹಕಾರಿ ಸಂಘದಿಂದಲೂ ಅನೇಕ ಸಹಾಯಗಳು ರಿಯಾಯಿತಿ ಸಿಕ್ಕುವಂತೆಯೂ ನಮ್ಮ ಪರವಾಗಿ ಶ್ರೀ ವೆ. ಶಿವರಾಮ ಶ್ರೀ ಕೆ ಆರ್ ಕಾರಂತರ, ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಆಲೋಚನೆ ಒಡಗೂಡಿಸಿ ನಮ್ಮನ್ನು ರಕ್ಷಣೆ ಮಾಡಬೇಕಾಗಿ ಈ ಸಭೆಯು ವಿಜ್ಞಾಪಿಸಿಕೊಳ್ಳುತ್ತದೆ

ಈ ಕಾಲದಲ್ಲಿ ರೂಪಾಯಿಗೆ ೧೦ ಆಣೆ ೧೨ ಆಣೆಯಂತೆ ಸಾಲಗಳ ದೆಣಿದಾರರು ಮತ್ತು ಲೆಣದಾರರು ದೀರ್ಘವ್ಯಾದೆಯಿಂದ ನಿರ್ಬಂಧ್ಹ ಆಗಿ ರಿಯಾಯಿತಿ ಕೊಡಿಸೋಣಾಗಬೇಕಾದ್ದು ಅತಿ ಅವಶ್ಯವಾಗಿದೆ ಎಂದು ಸಂಬಂಧಪಟ್ಟವರು ಬರೆಯುತ್ತಾರೆ.

ಕಾಂಗ್ರೆಸು ಕೆಣಕಿಸಲ್ಪಟ್ಟರೆ, ಇಂನ ಆಂತರಿಕ ದೌರ್ಬಲ್ಯಗಳಿದ್ದರೂ ತ್ಯಾಗ್ರಹವು ಸಮನ್ವಯಿಸದೆ ಇರರದು. ಇಂದು ಸತ್ಯಾಗ್ರಹವನ್ನು ಡಗದಿರುವ ಕಾಂಗ್ರೆಸಿನ ನಿರ್ಣವು ಯಾಕಾಯಿತೆಂದರೆ, ವಿಷಕಾಲದಲ್ಲಿ ಬ್ರಿಟನನ್ನು ಪೀಡಿಸುದು ಬೇಡವೆಂಬುದಕ್ಕಾಗಿ. ಹೀಗೆಂ ಮಹಾತ್ಮಾಜಿಯವರು "ಶಾಸಭಂಗದ ಕುರಿತು" ಹರಿಜನದಲ್ಲಿ ಂದು ಲೇಖನ ಬರೆಯುತ್ತಾ ಹೇತ್ತಾರೆ. ಮಾತ್ರವಲ್ಲದೆ ಮೊನ್ನೆ ರ್ಲಿಮೆಂಟಿನಲ್ಲಿ ಭಾರತಸಚಿವದ ಅಮೆರಿಯವರು ಭಾರತದಲ್ಲಿ ದು ಪರಿಸ್ಥಿತಿಯು ವಿಷಮವಾಗಿವುದಿಲ್ಲವೆಂದು ಹೇಳಿದ ಮಾತ ಅವರು ಅದರಲ್ಲಿ ಟೀಕಿಸಿರುರು

ಅದರ ಸಾರಾಂಶವು ಹೀಗಿದೆ —

"ಸೊರೆನ್ಸ್‌ನರ ಪ್ರಶ್ನೆಗೆ ಆ ರೀತಿಯಾ ಭಾರತ ಸಚಿವರು ಕೊಟ್ಟ ಉತ್ತರವು, ರತದ ಪರಿಸ್ಥಿತಿಯು ವಿಷಮತೆಯನ್ನು ರ್ಥ ಮಾಡದೆ ಇರುವದಾಗಿದ್ದ ಮಹಾರ್ಭಾಗ್ಯದ್ದಾಗಿದೆ ಬ್ರಿಟಿಷ ಸರಕಾರ ಯುದ್ಧವನ್ನು ಪ್ರಕಟಿಸುವ ಮೊದಲ ಯೂರೋಪಿನ ಪರಿಸ್ಥಿತಿಯ ವಿಷಮತೆನ್ನು ಯಾರು ತಿಳಿದಿದ್ದರು? ಆದರೆ ನಿಕೆಸಿಂದ ಮತ್ತಿನ ದಿನಗಳಲ್ಲಿ ಪರಿತಿಯು ಕೆಡುತ್ತಾ ಬಂದುದನ್ನು ಬ್ರಿಟಿಷರುಗಳು ತಿಳಿದಿದ್ದರು ಒಬ್ಬ ಸಾಧಾರಣ ಮನುಷ್ಯನು ಭಾರತದ ಪರಿಸ್ಥಿತಿಯ ಕುರಿತು ತಿಳಿಯದಿರಬಹುದು ಆದರೆ ಭಾರತ ಸಚಿವರು ತಿಳಿಯಲಿಲ್ಲ ಎಂಬುದು ಮಹಾದಾಶ್ಚರ್ಯವನ್ನುಂಟುಮಾಡುತ್ತದೆ ಸಾಮಾನ್ಯ ಸಮಯದಲ್ಲಿ ಅಮೆರಿಯವರು ಕೊಟ್ಟ ಉತ್ತರವು ಹೆಚ್ಚು ಮನ್ನಣಾರ್ಹವಾಗಲಿಕ್ಕಿಲ್ಲ. ಆದರೆ ಇಂತಹ ಸಮಯದಲ್ಲಿ ಅದು ಅಕ್ಷಮ್ಯವಾಗಿದೆ. ನಾನು ನನ್ನ ಮುಂದೆ ಕಾಣುವ ಭಯಗಳನ್ನು ಎಲ್ಲಾ ಇಂದು ಪ್ರಕಟಿಸುವುದು

'ಸಂಯಮಕ್ಕೂ ಒಂದು ಮಿತಿಯುಂಟು'

ಶಾಸನಭಂಗದ ಪೂರ್ವರಂಗ!

ಭಾರತದ ಪರಿಸ್ಥಿತಿಯು ಉಗ್ರವಾಗಿಲ್ಲವೇ?

ಅಮೆರಿಯವರಿಗೆ ಗಾಂಧಿಜಿಯವರ ಉತ್ತರ!

ತಪ್ಪು ನಾಪಿಗೆ ಕೊಡುತ್ತಿರುವ ಎಚ್ಚರಿಕೆಯನ್ನು ಗುಪ್ತವಾಗಿ ಕೊಡಬೇಕಿತ್ತು ನಾನು ಅದಕ್ಕಾಗಿ ಕೆಲವು ದಿನಗಳನ್ನು ಕಳೆದು ಕೊನೆಗೆ ನಾನು ಕಂಡಿರುವ ಕೆಲ ವಿಷಯಗಳನ್ನು ಜನತೆಗೆ ತಿಳಿಸದಿರುವುದೂ ಅನ್ಯಾಯವಾದೀತೆಂಬ ನಿರ್ಧಾರಕ್ಕೆ ಬಂದೆ ನಾನು ಕಾಂಗ್ರೆಸಿನಿಂದ ಬೇರಾಗಿರುವೆನಾದರೂ, ಭಾರತದಲ್ಲಿ ಬೇರಾರಿಗಿಂತಲೂ ವಿಶೇಷವಾಗಿ ನಾನು ಸತ್ಯಾಗ್ರಹವನ್ನು ಅನುಸರಿಸುವವನೆಂಬುದರಿಂದ, ಇಂದೂ ಬಹುಮಂದಿ ಜನರು ನನ್ನ ಮಾರ್ಗದರ್ಶಿತ್ವವನ್ನು ಎದುರು ನೋಡುತ್ತಿರುವರೆಂದು ಚನ್ನಾಗಿ ಬಲ್ಲೆ.

ಸಂಯಮವನ್ನು ಹೀನ್ಯಸುವುದೆ?

ಬ್ರಿಟಿಷ್ ಸರಕಾರವು ಇತಿಹಾಸ ಪ್ರಸಿದ್ಧವಾಗಿ ಇಂದ ಒಹಳ ವಿಷಮ ಕಾಲದಲ್ಲಿರುವಾಗ, ಅದನ್ನು ಮುತ್ತುವುದು ನ್ಯಾಯವಲ್ಲವೆಂದು ಕಾಂಗ್ರೆಸು ಶಾಸನಭಂಗವನ್ನು ಮುಂದ ಹಾಕಿ ಸಂಯಮಗೊಳಿಸಿರುವುದನ್ನು ಅಮೆರಿಯವರು ವಿಪರೀತಗ ಹಿಡಿಕೊಂಡ ಅತ್ಯಂತವಾಗಿ ತಪ್ಪುಮಾಡಿರುವರ ಕಾಂಗ್ರೆಸು ಹಾಗೆ ಸಂಯಮಮಾಡಿದುದನ್ನ ಯಾರೂ ಕೊಂಡಾಡಬೇಕಾಗಿಲ್ಲ ಏಕೆಂದರೆ ಅದು ಸತ್ಯಾಗ್ರಹಕ್ಕೆ ಆವಶ್ಯಕವಾದ ತತ್ವವಾಗಿದೆ ಅದು ಕರ್ತವ್ಯವೇ ಆಗಿದೆ ಸಾಲನ್ನು ತೀರಿಸಲ್ಪಿಸುವಂತೆ, ಕರ್ತವ್ಯವನ್ನು ಮಾಡುವುದರಲ್ಲಿ ವಿಶೇಷವೇನೂ ಇಲ್ಲ ಆದರೆ ಅಂತಹ ಸಂಯಮ ಮಾಡದಿದ್ದರೆ ಆಗುತ್ತಿದ್ದ ಅನಾಹುತಗಳನ್ನು ತೋರಿಸುವ ಸಲುವಾಗಿ, ಸಂಯಮದ ವಿಷಯವನ್ನು ಸೂಚಿಸಬೇಕಾಗಿದೆ ಕಾಂಗ್ರೆಸಿನ ಒಳ ದೌರ್ಬಲ್ಯದಿಂದಲೂ ಸತ್ಯಾಗ್ರಹ ಮುಂದೂಡಲ್ಪಟ್ಟಿದೆಯೆಂಬ ಮಾತಿನಲ್ಲಿಯೂ ಸತ್ಯವಿದೆ. ಆದರೆ ಕಾಂಗ್ರೆಸು ಕೆರಳಿಸಲ್ಪಟ್ಟರೆ ಇಂತಹ ದೌರ್ಬಲ್ಯಗಳಿದ್ದರೂ ಅದರ ಸತ್ಯಾಗ್ರಹವು ಫಲಕಾರಿಯಾಗದಿರುವುದಿಲ್ಲ ಆದಕಾರಣ ಇಂದಿನ ಈ ಸಂಯಮವು ಬ್ರಿಟಿಷ್ ಸರಕಾರವನ್ನು ಈಗ ಮುತ್ತುವುದು ಬೇಡವೆಂಬುದಕ್ಕಾಗಿ ಮಾತ್ರ ಆಗಿದೆಯೆಂದು ತಿಳಿಯಲಿ

ದೇಶಸೇವಕರ ಬಂಧನಗಳು

"ಆದರೆ ಈ ಸಂಯಮಕ್ಕೂ ಒಂದು ಮಿತಿಯುಂಟು ಕಾಂಗ್ರೆಸು ಕೆಲಸಗಾರರಲ್ಲಿ ಇಂದು, ತಾವು ಅಂಗೀಕರಿಸಿದ ಈ ಸಂಯಮದಿಂದ, ಬ್ರಿಟಿಷ್ ಸರಕಾರವು ಲಾಭ ಹೊಂದಿಕೊಂಡು ಕಾಂಗ್ರೆಸಿನ ಸ್ಥೈರ್ಯವನ್ನು ಹತ್ತಿಕ್ಕಲು ತೊಡಗಿದೆಯೆಂಬ ಸಂದೇಹವು ತಲೆಯೆತ್ತಿದೆ ಅವರು ಹಲವು ಮಂದಿ ದೇಶಸೇವಕರ ಬಂಧನಗಳನ್ನು ಗಣಿಸಿ ಇದನ್ನು ಹೇಳುತ್ತಾರೆ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಡಿಲ್ಲಿ ಠರಾವಿಗೆ ಹೆಚ್ಚಿದ್ದ ವಿರೋಧವು ರಾಷ್ಟ್ರಪತಿಗಳು ಅಂದಂತೆ, ಕಾಂಗ್ರೆಸ ಪ್ರಮುಖರ ಕಾಂಗ್ರೆಸು ಸಂಸ್ಥೆಯನ್ನು ಬ್ರಿಟಿಷ್ ಸರಕಾರದ ಹಿಡಿತಕ್ಕೆ ಕೊಟ್ಟು ಹಾಳುಮಾಡುತ್ತಿರುವರೆಂಬ ಭಾವನೆಯಿಂದ ಈ ಸಂಶಯವು ರುಜುವಾದ ಪಕ್ಷದಲ್ಲಿ ಪರಿಣಾಮಕಾರಿಯಾದ ಸತ್ಯಾಗ್ರಹವನ್ನಾರಂಭಿಸುವುದನ್ನು ಯಾರಿಗೂ ತಡೆಯಲು ಸಾಧ್ಯವಾಗದು ಆದರೆ ಬ್ರಿಟನಿನಿಂದ ಮೋಸವು ಘೋರಯಾಗುವ ವರೆಗೆ ಆ ಪರಿಸ್ಥಿತಿಯನ್ನು ಬರಗೊಡದಂತೆ ಪ್ರಯತ್ನಿಸುವುದು ನನ್ನ ಪ್ರಾರ್ಥನೆಯಾಗಿದೆ. ಭಾರತ ಸ್ವಾತಂತ್ರ್ಯವನ್ನು ಬ್ರಿಟನನ್ನು ನೋಯಿಸಿ ಪಡೆಯಬೇಕೆಂದು ನಾನಿಚ್ಛಿಸುವುದಿಲ್ಲ. ನಾನಿಲ್ಲಿ ನನ್ನ ಅನುಭವಕ್ಕೆ ಬಂದ ಒಂದು ಭಯಾನಕ ಸ್ಥಿತಿಯನ್ನು ತಿಳಿಸಿದ್ದೇನೆ. ಇದಕ್ಕಿಂತ ಕಡಿಮೆಯಲ್ಲದ ಅನೇಕ ಸಂಗತಿಗಳು ಇನ್ನೂ ಇವೆ. ಅವುಗಳನ್ನು ನಾನು ತಿಳಿಸಲಿಚ್ಛಿಸುವುದಿಲ್ಲ

ದೂರ ಸರಿದುದೇಕೆ?

"ನಾನು ರಾಮಗಢದಲ್ಲಿ ಬೊಂಬಾಯಿ ಕಾಂಗ್ರೆಸಿನ ನಂತರ ಕಾಂಗ್ರೆಸಿನಿಂದ ದೂರ ಸರಿದಿದ್ದರೆ, ಹಾಗೆ ಮಾಡಿ, ಕಾಂಗ್ರೆಸಿಗೆ ಹೆಚ್ಚಿನ ಸೇವೆ ಸಲ್ಲಿಸುವ ಸಲುವಾಗಿಯೇ ನಾನು ದೂರ ಸರಿದ ಉದ್ದೇಶವನ್ನು ಘಟನೆಗಳು ರುಜುಗೊಳಿಸಿದವು ಇಂದಿನ ನನ್ನ ದೂರ ಸರಿಯುವಿಕೆಯಲ್ಲಿಯೂ ಅದೇ ಉದ್ದೇಶವಿದೆ ನಾನಿಂದು ನಿರ್ಣಯಿಸುವಂತೆ ಕೂಡಲೇ ಸತ್ಯಾಗ್ರಹವನ್ನು ಆರಂಭಿಸುವುದಿದ್ದರೆ, ನಾನು ಚುನಾಯಿಸಿದ ಕೆಲವರಿಂದ ಅದು ಪ್ರಾರಂಭವಾಗುವುದು ಇತರರು ನಾನು ಗೊತ್ತುಪಡಿಸಿದ ಮಾರ್ಗದಲ್ಲಿ ತಡೆಮಾಡದಂತೆ ನಾನು ಇಚ್ಛಿಸುವೆನು ಅವರೆಲ್ಲರೂ ನನ್ನ ಸೂಚನೆಗಳನ್ನು ಅವರು ಅನುಸರಿಸಿದರೆ ಎಲ್ಲರೂ ಅತ್ಯಂತ ಫಲಕಾರಿಯಾದ ಸಹಾಯವನ್ನೀಯಬಹುದು. ಒಂದು ನಿಶ್ಚಯತೆಯೆಂದರೆ, ನೀವು ರಚನಾತ್ಮಕ ಕಾರ್ಯದಲ್ಲಿ ವಿಶ್ವಾಸವುಳ್ಳವರಲ್ಲವಾದರೆ, ಕಾಂಗ್ರೆಸನ್ನು ಬಿಟ್ಟು ಹೊರಹೋಗಿರಿ ಮುಖ್ಯವಾಗಿ ನೂಲುವುದು ಮತ್ತು ಖಾದಿ ಧರಿಸುವುದು. ಅಹಿಂಸೆ ಮತ್ತು ಸತ್ಯಗಳನ್ನು ಪಾಲಿಸದಿದ್ದರೆ ನಾನು ಸತ್ಯಾಗ್ರಹ ನಡೆಸಲಾರೆ ಈ ಪ್ರಾಥಮಿಕ ಸೂಚನೆಗಳನ್ನು ಅನುಸರಿಸದಿದ್ದಲ್ಲಿ ನನ್ನ ಸತ್ಯಾಗ್ರಹವು ಕಾಂಗ್ರೆಸಿನವರಿಗೆ ದೊರಕಲಾರದು. ನಾನು ನನ್ನ ಸತ್ಯಾಗ್ರಹ ಲಕ್ಷ್ಯವನ್ನು ಮಾತ್ರ ತೃಪ್ತಿಪಡಿಸಿಕೊಳ್ಳುವೆನು

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

BHUVANENDRA

AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಯು. ಪಾಂಡುರಂಗ ನಾಯಕ್, ರಥಬೀದಿ, ಮಂಗಳೂರು.

ಜಪಾನು ಸತ್ಯಾಗ್ರಹವನ್ನು ಮುರಿಯುತ್ತದೆ!

ಮೊನ್ರೋ ತತ್ವವು ಆಕ್ರಮಣನೀತಿಯೆ?

ಕೊರಿಯನರು ಸತ್ಯಾಗ್ರಹ ಮಾಡುತ್ತಿದ್ದಾರೆ!

ಜಪಾನು ಜಗದ್ವಿಖ್ಯಾತ ಮೊನ್ರೋ ತತ್ವದ ಸೋಗಿನಲ್ಲಿ ಪೂರ್ವದೇಶದಲ್ಲಿ ಹೊಟ್ಟೆ ಯನ್ನು ಹೊರೆಯುತ್ತಿದೆಯಷ್ಟೆ. ಇದು ಇತರ ಪ್ರಾಚ್ಯ ದೇಶಗಳ ಮೇಲೆಯೂ ತನ್ನ ಸಾಮ್ರಾಜ್ಯ ಶಾಹಿಯನ್ನು ಸ್ಥಾಪಿಸಲು ಅದರ ಆತುರವೇ ಎಂಬ ಸಂದೇಹವನ್ನು ಬಿಡಲಿಲ್ಲ. ಜಪಾನಿನ ವಸಾಹತುಗಳಲ್ಲೊಂದರಲ್ಲಿ ಇಂದು ಅದು ಇಪ್ಪತ್ತು ಮಿಲಿಯ ಪ್ರಜೆಗಳ ದಂಗೆಯನ್ನು ಶಾಂತಿಮಯ ಸತ್ಯಾಗ್ರಹವನ್ನು ಇದಿರಿಸುತ್ತಿರುವುದೇ ಜಪಾನಿನ ನೀತಿಯು ಎಷ್ಟರ ಮಟ್ಟಿಗೆ ಲೋಕಹಿತಮಾರ್ಗದಲ್ಲಿದೆಯೆಂಬುದರ ಸಾಕ್ಷಿಯಾಗಿದೆ.

ಫೋರ್ಮೋಸವನ್ನು ಜಪಾನು ೧೮೯೫ರಲ್ಲಿ ಚೈನದಿಂದ ಕಿತ್ತುಕೊಂಡಿತು. ಆದರೆ ಜಪಾನಿನ ಹಿಂಸಾಮಯ ಆಕ್ರಮಣವನ್ನು ಫೋರ್ಮೋಸಿನೀಯರು ತೀವ್ರ ಹಿಂಸೆಯಿಂದಲೇ ಇದಿರಿಸುತ್ತಿದ್ದಾರೆ. ಅನೇಕ ಜಪಾನಿ ಅಧಿಕಾರಿಗಳನ್ನು ಭಯಂಕರ ಹತ್ಯೆಗೆ ಒಳಪಡಿಸಿದರು. ಇಂದು ೩೫ ವರ್ಷಗಳಿಂದ ಅಲ್ಲಿ ಜಪಾನಿಯರ ರಂಕುಶ ಪ್ರಜಾಪ್ರಭುತ್ವವು ನಡೆಯುತ್ತಿರುವುದಾದರೂ ಫರ್ಮೋಸಿನೀಯರು ಶಾಂತರಾಗಿರುವುದಿಲ್ಲ.

ಕೊರಿಯದಲ್ಲಿ ಕ್ರಾಂತಿ

ಆದರೆ, ಜಪಾನಿನ ಇನ್ನೊಂದು ವಸಾಹತ್ತಾಗಿರುವ ಕೊರಿಯದಲ್ಲಿ ಆಗುವ ಕ್ರಾಂತಿಯು ಇನ್ನೊಂದು ರೂಪವನ್ನು ತಾಳಿದೆ. ನಿಜವಾಗಿ ನೋಡಿದರೆ ಅಲ್ಲಿ ಸತ್ಯಾಗ್ರಹವೇ ನಡೆಯುತ್ತದೆ. ಪ್ರಬಲವಾದ ಜಪಾನಿನ ಸೈನ್ಯಶಕ್ತಿಯು ಅಲ್ಲಿದ್ದರೂ ಅವರ ಸತ್ಯಾಗ್ರಹದಿಂದ ಜಪಾನು ತೊಂದರೆಗೆ ಈಡಾಗಿದೆ. ಇಪ್ಪತ್ತು ವರ್ಷಗಳ ಹಿಂದೊಮ್ಮೆ ಕೊರಿಯದ ಕ್ರಾಂತಿಯನ್ನು ಜಪಾನು ಅಡಗಿಸಿತು. ಹಿಂಸೆಯನ್ನು ಪ್ರಬಲ ಹಿಂಸೆಯಿಂದ ಅಡಗಿಸಬಹುದಲ್ಲವೆ? ಹಾಗೆಂದೇ ಇಂದು ದೇಶಾಭಿಮಾನ ಪ್ರೇರಿತರಾದ ಕೊರಿಯನರು ಶಸ್ತ್ರರಹಿತ ಕ್ರಾಂತಿಗೆ ಆರಂಭಿಸಿದ್ದಾರೆ; ಸತ್ಯಾಗ್ರಹ ಸಮರವನ್ನು ಹೂಡಿದ್ದಾರೆ.

೧೮೯೪ರಲ್ಲಿ ಸ್ವತಂತ್ರ ರಾಜ್ಯವಾಗಿದ್ದ ಕೊರಿಯವು ಚೈನಾ ಜಪಾನುಗಳ ಯುದ್ಧಕ್ಷೇತ್ರವಾಯಿತು. ಆ ಯುದ್ಧದಲ್ಲಿ ಜಪಾನು ಜಯ ಹೊಂದಿತು. ಜಪಾನಿನ ಜಯದೊಡನೆ ಕೊರಿಯದ ಸ್ವಾತಂತ್ರ್ಯದ ಅಪಹಾರವೂ ಆಯಿತು. ಆ ಸಮಯದಲ್ಲಿ ಕೊರಿಯದ ಮಹಾರಾಣಿಯು ಜಪಾನಿನ ಮಂತ್ರಿಯನ್ನು ರಾಜ್ಯದಿಂದ ಹೊರಹೋಗಬೇಕಾಗಿ ಆಜ್ಞೆ ಕೊಟ್ಟಿದ್ದಳಂತೆ. ಬಳಿಕ ಐದೇ ದಿನಗಳಲ್ಲಿಯೇ ಆಕೆಯ ಶವವು ಅರಮನೆಯಲ್ಲಿಯೇ ಕಂಡುಬಂತು. ಜಪಾನೀಯರ ಈ ಭಯಂಕರ ಹತ್ಯದಿಂದ ದೇಶಾಭಿಮಾನಿ ಪ್ರೇರಿತರಾದ ಕೊರಿಯನರು ಸಿಡಿದು ದಂಗೆಯೆದ್ದರು. ಕೆಲಕಾಲ ಜಪಾನಿಯರಿಗೆ ಅಲ್ಲಿ ಇರುವುದೇ ಕಷ್ಟವಾಯಿತು. ಕಡೆಗೆ ೧೯೦೪ರಲ್ಲಿ ರಶ್ಯಾ ಜಪಾನ್ ಕಾಳಗವಾದಾಗ, ಕೊರಿಯದ ಮೂಲಕ ಜಪಾನಿನ ಸೈನ್ಯವನ್ನು ಸಾಗಿಸಲು ಜಪಾನೀಯರು ಅನುಮತಿ ಕೇಳಿದರು. ಯುದ್ಧ ಮುಗಿದ ಬಳಿಕ ಸೈನ್ಯವನ್ನು ಹಿಂದೆಗೆಯುದಾಗಿಯೂ ಹೇಳಿದ್ದರು. ಆದರೆ ಜಪಾನೀಯರು ತಮ್ಮ ಹಜ್ಜೆಯನ್ನು ಅಲ್ಲಿ ಭದ್ರಮಾಡಿಕೊಂಡರು. ಹೀಗಾಗಿ ೧೯೧೦ರಲ್ಲಿ ಕೊರಿಯದ ರಾಜನು ಸಂಧಿಮಾಡಲು ಒತ್ತಾಯಿಸಲ್ಪಟ್ಟನು. ಈ ಸಂಧಿಯಂತೆ ಜಪಾನಿಗೆ ಅದು ಶರಣಾಗಲೇಬೇಕಾಯಿತು.

ಭೀತಿಯ ಆಳುವಿಕೆ

ಆದಾದ ಮೇಲೆ ಕೆಲವು ವರ್ಷಗಳವರೆಗೆ ಅಲ್ಲಿ ಭೀತಿಯ ಆಳುವಿಕೆಯೇ ನಡೆಯಿತು. ಎಲ್ಲೆಲ್ಲಿಯೂ ಜಪಾನರ ಗುಪ್ತಚಾರರು ಸಂಚರಿಸುತ್ತಿದ್ದರು. ಸಾವಿರಾರು ಸಂಶಯದ ಬಂಧನಗಳು, ನಿರ್ದಯ ಫಾಶಿಗಳೂ ಆದುವು.

ಇಂತಹ ಅಮಾನುಷ ಆಚಾರಗಳಿಂದ ಸಹಜವಾಗಿ ಕೊರಿಯನರು ಗುಪ್ತವಾದ ಚಳವಳಿಗಳನ್ನು ಆರಂಭಿಸಿದರು. ಅನೇಕ ಗುಪ್ತ ಸಂಘಗಳು ತಲೆಯೆತ್ತಿರುವುವು. ಅಲ್ಲಿ ದಂಗೆಯೇಳುವುದೇ ಕಷ್ಟವಾಗಿತ್ತು. ಏಕೆಂದರೆ ಕೊರಿಯನರನ್ನು ಜಪಾನೀಯರು ನಿಶ್ಶಸ್ತ್ರರನ್ನಾಗಿ ಮಾಡಿದ್ದರು. ಅದಕಾರಣ ಅವರು ಕೊನೆಗೆ ಜಗತ್ತಿನ ಇತಿಹಾಸಗಳಲ್ಲಿಯೇ ಮೊದಲನೆಯದಾಗಿ ಶಾಂತಿಯ ಸತ್ಯಾಗ್ರಹವನ್ನು ಆರಂಭಿಸಲು ನಿಶ್ಚಯಿಸಿದರು.

ಸತ್ಯಾಗ್ರಹದ ಆರಂಭ

೧೯೧೯ರಲ್ಲಿ ಇಡೀ ಕೊರಿಯದಲ್ಲಿ ಯಾವನೇ ಒಬ್ಬ ಕೊರಿಯನನೂ ಕೆಲಸಕ್ಕೆ ಹೋಗಲಿಲ್ಲ. ೨೦ ಮಿಲಿಯ ಕೊರಿಯನರು ಅನ್ಯಾಯದ ಆಡಳಿತಕ್ಕೆ ವಿರೋಧಿಸಿ ನಿಂತರು. ಆದರೆ ಅವರಲ್ಲಿ ಒಬ್ಬನೂ ಕೈಯಲ್ಲಿ ಕತ್ತಿ ದೊಣ್ಣೆ ಕೋಲುಗಳನ್ನು ಹಿಡಿದಿರಲಿಲ್ಲ. ಅವರ ಆಯುಧವು ಅವರ ನಾಲಿಗೆಯೇ ಆಗಿತ್ತು. ಪ್ರತಿಯೊಂದು ಬೀದಿಗಳಲ್ಲಿಯೂ ಕೊರಿಯನರ ಸ್ವಾತಂತ್ರ್ಯ ಪ್ರತಿಜ್ಞೆಯು ಓದಲ್ಪಟ್ಟಿತು. 'ನಮ್ಮ ಗೌರವದ ಪ್ರಕಟಣೆಯನ್ನು ಯಾವುದೇ ಶಕ್ತಿಯೂ ತಡೆಯಲಾರದು, ಶಾಂತಿಯ ಹೆಸರಲ್ಲಿ ನಾವು ಯಾವುದನ್ನೂ ಪಡೆಯಬಹುದು. ನಾವಿಂದು ಜಪಾನನ್ನು ದುರ್ಮಾರ್ಗದಿಂದ ತಿರುಗಿಸುತ್ತೇವೆ' ಎಂದು ಅದರಲ್ಲಿತ್ತು. ಹೀಗೆ ಕೊರಿಯನರು ಹಿಂಸಾಮಾರ್ಗವನ್ನು ಬಿಟ್ಟು ಜಪಾನಿಗೆ ನೀತಿಯ ಬಿನ್ನಹ ಮಾಡಿದರು. ಸಹಜವಾಗಿ ಜಪಾನು ಆ ಶಾಂತಿ ಕ್ರಾಂತಿಯನ್ನು ಹಿಂಸೆಯಿಂದ ಅಡಗಿಸ ನೋಡಿತು. ಸಿರ್ದಯ ಕೊಲೆಗಳು ನಡೆದವು. ಇದರಿಂದಲ್ಲಾ ಹೆಚ್ಚು ಹೆಚ್ಚಾಗಿ ಜನತೆಯು ಕೆರಳಿತು.

ತರುಣರ ಹಿಂಸಾಕ್ರಾಂತಿ

ಇಂತಹ ಭಯಂಕರ ಕೃತ್ಯಗಳನ್ನು ಕಂಡ ಕೆಲವು ತರುಣರು ಗುಪ್ತ ಕ್ರಾಂತಿಗಳನ್ನು ಆರಂಭಿಸಿದರು. ಆದರೆ ಅವರ ಶಾಂತಿಸಮರದ ಯೋಧರು ಇದಕ್ಕೆ ಬೆಂಬಲ ಕೊಡಲಿಲ್ಲ. ಹಾಗಾಗಿ ಆ ತರುಣರು ಹಿಂಸಾಮಯವಾಗಿಯೇ ಜಪಾನನ್ನು ಇದಿರಿಸಿದರು.

೧೯೨೩ರಲ್ಲಿ ಅವರು ಟೋಕಿಯೋವನ್ನು ಆಕ್ರಮಿಸಲು ಗುಪ್ತ ಹಂಚಿಕೆ ಮಾಡಿದ್ದರು. ಆದರೆ ಅವರ ಗುಪ್ತವು ಪ್ರಕಟವಾಗಿ ಬಿಟ್ಟಿತು. ಇದರಿಂದ ಮತ್ತಷ್ಟು ಉಗ್ರ ಹಿಂಸೆಗಳಾಯಿತು. ೧೩,೦೦೦ ಕೊರಿಯರನ್ನು ಒಂದೇ ರಾತ್ರಿಯಲ್ಲಿ ಗುಂಡಿಟ್ಟು ಜಪಾನು ಸರಕಾರವು ಕೊಂದಿತು! ಎಂತಹ ರಾಕ್ಷಸೀ ಕೃತ್ಯ!

ಶಾಂತಿ ದಳದವರು ಇದರಿಂದ ಬಹಳವಾಗಿ ನೊಂದರೂ ಹಿಂಸೆಯನ್ನು ಖಂಡಿಸಿದರು. ಇದರಿಂದ ಅವರು ಕೇಗದೆ ಮತ್ತಷ್ಟು ತೀವ್ರ ಅಹಿಂಸಾ ಸಮರವನ್ನೇ ಹೂಡಿದರು. ಹೀಗೆ ಕಳೆದ ೨೦ ವರ್ಷಗಳಿಂದ ಕೊರಿಯನರು ಜಪಾನಿನ ಹಿಂಸೆಯ ಇದಿರು ಅಹಿಂಸಾ ಸಮರವನ್ನು ಹೂಡುತ್ತಿದ್ದಾರೆ. ಒಂದು ದಿನ ತಮ್ಮ ಅಹಿಂಸಾ ಪ್ರಯೋಗದಿಂದ ಪರಮ ಜಯವು ದೊರಕುವುದೆಂದು ಅವರು ನಂಬಿದ್ದಾರೆ. ಇಂದು ಅವರ ಸತ್ಯಾಗ್ರಹವು ಅತ್ಯಂತ ತೀವ್ರವಾಗಿ ನಡೆಯುತ್ತಿದೆ. ಜಪಾನಿನ್ನು ನಿಜವಾಗಿಯೂ ಅವರನ್ನು ತಡೆಯಲಾರದೆ ಕಳವಳಗೊಂಡಿದೆ. ನಿಜವಾದ ಸತ್ಯಾಗ್ರಹವು ಎಂದಾದರೂ ಜಯವನ್ನು ಹೊಂದಲೇ ಬೇಕಲ್ಲವೆ?

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮತ್ತು ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/- ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ★
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್
ಆರ್ಗನೈಸರ್
ಬೆಂಟ್ಲಂಡ್ ಪೇಟೆ, ಮಂಗಳೂರು.

ಅಥವಾ

ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್
4/8 ಫಸ್ಟ್ ಲೈನ್ ಬೀಚ್ ಮದ್ರಾಸು.

ವಾರದ ಕತೆ:

ರತ್ನ

[ಕತೆಗಾರ: ಪ್ರಮೋದಕುಮಾರ ಕಾಸರಗೋಡು]

ರತ್ನನಿಗೆ ರಜೆ ಸಿಕ್ಕಿತು. ಸಂಜೆ, ಸಾಲೆ ಬಿಟ್ಟು ಮನೆಗೆ ಬಂದವಳೇ—'ಅಮ್ಮಾ ಈ ಸರ್ತಿಯಾದರೂ ಊರಿಗೆ ಹೋಗೋ ಅಮ್ಮಾ. ಮೂರು ವರ್ಷಗಳಾಗುತ್ತ ಬಂತು, ಆ ಸಲ ನಾವು ಚಿಕ್ಕಮ್ಮನ ಮದುವೆಗೆ ಎಂದು ಹೋಗಿ ಬಂದು. ನನಗೆ ಬೇಸರಿಯಾಗುತ್ತದೆ. ಅಲ್ಲಿ ಅಜ್ಜಿಯನ್ನ ಚಿಕ್ಕಮ್ಮನನ್ನ ಎಲ್ಲ ನೋಡಬೇಕೂಂತಿದೆ ಯಾವಾಗನ್ನ ಹೋಗೋದು? .

'ಮುಚ್ಚು ಬಾಯಿ. ಬಳೆದಿದ್ದಾಳೆ, ನೋಡು! ಆಟ! ಇನ್ನೊಂದೆರಡು ವರುಷದೊಳಗೆ ಗಂಡನ ಮನೆಯಾಳುವವಳು, ಚಿಕ್ಕ ಮಕ್ಕಳಂತೆ ಇನ್ನೂ ಆಟ? ಮುಖಕ್ಕೆ ನಕ್ಕಾರು!' ಎಂದು ಅರಚಿಕೊಂಡರು ಸೀತಮ್ಮನವರು.

ರತ್ನನ ಉತ್ಸಾಹ ಹಿಂಗಿತು. ಮುಖ ಬಾಡಿತು ಉಗುಳು ನುಂಗುತ್ತ ಕಲ ಬೆಳಗಾಗಿ ನಿಂತಳು. ಸೀತಮ್ಮನವರು—ಇನ್ನು ಯಾವಾಗ ಬದ್ಧ ಬರುತ್ತೋ!' ತನ್ನ ಬಳಿ ಹೊರಗೆ ಇಡಬೇಕು. ಆಗ ಎನ್ನುತ್ತ ಅಡಿಗೆಯ ಮನೆಯೊಳಕ್ಕೆ ಹೋದರು.

ರತ್ನ ಅಲ್ಲಿಯೇ ನಿಂತಿದ್ದಳು. ಪಾಪ! ಮುದ್ದು ಹುಡುಗಿ, IV ಫಾರ್ಮು ಓದುತಿದ್ದಳು ಚುರುಕು ಅವಳ ಹುಟ್ಟುಗುಣ ಯಾವಾಗಲೂ ಓದುತ್ತಲೇ ಇರಬೇಕು. ಇದರಿಂದ ಈ ಬಾರಿಯ ಪರೀಕ್ಷೆಗೆ ಎಡೆಬಿಡದೆ ಓದಿ ದಣಿದಿದ್ದಳು. ಇನ್ನು ಈ ಐದಾರು ದಿನದ ರಜೆ ಸಿಕ್ಕಿದ್ದೇ ಬೇಸರ ಬಂತು. ಊರಿಗೆ ಹೋಗಿ ಬರೋಣಾಂತ ಮನಸ್ಸಾಯಿತು ಅವಳಿಗೆ ಓರಗೆಯ ಕೂಡ ಅವರವರ ಸಂಬಂಧಿಗಳಿರುವಲ್ಲಿಗೆ, ಬೇರೆ ಬೇರೆ ಊರು ನೋಡಲು ಹೋಗುವರೆಂದು ಕೇಳಿದ್ದಳು. ಅದರಲ್ಲಿಯೂ ಸಣ್ಣ ಮಕ್ಕಳಿಗೆ ಸ್ವಲ್ಪ ದೂರದ ಪ್ರಯಾಣ ಎಂದರೆ ಸಂತೋಷ ತಾನೆ? ಹಾಗಾಗಿ 'ಶಿವಪುರಕ್ಕೆ ಹೋಗಬೇಕು, ಅಲ್ಲಿ ನಮ್ಮಪ್ಪನ ತಂಗಿಯಿರುವರು, ಅವರ ಮಗ ಪ್ರಭಾಕರ—ನನ್ನ ಇಷ್ಟದ ಬಂಧು—ಇದ್ದಾನೆ ಅಲ್ಲಿ, ಒಂದೆರಡು ದಿವಸಗಳಿಗೆ ಅವರೊಡನಿದ್ದು ಬರಬೇಕು' ಎಂದು ರತ್ನ ಆಶಿಸಿದ್ದುದರಲ್ಲಿ ವಿಶೇಷವೇನು? ಅಮ್ಮ ಗದರಿಸಿದರು ಏಕೆ ಗದರಿಸಿದರೆಂದು ಮಾತ್ರ ಅವಳಿಗೆ ತಿಳಿಯದೇ ಹೋಯಿತು.

ರತ್ನನಿಗೆ ಕಣ್ಣೀರು ತುಂಬಿ ಬಂತು. ತನಗೇನೋ ಒಂದು ಅಪವಾದ ಬಂದಂತೆ ಭಾವನೆಯಾಯಿತು ಅವಳಿಗೆ. ಅರೆಮುನಿಸಿನ ಅಳುಮೊಗಗೊಂಡು ಮನೆಯೆದುರು ಜಗುಲಿಯ ಬಾಗಿಲಿಗೆ ಬಂದು ಗೋಡೆಗೆ ಒತು ನಿಂತುಕೊಂಡಳು. ಮನೆಯೆದುರು ಹೂದೋಟವಿದೆ; ಅದರಾಚೆಗೆ ಮಾರ್ಗ. ಮಾರ್ಗದಲ್ಲಿ ಹೋಗಿ ಬರುವ ಜನರು ಕಾಣುತಿದ್ದರು. ಕಾರು ಬಸ್ಸುಗಳು ಓಡಾಡುತಿದ್ದುವು. ರತ್ನ ಒಮ್ಮೆ ಮಾರ್ಗವನ್ನು, ಒಮ್ಮೆ ತೋಟವನ್ನು ನೋಡುತ್ತ ನಿಂತಳು. ಒಂದೊಂದೇ, ಹಿಂದಿನ ಕೆಲವು ದಿನಗಳು, ಅವಳ ಮನಸ್ಸಿನಲ್ಲಿ ಉದಯವಾದುವು. ಆಗ, ಶಿವಪುರದಲ್ಲಿ ಹಿಂದೊಮ್ಮೆ ಪ್ರಭಾಕರನೊಡನೆ ಆಟವಾಡಿದ ಚಿತ್ರ ಕಣ್ಣ ಮುಂದೆ ಕಟ್ಟಿತು. ಅವಳ ಕಣ್ಣುಗಳಿಂದ ಕಂಬನಿಯೆರಡು ಇಳಿದು ಹರಿಯಿತು!

ಡಾಕ್ಟರ್ ವಸಂತರಾಯರು ಆಗಲೇ ಆಫೀಸಿನಲ್ಲಿ ಬಂದು ಇಳಿದರು. ರತ್ನನಿಗೆ ಇದು ಗೊತ್ತೇ ಆಗಲಿಲ್ಲ. ವಸಂತರಾಯರು ತೋಟವನ್ನು ಹೊಕ್ಕು ಬಂದು ಮೆಟ್ಟಿಲನ್ನು ಹತ್ತಿ, 'ಏನು ರತ್ನಾ ಅಳುತಿದ್ದೀಯೇ' ಏನಮ್ಮ! ' ಎಂದು ಅವಳ ಗಲ್ಲ ಹಿಡಿದೆತ್ತಿದಾಗ ಅವರ ಮುಖ ನೋಡಿದಳು ಕಣ್ಣುಗಳೆರಡೂ ಕಣ್ಣೀರು ತುಂಬಿ ಮಿನುಗುತಿದ್ದುವು ರಾಯರಿಗೆ ಏನೋ ವಿಚಿತ್ರ ನಡೆದಿದೆ ಎಂದು ವಿಚಾರವಾಯಿತು 'ಬಾಮ್ಮ! . ಬಾ' ಅವಳೇನು ಗದ್ದರಿಸಿದಳೋ ನಿನ್ನ?' ಎಂದು ಅವಳ ಬೆನ್ನು ತಟ್ಟಿ 'ಬಾಮ್ಮ' ಒಳಗೆ ಹೋಗೋಣ ಎಂದು ಒಳಗೆ ಕರೆದುಕೊಂಡು ಹೋದರು.

'ಏನೇ! ರತ್ನ ಅಳುತ್ತಿದ್ದಾಳೆ, ಬಾರೇ' ಎಂದು ಒಳಗಿಂದ ಕರೆಯುತ್ತಾ ನಡುಮನೆಯಲ್ಲಿಯೇ ಸಂಧಿಸಿದರು ಸೀತಮ್ಮನವರು.

ಅಪ್ಪನೊಡನೆ ರತ್ನ ಅಳುತಳುತ್ತ ನಡೆದ ಕಥೆ ಹೇಳಿದಳು ಸೀತಮ್ಮನವರು ಈಗ ಬೇಡೆಂದು ಹೇಳಿದರು ರಾಯರು ಕೋಪಿಸಿಕೊಂಡವರಂತೆ—'ಮತ್ತಾವಾಗ? ನಾಳೆಗೇ ಹೋಗಲಿ, ಶಿವಪುರಿಗೆ. ಅಲ್ಲಿ, ನಮಗೊಂದು ಸಾಕ್ಷಿ ಉಂಟು, ನಾಳೆ, ಹೋಗಬೇಕು. ಒಟ್ಟಿಗೆ ಬಂದರಾಯಿತು ರತ್ನ, ನಾಳೇ ಹೋಗೋಣಪ್ಪ ಅಳು ಬೇಡ.' ಎಂದು ಸಂತಯಿಸಿದರು. ರತ್ನ ಸಂತೋಷದಿಂದ ಹಿಗ್ಗಿದಳು. ಮುಗುಳುನಗೆಯೊಂದು ಮಳೆಗಾಲದ ಹೂ ಅರಳುವಂತೆ ಅರಳಿತು.

ಕಾಫಿ ಕುಡಿದು ಒಂದೆರಡು ಗಳಿಗೆಯಲ್ಲಿ ರಾಯರಿಗೆ ಹೊರಗೆ ವಿಜಿಟಿಂಗ್ (visiting)ಗೆ ಹೋಗಬೇಕಾಯಿತು. ಮಾತು ಮುಗಿದು, ಸೀತಮ್ಮನವರು ಮಾಳಿಗೆಯ ಮೇಲೆ ಹೋಗಿ ವಿಶ್ರಮಿಸಿದರು. ರತ್ನ ತನ್ನೋದುವ ಕೋಣೆಗೆ ಹೋಗಿ ಒರಗುವ ಸೋಫಾವೊಂದರಲ್ಲಿ ಕುಳಿತುಕೊಂಡು ಹಾಡತೊಡಗಿದಳು

ಒಂದರ ಮೇಲೊಂದು ಸವಿಗನಸನ್ನು ಹೆಣೆಯುತ್ತಾ ಹೊತ್ತು ನೂಕಿದಳು. ಕತ್ತಲೆಯಾಗಿ ಕೆಲಸದವಳು ಟೇಬಲ್ ಲೇಂಪ್ (Table lamp) ಉರಿಸಿ ತರುವವರೆಗೂ ಅವಳಿಗೆ ಯಾವುದರ ಗೊಡವೆಗೂ ಮನಸ್ಸು ಹರಿಯಲಿಲ್ಲ ಕೆಲಸದವಳು ಬರುವ ಹೊತ್ತಿಗೆ ಪ್ರಭಾಕರ ತನ್ನನ್ನು ಮುದ್ದಿಡುವಂತೆ ನೆನೆದು ನಸುನಕ್ಕಳು 'ಏನ ರತ್ನಾ! ತಮಾಷೆಮಾಡುತ್ತಿಯೋ? ಕೋಪದಿಂದ ಕೆಲಸದವಳು ಹೇಳಿಕೊಳ್ಳುತ್ತ ಹೊರಗೆ ನಡೆದಳು ಅದೂ ರತ್ನನಿಗೆ ನಗು ಹುಟ್ಟಿಸಿತು. ರತ್ನ ನಕ್ಕಳೇಕೆಂದು ಅವಳಿಗಾದರೂ ಹೇಗೆ ತಿಳಿಯಬೇಕು?

— ೨ —

ಮರುದಿವಸ ರಾಯರು, 'ರತ್ನಾ, ಇವತ್ತು ಹೋಗುವುದಕ್ಕಾಗುವುದಿಲ್ಲ, ನೋಡು. ನನಗೆ ಒಂದು 'ಸೀರಿಯಸ್ ಕೇಸ್' ಇದೆ ನೋಡಿ ಬರಬೇಕು. ಮನಸ್ಸಿಗೆ ಬೇಸರ ತಂದುಕೊಳ್ಳಬೇಡ . . ನೋಡು. ಯಾವ ಕೆಲಸವೂ ಆದೀತು, ಡಾಕ್ಟರರ ಕೆಲಸಬೇಡ ನೋಡು. ಎಂದು ರೊಟ್ಟಿ ಹಚ್ಚಿ ಮಾತನಾಡಿದರು, ರತ್ನನ ರೂಮಿಗೆ ಬಂದು. ರತ್ನ ಆ ದಿನ ಆದಷ್ಟು ಬೇಗನೆ ಎದ್ದು ತನ್ನ ಹೊಸ ಹೊಸ ಸೀರೆ ಬಣ್ಣ ಬಣ್ಣದ ಕುಪ್ಪಸ ಮೊದಲಾದುವುಗಳನ್ನು ತೆಗೆದಿರಿಸುತ್ತ, ಇನ್ನು ಪ್ರಭಾಕರನಿಗೆ ಕಾಣಿಕೆಯಾಗಿ ಏನನ್ನು ತೆಗೊಳ್ಳಬೇಕು—ಎಂದು ಯೋಚಿಸುತ್ತಿದ್ದಳು. ರಾಯರು ಹೀಗೆ ಹೇಳಿದುದನ್ನು ಕೇಳಿ ಕಲ್ಲು ಕಂಬದಂತೆ ನಿಂತುಬಿಟ್ಟಳು. ರಾಯರ ಮುಖದಲ್ಲಿ ಸುಳ್ಳಿನ ತೆರೆಯೊಂದಿದ್ದು ಬರುತ್ತಿತ್ತು. ರತ್ನ ಅವರ ಮುಖವನ್ನು ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿದ್ದಳು. ರಾಯರಿಗೆ ಹೇಗೆ ಹೇಗೋ ಆಯಿತು; "ನಾನೀಗ ಬರುತ್ತೇನೆ," ಎಂದವರೇ ಹೊರಗೆ ನಡೆದು ಹೋದರು

ರತ್ನನಿಗೆ ಉತ್ಸಾಹ ಕುಗ್ಗಿತು. ಅಪ್ಪನೂ ತನ್ನನ್ನು ಮೋಸಮಾಡುತ್ತಾನೆಂದುಕೊಂಡಳು ಸಿಟ್ಟಿಯವನ್ನೆಲ್ಲ ಒತ್ತರಿಸಿಟ್ಟು ಸಿಟ್ಟಿನಿಂದ ಬಂದು ಒಂದು ಕುರ್ಚಿಯಲ್ಲಿ ಬಿದ್ದುಕೊಂಡಳು. ಉಕ್ಕಿ ಉಕ್ಕಿ ಬರುವ ಕಂಬನಿ ಗಲ್ಲವನ್ನು ತೊಯಿದುಬಿಟ್ಟಿತು. ಏನೋ ಒಂದು ಹೊಸ ವಿಚಾರ ಬಂದು ಎದ್ದಳು. ಕಚೇರಿಯಿಂದ ಎದ್ದವಳೇ ಬೇಗನಲ್ಲಿ ತುಂಬಿದ್ದ ಸೀರೆ ಕುಪ್ಪಸಗಳನ್ನೆಲ್ಲ ಕಂಡಾಬಟ್ಟೆ ಒಗೆದು ಚೆಲ್ಲಾಪಿಲ್ಲಿ ಮಾಡಿದಳು. ಅಷ್ಟರಲ್ಲಿಯೇ ಸೀತಮ್ಮನವರೂ ಸಮಾಧಾನ ಹೇಳಬಂದಿದ್ದರು ರತ್ನಳಿಗೆ ಇದನ್ನೆಲ್ಲ ನೋಡಿ ಅವರಿಗಿಲ್ಲದ ಸಿಟ್ಟು ಬಂತು. ರತ್ನನನ್ನು ಚೆನ್ನಾಗಿ ಹೊಡೆದುಬಿಟ್ಟರು. ಅದನ್ನು ತಿಂದುಕೊಂಡು ರತ್ನ ಮಾಳಿಗೆಗೆ ಹೋಗಿ ಒಂದು ಮೂಲೆಯಲ್ಲಿ ಸುಮ್ಮನೆ ಬಿದ್ದುಕೊಂಡಳು ಅವಳ ಸಿಟ್ಟು ನೋವು ಮತ್ತು ಬೇಸರ ಇಳಿಯುವಾಗ ಕತ್ತಲಾಗಿತ್ತು ಅಷ್ಟರ ತನಕವೂ ಊಟ, ಕಾಫಿ, ಮುಟ್ಟಿರಲಿಲ್ಲ ರತ್ನ ಸಂಜೆ ರಾಯರು ಬಂದಾಗಲೇ ಅವರ ಸಂಗಡ ಕುಳಿತು ಉಂಡಳು.

(೮ನೆ ಪುಟವನ್ನು ನೋಡಿರಿ)

ಗೋಪಾಲಕೃಷ್ಣ ಚಿತ್ರದ ಒಂದು ದೃಶ್ಯ

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction .. .. .. ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

The Auttur & Jawahar Bank, Limited.

Aurang-zeb sent his generals to the southern most parts of India

Ireland became independent in . in . and for a short time his rule seemed to reach from the Himalayas to Cape Comorin. . . Babar ruled India'

'The battle of Panipat in in 1526 A. D. Ibrahim Lodi was defeated. Babar..

ಜಿಲ್ಲಾ ಸಮಾಚಾರ

ಮಂಗಳೂರು

ಮಿತ್ರಮಂಡಳಿ:—ಇಲ್ಲಿಯ ಮಿತ್ರ ಮಂಡಳಿಯ ಆಶ್ರಯದಲ್ಲಿ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಕಳೆದ ಆದಿತ್ಯವಾರ 'ಕವಿ ಕಷುಯಿವೆಂಟ' ಕುರಿತು ಒಂದು ಸರಸವಾದ ಉಪನ್ಯಾಸವಿತ್ತರು.

ಹೊಸ ಪೋಸ್ಟಾಫೀಸು:—ಇಲ್ಲಿಯ ಕಂಪನಕಟ್ಟೆಯ ಪೆಲಿಕ್ಸ್ ಪೈ ಬಿಲ್ಡಿಂಗಿನ ಮಾಳಿಗೆಯಲ್ಲಿ ಒಂದು ಹೊಸ ಪೋಸ್ಟಾಫೀಸು ತೆರೆಯಲಾಗಿದೆ.

ಹೊಸ ಪಂಚಾಯಿತ ಆಫೀಸರರು ಜಿಲ್ಲೆಯ ಪಂಚಾಯತ್ ಆಫೀಸರರಾದ ಶ್ರೀ ಸಂಜೀವ ಶೆಟ್ಟರಿಗೆ ಬಳ್ಳಾರಿಗೆ ವರ್ಗವಾಗಿ ಶ್ರೀ. ಎಸ್. ಎಂ. ಲಿಂಗೆ ಇವರು ಅವರ ಬದಲು ಚಾರ್ಜು ವಹಿಸಿರುವರಾಗಿ ತಿಳಿದುಬರುತ್ತದೆ

ಟೌನ ಕೊಂಗ್ರೆಸ್ ಕಮಿಟಿ:—ತಾ ೪-೮-೧೯೪೦ನೇ ರವಿವಾರ ಸಾಯಂಕಾಲ ಘಂಟೆ ೫-೩೦ಕ್ಕೆ ಫೆಲಿಕ್ಸ್ ಪೈ ಬಜಾರಿನಲ್ಲಿರುವ ಕೊಂಗ್ರೆಸ್ ಕಮಿಟಿ ಆಫೀಸಿನಲ್ಲಿ ಜರಗಿದ ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯ ಸಭೆಯು ಶ್ರೀ ಕೆ ಕೇಶವ ಶೆಣೈಗಳ ಅಧ್ಯಕ್ಷತೆಯಿಂದ ಜರುಗಿತು (೧) ಕೊಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಬಗ್ಗೆ ಪ್ರತಿಯೊಬ್ಬ ಕಾರ್ಯಕಾರಿ ಮಂಡಳಿಯ ಸದಸ್ಯನೂ ಲಕ್ಷ್ಯಕೊಟ್ಟು ಕೆಲಸಮಾಡಬೇಕೆಂದೂ ಕೊಂಗ್ರೆಸ್ ಸದಸ್ಯರಾಗಿ ಮಹಾಜನರು ಸೇರುವಂತೆ ವಿನಂತಿಸಿ, ಯಾವ ಪ್ರಕಟನೆಗಳು ಅವಶ್ಯವಿದೆಯೋ ಅದನ್ನು ಹೊರಡಿಸಬೇಕಾಗಿಯೂ ನಿರ್ಣಯಿಸಲಾಯಿತು. (೨) ಇಲ್ಲಿಯಲ್ಲಾದ ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಠರಾವನ್ನು ಅನುಸರಿಸಿ ಕೊಂಗ್ರೆಸ್ಸಿಗೆ ಸಮ್ಮಂಧ ಇರುವವರು ಯುದ್ಧ ಕಮಿಟಿಯಲ್ಲಿ ಭಾಗವಹಿಸಬಾರದೆಂದೂ ಹಾಗೇನಾದರೂ ಈ ಮೊದಲು ಭಾಗವಹಿಸಿದವರಿದ್ದರೆ ಅವರು ಕೂಡಲೇ ರಾಜೀನಾಮೆ ಕೊಡಬೇಕೆಂದೂ, ರಾಜೀನಾಮೆ ಕೊಡಲೊಪ್ಪದವರ ಮೇಲೆ ಕೊಂಗ್ರೆಸ್ ಕಮಿಟಿಯು ತಕ್ಕ ಕ್ರಮವನ್ನು ಕೈಕೊಳ್ಳಬೇಕಾಗಿಯೂ ನಿರ್ಣಯಿಸಲಾಯಿತು. ೩) ಕೊಂಗ್ರೆಸ್ ಕಾರ್ಯವನ್ನು ಭರದಿಂದ ಸಾಗಿಸಲು ಕೊಂಗ್ರೆಸ್ ಕಮಿಟಿ ಮೆಂಬರರ ಹಾಗೂ ಕೊಂಗ್ರೆಸ್ ಕಾರ್ಯಕರ್ತರ ಸಭೆಯೊಂದನ್ನು ಸಪ್ಟಂಬರ ತಿಂಗಳಲ್ಲಿ ಆಹ್ವಾನಿಸಬೇಕಾಗಿ ತೀರ್ಮಾನಿಸಲಾಯ್ತು.

ಮುಸ್ಲಿಂ ಬಂಧುಗಳ ಪ್ರಶಂಸನೀಯ ಜಯ:—ಜನಾಬ್ M. C. ಅಹಮದ್ ಇವರು ಕಳೆದ B. L ಪರೀಕ್ಷೆಯಲ್ಲಿ ಮಿರ್ ಅನ್ವಾರುದ್ದೀನ್ ಗೋಲ್ಡ್ ಮೆಡಲನ್ನು ಪಡೆದಿರುವರಾಗಿ ತಿಳಿದುಬರುತ್ತದೆ. ಅಲ್ಲದೆ ಇವರಿಗೆ F. L. ಪರೀಕ್ಷೆಯಲ್ಲಿ ಸರಕಾರಿ ಸ್ಕಾಲರ್‌ಶಿಪ್ ದೊರಕಿತ್ತೆಂದು ಮುಸ್ಲಿಂಬಂಧುಗಳೊಬ್ಬರು ತಿಳಿಸುತ್ತಾರೆ.

ಅರಸು ಮಂಡತ್ತಾಯ ದೈವದ ಪಾಳಿ:—ತಾ. ೨೫-೭-೪೦ರಲ್ಲು ಅತ್ತಾವರ ಅರಸು ಮುಂಡತ್ತಾಯ ದೈವದ ಪಾಳಿಯಲ್ಲಿ ಶ್ರೀ. ಕೃಷ್ಣ ಜಯಂತ್ಯುತ್ಸವದ ಕಮಿಟಿಯ ವರ್ಷಾವಧಿ ಸಭೆ ಜರಗಿ ಕಾರ್ಯಕಾರಿ ಸಮಿತಿಯು ಆರಿಸಲ್ಪಟ್ಟಿತು. ಶ್ರೀ. ಕೆ. ಕೊರಗ ಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎ. ಯಂ. ಶಾಂತಾರಾಮರನ್ನು ಸೆಕ್ರೆಟರಿಯವರನ್ನಾಗಿಯೂ ಚುನಾಯಿಸಲಾಯಿತು. ಇದೇ ತಿಂಗಳ ತಾ. ೨೬ನೇ ಸೋಮವಾರ ದಿನ ಸಾಯಂಕಾಲ ೪ ಘಂಟೆಗೆ ನಡೆಯುವ ಮೊಸರು ಕುಡಿಕೆ ಉತ್ಸವ ಸಮಾರಂಭಕ್ಕೆ ಎಲ್ಲರಿಗೂ ಸ್ವಾಗತವಿದೆ

ವ್ಯಾಯಾಮ ಪ್ರದರ್ಶನ:—ಮುಂಬಯಿಯ ಲಾಥಿ ಚಾಂಪಿಯನರಾದ ಅಬ್ದುಲ್ ಹಕ್ ಸಾಹೇಬರೂ, ಅವರ ಶಿಷ್ಯರೂ ಮತ್ತು ಸ್ಥಳೀಯ ಸ್ವಾಸ್ಥ್ಯ ಸಂಘದ ಸದಸ್ಯರೂ ತಮ್ಮ ಅಂಗಸಾಧನೆಯ ಪ್ರದರ್ಶನಗಳನ್ನು ಮಿಶನ್ ಹೈಸ್ಕೂಲಿನಲ್ಲಿ ತೋರಿಸಿದರು.

ನೇಕಾರರ ಸಭೆ:—ಎಸ್ ಎಂ. ಎಸ್. ನೇಯ್ಗೆ ಕಾರ್ಖಾನೆಯ ಮ್ಯಾನೇಜರ ಆಡಳಿತೆಗೆ ಒಳಪಟ್ಟ ಇನ್ನೆರಡು ದೊಡ್ಡ ಕಾರ್ಖಾನೆಗಳ ಕೆಲಸಗಾರರೆಲ್ಲ ಸಭೆ ಸೇರಿ ಕಂಕನಾಡಿಯ ಫೆಕ್ಟರಿಯ ಕೆಲಸಗಾರರನ್ನು ಇದೇ ಮೇ ತಿಂಗಳಲ್ಲಿದ್ದ ಸಂಬಳದಲ್ಲಿ ದುಡಿಸುವ ಬಗ್ಗೆ ಅತಿ ತ್ವರೆಯಲ್ಲಿ ಫೆಕ್ಟರಿಯನ್ನು ತೆರೆದು ಕೆಲಸಗಾರರ ಪ್ರೀತಿಗೆ ಮಾಲಕರು ಪಾತ್ರರಾಗಬೇಕೆಂದು ಮನವಿಯನ್ನು ಮ್ಯಾನೇಜರಿಗೆ ಕಳುಹಿಸಿರುವರಾಗಿಯೂ ಈ ಮನವಿಯ ಪ್ರತಿಯೊಂದನ್ನು ಜಿಲ್ಲಾ ಕಲೆಕ್ಟರರ ಅವಗಾಹನೆ ಬಗ್ಗೆ ರವಾನಿಸಲಾಗಿದೆಯೆಂದೂ ತಿಳಿದು ಬರುತ್ತದೆ

ದ ಕ ಜಿ ಹರಿಜನ ಲೇಬರ್ ಲೀಗ್:—ಕಳೆದ ತಾ ೨೮ನೇ ಪೂರ್ವಾಹ್ನ ದ. ಕ ಹ ಲೇ ಲೀಗಿನ ಸಭೆಯೊಂದು ಶ್ರೀ ಕೆ ಈಶ್ವರ, ಯಂ ಎಲ್ ಎ ರವರ ಅಧ್ಯಕ್ಷತೆಯಲ್ಲಿ ಸೇರಿ, ೧ ಸಂಘಕ್ಕೆ ಒಂದು ಕಟ್ಟೋಣದ ಬಗ್ಗೆ ಸರಕಾರದಿಂದ ಸ್ಥಳವನ್ನು ಕೇಳಿಕೊಳ್ಳಬೇಕೆಂದೂ, ೨ ಸಂಘದ ಕಾರ್ಯದರ್ಶಿಯವರಿಂದ ತಯಾರಿಸಲ್ಪಟ್ಟ ಸೂಚನೆಯನ್ನು ಪರಿಶೀಲಿಸಿ ಮದ್ರಾಸ್ ಸರಕಾರಕ್ಕೆ ಕಳುಹಿಸತಕ್ಕ ಅಪೀಲ್ ಕೂಡಲೇ ಕಳುಹಿಸಬೇಕೆಂದೂ ೩ ಪ್ರತಿ ಆದಿತ್ಯವಾರ ಸಂಘದ ಸಭೆ ಜರುಗಿಸಬೇಕೆಂದೂ ನಿರ್ಧಾರಗಳಾದುವು.

ಅಭಿನಂದನೆ:—ಸ್ಥಳೀಯ ಸೈ ಆಗ್ನೆಸ್ ಹೈಸ್ಕೂಲಿನ ವಿಜ್ಞಾನಶಾಸ್ತ್ರದ ಅಧ್ಯಾಪಕರಾದ ಶ್ರೀ ಯಸ್ ರಾಮಕೃಷ್ಣ ಆಚಾರ್, ಬಿ ಎ. ಎಲ್ ಟಿ, ಇವರು ಕುಂದಾಪುರ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರಾಗಿ ತಿಳಿದುಬರುತ್ತದೆ ಇವರಿಗೆ ನಮ್ಮ ಅಭಿನಂದನೆಗಳು

ಅಧ್ಯಾಪಕರ ಮಾಸಿಕ ಸಭೆ:—ಮಂಗಳೂರು ಪಟ್ಟಣದ ದಕ್ಷಿಣ ಭಾಗಕ್ಕೆ ಸೇರಿದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಸಭೆಯು ಶ್ರೀ ರಂಗ ಆಪ್ಪಾಜಿ ರಾವ್, ಬೋಳಾರ್ ಮುನಿಸಿಪಲ್ ಶಾಲೆ ಇವರ ಅಧ್ಯಕ್ಷತೆಯಲ್ಲಿ ಜೆಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಜೆಪ್ಪು ಎಸ್ಸೈಲಮ್ ಹಾ. ಎ ಶಾಲೆಯ ಸಹಾಯಕರಾದ ಶ್ರೀ ಶ್ರೀನಿವಾಸ ಬೋರ್ಕರ್ ಇವರು ಒಂದು ಉಪನ್ಯಾಸವನ್ನು ಸೈಂಟ್ ಜೋನ್ಸ್ ಹಾ ಎ. ಶಾಲೆಯ ಸಹಾಯಕರಾದ ಶ್ರೀ ಪಿ. ಶಿವಣ್ಣ ಹೆಗ್ಡೆ ಇವರು ಒಂದು ಪದ್ಯಪಾಠವನ್ನೂ ಕೊಟ್ಟ ಬಳಿಕ ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

ಜನ್ಮಟಾಪು:—ಕೊಳ್ಯಗೆ ಗ್ರಾಮದ ಸುಬ್ಬಮಣಿಯಾಣಿ ಮತ್ತು ಅದನ ಮಗ ಕುಂಞಪ್ಪ ಎಂಬಿಬ್ಬರನ್ನು ಮಂಗಳೂರು ಸೆಶ್ಶನ್ಸ್ ಜಡ್ಜರಾದ ಶ್ರೀ ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್. ರವರು ಇ. ಪಿ. ಕೋಡಿನ ೩೦೨ನೇ ಕಲಂ ಪ್ರಕಾರ ಜನ್ಮಟಾಪಿನ ಶಿಕ್ಷೆಗೆ ಗುರಿಪಡಿಸಿ ಕಳೆದ ೩೧-೭-೪೦ರಲ್ಲಿ ತೀರ್ಪು ಕೊಟ್ಟರು ಆಲೆರು ಕಳೆದ ೬-೩-೪೦ರಲ್ಲು ಹಗಲು ಸುಮಾರು ೩ ಘಂಟೆಗೆ ದೇಲಪ್ಪ ಎಂಬವನನ್ನು ದೊಣ್ಣೆಗಳಿಂದ ಹೊಡೆದು ಕೊಂದರಾಗಿ ಅವರ ಮೇಲೆ ಚಾರ್ಜು ಮಾಡೋಣಾಗಿತ್ತು. ದೇರಪ್ಪನ ಮಗಳಾದ ತಿರುದೇವಿಯನ್ನು ಕುಂಞಪ್ಪನಿಗೆ ಮದುವೆ ಮಾಡಿಕೊಡಲು ಒಪ್ಪದ ಕಾರಣ ಅವರೊಳಗೆ ಹುಟ್ಟಿದ ದ್ವೇಷದ ಮೂಲಕ ಈ ಹತ್ಯೆಯನ್ನು ಆಲೆರು ನಡಿಸಿದ್ದಾಗಿ ಮುಖ್ಯ ಕಡೆ ಸಾಧನೆಯಾಗಿತ್ತು. ಆಲೆರು ತಾವು ಯಾವ ತಪ್ಪನ್ನೂ ಮಾಡಲಿಲ್ಲವಾಗಿ ಹೇಳಿಕೆ ಕೊಟ್ಟರು. ಆದರೆ ಜಡ್ಜರು ಅದನ್ನು ಅಂಗೀಕರಿಸದೆ ಆಲೆರನ್ನು ಮೇಲೆ ಹೇಳಿದ ರೀತಿಯಲ್ಲಿ ಶಿಕ್ಷೆಗೆ ಗುರಿಪಡಿಸಿದರು.

ವಿದ್ಯಾರ್ಥಿ ಸಂಘ:—ಇಲ್ಲಿಯ ವಿದ್ಯಾರ್ಥಿ ಸಂಘದ ಮೊದಲನೆಯ ಸಭೆಯು ತಾರೀಕು ೨೮ನೇ ಅಪರಾಹ್ನ ೩-೩೦ಕ್ಕೆ ವಿದ್ಯಾರ್ಥಿ ಭವನದಲ್ಲಿ ಶ್ರೀ. ಬಿ. ವೆಂಕಟ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ವರ್ಷದ ಸಭೆಗೆ ಶ್ರೀ. ನಾರಾಯಣ ನೆಟ್ಟಾರರು ಕಾರ್ಯದರ್ಶಿಯರಾಗಿಯೂ ಶ್ರೀ. ಬಿ. ವೆಂಕಟಕೃಷ್ಣರಾಯರು ಉಪ ಕಾರ್ಯದರ್ಶಿಯವರಾಗಿಯೂ ಚುನಾಯಿಸಲ್ಪಟ್ಟರು ಶ್ರೀ. ಬಿ ವೆಂಕಟಕೃಷ್ಣರಾಯರು ಶ್ರೀಯುತ ಸುಭಾಷಚಂದ್ರ ಬೋಸರನ್ನು ದಸ್ತಗಿರಿ ಮಾಡಿದ ಬಗ್ಗೆ ಬಂಗಾಳದ ಮಂತ್ರಿಮಂಡಲವನ್ನು ಖಂಡಿಸಿ ಮತ್ತು ಬೋಸರನ್ನೂ ಮತ್ತು ಇನ್ನಿತರ ಹೋಲ್ವೆಲ್ ಸ್ಮಾರಕ ಸತ್ಯಾಗ್ರಹಕ್ಕೆ ಸಂಬಂಧಪಟ್ಟ ರಾಜಕೀಯ ಕೈದಿಗಳನ್ನೂ ಶೀಘ್ರದಲ್ಲಿಯೇ ಬಿಡುಗಡೆ ಮಾಡುವಂತೆ ಹಕ್ ಮಂತ್ರಿಮಂಡಲದೊಡನೆ ಈ ಸಭೆಯು ಕೇಳಿಕೊಳ್ಳುತ್ತದೆ ಎಂಬ ಠರಾವನ್ನು ಸಭೆಯ ಮುಂದಿಟ್ಟರು ಅದು ಸರ್ವಾನುಮತದಿಂದ ಮಂಜೂರಾಯಿತು

ನೃತ್ಯಪ್ರದರ್ಶನ—ಭರತ ನಾಟ್ಯಕಲೆಯಲ್ಲಿ ಹೆಸರುಗೊಂಡ ಶ್ರೀಮತಿ ಮೇನಕಾ ಶ್ರೀ ರಾಮನಾರಾಯಣ ಮತ್ತು ಅವರ ಕಡೆಯವರು ತಮ್ಮ ಅದ್ಭುತ ನೃತ್ಯಕಲೆಯನ್ನು ಕಳೆದ ತಿಂಗಳ ಕೊನೆಯ ವಾರದಲ್ಲಿ ಮಂಗಳೂರಲ್ಲಿ ಪ್ರದರ್ಶಿಸಿದರು

ಪುತ್ತೂರು

ಯುದ್ಧನಿಧಿ:—ಕಳೆದ ತಾ. ೩೦ರಂದು ಜರಗಿದ ಸ್ಥಳೀಯ ಪಂಚಾಯತ ಬೋರ್ಡು ಮೀಟಿಂಗಿನಲ್ಲಿ ಹಣದ ಅಭಾವದಿಂದ ಯುದ್ಧ ಫಂಡಿಗೆ ಹಣ ಕೊಡುವರೆ ಅನಾನುಕೂಲವೆಂಬ ಸಂಗತಿ ಸೂಚಿಸೋಣಾಗಿದೆಯೆಂದು ತಿಳಿದು ಬಂದಿದೆ

ಕಾಸರಗೋಡು

ತಿಲಕ ದಿನಾಚರಣೆ:—ಇದೇ ತಾರೀಕು ೧ನೇ ಸಾಯಂಕಾಲ ಇಲ್ಲಿಯ ಬೋ. ಹೈಸ್ಕೂಲಿನ ತರ್ಕಸಂಘದಲ್ಲಿ ಶ್ರೀ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಲೋಕಮಾನ್ಯ ತಿಲಕರ ವಿಷಯವಾಗಿ ಹೃದಯಂಗಮವಾದ ಭಾಷಣ ಮಾಡಿ ತಾವು ರಚಿಸಿದ ಕೆಲವು ಕೃತಿಗಳನ್ನು ಹಾಡಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಸ್ಫೂರ್ತಿಯನ್ನುಂಟುಮಾಡಿದರು. ಕೊನೆಗೆ ಮುಖ್ಯೋಪಾಧ್ಯಾಯ ಶ್ರೀ ಕೆ ಕೃಷ್ಣರಾಯರೂ ಮತ್ತು ಸಂಘದ ಕಾರ್ಯದರ್ಶಿಯವರೂ ಭಾಷಣಕರ್ತರಿಗೆ ಧನ್ಯವಾದಗಳನ್ನರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

ಅಧಿಕಾರಿಗಳ ಪ್ರಶಂಸೆ:—ಕಾಸರಗೋಡು ಪೋ. ಸ. ಇನ್ಸ್‌ಪೆಕ್ಟರರಾದ ಜನಾಬ್ ಹಾಮುದ್ ಕುಟ್ಟಿಯವರು ಉತ್ತೇಜನದಿಂದ ಕಾರ್ಯಗಳನ್ನು ಮಾಡುತ್ತಾ ಊರಲ್ಲಿ ಕಳವು ಜುಗಾರಿ ಮೊದಲಾದುವುಗಳಾಗದಂತೆ ಬಹಳ ಮೆಹನತ್ತು ತಕ್ಕೊಳ್ಳುತ್ತಿರುವರೆಂದೂ ಅವರನ್ನು ಮಾನ್ಯ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರು ಇನ್ನು ಬಹುಕಾಲ ಕಾಸರಗೋಡಿನಲ್ಲಿಯೇ ಇರುವಂತೆ ಮಾಡಿದರೆ ಊರಿನವರಿಗೆ ಹೆಚ್ಚು ಉಪಕಾರವಾದೀತೆಂದೂ ಕುಂಬಳೆಯ ಕಾಂಗ್ರೆಸ್ ಕೆಲಸಗಾರರಾದ ಶ್ರೀ. ದೇವಪ್ಪಾಳ್ವರು ಬರೆದು ತಿಳಿಸುತ್ತಾರೆ. (ಬಾತ್ಮಿ)

ಕಾರ್ಕಳ

ಆರೋಗ್ಯ ಪ್ರಚಾರ ಸಮಿತಿ:—ಸ್ಥಳೀಯ ಆರೋಗ್ಯ ಪ್ರಚಾರ ಸಮಿತಿಯ ಒಂದು ಸಭೆಯು ತಾ. ೧-೮-೪೦ರ ದಿನ ಸಾಯಂಕಾಲ ಬೋರ್ಡು ಮೈನ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ್ ಪಿ. ಭವಾನಿರಾಯರ ಅಧ್ಯಕ್ಷತೆಯಲ್ಲಿ ಜರಗಿ, ಪಂಚಾಯತ ಬೋರ್ಡು ಸಾರ್ವಜನಿಕ ಪಾಯಖಾನೆ ಮತ್ತು ಮೂತ್ರ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ ಹಂಗಾಮಿಯಾಗಿಯಾದರೂ ಒಬ್ಬ ಹೆಲ್ತ ಇನ್ಸ್‌ಪೆಕ್ಟರರನ್ನು ನೇಮಿಸಬೇಕೆಂದೂ, ಮನೆಗೊಂದು ಪಾಯಖಾನೆ ಇರುವಂತೆ ಜನರನ್ನು ಒತ್ತಾಯಿಸಬೇಕೆಂದೂ ಸದಸ್ಯರೂ ಆರೋಗ್ಯಸಂಬಂಧವಾದ ತೀವ್ರ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದೂ ನಿರ್ಣಯಗಳಾದುವು.

ಹರಿಜನ ಕಾರ್ಯ: ಶ್ರೀ. ಕೆ ಕೆ ಪಿ. ರಾಮ ಪೊತುವಾಳರು ಕಾರ್ಕಳದಲ್ಲಿ ಹರಿಜನ ಸೇವಾ ಪ್ರಚಾರ ಕಾರ್ಯವನ್ನು ಮಾಡುವುದಕ್ಕೋಸ್ಕರ ಕಾರ್ಕಳದ ವಕೀಲ ಶ್ರೀ. ಟ್ಯ. ಶ್ರೀನಿವಾಸ ರಾಯರನ್ನು ಕಾರ್ಯಕರ್ತರಾಗಿರಲು ವಿನಂತಿಸಿ, ಅವರು ಅದಕ್ಕೆ ಸಮ್ಮತಿಸಿರುವರಾಗಿ ತಿಳಿದು ಬರುತ್ತದೆ.

ಉಪಾಧ್ಯಾಯರ ಸಭೆ: ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ. ೩-೮-೪೦ರ ದಿನ ಬೋರ್ಕಟ್ಟೆ ಶ್ರೀ ರಾಮಪುರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಭವಾನಿಶಂಕರ ರಾಯರ ಅಧ್ಯಕ್ಷತೆಯಲ್ಲಿ ವರದಿ ವಾಚನ ಮೊದಲಾದುವು ಆದ ಮೇಲೆ ಶ್ರೀ ಯಂ ಸರ್ವೋತ್ತಮ ಕಾಮತರು ಪ್ರಾಥಮಿಕ ಶಾಲೆಗಳಲ್ಲಿ ಭೂಗೋಳವನ್ನು ಕಲಿಸುವ ಕುರಿತು ಭಾಷಣವನ್ನು ಶ್ರೀ ವರದರಾಯ ಪ್ರಭುಗಳು ೫ನೇ ಕ್ಲಾಸಿಗೆ ಮಾದರಿ ಪಾಠವನ್ನು ಕೊಟ್ಟರು.

ಉಡುಪಿ

ತಿಲಕ ದಿನಾಚರಣೆ:—ಉಡುಪಿ ತಾಲೂಕು ಹರಿಜನ ಸೇವಾ ಸಂಘದ ಆಶ್ರಯದಲ್ಲಿ ೧ನೇ ದಿನ ಸಂಜೆ ಲೋಕಮಾನ್ಯ ಬಾಲಗಂಗಾಧರ ತಿಲಕರ ಪುಣ್ಯ ದಿನವು ಬಿ ವಿ ಮಾಧವರಾಯರ ಸಭಾಧಿಪತ್ಯದಲ್ಲಿ ಆಚರಿಸಲ್ಪಟ್ಟಿತು. ಮೆರವಣಿಗೆಯು ಜಯಘೋಷದಿಂದ ನಗರದ ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಭವನವನ್ನು ಸೇರಿತು. ಶ್ರೀಗಳಾದ ಟಿ. ವಾಸುದೇವ ಆರ್. ಎಸ್. ಶೆಣೈ ಕೆ. ಕೆ. ಶೆಟ್ಟಿ, ಎನ್. ಎಸ್. ಕಿಲ್ಲೆ, ಯು. ರಾಮಚಂದ್ರ ನಾಗಪ್ಪ ಕಮ್ತಿ, ಮೊದಲಾದವರು ತುಳು ಕನ್ನಡ ಭಾಷೆಗಳಲ್ಲಿ ಚೆಲುವಾದ ಭಾಷಣಗಳನ್ನು ಕೊಟ್ಟರು.

ಅಧ್ಯಾಪಕರ ಸಭೆ:—ಉಡುಪಿ ಕೇಂದ್ರದ ಅಧ್ಯಾಪಕರ ಸಭೆಯು ತಾ. ೩ ರಂದು ಸ್ಥಳೀಯ ಮುನಿಸಿಪಲ್ ಮೈನ್ ಶಾಲೆಯಲ್ಲಿ ಸೀ. ಡಿ. ಇನ್ಸ್‌ಪೆಕ್ಟರರಾದ ಯು. ಕೃಷ್ಣರಾಯರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಕಂಡಿತು. ಸರ್ವಾಧಿಕಾರಿಗಳ ಸ್ತ್ರೀಯದ ತರುವಾಯ ಅಧ್ಯಾಪಕಿಯೊಬ್ಬರು ಪಾಠವೊಂದನ್ನು ಮಾದರಿಯಾಗಿ ಕೊಟ್ಟರು.

ಹರಿಕಥಾ ಕಾಲಕ್ಷೇಪ:—ಕಟಪಾಡಿ ಸರಸ್ವತಿ ಯುವಕ ಸಮಾಜದಲ್ಲಿ ತಾ. ೧ನೇ ರಾತ್ರಿ ಗಾನವಿಶಾರದ ಶ್ರೀ. ಯು. ಸ್ವಧಾಕರ ರಾವ್ ಹರಿದಾಸರವರು 'ಉತ್ತರ ಗೋಗ್ರಹಣ' ಎಂಬ ಕಥಾಭಾಗವನ್ನು ಹರಿಕಥೆ ಮಾಡಿದರು

ಮಹಾಯುದ್ಧಕ್ಕೆ ಬ್ರಿಟನು ಸಿದ್ಧವಾಗಿದೆ!



ರಷ್ಯವು ತಟಸ್ಥವಾಗಿ ನಿಲ್ಲುವುದು

ಹಿಟ್ಲರನ ಶರತಗಳೇನು?

ಜಪಾನಿನ ಇಂದಿನ ಧೋರಣೆ

ಚೇಂಬರ್ಲೇನರಿಗೆ ಆಪರೇಶನು

'ಬ್ರಿಟಿಷ್ ಮಾಜಿ ಮುಖ್ಯಮಂತ್ರಿಗಳಾದ ಚೇಂಬರ್ಲೇನರಿಗೆ ಕರುಳಿನಲ್ಲಿ ಏನೋ ತೊಂದರೆಯುಂಟಾದುದರಿಂದ ಆಪರೇಶನು ಮಾಡಲಾಯಿತೆಂದೂ ಈಗ ಸ್ವಸ್ಥರಾಗಿರುವರೆಂದೂ ತಿಳಿದಿದೆ.

ಹಿಟ್ಲರನ ಶರ್ತಗಳೇನು?

ಯುರೋಪ ಖಂಡದ ಗೊಡವೆಗೆ ಬರದೆ ಬ್ರಿಟನು ತನ್ನಷ್ಟಕ್ಕೆ ಇರಬೇಕು. ಕಮರೂನ್, ಆಫ್ರಿಕದ ಪೌರ್ವಾತ್ಯ ವಸಾಹತುಗಳು ಬೆಲ್ಜಿಯನ್ ಕಾಂಗೋ ಇವುಗಳನ್ನು ಜರ್ಮನಿಗೆ ಕೊಡಬೇಕು. ಇದಕ್ಕೆ ಬದಲಾಗಿ ಜಪಾನಿಯರಿಂದ ಬ್ರಿಟಿಷ್ ಜನಾಂಗವನ್ನು ತಾನು ರಕ್ಷಿಸುವುದಾಗಿ ಹಿಟ್ಲರನು ಶಾಂತಿ ಸಲಹೆ ಕೊಟ್ಟಿರುವನೆಂದು ಅಮೇರಿಕದ ಪತ್ರಿಕೆಯೊಂದು ಬರೆಯುತ್ತದೆ.

ಜರ್ಮನಿಯ ನಿರ್ಧಾರ

'ಜರ್ಮನಿಯು, ಪೋಲೆಂಡು, ಫ್ರಾನ್ಸುಗಳ ಮೇಲೆ ನಡೆಸಿದ ಯುದ್ಧವನ್ನೇ ಭಯಂಕರ ಯುದ್ಧವನ್ನು ಬ್ರಿಟನಿನ ಮೇಲೆಯೂ ನಡೆಸುವುದಾಗಿ ಜರ್ಮನ್ ಪ್ರಕಟಣೆಯೊಂದು ಪ್ರಕಟಿಸುತ್ತದೆ.

ಜಪಾನಿನ ರಾಜನೀತಿ

ಜಪಾನು ಪಶ್ಚಿಮ ರಾಷ್ಟ್ರಗಳೊಂದಿಗೆ ಒಂದು ಸೈನಿಕ ಒಪ್ಪಂದಕ್ಕೆ ಬಾರದೆಯೂ ಇತ್ತು. ಜಪಾನ್ ಪ್ರಧಾನರಾದ ಕೊನೊಯೆಯವರು ಜರ್ಮನ್, ಇಟೆಲಿ, ರಶ್ಯಾ, ಅಮೇರಿಕ, ರಾಷ್ಟ್ರಗಳೊಡನೆ ಸ್ನೇಹಪೂರ್ವಕ ಜಪಾನಿನ ರಾಜನೀತಿಯೇ ಬೇರೆ ತೋರುವದು. ಆದರೆ ರಷ್ಯದೊಡನೆ ಇಂದು ಜಪಾನು ಸಮಯ ಸಾಧಿಸಿ ತನ್ನ ಸಾಮ್ರಾಜ್ಯ ವಿಸ್ತರಣ ಕಾರ್ಯದಲ್ಲಿ ತೊಡಗಿರುವ ಚಿಹ್ನೆಯು ದೊರೆ ತೋರುತ್ತದೆ

ಕಾಂಗ್ರೆಸ್ ಅಧಿವೇಶನದ ನಿರ್ಣಯ

ಲಂಡನಿನಲ್ಲಿ ಪ್ರತಿಧ್ವನಿ

ಭಾರತದ ರಾಜಕೀಯ ವಿಚಾರಗಳು ಲಂಡನಿನಲ್ಲಿರುವ ಒಬ್ಬ ಪಂಡಿತರಲ್ಲಿ ಆಶ್ಚರ್ಯ ಪರಿಣಾಮವನ್ನು ಉಂಟುಮಾಡಿವೆ. ಪಾರ್ಲಿಮೆಂಟ್ ಸದಸ್ಯರಾದ ಸರ್ ಜಾರ್ಜ್ ಶುಸ್ಟರ್ ಅವರು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗೆ ಒಂದು ಲೇಖನ ಬರೆದಿದ್ದು 'ಇದನ್ನು ಅತ್ಯಂತವಾಗಿ ನಾವಿಂದು ಕಾಣಬಹುದು, ಆದರೆ ಪೂನದ ನಿರ್ಣಯವು ಇತಿಹಾಸ ಪ್ರಸಿದ್ಧವಾಗುವುದು' ಎಂದು ಸಾರಿರುವರು.

ರಷ್ಯದ ರಾಜನೀತಿ

ರಷ್ಯದ ಪ್ರಧಾನ ಸಚಿವರಾದ ಮೊಲೊಟೊವರು, ಮೊನ್ನೆ ಸೋವಿಯಟ್ ಪಾರ್ಲಿಮೆಂಟಿನಲ್ಲಿ ಒಂದು ಮಹತ್ವದ ಭಾಷಣವನ್ನು ಮಾಡಿ ಅದರಲ್ಲಿ ಹಲವು ವಿಷಯಗಳನ್ನು, ರಷ್ಯದ ರಾಜನೀತಿಯನ್ನು ಜಗತ್ತಿನೆದುರು ಸ್ಪಷ್ಟೀಕರಿಸಿದ್ದಾರೆ. ಇಂದು ರಾಜಕೀಯ ವಾತಾವರಣದಲ್ಲಿ ರಶ್ಯಾ-ಜರ್ಮನಿಗಳೊಳಗೆ ಬಾಲ್ಕನ್ ರಾಷ್ಟ್ರಗಳ ವಿಷಯವಾಗಿ ಕಚ್ಚಾಟವಾಗಬಹುದೆಂದು ಹರಡಿರುವ ಸುದ್ದಿಯು ಸಂಪೂರ್ಣವಾಗಿ ನಿರಾಧಾರವಾದುದು ಎಂದು ಸ್ಪಷ್ಟೀಕರಿಸಿದರು.

ಅವರು ತಮ್ಮ ಭಾಷಣದಲ್ಲಿ ಬಾಲ್ಟಿಕ್ ರಾಷ್ಟ್ರಗಳನ್ನು ರಕ್ತದ ಹನಿ ಚೆಲ್ಲದೆ ಸ್ವಾಧೀನ ಪಡಿಸಿಕೊಂಡ ವಿಷಯವಾಗಿ ಹೆಮ್ಮೆಪಟ್ಟು ಮಾತನಾಡಿದರು. ಬೆಸ್ಸರೇಬಿಯಾ ಮತ್ತು ಉತ್ತರ ಬುಕೋವಿನಾಗಳನ್ನು ಸ್ವಾಧೀನಪಡಿಸಿದುದರಿಂದ ಸೋವಿಯಟ್ ಹತ್ತು ಮಿಲಿಯ ಜನರನ್ನು ಜನಸಂಖ್ಯೆಯಲ್ಲಿ ಹೆಚ್ಚಿಸಿಕೊಂಡಿತು ಎಂದು ಸಾರಿದರು. ನಿಜವಾಗಿಯೂ ಇತರ ರಾಷ್ಟ್ರಗಳು ಇತರ ಕಡೆಯಲ್ಲಿ ಜೀವನಮರಣದ ಹೋರಾಟಕ್ಕಿಳಿದಿರಲು ರಷ್ಯವು ಬಾಲ್ಕನಿನಲ್ಲಿ ಮಾಡಿದ ಈ ಮಾಟಗಳು ಇಂದು ಅದಕ್ಕೆ ಹೆಮ್ಮೆ ಪಡುವ ವಿಷಯವಾಗಿಯೇ ಸಂಭವಿಸಿತು.

ಫ್ರಾನ್ಸಿನ ಅಪಜಯದ ವಿಷಯದಲ್ಲಿ ಅವರ ಮಾತು ಬಹಳ ಸ್ವಾರಸ್ಯವಾಗಿತ್ತು. ಫ್ರಾನ್ಸಿನ ಅಪಜಯವು ಅವರ ಅಶಕ್ತ ಸೈನ್ಯದ ಪರಿಣಾಮವಾಗಿ ಮಾತ್ರವಲ್ಲ, ಅವರು ರಷ್ಯದ ಪ್ರಾಮುಖ್ಯತೆಯನ್ನು ಅಷ್ಟೊಂದು ಕಡೆಗಣಿಸಿದುದೂ ಕಾರಣವೆಂದು ಹೇಳಿದರು. ಅವರು ಹೇಳಿದ ಇನ್ನೊಂದು ವಿಷಯವೆಂದರೆ ಆಳುವ ಜನರು ಆಳುತ್ತಿರುವ ಪ್ರಜೆಗಳನ್ನು ನಂಬುವುದರ ಬದಲು, ಅವಿಶ್ವಾಸ ಪಟ್ಟರೆಂಬುದು. ಇದರಿಂದಲೇ ಫ್ರಾನ್ಸಿಗೆ ಪತನವಾಯಿತೆಂದೂ ಹಳೆಯ ರೀತಿಗಳಿಂದ ಪ್ರಯೋಜನವಿಲ್ಲವೆಂದೂ ಸಮತಾವಾದವನ್ನು ಅಂಗೀಕರಿಸುವುದರಿಂದ ಮಾತ್ರ ಒಳ್ಳೆಯದಾಗಬಹುದೆಂದೂ ಹೆಮ್ಮೆ ಕೊಚ್ಚಿಕೊಂಡರು.

ಬ್ರಿಟನಿನ ವಿಷಯದಲ್ಲಿ ಅವರು ಹೇಳಿದ ಮಾತುಗಳು ಇನ್ನೂ ಹೆಚ್ಚು ಮಹತ್ವವುಳ್ಳದಾಗಿವೆ. ಸರ್. ಕ್ರಿಪ್ಸರು ಸ್ಟಾಲಿನರೊಡನೆ ಮಾತನಾಡಿದ ವಿಷಯದಿಂದ ಎಲ್ಲರಿಗೂ ಒಂದು ರೀತಿಯಿಂದ ಆಶಾದಾಯಕ ಪರಿಸ್ಥಿತಿಯುಂಟಾಗಬಹುದೆಂಬ ಅಭಿಪ್ರಾಯವಿದ್ದುದನ್ನು ಅವರ ಮಾತುಗಳು ಮೂಲೆಗೊತ್ತಿದವು. ಬ್ರಿಟನು ರಷ್ಯಗಳೊಳಗೆ ಮೊದಲಿದ್ದ ಸಂಬಂಧವೇ ಇಂದೂ ಇದೆಯೆಂದು ಅವರು ಹೇಳಿದರು. ಬ್ರಿಟನು ಸೋವಿಯೆಟಿನ ವಿರುದ್ಧ ಮಾಡಿದ ದ್ವೇಷಕಾರ್ಯಗಳಿಂದಲಾಗಿ ಈ ಉಭಯ ರಾಷ್ಟ್ರಗಳೊಳಗೆ ಪರಸ್ಪರ ಸಂಬಂಧವುಂಟಾಗುವುದು ಕಠಿಣವಾಗಿದೆಯೆಂದು ಅವರು ಅಭಿಪ್ರಾಯ ಪಟ್ಟರು.

ಯುದ್ಧವು ಇಂದು ವಿಷಮ ಸ್ಥಿತಿಗೆ ಬಂದು ಮುಟ್ಟಿದೆಯೆಂದೇ ಅವರ ಅಭಿಪ್ರಾಯವೂ ಆಗಿದೆ. ಇಂದಿನ ಯುದ್ಧದಲ್ಲಿ ರಷ್ಯವು ತಟಸ್ಥವಾಗುವುದೆಂದು ಅವರು ಪ್ರಕಟಮಾಡಿದರು.

ಜಾತಿವಾರು ಚುನಾವಣೆ ಇರಕೂಡದು

ಅಣೆ ಮಾಲವೀಯರ ಪ್ರಕಟಣೆ

ಪಂಡಿತ ಮಾಲವೀಯರೂ ಅಣೆಯವರೂ ಭಾರತದ ಭಾವೀ ರಾಜ್ಯಾಂಗ ರಚನಾ ವಿಧಾನದ ಕುರಿತು ಒಂದು ಪ್ರಕಟಣೆ ಕೊಡುತ್ತ ಅದರಲ್ಲಿ ಇಂದು ಭಾರತವನ್ನು ಎರಡಾಗಿ ವಿಭಾಗಿಸಬೇಕೆಂದು ವಾದಿಸುವ ಜಿನ್ನರ ನೀತಿಯನ್ನು ಖಂಡಿಸಿ, ಇದು ಜಾತೀವಾರ ಚುನಾವಣೆಯನ್ನು ಕೊಟ್ಟುದರ ಪರಿಣಾಮವೆಂದೂ, ಮುಂದೆ ಜಾತೀವಾರ ಚುನಾವಣೆ ಇರಕೂಡದೆಂದೂ ಹೇಳಿರುವರು.

ಗಾಂಧಿಜಿ ಭೇಟಿ

ಪೂನಾ ಕಾಂಗ್ರೆಸ್ ಅಧಿವೇಶನವಾಗಿ ರಾಜಾಜಿಯವರು ವಾರ್ಧಾಕ್ಕೆ ತೆರಳಿ ಅಲ್ಲಿ ಗಾಂಧಿಜಿಯವರನ್ನು ಕಂಡು ಮಾತನಾಡಿದರು. ರಾಜೇಂದ್ರ ಪ್ರಸಾದರೂ ಡಾ। ಪ್ರಫುಲ್ಲಚಂದ್ರ ಘೋಷರೂ ವಾರ್ಧಾಕ್ಕೆ ಹೋಗಿದ್ದರು.

ಮುಂದಿನ ವ. ಕ. ಸಭೆ

ಮುಂದಿನ ಕಾಂಗ್ರೆಸು ವರ್ಕಿಂಗ್ ಕಮಿಟಿ ಸಭೆಯು ವಾರ್ಧಾದಲ್ಲಿ ಸೇರುವುದಾಗಿ ತಿಳಿದುಬರುತ್ತದೆ.

ಬಂಧನಗಳು

ಬೊಂಬಯಿಯಲ್ಲಿ ಗಿರಿ ಮುಂದಿ ಕಮ್ಯುನಿಸ್ಟರನ್ನು ಸೆರೆಹಿಡಿಯಲಾಗಿದೆ. ಬಂಗಾಳದ ಶ್ರೀ। [illegible] ಕುಮಾರ ಮುಜುಂದಾರರನ್ನು ಸೆರೆಹಿಡಿಯಲಾಗಿದೆ. ಬಂಗಾಳದ ಎಡ್ವಾನ್ಸ್ ಪತ್ರಿಕೆಯ ಸಂಪಾದಕರನ್ನು ದಂಡಿಸಲಾಗಿದೆ. ಕಲ್ಕತ್ತೆಯ ಮಾತೃಭೂಮಿಯ ಸಂಪಾದಕರನ್ನು ದಂಡಿಸಲಾಗಿದೆ

ಸಿಂಧದಲ್ಲಿ ನೆಹರುಗಳು

ಪಂಡಿತ ನೆಹರುಗಳು ತಮ್ಮ ಪರಿವಾರ ಸಮೇತ ಸಿಂಧ ಸಂಸ್ಥಾನವನ್ನು ಸಂದರ್ಶಿಸಿದರು. ಮಹಾರಾಜರು, ರಾಜಕುಮಾರರೊಡನೆ ಅವರಿಗೆ, ಸ್ವಾಗತವಿತ್ತರು. ಸಾರ್ವಜನಿಕ ಸಭೆಯಲ್ಲಿ ನೆಹರುಗಳಿಗೆ ಮಾನಪತ್ರವು ಅರ್ಪಿಸಲಾಯಿತು. ಎಲ್ಲರೂ ಸಮಾನತೆಯಿಂದ ರಾಷ್ಟ್ರದ ಸಂಪತ್ತನ್ನು ಹಂಚುವುದೇ ಸ್ವರಾಜ್ಯವೆಂದು ನೆಹರುಗಳು ಭಾಷಣದಲ್ಲಿ ಹೇಳಿದರು

ಗಡಿನಾಡಿನ ಗಾಂಧಿಗಳು ಎ. ಐ. ಸಿ. ಸಿ.ಗೂ ರಾಜೀನಾಮೆ ಕೊಟ್ಟರು

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತನ್ನ ಪೂನದ ನಿರ್ಣಯದಲ್ಲಿ ವಾರ್ಧಾ ಮತ್ತು ಡೆಲ್ಲಿಯ ನಿರ್ಣಯಗಳನ್ನು [illegible]ಸಿರುವುದರಿಂದ [illegible] ಸಮಿತಿಗೂ ತಾನು ರಾಜೀನಾಮೆ ಕೊಟ್ಟಿರುವುದಾಗಿ ಪ್ರಕಟಿಸಿ ಗಡಿನಾಡಿನ ಗಾಂಧಿಗಳೆಂದು ಹೆಸರಾದ ಗಫರ್ ಖಾನರು ಅ. ಭಾ. ಕಾಂ. ಕಮಿಟಿಗೂ ರಾಜೀನಾಮೆಯಿತ್ತಿರುವರು.

ರಾಜಾಜಿಯವರ ಎಚ್ಚರಿಕೆ!

ರಾಜಾಜಿಯವರು ಮದ್ರಾಸಿನಲ್ಲಿ ಒಂದು ಭಾಷಣ ಮಾಡುತ್ತ ಅದರಲ್ಲಿ ಭಾರತ ಮತ್ತು ಸರಕಾರದ ಸಂಬಂಧಗಳನ್ನು ತಿಳಿಸಿ ಇಂದಿನ ಈ ವಿಷಮ ಕಾಲದಲ್ಲಿ ಬ್ರಿಟನು ಭಾರತದ ಕಡೆಗೆ ಉದಾಸೀನವಾಗಿರುವುದು ಸರಿಯಲ್ಲವೆಂದಿದ್ದಾರೆ.

ಕೇಂದ್ರ ಎಸೆಂಬ್ಲಿಯ ಅಧಿವೇಶನ

ಮುಂದಿನ ಅಧಿವೇಶನವು ಅಕ್ಟೋಬರ

The Kanara Enterprise, Ltd., Puttur

ದಿ ಕೆನರಾ ಎಂಟರ್‌ಪ್ರೈಸ್, ಲಿಮಿಟೆಡ್, ಪುತ್ತೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಬೇಂಕಿನಿಂದ ಚಿನ್ನಾಭರಣಗಳ ಈಡಿನಿಂದ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿರುವುದರಿಂದಲೂ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವು ಜ್ಯಾರಿಗೆ ಸಿಕ್ಕದೆ ಮರತ ಬಂದಿರುವುದರಿಂದಲೂ ಮತ್ತು ಕೆಲವು ಸಾಲಗಾರರು ಮೃತಪಟ್ಟು ವಾಪಾಸ ಬಂದಿರುವುದರಿಂದಲೂ ಸದರಿ ಸಾಲಗಾರರ ವ ಅವರ ವಾರಿಸುದಾರರು ತಮ್ಮಿಂದ ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ಕ್ರಾವೇಜ ಗಳನ್ನು ನೋಟೀಸು ಖರ್ಚು ವ ಈ ನೋಟೀಸು ಖರ್ಚು ಸಮೇತ ಇದೇ ಬರುವ ತಾ 16-8-1940ರ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ಸದರಿ ನಗಗಳನ್ನು ಇದೇ ಬರುವ ತಾ 24-8-1940ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ.

ಸಾಲದ ನಂಬ್ರ	ಸಾಲಗಾರರ ಹೆಸರು ವಿಳಾಸ	ಅಸಲು ಮೊಬಲಗು
707/397 5-8-38	ಪಡಿಕಲ್ಲು ಕೃಷ್ಣಪ್ಪ ಗೌಡ-ಚಿನ್ನಪ್ಪ ಗೌಡರ ಮಗ, ಕೊಲ್ಲಮುಗ್ರು ಗ್ರಾಮ, ಗುತ್ತಿಗಾರ ಪೋಸ್ಟು	ರೂ 75/-
708/397 5-8-38	ಡಿ ಡಿ	ರೂ 42/-
448/418 20-9-39	ನೂಜಿ ತಿಮ್ಮಪ್ಪ ರೈ-ರಾಮಣ್ಣ ರೈಗಳ ಅಳಿಯ, ಕೆಯ್ಯೂರು ಗ್ರಾಮ, ಪುತ್ತೂರು ಪೋಸ್ಟು	ರೂ 182/
703/244 8-7-39	ಮಂಜೇಶ್ವರ ಲಕ್ಷ್ಮಣ ನ್ಯಾಕ್-ದೇವಪ್ಪ ನ್ಯಾಕರ ಮಗ, ದರ್ಬೆ-ಪುತ್ತೂರು	ರೂ 12/-
180/594 19-11-38	ಯಂ. ಕೇಶಾಲಿ ಬ್ಯಾರಿ ಪಕ್ರು ಬ್ಯಾರಿ ಮಗ, ಮಾಣಿಲಾ ಗ್ರಾಮ, ವಿಟ್ಲ ಪೋಸ್ಟು	ರೂ 7/-
784/284 31-7-38	ಬಾಳಿಕೆ ಐತ ಪುರುಷ-ತಮ್ಮಂಣ ಪುರುಷರ ಮಗ, ಇರ್ದೆ ಬೆಟ್ಟಂಪ್ಪಾಡಿ ಗ್ರಾಮ, ಪುತ್ತೂರು ಪೋಸ್ಟು	ರೂ 8/-

Office of the Bank Puttur, 6-8-1940

G. N. Lakshmana Pai, *Secretary.*



ಬ್ರಿಟನಿಗೆ ರಾಜಾಜಿಯವರ ಎಚ್ಚರಿಕೆ!

ಒಂಧದಲ್ಲಿ 'ನೆಹರುಗಳು!

ಮೈಸೂರು ಮಹಾರಾಜರ ನಿಧನ!

ಮಲಬಾರು ಜಿಲ್ಲಾ ಬೋರ್ಡ್ ಸದಸ್ಯರ ಮೇಲೆ ಆಪಾದನೆ

ಹಾ. ಏಗರ ಸುನಾರಿಂಗೆ ಹೆರಗುವುದು. ಇದರಲ್ಲಿ ಭಾರತ ಸರಕಾರದ ವ್ಯಾಪಾರ ಇಲಾಖೆಯವರು ಹೊಸ ಮಸೂದೆಗಳನ್ನು ತರಲಿರುವರೆಂದೂ ತಿಳಿದಿದೆ.

ಕೆಮ್ಮಿದ್ದು ಸೀನಿದ್ದೆಲ್ಲಾ ಜಗಳವಲ್ಲ.

ರಾಜಾಜಿಯ ಹೇಳಿಕೆ

ಕಾಂಗ್ರೆಸಿನಲ್ಲಿರುವ ಮುದುಕರೆಲ್ಲಾ ಜಗಳವಾಡಲು ಹೊರಟಿದ್ದಾರೆಂದು ಹೇಳುತ್ತಿರುವವರನ್ನು ಟೀಕಿಸುತ್ತಾ ವರ್ಧಾದಲ್ಲಿ ಶ್ರೀ ರಾಜಾಜಿಯವರು ಕೆಲಕ ದಿನಾಚರಣೆಯಂದ, 'ಇಂದು ಕಾಂಗ್ರೆಸಿನಲ್ಲಿ ಕೆಮ್ಮಿದ್ದು ಸೀನಿದ್ದೆಲ್ಲಾ ಜಗಳವೆಂದು ಎಣಿಸಬೇಡಿ. ಕೆಮ್ಮುವುದೂ ಸೀನುವುದೂ ಒಂದೊಂದು ಸಲ ಶ್ವಾಸಕೋಶಗಳಿಗೆ ಒಳ್ಳೆಯದು ಇಲ್ಲದಿದ್ದರೆ ಅವೆಲ್ಲಾ ಮಂಕಾಗುವವು ಎಂದರು

ಕಾಂಗ್ರೆಸ್ಸೇ ಮುಖಂಡತ್ವ ವಹಿಸಬೇಕು.

ರಾಷ್ಟ್ರಪತಿಗಳ ಹೇಳಿಕೆ.

ಮುಂಬಯಿಯಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ಭೇಟಿಕೊಡುತ್ತಾ, ರಾಷ್ಟ್ರಪತಿ ಅಜಾದರು, ಗಾಂಧಿಜಿಯವರ ಮುಖಂಡತ್ವವನ್ನು ಉಳಿಸಿಕೊಳ್ಳಲು ಕಾಂಗ್ರೆಸು ಯತ್ನಮಾಡಿತೆಂದೂ, ಅನಿವಾರ್ಯವಾಗಿ ಅವರು ದೂರವಿರಲು ಈಗ ಕಾಂಗ್ರೆಸ್ಸೇ ತನ್ನ ಮುಖಂಡತ್ವವನ್ನು ವಹಿಸಬೇಕಾಗಿದೆಯೆಂದೂ, ಸುಮ್ಮಗಿರಲು ಸಾಧ್ಯವಿಲ್ಲವೆಂದೂ ಹೇಳಿದರು.

ಮೈಸೂರು ಶ್ರೀಮನ್ಮಹಾರಾಜರವರ ನಿಧನ

ಮೈಸೂರಿನ ಶ್ರೀಮನ್ಮಹಾರಾಜರವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ, ಜಿ ಬಿ ಇ, ಇವರು, ಕಳೆದ ಶನಿವಾರ ರಾತ್ರಿ ಬೆಂಗಳೂರು ಅರಮನೆಯಲ್ಲಿ ದಿವಂಗತರಾದರೆಂದು ತಿಳಿಸಲು ಅತ್ಯಂತ ವಿಷಾದ ಪಡಿಸುತ್ತದೆ ಮಹಾಸ್ವಾಮಿಯವರ ಗೌರವಾರ್ಥವಾಗಿ ಸಂಸ್ಥಾನದಲ್ಲಿರುವ ಸಮಸ್ತ ಪಬ್ಲಿಕ್ ಆಫೀಸುಗಳನ್ನು ಕೋರ್ಟುಗಳನ್ನು ಮತ್ತು ವಿದ್ಯಾ ಸಂಸ್ಥೆಗಳನ್ನು ಸಾರ್ವಜನಿಕ ದುಃಖ ಸೂಚಕವಾಗಿ ಆ ದಿನದಿಂದ ಹದಿಮೂರು ದಿನಗಳ ಕಾಲ ಮುಚ್ಚತಕ್ಕದೆಂದೂ, ಗತಿಸಿದ ದಿನದ ಕರ್ಮಾಂತರಗಳು ನಡೆಯುವ ವರೆಗೂ ಎಲ್ಲಾ ಧ್ವಜಗಳನ್ನು ಆಯಾ ಧ್ವಜಸ್ತಂಭದ ಮೇಲೆ ಅರ್ಧಕ್ಕೆ ಇಳಿಸಿ ಕಟ್ಟತಕ್ಕದೆಂದೂ ಅಪ್ಪಣೆ ಮಾಡಲ್ಪಟ್ಟಿದೆಯೆಂದೂ ತಿಳಿಯಲಾಗಿದೆ ದಿವಂಗತರಾದ ಶ್ರೀಮನ್ಮಹಾರಾಜರವರ ಗೌರವಾರ್ಥವಾಗಿ ನಿಮಿಷಕ್ಕೊಂದರಂತೆ ಒಟ್ಟು ಅವರ ವಯಸ್ಸಿನ ಸಂಖ್ಯೆಯಾಗುವವರೆಗೂ ಬೆಂಗಳೂರಿನಲ್ಲಿಯೂ ಮತ್ತು ಮೈಸೂರಿನಲ್ಲಿಯೂ ಆ ದಿನ ತೋಪುಗಳನ್ನು ಹೊಡೆಯಲಾಯಿತು

ಮೈಸೂರು ಪಟ್ಟಕ್ಕೆ

ಮೈಸೂರು ಪಟ್ಟಕ್ಕೆ ಗತಿಸಿದ ಮಹಾರಾಜರ ತಮ್ಮನ ಮಗ, ಈಗ ಯುವರಾಜರಾಗಿರುವ ಶ್ರೀ ಜಯಚಾಮರಾಜ ಒಡೆಯರು ಬರುವರು.

ಮಲಬಾರು ಜಿಲ್ಲಾ ಬೋರ್ಡು ಅಧ್ಯಕ್ಷರ ಮತ್ತು ಸದಸ್ಯರ ಮೇಲೆ ಲಂಚದ ಆಪಾದನೆ

ಮಲಬಾರು ಜಿಲ್ಲಾ ಬೋರ್ಡು ಮೆಂಬರು ಅಧ್ಯಕ್ಷರು, [illegible] ಗಳಿಂದ ಲಂಚ ಪಡೆದುಕೊಂಡು ಅವರು ಪ್ರಕಟಿಸಿದ ಪುಸ್ತಕಗಳನ್ನು ಜಿಲ್ಲಾ ಬೋರ್ಡಿನಲ್ಲಿ [illegible] ಆಪಾದನೆ [illegible] [illegible] ಸದಸ್ಯರೂ [illegible] [illegible] ಕಾಂಗ್ರೆಸ್ [illegible] ಪುಸ್ತಕ ಪ್ರಕಾಶಕ [illegible] ದೂರು ಕೊಡಲಾಗಿದೆ

ಈ [illegible] [illegible] [illegible]

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

[illegible] 1939

R E P [illegible] 40

[illegible]

K. L. Narayana Rao,
Counsel for Petitioner
[illegible] 1940.

ರೈಲುಬಂಡಿಯು ಅಪಘಾತ

[illegible] ಮಂದಿ ಮರಣ; [illegible] ಮಂದಿ ಗಾಯ

[illegible] ಕಲ್ಕತ್ತಾ [illegible] ಮಧ್ಯ ಭಾಗದ ಮಾರ್ಗದಲ್ಲಿ [illegible] ಅಪಘಾತಕ್ಕೆ ಕುತ್ತಿದ್ದು [illegible] ಮಂದಿ ಸತ್ತಿರುವರೆಂದೂ [illegible] ಮಂದಿಗೆ ಗಾಯವಾಗಿದೆಯೆಂದೂ ತಿಳಿದಿದೆ [illegible]

ಹೊಸಮಾದರಿಯ ತಕಲಿ

[illegible] ಗಾಂಧೀ [illegible]

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P 414/1940
R E A 517/1940

ವೆಂಕಟರಮಣ [illegible] ಪೈ [illegible] —ಅರ್ಜಿದಾರ

[illegible] —ಎದುರು

[illegible]

[illegible] R. E. A. 517/1940 [illegible] 16—8—1940 [illegible] 16-8-40 [illegible] 10 [illegible] R. E. A. 517/1940 [illegible]

K. B. Joishi,
Pleader for Petitioner
[illegible] 1-9-40.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

[illegible]

Y. Thimmappa Shetty.

[illegible]

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳಿಗೂ ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಖರ್ಚು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದ ವೈದ್ಯ ಶಾಲಾ, [illegible]
P. O. Peridepi ([illegible]

ಮಹಾಯುದ್ಧಕ್ಕೆ ಬ್ರಿಟನು ಸಿದ್ಧವಾಗಿದೆ!



ರಶ್ಯವು ತಟಸ್ಥವಾಗಿ ನಿಲ್ಲುವುದು

ಹಿಟ್ಲರನ ಶರತಗಳೇನು?

ಜಪಾನಿನ ಇಂದಿನ ಧೋರಣೆ

ಚೇಂಬರ್ಲೇನರಿಗೆ ಒಪರೇಶನು

ಬ್ರಿಟಿಷ್ 'ಮಾಜಿ ಮುಖ್ಯಮಂತ್ರಿಗಳಾದ ಚೆಂಬರ್ಲೇನರಿಗೆ ಕರುಳಿನಲ್ಲಿ ಏನೋ ತೊಂದರೆಯುಂಟಾದುದರಿಂದ ಒಪರೇಶನು ಮಾಡಲಾಯಿತೆಂದೂ ಈಗ ಸ್ವಸ್ಥರಾಗಿರುವರೆಂದೂ ತಿಳಿದಿದೆ.

ಹಿಟ್ಲರನ ಶರ್ತಗಳೇನು?

ಯುರೋಪ ಖಂಡದ ಗೊಡವೆಗೆ ಬರದೆ ಬ್ರಿಟನು ತನ್ನಷ್ಟಕ್ಕೆ ಇರಬೇಕು ಕೆಮರೂನ್, ಆಫ್ರಿಕದ ಪೌರ್ವಾತ್ಯ ವಸಾಹತ್ತುಗಳು ಬೆಲ್ಜಿಯನ್ ಕಾಂಗೋ ಇವುಗಳೆನ್ನು ಜರ್ಮನಿಗೆ ಕೊಡಬೇಕು ಇದಕ್ಕೆ ಬದಲಾಗಿ ಜಪಾನಿಯರಿಂದ ಬ್ರಿಟಿಷ್ ಜನಾಂಗವನ್ನು ತಾನು ರಕ್ಷಿಸುವುದಾಗಿ' ಹಿಟ್ಲರನು ಶಾಂತಿ ಸಲಹೆ ಕೊಟ್ಟಿರುವನೆಂದು ಅಮೇರಿಕದ ಪತ್ರಿಕೆಯೊಂದು ಬರೆಯುತ್ತದೆ.

ಜರ್ಮನಿಯ ನಿರ್ಧಾರ

ಜರ್ಮನಿಯು, ಪೋಲೆಂಡು, ಫ್ರಾನ್ಸುಗಳ ಮೇಲೆ ನಡೆಸಿದ ಯುದ್ಧದಷ್ಟೇ ಭಯಂಕರ ಯುದ್ಧವನ್ನು ಬ್ರಿಟನಿನ ಮೇಲೆಯೂ ನಡೆಸುವುದಾಗಿ ಜರ್ಮನ್ ಪ್ರಕಟಣೆಯೊಂದು ಪ್ರಕಟಿಸುತ್ತಿದೆ.

ಜಪಾನಿನ ರಾಜನೀತಿ

ಜಪಾನು ಏಕ್ಸಿಸ್ ರಾಷ್ಟ್ರಗಳೊಂದಿಗೆ ಒಂದು ಸೈನಿಕ ಒಪ್ಪಂದಕ್ಕೆ ಹಾತೊರೆಯುತ್ತದೆ. ಜಪಾನ್ ಪ್ರಧಾನರಾದ ಕೊನೊಯಿಯವರು ಜರ್ಮನ್, ಇಟಲಿ, ಬ್ರಿಟನು ಅಮೇರಿಕ, ರಶ್ಯಾಗಳೊಡನೆ ಸೌಹಾರ್ದವೇ ಜಪಾನಿನ ರಾಜನೀತಿಯೆಂದೇನೋ ಹೇಳಿರುವರು ಆದರೆ ರಶ್ಯದಂತೆ ಇಂದು ಜಪಾನೂ ಸಮಯ ಸಾಧಿಸಿ ತನ್ನ ಸಾಮ್ರಾಜ್ಯ ವಿಸ್ತರಣ ಕಾರ್ಯದಲ್ಲಿ ತೊಡಗಿರುವ ಚಿಹ್ನೆಯಿದೆಂದು ತೋರುತ್ತದೆ.

ಕಾಂಗ್ರೆಸ್ ಅಧಿವೇಶನದ ನಿರ್ಣಯ

ಲಂಡನಿನಲ್ಲಿ ಪ್ರತಿಧ್ವನಿ

ಭಾರತದ ರಾಜಕೀಯ ವಿಚಾರಗಳು ಲಂಡನಿನಲ್ಲಿರುವ ಬುದ್ಧಿವಂತರಲ್ಲಿ ಅತ್ಯಂತ ಪರಿಣಾಮವನ್ನು ಹುಟ್ಟಿಸದೆ ಇಲ್ಲ. ಪಾರ್ಲಿಮೆಂಟ್ ಸದಸ್ಯ ಡಿಂಗಲ್ ಪುಟ್ ಇವರ ಪುತ್ರ ಮೈಕಲ್ ಫುಟ್ ಎಂಬವರು ಇಂಗ್ಲೆಂಡಿನ ಈವಿನಿಂಗ್ ಸ್ಟೆಂಡಾರ್ಡ್ ಪತ್ರಿಕೆಗೆ ಒಂದು ಲೇಖನ ಬರೆಯುತ್ತಾ ಇದನ್ನು ಅತ್ಯಲ್ಪವಾಗಿ ನಾವಿಂದು ಕಾಣಬಹುದು, ಆದರೆ ಪೂನದ ನಿರ್ಣಯವು ಇತಿಹಾಸ ಪ್ರಸಿದ್ಧವಾಗುವುದು' ಎಂದು ಸಾರಿರುವರು.

ರಶ್ಯದ ರಾಜನೀತಿ

ರಶ್ಯದ ಪ್ರಧಾನ ಸಚಿವರಾದ ಮೊಲೊಟೊವರು, ಮೊನ್ನೆ ಸೋವಿಯೆಟ್ ಪಾರ್ಲಿಮೆಂಟಿನಲ್ಲಿ ಒಂದು ಮಹತ್ವದ ಭಾಷಣವನ್ನು ಮಾಡಿ ಅದರಲ್ಲಿ ಹಲವು ವಿಷಯಗಳನ್ನು ರಶ್ಯದ ರಾಜನೀತಿಯನ್ನು ಜಗತ್ತಿನೆದುರು ಸ್ಪಷ್ಟೀಕರಿಸಿದ್ದಾರೆ. ಇಂದು ರಾಜಕೀಯ ವಾತಾವರಣದಲ್ಲಿ ರಶ್ಯಾ-ಜರ್ಮನಿಗಳೊಳಗೆ ಬಾಲ್ಕನ್ ರಾಷ್ಟ್ರಗಳ ವಿಷಯವಾಗಿ ಕಚ್ಚಾಟವಾಗಬಹುದೆಂದು ಹರಡಿರುವ ಸುದ್ದಿಯು ಸಂಪೂರ್ಣವಾಗಿ ನಿರಾಧಾರವಾದುದು ಎಂದು ಸ್ಪಷ್ಟೀಕರಿಸಿದರು.

ಅವರು ತಮ್ಮ ಭಾಷಣದಲ್ಲಿ ಬಾಲ್ಟಿಕ್ ರಾಷ್ಟ್ರಗಳನ್ನು ರಕ್ತದ ಹನಿ ಚೆಲ್ಲದೆ ಸ್ವಾಧೀನ ಪಡಿಸಿಕೊಂಡ ವಿಷಯವಾಗಿ ಹೆಮ್ಮೆಪಟ್ಟು ಮಾತನಾಡಿದರು ಬೆಸ್ಸರೇಬಿಯಾ ಮತ್ತು ಉತ್ತರ ಬುಕೋವಿನಾಗಳನ್ನು ಸ್ವಾಧೀನಪಡಿಸಿದುದರಿಂದ ಸೋವಿಯೆಟ್ ಹತ್ತು ಮಿಲಿಯ ಜನರನ್ನು ಜನಸಂಖ್ಯೆಯಲ್ಲಿ ಹೆಚ್ಚಿಸಿಕೊಂಡಿತು ಎಂದು ಸಾರಿದರು ನಿಜವಾಗಿಯೂ ಇತರ ರಾಷ್ಟ್ರಗಳು ಇತರ ಕಡೆಯಲ್ಲಿ ಜೀವನಮರಣದ ಹೋರಾಟಕ್ಕಿಳಿದಿರಲು ರಶ್ಯವು ಬಾಲ್ಕನಿನಲ್ಲಿ ಮಾಡಿದ ಈ ಮಾಟಗಳು ಇಂದು ಅದಕ್ಕೆ ಹೆಮ್ಮೆ ಪಡುವ ವಿಷಯವಾಗಿಯೇ ಸಂಭವಿಸಿತು

ಫ್ರಾನ್ಸಿನ ಅಪಜಯದ ವಿಷಯದಲ್ಲಿ ಅವರ ಮಾತು ಬಹೂ ಸ್ವಾರಸ್ಯವಾಗಿತ್ತು. ಫ್ರಾನ್ಸಿನ ಅಪಜಯವು ಅವರ ಅಶಕ್ತ ಸೈನ್ಯದ ಪರಿಣಾಮವಾಗಿ ಮಾತ್ರವಲ್ಲ, ಅವರು ರಶ್ಯದ ಪ್ರಾಮುಖ್ಯತೆಯನ್ನು ಅಷ್ಟೊಂದು ಕಡೆಗಣಿಸಿದುದೂ ಕಾರಣವೆಂದು ಹೇಳಿದರು. ಅವರು ಹೇಳಿದ ಇನ್ನೊಂದು ವಿಜಯವೆಂದರೆ ಆಳುವ ಜನರು ಆಳುತ್ತಿರುವ ಪ್ರಜೆಗಳನ್ನು ನಂಬುವುದರ ಬದಲು, ಅವಿಶ್ವಾಸ ಪಟ್ಟರೆಂಬುದು. ಇದರಿಂದಲೇ ಫ್ರಾನ್ಸಿನ ಪತನವಾಯಿತೆಂದೂ ಹಳೆಯ ರೀತಿಗಳಿಂದ ಪ್ರಯೋಜನವಿಲ್ಲವೆಂದೂ ಸಮತಾವಾದವನ್ನು ಅಂಗೀಕರಿಸುವುದರಿಂದ ಮಾತ್ರ ಒಳ್ಳೆಯದಾಗಬಹುದೆಂದೂ ಹೆಮ್ಮೆ ಕೊಚ್ಚಿಕೊಂಡರು

ಬ್ರಿಟನಿನ ವಿಷಯದಲ್ಲಿ ಅವರು ಹೇಳಿದ ಮಾತುಗಳು ಇನ್ನೂ ಹೆಚ್ಚು ಮಹತ್ವವುಳ್ಳದಾಗಿವೆ. ಸರ್. ಕ್ರಿಪ್ಸರು ಸ್ಟಾಲೀನರೊಡನೆ ಮಾತನಾಡಿದ ವಿಷಯದಿಂದ ಎಲ್ಲರಿಗೂ ಒಂದು ರೀತಿಯಿಂದ ಆಶಾದಾಯಕ ಪರಿಸ್ಥಿತಿಯುಂಟಾಗಬಹುದೆಂಬ ಆಶಯಿದ್ದುದನ್ನು ಅವರು ಮಾತುಗಳು ಮೂಲೆಗೊತ್ತಿದವು ಬ್ರಿಟನು ರಶ್ಯಗಳೊಳಗೆ ಮೊದಲಿದ್ದ ಸಂಬಂಧವೇ ಇಂದೂ ಇದೆಯೆಂದು ಅವರು ಹೇಳಿದರು ಬ್ರಿಟನು ಸೋವಿಯೆಟಿನ ವಿರುದ್ಧ ಮಾಡಿದ ದ್ವೇಷಕಾರ್ಯಗಳಿಂದಲಾಗಿ ಈ ಉಭಯ ರಾಷ್ಟ್ರಗಳೊಳಗೆ ಮಧುರ ಸಂಬಂಧವುಂಟಾಗುವುದು ಕಠಿಣವಾಗಿದೆಯೆಂದು ಅವರು ಅಭಿಪ್ರಾಯ ಪಟ್ಟರು

ಯುದ್ಧವು ಇಂದು ವಿಷಮ ಸ್ಥಿತಿಗೆ ಬಂದು ಮುಟ್ಟಿದೆಯೆಂದೇ ಅವರ ಅಭಿಪ್ರಾಯವೂ ಆಗಿದೆ ಇಂದಿನ ಯುದ್ಧದಲ್ಲಿ ರಶ್ಯವು ತಟಸ್ಥವಾಗುವುದೆಂದು ಅವರು ಪ್ರಕಟಿಪಮಾಡಿದರು.

ಜಾತಿವಾರು ಚುನಾವಣೆ ಇರಕೂಡದು

ಆಜೆ ಮಾಲವೀಯರ ಪ್ರಕಟಣೆ

ಪಂಡಿತ ಮಾಲವೀಯರೂ ಆಣೆಯವರೂ ಭಾರತದ ಭಾವೀ ರಾಜ್ಯಾಂಗ ರಚನಾ ವಿಧಾನದ ಕುರಿತು ಒಂದು ಪ್ರಕಟಣೆ ಕೊಡುತ್ತ ಅದರಲ್ಲಿ ಇಂದು ಭಾರತವನ್ನು ಎರಡಾಗಿ ವಿಭಾಗಿಸಬೇಕೆಂದು ವಾದಿಸುವ ಜಿನ್ನರ ನೀತಿಯನ್ನು ಖಂಡಿಸಿ, ಇದು ಜಾತೀವಾರು ಚುನಾವಣೆಯನ್ನು ಕೊಟ್ಟುದರ ಪರಿಣಾಮವೆಂದೂ, ಮುಂದೆ ಜಾತೀವಾರು ಚುನಾವಣೆ ಇರಕೂಡದೆಂದೂ ಹೇಳಿರುವರು

ಗಾಂಧಿಜಿ ಭೇಟಿ

ಪೂನೆಯ ಕಾಂಗ್ರೆಸ್ ಅಧಿವೇಶನವಾಗಿ ರಾಜಾಜಿಯವರು ವರ್ಧಾಕ್ಕೆ ತೆರಳಿ ಅಲ್ಲಿ ಗಾಂಧಿಜಿಯವರನ್ನು ಕಂಡು ಮಾತನಾಡಿದರು ರಾಜೇಂದ್ರ ಪ್ರಸಾದರೂ ಡಾ। ಪ್ರಫುಲ್ಲಚಂದ್ರ ಘೋಷರೂ ವರ್ಧಾಕ್ಕೆ ಹೋಗಿದ್ದರು.

ಮುಂದಿನ ವ. ಕ. ಸಭೆ

ಮುಂದಿನ ಕಾಂಗ್ರೆಸು ವರ್ಕಿಂಗ್ ಕಮಿಟಿ ಸಭೆಯು ವರ್ಧಾದಲ್ಲಿ ಸೇರುವುದಾಗಿ ತಿಳಿದುಬರುತ್ತದೆ.

ಬಂಧನಗಳು

ಬೊಂಬಾಯಿಯಲ್ಲಿ ಗತ ಮಂದಿ ಕಮ್ಯುನಿಸ್ಟರನ್ನು ಸೆರೆಹಿಡಿಯಲಾಗಿದೆ. ಬಂಗಾಳದ ಶ್ರೀ। ಮನ್ಮಥ ಕುಮಾರ ಮುಜುಂದಾರರನ್ನು ಸೆರೆಹಿಡಿಯಲಾಗಿದೆ. ಬಂಗಾಳದ ಎಡ್ವಾನ್ಸ್ ಪತ್ರಿಕೆಯ ಸಂಪಾದಕರನ್ನು ದಂಡಿಸಲಾಗಿದೆ. ಕಲ್ಕತ್ತೆಯ ಮಾತೃಭೂಮಿಯ ಸಂಪಾದಕರನ್ನು ದಂಡಿಸಲಾಗಿದೆ

ಔಂಧದಲ್ಲಿ ನೆಹರುಗಳು

ಪಂಡಿತ ನೆಹರುಗಳು ತಮ್ಮ ಪರಿವಾರ ಸಮೇತ ಔಂಧ ಸಂಸ್ಥಾನವನ್ನು ಸಂದರ್ಶಿಸಿದರು ಮಹಾರಾಜರು ರಾಜಕುಮಾರರೊಡನೆ ಅವರಿಗೆ, ಸ್ವಾಗತವಿತ್ತರು. ಸಾರ್ವಜನಿಕ ಸಭೆಯಲ್ಲಿ ನೆಹರುಗಳಿಗೆ ಮಾನಪತ್ರವು ಅರ್ಪಿಸಲಾಯಿತು ಎಲ್ಲರೂ ಸಮಾನತೆಯಿಂದ ರಾಷ್ಟ್ರದ ಸಂಪತ್ತನ್ನು ಹಂಚುವುದೇ ಸ್ವರಾಜ್ಯವೆಂದು ನೆಹರುಗಳು ಭಾಷಣದಲ್ಲಿ ಹೇಳಿದರು

ಗಡಿನಾಡಿನ ಗಾಂಧಿಗಳು ಎ. ಐ. ಸಿ. ಸಿ.ಗೂ ರಾಜೀನಾಮೆ ಕೊಟ್ಟರು

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತನ್ನ ಪೂನದ ನಿರ್ಣಯದಲ್ಲಿ ವರ್ಧಾ ಮತ್ತು ಡಿಲ್ಲಿಯ ನಿರ್ಣಯಗಳನ್ನು [illegible]ಸಿರುವುದರಿಂದ [illegible] ಸಮಿತಿಗೂ ತಾನು ರಾಜೀನಾಮೆ ಕೊಟ್ಟಿರುವುದಾಗಿ [illegible]ಕಟಿಸಿ ಗಡಿನಾಡಿ[illegible] ಗಾಂಧಿಗಳೆಂದು ಹೆಸರಾದ ಗಫರ್ ಖಾನರು ಅ ಭಾ ಕಾಂ. ಕಮಿಟಿಗೂ ರಾಜೀನಾಮೆಯಿತ್ತಿರುವರು

ರಾಜಾಜಿಯವರ ಎಚ್ಚರಿಕೆ!

ರಾಜಾಜಿಯವರು ಮದ್ರಾಸಿನಲ್ಲಿ ಒಂದು ಭಾಷಣ ಮಾಡುತ್ತ ಅದರಲ್ಲಿ ಭಾರತ ಮತ್ತು ಸರಕಾರದ ಸಂಬಂಧಗಳನ್ನು ತಿಳಿಸಿ ಇಂದಿನ ಈ ವಿಷಮ ಕಾಲದಲ್ಲಿ ಬ್ರಿಟನು ಭಾರತದ ಕಡೆಗೆ ಉದಾಸೀನವಾಗಿರುವುದು ಸರಿಯಲ್ಲವೆಂದಿದ್ದಾರೆ.

ಕೇಂದ್ರ ಎಸೆಂಬ್ಲಿಯ ಅಧಿವೇಶನ

ಮುಂದಿನ ಅಧಿವೇಶನವು ಅಕ್ಟೋಬರ

The Kanara Enterprise, Ltd., Puttur

ದಿ ಕೆನರಾ ಎಂಟರ್‌ಪ್ರೈಸ್, ಲಿಮಿಟೆಡ್, ಪುತ್ತೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಬೇಂಕಿನಿಂದ ಚಿನ್ನಾಭರಣಗಳ ಈಡಿನಿಂದ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿರುವುದರಿಂದಲೂ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವು ಜನರಿಗೆ ಸಿಕ್ಕದೆ ಮರತೆ ಬಂದಿರುವುದರಿಂದಲೂ ಮತ್ತು ಕೆಲವು ಸಾಲಗಾರರು ಮೃತಪಟ್ಟು ದ್ಯಾಪಾಸು ಬಂದಿರುವುದರಿಂದಲೂ ಸದರಿ ಸಾಲಗಾರರು ವ ಅವರ ವಾರಿಸುದಾರರು ತಮ್ಮಿಂದ ಬೇಂಕಿಗೆ ಸಲತಕ್ಕ ಅಸ್ಲು ಬಡ್ಡಿ ಆ್ಯವೇಜುಗಳನ್ನು ೦ ನೋಟೀಸು ಖರ್ಚುವ ಈ ನೋಟೀಸು ಖರ್ಚು ಸಮೇತ ಇದೇ ಬರುವ ತಾ 16-8-1940ರ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ಸದರಿ ನಗಗಳನ್ನು ಇದೇ ಬರುವ ತಾ 24-8-1940ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು

ಸಾಲದ ನಂಬ್ರು	ಸಾಲಗಾರರ ಹೆಸರು ವಿಳಾಸ.		ಅಸ್ಲು ಮೊಬಲಗು
707/397 5-8-38	ಪಡಿಕಲ್ಲು ಕೃಷ್ಣಪ್ಪ ಗೌಡ-ಚಿನ್ನಪ್ಪ ಗೌಡರ ಮಗ, ಕೊಲ್ಲಮೊಗ್ರು ಗ್ರಾಮ, ಗುತ್ತಿಗಾರು ಪೋಸ್ಟು	ರೂ	75/-
708/397 5-8-38	ಡಿ. ಡಿ	ರೂ	42/-
448/418 20-9-39	ನೂಜಿ ತಿಮ್ಮಪ್ಪ ರೈ-ರಾಮಣ್ಣ ರೈಗಳ ಅಳಿಯ, ಕೆಯ್ಯೂರು ಗ್ರಾಮ, ಪುತ್ತೂರು ಪೋಸ್ಟು	ರೂ	132/
703/244 8-7-39	ಮಂಜೇಶ್ವರ ಲಕ್ಷ್ಮಣ ನ್ಯಾಕ್-ದೇವಪ್ಪ ನ್ಯಾಕರ ಮಗ, ದರ್ಬೆ-ಪುತ್ತೂರು	ರೂ	12/-
180/594 19-11-38	ಯಂ. ಶೇಕಾಲಿ ಬ್ಯಾರಿ ಪಕ್ರು ಬ್ಯಾರಿ ಮಗ, ಮಾಣಿಲಾ ಗ್ರಾಮ, ವಿಟ್ಲ ಪೋಸ್ಟು	ರೂ	7/-
784/284 31-7-39	ಬಾಳಿಕೆ ಐಕ ಪುರುಷ-ತ್ಯಾಂಪ ಪುರುಷರ ಮಗ, ಇರ್ದೆಬೆಟ್ಟಂಪಾಡಿ ಗ್ರಾಮ, ಪುತ್ತೂರು ಪೋಸ್ಟು.	ರೂ	8/-

Office of the Bank Puttur 6—8—1940

G. N. Lakshmana Pai,
Secretary.



ಬ್ರಿಟನಿಗೆ ರಾಜಾಜಿಯವರ ಎಚ್ಚರಿಕೆ!

ಕೌಂಧದಲ್ಲಿ ನೆಹರುಗಳು!

ಮೈಸೂರು ಮಹಾರಾಜರ ನಿಧನ!

ಮಲಬಾರು ಜಿಲ್ಲಾ ಬೋರ್ಡ್ ಸದಸ್ಯರ ಮೇಲೆ ಆಪಾದನೆ

ತಾ. ೨೧ರ ಸುಮಾರಿಗೆ ಜರಗುವುದು ಇದರಲ್ಲಿ ಭಾರತ ಸರಕಾರದ ವ್ಯಾಪಾರ ಇಲಾಖೆಯವರು ಹೊಸ ಮಸೂದೆಗಳನ್ನು ತರಲಿರುವರೆಂದೂ ತಿಳಿದಿದೆ.

ಕೆಮ್ಮಿದ್ದು ಸೀನಿದ್ದೆಲ್ಲಾ ಜಗಳವಲ್ಲ.

ರಾಜಾಜಿಯ ಹೇಳಿಕೆ

ಕಾಂಗ್ರೆಸಿನಲ್ಲಿರುವ ಮುದುಕರೆಲಾ ಜಗಳಮಾಡಲು ಹೊರಟಿದ್ದಾರೆಂದು ಹೇಳುತ್ತಿರುವವರನ್ನು ಟೀಕಿಸಿ, ತ್ರಾವೆಂಕೂರಿನ ತಿರುವಾಂಕೂರಿನ ಲಕ್ಷ್ಮೀನ... ಶ್ರೀ ರಾಜಾಜಿಯವರು ತಿಲಕ ದಿನಾಚರಣೆಯಂದ, ಇಂದು ಕಾಂಗ್ರೆಸಿನಲ್ಲಿ ಕೆಮ್ಮಿದ್ದು ಸೀನಿದ್ದೆಲ್ಲಾ ಜಗಳವೆಂದು ಎನಬೇಡಿ. ಕೆಮ್ಮುವುದೂ ಸೀನುವುದೂ ಒಂದೊಂದು ಸಲ ಶ್ವಾಸಕೋಶಗಳಿಗೆ ಒಳ್ಳೆಯದು ಇಲ್ಲದಿದ್ದರೆ ಅವೆಲ್ಲಾ ಮಂಕಾಗುವವು ಎಂದರು

ಕಾಂಗ್ರೆಸ್ಸೇ ಮುಖಂಡತ್ವ ವಹಿಸಬೇಕು.

ರಾಷ್ಟ್ರಪತಿಗಳ ಹೇಳಿಕೆ

ಮುಂಬಯಿಯಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ಭೇಟಿಕೊಡುತ್ತಾ, ರಾಷ್ಟ್ರಪತಿ ಅಜಾದರು, ಗಾಂಧಿಜಿಯವರ ಮುಖಂಡತ್ವವನ್ನು ಉಳಿಸಿಕೊಳ್ಳಲು ಕಾಂಗ್ರೆಸು ಯತ್ನಮಾಡಿತೆಂದೂ, ಅನಿವಾರ್ಯವಾಗಿ ಅವರು ದೂರವಿರಲು ಈಗ ಕಾಂಗ್ರೆಸ್ಸೇ ತನ್ನ ಮುಖಂಡತ್ವವನ್ನು ವಹಿಸಬೇಕಾಗಿದೆಯೆಂದೂ, ಸುಮ್ಮಗಿರಲು ಸಾಧ್ಯವಿಲ್ಲವೆಂದೂ ಹೇಳಿದರು

ಮೈಸೂರು ಶ್ರೀಮನ್ಮಹಾರಾಜರವರ ನಿಧನ

ಮೈಸೂರಿನ ಶ್ರೀಮನ್ಮಹಾರಾಜರವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ, ಜಿ ಬಿ ಇ, ಇವರು, ಕಳೆದ ಶನಿವಾರ ರಾತ್ರಿ ಬೆಂಗಳೂರು ಅರಮನೆಯಲ್ಲಿ ದಿವಂಗತರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಮಹಾಸ್ವಾಮಿಯವರ ಗೌರವಾರ್ಥವಾಗಿ, ಸಂಸ್ಥಾನದಲ್ಲಿರುವ ಸಮಸ್ತ ಪಬ್ಲಿಕ್ ಆಫೀಸುಗಳನ್ನೂ ಕೋರ್ಟುಗಳನ್ನೂ ಮತ್ತು ವಿದ್ಯಾಸಂಸ್ಥೆಗಳನ್ನೂ ಸಾರ್ವಜನಿಕ ದುಃಖ ದಿನಗಳಾಗಿ ಆ ದಿನದಿಂದ ಹದಿಮೂರು ದಿನಗಳ ಕಾಲ ಮುಚ್ಚತಕ್ಕದೆಂದೂ, ಗಿನೆಯ ದಿನದ ಕರ್ಮಾಂತರಗಳು ನಡೆಯುವ ವರೆಗೂ ಎಲ್ಲ ಧ್ವಜಗಳನ್ನೂ ಆಯಾ ಧ್ವಜಸ್ತಂಭದ ಮೇಲ್ಗಡೆ ಅರ್ಧಕ್ಕೇ ಇಳಿಸಿ ಕಟ್ಟಿರತಕ್ಕದೆಂದೂ ಅಪ್ಪಣೆ ಮಾಡಲಾಗಿದೆಯೆಂದು ತಿಳಿದುಬರುತ್ತದೆ ದಿವಂಗತರಾದ ಶ್ರೀಮನ್ಮಹಾರಾಜರವರ ಗೌರವಾರ್ಥವಾಗಿ ನಿಮಿಷಕ್ಕೊಂದರಂತೆ ಒಟ್ಟು ಅವರ ವಯಸ್ಸಿನ ಸಂಖ್ಯೆಯಾಗುವವರೆಗೂ ಬೆಂಗಳೂರಿನಲ್ಲಿಯೂ ಮತ್ತು ಮೈಸೂರಿನಲ್ಲಿಯೂ ಆ ದಿನ ತೋಪುಗಳನ್ನು ತೋರಿಸಲಾಯಿತು

ಮೈಸೂರು ಪಟ್ಟಕ್ಕೆ

ಮೈಸೂರು ಪಟ್ಟಕ್ಕೆ ಗತಿಸಿದ ಮಹಾರಾಜರ ತಮ್ಮನ ಮಗ, ಈಗ ಯುವರಾಜರಾಗಿರುವ ಶ್ರೀ ಜಯಚಾಮರಾಜ ಒಡೆಯರರು ಏರುವರು

ಮಲಬಾರು ಜಿಲ್ಲಾ ಬೋರ್ಡು ಅಧ್ಯಕ್ಷರ ಮತ್ತು ಸದಸ್ಯರ ಮೇಲೆ ಲಂಚದ ಆಪಾದನೆ

ಮಲಬಾರು ಜಿಲ್ಲಾ ಬೋರ್ಡು ಮೆಂಬರರು ಅಧ್ಯಕ್ಷರೂ, ಪುಸ್ತಕ ವ್ಯಾಪಾರಿಗಳಿಂದ ಲಂಚ ತೆಗೆದುಕೊಂಡು ಅವರು ಪ್ರಕಟಿಸಿದ ಪುಸ್ತಕಗಳನ್ನು ಜಿಲ್ಲಾ ಬೋರ್ಡಿನಲ್ಲಿ ಇಟ್ಟರೆಂಬ ಆಪಾದನೆಯಿಂದ ತಾ ೫ರಂದು ಪೋಲೀಸರು ಪ್ರೆಸಿಡೆಂಟರ ಆಫೀಸನ್ನೂ, ಮೆಂಬರ ಮನೆಗಳನ್ನೂ, ಕಾಂಗ್ರೆಸು ಕಚೇರಿಯನ್ನು ಜಪ್ತಿ ಮಾಡಿದರು ಈ ಮೆಂಬರರಲ್ಲಿ ಹಲವರು ಗಾಂಧಿ ಸೇವಾ ಸಂಘದ ಸದಸ್ಯರೂ ಇನ್ನು ಕೆಲವರು ಎಡಪಕ್ಷದವರೂ ಇರುತ್ತಾರೆ ಇವರು ಕಾಂಗ್ರೆಸಿನವರ ಪ್ರಚಾರ ಮಾಡುವ ಪ್ರಾಯಸ್ಥರ ವಿದ್ಯಾಭ್ಯಾಸಕ್ಕೆಂದ ಪುಸ್ತಕ ಪ್ರಕಾಶಕರಿಂದ ದಕ್ಷಿಣೆ ತಗೊಂಡರೆಂದೂ ದೂರು ಕೊಡಲಾಗಿದೆ

ಈ ಕುರಿತು ವಿಚಾರಣೆಗಳು ನಡೆಯುತ್ತಿವೆ ಅಂತೂ ಬೋರ್ಡ್ ಅಧಿಕಾರಿಗಳ ಇದರಿಂದ ಒಂದು ವಿಲಿಪುಳ್ಳ ವಿಚಾರ ಕಲಿಯತಕ್ಕದಿದೆ

ರೈಲುಬಂಡಿಯ ಅಪಘಾತ

೩೨ ಮಂದಿ ಮರಣ; ೮೮ ಮಂದಿ ಗಾಯ

ಡಾಕ್ಕಾ ಕಲ್ಕತ್ತಾ ಮೈಲು ಚಾದಾನಗ ಮತ್ತು ಜಯರಾಮಪುರದ ಮಧ್ಯಭಾಗದ ಮಾರ್ಗದಲ್ಲಿ ತಾ ೫ರಂದು ಕಂಬಿ ತಪ್ಪಿ ಅಪಘಾತಕ್ಕೆ ತುತ್ತಾಯಿತು ಇದರಿಂದ ೩೨ ಮಂದಿ ಸತ್ತಿರುವರೆಂದೂ ೮೮ ಮಂದಿಗೆ ಗಾಯವಾಗಿದೆಯೆಂದೂ ತಿಳಿದಿದೆ ಕೂಡಲೇ ಸಂಕಷ್ಟ ಪೀಡಿತರಿಗೆ ಸಹಾಯ ಕೆಲಸವು ನಡೆಯುತ್ತಿದೆ ಸತ್ತವರಲ್ಲಿ ಹಲವರು ಪ್ರಾಮುಖ್ಯ ಮನುಷ್ಯರೂ ಇದ್ದರು

ಹೊಸಮಾದರಿಯ ತಕಲಿ

ಸೇವಾಗ್ರಾಮದ ಗಾಂಧೀ ಆಶ್ರಮವಾಸಿಗಳೊಬ್ಬರು, ಸುಧಾರಣೆ ಹೊಂದಿದ ಹೆಚ್ಚು ನೂಲು ತೆಗೆಯಬಹುದಾದ್ಧ ತಕಲಿಯೊಂದನ್ನು ಮಾಡಿರುವರು ಇದರಿಂದ ತಾಸಿಗೆ ೪೦೦ ಯಾರ್ಡು ನೂಲೆಯಬಹುದು ಇದಕ್ಕೆ 'ಧನುಷ್' ತಕ್ಲಿ ಎಂದು ಹೆಸರಿಟ್ಟಿದೆ ಇದು ಬಿಲ್ಲಿನಾಕಾರವಿದೆ. ಈ ತಕಲಿಯನ್ನು ಮಾಡಿದವರು ಈಗ ಗಾಂಧೀ ಆಶ್ರಮದಲ್ಲಿರುವ ಒಬ್ಬ ಪೋಲೆಂಡಿನ ಇಂಜಿನೀಯರರು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ

R E P 414 1940
R E A 517/1940

ವೆಂಕಟರಮಣ ಯಾನೆ ವೈಕುಂಠ ಹೆಗ್ಡೆ —ಅರ್ಜಿದಾರ

ಅಣ್ಣು ಶ್ಯಾಕಾ ಸಹಾ —ಎದ್ರಿರು

5ನೆ ಎದ್ರಿ ಮಂಜುನಾಥ ನ್ಯಾಕಾ, ದೇವಪ್ಪ ನ್ಯಾಕನ ಮಗ, ಕಾರ್ಕಳ ತಾಲೂಕು ಮುಡಾರು ಗ್ರಾಮಸ್ಥ.—

ಮೇಲ್ಕಂಡ ಅಮಲ್ಜಾರಿಯಲ್ಲಿ ದಾಖಲಾದ ಸ್ಥಿರಾಸ್ತಿ ಏಲಂ ಇಸ್ತಿಹಾರು ಮುಂಜೂರು ಮಾಡುವ ಬಗ್ಗೆ ಮತ್ತು ಅರ್ಜಿದಾರರಿಗೆ ಏಲಂ ಸಮಯ ಬಿಡ್ ಮಾಡುವದಕೆ ಪರ್ಮಿಶನ್ ಕೇಳಿ ಬರಕೊಂಡ R. E. A. 517/1940ನೆ ಅರ್ಜಿ ಕೂಡಾ ತಾರೀಕು 16—8—1940ಕ್ಕೆ ತನ್ನಿಗೆ ಇಡೋಣಾಗಿಯದೆ, ಆದುದರಿಂದ ಕೃತ್ ೫ಎದ್ರಿಯು ತಾ. 16-8-40 ನೇ ದಿನ ಪೂರ್ವಾಹ್ನ ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ, ಆಕ್ಷೇಪಗಳನ್ನು ಹೇಳಬಿದ್ದರೆ, ಅತನನ್ನು ತಿಪ್ಪ್ಯ ಮಾಡಿ ಏಲಂ ಇಸ್ತಿಹಾರು ಮುಂಜೂರಾತಿ ವಿಷಯ ತೀರ್ಮಾನಿಸಲಾಗುವದು ಮತ್ತು R. E. A. 517/1940ನೆ ಅರ್ಜಿ ತೀರ್ಮಾನಿಸಲಾಗುವದು ಎಂತ ಈ ಮೂಲಕ ಸದ್ರಿ 5ನೆ ಎದ್ರಿಗೆ ತಿಳಿಸೋಣಾಗುತ್ತದೆ.

K. B. Joishi,
Pleader for Petitioner.
ಮೊಕ್ಕಾಂ ಕಾರ್ಕಳ, 1-8-40.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ. 1-4-0 (ವಿ ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಫಾರ್ಮಸಿ, ಪೆರಿಡೇಪಿ.
P. O. Peridepi (ನೆಲ್ಲೂರು ಡಿ.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 3~4/1939.
R E P 310/1940

ಶ್ರೀ ಉತ್ತರಾದಿ ಮಠದ ಅಧಿಪತಿಗಳು ಶ್ರೀ ಸತ್ಯಧ್ಯಾನ ತೀರ್ಥ ಶ್ರೀಪಾದಂಗಳವರು ಇವರ ಪವರ್ ಆಫ್ ಎಟೋರ್ನಿ ಹೋಲ್ಡರ್ ಕಟ್ಟಿ ಶ್ರೀನಿವಾಸಾಚಾರ್ಯ —ಅರ್ಜಿದಾರರು—ವಾದಿಯು

ಕ ಕೇಶವ ಪೈ ಕಲ್ಸಂಕ ಸಠಿಂಹ ಪೈಗಳ ಮಗ ಉಡ್ಪಿ ತಾಲೂಕು ಶಿವಳ್ಳಿ ಗ್ರಾಮದ ಕಾಂಚಿ ಬೆಟ್ಟನಲ್ಲಿರುವವ—ಪ್ರತಿವಾದಿ—ಎದ್ರಿ,

ಸದ್ರಿ ಎದ್ರಿಗೆ —

ಮೇಲ್ಕಾಣಿಸಿದ ವ್ಯಾಜ್ಯದಲ್ಲಿ ಡಿಕ್ರಿದೊರೆ ಅರ್ಜಿದಾರರು ಜಾಮೀನು ಇಡಿಸಿರುವ ಪ್ರಾಪರ್ಟಿ ಅಸ್ತಿಹಾರದಿಂದ ಕಾಣುವ ಆರಸೊತ್ತುಗಳ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾರೆ, ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತುಗಳನ್ನು ನಿರ್ಣಯಿಸಲಿಕ್ಕೆ 1940ನೇ ಇಸವಿ ಅಗೋಸ್ತು ತಿಂಗಳ 20 ನೇ ತಾರೀಖು ಪಕ್ಷ ನಿಶ್ಚಯಿಸಲಾಗಿರುವದೆಂತ ಸದ್ರಿ ಎದ್ರಿಗೆ ಇದರಿಂದ ತಿಳಿಸಲಾಗುತ್ತದೆ,

K. L Narayana Rao,
Counsel for Petitioner
ಉಡುಪಿ, ತಾ. 3-8-1940.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C 165 1940

ವಾದಿ —ಚೆನ್ನಯ್ಯ ಶೆಟ್ಟಿ
ಪ್ರತಿವಾದಿ —ಬಿಲ್ಲ ಗೋವಿಂದ

ಪ್ರತಿವಾದಿ ಬಿಲ್ಲಗೋವಿಂದನಿಗೆ —

ಚೆನ್ನಯ್ಯ ಶೆಟ್ಟಿಯು ವಾದಿಯಾಗಿ ನೀನು ತಾ. 14—9—1934ರಲ್ಲು ಬರಸಿಕೊಟ್ಟ ಡಿಮಾಂಡ್ ನೋಟಿನ ಪ್ರಕಾರ ಒಟ್ಟು ಅಸಲು ಒಡ್ಡಿ ಒಟ್ಟಿ ಸಹಾ ನೋಟಿನಲ್ಲಿ ಬರದ ತಾರೀಕು 9-6-1937ರ ವರೆಗೆ ಪ್ರಕಾರ ರೂಪಾಯಿ 90 ನ್ನು ಬರಮಾಡಿಕೊಳ್ಳುವರೆ ಪ್ರತಿವಾದಿಯನ್ನಾಗಿ ನಿನ್ನ ಮೇಲೆ ಮಾಡಿದ ಸದ್ರಿ S. C 165/'40 ನೇ ದಾವೆಯು ತಾ 22—8—1940ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ನಿನ್ನ ಆಕ್ಷೇಪ ಇದ್ದಲ್ಲಿ ಸದ್ರಿ ತನ್ನಿ ದಿವಸ 11 ಘಂಟೆಗೆ ಕೋರ್ಟಿನವರು ಕರದಾಗ್ಯೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಸದ್ರಿ
ಕೋರ್ಟು ಹುಕುಂ ಪ್ರಕಾರ

V. Tejappa Shetty.
ವಾದಿಯ ಕಡೆ ವಕೀಲರು,
ಕುಂದಾಪುರ, 3—8—'40.

ಒಬ್ಬ ಸೈನಿಕನನ್ನು ಕೊಲ್ಲಲು ೫೦೦೦ ಪವನುಗಳ ವೆಚ್ಚ!

ಯುದ್ಧದಿಂದಾಗಿ ಸಂಪತ್ತಿನ ಸೂರೆ!

ಯುದ್ಧಾಸಕ್ತವಾಗಿರುವ ಬ್ರಿಟನು ಮತ್ತು ಜರ್ಮನಿಯು ಈ ಯುದ್ಧದಲ್ಲಿ ಹೇಗೆ ಹಣ ಖರ್ಚು ಮಾಡುತ್ತಿರುವೆ ದೆಂಬುದನ್ನು ನ್ಯೂಸ್ ರಿವ್ಯು ಎಂಬ ಪತ್ರಿಕೆಯು ಅಂಕೆಸಂಖ್ಯೆಗಳ ಪ್ರಮಾಣ ಕೊಟ್ಟು ಹೇಳಿದೆ. ಪ್ರಪಂಚದಲ್ಲಿ, ಅಲ್ಲಿ ಯುರೋಪದಲ್ಲಿ ಕೂಡ ಕೋಟ್ಯಾಂತರ ಜನರು ಹೊಟ್ಟೆಗೆ ಅನ್ನ, ಉಡಲಿಕ್ಕೆ ಬಟ್ಟೆಗಳಿಲ್ಲದೆ ಬಡತನದಿಂದ ನರಳಿ ಸಾಯುತ್ತಲಿರುವಾಗ, ಕೋಟ್ಯಾಂತರ ರೂಪಾಯಿಗಳು ಯುದ್ಧದಲ್ಲಿ ಸ್ವಾಹಾವಾಗುತ್ತಲಿರುವದು ಪರಮ ಅನ್ಯಾಯವಾಗಿದೆ. ಯುದ್ಧದ ದೆಸೆಯಿಂದ ಅನ್ನ ಸಾಮುಗ್ರಿಗಳು ಕಾಲಕಾಲಕ್ಕೆ ಬೇಕಾದಷ್ಟು ದೊರೆಯದೆ ಯುರೋಪಿನ ಹಲವು ರಾಷ್ಟ್ರಗಳಲ್ಲಿ ಬರಗಾಲವಾರಂಭವಾಗಿರುವದೆಂದು ವರ್ತಮಾನಗಳು ಬಂದಿವೆ. ಕೆಳಗೆ ಬರೆದ ಪ್ರಕಾರ ಯುದ್ಧ ಖರ್ಚು ನಡೆಯುತ್ತಿರುವ ಸಂಧರ್ಭದಲ್ಲಿ ಯುರೋಪಿನಲ್ಲಿ ಕ್ಷಾಮ ಡಾಮರಗಳು ತಲೋರುವದರಲ್ಲಿ ಆಶ್ಚರ್ಯವೇನೂ ಕಂಡುಬರುವುದಿಲ್ಲ.

ಎರಡು ಯುದ್ಧಗಳ ಹೋಲಿಕೆ

ಕಳೆದ ಮಹಾಯುದ್ಧ ಕಾಲದಲ್ಲಿ ಬ್ರಿಟನು ಒಂದು ವರ್ಷದಲ್ಲಿ ಮಾಡಿದ ಅತ್ಯಧಿಕ ಖರ್ಚು, ೧,೭೦೦,೦೦೦,೦೦೦ ಪವನು ಆಗಿತ್ತು. ಆ ಖರ್ಚು ಯುದ್ಧ ಆರಂಭವಾಗಿ ಈಗ ಒಂದು ವರ್ಷ ಕೂಡ ಮುಗಿದಿಲ್ಲ ಎಂಬಂತಿರುವಾಗ ೨,೦೦೦,೦೦೦,೦೦೦ ಪವನುಗಳಷ್ಟಾಗಿದೆ! ಈಗ ಕೆನಡ ಒಂದೇ ರಾಜ್ಯವು ವರ್ಷಕ್ಕೆ ೧೦೦,೦೦೦,೦೦೦ ಪವನುಗಳನ್ನು ಖರ್ಚು ಮಾಡುತ್ತಲಿರುವುದು. ಹಿಂದುಸ್ಥಾನ, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ ಮೊದಲಾದ ಇತರ ಸಾಮಂತ ರಾಜ್ಯಗಳು ಮಾಡುತ್ತಿರುವ ಖರ್ಚು ಪ್ರತ್ಯೇಕ ಇದೆ.

ಕಳೆದ ಯುದ್ಧದಲ್ಲಿ ಫ್ರಾನ್ಸು ಮಾಡಿದ ಖರ್ಚು ೧,೦೦೦,೦೦೦,೦೦೦ ಪವನು ಆಗಿತ್ತು. ಆದರೆ ಈ ಯುದ್ಧದಲ್ಲಿ ಅದು ೧,೨೦೦,೦೦೦,೦೦೦ ಪವನುಗಳಷ್ಟು ಹಣ ಖರ್ಚುಮಾಡಿಯೂ ಸೋತಿದೆ! ಬೆಲ್ಜಿಯಮು ಎಷ್ಟು ಖರ್ಚುಮಾಡಿತೆಂದು ಗೊತ್ತಾಗಿಲ್ಲ. ಆದರೆ ಅದರ ಖರ್ಚು ೪೦,೦೦೦ಕ್ಕೆ ಕಡಿಮೆಯಾಗಿಲ್ಲವೆಂದು ತಿಳಿದುಬರುತ್ತದೆ. ಜರ್ಮನಿಯ ಯುದ್ಧ ಖರ್ಚನ್ನು ತಿಳಿಯುವುದು ಅಸಾಧ್ಯವಾಗಿರುವದು. ಪರಂತು ಅದು ಬ್ರಿಟನಿನ ಖರ್ಚಿನ ದುಬಾರಿಗಿಂತ ಕಡಿಮೆಯಾಗಿರುವುದಿಲ್ಲ.

ಅಮೇರಿಕದ ಸಿದ್ಧತೆ

ಅಮೇರಿಕವು ಶಸ್ತ್ರೀಕರಣಗಳಿಗಾಗಿ ಈ ವರ್ಷ ಮಾಡಿರುವ ಖರ್ಚು ೧,೬೦೦,೦೦೦,೦೦೦ ಪವನುಗಳಷ್ಟಿರು

ಯುದ್ಧ ಮೋಟರುಗಳು, ಟ್ಯಾಂಕುಗಳು ಇತ್ಯಾದಿ ೫೦ ಮೈಲುಗಳಷ್ಟು ದೂರ ಹೋಗಬೇಕಾದರೆ, ಒಂದೊಂದು ಯಂತ್ರ ಸಾಧನವು ೧೪೦೦ ಪವನುಗಳ ಎಣ್ಣೆ ಸಾಮಾಗ್ರಿಗಳನ್ನು ಉರಿಸಿ ಹಾಕುತ್ತದೆ. ವಿಮಾನ ಧ್ವಂಸಕ ಒಂದೊಂದು ತೋಪಿಯು ಒಂದೊಂದು ಮಿನಿಟಿಗೆ ೭೦೦ ಪವನು ಕ್ರಯದ ಮದ್ದನ್ನು ಸುಟ್ಟುಹಾಕುತ್ತದೆ. ೪೦ ವಿಮಾನಗಳ ಒಂದು ಪಡೆಯನ್ನು ಕೆಡವಿಹಾಕಲಿಕ್ಕೆ ಈ ತೋಪಿಗಳು ೧೦ ಮಿನಿಟುಗಳಲ್ಲಿ ೪೨,೦೦೦,೦೦೦ ಪವನುಗಳ ಮದ್ದನ್ನು ಸುಟ್ಟು ಭಸ್ಮಮಾಡುವವು. ದೊಡ್ಡ ಫಿರಂಗಿಗಳ ಒಂದೊಂದು ಗುಂಡಿಗೆ ೫೦ ಪವನು ಖರ್ಚಾಗುತ್ತದೆ.

ಕಳೆದ ಮಹಾಯುದ್ಧದಲ್ಲಿ ಯುದ್ಧಕ್ಕೆ ಹೋದ ಒಬ್ಬೊಬ್ಬ ಸೈನಿಕನನ್ನು ಕೊಂದು ಹಾಕಲಿಕ್ಕೆ ೫೦೦೦ ಪವನುಗಳ ಖರ್ಚಾಗುತಿತ್ತೆಂದು ಗೊತ್ತಾಗಿದೆ. ಈಗ ಈ ಖರ್ಚು ಇದಕ್ಕಿಂತ ದ್ವಿಗುಣಿತವಾದರೂ ಆಗಿದ್ದಿರಬೇಕು.

ಬಾಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯ ವಾರ್ಷಿಕ ವರದಿ

ಇದರ ೧೯೩೯ನೆಯ ವರ್ಷದ ವರದಿ ಮತ್ತು ವರ್ಷದ ಲೆಕ್ಕ ಪತ್ರಗಳ ವಿವರವು ನಮ್ಮ ಹಸ್ತಗತವಾಗಿದೆ ೧೯೦೮ರಂದು ಸ್ಥಾಪಿತವಾದ ಈ ಸಂಸ್ಥೆಯು ಕಳೆದ ಹಲವು ವರ್ಷಗಳಿಂದ ಭಾರತದ ಜೀವವಿಮಾ ಪ್ರಪಂಚದಲ್ಲಿ ಅತ್ಯಂತ ಯಶಸ್ವಿಯಾಗಿ ಸರ್ವಜನಾದರಣೀಯವಾಗಿ ನಡೆದುಬರುತ್ತಿರುವ ವಿಚಾರವು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಚಾಲ್ತಿ ವರ್ಷದಲ್ಲಿಯೂ ಕಂಪೆನಿಯು ಬಹಳ ಉತ್ತೇಜನ ಕಾರಿಯಾದ ಚಟುವಟಿಕೆಗಳನ್ನು ತೋರಿಸಿರುವುದು. ಈ ಕಂಪೆನಿಯು ಅತ್ಯಂತ ಭದ್ರವಾದ ಮೂಲ ಧನವುಳ್ಳದ್ದಾಗಿ ಡೈರೆಕ್ಟರರ ಉತ್ಸಾಹ ಪರಿಶ್ರಮಗಳಿಂದಲೂ, ಇತರ ಏಜಂಟರ ಸಾಹಸೋದ್ಯಮಗಳಿಂದಲೂ ಸಮಸ್ತ ಭಾರತದಲ್ಲಿ ಬಹಳವಾಗಿ ಪ್ರಸಿದ್ಧಿಯನ್ನು ಪಡೆದಿರುತ್ತದೆ.

ವಿಮಾ ವಾಣಿಜ್ಯದಲ್ಲಿ ಹೆಸರುಪಡೆದ, ನಮ್ಮ ಜಿಲ್ಲೆಯವರಾದ ಉಡುಪಿಯ ಕೊಚ್ಚಿಕಾರ್ ಸಹೋದರರು ಈ ಕಂಪೆನಿಯ ಮದ್ರಾಸ್ ಶಾಖೆಯ ಕಾರ್ಯದರ್ಶಿಗಳಾಗಿಯೂ, ಬೊಂಬಯಿನಗರ ಮತ್ತು ಆಸುಪಾಸುಗಳಲ್ಲಿ ಏಜಂಟರಾಗಿಯೂ ಅತ್ಯಂತದಕ್ಷತೆಯಿಂದ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ಬಹಳ ಅಭಿನಂದನೀಯವಾದ ವಿಷಯವಾಗಿದೆ.

ಗಾಯ ಮತ್ತು ವ್ರಣಗಳಿಗೆ
ಜ್ಯಾಂಬಕು ಮನೆ ವೈದ್ಯನಂತೆ!

ಅಕಸ್ಮತ್ತಾಗಿ ಒದಗುವ ವಿಪತ್ತುಗಳಿಗೆ ಜ್ಯಾಂಬಕು ಅನುದಿನವೂ ಅಗತ್ಯ!

ಗಾಯ ಅಥವಾ ವ್ರಣಗಳನ್ನು ಅಲಕ್ಷಿಸಿ ಬಿಟ್ಟರೆ ರಕ್ತವು ವಿಷಕಾರಿಯಾಗುವ ಅಧಿಕ ಸಂಭವವಿರುತ್ತದು, ಅದಕಾರಣ ಅಂಥಾ ಹಾನಿಗಳನ್ನು ಕೂಡಲೇ ಜ್ಯಾಂಬಕಿನಿಂದ ಗುಣಪಡಿಸಿಕೊಳ್ಳಿರಿ. ಜ್ಯಾಂಬಕಿನಲ್ಲಿ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯು ನರನಾಡಿಗಳನ್ನು ಆಳವಾಗಿ ಹೊಕ್ಕು ನೋವನ್ನು ಗುಣಪಡಿಸಿ ಬಾತುವಿಕೆಯನ್ನು ಗುಣಪಡಿಸುವುದು. ಜ್ಯಾಂಬಕು ವಿಷ ಕ್ರಿಮಿಗಳನ್ನು ನಾಶಮಾಡುತ್ತದೆ, ರಸಿಗೆಯನ್ನು ಒಣಗಿಸಿ ಒಂದು ಕಲೆಯನ್ನುಂಟುಮಾಡದೆ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ರೂಪಾಯಿ 1 ಮತ್ತು 2-4-0ರಂತೆ ಮಾರುತ್ತಾರೆ

ಏಜಂಟ್ಸ್ ಮೆ.ಸರ್ಸ್ ದಾಧಾ ಮತ್ತು ಕಂಪೆನಿ,
ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of

Rs.50/-,100/-,500/-,1,000/-&5,000/-

are now issued at all our Branches

For particulars call at or write to

Any of our nearest Branches

PROBABLY WE CAN HELP

Yes, if you are a business man requiring a temporary increase in your working capital. We grant loans at competitive rates, on gold, goods, produce, stocks and shares and other approved securities

RESOURCES OF A CRORE.

Estd: 1906
CANARA BANK LIMITED

ವಿಚಿತ್ರ ಪ್ರಪಂಚ

ಜುಟ್ಟು ಕಟ್ಟುವ ಯೂರೋಪಿಯನರು

ಭಾರತೀಯರು ಹಲವು ಮಂದಿ ಪಾಶ್ಚಾತ್ಯರ ಅಂಧಾನುಕರಣ ಮಾಡುವ ಹವ್ಯಾಸಕ್ಕೆ ಬಲಿಬಿದ್ದು ತಮ್ಮ ತಲೆಯ ಜುಟ್ಟನ್ನು ಕಡಿದು ಕ್ರಾಪವನ್ನು ಬಾಚಿಕೊಳ್ಳುತ್ತಿರುವಾಗ, ರುಮಾಲನ್ನು ತ್ಯಜಿಸಿ ಹೆಟ್ಟನ್ನು ಇಟ್ಟುಕೊಳ್ಳುತ್ತಿರುವಾಗ, ಯೂರೋಪಿನಲ್ಲಿ ಅನೇಕರು ಈ ಜುಟ್ಟು ರುಮಾಲುಗಳನ್ನೇ ತಮ್ಮದಾಗಿ ಮಾಡಿಕೊಳ್ಳುತಿದ್ದಾರೆ. ಅವರು ಕ್ರಾಪಿನ ಬದಲಿಗೆ ಜುಟ್ಟನ್ನು ಬೆಳೆಸಲಾರಂಭಿಸಿದ್ದಾರೆ, ಹೆಟ್ಟಿನ ಬದಲಿಗೆ ರುಮಾಲನ್ನು ಕಟ್ಟಲಾರಂಭಿಸಿದ್ದಾರೆ. ಬಿಸಿಲಿನ ಹೊಡೆತದಿಂದ ಮಿದುಳಿಗೆ ಧಕ್ಕೆ ತಗಲದಂತೆ ಇವು ಅಗತ್ಯವೆಂದು ಅವರಿಗೆ ತೋರಿದೆಯಂತೆ. ಇನ್ನು ನಮ್ಮ ಹೆಂಗಸರು ಚಡ್ಡಿ, ಗವನು ಹಾಕಿ ತಿರುಗತೊಡಗಿದಾಗ, ಯೂರೋಪಿನ ಮಡ್ಡಮ್ಮನವರು ಸೀರೆ ಉಟ್ಟುಕೊಂಡು ಪೇಟೆಗೆ ಬರಲೂ ಬಹುದು. ಲೋಕೋಭಿನ್ನರುಚಿ.

ದೀರ್ಘ ಪತ್ರಗಳ ಸ್ಪರ್ಧೆ

ಅಮೆರಿಕದ ಒಹಯೋ ನಗರದಲ್ಲಿ [illegible] ಕ್ಲೈವ್ ವೆಬ್ ಎಂಬ ಒಬ್ಬ ಮೇಸ್ತ್ರಿ ಮತ್ತು ಗೂರೆನ್ಸಿ ಎಂಬ ದ್ವೀಪದಲ್ಲಿ ಛಾಪಖಾನೆಯ ಕೆಲಸದಲ್ಲಿದ್ದ ಕೆನ್ನೆಡ್ ಕೋಕರ್ ಎಂಬವರೊಳಗೆ ಪತ್ರ ಬರೆಯುವ ಒಂದು ವಿಚಿತ್ರ ಸ್ಪರ್ಧೆ ಉಂಟಾಗಿದ್ದಿತು. ಈ ಸ್ಪರ್ಧೆಯಲ್ಲಿ ಯಾರು ಅತಿ ದೀರ್ಘ ಪತ್ರವನ್ನು ಬರೆದ ವರೋ ಅವರು ಬಹುಮಾನ ಪಾತ್ರರಾಗುವರೆಂದು ಅವರಿಬ್ಬರು ನಿರ್ಧರಿಸಿದ್ದರು. ಈ ಸ್ಪರ್ಧೆಯಲ್ಲಿ ಮೊನ್ನೆ ಮೊನ್ನೆಯ ತನಕ ಕೋಕರನೇ ವಿಜಯಿಯಾಗುವನೆಂದು ಎಣಿಸಲಾಗಿದ್ದಿತು. ಅವನು ವೆಬ್ಬನಿಗೆ ಬರೆದ ಕೊನೆಯ ಪತ್ರವು ಫುಲ್ಸ್‌ಕೇಪ್ [illegible] ಪುಟಗಳಷ್ಟು ಉದ್ದವಾಗಿದ್ದಿತು. ಅದರಲ್ಲಿ ಅವನು ವೆಬ್ಬನಿಗೆ ತಾನು ವಾಸವಾಗಿದ್ದ ಗೂರೆನ್ಸಿ ದ್ವೀಪದ ಇತಿಹಾಸವನ್ನೆಲ್ಲ ಬರೆಯತೊಡಗಿದ್ದ. ಆ ಪತ್ರವನ್ನು ಬರೆಯುತ್ತ ಬರೆಯುತ್ತ ಅವನ ಲೇಖನಿಯ ಎರಡು ಮೊನೆಗಳು ಸವೆದು ಹೋಗಿದ್ದುವು. ಒಂದು ದೊಡ್ಡ ಸೀಸೆ ತುಂಬ ಶಾಯಿ ಖರ್ಚಾಗಿದ್ದಿತು. ಆದರೆ ಯೂರೋಪಿನಲ್ಲಿ ಯುದ್ಧವಾರಂಭವಾಗಿರುವುದರಿಂದ ಅವರಿಬ್ಬರು ದೀರ್ಘ ಪತ್ರ ಬರೆಯುವ ಈ ಕಾಳಗದಲ್ಲಿ ತಾತ್ಕಾಲಿಕ ಸಂಧಿ ಮಾಡಿಕೊಂಡಿರುವರು! ಯಾಕೆಂದರೆ ಕೋಕರನು ಈ ಯುದ್ಧದ ದೆಸೆಯಿಂದ ತಾನು ವಾಸವಾಗಿದ್ದ ದ್ವೀಪವನ್ನು ಬಿಟ್ಟು ಹೊರಡಬೇಕೆಂದು ಸರಕಾರದ ಆಜ್ಞೆಯಾಗಿದೆ. ಈ ಸ್ಪರ್ಧೆ ಆರಂಭವಾದಂದಿನಿಂದ ಕೋಕರನು ಎರಡೂವರೆ ಲಕ್ಷ ಶಬ್ದಗಳನ್ನು ಬರೆದಿದ್ದಾನೆ!

ಎಂಬತ್ತು ವರ್ಷದ ಮುದುಕಿ ನವತರುಣಿಯಾದಳು

ಈ ಒಂದು ಸಮಾಚಾರವು ಲಂಡನಿನ ಅದೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಹಂಗೇರಿಯ ಮಹಾರಾಣಿ ಆಗಿದ್ದಾಕೆ ಆ ಸಮಯ ಎಂಭತ್ತು ವರ್ಷದ ಮುದುಕಿ ಆಗಿದ್ದಳಾದ್ದರಿಂದ ಪ್ರಪಂಚದಲ್ಲಿ ಅನುಭವಿಸಬೇಕಾಗಿದ್ದ ಸುಖವನ್ನೆಲ್ಲ ಅನುಭವಿಸಿ ಜೀವನದಲ್ಲಿ ಬೇಸತ್ತಿದ್ದಳು. ಒಂದು ದಿನ ಸಂಚಾರ ಮಾಡುತ್ತ ಇರುವಾಗ ಆ ಮುದುಕಿ ಮಹಾರಾಣಿ ಒಬ್ಬ ಸಾಧುವನ್ನು ಕಂಡಳು. ಅವನು ಅವಳಿಗೆ ಮಂತ್ರಪ್ರೇರಿತವಾದ ಒಂದು ವಿಚಿತ್ರ ಪ್ರಕಾರದ ನೀರನ್ನು ಕೊಟ್ಟನಂತೆ. ಅದಕ್ಕೆ ಏನೋ ಒಂದು ತರದ ಪರಿಮಳವಿದ್ದಿತ. ಅವಳು ಅದನ್ನು ಉಪಯೋಗಿಸಲಾರಂಭಿಸಿದಾಗಿನಿಂದಲೇ ಅವಳಲ್ಲಿ ವಿಚಿತ್ರ ಪರಿವರ್ತನೆಗಳಾದುವು. ಅವಳ ಆ ಕಾಲದ ಶರೀರ ಲಾವಣ್ಯವನ್ನು ನೋಡಿ ಪೋಲಾಂಡಿನ ಅರಸು—ಆಗ ಪೋಲಾಂಡಿನಲ್ಲಿ ಒಬ್ಬ ಅರಸನ ಆಳಿಕೆಯಿದ್ದಿತ್ತು—ಅವಳನ್ನು ವಿವಾಹವಾಗುವ ತನ್ನ ಇಚ್ಛೆಯನ್ನು ಪ್ರಕಟಿಸಿದನು. ಆ ಅರಸು ಅವಳಂಥ ರೂಪರಾಶಿಯನ್ನು ಮತ್ತೆ ಯಾವಾಕೆಯಲ್ಲಿಯೂ ನೋಡಿರಲಿಲ್ಲವಂತೆ!

ವಿಚಿತ್ರ ಗಡಿಯಾರ

ನೆಬ್ರಾಸ್ಕಾದ ಪ್ಲೆಟ್ಸ್ ಮೌತ್ ಎಂಬಲ್ಲಿಯ ಒಬ್ಬ ಕ್ಷೌರಿಕನಲ್ಲಿ ಒಂದು ಗೋಡೆ ಗಡಿಯಾರವಿದೆ. ಅದರ ಮುಖಬಿಲ್ಲೆ ಸಾಮಾನ್ಯ ಗಡಿಯಾರಗಳಂತೆ ಇರುವುದಿಲ್ಲ. ಅದರಲ್ಲಿ ಅಂಕೆಗಳಿರುವುದು ಬಲದಿಂದ ಎಡಕ್ಕೆ. ಮುಳ್ಳುಗಳು ಚಲಿಸುವುದೂ ಬಲದಿಂದ ಎಡಕ್ಕೆ. ಕ್ಷೌರ ಮಾಡಿಸಿಕೊಳ್ಳಲಿಕ್ಕೆ ಬಂದ ಗಿರಾಕಿಯು ಕುರ್ಚಿಯ ಮೇಲೆ ಕೂತು ಕ್ಷೌರ ಮಾಡಿಸಿಕೊಳ್ಳುವಾಗ ತನ್ನ ಮುಂದಿರುವ ಮುಖ ಕನ್ನಡಿಯಿಂದ ಹಿಂದಿರುವ ಗಡಿಯಾರದಲ್ಲಿ ಸಮಯವನ್ನು ತಿಳಿಯಲಿಕ್ಕಾಗಬೇಕೆಂಬುದಕ್ಕಾಗಿಯೇ ಅವನು ಈ ಗಡಿಯಾರವನ್ನು ತನಗಾಗಿ 'ಸ್ಪೆಶ್ಯಲ್ ಆರ್ಡರು' ಕೊಟ್ಟು ತಯಾರಿಸಿ ತಂದದ್ದಾಗಿದೆ.

ಶತಮಾನಗಳಿಂದ ಖಾನೇಶುಮಾರಿ ಇಲ್ಲ

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕಳೆದ ೧೭೯೦ರಿಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ಅಥವಾ ಖಾನೇಸುಮಾರಿ ನಡೆಯುತ್ತ ಬಂದಿದೆ. ಆದರೆ ಮೊನ್ನೆಯ ಖಾನೇಶುಮಾರಿ ನಡೆಯುವ ತನಕವೂ ಲೆಕ್ಕಕ್ಕೆ ಬಾರದಿದ್ದ ಕೆಲವು ಜನರ [illegible] ಅವರೆಲ್ಲ [illegible] ದ್ವೀಪದಲ್ಲಿ ವಾಸವಾಗಿ[illegible] ಆ ದ್ವೀಪದಲ್ಲಿ ಜನರು ವಾಸವಾಗಿದ್ದರೆಂಬುದು [illegible] ಸರಕಾರಕ್ಕಾಗಲೀ ಇತರರಿಗಾಗಲೀ ಕಳೆದ [illegible] ವರ್ಷಗಳಿಂದ ಗೊತ್ತೇ ಇರಲಿಲ್ಲ. ಕಳೆದ [illegible] [illegible] ಆ ದ್ವೀಪದ ಜನರನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಕೈದಿಯ ಶಾಪ?

ಅಮೆರಿಕದ [illegible] ಎಂಬ [illegible] ಕೈದಿಗಳಿಲ್ಲ [illegible] ಮಾಡಿಕೊಳ್ಳ [illegible] ಅವನು ಯಾವ [illegible] ಗಡ್ಡ [illegible] ಇಟ್ಟುಕೊಂಡಿರುವವನು. ಆದರೆ [illegible] ಪೋಲಿಸ ಎಂಬ ಕೈದಿಯು ಈ [illegible] ಕ್ಕೆ ಅಪವಾದವಾಗಿದ್ದಾನೆ. ಅವನು ಗಡ್ಡ ಬೋಳಿಸಲಿಕ್ಕೆ ವಿರೋಧ ಮಾಡುತ್ತಾನೆಂಬುದಕ್ಕಾಗಿ ಜೈಲಧಿಕಾರಿಗಳು ಅವನಿಗೆ ಗಡ್ಡಬೆಳೆಸಲಿಕ್ಕೆ ಬಿಟ್ಟಿರುವುದಿಲ್ಲ. ಆದರೆ ಅವನ ಗಡ್ಡವನ್ನು ಬೋಳಿಸಲಿಕ್ಕೆ ಯಾವ ಕ್ಷೌರಿಕನೂ ಸಮ್ಮತಿಸುವುದಿಲ್ಲ. ಯಾಕೆಂದರೆ ಕಳೆದ ಸಾರಿ ಒಬ್ಬ ಕ್ಷೌರಿಕನು ಅವನ ಗಡ್ಡ ಬೋಳಿಸುವ ಸಾಹಸ ಕೈಕೊಂಡು ಹೃದಯಾಘಾತದಿಂದ ಸತ್ತುಹೋದನು. ಅದರ ಕತೆ ವಿಚಿತ್ರವಾಗಿದೆ. ಕ್ಷೌರ ಮಾಡಲಿಕ್ಕೆ ಬಂದಾಗ—ಕ್ಷೌರ ಬೇಡವೆಂದು ಲೂಯಿಸನು ತಡೆದನಂತೆ. ಆದರೂ ಆ ಕ್ಷೌರಿಕ ಅವನ ಕ್ಷೌರ ಮಾಡಿಯೇ ಬಿಟ್ಟ. ಲೂಯಿ ಸಿಟ್ಟಾಗಿ—ದೇವರು ನಿನಗೆ ಶಿಕ್ಷೆ ಕೊಡದಿರುವುದಿಲ್ಲ ಎಂದು ಶಪಿಸಿದನಂತೆ. ಆಗಲೇ ಕ್ಷೌರಿಕನು ಮೊನ್ನೆ ಸತ್ತುಬಿದ್ದ. ತಮ್ಮದೂ ಸ್ಥಿತಿ ಹಾಗಾಗಬಹುದೆಂದು ಕ್ಷೌರಿಕರು ಹೆದರುತ್ತಿರುವರು.



ರೆನ್ನೊ ಅವರಿಗೊಂದು ವಿಶಿಷ್ಟವಾದ ವ್ಯಕ್ತಿತ್ವವನ್ನು ತಂದುಕೊಟ್ಟಿದ್ದು, ...ಷ ರ ಪ್ರಪಂಚ-ಪರ್ಯಟನದ ...ಶಾಲ ಅನುಭವ. ಇಂಗ್ಲೆಂಡಿಗೆ ಚರ್ಚಿಲರಿರುವಂತೆ ಫ್ರಾನ್ಸಿಗೆ ರೈನಾ ಇದ್ದರು. ಆದರೆ ಯಾವಾಗಲೂ ವರ್ತಮಾನಕಾಲವು ಮಿಕ್ಕೆಲ್ಲ ಶಕ್ತಿಗಳಿಗಿಂತ ಭೌತಿಕಶಕ್ತಿಗೇ ತಲೆಬಾಗಿಸ ಹಚ್ಚುವುದು. ರೆನಾ ಅವರಂಥಹ ಕುಶಲಮತಿಗಳೂ ಆ ಶಕ್ತಿಗೆ ತಲೆ ಬಾಗಿಸಿದರು.

× ಫ್ರಾನ್ಸ್ ಜರ್ಮನಿ ಒಪ್ಪಂದವಾಗುವುದಕ್ಕೆ ಮುಂಚೆ, ಫ್ರಾನ್ಸದ ಬಗ್ಗೆ ಅತ್ಯಂತ ಕಳವಳದ ಮಾತುಗಳು ಕೇಳಬರುತ್ತಿದ್ದುವು. ಫ್ರಾನ್ಸ್‌ದಿಂದ ಅಮೇರಿಕೆಯವರಿಗೆ ಕಳಿಸಿದ ಕಳವಳದ ಕೂಗು, ನಮ್ಮ ಕರುಳುಗಳನ್ನು ಕೂಡ ಎತ್ತೆತ್ತಿ ಹಾಕುತ್ತಿದ್ದುವು. ರೇನಾ ಅವರು ಫ್ರಾನ್ಸದ ಪೂರ್ವದ ವೈಭವವನ್ನು ನೆನಹಿಗೆ ತಂದು ಮುಂದೆ ಬರಬಹುದಾದ ಒಪ್ಪಂದದ ಅಸಹ್ಯವೇದನೆಯನ್ನು ಕಂಡುಕೊಂಡು, ಕೊನೆಯ ಸಾರಿಗಾಗಿ ಅಮೇರಿಕೆಯ ಸಹಾಯವನ್ನು ಕೇಳಿದರು. ಅವರು ಅಪೇಕ್ಷಿಸಿದ ಸಹಾಯ ಆ ಅವಧಿಯಲ್ಲಿ ಸಿಕ್ಕಲಿಲ್ಲ. ಕೊನೆಗೆ ಮಂತ್ರಿಪದದಿಂದ ರೇನಾ ಅವರು ರಾಜಿನಾಮೆ ಕೊಡಬೇಕಾಯಿತು

×೧೮೭೮ನೇ ಇಸವಿಯ ಅಕ್ಟೋಬರ್ ೧೫ನೆಯ ತಾರೀಕಿಗೆ ರೇನಾ ಅವರ ಜನ್ಮವಾಯಿತು. ಚಿಕ್ಕಂದಿನಲ್ಲಿಯೆ ಇವರು ಅಜ್ಜನ ಕೂಡ ಮೆಕ್ಸಿಕೋಕ್ಕೆ ಹೋಗಿದ್ದರು. ×ರೇನಾ ಅವರ ತಂದೆಯಾದರೋ ಒಕ್ಕಲತನದಲ್ಲಿ ನಿಷ್ಣಾತರು. ಆ ನಿಷ್ಣಾತೆಯ ಮಾನದ ಮೂಲಕವಾಗಿಯೆ ಮುಂದೆ ಬೆಸೆಸ್‌ಆಲ್ಪ್ಸ್ ಭಾಗದಿಂದ ಅವರು ಕೌನ್ಸಿಲರಾಗಿ ಆರಿಸಿ ಬಂದರಂತೆ

ರೇನಾ ಅವರ ಶಿಕ್ಷಣಕ್ರಮವು ಪ್ಯಾರಿಸಿನಲ್ಲಿಯ ಒಂದು ಶಾಲೆಯಲ್ಲಿ ಪ್ರಾರಂಭವಾಯಿತು. ಮತ್ತು ಬಿ ಎ ಪದವಿಗೆ ಸಮಾನವಾದ ಲಾಯಸೆನ್ಸ್ ಪದವಿಯನ್ನವರು ಸಂಪಾದಿಸಿದರು. ಅನಂತರ ಪ್ಯಾರಿಸ್ ವಿಶ್ವವಿದ್ಯಾನಿಲಯದಲ್ಲಿ ಕಾಯಿದೆಯ ಅಭ್ಯಾಸವನ್ನು ಮೊದಲು ಮಾಡಿದರು, ಕಾಯಿದೆಯಲ್ಲಿ ಒಳ್ಳೆಯ ನಿಷ್ಣಾತರೆನಿಸಿಕೊಂಡರು. ಅಲ್ಲದೆ ಇವರಿಗೆ "ಡಾಕ್ಟರ್ ಆಫ್ ಲಾ" ಎಂಬ ಪದವಿಯು ಸಿಕ್ಕಿತು. ಕೆಲವು ದಿನಗಳ ವರೆಗೆ ಒಬ್ಬ ಸಾಲಿಸೀಟರನಲ್ಲಿ ಉಮೇದುವಾರಿಕೆಯನ್ನು ಮಾಡಿದರು; ಆದರೆ ಮುಂದೆ ಜಗತ್ತಿನ ಪ್ರವಾಸವನ್ನು ಕೈಕೊಂಡುದರಿಂದ, ಅದು ಅಲ್ಲಿಯೇ ಉಳಿಯಿತು. ಜಗತ್ತಿನ ಪ್ರವಾಸದಿಂದ ಒಳ್ಳೆಯ ಅನುಭವವನ್ನವರು ಸಂಪಾದಿಸಿದರು. × ಆ ಅನುಭವದ ಉಪಯೋಗವನ್ನು ರೇನಾ ಅವರು ಯಥಾಯೋಗ್ಯವಾಗಿ ಮಾಡಿಕೊಳ್ಳುತ್ತಿದ್ದರು.

ಅದೇನೊ, ವಕೀಲಿ ಉದ್ಯೋಗವೂ ಪಾರ್ಲಿಮೆಂಟಿನ ಸದಸ್ಯತ್ವವೂ ಒಂದನ್ನೊಂದು ಹೊಂದಿಕೊಂಡಿರುವಂತೆ ಕಾಣುತ್ತದೆ ಉಳಿದ ದೇಶಗಳಿಗಿಂತ ಫ್ರಾನ್ಸದಲ್ಲಿ ವಕೀಲಿ ವ್ಯವಸಾಯದವರೇ ಹೆಚ್ಚಾಗಿ ಪಾರ್ಲಿಮೆಂಟನ್ನು ಸೇರುವರು: ಪ್ರತಿಯೊಬ್ಬ ಪ್ರಸಿದ್ಧ ರಾಜಕಾರಣಿಯೂ ತನ್ನ ಮೊದಲ ಜೀವನದಲ್ಲಿ ವಕೀಲಿಯನ್ನು ಮಾಡಿದವನೇ; ಅಥವಾ ವೃತ್ತಪತ್ರ ವ್ಯವಸಾಯದಲ್ಲಿ ತಲೆಹಾಕಿದವನೇ. × ರೇನಾ ಅವರು ಮಾರ್ಚ ೨೧ಕ್ಕೆ ಮುಖ್ಯ ಪ್ರಧಾನರಾದರು. ಅದೇನು ಯೋಗಾಯೋಗವೋ ತಿಳಿಯದಾಗಿದೆ: ಮೂವತ್ತು ನಾಲ್ಕು ಜನ ಸದಸ್ಯರಲ್ಲಿ ಹದಿನಾರು ಜನರು ಬ್ಯಾರಿಸ್ಟರಿರಬೇಕೇ? ರೇನಾ ಅವರು ಒಳ್ಳೆಯ ವಕ್ತಾರರು, ಕೇಳುವವರ ಮೇಲೆ ಒಮ್ಮೆಲೆ ಪರಿಣಾಮ ಮಾಡುವಂತೆ ಮಾತನಾಡುವವರು. ಅವರ ಮಾತುಗಾರಿಕೆಯ ರೀತಿಯು ಫ್ರಾನ್ಸದವರನ್ನು ಹೋಲದೆ, ಇಂಗ್ಲಿಷ ಪದ್ಧತಿಯನ್ನನುಸರಿಸುತ್ತದೆ. ಮಂತ್ರಿಮಂಡಲದಲ್ಲಿಯ ಇವರ ಭಾಷಣಗಳೆಂದರೆ ಸ್ಪಷ್ಟವಾದುವೂ ತುಂಬ ಮಾಹಿತಿಯುಳ್ಳವುಗಳೂ ಇರುತ್ತಿದ್ದುವು. ಉತ್ತರಕೊಡುವ ಕಾಲಕ್ಕಾದರೂ ಪ್ರತಿಯೊಂದು ಶಬ್ದವೂ ಇವರ ತೀಕ್ಷ್ಣವಾದ ಜಾಣ್ಮೆಯನ್ನು ತೋರುತ್ತಿದ್ದಿತು. ಇವರ ಮಾತನ್ನು ಕೇಳುವುದೆಂದರೆ ಸದಸ್ಯರಿಗೊಂದು ಸವಿಯೂಟವಿದ್ದಂತೆ

ಜೀವಜ್ಯೋತಿಗಳು: ಫ್ರಾನ್ಸಿನ ಪ್ರಾಣ 'ರೆನಾ'

ಈ ಎಲ್ಲ ಅನುಭವವು ರೇನಾ ಅವರಿಗೆ ಜಗತ್ತಿನ ಪ್ರವಾಸದಿಂದಲೇ ಬಂದಿರಬೇಕು. ಪ್ರವಾಸವನ್ನು ಮುಗಿಸಿಕೊಂಡು ಬಂದು ತಮ್ಮ ವಕೀಲಿಯ ಉದ್ಯೋಗವನ್ನವರು ಪ್ರಾರಂಭಮಾಡಿದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಕೂಡಲಿದ್ದ ಬ್ಯಾರಿಸ್ಟರರ ಪರಿಷತ್ತಿಗೆ ಕಾರ್ಯದರ್ಶಿಯಾಗುವ ಪ್ರಸಂಗವು—ವಯಸ್ಸು ಚಿಕ್ಕದಾದರೂ—ರೇನಾ ಅವರಿಗೆ ಬಂತು. ೧೯೧೨ನೆಯ ಇಸ್ವಿಯಲ್ಲಿ ನಡೆದ ಪ್ರಸಿದ್ಧವಾದ "ರೋನೊ" ಗ್ಯಾಂಗ್ ಖಟ್ಲೆಯಲ್ಲಿಯ ವಕೀಲಿ ಪತ್ರವು ರೇನಾ ಅವರಿಗೇ ಸಿಕ್ಕಿತು. ಫ್ರೆಂಚ್ ವಕೀಲರಲ್ಲಿ ಅಗ್ರಗಣ್ಯನೆನಿಸಿದ "ಹೆನ್ರಿ ರಾಬರ್ಟ"ನೇ ರೇನಾ ಅವರಿಗೆ ಹೆಣ್ಣು ಕೊಟ್ಟ ಮಾವ. ×೧೯೧೮ರಲ್ಲಿ ಫ್ರೆಂಚ್ ಸೇನಾಪತಿಯಾದ "ಫ್ಲೋಕ್" ಇವರೊಂದಿಗೆ ಸೈಬೇರಿಯಾ ಭಾಗದಲ್ಲಿ ರೇನಾ ಅವರು ತುಂಬ ಕೌಶಲ್ಯದ ಕಾರ್ಯವನ್ನು ಮಾಡಿದರು. ಅವರ ಮುಂದೆ "ವ್ಲ್ಯಾಡಿಯೋಸ್ಟಾಕದ" ವರೆಗೆ ಪ್ರವಾಸ ಬೆಳೆಸಿದರು. × ಮುಂದೆ ಜಪಾನ್ ಅಮೇರಿಕಾ ಮಾರ್ಗವಾಗಿ ಫ್ರಾನ್ಸಿಗೆ ಮರಳಿ ಬಂದರು.

೧೯೩೦ರಲ್ಲಿ "ಟಾರ್ಡಿಯೇ" ಮಂತ್ರಿಮಂಡಲದ ಅರ್ಥಸಚಿವರೆಂದು ರೇನಾ ಅವರು ನೇಮಿಸಲ್ಪಟ್ಟರು. ೧೯೩೧-೩೨ನೆಯ ಇಸ್ವಿಯಲ್ಲಿ "ಲೋವೆಲ್" ಇವರ ಕ್ಯಾಬಿನೆಟ್ಟಿನಲ್ಲಿ ವಸಾಹತಿನ ಮಂತ್ರಿಗಳೆಂದು ಇವರು ಕಾರ್ಯಮಾಡಿದರು. ಆ ಕಾಲಕ್ಕೆ ಫ್ರಾನ್ಸವು ಅಂತರರಾಷ್ಟ್ರೀಯ ವಸಾಹತುಗಳ ಕರವಾಗಿ ಒಂದು ದೊಡ್ಡ ಪ್ರದರ್ಶನ ನೆರೆಯಿಸುವ ತಯಾರಿಯಲ್ಲಿತ್ತು. × ೧೯೩೧ರ ಜುಲೈ ತಿಂಗಳಲ್ಲಿ ನಡೆದ ಮಾತು. ಪ್ರದರ್ಶನದ ತಯಾರಿಯು ತುಂಬ ಭರದಿಂದ ಸಾಗಿದೆ, ಆ ವೇಳೆಯಲ್ಲಿ 'ಫ್ರ್ಯಾಂಕೋ ಬ್ರಿಟನ್ ಅಸೋಸಿಯೇಶನ್' ಪರವಾಗಿ ಮಿ. ರಡ್ಯಾರ್ಡ್ ಕಿಪ್ಲಿಂಗ್ ಅವರು ಪ್ಯಾರಿಸಕ್ಕೆ ಭೆಟ್ಟಿ ಕೊಟ್ಟರು. ಅವರ ಸನ್ಮಾನಾರ್ಥವಾಗಿ ಏರ್ಪಡಿಸಿದ 'ಸವಿಯೂಟದ ಕಾಲಕ್ಕೆ ಮಾಡಿದ' ಪಾಲ್ ರೇನಾ ಅವರ. ಭಾಷಣವು ವಿದ್ವತ್‌ಪೂರ್ಣವಾದುದಾಗಿದ್ದಿತು. × ಗ್ರೇಟಬ್ರಿಟನಿನವರು ಪ್ರದರ್ಶನದಲ್ಲಿ ಅಂಗಡಿಯಿಡಲು ಒಲ್ಲೆವೆಂದ ಕಾರಣ, ಕಿಪ್ಲಿಂಗ್ ಅವರ ಸಮಕ್ಷಮವೇ ರೇನಾ ಅವರು ಖಂಡಿತವಾದ ಟೀಕೆಯನ್ನು ಮಾಡಿದರು.

ಕಳೆದೈದು ವರ್ಷಗಳಿಂದ ರೇನಾ ಅವರ ಹೆಸರು ಹೆಚ್ಚಾಗಿ ಕೇಳಬರುತ್ತಿದ್ದರೂ, ಅವರು ಅಲ್ಲಿಯ ಯಾವುದೊಂದು ಪಕ್ಷಕ್ಕೆ ಅಂಟಿಕೊಂಡಿರಲಿಲ್ಲ. ಅವರು ಕೇವಲ ಸ್ವತಂತ್ರ ವೃತ್ತಿಯವರು. × ಸಾಮಾನ್ಯವಾಗಿ ರೇನಾ ಅವರನ್ನು ಚರ್ಚಿಲ್ಲರಿಗೆ ಹೋಲಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಅದ ಸರಿಯೆಂದೂ ತೋರುವುದು. ಚರ್ಚಿಲ್ಲರಂತೆ ರೇನಾ ಅವರಾದರೂ ತಮ್ಮ ರಾಷ್ಟ್ರಕ್ಕೆ ಧಕ್ಕೆ ತಗಲಬಹುದೆಂಬ ಎಚ್ಚರಿಕೆಯನ್ನು ಆಗಾಗ ಕೊಡುತ್ತಲೆ ಬಂದಿದ್ದರು. "ಹೇರ್ ಲೋವೆಲ್" ಒಪ್ಪಂದವು ಹಾನಿಕಾರಕವಿದೆಯೆಂದು ರೇನಾ ಅವರಿಗೆ ತಿಳಿದಕೂಡಲೆ, ತಮಗೆ ಸ್ವತಃ ಜಡ್ಡಾಗಿದ್ದರೂ ಪಾರ್ಲಿಮೆಂಟಿನ ವರೆಗೆ ಬಂದು, ತುಂಬ ರಸವತ್ತಾದ ಭಾಷಣವನ್ನು ಮಾಡಿದರು.

ರೇನಾ ಎಂದರೆ ಫ್ರಾನ್ಸದ ಧೈರ್ಯವೆಂದು ಹೇಳಬಹುದು, ಆದರೆ ಆ ಧೈರ್ಯವು ಕಾರಣಾಂತರದಿಂದ ಕುಗ್ಗಿದಂತೆಯಾಯಿತು. ಯಾವ ವೇಳೆಯಲ್ಲಿ ಮಿತ್ರಪಕ್ಷದವರು ಯೋಗ್ಯ ಉಪಾಯ ಕೈಕೊಳ್ಳಬೇಕಾಗಿದ್ದಿತೋ ಆ ವೇಳೆಯಲ್ಲಿ ಅವರು ವಿಲಂಬ ಮಾಡಿದುದರಿಂದ ಕಾರ್ಯವೆಲ್ಲ ಕುಂದಿಹೋಯಿತು. ರೇನಾ ಅವರು ಒಮ್ಮೆ ಭಾಷಣ ಮಾಡುತ್ತ ಹೀಗೆಂದರು: "ತಡೆದು ಉಪಯೋಗವಿಲ್ಲ; ಈ ಪರಿಸ್ಥಿತಿಯನ್ನು ಅನುಸರಿಸಿ ಫ್ರಾನ್ಸಿನಲ್ಲಿಯ ಪ್ರತಿಯೊಬ್ಬ ನಾಗರಿಕನೂ ದೇಶಭಕ್ತನಾಗಬೇಕು. ಸಾಧ್ಯವಿದ್ದ ಎಲ್ಲ ಸ್ವಾರ್ಥತ್ಯಾಗವನ್ನು ಮಾಡಬೇಕು."

ದಲಾದಿಯರ್ ಮಂತ್ರಿಮಂಡಲದ ನಂತರ ಬಂದುದೇ ರೇನಾ ಅವರ ಮಂತ್ರಿಮಂಡಲ. ಇದು ಲೋಕಸತ್ತಾತ್ಮಕ ಪದ್ಧತಿಯಲ್ಲಿಯ ಒಂದುನೂರಾ ಐದನೆಯ ಮಂತ್ರಿಮಂಡಲವು. ಕಳೆದ ಎಪ್ಪತ್ತು ವರ್ಷಗಳಲ್ಲಿ ಈ ಬಗೆಯ ಸಂಯುಕ್ತ ಮಂತ್ರಿಮಂಡಲವು ಮೂರನೆಯದಿದ್ದು. ಅನೇಕ ಮಂತ್ರಿಮಂಡಲಗಳು ಬದಲಾದರೂ ಮೂಲಭೂತವಾದ ತತ್ವವು ಬದಲಾಗಿಲ್ಲ. ಫ್ರಾನ್ಸದವರಾಗಲಿ, ಇಂಗ್ಲೆಂಡಿನವರಾಗಲಿ, ತಮ್ಮ ಮಂತ್ರಿಮಂಡಲದವರು ಮಾಡುವ ಅಪರಾಧಗಳನ್ನು ನುಂಗಿಕೊಳ್ಳಲು ಸದಾ ಸಿದ್ಧರಿರುತ್ತಾರೆ. ರೇನಾ ಅವರು ಮುಖ್ಯ ಪ್ರಧಾನರಾದ ಕೂಡಲೆ ಪರರಾಷ್ಟ್ರೀಯ ಖಾತೆಯನ್ನು ತಾವು ತೆಗೆದುಕೊಂಡು, ದಲಾದಿಯರರ ಮೇಲೆ ಯುದ್ಧ ಮತ್ತು ಸಂರಕ್ಷಣೆಯ ಹೊಣೆಯನ್ನು ಹೊರಸಿದರು. ಇಲ್ಲಿಯೇ ಅನರ್ಥಕ್ಕೆ ಪ್ರಾರಂಭವಾಯಿತು. ಮುಂದೆ ಆಕಸ್ಮಿಕ ಘಟನೆಗಳ ಮೂಲಕ ಯುದ್ಧರಂಗದ ರೂಪವು ಬದಲಾಗಿ, ಭಿನ್ನಾಭಿಪ್ರಾಯಗಳು ಬರಹತ್ತಿದುವು. ಫ್ರಾನ್ಸ್ ದೇಶವು ಬದುಕಬೇಕಾದರೆ ತನ್ನ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದೂ, ಆ ತ್ಯಾಗಬುದ್ಧಿಯಿಂದಲೆ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂದೂ ಅವರ ಅಭಿಮತ. ಯುದ್ಧದ ದಿನಗಳಲ್ಲಿ ಒಂದು ದಿನ—ಅದೇಕೆ ಒಂದು ಗಂಟೆಕಾಲ—ವಿಲಂಬವಾದರೂ ಅನೇಕ ದುರ್ಘಟನೆಗಳು ಉದ್ಭೂತವಾಗುವುವು. ಅವುಗಳ ಮೂಲಕ ತಪ್ಪಿಲ್ಲದ ಸಾಮಾನ್ಯ ಜನತೆಯು ಕಂಗೆಡುವುದು. ಕಂಗೆಟ್ಟ ಜನತೆಯನ್ನು ಅಂಕದಲ್ಲಿಡುವುದೂ ತುಂಬ ಕಠಿನವಾಗುವದು. ಈ ಸನ್ನಿವೇಶಗಳ ಮೂಲಕ ರೇನಾ ಮಂತ್ರಿಮಂಡಲವು ರಾಜಿನಾಮೆ ಕೊಡಬೇಕಾಯಿತು

ಇವರ ನಂತರ ಬಂದ 'ಪೆಟಾನ್' ಮಂತ್ರಿಮಂಡಲವು ಜರ್ಮನಿಯ ಸಂಗ ಒಪ್ಪಂದ ಮಾಡಿಕೊಂಡದ್ದು ಸರ್ವಶ್ರುತವಾಗಿದೆ. ಸೋಲುಗೆಲವಿನ ಮೇಲೆ ಯಾವುದೊಂದು ವ್ಯಕ್ತಿಯ ಬೆಲೆಯನ್ನು ಕಟ್ಟುವುದು ಯೋಗ್ಯವಲ್ಲ. ಕಾರ್ಯಶಕ್ತಿಯೇ ಅವರವರ ಯೋಗ್ಯವಾದ [illegible]ಗಲ್ಲು. ಅಚಲವಾದ ಶ್ರದ್ಧೆಯಿದ್ದ [illegible] ಭಕ್ತರಾದ ರೇನಾ ಅವರ ಬೆಲೆಯ[illegible] ಅವರು ಹಿಂದೆ ಮಾಡಿದ ಕಾರ್ಯ[illegible]ಲೇ ಅಳೆಯ ಬೇಕಲ್ಲವೇ?

—ಜಯ

HALFTONE & LINE BLOCK MAKING UNDERTAKEN

Sharada Press, MANGALOR

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ಸಿನೆಮಾ ಪುಟ

ಭಾರತದಲ್ಲಿ ಶ್ರೇಷ್ಠವಾದ ಚಿತ್ರ ನಿರ್ಮಾಣವಾಗಲಿ

'ಭಾರತದ ಸಿನೆಮಾ ನಿರ್ಮಾಪಕರು, ತಮ್ಮ ಚಿತ್ರಗಳನ್ನು ವಿದೇಶಗಳಲ್ಲಿ ಪ್ರದರ್ಶಿಸುವಂತೆ ಮಾಡಬೇಕೆಂದು ಕನವರಿಸುತ್ತಿದ್ದಾರೆ; ಆದರೆ ತಮ್ಮ ಇಂದಿನ ಕ್ರಮವನ್ನು ಸರಿಗೊಳಿಸಿ, ತಮ್ಮ ಚಿತ್ರಗಳಲ್ಲಿ ನಿಜವಾದ ಭಾರತದ ಜೀವನವು ತೋರುವಂತೆ ಮಾಡದ ವಿನಹ ಅವರು ವಿದೇಶಗಳಲ್ಲಿ ತೋರಿಸುವ ಸಾಹಸಮಾಡುವುದು ಅಬದ್ಧವಾಗಿದೆ. ಉತ್ತಮ ಲೇಖಕರನ್ನು ಒಟ್ಟುಗೂಡಿಸಿ, ಶ್ರೇಷ್ಠ ಕಲಾವಿದರನ್ನು ಜತೆಗೊಳಿಸಿ, ಭಾರತದ ನಿಜವಾದ ಜನಜೀವನ ಸ್ವರೂಪವನು ಕಂಡು ಆ ಮೇಲೆ ಒಳ್ಳೆಯ ಚಿತ್ರಗಳನ್ನು ತಯಾರಿಸಲು ಚಿತ್ರ ನಿರ್ಮಾಪಕರು ಕೈ ಹಚ್ಚಲಿ. ಆಗ ಮಾತ್ರ ಭಾರತದ ಸಿನೆಮಾ ಉದ್ಯೋಗವು ಅಭಿವೃದ್ಧಿ ಹೊಂದಿ ಅದರಿಂದ ನಿಜವಾದ ಲೋಕೋಪಕಾರವಾಗುವುದು.' ಹೀಗೆಂದು ಬೊಂಬೇ ಕ್ರಾನಿಕಲ್ ಪತ್ರಿಕೆಯಲ್ಲಿ ಶ್ರೀ. ಡಿ. ಜಿ. ವ್ಯಾಸರು ಒಂದು ವಿಚಾರಪೂರ್ಣವಾದ ಲೇಖನವನ್ನು ಬರೆದು, ಭಾರತೀಯ ಸಿನೆಮಾ ನಿರ್ಮಾಪಕರಿಗೆ ಸಲಹೆಯಿತ್ತಿರುವರು.

ಇಂದಿನ ಚಿತ್ರಗಳ ದೋಷ

ಅವರು ಇಂದಿನ ಭಾರತೀಯ ಚಿತ್ರಗಳಲ್ಲಿರುವ ದೋಷ ರಾಶಿಗಳನ್ನು ವಿಮರ್ಶಿಸುತ್ತಾ, ಇಂದಿನ ಪೌರಾಣಿಕಗಳು ಭಾವನಾಶೂನ್ಯವಾಗಿವೆ, ಚಾರಿತ್ರಿಕಗಳು ಇತಿಹಾಸದ ತುಣುಕುಗಳನ್ನೇ ಕಂಡಿರುವುದಿಲ್ಲ, ಸಾಮಾಜಿಕಗಳಲ್ಲಿ ಪ್ರೇಮ ಕಥೆಗಳನ್ನುಳಿದು ಇತರ ವರ್ಣನಾಂಶಗಳಿರುವ ಚಿತ್ರಗಳೇ ಅಪರೂಪವಾಗಿವೆ, ಹೀಗಿ ಸಾಮಾಜಿಕ ಚಿತ್ರಗಳು ಒಂದೇ ರೀತಿಯ ಕಥೆ ವರ್ಣನೆಗಳಿಂದ ಕೂಡಿ ಮನಸ್ಸಿಗೆ ಬೇಸರವನ್ನು ಹುಟ್ಟಿಸುವಂತಿವೆಯೆಂದು ಅಭಿಪ್ರಾಯಪಟ್ಟಿರುವರು.

ಇಂದಿನ ಚಿತ್ರಗಳಲ್ಲಿ, ಭಾರತದ ನೈಜ ಸ್ವರೂಪವು ಹಿಂದೆ ಹೇಗಿತ್ತು, ಇಂದಾದರೂ ಹೇಗಿದೆ ಎಂಬ ಕುರಿತು ತೋರಿಸಲು ಯಾವ ಜಯಶೀಲಪ್ರಾಯ ಪ್ರಯತ್ನವೂ ನಡೆದಂತೆ ಕಂಡುಬರುವುದಿಲ್ಲವೆಂದಿರುವರು.

ಕೆಲವು ಸೂಚನೆಗಳು

ಚಿತ್ರ ನಿರ್ಮಾಪಕರು ಶ್ರೀಕೃಷ್ಣನನ್ನು ಚಿತ್ರಿಸುವಾಗ, ಆತನನ್ನು ಒಬ್ಬ ಕುಶಲ ರಾಜನೀತಿಜ್ಞನೆಂದೂ, ಸರ್ವಾಧಿಕಾರಿಯೆಂದೂ ಚಿತ್ರಿಸಬೇಕಲ್ಲದೆ, ಗೋಪಿಯರ ಮಧ್ಯೇ ಕುಣಿಯುತ್ತಿದ್ದ ವಿಟಪುರುಷನಾಗಿಯಲ್ಲ, ಚಾಣಕ್ಯನನ್ನು ಒಬ್ಬ ರಾಜನೀತಿಜ್ಞನೆಂದೂ, ಆಡಳಿತಗಾರನೆಂದೂ, ರಾಜ್ಯನೀತಿಯ ಮೊದಲ ಪ್ರಸಾರಕನೆಂದೂ ಚಿತ್ರಿಸಬೇಕಲ್ಲದೆ ಬರಿಯ ಹಟಮಾರಿ ಬ್ರಾಹ್ಮಣನೆಂದಲ್ಲ. ಹೀಗೆಯೇ ಬುದ್ಧನನ್ನು ಶಾಂತಿತತ್ವವನ್ನು ಸಾರಿದ ಮಹಾಪುರುಷನೆಂದೂ, ಮುಕ್ತಿಯ ಸುಖವನ್ನು ಹೇಳಿದವನೆಂದೂ, ಮುಸ್ಲಿಂ ರಾಜರನ್ನು, ಸಾಧುಸಂತರನ್ನೂ, ಕವಿಲೇಖಕರನ್ನೂ, ರಾಜಕಾರಣ ಪುರುಷರನ್ನು ಹೀಗೆ ಆಯಾಯ ಜೀವನ ಭಾಗದಲ್ಲಿ ಕುಶಲರಾದವರನ್ನು ಅವರವರ ಕಾಲದ ಕೃತಿಯ ಆಧಾರಗಳಿಂದ ಭಾರತ ಭೂಮಿಯ ನೈಜ ಚಿತ್ರವು ತೋರುವಂತೆ ಚಿತ್ರ ನಿರ್ಮಾಣ ಮಾಡಬೇಕೆಂದು ಬರೆದಿರುವರು. ಇದರೊಡನೆ ಅವರು ಇಂದಿನ ಭಾರತದ ರಾಜಕಾರಣ ಪುರುಷರ ಜೀವನವನ್ನು ಚಿತ್ರಿಸುವ ಕಥೆಗಳು ಅದ್ಭುತ ರಮ್ಯಗಳಾಗುವವೆಂದೂ ಸೂಚಿಸುತ್ತಾರೆ.

ಗಾಂಧೀ ಜೀವನ ಚಿತ್ರ

ಅನೇಕ ವರ್ತಮಾನ ಪತ್ರಗಳ ಚಿತ್ರಗಳಿಂದ, ಅಖಿಲ ಭೂಖಂಡದ ಸಂಚಾರ ಚಿತ್ರ ನ್ಯೂಸ್‌ಗಳಿಂದ, ಶ್ರೀ ಎ. ಕೆ. ಚೆಟ್ಟಿಯಾರರು ತಯಾರಿಸಿದ 'ಗಾಂಧೀ' ಚಿತ್ರವು ಗಾಂಧೀಜಿಯವರ ಜನನ ದಿನದಂದು ಈ ತಿಂಗಳ ಕೊನೆಗೆ ಪ್ರದರ್ಶಿಸಲ್ಪಡುವುದಾಗಿ ತಿಳಿದು ಬರುತ್ತದೆ. ಇದರಲ್ಲಿ ಮಹಾತ್ಮರು ಬೇರೆ ಬೇರೆ ದೇಶಗಳಲ್ಲಿ ನಡೆದ ಘಟನೆಗಳ ಚಿತ್ರೀಕರಣವಿದೆ. ಇದು ತಮಿಳು, ತೆಲುಗು, ಹಿಂದೀ ಭಾಷೆಗಳಲ್ಲಿ ಪ್ರದರ್ಶಿಸಲ್ಪಡುವುದು.

ಪಗ್ನೀಸರಿಗೆ ೨೦,೦೦೦ ರೂಪಾಯಿಗಳು

ಪ್ರಕಾಶ ಸ್ಟುಡಿಯೋದವರು ತಮ್ಮ 'ನರ್ಸೀ ಭಾಗತ್' ಚಿತ್ರವನ್ನು ಅತ್ಯಂತ ವೈಭವದಿಂದಲೂ ಅತ್ಯಂತ ಶ್ರೇಷ್ಠತರಗತಿಯದನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದರಲ್ಲಿ ಪಗ್ನೀಸ್ ಮತ್ತು ದುರ್ಗಾಖೋಟೆ ಇವರು ಪಾತ್ರವಹಿಸುವರು. ಪಗ್ನೀಸ್ ಒಬ್ಬರಿಗೇ ೨೦,೦೦೦ ರೂಪಾಯಿಗಳ ಸಾಲಕೊಡುವುದಾಗಿ ತೀರ್ಮಾನವಾಗಿದೆಯೆಂದು ತಿಳಿದುಬರುತ್ತದೆ. ಒಟ್ಟು ಇದರ ಖರ್ಚು ಎರಡುವರೆ ಲಕ್ಷ ರೂಪಾಯಿಗಳಿಗಿಂತಲೂ ಮಿಗಬಹುದೆಂದು ತಿಳಿದುಬಂದಿದೆ.

ಅಮೃತ

ನವಯುಗ ಚಿತ್ರ ಕಂಪೆನಿಯವರ ಮುಂದಿನ ಚಿತ್ರವು 'ಅಮೃತ' ಶ್ರೀ. ಖಾಂಡೇಕರ್‌ರವರ ಕಥೆ. ಬಾಬುರಾವ್ ಪೆಂಡೇಕರ್, ಮೀನಾಕ್ಷಿ, ಲಲಿತಾ ಪವಾ

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯೂ ಭಯಂಕರವಾದ ಗಾಯ—ಎರಡೂ ಒಂದೇ ಸಮನು. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಪಡಿಸಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೊರೆಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದಲ್ಲಿ ಕ್ರಿಮಿಗಳು ನಾಟಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಸಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ರ್ ನಾಲಿ [illegible] ಯವರು
ಪಾತ್ರವಹಿಸುವ[illegible]

ಸ್ನೇಹಬಂಧನ

ಗ್ರೇಟ್ ಇಂಡಿಯನ್ ಪಿಕ್ಚರ್ಸಿನವರ ಸ್ನೇಹಬಂಧನ ಚಿತ್ರದಲ್ಲಿ [illegible] ಪಾತ್ರವಹಿಸುವಳು [illegible] ಸೇರಿರುವಳಾಗಿ ತಿಳಿದುಬರುತ್ತದೆ. ಗ್ರೇಟ್ ಇಂಡಿಯನ್ ಪಿಕ್ಚರ್ಸ್ ಎಂಬುದು [illegible] ಮೌಂಟಿನ ಒಂದು ಸೋದರೀ ಸಂಸ್ಥೆಯಾಗಿದೆ.

ದಿವಂಗತ ಚುನ್ನೀಲಾಲ ಪರೇಕರು

ನಿರ್ದೇಶಕರಾದ ಚುನ್ನೀಲಾಲ ಪರೇಕರವರು ಕಳೆದವಾರ ದಿವಂಗತರಾದರು. ವಾಡಿಯಾ, ಮೋಹನ ಪಿಕ್ಚರ್ಸ್ ಮತ್ತು ವಿಷ್ಣು ಸಿನೆಟೋನವರ ಚಿತ್ರಗಳನ್ನು ಅವರು ನಿರ್ದೇಶಿಸಿದ್ದರು.

ಸಾಧನಾಬೋಸ್

'ರೂಪವಾಣಿ' ಪತ್ರಿಕೆಯವರು ಏರ್ಪಡಿಸಿದ ಒಂದು ಸ್ಪರ್ಧೆಯಲ್ಲಿ ಸಾಧನಾ ಬೋಸಳು ಲೀಲಾ ದೇಸಾಯಿಗಿಂತ ಹೆಚ್ಚು ಮತಗಳನ್ನು ನೃತ್ಯದ ವಿಷಯದಲ್ಲಿ ಪಡೆದಿರುವಳು. ಲೀಲಾ ದೇಸಾಯಿಯು ಬಂಗಾಳದ 'ಸೌಂದರ್ಯರಾಣಿ' ಎಂದು ಹೆಸರುಪಡೆದಿದ್ದಳು.

ಕಾನನಬಾಲ

[illegible]

ಸ್ಪರ್ಧೆಯಲ್ಲಿ ಕಾನನಬಾಲೆಯು ಉತ್ತಮ ಹಾಡುಗಾರ್ತಿಯೆಂದು ಮಾತ್ರವಲ್ಲ, ಸಕಲ ವಿಧದ ಅಭಿನಯಗಳಲ್ಲಿ ಮತ್ತೆ ಎಲ್ಲರಿಗಿಂತಲೂ ಮಿಗಿಲಾದ ನಟಿಯೆಂದು ಬಹುಮತಗಳನ್ನು ಪಡೆದಿರುವಳು.

ನಿರ್ದೇಶಕ ಸಾರ್ವಭೌಮ

ದೇವದಾಸ ಚಿತ್ರವನ್ನು ನಿರ್ದೇಶಿಸಿದ ಬರುವಾರವರು ನಿರ್ದೇಶಕ ಸಾರ್ವಭೌಮರೆಂದ ಹೆಸರು ಪಡೆದರು. ದೇವದಾಸ ಚಿತ್ರವೂ ಚಿತ್ರ ಸಾರ್ವಭೌಮವೆಂದು ಕೀರ್ತಿ ಪಡೆದಿದೆ.

ಶಾಂತಾ ಆಪ್ಟೆ ಸಾವಿತ್ರಿ ಪಾತ್ರದಲ್ಲಿ

ಶಾಂತಾ ಆಪ್ಟೆಯು ತಮಿಳು ಚಿತ್ರವೊಂದರಲ್ಲಿ ಸಾವಿತ್ರಿ ಪಾತ್ರವಹಿಸುವಳಾಗಿ ತಿಳಿದಿದೆ. ಶ್ರೀ. ವೈ. ವಿ. ರಾವ್ ಇವರು ನಿರ್ದೇಶಕರು. ತ್ಯಾಗರಾಜ ಭಾಗವತರು ನಾಯಕಪಾತ್ರವನ್ನು ವಹಿಸುವುದಿಲ್ಲವಾಗಿ ತಿಳಿದಿದೆ.

ಉದಯಶಂಕರರ ವಿಜಯ ಯಾತ್ರೆ

ಭರತ ನಾಟ್ಯದ ಪರಿಪೂರ್ಣಾಂಗದ ಒಂದು ಮಂಡಳಿಯನ್ನು ಸೇರಿಸಿಕೊಂಡು ಉದಯಶಂಕರರು ಅಖಿಲ ಭಾರತ ಪ್ರವಾಸಕ್ಕೆ ಬೇಗನೇ ತೆರಳಲಿರುವರೆಂ

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್ ಕೋರ್ಟು ನಂಬ್ರ 72/1921 ಕ್ರಮ ಅರ್ಜಿ ನಂಬ್ರ 149/1922ನೇ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಬಾಬ್ತು ತಾ. 28-7-39ರ ಲಾಗಾಯ್ತು ತಾ. 25-7-40ರ ವರೆಗಿನ ಜಮಾ ಖರ್ಚಿನ ವಿವರ

ಈ ದಿನ ಮಹಾಸಭೆಯಲ್ಲಿ ಆದ ನಿರ್ಣಯ ಪ್ರಕಾರ

	ಜಮಾ ವಿವರ	ನಗದು			ಬೆಳ್ತಿಗೆ			ಸುಗ್ಗಿ ಬೆಳ್ತಿಗೆ			ಮಸ್ಕತಿ			ಭತ್ತ			ಕ್ಯಾ
		ರೂ	ಆ	ಪೈ	ಮು	ಕ	ಸೇ	ಮು	ಕ	ಸೇ	ಮು	ಕ	ಸೇ	ಮು	ಕ	ಸೇ	
	ಗುದಸ್ತಾ ಶಿಲ್ಕು	31	7	7	0	2	5¼										
1	ವಕ್ಕಲಗಳು ಕೊಟ್ಟದ್ದು ತೀರ್ವೆಗೆ ಹಾಕಿದಂತೆ ಬಂದದ್ದು ಕೂಡಾ ವಕ್ಕಲ ಹುಟ್ಟುವಳಿ ಜಮಾ	335	0	4	24	0	0	6	1	0	32	1	10¼	34	0	0	364
2	ಅಂಮೃತ ಪಡಿ ಬಾಬ್ತು ಜಮಾ				3	1	5										
3	ಮಾರಿಯಮ್ಮ ದೇವರ ಭಂಡಾರದಿಂದ ಖರ್ಚಿನ ಬಗ್ಗೆ ಪಡೆದದ್ದು	62	0	0	4	0	6½										50
4	[illegible] ಪಡೆದ ಅಕ್ಕಿ ವ ಕ್ಯಾ ಜಮಾ				12	1	12										275
5	ಗೇಣಿ ಭತ್ತ ವ ಅಕ್ಕಿ ವಿಕ್ರಿತ ಜಮಾ	98	2	8													
6	ಕಟ್ಟೋಣ ಬಾಡಿಗೆ ಜಮಾ	4	8	0													
7	ಅನಂತವ್ರತದ ಖರ್ಚಿನ ಬಗ್ಗೆ ಬಂದದ್ದು	50	0	0													
8	ಶ್ರೀ[illegible] ಜಮಾ	46	9	3													
9	[illegible]ದೆ ಕಾಣಿಕೆ ಜಮಾ	0	8	0													
10	[illegible] ಕಟ್ಟಿದ ಬಾಬ್ತು ಜಮಾ	52	0	0													
11	[illegible] ಕಾಣಿಕೆ ಜಮಾ	12	13	6													
	ಜುಮಲಾ	693	1	4	45	0	0¾	6	1	0	32	1	10¼	34	0	0	689

ಶ್ರೀಧರ ಶ್ಯಾನುಭಾಗ, ಪಟೇಲ್.
5—8—40.

	ಖರ್ಚು ವಿವರ	ನಗದು			ಬೆಳ್ತಿಗೆ			ಸುಗ್ಗಿ ಬೆಳ್ತಿಗೆ			ಮಸ್ಕತಿ			ಭತ್ತ			ಕ್ಯಾ
		ರೂ	ಆ	ಪೈ	ಮು	ಕ	ಸೇ	ಮು	ಕ	ಸೇ	ಮು	ಕ	ಸೇ	ಮು	ಕ	ಸೇ	
1	ಆಸ್ತಿಗಳ ತೀರ್ವೆಗೆ ನಗದಿ ವ ವಕ್ಕಲ ಮುಖಾಂತರ ಕೂಡಾ ಖರ್ಚು	139	15	0													
2	ದೇವಳ ಕಮಿಟಿ ಆಫೀಸು, ಮದ್ರಾಸು.	8	4	0													
3	ಹಿಂದೂ ರಿಲೀಜಿಯಸ್ ಎಂಡೋವ್ಮೆಂಟ್ ಬೋರ್ಡು ಮದ್ರಾಸು	8	4	0													
4	ಪಾರಾಯಣ ವ ಇತರ ಹಸೂರಿ ಖರ್ಚು	18	10	11													
5	ಶಾಶ್ವತ ಸಂತರ್ಪಣೆ ಖರ್ಚು	17	4	0													
6	ಅನಂತವ್ರತಕ್ಕೆ ಬಂದದ್ದು ಖರ್ಚು	49	14	9													
7	ಉತ್ಸವಗಳ ಖರ್ಚು	52	14	6													
8	ಸಮಾರಾಧನೆಗಳ ಖರ್ಚು	50	0	11	1	1	8¼										50
9	ವ್ಯವಹರಣೆಗಳ ಖರ್ಚು	27	11	6													
10	ನಂದಾದೀಪಕ್ಕೆ ಎಂಣೆ ತ. 20ರ ಕ್ರಯ ಖರ್ಚು	100	6	4													
11	ನೌಕರರ ಸಂಬಳ ಖರ್ಚು	87	0	0													
12	ತೆಂಗಿನ ಕ್ಯಾ ನಿತ್ಯ ಸಮರ್ಪಣೆ ಬಗ್ಗೆ ಕ್ರಯದ ಕ್ಯಾ ಕೂಡಾ ಖರ್ಚು	10	6	0													639
13	ನಿತ್ಯ ಸಮರ್ಪಣೆ ಎಲೆ ಅಡಿಕೆ ಬಗ್ಗೆ	4	4	9													
14	ಬತ್ತಿ ಬಗ್ಗೆ	4	4	9													
15	ಅಂಮೃತಪಡಿ ಕ್ರಯಕ್ಕೆ ಪಡೆದ ಅಕ್ಕಿಗೆ ಸಂದದ್ದು	64	13	6	12	1	12										
16	ಗೇಣಿ ಬಾಬ್ತು ವ ಅಮ್ಮೃತಪಡಿಗೆ ಬಂದದ್ದು ಖರ್ಚು				30	2	2										
17	ವಿಕ್ರಿತ ಅಕ್ಕಿ ವ ಭತ್ತ ಖರ್ಚು							6	1	0	4	2	0	34	0	0	
18	ಆಖೇರು ಶಿಲ್ಕು	48	14	5	0	0	6¼				27	2	10½				
	ಜುಮಲಾ	693	1	4	45	0	0¾	6	1	0	32	1		34	0	0	689

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಬ್ ಕೋರ್ಟು ನಂಬ್ರ 47 1921 ಕ್ರಮ ಅರ್ಜಿ ನಂಬ್ರ 142/1922ನೇ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ಹಳೇ ಮಾರಿಮ್ಮ ದೇವರ ಭಂಡಾರದ ಬಾಬ್ತು ತಾ. 28-7-39ರ ಲಾಗಾಯ್ತು ತಾ. 25-7-40ರ ವರೆಗಿನ ಜಮಾ ಖರ್ಚಿನ ವಿವರ.

(ಈ ದಿನ ಮಹಾಸಭೆಯಲ್ಲಿ ಆದ ನಿರ್ಣಯ ಪ್ರಕಾರ)

	ಜಮಾ ವಿವರ	ನಗದು			ವವನು	ಬೆಳ್ತಿಗೆ			ಮಸ್ಕತಿ			ಕ್ಯಾ	ಶಿಯಾಳ	ಹುಲ್ಲು
		ರೂ.	ಆ.	ಪೈ		ಮು	ಕ	ಸೇ	ಮು	ಕ	ಸೇ			
	ಗುದಸ್ತಾ ಶಿಲ್ಕು	466	1	7					28	1	6¼			
1	ಗದ್ದಿಗೆ ಪೂಜೆ ಬಾಬ್ತು ಜಮಾ	1419	2	8										
2	ಕುಂಕುಮಾರ್ಚನೆ ಬಾಬ್ತು ಜಮಾ	69	6	0										
3	ಮಾರಿಪೂಜೆ ಬಾಬ್ತು ಜಮಾ	282	5	5										
4	ವವನು ಜಮಾ	...	...	...	4									
5	ವವನು ವ ಚಿನ್ನ ವಿಕ್ರಿತ ಜಮಾ	194	9	0										
6	ಸಗ್ಗಿ ವ ಆಸ್ತಿ ಹುಟ್ಟುವಳಿ ಜಮಾ	175	4	3		4	0	0	115					100
7	72/30ನೇ ಆಸ್ತಿಯಿಂದ ಉತ್ಪತ್ತಿ	156	8	0								415	429	
8	ರಾಂಣ್ಯದಕೇರಿ ಉತ್ಪತ್ತಿ	52	12	0								28	40	
9	ಗೇಣಿ ಅಕ್ಕಿ ವಿಕ್ರಿತ ಜಮಾ	80	1	0										
10	ನವರಾತ್ರಿ ಬಾಬ್ತು ಜಮಾ	9	9	3		3	1	10						
11	ಹಳೆ ಬಿದಿರು ವಿಕ್ರಿತ ಜಮಾ	8	0	0										
12	ಮಾರಿಗುಡಿ ಜೀರ್ಣೋದ್ಧಾರ	2	0	0										
	ಜುಮಲಾ	2915	11	2	4	7	1	10	145	1	6¼	468	469	600

ಹರಿಕೆಗೆ ಬಂದ ಮುಗುಲಿ 14, ಬೊಟ್ಟು 10, ದಾರಿಮಣಿ 1, ಕರಿಮಣಿ 1, ಗುದಸ್ತಶಿಲ್ಕು ಕೂಡಾ ಬೆಳ್ಳಿತೂಕ 278 ಇರುತ್ತದೆ.
5—8—40. ಶ್ರೀಧರ ಶ್ಯಾನುಭಾಗ, ಪಟೇಲ್.

	ಖರ್ಚು ವಿವರ	ನಗದು			ವವನು	ಬೆಳ್ತಿಗೆ			ಮಸ್ಕತಿ			ಕ್ಯಾ	ಶಿಯಾಳ	ಹುಲ್ಲು
		ರೂ.	ಆ.	ಪೈ		ಮು	ಕ	ಸೇ	ಮು	ಕ	ಸೇ			
1	ಗದ್ದಿಗೆಪೂಜೆ ಬಾಬ್ತು ಖರ್ಚು	162	8	10								315	450	
2	ಕುಂಕುಮಾರ್ಚನೆ ಬಾಬ್ತು ಖರ್ಚು	40	4	0										
3	ವವನು ವ ಚಿನ್ನ 2 ನಿಕ್ಕಲ ಹಾವಳಿ ತೂಕ ಖರ್ಚು				4									
4	ಮಾರಿಪೂಜೆಗಳ ಬಾಬ್ತು ಖರ್ಚು	264	14	8		0	2	0	12	0	5¾	97		
5	ನವರಾತ್ರಿ ಬಾಬ್ತು ಖರ್ಚು	132	0	9		2	1	3½				25		
6	ವ್ಯವಹರಣೆ ಖರ್ಚು	304	10	6										
7	ಆಸ್ತಿಗಳ ತೀರ್ವೆ ಖರ್ಚು	198	7	0										
8	ಶ್ರೀ ಮಾರಿಗುಡಿ ವ ವೆಂಕಟ್ರಮಣ ದೇವಸ್ಥಾನಕ್ಕೆ ಹಸೂರಿ ಖರ್ಚು	401	9	11		4	1	6½				31	19	100
9	ಮೂಲಗೇಣಿ ಬಾಬ್ತು ತೆತ್ತದ್ದು	6	0	6										
10	72/30ನೇ ಆಸ್ತಿಯ ಕೃತ ಖರ್ಚು	191	14	6										500
11	ನೌಕರರ ಸಂಬಳ ಖರ್ಚು	548	12	0					42	0	0			
12	ರಾಂಣ್ಯದಕೇರಿ ಕೃತಖರ್ಚು	8	12	0										
13	ಮಾರಿಗುಡಿ ಜೀರ್ಣೋದ್ಧಾರ ಬಗ್ಗೆ	403	0	7					3	1	7			
14	ಹಿಂದು ರಿಲಿಜಸ್ ಬೋರ್ಡು ಮತ್ತು ಕಮಿಟಿ ಆಫೀಸಿಗೆ ಖರ್ಚು	200	0	0										
15.	ವಿಕ್ರಿತ ಅಕ್ಕಿ ಖರ್ಚು								21	0	0			
16	ಆಖೇರು ಶಿಲ್ಕು	46	11	11					64	2	7¼			
	ಜುಮಲಾ	2915	11	2	4	7	1	10	143	1	6¼	468	469	600

ಶಿಲ್ಕು ಹರಿಕೆಗೆ ಬಂದ ಮ[illegible]14, ಬೊಟ್ಟು 10, ದಾರಿಮಣಿ 1, ಕರಿಮಣಿ 1, ಬೆಳ್ಳಿ ತೂಕ ಗುದಸ್ತ ಶಿಲ್ಕು ಕೂಡ 278.
15—8—40. ಶ್ರೀಧರ ಶ್ಯಾನುಭಾಗ, ಪಟೇಲ್.

ಸೋಜಿಗಗಳು!

ಪ್ರಪಂಚದಲ್ಲಿ ವಿಚಿತ್ರಗಳು ದಿನದಿನವೂ ನಡೆಯುತ್ತಾ ಇವೆ!

ಕಾನಪುರ ವಕೀಲರೊಬ್ಬರ ಗುಮಾಸ್ತನಾದ ಶ್ಯಾಮನಾಥನೆಂಬವನನ್ನು 'ಹಿಪ್ನೋಟಿಸಂ'ನಿಂದ ಒಬ್ಬ ಸಾಧುವು ಇಪ್ಪತ್ತು ಮೈಲುಗಳ ದೂರಕ್ಕೊಯ್ದುಬಿಟ್ಟನೆಂದು ತಿಳಿದಿದೆ.

—ಇದರ ಕಥೆ ಹೀಗಿದೆ: ಶ್ಯಾಮನಾಥನು ಒಂದು ಮುಂಜಾನೆ ಸಂಚರಿಸುತ್ತಿರುವಾಗ ಒಬ್ಬ ಸಾಧುವು ಬಂದು ಧರ್ಮ ಕೇಳಿದನು; ತನ್ನಲ್ಲಿ ದುಡ್ಡಿಲ್ಲವೆಂದು ಶ್ಯಾಮನಾಥನು ಹೇಳಲು ನೀನು ಸುಳ್ಳು ಹೇಳುತಿದ್ದೀ, ಕಣ್ಣು ಮುಚ್ಚು ಎಂದು ಸಾಧು ಹೇಳಿದ. ಶ್ಯಾಮನಾಥನು ಹಾಗೆಮಾಡಲು, ಮುಂದೆ ಆತನಿಗೆ ಸ್ಮೃತಿ ತಪ್ಪಿತು. ಮತ್ತೆ ಆತನು ಇಪ್ಪತ್ತು ಮೈಲು ದೂರದ ಗ್ರಾಮವೊಂದರಲ್ಲಿ ಎಚ್ಚರ ಹೊಂದಿದನು. ಹೀಗೆ ಪಯನಿಯರ್ ಪತ್ರಿಕೆಯಲ್ಲಿ ಈ ಸುದ್ದಿ ಬಂದಿದೆ.

—ಆದರೆ ಮತ್ತೆ ಎಲ್ಲಿ ಹುಡುಕಿದರೂ ಆ ಸಾಧುವಿನ ಪತ್ತೆಯೇ ಇಲ್ಲವೆಂದೂ ತಿಳಿಯುತ್ತದೆ.

◈

ಮುಜಫರ್‌ಪುರದಲ್ಲಿ ಇನ್ನೊಂದು ವಿಚಿತ್ರ ನಡೆಯಿತು!

—ಆಕಾಶದಿಂದ ಜೀವಂತ ಮೀನುಗಳ ಮಳೆ ಸುರಿಯಿತು! ಈ ಮೀನುಗಳು ಬಿದ್ದ ಸ್ಥಳದ ಸಮೀಪದಲ್ಲಿ ಯಾವುದೇ ಕೊಳವಾಗಲಿ, ನದಿಯಾಗಲಿ ಇರುವುದಿಲ್ಲ. ಆದಕಾರಣ ಇವು ಆಕಾಶದಿಂದಲೇ ಬಿದ್ದಿರಬೇಕೆಂದು ತಿಳಿಯಲಾಯಿತು.

—ಸ್ಥಳೀಯ ವೈಜ್ಞಾನಿಕರ ಹೇಳಿಕೆ ಹೀಗಿದೆ:—ನೀರಿನಿಂದ ಮೀನಿನ ಮೊಟ್ಟೆಗಳು ಗಾಳಿಗೆ ಮೇಲಕ್ಕೆ ಹಾರಿಸಲ್ಪಡುವವು. ಅವುಗಳು ಅಲ್ಲಿ ಕೆಲಕಾಲವಿದ್ದು ಮಳೆ ಬೀಳುವಾಗ, ಮೊಟ್ಟೆಯೊಡೆದು ಮೀನುಗಳಾಗಿಯೇ ಕೆಳ ಬೀಳುವವು.

◈

ಟಿಬೇಟಿನ ಬಳಿಯ ಕುರಿಗ್ರಾಮವೆಂಬಲ್ಲಿನ 'ಧಾಲರ್' ನದಿಯ ನೀರು ಒಮ್ಮೆಗೇ ಬಣ್ಣವಾಗಿ ವಿಷಮಯವಾಗಿರುವ ಇನ್ನೊಂದು ವಿಚಿತ್ರಸುದ್ದಿಯೂ ಬಂದಿದೆ.

—ಅಲ್ಲಿ ಬೆಸ್ತರು ಇಂದು ದಿನವೂ ಸಾವಿರಾರು ಜನರು ಸಾಯುತ್ತಿರುವರು! ದನಗಳ, ಇತರ ಮೃಗಪಕ್ಷಿಗಳ ಶವಗಳು ನದಿಯ ನೀರಲ್ಲಿ ಬಹಳವಾಗಿ ತೇಲಾಡುತ್ತಿರುವವು! ಆ ನದಿಯ ನೀರು ಕುಡಿದ ಒಬ್ಬ ಪ್ರಯಾಣಿಕನು ವಾಂತಿಭೇದಿಯಿಂದ ಸತ್ತುಹೋದನು!

—ಈ ನದಿಯು ಹುಟ್ಟುವ ದಕ್ಷಿಣ ಟಿಬೇಟಿನಲ್ಲಿ ಒಂದು ಭೂಕಂಪವಾಗಿ, ಅದರಿಂದ ಹರಿವ ನೀರು ಹೀಗೆ ವಿಷಮಯವಾಗಿರಬೇಕೆಂದು ವೈಜ್ಞಾನಿಕರು ಶೋಧಿಸಿ ಅಭಿಪ್ರಾಯಪಡುತ್ತಾರೆ.

◈

ಕರಾಚಿಯಲ್ಲಿ ಮಳೆಯಿಲ್ಲದೆ ಬರಗಾಲ ಹೆಚ್ಚಿದೆ. ಇದರ ನಿವಾರಣೆಗೆಂದು ಶ್ರೀ. ನಾರಾಯಣ ಬೇಚರ್ ಎಂಬ ಎಸೆಂಬ್ಲಿ ಸದಸ್ಯರೊಬ್ಬರು ವೈಜ್ಞಾನಿಕರಿಗೆ ಒಂದು ವಿಚಿತ್ರ ಸೂಚನೆಯನ್ನು ಸೂಚಿಸಿದ್ದಾರೆ.

ವಿಮಾನಗಳ ಮೂಲಕ ಮೇಲೆ ಹಾರಿ ಮೋಡದಿಂದ ನೀರನ್ನು ಕೆಳಗೆ ತರಲು ಯತ್ನಿಸಬೇಕೆಂಬುದೇ ಅವರು ಸರಕಾರಕ್ಕೆ ಸೂಚನೆ ಕೊಟ್ಟಿರುವರು.

—ಇಂತಹ ಪ್ರಯೋಗವು ರಷ್ಯದಲ್ಲಿ ಫಲಕಾರಿಯಾಗಿದೆಯೆಂದು ತಿಳಿದುಬರುತ್ತದೆ.

◈

ಮಿನಿಟಿಗೊಂದರಂತೆ ವಿಚಾರಣೆ ನಡೆಯಿತು! ಲಕ್ನೋದ ಸ್ಪೆಶ್ಯಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಎರಡು ತಾಸುಗಳಲ್ಲಿ ೧೧೦ ಜನರನ್ನು ವಿಚಾರಿಸಲಾಯಿತು.

—ಈ ಅಪರಾಧಿಕರೆಲ್ಲರೂ ಸೈಕಲ್ ಸವಾರರು. ಇವರು ತಮ್ಮ ಸೈಕಲ್‌ಗಳ ಮೇಲೆ ಮತ್ತೂ ಇಬ್ಬರನ್ನೋ ಮೂವರನ್ನೋ, ನಾಲ್ವರನ್ನೋ, ಕುಳ್ಳಿರಿಸಿ ಸವಾರಿ ಮಾಡಿದ್ದರು!

—ಇವರಿಗೆ ಆಣೆಗಳಿಂದ ೨ ರೂ.ಗಳವರೆಗೆ ದಂಡನೆ ವಿಧಿಸಲಾಯಿತು.

—ಇವರಲ್ಲಿ ಇಪ್ಪತ್ತು ಜನರು ಬಹಳ ಬಡವರೆಂದು ಕಂಡುಬಂದುದರಿಂದ ಅವರನ್ನು ಎಚ್ಚರಿಸಿ ಬಿಟ್ಟು ಬಿಟ್ಟರು.

—ಅಂತೂ ಮಿನಿಟಿಗೊಂದರಂತೆ ವಿಚಾರಣೆ ಮುಗಿಯಿತು.

◈

—ಸಿಂಧ ಪ್ರಾಂತ್ಯದ ಗವರ್ನರರಾದ ಸರ್. ಲಾನ್ಸ್‌ಲೋಟ್ ಗ್ರೇಹಮ್ ಎಂಬ ಯುರೋಪಿಯನರು 'ಭಗವದ್ಗೀತೆ'ಯನ್ನು ಪ್ರಾಂತದ ಭಾಷೆಯಲ್ಲಿ ಪರಿವರ್ತಿಸುತ್ತಿರುವರೆಂಬ ವಿಶೇಷ ವಾರ್ತೆಯೊಂದು ಕರಾಚಿಯ ಒಂದು ದಿನಪತ್ರಿಕೆಯು ಬರೆದಿದೆ.

—ಅವರು ಗೀತೆಯನ್ನು ಇಂಗ್ಲಿಷಿನಿಂದ ಸಿಂಧೀಭಾಷೆಗೆ ಪರಿವರ್ತಿಸುತ್ತಿರುವರಂತೆ!

—ತನ್ನ ಭಾಷಾಂತರ ಗ್ರಂಥವನ್ನು ತಾನು ಬರುವ ವರ್ಷ ಅಧಿಕಾರ ನಿವೃತ್ತನಾಗುವಾಗ ಸಿಂಧಿಯರಿಗೆ ಉಚಿತವಾಗಿ ಹಂಚಬೇಕೆಂದು ಅವರ ಇಚ್ಛೆಯಾಗಿದೆಯೆಂದೂ ಆ ಪತ್ರಿಕೆಯು ಬರೆಯುತ್ತದೆ.

TENDER NOTICE

Sealed tenders from registered contractors will be received up to 2 p. m. on Thursday the 15th of August 1940 for the reconstruction of a bridge in O/3 of Someshwar Koteshwar Road No. 17. Estimate for Rs. 4,400. Tender documents, plans etc., can be seen in the District Board Engineer's Office, Mangalore, during office hours and can be obtained on payment of Rs. 5 per set, which amount will on no account be refunded.

Mangalore, Dated 27-7-40 } Sd. P. G. Matthew, Dt. Board Engineer, S. K.

ನಿಮಗೆ ನೆಟ್ಟಗಾಗದ ಕಾರಣ ಒಂದೇ, ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ-ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿನಿಲ್ಲಿಸದೆ ಬೇರು ಸಹಿತ ಕಿತ್ತಿಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಶೀತ ಕಡಿಮೆಯಾಗುವುದು, ಔಷಧತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ನಾವ ಕಾಶವಾಗಿ ಶಕ್ತಿಯು ತುಂಬಿಬಂದು ಫುಪ್ಫುಸವುಗಟ್ಟಿಮುಟ್ಟಾಗಿ ದಮ್ಮುಹೆಸರುಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೩ ಔ., ೬ ಔ. ಮತ್ತು ೧೨ ಔ. ಬಾಟ್ಲಗಳಲ್ಲಿ ಕ್ರಮವಾಗಿ ರೂ.೨-೨-೦, ೩-೧೨-೦ ಮತ್ತು ೬-೮-೦ಗಳಿಗೆ ಎಲ್ಲಾ ಕಡೆಸಿಗುವುದು. ತರಿಸಿಕೊಳ್ಳುವ ವಿಳಾಸ:

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.



ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

ಅದೆಂತಹ ಬಲವೋ

'ಎಳ್ಳು ಹಿಂಡಿ ಎಣ್ಣೆ ತೆಗೆದು ಅನ್ನದೊಂದಿಗೆ ಬೆರಸಿ ಊಟಮಾಡುತಿದ್ದರು ನಮ್ಮ ತಾತನವರು' ಎಂದು ಪೂರ್ವಕಾಲದವರು ಹೇಳುತ್ತಿದ್ದರು. ಅದು ಸತ್ಯವೋ ಅಸತ್ಯವೋ ನಾವು ನೋಡಲಿಲ್ಲ. ನಾವೆಲ್ಲ ಪೂರ್ವಿಕರು ಮಾತ ಶರೀರ ಕಷ್ಟದಿಂದ ದೃಢಕಾಯರಾಗಿದ್ದರೆಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತೇವೆ.

ನಮ್ಮಲ್ಲಿ ಅನೇಕರಿಗೆ ಆ ಶಕ್ತಿ, ಆ ಬಲ, ಆ ಪಟುತ್ವ ಇರುವುದಿಲ್ಲ. ದೇಹಶ್ರಮದಿಂದ ಕೆಲಸ ಮಾಡಲು ಅವಕಾಶವಿಲ್ಲವೆಂದು ಈ ನೀರಸ ಜೀವನವನ್ನು ಕಳೆಯಬಾರದು. ನಾವು ಒಳ್ಳೇ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆ ಕಾಂತಿಗಳಿಂದ ಕೂಡಿರಬೇಕು. ಆದುದರಿಂದ 'ಅಮೃತ' ಔಷಧವನ್ನು ಶೀಘ್ರವಾಗಿ ಸೇವಿಸಬೇಕು. ಅಮೃತವನ್ನು ಸೇವಿಸಿದರೆ ನಿಮಗೆ ಜೀವನ ಸೌಖ್ಯಗಳನ್ನು ಅನುಭವಿಸಲು ಬೇಕಾದ ಉಷ್ಣ ರಕ್ತವೂ, ಬಲವೂ ಉಂಟಾಗುತ್ತದೆ.

"ಅಮೃತ"ವು ಎಲ್ಲಾ ಔಷಧ ಶಾಪುಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ ಮದ್ರಾಸು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 587 1938.
R. E. P. 622/1940.

ವಾದಿ—ವಾಸಪ್ಪಯ್ಯ—ಅರ್ಜಿದಾರ,

ಮತ್ತು

ಪ್ರತಿವಾದಿರು — ಭೀಮರಾಯ ಭಟ್ಟ ವಗೈರೆರು —ಎದ್ರಿರು.

ಇವರೊಳಗೆ

1ನೇ ಪ್ರತಿವಾದಿ 1ನೇ ಎದ್ರಿ ಭೀಮರಾಯ ಭಟ್ಟ, ವೆಂಕಟಭಟ್ಟ ಮಗ, ದಾರೀವಾಡ ಡಿಸ್ಟ್ರಿಕ್ಟ್ ... ತಾಲೂಕು ... ಎಂಬಲ್ಲಿ ಶಾಲಿ ಹೋಟೆಲು ಇಟ್ಟುಕೊಂಡಿರುವವರು, 2ನೇ ಪ್ರತಿವಾದಿ 2ನೇ ಎದ್ರಿ ಮಹಾಬಲ ಭಟ್ಟ, ವೆಂಕ ಭಟ್ಟ ಮಗ ದಾವಣಗೆರೆಯಲ್ಲಿ ಬ್ರಾಹ್ಮಣ ಲೈನ್ ರೋಡಿನ ಬಳಿಯಲ್ಲಿ ಕೆ. ವೆಂಕಣ್ಣನವರ ಟೀ ಅಂಗಡಿಯಲ್ಲಿ ಇದ್ದವರು ಕೂಡಾ 2 ಜನರಿಗೆ —

ಮೇಲಿನ ಅಮ್ಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಸಿರುವ ನಿಂಮ ಮೂಲಹಕ್ಕಿನ ಸ್ಥಿರಾಸ್ತಿಗಳನ್ನು ಅರ್ಜಿದಾರನು ಏಲಂ ಅಪೇಕ್ಷಿಸಿ ಹಾಜರು ಮಾಡಿರುವ ಪ್ರೈಸ್ಟ್ ಇಸ್ತಿಹಾರು ಮಂಜೂರು ಮಾಡುವರೆ ಸದ್ರಿ ಅಮ್ಮಲ್ಜಾರಿಯು ತಾರೀಕು 13—9—40ಕ್ಕೆ ಮುಕ್ತ ಸದ್ರಿ ಅಮ್ಮಲ್ಜಾರಿಯಲ್ಲಿ ಸ್ಥಿರಾಸ್ತಿಗಳ ಏಲಂ ಸಮಯ ದರಖಾಸ್ತಿಗೆ ನಿಲ್ಲುವರೇ ಪರ್ಮಿಶನು ಕೊಡಬೇಕಾಗಿ ಅರ್ಜಿದಾರ ಕೊಟ್ಟಿರುವ R. E. A. No. 781/1940ನೇ ಅರ್ಜಿಯು ಕೂಡಾ ಸದ್ರಿ ತಾರೀಕು 13—9—40ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ತನಿಖೆಗೆ ಇಟ್ಟಿರುವದರಿಂದ ಸದ್ರಿ ತಾರೀಕಿನಲ್ಲು ಬೆಳಗ್ಗೆ 10ಗಂಟೆ ಸಮಯಕ್ಕೆ ನೀವು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ... ನಿಂಮ ಆಕ್ಷೇಪಣೆಗಳು ಇದ್ದಲ್ಲಿ ಜಾಹೀರು ಮಾಡಿಕೊಳ್ಳಬಹುದು. ತಪ್ಪಿದಲ್ಲಿ ಸದ್ರಿ ಅಮ್ಮಲ್ಜಾರಿಯ ಅರ್ಜಿಯಲ್ಲಿ ಪರ್ಮಿಶನ ಅರ್ಜಿಯೂ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

A. N. S. Achar,
Pleader for Petitioner.
Karkal, Dated 5—8—'40.

ವಿಜ್ಞಾನಯುಗ

ಅಮೇರಿಕದಲ್ಲಿ ಒಂದು ಅಮರ ಶಿಶು!

ಎಂದೆಂದಿಗೂ ಸಾಯದ ಮಗು

ಅಮೇರಿಕದ ವಿಜ್ಞಾನಿಗಳು ಕಳೆದ ಏಳು ತಿಂಗಳುಗಳಿಂದ ಒಂದು ಮಗುವನ್ನು ಸಾಕಿ ಬಂದಿದ್ದಾರೆ ಅದರ ಹೆಸರು ಜೀನ್ ಎಂದು ಇರುತ್ತದೆ ಇದರ ಪಾಲಕರು,—ಸುಮಾರು ಸಾವಿರ ಮಂದಿ—ಎಲ್ಲರೂ ಮನೋವಿಜ್ಞಾನಿಗಳಾಗಿರುವರ ಈ ಮಗುವಿಗೆ ಜೀವನದಲ್ಲಿ ಕಷ್ಟವಿಲ್ಲ ನೋವುಸರಳಿಕೆಗಳಿಲ್ಲ ವೇದನೆಯಾತನೆಗಳಿಲ್ಲ ದುಃಖದಾರಿದ್ರ್ಯಗಳಿಲ್ಲ—ಅಂದರೆ ಅದರ ಜೀವನವು ಸರ್ವತ, ಸರ್ವಕಾರ್ಯಗಳಲ್ಲಿಯೂ ಕೇವಲ ಸುಖಮಯವಾಗಿ ಇರುವದು ಆದ್ದರಿಂದ ಅದಕ್ಕೆ ಸಾವು ಇರುವದಿಲ್ಲ ಅದು ಸದಾಕಾಲ ಬದುಕಿ ಇರುವದು ಎಂದು ಆ ವಿಜ್ಞಾನಿಗಳು ಹೇಳುತ್ತಿರುವರ

ಅದರ ಮನೆ

ಜೀನಳ ಮನೆಯು ಒಂದು ಶಿಶು ಪ್ರಯೋಗ ಶಾಲೆಯಂತೆ ಇದೆ ಆ ಮನೆಯನ್ನು ಕಟ್ಟಲಿಕ್ಕೆ ೬ ಲಕ್ಷ ಪವನಗಳು ಖರ್ಚಾದವು ಅದರಲ್ಲಿ ನೂರು ಕೋಣೆಗಳಿವೆ ಆಡಲಿಕ್ಕೆ ಟೆನ್ನಿಸ್ ಕೋರ್ಟಗಳಿವೆ, ಸವಾರಿಗೆ ಕುದುರೆಗಳಿವೆ ಹವೆ ತೆಗೆದುಕೊಳ್ಳಲಿಕ್ಕೆ ತೋಟ ಬಯಲು ಮೈದಾನ, ವಿಹಾರವಾಟಿಕೆಗಳಿವೆ ಜೀನಳು ಜೀವನದ ಮೊದಲಿನ ೨೦ ವರ್ಷಗಳನ್ನು ಈ ಮನೆಯಲ್ಲಿ ಕಳೆಯುವಳು ಅವಳ ಭಾವನೆಗಳು, ಯೋಚನೆಗಳ—ಎಲ್ಲ, ಬಹು ಪವಿತ್ರ ಪರಿಶುದ್ಧ ನೋವುಸರಳಿಕೆಗಳಿಂದ ದೂರ ಇರುವಂತೆ ಜಾಗ್ರತೆ ತೆಗೆದುಕೊಳ್ಳಲಾಗುತ್ತದೆ

ಸಾವಿಗೆ ಕಾರಣ

ನಮ್ಮ ಮನಸ್ಸಿನ ಯೋಚನೆ, ಭಾವನೆ, ವಿಚಾರಗಳೇ ನಮ್ಮ ಸಾವಿನ ಕಾರಣಗಳಾಗಿರುವವೆಂದು ಈ ವಿಜ್ಞಾನಿಗಳ ಮತವಾಗಿರುತ್ತದೆ ವಿದ್ಯುಚ್ಛಕ್ತಿಯಂತೆ ಮನಸ್ಸಿನ ಭಾವನೆಗಳೂ ಒಂದು ಪ್ರಕಾರದ ಶಕ್ತಿ ಆಗಿರುತ್ತದೆ. ವಿನಾಶಕಾರಿ ಒಂದೊಂದು ಭಾವನೆಯು ಮನುಷ್ಯನನ್ನು ಮೃತ್ಯುವಿಗೆ ಸಮೀಪ ಮಾಡುತ್ತದೆ ವಿನಾಶಕಾರಿ ಒಂದೊಂದು ಭಾವನೆಯು ರೋಗರುಜಿಗಳಿಗೆ ಕಾರಣವಾಗುತ್ತದೆ ಆದ್ದರಿಂದ ಸದ್ಭಾವನೆಗಳು ಮನುಷ್ಯನಿಗೆ ಚಿರಜೀವತ್ವವನ್ನು ಕೊಡುವವೆಂದು ಈ ವಿಜ್ಞಾನಿಗಳು ಸಿದ್ಧಾಂತ ಮಾಡಿದ್ದಾರೆ

ಭಾವನೆಯ-ಪರಿಣಾಮ

ರೋಗರುಜಿಗಳು ರೋಗಾಣುಗಳಿಂದ ಬರುತ್ತವೆಂದು ತಿಳಿಯುವದು ತಪ್ಪು ಪ್ರಕೃತಿಯಲ್ಲಿ ರೋಗಾಣುಗಳು ಯಾವಾಗಲೂ ಇದ್ದಿರುವವು ಆದರೆ ರೋಗಗಳು ಕೆಲವರಿಗೆ ಬರುವವು ಕೆಲವರಿಗೆ ಬರುವದಿಲ್ಲ ಇದಕ್ಕೆ ಕಾರಣ ಅವರವರ ಭಾವನೆ ಆಗಿದೆ ಆದ್ದರಿಂದ ಜೀನಳು ಕೇವಲ ಸದ್ಭಾವನೆಗಳಿಂದ ಪ್ರೇರಿತಳಾಗಿ ಬೆಳೆಯುವಳು ಭಾವನೆ ಸಂಬಂಧವಾದ ವಿಜ್ಞಾನಿಗಳ ಮತವು ನಿಜವಾಗುವುದಾದರೆ, ಜೀನಳು ಪರಿಪೂರ್ಣ ಮಗು, ಪರಿಪೂರ್ಣ ಬಾಲಿಕೆ ಪರಿಪೂರ್ಣ ಮಹಿಳೆಯಾಗಿ ಬೆಳೆಯುವಳು, ಅವಳಿಗೆ ವೃದ್ಧಾಪ್ಯ, ಸಾವು ಇರುವದಿಲ್ಲ ಅವಳು ಮಾತನಾಡಲು ಕಲಿತ ವಿವಿಧ ವಿಷಯಗಳು ಕುರಿತ ಪ್ರಶ್ನೆಗಳನ್ನು ಕೇಳುವಾಗ ಸತ್ಯವನ್ನೇ ಹೇಳಲಾಗುತ್ತದೆ ಅವಳು ಏನನ್ನು ಕೇಳಿದರೂ ಏನನ್ನು ತಿಳಿಯಲಿಕ್ಕೆ ಅಪೇಕ್ಷಿಸಿದರೂ ಸತ್ಯವನ್ನು ವರಿ ಮಾಜ ವದಿಲ

ಮನುಷ್ಯನ ಶಡ್ವೈರಿಗಳು

ಕಾಮ, ಕ್ರೋಧ ಮೋಹ, ಮದ, ಲೋಭ, ಮತ್ಸರ ಎಂಬವುಗಳೇ ಮನುಷ್ಯನ ಪ್ರಾಣಘಾತುಕ ವೈರಿಗಳಾಗಿರುವವು ಇವುಗಳೇ ಮನುಷ್ಯನಿಗೆ ಶಾರೀರಿಕ ಮತ್ತು ಮಾನಸಿಕ ರೋಗಗಳನ್ನು ತರುವವು ಜೀನಳನ್ನು ಈ ಯಾವ ಶತ್ರು ಹಿಡಿಸದಿದ್ದರೆ ಅವಳು ರೋಗಗಳಿಗೆ ಬಲಿಯಾಗುವುದೇ ಇಲ್ಲ ಆಕೆ ಯಾವಾಗಲೂ ನಿರೋಗಿ ಆರೋಗ್ಯಶಾಲಿ ಮತ್ತು ಸುಖಿಯಾಗಿರುವೆ ಎಂಬ ಭಾವನೆ ನೆಯೆ ಅವಳ ಶರೀರ ಮನಸ್ಸುಗಳಲ್ಲಿ ಕೆಲಸ ಮಾಡುತ್ತಾ ಇರುತ್ತದೆ

ಸಾಧ್ಯಾಸಾಧ್ಯತೆ

ಈ ಮಾತುಗಳಲ್ಲಿ ಒರೆಯ ಲಿಕ್ಕೂ

ಜೆಣ್ಣ ಗಂಡಿನ ಸಂಬಂಧವಿಲ್ಲದೆ ಟೆಸ್ಟ್‌ಟ್ಯೂಬ್ ಇಂಜೆಕ್ಷನಿಂದ ಪಡೆದ ಕರುಗಳು ... ನ್ಯೂಸೂಲ್ಲ ಈ ಪ್ರಯೋಗವನ್ನು ಮಾಡಿ ಪಡೆದು ಬೆಳೆಸಿದ ಕರುಗಳು.

ವಿಜ್ಞಾನಿಗಳ ದತ್ತಮಗು

ಜೀನಳು ಅವಳ ತಾಯಿ ಹೊಟ್ಟೆಯಲ್ಲಿದ್ದಾಗಲೇ, ವಿಜ್ಞಾನಿಗಳು ಅವಳನ್ನು ಅವಳ ಹೆತ್ತವರಿಂದ ದತ್ತ ತೆಗೆದುಕೊಂಡಿದ್ದರು ದತ್ತಕೆಗೆದುಕೊಳ್ಳುವಾಗ ಈ ಹೆತ್ತವರ ಅವರನ್ನು ಅನೇಕ ಸಂಶೋಧನೆ ಪರೀಕ್ಷೆ ಪ್ರಯೋಗಸಂಶೋಧನೆಗಳ ಮೂಲಕ ಅವರನ್ನು ಅಮರ ಶಿಶುವನ್ನು ಬೆಳೆಸುವ ಅದ್ಭುತ ಪ್ರಯೋಗಕ್ಕಾಗಿ ಆರಿಸಿದ್ದರು. ತಾಯಿ ಭಾವನೆಯ ಪ್ರಭಾವವು ಮಗುವಿನಮೇಲೂ ಬೀಳುವದಾದ್ದರಿಂದ ಜೀನಳ ತಾಯಿ ಗರ್ಭಿಣಿಯಾಗಿದ್ದಾಗಿನಿಂದಲೂ ಅವಳು ಕೇವಲ ಸದ್ಭಾವನೆಗಳಿಂದ ಪ್ರೇರಿತಗಳಾಗಿರುವಂತೆ ಈ ವಿಜ್ಞಾನಿಗಳು ಎಚ್ಚರ ತೆಗೆದುಕೊಂಡಿರುವರು ಏಳು ವರ್ಷಗಳ ವರೆಗೆ ಜೀನಳ ತಾಯಿಯೇ ಜೀನಳನ್ನು ವಿಜ್ಞಾನಿಗಳ ನಿರೀಕ್ಷಣೆಯಲ್ಲಿ ಲಾಲಿಸಿಪಾಲಿಸುವಳು ಆ ಮೇಲೆ ವಿಜ್ಞಾನಿಗಳೇ ಅವಳಿಗೆ ಅಗತ್ಯವುಳ್ಳ ವಿದ್ಯಾಬುದ್ಧಿಗಳನ್ನು ಕೊಟ್ಟು ಸಾಕುವರು

ಕೇಳಲಿಕ್ಕೂ ರಮ್ಯವಾಗಿವೆ ಸಿದ್ಧಾಂತವೇನೋ ಸತ್ಯವಾಗಿರಬಹುದು. ಆದರೆ ಅದನ್ನು ಕಾರ್ಯರೂಪಕ್ಕೆ ತರುವದು ಸಾಧ್ಯವೆ? ಸೃಷ್ಟಿ ನಿಯಮವು ಇದಕ್ಕೆ ಅನುಕೂಲವಾಗಿರುವದೆ? ಜೀನಳು ಯಾವಾಗಲೂ ಎಲ್ಲ ಕಡೆಗಳಲ್ಲಿಯೂ ಯಾವ ದುರ್ಭಾವನೆಯೂ ಇಲ್ಲದೆ ಬಾಳುವದು ಸಾಧ್ಯವೆ? ಹಾಗೆ ಅವಳು ಅಮರಳಾಗಿ ಇರುವದು ಶಕ್ಯವೆ? ಈ ಪ್ರಶ್ನೆಗಳಿಗೆ ಕಾಲವೇ ಉತ್ತರ ಕೊಡಬೇಕಾಗಿದೆ ಅಂತೂ ಅಮೇರಿಕದ ಈ ವಿಜ್ಞಾನಿಗಳ ಈ ಪ್ರಯೋಗವನ್ನು ಇಡೀ ಜಗತ್ತು ಕುತೂಹಲದಿಂದ ನೋಡುತ್ತ ಇದೆ ಅಮರ ಶಿಶುವನ್ನು ಬೆಳೆಸುವ ವಿಜ್ಞಾನಿಗಳ ಆ ಪ್ರಯತ್ನಗಳು ವಿಫಲವಾದರೂ, ಆ ವಿಫಲತೆಯು ಮನುಷ್ಯನಿಗೆ ಒಂದು ಒಳ್ಳೆಯ ಪಾಠವನ್ನು ಕಲಿಸದಿರುವದಿಲ್ಲ

ಸಮುದ್ರನೀರಿನಿಂದ ರಸಾಯನ ಪದಾರ್ಥಗಳು

ಯೂರೋಪಿನಲ್ಲಿ ಯುದ್ಧವಾರಂಭವಾದ ನಿಮಿತ್ತ ಜಪಾನಿಗೆ ಚೀನದಲ್ಲಿ ತನ್ನ ಯುದ್ಧಕಾರ್ಯವನ್ನು ಮುಂದೊತ್ತಲಿಕ್ಕೆ ಅಗತ್ಯವುಳ್ಳ ಕಾಸ್ಟಿಕ ಸೋಡ, ಹೈಡ್ರೊಕ್ಲೋರಿಕ್ ಎಸಿಡು, ಮೆಗ್ನೇಸಿಯಂ ಮೊದಲಾದ ಅತಿಮುಖ್ಯವಾದ ರಸಾಯನ ಕಾರ್ಯಕ್ಕೆ ಬೇಕಾದ ಪದಾರ್ಥಗಳನ್ನು ಪಡೆಯುವದು ಕಷ್ಟವಾಗಿತ್ತು ಆದರೆ ಜಪಾನಿನ ವಿಜ್ಞಾನಿಗಳು ಇವೆ ಪದಾರ್ಥಗಳನ್ನು ಸಮುದ್ರ ನೀರಿನಿಂದ ತಯಾರಿಸುವ ಉಪಾಯಗಳನ್ನು ಕಂಡುಹಿಡಿದಿದ್ದಾರೆ ಈಗ ಪದಾರ್ಥಗಳನ್ನು ತಯಾರಿಸಲಿಕ್ಕೆ ಅಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಸ್ಥಾಪಿತವಾಗಿವೆ ಇವು ಯಶಸ್ವಿಯಾದರೆ ಈ ಪದಾರ್ಥಗಳ ಮಟ್ಟಿಗೆ ಜಪಾನ ಸ್ವಾವಲಂಬಿಯಾಗುವ

ನಿರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣಸ್ಥಳಗಳಿಗೆ ನಮ್ಮಲ್ಲಿಂದ ಶೀಡಾಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ— ಉಡುಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. [illegible]ದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದ[illegible] ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾದವಾಹಿಂಸ್, ಇವರು ಈ ಚೂರ್ಣದಿಂದ ಯಾವ ತರದ ಅಪಾಯವೂ ಅ[illegible] ಗರ್ಭಧಾರಣವೂ ಆಗುವುದಿಲ್ಲ. ಚೂರ್ಣ ಗುಣಕಾರಿ ದಪ್ಪಿಯು ಕ್ರಯರೂ. ೪-೦-೦ ವಿ. ಪಿ. [illegible]

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	2—0—0	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	4—8—0	4—10—0
,, ದುಯಂ ,, ,,	4—[illegible]—0	4—10—0
,, ಅವ್ವಲ್ ಸುಗ್ಗಿ ,,	4—10—0	
,, ದುಯಂ ,, ,,	4—4—0	4—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	85—0—0	87—3—0
,, ಸಿಪ್ಪೆ ಇದ್ದದ್ದು ,,	37—8—0	40—0—0
ಕೊಬ್ಬರಿ ಆಫೀಸು ಖಂಡಿಗೆ	47—6—0	
,, ದಿಲ್‌ಪಸಂದಿ ,,	57—8—0	—
ತೆಂಗಿನ ಎಣ್ಣೆ ಮಣಕ್ಕೆ	8—10—0	8—10—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—4—0	4—8—0
ಗೇರುಬೀಜ ಮುಡಿಗೆ	2—12—0	3—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	41—4—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—0—0	14—8—0

ಸ್ವದೇಶಾಭಿಮಾನಿ

ಸಂಪುಟ 34]   ತಾರೀಕು 9–8–1940   [ಸಂಚಿಕೆ 32

The Bombay Life Assurance Company, Ltd.

(Estd. 1908)

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs.

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಏಡಿಸೋವು, ಸ್ನಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ; ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

(ತಾ. 16-8-1940.)



ಬ್ರಿಟನಿನ ಕರಾವಳಿಯನ್ನು ಕಾಯಲು ತೊಡಗಿರುವ ಹಲವು ಜಲವಿಮಾನಗಳೊಡನೆ ಸೇರಲು ಈ ಜಲವಿಮಾನವೂ ಕೆಳಗಿಳಿಯುತ್ತದೆ

KANNADA ILLUSTRATED WEEKLY

ಶ್ರೀ [illegible] ಸ್ಮಾರಕ ಪ್ರಬಂಧ ಸ್ಪರ್ಧೆ

[illegible] ರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ [illegible] ಒಂದು [illegible] ನಡೆಸಬೇಕೆಂಬ ಉದ್ದೇಶದಿಂದ ಶ್ರೀ ಭಾಸ್ಕರರಾಯರ ಶಾಯಿಯವರಾದ ಶ್ರೀಮತಿ ಎ. ಶೇಷಮ್ಮನವರು ಒಂದು ಜ್ಞಾಪಕನಿಧಿಯನ್ನು ಪರಿಷತ್ತಿಗೆ ಕೊಟ್ಟಿರುವುದು ಸರಿಯಷ್ಟೆ. ಈ ಜ್ಞಾಪಕನಿಧಿಯ ಸಂಬಂಧದಲ್ಲಿ ಈ ವರ್ಷ (೧೯೪೦) ಒಂದು ಪ್ರಬಂಧ ಸ್ಪರ್ಧೆಯನ್ನು ನಡೆಸಬೇಕೆಂದು ನಿಶ್ಚಯಿಸಿದೆ.

ಪ್ರಬಂಧದ ವಿಷಯ: 'ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಯ ಸ್ಥಾನ.'

ಸ್ಪರ್ಧೆಯ ನಿಯಮಗಳು

೧ ಪ್ರಬಂಧ ಸ್ವತಂತ್ರವಾಗಿರಬೇಕು. ಮತ್ತು ಇದುವರೆಗೆ ಅಚ್ಚಾಗಿರಬಾರದು.

೨ ಪ್ರಬಂಧ ಫೂಲ್ಸ್‌ಕ್ಯಾಪ್ ಆಕಾರದ ೨೦ ಪುಟಗಳ ಪರಿಮಿತಿಯಲ್ಲಿ ಇರಬೇಕು; ಮತ್ತು ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು.

೩ ೧೯೪೦ನೆಯ ಇಸವಿ ಸೆಪ್ಟಂಬರ್ ತಿಂಗಳು ೩೦ನೆಯ ತಾರೀಕಿನೊಳಗಾಗಿ ಪ್ರಬಂಧ ಪರಿಷತ್ತಿನ ಕಚೇರಿಗೆ ತಲಪಬೇಕು.

೪ ಅತ್ಯುತ್ತಮವೆಂದು ಪರೀಕ್ಷಾಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೨೦ ರೂ.ಗಳ ಬೆಲೆಯುಳ್ಳ ಬಹುಮಾನವನ್ನು ಕೊಡಲಾಗುವುದು.

೫ ಬಹುಮಾನ ಪಡೆದ ಪ್ರಬಂಧವನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ.

೬ ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ಅರ್ಹವಾದುವುಗಳಲ್ಲವೆಂದು ಕಂಡುಬಂದರೂ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಪ್ರಬಂಧಗಳು ಬರದಿದ್ದರೂ ಸ್ಪರ್ಧೆಯನ್ನು ನಿಲ್ಲಿಸಬಹುದು.

೭ ಹಿಂದಿನ ವರ್ಷಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಈ ಸ್ಪರ್ಧೆಗೆ ನಿಲ್ಲಬಾರದು.

[ವಿ. ಸೂ.—ಸ್ಪರ್ಧೆಗೆ ಬಂದ ಪ್ರಬಂಧವನ್ನು ಹಿಂದಿರುಗಿಸುವುದಿಲ್ಲವಾದ್ದರಿಂದ ಸ್ಪರ್ಧಿಗಳು ತಮ್ಮ ಪ್ರಬಂಧದ ಒಂದು ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳಬೇಕೆಂದು ಪ್ರಾರ್ಥನೆ.]

ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಯವರೊಂದಿಗೆ ನಡೆಸತಕ್ಕದ್ದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಅಂದವಾದ ಮುದ್ರಣಕ್ಕೆ
ಶಾರದಾ [illegible]ನೆಗೆ
[illegible]

ತಕ್ಕುದಾದ ಪೋಷಣೆಯು
ಬೆಳೆಯುವ ಮಕ್ಕಳಿಗೆ ಅಗತ್ಯವಾದದ್ದು

ಬೆಳೆಯುವ ಮಕ್ಕಳು ತಮ್ಮ ಬಲ ಮತ್ತು ಚುರುಕುತನವನ್ನು ಕೂಡಲೇ ಉಪಯೋಗಿಸುತ್ತಾರೆ. ಹೊಸ ಜೀವನಶಕ್ತಿಯು ತಕ್ಕುದಾದ ಪೋಷಣೆಯನ್ನು ಹೊಂದಿಕೊಂಡಿರುತ್ತದೆ.

ನಿಮ್ಮ ಮಕ್ಕಳಿಗೆ ತಕ್ಕುದಾದ ಪೋಷಣೆಯು ದೊರಕುವುದೆಂದು ಖಂಡಿತವಾಗಬೇಕಾದರೆ ಯಾವಾಗಲೂ ರುಚಿಕರವಾದ ಶ್ರೇಷ್ಠಶಕ್ತಿವರ್ಧಕ ಆಹಾರದಂತಿರುವ 'ಓವಲ್ಟಿನ್' ಪಾನೀಯವನ್ನು ಕೊಡಿರಿ. ಇದು ಅವರಿಗೆ ಶಕ್ತಿಯನ್ನೂ ಚುರುಕುತನವನ್ನೂ ಹೆಚ್ಚಿಸಿ ಅವು ಸುಖಿಯಾಗಿರುವಂತೆ ಮಾಡುತ್ತದೆ.

ಇದು ಪ್ರಕೃತಿಯ ಉತ್ತಮ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟಿದೆ. ಮಾಗಿ ನೆನೆಹಾಕಿದ ಬಾರ್ಲಿ, ಧನದ ಹಸಿಹಾಲು, ಮತ್ತು ಅಮೂಲ್ಯವಾದ ವಿಟಮಿನು ಮತ್ತು ಫೊಸ್ಫಟೈಡ್ಸುಗಳು—'ಓವಲ್ಟಿನು' ಮಕ್ಕಳಿಗೂ ಪ್ರಾಯಸ್ಥರಿಗೂ ಆರೋಗ್ಯವನ್ನೂ ಆನಂದವನ್ನೂ ಉಂಟುಮಾಡುವ ಆಹಾರಪಾನೀಯ. ಇತರ ನಕಲಿ ಪಾನೀಯಗಳನ್ನು ತೊರೆಯಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್‌ಟಿನ್'
'OVALTINE [illegible] ಪುಷ್ಟಿಕರವಾದ ಆಹಾರಪಾನೀಯವು'

ಮೆಸರ್ಸ್ ಗ್ರೆಹೆಮ್ಸ್
ಟ್ರೇಡಿಂಗ್ ಕೊ (ಇಂಡಿಯಾ)
ಲಿಮಿಟೆಡ್ ಕೆಥೆಡ್ರಲ್ ಹೌಸ್,
ಥರ್ಡ್ ಫ್ಲೋರ್ 310-311 ಲಿಂಗಿ
ಚೆಟ್ಟಿ ಸ್ಟ್ರೀಟ್ ಮದ್ರಾಸು.

"ಓವಲ್ಟಿನ್" ರುಚಿಕರ, ಜೀರ್ಣಕರ, ಹಾಗೂ ಪೋಷಣಯುಕ್ತವಾದುವು. ಎಲ್ಲಾ ಕಾಲಕ್ಕೂ ಉತ್ತಮವಾದುದು, ಇದರಲ್ಲಿ ಮಹತ್ವದ ಬೆಲೆಯ 'ಓವಲ್ಟಿನ್' ಸೇರಿಯವುದು.
4 ಔನ್ಸು 8 ಔನ್ಸುಗಳ ಪಕೇಟುಗಳಲ್ಲಿಯೂ ಒಂದು ರಾತ್ತಲ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/18/39

"ನ ಸಿದ್ಧಿಃ ಕಾರ್ಯಾ ದೃಢಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

16—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೬—೮—೧೯೪೦

ವೈಸರಾಯರ ಹೇಳಿಕೆಯು ವಿಚಾರವಾಗಿ—

ರಾಷ್ಟ್ರದ ಮುಖಂಡರ ಅಭಿಪ್ರಾಯ!

ಭಾರತ ಪರಿಸ್ಥಿತಿಯನ್ನು ಸುಧಾರಿಸಲು ಭಾರತ ಸಚಿವರು ಒಪ್ಪುತ್ತಾರೆ!

ವೈಸರಾಯರಾದ ಲಿನ್ಲಿತ್‌ಗೋರವರ

ಕಳೆದ ವಾರ ವೈಸರಾಯರು ಒಂದು ಹೇಳಿಕೆಯನ್ನಿತ್ತರು ಅದರಲ್ಲಿ ಭಾರತದ ಪ್ರತಿನಿಧಿಗಳಿಗೆ ತನ್ನ ಅಧಿಕಾರೀ ಮಂಡಲದಲ್ಲಿ ಸ್ಥಾನ ಕೊಡುವುದಾಗಿಯೂ, ಅವರು ಸಮರದಲ್ಲಿ ಸಹಕರಿಸಬೇಕಾಗಿಯೂ, ಸಮರ ಮುಗಿದ ಮೇಲೆ ಮಿಕ್ಕ ವಿಷಯಗಳನ್ನು ಯೋಚಿಸಬಹುದಾಗಿಯೂ ತಿಳಿಸಿದ್ದಾರೆ ಆದರೆ ಭಾರತದ ರಾಷ್ಟ್ರೀಯ ಪತ್ರಿಕೆಗಳು ಇದನ್ನು ಸ್ವಾಗತಿಸಿಲ್ಲ. ರಾಷ್ಟ್ರದ ಮುಖಂಡರು ಇದನ್ನು ಮೆಚ್ಚಿಲ್ಲ. ಮುಂದಿನ ಸಮಸ್ಥಿತಿಯು ಹೇಗೆನಿಲ್ಲಬಹುದೆಂಬುದು ಸಮಸ್ಯಾತ್ಮಕವಾಗಿದೆ.

ವೈಸರಾಯರ ವಿಸ್ತಾರವಾದ ಹೇಳಿಕೆಯ ಸಾರಾಂಶವು ಹೀಗಿದೆ

(೧) ವೈಸರಾಯರ ಅಧಿಕಾರೀ ಮಂಡಲವನ್ನು (ಎಕ್ಸಿಕ್ಯೂಟಿವ್ ಕೌನ್ಸಿಲ್) ವಿಸ್ತರಿಸುವುದು, ಆ ಅಧಿಕಾರ ಮಂಡಲದಲ್ಲಿರುವ ಅಧಿಕಾರಿಗಳೊಡನೆ, ಭಾರತದ ಪ್ರತಿನಿಧಿಗಳಾಗಿರುವ ಕೆಲವು ಮಹನೀಯರನ್ನು ಸ್ಥಾನಸ್ವೀಕರಿಸುವಂತೆ ಕೇಳಿಕೊಳ್ಳುವುದು

(೨) ಯುದ್ಧ ಸಲಹೆಯ ಮಂಡಲಿ (ವಾರ್ ಎಡ್ವೈಸರಿ ಕೌನ್ಸಿಲ್) ಎಂಬುದನ್ನು ಸ್ಥಾಪಿಸುವಂತೆ ವೈಸರಾಯರಿಗೆ ಸಾರ್ವಭೌಮ ಸರಕಾರವು ವಿಧಿಸಿರುವುದು. ಈ ಮಂಡಲಿಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳೂ ಇರುವರು, ಅಲ್ಲದೆ ಭಾರತದ ರಾಷ್ಟ್ರೀಯ ಹಿತಪರರನ್ನೂ ಸೇರಿಸುವುದು

(೩) ಈ ಹಾಯ ಯುದ್ಧವು ಮುಗಿದ ಬಳಿಕ, ಭಾರತದ ರಾಷ್ಟ್ರೀಯ ಜೀವನದ ಹಿತವನ್ನನುಲಕ್ಷಿಸಿ ಮುಂದಾಳುಗಳನ್ನೊಳಗೊಂಡ ಒಂದು ಸಮಿತಿಯನ್ನು ಸ್ಥಾಪಿಸುವುದು ಇವರು ಭಾರತದ ಮುಂದಿನ ರಾಜ್ಯಾಂಗವನ್ನು ನಿರ್ಮಿಸುವರು ಪ್ರತಿಯೊಂದು ವಿಷಯಗಳಲ್ಲಿಯೂ ಅದಷ್ಟು ಬೇಗ ತೀರ್ಮಾನವಾಗುವಂತೆ ಇವರು ಸಹಕರಿಸುವರು

(೪) ಈ ಸಂದರ್ಭದಲ್ಲಿ ಭಾರತದ ಎಲ್ಲಾ ಪಕ್ಷದವರೊಳಗೆ ಮೈತ್ರಿ ಸಹಕಾರಗಳುಂಟಾಗುವಂತಹ ಕಾರ್ಯಗಳಿಗೆ ಸರಕಾರದವರು ಸಹಾಯಿಸುವರು. ಯುದ್ಧದ ಅನಂತರ ಒದಗುವ ಭಾರತದ ಪ್ರತಿನಿಧಿ ಸಂಸ್ಥೆಯ ವಿಚಾರವನ್ನೂ, ಅದು ಕೈಕೊಳ್ಳಬೇಕೆಂದ ಕಾರ್ಯಕ್ರಮ ಗಳನ್ನು ಭಾವೀರಾಜ್ಯಾಂಗ ಕರಡನ್ನು ಸರಕಾರದವರೇ ಒಪ್ಪಿಸುವರು

(೫) ಅಲ್ಪ ಸಂಖ್ಯಾಕರ ಹಿತವು ಪ್ರಾಮುಖ್ಯವಾಗಿ ಕಾಯಲ್ಪಡುವುದು. ಸಾಮಂತ ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್)ವನ್ನು ಭಾರತಕ್ಕೆ ಕೊಡುವುದೇ ಸರಕಾರದ ಗುರಿಯಾಗಿದೆ ಭಾರತದ ರಾಜ್ಯಸೂತ್ರವನ್ನು ಭಾರತೀಯರೇ ವಹಿಸುವುದು ನಿಜವಾದರೂ, ಬ್ರಿಟಿಷರೂ ಭಾರತಕ್ಕೂ ಬಹುಕಾಲದ ಸಂಬಂಧವಿರುವುದರಿಂದ ಆ ವಿಷಯದಲ್ಲಿ ಬ್ರಿಟನಿಗೂ ಬಹಳ ಜವಾಬ್ದಾರಿಯಿದೆ ಆ ಬಹುಕಾಲದ ಜವಾಬ್ದಾರಿಯನ್ನು ಬಿಟ್ಟುಕೊಡಲಾಗುವುದಿಲ್ಲ

ಈ ವಿಷಯದಲ್ಲಿ ರಾಷ್ಟ್ರಪತಿ ಅಜಾದರು, ಮಹಾತ್ಮರು, ರಾಜಾಜಿಯವರು ತಮ್ಮ ಅಭಿಪ್ರಾಯವನ್ನು ತಿಳಿಸಲಿಲ್ಲ ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯವರು ಸೇರಿ ತನ್ನ ನಿರ್ಣಯವನ್ನು ತಿಳಿಸಬಹುದೆಂದು ರಾಜಾಜಿಯವರೆಂದರು ಭಾರತದ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳು ವೈಸರಾಯರ ಹೇಳಿಕೆಯನ್ನು ಸ್ವಾಗತಿಸಿರುವುದಿಲ್ಲ ಮುಸ್ಲಿಂ ಲೀಗಿನವರು ತಾರೀಖಿನಂದು ಸಭೆ ಸೇರಿ ಇದನ್ನು ಕುರಿತು ವಿಚಾರಿಸಲಿರುವರು ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರವರು ವೈಸರಾಯರ ಕರೆಯ ಮೇರೆಗೆ ಅವರು ತಮ್ಮ ಭೇಟಿಗೆ ಬರುವರೆಂದು ತಿಳಿದಿದೆ ಭಾರತದ ಹಲವು ಸ್ವತಂತ್ರರು, ಶ್ರೀ ಜಾಮ್ನಾದಾಸ್ ಮೊದಲಾದವರ ವೈಸರಾಯರ ಹೇಳಿಕೆಯು ಕಾಂಗ್ರೆಸ್ಸಿನ ಬೇಡಿಕೆಯನ್ನು ಪೂರೈಸುವುದಿಲ್ಲವೆಂದೂ ಅತೃಪ್ತಿಕರವಾದುದೆಂದೂ ಹೇಳಿರುವರು. ಕಾಂಗ್ರೆಸ್ಸು ರಾಷ್ಟ್ರೀಯ ಸರಕಾರದ ವಿಷಯ ಕೇಳುವಾಗ ಅದರ ಕುರಿತು ವೈಸರಾಯರ ಹೇಳಿಕೆಯಲ್ಲಿ ಒಂದಂಶವೂ ಇಲ್ಲದಿರುವುದು ಶೋಚನೀಯವೆಂದು ಕೆಲವು ಮುಖಂಡರು ಅಭಿಪ್ರಾಯಪಟ್ಟಿರುತ್ತಾರೆ.

ಭಾರತದ ಪರಿಸ್ಥಿತಿಯು ವಿಷಮವೇ ಆಗಿದೆ

ಅಮೇರಿಯವರ ವಿಷಾದಸೂಚನೆ

ಮೊನ್ನೆ ಪಾರ್ಲಿಮೆಂಟಿನಲ್ಲಿ ಭಾರತದ ಪರಿಸ್ಥಿತಿಯ ಬಗ್ಗೆ ಅನೇಕ ಪ್ರಶ್ನೋತ್ತರಗಳು ನಡೆದವು ಸೋರೆನ್ಸರು ಭಾರತದ ಪರಿಸ್ಥಿತಿಯ ಕುರಿತು ಗಾಂಧಿಗಳು ಹೊರಡಿಸಿದ ಹೇಳಿಕೆಯ ವಿಷಯ ಭಾರತ ಸಚಿವರಾದ ಅಮೇರಿಯವರೊಡನೆ ಪ್ರಸ್ತಾಪಿಸಿದರು ಅದಕ್ಕೆ ಉತ್ತರವೀಯುತ್ತಾ ಅಮೇರಿಯವರು 'ಜೂಲಾಯಿ ೨೫ರಂದು ಒಂದು ಉಪಪ್ರಶ್ನೆಗೆ ನಾನು ಕೊಟ್ಟ ಉತ್ತರಕ್ಕಾಗಿ ವಿಷಾದಿಸುತ್ತೇನೆ. ನಾನು ಆ ಅರ್ಥ ಬರಲೆಂದು ಹೇಳಿರಲಿಲ್ಲ. ಭಾರತದ ಪರಿಸ್ಥಿತಿಯು ವಿಷಮವಾಗಿದೆ ಯೆಂಬುದನ್ನು ಬ್ರಿಟಿಷ್ ಸರಕಾರವು ಒಪ್ಪುತ್ತದೆ' (ಜೂಲಾಯಿ ತಾ. ೨೫ರಂದು ಪಾರ್ಲಿಮೆಂಟಿನಲ್ಲಿ ಸೋರೆನ್ಸರು ಕೇಳಿದ ಪ್ರಶ್ನೆಗೆ ಉತ್ತರವೀಯುತ್ತಾ ಭಾರತದ ಪರಿಸ್ಥಿತಿಯು ವಿಷಮವಾಗಿದೆಯೆಂದು ನಾನು ಒಪ್ಪಲಾರೆನೆಂದಿದ್ದರು ಅಮೇರಿಯವರು.)

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

— Interest Payable Quarterly.

Savings Bank deposit 3½% on daily balances.

kinds of banking business transacted

ಸ್ವದೇಶಾಭಿಮಾನಿ

ತಾರೀಖು 16—8—1940

ಭಾರತದ ಪರಿಸ್ಥಿತಿ

ವೈಸರಾಯರು ಕಳೆದ ವಾರ ಭಾರತದ ರಾಜಕೀಯದ ವಿಷಯ ಒಂದು ಮಹತ್ವವಾದ ಹೇಳಿಕೆಯನ್ನು ಕೊಟ್ಟಿರುವರು. ಪಾರ್ಲಿಮೆಂಟಿನಲ್ಲಿಯೂ ಲಂಡನಿನ ಬ್ಲೇಕ್‌ಪೂಲ್ ಎಂಬಲ್ಲಿನ ಭಾಷಣದಲ್ಲಿಯೂ ಭಾರತ ಸಚಿವರಾದ ಅಮೆರಿಯವರು ವೈಸರಾಯರು ಹೇಳಿದ ಮಾತಿನಂತಹ ಮಾತುಗಳನ್ನೇ ಆಡಿದ್ದಾರೆ. ಇದರಿಂದ ಭಾರತದ ಕುರಿತು ಇದು ಬ್ರಿಟಿಷ್ ಸರಕಾರದ ಕೊನೆಯ ನಿರ್ಧಾರವೆಂದು ತಿಳಕೊಳ್ಳಬಹುದಾಗಿದೆ.

ಈ ಎಲ್ಲಾ ಹೇಳಿಕೆ ಭಾಷಣಗಳಲ್ಲಿರುವ ಸಾರಾಂಶವೆಂದರೆ, ಭಾರತಕ್ಕೆ ಸಾಮಂತ ಸ್ವರಾಜ್ಯವನ್ನು ಯುದ್ಧ ಮುಗಿದ ಅನಂತರ ಕೊಡಲಾಗುವುದು, ಇಂದು ವೈಸರಾಯರ ಅಧಿಕಾರಿ ಮಂಡಲವನ್ನು ವಿಸ್ತರಿಸಲಾಗುವುದು; ಅದರಲ್ಲಿರುವ ಅಧಿಕಾರಿಗಳೊಡನೆ ಭಾರತದ ಜನತೆಯ ಪ್ರತಿನಿಧಿಗಳಿಗೂ ಕೂಡಾ ಸ್ಥಾನ ಕೊಡಲಾಗುವುದು, ಯುದ್ಧದಲ್ಲಿ ಭಾರತದ ಮುಖಂಡರು ಸರಕಾರಕ್ಕೆ ಸಹಾಯ ಕೊಡಬೇಕು; ಅಲ್ಪಸಂಖ್ಯಾಕರ ವಿಷಯವಾಗಿ ವಿಚಾರಿಸಲಾಗುವುದು, ಬಹು ಕಾಲದ ಸಂಬಂಧದಿಂದ ಭಾರತದ ವಿಚಾರದಲ್ಲಿ ಬ್ರಿಟನಿಗೂ ಆಸಕ್ತಿಯಿದೆಯೆಂದಾಗಿದೆ

ಕಳೆದ ವರ್ಷವೂ ಸಾಮಾನ್ಯ ಇದೇ ತರಹದ ಪ್ರಕಟಣೆಯೊಂದನ್ನು ವೈಸರಾಯರು ಮಾಡಿದ್ದರು. ಭಾರತದಲ್ಲಿ ಇಂದು ಪ್ರಬಲಪಕ್ಷವಾಗಿರುವ ಕಾಂಗ್ರೆಸು ಕೇಳುವುದೇನೆಂಬ ವಿಷಯವನ್ನು ಅದು ಹಲವು ಸಮಯದಿಂದ ಸಾರಿದೆ. ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು, ಕೇಂದ್ರದ ಆಡಳಿತವು ಜನರ ಪ್ರತಿನಿಧಿಗಳ ವಶಬರಬೇಕು; ರಾಜ್ಯಾಂಗ ರಚನೆಗೆ ಆಸ್ಪದವಾಗುವಂತೆ ಕಲ್ಪಿಸಬೇಕು; ಹೀಗಾದಲ್ಲಿ ಬ್ರಿಟನಿಗೆ ಇಂದು ಬೆಂಬಲ ಕೊಡಬಹುದೆಂದು ಕಾಂಗ್ರೆಸಿನ ಕೇಳಿಕೆಯಾಗಿದೆ. ವೈಸರಾಯರ ಹೇಳಿಕೆಗೂ ಕಾಂಗ್ರೆಸಿನ ಕೇಳಿಕೆಗೂ ಅಜಗಜಾಂತರವಿದೆಯೆಂದು ನೆಹರುಗಳು ಅಭಿಪ್ರಾಯಪಡುತ್ತಾರೆ. ಆದರೆ ಹಲವರು ಕಾಂಗ್ರೆಸು ಮುಖಂಡರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಲಿಲ್ಲ; ಬರುವ ತಾ. ೧೮ರಲ್ಲು ವಾರ್ಧಾದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯು ಜರಗುವುದು. ಅದರಲ್ಲಿ ವೈಸರಾಯರ ಹೇಳಿಕೆಗೆ ಕಾಂಗ್ರೆಸಿನ ಉತ್ತರವು ಪ್ರಕಟಿಸಲ್ಪಡುವುದೆಂದು ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೌಲಾನಾ ಆಜಾದರು ಹೇಳಿರುತ್ತಾರೆ. ಕೆಲವು ಮಂದಪಕ್ಷದ ಧುರೀಣರು, ವೈಸರಾಯರ ಹೇಳಿಕೆಯನ್ನು ಮುಖಂಡರುಗಳು ಯೋಚಿಸುವುದು ಅವಶ್ಯವೆಂದಿದ್ದಾರೆ.

ವೈಸರಾಯರಿಂದ ಕಾಂಗ್ರೆಸಿನ ಅಧ್ಯಕ್ಷರಾದ ಮೌಲಾನಾ ಆಜಾದರಿಗೆ ಭೇಟಿಯಾಗಲು ಆಮಂತ್ರಣ ಬಂತು. ವೈಸರಾಯರ ಹೇಳಿಕೆಯನ್ನು ನೋಡಿದರೆ ಮಾತನಾಡಿ ಪ್ರಯೋಜನ ಸಿಗುವ ಹಾಗಿಲ್ಲವೆಂದು, ರಾಷ್ಟ್ರಪತಿಗಳು ಆಮಂತ್ರಣವನ್ನು ಅಂಗೀಕರಿಸಲಿಲ್ಲ. ಅಂತೂ ಇಂದು ಭಾರತದ ಪರಿಸ್ಥಿತಿಯು ಭಾರತ ಸಚಿವರಾದ ಅಮೆರಿಯವರೇ ಒಪ್ಪಿಕೊಂಡಂತೆ, ನಿಜವಾಗಿಯೂ ವಿಷಮವಾಗಿದೆ. ವಿಷಮತೆಯನ್ನು ಪರಿಹರಿಸಲು ಮನಸ್ಸಿದ್ದರೆ ಬ್ರಿಟಿಷ್ ಸರಕಾರಕ್ಕೆ ಮಾರ್ಗವಿದೆ

ಯುವಕರ ವಿದ್ಯಾಭ್ಯಾಸ

"ಒಂದು ರಾಷ್ಟ್ರದ ವಿದ್ಯಾಭ್ಯಾಸದ ವೈಶಿಷ್ಟ್ಯವೆಂದರೆ, ಕೇವಲ ಆ ರಾಷ್ಟ್ರದ ಭವಿಷತ್ತನ್ನು ಬೆಳಗಿಸುವುದು ಮಾತ್ರವಲ್ಲ, ಸುತ್ತು ಮುತ್ತಲಿನ ರಾಷ್ಟ್ರಗಳ ಏಳಿಗೆಗೂ ಸಹಕಾರಿಯಾಗುವುದಾಗಿದೆ" ಹೀಗೆಂದು ಮದ್ರಾಸು ವಿಶ್ವವಿದ್ಯಾನಿಲಯದ ಪದವಿಪ್ರದಾನ ಸಮಾರಂಭೋತ್ಸವದ ಭಾಷಣ ಮಾಡುತ್ತಾ, ಕೊಚ್ಚಿಯ ದಿವಾನರಾದ ಶ್ರೀ। ಷಣ್ಮುಗಂ ಚೆಟ್ಟಿಯವರು ಹೇಳಿದರು

ಒಂದು ಜನಾಂಗದಲ್ಲಿ ಯುವಕರ ಸ್ಥಾನವು ದೊಡ್ಡದು. ಅವರಿಂದ ಅನೇಕ ಕಾರ್ಯಗಳು ಆಗಬೇಕಾಗಿವೆ. ಯುವಕರನ್ನು ಭದ್ರವಾಗಿ ನೀತಿಯುಕ್ತವಾದ ಲೋಕೋಪಕಾರಿಯಾದ, ನೈಸರ್ಗಿಕ ವಿದ್ಯಾಭ್ಯಾಸದಿಂದ ಪರಿಶುದ್ಧಗೊಳಿಸದಿದ್ದರೆ ಲೋಕಶಾಂತಿ ಸಾಧಿಸಲಾರದು. ದೇಶದ ಯುವಕರನ್ನು ಎತ್ತಿ ಕಟ್ಟಿ, ಸ್ವದೇಶದ ಪ್ರೇಮಕ್ಕಾಗಿ ಉದ್ಧಾರಕ್ಕಾಗಿ ಎಂಬ ಜಯಘೋಷದಿಂದ, ತಮ್ಮ ನೆರೆಕರೆಯ ರಾಷ್ಟ್ರಗಳ ಮೇಲೆ ಕತ್ತಿಕಟ್ಟುವ ಕೆಲ ಮುಂದಾಳುಗಳ, ಹಿಟ್ಲರನಂತಹ ಸರ್ವಾಧಿಕಾರಿಗಳ ಕೈಗೆ ಯುವಕರು ಬಲಿಯಾಗುತ್ತಾರೆ. ಲೋಕಶಾಂತಿ ಕೆಡುತ್ತದೆ. ದೇಶದ ವಿದ್ಯಾಭ್ಯಾಸವು ಯುವಕರನ್ನು ವಿಶಾಲಮತಿಗಳಾಗಿ ಮಾಡಬೇಕಾಗಿದೆ. ಇದೇ ದಿವಾನರ ಮಾತಿನ ವ್ಯಾಖ್ಯಾನವಾಗಬಹುದು. ಆದರೆ ಇಂದು ಸಾಮಾನ್ಯವಾಗಿ ಜಗತ್ತಿನಲ್ಲಿ ಪ್ರಚಲಿತ ಸರಕಾರದ ಧೋರಣೆಗೆ ಅನುಸಾರವಾಗಿ ವಿದ್ಯಾಭ್ಯಾಸವು ಕೊಡಲ್ಪಡುತ್ತದೆ. ಕೆಟ್ಟದೋ ಒಳ್ಳೆಯದೋ ಯುವಕರು ಆ ರೀತಿ ಶಿಕ್ಷಣ ಹೊಂದಬೇಕು, ಇದರ ದುಷ್ಫಲವನ್ನು ಕಂಡು ಅದಕ್ಕೆ ವಿರೋಧವೆತ್ತಿದ ಮೇಧಾವಿಗಳು ಹಲವರಿದ್ದಾರೆ. ಮುಂದಕ್ಕೆ ಇಂತಹ ಪ್ರಚಾರಕರ ಯುಕ್ತಿಯನ್ನು ಮೇಧಾವಿಗಳ ಸ್ವತಂತ್ರ ಧೀಮಂತರ ವಿಚಾರಶಕ್ತಿಯು ತಡೆದು ವಿದ್ಯಾಭ್ಯಾಸವನ್ನು ಸರಿದಾರಿಗೆ ತಳ್ಳುವ ಶುಭಕಾಲವು ಬರಬೇಕೆಂದು ನಾವು ಹಾರೈಸಬೇಕು.

ಇಟಲಿಯ ಉಪಟಳ

ಬ್ರಿಟಿಷ್ ಸೋಮಾಲಿಲೇಂಡಿನಲ್ಲಿ ಇಟಲಿಯನರು ಬಹಳ ಉಪಟಳ ಕೊಡಲಿಕ್ಕೆ ಆರಂಭಿಸಿದ್ದಾರೆ. ಬ್ರಿಟಿಷ್ ಸೋಮಾಲಿಲೇಂಡಿಗೆ ಇಟಲಿಯನ್ ಸೈನ್ಯವು ಮುತ್ತಿಗೆ ಹಾಕಿರುತ್ತದೆ. ಅವುಗಳು ಝೀಲಾ ಎಂಬ ಬಂದರವು ಒಮ್ಮೆಗೇ ಪ್ರವೇಶಿಸಿವೆ. ಈ ಬಂದರವು ಇಟಲಿಗೆ ಕೊಡಬೇಕಾಗ ಒಪ್ಪಿಗೆಯಾಗಿತ್ತೆಂದು ಇಂದು ಅದು ಆಕ್ರಮಿಸಲು ಮೊದಲು ಆರಂಭಮಾಡಿತು. ಮತ್ತೆ ಅಲ್ಲಿಂದಲೂ ಮುಂದುವರಿಯುತ್ತಾ ಇದೆ. ಇಟಲಿಯನ್ ದಳವು ಹಾರಗೀಸಾ ಪಟ್ಟಣವನ್ನೂ ಆಕ್ರಮಣ ಮಾಡಿ ಇಂದು ಬರಬೇರದ ಕಡೆಗೆ ಧಾವಿಸುತ್ತದೆ

ಬರಬೇರವನ್ನು ಆಕ್ರಮಿಸುವುದು ಸುಲಭಸಾಧ್ಯವಲ್ಲ. ಸೋಮಾಲಿಲೇಂಡಿನಲ್ಲಿದ್ದ ಬ್ರಿಟಿಷ್ ಒಂಟೆ ಸೈನಿಕರು ಮತ್ತು ಮೋಟರ್ ಸೈನಿಕರು ಇಟಲಿಯನ್ ಸೈನಿಕರಿಗೆ ಬಲವಾದ ವಿರೋಧವನ್ನು ಕೊಟ್ಟರು. ಇಟಲಿಯನರು ಸಮುದ್ರ ತೀರದಲ್ಲಿ ನೂರೈವತ್ತು ಮೈಲುಗಳನ್ನು ಅತಿಕ್ರಮಿಸಿ ಮುಂದವರಿದಲ್ಲಿ ಮಾತ್ರ ಅವರಿಗೆ ಬರಬೇರಾವನ್ನಾಕ್ರಮಿಸಲು ಸಾಧ್ಯವಾಗಬಹುದು. ಆದರೆ ಹೀಗೆ ಮುಂದುವರಿಯುತ್ತಿರುವಾಗ ಹಾರಗೀಸಾ ಒಡ್ವಿನಾ ಇವುಗಳ ಮುಂದಕ್ಕಿರುವ ಪರ್ವತ ಪ್ರದೇಶಗಳಲ್ಲಿ ಬ್ರಿಟಿಷ್ ಸೈನಿಕರು ಇಟಲಿಯನ್ ಸೈನಿಕರಿಗೆ ವಿರೋಧವನ್ನು ಕೊಡದೆ ಇರಲಾರರು. ಇಟಲಿಯ ಈ ಉಪಟಲದಿಂದ ಬಿಟನ ಅನ್ಯತ್ರ [illegible] ಕಡೆ [illegible] ದೆಯಾದ [illegible] ಕರವಾಗಿಲ್ಲವೆಂದು ತಿಳಿಯುತ್ತಾದ [illegible] ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಿಂದ ಬ್ರಿಟನಿಗೆ ಇಂದು ಬೇಕಾದಷ್ಟು ಸೈನ್ಯಸಹಾಯವು ದೊರಕುವುದು ಸಾಧ್ಯವಿರುವಾಗ ಬ್ರಿಟನಿನಲ್ಲಿರುವ ಬ್ರಿಟಿಷ್ ಸೈನಿಕರೂ, ಅಲ್ಲಿನ ಭದ್ರವಾದ ಕಾವಲೂ ಇದರಿಂದ ತಲ್ಲಣಗೊಳ್ಳುವಂತೆ ತೋರುವುದಿಲ್ಲ

ಜಪಾನಿನ ಅತ್ಯಾಶೆ

ಜಪಾನು ಇಂದು ಇಂಡೋಚೈನದ ಕಡೆಗೆ ಕಾಲಿಟ್ಟಿದೆ. ಇಂಡೋಚೈನದಲ್ಲಿ ತನಗೆ ಕೆಲವು ಹಕ್ಕುಗಳು ಸಿಕ್ಕಬೇಕಾಗಿವೆಯೆಂದು ಅದು ಸಾರುತ್ತಿದೆ. ಜಪಾನಿನ ಸೈನಿಕರು ಮುಂದುವರಿದೇ ಬಂದಿರುವರು. ಜಪಾನು ಇಂಡೋಚೈನದಲ್ಲಿ ವಿಮಾನ ನಿಲ್ದಾಣಕ್ಕೆ, ಸೈನ್ಯಸ್ಥಾಪನೆಗೆ ಸ್ಥಳ ಕೇಳುತ್ತಿದೆ. ಇದನ್ನು ಕೊಡಲಾರದಿದ್ದರೆ ಕಾದಾಟವೆಂಬುದು ಸಿದ್ಧ.

ಜಪಾನಿಗೆ ಸಾಮ್ರಾಜ್ಯಲಾಲಸೆ ಹೆಚ್ಚಿದೆ. ಸಮಯ ಸಾಧಿಸಿ ಜಪಾನು ಇಂದು ಮುಂದುವರಿಯುತ್ತಿದೆ. ಯೂರೋಪಿನಲ್ಲಿ ಇತರ ರಾಷ್ಟ್ರಗಳು ಅನ್ಯತ್ರ ಯುದ್ಧಾಸಕ್ತರಾಗಿರಲು, ಪೂರ್ವದಲ್ಲಿ ತನ್ನ ಶಕ್ತಿಯನ್ನು ಬಲಪಡಿಸಿಕೊಳ್ಳಲಿರದು. ಜಪಾನೂ ಈಗ ಹೀಗೆ ಒಂದಲ್ಲೊಂದು ವಿಧದಿಂದ ನಿತ್ಯ ಚಟುವಟಿಕೆಗಳಲ್ಲಿಯೇ ಮಗ್ನವಾದಂತಿದೆ

ಫ್ರೆಂಚರು ಇಂಡೋಚೈನವನ್ನು ಜಪಾನಿಗೆ ಬಿಡಲಾರದವಾಗಿ ಹಿಂದೆ ಚೀನಕ್ಕೆ ಭರವಸೆಯಿತ್ತಿದ್ದರು. "ಇಂದು ಪಿಟೇನ್ ಸರಕಾರದಾದರೂ ಅಂದಿನ ಮಾತನ್ನು ಪಾಲಿಸಬೇಕಾಗಿದೆ. ಫ್ರೆಂಚ್ ಸೈನಿಕರು ರಕ್ಷಣೆಯ ಸಿದ್ಧತೆಗಳನ್ನು ಸಾಧಿಸುತ್ತಿರುವರು, ಇಟಲಿ, ಜರ್ಮನಿಗಳು ಪಿಟೆನ್ ಸರಕಾರವನ್ನು ಜಪಾನಿನೊಡನೆ ಸಂಧಿಮಾಡಿಕೊಳ್ಳಬೇಕಾಗಿ ಒತ್ತಾಯಪಡಿಸುತ್ತಿರುವವೆಂಬುದೊಂದು ವದಂತಿ. ಇದು ಸತ್ಯವಾದಲ್ಲಿ ಮುಂದೆ ಅವಸ್ಥೆಯು ಕೆಟ್ಟಂತೆಯೇ ಸರಿ

ಭಾರತದಲ್ಲಿ ಪತ್ರಿಕೋದ್ಯಮ

ಮೊನ್ನೆ ತಮಿಳುನಾಡು ಪತ್ರಿಕೋದ್ಯಮಿಗಳ ಪರಿಷತ್ತು ಶ್ರೀ ಸಿ ಆರ್ ಶ್ರೀನಿವಾಸನವರ ಅಧ್ಯಕ್ಷತೆಯಲ್ಲಿ ಜರಗಿತು. ಅವರ ಅಧ್ಯಕ್ಷ ಭಾಷಣದಲ್ಲಿ ಭಾರತದ ಪತ್ರಿಕೋದ್ಯಮದ [illegible] ಚಿತ್ರವೇ ಚಿತ್ರಿತವಾಗಿತ್ತೆನ್ನಬಹುದು

ವಿದ್ಯಾಭ್ಯಾಸದಲ್ಲಿ ಮುಂದುವರಿದ ತಹ ಪಾಶ್ಚಾತ್ಯ ದೇಶಗಳಲ್ಲಿ ಎಲ್ಲ ಬಹುಮಂದಿಯೂ ಓದುವ ಅಭ್ಯಾಸವುಳ್ಳವರಾಗಿದ್ದಾರೆ. ಅಲ್ಲಿಯೂ ಪತ್ರಿಕೋದ್ಯಮಿಗಳು ಅತ್ಯಂತ ಸಾಹಸದಿಂದ ಜೀವಿಸಬೇಕಾಗಿದೆ. ಅಂತಹ ಪರಿಸ್ಥಿತಿಯು ಅಲ್ಲಿರುವಾಗ, ಭಾರತದೇಶದಲ್ಲಿ ಪತ್ರಿಕೆಯಲ್ಲಿ ಬರೆದ ಯಾವುದೋ ಒಂದು ವಿಚಾರವು, ನೂರರಲ್ಲಿ ತೊಂಬತ್ತನಾಲ್ಕು ಮಂದಿಯೂ [illegible] ಅಕ್ಷರಾಭ್ಯಾಸವುಳ್ಳ [illegible] ಹಸ್ತತಂತೆಯೇ ಪತ್ರಿಕೆ [illegible] ಓದುವ ಹವ್ಯಾಸದವರ ಇಲ್ಲ [illegible] ಇಲ್ಲಿನ ಭೀಕರ ಪರಿಸ್ಥಿತಿಯನ್ನು ವಿಚಾರಿಸಿದರೆ ಮೈ ಝುಮ್ಮೆನ್ನದಿರಲಾರದು

ಇದಕ್ಕೆ ಯಾರನ್ನು ಅಪವಾದಕ್ಕೆಳೆಯುವುದೂ ಸರಿತೋರುವುದಿಲ್ಲ. ಇಂದಿನವರು, ಮುಂದಕ್ಕಾದರೂ ಹೊಸ ಭಾರತವೊಂದನ್ನು ನಿರ್ಮಾಣಮಾಡಬೇಕಾಗಿದೆ. ರಾಜಕಾರಣದಲ್ಲಿ ಇನ್ನೂ ಯಾವುದೇ ವಿಷಯದಲ್ಲಿ ಜನತೆಯು ಮುಂದೊತ್ತಿ ಕೆಲಸ ಮಾಡಬೇಕಾದರೆ, ಜನತೆಗೆ ಆ ವಿಷಯಗಳ ಅಭಿರುಚಿ ಹುಟ್ಟಬೇಕು. ಅದಕ್ಕೆ ವಿದ್ಯಾಪ್ರಚಾರವಾಗಬೇಕು.

ಕಡ್ಡಾಯದ ಬಾಲಶಿಕ್ಷಣದೊಡನೆ, ರಭಸದಿಂದ ದೇಶದ ಸಂದುಗೊಂದುಗಳಲ್ಲಿಯೂ ಪ್ರಾಯಸ್ಥರ ವಿದ್ಯಾಭ್ಯಾಸವಾಗಬೇಕು. ಅವರಿಗೆ ಅಕ್ಷರಜ್ಞಾನವನ್ನು ಕೊಡುವುದರೊಡನೆ, ಆಗಾಗ ರಾಜಕೀಯ ಮೊದಲಾದ ವಿಷಯಗಳ ಶಾಸ್ತ್ರೀಯಜ್ಞಾನವಾಗುವ ಉಪನ್ಯಾಸಗಳನ್ನೇರ್ಪಡಿಸಬೇಕು. ಆಗ ಅವರು ತಮ್ಮನ್ನು ತಾವು ಅರಿತುಕೊಳ್ಳುತ್ತಾರೆ. ದೇಶದೇಳಿಗೆಯ ವಿಷಯದಲ್ಲಿ ತಾವು ಮಾಡತಕ್ಕ ಕರ್ತವ್ಯವನ್ನು ಮನಗಾಣುತ್ತಾರೆ. ಭಾರತಕ್ಕೇ ಏಳಿಗೆಯಾಗಲಿದೆ; ಅದರೊಡನೆ ಪತ್ರಿಕೋದ್ಯಮಕ್ಕೂ ಅಪಾರ ವೃದ್ಧಿಯಾಗುವುದು.

ಅಹಿಂಸೆಯ ಕಡೆಗೆ ಜಗತ್ತು ಧಾವಿಸುತ್ತಿದೆ!

ಅಹಿಂಸೆ ಪ್ರಗತಿಯ ಚಿಹ್ನೆ!

ಕಾಂಗ್ರೆಸು ಅಹಿಂಸೆಯನ್ನು ತ್ಯಜಿಸಿತೆ?

—ಮಹಾತ್ಮರ ಅಮೃತವಾಣಿ—



ಖಾನ್ ಅಬ್ದುಲ್ ಗಫರ್‌ಖಾನರು

ಮಾನವ ಜೀವನವು ಅಹಿಂಸೆಯ ಡೆಗೆ ಮೆಲ್ಲಮೆಲ್ಲನೆ ಮುಂದುವರಿಯುತ್ತಿದೆಯೆಂದಾದರೆ, ಮುಂದೆ ದು ಇನ್ನೂ ಹೆಚ್ಚಾಗಿ ಮುಂದುವ ಯಲಿದೆಯೆಂದು ತಿಳಿಯಬೇಕು; ಪ್ರವಾದಿಗಳು, ಅವತಾರ ಪುರುಷರು ಹಿಂಸೆಯನ್ನು ಬೋಧಿಸಿದರು; ಮನುಷ್ಯನಿಗೆ ಹಿಂಸೆಯನ್ನು ತಿಳಿಸಬೇಕಾದ ಅವಶ್ಯಕತೆಯಿಲ್ಲ. ಮನುಷ್ಯನು ಮೃಗಬುದ್ಧಿಯಿಂದ ಹಿಂಸಾಪರನಾಗಿದ್ದಾನೆ. ಆದರೆ ಆತ್ಮದಲ್ಲಿ ಹಿಂಸಾಮಯನಾಗಿದ್ದಾನೆ. ಂದು, ಯುದ್ಧಕಾಲದಲ್ಲಿ ಮಾನವನು ಅಹಿಂಸೆಯ ವಿಷಯವನ್ನು ಹೆಚ್ಚಾಗಿ ಅರ್ಥಮಾಡಿಕೊಂಡಿದ್ದಾನೆಂದು ನಾನು ಪಾಶ್ಚಾತ್ಯ ದೇಶದಿಂದ ಬಂದ ಆಧಾರಪೂರ್ವಕ ಹೇಳಬಲ್ಲೆ. ಕಾಂಗ್ರೆಸಂತೂ ಅಹಿಂಸೆಯನ್ನೇ ಪ್ರತಿಜ್ಞೆಯಾಗಿ ತೆಗೆದುಕೊಂಡಿದೆ. ಕಾಂಗ್ರೆಸ್ಸಾಗಲಿ, ಕಾಂಗ್ರೆಸು ಧುರೀಣರಾಗಲಿ ಹೆಚ್ಚುತ್ತಿರುವ ಅಹಿಂಸೆಯನ್ನು ಬಿಟ್ಟುಕೊಡಲಾರರು” ಹೀಗೆಂದು ಮಹಾತ್ಮಾಜಿಯವರು ಅಹಿಂಸೆಯ ಕುರಿತು ಸಂಶಯಗೊಂಡ ಪತ್ರಲೇಖಕರೊಬ್ಬರಿಗೆ ಉತ್ತರ ಬರೆಯುತ್ತಾ ಹೇಳುತ್ತಾರೆ.

“ಕಾಂಗ್ರೆಸು, ಒಂದ ಗಡಿಯನ್ನು ಹಾಕಿಕೊಂಡರೂ, ಅಹಿಂಸೆಯಲ್ಲಿ ತನಗೆ ವಿಶ್ವಾಸವಿದೆಯೆಂಬುದನ್ನು ಸ್ಪಷ್ಟವಾಗಿ ಸಾರಿದೆ, ವರ್ಧಾ ನಿರ್ಣಯಕ್ಕೆ ವಿರುದ್ಧವಾಗಿ ಅಖಿಲಭಾರತ ಕಾಂಗ್ರೆಸು ಕಮಿಟಿಯಲ್ಲಿ, ತತ್ವಕ್ಕಾಗಿ ಮತಕೊಟ್ಟವರ ವಿಷಯವನ್ನು ಆಲೋಚಿಸಬೇಕು. ಅವರು ಅಲ್ಪ ಸಂಖ್ಯಾಕರಿರಬಹುದು, ಆದರೆ, ತತ್ವವಿಲ್ಲದೆ, ಬರಿಯ ಕಾರ್ಯಕ್ರಮ ಮಾತ್ರವಿರುವಲ್ಲಿ ಬಹುಮತ ಅಲ್ಪಮತಗಳ ವಿಷಯ ಬಹುಮತದಲ್ಲಿ ಅಲ್ಪಮತವು ಅಡಗುತ್ತದೆ, ಆದರೆ ಅಹಿಂಸೆಯಂಥ ತತ್ವದ ವಿಷಯದಲ್ಲಿ ಅಲ್ಪ ಮತವು ಅನ್ವಯಿಸುವುದಿಲ್ಲ. ಅವರು ಅಲ್ಪಸಂಖ್ಯರಾದರೂ, ಅಹಿಂಸೆಯೇ ಎಲ್ಲಾ ಬಗೆಯ ಸಂಕಷ್ಟಗಳಿಗೆ ನಿವಾರಕವೆಂಬ ಗಹನವಾದ ನಿರ್ಧಾರವುಳ್ಳವರು, ಅವರ ನಿರ್ಧಾರವು ಹೆಚ್ಚು ಫಲಕಾರಿಯಾಯಿತೋ ಇಲ್ಲವೋ ಎಂಬ ವಿಷಯವು ಬೇರೆ. ಆದರೆ ಇದರಿಂದ ಸಂಶಯಕ್ಕೆ ಆಸ್ಪದವಿಲ್ಲ.

“ನಾನು ಒಬ್ಬ [illegible]. ಅಹಿಂಸೆಯ ವಿಷಯವಾಗಿ ನಾನು ಯಾವ ಅಲ್ಪ ಸ್ವಲ್ಪ ಪ್ರಭಾವ ಬೀರಿರುವೆನೋ ಅದು ನನ್ನೊಡನೆ ಅಳಿಯಬಹುದೆನ್ನುವುದು ಸರಿಯಲ್ಲ. ಕಾಂಗ್ರೆಸಿನಲ್ಲಿ ಸ್ವಯಂವಿಚಾರವಂತರಾದ ಹಲವು ಮಂದಿ ಧುರೀಣರಿದ್ದಾರೆ. ಮೌಲಾನರು ಬಹಳ ಓದಿದ ವಿಶಾಲಮತಿಯುಳ್ಳವರು. ಅರೇಬಿಯನ್ ಪರ್ಶಿಯನ್ ಪಾಂಡಿತ್ಯದಲ್ಲಿ ಅವರನ್ನು ಸರಿಗಟ್ಟುವವರು ಕೆಲವರೇ ಇರಬಹುದು. ಅಹಿಂಸೆಯೇ ಭಾರತವನ್ನು ಸ್ವತಂತ್ರಮಾಡಲು ಸಾಧನವಾಗುವುದೆಂದು ಅನುಭವವೇ ಅವರಿಗೆ ತಿಳಿಸಿತು. ಪಂಡಿತ ನೆಹರುಗಳು ಚರಿತ್ರೆಯಲ್ಲಿ ವಿಶಾರದರು. ಆಧುನಿಕ ಪ್ರಪಂಚದ ಪಂಡಿತರು. ಅವರಾದರೂ ಪೂರ್ಣ ಪರಿಜ್ಞಾನದಿಂದಲೇ ಅಹಿಂಸೆಯನ್ನು ಒಪ್ಪಿಕೊಂಡಿದ್ದಾರೆ. ಅಹಿಂಸೆಯಲ್ಲಿ ವಿಶ್ವಾಸವಿಡದ ಪ್ರಮುಖ ಮುಂದಾಳುಗಳೆಂಬವರೇ ಕಾಂಗ್ರೆಸಿನಲ್ಲಿ ಇಲ್ಲ. ನಾನು ಹೋದ ಕೂಡಲೇ ಅವರೆಲ್ಲರೂ ಅಹಿಂಸೆಯನ್ನು ಬಿಟ್ಟುಬಿಡುವರೆಂಬುದು ಅವರಿಗೂ ಮಾನವ ಪ್ರಕೃತಿಗೂ ಅಪಮಾನ ಮಾಡಿದಂತೆ. ಪ್ರತಿಯೊಬ್ಬನೂ ಸ್ವತಃ ವಿಚಾರಿಸಬಲ್ಲನೆಂದನ್ನು ನೀವು ತಿಳಿದಿರಬೇಕು. ಅಷ್ಟರಿಂದ ಕಾಂಗ್ರೆಸು ಅಹಿಂಸೆಯನ್ನು ಬಿಟ್ಟುಕೊಟ್ಟದೆಯೆಂದು ಯಾರೂ ತಿಳಿಯದಿರಲಿ. ಅಹಿಂಸೆಯ ವಿಷಯ ಕಾಂಗ್ರೆಸು ಇಂದು ಒಂದು ಮಿತಿಯನ್ನು ಮಾಡಿದೆಯೆಂಬುದು ಸತ್ಯ. ಇದರಿಂದ ಅಹಿಂಸೆಯ ಕ್ಷೇತ್ರವು ಸಂಕುಚಿತವಾಗುತ್ತದೆ. ಸೂಕ್ಷ್ಮವಾಗುತ್ತದೆ. ಇದರಿಂದ ಇಂದಿನಿಂದ ಚರ್ಚೆಗಾದರೂ ಅವಕಾಶವೊದಗಿತು. ಅಹಿಂಸೆಯನ್ನು ವಿಶಾಲತೆಗೊಳಿಸಲು, ಕಾಂಗ್ರೆಸು ವಿಶಾಲವಾಗಿ ಸ್ವೀಕರಿಸಲು ನಾನು ಯತ್ನಿಸುತ್ತೇನೆ.

‘ನನ್ನ ಪಠಾಣರು ಬೇಟೆಗಾರರಾಗಿದ್ದರು. ಆದರೆ ಅವರಿಗೆ ಆ ಜೀವನವು ಒಲ್ಲದೆ ಹೋಯಿತು. ಅವರು ಹಿಂಸೆಯನ್ನು ಬಿಟ್ಟು ಬೇಟೆಯನ್ನು ಬಿಟ್ಟು ಮಣ್ಣನ್ನು ನಂಬಿ ಹೊಟ್ಟೆಹೊರೆದರು. ಅವರು ಅಹಿಂಸೆಯನ್ನು ಆಶ್ರಯಿಸಿದರು. ಅವರು ನಾಗರಿಕರಾದರು. ಇದೆಲ್ಲಾ ಅಹಿಂಸೆಯು ಅಭಿವೃದ್ಧಿ ಹೊಂದಿದ ಕುರುಹುಗಳಾಗಿವೆ. ಪ್ರವಾದಿಗಳು, ಅವತಾರ ಪುರುಷರು ಅಹಿಂಸೆಯನ್ನು ಸಾರಿದರು. ಜಗತ್ತು ಅಹಿಂಸೆಯ ಕಡೆಗೆ ದಿನದಿಂದ ದಿನಕ್ಕೆ ಸಾಗುತ್ತಿದೆ.’

ಡಿಗಾಲೆಯವರ ಉದಾಹರಣೆ

ಫ್ರೆಂಚರು ಸತ್ಯಾಗ್ರಹ ಮಾಡಿದರೆಂದು ಡಿಗಾಲೆಯವರು ಸಾರಿದ ವಿಷಯ ಗಾಂಧಿಜಿಯವರು ಹೇಳುತ್ತಾ ಇದು ನಿಜವಾದ ಅಹಿಂಸೆಯಿಂದ ಬಂದುದೆಂದು ನಾನು ನಂಬುವುದಿಲ್ಲವಾದರೂ, ಅಹಿಂಸೆಯು ಅನಿರೀಕ್ಷಿತವಾಗಿ ಹೇಗೆ ಯುರೋಪಿನ ರಾಜಕಾರಣದಲ್ಲಿಯೂ ಕೆಲಸಮಾಡುತ್ತಿದೆಯೆಂದು ಬರೆಯುತ್ತಾರೆ.

ಕಾಂಗ್ರೆಸ್ಸು ಅಹಿಂಸಾ ಮಾರ್ಗವನ್ನು ಬಿಟ್ಟಿತೇ?

ಖಾನ್ ಅಬ್ದುಲ್ ಗಫರ್ ಖಾನರ ಸ್ಪಷ್ಟವಾದ ಹೇಳಿಕೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟ ಮೇಲೆ ಖಾನ್ ಅಬ್ದುಲ್ ಗಫರ್ ಖಾನ್‌ರವರು ತಮ್ಮ ಪತ್ರಿಕೆಯಾದ ‘ಪುಖ್ತೂನ್’ನಲ್ಲಿ ಬರೆಯುತ್ತ ತಾವು ರಾಜೀನಾಮೆಯನ್ನು ಏತಕ್ಕೆ ಕೊಟ್ಟರೆಂಬುದನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ.

‘ಇಲ್ಲಿ ವರ್ಧಾ ನಿರ್ಣಯಗಳು ಅಂಗೀಕೃತವಾದ ಮೇಲೆ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ರಾಜಾಜಿಯವರೂ ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯನ್ನು ನೋಡಿದರೆ ಕಾಂಗ್ರೆಸ್ಸು ಸ್ಪಷ್ಟವಾದ ಅಹಿಂಸಾಮಾರ್ಗವನ್ನು ಬಿಟ್ಟಿರುವುದಾಗಿಯೂ ಮತ್ತು ಅದಕ್ಕೆ ಬದಲಾಗಿ ಅವರ ಶುದ್ಧ ದಾರಿಯಾದ ಹಿಂಸಾಮಾರ್ಗವನ್ನು ಅನುಸರಿಸುವುದಾಗಿಯೂ ಬೆನ್ನಾಗಿ ಕಾಣುತ್ತದೆ. ಅಂದರೆ ಬ್ರಿಟಿಷರು ಕಾಂಗ್ರೆಸ್ಸಿನ ಶರತುಗಳಿಗೆ ಒಪ್ಪಿದರೆ, ಕಾಂಗ್ರೆಸ್ಸು ಬ್ರಿಟಿಸ್ಸಿನ ಪರವಾಗಿ ಕೃತ್ಯಪೂರ್ವಕವಾಗಿ ಯುದ್ಧಕ್ಕೆ ಸೇರಿ ಎಲ್ಲ ಸಹಾಯವನ್ನೂ ನೀಡುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಆರಿಸಿಕೊಂಡಿರುವ ದಾರಿಯು ಖುದೈ ಖಿದ್ಮತ್‌ಗಾರರ ಪಾಲಿಗಲ್ಲ. ಅದು ನಿಜವಾಗಿಯೂ ನನ್ನ ತತ್ವಗಳಿಗೂ ಮತ್ತು ನಂಬಿಕೆಗಳಿಗೂ ವಿರೋಧವಾಗಿದೆ. ನನ್ನದು ಶಾಂತಿಮಾರ್ಗ; ಪ್ರೇಮ ಮಾರ್ಗ. ಯುದ್ಧ ಮಾರ್ಗವಲ್ಲ, ದ್ವೇಷ ಮಾರ್ಗವಲ್ಲ. ನಮಗೆ ಕಲಹವಿಲ್ಲ, ಜಾತಿ ಮತಗಳ ಭೇದವಿಲ್ಲದೆ, ಜನಜನಾಂಗಗಳ ಭೇದವಿಲ್ಲದೆ ಇಡೀ ಮಾನವ ಜನಾಂಗದ ಸೇವೆಗಾಗಿಯೇ ನಾವಿರುವುದು. ಇತರರನ್ನು ಕೊಲ್ಲುವುದು ನಮ್ಮ ತತ್ವವಲ್ಲ, ಆದರೆ, ನಮ್ಮ ಪ್ರಾಣಗಳನ್ನು ಬಲಿಗೊಡುವುದು. ಈ ಕಾರಣಕ್ಕಾಗಿಯೇ ನಾನು ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟದ್ದು. ವರ್ಕಿಂಗ್ ಕಮಿಟಿಯು ಆರಿಸಿಕೊಂಡ ಮಾರ್ಗದಿಂದ ಏನೊಂದೂ ಒಳ್ಳೆಯದು ಉಂಟಾಗುವುದೆಂದು ನನಗೆ ಕಂಡು ಬರಲಿಲ್ಲ.

‘ನಮ್ಮ ಜನರ ಕಲ್ಯಾಣವು ಅಹಿಂಸೆಯೊಡನೆ ಸೇರಿಕೊಂಡಿದೆ. ಅಹಿಂಸೆಯು ಪಠಾಣರನ್ನು ಇನ್ನೂ ಧೈರ್ಯಶಾಲಿಗಳನ್ನಾಗಿ ಮಾಡಿರುವುದೇ ಅಲ್ಲದೆ, ಅವರಲ್ಲಿ ಹೇಡಿತನವನ್ನು ನಿರ್ಮೂಲ ಮಾಡಿದೆ.

‘ಖುದೈ ಖಿದ್ಮತ್‌ಗಾರ್ ಚಳುವಳಿಯ ಮೂಲ ತತ್ವಗಳನ್ನು ಸರಿಯಾಗಿ ಪಾಲಿಸಿದ್ದಲ್ಲಿ ಪಠಾಣರು ಹಾಳಾಗಿಹೋಗಿರುವ ತಮ್ಮ ಮನೆಗಳನ್ನು ಸರಿಯಾಗಿ ನಿರ್ಮಿಸಿಕೊಳ್ಳಬಹುದೆಂದು ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ಎಲ್ಲ ಖುದೈ ಖಿದ್ಮತ್‌ಗಾರರೂ ನಾನು ಹೇಳಿರುವುದನ್ನು ಕೂಲಂಕುಷವಾಗಿ ವಿಮರ್ಶಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಅವರು ಒಪ್ಪಿದರೆ ಆಯಿತು. ಇಲ್ಲದಿದ್ದರೆ, (ಒಪ್ಪದಿರುವವರು) ತಮ್ಮ ಜನರಿಗೂ ಮತ್ತು ತಮ್ಮ ದೇಶಕ್ಕೂ ಸೇವೆ ಸಲ್ಲಿಸಲು ಖುದೈ ಖಿದ್ಮತ್‌ಗಾರರಿಗೆ ಒಪ್ಪಿಗೆ ಕೊಡುವುದು ಯೋಗ್ಯವಾಗಿದೆ.

ಹೈಸ್ಕೂಲ್ ಮತ್ತು ಟ್ರೈನಿಂಗ್ ಶಾಲೆಗಳ
ವಿದ್ಯಾರ್ಥಿಗಳಿಗಾಗಿ
ಜಿಲ್ಲೆಯ ಪ್ರಸಿದ್ಧ ಭೂಗೋಳ ಶಿಕ್ಷಕರೊಬ್ಬರಿಂದ ರಚಿತವಾದ
ಭೂಗೋಳದ ಕೈಪಿಡಿ
ಎಂಬೀ ಅತ್ಯುತ್ತಮವಾದ ನೂತನ ಪುಸ್ತಕವೊಂದು ಸಿದ್ಧವಾಗಿದೆ!
ಸರಕಾರೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕೆಂದು ಬಯಸುವ ಎಲ್ಲರೂ ಅವಶ್ಯ ಓದಲೇಬೇಕಾದ ಪುಸ್ತಕ.
ಹೆಸರು ಕೈಪಿಡಿಯಾದರೂ ವಿಶಾಲ ಭೂಗೋಳದ ಜ್ಞಾನ ಭಂಡಾರ!
ಸುಂದರವಾದ ಹಲವು ಚಿತ್ರಗಳು! ವಿವಿಧ ಭೂಪಟಗಳು!
ಅನೇಕ ಪ್ರಶ್ನಾಮಾಲೆಗಳು!
ಅತ್ಯಂತ ಕಡಿಮೆ ಕ್ರಯ! ಬೆಲೆ ರೂ. ೧—೨—೦ ಮಾತ್ರ
ಶಾರದಾ ಛಾಪಖಾನೆ, ಮಂಗಳೂರು.

ಇಟಲಿ ಫ್ರಾನ್ಸುಗಳಲ್ಲಿ ಸತ್ಯಾಗ್ರಹವೆ?

ಡಿಗೋಲೆಯ ಸ್ವಾತಂತ್ರ್ಯ ಸಂದೇಶ!

ಗೋಬೆಲ್ಸನ ಅಪಪ್ರಚಾರ

ಯುದ್ಧ ವಿರೋಧಿಗಳಾಗಿರುವ ಲಕ್ಷಾಂತರ ಜನರು, ಇಟಲಿಯಲ್ಲಿ ಮುಸಲೋನಿ ಸರಕಾರದೊಡನೆ ಅಸಹಕಾರ ಮತ್ತು ಸವಿನಯ ಕಾಯಿದೆ ಭಂಗ ಆಂದೋಲನಗಳನ್ನು ಹೂಡಿರುವರೆಂದು ಲಂಡನಿನ ಒಂದು ಸಾಪ್ತಾಹಿಕ ಪತ್ರಿಕಾ ಪ್ರತಿನಿಧಿಯು ಆ ಪತ್ರಿಕೆಗೆ ತಿಳಿಸಿದ್ದಾನೆ. ನಾಝಿಗಳೊಡನೆ ಯುದ್ಧ ಹೂಡಿ ಸೋತು ಹೋದ ಫ್ರಾನ್ಸಿನೊಡನೆ, ಇಟಲಿಯ ಸೈನಿಕರೂ ಕೂಡ ಪ್ರತ್ಯಕ್ಷ ಸಹಾನುಭೂತಿಯನ್ನು ತೋರಿಸುತ್ತಿದ್ದಾರಂತೆ!

ಜರ್ಮನರ ಲಂಡನ ಪ್ರವೇಶ

ಲಂಡನನ್ನು ಪ್ರವೇಶಿಸಿದ ಅನಂತರ ಎಲ್ಲೆಲ್ಲಿ ಯಾವ ನಿಶಾನೆಗಳನ್ನು ಹೇಗೆ ಇಟ್ಟಿರಬೇಕು, ಜರ್ಮನ ಅಧಿಕಾರಿಗಳು ಅವುಗಳಿಂದ ಯಾವ ಅರ್ಥ ಮಾಡಿಕೊಳ್ಳಬೇಕು ಎಂಬಿತ್ಯಾದಿ ವಿವರಗಳನ್ನು ಜರ್ಮನ ಪ್ರಚಾರ ಖಾತೆಯ ಮಂತ್ರಿ ಗೋಬೆಲ್ಸನು ತಯಾರಿಸಿ ಸಂಬಂಧಪಟ್ಟವರಿಗೆ ತಿಳಿಸಿದಾನಂತೆ ಇದಕ್ಕಿಂತ ಹೆಚ್ಚಿಗೆ ಮಹತ್ವದ ಸುದ್ದಿಗಳು ಯಾವುವೂ ಪ್ರಕಟವಾಗಿರುವುದಿಲ್ಲ

ಅಧಿಕಾರಿಗಳಿಗೆ ಶಿಕ್ಷಣ

ಜರ್ಮನ ಅಧಿಕಾರಿಗಳಿಗೆ ಇಂಗ್ಲಿಷ ಮತ್ತು ರಸ್ಯನ್ ಭಾಷೆಗಳನ್ನೂ ಅವುಗಳೊಳಗಿನ ಪದ ಪ್ರಯೋಗ ವಿಶೇಷತೆಗಳನ್ನೂ ಕಲಿಸುವ ವ್ಯವಸ್ಥೆ ಆಗಿರುವುದು ಮಾತ್ರವಲ್ಲದೆ ಬ್ರಿಟಿಷ ಫ್ರೆಂಚ ಮತ್ತು ಬೆಲ್ಜಿಯಂ ರಾಜ್ಯಗಳ ಆಫ್ರಿಕದ ವಸಾಹತುಗಳಲ್ಲಿ ಪ್ರಚಲಿತವಾಗಿರುವ ಭಾಷೆಗಳನ್ನೂ ಅವರಿಗೆ ಕಲಿಸುತ್ತಿದ್ದಾರೆ ಜರ್ಮನರು ಫ್ರಾನ್ಸ ಮತ್ತು ಬೆಲ್ಜಿಯಮುಗಳನ್ನು ಗೆದ್ದುಕೊಂಡಂತೆ ಬ್ರಿಟನನ್ನೂ ಗೆದ್ದ ತರುವಾಯ, ಆಫ್ರಿಕದ ಈ ರಾಜ್ಯಗಳ ವಸಾಹತುಗಳನ್ನು ಜರ್ಮನಿಗೆ ಸೇರಿಸಿಕೊಂಡು ಅವನ್ನು ಸುಗಮವಾಗಿ ಆಳಲಿಕ್ಕೆ ಈ ವ್ಯವಸ್ಥೆ ಆಗಿರಲೂ ಬಹುದು. ಆದರೆ ಬ್ರಿಟನು ಸೋತರೂ ಬ್ರಿಟಿಷ ಸಾಮ್ರಾಜ್ಯವು ನಾಝಿಗಳ ವಿರುದ್ಧ ಯುದ್ಧವನ್ನು ಮುಂದುವರಿಸುವುದೆಂಬುದು ಈ ನಾಝಿ ಮುಖಂಡರಿಗೆ ತಿಳಿದಿಲ್ಲವಾಗಿರಬಹುದು."

ಫ್ರಾನ್ಸಿನಲ್ಲಿ ಸತ್ಯಾಗ್ರಹ

ಫ್ರಾನ್ಸಿನ ಸೇನಾಧಿಕಾರಿಗಳೊಳಗಿನ ಪರಸ್ಪರ ವಾದದ್ವೇಷ ಮತ್ಸರಗಳಿಂದ ಮತ್ತು ಅವರು ತಮ್ಮ ಸೇನೆಯನ್ನು ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತ ಮಾಡದಿದ್ದುದರಿಂದ ಫ್ರಾನ್ಸು ಅನಾಶ್ರಿತವಾಗಬೇಕಾಯಿತು. ಈಗ ಜರ್ಮನ ನಾಝಿಗಳ ಸೂತ್ರದ ಗೊಂಬೆ ಕುಣಿಸುತ್ತಿರುವ ಒಂದು ಫ್ರೆಂಚ ಸರಕಾರವು ವಿಚಿ ಪಟ್ಟಣದಲ್ಲಿ ಸ್ಥಾಪಿತವಾಗಿದೆ. ಈ ಸರಕಾರವು ಹಿಟ್ಲರನ ನಿರ್ದೇಶದಂತೆ ಫ್ರಾನ್ಸಿಗಾಗಿ ಹೋರಾಡಿದ ಹಿಂದಿನ ಸರಕಾರದ ಪ್ರಧಾನ ಅಧಿಕಾರಿಗಳನ್ನೆಲ್ಲ ವಿಚಾರಣೆಗೆ ಗುರಿಮಾಡಿ ದಂಡಿಸಲು ಪ್ರಯತ್ನ ಮಾಡಿದೆ. ಫ್ರಾನ್ಸಿನಲ್ಲೀಗ ವಿಚಿ ಸರಕಾರದ ನಿರಂಕುಶ ಆಡಳಿತವು ನಡೆಯುತ್ತದೆ. ಆದರೆ ಫ್ರೆಂಚ ಜನತೆಯು ನ್ಯಾಯ ನೀತಿ ಸತ್ಯ ಧರ್ಮ ಮತ್ತು ಪ್ರಜಾಸತ್ತೆಯಲ್ಲಿ ವಿಶ್ವಾಸವನ್ನು ಕಳಕೊಂಡಿದೆ ಎಂದು ಇದರ ಅರ್ಥವಲ್ಲ ಫ್ರೆಂಚ ಜನರು ಮೊದಲಿನಂತೆಯೇ ದೇಶಪ್ರೇಮಿಗಳೂ ಪ್ರಜಾಸತ್ತೆಯಲ್ಲಿ ಸಂಪೂರ್ಣ ಶ್ರದ್ಧೆ ವಿಶ್ವಾಸವುಳ್ಳವರೂ ಆಗಿದ್ದಾರೆ ಈ ಜನರ ಅಖಂಡ ಮುಖಂಡರಾಗಿ ಜನರಲ್ ಡಿಗೋಲೆಯವರು ಬ್ರಿಟನಿನಲ್ಲಿ ಇನ್ನೊಂದು ಫ್ರೆಂಚ ಸರಕಾರವನ್ನು ಸ್ಥಾಪಿಸಿರುವರು ಇವರ ಸರಕಾರವೇ ನ್ಯಾಯಬದ್ಧವಾದದೆಂದು ಬ್ರಿಟಿಷ ಸರಕಾರವು ಅವರನ್ನು ಮನ್ನಿಸಿರುವದು ಈಗ ಜನರಲ್ ಗೋಲೆಯವರು ಒಂದು ವಿನಂತಿಯನ್ನು ಹೊರಡಿಸಿ ಜರ್ಮನ್ ನಾಝಿಗಳ ಅಂಕೆಯೊಳಗಿರುವ ವಿಚಿ ಸರಕಾರದ ವಿರುದ್ಧ ಫ್ರಾನ್ಸಿನಲ್ಲಿರುವ ಸ್ವಾತಂತ್ರ್ಯ ಪ್ರೇಮಿಗಳು ಸತ್ಯಾಗ್ರಹವನ್ನಾರಂಭಿಸಬೇಕೆಂದು ಹೇಳಿದ್ದಾರೆ. ಹಿಂಸೆಯ ದುಷ್ಪರಿಣಾಮಗಳನ್ನು ಕಂಡು ಅನುಭವಿಸಿದ ಫ್ರೆಂಚ ಜನತೆಯು ಅಹಿಂಸಾತ್ಮಕ ವಿರೋಧವನ್ನು ತೋರಿಸಿ ಜಯಶೀಲರಾಗುವುದಾದರೆ ಹಿಂದೂಸ್ಥಾನದೊಂದಿಗೆ ಅದೂ ಜಗತ್ತಿಗೆ ನ್ಯಾಯ ಮತ್ತು ಶಾಂತಿಸ್ಥಾಪನೆಯ ಹೊಸ ಮಾರ್ಗವನ್ನು ತೋರಿಸಿದಂತಾಗುವುದರಲ್ಲಿ ಸಂದೇಹವಿಲ್ಲ

ನೇಗಿಲಯೋಗಿಯೇ ಬಾಗುವೆನು ನಿನ್ನಡಿಗೆ

ಮಳೆಗಾಳಿಗೆ ಮೈಯೊಡ್ಡಿ, ಮಧದಿ ಮಕ್ಕಳನೊಡಗೂಡಿ, ಹಗಲಿರುಳು ತಾ ದುಡಿದು, ಸೊಗಸಿನ
ಬೆಳೆ ಬೆಳೆಸಿ, ಅನ್ನ ಹೊಟ್ಟೆ ತ್ವಾನುಂಡು, ಮಿಕ್ಕುದನು
ಜಗಕೀವ, ನೇಗಿಲ ಯೋಗಿಯೇ ಬಾಗುವೆನು ನಿನ್ನಡಿಗೆ—

ಕಾಡು ಗುಡ್ಡದ ಸಂದಿನಲಿ, ಹಾವು ಚೇಳಿನ ಕಾಟದಲಿ,
ಹಳ್ಳ ಹೊಳೆಗಳ ಹೊಯ್ಲಿನಲ್ಲಿ, ಸಾವು ನೋವಿನ ತಾಣದಲಿ,
ಅಳುಕದೆ ಬಳುಕದೆ ಕಷ್ಟವನು ಭೋಗಿಪ ನೇಗಿಲ
ಯೋಗಿಯೇ ಬಾಗುವೆನು ನಿನ್ನಡಿಗೆ—

ಮಳೆಗಾಳಿ ಚಳಿ ಬಿಸಿಲ ಮರ್ಮವನು ಅರಿತು, ಕಾಲಕ್ಕೆ
ತಕ್ಕಂತೆ ಕಾಳು ಬೇಳೆಯ ಬೆಳೆಸಿ, ಸಮಯದ ಬೆಲೆ
ಯರಿತು ಹಿಗ್ಗದೆ ಕುಗ್ಗದೆ ಫಲದಾಸೆ ಬದಿಗಿಟ್ಟು
ಗೇಯುವಾ ದೂರ ದರ್ಶಿಯೇ ಬಾಗುವೆನು ನಾ ನಿನ್ನ ಅಡಿಗೆ—

ಜೇನು ನೊಣ ಇರುವೆ ಚಂದ್ರ ಸೂರ್ಯರಿಗೆಲ್ಲ,
ಶ್ರಮೆಯ ಮಹಿಮೆಯನು ನೀನೆ ತಿಳುಹಿದೆಯೇನು?
ನಿನ್ನ ಶ್ರಮೆಯ ಗಾಲಿ ಉರುಳದೆ ನಿಂತಿರಲು
ಜಗವೆಂತು ಸಾಗುವುದು? ಕರ್ಮಯೋಗಿಯೇ ಬಾಗುವೆನು ನಿನ್ನಡಿಗೆ—

ಓದುಗಾರನು ನೀನು ಅಲ್ಲದಿರಬಹುದು, ವೇದಶಾಸ್ತ್ರದ
ಗುಟ್ಟು ಕೇಳದಿರಬಹುದು ನಿನ್ನ ಮಾತಿನೊಳು ಬಣ್ಣ
ಮಾಸಿರಲು ಬಹುದು, ಆದರೆ ತಿರುಳು ಗೂಡಿದ ನಿನ್ನ
ಜೀವನದ ಅನುಭವಕೆ ಸಾವುಂಟೆ? ಸಿದ್ಧಪುರುಷನೆ ಬಾಗುವೆನು ನಿನ್ನಡಿಗೆ—

ಹಿರಿಯ ಪುತ್ರನು ಭಾರತಿಗೆ ನೀನಾಗಿ, ಕಿರಿಯ ಒಳಗವ
ಪೋಷಿಸುವ ದಾತಾರನಾಗಿ ಆದರದಿ ತನ್ನವನು ಎನ್ನುವಾ
ಸೋದರರ ನೆರವಿಲ್ಲದಂತಾಗಿ ಕಂಗೆಟ್ಟು ಕಾತರಿಪ
ನೇಗಿಲಯೋಗಿಯೇ ಬಾಗವೆನು ನಿನ್ನಡಿಗೆ

ದುಡಿದುಡಿದು ಒಣಗಿಹುದು ನಿನ್ನೊಡಲು
ಕಂದಾಯಗಳ ಹೊರೆಹೊತ್ತು ಕುಗ್ಗಿ ಬಗ್ಗಿಹುದು ಬೆನ್ನು
ಬಿಸಿಲ ಬೇಗೆಗೆ ಬೆಂದು ಕರಗಿಹುದು ಮೈದೊಗಲು
ಒತ್ತಾಸೆ ತನಗುಂಟೆ ಎನ್ನುವ ಆಸೆಯ ಕುಡಿಯೊಂದು
ಮಿನುಗಿ ಆರುತ್ತಿದೆ ಮೊಗದಲ್ಲಿ ಯೋಗಿಯೇ ಬಾಗುವೆನು ನಿನ್ನಡಿಗೆ

ಮರ ಬಳ್ಳಿಗಳು ಚಿಗುರಿ ಹೂವು ಹಣ್ಣುಗಳ ನೀವಶಕ್ತಿ,
ಪಶು ಪಕ್ಷಿಗಳ ಬೆಳಸಿ ಜಗಕೆ ನೆರವಾಗಿಸುವ ಯುಕ್ತಿ,
ಕರ್ಮವೀರರ ಜನಿಸಿ, ಧರ್ಮ ಭೂಮಿಯ ಬೆಳಗಿ
ಸಾಧಿಸುವ ಮುಕ್ತಿ, ಇವು ನಿನ್ನ ಯೋಗದಂದವ
ಮೊನೆಯೊಳೇ ನೆಲಸಿಹವು ಯೋಗಿಯೇ ಬಾಗುವೆನು ನಿನ್ನಡಿಗೆ

ಬಾಗಿದ ಬೆನ್ನವನು ಒಣಗಿದೊಡಲನು ಇರಲಿ
ಕಣ್ಣರಳಿಸಿ ಕಾಯುವ ... ಕಾಪಿನಲಿ
ಇಪ್ಪುದನು ... ತತ್ವದಲಿ
ವೀರ ವಿಜಯವ ಪಡೆದ ... ತಾನು ... ಹೊ
ಗೂಡಿ ಬರಲಿ ನೇಗಿಲ ಯೋಗಿಯೇ ಎನ್ನ
ಮೊದಲಾಗಿ ಬಾಗುವದು ನಿನ್ನಡಿಗೆ

ಬಿ ಧೂಮಪ್ಪ

ನಿಶ್ಚಿತ ಬೋನಸ್
ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
═══
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಮುಂಬಾಯಿ
ಅಥವಾ

ಕೆ. ಎನ್. ನಾಯಕ್
ಆರ್ಗನೈಸರ್
ಸೆಂಟ್ರಲ್ ಸ್ಟ್ರೀಟ್, ಮಂಗಳೂರು.

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫರ್ಸ್ಟ ಲ್ಯಾನ್ ಬೀಚ್ ಮದ್ರಾಸು

ಈ ವಾರದ ಕಥೆ:

ಅವಳ ಜೀವನ

ಬರೆದವರು ಶ್ರೀ ತಿರುಮಲೇಶ್ವರ

ಕಮಲು ಸರಳ ಸ್ವಭಾವದ ಹೆಂಗಸು. ಬಿಡು ಹರೆಯದವಳು. ಸುಂದರ ಶರೀರ. ಮಿತವಾದ ಮಾತು. ಕಂಡವರನ್ನು ನಗುತ್ತಾ ನೋಡಿ ಅವರ ಸುಖದುಃಖಗಳಲ್ಲಿ ಭಾಗವಹಿಸುವ ಹೃದಯ. ಹೆಚ್ಚು ಓದಿದವಳಲ್ಲ. ಸ್ಥಳೀಯ ಶಾಲೆಯಲ್ಲಿ ೬ನೇ ತರಗತಿಯ ತನಕ ಓದಿದ್ದಳು. ಓದುವುದು, ಬರೆಯುವುದು ಎಂದರೆ ಬಹಳ ಪ್ರೀತಿ ಕಮಲುಗೆ. ಅವರಲ್ಲಿಯೂ ಕನ್ನಡ ಕಥೆಗಳನ್ನು ಓದುವುದೆಂದರೆ 'ಕಮಲು ಊಟವನ್ನಾದರೂ ಬಿಟ್ಟಾಳು. ಕಥೆ ಓದುವುದನ್ನು ಬಿಡಲೊಲ್ಲಳು

ಇಂದು ಮಧ್ಯಾಹ್ನ ಊಟ ಮುಗಿಸಿ ಶ್ರೀ. ಕಾರಂತರ 'ಚೋಮನ ದುಡಿ' ಎಂಬ ಪುಸ್ತಕವನ್ನು ಓದಲೆಂದು ಕೈಗೆ ತೆಗೆದುಕೊಂಡಿದ್ದಳು ಅಷ್ಟರಲ್ಲಿ ಅಂಗಳದಿಂದ 'ಅಮ್ಮಾ! ಭಿಕ್ಷೆನೀಡಿ ತಾಯಿ' ಎಂಬ ದೀನ ಸ್ವರವೊಂದು ಕೇಳಿಸಿತು ಕಮಲು ಅಲ್ಲೇ ಮೇಜಿನ ಮೇಲೆ ಪುಸ್ತಕವಿಟ್ಟು ಹೊರಬಂದಳು ಜಗಲಿ ಬದಿಗೆ ನಿಂದ ಒಳಬಾಗಿಲೆಡೆ ನೋಡುತ್ತ ನಿಂದ ಸುಮಾರು ೨೦–೨೨ ವರುಷ ಪ್ರಾಯದ ಭಿಕ್ಷುಕಿಯನ್ನು ಕಂಡಳು ಕಮಲು. ಅವಳ ಹೃದಯ ಮರುಗಿತು ಭಿಕ್ಷುಕಿ ಪುಟ್ಟ ಹಸುಗೂಸೊಂದನ್ನು ಎತ್ತಿಕೊಂಡಿದ್ದಳ ಹುಲ್ಲುಕಡ್ಡಿಗಳಂತಿದ್ದ ಕೈಕಾಲು. ಆ ಹಸುಗೂಸಿನದು ಜೀವನದಲ್ಲಿ ಬೇಸರ ಬಂದು ನಿಂದಂತಿವೆ ಆ ಕಣ್ಣುಗಳು ಒಡಲ ಕನವು ಕುಣಿದಾಡುತ್ತದೋ ಅವಳ ತಲೆಯ ಮೇಲೆ ಎಂಬುದನ್ನು ತೋರಿಸುವ ಕೆದರಿದ ಕೂದಲು—ಆ ರೀತಿ ಗಾಳಿಗೆ ಹಾರುತಿತ್ತು ಹರಕು ಚಿಂದಿಗಳ ಜಾಗದೇಹವು ಒಣಗಿಹೋದುದನ್ನು ತೋರಿಸುತ್ತಿದ್ದವು ಕಮಲುವನ್ನು ಕಂಡೊಡನೆಯೇ 'ತಾಯೇ ಹಸಿವೆಯಾಗುತ್ತಿದೆ ಮಗುವಿಗೆ ಜ್ವರ, ಅನ್ನದ ಅಗಳು ಕಾಣದೆ ದಿನವೆರಡು ಸಂದಿತು' ಎನ್ನುತ್ತಾ ಅವಳ ಮುಖವನ್ನೇ ನೋಡಿದಳು ಭಿಕ್ಷುಕಿ ಕಮಲು ಒಂದು ನಿಟ್ಟುಸಿರು ಬಿಡುತ್ತಾ 'ಮಗುವನ್ನು ಆಸ್ಪತ್ರೆಗೆ ಕೊಂಡುಹೋಗ್ಬಾರ್ದೇ, ಅಲ್ಲೇ ನಿಂದರು' ಎಂದಳು 'ಆಸ್ಪತ್ರೆಗೆ ಹೋಗಿದ್ದೆನಮ್ಮ ಆದರೆ ನಮ್ಮನ್ನಲ್ಲಿ ಕೇಳುವವರಾರು? ದಿನವಿಡೀ ಅಲ್ಲಿ ಕುಳಿತ ಕಾದರೆ ನಮ್ಮ ಹೊಟ್ಟೆ ತುಂಬುವುದೇ? ಅದರ ಫಲವೇ ಇದು, ೨ ದಿನ ಅನ್ನವಿಲ್ಲದುದು ಎಲ್ಲಾದರೂ ಕರೆದು ಕೇಳಿದರೆ ಅಲ್ಲಿ ಬಾಗಿಲಿಗೆ ನಿಂತ ಯಮದೂತರು 'ಜೀವ ಎಳೆಯುವುದೇನು ನಿನಗೆ? ಸ್ವಲ್ಪ ನಿಲ್ಲು' ಎನ್ನುವರು. ಅವರ ನೋಟವನ್ನು ನೋಡಿದರೆ ಜ್ವರ ಶುರುವಾಗಬೇಕು ಏನು ಮಾಡಲಿ? ನಮ್ಮಗಳ ಕರ್ಮ ಇದು! ಎಂದು ಕಣ್ಣೀರಿಟ್ಟಳು ಭಿಕ್ಷುಕಿ. ಕಮಲುವಿಗೆ ಸಹಿಸುವುದಾಗಲಿಲ್ಲ. ಒಳಹೋಗಿ ಒಂದಿಷ್ಟು ಹಾಲು ತಂದು ಮಗುವಿಗೆ ಕುಡಿಸೆಂದು ಕೊಟ್ಟಳು. ಮತ್ತೆ ನೀನು ಉಣ್ಣುವಿಯಂತೆ, ಎಂದು ಅವಳಿಗೂ ಇಕ್ಕಿದಳು. ಕೂಲಿಯೊಬ್ಬನ ಕರೆದು ಔಷಧಿಗಾಗಿ ಅಟ್ಟಿದಳು. ಭಿಕ್ಷುಕಿ ಉಣ್ಣುತ್ತಾ 'ನೀವೇಕಮ್ಮ ಇಷ್ಟು ಕೊಂಡರೆ ತೆಗೆದುಕೊಳ್ಳುವುದು. ನಾನೇ ಹೋಗಿ ತೆಗೆದುಕೊಳ್ಳುತ್ತಿದ್ದೆ ಔಷಧಿ ಸುಮ್ಮನೆ ಅವನಿಗೇಕೆ ಅಟ್ಟಿದಿರಿ' ಎಂದಳು. 'ಇದಿರಲಿ, ನಿನ್ನಲ್ಲಿ ಸ್ವಲ್ಪ ಮಾತಾಡಲಿದೆ, ಉಂಡು ಬಾ, ಎಂದು ಭಿಕ್ಷುಕಿಗೆ ಇಕ್ಕಿ ಕಮಲು ಹೊರಜಗಲಿಗೆ ಬಂದಳು. 'ಎಷ್ಟು ಚೆನ್ನಾದವರು! ಇಂಥವರಿರುವುದರಿಂದಲೇ ನಮ್ಮಗಳ ಜೀವನ ಇವರಿಗೆ ದೇವರು ಒಳ್ಳೇದು ಮಾಡಲಿ ಅವರಿಗೆಂದೂ ಕಷ್ಟ ಬಾರದಿರಲಿ' ಎಂದು ಮನದಲ್ಲೇ ಗ್ರಹಿಸುತ್ತ, ಉಂಡು ಹೊರಜಗಲಿ ಎದುರಿಗೆ ಬಂದಳು ಭಿಕ್ಷುಕಿ ಹಾಲು ಕುಡಿದ ಮಗು ಸ್ವಲ್ಪ ತ್ರಾಣ ಬಂದ 'ಅಮ್ಮಾ' ಎಂದಿತ ಭಿಕ್ಷುಕಿಗೆ ಹಿಡಿಸಲಾರದ ಸಂತೋಷವಾಯಿತು ಅಷ್ಟರಲ್ಲಿ ಆಳು ಬಂದು ಔಷಧ ತಂದ ಅದನ್ನು ಕುಡಿಸಿದಳ ಮಗುವು ಮದ್ದು ಕುಡಿದು ಹಾಯಾಗಿ ಅಲ್ಲೇ ಮಗ್ಗುಲಲ್ಲಿ ಒರಗಿಕೊಂಡಿತ

ಕಮಲು ಭಿಕ್ಷುಕಿಯನ್ನು ಕೇಳಿದಳ 'ನೀನೆಲ್ಲಿಯವಳು? ನೀನಗೇಕೆ ಈ ಕಷ್ಟಗಳು ಒಂಥವು? ನೀನು ಹುಟ್ಟು ಭಿಕ್ಷುಕಿಯೋ?–ಅಥವಾ–ಇನ್ನೇನಾದರೂ ಕಾರಣಗಳಿಂದ ಹೀಗಾದೆಯಾ ಹೇಳು. ಎನ್ನಲು ಭಿಕ್ಷುಕಿ ಕಂಬನಿದುಂಬಿ ಅದರಲ್ಲೇನೂ ಸ್ವಾರಸ್ಯವಿಲ್ಲ ತಾಯೇ! ಸುಮ್ಮನೆ ಹೇಳಿ–ಕೇಳಿ ಮರುಗುವುದಷ್ಟೇ ಪ್ರಯೋಜನ ನಿಮ್ಮ ಹೃದಯವನ್ನು ನೋಯಿಸಬಾರದೆಂದು ಹಿಂಜರಿದೆ ಹೇಳುತ್ತೇನೆ ಎನ್ನುತ್ತಾ ತನ್ನ ಸೆರಗಿನಿಂದ ಕಣ್ಣೊರೆಸಿಕೊಂಡಳು ಕಮಲು ಆಗಲಿ ಹೇಳು, ಎನ್ನುತ್ತಾ ಅವಳೆಡೆಗೆ ನೋಡುತ್ತ ಕುಳಿತಳು. ಭಿಕ್ಷುಕಿ ಹೇಳಲು ಮೊದಲಾದಳು—'ಅಮ್ಮಾ, ನನ್ನೂರು ಇಲ್ಲಿಂದ ಬಲು ದೂರ ಎರಡು ದಿನದ ಹಾದಿ ಇದೆ - ನಾನು ಇನ್ನೂ ಚಿಕ್ಕವಳಿದ್ದೆ ೧೨ ವರುಷ ಪೂರ್ಣ ಕಳೆದಿರಲಿಲ್ಲವಂತೆ ಆಗಲೇ ನನ್ನನ್ನು ಮಂಗಳಾಪುರಕ್ಕೆ ಮದುವೆ ಮಾಡಿ ಕೊಟ್ಟಿದ್ದರು ನನ್ನ ದೇವರು ಅಲ್ಲಿಯೊಂದು ಕಾರ್ಖಾನೆಯಲ್ಲಿ ದುಡಿಯುತ್ತಿದ್ದರು. ವಾರಕ್ಕೆ ೨ ರೂಪಾಯಿ ಸಂಪಾದನೆ ಇತ್ತು. ಅಲ್ಲದೆ ನನ್ನ ಮದುವೆಯಾಗುವಾಗ ಅವರ ಹಿರಿಯರುಗಳಿದ್ದ ಸ್ವಲ್ಪ ಹಣವೂ ಇತ್ತು. ನಾನು ಆ ಮನೆ ಸೇರುವಾಗ ಅವರ ಹೊರತು ಇನ್ನಾರೂ ಇರಲಿಲ್ಲ. ನಾವು ಸುಖವಾಗಿ ಕಾಲ ಕಳೆಯುತ್ತಿದ್ದೆವು. ಆದರೆ ವಿಧಿಗೆ ನಮ್ಮ ಸಂಸಾರ ನೋಡಿ ಸಹಿಸಲಾಗಲಿಲ್ಲ. ಅವರನ್ನು ಸುರಾದೇವಿಯಾರಾಧಕರಾಗಿ ಮಾಡಿತು. ಅದೊಂದು ದಿನ ರಾತ್ರೆ ಬರುವಾಗ ೧೨ ಗಂಟೆ ಮೀರಿತ್ತು. ಎಂದೂ ಆ ಸಮಯಕ್ಕೆ ಅವರು ಬಂದವರಲ್ಲ. ಬಾಗಿಲೇಕೆ ಮುಚ್ಚಿರುವೆ, ಇಷ್ಟು–ಬೇಗ, ಎಂದು ತಡವರಿಸಿ ಮಾತಾಡಿದರು ನಾನು ಉತ್ತರಿಸದೆ ಬಾಗಿಲು ತೆರೆದೆ. ಹಾಸಿಗೆ ಮುಂಚೆಯೇ ಬಿಡಿಸಿಟ್ಟಿದ್ದೆ ಅಲ್ಲಿ ಬಂದು ಮಲಗಿಕೊಂಡರು. ಮಾರಣೇ ದಿನದಿಂದ ನನ್ನ ಭಾಗ್ಯಚಕ್ರವು ತಿರುಗಿತು. ದಿನದಿಂದ ದಿನಕ್ಕೆ ಅವರು ಕ್ಷೀಣರಾಗುತ್ತಾ ಬಂದರು ಕಾರ್ಖಾನೆಯ ಕೆಲಸವೂ ಹೋಯಿತ ಅನೇಕ ತರದ ಮದ್ದುಗಳಾಯಿತ ಹೀಗೆ ಕೆಲವು ಸಮಯ ಕಳೆಯಲು ಇದ್ದುದೆಲ್ಲವೂ ಬರಿದಾಯಿತು ಅಮ್ಮಾ ಅದೊಂದು ದಿನ ಮುಂದೆ, ಹೇಳಲು ಬಾಯಿ ಬಾರದು. ನನ್ನ ದೇವರನ್ನು ನಮ್ಮ ಮನೆಗೆ ಬಂದ ಪೋಲೀಸಿನವರು ಬೇಡಿ ಹಾಕಿ ಕರೆದೊಯ್ದರು ಆಗ ಈ ಮಗುವಿಗೆ ೨೦ ದಿನ ಮಾತ್ರ ಅದಾಗ ಕಳೆದು ಎರಡು ವರುಷದಾಟಿತ ಹಾಗೆ ಹೋದ ಮೂರು ತಿಂಗಳಲ್ಲಿ ಅವರು ತೀರಿಕೊಂಡರೆಂದು ಕೇಳಿದೆ' ಎಂದು ಭಿಕ್ಷುಕಿ ಕಣ್ಣೀರ ಕಾಲುವೆ ಹರಿಸಿದಳ ಕಮಲು ಬಾಡಿದ ಮುಖದವಳಾಗಿ ಒಂದು ದೀರ್ಘ ಶ್ವಾಸ ಬಿಟ್ಟು 'ಮುಂದೇನಾಯಿತು?' ಎಂದಳು. ಭಿಕ್ಷುಕಿ ಮುಂದುವರಿಸಿದಳು–'ಆ ಮೇಲಿನ ಕತೆ ಏನನ್ನಲಿ ತಾಯೆ? ಈ ಹಾಳು ಹೊಟ್ಟೆ ಹೊರೆಯಲು ಉದರಕ್ಕಾಗಿ ಆವ ಪಾಪ ಕಾರ್ಯಗಳಿಗೂ ಹೇಸಲಿಲ್ಲ ಶರೀರದಲ್ಲಿ ಪ್ರಾಣವಿತ್ತು, ಸೌಂದರ್ಯವಿತ್ತು ನನ್ನಾಶಿಸಿದ ತರುಣರಿಗೆ ಅದೆಲ್ಲವನ್ನು ಧಾರೆ ಎರೆದೆ ಮುಂದೆ ಅದರಿಂದಾಗಿ ಕೆಲವು ತಿಂಗಳುಗಳಲ್ಲಿ ಭಯಂಕರ ರೋಗಕ್ಕೆ ಆಹುತಿಯಾದೆ ಮತ್ತಾರು ನನ್ನನ್ನಾಶಿಸುವರು ನಾಯಿಯೂ ಹತ್ತಿರ ಸುಳಿಯದಾಯಿತು. ಕೆಲಸಕ್ಕೆ ಹೋಗಲು ಶಕ್ತಿ ಇಲ್ಲ ಈ ಮಗುವಿಗಾಗಿ ಜೀವವಿಟ್ಟುಕೊಂಡು ಬೀದಿ ಬೀದಿ ಅಲೆಯತೊಡಗಿದೆ ಅಲ್ಲಾರೂ ಭಿಕ್ಷೆನೀಡರು. ಮುಂದೇನು? ಊರು ಬಿಟ್ಟೆ ಅಮ್ಮಾ ಒಂದು ವಿಚಾರ ಮರೆತೆ ಒಂದು ದಿನ ನನ್ನೂರಲ್ಲಿ ಭಿಕ್ಷೆಕ್ಕೆಂದು ಅದೊಂದು ದೊಡ್ಡ ಮನೆ ಎದುರು ಹೋಗಿ ನಿಂತೆ. ಅವರು ಅವರೆರಡು ಹುಲಿಗಳಂಥ ನಾಯಿಗಳನ್ನು ನನ್ನ ಮೇಲೆ ಬಿಟ್ಟರು ಅವುಗಳನ್ನು ತಪ್ಪಿಸಲೆಂದು ಓಡಿದೆ. ಸಾಧ್ಯವಾಗಲಿಲ್ಲ. ಕಾಲಿಗೆ ಕಚ್ಚಿ ಗಾಯಮಾಡಿದುವು ಅಲ್ಲೇ ಬಿದ್ದೆ. ಮುಂದೆ ಎಚ್ಚರವಾಗಲು ನಾನೊಂದು ಒಕ್ಕಲಿಲ್ಲದ ಅಂಗಡಿ ಮುಂದೆ ಮಲಗಿದ್ದೆ. ಮತ್ತೆ ತಿಳಿಯಿತು ಅವರು ನಾಯಿ ಬಿಟ್ಟ ಕಾರಣ. ತಾಯೇ! ಅವರ ಹೃದಯವೆಷ್ಟು ಕಠಿಣ. ಅವರೇ ನನ್ನಿಂದ ಹಿಂದೆ ಮೊದಲಿಗೆ ಸುಖಪಡೆದವರಂತೆ. ಅದರ ನೆನಪಿನಿಂದ ಬಂದಿರಬಹುದೆಂದು ಹಾಗೆ ಮಾಡಿದರಂತೆ. ಅಮ್ಮಾ! ನನಗೆ ನಿಜವಾಗಿಯೂ ತಿಳಿದಿರಲಿಲ್ಲ, ಈ ವಿಚಾರ. ಆ ಮನೆಗೆ ಆ ಮೇಲೆ ನಾನು ಹೋಗಿಲ್ಲ ಹಿಂದೆಯಂತೂ ಹೋಗಿಲ್ಲವಷ್ಟೆ. ಅದವರ ಮನೆಯೆಂದೂ ತಿಳಿದಿರಲಿಲ್ಲ. ಅಂದಿನಿಂದ ಆ ಊರು ಬಿಟ್ಟೆ. ಇಲ್ಲಿಗೆ ಬಂದು ತಿಂಗಳೊಂದಾಗುತ್ತ ಬಂತು. ಮಗುವಿಗೆ ಇಲ್ಲಿಯ ಗಾಳಿ ಸೇರದು. ಹಾಗಾಗಿ ಜ್ವರ ಬರುತ್ತಿದೆ ಬೇಗ ಊರು ಬಿಡುವೆ. ಅಮ್ಮಾ! ನನ್ನ ಈ ಹಾಳು ಜೀವನದ ಕಥೆ ಕೇಳಿ ಮರುಗದಿರಿ!' ಎನ್ನುತ್ತಾ ದೈನ್ಯದಿಂದ ಕಮಲುವಿನ ಮುಖ ನೋಡಿದಳು ಅವಳು ಒಳ ಎದ್ದು ಹೋಗಿ ತನ್ನ ಚೀಲದಿಂದ ಒಂದು ರೂಪಾಯಿ ಕೊಟ್ಟು ಈ ಜನ್ಮದಲ್ಲಿ ಏನೇನು ಅನುಭವಿಸಲಿದೆಯೊ?–ಅದೆಲ್ಲಾ ಅನುಭವಿಸಬೇಕು. ಇನ್ನು ಯಾವಾಗ ಬರುವೆ' ಎಂದು ಕರುಣಾಜನಕವಾದ ನುಡಿಗಳಿಂದ ನುಡಿದಳು ಯಾವಾಗೆಂದರೆ ಏನಮ್ಮಾ. ನಿಮಗೆ ಮಂಗಳವಾಗಲಿ ಹೀಗೆ ಜೀವವಿದ್ದರೆ ಅದೊಂದು ದಿನ ಬರುವೆ,' ಎನ್ನುತ್ತಾ ಅಂಗಳವಿಳಿದು ನಡೆದಳು

ಕಮಲು ಅವಳು ಹೋದೆಡೆಗೆ ನೋಡುತ್ತಾ ನಿಂದಳು. ಅವಳು ಕಣ್ಣಿಂದ ಮಾಯವಾದೊಡನೆ ತಿರುಗಿ ಕೋಣೆಗೆ ಬಂದ ಪುಸ್ತಕ ಕೈಗೆ ತೆಗೆದುಕೊಂಡಳು ಆದರೆ ಅವಳಿಗೆ ಓದಲಾಗಲಿಲ್ಲ ಅವಳ ಜೀವನವನ್ನು ನೆನೆಯುತ್ತಾ ಕುಳಿತುಕೊಂಡಳು. ಆಗಾಗ ಒಂದೊಂದು ಹನಿ ಕಣ್ಣೀರು ಪುಸ್ತಕದ ಮೇಲೆ ಬೀಳುತ್ತಿತ್ತು ಆಗಾಗೊಮ್ಮೆ 'ಹೆಣ್ಣು ಜನ್ಮ–! ಹಾಳು ಜನ್ಮ–! ಬಡತನ– ವ್ಯಭಿಚಾರ–! ಹ್ಯಾ! ಕಷ್ಟ' ಇದೂ ಒಂದು ರೀತಿಯ ಜೀವನ, ಇನ್ನೇನ ಅವಳಂತೆ ಇನ್ನೆಷ್ಟು ಜನ ಹಾಗಿರುವರೊ?–ಎನ್ನುತ್ತಾ ಅಲ್ಲೇ ಒರಗಿದಳ ಸಾಯಂಕಾಲ ನೆರೆಮನೆಯ ಸುಂದರಮ್ಮ ಬಂದು, ಏನು ಕಮಲಮ್ಮ ನಿದ್ದೆ, ಎನ್ನಲು ಪಕ್ಕನೆ ಬೆಚ್ಚಿ ಬಿದ್ದು, 'ಅವಳ ಜೀವನ ಎಂಬ ನುಡಿ ಹೊರಟಿತು. 'ಏನು ಕಮಲು ಅದು' ಎನ್ನಲು ಸುಂದರಮ್ಮ, ಮಧ್ಯಾಹ್ನ ನಡೆದ ಕಥೆ ಅವಳಿಗೆ ಹೇಳಿದಳು

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ಸ್ವಪ್ನ ದೋಷಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ತಿಂಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪಂಡೇಲ,
P. O. Peridepi ([illegible])

ಭಾರತದ ವಿಷಯ ಬ್ರಿಟಿಷರ ಅಜ್ಞಾನವೇ?
ಸ್ನೇಹಸಂಬಂಧಕ್ಕೆ ಇದು ತಡೆಯಾಗಿದೆ!

ಭಾರತದ ಸ್ನೇಹದಿಂದ ಬ್ರಿಟನಿಗೆ ಲಾಭವಿದೆ!

"ಬ್ರಿಟನ್ ಮತ್ತು ಭಾರತದ ಸ್ನೇಹ ಸಂಬಂಧದ ಮಹತ್ವವು ಅತ್ಯಧಿಕ ಬೆಳೆದು ಬರಬೇಕಾದ ದಿನಗಳು ಸಮೀಪವಾಗುತ್ತಾ ಇವೆ. ಫ್ರಾನ್ಸು ನಾಝಿಗಳ ಅಂಕೆಯೊಳಗಾಗಿದೆ. ಈಗ ಬ್ರಿಟನಿನ ಮೇಲೆಯೂ ಅವರು ದೌಡಾಯಿಸಿ ಬರುವಂತಾದರೆ, ಆ ಘುರಂತದ ಪರಿಣಾಮವು ಏನಾಗಬಹುದೆಂಬುದನ್ನು ಚಿತ್ರಿಸಿ ಚರ್ಚಿಲ್ಲರು ಮಾರ್ಮಿಕ ಭಾಷಣವನ್ನು ಕೊಟ್ಟಿದ್ದಾರೆ. ಹಿಂದುಸ್ಥಾನದ ಮತಸಂಬಂಧವಾದ ಜಗಳಗಳ ಒಳ ಹರಟೆಯ ಕೆಲಕೆಲವು ಸಂಗತಿಗಳು ಬ್ರಿಟಿಷ ಜನತೆಗೆ ತಿಳಿಯುತ್ತಿವೆಯೇ ಹೊರತು, ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿ ಮತ್ತು ಸ್ನೇಹದಲ್ಲಿದ್ದರೆ, ಅದು ಯುದ್ಧದಲ್ಲಿ ಸೇವೆಯಿಂದ ಬ್ರಿಟನ್ನಿಗೆ ಮಾಡಬಹುದಾದ ಮಹತ್ವಪೂರ್ಣ ಸಹಾಯದ ಕುರಿತು ಬ್ರಿಟಿಷ ಜನತೆಯೂ ಏನೂ ತಿಳಿದಿರುವುದು ಕಂಡುಬರುವುದಿಲ್ಲ." ಎಂದು ಗ್ರೇಟ್ ಎಂಡ್ ಈಸ್ಟ್ ಎಂಬ ಪತ್ರಿಕೆಯು ಬರೆಯುತ್ತದೆ.

ಬ್ರಿಟಿಷರ ಅಜ್ಞಾನ

"ಬ್ರಿಟಿಷ್ ಪತ್ರ ಪತ್ರಿಕೆಗಳು ಹಿಂದುಸ್ಥಾನದ ಕುರಿತು ಉದಾಸೀನವಾಗಿವೆ. ಅದು ಬಹಳ ಖೇದಕರವಾಗಿದೆ. ಹಿಂದುಸ್ಥಾನದ ಸಂಬಂಧವುಳ್ಳವರೆಲ್ಲರೂ ಇದಕ್ಕಾಗಿ ಬಹಳ ಶೋಕಿಸುತ್ತಾರೆ. ಹಿಂದುಸ್ಥಾನದ ವಿಷಯವಾಗಿ ವರ್ಷದಲ್ಲಿ ಎಲ್ಲಿಯಾದರೂ ಒಂದು ದಿನವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸಲಿಕ್ಕೆ ಇಡುತ್ತಾರೆ. ಹಳೆಯ ಕಾಲವು ಸಂದುಹೋಗಿದೆ. ಈಗ ಪರಿಸ್ಥಿತಿಯು ಬದಲಾಗಿದೆ, ಮಾತ್ರವಲ್ಲ ಸುಧಾರಿಸಿದೆ. ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ಪ್ರಶ್ನೆಯು ಮುಂದೆ ಬಂದಾಗಿನಿಂದ ಪಾರ್ಲಿಮೆಂಟ್ ಮೆಂಬರರು ಹಿಂದುಸ್ಥಾನದ ವಿಷಯವಾಗಿ ಹೆಚ್ಚೆಚ್ಚು ತಿಳಕೊಳ್ಳಲಿಕ್ಕೆ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಆದರೂ ಹಿಂದುಸ್ಥಾನದ ವಿಷಯವಾಗಿ ಅಧಿಕಾರಿಕವಾಗಿ ಮಾತನಾಡಬಲ್ಲವರು ಬ್ರಿಟನಿನಲ್ಲಿ ಬೆರಳಿನಿಂದ ಎಣಿಸುವಷ್ಟು ಮಂದಿಯೂ ಇರುವುದಿಲ್ಲ. ಬ್ರಿಟಿಷ್ ಸಾಮಾನ್ಯ ಜನತೆಯು ಹಿಂದುಸ್ಥಾನದ ವಿಷಯವಾಗಿ ಅಜ್ಞಾನಾಂಧಕಾರದಲ್ಲಿಯೇ ಮುಳುಗಿದೆ.

ಜಾಗೃತಿಯ ಕಾಲ

"ಹಿಂದುಸ್ಥಾನದ ವಿಷಯದಲ್ಲಿ ಬ್ರಿಟಿಷ ಜನತೆಯು ಜಾಗೃತವಾಗಬೇಕಾದ ದಿನಗಳು ಈಗ ಬಂದಿರುವುವು. ಬ್ರಿಟನ್ನಿನಿಂದ ಬರುವ ಕೆಲವು ಮಂದಿ ಅಧಿಕಾರಿಗಳು ನಿರಂಕುಶವಾಗಿ ಹಿಂದುಸ್ಥಾನವನ್ನು ಆಳುವ ದಿನಗಳು ಸಂದುಹೋಗಿವೆ. ಹಿಂದುಸ್ಥಾನದ ವಿಷಯವಾಗಿ ಬ್ರಿಟಿಷರು ತಿಳಿದಿರುವುದಕ್ಕಿಂತಲೂ ಹೆಚ್ಚಾಗಿ ಅಮೆರಿಕನರು ತಿಳಿದಿದ್ದಾರೆ."

"ಅಮೆರಿಕನರು ಹಿಂದುಸ್ಥಾನದ ಜನರ ಪಕ್ಷವನ್ನು ತಿಳಿಯುತ್ತಿದ್ದಾರೆಯೇ ಹೊರತು ಸರಕಾರಿ ಪಕ್ಷವನ್ನು ತಿಳಿಯುವುದಿಲ್ಲವೆಂದು ಬ್ರಿಟಿಷರು ದೂರುವರು. ಆದರೆ ಬ್ರಿಟಿಷ ಜನತೆಯು ಯಾವ ಪಕ್ಷದ ವಿಷಯವನ್ನು ತಿಳಿಯದ ಅಜ್ಞರಾಗಿರುವರು. ಆದುದರಿಂದ ಬ್ರಿಟನಿನಲ್ಲಿ ಹಿಂದುಸ್ಥಾನದ ಸತ್ಯಸ್ಥಿತಿಯನ್ನು ತಿಳಿಸಿ ಪ್ರಬಲ ಪ್ರಚಾರ ಮಾಡುವ ಆವಶ್ಯಕತೆ ಇದೆ. ಹಿಂದುಸ್ಥಾನದ ರಾಜಕೀಯವನ್ನು ಮಾತ್ರವಲ್ಲ, ಅದರ ಸಾಂಪತ್ತಿಕ, ಸಾಮಾಜಿಕ ಕೈಗಾರಿಕ ಇತ್ಯಾದಿ ಸ್ಥಿತಿಗಳನ್ನೂ ಬ್ರಿಟಿಷ ಜನರು ತಿಳಿಯಬೇಕಾಗಿದೆ. ಈಸ್ಟ್ ಇಂಡಿಯಾ ಎಸೋಸಿಯೇಶನ್ ಇಂಡಿಯಾ ಸೊಸೈಟಿ ಮೊದಲಾದ ಕೆಲವು ಪ್ರಚಾರ ಸಂಸ್ಥೆಗಳು ಬ್ರಿಟನಿನಲ್ಲಿವೆ. ಆದರೆ ಅವು ಯಾವುವೂ ಬ್ರಿಟಿಷ್ ಜನತೆಯೊಡನೆ ನಿಕಟ ಸಂಬಂಧವನ್ನು ಇಟ್ಟಿರುವುದಿಲ್ಲ. ಆದುದರಿಂದ ಅವುಗಳ ಪ್ರಚಾರದಿಂದ ಬ್ರಿಟನಿನಲ್ಲಿ ಆಗಬೇಕಾದ ಪರಿಣಾಮವು ಆಗಿಲ್ಲ. ಬ್ರಿಟಿಷ ಜನತೆಯು ಹಿಂದುಸ್ಥಾನದ ವಿಷಯವನ್ನು ಸರಿಯಾಗಿ ತಪ್ಪಿಲ್ಲದೆ ತಿಳಕೊಂಡರೆಯೇ, ಹಿಂದುಸ್ಥಾನ ಬ್ರಿಟನುಗಳೊಳಗೆ ಸಹಜ ಮತ್ತು ಸ್ವಾಭಾವಿಕವಾದ ಸ್ನೇಹಸಂಬಂಧವು ಸ್ಥಿರವಾಗಿ ನೆಲಗೊಳ್ಳುವುದು. ಅಂಥ ಸಂಬಂಧವು ಸ್ಥಾಪಿತವಾದಾಗಲೇ ಯುದ್ಧದಂಥ ಗಂಡಾಂತರದಲ್ಲಿ ಸಿಕ್ಕಿಬಿದ್ದಾಗ ಹಿಂದುಸ್ಥಾನದ ಪೂರ್ಣ ಸಹಾಯವು ಬ್ರಿಟನಿಗೆ ದೊರೆಯುವುದು. ಮಾತ್ರವಲ್ಲದೆ, ಗಂಡಾಂತರದ ದಿನಗಳು ಕಳೆದ ಬಳಿಕ ಸಾಮ್ರಾಜ್ಯವು ಮೊದಲಿಗಿಂತಲೂ ಹೆಚ್ಚು ಸುದೃಢವೂ ಸಬಲವೂ ಆಗುವುದು'



ಜಿಲ್ಲಾ ಸಮಾಚಾರ

★

ಮಂಗಳೂರು

ಮಳೆ:—ಕಳೆದ ನಾಲ್ಕೈದು ದಿನಗಳಿಂದ ನಿರಂತರ ಮಳೆ ಬೀಳುತ್ತಿದೆ ನೇತ್ರಾವತಿ ಗುರುಪುರ ನದಿಗಳಲ್ಲಿ ನೆರೆಯು ಬಂದು ನೀರು ತುಂಬಿ ಹೊಯ್ಯುತ್ತಿದೆ

ಹುಡುಗಿಯರ ಶಾಲೆ: ಗಣಪತಿ ದೇವಸ್ಥಾನದ ರಸ್ತೆಯಲ್ಲಿದ್ದ ಮುನಿಸಿಪಲ್ ಹುಡುಗಿಯರ ಶಾಲೆಯು ಈ ತಿಂಗಳ ಮೊದಲಿನಿಂದ ಮಹಮ್ಮಾಯೀ ದೇವಸ್ಥಾನದ ಮುಂಭಾಗದ ಕಟ್ಟೋಣದಲ್ಲಿ ತೆರೆಯಲ್ಪಟ್ಟಿದೆ

ಶ್ರೀ. ಎ. ಬಿ ಶೆಟ್ಟರ ಭಾಷಣ:—ತಾ ೩ನೇ ತಾರೀಕಿನ ದಿನ ಸ್ಯಂಟ್ ಅಲೋಸಿಯಸ್ ಕೊಲೇಜ್ ಯೂನಿಯನಿನ ಉದ್ಘಾಟನೆ ನಡಸಿದ ಶ್ರೀ ಎ ಬಿ ಶೆಟ್ಟಿಯವರು ಮಾತನಾಡುತ್ತಾ ವ್ಯಾಪಾರ, ಕೈಗಾರಿಕೆ ವ್ಯವಸಾಯ ಇವುಗಳ ಪ್ರಗತಿಯಾಗದ ವಿನಾ ಒರೇ ಪಾರಿಭಾಷಿಕ ಶಿಕ್ಷಣದಿಂದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಶಕ್ಯವಿಲ್ಲವೆಂದು ಅಭಿಪ್ರಾಯಪಟ್ಟರು ಯೂನಿಯನಿನ ಅಧ್ಯಕ್ಷರಾಗಿದ್ದ ಶ್ರೀ ಪಿ ಜೆ ಜೋಸೆಫ್‌ರವರು ಸಭಾಧ್ಯಕ್ಷರಾಗಿದ್ದರು ಸೆಕ್ರೆಟರಿಗಳಾದ ಶ್ರೀ ದಾಮೋದರನ್ ನಾಯರರವರು ವರದಿಯನ್ನು ಓದುತ್ತಾ ಒಂದು ಗ್ರಂಥ ಭಂಡಾರವನ್ನು ತೆರೆವ ಚಟುವಟಿಕೆಯನ್ನು ಕೈಕೊಳ್ಳುವ ಸೂಚನೆಯನ್ನು ಮಂಡಿಸಿದರು.

ಹಿಂದುಳಿದವರ್ಗದ ಅಧ್ಯಾಪಕರ ಸಂಘ:—ಹಿಂದುಳಿದ ವರ್ಗದವರ ಶಾಲಾ ಉಪಾಧ್ಯಾಯರ ಸಂಘದ ಕಾರ್ಯಕಾರೀ ಸಮಿತಿಯ ವಾರ್ಷಿಕ ಪರಿಷತ್ತು ಕೋರ್ಟ್ ಹಿಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರಿ ಕೆ ವಿ ರಾಘವ ರಾಯರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀ ಶ್ಯಾಮರಾಯರು ಅಧ್ಯಕ್ಷರಾಗಿಯೂ ಬಿ ವೆಂಕಟೇಶ ನಾಯಕರು ಸೆಕ್ರೆಟರಿ ಮತ್ತು ಶ್ರೀ ಟಿ. ವಿಠಲನವರು ಖಜಾನ್ಚಿಗಳಾಗಿಯೂ ಆರಿಸಲ್ಪಟ್ಟರು.

ಶೇಂದಿ ಅಂಗಡಿ ವಿಲಂ:—ಮಂಗಳೂರು ನಗರದ ವಲಯದಲ್ಲಿದ್ದ ಶೇಂಡಿ ಅಂಗಡಿಗಳ ವಿಲಂ ತಾ. ೨ರಲ್ಲಿ ನಡೆದಿದೆ ಸರ್ವಸಾಧಾರಣವಾಗಿ ಎಲ್ಲಾ ಶೇಂದಿ ಅಂಗಡಿಗಳನ್ನು ಕಳೆದ ವರುಷಕ್ಕಿಂತ ಹೆಚ್ಚಿನ ಹಣಕ್ಕೆ ಪಡೆದುಕೊಂಡಿರುವರಾಗಿ ತಿಳಿದುಬರುತ್ತಗೆ ಹಂಪನಕಟ್ಟೆಯಲ್ಲಿರುವ ಒಂದು ಅಂಗಡಿಗೆ ಪ್ರತಿ ತಿಂಗಳಲ್ಲೂ ೧೪೭೦ ರೂಪಾಯಿ ಕಿಸ್ತು ಕಟ್ಟಬೇಕಾಗಿದೆ ಇಡೀ ಮಂಗಳೂರು ತಾಲೂಕಿನಿಂದ ಪ್ರತಿ ತಿಂಗಳಲ್ಲೂ ಹೆಚ್ಚುಕಡಿಮೆ ೧೦ ಸಾವಿರ ರೂಪಾಯಿ ಶೇಂದಿ ಕರವಾಗಿ ಸರಕಾರಕ್ಕೆ ದೊರೆಯುವಂತಾಗಿದೆ

ನಗರ ಸಭೆ

ತಾ ೧೫ರಂದು ಚೆಯರ್‌ಮ್ಯಾನರಾದ ಶ್ರೀ ಬಿ. ವೆಂಕಟರಾವ್ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರಿಂದ, ಸಭೆಯ ಆರಂಭದಲ್ಲಿ "ಮೈಸೂರು" ಮಹಾರಾಜರ ನಿಧನದ ಸಂಬಂಧವಾದ ಸಂತಾಪ ಸೂಚನೆ'ಯ. ಠರಾವು ಬಂದು ಸರ್ವಮಾನ್ಯವಾಗಿ, ದಿವಂಗತರ ಗೌರವಾರ್ಥವಾಗಿ ಸಭೆಯ ಕಾರ್ಯಕಲಾಪಗಳು ೫ ನಿಮಿಷಗಳ ವರೆಗೆ ಮುಂದುವರಿಸಲ್ಪಟ್ಟ ಮೇಲೆ, ಹಲವು ಪ್ರ. ಗಳ್ಗೆ ಬಿಲ್ಲುಗಳ ವಿಲೆವಾರಿಯಾಯಿತು. ಕಿರಿಯನ್ ಕ್ರಿಸ್ತರ ಸಮಾಧಿಸ್ಥಳದ ಕುರಿತಾದ ಕೇಳಿಕೆ ಮತ್ತು ಶಿಫಾರಸುಗಳನ್ನು ಪರ್ಯಾಲೋಚಿಸುವುದರೊಡನೆ, ರಥಬೀದಿಯಲ್ಲಿ ನಿಯಮಿತ ಸಮಯಕ್ಕೆ ೧೦ ನಿಮಿಷಗಳ ಮೊದಲೇ ವಿದ್ಯುದ್ದೀಪಗಳಾಗಿಡುವವೆಂಬ ಕೌನ್ಸಿಲರ ದೂರನ್ನೂ ವಿಚಾರಿಸಿ ಮುಂದೆ ಹಾಗಾಗದಂತೆ ಕ್ರಮ ಜರುಗಿಸಬೇಕೆಂದು ತೀರ್ಮಾನವಾಯಿತು

ದ ಕ ಜಿಲ್ಲಾ ಲೇಬರ್ ಎಡ್ವೈಜರಿ ಕಮಿಟಿ. ದಕ್ಷಿಣ ಕನ್ನಡ ಜಿಲ್ಲಾ ಲೇಬರ್ ಎಡ್ವೈಜರಿ ಕಮಿಟಿಯು ದ ಕ ಜಿಲ್ಲಾ ಕಲೆಕ್ಟರ್ ಶ್ರೀ ಎಂ ವಿ ಸುಬ್ರಹ್ಮಣ್ಯಂ, ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹರಿಜನ ವರ್ಗದಿಂದ ಮತಾಂತರ ಹೊಂದಿದ ಹಾಗೆ ಹರಿಜನರಲ್ಲದವರು ಹರಿಜನರಿಗಾಗಿ ಮಾತ್ರ ಇರುವ ಸಮಸ್ತ ಹಕ್ಕುಬಾಧ್ಯತೆಗಳಿಂದಲೂ ವಿರಹಿತರಾಗಬೇಕು, ಆ ರಿಯಾಯಿತಿಗಳು ಅಂತಹವರಿಗೆ ಸಿಕ್ಕತಕ್ಕವಲ್ಲ ಎಂಬೀ ಸಲಹೆಯನ್ನು ಸರಕಾರಕ್ಕೆ ಶಿಫಾರಸು ಮಾಡುವಂತೆ ನಿರ್ಧರಿಸಿತು ಗಟ್ಟದ ಎಸ್ಟೇಟುಗಳಿಗೆ ಕೆಲಸಕ್ಕಾಗಿ ಈ ಜಿಲ್ಲೆಯಿಂದ ಹೋಗತಕ್ಕ ಕೂಲಿಯಾಳುಗಳ ರಿಕ್ರ್ಯೂಟ್‌ಮೆಂಟ್ ವಿಷಯವು ಈ ಕಮಿಟಿಯ ಮುಂದೆ ಬಂದು ಇದರಿಂದ ಉಂಟಾಗುವ ಕೆಡುಕಗಳ ಪರಿಣಾಮದ ದೃಷ್ಟಿಯಿಂದ ಲೈಸನ್ಸ್ ಪಡೆದ ಏಜಂಟರುಗಳು ಮಾತ್ರವೇ ಕೂಲಿಗಳನ್ನು ರಿಕ್ರ್ಯೂಟ್ ಮಾಡುವ ಅಧಿಕಾರ ಪಡೆಯುವಂತಾಗಬೇಕೆಂದೂ ಸಿಕ್ಕಸಿಕ್ಕವರೆಲ್ಲ ಏಜಂಟರಾಗಿ ಅಲ್ಲಸಲ್ಲದ ಆಸೆಭರವಸೆಗಳನ್ನು ತೋರಿಸಿ ಆ ಕೂಲಿಗಳನ್ನು ಗಟ್ಟಕ್ಕೆ ಅಟ್ಟುವ ಕಟ್ಟಮನ್ನೂಲ್ ಇಲ್ಲಬೇಕೆಂದೂ ಮೇಲಾಗಿ ಕೆಲಸಗಾರರ ಸ್ವೇಚ್ಛೆಯಿಂದಲೇ ಅಲ್ಲಿಗೆ ಕೆಲಸಕ್ಕೆ ಹೋಗುವವನೆಂದೂ ಆಯಾ ಗ್ರಾಮಕ್ಕೆ ಸಂಬಂಧಿಸಿದ ಪಟೇಲನಿಂದ ತಕ್ಕ ಸರ್ಟಿಫಿಕೇಟ್ ಪಡೆದ ವಿನಾ ಯಾವನೊಬ್ಬ ಕೆಲಸಗಾರನನ್ನೂ ಜಿಲ್ಲೆಯ ಹೊರಗಡೆಗೆ ತೆಗೆದುಕೊಂಡು ಹೋಗದಂತಾಗಬೇಕೆಂದೂ ನಿರ್ಬಂಧಗಳನ್ನು ಕಲ್ಪಿಸಿ ಅವನ್ನು ಜಾರಿಗೆ ತರುವಂತೆ ಸರಕಾರವನ್ನು ಪ್ರಾರ್ಥಿಸಬೇಕಾಗಿಯೂ ತೀರ್ಮಾನವಾಯಿತು.

ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ವಿನಂತಿ—ನೀವೆಲ್ಲರೂ ಪ್ರೇಮಾದರಗಳಿಂದ ಕಾಣುತ್ತಿರುವ ಕಾಂಗ್ರೆಸ್ಸು ಸ್ವಾತಂತ್ರ್ಯ ಹೋರಾಟದ ಕೊನೆಯಲ್ಲಿದೆ ಸ್ವಾತಂತ್ರ್ಯವು ಇಂದೋ ನಾಳೆಯೋ ಒರುವುದು ಖಂಡಿತವಲ್ಲವಾದರೂ ಅದು ಬಂದೇ ಬರುವುದು. ಈ ಹೋರಾಟಕ್ಕೆ ನೀವೆಲ್ಲರೂ ಇಂದಿನಿಂದಲೇ ನಿಮ್ಮ ಪ್ರೀತಿಯ ಮಹಾಸಂಸ್ಥೆಯನ್ನು ಬಲಪಡಿಸಬೇಕಾಗಿದೆ ಇದು ನಿಮ್ಮ ಕರ್ತವ್ಯ ಕಾಂಗ್ರೆಸ್ಸಿನ ಘೋರಣೆಯೇನೆಂಬುದು ನಿಮಗೆಲ್ಲರಿಗೆ ಇಷ್ಟರೊಳಗೆ ಢಿಲ್ಲಿಯ ಠರಾವಿನ ಮೂಲಕವೂ ತದನಂತರ ಪೂನೆಯಲ್ಲಿ ಮೊನ್ನೆ ತಾನೇ ಜರಗಿದ ಅಖಿಲ ಭಾರತ ಕಾಂಗ್ರೆಸ್ಸು ಕಮಿಟಿಯ ಅಧಿವೇಶನದಲ್ಲಿಯೂ ಸ್ಪಷ್ಟವಾಗಿದೆ ಅದನ್ನು ನಾವು ಶಿರಸಾವಹಿಸಿ ನಡೆಯಬೇಕು. ಎಲ್ಲರೂ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗುವುದು ಆದ್ಯ ಕರ್ತವ್ಯ ಮಂಗಳೂರಿನ ಜನಸಂಖ್ಯೆ ೬೦ ೦೦೦ಕ್ಕೆ ಮಿಕ್ಕಿಯೇ ಇದೆ ಹಿಂದೂಸ್ಥಾನದ ನಗರಗಳಲ್ಲಿರುವ ಕಾಂಗ್ರೆಸ್ ಸದಸ್ಯರ ಸಂಖ್ಯೆಯನ್ನು ಗಣಿಸಿದರೆ ದಾಮಾಶಯದಲ್ಲಿ ಕಲ್ಕತ್ತದಲ್ಲಿನ ಸಂಖ್ಯೆಯು ಹೆಚ್ಚಿನದೆಂಬುದರ ಬಗ್ಗೆ ಶ್ರೀ ಸುಭಾಸ ಚಂದ್ರ ಬೋಸರು ಹೆಮ್ಮೆಪಡುತ್ತಾರೆ ಮಂಗಳೂರು ನಗರ ನಿವಾಸಿಗಳು ತಥಾಪಿ ಮಂಗಳೂರು ಸರ್ಕಲಿಗೆ ಸೇರಿದ ಇತರ ಹಳ್ಳಿಗರೂ ಮನಸ್ಸುಮಾಡಿದರೆ ಆ ಸಂಖ್ಯೆಯನ್ನು ಹಿಂದಿಕ್ಕಬಹುದು ಕಳೆದ ೧೯೩೦—೩೨ರ ಹೋರಾಟದಲ್ಲಿ ಮಂಗಳೂರಿನ ಹೆಸರು ಮುಂದಾಗಿ ಮೆರೆದಿದೆ — ಈ ಸಿನಂತಿಗೆ ಜನರೆಲ್ಲರೂ ಲಕ್ಷ್ಯಗೊಟ್ಟು ಅಧಿಕಾಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ ಮೆಂಬರು ಆಗುವರೆಂದು ಭರವಸೆ ಪಡುತ್ತದೆ

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರು ಇತರ ಕಾಂಗ್ರೆಸ್ ಕಾರ್ಯಕರ್ತರೂ ಇನೆ ಸದಸ್ಯತನದ ಪುಸ್ತಕಗಳು ಕೊಡಲ್ಪಟ್ಟಿವೆ. ಸದಸ್ಯತನದ ಅವಧಿಯು ಇದೇ ತಿಂಗಳ ಎಂದರೆ ತಾರೀಖು ೩೧ ೮ ೪೦ ಕೊನೆ ವರೆಗೆ ಮಾತ್ರ ಇದೆ ಇನ್ನು ಮುಂದೆ ಉಳಿದ ಅವಧಿಯು ಅತ್ಯಲ್ಪವಿದೆ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಪೂರೈಸುವನೆಂದು ಕಾಂಗ್ರೆಸ್ಸು ಪ್ರೀರಿಸುತ್ತದೆ

ಕೊಂಚಾಡಿ ಕೇಶವ ಶೆಟ್ಟಿ,
ಅಧ್ಯಕ್ಷ ಮ. ಸ ಕಾ ಕಮಿಟಿ

ಕಾರ್ಕಳ

ಹಿಂದೀ ಪ್ರಚಾರಕರು — ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ. ಸಂಬಂಧವಾದ ಹೊಸ ಯೋಜನೆಯ ಮೇರೆಗೆ ಇಲ್ಲಿ ಶ್ರೀಗಳು ದ ಕಟಪಾಡಿ ಶ್ರೀನಿವಾಸ ಶೆಟ್ಟಿ ರಮಾನಾಥ ಭಟ್ಟ ಮತ್ತು ಕಟೀಲು ಗಣಪತಿ ಶರ್ಮರವರು ಹಿಂದೀ ಪ್ರಚಾರ ಮತ್ತು ಅದನ್ನು ಉಚ್ಚ ಪರೀಕ್ಷೆಗಳ ತನಕ ಕಲಿಸಲು ಪ್ರಮಾಣಿತರಾದರೆಂದು ತಿಳಿದು ಬರುತ್ತದೆ

ಹಿಂದೀ ಪರೀಕ್ಷೆ:—ದ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾರಂಭಿಕ ಪರೀಕ್ಷೆಗಳು ತಾ 11 8 1940ರ ದಿನ ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನಲ್ಲಿ ಜರಗಿದುವು ಪ್ರಾಥಮಿಕ 13 ಮಾಧ್ಯಮ 17 ಮತ್ತು ರಾಷ್ಟ್ರಭಾಷಾ 6 ಹೀಗೆ 36 ಮಂದಿ ಪರೀಕ್ಷಾರ್ಥಿಗಳಿದ್ದರು ಅವರಲ್ಲಿ 1- ಮಂದಿ ಮಹಿಳೆಯರಾಗಿದ್ದರು.

ಉಡುಪಿ

ಉಡುಪಿ ನಗರ ಸಭೆ

ಯುದ್ಧ ಸಹಾಯ ನಿಧಿಗೆ ನಕಾರ:—ಉಡುಪಿ ನಗರ ಸಭೆಯಲ್ಲಿ ಯುದ್ಧ ಸಹಾಯ ನಿಧಿಗೆ ಸಹಾಯ ಕೊಡುವದೆ ಸಾಧ್ಯವಿಲ್ಲವೆಂದು ತೀರ್ಮಾನವಾಗಿರುವುದಾಗಿ ತಿಳಿದು ಬರುತ್ತದೆ

ಎಲ್ಲೂರು

ಹೊಸ ಹೈ. ಎ. ಶಾಲೆ:—ಇದರ ೬ನೆಯ ತರಗತಿಯನ್ನು ತೆರೆಯುವ ಸಮಾರಂಭವು ತಾ ೧೪ರಂದು ಉದ್ಯಾವರ ಶ್ರೀ ಇ ರಾಮ ಶ್ರೀಯ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು

ಶೋಚನೀಯ ನಿಧನ:—ಬಲ್ಲಾಡಿ ಗ್ರಾಮದವರಾಗಿದ್ದು ಬಂಟ್ವಾಳ ಹ್ಯಾ. ಎ. ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಬಲ್ಲಾಡು ವೆಂಕಟರಾಯರು ಕಳೆದ ತಾ. ೧ರಂದು ಅರ್ಬಳದ ಸಮೀಪ ಹೊಳೆ ದಾಟುವಾಗ ದೋಣಿ ಮುಳುಗಿ ಅಕಾಲ ಮೃತ್ಯುವಿಗೆ ತುತ್ತಾಗಿರುವರೆಂದು ತಿಳಿಸಲು ತುಂಬ ವಿಷಾದಪಡುತ್ತೇವೆ.

ಶಾಲಾ ಪುಸ್ತಕಗಳು!

1939ನೇ ... ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದುದು.

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
3ನೇ ದರ್ಜೆ	0 2 6
4ನೇ „	0 3 0
5ನೇ	0 3 6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
3ನೇ ದರ್ಜೆ	0 1 4
4ನೇ	0-2 0
5ನೇ	0-2 6

ಸಿವಿಕ್ಸ್ ಅಥವಾ ಪ್ರಜಾಧರ್ಮ

3ನೇ ದರ್ಜೆ ಬೆಲೆ 0 1 6 4ನೇ ದರ್ಜೆ ಬೆಲೆ 0-2-0 5ನೇ ದರ್ಜೆ ಬೆಲೆ 0 2-6
6ನೇ „ 0-3-0 7ನೇ „ 0 3-0 8ನೇ „ 0-3-0

ಹೆಣ್ಣುಮಕ್ಕಳ ಶಾಲೆಗಳಿಗಾಗಿ ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

4ನೇ ದರ್ಜೆಗೆ 0—2 6 5ನೇ ದರ್ಜೆಗೆ 0 3 6

ಪ್ರಾಥಮಿಕ ಭೂವಿವರ
(ಜಿಲ್ಲೆಯ ಒಬ್ಬ ಪ್ರಸಿದ್ಧ ಭೂಗೋಳ ಶಿಕ್ಷಕರಿಂದ ರಚಿತವಾದುದು)

4ನೇ ತರಗತಿಗೆ 0-2-6 5ನೇ ತರಗತಿಗೆ 0-3-6 6ನೇ ತರಗತಿಗೆ 0-5-0
7ನೇ ತರಗತಿಗೆ 0-6-0 8ನೇ ತರಗತಿಗೆ 0-7-0

ಪ್ರಾಥಮಿಕ ಲಘುವಿಜ್ಞಾನ
(ಶ್ರೀ. ಎಸ್. ರಾಮಕೃಷ್ಣಾಚಾರ್, ಬಿ. ಎ, ಎಲ್ ಟಿ ವಿರಚಿತ)

6ನೇ ತರಗತಿಗೆ 0-6-0 7ನೇ ತರಗತಿಗೆ 0-6-0 8ನೇ ತರಗತಿಗೆ 0-6-0

ವ್ಯಾಕರಣ ಮತ್ತು ಪ್ರಬಂಧ
(ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ)

4ನೇ ಮತ್ತು 5ನೇ ತರಗತಿಗೆ 0—2—0 6ನೇ ತರಗತಿಗೆ 0—2—0
7ನೇ „ 0—2-6 8ನೇ „ 0—3—0

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ: 1—0—0

ದೊರೆಯುವ ಸ್ಥಳ— **ಶಾರದಾ ಛಾಪಖಾನೆ ಮಂಗಳೂರು.**

ಸ್ಪೈನು ಯುದ್ಧರಂಗಕ್ಕಿಳಿಯುವುದೆ?

★ ಯುದ್ಧ ವಾರ್ತೆ



ಆಲ್ಬೇನಿಯದಲ್ಲಿ ದಂಗೆ!

ನಾಜೀ ವಿಮಾನಗಳುರುಳಿದವು!

ಸೋಮಾಲಿಲೇಂಡಿನ ಕದನ!

ಇಂಡೋಚೈನದ ಪರಿಸ್ಥಿತಿ!.

ಸ್ಪೈನು ಯುದ್ಧಕ್ಕಿಳಿಯುವುದೇ?

ಸ್ಪೈನು ಯುದ್ಧರಂಗಕ್ಕಿಳಿಯುವ ಸರ್ವಸಿದ್ಧತೆಗಳನ್ನೂ ಮಾಡುತ್ತಿದೆಯೆಂದು ಮಾಸ್ಕೋದಿಂದ ವಾರ್ತೆ. ಎಲ್ಲಾ ಸ್ಪೈನಿನ ಹಡಗುಗಳನ್ನೂ ತಟಸ್ಥ ಬಂದರಗಳಿಗೂ ಸ್ಪೈನಿನ ಬಂದರುಗಳಿಗೂ ಬರುವಂತೆ ಕರೆದಿರುವರಂತೆ. ಪೂರ್ವ ಮೆಡಿಟರೇನಿಯದಲ್ಲಿ ಇಟಲಿಯ ಕಾರ್ಯಕಲಾಪಗಳನ್ನು ಸ್ಪೈನು ಕಾದುಕೊಂಡು ಮುಂದೆ ಯುದ್ಧರಂಗಕ್ಕಿಳಿಯುವ ಸರ್ವಸಿದ್ಧತೆಯಾಗುತ್ತಿದೆಯೆಂದೂ ವಾರ್ತೆ.

ಈ ಸುದ್ಧಿಯು ಸತ್ಯವಾದುದಲ್ಲವೆಂದೂ ಸಾರಲಾಗಿದೆ. ಇದರ ಸತ್ಯಾಂಶವನ್ನು ಮುಂದೆ ಕೆಲವು ದಿನಗಳಲ್ಲಿ ತಿಳಿಯಬಹುದು

ಆಲ್ಬೇನಿಯದಲ್ಲಿ ದಂಗೆ

ಆಲ್ಬೇನಿಯದ ಸೈನಿಕರು ಇಟಲಿಯನ್ ಸೈನಿಕರ ವಿರುದ್ಧ ದಂಗೆಯೆಬ್ಬಿಸಿದರು. ದಂಗೆಯಲ್ಲಿ ಇಕ್ಕಡೆಗಳಲ್ಲಿಯೂ ಹಲವು ಅನರ್ಥಗಳು ಸಂಭವಿಸಿವೆ

ನಾಜೀವಿಮಾನಗಳುರುಳಿದವು

ಬ್ರಿಟನಿನ ಕರಾವಳಿಯಲ್ಲಿ ದಾಳಿ ಮಾಡಲೆಂದು ಹಾರಾಡುತ್ತಿದ್ದ ಜರ್ಮನ್ ವಿಮಾನಗಳನ್ನು ಗುಂಡಿಕ್ಕಿ ಕೆಳಗುರುಳಿಸಲಾಗಿದೆಯೆಂದು ಲಂಡನ್ ವಾರ್ತೆ. ಜರ್ಮನ್ ವೈಮಾನಿಕರು ಕಡಲಕರೆಯ ಕೆಲವು ಪಟ್ಟಣಗಳ ಮೇಲೆ ಬಾಂಬೆಸೆದು ದಾಳಿ ಮಾಡುವ ಯತ್ನಗೈದರು

ರುಮೇನಿಯಾ-ಹಂಗೇರಿಗಳ ವಿವಾದ

ಇದನ್ನು ತೀರಿಸಲು ಹಂಗೇರಿಗೆ ಕರೆ ಹೋಗಿದೆ. ಮಾತು ಬೇಗನೇ ಆರಂಭವಾಗುವುದಾಗಿಯೂ ತಿಳಿಯುತ್ತದೆ. ರುಮೇನಿಯಾದ ಪ್ರಧಾನರು ಈ ವಿಷಯದಲ್ಲಿ ತಮ್ಮ ಸರಕಾರದ ಧೋರಣೆಯನ್ನು ಸಾರಿ ತೀರ್ಮಾನವಾಗುವ ಪರಿಸ್ಥಿತಿಯನ್ನು ತಂದೊದಗಿಸುವರೆಂದೂ ತಿಳಿದಿದೆ.

ಫ್ರಾನ್ಸಿನಲ್ಲಿ ೧೦೦ ಮುಂದಾಳುಗಳ ವಿಚಾರಣೆ

ದಲಾಡಿಯರ್, ಗೆಮ್ಲಿನ್ ಪ್ರಭೃತಿ ಫ್ರಾನ್ಸಿನ ನಾಯಕರ ವಿಚಾರಣೆಯು ಆರಂಭವಾಗಿದೆ. ಇವರು ಇಂಗ್ಲಿಷರ ಪಕ್ಷಪಾತಿಗಳಾಗಿದ್ದು ಅನ್ಯಾಯವಾಗಿ ಫ್ರಾನ್ಸನ್ನು ಜರ್ಮನಿಯೆದುರು ಕತ್ತಿಕಟ್ಟುವಂತೆ ಮಾಡಿದರೆಂಬುದೇ ಹೊಸ ಸರಕಾರದ ಆರೋಪ. ಹಿಂದಿನ ವೀರರು ಇಂದು ಅಪರಾಧಿಗಳು!

ಅಮೇರಿಕದಲ್ಲಿ ಹೆಚ್ಚು ವಿಮಾನಗಳಾಗುವುವು

ಇದುವರೆಗೆ ಅಮೇರಿಕದಲ್ಲಿ ವರ್ಷವೊಂದರ ೧೦೦೦೦ ವಿಮಾನಗಳು ಮಾತ್ರ ತಯಾರಾಗುತ್ತಿದ್ದುವು. ಬರುವ ಜನವರಿಯಿಂದ ಆರಂಭವಾಗುವ ವರ್ಷದಿಂದ ವರ್ಷವೊಂದರ ೧೮,೦೦೦ ವಿಮಾನಗಳನ್ನು ತಯಾರಿಸುವ ಯೋಚನೆಯಾಗಿದೆ

ಹೆಚ್ಚು ವಿಮಾನಗಳನ್ನು ಮಾಡಿದಷ್ಟು ಹೆಚ್ಚು ಹಣ ಪಡೆಯಬಹುದಲ್ಲವೇ?

ಜಪಾನಿನ ಇಂಡೋ ಚೈನ್ಯದಲ್ಲಿ ಹಕ್ಕುಬೇಕಂತೆ

ಇಂಡೋ ಚೈನದಲ್ಲಿ ಕೆಲವು ಹಕ್ಕುಗಳನ್ನು ನಮಗೆ ಬಿಟ್ಟುಬಿಡಿರಿ ಎಂದು ಜಪಾನು ಕೂಗೆಬ್ಬಿಸಿದೆ. ಜಪಾನಿಗೆ ಇಂಡೋ ಚೈನ್ಯದಲ್ಲಿ ವೈಮಾನಿಕ ಠಾಣ್ಯ, ಸೈನ್ಯ ಸ್ಥಾಪನೆ ಮೊದಲಾದ ವ್ಯಗಳಿಗೆ ಸ್ಥಳ ದೊರಕಬೇಕಂತೆ. ಅಂತೂ ಈ ಕೇಳಿಕೆಯಿಂದ ಜಪಾನು ಇಂಡೋ ಚೈನವನ್ನು ನುಂಗುವ ಆಶೆಮಾಡುತ್ತಿದೆ. ಬ್ರಿಟೀನ್ ಸರಕಾರವು ಏನು ಮಾಡಲಿದೆಯೋ ನೋಡಬೇಕು. ಜಪಾನ್ ಸೈನ್ಯಗಳು ಇಂಡೋ ಚೈನಕ್ಕೆ ಹಾರಲು ಸಿದ್ಧವಾಗಿ ನಿಂತಿವೆಯೆಂದೂ ಸುದ್ದಿಯಾಗಿದೆ

ಡಿ|ಗೋಲೆಯವರಿಗೆ ಬೆಂಬಲ

ನ್ಯೂ ಹೆಬ್ರಿಡೀಸಿನವರೂ ಫ್ರೆಂಚ್ ಮೊರೊಕ್ಕೋದವರೂ ಜನರಲ್ ಡಿ ಗೋಲೆಯವರಿಗೆ ಬೆಂಬಲ ಕೊಡುವರೆಂದೂ ಬ್ರಿಟಿನ್ ಸರಕಾರವನ್ನು ಅಲ್ಲಗಳೆವರೆಂದೂ ತಿಳಿದು ಬರುತ್ತದೆ

ಜಪಾನಿನ ಸೆರೆಯಲ್ಲಿರುವ ಬ್ರಿಟಿಷರು

ಜಪಾನರು ಕೈದು ಮಾಡಿದ ಬ್ರಿಟಿಷರಲ್ಲಿ ಒಬ್ಬನು ತೀರಿಹೋದನು. ಒಂಭತ್ತು ಜನರನ್ನು ಬಿಟ್ಟಿರುವರು. ಆರು ಜನರು ಇನ್ನೂ "ಸೆರೆಮನೆಯಲ್ಲಿಯೇ ಇರುವರೆಂದು ಪಾರ್ಲಿಮೆಂಟಿನಲ್ಲಿ ಹೇಳಲಾಯಿತು.

ಆಹಾರ ಹಾಳಾದರೆ ಶಿಕ್ಷೆ

ಆಹಾರ ಸಾಮಗ್ರಿಗಳನ್ನು ವ್ಯರ್ಥ ಹಾಳುಮಾಡಕೂಡದೆಂದು ಲಂಡನಿನ ಆಹಾರಖಾತೆಯ ಮಂತ್ರಿಯು ಪ್ರಚಾರಪಡಿಸಿ, ಹಾನಿ ಮಾಡಿದವರಿಗೆ ದಂಡನೆ ವಿಧಿಸಲಾಗುವುದೆಂದು ಪ್ರಕಟಿಸಿರುವನೆಂದು ತಿಳಿದಿದೆ. ಯುದ್ಧದ ಹೊಸ ಸಂಬಂಧಗಳು!

ಜರ್ಮನಿಯೊಳಗೆ

ಎಲಾಸ್ಕಾ-ಲಾರೈನಾ ಲಕ್ಸೆಂಬರ್ಗಗಳು ಜರ್ಮನಿಯೊಳಗೆ ಸೇರಿಸಲ್ಪಡುವುದಾಗಿ ಯೋಚನೆಯಂತೆ ಲಕ್ಸಂಬರ್ಗಿನ ಕೋರ್ಟು ಶಾಲೆಗಳ ಭಾಷೆಯು ಮುಂದಕ್ಕೆ ಜರ್ಮನಿಯೇ ಆಗಿದೆ



ಸರ್ವಾಧಿಕಾರಿಗಳ ದುರ್ವರ್ತನೆಗೆ ಎದುರಾಗಿ ಕಾವಲು ಸನ್ನದ್ಧವಾಗಿರುವ ಬ್ರಿಟಿಷ್ ಯುದ್ಧನೌಕೆಗಳ ಫಿರಂಗಿಗಳು

ಬ್ರಿಟಿಷ್ ಕಡಲ್ಗಾಲುವೆಯಲ್ಲಿ

ಇಲ್ಲಿದ್ದ ಹಡಗುಪಡೆಯ ಮೇಲೆ ಜರ್ಮನ್ ವಿಮಾನಗಳು ದಾಳಿಮಾಡಿದವೆಂದೂ ವಿಮಾನ ಕಾಳಗವಾಯಿತೆಂದೂ ತಿಳಿದಿದೆ. ಎಷ್ಟೋ ವಿಮಾನಗಳು ನಾಶವಾಗಿವೆ. ನಿಜಸಂಗತಿ ತಿಳಿದುಬಂದಿಲ್ಲ

ಸ್ಕೋವಮರ್ ಎಂಟಲ್ಲಿಯೂ ಕಾಳಗ ನಡೆಯಿತು

ಸೋಮಾಲಿಲೇಂಡಿನಲ್ಲಿ

ಇಟಲಿಯ ಸೈನ್ಯವು ಸೋಮಾಲಿಲೇಂಡಿನ ಮೇಲೆ ಆಕ್ರಮಿಸುತ್ತದೆ. ತಾ ೫ರಂದು ಝೀಲಾ ಬಂದರವನ್ನು ಪ್ರವೇಶಿಸಿತು. ಹೊರಗಿನ ಪಟ್ಟಣವನ್ನು ಸ್ವಾಧೀನವಡಿಸಿತು. ಅಲ್ಲಿದ್ದ ಬ್ರಿಟಿಷ್ ಒಂಟೆ ಸೈನ್ಯದವರು ವೈರಿಗಳಿಗೆ ಬಹಳ ತೊಂದರೆ ಕೊಟ್ಟವು.

"ಝೀಲಾ ಬಂದರವನ್ನು ಇಟಲಿಗೆ ಒಪ್ಪಿಸಿ ಕೊಡಬೇಕಾಗಿ ೧೯೩೫ರಲ್ಲಿ ನಿರ್ಧರಿಸಲಾಗಿತ್ತು. ಅದಕ್ಕಾಗಿ ಈಗ ಪ್ರವೇಶಿಸಿದಂತೆ ಬರಬೇರಾ ಬಂದರವನ್ನು ಆಕ್ರಮಿಸಲಿರುವರಂತೆ. ಆದರೆ ಬ್ರಿಟಿಷರು ಭದ್ರವಾಗಿ ಕಾಯುತ್ತಿರುವರು

ಇಂಡೋ ಚೈನ್ಯದಲ್ಲಿ

ಇಂಡೋ ಚೈನ್ಯದ ಪರಿಸ್ಥಿತಿಯು ಈಗ ವಿಷಮವಾಗುತ್ತ ಬರುತ್ತಿದೆ. ಜಪಾನಿನ ಹಡಗುಗಳು ಮತ್ತು ಸೈನಿಕರು ಮುಂದೆ ಮುಂದೆ ಆಕ್ರಮಿಸಿ ಬರುತ್ತಿದ್ದಾರೆ

ಅಮೆರಿಯರ ಬಿನ್ನಹ

ಲಂಡನಿನ ಬ್ಲೀಕ್ ರೂಮಿನಲ್ಲಿ ಒಂದು ಭಾಷಣಮಾಡುತ್ತಾ ಭಾರತ ಸಚಿವರಾದ ಅಮೆರಿಯವರು ಒಂದು ಸುದೀರ್ಘವಾದ ಭಾಷಣವನ್ನಿತ್ತರು. ಅದರಲ್ಲಿ ಭಾರತದ ನಾಗರಿಕತೆ ಮೊದಲಾದುವುಗಳನ್ನು ಹೊಗಳಿ ಯುದ್ಧಾನಂತರ ಸಾಮಂತ ಸ್ವರಾಜ್ಯವನ್ನು ಕೊಡುವುದಾಗಿಯೂ ಈಗ ಧುರೀಣರು ಯುದ್ಧದ ವಿಷಯ ನೆರವಾಗಬೇಕೆಂದೂ ಕೇಳಿಕೊಂಡಿರುವರು.

ವೈಸರಾಯರ ಪ್ರಕಟಣೆ

ಈ ವಾರದ ರಾಜಕೀಯದಲ್ಲಿ ವೈಸರಾಯರ ಪ್ರಕಟಣೆಯು ಅದರ ಕುರಿತು ಭಾರತೀಯರ ವಿಚಾರ, ಮುಖಂಡರ ಮಾತು ಇವುಗಳು ವಿಶೇಷವಾಗಿವೆ. ರಾಷ್ಟ್ರದ ಮುಖಂಡರು ವೈಸರಾಯರ ಮಾತು ನಿರಾಶಾಜನಕವಾಗಿದೆಯೆಂದೇ ಸ್ಪಷ್ಟವಾಗಿ ಹೇಳಿರುವರು. ಕೆಲ ಮಂದ ಪಕ್ಷೀಯರೂ ತಮ್ಮ ಅತೃಪ್ತಿಯನ್ನು ತಿಳಿಸಿರುವರು

ವೈಸರಾಯರ ಆಮಂತ್ರಣವನ್ನು .ಅಂಗೀಕರಿಸುವುದಿಲ್ಲ

'ನಾನು ತತ್ಕಾಲಕ್ಕೆ ವೈಸರಾಯರನ್ನು ಕಾಣಹೋಗುವಂತಿಲ್ಲ. ವೈಸರಾಯರ ಹೇಳಿಕೆಯನ್ನು ನೋಡಿದರೆ ನಮ್ಮ ಬೇಟಿಗೆ ಅವಶ್ಯವುಂಟೆಂತಲೇ ನಾನು ವಿಚಾರಿಸುವುದಿಲ್ಲ. ತಾ ೧೮ರಲ್ಲಿ ವರ್ಕಿಂಗ್ ಕಮಿಟಿಯನ್ನು ನಾನು ಕರೆದಿದ್ದೇನೆ. ಅದರಲ್ಲಿ ವೈಸಥ್ ಸುರಿಗೆ ಉತ್ತರಗಳು ಕಳುಹಿಸಲಾಗುವುದು" ಹೀಗೆಂದು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜದರು ಪತ್ರಿಕಾಪ್ರತಿನಿಧಿಗಳಿಗೆ ಹೇಳಿದರು

ಅಜಗಜಾಂತರವೆಂದರು ನೆಹರುಗಳು

ಕಾಂಗ್ರೆಸ್ಸಿನ ಕೇಳಿಕೆ ಮತ್ತು ವೈಸರಾಯರ ಹೇಳಿಕೆಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ನಾವು ಮುಂದೆ ಮಾತಿನಿಂದ ಹೇಳುವ ವಿಷಯ ಕಡಿಮೆ ಮಾಡಿ ಕಾರ್ಯದಿಂದ ಹೆಚ್ಚು ಮಾಡಬೇಕಾಗಿದೆ. ಸಾಮ್ರಾಜ್ಯಶಾಹಿತ್ವ ಮತ್ತು ರಾಷ್ಟ್ರೀಯತ್ವವು ಒಂದಾಗಲಾರವು. ಏಕೆಂದರೆ ಸ್ವಾತಂತ್ರ್ಯದ ಸ್ಥಾಪನೆಯೆಂದರೆ ಸಾಮ್ರಾಜ್ಯಶಾಹಿತ್ವದ ಮೂಲೋತ್ಪಾಟನವೆಂದರು ನೆಹರುಗಳು. ಸಾಮಂತ ಸ್ವರಾಜ್ಯದ ವಿಷಯ ಹೇಳುತ್ತಾ ಅದು ಎಂದೋ ಸತ್ತುಹೋಗಿದೆಯೆಂದರು.

ಜಿನ್ನಾ-ವೈಸರಾಯರ .ಭೇಟಿ

ಬೊಂಬಯಿಯಲ್ಲಿ ತಾ ೧೪ರಂದು ಜಿನ್ನಾ-ವೈಸರಾಯರ ಭೇಟಿಯಾಯಿತು. ಅದರ ಸಂಪೂರ್ಣ ವಿವರವು ತಿಳಿದು ಬಂದಿಲ್ಲ. ಮರುದಿನವೂ ಅವರು ಭೇಟಿಯಾದರು

ರಾಜಾಜಿಯವರ ಪ್ರಯಾಣ

ರಾಜಾಜಿಯವರು ತಮಿಳು ತೆಲುಗು ದೇಶಗಳಲ್ಲಿ ಸಂಚರಿಸುತ್ತಿರುವರು. ಅವರೊಡನೆ ಶ್ರೀ ಗಳಾದ ರಮಾನಾಥನ್ ಗೋಪಾಲರೆಡ್ಡಿ ಮತ್ತು ಸಾಂಬಮೂರ್ತಿ ಇವರೂ ಇದ್ದರು. ಹಲವು ಕಡೆಗಳಲ್ಲಿ ಅವರು ಅನೇಕ ಭಾಷಣಗಳನ್ನಿತ್ತರು. ವೈಸರಾಯರ ಹೇಳಿಕೆಯ ವಿಷಯ ಅವರು 'ನಾನು ಅದರ ಕುರಿತು ಅತೃಪ್ತನಾಗಿದ್ದೇನೆ; ಮೇಲಾಗಿ ಸಿಟ್ಟುಗೊಂಡಿದ್ದೇನೆ, ನೀವೆಲ್ಲರೂ ಹಾಗೆಯೇ ಆಗಬೇಕೆಂದು ನಾನು ಆಶಿಸುತ್ತೇನೆ,' ಎಂದರು.



ಭಾರತದ ಭವಿಷ್ಯತ್ತು ನಿರ್ಧಾರವಾಗುವುದೆ

ವೈಸರಾಯರ ಹೇಳಿಕೆ! ಮುಖಂಡರ ಅಭಿಪ್ರಾಯ!

ಅಜಾದರು ವೈಸರಾಯರನ್ನು ನೋಡಹೋಗುವುದಿಲ್ಲ!

ಜಿನ್ನಾ-ವೈಸರಾಯಿ ಭೇಟಿ

ರವೀಂದ್ರರಿಗೆ ಆಕ್ಸ್‌ಫರ್ಡಿನ ಗೌರವ

ಭಾರತದ ಕುರಿತು ಪಾರ್ಲಿಮೆಂಟಿನಲ್ಲಿ

ಭಾರತ ಸಚಿವರಾದ ಅಮೆರಿಯವರು ಭಾರತದ ಕುರಿತು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಭಾರತದ ಪರಿಸ್ಥಿತಿಯ ವಿಷಯವಾಗಿ ಸಾರ್ವಭೌಮ ಸರಕಾರಕ್ಕೆ ಹೆಚ್ಚಿನ ಗಮನವಿದೆಯೆಂದು ಹೇಳುತ್ತಾ ಸರ್ವಪಂಗಡಗಳ ಐಕ್ಯ ಪ್ರಯತ್ನಗಳು ನಡೆಯುತ್ತಿವೆಯೆಂದೂ ಉದಾಹರಣಾರ್ಥ ವೆಂಬಂತೆ ವೈಸರಾಯರು ಕೊಟ್ಟ ಹೇಳಿಕೆಯನ್ನೇ ಪಾರ್ಲಿಮೆಂಟಿನ ಮುಂದಿಟ್ಟರು

ಶ್ರೀ। ಶಾಸ್ತ್ರಿಗಳ ಅಭಿಪ್ರಾಯ

'ಕಾಂಗ್ರೆಸ್ಸು ತನ್ನ ಧೋರಣವನ್ನು ಬದಲಾಯಿಸ ... ಇದನ್ನು ಕಂಡ ನನಗೆ ... ವಾಗಿದೆ ಎಂದು ರೈ ... ಶಾಸ್ತ್ರಿಗಳ ಹೇಳಿದರು

ಪ್ರಪಂಚದ ಶಾಂತ್ಯರ್ಥವಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ಕಾಶಿಯಲ್ಲಿ ಮಾಲವೀಯರ ಯಾಗ

ಪಂಡಿತ ... ಮಾಲವೀಯರು ... ಶಾಂತಿಗಾಗಿಯೂ ಭಾರತದ ಸ್ವಾತಂತ್ರ್ಯಕ್ಕಾಗಿಯೂ ... ೧೭ರ ವರೆಗೆ ಚಲಿಸುತ್ತಿದ್ದು ಅದರ ಕುರಿತ ಈ ಸಾರಾಂಶದ ಹೇಳಿಕೆ ಕೊಟ್ಟಿರುವರು

'ಭಯಂಕರ ಯುದ್ಧವು ಸಂಭವಿಸಿ ಪ್ರಪಂಚವು ಮಹಾಸಂಕಷ್ಟಕ್ಕೆ ಗುರಿಯಾಗಿದೆ. ಲಕ್ಷಾಂತರ ಜನರ ಮರಣವಾಗಿದೆ ಯುದ್ಧವು ಮುಂದುವರಿದರೆ ಪ್ರಪಂಚದ ವಿನಾಶವಾಗುವುದು ಲೋಕದಲ್ಲಿ ಸುಖಶಾಂತಿಗಳು ನೆಲಸಬೇಕು ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕು ಪ್ರಪಂಚದ ಬೇರೆ ಬೇರೆ ಭಾಗದ ಜನರು ಇದಕ್ಕಾಗಿ ದಯಾಮಯನಾದ ಭಗವಂತನನ್ನು ಪ್ರಾರ್ಥಿಸಬೇಕು ಆತನು ನಮ್ಮ ಬೇಡಿಕೆಯನ್ನು ಕೇಳುವನು ಈ ನಂಬಿಕೆಯಿಂದ ಈ ಶಾಂತಿಯಜ್ಞವನ್ನು ಆರಂಭಿಸಿದ್ದೇವೆ

ಪುಂಡೀ ಜಲಸಂಗ್ರಹತಟಾಕ

ಇದು ವರೆಗೆ ಮದ್ರಾಸು ನಗರಕ್ಕೆ ಒದಗುತ್ತಿರುವ ನೀರಿನ ಸರಬರಾಯಿಯು ಬಹಳ ಅಸಮರ್ಪಕವಾದುದರಿಂದ, ಜನರು ಹಲವು ಸಲ ಬಹಳ ಸಂಕಷ್ಟಕ್ಕೆ ಗುರಿಯಾಗಬೇಕಿತ್ತು. ಅದರ ನಿವಾರಣೆಗಾಗಿ ಈಗ ಮದ್ರಾಸು ಕೋರ್ಪರೇಶನಿನವರು ಪುಂಡೀಯೋಜನೆಯೊಂದನ್ನು ಮಾಡಿರುವರು ಇದರ ಆರಂಭೋತ್ಸವವು ಮದ್ರಾಸಿನ ಗವರ್ನರರಿಂದ ನೆರವೇರಿಸಲ್ಪಟ್ಟಿತು

ಕಮಿಶನರಲ್ಲಿ ವಿಶ್ವಾಸವಿಲ್ಲ

ಕಣ್ಣಾನೂರಿನ ಮುನಿಸಿಪಲ್ ಕಮಿಶನರಾದ ಶ್ರೀ ಕೆ ಪಿ ನಾರಾಯಣ ಮೇನನರಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಇಡೀ ಕೌನ್ಸಿಲಿನವರು ಠೀರ್ಮಾನಿಸಿದುದರಿಂದ ಅವರನ್ನು ಅಲ್ಲಿಂದ ತೆಗೆದ ಬಿಡಬೇಕೆಂದು ಸರಕಾರಕ್ಕೆ ತಿಳಿಸಲಾಗಿದೆಯೆಂದ ಸುದ್ದಿ.

ಶಾಂತಿನಿಕೇತನದಲ್ಲಿ ಸಮಾರಂಭ

ರವೀಂದ್ರನಾಥ ಠಾಗೋರರಿಗೆ 'ಡಾಕ್ಟರೇಟ್' ಪ್ರಶಸ್ತಿ

ಕವಿ ರವೀಂದ್ರನಾಥ ಠಾಗೂರ್‌ರವರಿಗೆ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು ಗೌರವಿಸಿ ಇತ್ತ ಡಾಕ್ಟರೇಟ್ ಪ್ರಶಸ್ತಿ ಶಾಂತಿನಿಕೇತನದಲ್ಲಿ ಸರ್ ಮಾರಿಸ್ ಗ್ವ್ಯಯರರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಕೊಟ್ಟರು.

ಕವಿ ಠಾಗೂರ್‌ರವರ ಸಂಸ್ಕೃತದಲ್ಲಿ ಮಾತನಾಡ ... ಪ್ರಶಸ್ತಿಯನ್ನು ತಾವು ಸ್ವೀಕರಿಸ ವುದಾಗಿ ಹೇಳಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಶಾಲ ಮನೋಭಾವನೆಯನ್ನು ಪ್ರಶಂಸಿಸಿ ಇಂದಿನ ಘೋರ ಪರಿಸ್ಥಿತಿಯ ಪ್ರಸ್ತಾವನೆ ಮಾಡಿ ಉದಾತ್ತ ಗತಿಯ ಕಡೆಗೆ ಸಾಗುವ ನಾಗರಿಕತೆಯಲ್ಲಿ ನಿಶ್ಚಲ ನಂಬಿಕೆಯನ್ನು ಹೊಂದಬೇಕೆಂದು ತಿಳಿಸಿದರು

ಆಸ್ಟ್ರೇಲಿಯನ್ ಆರ್ಮಿ ಸರ್ವಿಸ್‌ದಳದ ... ಸಾಲಾಗಿ ನಿಂತಿರುವರು

ಕಾಕ್ಸಾರರ ಮೇಲಿನ ನಿರ್ಬಂಧ

ಕಾಕ್ಸಾರರ ಮೇಲಿನ ನಿರ್ಬಂಧವನ್ನು ಶರತವಿಲ್ಲದೆ ಹಿಂತೆಗೆಯುವುದಾಗಿ ಪಂಜಾಬಿನ ಪ್ರಧಾನರು ತಿಳಿಸುವರಾಗಿ ತಿಳಿದಿದೆ ಕಾಕ್ಸಾರರು ತಮ್ಮ ಚಳವಳಗಳನ್ನು ಸಾಮಾಜಿಕ ಕ್ಷೇತ್ರಗಳಲ್ಲಿ ಮಾತ್ರ ನಡೆಸಬೇಕೆಂದೂ, ಫೆಬ್ರವರಿ ೨೮ರಲ್ಲಿ ಹೊರಡಿಸಿದ ಸರಕಾರಿ ಆಜ್ಞೆಯನ್ನು ಉಲ್ಲಂಘಿಸಬಾರದೆಂದೂ ಅವರಿಗೆ ತಿಳಿಸಲಾಗಿದೆಯಂತೆ

ಮುಂದಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ

ವರ್ಧಾದಲ್ಲಿ ತಾ ೧೮ರಂದು ಜರಗುವುದು. ವೈಸರಾಯರ ಹೇಳಿಕೆಯ ವಿಚಾರವೇ ಮುಖ್ಯ ಚರ್ಚಾಸತಕ್ಕ ವಿಷಯವಾಗಿದೆ

ಸಾವರ್ಕಾರರ ಅಸ್ವಸ್ಥ

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಸಾವರ್ಕಾರರು ಕಾಲುನೋವಿನಿಂದ ಅಸ್ವಸ್ಥರಾಗಿರುವರು

ನ್ಯೂ ಥಿಯೇಟರ್ಸ್

ಕಲ್ಕತ್ತ ನ್ಯೂ ಥಿಯೇಟರ್ಸ್ ಸ್ಟುಡಿಯೋಗೆ ಬೆಂಕಿಬಿದ್ದು ಸುಮಾರು ೧೦ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ತಿಳಿದಿದೆ.

ಶ್ರೀ। ಎಂ. ಎನ್. ರಾಯಿಗಳ ಹೇಳಿಕೆ

ವೈಸರಾಯರ ಹೇಳಿಕೆಯ ಕುರಿತು ಶ್ರೀ ಎಂ. ಎನ್. ರಾಯಿಯವರು ಒಂದು ಪ್ರಕಟಣೆಯಲ್ಲಿ 'ಈಗ ಕಾಂಗ್ರೆಸ್ಸು ಮುಖಂಡರು ದೃಢ ನಿಶ್ಚಯ ಹೊಂದಬೇಕು. ಸರಕಾರವು ಕಾಂಗ್ರೆಸ್ಸು ಮುಖಂಡರನ್ನು ಒತ್ತಾಯಮಾಡುತ್ತಿರುವುದೆಂದು ಗೊತ್ತಾಗದು ವೈಸರಾಯರು ಹೇಳಿರುವುದಕ್ಕಿಂತ ಹೆಚ್ಚಿನದು ಸಿಗುವಂತಿಲ್ಲ ಆದ ಕಾಂಗ್ರೆಸ್ಸು ಧುರೀಣರಿಗೆ ತಿಳಿದಿರಲಿ ವೈಸರಾಯರ ಹೇಳಿಕೆಯು ಕಾಂಗ್ರೆಸ್ಸು ಕೇಳಿಕೆಗೆ ಬಹಳ ಕಡಿಮೆಯಾಗಿದೆ ಈಗ ಕಾಂಗ್ರೆಸ್ಸಿನವರು ಏನನ್ನು ಮಾಡಲು ಇಷ್ಟಪಡುವುದಿಲ್ಲವೋ ಅದನ್ನೇ—ಹೋರಾಟವನ್ನೇ ಅವರು ಮಾಡಬೇಕಾಗುವುದು ಎಂದಿರುವರ

ಸರ್. ಸಿಕಂದರರ ಅಭಿಪ್ರಾಯ

... ರಾಜ ತಾಂತ್ರಿಕವಾದ ಪದಸಮುಚ್ಚಯಗಳಿಲ್ಲ ಎಂದು ಸಿಕಂದರರ ಅಭಿಪ್ರಾಯವಾಗಿದೆ

ಡಾ। ಮೂಂಜೆಯವರ ಹೇಳಿಕೆ

ವೈಸರಾಯರ ಪ್ರಕಟಣೆಯು ತೀರಾ ಅಸಮಾಧಾನಕರ ... ದರೆ ಡಾ। ಮೂಂಜೆಯವರ

ನೋಟೀಸು

ದ ಕ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

(S C 364 1937 S E P 600 1940)

... ಮಂಗಳೂರು ತಾಲೂಕು ... ಗ್ರಾಮದಲ್ಲಿರುವ

ಅರ್ಜಿದಾರ (ವಾದಿ)

ಮತ್ತು

1 ಅಬ್ಬೋಕರೆ ಬ್ಯಾರಿ
2 ಹಮ್ಮಬ್ಬ ಬ್ಯಾರಿ
(... ಬ್ಯಾರಿ ಮಕ್ಕಳು ಪ್ರತಿವಾದಿಗಳು) ಮಂಗಳೂರು ತಾಲೂಕು ... ಗ್ರಾಮದಲ್ಲಿರುವವರು ಪ್ರತಿವಾದಿಗಳು

ಸದ್ರಿ ಮೇಲ್ಕಾಣಿಸಿದ S. C 364 1937 ನೇ ವ್ಯಾಜ್ಯದ ಡಿಕ್ರಿ ಮೇಲೆ ಮೇರಿನ ಅರ್ಜಿದಾರನು ದಾಖಲು ಮಾಡಿದ ಸದ್ರಿ ಮೇಲಿನ ಅಪ್ಲಿಕೇಶನು ತಾ 7—9—1940ನೇ ಪೂರ್ವಾಹ್ನ 10½ ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ರೆಸ್ಪೋಂಡೆಂಟರು (ಪ್ರತಿವಾದಿಗಳು) ಸ್ವಂತವಾಗಿ ಯಾ ವಕೀಲರ ಮುಖಾಂತ್ರ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ಇದ್ದರೆ ಮನವಿ ಮಾಡಿಕೊಳ್ಳಬಹುದು, ತಪ್ಪಿದ್ದ ಸದ್ರಿ ಅಪ್ಲಿಕೇಶನ್ನು ಅವರ ಗೈರು ಹಾಜರಿಯಿಂದ ತೀರ್ಮಾನವಾಗುವುದು ಎಂತ ಕೋರ್ಟಿನ ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ

P. Vasudeva Rao,
Advocate for Petitioner

ಮಂಗಳೂರು, 14—8—1940

ಗ್ರಂಥ ವಿಮರ್ಶೆ:

ನವನೀತ ರಾಮಾಯಣ*

ವಾಲ್ಮೀಕಿ ರಾಮಾಯಣವು ಭರತಖಂಡದ ಸಾಹಿತ್ಯದೊಂದು ನಿಧಿ. ಕಾವ್ಯಗಳಲ್ಲಿ ಅದು ಆದಿಕಾವ್ಯ. ಸರ್ವರಿಗೂ ಮೆಚ್ಚಿಗೆಯ ಕೃತಿ ರಾಮಾಯಣ ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಇದರ ಅಸಂಖ್ಯ ಅನುವಾದಗಳು ಆಗಿವೆ, ಆಗುತ್ತಲಿವೆ. ಇಂತು ರಸಿಕರನ್ನು ತಲೆದೂಗಿಸಿದೀ ಕಾವ್ಯದ ಕಥೆಯನ್ನು ಆದರಿಸಿ ಹಿಂದಿನ ಕವಿಗಳೂ, ಆದರೆ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಪಾಂಡಿತ್ಯಮಯವಾದ ಕಾವ್ಯವಾಣಿಯಲ್ಲಿ ಹಳೆಯ ಕಥಾವಸ್ತುವಾದರೂ ಹೊಚ್ಚಹೊಸದಾಗಿ ಪೌರಾಣಿಕರ ತಾತ್ಪರ್ಯ ಎಲ್ಲಕ್ಕಿಂತಲೂ ಸಾಹಿತ್ಯ ರಸಿಕರ ಮನಸ್ಸಿಗೆ ಅತ್ಯಂತ ಆಹ್ಲಾದಕರವಾಗಿ ಈ ನವನೀತ ರಾಮಾಯಣವನ್ನು ತನ್ನ ತಾಯಿಗೆ ಕನ್ನಡ ಮಾತೆಗೆ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಭಾರತಿಯನ್ನು ಒಲಿಸಲು ಇಚ್ಛಿಸಿದ್ದಾರೆ. ಸರ್ವಂಸಹಾ ಮಾತೆಯು ಆನಂದಿಸುವಂತೆ ಬಯಸಿದ್ದಾರೆ. ಶ್ರೀಮಾನ್ ತಿಮ್ಮಪ್ಪಯ್ಯನವರು ಉಜ್ವಲವಾದೀ ಕಾವ್ಯದಿಂದ ರಾಮಾಯಣದ ಚಿತ್ರವನ್ನು ಹೊಸ ಹೊಳಪಿನಿಂದ ತೋರಿಸಿ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸಿ ಕೊಂಡಿದ್ದಾರೆ.

ಮೂರು ಭಾಗಗಳಲ್ಲಿ ಪ್ರಕಟವಾಗಲಿರುವ ಸಂಪೂರ್ಣ ರಾಮಾಯಣದ ಮೊದಲನೆಯ ಭಾಗವಿದು. ಶ್ರೀ ರಾಮನು ಪಿತೃವಾಕ್ಯ ಪಾಲನೆಗಾಗಿ ಸೀತಾಲಕ್ಷ್ಮಣ ಸಮೇತನಾಗಿ ಗುಹನಿಂದ ಸರಯೂ ನದಿಯನ್ನು ದಾಟಿ 'ಚಿತ್ರಕೂಟದ ಕೂಟಕ್ಕೇರುವ ವರೆಗೆ ಇದರಲ್ಲಿ ಕಥೆಯು ವರ್ಣಿತವಾಗಿದೆ. ಮೂಲಕಥೆಯು, ಕಥಾಪಾತ್ರಗಳ ಸಂಬಂಧ ಇವೆಲ್ಲ ವಾಲ್ಮೀಕಿ ರಾಮಾಯಣವನ್ನೇ ಅವಲಂಬಿಸಿವೆ. ಆದರೆ ಕಥಾವಸ್ತುವು ಮಾತ್ರ ಹೊಸದಾಗಿ ನವನೀತವಾಗಿದೆ. 'ಪೌರಸ್ತ್ಯ ಧರ್ಮಾವತಾರಿ ಮಲಯಾಚಲನ ಭವ್ಯಾಕೃತಿಯ' ವರ್ಣನೆಯಿಂದ, ಹೀಗೆ ವಸ್ತುನಿರ್ದೇಶರೂಪವಾಗಿ ಕಾವ್ಯವು ಆರಂಭವಾಗುತ್ತದೆ. ಮಲಯಾಚಲದ ದರ್ಶನ ಮಾಡಿಸಿದ ಕವಿಯು, 'ಹುರುಳು ಗನ್ನಡ ನುಡಿಯ ಬೀಡಾ'ದ ತನ್ನ ಪ್ರೀತಿಯ ಬನವಸೆ ನಾಡ'ನ್ನು ತೋರಿಸಲು ಮರೆಯುವುದಿಲ್ಲ. ಮಲಯಾಚಲದ ತಪ್ಪಲಿನಲ್ಲಿ ಯೋಗಿನಿಯಾಥ ವೇದವತಿಯು ತಪೋನಿಷ್ಠಳಾಗಿರುತ್ತಾಳೆ. ಸಂಜೆಯಾಯಿತು. ದುಷ್ಟರ ರಕ್ಕಸರ ಸಂಚಾರಕಾಲವಲ್ಲವೆ? ಪಡುಗಡೆಯಿಂದ ನಾದ ಕೇಳಿಸುತ್ತದೆ. ಪುಷ್ಪಕವೇರಿ ಶೃಂಗಾರಭೈರವನಾದ 'ದಕ್ಷಿಣಾಪಥ ಚಕ್ರವರ್ತಿ'ಯಾದ ರಾವಣನು ವೇದವತಿಯನ್ನು ಮೋಹಿಸಿ ಬರುತ್ತಾನೆ. ರಕ್ಕಸನ ಕೊಂಕುನುಡಿಗಳಿಂದ ಯೋಗಿನಿಯು ಕಿಡಿಕಿಡಿಯಾಗಿ 'ಸಾವನ್ನ ಪರಸ್ತ್ರೀಯನ್ನು ನೋಡದಿರು, ನೋಡಿದರೆ ನಿನಗದೇ ಕೇಡಾಗುವುದು' ಎಂದು ಶಪಿಸುತ್ತಾಳೆ. ವಾಲ್ಮೀಕಿ ಮೊದಲಾದ ಮುನೀಶ್ವರರು ಬೆರಗಾಗಿ ಅಲ್ಲಿಗೆ ಓಡಿಬರುವರು. ರಾವಣನು ಮರೆಯಾಗುವನು. ಇರುಳಾಯಿತು. ವಿಶ್ವಾಮಿತ್ರನು ತನ್ನೆಣಿಕೆಯನ್ನು ಜಯಶಾಲಿಯಾಗಿ ಮಾಡಲು ಮುನಿಗಳೊಡನೆ ವಿಚಾರಕ್ಕೆ ತೊಡಗುತ್ತಾನೆ. 'ಉತ್ತರಾಪಥ' 'ದಕ್ಷಿಣಾಪಥಗಳ ಆರ್ಯಸಂಕುಲಗಳು ಆರ್ಯಧರ್ಮದ ರಕ್ಷಣೆಯ ವಿಚಾರವನ್ನೂ ರಾವಣನ ಅಧರ್ಮವನ್ನೂ ಕುರಿತು ಚರ್ಚಿಸುತ್ತಾರೆ. ವಾಲ್ಮೀಕಿಯು ದಕ್ಷಿಣಾಪಥಕ್ಕೆ ಹೋಗಿ ರಾವಣನಂತರಂಗವನ್ನು ಪರಿವರ್ತಿಸುವುದಾಗಿ ನಿಶ್ಚಯವಾಯಿತು. ರಾವಣನು ಚಿಂತೆಯಿಂದಿರುವನು. ವಾಲ್ಮೀಕಿಯು ಪುಲಸ್ತ್ಯನೊಡನೆ ಲಂಕೆಗೆ ಹೋಗುವನು. ಅಲ್ಲಿ ಸಜ್ಜನರಂತರಂಗವನ್ನು ಅರಿತು ರಾವಣನನ್ನು ಕಾಣಬೇಕೆಂದು ಬಯಸುವಾಗ ಪ್ರಹಸ್ತನೊಡನೆ ಅತನು ಸೀತಾಸ್ವಯಂವರಕ್ಕೆ ಮಿಥಿಲೆಗೆ ಹೋಗಿರುವುದಾಗಿ ತಿಳಿಯುವುದು. ಮುಂದಣದು ಸೀತಾಸ್ವಯಂವರದ ವರ್ಣನೆ. ಮಿಥಿಲೆಗೆ ಹೊರಟ ರಾವಣನಿಗೆ ತಾಟಕಿ ಸುಬಾಹುಗಳ ವಧೆ, ಕೌಶಿಕನ ತಂತ್ರ ರಾಮಲಕ್ಷ್ಮಣರ ಪ್ರತಾಪಗಳು ತಿಳಿಯುವುವು. ಅತನೆದೆಯಲ್ಲಿ 'ಮುಂದಲಂ ಕಡೆದು ಕಡೆಯೊಂದಿಸುವುದು' ರಾವಣನು, ಮೋಸಮಾಡಲು ಮುನಿಯೊಡನೆ ಒಂದು ಕೃತಕ ಮಿಥಿಲೆ ಮತ್ತು ಸೀತಾಸ್ವಯಂವರವನ್ನು ಏರ್ಪಡಿಸಹೇಳುವನು. ಆದರೆ ಕೌಶಿಕನ ತಂತ್ರದೆದುರು ದಾನವರ ತಂತ್ರವು ಬಯಲಾಗದಿರುವುದೇ? ಕೌಶಿಕನು ರಾಮಲಕ್ಷ್ಮಣರೊಡನೆ ಮಿಥಿಲೆಗೆ ಬರುವನು. ಸ್ವಯಂವರಕ್ಕೆ ಅಣಿಯಾಗುವುದು. "ಹರಧನುಸ್ಸನ್ನು ಮುರಿಯುವವನು ಪುಷ್ಪಕದಿಂದಿಳಿದು ರಾವಣನಲ್ಲಿಗೆ ಬಂದನು ಹರಧನುಸ್ಸನ್ನೆತ್ತಲಾರದೆ ಬವಣೆಗೊಂಡನು. ಎಲ್ಲರೂ ನಕ್ಕರು, ನಾಚಿಕೆಯಿಂದ ತೆರಳಿದನು. ರಾಮನು ಲೀಲಾಜಾಲವಾಗಿ ಹರ ಧನುಸ್ಸನ್ನು ಮುರಿದನು. ಹರಧನಸ್ಸನ್ನು ಮುರಿದುದು ಅನ್ಯಾಯವಾಯಿತೇ ಎಂದು ರಾಮನು ಶಂಕಿಸಲು ಅದು ಧರ್ಮಕಾರ್ಯವೆಂದು ಶಂಕೆಯನ್ನು ಕೌಶಿಕನು ಪರಿಹರಿಸಿದನು. ಮುಂದೆ ಸೀತಾರಾಮರ ವಿವಾಹವಾಯಿತು. ರಾವಣನು ಅಲ್ಲಿಂದ ಮರಳಿ ಬಂದು ಮಧ್ಯಮಾರ್ಗದಲ್ಲಿ ಕೊಡಲಿಯ ರಾಮನನ್ನು ಕಂಡು ಆತನಿಗೆ ರಾಮನು ಹರಧನುಸ್ಸನ್ನು ಮುರಿದನೆಂದೂ, ಆದರಿಂದ ಆತನ ಗುರುವಿಗೆ ಅಪಮಾನ ಮಾಡಿದನೆಂದೂ ಹೇಳಿ ಕೆರಳಿಸುವನು. ಮಿಥಿಲೆಯಿಂದ ಶ್ರೀರಾಮನು ಬಂಧು ಪರಿವಾರದೊಂದಿಗೆ ಮರಳುತ್ತಿರಲು ಪರಶುಧರನು ಎದುರಾಗಿ ಕಾದಾಡಿ ಸೋಲುವನು. ಹರುಧನುರ್ಭಂಗದ ಕಾಲದಲ್ಲಿ ಕೌಶಿಕನು ಇತ್ತ ಉಪದೇಶವೇ ಆತನ ಮನಶ್ಶಾಂತಿಗೂ ಸಾಕಾಗುವುದು. ಪರಶುರಾಮನು ಅವರನ್ನು ಹರಸಿ ಕೌಶಿಕನ ಕಾರ್ಯಕ್ಕೆ ಜಯವಾಗಲೆಂದು ಆಶಿಸುವನು. ಮುಂದೆ ರಾಮಚಂದ್ರನಿಗೆ ಪಟ್ಟಾಭಿಷೇಕವಾಗುವ ವಿಷಯ. ಕೈಕಯಿಯ ಮೆಚ್ಚಿನ ಸೇವಕಳಾಗಿದ್ದ ಶಂಬರಸುತೆಯಾದ ಮಂದರೆಯೂ ರಾವಣನ ಮಂತ್ರಿ ಪ್ರಹಸ್ತನ ಪ್ರೇರಣೆಯಿಂದ ಕೈಕಯಿಗೆ ದಶರಥನು ಮುನ್ನಿತ್ತ ವರಗಳ ನೆನಪು ಮಾಡುವಳು. ಇದರಂತೆ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನವಾಸಕ್ಕೆ ತೆರಳುವನು. ಇದಿಷ್ಟು ನವನೀತ ರಾಮಾಯಣದ ಪ್ರಥಮ ಖಂಡದ ಸಾರ. ಹೀಗೆ ವಾಲ್ಮೀಕಿ ರಾಮಾಯಣದಲ್ಲಿ ಕಂಡುಬರುವ ಅಮಾನುಷ ವ್ಯವಹಾರಗಳನ್ನು ತಿದ್ದಿ, ಲೋಕ ಸಾಮಾನ್ಯವೂ, ರಾಜತಂತ್ರ ಸಹಜವೂ ಆದ ರೀತಿಯಲ್ಲಿ ಕಥೆಗೆ ಹೊಸತನವನ್ನು ತಂದದ್ದು ಒಂದು ವೈಶಿಷ್ಟ್ಯವಾಗಿದೆ.

ಕಥಾವಿಸ್ತಾರದ ರೀತಿ ಹೊಸತು, ಸುಂದರವಾದುದು, ಶೈಲಿ ಶಕ್ತವಾದುದು. ಭಾಷೆ ಮಾತ್ರ ಪಾಂಡಿತ್ಯಮಯವಾಗಿ ಗಡುಸಾಗಿದೆ. ಜನಸಾಮಾನ್ಯರು, ಹೆಂಗುಸರು, ಮಕ್ಕಳೇ ಮೊದಲಾದವರು ಓದಿ ಹಾಡುವ ಕಾವ್ಯಕ್ಕೆ ರಾಮಾಯಣಕ್ಕೆ ಈ ಭಾಷಾ ಬಂಧವು ಒಪ್ಪುವುದೇ ಎಂದು ಸಂದೇಹ. ದಕ್ಷಿಣಾಪಥ ಉತ್ತರಾಪಥದವರ ಹೋರಾಟಕ್ಕೆ ದ್ರಾವಿಡ 'ಆರ್ಯರ ಕಾಳಗಕ್ಕೆ ಸಂಬಂಧಿಸಿದ ಕಥೆಯನ್ನು ಇಲ್ಲಿ ಹೆಣೆದಿರುವರೇ ಎಂಬ ಧ್ವನಿಯು ಅಲ್ಲಲ್ಲಿ ಸೂಚಿತವಾಗುವುದಾದರೂ ಆ ವ್ಯಾಪ್ತಿ ಅಸಮಗ್ರವಾದುದರಿಂದ ನಿರ್ಧಾರಕ್ಕೆ ಬರಲಾಗುವುದಿಲ್ಲ.

ಅನಿತರದೊಳಗೀ (ಪು. ೭೯) ಎಂಬಲ್ಲಿ ಅಕ್ಷರವು ಒಂದು ಹೆಚ್ಚಾಗಿರುವಂತೆ ತೋರುತ್ತದೆ. ಬವಣೆ (ಪು ೪) ಒವಣೆ (ಪು. ೩೪) (ಪು ೯೩) ಹೀಗೆ ಎರಡು ರೂಪಗಳನ್ನು ಪ್ರಯೋಗಿಸಿದ್ದುದರ ಸಾಧುತ್ವ ನಮಗೆ ಅರ್ಥವಾಗುವುದಿಲ್ಲ. ಕೈದಾಂಗು ತೇಳು ಬಿಂಗುರುಟಿ ಬೆಟ್ಟಿದುದು ಪಡಿಗ ಇಂತಹ ಹೊಸ ಶಬ್ದಪ್ರಯೋಗಗಳಿಗೆ ಟಿಪ್ಪಣಿ ಅವಶ್ಯವಿದೆಯೆನಿಸುತ್ತದೆ. ಪೂವೇರಿದಾಭೂತ' 'ಗುಡಿಸಿಂದೊಳಗಕೀ' ಇಂತಹ ನುಡಿಗಟ್ಟುಗಳ ಪ್ರಯೋಗಗಳೂ ವಿವರಣೆಯಿಲ್ಲದೆ ಎಲ್ಲಾ ಕಡೆಯ ಕನ್ನಡಿಗರಿಗೂ ಅರ್ಥವಾಗಲಾರವು. ಲಲಿತಕನ್ನಡ ಭಾಷಾಲೇಖಕರಾದ ಶ್ರೀಯುತರು 'ಕರಪುಟ ಘಟಿತ ನಿಟಿಲತಟ' ಇಂತಹ ಶಬ್ದಪ್ರಾಸ ವ್ಯಾಮೋಹಕ್ಕೆ ಬಿದ್ದುದು ಒಂದು ವಿಶೇಷವಾಗಿದೆ. 'ಮಮಕಾರಾದಿ ಸಂಕುಚಿತ ಶೈಲಿಯನೊಂದಿದ ಅಲ್ಪ ಕವಿಯ ಕಾವ್ಯ ಬಂಧ'ವನ್ನು ತೆಗಳಿದ್ದಾರೆ ಗ್ರಂಥ ಕರ್ತರು (ಪು. ೨೩) ಅವರೇ 'ಕವಿಯು ಮಾಟಗಾರನೆಂದು ಕುಂಚು ಮಿಸದಿರಿ ಬಲ್ಮೆಯು ದೈವದತ್ತವರಬಲವಿಲ್ಲದಿರೆ ಕವಿಯಪ್ಪನೇ?' (ಪು ೩೭) ಎಂಬೀ ಜಪ್ಪಯ ಮಾತನ್ನು ಹೇಳಿಕೊಂಡದ್ದು, ಪ್ರಾಚೀನ ಕವಿಗಳ ಸಂಪ್ರದಾಯ ಶರಣತೆಯಿಂದಲೋ ಎಂದು ಸಮಾಧಾನ ಪಡಬೇಕಾಗಿದೆ. ಇವೆಲ್ಲಾ ಚಂದ್ರಬಿಂಬದಲ್ಲಿ ಕಲೆಯಡಗುವಂತೆ ಗ್ರಂಥದ ಮಹತ್ತಕ್ಕೆ ಬಾಧಕವೆನಿಸಲಾರವು.

ಅಂತೂ ಕನ್ನಡಿಗರಿಗೆ ಇಂದು ಹೊಸತೊಂದು ರಾಮಾಯಣವು ದೊರಕಿದೆ. ರಾಮಾಯಣವು ನಿಜವಾಗಿಯೂ ನವನೀತವಾಗಿದೆ. ಶ್ಲೇಷಾರ್ಥದ ನವನೀತವು ಮುಂದಿನ ಖಂಡಗಳಲ್ಲಿ ಇನ್ನಷ್ಟು ಹೆಚ್ಚಾಗಿ ತೋರುವುದೆಂದು ಭರವಸೆಯಿದೆ. ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ಇದೊಂದು ಅಪೂರ್ವ ಗ್ರಂಥ, ನವೀನ ಕೃತಿ, ಸುಂದರವಾದೊಂದು ಕಾವ್ಯ. ಈ ಕಾವ್ಯವನ್ನು ಬರೆದು ಶ್ರೀಮಾನ್ ತಿಮ್ಮಪ್ಪಯ್ಯನವರು ಇಂದು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಅಮೂಲ್ಯವಾದೊಂದು ಕಾಣಿಕೆಯನ್ನೇ ಒಪ್ಪಿಸಿದ್ದಾರೆ. ಕನ್ನಡಿಗರಿಗೆ ಮಹೋಪಕಾರವನ್ನು ಮಾಡಿದ್ದಾರೆ. ಹಿರಿಯರಾದೀ ಗ್ರಂಥಕರ್ತರು ತಮ್ಮ ಹಿರಿತನಕ್ಕೊಪ್ಪುವಂತಹ ಗ್ರಂಥಗಳನ್ನೇ ಬರೆಯಲು ಮನಸ್ಸುಮಾಡಿದುದು ನಮಗೆಲ್ಲರಿಗೂ ಅತ್ಯಂತ ಆನಂದದ ವಿಷಯ.

— ಕಯ್ಯಾರ

* ಗ್ರಂಥಕರ್ತರು: ಶ್ರೀ ಮುಳಿಯ ತಿಮ್ಮಪ್ಪಯ್ಯ. ಪ್ರಕಾಶಕರು: ಕನ್ನಡ ಸೇವಾ ಸಂಘ ಅಮ್ಮೆಂಬಳ ದ. ಕ.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ
ಸ್ಮಾಲ್ ಕಾಸ್ ವ್ಯಾಜ್ಯದ ನಂಬ್ರ 222/1940
ಎದ್ಯಾರಕ್ಷ ಕೀ[illegible] ವಾದಿಯು

ಮತ್ತು

ಮೊಸಿಪಾಸ್ ಬಿಂತ ದೂಬಪ್ಪ ಓಂತನ ಮಗ — ವ ಕೆಗ್ಗೂರು ತಾಲೂಕು ಮೇಲಂಚೆ ಮೂಗಣಿ ಕಾರಿನಾಡಿ ಗ್ರಾಮದ ಕೆಡಮು ಕೊಟ್ಟಯಿಂಬಳಿ ರುವವ ಲಿಯೋ ಜೆ ಓಂಕ 1ನೇ ಪ್ರತಿವಾದಿಯು ಮಗ — Clerk Police Commissioner's Office Bombay } ಪ್ರತಿವಾದಿ

ಇವರೊಳಗೆ

ಮೂಲಗೇಣಿ ಬಾಕಿ ರೂ 134 11 10 ಮತ್ತು ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ಬರಮಾಡಿಕೊಳ್ಳುವ ಬಗ್ಗೆ ವಾದಿಯು ಸದ್ರಿ ಪ್ರತಿವಾದಿಯ ಮೇಲೆ ಮಾಡಿದ ಮೇಲಿನ ದಾವೆಯು ಸದ್ರಿ ಕೋರ್ಟಿನಲ್ಲಿ ತಾ 25 9—1940ಕ್ಕೆ ಪ್ರತಿವಾದಿಗೆ ಪುನಹ ದಾವಾ ಸಮನ್ಸ್ ಮತ್ತು ಈ ಕುರಿತು ವರ್ತಮಾನ ಪತ್ರಿಕೆಯ ಮೂಲಕ ಪ್ರಕಟನೆ ಬಗ್ಗೆ ಇಡಲ್ಪಟ್ಟಿದೆ. ಆ ದಿನ ಮಧ್ಯಾಹ್ನ 11 ಗಂಟೆಗೆ ಪ್ರತಿವಾದಿಯು ಸದ್ರಿ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಉದಾಹರಣೆ ಏನಾದರೂ ಇದ್ದರೆ ದಾಖಲ್ಲ ಮಾಡಲಿಕ್ಕೆ ತಪ್ಪಿದ್ದಾದರೆ ಸದ್ರಿ ದಾವೆಯು ಪ್ರತಿವಾದಿಯ ಗೈರುಹಾಜರಿಯಲ್ಲಿ ವಾದಿಯ ಗುಣಕ್ಕೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗತಿಯನ್ನು ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ.

ತಾ. 8-8 1940. ಮಂಗಳೂರು } ಎಂ. ಎಸ್. ಅಧಿಕಾರಿ ವಾದಿಯ ಕಡೆ ವಕೀಲ



ವಿಚಿತ್ರ ಪ್ರಪಂಚ

ಮದುವೆಯಾಗಬೇಕೆ? ಸ್ಪರ್ಧೆಗೆ ನಿಲ್ಲಬೇಕು!

ಬೇರೆ ಬೇರೆ ದೇಶಗಳಲ್ಲಿ ಹೆಣ್ಣನ್ನು ವಿವಾಹವಾಗುವ ಗಂಡಿನ ಯೋಗ್ಯತೆಯ ಅಳತೆ ಬೇರೆ ಬೇರೆಯಾಗಿ ಇರುತ್ತದೆ. ಕೆಲವು ದೇಶಗಳಲ್ಲಿ ಸೌಂದರ್ಯ, ಮತ್ತೆ ಕೆಲವು ದೇಶಗಳಲ್ಲಿ ವಿದ್ಯೆ, ಗುಣ, ಶೀಲ, ಸ್ವಭಾವ, ಸಂಪತ್ತು ಮೊದಲಾದವುಗಳಿಗೆ ಪ್ರಾಮುಖ್ಯತೆ ಇರುತ್ತದೆ. ಆದರೆ ಹೆಬ್ರಿಡಿಸ್ ಎಂಬ ದ್ವೀಪ ಸಮುದಾಯದಲ್ಲಿರುವ ಜನರಲ್ಲಿ ವಿವಾಹವಾಗುವ ಯುವಕರ ಯೋಗ್ಯತೆಯನ್ನು ವಿಚಿತ್ರ ರೀತಿಯಿಂದ ಅಳೆದು ತಿಳಿಯುವರು.

ವಿವಾಹವಾಗುವ ಅಪೇಕ್ಷೆಯನ್ನು ಸೂಚಿಸಿ ಬಂದ ಯುವಕರು ಹೆಣ್ಣಿನ ಹೆತ್ತವರ ಸಮಕ್ಷಮದಲ್ಲಿ ಉದ್ದನಾದ, ತೋರವಾದ, ತಾಳುವಂಥ ಹಗ್ಗಗಳನ್ನು ಹೊಸೆಯುವ ಸ್ಪರ್ಧೆಯಲ್ಲಿ ಭಾಗ ತೆಗೆದುಕೊಳ್ಳಬೇಕು. ಈ ದ್ವೀಪಗಳ ಕಂದರಗಳಲ್ಲಿ ಅನೇಕ ಜಾತಿಗಳ ಪಕ್ಷಿಗಳು ಮನೆ ಮಾಡಿಕೊಂಡಿರುತ್ತವೆ. ಈ ಪಕ್ಷಿಗಳೇ ಹೆಬ್ರಿಡಿಸ ನಿವಾಸಿಗಳ ಮುಖ್ಯವಾದ ಭೋಜನ ವಸ್ತುಗಳು! ಹಗ್ಗಗಳನ್ನು ಸೊಂಟಕ್ಕೆ ಕಟ್ಟಿ, ಕಂದರಗಳಲ್ಲಿ ಇಳಿದು, ಬಹಳ ಸಾಹಸ ಮಾಡಿ ಅವರು ಈ ಕಾಡುಹಕ್ಕಿಗಳನ್ನು ಹಿಡಿದು ತರಬೇಕಾಗಿದೆ. ವಿವಾಹದ ಉಮೇದುವಾರರು ತಾವು ಹೊಸೆದ ಹಗ್ಗವನ್ನು ತಾವೇ ಸೊಂಟಕ್ಕೆ ಕಟ್ಟಿಕೊಂಡು ಪರ್ವತ ಕಂದರಗಳಿಗೆ ಹೋಗಿ ಪಕ್ಷಿಗಳನ್ನು ಹಿಡಿಯಬೇಕು. ಈ ಸ್ಪರ್ಧೆಯಲ್ಲಿ ಅನೇಕ ಮಂದಿ ಪ್ರಾಣಗಳನ್ನು ಕಳೆಕೊಳ್ಳುವರು. ಯಾಕೆಂದರೆ ಅನೇಕ ಬಾರಿ ಹಗ್ಗಗಳು ಕಡಿದುಹೋಗುವವು. ಅಥವಾ ಆ ಹಿಂಸ್ರ ಪಕ್ಷಿಗಳು ಅವರೊಡನೆ ಸೇಡು ತೀರಿಸಿಕೊಳ್ಳುವವು. ಪರಂತು ಯಾವಾತನು ಈ ವಿಚಿತ್ರ ಸ್ಪರ್ಧೆಯಲ್ಲಿ ಯಶಸ್ವಿಯಾಗುವನೋ ಅವನ ಕೊರಳಿಗೆ ಅವನ ಹೃದಯರಾಣಿಯು ವರಮಾಲಿಕೆಯನ್ನು ಹಾಕುವಳು.

ಸಮುದ್ರದ ಮೇಲೆ ಕುರ್ಚಿಯಲ್ಲಿ ಕುಳಿತು ತೇಲಿದುದು

ಐಯರ್ಲೆಂಡಿನ ಸಮುದ್ರ ಕರಾವಳಿಗೆ ಸಮೀಪದಲ್ಲಿ ೧೯೧೫ರಲ್ಲಿ ಲುಸಿಟಾನಿಯ ಎಂಬ ಒಂದು ಹಡಗು ಮುಳುಗಿ ಹೋಗಿತ್ತು. ಅದರಲ್ಲಿ ಇತರ ಪ್ರಯಾಣಿಕರೊಂದಿಗೆ ಶ್ರೀಮತಿ ರೋನ್ಸಾ ಎಂಬ ಸುಪ್ರಸಿದ್ಧ ಆಂಗ್ಲ ಮಹಿಳೆಯೂ ಇದ್ದಳು. ಹಡಗಿನ ಅಧಿಕಾರಿಗಳು ಲ್ಯಾಫ ಬೋಟುಗಳನ್ನು ಇಳಿಸಿ ಸಮುದ್ರಪಾಲಾದ ಅನೇಕ ಮಂದಿಯನ್ನು ಬದುಕಿಸಿದರು. ಮಿ. ಸಿ. ಡಬ್ಲ್ಯು ಬೋರಿಂಗ ಎಂಬವರು ಈ ಕಾರ್ಯದಲ್ಲಿ ನಿರತರಾಗಿದ್ದಾಗ, ದೂರದಲ್ಲಿ ಒಂದು ವಿಚಿತ್ರ ನೋಟವನ್ನು ಕಂಡರು. ಯಾರೋ ಒಬ್ಬ ಮಹಿಳೆ ಒರಗುವ ಕುರ್ಚಿಯಲ್ಲಿ ಕೂತು, ಸಮುದ್ರವನ್ನು ದಾಟಿ ಬರುವಂತೆ ಕಂಡಿತು. ಬೋರಿಂಗರು ತಮ್ಮ ನೌಕೆಯನ್ನು ಹತ್ತಿರ ಕೊಂಡುಹೋದಾಗ ಕುರ್ಚಿಯಲ್ಲಿ ಕೂತಿರುವವರು ಶ್ರೀಮತಿ ರೋನ್ಸಾ ಎಂದು ಗೊತ್ತಾಯಿತು. ಯಾರಾದರೂ ಕುರ್ಚಿಯಲ್ಲಿ ಕೂತು ಸಮುದ್ರದ ಮೇಲಿಂದ ಅದನ್ನು ದಾಟಿ ಬರುವದಿದೆಯೆ? ಪರಂತು ಅದ್ಭುತವೆಂದರೆ ಶ್ರೀಮತಿ ರೋನ್ಸರವರು ಅಚೇತನಾವಸ್ಥೆಯಲ್ಲಿ ಕುರ್ಚಿಯಲ್ಲಿ ಕೂತಿದ್ದರು. ಅವರು ಚಳಿಯಿಂದ ಕಲ್ಲು ಕಟ್ಟಿಹೋಗಿದ್ದರು. ಹಡಗು ಮುಳುಗಿದ ಯಾವ ಸಮಾಚಾರವೂ ಅವರಿಗೆ ತಿಳಿದಿರಲಿಲ್ಲ. ಹಡಗು ಮುಳುಗಿದಂತೆ ಕೂತಿದ್ದ ಕುರ್ಚಿಯೊಡನೆ ಅವರು ಸಮುದ್ರಪಾಲಾದರು. ಆದರೆ ಮುಳುಗಲಿಲ್ಲ! ಸಮುದ್ರದ ಅಲೆಗಳು ಒಂದಾದ ಮೇಲೆ ಒಂದರಂತೆ ಅವರ ಕುರ್ಚಿಯನ್ನು ಹೊತ್ತುಕೊಂಡು ಮುಂದಿನ ಅಲೆಗಳಿಗೆ ಕೊಡುತ್ತಾ ಇದ್ದುವು. ದೂರದಿಂದ ನೋಡುವವರಿಗೆ ಶ್ರೀಮತಿಯವರು ಕುರ್ಚಿಯಲ್ಲಿ ಸಮುದ್ರವನ್ನು ನಡೆದು ಬರುವಂತೆ ತೋರುತಿದ್ದರು. ನೌಕೆಯು ಹೋಗಿ ಶ್ರೀಮತಿಯವರ ಕುರ್ಚಿಯನ್ನು ಹಿಡಿದ ಬಳಿಕವೇ ಎಲ್ಲಾ ಸಂಗತಿಗಳು ತಿಳಿದವು.

ಮಾನವನ ಬೇಟೆಯಾಡುವ ಜನರು

ಶಾಂತಸಾಗರದಲ್ಲಿರುವ ಫಿಲಿಪಿನೋ ದ್ವೀಪಗಳು ಅಮೇರಿಕದ ಶಾಸನ ಸೂತ್ರದಿಂದ ಕಟ್ಟಲ್ಪಟ್ಟು ಹಲವು ವರ್ಷಗಳು ಕಳೆಯುತ್ತ ಬಂದರೂ, ಅಲ್ಲಿಯ ಮೂಲನಿವಾಸಿಗಳಿಗೆ ಪಾಶ್ಚಾತ್ಯ ಸಭ್ಯತೆ ಸಂಸ್ಕೃತಿಗಳನ್ನು ಕಲಿಸುವ ಅಮೇರಿಕನರ ಪ್ರಯತ್ನಗಳು ಬಹುಮಟ್ಟಿಗೆ ಇನ್ನೂ ಸಫಲವಾಗಿಲ್ಲ. ಮೂಲನಿವಾಸಿಗಳು ಮೊದಲಿನಂತೆಯೇ ತಮ್ಮ ಪ್ರಾಚೀನ ಅಂಧರೂಢಿಗಳಿಗೂ ಜೀವನ ಕ್ರಮಕ್ಕೂ ಬಲಿಯಾಗಿದ್ದಾರೆ. ಮಾನವನ ಬೇಟೆಯಾಡುವ— ಅವನ ತಲೆಯನ್ನು ಚೆಂಡಾಡುವ ಆ ಪ್ರಾಚೀನ ದುಷ್ಟ ಪದ್ಧತಿಯು ಅವರಲ್ಲಿ ಇನ್ನೂ ಬಹಳ ಪ್ರಚಾರದಲ್ಲಿದೆ. ಅದನ್ನು ನಿಲ್ಲಿಸಲಿಕ್ಕೆ ಸರಕಾರದ ಅಧಿಕಾರಿಗಳು ಭಗೀರಥ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೂ ಅವರು ವಿಫಲರಾಗಿರುವರು.

ಈ ದ್ವೀಪಗಳಲ್ಲಿ ಶಾಂತಿವ್ಯವಸ್ಥೆಯನ್ನು ಕಾಪಾಡುವದಕ್ಕೋಸ್ಕರ ಇತ್ತೀಚೆಗೆ ಸರಕಾರವು ಮೂಲನಿವಾಸಿಗಳ ಒಂದು ಸಭೆಯನ್ನು ಕರೆದಿತ್ತು. ಎಲ್ಲ ಪ್ರತಿನಿಧಿಗಳೂ ಬಂದಿದ್ದರು. ಅದರ ಮೊದಲು ಶಾಂತಿಸ್ಥಾಪನೆಯ ಕಾರ್ಯದಲ್ಲಿ ಸಹಕಾರಿಗಳಾದ ಪ್ರತಿನಿಧಿಗಳಿಗೆ ಸರಕಾರವು ಆ ಸಭೆಯಲ್ಲಿ ಪುರಸ್ಕಾರಗಳನ್ನು ಕೊಟ್ಟು ಸಮ್ಮಾನಿಸಿತು. ಅನಂತರ ಸಭೆ ಕರೆದ ಉದ್ದೇಶವನ್ನು ತಿಳಿಸಿ, ಮೂಲನಿವಾಸಿಗಳು ಮನುಷ್ಯರ ತಲೆ ಚೆಂಡಾಡುವದನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಸರ್ಕಾರವು ಮುಂತಂದಿತು. ಆ ಸೂಚನೆ ಬರುತ್ತದೆ ಎಂಬ ವಿಚಾರವು ಗೊತ್ತಾಗುತಿದ್ದ ಹಾಗೆಯೇ ಮೂಲನಿವಾಸಿಗಳು ಸಭೆಯಿಂದ ಒಬ್ಬೊಬ್ಬರಾಗಿ ಜಾರಿಬಿಟ್ಟರು! ಅವರನ್ನು ಹಿಡಿದು ತರಲಿಕ್ಕೆ ಅಧಿಕಾರಿಗಳು ಆಗಲೇ ಪ್ರಯತ್ನ ಮಾಡಿದರಾದರೂ ಏನೂ ಆಗಲಿಲ್ಲ. ಮತ್ತೆ ೧೦—೧೫ ದಿನಗಳ ತರುವಾಯ ಈ ಮೂಲನಿವಾಸಿಗಳ ಪ್ರತಿನಿಧಿಗಳು ಒಂದು ಊರಿಗೆ ಬಂದು ಕೆಲವು ಸಭ್ಯಜನರ ತಲೆಗಳನ್ನು ಹಾರಿಸಿಕೊಂಡು ಹೋಗಿಯೇ ಬಿಟ್ಟರು. ಪೋಲೀಸ ಮತ್ತು ಸೈನ್ಯ ಖಾತೆಯವರು ಇವರನ್ನು ಹಿಡಿದುಕೊಳ್ಳುವ ಸಾಹಸ ತೋರಿಸಿಯೂ ಸೋತರು. ಈ ಮೂಲನಿವಾಸಿಗಳ ಮನೆ, ಗೊಂಡಾರಣ್ಯಗಳಲ್ಲಿ, ಮರಗಳ ಪೊಟ್ಟರೆಗಳಲ್ಲಿ, ಕಲ್ಲುಬಂಡೆಗಳ ಗವಿಗಳಲ್ಲಿ, ಇರುವುದರಿಂದ ಆ ಅರಣ್ಯಗಳನ್ನು ನುಗ್ಗಿ ಅವರನ್ನು ಹಿಡಿಯುವುದು ಯಾರಿಗೂ ಸಾಧ್ಯವಲ್ಲ. ಮತ್ತೆ ಇವರು ಬುದ್ಧಿ ಚಾತುರ್ಯಗಳಲ್ಲಿ ಅತಿ ಸಭ್ಯರನ್ನೂ ಮೀರಿಸಿ ಇರುತ್ತಾರೆ.

Money to Lend

....and a good deal of it. Loans are granted at low rates of interest on Government securities, bullion, gold-ornaments, goods and agricultural produce, stocks and shares, life insurance policies and on all kinds of approved security. Enquire at any of our Thirty Seven Offices.

RESOURCES OF A CRORE.

ESTD: 1906

CANARA BANK LIMITED.

ಮಹರ್ಷಿ ಅರವಿಂದ ಘೋಷರು

[ಭಾರತಭೂಮಿಯು ಆಧ್ಯಾತ್ಮಿಕ ಮಹಾ ಪುರುಷರ ನಾಡು; ಇಲ್ಲಿನ ರಾಜಕೀಯವಾದರೂ, ಅಧ್ಯಾತ್ಮಿಕತೆಯನ್ನು ಬಿಟ್ಟಿಲ್ಲ. ಹೆಚ್ಚಿನ ರಾಜಕೀಯ ಮುಖಂಡರಾದರೂ, ಕಡೆಗೆ ಅಧ್ಯಾತ್ಮದ ಕಡೆಗೇ ತಿರುಗುತ್ತಾರೆ. ಇಂತಹ ಮಹಾ ವಿಭೂತಿ ಪುರುಷರಲ್ಲಿ ಮಹರ್ಷಿ ಅರವಿಂದ ಘೋಷರು ಒಬ್ಬರು. ವಿದೇಶದ ವಿಲಕ್ಷಣ ವಿದ್ಯಾಭ್ಯಾಸವನ್ನು ಪಡೆದು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿ, ಕಡೆಗೆ ಸಂಪೂರ್ಣ ಸಂಸಾರವನ್ನು ಬಿಟ್ಟು ಪಾಂಡಿಚೇರಿಯ ಆಶ್ರಮದಲ್ಲಿರುವ ಈ ಮಹರ್ಷಿ ಇವರ ಜೀವನವಿಚಾರಗಳು ರಮ್ಯವಾಗಿವೆ]

[ಬರೆದುದು: ಕಯ್ಯಾರ ಕಿಞ್ಞಣ್ಣ ರೈ.]

ಭಾರತಭೂಮಿಯು ಮಹತ್ವವನ್ನು, ... ಮಾರ್ಗಗಳಿಂದ, ಎತ್ತಿ ಹಿಡಿದು ಮೆರೆಸಿದ ವಂದನೀಯರನೇಕರು ಇದ್ದಾರೆ! ಒಬ್ಬನು ಧಾರ್ಮಿಕ ಕಾರ್ಯದಿಂದ, ಇನ್ನೊಬ್ಬನು ರಾಜಕೀಯ ಸಾಹಸದಿಂದ, ಮೂರನೆಯವನು ಸಮಾಜ ಸೇವೆಯಿಂದ ಹೀಗೆ ನಾನಾ ರೀತಿಗಳಿಂದ ತಮ್ಮ ಜೀವಿತದ ಕರ್ತವ್ಯವನ್ನು ಮುಗಿಸಿದ ಮಹಾ ಪುರುಷರ ಪುಣ್ಯಜೀವನ ಚರಿತ್ರೆಯು ನಮಗೆ ಆದರ್ಶವಾಗಿದೆ! ಆದರೆ ಧಾರ್ಮಿಕ, ರಾಜಕೀಯ, ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿ ಸರ್ವ ವಿಧದಿಂದಲೂ ಮಹಾ ಪುರುಷರೆಂದು ಹೆಸರು ಪಡೆದವರು ಕಾಣಸಿಗುವುದು ವಿರಳ; ಅಂತಹರಲ್ಲಿ ಮಹರ್ಷಿ ಅರವಿಂದ ಘೋಷರು ಒಬ್ಬರು.

ಮಹಾ ದರ್ಶನ

ಪಾಂಡಿಚೇರಿಯ ಪುಣ್ಯಾಶ್ರಮದಲ್ಲಿ ಇವರ ೬೯ನೇ ಜನದಿನೋತ್ಸವವು ಈ ತಿಂಗಳ ೧೫ರಂದು ಜರಗಿತು. ಅಂದು ಅವರ ಅಪೂರ್ವವಾದ ದರ್ಶನವೊಂದು ನೆರೆಯಿತು. ಭಾರತದ ಮತ್ತು ಅಖಿಲ ಜಗತ್ತಿನ ಅನೇಕರು ಅವರ ದರ್ಶನಕ್ಕಾಗಿ ಬಂದಿದ್ದರು. ಇಡೀ ವರ್ಷದ ೩೬೪ ದಿನಗಳಲ್ಲಿಯೂ, ಇವರು ಆಶ್ರಮದ ಒಳಗಡೆಯಲ್ಲಿಯೇ, ಏಕಾಂತರಾಗಿದ್ದು ಹೊರಗಿನವರನ್ನು ಸಂದರ್ಶಿಸಲು ಬಿಡದೆ, ಕೇವಲ ಒಂದು ದಿವಸ ಮಾತ್ರ ಮೌನದರ್ಶನವನ್ನು ತೋರಿಸುವರು; ಅದಕ್ಕೂ ಸರ್ವರನ್ನೂ ಬರಲು ಎಡೆಕೊಡುವುದಿಲ್ಲ. ಹಿಟ್ಲರ್ ಮುಸಲಿನಿಗಳನ್ನಾದರೂ ನೋಡಬಹುದು; ಅರವಿಂದರನ್ನು ನೋಡುವುದು ಅಸಾಧ್ಯವೆಂದು ಹಲವರು ತಿಳಿದಿದ್ದಾರೆ. ಈ ಅವರ ಆಚರಣೆಯ ಮಹತ್ವವನ್ನು ಅಧ್ಯಾತ್ಮಿಕ ದೃಷ್ಟಿಯಿಂದ ವಿಚಾರಿಸುವವರಿಗೆ ಅಗಾಧ ವಿಷಯಗಳು ಹೊಳೆಯದಿರವು.

ತಾರುಣ್ಯ ಜೀವನ

ಅರವಿಂದ ಘೋಷರು, ತಮ್ಮ ತಾರುಣ್ಯದ ಬಹಳ ಕಾಲಗಳನ್ನು ಬ್ರಿಟನಿನಲ್ಲಿ ಕಳೆದರು. ಸಣ್ಣ ಹುಡುಗನಿದ್ದಾಗ, ಅವರನ್ನು ವಿದೇಶಿಯ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕಳುಹಿಸಿದ್ದರು. ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಅವರು ಮಾತೃಭೂಮಿಗೆ ಮರಳಿ ಬಂದಾಗ, ತಮ್ಮ ಮಾತೃ ಭಾಷೆಯಲ್ಲಿ ಮಾತನಾಡಲೂ ಅವರಿಗೆ ಬರುತ್ತಿರಲಿಲ್ಲ.

ಅಂದು ಹಾಗೆ ಅವರು ಐ. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಹೊಂದದೆ ಉತ್ತೀರ್ಣರೇ ಆಗುತ್ತಿದ್ದರೆ, ಬಹುಶಃ ಭರತಭೂಮಿಯು ಒಂದು ಮಹಾ ಪುರುಷನನ್ನು ಕಳೆದುಕೊಳ್ಳುವಂತೆ ಆಗುತ್ತಿತ್ತೋ ಏನೋ? ಐ. ಸಿ. ಎಸ್. ಅಧಿಕಾರದಿಂದ ನಿವೃತ್ತರಾಗಿ, ಇಂದು ಯಾವುದಾದರೊಂದು ಕ್ಲಬ್ಬಿನಲ್ಲಿ ಕುಳಿತು ವಿಸ್ಕಿ ಮತ್ತು ಸೋಡಾ ಕುಡಿಯುತ್ತಾ ಜುಗಾರಿಯಾಡುತ್ತಾ ದಿನ ಕಳೆಯುವ ದುರವಸ್ಥೆಯು ಅವರಿಗೆ ಒದಗಲಿಲ್ಲ. ಹೀಗೆ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗದೆ ಇದ್ದುದರಿಂದ ಲೋಕ ಕಲ್ಯಾಣವೇ ಆಯಿತೆನ್ನಬೇಕು.

ಉದ್ಯೋಗದಲ್ಲಿ

ವಿದೇಶದಿಂದ ಮರಳಿ ಬಂದ ಅರವಿಂದ ಘೋಷರನ್ನು ಬರೋಡದ ಮಹಾರಾಜರು ತಮ್ಮ ಪ್ರೈವೇಟ್ ಸೆಕ್ರೆಟರಿಯನ್ನಾಗಿ ನೇಮಕಮಾಡಿದರು. ಕಡೆಗೆ, ಅವರು ಬರೋಡದ ಕಾಲೇಜೊಂದರಲ್ಲಿ



ಪ್ರೊಫೆಸರರಾಗಿಯೂ, ಪ್ರಿನ್ಸಿಪಾಲರಾಗಿಯೂ ಕೆಲಸಮಾಡಿದರು. ಬರೋಡದಲ್ಲಿ ಪ್ರಿನ್ಸಿಪಾಲರಾಗಿದ್ದಾಗ, ದೇಶದ ಸುತ್ತು ಹರಡಿದ ಸ್ವಾತಂತ್ರ ಘೋಷವನ್ನು ಕೇಳಿ, ಅವರೂ ರಾಜಕೀಯ ಕ್ಷೇತ್ರಕ್ಕೆ ಧುಮುಕಿದರು. ರಾಜಕೀಯ ಕ್ಷೇತ್ರದಿಂದಲೂ, ಅವರು ಕೇವಲ ಐದು ವರ್ಷಗಳ ಅವಧಿಯಲ್ಲಿಯೇ ನಿವೃತ್ತರಾಗಿ ಯೋಗಾಭ್ಯಾಸ ನಿರತರಾದರು.

ಕ್ರಾಂತಿ ತಪಸ್ಸೆ?

ಭಾರತದ ಸ್ವಾತಂತ್ರ್ಯಕ್ಕಾಗಿ ಕಾದಾಡಲು ಹೊರಟ ಅನೇಕ ಮಂದಿಯನ್ನು ಅರವಿಂದರು ತೊಲಗಿ ಇಂದು ಏಕಾಂಗಿಯಾಗಿ ರಾಷ್ಟ್ರೀಯ ಕರ್ತವ್ಯವನ್ನು ಮರೆತು ತಮ್ಮ ಸಹದ್ಯೋಗಿಗಳನ್ನು ಕೈಬಿಟ್ಟಿದ್ದಾರೆಯೇ ಎಂಬ ವಿಷಯವು ಅವಶ್ಯ ವಿಚಾರಣೀಯವಾಗಿದೆ. ಹಲವರು, ಅರವಿಂದರ ಇಂದಿನ ತಪಸ್ಸು ಮಾತೃಭೂಮಿಯ ಸ್ವಾತಂತ್ರ್ಯದ ಸಲುವಾಗಿಯೇ ಇದೆಯೆಂದೂ, ಒಮ್ಮೆ ಅವರು ತಿರಿಗಿ ರಾಜಕೀಯರಂಗಕ್ಕೆ ಧುಮುಕುವರೆಂದೂ ಹೇಳುತ್ತಾರೆ. ಹೀಗಾಗಿ ಪೊಂಡಿಚೇರಿಯಲ್ಲಿ ಅವರು ಆಶ್ರಮ ಕಟ್ಟಿ ಉಳಕೊಳ್ಳಲು ಆರಂಭಿಸಿದ ಕಾಲದಲ್ಲಿ, ಬ್ರಿಟಿಷ್ ಸರಕಾರಕ್ಕಾದರೂ ಬಹಳ ಸಂಶಯವೇ ಇತ್ತು. ಅವರು ಅಲ್ಲಿ ಕ್ರಾಂತಿಕಾರಕ ಚಳವಳವನ್ನು ನಡೆಸುತ್ತಿರುವರೆಂದೂ, ಅದಕ್ಕಾಗಿ ವಿದೇಶ ರಾಜ್ಯಗಳ ನೆರವನ್ನು ಪಡೆಯುತ್ತಿರುವರೆಂದೂ ಬ್ರಿಟಿಷ್ ಸರಕಾರಕ್ಕೆ ಸಂದೇಹವಿತ್ತು. ಇತ್ತೀಚೆಗೆ ಕೆಲಸಮಯಗಳಿಂದ ಮಾತ್ರ ಸಿ. ಐ. ಡಿ.ಗಳು ಅವರ ಬೆನ್ನು ಬಿಟ್ಟಿರುತ್ತಾರೆ.

ರಾಜಕೀಯ ರಂಗದಲ್ಲಿ

ವಂಗ ವಿಭಜನೆಯ ಕಾಲವು ಭಾರತದ ಚರಿತ್ರೆಯಲ್ಲಿ ಬಹಳ ಮಹತ್ವದ್ದಾಗಿದೆ. ಒಂದು ಕಡೆಯಿಂದ ಸುರೇಂದ್ರನಾಥರಂತಹ ಮುಖಂಡರು, ವಂಗ ವಿಭಜನೆಯನ್ನು ವಿರೋಧಿಸಿ ಜನಮತವನ್ನು ಉದ್ರೇಕಗೊಳಿಸುತ್ತಿರಲು, ಇನ್ನೊಂದು ಕಡೆಯಿಂದ, ಅರವಿಂದ ಘೋಷರಂತಹವರು, ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಸಮರಕ್ಕೆ ಇದೇ ಪ್ರಥಮ ಸಾಹಸವೆಂದು ಕೂಗಿ ಹೇಳಿದರು. ಅವರು ಅಂದು ಬಿತ್ತಿದ ಅಖಿಲ ಭಾರತ ಸ್ವಾತಂತ್ರ್ಯ ಬೀಜವೇ ಮುಂದಕ್ಕೆ ಬೆಳೆದು ಮರವಾಗಿ ಕಾಂಗ್ರೆಸು ಸಂಸ್ಥೆಯಾಗಿ ಬೆಳೆಯಿತು.



ಶ್ರೀ ಅರವಿಂದರ ಅಭ್ಯಾಧಿಕವಾದ ದರ್ಶನ ಆಸನ

ಹಲವು ಕಡೆಗಳಿಂದ ತನ್ನ ದರ್ಶನಕ್ಕಾಗಿ ನೆರೆದ ಜನರಿಗೆ ಶಾಂತವಾದ ಆಶೀರ್ವಾದವೀಯುವ ಕಾಲದಲ್ಲಿ ಮಾತ್ರ ಇದನ್ನು ವರ್ಷಕ್ಕೆ ಮೂರು ಬಾರಿ ಉಪಯೋಗಿಸುವರು.

ಅಂದು ಅವರ ತಮ್ಮ ದಿವ್ಯ ದರ್ಶನದಲ್ಲಿ, ಭಾರತದ ರಾಜಕೀಯ ಸ್ವಾತಂತ್ರ್ಯವೆಂದರೆ, ಅಂತರ್ ರಾಷ್ಟ್ರೀಯ ಶಾಂತಿಸಾಧನೆಯೆಂದೇ ತಿಳಿದಿದ್ದರು. ಅಂದಿನ ಆ ದುರಂತ ರಾಜ್ಯಭರಣವು ಮುಗಿದು ಭಾರತಕ್ಕೆ ಸ್ವಾತಂತ್ರ್ಯ ರಾಜಭರಣವು ಒದಗುವುದೆಂದೂ ಅವರು ಸಾರಿದ್ದರು.

೧೯೦೬ರಲ್ಲಿ ಇದೇ ಅಭಿಪ್ರಾಯದಿಂದ ಬಂಗಾಳದ ರಾಷ್ಟ್ರೀಯ ಸ್ವಾತಂತ್ರ್ಯಕಾಂಕ್ಷಿಗಳು, ಅರವಿಂದ ಘೋಷರ ಮುಂದಾಳುತನದಿಂದ ರಾಷ್ಟ್ರೀಯ ಪಕ್ಷವೆಂಬೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಇಡೀ ಭರತಭೂಮಿಯ ಸ್ವಾತಂತ್ರ್ಯವನ್ನು ಪರಿಹರಿಸುವುದೇ ಅದರ ಉದ್ದೇಶವಾಗಿತ್ತು.

ಸ್ವಾತಂತ್ರ್ಯ ಮೀಮಾಂಸೆ

ಮನುಷ್ಯನು ಪ್ರಕೃತಿಸಹಜವಾಗಿ ಸ್ವಾತಂತ್ರ್ಯಕಾಂಕ್ಷಿಯಾಗಿರುತ್ತಾನೆ. ಜೀವನ ಯಾತ್ರೆಯಲ್ಲಿ ಮುಂದುವರಿಯುತ್ತಿದ್ದಂತೆ ಆತನಿಗೆ ಅನೇಕ ಎಡೆತಡೆಗಳು ಬಂದು, ಆತನನ್ನು ಇನ್ನಷ್ಟು ಸ್ವಾತಂತ್ರ್ಯ ಪ್ರೇಮಿಯನ್ನಾಗಿ ಮಾಡುತ್ತವೆ. ಈ ತೊಂದರೆಗಳನ್ನು ತಪ್ಪಿಸಲು ಆತನು ಸ್ವಾತಂತ್ರ್ಯವನ್ನೇ ಬಯಸುತ್ತಾನೆ. ಆವನ ವಿಚಾರ, ಕಾರ್ಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವು ದೊರಕದ ವಿನಹ ಯಾವ ಮನುಷ್ಯನಿಗಾದರೂ ಶಾಂತಿಯು ಸಿಗುವುದಿಲ್ಲ. ಹೀಗೆ ಇಂತಹ ವ್ಯಕ್ತಿ ಸ್ವಾತಂತ್ರ್ಯ ಮತ್ತು ಲೋಕಕಲ್ಯಾಣವು ಅಭಿನ್ನವಾಗಿದೆ. ಅಂತಹ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿಯೇ ಅರವಿಂದರೂ ಯತ್ನಿಸುತ್ತಾರೆ. ಅರವಿಂದರ ಸ್ವಾತಂತ್ರ್ಯ ನಿರೀಕ್ಷೆಯು ಕೇವಲ ರಾಜಕೀಯದ ಮಟ್ಟಿಗೇ ನಿಲ್ಲದೆ, ಆತ್ಮ ಸ್ವಾತಂತ್ರ್ಯದ ಕಡೆಗೆ ತಿರುಗಿದೆ.

ಮಹಾತ್ಮಾ ಗಾಂಧಿಯವರ ಜೀವನವನ್ನು ತಿಳಿದವರಿಗೂ ಈ ವಿಷಯವು ವ್ಯಕ್ತವಾಗುವುದು; ಆದರೆ ಗಾಂಧಿಜಿಯವರು ತಾವು ಹೇಳುವ ಕಾರ್ಯಗಳನ್ನು ಕಾರ್ಯತಃ ಮಾಡಿತೋರಿಸುತ್ತಾರೆ; ಜಗದ ಕಲ್ಯಾಣಕ್ಕಾಗಿ, ಜಗತ್ತಿನಲ್ಲಿ ಇದ್ದುಕೊಂಡೆ ಆದರ್ಶರಾಗಿದ್ದಾರೆ; ಅರವಿಂದರು ಜಗತ್ತನ್ನು ಬಿಟ್ಟು ಏಕಾಂತಕ್ಕೆ ಸೇರಿ ಯೋಗಸಾಧನೆಗೆ ತೊಡಗಿದ್ದಾರೆ. ಯಾರು ನಿಜವಾದ 'ಕರ್ಮಯೋಗಿ' ಯಾರ ಜೀವನವು ಲೋಕಕಲ್ಯಾಣಕ್ಕಾಗಿ ಇದೆ ಎಂಬ ವಿಚಾರವು ತುಂಬಾ ಚರ್ಚಾಸ್ಪದವಾದುದು. ಆದರೆ ಇಂದು ರಾಜಕೀಯದಿಂದ, ಪ್ರಪಂಚದ ಗೊಂದಲದಿಂದ ನಿವೃತ್ತರಾಗಿ ಅರವಿಂದರು ಆಶ್ರಮದ ಏಕಾಂತ ಜೀವನದಲ್ಲಿ ಇರುವರಾದರೂ ಅವರ ನಿಶ್ಚಲ ಧ್ಯೇಯವು ನಿಗೂಢವೂ ಸಂಪೂರ್ಣ ಪರಿಶುದ್ಧವೂ ಆಗಿದೆ.

HALFTONE & LINE
BLOCK MAKING
UNDERTAKEN

Sharada Press,
MANGALORE

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಶಿಕ್ಷಣ ವಿಚಾರ

ವಿಜ್ಞಾನ ಪಾರಿಭಾಷಿಕ ಶಬ್ದಗಳು

ಶ್ರೀ| ಎಸ್. ಆರ್. ಆಚಾರ್, ಬಿ ಎ., ಎಲ್. ಟಿ ಇವರಿಂದ

[ಪ್ರಾಥಮಿಕ ಶಾಲೆಗಳಲ್ಲಿ ಲಘು ವಿಜ್ಞಾನವನ್ನು ಕಲಿಸುವ ಉಪಾಧ್ಯಾಯರು ತಾವು ಇಂಗ್ಲಿಷಿನಲ್ಲಿ ಕಲಿತ ವಿಜ್ಞಾನ ವಿಷಯವನ್ನು, ಇಂದು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕಾದುದರಿಂದ ಪಾರಿಭಾಷಿಕ ಶಬ್ದಗಳ ಕುರಿತು ಸಮಸ್ಯೆಗೆ ಬೀಳುವುದು ಸಹಜವಿದೆ ಲಘು ವಿಜ್ಞಾನವನ್ನು ಬರೆದ ಲೇಖಕರು ಒಬ್ಬೊಬ್ಬರು ಒಂದೊಂದು ರೀತಿಯಿಂದ ಶಬ್ದಗಳನ್ನು ಉಪಯೋಗಿಸುತ್ತಿದ್ದಾರೆ ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ವಿಜ್ಞಾನ ಶಾಸ್ತ್ರದಲ್ಲಿ ನುರಿತ ಶಿಕ್ಷಕರಾದ ಶ್ರೀಯುತ ಆಚಾರ್ಯರು ಶಾಸ್ತ್ರೀಯವೂ ಶುದ್ಧವೂ ಆದ ಪಾರಿಭಾಷಿಕ ಶಬ್ದಗಳ ಪಟ್ಟಿಯೊಂದನ್ನು ಕೊಟ್ಟು ಪ್ರಾಥಮಿಕ ಶಾಲಾಶಿಕ್ಷಕರಿಗೆ ಮಹೋಪಕಾರವನ್ನು ಮಾಡಿರುತ್ತಾರೆನ್ನಬೇಕು— ಸಂ]

A

Air = ವಾಯು
Air Sacs = ವಾಯು ಸಂಪುಟ
Alchol = ಮದ್ಯಸಾರ
Alimentary Canal = ಆಹಾರಕಾಲುವೆ
Ahthu = ಪರಾಗಕೋಶ
Antitoxin = ಪ್ರತಿವಿಷ
Anus = ಆಸನ
Atmosphere = ವಾಯುಮಂಡಲ
Auricle = ಹೃತ್ಕರ್ಣ
Arteries = ಶುದ್ಧ ರಕ್ತನಾಳ

B

Bacteria = ಅಣುಜೀವಿಗಳು
Barrel = ಕೊಳವೆ
Barometer = ಭಾರಮಾಪಕ
Bellows = ತಿದಿ
Bell jar = ಗಂಟೆ ಜಾಡಿ
Brush = ಕುಂಚ
Bronchus = ಶ್ವಾಸನಾಳ

C

Centre of gravity = ಗುರುತ್ವ ಕೇಂದ್ರ
Carbon — ಅಂಗಾರ
Carbon dioxide = ಅಂಗಾರಾಮ್ಲ
Carbohydrates — ಶರ್ಕರ ಪಿಷ್ಟಗಳ
Calorimeter = ಉಷ್ಣಮಾಪಕ
Capillary — ರೋಮನಾಳ
Capillary attraction = ಕೇಶ ನಾಳಾಕರ್ಷಣ
Chlorophyll = ಹರಿತ್ತು
Cogged wheels = ಹಲ್ಲುಗಾಲಿಗಳು
Conductor (of heat) = ಉಷ್ಣವಾಹಕ
Conductor (of electricity) = ವಿದ್ಯುದ್ವಾಹಕ
Combustion = ದಹನ
Crank = ರಾಟೆಯ ಕೈ
Compression = ಸಂಮರ್ಧನ
Cell (living thing) = ಜೀವಕಣ
Cell (Electric) = ವಿದ್ಯುತ್ಕೋಶ
Combustible = ದಾಹ್ಯ
Chemical action = ರಾಸಾಯನಿಕ ಕ್ರಿಯೆ
Civil = ಸುರುಳಿ

D

Digestion = ಜೀರ್ಣ, ಪಚನ
Ductless gland = ನಿರ್ನಾಳ ಗ್ರಂಥಿ
Disease germ = ರೋಗಾಣು
Dry Cell = ಶುಷ್ಕಕೋಶ
Dynamo = ವಿದ್ಯುಜ್ಜನಕ

E

Echo = ಪ್ರತಿಧ್ವನಿ
Egg = ತತ್ತಿ, ಮೊಟ್ಟೆ
Energy = ಚೈತನ್ಯ
Electricity = ವಿದ್ಯುತ್
Electric bell = ವಿದ್ಯುತ್ ಗಂಟೆ
„ current = ವಿದ್ಯುತ್ಪ್ರವಾಹ
„ lamp = ವಿದ್ಯುದ್ದೀಪ
„ motor = ವಿದ್ಯುತ್ ಮೋಟಾರು
„ circuit = ವಿದ್ಯುನ್ಮಂಡಲ
„ cell = ವಿದ್ಯುತ್ಕೋಶ
„ spark = ವಿದ್ಯುತ್ಕಿಡಿ
Electro magnet = ವಿದ್ಯುತ್ಕಾಂತ
Expiration = ನಿಶ್ವಾಸ
Excretory organs = ಶುದ್ಧೀಕರಣಾಂಗ (ವಿಸರ್ಜನಾಂಗ)
Equilibrium = ಸಮತೋಲನ
Embryo = ಭ್ರೂಣ

F

Fat — ಕೊಬ್ಬು
Fertilized egg = ಗರ್ಭಕಟ್ಟಿದ ತತ್ತಿ
Field magnet = ಕ್ಷೇತ್ರ ಅಯಸ್ಕಾಂತ
Force = ಶಕ್ತಿ
Foot pound = ಅಡಿ ಪಾವು
Fulcrum = ಆಸರೆ
Flask — ದಾನಿ
Frequency — ಕಂಪನವೇಗ

G

Gills = ಕಿವಿರುಗಳು
Gravity = ಗುರುತ್ವಶಕ್ತಿ
Gullet = ಅನ್ನನಾಳ
Gas = ಅನಿಲ

H

Horsepower = ಅಶ್ವಸಾಮರ್ಥ್ಯ
Heat — ಉಷ್ಣ ಕಾವು
Heart = ಹೃದಯ
Hard water = ಗಡಸು ನೀರ
Hydrogen = ಜಲಜನಕ

I

Induction coil — ಪ್ರೇರಕ ಸುರುಳಿ
Insulator — ವಿದ್ಯುನ್ನಿರೋಧಕ (ಸ್ಪರ್ಶತ್ಯಾಗಕ)
Inclined plane — ಇಳಕಲು
Iris = ಕನೀನಿಕೆ
Inspiration = ಉಚ್ಛ್ವಾಸ

K

Kidney = ಮೂತ್ರಪಿಂಡ

L

Lime water = ಸುಣ್ಣದ ತಿಳಿನೀರು
Lung = ಶ್ವಾಸಕೋಶ
Lever = ಸನ್ನೆ
Liver = ಪಿತ್ತಕೋಶ
Loudness of sound = ಧ್ವನಿಯ ಗಾತ್ರ (ಘೋಷ)

M

Magnetism = ಕಾಂತತ್ವ
Magnet = ಕಾಂತ, ಅಯಸ್ಕಾಂತ
Machine = ಯಂತ್ರ
Mechanical advantage = ಯಾಂತ್ರಿಕ ಲಾಭ
Metallic oxide = ಭಸ್ಮ
Musical Note = ನಾದ
Manure = ಗೊಬ್ಬರ
Moveable pulley = ಚರರಾಟೆ
Muscle = ಸ್ನಾಯು, ಮಾಂಸಖಂಡ
Mushroom = ಅಣಬೆ, ನಾಯಿಕೊಡೆ
Mold = ಬೂಷ್ಟು

(ಮುಂದುವರಿಯುವುದು)

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—

K R. GURU, *Managing Director*

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/- & 5,000/-

are now issued at all our Branches

For particulars call at or write to

Any of our nearest Branches

ಸಿನೆಮಾ ವಾರ್ತೆ

ವಿಶ್ವಮೋಹಿನಿ

ಜಗದೀಶ ಫಿಲ್ಮ್ಸ್‌ನವರು 'ವಿಶ್ವಮೋಹಿನಿ' ಎಂಬ ಹೊಸ ಚಿತ್ರವನ್ನು ತಯಾರಿಸುತ್ತಿದ್ದಾರೆ. ಕುಮಾರಿ ಲಲಿತಾದೇವಿಯು ಇದರಲ್ಲಿ ಅಭಿನಯಿಸುವಳೆಂದು ತಿಳಿದಿದೆ. ಲಲಿತಾದೇವಿಯು ಸಂಗೀತದಲ್ಲಿ ಅತ್ಯಂತ ಕುಶಲಳಾಗಿರುವಳು. ಲಲಿತಾ ದೇವಿ, ಕೃ. ವಿ. ರಾವ್, ನಾಗಯ್ಯ ಇವರೂ ಅದರಲ್ಲಿ ಅಭಿನಯಿಸುವರು.

ವಿಮಲಾಸಾರ್ದೇಸಾಯಿ

'ನರ್ಸೀಭಾಗತ್' ಚಿತ್ರದಲ್ಲಿ ವಿಮಲಾ ಸಾರ್ದೇಸಾಯಿ ಎಂಬೀ ಹೊಸ ಕುಲೀನ ಸ್ತ್ರೀಯೊಬ್ಬಳು ಅಭಿನಯಿಸುವಳು. ನಿರ್ದೇಶಕ ವಿಜಯ ಭಟ್ ಇವರು ಅವಳಿಗೆ ಪ್ರಾಮುಖ್ಯ ಪಾತ್ರವೊಂದನ್ನು ಕೊಟ್ಟಿರುವರು.

ಎಂಬ ಹೊಸ ತಾರೆಗಳು ಮಿನುಗುವವು ಕೆ. ಸಿ. ಡೆ ಯವರು ಅಭಿನಯಿಸುವರು ಇದು ಶ್ರೀ‌। ಟಿ-ಆರ್ ದಾಸರಿಂದ ನಿರ್ದೇಶಿಸಲ್ಪಟ್ಟಿದೆ. ಸಂಗೀತ ನಿದರ್ಶನವು ಕೆ ಸಿ. ಡೇ ಯವರಿಂದ

ಭರೋಸ್

ಸೋಹ್ರಾಬ್ ಮೋದಿಯವರ ಭರೋಸಾ ಚಿತ್ರವು ೧೭ರಂದು ಬೊಂಬಯಿಯಲ್ಲಿ ಪ್ರದರ್ಶಿಸಲ್ಪಡುವುದು. ಮುಂದಿನ ಅವರ ಚಿತ್ರವು ಅಲೆಕ್ಸಾಂಡರ್ ಎಂಬುದು. ಕಥೆಯನ್ನು ಶ್ರೀ। ಪಿ ಸುದರ್ಶನ್ ಇವರು ಬರೆಯುವರು

ನಂದ-ಕುಮಾರ ಚಿತ್ರದ ಒಂದು ದೃಶ್ಯ

ಧರ್ಮಪತ್ನಿ

ಇದರ ತೆಲುಗು ಭಾಷಾಂತರವು ಬೇಗನೇ ಪ್ರಸಿದ್ಧವಾಗಲಿದೆ

ನವಯುಗ ಚಿತ್ರ

ನವಯುಗ ಚಿತ್ರ ಕಂಪೆನಿಯವರು ಚಿಮಾನ್ ರಾವ್ ಎಂಬ ಹಾಸ್ಯ ಚಿತ್ರವೊಂದನ್ನು ತಯಾರಿಸುವ ಸಿದ್ಧತೆಯಲ್ಲಿದ್ದಾರೆ ಪ್ರಸಿದ್ಧ ಹಾಸ್ಯಗಾರರಾದ ದಾಮುಣ್ಣ ಮಾಳ್ವಂಕರರು ಅಭಿನಯಿಸುವರು

ಭಾಯಿಬಹೆನ್

ಸುದಾಮ ಚಿತ್ರದವರ ಮುಂದಿನ ಚಿತ್ರವು ಬಾಯಿಬಹೆನ್ ಎಂಬ ದೆಂದು ತಿಳಿದುಬರುತ್ತದೆ

ನವಯುಗ ಕಂಪೆನಿಯವರು ರಾಷ್ಟ್ರಮುಖಂಡರನ್ನು ಸತ್ಕರಿಸಿದರು

ಪುಣೆಗೆ ಬಂದಿದ್ದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಖಂಡರನ್ನು ತಾ. ೨೮ರಂದು ನವಯುಗ ಚಿತ್ರ ಕಂಪೆನಿಯ ಚೀಫ್ ಪ್ರೊಡ್ಯೂಸರ್ ಪ್ರೊ। ವಿ ಜಿ ಕಾಲೆ ಮತ್ತು ಸಿದೆ [illegible] ರವರು ಸತ್ಕರಿಸಿದರು.

ಶ್ರೀ। ಗಳಾದ ಕಾಲೆ ಮತ್ತು ವಿನಾಯಕರನ್ನು ನೆಹರು, ರಾಜಾಜಿ ಪಟ್ಟಾಭಿ ವಿಜಯಲಕ್ಷ್ಮಿ ಇವರಿಗೆ ಶ್ರೀ। ಗಾಡ್ಗಿಲ್ ಮತ್ತು ಶ್ರೀ। ಜೋಶಿ ಇವರು ಪರಿಚಯ ಮಾಡಿಸಿದರು. ತಾ. ೨೯ರಂದು ಬೆಳಗ್ಗೆ ೯ ಗಂಟೆಗೆ ಎ. ಐ. ಸಿ. ಸಿ. ಸದಸ್ಯರಿಗಾಗಿ 'ಲವನ್‌ದೇವ್' ಚಿತ್ರದ ಸ್ಪೆಶ್ಯಲ್ ಪ್ರದರ್ಶನವೊಂದು ತೋರಿಸಲ್ಪಟ್ಟಿತು.

ಬಂಧನ್

ಬೊಂಬಯಿ ಟಾಕೀಸಿನವರು ತಯಾರಿಸುವ ಬಂಧನ್ ಚಿತ್ರವು ಈ ವಾರದಲ್ಲಿ ಬೊಂಬಯಿಯಲ್ಲಿ ಪ್ರದರ್ಶಿತವಾಗುವುದು ಲೀಲಾ ಚಿಟ್ನೀಸ್ ಮತ್ತು ಅಶೋಕ್ ಕುಮಾರ್ ಇವರು ಅಭಿನಯಿಸುವರು ದೇವಿಕಾರಾಣಿಯು ಅಭಿನಯಿಸುವ ಚಿತ್ರವು ಸಿದ್ಧವಾಗುತ್ತಲಿದೆ

ಬರುವಾರವರ ಮುಂದಿನ ಚಿತ್ರ

ಬರುವಾರವರ 'ಶಾಪಮುಕ್ತಿ' ಚಿತ್ರವು ಮುಗಿಯುತ್ತಾ ಬಂತು ಶ್ರೀ। ಕೆ ಎಸ್ ಸೆಯ್ರ್ಯಾನಿ ಇವರಿಂದ ರಚಿತವಾದ 'ಬೆಳದಿಂಗಳ ರಾತ್ರಿ' ಎಂಬೀ ಚಿತ್ರವು ಮುಂದಿನ ಅವರ ನಿದರ್ಶನ ಚಿತ್ರವಾಗಿದೆ ಇದು ಹಿಂದಿ ಮತ್ತು ಬಂಗಾಳಿ ಇವೆರಡು ಭಾಷೆಗಳಲ್ಲಿಯೂ ತಯಾರಿಸಲ್ಪಡುವುದು

ಕಾಲುಚೆಂಡಾಟದ ಚಿತ್ರ

ಕಲ್ಕತ್ತ ಅರೋರ ಫಿಲ್ಮ್ ಕೋರ್ಪೊರೇಶನಿನವರು ಕಾಲುಚೆಂಡಾಟವಾಡುವವರ ಕುರಿತು ಒಂದು ನೂತನ ಚಿತ್ರವನ್ನು ತಯಾರಿಸಿರುವರು ಇದರಲ್ಲಿ ಪ್ರಸಿದ್ಧ ಆಟಗಾರರ ಆಟವನ್ನು ಕಾಣಬಹುದು. ಶ್ರೀ। ಬಿ. ಡಿ. ಚಟರ್ಜಿಯವರು ನಿರ್ದೇಶಿಸಿರುವರು

ಅಂಧಿ ಅಥವಾ ಬಿರುಗಾಳಿ

ನ್ಯೂ ಥಿಯೇಟರ್ಸಿನವರ ಅಂಧೀ ಅಥವಾ ಬಿರುಗಾಳಿ ಎಂಬೀ ಚಿತ್ರವು ಬೇಗನೇ ಮದ್ರಾಸಿನಲ್ಲಿ ಪ್ರದರ್ಶಿತವಾಗಲಿದೆ. ಇದರಲ್ಲಿ ಸಂಗೀತವು ಅತ್ಯಂತ ರಮ್ಯವಾಗಿದೆಯೆಂದು ವಿಮರ್ಶಕರ ಅಭಿಪ್ರಾಯ. ಪಂಕಜಮಲ್ಲಿಕ ಮತ್ತು ಕಲಿನಾ ಇವರು ಇದರಲ್ಲಿ ಅಭಿನಯಿಸುವರು. ಶ್ರೀ। ಲೀಲಾ ಮತ್ತು ಮಂಜರೀ

ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು 'ಪುರೋಹಿತ ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು ತೀವ್ರ ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರಿಲ್ಲದೆ ನೆಟ್ಟಗಾಗುವುದು ಪುರೋಹಿತ ಶ್ವಾಸಹಾರಿಯು ೩ ಔ., ೬ ಔ ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ ೨-೩-೦ ೩-೧೨-೦ ಮತ್ತು ೬-೮-೦ಗಳಿಗೆ ಎಲ್ಲಾ ಕಡೆಸಿಗುವುದು ತರಿಸಿಕೊಳ್ಳುವ ವಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

ನೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.



ನೋಟಗಳು

ಪ್ರಪಂಚದ ಬೇರೆಬೇರೆ ಭಾಗಗಳಲ್ಲಿ, ಈ ವಾರ ಹೊಸ ಹೊಸ ಚಟುವಟಿಕೆಗಳು ಕೇಳಿಬರುತ್ತಿವೆ!

◈

ಬ್ರಿಟಿಷ್ ಸೋಮಾಲಿಲೇಂಡಿಗೆ ಇಟಲಿಯು ಆಕ್ರಮಿಸುವ ಸುದ್ದಿಯೊಂದು ಅತ್ಯಂತ ವಿಶೇಷದ್ದಾಗಿದೆ.

◈

ಇಂಡೋಚೈನದ ವಿಷಯದಲ್ಲಿ ಜಪಾನು ತನ್ನ ಹಕ್ಕು ಸ್ಥಾಪಿಸಲು ಹೊರಟ ವಾರ್ತೆ ಅದಕ್ಕಿಂತಲೂ ವಿಶೇಷ ತರದ್ದಾಗಿದೆ

◈

ಇಟಲಿ ಮತ್ತು ಜಪಾನುಗಳು ಅತ್ತಿತ್ತಲಾಗೇ ಕೆರಳಿ ನಿಂತು, ಬ್ರಿಟಿಷರ ದೃಷ್ಟಿಯನ್ನು ಆ ಕಡೆ ಸೆಳೆಯುವಂತೆ ಮಾಡಿವೆ!

◈

ಇದೆಲ್ಲಾ ಇಂಗ್ಲೆಂಡಿಗೆ ಆಕಸ್ಮಿಕವಾಗಿ ದಾಳಿಯಿಡಲು ಹಿಟ್ಲರನು ಮಾಡಿದ ಕುತಂತ್ರವೆಂದು ಕೆಲವರು ಊಹಿಸುತ್ತಾರೆ

◈

ಆದರೆ, ಬ್ರಿಟಿಷ್ ಸರಕಾರವು ತನ್ನ ಸ್ಥಾನದಲ್ಲಿ ಇನ್ನಷ್ಟು ಭದ್ರವಾಗಿದೆಯೆಂದು ರಾಯಿಟರು ವಾರ್ತೆಬಂದಿದೆ

ಬ್ರಿಟಿಷ್ ಕಡಲ್ಗಾಲುವೆಯಲ್ಲಿರುವ ಬ್ರಿಟಿಷ್ ಹಡಗು ಪಡೆಯ ಮೇಲೆ ಜರ್ಮನ್ ವೈಮಾನಿಕರು ದಾಳಿಮಾಡಿದರು.

◈

ಜರ್ಮನ್ ವೈಮಾನಿಕರೇ ಇದರಿಂದ ಪ್ರಾಣಾಂತಿಕವಾದ ವಿಪತ್ತಿಗೆ ಗುರಿಯಾದರೆಂದು ಬ್ರಿಟಿಷ್ ಸುದ್ದಿಗಾರರು ತಿಳಿಸುತ್ತಾರೆ.

◈

ಬ್ರಿಟನನ್ನು ಮುತ್ತಿಗೆ ಹಾಕುವ ಹಿಟ್ಲರನ ಯೋಜನೆಗಳು ಹೀಗೆ ವಿಫಲವಾಗುತ್ತಾ ಬರುತ್ತಿವೆ!

◈

ಆಗಸ್ಟ ಹದಿನೈದು ಬಂದಿದೆ, ಬ್ರಿಟನು ಇನ್ನೂ ಭದ್ರವಾಗಿದೆ!

ಹಿಟ್ಲರನು ವ್ಯರ್ಥಗುಲ್ಲೆಬ್ಬಿಸಿದನು!

ಭಾರತದಲ್ಲಿ ಇಂದು ವಿಶೇಷ ವಾರ್ತೆಯೆಂದರೆ ವೈಸರಾಯರ ಪ್ರಕಟಣೆ.

◈

ಹಿಂದಿನ ಪ್ರಕಟಣೆಗಿಂತ ಹೊಸದೇನೂ ಇರಲಿಲ್ಲವಾಗಿ ದೇಶದ ರಾಷ್ಟ್ರೀಯ ಪಕ್ಷೀಯ ಧುರೀಣರು ನಿರಾಶರಾಗಿದ್ದಾರೆ!

◈

ವೈಸರಾಯರ ಪ್ರಕಟಣೆಯನ್ನು ಭಾರತದಲ್ಲಿಯೂ ಬ್ರಿಟನಿನಲ್ಲಿಯೂ ಏಕಕಾಲದಲ್ಲಿಯೇ ಪ್ರಕಟಿಸಲಾಯಿತು!

◈

ಪಾರ್ಲಿಮೆಂಟಿನಲ್ಲಿ ವೈಸರಾಯರ ಪ್ರಕಟಣೆಯನ್ನು ಮುಂದಿಟ್ಟು ಭಾರತದ ಪರಿಸ್ಥಿತಿಯನ್ನು ಸುಧಾರಿಸಲು ಸಾರ್ವಭೌಮ ಸರಕಾರವು ಪ್ರಯತ್ನಿಸುತ್ತಿದೆಯೆಂದರು ಭಾರತಸಚಿವರಾದ ಅಮೆರಿಯವರು

ಭಾರತದ ಪರಿಸ್ಥಿತಿಯ ಕುರಿತು ವಿಚಾರಿಸಲು ಮುದುಕ ಗಾಂಧಿಯವರನ್ನು ವೈಸರಾಯರು ಯುದ್ಧವಾರಂಭವಾದ ಮೇಲೆ ಅನೇಕ ಸಲ ಕರೆದರು.

◈

ಪ್ರಯಾಣವು ಪರಿಶ್ರಮವಾಗಬಹುದಾದರೂ ಅದನ್ನು ಗಣಿಸದೆ ಗಾಂಧಿಜಿಯವರು ವರ್ಧಾದಿಂದ ಓಡಿಹೋಗಿದ್ದರು!

◈

"ವೈಸರಾಯರು ಕರೆಯುತ್ತಾರೆ, ನಾನು ಹೋಗತ್ತೇನೆ ಸಾವಿರ ಸಲ ಕರೆದರೂ ಸಾವಿರ ಸಲ ಹೋಗುತ್ತೇನೆ" ಹೀಗೆಂದು ಪಾಪ ಗಾಂಧಿಜಿಯವರು ಎಷ್ಟೋ ಸಲ ಹೋದರು!

◈

ಅಜಾದರನ್ನು ವೈಸರಾಯರು ಮೊನ್ನೆ ಮಾತನಾಡಲು ಆಮಂತ್ರಿಸಿದ್ದರು!

◈

ಆದರೆ, ಅವರು ಬರಲಾಗುವುದಿಲ್ಲವೆಂದು ಕರೆಯನ್ನು ತಿರಸ್ಕರಿಸಿದರು!

◈

ತಿಳಿದೂ ಮಂಕರಂತೆ ನಟಿಸುವವರು ಕೆಲವರು! ತಿಳಿದೂ ಮಂಕರಾಗಲಾರೆವೆನ್ನುವರು ಇನ್ನು ಕೆಲವರು!!

ಸಾದರ ಸ್ವೀಕಾರ

೧ ಶಂಕರ ಸಿದ್ಧಾಂತ: ಶ್ರೀ ವೈ ಸುಬ್ಬರಾವ್ ಆಧ್ಯಾತ್ಮ ಪ್ರಕಾಶ ಹೊಳೆನರಸೀಪುರ

೨ ಗಾಳಿಗೋಪುರ: ಶ್ರೀ ನಾ ಕಸ್ತೂರಿ ಸನ್ನೋ[illegible] ಗ್ರಂಥ ಪ್ರಕಾಶ ಸಮಿತಿ ಧಾರವಾಡ

ವಿಮರ್ಶೆ ಅನಂತರವಿರುವುದು



ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು.

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ, ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ' ಸೇವಿಸಿ ಬಿಟ್ಟರೆ ಬೇರೆ ದಾರಿಯಿಲ್ಲ ಗರ್ಭಾಶಯದ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸುವಂತೆ ಮಾಡುವುದೆಂದರೆ

'ಲೋಧ್ರ'

ಕೇಸರಿ ಕುಟೀರಂ

ರಾಯಪೇಟೆ :: ಮದರಾಸು

ಮಂಗಳೂರು ಪ್ರವರ್ತಕರು

ಪ್ರೋಗ್ರೆಸಿವ್ ಸ್ಟೋರ್ಸ್ ಗಣಪತಿ [illegible]

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳು ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ ಆದರೆ ಈ ಎರಡಿ ಕೆಲವು ಸುಧಾರಣೆಯಿಂದೊಡಗೂಡಿದೆ ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಬಾರಿ ನೀವೇ ಪರೀಕ್ಷಿಸಿರಿ ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು. ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

★ ★ ★

ಧರ್ಮಾರ್ಥ ಇಸ್ತ್ರಿಟು ಪೆಟ್ಟಿಗೆಯನ್ನು ಪಡೆಯಿರಿ.

ಈ ಧರ್ಮಾರ್ಥದ ಇಸ್ತಿಟು ಪೆಟ್ಟಿಗೆಯನ್ನು ಪಡೆಯಲು 'NACET BLADES' ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇದೀ ಕಟ್ಟನ್ನು

ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

1[illegible], ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊರೆದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ವಿಜ್ಞಾನಯುಗ

ಹೊಟ್ಟೆಗೆ ಹುಲ್ಲಿನ ಆಹಾರ

ಆಹಾರಕ್ರಮದಲ್ಲಿ ಅನ್ವೇಷಿಕದಲ್ಲಾಗಿಸುವ ಇತ್ತೀಚಿಗಿನ ಮಹತ್ವದ ಶೋಧವೆಂದರೆ—ಹುಲ್ಲಿನಲ್ಲಿರುವ ಆಹಾರ ಗುಣವನ್ನು ಕಂಡುಕೊಂಡದ್ದಾಗಿದೆ. ಹುಲ್ಲಿನಲ್ಲಿ ಡಿ. ಜೀವಾತು ಬಿಟ್ಟು ಉಳಿದ ಎಲ್ಲ ಜೀವಾತುಗಳು ಇರುವವು. ಅದರಲ್ಲಿ ಒಣಗಿದ ಹಣ್ಣು ಮತ್ತು ಕಾಯಿಪಲ್ಯಗಳಲ್ಲಿರುವುದಕ್ಕಿಂತ ಒಂದು ರಾತಲಿಗೆ ೨೮ ಪಾಲಿನಷ್ಟು ಹೆಚ್ಚಿಗೆ ಜೀವಾತುಗಳೂ, ಕಿರಟಿನಲ್ಲಿರುವುದಕ್ಕಿಂತ ೩೩ ಪಾಲಿನಷ್ಟು ಹೆಚ್ಚಿಗೆ ಅ ಜೀವಾತೂ ಕಾಯಿಪಲ್ಯಗಳಲ್ಲಿರುವುದಕ್ಕಿಂತ ೯ ಪಾಲು ಹೆಚ್ಚಿಗೆ ಬಿ-೧ ಜೀವಾತೂ, ಲೆಟ್ಯೂಸಿನಲ್ಲಿರುವುದಕ್ಕಿಂತ ೨೨ ಪಾಲು ಹೆಚ್ಚಿಗೆ ಬಿ-೨ ಜೀವಾತೂ, ಟೊಮೆಟೊದಲ್ಲಿರುವುದಕ್ಕಿಂತ ೧೪ ಪಾಲು ಹೆಚ್ಚಿಗೆ ಸಿ ಜೀವಾತೂ ಇರುವುದು. ಹುಲ್ಲು ಮನುಷ್ಯನ ಜೀರ್ಣಕ್ಕೆ ಬರುವಂತೆ ಮಾಡುವದಕ್ಕೋಸ್ಕರ ಆಹಾರ ವಿಜ್ಞಾನಿಗಳು ಅದನ್ನು ಒಣಗಿಸಿಕೊಳ್ಳಿದು, ಹುಡಿಮಾಡಿದರು. ಆ ಹುಡಿ ಎಳೆ ಬಣ್ಣದ್ದಾಗಿ ಒಂದು ತರಹದ ಸವಾಸನೆಯನ್ನು ಕೊಡುವಂಥದದ್ದಾಗಿ ಇರುವುದು. ಅವರು ಈ ಹುಡಿಯಿಂದ ಮಾಡಿದ ಬಿಲ್ಲೆಗಳನ್ನೇ ತಿಂದು ತಿಂಗಳುಗಳನ್ನು ಕಳೆದರೂ ಅವರಲ್ಲಿ ಯಾವ ರೋಗ ಗುರುತುಗಳೂ ಕಾಯಿಲೆಯೂ ಕಾಣಿಸಿಕೊಳ್ಳಲಿಲ್ಲ. ಮಾತ್ರವಲ್ಲ ಅವರು ಈ ಹುಲ್ಲಿನ ಬಿಲ್ಲೆಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದ ಕಾಲದಲ್ಲಿ ಅವರ ಆರೋಗ್ಯವು ಬಹಳ ಚೆನ್ನಾಗಿದ್ದಂತೆ ಕಂಡುಬಂದಿತು. ಅವರು ಹೇಳುವ ಪ್ರಕಾರ ಒಬ್ಬ ಮನುಷ್ಯನ ಜೀವನಕ್ಕೆ ಹುಲ್ಲಿನ ೧೨ ರಾತಲು ಭಾರದ ಬಿಲ್ಲೆಗಳು ವರ್ಷಾವಧಿ ಸಾಕಾಗುವವು. ಇದರ ಕ್ರಯವು ಮಿಕ್ಕ ಎಲ್ಲಾ ಆಹಾರ ವಸ್ತುಗಳಿಗಿಂತ ಬಹಳ ಅಗ್ಗವಾಗಿರುವುದು. ಭರತಖಂಡದ ಪ್ರಾಚೀನ ಋಷಿ ಮುನಿಗಳು ಒಣೀ ಎಲೆ ಹುಲ್ಲುಗಳನ್ನು ತಿಂದು ದೀರ್ಘಕಾಲ ಬದುಕುತಿದ್ದರಂತೆ. ಅದರ ರಹಸ್ಯವು ಈಗೀಗ ನಮಗೆ ತಿಳಿಯುತ್ತಾ ಬರುತ್ತಲಿದೆ.

ಮನುಷ್ಯ ಶರೀರವೂ ಯಂತ್ರ

ಡಾಕ್ಟರ್ ಅಲೆಕ್ಸಿಸ್ ಕೆರಲ್ ಎಂಬವರು ಕಳೆದ ೨೮ ವರ್ಷಗಳಿಂದ ಭರಣಿಯಲ್ಲಿ ಸಜೀವವಾಗಿ ಇಟ್ಟಿದ್ದ ಕೋಳಿಯ ಎದೆಗುಂಡಿಗೆಯು ಮೆಲ್ಲನೆ ತಾನೇ ನಿರ್ಜೀವವಾಯಿತು. ವಿದ್ಯುಚ್ಛಕ್ತಿಯ ಮೂಲಕ ನಡೆಯುವ ಪಂಪುಗಳಿಂದ ರಕ್ತಸಂಚಾರ ಆಗಿ ಬದುಕಿಕೊಂಡಿರುವ ಇಲಿ ಹಂದಿ, ಮೊಲ, ನಾಯಿ ಮೊದಲಾದ ಎಷ್ಟೋ ಜೀವಿಗಳ ಡಾಕ್ಟರ ಅಲೆಸರಲ್ಲಿ ಇರುತ್ತವೆ. ಇವುಗಳಲ್ಲಿ ಮೂತ್ರಪಿಂಡಗಳಿಗೂ [illegible] ಇರುವುದಿಲ್ಲ. [illegible] ಅವುಗಳಲ್ಲಿ ಕೆಲವು ಸತ್ತ ಮೇಲಾದರೆ ಅವುಗಳ ಶರೀರದಲ್ಲಿ ಎದೆಗುಂಡಿಗೆ ಇಲ್ಲದಿದ್ದರೂ ಅಥವಾ ಅದರ ಬದಲಿಗೆ ಪಂಪು ಕೆಲಸಮಾಡುತ್ತಿದ್ದುದು ಅವುಗಳ ಸಾವಿನ ಕಾರಣವಾಗಿರುವುದಿಲ್ಲ. ಹದಿನೈದು ವರ್ಷಗಳ ಮೊದಲು ಇವರೇ ಡಾಕ್ಟರರು ಒಂದು ಬೆಕ್ಕಿಗೆ ಒಂದು [illegible] ತುಂಡು ಕಳಚಿ ಒಂದು ಭಾಗ, ಮತ್ತೆ ಒಂದು ಮೂತ್ರಪಿಂಡವನ್ನು ಕಸಿ ಕಟ್ಟಿದರು. ಹೀಗಿದ್ದರೂ ಬೆಕ್ಕು ಬದುಕಿತ್ತು. ಪ್ರಾಣಿಗಳಂತೆ ಮನುಷ್ಯನಿಗೆ ಅವನ ಶರೀರದ ಹಾಳಾದ ಬೇರೆ ಬೇರೆ ಅಂಗೋಪಾಂಗಗಳನ್ನು ಕಸಿ ಕಟ್ಟಲಿಕ್ಕೆ ಪ್ರಯಾಸಪಡಬೇಕಾಗಿಲ್ಲ. ಅವನ ಅಂಗೋಪಾಂಗಗಳನ್ನು ಹೋಲುವ ಎಲ್ಲಾ ಅಂಗೋಪಾಂಗಗಳು ಅವನಿಗೆ ಮಂಗನಲ್ಲಿ ಸಿಕ್ಕುತ್ತವೆ. ಆದ್ದರಿಂದ ಮನುಷ್ಯನಿಗೆ ಅಂಗೋಪಾಂಗಗಳ ಕಸಿ ಕಟ್ಟುವುದು ಸಾಧ್ಯವೇ ಎಂಬುದನ್ನು ಡಾಕ್ಟರ ಅಲೆಸರು ಒಳ್ಳೆಸಿನ ತಮ್ಮ ಪ್ರಯೋಗಶಾಲೆಯಲ್ಲಿ ಪರೀಕ್ಷಿಸುತಿದ್ದಾರೆ. ಅವರ ಪ್ರಯೋಗಗಳು ಸಫಲವಾಗುವದಾದರೆ ಮತ್ತೆ ಮನುಷ್ಯನು ಮುದುಕನಾಗಬೇಕಾಗಿಲ್ಲ. ಅವನ ಕೆಲಸಮಾಡಿ ಕೃಶವಾದ ಅಥವಾ ಸವೆದ ಅಂಗಭಾಗಗಳನ್ನು ಯಂತ್ರಗಳ ಆ ಭಾಗಗಳನ್ನು ತೆಗೆದು ಹೊಸ ಭಾಗಗಳನ್ನು ಜೋಡಿಸುವಂತೆಯೇ ಕಸಿ ಕಟ್ಟಿ ನೂರಾರು ವರ್ಷಗಳ ತನಕ ಕ್ಷೇಮದಿಂದ ಇರಬಹುದು.

ಆಕಾಶಮಾರ್ಗವಾಗಿ ಟ್ಯಾಂಕುಗಳನ್ನಿಳಿಸುವುದು

ಆಕಾಶಮಾರ್ಗವಾಗಿ ವಿಮಾನಗಳಿಂದ ಹಾರಿ ಬಂದು ವಾಯುಕೊಡೆಗಳ ಸಹಾಯದಿಂದ ನೂರಾರು ಸೈನಿಕರನ್ನು ಶತ್ರುಗಳ ನಡುವೆ ಇಳಿಸಿ ಅವರನ್ನು ಸೋಲಿಸುವುದು ಸಾಧ್ಯವಾಗಿದೆ. ಟ್ಯಾಂಕುಗಳಂಥ ಬಹು ಭಾರವಾದ ಯುದ್ಧೋಪಕರಣಗಳನ್ನು ಆಕಾಶಮಾರ್ಗವಾಗಿ ಒಯ್ದು ವಾಯುಕೊಡೆಗಳೆಂಬ ಆ ಪರಿಚ್ಯೂಟುಗಳ ಮೂಲಕ ಇಳಿಸುವುದು ಸಾಧ್ಯವೆ? ಈ ಕುರಿತ ಪ್ರಶ್ನಿಸಿದಾಗ ಮಿ. ಲೆಸ್ಲಿ ಇರ್ವಿಂಗ ಎಂಬ ಆಂಗ್ಲ ತಜ್ಞರು—ಟ್ಯಾಂಕುಗಳನ್ನು ಇಳಿಸಲಿಕ್ಕೆ ಬೇಕಾದಂಥ ದೊಡ್ಡ ಪ್ಯಾರೆಚ್ಯೂಟುಗಳನ್ನು ತಯಾರಿಸಬಹುದು. ಎಷ್ಟು ದೊಡ್ಡ ಪ್ಯಾರೆಚೂಟುಗಳನ್ನಾದರು ತಯಾರಿಸಲಿಕ್ಕಾಗುತ್ತದೆ. ಆದರೆ ದೊಡ್ಡ ದೊಡ್ಡ ಪ್ಯಾರೆಚೂಟುಗಳನ್ನು ವಿಮಾನಗಳಲ್ಲಿ ಮಡಚಿ ತೆಗೆದುಕೊಂಡು ಹೋಗುವುದಾಗಲೀ ಅವುಗಳನ್ನು ವಿಮಾನಗಳ ಮೂಲಕ ಟ್ಯಾಂಕುಗಳೊಡನೆ ಇಳಿಯಬಿಡುವುದಾಗಲೀ ಸಾಧ್ಯವಲ್ಲ. ಎಷ್ಟು ಭಾರವನ್ನಾದರೂ ಹೊತ್ತುಕೊಳ್ಳಬಲ್ಲ ಯಾವ ಅಳತೆಯ ಪ್ಯಾರಚ್ಯೂಟುಗಳನ್ನಾದರೂ ತಯಾರಿಸಲಿಕ್ಕಾಗುತ್ತದಾದರೂ ಅವುಗಳನ್ನು ಹೊತ್ತುಕೊಂಡು ಹೋಗುವ ವಿಮಾನಗಳ ಮತ್ತು ಅವುಗಳನ್ನು ಇಳಿಯಬಿಡುವ ತೂಕಗಳ ಅಳತೆಯನ್ನು ಮನಸ್ಸಿಗೆ ಬಂದಂತೆ ಹೆಚ್ಚುಕಡಿಮೆ ಮಾಡಲಿಕ್ಕೆ ಆಗುವುದಿಲ್ಲ. ಎಂದರೆ ಇದ್ದುದರಿಂದ ಬಹು ಭಾರವಾದ ದೊಡ್ಡ ಯುದ್ಧೋಪಕರಣಗಳನ್ನು ವಿಮಾನಗಳಲ್ಲಿ ಒಯ್ದು ಪರಿಚ್ಯೂಟುಗಳ ಮೂಲಕ ಇಳಿಸಲಿಕ್ಕಾಗುವುದಿಲ್ಲವೆಂಬದೇ ಮಿ. ಇರ್ವಿಂಗರ ಅಭಿಪ್ರಾಯವಾಗಿರುವುದು. ಮತ್ತೆ ಪೆರೆಚ್ಯೂಟುಗಳಲ್ಲಿರುವ ಇನ್ನೊಂದು ದೋಷವೆಂದರೆ—ಅವುಗಳ [illegible] ವೇಗದಲ್ಲಿ ಜನರು ಇಳಿಯುವಾಗ [illegible] ಜನರಿಗೆ [illegible] ವೇಗದಲ್ಲಿ ಅವುಗಳನ್ನು ಇಳಿಸಲಿಕ್ಕಾಗುವುದಿಲ್ಲ. ಆದ್ದರಿಂದ ಇವುಗಳಿಂದ ಇಳಿಯುವಾಗ ಅಪಘಡಗಳಾಗುವುದು ಹೆಚ್ಚು.

PHYSICAL FITNESS

is the first essential in games and in every social activity

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA)
Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು
ಯಾವಾಗಲೂ ನಿಮ್ಮನು ಉಲ್ಲಾಸಗೊಳಿಸುವುದು

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,— ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ-ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವವರ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ, ಹರಿಹರ ವರೆಗೆ

6 ಕುಂದಾಪುರದಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅಶಕ್ತಿಯು ಅಭಿವೃದ್ಧಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಬಹಳ ಸರ್ಟಿಫಿಕೇಟು ಡಾ ವೈದ್ಯ ಎಲ್ ಸಿ ಪಿ ಎಸ್ ಕೊಡಮಾಡಿದ್ದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವಾ ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯವೂ ೪-೦-೦ ವಿ ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S M C

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಸ್ತ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುದ್ದು ಮುಡಿಗೆ	—	
„ ದುಯಂ „ „	1—15—0	
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುದ್ದು „	4—12—0	4—14—0
„ ದುಯಂ „ „	4—10—0	4—10—0
„ ಅವ್ವಲ್ ಸುಗ್ಗಿ „	4—8—0	4—10—0
„ ದುಯಂ „ „	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
„ ಸಿಪ್ಪೆ ಇದ್ದದು „	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
„ ದಿಲ್‍ಪಸಂದಿ „	—	—
ತೆಂಗಿನ ಎಣ್ಣೆ ಮುಡಕ್ಕೆ	8—10—0	8—10—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	4—0—0	4—0—0
ಗೇರುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಳ್ಳೇಮೆಣಸು ಹಂಡ್ರಡ್ವೇಟಿಗೆ	13—8—0	14—0—0

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ 2-0-0   ಅಂಚೆ ವೆಚ್ಚ ಸೇರಿ ರೂ 2-14-0   Regd No M3406

ಸ್ವದೇಶಾಭಿಮಾನಿ

ಸಂಪುಟ 34]   ತಾರೀಕು 16—8—1940   [ಸಂಚಿಕೆ 33

The Bombay Life Assurance Company, Ltd.,
(Estd. 1908)

BATTLE OF LIFE

Fight Boldly and Nobly for a Just cause against Uncertainty of Life of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES [illegible]

[illegible]

The Bombay Life Building,

Sir Lalubhai Samaldas Road

Gandhi Nagar, UDIPI

OR ANY OF OUR FOLLOWING [illegible]

[illegible]

(Regd)

ಅಮೃತಾಂಜನ

[illegible]

ಎಲ್ಲಾ ರೋಗಗಳಿಗೂ ಸಿದ್ಧೌಷಧ

[illegible]

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ [illegible] ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಇಂದು ನಿಲಿಯುಗಕ್ಕೆಲ್ಲ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the [illegible] Press Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 16—8—1940 [ಸಂಚಿಕೆ 88

The Bombay Life Assurance Company, Ltd.,
(Estd. 1908)

BATTLE OF LIFE.

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND
Chief Agents for Bombay City & Suburbs,
The Bombay Life Building,
Sir Lalubhai Samaldas Road,
Gandhi Nagar, UDIPI

OR ANY OF OUR FOLLOWING OFFICES AT:

Puthiyara, Calicut	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No 337 Mount Road, Madras	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ವಿಜ್ಞಾನ ಪಾರಿಭಾಷಿಕ ಶಬ್ದಗಳು

ಶ್ರೀ. ಎಸ್. ಆರ್. ಆಚಾರ್ಯ, ಬಿ. ಎಸ್ಸಿ., ಎಲ್. ಟಿ. ಇವರಿಂದ

[ಪ್ರಾಥಮಿಕ ಶಾಲೆಗಳಲ್ಲಿ ಭೂಗೋಳ ವಿಜ್ಞಾನವನ್ನು ಕಲಿಸುವ ಉಪಾಧ್ಯಾಯರು ತಾವು ಇಂಗ್ಲಿಷಿನಲ್ಲಿ ಕಲಿತ ವಿಜ್ಞಾನ ವಿಷಯಗಳನ್ನು, ಇಂದು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕಾದುದರಿಂದ ಪಾರಿಭಾಷಿಕ ಶಬ್ದಗಳ ತೊಂದರೆ ಅವರಿಗೆ ಬೀಳುವುದು ಸಹಜವಾಗಿದೆ. ಒಳ್ಳೆ ವಿಜ್ಞಾನವನ್ನು ಬಲ್ಲ ಲೇಖಕರು ಒಬ್ಬೊಬ್ಬರು ಒಂದೊಂದು ರೀತಿಯಿಂದ ಶಬ್ದಗಳನ್ನು ಉಪಯೋಗಿಸುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ವಿಜ್ಞಾನ ಶಾಸ್ತ್ರದಲ್ಲಿ ನುರಿತ ಶಿಕ್ಷಕರಾದ ಶ್ರೀಯುತ ಆಚಾರ್ಯರು ಶಾಸ್ತ್ರೀಯವೂ ಶುದ್ಧವೂ ಆದ ಪಾರಿಭಾಷಿಕ ಶಬ್ದಗಳ ಪಟ್ಟಿಯೊಂದನ್ನು ಕೊಟ್ಟು ಪ್ರಾಥಮಿಕ ಶಾಲಾಶಿಕ್ಷಕರಿಗೆ ಮಹೋಪಕಾರವನ್ನು ಮಾಡಿರುತ್ತಾರೆನ್ನಬೇಕು— ಸಂ.]

[ಕಳೆದ ಸಂಚಿಕೆಯಿಂದ ಮುಂದುವರಿದುದು]

R

Respiration = ಉಸಿರಾಟ
Reflection = ಪ್ರತಿಫಲನ
Retina = ಅಕ್ಷಿಪಟ
Rust = ತುಕ್ಕು
Reproduction = ಪ್ರತ್ಯುತ್ಪತ್ತಿ
Resist = ತಡೆ

S

Salt = ಲವಣ
See saw = ತೂಗುಮಂಚ
Shadow = ನೆರಳು, ಛಾಯೆ
Stomach = ಹೊಟ್ಟೆ, ಜಠರ
Sweat gland = ಸ್ವೇದಗ್ರಂಥಿ
Slide valve = ಜಾರುಕವಾಟ
Steam engine = ಉಗಿ ಎಂಜಿನ
Spectrum = ವರ್ಣಪಟ್ಟಿ
Sucker = ಊಚು
Spores = ಬೀಜಾಣು
Spirm = ಪುರುಷಾಣು
Soft water = ಮೆದುನೀರು
Switch = ಚಿಲಕ
Storage cell = ಸಂಚಯ ಕೋಶ
Secondary coil = ಹೊರ ಸುರುಳಿ
Salivery gland = ಲಾಲಾ ಗ್ರಂಥಿ
Screw = ತಿರುಗಣೆ

T

Test tube = ನಳಿಗೆಯ ಪಾತ್ರೆ
Tadpole = ತೊಂಟೆ ಕಪ್ಪೆ
Thermometer = ಉಷ್ಣತಾಮಾಪಕ
Temperature = ಉಷ್ಣತೆ
Transparent = ಪಾರದರ್ಶಕ

U

Urea = ಮೂತ್ರಲವಣ

V

Vitamin = ಜೀವಾತು
Vertical line through the Centre of gravity = ಭಾರವರ್ತನ ರೇಖೆ
Vocal cords = ಸ್ವರ ತಂತುಗಳು
Voice box = ಸ್ವರಸಂಪುಟ
Ventrical = ಹೃತ್ಕುಕ್ಷಿ
Verticle = ಲಂಬ
Valve = ಕವಾಟ
Vaccum = ಶೂನ್ಯ ಪ್ರದೇಶ, ಬಾಲಸ್ಥಳ
Vein = ಅಶುದ್ಧ ರಕ್ತನಾಳ

W

Wind = ಗಾಳಿ
Weight = ಭಾರ
Wave = ತರಂಗ, ಅಲೆ
Wave length = ತರಂಗಾಂತರ, ಅಲೆಯ ಉದ್ದ
Wind pipe = ವಾಯು ನಾಳ
Wedge = [illegible]
Wheel = ಗಾಲಿ, ಚಕ್ರ
Wind lass = ಕೈರಾಟೆ
Wheel and axle = ಚಕ್ರ ಮತ್ತು ಗುಮ್ಮ
Wind mill = ಗಾಳಿಯಂತ್ರ
Water wheel = ಜಲಚಕ್ರ
White of the eggs = ಮೊಟ್ಟೆಯ ಲೋಳೆ

Y

Yellow of the eggs = ಮೊಟ್ಟೆಯ ಹಳದಿ
Yeast = ಯೀಸ್ಟ್
Zinc = ಸತು

N

Nutritive Constituents = ಪೋಷಕಾಂಶಗಳು
Nucleus = ಜೀವಕಣದ ಬೀಜ
Nitrogen = ಸಾರ ಅನಿಲ, ಸಾರ ಜನಕ
Noise = ಗದ್ದಲ

O

Ova = ಅಂಡ
Ovary = ಅಂಡಾಶಯ
Opaque = ಅಪಾರದರ್ಶಕ
Optic Nerve = ದೃಷ್ಟಿನರ
Ore = ಅದುರು
Oil Engine = ತೈಲ ಎಂಜಿನು
Oxygen = ಆಮ್ಲಜನಕ

P

Pancreatic juice = ಮೇದೋಜೀರಕ ರಸ
Piston = ಗಜ
Prism = ಲೋಲಕ
Pollen = ಪರಾಗ
Pupil = ಕಣ್ಣುಗೊಂಬೆ (ಪಾಪೆ)
Power = ಸಾಮರ್ಥ್ಯ
Protein = ಸಸಾರಜನಕ
Primary coil = ಮೂಲ ಸುರುಳಿ
Pitch (of a note) = ಸ್ಥಾಯಿ (ಏರು)
Pulley = ರಾಟೆ, ಕಪ್ಪಿ
Pressure = ಒತ್ತಡ
Protoplasm = ಜೀವಧಾತು
Penumbra = ಅರೆನೆರಳು

HALFTONE & LINE
BLOCK MAKING
UNDERTAKEN
Sharada Press,
MANGALORE

ರಾತ್ರೆ ಸುಖವಾದ ನಿದ್ದೆ ಬೀಳಬೇಕಾದರೆ ಒಂದು ಕಪ್ಪು 'ಓವಲ್ ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್ ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯೂ ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇನ್ನು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅವಶ್ಯವಾದ ವಿಟಮಿನು ಮತ್ತು ಫೊಸ್ಫೇಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್ ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯನ್ನೂ ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯ'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್

ಕೈಕನೆಸ್ ಹೋಲ್ ಥರ್ಡ್ ಫ್ಲೋರ್ 310-311 ಲಿಂಗಚೆಟ್ಟಿ ಸ್ಟ್ರೀಟ್ ಮದ್ರಾಸು

ಕಲ್ಕತ್ತಾ, ಬೊಂಬ್ಯಾ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣೆಯುಳ್ಳವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಸ್ವಲ್ಪ ಬೆರೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ತಲ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV.(K)110

ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

23—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೩—೮—೧೯೪೦

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ದೀರ್ಘ ಅಧಿವೇಶನ!

ಕಾಂಗ್ರೆಸಿನ ಮುಂದಿರುವ ಮಹಾ ಪ್ರಶ್ನೆ!

ಸಂಧಿಯೋ? ??? ಸಂಗ್ರಾಮವೋ?

'ಗಾಂಧಿಜೀ ಸದಾ ನಮ್ಮೊಡನಿದ್ದಾರೆ'

— ರಾಷ್ಟ್ರಪತಿ

ವರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ತಾ. ೧೮ರಂದು ಪ್ರಾರಂಭವಾಗಿದೆ. ಕಾಂಗ್ರೆಸು ಧುರೀಣರು ಬಂದು ನೆರೆದಿದ್ದಾರೆ. ವೈಸರಾಯರ ಮೊನ್ನೆಯ ಹೇಳಿಕೆಗೆ ಕಾಂಗ್ರೆಸಿನ ಉತ್ತರ, ಕಾಂಗ್ರೆಸಿನ ಮುಂದಿನ ಹೆಜ್ಜೆಗಳ ವಿಚಾರಗಳನ್ನು ಮಾಡುವ ಬಹಳ ವಿಶೇಷ ವಿಷಯಗಳ ಮೂಲಕ ವರ್ಕಿಂಗ್ ಕಮಿಟಿಯ ಅಧಿವೇಶನವನ್ನು ವಾರದ ತನಕ ಮುಂದುವರಿಸುವರೆಂದು ತಿಳಿಯುತ್ತದೆ. ರಾಷ್ಟ್ರದ ಇತಿಹಾಸದಲ್ಲಿ ಹೀಗೆ ಹೆಚ್ಚು ಪ್ರಧಾನವಾದ ವಿಚಾರಗಳನ್ನು ಮಾಡಬೇಕಾದುದರಿಂದ ಮಹಾತ್ಮಾ ಗಾಂಧಿಜಿಯವರೂ ಸಭೆಗೆ ಆಮಂತ್ರಿತರಾಗಿದ್ದರು.

ರಾಷ್ಟ್ರಪತಿ ಅಜಾದರು ವರ್ಕಿಂಗ್ ಕಮಿಟಿಯ ಅಧಿವೇಶನವು ಸೇರುವುದರ ಮೊದಲೇ ಗಾಂಧಿಜಿಯವರನ್ನು ಕಂಡು ಮಾತನಾಡಿದರು. ಪತ್ರಿಕಾ ಪ್ರತಿನಿಧಿಗಳೊಡನೆ "ಗಾಂಧಿಜಿಯವರು ಸದಾ ನಮ್ಮೊಡನೆಯೇ ಇರುತ್ತಾರೆ" ಎಂದರು.

ಕಮಿಟಿಯು ಕೇರಳ ಪ್ರಾಂತೀಯ ಕಾಂಗ್ರೆಸು ಕಮಿಟಿಯಲ್ಲಿ ಬಂದ ವಿವಾದ ವಿಚಾರವನ್ನೂ ಮಾಡಿತು.

ವೈಸರಾಯರ ಹೇಳಿಕೆಯನ್ನು ಧುರೀಣರು ಆ ಮೇಲೆ ವಿಮರ್ಶಿಸತೊಡಗಿದರು; ಅದರ ಪ್ರತಿಯೊಂದು ಅಂಶವೂ ಅಕ್ಷರಶಃ ಚರ್ಚಿಸಲ್ಪಟ್ಟಿತು. ಮೌಲಾನಾ ಅಜಾದರು ವೈಸರಾಯರನ್ನು ಭೇಟಿಯಾಗಲು ಆಗುವುದಿಲ್ಲವೆಂಬ ವಿಚಾರವಾಗಿತ್ತ ಹೇಳಿಕೆಯ ವಿಚಾರವನ್ನೂ ಆಲೋಚಿಸಲಾಯಿತು. ವರ್ಕಿಂಗ್ ಕಮಿಟಿಯು ತನ್ನ ತೀರ್ಮಾನವನ್ನು ಕೊನೆಗೆ ಮಹಾತ್ಮಾ ಗಾಂಧಿಜಿಯವರ ಮುಂದಿಟ್ಟು ಅವರ ಸಮ್ಮತಿಯನ್ನು ಪಡೆಯುವುದಾಗಿ ತಿಳಿದು ಬಂದಿದೆ.

ತಾ. ೨೦ರಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಎಂಟು ತಾಸುಗಳ ತನಕ ಕುಳಿತು ಚರ್ಚಿಸಿತು. ವೈಸರಾಯರಿಗೆ ಕೊಡುವ ಉತ್ತರದ ವಿಚಾರವಾಗಿ ಇಂದ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬಂದಿಲ್ಲವಾಗಿ ತಿಳಿದುಬರುತ್ತದೆ. ಹಲವರು ಈಗಾಗಲೇ ವೈಸರಾಯರಿಗೆ ಉತ್ತರವು ಕಳುಹಿಸಲಾಗಿದೆಯೆಂದು ಅಭಿಪ್ರಾಯಪಡುತ್ತಾರೆ, ಆದರೆ ಈ ಅಭಿಪ್ರಾಯವನ್ನು ಕಾಂಗ್ರೆಸು ಮುಖಂಡರು ಪುಷ್ಟೀಕರಿಸುವುದಿಲ್ಲ.

ರಾಷ್ಟ್ರಪತಿಗಳನ್ನು ಸಂದರ್ಶಿಸಿದಾಗ, 'ವೈಸರಾಯರಿಗೆ ಉತ್ತರ ಕಳುಹಿಸುವ ವಿಚಾರವು ಬಹಳ ಕಷ್ಟವಾಗಿ ಪರಿಣಮಿಸಿದೆ; ಆದಕಾರಣ ಸ್ವಲ್ಪ ತಡವಾಗಬಹುದು' ಎಂದರು.

ಈಗಾಗಲೇ ವೈಸರಾಯರಿಗೆ ಕಳುಹಿಸುವ ಉತ್ತರವು ಸಿದ್ಧವಾಗಿದೆಯೆಂದೂ ಗಾಂಧಿಜಿಯವರ ಸಮ್ಮತಿಗೆ ಅದು ಹೋಗಿದೆಯೆಂದೂ ತಿಳಿದಿದೆ. ಸಭೆಯಿಂದ ಬರುವ ವಾರ್ತೆಯಂತೆ, ವೈಸರಾಯರ ಹೇಳಿಕೆಯು, ಕಾಂಗ್ರೆಸಿನ ಯಾವುದೇ ಕೇಳಿಕೆಯ ಅಂಶವನ್ನು ಸ್ವಲ್ಪವೂ ಪೂರೈಸುವುದಿಲ್ಲವಾದರೂ, ಕಾಂಗ್ರೆಸು ಸರಕಾರದೊಡನೆ ವ್ಯವಹಾರದ ದ್ವಾರವನ್ನು ಒಮ್ಮೆಗೇ ಮುಚ್ಚಿಬಿಡುವ ನಿರ್ಣಯ ಮಾಡಲಾರದೆಂದು ತಿಳಿದಿದೆ. ಸರಕಾರದ ಮುಂದಿನ ಕಾರ್ಯವೇನೆಂಬವರೆಗೆ ಕಾಂಗ್ರೆಸು ಕಾಯುವುದೆಂದೂ ತಿಳಿಯುತ್ತದೆ. ಗಾಂಧಿಜಿಯವರು ಈ ಅಧಿವೇಶನದಲ್ಲಿ ಭಾಗವಹಿಸಿದ ನಿಮಿತ್ತ ಕಾಂಗ್ರೆಸು ಯಾವುದೇ ರೂಪದ ಚಳವಳವನ್ನು ಬೇಗನೇ ಪ್ರಾರಂಭ ಮಾಡಲು ದುಡುಕಲಾರದೆಂದು ಸೂಚಿಸುವಂತಿದೆಯೆಂದು ಹಲವರ ಅಭಿಪ್ರಾಯ.

ಕಾಂಗ್ರೆಸು ಧುರೀಣರು, ಇದು ವರೆಗಿನ ಪರಿಸ್ಥಿತಿಗಳನ್ನು ವಿಚಾರಿಸಿ, ವೈಸರಾಯರ ಹೇಳಿಕೆಯು ಭಾರತದ ವಿಚಾರವಾಗಿ ಬ್ರಿಟನಿನ ಕಡೆಯ ಮಾತೆಂಬ ವಿಷಯವಾಗಿಯೂ ಅರ್ಥ ಮಾಡಿಕೊಂಡಂತಿದೆಯೆಂದೂ ತಿಳಿದಿದೆ.

ಕಮಿಟಿಯ ಮುಂದೆ ಬಂದ ಬಹಳ ವಿಶೇಷ ವಿಚಾರವೆಂದರೆ, ಮುಂದಿನ ಹೆಜ್ಜೆಯೇನೆಂಬುದು. ಕೆಲವರಿಂದ ಕೂಡಲೇ ಯಾವುದೇ ರೂಪದ ಚಳವಳವನ್ನು ಆರಂಭಿಸಬೇಕೆಂಬ ಉಗ್ರವಾದ ವಾದವು ಬಂದಿತ್ತು; ಆದರೆ ಚಳವಳವನ್ನು ಆರಂಭಿಸುವ ವಿಚಾರಮಾಡುವ ಮೊದಲು ಇಂದಿನ ಎಲ್ಲಾ ಪರಿಸ್ಥಿತಿಗಳನ್ನು ವರ್ಕಿಂಗ್ ಕಮಿಟಿಯು ಕೂಲಂಕಷವಾಗಿ ವಿಚಾರ ಮಾಡುವುದು.

ಕಮಿಟಿಯು ಗಾಂಧಿಜಿ ಮತ್ತು ಕೆಲವು ಕಾಂಗ್ರೆಸು ಸದಸ್ಯರೊಳಗೆ ಉಂಟಾದ ತತ್ವ ಭೇದಗಳ ವಿಷಯವನ್ನು ವಿಚಾರಿಸಿತು. ಯಾವುದೇ ಚಳವಳವು ಆಗಬೇಕಿದ್ದರೂ ಗಾಂಧಿಜಿಯವರ ಮುಂದಾಳುತನವು ಅಗತ್ಯವಿರುವಾಗ ಇಂತಹ ತತ್ವಭೇದವು ಮೊದಲು ನಿವಾರಣೆಯಾಗತಕ್ಕದ್ದೆಂಬ ವಿಷಯವೂ ಕಮಿಟಿಯ ಮುಂದೆ ಬಂದಿದೆಯಾಗಿ ತಿಳಿದಿದೆ.

ಇಂದು ವರ್ಕಿಂಗ್ ಕಮಿಟಿಯ ಮುಂದಿರುವ ಹಲವು ವಿಚಾರಗಳು ಬಹಳ ಪ್ರಾಮುಖ್ಯವೂ, ಅತ್ಯಂತ ಗಂಭೀರವೂ, ದೇಶದ ಅದೃಷ್ಟವನ್ನು ನಿರ್ಣಯಿಸುವಂತಹವೂ ಆಗಿರುವ ಕಾರಣ, ಕಾಂಗ್ರೆಸು ವರ್ಕಿಂಗ್ ಕಮಿಟಿಯು ಅಧಿವೇಶನವನ್ನು ಅವಸರವಸರವಾಗಿ ಮಾಡಿ ಪ್ರಯೋಜನವಿಲ್ಲವೆಂದು ಕೂಲಂಕಷ ವಿಚಾರ ಮಾಡುವ ಸಲುವಾಗಿ ಅಧಿವೇಶನವನ್ನು ವಾರದ ಕೊನೆಯ ತನಕ ನಡೆಸುವರೆಂದೂ ತಿಳಿದುಬರುತ್ತದೆ.

ಕಾಂ. ಪ್ರಾಥಮಿಕ ಸದಸ್ಯತ್ವ ಸಪ್ತಾಹ

ತಾ. ೨೪ರಿಂದ ೩೦ರ ವರೆಗೆ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯು ಕಾಂ. ಪ್ರಾಥಮಿಕ ಸದಸ್ಯತ್ವ ಸಪ್ತಾಹವನ್ನು ಆಚರಿಸಲಿರುವದು. ತಾ. ೩೦ ಪ್ರಾಥಮಿಕ ಸದಸ್ಯತ್ವದ ಕೊನೆಯ ದಿನ. ದೇಶಾಭಿಮಾನಿಗಳೆಲ್ಲರೂ ಪ್ರಾಥಮಿಕ ಸದಸ್ಯರಾಗಿ ಕಾಂಗ್ರೆಸು ಸಂಸ್ಥೆಯನ್ನು ಬಲಪಡಿಸಬೇಕಾಗಿ ಮಂ. ಕಾಂ. ಕ. ಪ್ರಕಟನೆ ಹೊರಡಿಸಿರುತ್ತ.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜಾಸ್ತಿಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ; ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

WANTED

"Applications are invited for the post of a clerk in Mangalore Co-operative Town Bank Ltd. 2466 of pass in the S. S. L. C. with knowledge of typing with minimum qualifications. Apply stating age, qualifications. Applications should be hand-written and should reach this office before 28—8—1940.

U. Srinivasa Rao,
Secretary.

ಸ್ವದೇಶಾಭಿಮಾನಿ

ತಾರೀಕು 28—8—1940

ಆಕ್ರಮಣ ಪ್ರಯತ್ನ

ಬ್ರಿಟನನ್ನು ಆಕ್ರಮಿಸಲು ಹಿಟ್ಲರನು ಸಾವಿರ ಸಂಖ್ಯೆಯಲ್ಲಿ ವಿಮಾನಗಳನ್ನು ಕಳುಹಿಸುತ್ತಿದ್ದಾನೆ. ನಾಜೀ ವಿಮಾನಗಳು ಬ್ರಿಟನಿನ ಆಕಾಶದಲ್ಲಿ ಹಾರಾಡತೊಡಗಿವೆ. ಈ ವಾರ ನಾಜೀ ವೈಮಾನಿಕರೊಡನೆ, ಬ್ರಿಟಿಷ್ ವೈಮಾನಿಕರಿಗೆ ಘನಘೋರ ಸಂಗ್ರಾಮವು ನಡೆಯಿತು! ಜರ್ಮನರು ಲಂಡನಿಗೆ ಆಕ್ರಮಣ ನಡೆಸಲು ರಭಸದಿಂದಲೂ ಸಾಹಸದಿಂದಲೂ, ಸಿದ್ಧತೆಯಿಂದಲೂ ಬಂದು ವಿಫಲರಾಗಿ ಮರಳಿ ಹೋಗಬೇಕಾಯಿತು.

ಈ ವಾರದ ಆಕಾಶಯುದ್ಧದಲ್ಲಿ ಹಿಟ್ಲರನು ಪ್ರಯೋಗಿಸಿದ ಸಾಹಸಗಳನ್ನು, ಪರಿಶ್ರಮಗಳನ್ನು, ಧನ, ಜನವ್ಯಯಗಳನ್ನು ಪರಿಗಣಿಸಿ ಆತನಿಗೆ ದೊರಕಿದ ಫಲಿತಾಂಶವನ್ನು ಹೋಲಿಸಿದರೆ ಅದು ಏನೂ ಪ್ರಯೋಜನವಿಲ್ಲದಂತೆಯೇ ತೋರುತ್ತದೆ. ನಾಜೀ ವೈಮಾನಿಕರು ಬ್ರಿಟನಿನ ಆಕಾಶದಲ್ಲಿ ತೆರೆಗಳ ಮೇಲೆ ತೆರೆಗಳಂತೆ ಎದ್ದು ಬರುತ್ತಿದ್ದರು; ಸಾವಿರಾರು ವಿಮಾನಗಳು ವಿಧ್ವಂಸಕಗಳಾದ ಬಾಂಬುಗಳನ್ನೋ, ಮೆಶಿನು ಗನ್ನುಗಳನ್ನೊ, ಇನ್ನು ಯಾವ ಯಾವ ಯುದ್ಧ ಸಾಧನಗಳನ್ನೋ ತುಂಬಿ ತಂದಿದ್ದವು. ಆದರೆ ಬ್ರಿಟಿಷ್ ವೈಮಾನಿಕರು ಕೂಡೆ ಆದ ಕಾದಾಟದಲ್ಲಿ ನಾಜೀ ವೈಮಾನಿಕರೇ ಬಹಳ ನಷ್ಟಗೊಂಡರೆಂದೂ ಅಸಂಖ್ಯ ಜರ್ಮನ್ ವಿಮಾನಗಳು ನೆಲಕ್ಕುರುಳಿಸಲ್ಪಟ್ಟವೆಂದೂ ಸುದ್ದಿ ಬಂದಿದೆ.

ಇಷ್ಟು ರಭಸದಿಂದ ಬಂದ ನಾಜೀ ವಿಮಾನಗಳ ಆಕ್ರಮಣದಿಂದಲೂ ಬ್ರಿಟನು ಬೆದರಲಿಲ್ಲ. ಎಲ್ಲಿಯೋ ಅಲ್ಲಲ್ಲಿ ಅಲ್ಪಸ್ವಲ್ಪ ಮಾತ್ರ ಅಪಾಯಗಳಾಗಿವೆಯಾದರೂ, ಹೇಳತಕ್ಕ, ಚಿಂತಿಸತಕ್ಕ, ನಿರಾಶೆಗೊಳ್ಳತಕ್ಕ ಏನೇನೂ ಪರಿಸ್ಥಿತಿಯು ಉಂಟಾಗಿಲ್ಲ. ಬ್ರಿಟನು ಮೊದಲಿನಂತೆಯೇ ಇಂದೂ ಭದ್ರವಾಗಿದೆಯೆಂದು ತಿಳಿದಿದೆ.

ಹೋರಾಟವು ನಡೆಯುತ್ತಾ ಇದೆ. ಹಿಟ್ಲರನು ಬ್ರಿಟನಿನ ಆಚೆಯ ದಡದಲ್ಲಿ ಫ್ರಾನ್ಸಿನಲ್ಲಿ ಸಮೀಪದಲ್ಲಿಯೇ ಬಂದು ನೆಲಸಿರುವುದರಿಂದ ಬ್ರಿಟನಿಗೆ ನಿರಂತರ ಉಪದ್ರವ ಕೊಡುತ್ತಿರುವುದು ಸಾಧ್ಯವಿದೆ. ಬ್ರಿಟನು ಏಕಾಂಗಿಯಾಗಿ ಮಹಾಶಕ್ತಿವಿನೊಡನೆ ಕಾದಾಡುತ್ತಿದೆ. ಹಿಟ್ಲರನು ಇತರ ರಾಷ್ಟ್ರಗಳೊಡನೆ ಮಾಡಿದ ಯುದ್ಧದಲ್ಲಿ ವಿದ್ಯುದ್ವೇಗದಿಂದ ಹೇಗೆ ಬೆದರಿಸಿ ಕಾರ್ಯಸಾಧಿಸಿದ್ದನೋ, ಅಂತಹ ಅರ್ಥಬೆಯ ಪ್ರಯೋಗವು ಸಾಧ್ಯವಿಲ್ಲ. ಜರ್ಮನಿಯು [illegible] ಕಾಲ ಬಂದಿದೆ. ಲೋಕ[illegible]ಸೆಗೆ ಇಳಿದ ರಾಷ್ಟ್ರವು ಪ್ರಬಲವಾದ ತಿರಸ್ಕಾರಕ್ಕೆ ಒಳಗಾಗಿದೆ. ತೀಕ್ಷ್ಣವಾದ ಪ್ರಹಾರಕ್ಕೆ ಬಲಿಯಾಗಿದೆ. ಹಿಂಸೆಯ, ಪಶು ಶಕ್ತಿಯ, ಕ್ರೌರ್ಯದ, ಅಧಿಕಾರವನ್ನು ಸಹಿಸದ ಯಾವನೇ ಆದರೂ ಹಿಟ್ಲರನ ಆಕ್ರಮಣ ನೀತಿಯನ್ನು ಖಂಡಿತವಾಗಿ ಖಂಡಿಸದಿರಲಾರನು.

ರೂಸ್‌ವೆಲ್ಟರ ಪ್ರತಿಸ್ಪರ್ಧಿ

ಅಮೇರಿಕದ ಮುಂದಿನ ಅಧ್ಯಕ್ಷಪೀಠಕ್ಕೆ ರಿಪಬ್ಲಿಕನ್ ಪಕ್ಷದ ಪ್ರತಿನಿಧಿಯಾಗಿ ವೆಂಡೆಲ್ ವಿಲ್ಕಿಯವರು ಮುಂದೆ ಬಂದು ತನ್ನ ತತ್ವಗಳನ್ನು ಅಮೇರಿಕನರ ಮುಂದಿಟ್ಟಿರುವರು. ಯುರೋಪಿನ ರಾಜಕಾರಣದಲ್ಲಿ ಅಮೇರಿಕದ ಸ್ಥಾನವು ಮಹತ್ವವಾದುದರಿಂದ ವೆಂಡೆಲ್ ವಿಲ್ಕಿಯವರ ಈ ಭಾಷಣದ ವಿಚಾರವೂ ಒಂದು ಮನನೀಯ ವಿಷಯವೇ ಆಗಿದೆ.

ಅವರು ವಿವರಿಸಿದ ಅಮೇರಿಕದ ವಿದೇಶೀಯ ನೀತಿಯು ಇಂದಿನ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಅನುಸರಿಸಿದ ನೀತಿಯಿಂದ ಏನೂ ಭಿನ್ನವಾಗಿಲ್ಲ. ಹಿಟ್ಲರನು ಜಗತ್ತನ್ನು ಆಕ್ರಮಿಸಬರುತ್ತಿರುವದನ್ನು ತಡೆಗಟ್ಟಲು ಬ್ರಿಟನಿಗೆ ಸಹಾಯ ಕೊಡಲು, ಅಮೇರಿಕದ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ರೂಸ್‌ವೆಲ್ಟರಂತೆ ವಿಲ್ಕಿಯವರೂ ಅಭಿಪ್ರಾಯಪಟ್ಟರು. ಯುರೋಪಿನ ಯುದ್ಧದಲ್ಲಿ ಅಮೇರಿಕವು ಸೇರಬಾರದೆಂದು ಅವರ ರೂಸ್‌ವೆಲ್ಟರಂತೆ ಅಭಿಪ್ರಾಯವೂ ಆಗಿದೆ.

ಇಷ್ಟು ವಿಷಯಗಳನ್ನು ತನ್ನ ಪ್ರತಿಸ್ಪರ್ಧಿಯಾದ ರೂಸ್‌ವೆಲ್ಟರ ತತ್ವಗಳಿಗೆ ಅನುಗುಣವಾಗಿಯೇ ಹೇಳಿದ್ದರೂ, ಕಡೆಗೆ ರೂಸ್‌ವೆಲ್ಟರು, ಆ ಯುದ್ಧಕ್ಕೆ ಪ್ರೋತ್ಸಾಹವಿತ್ತರೆಂದೂ, ಶಾಂತಿಯನ್ನು ಕೆಡಿಸಲು ಪ್ರಯತ್ನಿಸಿದರೆಂದೂ, ಶಾಂತಿಯನ್ನು ಸ್ಥಾಪಿಸುವುದು ತನ್ನ ಪಕ್ಷದ ಪ್ರಬಲ ಆಕಾಂಕ್ಷೆಯೆಂದೂ ವಿಲ್ಕಿಯವರು ಹೇಳಿದರು. ನಿಜವಾಗಿ, ಯುದ್ಧವು ಆರಂಭವಾಗುವುದರ ಮೊದಲು ರೂಸ್‌ವೆಲ್ಟರು ಯುರೋಪಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಸಲುವಾಗಿಯೇ ತನ್ನ ಸಾಧ್ಯಯತ್ನಗಳನ್ನು ಮಾಡಿದರೆಂಬವದು ಜಗತ್ತಿಗೆ ಚೆನ್ನಾಗಿ ಗೊತ್ತಿರುವ ವಿಚಾರವಾಗಿದೆ.

ಅಮೇರಿಕನರು ಇಂದಿನ ಈ ವಿಷಮ ಕಾಲದಲ್ಲಿ ಎಂಟು ವರ್ಷಗಳ ಅನುಭವಶಾಲಿಯಾದ ರೂಸ್‌ವೆಲ್ಟರಂತವರನ್ನೋ, ಇಲ್ಲವೇ ಹೊಸ ಉತ್ಸಾಹಿತರಾದ ವೆಂಡೆಲ್ ವಿಲ್ಕಿಯವರನ್ನೋ ಯಾರನ್ನು ಆರಿಸುವರೆಂಬ ವಿಚಾರ ಮುಂದೆ ನೋಡತಕ್ಕದ್ದಿದೆ. ಆದರೆ, ಸಾಮಾನ್ಯ ಜನತೆಯು ಯುರೋಪು ಇಂಥ ಗೊಂದಲಗೊಂಡಿರುವ ಕಾಲದಲ್ಲಿ ತಮ್ಮ ವಿಶ್ವಾಸಪಾತ್ರನಾದ, ಬಹುಕಾಲದ ಅನುಭವಸ್ಥನಾದ ಮುಂದಾಳುವನ್ನು ಕಳಕೊಳ್ಳಬಹುದೆಂಬುದನ್ನು ನಂಬಲಾಗುವುದಿಲ್ಲ.

ಎಚ್ಚರದ ಮಾತು

ಬ್ರಿಟಿಷ್ ಸರಕಾರದ ಯೋಜನೆಯು ಸುಧಾರಿಸಲ್ಪಡದಿದ್ದರೆ, ಇದ್ದಕ್ಕಿದ್ದಂತೆ ಪ್ರಯೋಗಿಸಲ್ಪಟ್ಟರೆ, ಜಿನ್ನರಿಗೆ ಮಹಾ ವಿಜಯವಾದಂತೆ; ಪಾಕಿಸ್ಥಾನದ ಕೂಗು ಹೆಚ್ಚಿದಂತೆ; ಕಾಂಗ್ರೆಸಿನವರು ಈ ಸಂದರ್ಭದಲ್ಲಿ ಮಾಡತಕ್ಕ ಕರ್ತವ್ಯವೇನೆಂಬ ವಿಷಯವನ್ನು ದಿಲ್ಲಿಯ ಪ್ರಸಿದ್ಧ ಪತ್ರಿಕೆಯಾದ ರಾಟ್ಸ್ ವೀಕ್ಲಿಯು ಹೀಗೆ ಬರೆದು ಎಚ್ಚರ ಕೊಡುತ್ತದೆ.

“ಸರಕಾರದ ಧೋರಣೆಯು ಇಂದು ಸಾರಲ್ಪಟ್ಟಂತೆ ಪ್ರಯೋಗಿಸಲ್ಪಟ್ಟರೆ, ಕಾಂಗ್ರೆಸಿನವರು, ಪ್ರಾಂತಗಳಲ್ಲಿಯೂ ಕೇಂದ್ರಗಳಲ್ಲಿಯೂ, ಎಲ್ಲಾ ಕಡೆಗಳಲ್ಲಿಯೂ ಹೊರಗಡೆಯೇ ಇರಬೇಕಾಗುತ್ತದೆ; ಮಹಮ್ಮದಾಲಿ ಜಿನ್ನರು ತನ್ನ ಕಾರ್ಯಭಾರವನ್ನು ಸ್ವತಃ ತಾನೇ ಆಗಲಿ, ತನ್ನ ಆಜ್ಞಾನುವರ್ತಿ ಅನುಯಾಯಿಗಳಿಂದಾಗಲಿ, ತನ್ನ ಅನುಕೂಲದಂತೆ ಮಾಡಿಸದೆ ಇರುವುದಿಲ್ಲ. ವಿಸ್ತರಿಸ್ಪಿದ ವೈಸರಾಯರ ಮಂತ್ರಿಮಂಡಳದಲ್ಲಿ ಲೀಗಿನ ಪ್ರತಿನಿಧಿಗಳು ಕಾರ್ಯಭಾರವನ್ನು ವಹಿಸಿ ಕಾರ್ಯವನ್ನು ಕೈಕೊಳ್ಳುವರು. ಮುಂದೆ ಅವರಿಗೆ ಅತ್ಯಂತ ಪ್ರಿಯವಾದ ಪಾಕಿಸ್ತಾನದ ಕೂಗು ಖಂಡಿತವಾಗಿ ಅಳಿಯಲಾರದು, ಅದಕ್ಕೆ ಮತ್ತಷ್ಟು ಶಕ್ತಿ ಹೆಚ್ಚಿದಂತೆಯೇ ಆಗುವುದು.

ಹಾಗಾದರೆ ಈ ಸಮಯದಲ್ಲಿ, ಭಾರತದಲ್ಲಿ [illegible] ಕೀಯ ಪಕ್ಷವಾಗಿದ್ದ ಕಾಂಗ್ರೆಸು ಏನು ಮಾಡಲಿದೆ? ಯಾವ ಧೋರಣೆಯನ್ನು ಮುಂದೊಡ್ಡಿ ದೇಶಹಿತವನ್ನು ದೊರಕಿಸಿಕೊಳ್ಳಲಿದೆ? ಈ ಕುರಿತು ಇಂದು ಕಾಂಗ್ರೆಸಿನವರು ಈಗ ವಿಚಾರಮಾಡುವುದು, ತೀಕ್ಷ್ಣವಾಗಿ, ಗಂಭೀರವಾಗಿ ವಿಚಾರ ಮಾಡುವುದು ಅವಶ್ಯವಾಗಿದೆ. ಕಾಂಗ್ರೆಸು ತಾನು ಇಂದು ಕೈಕೊಳ್ಳುವ ಕಾರ್ಯಕಲಾಪಗಳಿಂದ ಬ್ರಿಟನು ಸರಿದಾರಿಗೆ ಬರಬೇಕು; ಲೀಗು ತಪ್ಪು ಹಜ್ಜೆಯನ್ನು ತಿದ್ದಿಕೊಳ್ಳಬೇಕು. ಅಷ್ಟು ವಿಚಾರಪೂರ್ವಕವಾಗಿರಬೇಕು ಮುಂದಿನ ಕಾರ್ಯಕಲಾಪಗಳು.

“ಕಾಂಗ್ರೆಸು ಹಾಗೆ ಮಾಡುತ್ತಿರುವಲ್ಲಿಯೂ, ಬ್ರಿಟನು ತನ್ನ ಹಟವನ್ನು ಬಿಟ್ಟುಬಿಡಲು ಇಷ್ಟಪಡದಲ್ಲಿ ಖಂಡಿತವಾಗಿಯೂ ಜನತೆಯು ಕಾಂಗ್ರೆಸನ್ನು ಬಿಡಲಾರದು. ಕಾಂಗ್ರೆಸು ಹಾಕಿದ ಕಾರ್ಯಕ್ರಮಕ್ಕೆ ಅವರ ಸಮ್ಮತಿ ದೊರಕುವುದು.

ವರ್ಕಿಂಗ್ ಕಮಿಟಿಯು ಈ ವಿಚಾರವನ್ನು ಮಾಡಬೇಕು. ಕಾಂಗ್ರೆಸಿನ ಇಂದಿನ ಕೇಳಿಕೆಯನ್ನು ಯಾವ ಭಾರತೀಯನೂ ವಿರೋಧಿಸುವಂತಿರಬಾರದು; ಯಾವ ಬ್ರಿಟಿಷನೂ ತಿರಸ್ಕರಿಸುವಂತಿರಬಾರದು.”

ವರ್ಕಿಂಗ್ ಕಮಿಟಿಯು ಅಂತಹುದೇ ಕೇಳಿಕೆಯನ್ನು ಸರಕಾರದ ಮುಂದಿಡುವುದಾಗಿ ನಾವು ಹಾರೈಸಬಹುದು.

ಅಡಿಕೆತೋಟಗಾರರ ಸಂಕಷ್ಟ

ನಮ್ಮ ಜಿಲ್ಲೆಯ ಅಡಿಕೆ ತೋಟಗಾರರಿಗೆ ಕೊಳೆ ರೋಗದಿಂದಾಗಿ ಈ ವರ್ಷ ಹೆಚ್ಚುತ್ತಿರುವ ಸಂಕಷ್ಟದ ಕುರಿತು ನಾವು ಹಿಂದಿನ ಸಂಚಿಕೆಗಳಲ್ಲಿ ಅವರಿಂದ ಬಂದ ವಾರ್ತೆಗಳನ್ನು ಪ್ರಕಟಿಸಿದ್ದೆವು. ಈಗ ಬೇರೆ ಬೇರೆ ಕಡೆಗಳಿಂದ ಅಂತಹ ಹೊಸ ದೂರುಗಳು ಕೇಳಿ ಬರುತ್ತಿವೆ. ನಮ್ಮ ಅನುಭವದಿಂದಲೂ, ಅಡಿಕೆ ತೋಟಗಾರರು ಈ ವರ್ಷ ಹಿಂದಿನ ಕೆಲವು ವರ್ಷಗಳಿಗಿಂತ ಹೊಸ ರೋಗಗಳನ್ನು ಎದುರಿಸಬೇಕಾಗಿ ಹೊಸ ಸಂಕಷ್ಟಗಳಿಗೆ ಬಿದ್ದಿರುವರೆಂದು ತಿಳಿದುಬರುತ್ತದೆ.

ಕೊಳೆ ರೋಗವು ಕಳೆದ ಆರೇಳು ವರ್ಷಗಳಿಂದ ಆರಂಭವಾಗಿದ್ದು, ಆಗ ಕೃಷಿ ಇಲಾಖೆಯವರು ಪ್ರಚಾರಪಡಿಸಿದ ಬೋರ್ಡೋ ಮಿಶ್ರಣವು ಎಲ್ಲೆಡೆಗಳಲ್ಲಿಯೂ ಉಪಯೋಗಿಸಲ್ಪಡುತ್ತಿತ್ತು. ಆದರೆ ಈ ವರ್ಷ ತಲೆದೋರಿದ ರೋಗವು ಬೇರೊಂದು ರೀತಿಯದಾಗಿದೆ. ಆರಂಭದಲ್ಲಿ ಹಸಿ ಉರುವೆಯು ಬೀಳಲು ಸುರುವಾಗಿ ಮೆಲ್ಲ ಮೆಲ್ಲನೆ ಅದು ಬೀಳುತ್ತಲೇ ಇರುವುದು. ಔಷಧ ಉಪಯೋಗಿಸಲು ಈಗ ಮಳೆಯು ನಿರಂತರ ಬೀಳುತ್ತಿದ್ದು ಈಗಾಗಲೇ ಅರ್ಧಕ್ಕಿಂತ ಹೆಚ್ಚು ತಮ್ಮ ಅಡಿಕೆಯ ಉತ್ಪತ್ತಿಗಳನ್ನು ಕಳಕೊಂಡವರಿದ್ದಾರೆ. ಹೀಗೆ ಅಡಿಕೆ ತೋಟಗಾರರು ಅಪಾರ ಸಂಕಷ್ಟಕ್ಕೆ ಗುರಿಯಾಗಿರುತ್ತಾರೆ.

ನಮ್ಮ ಜಿಲ್ಲೆಯಲ್ಲಿ ಅಡಿಕೆಯ ಒಂದು ಪ್ರಧಾನವಾದ ಲಾಭದಾಯಕವಾದ ಕೃಷಿ. ಅದರಲ್ಲಿಯೂ ಪುತ್ತೂರು ಕಾಸರಗೋಡು ತಾಲೂಕಿನ ಕೃಷಿಕರ ಮುಖ್ಯ ಜೀವದ ಸಾಧನವೇ. ಅಡಿಕೆ ಕೃಷಿಯಾಗಿದೆ. ಅವರ ವ್ಯವಹಾರವೆಲ್ಲ ಅದರಿಂದಲೇ ನಡೆಯಬೇಕಾಗಿದೆ. ಹೀಗಿರುವಾಗ ಅಂತಹ ಮುಖ್ಯ ಜೀವನಾಧಾರಕ್ಕೆ ಹೀಗೆ ಕೊಡಲಿಯೇಟು ಬಿದ್ದು ಮುಂದೆ ಅವರ ವ್ಯವಸ್ಥೆ ಹೇಗೆ ನಡೆಯಬೇಕೆಂಬುದನ್ನು ಹೇಳತೀರದು.

ಹೀಗೆ ಕಂಗಾಲಾಗಿರುವ ನಮ್ಮ ಜಿಲ್ಲೆಯ ಕೃಷಿಕರ ಕಡೆಗೆ ಸರಕಾರದವರ ಮುಖಂಡರೂ ದೃಷ್ಟಿಹರಿಸುವುದು ಅವಶ್ಯವಾಗಿದೆ. ದೇಶದ ಆಧಾರ ಕೃಷಿಕರು. ಅವರು ಬಡತನಕ್ಕಿಳಿಯುವುದೆಂದರೆ ಇಡೀ ದೇಶವೇ ದಾರಿದ್ರ್ಯದಲ್ಲಿ ಮುಳುಗಿದಂತೆ. ಅವರ ಕಷ್ಟಕಾಲದಲ್ಲಿ ಸಾಧ್ಯವಾದ ಸಹಾಯವನ್ನು ಕೊಡುವುದು ಅವಶ್ಯವಾಗಿದೆ. ಸರಕಾರೀ ತೀರ್ವೆಯಲ್ಲಿ [illegible]ವಾಗಿ ಸಂಕಷ್ಟಗೊಂಡವರಿಗೆ ರಿಯಾಯತಿ ತೋರಿಸದಿದ್ದಲ್ಲಿ ಬಹಳ ಕಷ್ಟವಾಗಬಹುದು. ಈಗಿನ ಹೊಸ ರೋಗಕ್ಕೆ ಹಿಂದಿನ ಮದ್ದಿಗಿಂತ ಹೆಚ್ಚು ಫಲಕಾರಿಯಾದ ಮದ್ದನ್ನು ಶೋಧಿಸಿ ಕೃಷಿ ಇಲಾಖೆಯವರು ತೋಟಗಾರರ ರಕ್ಷಣೆಗೆ ಬರಬೇಕೆಂದು ಕೇಳದಿರಲಾರೆವು. ನಮ್ಮ ಜಿಲ್ಲೆಯ ಅಡಿಕೆಯ ತೋಟಗಾರರ ಪರವಾಗಿ ನಾವು ಸಲಹೆಗಳನ್ನು ಒಕ್ಕೊರಲಿನಿಂದ ಮಾಡದಿರಲಾರೆವು.

ಕಾಂಗ್ರೆಸಿನ ನೈತಿಕ ಬೆಂಬಲವು ಬ್ರಿಟನಿಗೆ ದೊರಕುವುದೇ?

ಅಶಕ್ತ ಅಲ್ಪಸಂಖ್ಯಾಕರ ರಕ್ಷಣೆ ಹೇಗೆ?

ಮಹಾಭಾರತ ಯುದ್ಧದ ಪರಿಣಾಮ

ಗಾಂಧಿಜಿಯವರ ಸಂದೇಶಗಳು!

"ಬ್ರಿಟನು ಭಾರತದ ವಿಷಯ ನ್ಯಾಯವಾಗಿ ನಡೆದಿದ್ದರೆ ಬ್ರಿಟನಿಗೆ ಕಾಂಗ್ರೆಸಿನ ಬೆಂಬಲ ಸಿಗಬಹುದಿತ್ತೆಂದು ಹೇಳಬಹುದು. ನನ್ನ ಗೆಳೆಯನೊಬ್ಬನು ತಪಸ್ಸಿನಿಂದ ಶಕ್ತಿಯನ್ನು ಗಳಿಸಿದ್ದರೆ, ನಾನು ಆ ಶಕ್ತಿಯ ಅಗತ್ಯವುಳ್ಳವನಾಗಿದ್ದರೆ, ಬರಿಯ ಬಾಯಿ ಮಾತಿನ ಕೇಳುವಿಕೆಯಿಂದ ಅದು ನನಗೆ ದೊರಕದು. ನನ್ನಲ್ಲಿ ಅದನ್ನು ತೆಗೆದುಕೊಳ್ಳುವ ಶಕ್ತಿಯಿಲ್ಲದಿದ್ದರೆ, ನನಗೆ ಹೇಗೆ ತಾನೇ ಅದು ದೊರಕೀತು? ನೈತಿಕ ಸಹಾಯವು, ಬರಿಯ ಕೊಡುವಿಕೆಯೆಂಬ ರೀತಿಯಿಂದ ಸಿಗಲಾರದು. ಅದನ್ನು ಯಾರು ಪಡೆಯಲು ಯೋಗ್ಯನೋ ಅವನಿಗೆ ಅದು ತನ್ನಷ್ಟಕ್ಕೇ ಬರುತ್ತದೆ." ಹೀಗೆಂದು ಗಾಂಧಿಜಿಯವರು ಕಾಂಗ್ರೆಸು ಮತ್ತು ಯುದ್ಧ ಎಂಬ ಕುರಿತು ಬರೆಯುತ್ತಾರೆ.

ಅವರ ಲೇಖನದ ಸಾರಾಂಶ ಇಂತಿದೆ:-"ಕಾಂಗ್ರೆಸು ಸತ್ಯ ಅಹಿಂಸೆಗಳ ತಪಸ್ಸಿನಿಂದ ಅಂತಹ ನೈತಿಕ ಶಕ್ತಿಯನ್ನು ಪಡೆದಿದೆ. ಈ ಮಹಾತತ್ವಗಳ ಪಾಲನೆಯಿಂದ ಜಗತ್ತಿನಲ್ಲಿ ಹೆಚ್ಚಿನ ಗೌರವವನ್ನೂ ಹೊಂದಿದೆ. ಬ್ರಿಟನು ತನ್ನ ಕಾರಣವನ್ನು ನ್ಯಾಯವಾಗಿಸಿಕೊಂಡಿದ್ದರೆ ಕಾಂಗ್ರೆಸು ತನ್ನ ಆಶೀರ್ವಾದವನ್ನು ಕೊಡುತ್ತಿತ್ತು. ಕಾಂಗ್ರೆಸಿನ ಆಜ್ಞಾನುವರ್ತಿಗಳಾದ ಜನರು ಬ್ರಿಟನು ನ್ಯಾಯಾವಲಂಬಿಯೆಂದು ನಂಬುತ್ತಿದ್ದರು. ಕಾಂಗ್ರೆಸಿಗೆ ಜನವಾಗಲಿ, ದುಡ್ಡಾಗಲಿ, ಕೊಡಲು ಅದರ ವಶವಿಲ್ಲದಿದ್ದರೂ ಅದರ ನೈತಿಕ ಬೆಂಬಲವೇ ಬ್ರಿಟನಿಗೆ ಮಹತ್ತಾದ ಲಾಭವಾಗುತಿತ್ತು. ಇದು ನನ್ನ ವಿಶ್ವಾಸ. ಆದರೆ ನೈತಿಕ ಸಹಾಯವನ್ನು ಕೊಡುವ ಸಂದರ್ಭವು ಇಂದು ಪರಿಪೂರ್ಣವಾಗಿ ಹೋದಂತೆಯೇ ತೋರುತ್ತದೆ. ಕಾಂಗ್ರೆಸು ನನ್ನ ದಾರಿಯನ್ನು ಅನುಸರಿಸಲು ಒಪ್ಪಲಿಲ್ಲ. ಅದನ್ನು ಒಂದು ಯಂತ್ರವಾಗಿ ಎಣಿಸಬಾರದು. ಸತ್ಯ ಅಹಿಂಸೆಗಳಲ್ಲಿ ಕಾಂಗ್ರೆಸಿಗೆ ಅಚಲ ವಿಶ್ವಾಸವಿದೆ. ಅದರಲ್ಲಿ ಯಾವುದು ಇಲ್ಲವೋ ಅದನ್ನು ಅದು ಉಂಟೆಂದು ಹೇಳಿಲ್ಲ. ಆದ್ದರಿಂದಲೇ ಕಾಂಗ್ರೆಸಿನ ನಿರ್ಣಯವು ಗಂಭೀರವಾದುದು; ಮತ್ತು ಶಕ್ತಿಪೂರ್ಣವಾದುದು.

"ಕಾಂಗ್ರೆಸು ತನ್ನ ಇತ್ತೀಚೆಯ ನಿರ್ಣಯದಲ್ಲಿ ಶರತ್ತಿನ ಮೇಲೆ ಬ್ರಿಟನಿಗೆ ಸಹಾಯ ಕೊಡುವುದಾಗಿ ಹೇಳಿದೆ. ನಾನಿದನ್ನು ನೈತಿಕ ದೃಷ್ಟಿಯಿಂದ ತಪ್ಪೆನ್ನಲಾರೆ. ಏಕೆಂದರೆ ಇದು ಬಹುಜನರ ಮತವಾಗಿದೆ. ಆದರೆ ಈ ನಿರ್ಣಯ ಮಾಡುವುದರಿಂದ ಕಾಂಗ್ರೆಸು ತನ್ನ ಹಿಂದಿನ ಗೌರವವನ್ನು ಕಡಿಮೆ ಮಾಡಿಕೊಂಡಿದೆ. ಹಲವು ಮಂದಿ ಕಾಂಗ್ರೆಸಿನವರು, ಸ್ವಾತಂತ್ರ್ಯವನ್ನು ಅಹಿಂಸಾ ಮೂಲಕವಾಗಿ ಪಡೆಯುವುದರೊಡನೆ, ಅದನ್ನು ಅಹಿಂಸಾ ಮೂಲಕವೇ ಕಾಪಾಡಿಕೊಳ್ಳಬೇಕೆಂಬ ವಿಷಯವನ್ನು ಅಭಿಪ್ರಾಯ ಪಡುವುದಿಲ್ಲ. ಭಾರತವು ಅಹಿಂಸಾ ಮೂಲಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರದಾದರೆ, ಅದು ಅಹಿಂಸಾ ಮೂಲಕ ಬ್ರಿಟನಿನಂತಹ ಪ್ರಬಲ ಶಕ್ತಿಯಿಂದ ಸ್ವಾತಂತ್ರ್ಯವನ್ನು ಪಡೆಯಲಾರದು.

"ನನ್ನ ಅಭಿಪ್ರಾಯದಿಂದ ಅರ್ಜುನನಿಗೆ ಶ್ರೀ ಕೃಷ್ಣನ ಸಹಾಯವೂ ನೀತಿಯ ಸಹಾಯವಲ್ಲ. ಏಕೆಂದರೆ ಕೃಷ್ಣನು ಯುದ್ಧಕಲೆಯಲ್ಲಿ ಪಳಗಿದವ. ದುರ್ಯೋಧನನು ಮೂಢನಾದುದರಿಂದ ಬರಿಯ ಸೇನೆಯನ್ನು ಕೇಳಿದ. ಅರ್ಜುನನು ಯುದ್ಧ ವಿಶಾರದನನ್ನೇ ಪಡೆದ. ಅದರಿಂದ ಪಾಂಡವರು ಶತ್ರು ಹನನ ಮಾಡಿದರು. ವ್ಯಾಸನು ಇದರಿಂದ ವ್ಯಕ್ತಿ ವ್ಯಕ್ತಿಗಳ ಸಮಾಜದ ಚಿತ್ರವನ್ನೇ ತೋರಿಸುತ್ತಾನೆ. ಮಡಿದವರಿಗಿಂತ ಗೆದ್ದವರೂ ಇಲ್ಲಿ ಸುಖಿಗಳಲ್ಲ. ಕೊನೆಗೆ ಏಳು ಮಂದಿಯೇ ಉಳಿದರು. ಅವರ ಅವಸ್ಥೆಯಾದರೂ ಚೆನ್ನಾಗಿರಲಿಲ್ಲ. ಮಹಾತ್ಮನಾದ ಯುಧಿಷ್ಠಿರನೂ ಸುಳ್ಳು ಹೇಳಬೇಕಾಯಿತು. ಇದು ಯುದ್ಧದಿಂದಾಗಿ ಆಗುವ ಅನ್ಯಾಯವು!

"ಯುದ್ಧವೇ ಅನ್ಯಾಯವಾದರೆ ಅದಕ್ಕೆ ನೈತಿಕ ಬೆಂಬಲವನ್ನು ಹೇಗೆ ಕೊಡಬಹುದೆಂಬುದನ್ನೊಂದು ವಿಚಾರ. ಎಲ್ಲಾ ಯುದ್ಧಗಳೂ ಪೂರ್ಣ ತಪ್ಪು ಎಂದೇ ನನ್ನ ವಿಶ್ವಾಸ. 'ಎ'ಯನ್ನು 'ಬಿ'ಯು ಆಕ್ರಮಿಸುತ್ತಾನೆ. ಇಬ್ಬರೂ ಕಾದಾಡುತ್ತಾರೆ, ಹಿಂಸೆ ಮಾಡುವುದರಲ್ಲಿ ಇಬ್ಬರೂ ತಪ್ಪು ಮಾಡುತ್ತಾರೆ. ಆದರೆ ಅದರೊಡನೆ 'ಬಿ'ಯ ಉದ್ದೇಶವು ನ್ಯಾಯವೆಂದು ಆತನಿಗೆ ನೈತಿಕ ಬೆಂಬಲವನ್ನೂ ಆಶೀರ್ವಾದವನ್ನೂ ಕೊಡಬಹುದು."

ಅಶಕ್ತ ಬಹುಸಂಖ್ಯಾಕರ ರಕ್ಷಣೆ?

"ಭಾರತದ ರಕ್ಷಣೆಯು ಅಹಿಂಸೆಯಿಂದ ಆಗಬೇಕೆಂಬ ನಿಮ್ಮ ಪ್ರಯೋಗವು ಮಹತ್ವವಾದುದು. ಗೆದ್ದವನ ಆತ್ಮವು ಸೋತವರ ಪ್ರೇಮದಿಂದ ಪಶ್ಚಾತ್ತಾಪಗೊಂಡು ಪರಿವರ್ತನವಾಗಬಹುದು; ಇಲ್ಲವೇ ಗೆದ್ದು ಮದಾಂಧನಾದವನು ಸೋತವರನ್ನು ಮತ್ತೂ ತುಳಿಯಬಹುದು. ಶಕ್ತಿವಂತನಿಗೆ ತನ್ನ ಸ್ವಾತಂತ್ರ್ಯ ಪಾಲನೆಗೆ ಸೈನ್ಯದ ಸಹಾಯ ಬೇಡ; ಆತನು ಸಾಯುವನಾದರೂ ಬಲಿಕೊಡುವನು; ಆದರೆ ಅಂತವರು ವಿರಲ. ಬಹುಸಂಖ್ಯಾತರಾದ ಅಶಕ್ತರನ್ನು ಅಹಿಂಸಾ ರೀತಿಯಿಂದ ರಕ್ಷಿಸುವುದು ಹೇಗೆ?" ಪ್ರೊಫೆಸರ್ ತ್ರೈಮೂರರು ಮಹಾತ್ಮರನ್ನು ಪ್ರಶ್ನಿಸಿದ್ದಾರೆ. ಅದಕ್ಕೆ ಗಾಂಧಿಜಿಯವರು ಕೊಟ್ಟ ಉತ್ತರದ ಸಾರಾಂಶವು ಹೀಗಿದೆ:

"ಮಾನವನ ಅನ್ಯಾಯಕ್ಕೆ ಬಲಿಬೀಳುವ ಅಲ್ಪ ಸಂಖ್ಯಾಕರು ಎಲ್ಲಿಯೂ ಇದ್ದೇ ಇದ್ದಾರೆ. ನಾಜಿಸಂ ಇದರಿಂದಲೇ ಹುಟ್ಟಿತು. ಆ ಜನಾಂಗವು, ತನ್ನ ನೆರೆಯ ಜನಾಂಗಗಳಿಂದ ಬೇಕುಬೇಕೆಂತಲೇ ತುಳಿಯಲ್ಪಟ್ಟಿತು. ಘೋರ ಅನ್ಯಾಯದಿಂದ ತನ್ನನ್ನು ಉದ್ಧರಿಸಬೇಕೆಂದು ತುಳಿಯಲ್ಪಟ್ಟ ರಾಷ್ಟ್ರವು ಮೊರೆಯಿಟ್ಟಿತು. ಆಗ ಹಿಟ್ಲರನು ಮುಂದಾಳಾಗಿ ಬಂದನು. ಈ ಯುದ್ಧದ ಜಯ ಅಪಜಯಗಳು ಹೇಗೇ ಇದ್ದರೂ, ಇನ್ನು ಮುಂದೆ, ಜರ್ಮನಿಗೆ ಅಪಮಾನವು ಒದಗಲಾರದು. ಪ್ರತೀಕಾರವನ್ನು ಮಾಡಬೇಕೆಂಬುದು ವಿರುದ್ಧ ಮಾರ್ಗ. ಅದರ ಸಲುವಾಗಿಯೇ ಹಿಂಸೆಯೂ ಪ್ರಯೋಗಿಸಲ್ಪಟ್ಟಿತು.

"ಹಿಟ್ಲರನು ಜರ್ಮನರನ್ನು ಮಾತ್ರ ಅಮಾನುಷರನ್ನಾಗಿ ಮಾಡಿದ್ದಾನೆ. ಬ್ರಿಟನು ತನ್ನ ಹಿಂದಿನ ಧೋರಣೆಯನ್ನೇ ಮುಂದುವರಿಸಲಿಚ್ಛಿಸುವ ವರೆಗೂ, ನಾಜೀನೀತಿಯನ್ನೇ ಅದೂ ಅನುಸರಿಸದೆ ಅದಕ್ಕೆ ಅನ್ಯಮಾರ್ಗವಿಲ್ಲ. ಈ ಹಿಂಸಾ ಮಾರ್ಗದ ಕಾರ್ಯಗಳ ಫಲವು ಅಶಕ್ತ ಬಹು ಸಂಖ್ಯಾಕರನ್ನು ಅಮಾನುಷರನ್ನಾಗಿ ಮಾಡುತ್ತದೆಂದು ಇದರಿಂದ ಹೇಳಬೇಕಾಗುತ್ತದೆ.

"ಆದರೆ, ಆ ಅಶಕ್ತ ಬಹು ಸಂಖ್ಯಾಕರೇ ಅಹಿಂಸಾ ಮಾರ್ಗದಲ್ಲಿ ರಕ್ಷಣೆಯನ್ನು ಪಡೆಯುವುದಾದರೆ, ದ್ವೇಷಾಸೂಯೆಗಳಿಗೆ ಆಸ್ಪದವಿಲ್ಲದಂತಾಗುತ್ತದೆ. ಅಹಿಂಸಾ ತತ್ವದಿಂದ ರಕ್ಷಣೆಯಾಗುವ ನೀತಿಯನ್ನನುಸರಿಸುವವರ ನೀತಿಯು ಕಾರ್ಯವು ಸಫಲವಾಗುತ್ತದೆ. ರಕ್ಷಕರು ಅಹಿಂಸಾ ಮಾರ್ಗವನ್ನು ಅನುಸರಿಸುವುದರಿಂದ ರಕ್ಷಣೆಗೊಳಗಾದ ಅಶಕ್ತ ಬಹು ಸಂಖ್ಯಾಕರ ನೈತಿಕ ಬಲವೂ ಹೆಚ್ಚುತ್ತದೆ.

ಅಹಿಂಸಾ ಮಾರ್ಗದಲ್ಲಿರುವ ಕಷ್ಟವೆಂದರೆ ಇದನ್ನು ಅನುಸರಿಸುವ ಕಾರ್ಯರೀತಿಯೇ ಆಗಿದೆ. ಹಿಂಸಾತ್ಮಕ ಸೈನ್ಯಕ್ಕೆ ಸುಲಭವಾಗಿ ಜನರು ಸಿಗುವರು. ಅಹಿಂಸಾತ್ಮಕ ಜನರನ್ನು ಒದಗಿಸಲು ನಾವು ಚೆನ್ನಾಗಿ ಶೋಧಿಸಬೇಕು. ಹಣದಿಂದ ಅಹಿಂಸಾ ರಕ್ಷಕರನ್ನು ಪಡೆಕೊಳ್ಳಲಾಗುವುದಿಲ್ಲ. ಕಳೆದ ಅರ್ಧ ಶತಮಾನಗಳಿಂದ ಈ ವಿಧಾನವನ್ನು ಕಾರ್ಯರೂಪಕ್ಕಿಳಿಸಲು ಯತ್ನಿಸಿದ ನನ್ನ ಕಾರ್ಯದಿಂದ ನಾನು ಈ ವಿಷಯದಲ್ಲಿ ಆಶಾವಾದಿಯಾಗಿದ್ದೇನೆ.

"ಅಶಕ್ತ ಬಹು ಸಂಖ್ಯಾಕರನ್ನು ರಕ್ಷಿಸಲು ಅಹಿಂಸಾ ಮಾರ್ಗವು ಬಹಳ ಫಲಕಾರಿಯಾಗಿದೆ. ಅಗಾಧ ಶಕ್ತಿಯುಳ್ಳ ಅಹಿಂಸೆಯ ಗೂಢವನ್ನರಿಯಲು ನನ್ನ ಅರ್ಧ ಶತಮಾನದ ಪ್ರಯೋಗವೂ ಸಾಲದು. ಅಹಿಂಸೆಯು ಇನ್ನೂ ಕಷ್ಟವಾಗಿ ಕಂಡುಬಂದರೂ ಅದು ಬಹಳ ಸ್ವಾರಸ್ಯಕರವಾಗಿದೆ. ನಾವು ಇನ್ನೂ ಮಾರ್ಗವರಿಯದ ನೀರಿನಲ್ಲಿ ನೌಕೆಯನ್ನಿಳಿಸಿದ್ದೇನೆ; ಅರ್ಧ ತಾಸಿಗೊಮ್ಮೆ ಎಚ್ಚರಗೊಳ್ಳುತ್ತೇನೆ, ಕಷ್ಟಗಳು ಅಧಿಕವಾದಷ್ಟು ಧೈರ್ಯವೂ ಅಧಿಕವಾಗುತ್ತದೆ."

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

ಮರೆಯಬೇಕಾದ ಮನುಷ್ಯ ಹಾಲ್ವೆಲ್!

'ಕಲ್ಕತ್ತಾದ ಕತ್ತಲೆಕೋಣೆ'ಯ ಕತೆ ಕಟ್ಟಿದವ!

ಬಂಗಾಳದ [illegible] ಲಿನ ನ [illegible] ನುವ ನೊದಲು [illegible] ಧಿಕಾರಿಯಾದ ಸುರಾಜುದ್ದೌಲ ನ್ನು ಕರೆದು–ವ್ಯಾಪಾರ ನಿಮಿತ್ತ ಕಲ್ಕತ್ತೆ ಲ್ಲಿ ವಾಸವಾಗಿರುವ ಬ್ರಿಟಿಷರ ಕುರಿತು ಹಳ ಜಾಗರೂಕತೆಯಿಂದ ಇರಬೇ ಂದು ಹೇಳಿದ್ದನು. ಸುರಾಜುದ್ದೌಲನು ೧೯ನೇ ವರ್ಷ ಪ್ರಾಯದಲ್ಲಿಯೇ ಪಟ್ಟ ನ್ನೇರಿದನು. ಅವನನ್ನು ಪದಚ್ಯುತ ನ್ನಾಗಿ ಮಾಡಬೇಕೆಂದು ಅನೇಕ ಒಳ ಂಚುಗಳು ನಡೆದಿದ್ದುವು. ಅದರಲ್ಲಿ ,ಟಿಷರ ಕೈಯೂ ಇರುವುದೆಂದಾಗಿ ಅವ ಗೆ ಸಂದೇಹವುಂಟಾಗಿತ್ತು. ಬ್ರಿಟಿಷರು ಲ್ಕತ್ತದ ವಿಲಿಯಂ ಕೋಟೆಯನ್ನು ಭದ್ರ ಡಿಸಲು ಹವಣಿಸಿದಾಗ ಸುರಾಜು ದ್ದೌಲನ ಸಂದೇಹವು ಮತ್ತಷ್ಟು ಬಲ ಾಗಿ, ಅವನು ಆ ಕೋಟೆಯನ್ನು ಮುತ್ತಿ ನು. ಆಗ ಕೋಟೆಯಲ್ಲಿ ಬ್ರಿಟಿಷರ ಾಕಷ್ಟು ಬಲವಿಲ್ಲದುದರಿಂದ ಅವರು ುರಾಜುದ್ದೌಲನಿಗೆ ಶರಣಾಗತರಾಗಬೇ ಾಯಿತು. ಅವನು ೧೪೬ ಮಂದಿ ಬ್ರಿಟಿ ರನ್ನು ಕೈಸೆರೆ ಹಿಡಿದು ಕೋಟೆಯ ಂದು ಚಿಕ್ಕ ಕೋಣೆಯಲ್ಲಿ ಬಂಧಿಸಿಟ್ಟ ಂದೂ ಮರುದಿನ ೨೩ ಮಂದಿ ಮಾತ್ರ ದುಕಿದ್ದರೆಂದೂ ಇತಿಹಾಸದಲ್ಲಿದೆ ಇದ ್ನೇ ಕಲ್ಕತ್ತೆಯ ಕತ್ತಲೆ ಕೋಣೆಯ ಇತಿ ಾಸವೆಂದು ಹೇಳುವುದು

ಪ್ರಥಮ ಸ್ಮಾರಕ

ಈ ಮುತ್ತಿಗೆಯ ಕಾಲದಲ್ಲಿ ಕೋಟೆ ಯಲ್ಲಿದ್ದ ಜ್ಹೋನ್ ಜೆಫನಿನ ಹೊಲ್ವೆಲ್ ಂಬಾತನು ಮೊತ್ತಮೊದಲು ಕಲ್ಕತ್ತೆಯ ತ್ತಲೆ ಕೋಣೆಯ ಕತೆಯನ್ನು ಇಂಗ್ಲಾಂ ನ ಜನರಿಗೆ ಹೇಳಿದನು ಅವನು ಈ ಟನೆಯ ತರುವಾಯ ಕೌನ್ಸಿಲಿನ ಸದಸ್ಯ ಾಗಿ ಭಾರತಕ್ಕೆ ಬಂದಿದ್ದನು ಅವನು ನ್ನ ಸ್ವಂತ ಖರ್ಚಿನಿಂದ ಕತ್ತಲೆ ಕೋಣೆಯ ಸ್ಮಾರಕವನ್ನು ಕಟ್ಟಿಸಿದ್ದನು. ೧೮೨೧ರ ಸುಮಾರಿಗೆ ಸರಕಾರವು ಈ ಸ್ಮಾರಕವನ್ನು ಕೆಡವಿಹಾಕಿ, ಸರ್ ಎಶ್ಲಿ ಡನರ ಪ್ರತಿಮೆಯನ್ನು ಪ್ರತಿಷ್ಠಿಸಿತು. ಆದರೆ ಲಾರ್ಡ ಕರ್ಜನರು ಭಾರತದ ವೈಸರಾಯರಾಗಿ ಬಂದಾಗ, ಅವರು ತಮ್ಮ ಸ್ವಂತ ಖರ್ಚಿನಿಂದಲೇ, ಆ ಘಟನೆ ನಡೆದದ್ದೆಂಬ ಸ್ಥಳದಲ್ಲಿ ಪುನಃ ಒಂದು ಸ್ಮಾರಕವನ್ನು ಕಟ್ಟಿಸಿದರು, ಈ ಸ್ಮಾರ ಕದ ಅನಾವರಣ ಸಮಾರಂಭವು ಬಹು ವಿಜೃಂಭಣೆಯಿಂದ ನಡೆದಿತ್ತು. ಮತ್ತು ಆ ಸಂದರ್ಭದಲ್ಲಿ ಸುರಾಜುದ್ದೌಲನ ಅತ್ಯಾಚಾರಗಳ ಕುರಿತು ಮನಸ್ಸನ್ನು ಉದ್ರೇಕಿಸುವ ಅಧಿಕಾರಿಗಳ ಭಾಷಣ ಗಳಾಗಿದ್ದುವು.

ಸುಳ್ಳು ಕತೆಯ ವಿರೋಧ

ಆದರೆ ಸುರಾಜುದ್ದೌಲನು ಒಂದು ಸಣ್ಣ ಕೋಣೆಯಲ್ಲಿ ೧೪೬ ಮಂದಿ ಬ್ರಿಟಿ ಷರನ್ನು ಬಂಧಿಸಿದ್ದನೆಂದೂ, ಅವರಲ್ಲಿ ೧೨೩ ಮಂದಿ ಉಸಿರುಕಟ್ಟಿ ಸತ್ತರೆಂದೂ ಹೊಲ್ವೆಲ್ಲನು ಪ್ರಚಾರಮಾಡಿದ ಕತೆಯ [illegible] [illegible] ಸಂದೇಹ [illegible] ಪ್ರಚಾರದ ಸತ್ಯವಾಗಿರು [illegible]

ಬಂಧ ದೊಡ್ಡ ಕಲಂಕವಾಗುತಿತ್ತು. ಆದರೆ ಅದರಲ್ಲಿ ಎಳ್ಳಷ್ಟೂ ಸತ್ಯಾಂಶ ವಿದ್ದಿರಲಿಲ್ಲವಾದ್ದರಿಂದ ಈ ಸ್ಮಾರಕವನ್ನು ತೆಗೆದುಹಾಕಲಿಕ್ಕೆ ಮುಸಲ್ಮಾನರೇ ಅನೇಕ ಬಾರಿ ಪ್ರಯತ್ನಿಸಿದ್ದರು

ಸತ್ಯಾಗ್ರಹ ಮತ್ತು ಅನಂತರ

ಆದರೆ ಸ್ವಲ್ಪ ಸಮಯದ ಮೊದಲ ಶ್ರೀ ಸುಭಾಸಚಂದ್ರ ಬೋಸರೇ ಧುರೀ ಣರಾಗಿ, ಈ ಸ್ಮಾರಕವನ್ನು ತೆಗೆದುಹಾಕ ಲಿಕ್ಕೆ ಸತ್ಯಾಗ್ರಹ ಆಂದೋಲನವನ್ನು ಹೂಡಿದರು ಇದರಲ್ಲಿ ೨೦೦ಕ್ಕೆ ಮೇ ಲ್ಪಟ್ಟು ಸತ್ಯಾಗ್ರಹಿಗಳು ಬಂಧಿತರಾದರು ಈಗ ಬಂಗಾಳದಲ್ಲಿ ಅಧಿಕಾರದಲ್ಲಿರು ವುದು ಮುಸ್ಲಿಂ ಲೀಗ್ ಮಂತ್ರಿಮಂಡಲ ವಾದರೂ, ಹೊಲ್ವೆಲ್ ಸ್ಮಾರಕವು ಮುಸಲ್ಮಾನ ಸಮಾಜದ ಕೀರ್ತಿಗೆ ಕಲಂಕ ವನ್ನು ತರುವುದಿದ್ದರೂ–ಅದು ತಾನಾಗಿ ಈ ಸ್ಮಾರಕವನ್ನು ತೆಗೆದುಹಾಕಲಿಕ್ಕೆ ಪ್ರಯತ್ನಿಸದೆ ಇದ್ದುದು ಮಾತ್ರವಲ್ಲ, ಇತ ರರ ಆ ಪ್ರಯತ್ನವನ್ನು ಕೂಡ ವಿರೋಧಿ ಸಿದ್ದು ತುಂಬಾ ಆಶ್ಚರ್ಯಕರವಾಗಿತ್ತು ಮಂತ್ರಿಮಂಡಲದ ವರ್ತನವು ಅದರ ಸಮಾಜ ಹಿತಭಾವನೆಯ ಕುರಿತು ಸಂದೇ ಹವನ್ನುಂಟುಮಾಡುತ್ತದೆ

ಸುಳ್ಳು ಪ್ರಚಾರದ ಕಾರಣ

ಸುರಾಜುದ್ದೌಲನ ಸೇನೆಯನ್ನು ಎದುರಿಸ ಲಾಗದ ಬ್ರಿಟಿಷ ಸಿಪಾಯಿಗಳು ಕೋ ಟೆಯಿಂದ ನದೀ ಮಾರ್ಗವಾಗಿ ಬೇರೆ ಕಡೆ ಗೆ ಪಲಾಯನ ಮಾಡಿದ್ದರು ಇದ ಮ ದ್ರಾಸಿಗೆ ತಿಳಿದು ಅಲ್ಲಿಯವರು ಸುರಾಜ ದ್ದೌಲನೊಡನೆ ಒಡಂಬಡಿಕೆ ಮಾಡಿಕೊಳ್ಳ ಲಿಕ್ಕೆ ರೊಬರ್ಟ ಕ್ಲೈವನನ್ನು ಕಲ್ಕತ್ತೆಗೆ ಕ ಳುಹಿಸಿದ್ದರು ಕತ್ತಲೆಕೋಣೆಯ ಘಟನೆ ಯು ನಿಜವಾಗಿಯೂ ನಡೆದಿತ್ತಾದರೆ ಆ ಕಾಲದ ಸರಕಾರಿ ಕಾಗದಪತ್ರ ಮತ್ತು ದಾಖಲೆಗಳಲ್ಲಿ ಅದರ ಉಲ್ಲೇಖವು ಕಂಡು ಬರುತಿತ್ತು ಆದರೆ ಅದು ಕಂಡುಬರುವು ದಿಲ್ಲ ಸತ್ಯವೇನೆಂದರೆ–ಸುರಾಜುದ್ದೌಲನು ವಿಲಿಯಂ ಕೋಟೆಯನ್ನು ಮುತ್ತಿದ್ದಾಗ ಇತರ ಬ್ರಿಟಿಷರೊಂದಿಗೆ ಹೊಲ್ವೆಲ್ಲನಿಗೆ ಪಲಾಯನಮಾಡಲು ಅನುಕೂಲವಾಗ ಲಿಲ್ಲ ಅವನು ಕಲ್ಕತ್ತೆಗೆ ಮರಳಬೇಕಾ ಯಿತು ಸುರಾಜುದ್ದೌಲನು ಅವನನ್ನು ಸನ್ಮಾನಪೂರ್ವಕ ಬರಮಾಡಿಸಿದ್ದನು. ಆ ಮೇಲೆ ಹೊಲ್ವೆಲ್ಲನು ಸುರಾಜುದ್ದೌಲನ ಪರಮ ಸ್ನೇಹಿತನಂತೆ ವರ್ತಿಸುತಿದ್ದನು ಆದರೆ ಮುತ್ತಿಗೆಯಲ್ಲಿ ಬ್ರಿಟಿಷರ ಸೋತ ಪಲಾಯನ ಮಾಡಿದ ಪ್ರತೀಕಾರವನ್ನು ತೆಗೆದುಕೊಳ್ಳಲಿಕ್ಕೆ ಅವನು ಒಳಗಿಂದೊ ಳಗೆ ಸವಯ ಸಾಧಿಸಿದ್ದನು. ಇಂಗ್ಲೆಂಡಿ ನಲ್ಲಿದ್ದ ಬ್ರಿಟಿಷರ ದೃಷ್ಟಿಯ ನ್ನು ಭಾರತದ ಕಡೆಗೆ ಸೆಳೆದ ಹುರಕ ಸೆದ [illegible] ಕೊಳ್ಳುವುದ ಸಾಧ್ಯವ [illegible] ದ [illegible] ರಿಂದ ಅವನ [illegible] ಸಹಿ [illegible] ಲಿಕ್ಕಾಗಿ ಹೊಲ್ವೆಲ್ಲ [illegible] ಕತ್ತಲೆಕೋಣೆಯ ಸುಳ್ಳು ಕತೆಯನ್ನು ಕಲ್ಪಿಸಿ ಅದಕ್ಕೆ ಸತ್ಯದ ಬಣ್ಣ ಕೊಟ್ಟು ಇಂಗ್ಲಾಂಡಿನಲ್ಲಿ ಪ್ರಚಾರಮಾಡಿದನು ಅಲ್ಲಿ ಈ ಕತೆ [illegible] ಂದ [illegible] ಸಿದ್ಧ ಪತ್ರಿಕೆಯಲ್ಲಿ ಮೊದಲು ಪ್ರಕಟ [illegible] ಸತ್ಯಾಸತ್ಯವನ್ನು [illegible] ಜಗೆ ಹೋಗದೆ, [illegible] ಕತೆಯನ್ನು ನಿಜವೆ [illegible]

ಸುರಾಜುದ್ದೌ [illegible] ನಾದ [illegible] ಹ [illegible] ಇತಿಹಾಸಕನು ತನ್ನ ಗ್ರಂಥದಲ್ಲಿ ಎಲ್ಲಿಯೂ ಕತ್ತಲೆಕೋಣೆಯ ವಿ [illegible] ವನ್ನು ಬರೆದಿಲ್ಲ. ಆ ಘಟನೆಯು ನಿಜ ಕ್ಕೂ ನಡೆದಿತ್ತಾದರೆ ಅವನು ಅದನ್ನು ಉಲ್ಲೇಖಿಸಿಯೇ ಬಿಡುತಿದ್ದ. ಈ ಘಟ ನೆಯು ಹೊಲ್ವೆಲ್ಲನ ಸ್ವಕಪೋಲ ಕಲ್ಪಿತ ವೆಂಬುದಕ್ಕೆ ಇನ್ನೊಂದು ಆಧಾರವೂ ಇದೆ. ಹೊಲ್ವೆಲ್ಲನ ಕೃತ್ಯವು ಯಾ ರಿಗೂ ಸೇರುತಿದ್ದಿಲ್ಲ ಕಲ್ಕತ್ತೆಯ ಕೌನ್ಸಿ ಲು ಅವನ ವರ್ತನವನ್ನು ಕಟೂಕ್ತಿಗ ಳಿಂದ ಖಂಡಿಸಿದೆ ಸುರಾಜುದ್ದೌಲನ ಕೀರ್ತಿಗೆ ಕಲಂಕವನ್ನು ತರುವುದಕ್ಕಾ ಗಿಯೇ ಅವನು ಈ ಕತೆಯನ್ನು ಕಲ್ಪಿ ಸಿದ್ದನೆಂದೂ, ಬದುಕಿರುವ ಬ್ರಿಟಿಷರು ಈ ದುರಂತದಲ್ಲಿ ಸತ್ತಿದ್ದರೆಂದು ಸುಳ್ಳು ವಾರ್ತೆ ಹರಡಿಸಿದ್ದನೆಂದೂ ಆ ಕಾಲದ ವರದಿಗಳು ಹೇಳುತ್ತವೆ ಆದುದ್ದ ರಿಂದ ಕಲ್ಕತ್ತೆಯ ಕತ್ತಲೆಕೋಣೆಯು ಈ ಹೊಲ್ವೆಲ್ಲನ ಮನಸ್ಸಿನಲ್ಲಿ ಮಾತ್ರ ಇತ್ತು ಈ ಹೊಲ್ವೆಲ್ಲನನ್ನು ಅಮರ ನನ್ನಾಗಿ ಮಾಡುವುದಕ್ಕೋಸ್ಕರವೇ ಲಾರ್ಡ ಕರ್ಜನರು ತಮ್ಮ ಸ್ವಂತ ಖರ್ಚಿ ನಿಂದ ಈಗಿರುವ ಸ್ಮಾರಕವನ್ನು ಕಟ್ಟುವ ಉದಾರತೆಯ ನ್ನು ತೋರಿಸಿದ್ದರು

ಸರಕಾರದ ನಿರ್ಧಾರ

ಒ ಗಾಳ ಸರಕಾರವು ಈ ಸ್ಮಾರಕವ ನ್ನು ಈಗಿನ ಸ್ಥಾನದಿಂದ ವರ್ಗಾಯಿಸಿ ಎಲ್ಲಿಯಾದರೂ ಒಂದು ಪ್ರದರ್ಶನಾಲಯ ದಲ್ಲಿಡುವ ನಿರ್ಧಾರಮಾಡಿ, ಅದಕ್ಕೀಗ [illegible] ಇಂಡಿಯಾ ಸರಕಾರದ ಸಮ್ಮತಿ ನಿರೀಕ್ಷಣೆ ಯನ್ನು [illegible] ಕೊಂಡಿದೆ ಹೊಲ್ವೆಲ್ಲ ಸ್ಮಾರ ಕವು [illegible] ಪುರ [illegible] ಜೀವನದ ಸ್ಮಾರಕ [illegible] ಆಗಿರುವುದಿಲ್ಲ ಆದರೆ ಅದ [illegible] ಬೇಕಾದ ಒಂದು ಇ [illegible] ನೆನಪನ್ನು ಮಾಡುವಂಥಹದ್ದಾ [illegible] ದೆ [illegible] ದ ಎಷ್ಟು ಬೇಗ ಆ ಸ್ಮಾರಕವು ಕಲ್ಕತ್ತೆಯ ರಾಜಬೀದಿಗ ಳಿಂದ ಮರೆಯಾಗಿ ದೂರದಲ್ಲಿ ಎಲ್ಲಿಯಾ ದರೂ ಬಿದ್ದಿರುತ್ತದೋ ಅಷ್ಟಕ್ಕೆ ವ್ಯರ್ಥ ಉದ್ವೇಗವು ಶೀಘ್ರ ಶಮನವಾಗುವುದು

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂ ಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತ ಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವ ಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/-
+
ಸರ್ವಸಾಧಾರಣ ಬೋನಸ್ ರೂ 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್–ಬೊಂಬಾಯಿ
ಅಥವಾ

ಎನ್. ನಾಯಕ್
ಆರ್ಗನೈಸರ್
[illegible] ಬೀದಿ, ಮಂಗಳೂರು.

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/6 ಕನ್ನಿಂಗ್ಹ್ಯಾಮ್ ಬೀಚ್ ಮದ್ರಾಸು

ಈ ವಾರದ ಕಥೆ:

ಪ್ರೇಮದರ್ಶನ!

ಕತೆಗಾರರು ಶ್ರೀ ಕೆ. ಎಸ್ ಶೆಟ್ಟಿ, ಕಾರ್ಕಳ

ಕೈಯಲ್ಲಿ ಹೂ ಮಾಲೆ ಹಿಡಿದು, ಊರಿಗೆ ಊರೇ, ಯಮುನಾ ತೀರದ ಕಡೆಗೆ, ಅವಸರವಸರದಿಂದ ಓಡಿದು ಬರುತ್ತಾ ಇತ್ತು. ಭಗವಾನ್ ಬುದ್ಧನು ಅಲ್ಲಿ, ಒಂದು ಮರದ ನೆಳಲಲ್ಲಿ ಬಂದು ತಮ್ಮ ಠಾಣೆ ಮಾಡಿಕೊಂಡಿದ್ದರು. ಅವರ ನಾಲ್ಕೂ ಸುತ್ತ, ಶಿಷ್ಯವರ್ಯರು ಅವರನ್ನು ಬಳಸಿಕೊಂಡು ನಿಂತಿದ್ದರು. ಬುದ್ಧದೇವನ ಕರುಣಾಮಯ ನೇತ್ರಗಳಿಂದ ಹೊರಸೂಸುವ ಉಜ್ವಲ ಕಾಂತಿ, ಮನಸ್ಸನ್ನು ಲೋಭಿಸುವ ಸುಂದರ ನಸುನಗು, ಮೂರ್ಖನಾಗೂ ಕಲ್ಲಿಗಿಂತಲೂ ಕಠಿನವಾದ ಎದೆಗಾರನನ್ನು ತನ್ನೆಡೆಗೆ ಆಕರ್ಷಿಸುವಂತಿತ್ತು. ಹೀಗಿರುವಾಗ ಯುವಕ ಉಪಗುಪ್ತನು ಅವರ ಕಡೆಗೆ ಆಕರ್ಷಿತನಾದುದರಲ್ಲಿ ಏನೂ ಆಶ್ಚರ್ಯವಿರಲಿಲ್ಲ.

ಮಥುರೆಯಿಂದ ಬಂದವರಲ್ಲಿ ಉಪಗುಪ್ತನೂ ಒಬ್ಬನು. ಜನರು ಬಂದು ಬಂದು, ಬುದ್ಧನ ಚರಣಕಮಲಗಳಲ್ಲಿ ತಮ್ಮ ಭಕ್ತಿಯ ಕಾಣಿಕೆಯನ್ನು ಅರ್ಪಿಸುತ್ತ ಇದ್ದರು. ಉಪಗುಪ್ತನೂ ಅವರ ಅಡಿದಾವರೆಗಳಿಗೆ ಬಿದ್ದು—"ಗುರುದೇವ! ನನ್ನನ್ನು ತಮ್ಮ ಶಿಷ್ಯಕೋಟಿಯಲ್ಲಿ ಒಬ್ಬನನ್ನಾಗಿ ಮಾಡಿ ಅನುಗ್ರಹಿಸಬೇಕು" ಎಂದನು. ಬುದ್ಧನು ನಸುನಕ್ಕು ಅವನನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿದನು.

ಬಂದವರು ಮರಳುತ್ತ ಮಧ್ಯರಾತ್ರಿ ಕಳೆದಿದ್ದಿತು. ನಾಲ್ಕೂ ಕಡೆಗಳಲ್ಲಿ ಕಗ್ಗತ್ತಲೆಯು ಹರಡಿತ್ತು. ಎಲ್ಲೆಲ್ಲಿಯೂ ನಿಶ್ಶಬ್ದ, ನೀರವ! ಬುದ್ಧನು ಉಪಗುಪ್ತನನ್ನು ಗಾಢವಾಗಿ ಆಲಿಂಗಿಸಿ— "ವತ್ಸ! ನಿನ್ನನ್ನು ಶಿಷ್ಯನಾಗಿ ಮಾಡಲಿಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೂ ಈಗ ಪ್ರಪಂಚಾನುಭವವಿಲ್ಲದ ಯುವಕನಾಗಿದ್ದೀಯಾ? ಕಾಮ ಕ್ರೋಧಾದಿಗಳನ್ನು ಗೆದ್ದುಕೊಂಡ ಹೊರತು ಜಗತ್ತಿನಲ್ಲಿ ಹೃದಯ ಮನಸ್ಸುಗಳಿಗೆ ಶಾಂತಿ ದೊರೆಯದು. ಇಂದ್ರಿಯಗಳನ್ನು ನಿಗ್ರಹಿಸಿ, ಆ ಮೇಲೆ ಭಿಕ್ಷುಕನಾಗು. ಮೂರು ವರ್ಷಗಳ ಅನಂತರ, ಇದೇ ದಿನ, ಇದೇ ಸ್ಥಳದಲ್ಲಿ ನೀನು ನನ್ನನ್ನು ಕಾಣುವಿ" ಹೀಗೆ ಹೇಳಿ ಬುದ್ಧದೇವನವನನ್ನು ಆಶೀರ್ವದಿಸಿ ಬೀಳ್ಕೊಟ್ಟನು.

ವಸಂತಕಾಲ. ಶುಭ್ರ ಬೆಳದಿಂಗಳಿನಿಂದ ರಾಜಮಾರ್ಗಗಳು ಹಿಟ್ಟುಚೆಲ್ಲಿದಂತೆ ಶೋಭಾಯಮಾನವಾಗಿದ್ದುವು. ಜನರು ಅಲ್ಲಲ್ಲಿ ಹೂತೋಟಗಳಲ್ಲಿ ಕೂತು, ಸರಸಸಲ್ಲಾಪದೊಂದಿಗೆ, ಸುಗಂಧಪೂರಿತ ಮಂದಮಾರುತನನ್ನು ಸೇವಿಸುತ್ತಿದ್ದರು. ಮಾಮರಗಳ ಮೇಲೆ ಕೋಗಿಲೆಗಳು ಮಧುರ ಕಲಕಂಠದಿಂದ ಪ್ರೇಮಗಾನಗಳನ್ನು ಹಾಡುತ್ತಿದ್ದುವು. ಇಂತಿರುವ ಕಾಲದಲ್ಲಿಯೂ ಭಿಕ್ಷುಕ ಉಪಗುಪ್ತನ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಅವನು ಚಂಚಲಚಿತ್ತನಾಗಿ, ಆಕಾಶದಲ್ಲಿ ಚಮಕಿಸುತ್ತಿರುವ ನಕ್ಷತ್ರ ಮಾಲೆಗಳನ್ನು ನೋಡುತ್ತ ಹೋಗುತ್ತಿದ್ದ.

ಒಮ್ಮಿಂದೊಮ್ಮೆಗೆ ಆ ಮನೆಯ ಬಾಗಿಲು ತೆರೆಯಿತು. ಒಳಗಿನಿಂದ ಕಿಲಕಿಲನೆ ನಗುವ ಶಬ್ದವು ಕೇಳಿಸಿತು. ಉಪಗುಪ್ತ ಹಿಂದಿರುಗಿ ನೋಡಿದ. ಒಬ್ಬ ಸುಂದರ ಯುವತಿಯು ಕೈಹಿಡಿದು ಕುಲುಕಿಸುತ್ತ ಅವನನ್ನು ಪ್ರೇಮದಿಂದ ಎಳೆದಾಡ ತೊಡಗಿದಳು. ಯುವತಿಯ ಕರಸ್ಪರ್ಶದಿಂದ ಉಪಗುಪ್ತನ ರೋಮ ಕೂಪಗಳ ಎದ್ದು ನಿಂತವು. ಅವನು—"ತಾಯಿ, ನನ್ನನ್ನು ಕ್ಷಮಿಸು" ಎನ್ನುವದರಲ್ಲಿದ್ದ. ಆದರೆ ಬಾಯೊಳಗಿಂದ ಮಾತುಗಳು ಹೊರಡಲಿಲ್ಲ. ಅವಳ ಸೌಂದರ್ಯವನ್ನು ನೋಡಿ ಅವನು ಚಕಿತನಾದ. ಅವಳೂ ಅವನ ರೂಪರಾಶಿಯನ್ನು ನೋಡಿ ಮುಗ್ಧಳಾಗಿದ್ದಳು. 'ಪ್ರಭೂ! ಕ್ಷಮಿಸಬೇಕು. ಈ ನನ್ನ ಒಡವೆಯ ಮನೆಗೆ ಬರಬೇಕು. ತಮ್ಮಗಳ ಆದರ ಸತ್ಕಾರ ಮಾಡಿ ಕೃತಾರ್ಥಳಾಗುವೆನು' ಎಂದು ಹೇಳುತ್ತ ಪ್ರತ್ಯುತ್ತರದ ನಿರೀಕ್ಷಣೆಯನ್ನೂ ಮಾಡದೆ, ಅವಳು ಅವನನ್ನು ಒಳಗೆ ಕರಕೊಂಡು ಹೋದಳು.

ಅಲ್ಲಿ, ಒಳಗೆ, ಹಲವು ಮಂದಿ ಯುವಕರು ಸುರಾಪಾನದಿಂದ ಮತ್ತರಾಗಿ ನೆಲದ ಮೇಲೆ ಬಿದ್ದುಕೊಂಡಿದ್ದರು. ಕೆಲವರು ಕಾರಣವಿಲ್ಲದೆ ನಗುತ್ತಿದ್ದರು. ಕೆಲವರು ಉನ್ಮತ್ತರಂತೆ ವರ್ತಿಸುತ್ತಿದ್ದರು. ಅವರನ್ನು ನೋಡಿ ಅವಳು ಗಂಭೀರಳಾಗಿ— 'ಈಗ ನೀವೆಲ್ಲ ಹೊರಗೆ ಹೊರಟು ಹೋಗಿ. ಈ ಹೊತ್ತಿಗಿಂದ ನಾನೀ ಭಿಕ್ಷುಕನನ್ನು ನನ್ನ ಹೃದಯ ದೊಡೆಯನನ್ನಾಗಿ ಮಾಡಿಕೊಂಡಿರುವೆನು. ಇನ್ನು ನೀವು ಇಲ್ಲಿರಬೇಡಿ' ಎಂದಳು. ಅದನ್ನು ಕೇಳಿ ಅವರು ನಕ್ಕು ನೆಲದ ಮೇಲೆ ಹೊರಳಿದರು. ಅವರಲ್ಲಿ ಒಬ್ಬನು— ಮನೋಹರಿ! ಈ ಭಿಕ್ಷುಕನಿಂದ ನಿನಗೆ ಯಾವ ದೇಹಸುಖವು ದೊರೆಕೀತು? ಅವನು ನಿನಗೆ ಮೋಕ್ಷಮಾರ್ಗವನ್ನು ತೋರಿಸಬಹುದು, ಅಥವಾ ಜಪವಿಧಾನವನ್ನು ತಿಳಿಸಬಹುದು. ಕಾಮದೇವನ ಲೀಲಾವಿನೋದಗಳು ಇವನಿಗೆ ಗೊತ್ತಿಲ್ಲ. ನನ್ನನ್ನು ಬಿಟ್ಟು, ಯಾರು ನಿನಗೆ ಸುಖ ಕೊಡಬಹುದು'? ಎಂದನು.

ಈ ಮಾತುಗಳನ್ನು ಮನೋಹರಿಯ ಕಣ್ಣುಗಳು ಕೆಂಪಗಾದುವು. ಚಾಕರ ದೇವದತ್ತನಿಗೆ ಹೇಳಿ, ಅವಳು ಅವರನ್ನು ಕ್ಷಣಮಾತ್ರದಲ್ಲಿ ಹೊರದೂಡಿಸಿದಳು.

ತನ್ನನ್ನು ಎಳೆದು ಎಳೆದು ಒಳಗೆ ಕರತಂದವಳು ಒಬ್ಬ ವೇಶ್ಯೆ ಎಂದು, ಈಗ ಉಪಗುಪ್ತನಿಗೆ ಬೋಧೆಯಾಯಿತು. ಗುರುದೇವನ ಮಾತುಗಳು ಅವನ ಸ್ಮರಣೆಗೆ ಬಂದವು. ಅವಳ ಆಲಿಂಗನದಿಂದ ಅವನು ತನ್ನನ್ನು ಸರಕ್ಕನೆ ಬಿಡಿಸಿಕೊಂಡನು. ಮನಸ್ಸಿನಲ್ಲಿ ಬಹಳ ಪಶ್ಚಾತ್ತಾಪವಾಗಿತ್ತು. ಅವಳಿಗೆ ಎಲ್ಲಿಯಾದರೂ ನೋವಾಗಿರಬಹುದೇ ಎಂದು ದುಃಖವೂ ಆಗಿತ್ತು. ಅವನು ಗದ್ಗದನಾಗಿ ಹೇಳಿದ— 'ಮನೋಹರಿ! ನಾನು ಧರ್ಮಭ್ರಷ್ಟನಾದೆ. ನನ್ನನ್ನು ಬಿಟ್ಟುಬಿಡು.' ಮಾತು ಕೇಳಿ ಮನೋಹರಿ ಮುಗುಳು ನಕ್ಕಳು. ಹೇಳಿದಳು—'ಭಿಕ್ಷುಕ! ನೀನೇ ನನ್ನ ಮೇಲೆ ಮೋಹನಮಂತ್ರವನ್ನು ಊದಿದೆ. ನನಗೆ ನಿನ್ನ ಮೇಲೆ ಏನು ಅಧಿಕಾರ? ನನ್ನನ್ನು ಕಾಪಾಡುವವನು ನೀನೇ.'

'ಮನೋಹರಿ! ನಿನ್ನ ಸೌಂದರ್ಯಕ್ಕೆ ನಾನು ಸೋತಿರುವದು ನಿಜ. ಆದರೆ, ಮನೋಹರಿ! ಸೌಂದರ್ಯವು ಅನಿತ್ಯವಾದ, ಸೌಂದರ್ಯದ ಮೇಲಿನ ಮೋಹವೂ ಅನಿತ್ಯವಾದ್ದು. ನಿಜ ಪ್ರೇಮದ ಹೊತ್ತು ಇನ್ನೂ ಬಂದಿಲ್ಲ. ಸರಿಯಾದ ಸಮಯ ಬಂದೊದಗುವ ತನಕ ನೀನು ಶಾಂತಳಾಗಿರು' ಹೀಗೆ ಹೇಳಿ ಉಪಗುಪ್ತನು ಅಲ್ಲಿಂದ ಎಲ್ಲಿಗೋ ಹೊರಟು ಹೋದನು.

ಬಹಳ ದಿನಗಳ ತನಕ ಧರ್ಮಾಧರ್ಮದ ಯುದ್ಧವು ಉಪಗುಪ್ತನ ಹೃದಯಾಂಗಣದಲ್ಲಿ ಆಗುತ್ತಲೇ ಇತ್ತು. ಎಷ್ಟು ದಿನಗಳು ಕಳೆದರೂ ಮನೋಹರಿ ಸುಂದರ ಮುಖಭಾವವನ್ನು ಮರೆಯುವದು ಅವನಿಂದ ಸಾಧ್ಯವಾಗಲಿಲ್ಲ.

ಶ್ರಾವಣ ತಿಂಗಳಾಗಿತ್ತು. ಅಂಧಕಾರ ತುಂಬಿತ್ತು. ಆಕಾಶದಲ್ಲಿ ಮೋಡಗಳು ಚದರಿದ್ದುವು. ಆಗಾಗ ಮಳೆ ಬರುತ್ತಿತ್ತು. ಪ್ರಕೃತಿ ದೇವಿಯೂ ದುಃಖಿತಳಾಗಿ ಕಣ್ಣೀರು ಸುರಿಯುತ್ತಿರುವಳೋ ಎಂದು ಭಾಸವಾಗುತ್ತಿತ್ತು. ಜೋರಾಗಿ ಬಿರುಗಾಳಿ ಬೀಸುತ್ತಿತ್ತು. ಉಪಗುಪ್ತನ ಮನಸ್ಸಿನಲ್ಲಿಯೂ, ಹೀಗೆ ಬಿರುಗಾಳಿಗಳು ಎದ್ದಿದ್ದುವು. ಅವನ ಅಂಧಕಾರಮಯ ಹೃದಯದಲ್ಲಿ ಮನೋಹರಿಯ ಸುಂದರ ರೂಪು ಒಂದು ಉಜ್ವಲ ರೇಖೆಯನ್ನು ಎಳೆದಂತಾಯಿತು. ಅವಳು ಉಪಗುಪ್ತನನ್ನು ಕರೆಕರೆದು ತನ್ನೆಡೆಗೆ ಆಕರ್ಷಿಸುತ್ತಿರುವಂತೆ ತೋರುತಿತ್ತು. ಮನೋಹರಿಯ ವಿಯೋಗವು ಉಪಗುಪ್ತನಿಗೆ ಅಸಹನೀಯವಾಯಿತು. ಆಗಲೇ ಹೋಗಿ ಅವಳನ್ನು ಕಾಣುವೆನೆಂದು ಅವನು ನಿಶ್ಚಯಿಸಿಕೊಂಡನು.

ಗಾಳಿ, ಮಳೆ, ಚಳಿ ಯಾವುದನ್ನೂ ಲಕ್ಷಿಸದೆ, ಅವನು ಸ್ವಲ್ಪವೇ ದೂರ ಹೋಗಿದ್ದ. ಅಷ್ಟರಲ್ಲಿ ಒಮ್ಮಿಂದೊಮ್ಮೆಗೆ ಮಿಂಚು ಮಿಂಚಿತು. ಗುಡುಗು ಗುಡುಗಿತು. ಈ ಕ್ಷಣಿಕ ಪ್ರಕಾಶದಲ್ಲಿ ಉಪಗುಪ್ತನಿಗೆ ಒಂದು ಅಲೌಕಿಕ ಜ್ಯೋತಿಯ ದರ್ಶನವಾಯಿತು. ಸಹಸಾ ಅವನ ಚರ್ಮಚಕ್ಷುಗಳು ಮುಚ್ಚಿದುವು. ಅಂತರ್ನೇತ್ರಗಳು ತೆರೆದುವು. ಕಾಮಲೋಲುಪತೆಯ ಅಗ್ನಿಯು ನಂದಿಹೋಯಿತು. ಅಲ್ಲಿ ಪವಿತ್ರ ಪ್ರೇಮದ ಉದಯವಾಯಿತು. ಉಪಗುಪ್ತನು ಎಂದೆಂದಿಗೂ ಶುದ್ಧನಾದನು. ಆದರೆ ಅಂಧಕಾರದಿಂದ ತುಂಬಿದ್ದ ಅವನ ಹೃದಯವು ಸದಾಕಾಲಕ್ಕೂ ಪ್ರಕಾಶಿತವಾಯಿತು. ಅವನು ಬಿದ್ದು ಏಳುತ್ತ ಮುಂದು ಮುಂದಕ್ಕೆ ನಡೆದನು. ಅವನ ನಡಿಗೆ ಮೆಲ್ಲಗಾಯಿತು. ಹೃದಯದ ಬಿರುಗಾಳಿಯು ಅಲ್ಲಿಗಲ್ಲಿಗೆ ಶಾಂತವಾಯಿತು, ಮನಸ್ಸಿನ ಕೊಳೆಯು ದೂರವಾಯಿತು.

ಮೆಲ್ಲಮೆಲ್ಲಗೆ ನಡೆಯುತ್ತ ಕಾಲಡಿಯಲ್ಲಿ ಏನೋ ಬಿದ್ದಿರುವಂತೆ ತೋರಿ, ಉಪಗುಪ್ತನು ಚಕಿತನಾದನು. ಮುಟ್ಟಿ ನೋಡಿದ. ಒಬ್ಬ ಸ್ತ್ರೀಯ ಶರೀರವಾಗಿತ್ತು. ಅವಳು ಮೂರ್ಛಿತೆಯಾಗಿ ದಾರಿ ಮೇಲೆ ಬಿದ್ದಿದ್ದಳು. ಅವನು ಅವಳನ್ನು ತನ್ನ ತೊಡೆಯ ಮೇಲೆ ತೆಗೆದುಕೊಂಡು ಸೇವೆ ಶುಶ್ರೂಷೆ ಮಾಡಿದ. ಮೂರ್ಛೆ ದೂರವಾಗಿ, ಕಣ್ಣು ತೆರೆದು ನೋಡುತ್ತಲೇ ಅವನು ಭಿಕ್ಷುಕನೆಂದು ಅವಳಿಗೆ ತಿಳಿಯಿತು. ಅವಳು ಅರಚಿದಳು. 'ಭಿಕ್ಷುಕ, ಮುಟ್ಟಬೇಡ, ಮುಟ್ಟಬೇಡ.' ಉಪಗುಪ್ತನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನು ಹೇಳಿದ— ಮನೋಹರಿ ನೀನೆ ಮನೋಹರಿ ಎಂದು ನಿನ್ನ ಮಾತಿನಿಂದಲೇ ತಿಳಿಯಿತು. ನಿನ್ನೊಡನೆ ಕೂಡಿಕೊಳ್ಳಲಿಕ್ಕಾಗಿಯೇ ನಾನು ಬರುತ್ತಿದ್ದೆ.

ಮನೋಹರಿ ಗದ್ಗದಳಾಗಿ ಹೇಳಿದಳು 'ಹಾಯ್ ಸ್ವಾಮಿ ಈಗ ನನ್ನನ್ನು ಮುಟ್ಟಬಾರದು. ನಾನು ಸಿಡಿಬೇನೆ ರೋಗಗಳಿಂದ ನನ್ನ ಶರೀರವು ಕೊಳೆತು ಹೋಗಿದೆ. ಏನು ತಾವು ನೋಡಲಾರಿರಾ?''

ಉಪಗುಪ್ತನು ಅವಳ ಕೈಹಿಡಿದು ಪ್ರೇಮದಿಂದ—'ಮನೋಹರಿ ನನ್ನ ಚರ್ಮಚಕ್ಷುಗಳು ಹೋದವು. ಅದರಿಂದೇನು? ಅಂತರ್ನೇತ್ರಗಳಿಂದ ಈಗಾಗಲೇ ಪರಮಾತ್ಮ ದರ್ಶನವನ್ನು ಮಾಡಿ ಬಂದಿದ್ದೇನೆ. ನಿನ್ನ ಬಾಹ್ಯ ಸೌಂದರ್ಯದ ಮೇಲಿದ್ದ ನನ್ನ ಮೋಹವು ಈಗ ಮುರಿದುಹೋಯಿತು. ಅದು ಅಗತ್ಯವಾದ್ದು. ಆ ಮೋಹಸುಖವು ನನಗಿನ್ನು ಬೇಡ. ಪವಿತ್ರ ಪ್ರೇಮದ ಉದಯವಾದಾಗ ನಿನ್ನನ್ನು ಸೇರುವೆನೆಂದು ಆ ದಿನ ಹೇಳಿದ್ದೆ. ಅದಕ್ಕೀಗ ಸಮಯ ಬಂದಿದೆ. ಪ್ರಿಯೆ! ನಡೆ! ನನ್ನೊಂದಿಗೆ ಬಾ! ಈ ದಿನವೇ, ನಿಯತ ಸಮಯದಲ್ಲಿ, ಯಮುನಾತೀರಕ್ಕೆ ಗುರುದೇವನು ಬರುವನು. ನಾವಿಬ್ಬರೂ ಅವನ ಚರಣಕಮಲದ ದರ್ಶನ ತೆಗೆದುಕೊಂಡು ಜನ್ಮಸಾರ್ಥಕ ಮಾಡೋಣ!'

ಒಂದು ಕ್ಷಣವೂ ಕಳೆದಿರಲಿಲ್ಲ. ಮನೋಹರಿಯ ಕೊಳೆತು ನಾರುವ ಶರೀರವು ಉಪಗುಪ್ತನ ಹೆಗಲ ಮೇಲಿದ್ದಿತು. ಅವನು ಕೋಲೂರಿ ಹೆಜ್ಜೆ ಇಡುತ್ತಾ ನಡೆದಿದ್ದ. (—ಉದ್ಧೃತ)

ಜಪಾನನ್ನು ನಿದ್ರೆಯಲ್ಲಿಯೂ ನಡುಗಿಸುವ ವೀರಮಹಿಳೆ!

ಗೋರಿಲ್ಲರ ಮಹಾ ಮಾತೆ ಚಾ-ಊ-ಚಾಂಗ್! ಚೈನದ ಸ್ಫೂರ್ತಿದೇವಿ!

ಯುದ್ಧಾಸಕ್ತರಾದ ಜಪಾನಿನ ಸೈನಿಕರನ್ನು ಕನಸಿನಲ್ಲಿಯೂ ಹೆದರಿಸಿ ನಡುಗಿಸುವ ಒಬ್ಬವೃದ್ಧ ಚೈನದ ಮಹಿಳೆಯ ಉಜ್ವಲ ಜೀವನದ ಇತಿಹಾಸವು ಈಗ ಬೆಳಕಿಗೆ ಬಂದಿದೆ. ಇವಳನ್ನು ಚೀನೀಯರು ಶ್ರೀಮತಿ ಚಾ ಊ-ಚಾಂಗ, ಅಂದರೆ ಗೋರಿಲ್ಲರ ಮಹಾತಾಯಿ ಎಂದು ಕರೆಯುವರು. ಈಗ ಅವಳಿಗೆ ೬೫ ವರ್ಷ ಪ್ರಾಯ. ಈ ವೃದ್ಧೆಯು ಚೀನಿಯರಿಗೆಲ್ಲ ಅಭಿಮಾನದ ವಿಷಯವಾಗಿರುವಳು ಅವಳ ಹೆಸರಿನ ಜಪ ಮಾಡಿಯೇ ಚೀನೀಯರು ಸ್ವಾತಂತ್ರ್ಯ ಸಾಧನೆಗೆ ಬೇಕಾದ ಸ್ಫೂರ್ತಿ ಉತ್ಸಾಹಗಳನ್ನು ಪಡೆಯುತಿದ್ದಾರೆ!

ಸೆರೆ ಹಿಡಿಯುವ ಪ್ರಯತ್ನ

ಗೋರಿಲ್ಲಾ ಸೇನೆಯನ್ನು ಇಟ್ಟುಕೊಂಡು ಈ ಮಹಿಳೆಯು ತನ್ನ ಆ ಸೇನೆಯ ಮೂಲಕ ಜಪಾನಿಯರಿಗೆ ಎಂಥ ಪ್ರಚಂಡ ಹಾನಿಯನ್ನು ತಂದೊಡ್ಡುತ್ತಿದ್ದಳೆಂದರೆ ಅವಳನ್ನು ಕೈಸೆರೆ ಹಿಡಿಯುವುದಕ್ಕೋಸ್ಕರ ಜಪಾನಿನ ಮಿಲಿಟರಿ ಅಧಿಕಾರಿಗಳು ಆರಾರು ಬಾರಿ ಶಸ್ತ್ರಾಸ್ತ್ರಗಳಿಂದ ಸಿದ್ಧವಾದ ದೊಡ್ಡ ಸೇನೆಗಳನ್ನು ಕಳುಹಿಸಿಯೂ ನಿರಾಶರಾಗಿದ್ದರು ಇವಳು ರಕ್ತಕ್ಕೆ ಸೊಕ್ಕಿದ ಸೊಳ್ಳೆಯಂತೆ ಪಾಗಿ ಕ್ಷಣಾರ್ಧದಲ್ಲಿ ಜಪಾನಿಯರ ರಕ್ತವನ್ನೇ ಹೀರಿ ಬಿಡುತ್ತಿದ್ದಳಾದ್ದರಿಂದ ಜಪಾನಿಯರು ಇವಳನ್ನು 'ಸೊಳ್ಳೆ ಮಾಮಿ' ಎಂದು ವ್ಯಂಗೋಕ್ತಿಗಳಿಂದ ಕರೆಯುವರು ಆದರೆ ಇವಳು ಕೊಡುವ ಪೀಡೆಯು ಅಸಹನೀಯವಾಗಿರುವುದರಿಂದ ಅವಳನ್ನು ಜೀವಸಹಿತ ಅಥವಾ ಕೊಂದು ತಂದುಕೊಟ್ಟವರಿಗೆ ೩೦೦೦೦ ನಾಣ್ಯಗಳನ್ನು ಬಹುಮಾನ ಕೊಡುವೆವೆಂದು ಜಪಾನ ಸರಕಾರವು ಸಾರಿತು ಈಗ ಆ ಬಹುಮಾನ ದ್ರವ್ಯವನ್ನು ೫೦೦೦೦ ನಾಣ್ಯಗಳಿಗೆ ಏರಿಸಿದ್ದಾರೆ. ಆದರೆ ಯಾರೂ ಅವಳನ್ನು ಹಿಡಿಯಲಿಕ್ಕೆ ಇದು ವರೆಗೆ ಸಮರ್ಥರಾಗಿರುವುದಿಲ್ಲ.

೩೦೦೦೦ ಮಂದಿ ಸೈನಿಕರು

ಕಾಡು ಗುಡ್ಡಗಳಲ್ಲಿ ವಾಸವಾಗಿದ್ದಾಗ ಈ ಮಹಿಳೆಯೊಡನೆ ಅವಳ ಇಬ್ಬರು ಮಕ್ಕಳು ಮತ್ತು ನಾಲ್ವರು ಸಂಗಾತಿಗಳು ಮಾತ್ರ ಸಹಕರಿಸಿ ಇದ್ದರು. ಆದರೆ ಅವಳ ಕಾರ್ಯ ವಿಧಾನ ಮತ್ತು ಅವಳಿಗೆ ದೊರೆತ ಸಫಲತೆಯು ಸುತ್ತಮುತ್ತಲಿನ ಎಲ್ಲಾ ಚೀನಿ ತರುಣರ ಮನಸ್ಸನ್ನು ಅವಳ ಕಡೆಗೆ ಆಕರ್ಷಿಸಿತು. ಆದರೆ ನೆರೆಹಾನುವಾಗಿಸ್ಸ ಅವಳಿಗಾಗಿ ಪ್ರಾಣಕೊಡಲು ಸಿದ್ಧರಾದ ೩೦೦೦೦ ವೀರ ತರುಣರ ಪ್ರಚಂಡ ಸೇನೆಯು ಇದೆ

ಅವಳ ಜೀವನ ಕ್ರಮ

ಚೀನದ ರಾಷ್ಟ್ರೀಯ ಜೀವನದಲ್ಲಿ ಈ ಮಹಿಳೆಗೆ ಒಂದು ಪ್ರಾಮುಖ್ಯ ಸ್ಥಾನವು ಇದೆಯಾದರೂ, ಅವಳು ಅತ್ಯಂತ ಸರಳ ಜೀವನವನ್ನು ನಡೆಸುವಳು. ಅವಳ ಸುತ್ತಮುತ್ತಲಿನ ಬಡಚೀನಿಯರಿಕ್ಕಿಂತ ಭಿನ್ನವಾಗಿರುವುದಿಲ್ಲ ಒಂದು ಬಾರಿ ಈ ಮಹಿಳೆ ಚೀನದ ಮಹಾ ಪ್ರಾಣವಾಗಿರುವ ಚಾಂಗ ಕೈಶೇಕರನ್ನು ಕಾಣಲಿಕ್ಕೆ ಹೋಗಿದ್ದಳು ತನ್ನ ಪದವಿಗೆ ಯೋಗ್ಯವಾದ ಉಡುಗೆಯನ್ನು ಅವಳ ಉಟ್ಟುಕೊಂಡುದು ಅದು ಮೊದಲನೆಯ ಬಾರಿಯಾಗಿತ್ತು ಅವಳು ಹಿಂತಿರುಗಿ ಹೋದ ತರುವಾಯ—'ಇವಳಂಥ ಸಾಹಸಿಯಾದ ಇನ್ನೊಬ್ಬ ಚೀನೀ ಹೆಂಗಸನ್ನು ನಾನು ಕಂಡಿಲ್ಲ' ಎಂದು ಶ್ರೀಮತಿ ಚಾಂಗ ಕೈಶೇಕರು ಉದ್ಗಾರಗಳನ್ನು ತೆಗೆದಿದ್ದಳು

ದಿನಚರಿಯ ಒಂದು ಪುಟ

ಚಾ ಊ ಚಾಂಗಳು [illegible] ಬರೆದಿಡುವಳು ತನು ಪ[illegible] ಮಾಡಿದ ಕಾರ್ಯಭಾಗವನ್ನು ಅದರಲ್ಲಿ ಉಲ್ಲೇಖಿಸಿ ವರ್ಷಾಂತ್ಯದಲ್ಲಿ ಅದನ್ನೆಲ್ಲ ಕ್ರೋಢೀಕರಿಸಿ ಒಂದು ವರದಿಯನ್ನು ತಯಾರಿಸುವಳು ೧೯೩೯ರ ಅವಳ ವರದಿಯ ಒಂದಂಶ ಹೀಗಿದೆ

ಕೊಂದ ಜಪಾನೀ ಸೈನಿಕರ ಸಂಖ್ಯೆ ೫೬೨೦ ಕೊಲ್ಲಲ್ಪಟ್ಟ ಗೋರಿಲ್ಲರ ಸಂಖ್ಯೆ ೭೨೦ ಕಸಕೊಂಡ ರೈಫಲ್‌ಗಳ ೬೨೦, ಮೆಶಿನ ಗನ್ನುಗಳು [illegible] ಗುಂಡ [illegible] ಟೆಗಳು ೧೦೦೦೦ [illegible] ಮಿಲಿಟರಿ ಟ್ರಕ್ಕುಗಳು ೨೩೦

ಗೋರಿಲ್ಲರ ಸಭೆಯಲ್ಲಿ

ಒಂದು ಬಾರಿ ಅವಳು ಗೋರಿಲ್ಲ ಮುಖಂಡರ ಒಂದು ಸಭೆಗ ಹೋಗಿದ್ದಳು ಅದರಲ್ಲಿ ಮುಖಂಡರಿಗುಚಿತವಾದ ಯಾವ ಸೇವೆ ಸತ್ಕಾರ ಸನ್ಮಾನಗಳನ್ನು ಅವಳು ಸ್ವೀಕರಿಸಲಿಲ್ಲ ೨ ಮೈಲು ದೂರವಿರುವ ರೈಲ್ವೆ ಸ್ಟೇಶನಿಗೆ ಕಾಲ್ನಡೆಯಿಂದಲೇ ಹೋಗಿ ಬರುತಿದ್ದಳು ತನ್ನ ಸೇನೆಗೆ ಪ್ರಾಪ್ತವಾಗದ ಸುಖಭೋಗಗಳನ್ನು ಅವಳು ಅನುಭವಿಸುವಳಾದರೆ, ಸೇನೆಯ ದೃಷ್ಟಿಯಿಂದ ತಾನು ಉಚ್ಚತಮಳೆಂದು ಎಣಿಸಲ್ಪಡಲಾರೆನಾಗಿ ಅವಳು ಹೇಳಿದ್ದಳು! ಸಾಮಾನ್ಯ ಜನರಿಗೆ ಪ್ರಾಪ್ತವಾದರೂ ಅವಳು ಅವುಗಳನ್ನು ಸ್ವೀಕರಿಸಲೊಪ್ಪಳು. ಆದುದರಿಂದಲೇ ಅವಳು ಇಂದು ಚೀನೀ ಗೋರಿಲ್ಲಾ ಸೈನಿಕರ ಆರಾಧ್ಯದೇವಿಯಾಗಿದ್ದಾಳೆ.

ಕೆಮ್ಮು, ಕಫ ಮತ್ತು ಎದೆಯ ಬಾಧೆಗಳನ್ನು ನಾಶಗೊಳಿಸಿರಿ

ಕೆಮ್ಮು, ಶೀತ, ಬ್ರೊಂಕ್ಯಾಟಿಸ್, ಗಂಟಲು ನೋವು ಮೊದಲಾದ ಬೇನೆಗಳಿಂದ ನೀವು ನರಳುವಿರಾದರೆ ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳು ಖಾತ್ರಿ ಔಷಧಿ.

ಪೆಪ್ಸ ಮಾತ್ರೆಗಳು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧೀಯ ಧೂಮವು ನೀವು ಸೇವಿಸಿದ ವಾಯುವಿನೊಡನೆ ಬೆರೆತು ಶ್ವಾಸಕೋಶಗಳನ್ನು ಬಹಳ ಆಳವಾಗಿ ಪ್ರವೇಶಿಸುತ್ತದೆ ಅಲ್ಲಿ ಈ ಧೂಮವು ರೋಗಾಣುಗಳನ್ನು ಹುಡುಕಿ ತೆಗೆದು ಅವನ್ನು ನಾಶಮಾಡುತ್ತದೆ ಕಫವು ಬಾರದಂತೆ ಮಾಡುತ್ತದೆ ಪೆಪ್ಸ ಮಾತ್ರೆಗಳು ಗಂಟಲನ್ನು ಸರಿಯಾಗಿರಿಸಿ ಎದೆಯನ್ನೂ ಶ್ವಾಸಕೋಶಗಳನ್ನೂ ಕಾಪಾಡುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂಪಾಯಾ ಒಂದರಂತೆ ಮಾರುತ್ತಾರೆ
ಏಜಂಟ್ಸ್ ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಿ. ಟಿ ಮದ್ರಾಸ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು.

ನಿಮ್ಮದು ಯಾಕೆ ಆಗಬಾರದು?

ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

THE PIE-MONEY BANK LTD.

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director*

ಜಿಲ್ಲಾ ಸಮಾಚಾರ



ಮಂಗಳೂರು

ನೇಯ್ಗೆ ಕೆಲಸಗಾರರ ಮುಷ್ಕರ

ಹಲವರ ದಸ್ತಗಿರಿ–ಸ್ತ್ರೀಯರಿಗೂ ಲಾಥಿ ಪೆಟ್ಟು—ಮಂಗಳೂರು ಮಾರ್ನಮಿ ಕಟ್ಟೆ ಎಸ್. ಯಂ. ಎಸ್. ನೇಯ್ಗೆ ಕಾರ್ಖಾನೆಯವರು ಕೆಲಸಗಾರರ ಸಂಬಳದಲ್ಲಿ ಕಡಿತ ಮಾಡಿದುದರ ಕಾರಣದಿಂದ ಅದರ ಕೆಲಸಗಾರರು ಕಳೆದ ಕೆಲವು ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

ಈ ಸಂಬಂಧವಾಗಿ ಕಳೆದ ತಾ. ೧೪ರಂದು ಮುಷ್ಕರ ನಡೆಯುತ್ತಿರಲು ಮಾಲಿಕರು ನಾಲ್ಕು ಕೆಲಸಗಾರರನ್ನು ಮೋಟರಿನಲ್ಲಿ ಕಾರ್ಖಾನೆಗೆ ಒಯ್ಯುತ್ತಿರಲು, ಮುಷ್ಕರಗಾರರು ಮೋಟರನ್ನು ತಡೆದರು. ಕಾರ್ಖಾನೆಯ ಮಾಲಿಕರು ಪೋಲಿಸ್ ಸಹಾಯವನ್ನು ಕೇಳಿದ್ದರು. ಮುಷ್ಕರಗಾರರನ್ನು ಚದರುವಂತೆ ಪೋಲಿಸರು ಹೇಳಿದರು. ಅವರು ಚದರಲಿಲ್ಲ. ಆಗಲೇ ನೇಕಾರರ ಸಂಘದ ಅಧ್ಯಕ್ಷರೂ ದ. ಕ. ಜಿಲ್ಲಾ ಬೋರ್ಡ್ ಸದಸ್ಯರೂ ಆದ ಶ್ರೀ ಎಸ್. ಎನ್. ಹೊಳ್ಳರನ್ನೂ ಇನ್ನೂ ಕೆಲವು ಮಂದಿಯನ್ನೂ ದಸ್ತಗಿರಿ ಮಾಡಲಾಯಿತು. ಪಿಕೆಟಿಂಗ್ ಮಾಡುವವರಲ್ಲಿ ಸ್ತ್ರೀಯರೂ ಇದ್ದರು.

ಕಾರ್ಖಾನೆಯಿಂದ ನೂಲನ್ನು ಹೊರಗೆ ಮೋಟರಿನಲ್ಲಿ ತುಂಬಿ ತರುತ್ತಿರಲು ಮುಷ್ಕರಗಾರರು ಮೋಟರಿನ ಅಡ್ಡವಾಗಿ ಬಿದ್ದುಕೊಂಡು ಮೋಟರನ್ನು ತಡೆದರು. ಪೋಲೀಸರು ಕೆಲಸಗಾರರಿಗೆ ಲಾಥೀ ಪ್ರಯೋಗ ಮಾಡಿದರು. ಅವರಲ್ಲಿ ಹಲವು ಮಂದಿ ಸ್ತ್ರೀಯರಿಗೂ ಲಾಥಿ ಪೆಟ್ಟು ಬಿದ್ದಿದೆ. ಸ್ತ್ರೀಯರಲ್ಲಿ ಸುಮಾರು ಹನ್ನೆರಡು ವರ್ಷ ಪ್ರಾಯದ ಹುಡುಗಿಯೊಬ್ಬಳೂ ಇದ್ದಳು.

ಪಿಪ್ಪ ಮಾರ್ಕೆಟಿನ ಬಳಿಯಲ್ಲಿ ಮಹಾಜನರ ಸಭೆಯೊಂದು ದ. ಕ. ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಪೋಲೀಸರ ಲಾಥೀ ಪ್ರಯೋಗವನ್ನು ಬಲವಾಗಿ ಖಂಡಿಸಿ ಭಾಷಣ ಠರಾವುಗಳಾದುವು.

ತಾ. ೧೫ರಂದು ಶ್ರೀ ಹೊಳ್ಳರೇ ಮೊದಲಾದ ಬಂಧಿತರಾದ ೨೪ ಮಂದಿಯ ವಿಚಾರಣೆಯು ನಡೆಯಿತು. ೧೭ ಮಂದಿಯನ್ನು ಬಿಡುಗಡೆ ಮಾಡಿದರು. ಮಿಕ್ಕ ಪ್ರತಿಯೊಬ್ಬರಿಗೂ ಡಿವಿಜನಲ್ ಮೆಜಿಸ್ಟ್ರೇಟರು ನಾಲ್ಕು ನಾಲ್ಕು ತಿಂಗಳ ಶಿಕ್ಷೆ ವಿಧಿಸಿರುವರು.

ಶಿಕ್ಷೆಗೆ ಒಳಗಾದ ಶ್ರೀ ಹೊಳ್ಳರೇ ಮೊದಲಾದ ಕೆಲಸಗಾರರ ಮುಂದಾಳುಗಳನ್ನು ಕಣ್ಣಾನೂರ ಸೆರೆಮನೆಗೆ ಒಯ್ಯಲಾಗಿದೆ.

ಮಾರ್ನಮಿ ಕಟ್ಟೆಯ ಕಾರ್ಖಾನೆಯ ಸುತ್ತು ಐವತ್ತು ಗಜ ದೂರದೊಳಗೆ ನಾಲ್ಕು ಜನರಿಗಿಂತ ಹೆಚ್ಚು ಸೇರಬಾರದಾಗಿ ಪ್ರತಿಬಂಧಕಾಜ್ಞೆ ಹೊರಟಿದೆ. ಕೆಲಸಗಾರರು ದಿನ ನಿತ್ಯವೂ ಮುಷ್ಕರ ನಡೆಸುತ್ತ ಇದ್ದಾರೆ. ಪೋಲೀಸರು ಮುಷ್ಕರಗಾರರನ್ನು ಚದರಿಸುತ್ತಲೂ ಇದ್ದಾರೆ.

ಹೆಂಗುಸರಿಗೂ ಪೋಲಿಸರು ಲಾಥಿಯಿಂದ ಹೊಡೆದದ್ದು ಮಂಗಳೂರಿನ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲವೆಂದು ತಿಳಿದು ಬರುತ್ತಿದೆ.

ಸಹಾನುಭೂತಿ ಸಭೆಗಳು:—ನೇಯ್ಗೆ ಕೆಲಸಗಾರರ ಮುಷ್ಕರದಾರರ ವಿಷಯದಲ್ಲಿ ಸಹಾನುಭೂತಿಯನ್ನು ಸೂಚಿಸಲು ಮಾರ್ನಮಿ ಕಟ್ಟೆ ಮೈದಾನಿನಲ್ಲಿ ಸಾರ್ವಜನಿಕ ಸಭೆಯೂ, ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ವಿದ್ಯಾರ್ಥಿ ಸಂಘದ ಸಭೆಯೂ, ಬೀಡಿ ಲೇಬರ್ ಯೂನಿಯನ್ ಆಫೀಸಿನಲ್ಲಿ ಬೀಡಿ ಕೆಲಸಗಾರರ ಸಭೆಯೂ ಸೇರಿದುವು. ಅವುಗಳಲ್ಲಿ ಕೆಲಸಗಾರರ ವಿಷಯ ಸಹಾನುಭೂತಿ, ಲಾಥೀ ಚಾರ್ಜಿನ ಖಂಡನೆ, ಮೊದಲಾದ ಠರಾವುಗಳಾದುವು.

ದ. ಕ. ಜಿಲ್ಲಾ ಎಲ್. ಐ. ಎಂ. ಅಸೋಸಿಯೇಶನ್:—ಈ ಸಂಘದ ದ್ವಿತೀಯಾಧಿವೇಶನವು ಬರುವ ತಾ. ೧-೯-೪೦ರ ಭಾನುವಾರ ಶ್ಯಾಮ ಘಂಟೆ ೨ಕ್ಕೆ ಉಡುಪಿ ಶ್ರೀ ಕೃಷ್ಣ ಭವನ (ರೆಸ್ಟೋರೆಂಟ್ ಹಂಪನಕಟ್ಟೆ) ಮಹಡಿಯಲ್ಲಿ ಡಾ. ಕೆ. ವ್ಯಾಸರಾಯ ಭಟ್, ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದಸ್ಯರೆಲ್ಲರೂ ಬಂದು ಸೇರಬೇಕಾಗಿ ಈ ಮೂಲಕ ಸವಿನಯ ತಿಳಿಸಲಾಗಿದೆ ಎಂದು ಗೌ. ಕಾರ್ಯದರ್ಶಿಗಳಾದ ಶ್ರೀ. ಬಿ. ಎ. ಮುತಾಯರವರು ತಿಳಿಸುತ್ತಾರೆ.

ಆರ್ಯ ಸಮಾಜ—ಬರುವ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ಸನ್ಯಾಸಿಗುಡ್ಡೆಯ ಆರ್ಯ ಸಮಾಜ ಮಂದಿರದಲ್ಲಿ ಶ್ರೀ ಕೃಷ್ಣ ಜಯಂತಿ ಉತ್ಸವವು ಜರಗುವುದು. ಶ್ರೀ ಕೃಷ್ಣ ಚರಿತ್ರೆ ಮತ್ತು ಬೋಧನೆಗಳ ಕುರಿತು ಭಾಷಣಗಳೂ ಇವೆ. ಸರ್ವಜನರಿಗೂ ಸ್ವಾಗತವಿದೆ.

ಜಿ. ಕಾಂಗ್ರೆಸ್ ಕಮಿಟಿ– ಲಾಠೀ ಚಾರ್ಜಿನ ನಿಷೇಧ:— ತಾ. ೧೮ರಂದು ಶ್ರೀ ಯು. ಎಸ್. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿದ ಜಿ. ಕಾಂ. ಕಮಿಟಿಯ ಕಾರ್ಯಕಾರೀ ಮಂಡಲಿಯಲ್ಲಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾರ್ಯವನ್ನು ಮುಂದೊತ್ತುವ ವಿಷಯವಾಗಿ ಚರ್ಚೆ ನಡೆಯಿತು. ಉಪಾಧ್ಯಕ್ಷರಾಗಿರುವ ಶ್ರೀ ಯಲ್. ಯಸ್. ನ್ಯಾಕ ಇವರ ಸ್ಥಾನದಲ್ಲಿ ಶ್ರೀ ಪಾಂಗಾಳ ಮಂಜುನಾಥ ನ್ಯಾಕರನ್ನೂ, ಶ್ರೀ. ಕೆ. ಮಾಧವ ಕಾಮತ ಮತ್ತು ಶ್ರೀ. ಕೆ. ರಾಮ ಹೆಗ್ಗಡೆ ಇವರ ಸ್ಥಾನದಲ್ಲಿ ಶ್ರೀ. ಪಿ. ಲಕ್ಷ್ಮೀನಾರಾಯಣ ನ್ಯಾಕ ಮತ್ತು ಶ್ರೀ. ಬಿ. ದೇವಪ್ಪಾಳ್ವ ಇವರನ್ನು ಚುನಾಯಿಸಲಾಯಿತು. ಹೊಸ ಸದಸ್ಯರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಿರುವರು. ಯಸ್. ಯಮ್. ಯಸ್. ನೇಯ್ಗೆ ಕಾರ್ಖಾನೆಯ ಮುಂದೆ ಪೋಲೀಸರು ಲಾಠೀ ಚಾರ್ಜು ಮಾಡಿದುದನ್ನೂ ವಿಶೇಷವಾಗಿ ಸ್ತ್ರೀ ಬಾಲರ ಮೇಲೆ ಲಾಠೀ ಚಾರ್ಜು ಮಾಡಿದುದನ್ನೂ ಈ ಕಮಿಟಿಯು ತೀವ್ರವಾಗಿ ನಿಷೇಧಿಸಿತು. ನೇಯ್ಗೆ ಕೆಲಸಗಾರರ ವಿವಾದ ಇತ್ಯರ್ಥದ ವಿಷಯವಾಗಿ ಒಂದು ಕಮಿಟಿಯನ್ನು ರಚಿಸಲಾಯಿತು.

ಕಾರ್ಕಳ

ಬಲಿದಾನ ಸ್ಮಾರಕ ದಿನ:—ನಿಜಾಮ ಹೈದರಾಬಾದದಲ್ಲಿ ಕಳೆದ ವರ್ಷ ನಡೆದ ಹಿಂದೂ ಸತ್ಯಾಗ್ರಹದಲ್ಲಾದ ಬಲಿದಾನದ ಸ್ಮಾರಕ ದಿನ ಮತ್ತು ಶ್ರಾವಣೀ ಉಪಾಕರ್ಮವನ್ನು ಸ್ಥಳೀಯ ಆರ್ಯ ಸಮಾಜವು ತಾ. ೧೭-೮-೧೯೪೦ರ ದಿನ ವಿಧ್ಯುಕ್ತವಾಗಿ ಆಚರಿಸಿತು. ಆರ್ಯ ಉಪದೇಶಿ ಶ್ರೀ. ಆರ್. ಮಂಜುನಾಥ ಶೆಟ್ಟಿಯವರು ಹಿಂದೂ ಸತ್ಯಾಗ್ರಹದ ಇತಿಹಾಸ, ಹೈದರಾಬಾದದಲ್ಲಾದ ಬಲಿದಾನ, ಉಪಾಕರ್ಮದ ಮಹತ್ವ ಇತ್ಯಾದಿಗಳ ಕುರಿತು ಭಾಷಣ ಮತ್ತು ಧರ್ಮಬೋಧೆ ಮಾಡಿದರು.

ಯುದ್ಧ ಸಹಾಯ ಸಮಿತಿ:—ಈ ಸಮಿತಿಯ ಒಂದು ಸಭೆಯು ತಾ. ೧೭-೮-೪೦ರ ದಿನ ಸಾಯಂಕಾಲ ಶ್ರೀ. ಕೆ. ಪಿ. ಶೇಷಗಿರಿ ಪ್ರಭು ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿ ೮-೯-೧೯೪೦ನ್ನು ಪ್ರಾರ್ಥನದಿನವನ್ನಾಗಿ ಆಚರಿಸಬೇಕಾಗಿ ಠರಾವು ಮಾಡಿದೆ.

ಉಪಾಧ್ಯಾಯಿನಿಯರ ಸಭೆ—ಕಾರ್ಕಳ ಕೇಂದ್ರದ ಬಾಲಿಕಾ ಪಾಠಶಾಲೆಗಳ ಉಪಾಧ್ಯಾಯಿನಿಯರ ತಿಂಗಳ ಸಭೆಯು ಮಿಶ್ಶನ ಬಾಲಿಕಾ ಪಾಠಶಾಲೆಯಲ್ಲಿ ಶ್ರೀಮತಿ ಜೇಸುದಾಸಿ ಪಾಲ್ಮರ್‌ರ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀಮತಿ ಗಿರಿಜಾಬಾಯಿಯವರು ವರ್ಧಾ ಶಿಕ್ಷಣ ಕ್ರಮದ ಕುರಿತು ಭಾಷಣವಿತ್ತರು.

ಸಂಘ ಸ್ಥಾಪನೆ:—ಕಾರ್ಕಳ ತಾಲೂಕು ಎಯ್ಡೆಡ್ ಸ್ಕೂಲ್ ಮೆನೇಜರು ಮತ್ತು ಟೀಚರು ಮೆನೇಜರುಗಳ ಒಂದು ಸಭೆಯು ತಾ. ೧೮-೮-೪೦ರ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ನಾರಾಯಣ ರಾವ್ ಇವರ ಅಧ್ಯಕ್ಷತೆಯಲ್ಲಿ ಜರುಗಿ ಅವರ ಒಂದು ಸಂಘ ಸ್ಥಾಪನೆಯಾಗಬೇಕೆಂದು ಸರ್ವಾನುಮತಿಯಿಂದ ಠರಾವಾಗಿ ಕಾರ್ಯ ನಿರ್ವಾಹಕ ಸಮಿತಿಯೂ ಆರಿಸಲ್ಪಟ್ಟಿತು.

ಉಡುಪಿ

ವಾರ್ಷಿಕೋತ್ಸವ:— "ಸ್ಟೂಡೆಂಟ್ಸ್ ಕ್ಲಬ್"ನ ವಾರ್ಷಿಕೋತ್ಸವವು ತಾ. ೧೮ರಂದು ಶ್ರೀ. ಪಿ. ನಾರಾಯಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ದಾಮೋದರ ಶೆಣೈಯವರಿಂದ ಗತಸಭೆಯ ವರದಿ ಓದಲ್ಪಟ್ಟಿತು. ಸಭಿಕರಲ್ಲಿ ಶ್ರೀಗಳಾದ ಕೆ. ಕೇಶವ ಕುಡುವ, ಕೆ. ರಾಮರಾಯ ಶೆಣೈ, ಟಿ. ರಮೇಶ ಪೈಗಳವರು ಸಂಘದ ಯಶಸ್ಸನ್ನು ಬಯಸಿ ಭಾಷಣವನ್ನು ಮಾಡಿದರು. ಸಭಾಧಿಪತಿಗಳ ಸಮಯೋಚಿತ ಭಾಷಣ; ಉಪಹಾರ; ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಸಪ್ತಾಹ:—ಶ್ರೀ ಲಕ್ಷ್ಮೀ ವೆಂಕಟೇಶ ದೇವಳದಲ್ಲಿ ಭಜನೆ ಸಪ್ತಾಹ ಸಮಾರಂಭವು ೮ನೇ ನಾಗರಪಂಚಮಿಯಂದು ಪ್ರಾರಂಭವಾಗಿ, ತಾ. ೧೫ರಂದು ಮಂಗಲೋತ್ಸವದೊಂದಿಗೆ ಕೊನೆಗೊಂಡಿತು.

ಹರಿಕಥಾ ಕಾಲಕ್ಷೇಪ:—ಕಟಪಾಡಿ ಪಾಂಗಾಳ ನಾಯಕರ ಮನೆಯಲ್ಲಿ ತಾ. ೧೭ರಂದು ಶ್ರೀ. ಯು. ಪ್ರಭಾಕರ ರಾವ್, ಹರಿದಾಸರಿಂದ "ಸೀತಾಕಲ್ಯಾಣ"ವೆಂಬ ಹರಿಕಥೆಯು ನಡೆಯಿತು.

ಮುಂಬಯಿ

ಮೊಗವೀರ ಯುವಕ ಸಂಘ:—ಈ ಮೇಲ್ತೋರುವ ಸಂಘದ ಸಪ್ತಮ ವಾರ್ಷಿಕೋತ್ಸವವೂ, ಮೊಗವೀರ ಉದ್ಯೋಗ ಶಾಖೆಯ ಸ್ಥಾಪನಾ ಸಮಾರಂಭವೂ ಬರುವ ಆಗೋಸ್ತು ತಾ. ೨೬ನೇ ಸೋಮವಾರ ಅಪರಾಹ್ನ ಘಂಟೆ ೨.೪೦ಕ್ಕೆ ಸರಿಯಾಗಿ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಶ್ರೀಮಾನ್ ಬಿ. ಜಿ. ಖೇರ್, ಮುಂಬಾಯಿ ಮಾಜೀ ಪ್ರಧಾನ ಮಂತ್ರಿ, ಇವರ ಸನ್ನಾಧ್ಯಕ್ಷತೆಯಲ್ಲಿ ಜರಗಲಿರುವುದು.

ಪಂಚಮ ವಾರ್ಷಿಕ ವರದಿ:—ಮೇಲಿನ ಯುವಕ ಮಂಡಲಿಯ ಪಂಚಮ ವಾರ್ಷಿಕ ವರದಿಯು ಹಸ್ತಗತವಾಗಿದೆ. ಯುವಕರು ಜಾತಿಯ ಏಳಿಗೆಗಾಗಿ ಮುಂಬಯಿಯಲ್ಲಿ ಸಂಘರೂಪದಿಂದ ದುಡಿಯುತ್ತಿರುವುದು ತುಂಬಾ ಅಭಿನಂದನೀಯವಾಗಿದೆ. ಸಂಘಕ್ಕೆ ಸರ್ವ ಮೇಲ್ಮೆಯನ್ನು ಹಾರೈಸುತ್ತೇವೆ.

ಸ್ವೀಕಾರ-ವಿಮರ್ಶೆ

ಶಂಕರಸಿದ್ಧಾಂತ:—ಲೇಖಕರು: ವೈ. ಸುಬ್ಬರಾವ್. ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ. ಬೆಲೆ: ೦-೮-೦.

ಭಾಷ್ಯಕಾರರ ವಚನಗಳನ್ನೇ ಎತ್ತಿಹಿಡಿದು ಶಂಕರಾಚಾರ್ಯರ ಅದ್ವೈತವೇದಾಂತ ಪ್ರಕ್ರಿಯೆಯನ್ನು ತಿಳಿಸುವ ಒಂದು ಪುಸ್ತಕವಿದು. ಶ್ರೀ. ಸುಬ್ಬರಾಯರು ಅಧ್ಯಾತ್ಮ ಪ್ರಕಾಶದ ಮೂಲಕ ಅಧ್ಯಾತ್ಮವಿಚಾರವನ್ನು ಪ್ರಚುರಪಡಿಸುತ್ತಿರುವ ವಿಷಯ ಕನ್ನಡಿಗರೆಲ್ಲರಿಗೂ ಚೆನ್ನಾಗಿ ಗೊತ್ತಿರುವುದು. ಈ ಪುಸ್ತಕದಲ್ಲಿ ಅವರು ಲಲಿತ ಕನ್ನಡ ಭಾಷೆಯಲ್ಲಿ ಶಂಕರ ಸಿದ್ಧಾಂತವನ್ನು ಸಂಸ್ಕೃತ ಭಾಷ್ಯಗಳನ್ನೇ ಎತ್ತಿಕೊಂಡು ಅವುಗಳನ್ನು ತರ್ಜಿಸಿ ಅಪವ್ಯಾಖ್ಯಾನವನ್ನು ತಿದ್ದಿ ಸರಿಯಾದ ಸಿದ್ಧಾಂತವಿದೆಂದು ತೋರಿಸಿದ್ದಾರೆ. ಇಂತಹ ವಿಚಾರವುವಾದದ ವಿಚಾರ, ಅದ್ವಿತೀಯವಾದ, ಸಚ್ಚಿದಾನಂದರೂಪವಾದ ಬ್ರಹ್ಮವೊಂದೇ ಪರಮಾರ್ಥವು; ಅದಕ್ಕಿಂತ ಬೇರೆ ಜೀವವೂ ಜಗತ್ಪ್ರಪಂಚವೂ ಇಲ್ಲ. ನಾನು ನನ್ನದು ಎಂಬ ಅನಾದಿಯಿಂದ ಬಂದ ಅಹಂಭಾವ ವ್ಯವಹಾರವು ಅವಿದ್ಯೆ. ಜ್ಞಾನಿಗಳಿಗೆ ನಾನು ಎಂಬುದು ಬ್ರಹ್ಮವೇ. ಇದೇ ವಿದ್ಯೆ—ಎಂಬೀ ಶಂಕರಸಿದ್ಧಾಂತದ ವಿಚಾರವನ್ನು ಲೇಖಕರು ಸುಂದರವಾಗಿ ಈ ಪುಸ್ತಕದಲ್ಲಿ ವಿವೇಚಿಸಿದ್ದಾರೆ. ಅಧ್ಯಾತ್ಮ ಜ್ಞಾನಾರ್ಥಿಗಳು ಅವಶ್ಯ ಓದಬೇಕಾದ ಪುಸ್ತಕವಿದು.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಲೋಕಕಂಟಕರೊಡನೆ ಬ್ರಿಟಿಷರ ಹೋರಾಟ!

★ ಯುದ್ಧ ವಾರ್ತೆ

ಚರ್ಚಿಲ್ಲರ ಸ್ಫೂರ್ತಿಯ ಭಾಷಣ!

ಬ್ರಿಟನಿಗೆ ಜರ್ಮನರ ಆಕ್ರಮಣ ಯತ್ನ

ಸೋಮಾಲಿಲೇಂಡಿನಿಂದ ಹಿಂತೆಗೆದರೆ? : : :

ಯೂರೋಪಿನಲ್ಲಿ ಕ್ಷಾಮ ಸಂಕಷ್ಟ!



ಭೀಷಣ ವಿಮಾನ ಯುದ್ಧ!

ಈ ವಾರ ಲಂಡನಿನ ಮೇಲೆ ಜರ್ಮನರ ವಿಮಾನ ಯುದ್ಧವು ಭೀಕರವಾಗಿ ನಡೆಯಿತು. ಜರ್ಮನ್ ವಿಮಾನಗಳು ಸಾವಿರಾರು ಎಲ್ಲಾ ಕಡೆಗಳಿಂದಲೂ ಲಂಡನಿನ ಮೇಲೆ ಗುಂಪು ಗುಂಪಾಗಿ ಹಾರಿಬಂದು ಬಾಂಬೆಸೆದವು. ಕೂಡಲೆ ಸಂರಕ್ಷಕ ವಿಮಾನಗಳು ಎದುರಾಗಿ ಕಾದಾಡಿತು. ಕಾದಾಟವು ಅತ್ಯಂತ ತೀಕ್ಷ್ಣವಾಗಿ ನಡೆಯಿತು. ಆದರೆ ಅಪಾಯಗಳು ಹೆಚ್ಚಾಗಲಿಲ್ಲವೆಂದು ಸರಕಾರವು ಪ್ರಕಟಿಸಿದೆ. ಜರ್ಮನರ ವಿಮಾನಗಳಲ್ಲಿ ಕೆಲವನ್ನು ಕೆಳಗೆ ಉರುಳಿಸಲಾಯಿತಂತೆ.

ಮೆಶಿನು ಗನ್ನುಗಳನ್ನೂ ಬಿಟ್ಟರು!

ಜರ್ಮನರು ವಿಮಾನಗಳಿಂದ ಅಸಂಖ್ಯ ಬಾಂಬುಗಳನ್ನು ಮಾತ್ರ ಎಸೆಯುತ್ತಿರಲ್ಲದೆ, ಅನೇಕ ಮೆಶಿನ್ ಗನ್ನುಗಳೆಂಬ ಭಯಂಕರ ಯಂತ್ರದ ತೋಪಿಗಳನ್ನೂ ಎಸೆದರೆಂದು ತಿಳಿದು ಬರುತ್ತದೆ.

ಕರಾವಳಿಯಲ್ಲಿ ನಷ್ಟ!

ಜರ್ಮನರ ದಾಳಿಯಿಂದ ಕರಾವಳಿಯ ಪಟ್ಟಣಗಳಲ್ಲಿ ಬಹಳ ನಷ್ಟವಾಗಿದೆಯೆಂದು ತಿಳಿದುಬಂದಿದೆ. ಅನೇಕ ಮನೆಗಳು ಹಾಳಾಗಿವೆ. ಕೆಲವರಿಗೆ ಜಖಮು ಆಗಿದೆ. ದಾಳಿಯು ಅನೇಕ ಸಮಯದ ವರೆಗೆ ನಡೆದು ತುಂಬಾ ಪ್ರದೇಶವನ್ನು ವ್ಯಾಪಿಸಿತ್ತು. ರಾತ್ರಿಕಾಲದಲ್ಲಿಯೂ ಆಗಾಗ ದಾಳಿಯು ನಡೆಯುತ್ತಿತ್ತು.

ಪ್ರಧಾನ ಪಟ್ಟಣಕ್ಕೇ ದಾಳಿ!

ಲಂಡನಿಗೆ ಜರ್ಮನರು ಧಾಳಿಯಿಟ್ಟದ್ದು ಯುದ್ಧ ಪ್ರಾರಂಭವಾದ ಇದೇ ಮೊದಲನೆಯ ಸಲವಾಗಿದೆ.

ಸೋಮಾಲಿಲೇಂಡಿನಲ್ಲಿ ವಿಷಮ!

ಬ್ರಿಟಿಷ್ ಸೋಮಾಲಿಲೇಂಡಿನಲ್ಲಿ ಇಟಲಿಯೊಡನೆ ಕಳೆದೆರಡು ವಾರದಿಂದ ಯುದ್ಧ ನಡೆಯುತ್ತಾ ಇದ್ದು, ಇಂದು ಪರಿಸ್ಥಿತಿಯು ದಿನದಿಂದ ದಿನಕ್ಕೆ ಭೀಕರವಾಗುತ್ತ ಬರುತ್ತಿದೆ. ಟುಗಾರ್ಗನ್ ಎಂಬ ಕಣಿವೆಯಲ್ಲಿ ಬಹುಸಂಖ್ಯಾತರಾದ ಶತ್ರುಗಳನ್ನು ಬ್ರಿಟಿಷ್ ಸೈನಿಕರು ಎದುರಿಸ [illegible] ಇದರಿಂದ ಬ್ರಿಟಿಷರು ಬರ್ಬೆರಾದಿಂದ ಹಿಂದೆಗೆಯುತ್ತಿದ್ದಾರೆಂದು ಲಂಡನಿನಲ್ಲಿ ಸುದ್ದಿ ಹರಡಿದೆ. ಇಟಲಿಯನರ ದಳದ ವಿರುದ್ಧ ಕಾದಾಡಲು ಬ್ರಿಟಿಷ್ ಸೈನಿಕರು ಅಲ್ಲಿ ಇಂದು ಅಲ್ಪಸಂಖ್ಯಾತರಾಗಿರುವರೆಂದು ತಿಳಿದಿದೆ.

ಇಂಡೋಚೈನದ ಗಡಿಯಲ್ಲಿ

ಜಪಾನರು ಇಂಡೋಚೈನದ ಗಡಿಯಲ್ಲಿ ಸೈನ್ಯವನ್ನು ಒಟ್ಟುಗೂಡಿಸುತ್ತ ಬರುತ್ತಿದ್ದಾರೆಂದು ತಿಳಿದಿದೆ. ಫ್ರೆಂಚರು ತಮ್ಮ ಗಡಿಯ ಮುಖ್ಯ ಮಾರ್ಗಗಳನ್ನೂ, ಸೇತುವೆಗಳನ್ನೂ ತಪ್ಪಿಸಿರುವರೆಂದೂ ಸುದ್ದಿ. ಜಪಾನರ ಅನೇಕ ಹಡಗುಗಳೂ ಇಂಡೋಚೈನದ ಜಲವಲಯದಲ್ಲಿ ಸಂಚರಿಸುತ್ತಿವೆಯೆಂದೂ ವಾರ್ತೆ. ಅಂತೂ ಕದನಕ್ಕೆ ಸರ್ವಸಿದ್ಧತೆಯಾಗಿದೆ.

ಬ್ರಿಟಿಷ್ ಹಡಗಿಗೆ ಹಾವಳಿ!

ಸಮುದ್ರಗಳ್ಳರು, ಮೋಟರು ಬೋಟುಗಳಲ್ಲಿ ತಾ. ೨ರಂದು ದಕ್ಷಿಣ ಚೀನದ ದಂಡೆಯಲ್ಲಿ ೪೬೦ ಟನ್ ಭಾರದ ಬ್ರಿಟಿಷ್ ಹಡಗದ ಮೇಲೆ ದಾಳಿ ಮಾಡಿದರು. ೧೫ ಸಾವಿರ ಪವನು ಬೆಲೆ ಬಾಳುವ ಸರಕುಗಳನ್ನು ಅಪಹರಿಸಿದರು. ಅನೇಕ ಪ್ರವಾಸಿಗಳನ್ನು ಎತ್ತಿಕೊಂಡು ಹೋದರು.

ವೈರಿಯಾ ಎಂಬ ೧೩೬೦ ಟನ್ ಭಾರದ ಸ್ವೀಡಿಶ್ ಹಡಗವೊಂದು ಬ್ರಿಟಿಷ್ ಕಡಲ್ಗಾಲುವೆಯಲ್ಲಿ ವಿಮಾನ ಕಾಳಗಕ್ಕೆ ತುತ್ತಾಗಿ ಜಲಸಮಾಧಿ ಹೊಂದಿತು.

ಮಾಲ್ಟಾದ ಮೇಲೆ

ಈ ವಾರ ಮಾಲ್ಟದ ಮೇಲೆ ಅನೇಕ ಸಲ ವಿಮಾನದಾಳಿಯು ನಡೆಯಿತು. ಬಾಂಬುಗಳು ಬಿದ್ದವು. ಎರಡು ಇಟಲಿಯ ವಿಮಾನಗಳು ಉರುಳಿದುವೆಂದು ಪ್ರಕಟಿಸಲಾಗಿದೆ.

ಅಲೆಕ್ಸಾಂಡ್ರಿಯದ ಮೇಲೆ!

ಅಲೆಕ್ಸಾಂಡ್ರಿಯದ ಮೇಲೆಯೂ ದಾಳಿ ನಡೆದಿದೆ. ಅನೇಕ ಬಾಂಬುಗಳು ಬಿದ್ದವು. ಪಟ್ಟಣದಲ್ಲಿ ವಿಶೇಷ ಹಾನಿಯಾದ ವಿಷಯವೇನೂ ತಿಳಿದುಬಂದಿರುವುದಿಲ್ಲ.

ಕ್ರೊಯಡನ್ ಮೇಲೆ ದಾಳಿ!

ಕ್ರೊಯಡನ್ ಎಂಬ ಪ್ರಸಿದ್ಧ ವಿಮಾನನಿಲ್ದಾಣದ ಮೇಲೆ ಜರ್ಮನ್ ವಿಮಾನಗಳು ಬಹಳ ತೀಕ್ಷ್ಣವಾಗಿ ದಾಳಿ ಮಾಡಿದವು. ಸಾವಿರಾರು ವಿಮಾನಗಳು ಈ ದಾಳಿಯಲ್ಲಿ ಭಾಗವಹಿಸಿದ್ದವು. ಇದರಲ್ಲಿ ಅನೇಕ ಹಾನಿಗಳುಂಟಾಗಿವೆ. [illegible] ವೆಂದು ಪ್ರಕಟಿಸಲಾಗಿದೆ. ೫೪ ಬ್ರಿಟಿಷ್ ವಿಮಾನಗಳು ನಾಶವಾಗಿವೆಯೆಂದೂ, ೧೭ ಬ್ರಿಟಿಷ್ ವೈಮಾನಿಕರು ಮಡಿದಿರುವರೆಂದೂ ತಿಳಿದಿದೆ.

ಡಾ| ಶುಶ್ನಿಗ್ ಸಾಯಲಿಲ್ಲ

ಆಸ್ಟ್ರಿಯದ ಚಾನ್ಸಲರಾಗಿದ್ದ ಡಾ| ಶುಶ್ನಿಗರನ್ನು ಜರ್ಮನರು ಸೆರೆಯಲ್ಲಿಟ್ಟು ಕೊಂದುಬಿಟ್ಟರೆಂದು ಕಳೆದ ವರ್ಷ ಪ್ರಚಾರಮಾಡಲಾಗಿತ್ತು. ಆದರೆ ಅವರು ಇಂದು ಬಿಡುಗಡೆ ಹೊಂದಿ ತನ್ನ ಹೆಂಡತಿ ಮಕ್ಕಳೊಡನೆ ಮ್ಯುನಿಕ್ಕಿನಲ್ಲಿರುವರೆಂದು ತಿಳಿದಿದೆ. ಅವರ ಆರೋಗ್ಯವು ಇಂದು ಬಹಳ ಕೆಟ್ಟುಹೋಗಿದೆಯೆಂದು ತಿಳಿಯುತ್ತದೆ.

ಪುನಃ ಜರ್ಮನ್ ದಾಳಿ

ಕಿರಿಗ ಜರ್ಮನ್ ವಿಮಾನ ದಾಳಿಯು ಬಹಳ ಉಗ್ರ ರೂಪದಿಂದ ಆರಂಭವಾಗಿದೆ. ಆದ ಅಪಾಯಗಳು ಬಹಳ ಸ್ವಲ್ಪವೆಂದು ಸುದ್ದಿ.

ಚುಂಕಿಂಗಿನ ಮೇಲೆ, ಜಪಾನರ ದಾಳಿ

ಹಗಲೆನ್ನದೆ ರಾತ್ರಿಯೆನ್ನದೆ ಜಪಾನಃ ವೈಮಾನಿಕ ಪಡೆಯು ಚುಂಕಿಗೆ ದಾಳಿಯಿಡುತ್ತಿವೆ. ಚೈನೀಯರು ತಡೆಯುತ್ತಿದ್ದಾರೆ.

ಸೋಮಾಲಿಲೇಂಡ್ ಖಾಲಿ

ಬ್ರಿಟಿಷ್ ಸೋಮಾಲಿಲೇಂಡಿನಿಂದ ಜನ ಖಾಲಿಯಾಗಿದೆ. ಯೋಧರು ಮಾತ್ರ ಯುದ್ಧ ಮಾಡುತ್ತಿದ್ದಾರೆ. ಇಟಲಿಯನರು ಮುಂದುವರಿದಿರುವರು.

ಅಡಿಸ್ ಅಬಾಬಕ್ಕೆ ಧಾಳಿ

ಬ್ರಿಟಿಷ್ ವೈಮಾನಿಕ ದಲದವರು ಅಡಿಸ್ ಅಬಾಬದ ಮೇಲೆ ದಾಳಿ ಮಾಡಿ ಇಟಲಿಯನರ ಅತ್ಯಾಶ್ಚರ್ಯವನ್ನುಂಟು ಮಾಡಿದರು.

ಈ ವಾರದ ಭಾರತದ ರಾಜಕೀಯದ ವಿಚಾರದಲ್ಲಿ ವರ್ಧಾದ ವರ್ಕಿಂಗ್ ಕಮಿಟಿಯ ಅಧಿವೇಶನವು ಹೆಚ್ಚಾಗಿ ಎಲ್ಲರ ದೃಷ್ಟಿಯನ್ನು ಸೆಳೆದಿದೆ. ಮಹಾತ್ಮಾಜಿಯವರೂ ಅಧಿವೇಶನಕ್ಕೆ ಬಂದಿದ್ದರು. ಅಧಿವೇಶನದ ಆರಂಭಕ್ಕಿಂತ ಮೊದಲು ರಾಷ್ಟ್ರಪತಿ ಅಜಾದರು ಗಾಂಧಿಜಿಯವರನ್ನು ಹೋಗಿ ಸಂದರ್ಶಿಸಿದರು. ರಾಷ್ಟ್ರಪತಿಗಳೊಡನೆ ಮುಂದಿನ ಕಾಂಗ್ರೆಸ್ಸಿನ ಕಾರ್ಯಕ್ರಮವೇ [illegible] ನೆಂದು ಪ್ರಶ್ನಿಸಿದಾಗ "ಸಿದ್ಧರಾಗಿರಿ" ಎಂದು ಅವರು ಸಂದೇಶವಿತ್ತರು.

ವೈಸರಾಯರಿಗೆ ಉತ್ತರ

ವರ್ಕಿಂಗ್ ಕಮಿಟಿಯು ವೈಸರಾಯರ ಮೊನ್ನೆಯ ಹೇಳಿಕೆಗೆ ಉತ್ತರ ಕಳುಹಿಸುವ ವಿಚಾರವನ್ನು ಬಹಳ ಗಂಭೀರವಾಗಿ ವಿಚಾರ ಮಾಡಿತು. ಇಂತಹ ವಿಚಾರವು ಹೆಚ್ಚು ವಿಮರ್ಶೆಗೆ ಒಳಗಾಗ ತಕ್ಕದಿದ್ದುದರಿಂದ ಸ್ವಲ್ಪ ವಿಲಂಬವಾಗಿ ಅದು ಪ್ರಕಟವಾಗಬಹುದಾಗಿಯೂ, ವರ್ಕಿಂಗ್ ಕಮಿಟಿಯ ಅಧಿವೇಶನವೂ ಸ್ವಲ್ಪ ದೀರ್ಘ ನಡೆಯಬಹುದಾಗಿಯೂ ತಿಳಿದಿದೆ.

ಮುಂದಿನ ಹಜ್ಜೆ

ಕಾಂಗ್ರೆಸಿನ ಮುಂದಿನ ಹಜ್ಜೆಯೇನೆಂಬ ವಿಚಾರವನ್ನು ವರ್ಕಿಂಗ್ ಕಮಿಟಿಯು ಮಾಡಿರುವುದಾಗಿ ತಿಳಿಯುತ್ತದೆ. ಮಹಾತ್ಮಾಜಿಯವರು ಅಧಿವೇಶನಕ್ಕೆ ಬಂದ ಕಾರಣ ಯಾವುದೇ ರೀತಿಯ ಚಳವಳಿಯು ತತ್ಕಾಲಕ್ಕೆ ಆರಂಭವಾಗುವ ಹಾಗೆ ತೋರುವುದಿಲ್ಲ. ಕಾಂಗ್ರೆಸು, ಸರಕಾರದ ಮುಂದಿನ ಕಾರ್ಯಕ್ರಮಗಳನ್ನು ನೋಡಿ, ತನ್ನ ನಿರ್ಧಾರವನ್ನು ಮತ್ತೆ ಮಾಡುವುದಾಗಿ ಹಲವರ ಊಹೆ.

ಮೇಲ್ಪಂಕ್ತಿಯಿಲ್ಲದೆ ಸುದ್ದಿ

ಲಕ್ನೋದ ಪ್ರಸಿದ್ಧ ರಾಷ್ಟ್ರೀಯ ದಿನಪತ್ರಿಕೆಯಾದ ನೇಶನಲ್ ಹೆರಾಲ್ಡಿನ ಸಂಪಾದಕರಿಗೆ ಸಂಯುಕ್ತ ಪ್ರಾಂತ ಸರಕಾರವು ಅದು ಯುದ್ಧಕ್ಕೆ ಸಂಬಂಧಿಸಿ ಪ್ರಕಟಿಸುವ ಸುದ್ದಿಗಳ ಮೇಲ್ಪಂಕ್ತಿ (Head lines) ಗಳನ್ನು ಪ್ರಕಟ ಮಾಡುವ ಮೊದಲು ಸರಕಾರಕ್ಕೆ ಒಪ್ಪಿಸಬೇಕೆಂಬ ಆಜ್ಞೆ ಕೊಟ್ಟಿದೆ. ಆ ಕುರಿತು ಆ ಪತ್ರಿಕೆಯ ಮೇನೇಜಿಂಗ್ ಡೈರೆಕ್ಟರರಾದ ಶ್ರೀ| ಮೋಹನಲಾಲ ಸೇಕ್ಸೆನಾ ಎಂ. ಎಲ್. ಎ. (ಕೇಂದ್ರ) ಇವರು ನಾಳೆಯಿಂದ (ತಾ. ೨೦ರಿಂದ) ಮೇಲ್ಪಂಕ್ತಿಯಿಲ್ಲದೇ ಸುದ್ದಿ ಪ್ರಕಟಿಸುವೆವೆಂದೂ ಸರಕಾರಕ್ಕೆ ಮೇಲ್ಪಂಕ್ತಿ ಒಪ್ಪಿಸುವುದಿಲ್ಲವೆಂದೂ ತಿಳಿಸಿದರಾಗಿ ಗೊತ್ತಾಗಿದೆ.

ಕೇರಳ ಕಾಂಗ್ರೆಸ್ ಕಮಿಟಿ

ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ ವಿಚಾರದಲ್ಲಿ ಡಾ| ಪಟ್ಟಾಭಿಯವರನ್ನು ಅಧಿಕಾರಿಗಳ ಚುನಾವಣೆ ಮಾಡುವ [illegible] ಸಲುವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಅಧಿಕೃತರನ್ನಾಗಿ ಮಾಡಿತು.

ಬರುವ ವರ್ಷದ ಕಾಂಗ್ರೆಸ್ ಪಂಜಾಬಿನಲ್ಲಿ

೫೪ನೆಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಪಂಜಾಬಿನಲ್ಲಿಯೇ ಸೇರುವುದಾಗಿ ಈಗ ತೀರ್ಮಾನವಾಗಿದೆ. ತಮಿಳು ನಾಡಿಗಿಂತಲೂ ಪಂಜಾಬಿನಲ್ಲಿಯೇ ಸೇರುವುದು ಹೆಚ್ಚು ಯೋಗ್ಯವಾಗಿದೆಯೆಂದು ರಾಷ್ಟ್ರಪತಿ ಅಜಾದರು ಪ್ರಕಟಿಸಿದ್ದಾರೆ.

ಗಾಂಧಿ ಜಯಂತಿಗೆ ೪ ಲಕ್ಷ ಗಜ ನೂಲು

ಅಮೃತಲಾಲರ ಕಾಣಿಕೆ

ಪಂಜಾಬಿನ ಅಮೃತಲಾಲರೆಂಬವರು ಗಾಂಧಿ ಭಕ್ತರಲ್ಲಿ ಹೆಸರಾದವರು. ಗಾಂಧಿ ಜಯಂತಿಯು ಬರುವ ವಾರ ಬಂತಷ್ಟೆ? ಅದರಿಂದ ಆ ದಿನ, ವರ್ಷಂಪ್ರತಿಯಂತೆ ಈ ವರ್ಷವೂ ಗಾಂಧಿಜಿಯವರಿಗೆ ತಾನು ನೂತ ನೂಲನ್ನು ಅವರು ಕಾಣಿಕೆಯಾಗಿ ಕಳುಹಿಸುವರು. ಈ ವರ್ಷ ನಾಲ್ಕು ಲಕ್ಷ ಗಜ ನೂಲು ಕಳುಹಿಸುವರಂತೆ. ಜುಲಾಯಿ ತಾ. ೨೧ರಿಂದ ಬೆಳಿಗ್ಗೆ ಮೂರು ತಾಸಿಗೆ ಎದ್ದವರು ೪ ತಾಸಿನಿಂದ ನೂಲುವುದಕ್ಕಾರಂಭಿಸಿ ಮಧ್ಯಾಹ್ನ ೩|| ತಾಸಿನ ವರೆಗೆ ದಿನಂಪ್ರತಿ ನೂಲುವರು. ಆ ಮೇಲೆ ಮಿಕ್ಕ ಅವರ ಕೆಲಸಗಳು. ಎಂತಹ ಅಚಲವಾದ ಶ್ರದ್ಧೆ!

ಟಪ್ಪಾಲಿನ ದರ

ಇದು ವರೆಗೆ ಪರದೇಶಕ್ಕೆ ಕಳುಹಿಸುವ ಯಾವುದೇ ಕಾರ್ಡಿಗೆ ೬ರು ಆಣೆಯ [illegible] ಚೀಟಿಯನ್ನು [illegible] ಟಿಸಬೇಕಾಗಿತ್ತಷ್ಟೆ? ಆಗಸ್ಟ್ ೯ರಿಂದ ಎಂಪೆರ್ ಏರ್ ಮೈಲ್ [illegible] ಯೋಜನೆ [illegible] ಸಮ್ಮತಿಸಿಕೊಂಡಿರುವ ಯಾವ ದೇಶಕ್ಕಾದರೂ ನಾಲ್ಕಾಣೆಯ ಅಂಚೆಯ ಚೀಟನ್ನು ಕಳುಹಿಸಿದರೆ ಸಾಕಾಗಬಹುದೆಂದು ತಿಳಿದಿದೆ.

ಆಲಿ ಬಹದ್ದೂರ್ ಖಾನರ ಬಂಧನ

ಬೊಂಬಾಯಿ ಶಾಸನ ಸಭೆಯ ಸದಸ್ಯರಾದ ಆಲಿ ಬಹದ್ದೂರಖಾನರನ್ನು ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ಬಂಧಿಸಲಾಗಿದೆ.

ವೈಸರಾಯರ ಭೇಟಿಗಳು

ವೈಸರಾಯರು ಬೊಂಬಾಯಿಗೆ ಬಂದಿದ್ದಾಗ ಅಲ್ಲಿ ಅಂಬೇಡ್ಕರ್, ಜಿನ್ನಾ, ಸೆಟ [illegible]



ಕಾಂಗ್ರೆಸಿನ ಉತ್ತರವು ವೈಸರಾಯರಿಗೆ ಹೋಗಿದೆ!

ಮುಂದಿನ ವಿಷಯವು ವೈಸರಾಯರ ಉತ್ತರವನ್ನಾಧರಿಸಿದೆ

ವರ್ಧಾ ವರ್ಕಿಂಗ್ ಕಮಿಟಿಯ ಸುದ್ದಿ

ಶ್ರೀ ಪಾಟ್ಲಿವಾಲರ ಬಂಧನ! ನೆಹರುಗಳು ಉದ್ವಿಗ್ನರಾಗಿದ್ದಾರೆ!!

ಬ್ರವಾಡ್, ಟೇಲರ್ ಜಮ್ನಾದಾಸ್, ಸ್ಟೀವನ್ಸ್ ಮುಲ್ಲಾಜಿ ಸಾಹೇಬ್ ಪ್ರಭೃತಿಗಳನ್ನು ಭೇಟಿಮಾಡಿದರು.

ಭಾರತೀಯ ವೈಮಾನಿಕರು ಯೂರೋಪಿಗೆ ತೆರಳುವರು

೨೪ ಮಂದಿ ಭಾರತೀಯ ವೈಮಾನಿಕರು ಯುರೋಪಿಗೆ ಯುದ್ಧರಂಗಕ್ಕೆ ತೆರಳುವರು. ಇಂಗ್ಲೆಂಡಿನಲ್ಲಿ ೧೩ರ ಮಿಶನ್ನ ಭಾರತೀಯ ಆಫೀಸರರೂ, ೨೪ ಇತರ ಆಫೀಸರರೂ, ಆರ್ ಎ ಎಫ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ

ಪ್ರೊ| ರಂಗರಿಗೆ ಶಿಕ್ಷೆ

ಕೇಂದ್ರ ಅಸೆಂಬ್ಲಿ ಸದಸ್ಯರಾದ ಪ್ರೊ| ಎನ್ ಜಿ ರಂಗರಿಗೆ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿಗನುಗುಣವಾಗಿ ನಾಲ್ಕು ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ. ಈ ಮುಂಚೆ ೧೬ ತಿಂಗಳ ಕಠಿನ ಶಿಕ್ಷೆಯ ನಂತರ ಇದನ್ನು ಅನುಭವಿಸ್ಬೇಕಾಯಿತು ಕಿಸಾನ ಸಮ್ಮೇಳನದಲ್ಲಿ ಮಾಡಿದ ಭಾಷಣವು ರಾಜದ್ರೋಹಕರವಾಗಿತ್ತೆಂದು ಅಪಾದನೆ.

ಅಬ್ದುಲ್ ಗನಿಯವರ ಬಂಧನ

ಲುಧಿಯಾನ ನಗರ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ, ಪಂಜಾಬ್ ಪ್ರಾಂ| ಕಾಂ| ವರ್ಕಿಂಗ್ ಕಮಿಟಿ ಸದಸ್ಯರೂ ಆದ ಮೌಲ್ವಿ ಅಬ್ದುಲ್ ಗನಿಯವರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ ರಾಜದ್ರೋಹಕರವಾದ ಭಾಷಣದ ಆಪಾದನೆ.

ಮೂವರ ಬಂಧನ

ಸಾವಾರ್ಡ್ ಬ್ಲಾಕಿನ ಶ್ರೀಗಳಾದ ಕೇದಾರನಾಥ, ಬಿ. ಡಿ. ಚೌಧರಿ, ರೂಪನಾರಾಯಣ ರಾವ್ ಎಂಬಿಯಾವರನ್ನು ಡಿಫೆನ್ಸ್ ಕಾನೂನಿನಂತೆ ಅಲಾಬಾದಿನಲ್ಲಿ ಬಂಧಿಸಲಾಗಿದೆ.

ಸಿಮ್ಲಾಕ್ಕೆ ಮರಳಿದರು

ವೈಸರಾಯರು ತಮ್ಮ ಮಳೆಗಾಲದ ಸಂಚಾರವನ್ನು ಮುಗಿಸಿಕೊಂಡು ಸಿಮ್ಲಾಕ್ಕೆ ಮರಳಿದರು.

ಮೈಸೂರಿನ ರಾಜ್ಯ ಪಟ್ಟಕ್ಕೇರುವುದು

ಮೈಸೂರಿನ ರಾಜ್ಯಪಟ್ಟಕ್ಕೆ ಶ್ರೀ ಜಯಚಾಮರಾಜ ಒಡೆಯರು ಸಪ್ಟಂಬರ ತಾ ೮ರೆಂದು ಏರುವ ಶುಭಮುಹೂರ್ತವಾಗಿ ನಿಶ್ಚಯವಾಗಿದೆಯೆಂದು ತಿಳಿದು ಬರುತ್ತದೆ.

ಪತ್ರಿಕೆಗಳ ಮೇಲೆ ವಕ್ರದೃಷ್ಟಿ

ಬಿಹಾರಿನ ರಾಷ್ಟ್ರೀಯ ಪತ್ರಿಕೆಯಾದ ಸರ್ಚ್‌ಲೈಟ್ ಎಂಬ ದಿನ ಪತ್ರಿಕೆಯು ಮೂರು ತಿಂಗಳವರೆಗೆ ತನ್ನ ಸಂಪಾದಕೀಯ ಲೇಖನಗಳನ್ನು ಪ್ರಕಟವಾಗುವ ಮೊದಲು ಪಾಟ್ನದ ಸ್ಪೆಶಲ್ ಪ್ರೆಸ್ ಎಡ್ವೈಸರರಿಗೆ ಒಪ್ಪಿಸಬೇಕೆಂದು ಸರಕಾರದ ಅಪ್ಪಣೆ ಕಲ್ಕತ್ತೆಯ ಸ್ಟಾರ್ ಓಫ್ ಇಂಡಿಯಾ ಪತ್ರಿಕೆಯ ಮೇಲೆಯೂ ಅಂತಹುದೇ ಅಪ್ಪಣೆಯೊಂದು ಹೊರಟಿದೆ.

ಅದೆಂತಹ ಬಲವೋ!

ಎಳ್ಳು ಹಿಂಡಿ ಎಣ್ಣೆ ತೆಗೆದು ಅನ್ನದೊಂದಿಗೆ ಬೆರಸಿ ಊಟಮಾಡುತ್ತಿದ್ದರು ನಮ್ಮ ತಾತನವರು' ಎಂದು ಪೂರ್ವಕಾಲದವರು ಹೇಳುತ್ತಿದ್ದರು ಅದು ಸತ್ಯವೋ ಅಸತ್ಯವೋ ನಾವು ನೋಡಲಿಲ್ಲವಾದರೂ ಪೂರ್ವಿಕರು ಮಾತ್ರ ಶರೀರ ಕಷ್ಟದಿಂದ ದೃಢಕಾಯರಾಗಿದ್ದರೆಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತೇವೆ.

ನಮ್ಮಲ್ಲಿ ಅನೇಕರಿಗೆ ಆ ಶಕ್ತಿ, ಆ ಬಲ, ಆ ಪಟುತ್ವ ಇರುವುದಿಲ್ಲ ದೇಹಶ್ರಮದಿಂದ ಕೆಲಸ ಮಾಡಲು ಅವಕಾಶವಿಲ್ಲವೆಂದು ಈ ನೀರಸ ಜೀವನವನ್ನು ಕಳೆಯಬಾರದು ನಾವು ಒಳ್ಳೇ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆಕಾಂತಿಗಳಿಂದ ಕೂಡಿರಬೇಕು ಆದುದರಿಂದ 'ಅಮೃತ' ಔಷಧವನ್ನು ಶೀಘ್ರವಾಗಿ ಸೇವಿಸಬೇಕು ಅಮೃತವನ್ನು ಸೇವಿಸಿದರೆ ನಿಮಗೆ ಜೀವನ ಸೌಖ್ಯಗಳನ್ನು ಅನುಭವಿಸಲು ಬೇಕಾದ ಉಷ್ಣ ರಕ್ತವೂ, ಬಲವೂ ಉಂಟಾಗುತ್ತದೆ

"ಅಮೃತ"ವು ಎಲ್ಲಾ ಔಷಧಿ ಶಾಪುಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ ಮದ್ರಾಸು.

ಅರಾಷ್ಟ್ರೀಯ ಧೋರಣೆ

ಅಮೇರಿಯವರ ಹೇಳಿಕೆಯಲ್ಲಿರುವ ಜಾತೀಯತೆಯ ವಿಚಾರವನ್ನು ವಿಮರ್ಶಿಸುತ್ತಾ ಶ್ರೀ ಎಂ ಎಸ್ ಅಣೆಯವರು ಅದು ರಾಷ್ಟ್ರೀಯವಾದ ಧೋರಣೆಯೆಂದು ಟೀಕಿಸಿರುವರು

ಹೊಸ ವಾರ್ತೆ

ವರ್ಕಿಂಗ್ ಕಮಿಟಿಯು ವೈಸರಾಯರಿಗೊಂದು ತೀರ್ಮಾನವನ್ನು ಕಳುಹಿಸಿದೆಯೆಂದು ತಿಳಿದಿದೆ ಕಾಂಗ್ರೆಸಿನ ಮುಂದಿನ ಹೆಜ್ಜೆಯು ವೈಸರಾಯರು ಅದಕ್ಕೆ ಕೊಡುವ ಉತ್ತರವನ್ನು ಆಧರಿಸಿರುವುದಾಗಿ ತಿಳಿದಿದೆ.

ಸಂಯುಕ್ತ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಕೃಷ್ಣದತ್ತ ಪಾಟ್ಲಿವಾಲರನ್ನು ಬಂಧಿಸಲಾಗಿದೆ ಈ ಕುರಿತು ನೆಹರುಗಳು ಅವರನ್ನು ಅಭಿನಂದಿಸುತ್ತಾ ತನ್ನೊಂದು ಹೇಳಿಕೆಯಲ್ಲಿ ನಾನೂ ನನ್ನ ಗೆಳೆಯರೊಡನೆ ಸೇರುವೆನು, ನನ್ನ ಹೃದಯವು ಅವರ ಬಳಿಯಿರಲು ಹಾತೊರೆಯುತ್ತದೆ ಎಂದಿರುವರು.

ಬ್ರಿಟಿಷ ಪ್ರಧಾನ ಮಂತ್ರಿ ಚರ್ಚಿಲ್ಲರು ಒಂದು ಸ್ಫೂರ್ತಿದಾಯಕ ಭಾಷಣ ಮಾಡುತ್ತಾ ಲೋಕಕಂಟಕರೊಡನೆ ಬ್ರಿಟಿಸರು ಕಾದಾಡುತ್ತಿರುವರೆಂದೂ ಜಯವು ತಮಗೆ ಖಂಡಿತವೆಂದೂ ಅಮೆರಿಕವು ಸಹಕರಿಸುವದೆಂದೂ ಹೇಳಿದರು

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R I A 450/40 O. S. 75/1939

ಮಮ್ಮಕ್ಕೆ ವಾದಿಳು

ಗೋವಿಂದ ಭಟ್ಟ ಕೂಡಾ 11 ಜನರು ..

ಪ್ರತಿವಾದಿರು—ಎದ್ರಿರು

9ನೆ ಎದ್ರಿ—ಮುತ್ತು ಹೆಂಗ್ಸು. 8ನೆ ಪ್ರತಿವಾದಿ ಅಪ್ಪು ಹೆಂಗ್ಸಿನ ತಂಗಿ, ನೆಟ್ಟಣಿಗೆ ಗ್ರಾಮ,

ಮೇಲಿನ ವೆವಹರಣೆಯಲ್ಲಿ ವಾದಿಳು ದಾವಾ ಆ್ಯವಜು ವಸೂಲು ಹೊಂದುವರೆ ಪ್ರಿಲಿಮಿನೆರಿ ಡಿಕ್ರಿಗನುಸಾರವಾಗಿ ಫ್ಯಾನೆಲ ಡಿಕ್ರಿ ಕೊಡಿಸಬೇಕಾಗಿ ಅರ್ಜಿ ಕೊಟ್ಟು ಅದು ತಾ. 9–10–40ಕ್ಕೆ ನೋಟೀಸಿನ ತಿಕ್ಕಿ ವ್ಯಾದೆ ಆಗಿರುತ್ತದೆ. ಆದುದರಿಂದ ಎದ್ರಿಯು ಏನಾದರೂ ಆಕ್ಷೇಪ ಹೇಳುವದಿದ್ದರೆ ಆ ವ್ಯಾದೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅವಳನ್ನು ಶಿಪ್ಪಾ ಎಂತ ಮಾಡಿ ಈ ವೆವಹರಣೆಯನ್ನು ತನ್ನಿಯಿಂದ ಮುಂದರಿಸಲಾಗುವದು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಲಾಗಿಯದೆ.

PUTTUR, 6-8-1940 } **S. RAMACHANDRA RAO,** Pleader for Plaintiff

ಇಂಗ್ಲಾಂಡಿನ ಸಮುದ್ರ ಕರಾವಳಿಯಲ್ಲಿ ಗುಂಡ ಗಳುಬೀಳುತ್ತಾ ಇವೆಯಾಗಿ ತಿಳಿಯುತ್ತಿವೆ ಇವು ಫ್ರೆಂಚ್ ಕರಾವಳಿಯಿಂದ ಬರುತ್ತಿವೆಯಾಗಿಯೂ ತಿಳಿದಿದೆ

ಜರ್ಮನರು ಹೋದ ಕಡೆಗಳಲ್ಲೆಲ್ಲಾ ಇರುವ ಆಹಾರ ಸಾಮಗ್ರಿಗಳನ್ನು ಕಸಕೊಳ್ಳುವುದರಿಂದ ಮುಂದೆ ಯೂರೋಪಿನಲ್ಲಿ ಭಯಂಕರ ಕ್ಷಾಮದ ಹೆದರಿಕೆಯಿದೆಯೆಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೇಳಲಾಯಿತು

ಎಂ ಟ್ರೋಟ್ಸ್ಕೀಯವರು ಬಹಳ ವಿಷಮವಾದ ಬೇನೆಯಿಂದ ಆಸ್ಪತ್ರೆಯಲ್ಲಿರುವರು ಅವರಿಗೆ ಮರಣ ಪಾಯವೂ ಸಂಭವಿಸಬಹುದೆಂದು ಡಾಕ್ಟರರ ಹೇಳಿಕೆ

ಚುಂಕಿಂಗಿಗೆ ಜಪಾನೀಯರು ಬಾಂಬಿನ ಸುರಿಮಳೆಯನ್ನೇ ಸುರಿಸಿದರಾಗಿ ತಿಳಿದುಬರುತ್ತದೆ

NOTICE

In the Court of the District Munsiff of Mangalore

R E P No 238/1940
In O S No 72/1931

Between

Cocess Fernandes *Petitioner* (*Plaintiff*).

and

P Shama Rao—*Respondent* (*Defendant*)

Notice to the Respondent, P Shama Rao, son of Pote l Duggappaya, residing in Padu Panambur village, Mangalore Taluk is hereby given that the petitioner has filed the above execution petition for attachment of the sum of Rupees 400–11–11 lying to his credit with the District Educational Officer, South Kanara, as per Provident Fund Pass Book No. 28538 (Aided Schools) in the name of the deceased P. Laxmana of which the Respondent is the nominee, and that the said petition is posted to 6–9–1940 for hearing The Respondent may appear before the Court on the said day and oppose the petition, failing which it will be decided in his absence.

(By Order of the Court)

Mangalore, 13th August 1940, } **J. GONSALVES,** Vakil for Petitioner.

ಜನಾಂಗ ಜನಾಂಗಗಳೊಳಗೆ ಮಧುರ ಸಂಬಂಧವಿರಬೇಕು!

ಚೀನವೂ ಭಾರತವೂ ಬೆರೆತಿರಬೇಕು

ದೇಶದ ಹಿತಕ್ಕಾಗಿ ದಿನವಿಡೀ ದುಡಿವ ಕಾಲವಿದು

ನೆಹರುಗಳ ವೀರ ವಾಣಿ

ನಾನು ಭಾರತದ ಸ್ವಾತಂತ್ರ್ಯದ ವಿಷಯವನ್ನು ಆಲೋಚಿಸುತ್ತೇನೆ; ಅದರೊಡನೆ ಜಗತ್ತಿನ ಸ್ವತಂತ್ರ ಜನಾಂಗಗಳ ಸಂಯುಕ್ತ ಘಟನೆಯ ವಿಷಯವನ್ನೂ ವಿಚಾರಿಸುತ್ತೇನೆ. ಬರಿಯ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ರಾಜ್ಯಗಳ ಒಗ್ಗಟ್ಟನ್ನು ಮಾತ್ರ ನಾನು ಒಪ್ಪಲಾರೆ. ಬ್ರಿಟಿಷ ಸಾಮ್ರಾಜ್ಯಶಾಹಿಯನ್ನು ಮುರಿಯಲು ನಾನು ಹೋರಾಡುತ್ತೇನೆ. ಆದರೆ ನಾನು ಬ್ರಿಟಿಷ ಪ್ರಜೆಗಳ ಸಮೀಪ ಸಂಬಂಧವನ್ನು ಬಯಸುತ್ತೇನೆ. ಬ್ರಿಟಿಷರ ದುಃಖವು ಭಾರತೀಯರ ದುಃಖಕ್ಕೆ ಸಮಾನವೇ ಆಗಿದೆ. ಭಾರತೀಯರೂ ಬ್ರಿಟಿಷ್ ಭಂಡಶಾಹಿಯ ತುಳಿತದಲ್ಲಿ ದುಃಖಪಡುತ್ತಿರುವರು' ಹೀಗೆಂದು ಕಾಶಿಯಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಪಂಡಿತ ನೆಹರುಗಳು ಭಾರತದ ವಿಷಯ ಮತ್ತು ಅದರ ನೆರೆಯ ರಾಷ್ಟ್ರಗಳ ವಿಚಾರವಾಗಿ ಒಂದು ಉದಾತ್ತ ಭಾಷಣವಿತ್ತರು.

ಅವರ ಭಾಷಣದ ಸಾರಾಂಶವು ಹೀಗಿತ್ತು.—

'ಚೈನವೇ ಮೊದಲಾದ ಹತ್ತಿರದ ರಾಷ್ಟ್ರಗಳೊಡನೆ ಭಾರತದ ಸಂಬಂಧವು ಅಷ್ಟು ಸಮೀಪವಾಗಿಲ್ಲ. ಇನ್ನು ಮುಂದೆ ಯಾದರೂ ಇದು ಬೆಳೆಯಬೇಕು. ಜಗತ್ತಿನ ಜನಾಂಗಗಳ ಒಗ್ಗಟ್ಟು ತತ್ಕಾಲಕ್ಕೆ ಸಾಧ್ಯವಿಲ್ಲದಿದ್ದರೂ, ಭಾರತದ ಮತ್ತು ಅದರ ಸಮೀಪದ ರಾಷ್ಟ್ರಗಳು ಸಮೀಪ ಸಂಬಂಧವನ್ನು ಬೆಳಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಮತ್ತು ಸಮಾನತೆಯಿಂದ ಪರಸ್ಪರ ಗೌರವ ಸ್ನೇಹಗಳಿಂದ ವರ್ತಿಸಬೇಕಾಗಿದೆ.

'ಇಂದಿನ ಪರಿಸ್ಥಿತಿಯು ಭೀಕರವಾಗಿದೆ. ನಾವಿಂದು ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಗಳೊಡನೆ ವ್ಯರ್ಥ ಮಾತನಾಡುತ್ತಾ ಸಮಯ ಕಳೆಯಬಾರದು. ಮುಂದೆ ಬೇಗನೇ ಅವರನ್ನು ಎದುರಿಸ ಬೇಕಾಗಿ ಇಂದಿನ ಅವರ ಕಾರ್ಯವೇ ತೋರಿಸುತ್ತದೆ. ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಅಭಿಮಾನವುಳ್ಳ ಜನರ ಬಂಧನ ಮತ್ತು ಕಡೆಗಳು ಇಂದು ಆಗುವಷ್ಟು ಹಿಂದೆ ಎಂದೂ ಆಗಿಲ್ಲ.

'ನಾವಿಂದು ಸಭೆ ಕೂಡಿ, ಮೆರವಣಿಗೆ ಮಾಡಿ, ಕ್ರಾಂತಿಗೆ ಜಯವಾಗಲಿ ಎಂದು ಕೂಗುವ ಕಾಲವಿದಲ್ಲ. ಇದು ಕೆಲಸ ಮಾಡುವ ಸಮಯ. ನಮ್ಮ ದೇಶದ ಸಲುವಾಗಿ ದಿನದ ಇಪ್ಪತ್ತನಾಲ್ಕು ತಾಸೂ ದುಡಿವ ಸಮಯ. ಜಗತ್ತು ಒಂದು ಹೋರಾಟದ ಮಧ್ಯೆ ಸಿಲುಕಿದೆ, ಭಾರತೀಯರು ಅದರಿಂದ ಹೊರತಾಗಿರುವುದು ಸಾಧ್ಯವಿಲ್ಲ. ಯಾವ ದೇಶದ ಜನರು ಧೀರರೋ, ಸಂಘಟಿತರೋ ಆ ದೇಶವು ಖಂಡಿತ ಬಾಳೀತು'

'ಉದಾತ್ತ ನಾಗರಿಕತೆಯ ಬೀಡಾಗಿದ್ದ ಫ್ರಾನ್ಸಿನಂತಹ ರಾಷ್ಟ್ರದ ಪತನದ ವಾರ್ತೆಯನ್ನೋದಿ ನಾನು ಅತ್ಯಂತ ಖೇದಗೊಂಡಿದ್ದೆನು. ಅಂತೆಯೇ ಬ್ರಿಟನು ಅಪಜಯಹೊಂದಿದರೂ, ಅದರ ನಾಗರಿಕತೆಯನ್ನು ಬಹುಮಾನಿಸುವ ನನಗೆ ಬಹಳವಾಗಿ ದುಃಖವಾಗದಿರಲಾರದು.'

ಕಾಂಗ್ರೆಸಿನ ವಿರುದ್ಧ ಅಪಪ್ರಚಾರ!

ಸಂಯುಕ್ತ ಪ್ರಾಂತದ ಒಂದು ಕಾರ್ಯ

ರಾಜಕೀಯ ಭಾರತದ ನಿಕಟಭವಿಷ್ಯವು ಯಾವ ರೂಪವನ್ನು ತಾಳಬಹುದೋ, ಎಂಬ ಖೇದಕರ ಸಂದೇಹವು ಉಂಟಾಗುತ್ತಿದ್ದ ಹಾಗೆ ಅದರ ಪ್ರಥಮ ಚಿತ್ರವು ಸಂಯುಕ್ತ ಪ್ರಾಂತದಿಂದ ಬಂದಿರುವದು. ಕಾಂಗ್ರೆಸಿನ ಪ್ರತಿ ಸರಕಾರದ ಮುಂದಿನ ಧೋರಣಕ್ಕೆ ಇದು ಪೂರ್ವಸೂಚನೆಯಾಗಲೂ ಬಹುದು. ಹಿಂದೆ ಸರಕಾರಕ್ಕೂ ಕಾಂಗ್ರೆಸಿಗೂ ಸಂಘರ್ಷವುಂಟಾದಾಗ ಸರಕಾರದಧಿಕಾರಿಗಳು ಹೀಗೆಯೇ ಕಾಂಗ್ರೆಸಿನ ವಿರುದ್ಧವಾಗಿ ಅಪಪ್ರಚಾರಕ್ಕೆ ತೊಡಗಿದ ನಿದರ್ಶನಗಳಿವೆ. ಆ ಕಡೆಯಿಂದ ಈ ಅಪಪ್ರಚಾರವು ಈಗಾಗಲೇ ಆರಂಭವಾಗಿರುವದರಿಂದ ಸರಕಾರ ಮತ್ತು ಕಾಂಗ್ರೆಸಿನೊಳಗೊಳಗೆ ಸಂಘರ್ಷವು ಅವಶ್ಯಂಭಾವಿ ಎಂಬ ಹಾಗೆ ಸರಕಾರವು ತಿಳಿದಿರುವಂತೆ ಕಾಣುತ್ತದೆ

ಅಲಿಘುರದಲ್ಲಿ ಡಕಾಯಿತರ ಕೈದು

ಡಕಾಯಿತಿ ಮಾಡುವದನ್ನು ಜೀವನ ವೃತ್ತಿಯನ್ನಾಗಿಟ್ಟುಕೊಂಡ ಒಂದು ದಳವನ್ನು ಸಂಯುಕ್ತ ಪ್ರಾಂತದ ಪೋಲೀಸ ಅಧಿಕಾರಿಗಳು ಅಲಿಘುರದಲ್ಲಿ ಕೈದು ಮಾಡಿದರು. ಈ ಕೈದಿನ ವಿಷಯವಾಗಿ ಒಂದು ಪ್ರಕಟಣೆಯನ್ನು ಹೊರಡಿಸಿ ಈ ಡಕಾಯಿತರ ಗುಂಪಿನಲ್ಲಿ ಮೂವರು ಕಾಂಗ್ರೆಸ ಜನರೂ ಇದ್ದರೆಂದು ಪ್ರತ್ಯೇಕವಾಗಿ ಹೇಳಿದೆ. ಡಕಾಯಿತರೊಳಗಿದ್ದಿರಬಹುದಾದ ಕಾಂಗ್ರೆಸ ಮಂದಿಯನ್ನು ಪ್ರತ್ಯೇಕವಾಗಿ ತೋರಿಸಿಕೊಟ್ಟು, ಕಾಂಗ್ರೆಸಿನ ವಿರುದ್ಧ, ಜನರಿಗೆ ನೀತಿ ಬೋಧೆ ಮಾಡುವ ಸರಕಾರದ ಧೋರಣೆಯನ್ನು ಖಂಡಿಸಿ, ಸಂಯುಕ್ತ ಪ್ರಾಂತೀಯ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿ ಶ್ರೀ ಕೇಶವದೇವ ಮಾಲವೀಯರು ಕೊಟ್ಟ ಹೇಳಿಕೆಯು ಮನನೀಯವಾಗಿದೆ

ಕಾಂಗ್ರೆಸ್ಸಿನ ವಿರುದ್ಧ ಅಪ ಪ್ರಚಾರ

ಹೇಳಿಕೆಯಲ್ಲಿ ಅವರು ಹೀಗೆಂದಿರುವರು—'ಸರಕಾರವು ಕಾಂಗ್ರೆಸಿನ ವಿರುದ್ಧ ಅಪ ಪ್ರಚಾರಕ್ಕಿಳಿದಿರುವದನ್ನು ತೀವ್ರವಾಗಿ ನಿಷೇಧಿಸಬೇಕಾಗಿದೆ. ಹಿಂದೆ ಗುಪ್ತರೂಪದಲ್ಲಿದ್ದ ಪ್ರತಿಕಾರ ಭಾವನೆಯನ್ನು ಸರಕಾರದಧಿಕಾರಿಗಳಲ್ಲಿ ಪುನ[illegible] ಉದ್ರೇಕಿಸುತ್ತಿರುವ ಹಾಗೆ ಕಾಣುತ್ತದೆ. ಸರಕಾರದ ಮನೋಭಾವನೆಯ ಪೂರ್ಣ ರೂಪವು ಸದ್ಯದಲ್ಲಿಯೇ ನಮಗೆ ಕಾಣ[illegible] ಸಿಗಬಹುದು.

ಸರಕಾರ ತಿಳಿದಿರಬೇಕಾದ ವಿಷಯ

ದೇಶದ ಎಲ್ಲಾ ಭಾಗಗಳನ್ನು ಆವರಿ[illegible]ರುವಂಥ ಒಂದು ಪ್ರಜಾಸತ್ತಾತ್ಮಕ ಸಂಸ್ಥೆ[illegible]ವಾಗಿ ಕಾಂಗ್ರೆಸು ಇದೆ ಎಂಬುದನ್ನು ಸ[illegible]ಕಾರದಧಿಕಾರಿಗಳು ತಿಳಿದಿರಬೇಕಾಗಿದೆ. ಅದ್ದರಿಂದ ಬೇಡವಾದ ಮನುಷ್ಯರ[illegible] ಕಾಂಗ್ರೆಸಿನೊಳಗೆ ಸೇರದಂತೆ ಅವರನ್ನು ದೂರವಿರಿಸುವುದು ಅಸಾಧ್ಯವಲ್ಲದಿದ್ದರೂ ತುಂಬಾ ಕಠಿನವಾಗಿರುವದು. ಕಾಂಗ್ರೆ[illegible] ಮಂದಿಯ ವೇಷ ಹಾಕಿಕೊಂಡ[illegible] ಕಾಂಗ್ರೆಸಿನ ಎಲ್ಲಾ ಸಮಾಚಾರಗಳನ್ನು ಸರಕಾರಕ್ಕೆ ಕೊಡಲಿಕ್ಕೆ ನಿಯುಕ್ತರಾದ ಗೂಢಚಾರರು ಮತ್ತು ವಾರ್ತಾ ಪ್ರಸಾರಕರನ್ನು ಕೂಡ ತಡೆಯುವದು ಕಾಂಗ್ರೆಸಿಗೆ ಸಾಧ್ಯವಾಗಿಲ್ಲ. ಕಾಂಗ್ರೆಸಿನಂ[illegible] ದೊಡ್ಡ ಸಂಸ್ಥೆಯೊಳಗೆ ಬಹ್ವರೂಪಿ [illegible]ಧುಗಳು ಸೇರಿಕೊಳ್ಳುವದು ಯಾರಿಗೂ ಆಶ್ಚರ್ಯವನ್ನುಂಟು ಮಾಡಲಾರದು. ಪರಂತು ಸಾಮ ಕಾಳನ್ನು ಕುಂಟ ಕಾಯಿಯಾಗಿ ಮಾಡಿ ತೋರಿಸುವ ಇಂತಹ ವರ್ತನವು ಮಾತ್ರ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡದಿರದು

Money to Lend

...... a good deal of it. Loans are granted at low rates of interest on Government securities, bullion, gold-ornaments, goods and agricultural produce, stocks and shares, life insurance policies and on all kinds of approved security. Enquire at any of our Thirty Seven Offices.

RESOURCES OF A CROREF

ESTD: 1906

CANARA BANK LIMITED

ವಿಚಿತ್ರ ಪ್ರಪಂಚ

ಕಲಿಯುಗದ ತಾಟಕಿಯರು

ನ್ಯೂಯೊರ್ಕಿನಲ್ಲಿ ಒಂದು ಅದ್ವಿತೀಯ ಕ್ಲಬ್ಬು ಇದೆ. ಇದರ ಸದಸ್ಯರೆಲ್ಲರೂ ಗಂಡಂದಿರನ್ನು ನಾನಾ ಉಪಾಯಗಳಿಂದ ಪೀಡಿಸಲಿಕ್ಕಾಗಿಯೇ ಹೊರಟ ಹೆಂಡಂದಿಯರಾಗಿರುವರು. ಗಂಡನ ಮೋಟರ ಕಾರಿನ ಕನ್ನಡಿಯನ್ನು ಒಡೆದುಹಾಕಿ, ಬೂಟ್ಸುಗಳನ್ನು ಚೂರಿಯಿಂದ ಚೂರು ಚೂರು ಮಾಡಿ, ರಾತ್ರಿಯಲ್ಲಿ ಗಂಡನನ್ನು ಮಲಗುವ ಕೋಣೆಗೆ ಬರಬಿಡದೆ ಒಳಗಿನಿಂದ ಅಗಳುಹಾಕಿ, ಗಂಡನ ಹಾಸಿಗೆ ಅಡಿಯಲ್ಲಿ ಬೆಕ್ಕನ್ನು ಅಡಗಿಸಿಟ್ಟು ಅವನನ್ನು ಬೆದರಿಸಿ, ಅಷ್ಟು ಸಾಕಾಗದೆ, ಮಲಗಿದ್ದ ಗಂಡನ ಕಣ್ಣಿಗೆ ವಿದ್ಯುಚ್ಛಕ್ತಿಯ ಪ್ರಕಾಶ ಬಿಟ್ಟು, ಅವನನ್ನು ನಿದ್ರಿಸದ ಹಾಗೆ ಮಾಡುತ್ತಿದ್ದ ಮಹಾತಾಟಕಿಯೇ ಈ ಕ್ಲಬ್ಬಿನ ಅಧ್ಯಕ್ಷೆ. ದಾಂಪತ್ಯವಿಚ್ಛೇದ ಮಾಡಿಕೊಂಡ ಈ ಪುಣ್ಯಾತ್ಮಗಿತ್ತಿಯ ಅಧ್ಯಕ್ಷತೆಯಲ್ಲಿ ಇತರ ತಾಟಕಿಯರು ವಾರವಾರವೂ ಸಭೆಕೂಡಿ, ತಮ್ಮ ಗಂಡಂದಿರನ್ನು ಹೇಗೆ ಪೀಡಿಸಬಹುದೆಂಬ ಕುರಿತು ಒಟ್ಟಾಗಿ ಆಲೋಚಿಸಿ ತಮ್ಮ ಕಾರ್ಯಕ್ರಮವನ್ನು ನಿಶ್ಚಯಿಸಿಕೊಳ್ಳುವರು.

ನಾಯಿ ಕಚ್ಚುವ ಮನುಷ್ಯ

ಅಮೇರಿಕದ ವಾಲ್ಟರ್ ಎಂಬಲ್ಲಿ ನಾಯಿ ವ್ಯಾಪಾರವನ್ನು ಮಾಡಿಕೊಂಡಿರುವ ಜೋಸೇಫ ಟೋಲರ ಎಂಬವನು ಜಂಗಲೀ ಸ್ವಭಾವದ ನಾಯಿಗಳನ್ನು ಪಳಗಿಸಿ ಅವುಗಳನ್ನು ಸರಿ ದಾರಿಗೆ ತರುವರೆ ಬಹಳ ಹೆಸರು ಪಡೆದಿದ್ದಾನೆ. ಇವನು ನಾಯಿಗಳನ್ನು ಪಳಗಿಸುವ ರೀತಿ ವಿಚಿತ್ರವಾಗಿದೆ. ಸಿಡುಕು ಸ್ವಭಾವದ ನಾಯಿಗಳಿಂದ ಅವನು ತನ್ನನ್ನು ಮೊದಲು ಕಚ್ಚಿಸಿಕೊಳ್ಳುವನು. ಆ ಮೇಲೆ ಅವುಗಳನ್ನು ತಾನೇ ಕಚ್ಚಿ ಅವುಗಳಿಗೆ ಸದ್ವರ್ತನದ ಪಾಠಗಳನ್ನು ಕಲಿಸುವನು. ಬೈದ ಬಾಯಿಗೆ ಹೊಡೆದ ಪೆಟ್ಟು ಎಂಬಂತೆ ಅವನ ನಾಯಿ ಪಳಗಿಸುವ ಕ್ರಮವು ಇರುತ್ತದೆ. ಹೀಗಾಗಿ ಟೋಲರನು ನಾಯಿಗಳನ್ನು ಕಚ್ಚದೆ ಕಳೆದ ಒಂದು ದಿನವಾದರೂ ಇರುವುದಿಲ್ಲ!

ಬ್ರಿಟನಿನಲ್ಲಿ ಹೆಂಡಂದಿರ ವ್ಯಾಪಾರ

ಉಳಿದೆಲ್ಲ ರಾಷ್ಟ್ರಗಳಿಗಿಂತ ಹೆಚ್ಚು ಸಭ್ಯವೆನ್ನಿಸಿರುವ ಬ್ರಿಟನಿನಲ್ಲಿ ಈಗ ಸರಿಯಾಗಿ ನೂರು ವರ್ಷಗಳ ಹಿಂದೆ ಗಂಡಂದಿರು ತಮ್ಮ ಹೆಂಡಂದಿರನ್ನು ಮಾರಿ ಹಣ ಸಂಪಾದಿಸುತ್ತಿದ್ದರೆಂದು ಹೇಳಿದರೆ ಆಶ್ಚರ್ಯವಾಗಬಹುದು. ಆದರೆ ಇದು ಅಕ್ಷರಶಃ ನಿಜವಾಗಿದೆ. ೧೮೩೯ನೇ ಇಸವಿಯ ಸಪ್ಟಂಬರ ೧೪ನೆ ದಿನ ಬರ್ಮಿಂಗ್ಹಾಮ್ ಜರ್ನಲ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರ್ತಮಾನವು ನಮ್ಮ ಮಾತಿಗೆ ಸಾಕ್ಷಿಯಾಗಿರುವದು. ಅಂದು ಬರ್ಮಿಂಗ್ಹಾಮಿನ ಸಂತೆಯಲ್ಲಿ ಒಬ್ಬಾಕೆಯ ವಿವಾಹಿತ ಗಂಡನು ಅವಳನ್ನು ಅವಿವಾಹಿತಳಾಗಿದ್ದಾಗ ಪ್ರೀತಿಸಿದ್ದ ಇನ್ನೊಬ್ಬನಿಗೆ ಅರ್ಧ ಕ್ರೌನಿಗೆ ಮಾರಿ, ರಸೀ ಕಾಗದದ ಮೇಲೆ ಕ್ರಯ ಚೀಟು ಬರೆಕೊಂಡ ಉಲ್ಲೇಖವು ವರ್ತಮಾನದಲ್ಲಿ ಬಂದಿದೆ. ಹಣವು ತಲಪಿರುವದಕ್ಕೆ ಆಕೆಯ ಹೊಸ ಗಂಡನು ಹಳೆ ಗಂಡನಿಂದ ಸರಿಯಾದ ರಶೀದಿಯನ್ನು ಬರೆಸಿಕೊಂಡಿದ್ದನಂತೆ

ಗುಂಡು ಹಾರಿಸಿದ ಮೀನು

ಕೆನಡದ ಒಂಟೇರಿಯೊದಲ್ಲಿ ಮೀನು ಹಿಡಿಯಲಿಕ್ಕೆ ಹೋದ ಒಬ್ಬಾತನನ್ನು ಮೀನು ಗುಂಡು ಹೊಡೆದುಕೊಂದು ಹಾಕಿದ ಆಶ್ಚರ್ಯಕರ ಸಮಾಚಾರವು ಬಂದಿದೆ. ನೀರಿನಲ್ಲಿ ಗಾಳಹಾಕಿ ಬಹಳ ಸಮಯ ಕಳೆದರೂ ಆತನಿಗೆ ಮೀನು ಸಿಕ್ಕಿರಲಿಲ್ಲ. ಕೊನೆಗೆ ಒಂದು ಮೀನು ಗಾಳಕ್ಕೆ ಸಿಕ್ಕಿತು. ಅದನ್ನು ಮೇಲಕ್ಕೆ ಎತ್ತಿಹಾಕುವಾಗ ಕೈಯಿಂದ ಜಾರಿ ದೋಣಿಯ ಮೇಲೆ ಕಡೆಪಡಿಸಿತು. ಆಗಲೇ ಅದು ಸಮೀಪದಲ್ಲಿದ್ದ ಬಂದೂಕಿನ ಕುದುರೆ ಮೇಲೆ ಹಾರಿಬಿದ್ದುದರಿಂದ ಬಂದೂಕಿನಿಂದ ಗುಂಡುಹಾರಿ ಆ ಮೀನುಗಾರನು ಕೊಲ್ಲಲ್ಪಟ್ಟನು. ಅವನು ಸತ್ತ ರೀತಿ ಹೀಗಿದೆಯಾದರೂ, ಮೀನು ಅವನನ್ನು ಬಂದೂಕಿನಿಂದ ಸುಟ್ಟು ಕೊಂದುಹಾಕಿದ್ದು ಸರಿಯಷ್ಟೆ!

ಕಳ್ಳತನವನ್ನು ಕಲಿಸಲೂ ಶಾಲೆ ಬೇಕೆ?

ಸರ್ಕಸ ಆಟಗಳನ್ನು ತೋರಿಸುವವನಂತೆ ನಟಿಸಿಕೊಂಡು, ಮಕ್ಕಳಿಗೆ ಕಳ್ಳತನವನ್ನು ಕಲಿಸಿಕೊಡುತ್ತಿದ್ದ ಫ್ರೆಂಚ ಲೂಕಾಸ್ ಎಂಬವನು ಈಗ ದೀರ್ಘ ಕಾಲದ ಕಾರಾಗೃಹ ಶಿಕ್ಷೆಗೆ ಗುರಿಯಾಗಿರುವನು. ಇವನು ಸರ್ಕಸ ದೇಖಾವೆಗಳನ್ನು ತೋರಿಸುವ ಸಮಯವನ್ನು ಬಿಟ್ಟು ಇತರ ಸಮಯಗಳಲ್ಲಿ ಜೆಲ್‌ಗ್ರೀ ದಿನ ತನ್ನ ಸರ್ಕಸ ಡೇರೆಯೊಳಗೆ ಕಳ್ಳತನವನ್ನು ಕಲಿಸುವ ಒಂದು ಕಲಾಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದ. ಮನುಷ್ಯನಾಕಾರದ ಒಂದು ಮರದ ಗೊಂಬೆಯನ್ನು ತಯಾರಿಸಿ, ಅದರ ಮೈತುಂಬ ಸಣ್ಣಸಣ್ಣ ಗಂಟೆಗಳು ಕಟ್ಟಿದ್ದ. ಕಳ್ಳತನವನ್ನು ಕಲಿಯುವ ಮಕ್ಕಳು ಗಂಟೆಗಳು ಶಬ್ದ ಮಾಡದ ಹಾಗೆ, ಗೊಂಬೆಯ ಮೈಮೇಲಿದ್ದ ವಸ್ತ್ರ ಒಡವೆಗಳನ್ನು ಹಸ್ತಕೌಶಲ್ಯದಿಂದ ತೆಗೆಯಬೇಕಾಗಿತ್ತು. ಈ ವಿದ್ಯೆಯಲ್ಲಿ ಸಾಕಷ್ಟು ಕುಶಲತೆಯನ್ನು ಪಡೆದ ತರುವಾಯ ಮಕ್ಕಳು ಸುತ್ತಮುತ್ತಲಿನ ಊರುಗಳಿಗೆ ಹೋಗಿ ಕಳ್ಳತನ ಮಾಡುತ್ತಿದ್ದರು. ಈ ವೃತ್ತಿಯಲ್ಲಿ ಮೊದಲಿನ ಎರಡು ತಿಂಗಳು ಆದ ಉತ್ಪತ್ತಿಯನ್ನು ಅವರು ಲೂಕಾಸನಿಗೆ ಗುರುದಕ್ಷಿಣೆಯಾಗಿ ಕೊಡಬೇಕಾಗಿತ್ತು. ಆದರೆ ಈ ಶಾಲೆಯ ಒಬ್ಬ ವಿದ್ಯಾರ್ಥಿ ಕಳ್ಳತನ ಮಾಡುತ್ತ ಪೋಲೀಸರಿಂದ ಹಿಡಿಯಲ್ಪಟ್ಟು ರಹಸ್ಯವೆಲ್ಲವೂ ಬಯಲಾದುದರಿಂದ ಲೂಕಾಸನು ಸಕ್ರಮ ಶಿಕ್ಷೆಗೆ ಗುರಿಯಾಗಿ ಜೈಲುವಾಸಿಯಾದನು.

ಸಾಹಸಕಾರ್ಯಗಳನ್ನು ಗೌರವಿಸದ ದೇಶ

ನೀರಿನಲ್ಲಿ ಮುಳುಗಿದ ತರುವಾಯ ಬದುಕಿದರೂ ಸತ್ತಂತೆ ಎಂದು ಎಣಿಸುವ ಒಂದು ವಿಚಿತ್ರ ಕಾನೂನು ಚೀನದಲ್ಲಿರುವದು. ಆದ್ದರಿಂದ ಅಲ್ಲಿ ನೀರಿನಲ್ಲಿ ಮುಳುಗಿದವರನ್ನು ಚೀನಿಯರು ಯಾರೂ ಬದುಕಿಸುವ ಪ್ರಯತ್ನಕ್ಕೆ ಹೋಗುವುದಿಲ್ಲ. ಯಾಕೆಂದರೆ ಮುಳುಗಿದವರೆ ಬದುಕಿದರೆ, ಅವರಿಗೆ ಹೊಸ ಜನ್ಮ ದೊರೆತಂತಾಗಿ, ಅವರನ್ನು ಬದುಕಿಸಿದವರನ್ನೆ ಸರಕಾರವು ಅವರ ಪಾಲಕರನ್ನಾಗಿ ಮಾಡುತ್ತದೆ. ಮುಳುಗಿ ಬದುಕಿದವರನ್ನು ಸಾಕುವ ಭಾರವು ಬದುಕಿಸಿದವರ ತಲೆಯ ಮೇಲೆ ಬರುತ್ತದೆ. ಆದ್ದರಿಂದ ಚೀನಿಯರು [illegible] ನೀರಿನಲ್ಲಿ ಮುಳುಗಿದವರನ್ನು ಬದುಕಿಸುವ ಸಾಹಸವನ್ನು ತೋರಿಸುವುದಿಲ್ಲ. ಕಪ್ತಾನ್ ಸಿ ಯುಸ್ ವಾಗನ ಎಂಬ ಅಮೇರಿಕದ ವೈಮಾನಿಕನೊಬ್ಬನು ಚೀನದ ಈ ವಿಚಿತ್ರ ಕಾನೂನನ್ನು ತಿಳಿಯದೆ ಯಾಂಗ್ಟಿಸಿ ನದಿಯಲ್ಲಿ ಮುಳುಗಿ ಸಾಯುತ್ತಲಿದ್ದ ಒಬ್ಬ ಚೀನಿ ಬಾಲಿಕೆಯನ್ನು ತನ್ನ ಪ್ರಾಣದ ಹಂಗು ತೊರೆದು, ಮೇಲಕ್ಕೆ ಎತ್ತಿಹಾಕಿ ಬದುಕಿಸಿದ್ದರಿಂದ ಈಗ ಐದು ವರ್ಷಗಳಿಂದ ಅವನು ಅವಳನ್ನು ಸಾಕಬೇಕಾಗಿ ಬಂದಿದೆ. ಚೀನಿಯರು ಯಾರೂ ಅವಳನ್ನು ಸಾಕಲೊಪ್ಪುವದಿಲ್ಲ. ಚೀನದಲ್ಲಿ ಈ ತರಹದ ಸಾಹಸಕ್ಕೆ ಬೆಲೆ ಇಲ್ಲದಿರುವದು ಮಾತ್ರವಲ್ಲದೆ, ಇಂಥ ಸಾಹಸವನ್ನು ತೋರಿಸುವದು ಆರ್ಥಿಕ ನಷ್ಟಕ್ಕೂ ಕಷ್ಟಕ್ಕೂ ಕಾರಣವಾಗಿದೆ



7ಓ ಕ್ಲೋಕ್ ಬ್ಲೇಡುಗಳು ನಮೂನಿನಲ್ಲಿ ಸಿಗಿಯಲ್ಪಟ್ಟಿವೆ ಮತ್ತು ಹಳೆ ಮಾದರಿಗಿಂತಲೂ ವಿಶೇಷ ತರದಲ್ಲಿ ಸುಧಾರಿಸಲ್ಪಟ್ಟಿದೆ. ಇದರ ಬೆಲೆಯು ಕೇವಲ ಕಡಿಮೆ ಮಾತ್ರವಲ್ಲದೆ ಇದರ ಎರಡೂ ಬದಿಗಳು ಅತ್ಯಂತ ಹರಿತವಾಗಿ ಮಸೆಯಲ್ಪಟ್ಟಿವೆ. ನಯವಾದ ಕ್ಷೌರವನ್ನುಂಟುಮಾಡುವುದು. ಒಂದು ಬ್ಲೇಡು ಬಹು ಸಮಯದ ವರೆಗೆ ಬರುವುದು.

7ಓ ಕ್ಲೋಕ್ ಬ್ಲೇಡುಗಳು ಹಳೆ ಮತ್ತು ಹೊಸ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

ಯುಗಪುರುಷ ಶ್ರೀ ಕೃಷ್ಣ

[ಶ್ರೀ ಕೃಷ್ಣನು ಮಹಾ ಪ್ರಭಾವಶಾಲಿಯಾದ ರಾಜತಂತ್ರ ನಿಪುಣನು. ಮಹಾಭಾರತ ಯುದ್ಧದಲ್ಲಿ ಆತನ ಕಾರ್ಯ ನೈಪುಣ್ಯವು ತೋರುವುದು. ಆತನು ಧರ್ಮಸಂಸ್ಥಾಪಕನು ಶಾಂತಿಪ್ರಿಯನು, ಅಹಿಂಸಾ ಮೂರ್ತಿಯು. ಆದರೆ, ಆತನು ಕುರುಕ್ಷೇತ್ರದ ಯುದ್ಧಮಧ್ಯದಲ್ಲಿ ಅರ್ಜುನನಿಗೆ ಕ್ರಾಂತಿಯನ್ನು ಹಿಂಸೆಯನ್ನೇ ಬೋಧಿಸಲಿಲ್ಲವೆ? ಈ ಪ್ರಶ್ನೆಗೆ ಇಲ್ಲಿ ವಿವೇಚನೆ ಕೊಡಲಾಗಿದೆ]

ಬರೆಹುದು, ಕಯ್ಯಾರ ಕಿಞ್ಞಣ್ಣ ರೈ

[illegible] ಮಹಾ ವ್ಯಕ್ತಿಗಳಲ್ಲಿ [illegible] ಶ್ರೀ ಕೃಷ್ಣನು ತನ್ನ ಅಸ[illegible]ವಾದ ಕಾರ್ಯಗಳಿಂದ ಅತ್ಯಂತ ಪ್ರಸಿದ್ಧನಾಗಿ ವಿರಾಜಿಸಿದವನು. [illegible] ಕಾಯುವ ಗೋವಳರಿಂದ, ರಾಜ್ಯವಾಳುವ ಚಕ್ರವರ್ತಿಗಳ ತನಕ ತನ್ನ ಪ್ರಭಾವ ಮಾಹಾತ್ಮ್ಯಗಳನ್ನು ಮೆರೆಸಿದವನು. ಸಮಾಜದಲ್ಲಿ, ರಾಜಕೀಯದಲ್ಲಿ, ತತ್ವನೀತಿಗಳಲ್ಲಿ, ಇನ್ನು ಯಾವುದೇ ಕ್ಷೇತ್ರದಲ್ಲಾಗಲಿ ಅಸಾಮಾನ್ಯವಾದ ನೈಪುಣ್ಯವನ್ನು ತೋರಿಸಿದವನು. ಸರ್ವರಿಗೂ ಸರ್ವತ್ರ ಮೆಚ್ಚಿಗೆಯಾಗುವಂತೆ, ಲೋಕ ಹಿತವಾಗುವಂತೆ ನಡೆದವನು. ಅದರಿಂದಲೇ ಆತನು ಯುಗಪುರುಷನಾದನು; ಆತನ ಜನ್ಮದಿನವು ಶ್ರಾವಣ ಮಾಸದ ಬಹುಳ ಅಷ್ಟಮಿಯಂದು ಸರ್ವತ್ರ ಭಾರತದಲ್ಲಿ ವಿಶೇಷ ದಿನವಾಗಿ ಆಚರಿಸಲ್ಪಡುವುದು. ಲೋಕ ಸೇವೆಯನ್ನು ತನ್ನ ಜೀವದುಸಿರಾಗಿ ಮಾಡಿಕೊಂಡು, ಅದಕ್ಕಾಗಿಯೇ ಹೋರಾಡಿದ ಆ ಪುಣ್ಯಜೀವಿಗೆ ಅಂತಹ ಮನ್ನಣೆಯು ಸಲ್ಲುವುದು ವಿಶೇಷವೆ?

ಶ್ರೀ ಕೃಷ್ಣನ ಜೀವನವು ಬಹುಮುಖವಾಗಿ ಲೋಕಕ್ಕೆ ಆದರ್ಶವಾಗಿದೆ. ಆತನ ಹುಟ್ಟು ಕಾರಾಗಾರದಲ್ಲಿ. ತಾಯಿ ತಂದೆಗಳು ಕ್ರೂರನಾದ ಕಂಸನ ಬಂಧನದಿಂದ ಪೀಡಿತರಾಗಿದ್ದರು. ಯಾವ ಮಹಾಪುರುಷನೇ ಆಗಲಿ, ಹೂವಿನ ಹಾಸಿಗೆಯಿಂದಲೇ ಎದ್ದು ಬಂದಿಲ್ಲ. ಮತ್ತೆ ಶ್ರೀ ಕೃಷ್ಣನು ಬೆಳೆದುದು ಅಜ್ಞಾತನಾಗಿ ಗೋವಳರ ಮಧ್ಯದಲ್ಲಿ, ಗೋಪಿಕೆಯರ ನಡುವಿನಲ್ಲಿ, ಪುಣ್ಯ ಪಶುಗಳ ಪರಿವಾರದಲ್ಲಿ—ಆದರೆ, ಲೋಕದ ಹಿತವನ್ನೇ ಸಾಧಿಸುವ, ಅಹಿಂಸೆಯಿಂದ, ಶಾಂತ ಜೀವನದಿಂದ ಜೀವಿಸುವ, ಆ ಗೋವಳರ ಜೀವನವೂ ಶ್ರೀ ಕೃಷ್ಣನಲ್ಲಿ ಹೆಚ್ಚು ಪ್ರಭಾವವನ್ನು ಬೀರಿರಬೇಕು, ಆತನಿಗೆ ನಿತ್ಯ ಶಾಂತಿಯ ಪಾಠವನ್ನು ತಿಳಿಸಿರಬೇಕು. ಹೃದಯ ವಿಶಾಲತೆಯನ್ನು ಹೆಚ್ಚಾಗಿ ಉಂಟುಮಾಡಿರಬೇಕು.

ಹೀಗೆ ಶ್ರೀ ಕೃಷ್ಣನು ಪ್ರಕೃತಿಯ ಪ್ರಶಾಂತ ಸನ್ನಿವೇಶದಲ್ಲಿ, ಕಾಪಟ್ಯವರಿಯದ, ಮುಗ್ಧ ಜೀವಿಗಳ ಸನ್ನಿಧಿಯಲ್ಲಿ ತನ್ನ ಎಳೆಯ ಬಾಳುವೆಯನ್ನು ಕಳೆದನು. ಆದರೆ ಬಳಿಕ ತಲೆದೋರಿದ ವಿದ್ಯಮಾನಗಳು ಆತನನ್ನು ಆಕರ್ಷಿಸದಿರಲಿಲ್ಲ. ಅಲ್ಲಿ [illegible] ದುಷ್ಟ ರಾಜರು, ಅಧಿಕಾರಿಗಳಾದ ಪ್ರಭುಗಳು ನಿರಂಕುಶರಾಗಿ ಆಳುತ್ತಿದ್ದರು; [illegible]ವನ್ನು ಕೃಷ್ಣನು ಸಹಿಸಲಾರದಾದನು. [illegible]ದನ್ನು [illegible] ಬೇಕೆಂಬುದು, [illegible]ವನ್ನು ಉಳಿಸಬೇಕೆಂಬುದು; [illegible] ಶ್ರೀ ಕೃಷ್ಣನು ಜೀವನದಲ್ಲಿ ಅತ್ಯಂತ [illegible]ವಾಗಿ, ಸ್ವಾರ್ಥಪರ [illegible] [illegible] ಬಳಿಕ ಮೊದಲಾದ [illegible] [illegible] [illegible] ಗಾದ; ಆತನ ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿದನು. ಶ್ರೀ ಕೃಷ್ಣನಿಗೆ ಉಳಿಸುವ ಅಳಿಸುವ ಶಕ್ತಿಯಿದ್ದರೂ, ತಾನು ಯಾವುದಾದರೊಂದು ರಾಜ್ಯದೊಡೆಯನಾಗಬೇಕೆಂಬ ಇಚ್ಛೆ ಬರಲಿಲ್ಲ. ದ್ವಾರಕೆಯಲ್ಲಿ ತನ್ನ ಅಣ್ಣ ಬಲರಾಮನನ್ನೇ ಅರಸನನ್ನಾಗಿ ಇರಿಸಿದನು!

ಶ್ರೀ ಕೃಷ್ಣನ ಮಹಾ ಪ್ರಭಾವವು ಮೆರೆದುದು ಮಹಾಭಾರತದ ಯುದ್ಧದಲ್ಲಿ. ಒಂದು ಕಡೆಯಲ್ಲಿ ಧರ್ಮಾತ್ಮರಾದ ಪಂಚಪಾಂಡವರು ಇದ್ದರು. ಇನ್ನೊಂದೆಡೆ ದುಷ್ಟಾತ್ಮರಾದ ಕೌರವರಿದ್ದರು. ಕ್ರಾಂತಿಯ ಕಹಳೆಯು ಕೂಗಿತು. ಪಾಂಡವರು ಸೈನ್ಯಶಕ್ತಿಯಲ್ಲಿ, ರಾಜ್ಯಶಕ್ತಿಯಲ್ಲಿ ದುರ್ಬಲರೇ! ಆದರೆ ಅವರನ್ನು ಜಯದಿಂದ ವಿಜಯಕ್ಕೆ ಸಾಗಿಸಿದ ಮಹಾಶಕ್ತಿ ಶ್ರೀ ಕೃಷ್ಣನದು.

ಶ್ರೀ ಕೃಷ್ಣನು ಹಿಂಸಾತುರನಲ್ಲ, ಅಹಿಂಸಾ ಮೂರ್ತಿ ದೀನರಕ್ಷಕನು, ಬಡವರ ಧಾತಾರನು, ಆದ ಆತನು ಹಿಂಸೆಗೆ ಉತ್ತೇಜನ ಕೊಡುವುದು ಸಾಧ್ಯವಿಲ್ಲ. ಆದರೆ, ಕುರು ಕ್ಷೇತ್ರದಲ್ಲಿ ಇಕ್ಕಡೆಯ ಸೇನೆಯೂ ಯುದ್ಧಕ್ಕೆ ಸಿದ್ಧವಾಗಿ ನಿಂತಿರಲು, ತನ್ನ ಬಂಧುಗಳನ್ನು, ಗುರುಗಳನ್ನು, ಆಪ್ತರನ್ನು, ಪರಿವಾರದವರನ್ನು ಕಂಡು, ಅವರನ್ನು ಹಿಂಸಿಸಿ ತಾನು ಅವರ ರಕ್ತದಿಂದ ತೊಯ್ದ ನೆಲವನ್ನು ಆಳಲಾರೆನೆಂದು ಅರ್ಜುನನು ಶಸ್ತ್ರಸನ್ಯಾಸ ಮಾಡಿದಾಗ, ಶ್ರೀ ಕೃಷ್ಣನು, ಅರ್ಜುನನಿಗೆ ಹಿಂಸೆಯನ್ನೇ ಬೋಧಿಸಿದನಲ್ಲವೇ ಎಂದು ಆಕ್ಷೇಪವುಂಟು. ಕೌರವರನ್ನು ಉಳಿಯಲು ಬಿಟ್ಟರೆ, ಮುಂದಕ್ಕೆ ಲೋಕದಲ್ಲಿ ಭಯಂಕರ ಹಿಂಸೆಯು ರುದ್ರರೂಪವನ್ನು ತಾಳುವುದೆಂದೂ, ಲೋಕದಲ್ಲಿ ಕ್ರಾಂತಿ ಮಸಗುವುದೆಂದೂ ತಿಳಿದು ಶ್ರೀ ಕೃಷ್ಣನು, ಅಂತಹ ಮಹಾ ಹಿಂಸೆಯನ್ನು ತಡೆಗಟ್ಟುವರೆ, ಸಂರಕ್ಷಕ ಹಿಂಸೆಯನ್ನು ಉಪದೇಶಿಸಿದನು. ಸತ್ಯಕ್ಕೆ ಧರ್ಮಕ್ಕೆ ಗೆಲವಾಗಲೆಂಬುದೇ ಆತನ ಆಕಾಂಕ್ಷೆ. ಲೋಕದಲ್ಲಿ ಪರಮ ಶಾಂತಿಯುಂಟಾಗಬೇಕೆಂಬುದೇ ಆತನ ಧ್ಯೇಯ. ವಿಶ್ವದಲ್ಲಿ ಶಾಶ್ವತ ಅಹಿಂಸೆಯು ಸ್ಥಿರವಾಗಿ ಉಳಿಯಬೇಕೆಂಬುದೇ ಆತನ ಪ್ರಯತ್ನ. ಅದೇ ಗೀತೆಯ ಗುಟ್ಟು. ಮೊನ್ನೆಯ ಕಾಂಗ್ರೆಸಿನ ನಿರ್ಣಯ—ಡಿಲ್ಲಿಯ ಠರಾವು, ಇದೇ ಅರ್ಥವನ್ನು ಕೊಡುವುದೇ ವಿಚಕ್ಷಣರು ಯೋಚಿಸಿ ನೋಡಬೇಕು.

ಶ್ರೀ ಕೃಷ್ಣನು ಮಹಾ ರಾಜತಂತ್ರ ನಿಪುಣ, ಸತ್ಯ ಧರ್ಮಗಳನ್ನು ವಿಡಿರದ ರಾಜನೀತಿಜ್ಞ. ಕೌರವನ ಪಾಳೆಯದಲ್ಲಿ ಆಚಾರ್ಯರಾದ ಭೀಷ್ಮ ದ್ರೋಣ ಕೃಪರಿದ್ದರು. ಅವರ ಮನನೋಯದಂತೆ, ಅವರಿಂದ ಪಾಂಡವರಿಗೆ ಕೆಡುಕಾಗದಂತೆ ಕೆಲಸವನ್ನು ಸಾಧಿಸಿದನು. ಕೌರವರು ಹನ್ನೊಂದಕ್ಷೋಹಿಣಿಯು ಚೂರಾಯಿತು. ಕೌರವರು ನೂರ್ವರೂ ಹತರಾದರು, ಆದರೆ, ಕೇವಲ ಐದೇ ಮಂದಿ ಪಾಂಡವರಲ್ಲಿ ಒಬ್ಬನೇ ಒಬ್ಬನು ನೊಂದುದಿಲ್ಲ, ಭಗ್ನನಾದುದಿಲ್ಲ. ಇದು ಶ್ರೀ ಕೃಷ್ಣನ ನೈಪುಣ್ಯ. ಕರ್ಣನು ಪ್ರಬಲ ಪರಾಕ್ರಮಿ. ಆತನು ಅರ್ಜುನನ ಜನ್ಮವೈರಿ. ಕೌರವನ ಆಪ್ತ ಮಿತ್ರ. ಆದರೆ, ಶ್ರೀ ಕೃಷ್ಣನು, ಕರ್ಣನಿಗೆ ಆತನ ಜನ್ಮವೃತ್ತಾಂತವನ್ನು ತಿಳಿಸಿದನು; ತಮ್ಮಂದಿರನ್ನು ಕೊಲ್ಲುವುದೆ? ಕರ್ಣನಿಂದಲೂ ಪಾಂಡವರಿಗೆ ಕೇಡಾಗಲಿಲ್ಲ. ಹೀಗೆ ಮಹಾಭಾರತದಂತಹ ಪ್ರಳಯೋಪಮ ಯುದ್ಧವೂ ಶ್ರೀ ಕೃಷ್ಣನ ಸಹಾಯದಿಂದ ಪಾಂಡವರಿಗೆ ಲೀಲಾಜಾಲವಾಯಿತು. ಸತ್ಯಕ್ಕೆ ಗೆಲವಾಯಿತು! ಶಾಂತಿಯು ಸ್ಥಿರವಾಯಿತು! ಶ್ರೀ ಕೃಷ್ಣನ ಇಚ್ಛೆಯೂ ಫಲಿಸಿತು!

ಶ್ರೀ ಕೃಷ್ಣನು ಸರ್ವರನ್ನೂ ಸಮವಾಗಿ ಕಂಡವನು. ಬಡವನು ದೊಡ್ಡವನೆಂಬ ಭೇದವೆಣಿಸಲಿಲ್ಲ. ರಾಜಾಧಿರಾಜರಲ್ಲಿ ಅಗ್ರಪೂಜೆಯನ್ನು ವಹಿಸಿದರೂ ಗೋವಳರನ್ನೂ ಗೋಪಿಕೆಯರನ್ನೂ ಆನಂದಪಡಿಸಲು, ಅವರ ಒಡನಾಡಲು ಕಡೆಗಣಿಸಲಿಲ್ಲ. ಅರಸನಾದ ಕೌರವನ ಆತಿಥ್ಯಕ್ಕೆ ಮನಸ್ಸಿಡದೆ, ಬಡವನಾದರೂ, ವಿದುರನ ಮನೆಯ ಗುಟುಕು ಹಾಲನ್ನು ಮಹಾಪ್ರಸಾದವೆಂಬಂತೆ ಕುಡಿದನು. ಆರ್ಭಟಿಸಿ, ಮಳೆ ಸುರಿಸಿ ಬೆದರಿಸಿದ ಇಂದ್ರನನ್ನು ಎದುರಿಸಿ ಗೋವಳರನ್ನು, ಗೋವರ್ಧನದಡಿಯಲ್ಲಿರಿಸಿ ಕಾಪಾಡಿದನು. ಇಂತು ಒಂದಲ್ಲ ಎರಡಲ್ಲ, ಎಲ್ಲಾ ವಿಧದಿಂದಲೂ ಎಲ್ಲಾ ಜನತೆಗೂ, ಎಲ್ಲಾ ಸಮಯವೂ ಉಪಕಾರವಾಡುವ ಉದಾರ ಬುದ್ಧಿಯು ಶ್ರೀ ಕೃಷ್ಣನದಾಗಿತ್ತು, ಅದೇ ಆತನನ್ನು ಮಹಾ ವಿಭೂತಿಪುರುಷನನ್ನಾಗಿ ಮಾಡಿತು, ದೇವತ್ವಕ್ಕೇರಿಸಿತು, ಯುಗಪುರುಷನನ್ನಾಗಿ ಮಾಡಿತು. ಅದರಿಂದಲೇ ವರ್ಷ ವರ್ಷ ಆತನ ಜನ್ಮದಿನವನ್ನು, ಶ್ರೀ ಕೃಷ್ಣಜಯಂತಿಯನ್ನು—ಸಮಸ್ತ ಭಾರತದಲ್ಲಿ—ಸರ್ವರೂ ಅತ್ಯಾನಂದದಿಂದ ಆಚರಿಸುವರು.

ಕತ್ತಲೆಯಿಂದ ಬೆಳಕಿಗೆ, ಮೃತ್ಯುವಿನಿಂದ ಅಮೃತತ್ವಕ್ಕೆ ಸಾಗಿಸಬಲ್ಲ ಉದಾತ್ತ ವಿಭೂತಿ ಪುರುಷರಲ್ಲಿ ಶ್ರೀ ಕೃಷ್ಣನ ಪ್ರಭಾವವು ಹಿರಿದು, ಅಂತೆಯೇ ಶ್ರೀ ಕೃಷ್ಣನ ಸ್ಥಾನ ಹೆಚ್ಚಿನದು. ಆತನ ಕೀರ್ತಿ ಅಜರಾಮರವಾದುದು.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
RS. 50/-, 100/-, 500/-, 1,000/- & 5,000/-
are now issued at all our Branches
For particulars call at or write to
Any of our nearest Branches

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P. O, Peridepi (ಸೌತ್ ಕೆನರಾ ಡಿ.)

★ ಸಿನೆಮಾ ಪುಟ ★

ಓಮರ್ ಖಯ್ಯಮ್

ಪ್ರಭಾತದ ಮುಂದಿನ ಚಿತ್ರಪಟ

ಪ್ರಭಾತ ಸ್ಟುಡಿಯೋದಲ್ಲಿ ಕಳೆದ ಆರು ತಿಂಗಳುಗಳಿಂದ 'ಓಮರ್ ಖಯ್ಯಮ್' ಚಿತ್ರದ ತಯಾರಿಯು ಆಗುತ್ತಾ ಇದೆ. ಓಮರ್ ಖಯ್ಯಮನು ಪ್ರಸಿದ್ಧ ಪರ್ಶಿಯನ್ ಕವಿಯು, ತತ್ವಜ್ಞಾನಿಯು ಮತ್ತು ಗಣಿತಜ್ಞನು. ಇವನ ಜೀವಿತ ಕಥೆಯನ್ನು ಇದರಲ್ಲಿ ಪ್ರದರ್ಶಿಸುವ ಏರ್ಪಾಡು ಆಗಿದೆ.

ಹಲವು ಸುಪ್ರಸಿದ್ಧ ವಿದ್ವಾಂಸರು, ಪರ್ಶಿಯನ್ ಭಾಷೆಯ ಪರಿಶೋಧನೆ ನಡೆಸಿ, ಓಮರ್ ಖಯ್ಯಮನ ಜೀವಿತಕ್ಕೆ ಸಂಬಂಧಪಟ್ಟ ಸತ್ಯಾಂಶಗಳನ್ನು ಕಂಡು ಹುಡುಕಿ ಈ ಕಥೆಯನ್ನು ಬರೆದಿರುವರು.

ಪರ್ಶಿಯನ್ ವೇಷ ಭೂಷಣಗಳನ್ನು ಆ ಕಾಲದ ಇತಿಹಾಸದ ಆಧಾರದಿಂದ ಅಷ್ಟಕ್ಕೆ ಅನುಗುಣವಾಗಿ ರಚಿಸುವ ಏರ್ಪಾಡಾಗಿದೆ. ಇದಕ್ಕೆ ಯೋಗ್ಯರಾದ ಪಾತ್ರಧಾರಿಗಳನ್ನು ಹುಡುಕುವ ತ್ವರೆಯಲ್ಲಿರುವರು.

ಪಡೋಶೀ ಚಿತ್ರವು ಸಂಪೂರ್ಣವಾದ ಕೂಡಲೇ ಈ ಚಿತ್ರದ ಕಾರ್ಯಕ್ಕೆ ನಿರ್ದೇಶಕ ಶಾಂತಾರಾಮರು ಆರಂಭಿಸುವರೆಂದು ತಿಳಿಯುತ್ತದೆ.

ಮೋಶನ್ ಪಿಕ್ಚರ್ ಕಾಂಗ್ರೆಸ್

ಮೋಶನ್ ಪಿಕ್ಚರ್ ಕಾಂಗ್ರೆಸಿನ ಪ್ರಥಮಾಧಿವೇಶನವು ಶ್ರೀ ಸತ್ಯಮೂರ್ತಿಗಳ ಅಧ್ಯಕ್ಷತೆಯಿಂದ ಅತ್ಯಂತ ವಿಜೃಂಭಣೆಯಲ್ಲಿ ನೆರವೇರಿತು. ಆದರೆ, ಅದರ ದ್ವಿತೀಯಾಧಿವೇಶನದ ವಿಷಯವು ಇದುವರೆಗೆ ಪ್ರಸ್ತಾಪವಿಲ್ಲದಿರುವುದರಿಂದ ಅದು ಆಗುವ ಸಂಭವವಿಲ್ಲವೇ ಎಂದು ಊಹಿಸಲಾಗಿದೆ.

ಮೀರಾಬಾಯಿ

ನವ್ಯಕಾಲ ಚಿತ್ರಪಟದವರ ಮೀರಾಬಾಯಿ ಎಂಬ ತೆಲುಗು ಚಿತ್ರವು ಪೂರ್ಣವಾಗುತ್ತಾ ಬರುತ್ತಿದೆ. ಭೀಮಾ ವರಪ್ಪ ನರಸಿಂಹ ರಾವ್ ಇವರು ನಿರ್ದೇಶಿಸುವರು. ಮಿಸ್. ಜೇಲಂ ಪ್ರಧಾನ ನಾಯಿಕಾ ಪಾತ್ರವಹಿಸುವಳು. ಇನ್ನೂ ಅನೇಕ ಪ್ರಸಿದ್ಧ ಆಂಧ್ರ ಪಾತ್ರವರ್ಗದವರಿರುವರು. ಕೃಷ್ಣ ಭಕ್ತೆಯಾದ ಮೀರಾಬಾಯಿಯ ಭಕ್ತಿ ಪ್ರಧಾನ ಜೀವನವು ಅತ್ಯಂತ ರಮ್ಯವಾಗಿ ಚಿತ್ರಿತವಾಗಿದೆಯೆಂದು ತಿಳಿದು ಬರುತ್ತದೆ.

ಆಂಧ್ರದೇಶದಲ್ಲಿ ಹಲವು ಕಡೆಗಳಲ್ಲಿ ಬರುವ ತಿಂಗಳಲ್ಲಿ ಅದು ಏಕಕಾಲದಲ್ಲಿಯೇ ಪ್ರದರ್ಶಿತವಾಗುವ ಏರ್ಪಾಡಾಗಿದೆ.

ಶೈಲಕ್

ಜಯ ಫಿಲ್ಮ್ಸನವರು ಷೇಕ್ಸ್‌ಪಿಯರ್ ಕವಿಯ ಕಥೆಯನ್ನಾಧರಿಸಿ 'ಶೈಲಕ್' ಚಿತ್ರವನ್ನು ತಯಾರಿಸುತ್ತಿದ್ದಾರೆ.

ಭೂಕೈಲಾಸ

ಪ್ರಗತಿ ಚಿತ್ರಪಟದವರು ಭೂಕೈಲಾಸವೆಂಬ ತೆಲುಗು ಚಿತ್ರದ ಸಿದ್ಧತೆಯನ್ನು ಭರದಿಂದ ಮಾಡುತ್ತಿದ್ದಾರೆ. ನಾಡಕರ್ಣಿಯರು ನಿರ್ದೇಶಿಸುವರು.

ಪ್ರೇಮ ನಗರ

ಪ್ರೇಮ ನಗರ ಚಿತ್ರವು ತಯಾರಾದ ಮೇಲೆ ಶ್ರೀ ಭವಾನಿಯವರು ಸ್ವಂತ ಚಿತ್ರ ತಯಾರಿಸುವುದನ್ನು ನಿಲಿಸುವರೆಂದು ವಾರ್ತೆ. ಶ್ರೀಮತಿ ಲೀಲಾ ಚಿಟ್ನಿಸಳು ತನ್ನ ಪತಿ ಶ್ರೀ ಗ್ವಾಲಾನಿಯವರೊಡನೆ ಒಂದು ಹೊಸ ಚಿತ್ರ ಕಂಪನಿಯನ್ನು ಆರಂಭಿಸ ಹೇಳುವ ತೀರ್ಮಾನದ ಅದಕ್ಕೆ ಭವಾನಿಯರು ಸೇರುವರಂತೆ.

ಚಂದ್ರಗುಪ್ತ ಚಾಣಾಕ್ಯ

ಪ್ರಸಿದ್ಧ ಐತಿಹಾಸಿಕ ಕಥೆಯಾದ ಚಂದ್ರಗುಪ್ತ ಚಾಣಕ್ಯರ ಕಥೆಯನ್ನು ಟಿ. ಪಿ. ಫಿಲ್ 'ಚಿನ್ನ'ನವರ ತಯಾರಿಸಿರುವರು. ಮಿಸ್. ತ ಕೋಕಿಲಂ ಇದರಲ್ಲಿ ಪಾತ್ರವಹಿಸಿರುವಳು.

ಶಾಂತಾ ಆಪ್ಟೆಗಾಗಿ

ಸಿರ್ಕೊ ಪ್ರೊಡಕ್ಷನ್ಸಿನವರು ಶಾಂತಾ ಆಪ್ಟೆಯ ಚಿತ್ರವನ್ನು ತಯಾರಿಸುವ ಯೋಚನೆಯಲ್ಲಿರುವರು. ಶಾಂತಾ ಆಪ್ಟೆಯು ಪ್ರಭಾತ ಚಿತ್ರದಿಂದ ಬಿಡುಗಡೆ ಹೊಂದಿದ ಮೇಲೆ ಆ ವಿಷಯವಾಗಿ ಯೋಚನೆ ಮಾಡಲಾಗುವುದಂತೆ.

ಮಹಾರಾಷ್ಟ್ರದ ಹೊಸ ತಾರೆ

ಮನಮೋಹಿನಿ ವನಮಾಲಾ, ಬಿ. ಎ; ಬಿ. ಟಿ.

ಮಹಾರಾಷ್ಟ್ರ ಸಿನೆಮಾ ಆಕಾಶದಲ್ಲಿ ಈಗೊಂದು ಹೊಸ ತಾರೆಯುದಯಿಸಿದೆ. ಈಕೆಯು ವಿದ್ಯಾವತಿಯೂ ಕುಲೀನ ಮನೆತನದವಳೂ ಆದ ಮನಮೋಹಿನಿ ವನಮಾಲಾ ಬಿ. ಎ; ಬಿ. ಟಿ. ಇವಳು ಗ್ವಾಲಿಯರಲ್ಲಿ ಹುಟ್ಟಿದಳು. ತಂದೆ ಕರ್ನಲ್ ಪವಾರ್. ಗ್ವಾಲಿಯರ್ ಸಂಸ್ಥಾನದಲ್ಲಿ ದಿವಾನನಾಗಿದ್ದ. ರಾಜಪರಿವಾರದೊಡನೆ ಬೆಳೆದವಳು, ರಾಜಗಂಭೀರದವಳು. ಓದುವುದು, ಆಡುವುದು, ಕುಣಿಯುವುದು, ಬೇಟೆ, ಸಂಗೀತ ಇವುಗಳಲ್ಲೆಲ್ಲಾ ಆಕೆಗೆ ಅತ್ಯಂತ ಇಷ್ಟ. ಕಲೆಯು ಇಂದು ಆಕೆಯನ್ನು ಸಿನೆಮಾರಂಗಕ್ಕೆ ಎಳತಂದಿದೆ. ನವಯುಗ ಕಂಪೆನಿಯ ಲಪಂಡಾಪದಲ್ಲಿ ಪಾತ್ರವಹಿಸುವಳು.

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನಿಮ್ಮನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ. ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮು (Cuticura Ointment) ನಿಂದ ಮೊಡವೆ, ಛಿದ್ರ, ಗಜ್ಜಿಗಳನ್ನು ನಾಶಮಾಡಿ ಇದರ ವಿಷಹರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರ್ (Cuticura Talcum Powder) ಒಳ್ಳೆ ಹಿತಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ದೊರಕುವುದು

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನಲ್ಲಿಯೂ ಸ್ನಾನಕ್ಕೆ ಸಣ್ಣ ಸೈಜಿನಲ್ಲಿಯೂ ಸ್ವಲ್ಪ ದರಕ್ಕೆ ದೊರೆಯುತ್ತದೆ.

ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

"ಮಗು ತಾ ಮನುಷ್ಯನ ತಂದೆ" ಒಂದು ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯವನ್ನವಲಂಬಿಸಿದೆ. ನಿಶ್ಶಕ್ತರೂ ದುರ್ಬಲರಾದ ಮಕ್ಕಳು ಬಾಲಪ್ರಾಶದಿಂದ ಉತ್ತಮಗೊಂಡು ಬೆಳೆಯುವರು. ಅದರ ರುಚಿಕರ ವಾಸನೆ ಎಂದರೆ ಮಕ್ಕಳಿಗೆ ಪ್ರೀತಿ. - - -

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ

ಬಾಲಪ್ರಾಶ



ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಹಾಸ್ಯ ವ್ಯಂಗ್ಯ ಲೇಖನ

ಸ್ವಪ್ನಲೋಕದ ಚಕ್ರವರ್ತಿ ಜಿನ್ನಾ!

ಮುಸಲ್ಮಾನ ಸಮಾಜದ ದ್ರೋಹಿ [illegible] ಅಬ್ದುಲ್ [illegible] ದು ಧರಿಸಿ [illegible] ಜಿನ್ನಾಗಿ [illegible]ಗದಾದ ಮೇಲೆ ಮ[illegible]ದಾಳಿ [illegible]ರು ಹೊಟ್ಟೆ ತುಂಬಾ [illegible]ರವಾನ್ನ [illegible]ಜನ ಮಾಡಿ [illegible] ಮೇಲೆ ಹಾಯಾಗಿ ಬಿದ್ದುಕೊಂಡಿದ್ದರು. ಆಗಲೇ ಅವರಿಗೆ ಕಣ್ಣು ಕೂರತೊಡಗಿತ್ತು. ಅವರು ನಿದ್ದೆಯಲ್ಲಿ ಕನಸು ಕಾಣತೊಡಗಿದರು.

ಭಾರತದ ಮುಸಲ್ಮಾನರು ಜಿನ್ನಾ ಸಾಹೇಬರ ಕಡೆಗೆ ಒಂದು ಶಿಷ್ಟಮಂಡಲವನ್ನು ಕಳುಹಿಸಿದ್ದರು. ಅವರೆಲ್ಲರೂ ಜಿನ್ನರ ಸನ್ನಿಧಿಯಲ್ಲಿ ಮೊಣಕಾಲೂರಿ ಕೂತಿದ್ದರು. ಯುದ್ಧ ಪರಿಸ್ಥಿತಿಯ ಮೂಲಕ ಭಾರತಕ್ಕೆ ದೊರೆಯುವ ಲಾಭಗಳನ್ನು ಪಡೆಯಲಿಕ್ಕೆ ಜಿನ್ನರು ವಿಘ್ನಗಳನ್ನು ತಂದೊಡ್ಡಬಾರದೆಂದು ಬಿನ್ನವಿಸಿಕೊಳ್ಳಲಿಕ್ಕೆ ಶಿಷ್ಟಮಂಡಲದ ಮುಸಲ್ಮಾನ ಮುಖಂಡರು ಬಂದಿದ್ದರು.

'ಅಖಂಡ ಮುಖಂಡರೇ! ಸ್ವಾತಂತ್ರ್ಯವು ಅಮೂಲ್ಯ ವರದಾನವಾಗಿದೆ. ಸ್ವಾತಂತ್ರ್ಯ ರಕ್ಷಣೆಗೆಂದು ಯೂರೋಪಿನಲ್ಲಿ ಯುದ್ಧ ಪ್ರಾರಂಭವಾಗಿದೆ. ಆದರೆ ಭಾರತದ ಜನರೆಲ್ಲ ಒಂದಾದ ಹೊರತು ಯುದ್ಧಾಸಕ್ತರಾದ ಬ್ರಿಟಿಷರು ನಮಗೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ನಾವು ಉಳಿದವರಿಗಿಂತ ಬಲಿಷ್ಠರಾಗಿರುವುದರಿಂದ, ಭಾರತಕ್ಕೆ ದೊರೆಯುವ ಸ್ವಾತಂತ್ರ್ಯವನ್ನು ಮುಂದಕ್ಕೆ ನಾವು ಬೇಕಾದರೆ ನಮಗಾಗಿಯೇ ಇಟ್ಟುಕೊಳ್ಳಬಹುದು. ಹಿಂದುಗಳಿಂದ ಸ್ವಾತಂತ್ರ್ಯಾಪಹಾರವನ್ನು ಮಾಡುವುದು ಸುಲಭ. ಆದರೆ ಬ್ರಿಟಿಷರಿಂದ ಅದನ್ನು ಕಿತ್ತುಕೊಳ್ಳಲಿಕ್ಕೆ ನಮಗೆಷ್ಟು ಮಾತ್ರಕ್ಕೂ ಸಾಧ್ಯವಲ್ಲ. ಆದರೆ ಹಿಂದುಗಳ ಮೇಲೆ ಉರಿದುಬಿದ್ದು ಅವರನ್ನು ದೂರ ಓಡಿಸುವುದಕ್ಕಿಂತ, ಸಿಟ್ಟನ್ನು ತಡೆದು, ನಮ್ಮ ಕಾರ್ಯಪೂರ್ತಿಗಾಗಿಯಾದರೂ ಅವರೊಡನೆ ಸ್ನೇಹದಿಂದಿರುವುದು ಲೇಸು. ಹಿಂದು ಮುಸಲ್ಮಾನರು ಸ್ನೇಹದಲ್ಲಿರುವರಾದರೆ, ನಾವೂ ಹಿಂದುಸ್ಥಾನವೂ ಸ್ವತಂತ್ರವಾಗಿ ಇರಬಹುದು.'

ಜಿನ್ನರ ಭೀಷಣ ಆರ್ಭಟೆ!

ಹೀಗೆಂದು ಶಿಷ್ಟಮಂಡಲವು ಜಿನ್ನರನ್ನು ಅಂಗಲಾಚಿ ಬೇಡಿಕೊಂಡಿತು. ಜಿನ್ನರು ಉಚ್ಚ ಆಸನದಲ್ಲಿ ಗಂಭೀರರಾಗಿ ಕೂತಿದ್ದರು. ಅವರು ರಾಜಾಧಿರಾಜರಂತೆ ವೇಷಮಾಡಿಕೊಂಡಿದ್ದರು. ಭಾರತದ ೮[illegible] ಮಿಲಿಯ ಮುಸಲ್ಮಾನರ ಅಖಂಡ ಮುಖಂಡರಂತೆ ಅವರ ಮುಖದಲ್ಲಿ ಕಳೆ ಇದ್ದಿತು. ಮಾತ್ರವಲ್ಲ, ಇಡೀ ಜಗತ್ತಿನ ಮುಸಲ್ಮಾನರ ಏಕಮಾತ್ರ ಆರಾಧ್ಯ ದೇವತೆಯಾಗುವ ಆಶೆಯನ್ನು ಅವರು ಇಟ್ಟುಕೊಂಡಿದ್ದರು. ಭಾರತದ ಗಣ್ಯ ಮಾನ್ಯ ಮುಸಲ್ಮಾನರು ಅವರ ಮುಂದೆ ಬಂದು ಕೈ ಜೋಡಿಸಿ ಅವರನ್ನು ಪ್ರಾರ್ಥಿಸುವುದು ಅವರಿಗೆ ತುಂಬ ಸಂತೋಷವನ್ನು ತಂದುಕೊಟ್ಟಿತ್ತು. ಆದರೆ ಸಭೆಯಲ್ಲಿ ಬಂಗಾಳ, ಪಂಜಾಬಿನ ಮುಸಲ್ಮಾನರು ದೂರದಲ್ಲಿ ತನ್ನನ್ನು ಅಲಕ್ಷಿಸಿ ಕೂತಿರುವುದನ್ನು ನೋಡಿ, ಜಿನ್ನರಿಗೆ ತಡೆಯಲಾರದ ಸಿಟ್ಟು ಬಂದಿತು. ಅವರು ಸಂತಪ್ತರಾಗಿ ಹೀಗೆಂದು ಆರ್ಭಟಿಸಿದರು:—

'ನಿಮ್ಮಲ್ಲಿ ಕೆಲವರು ಮಹಾ ದ್ರೋಹಿಗಳಾಗಿದ್ದಾರೆ. ಅವರು ಕಾಂಗ್ರೆಸಿನೊಡನೆ ಸಂಧಾನಮಾಡುವ ನೀಚ ಕೆಲಸವನ್ನು ಮಾಡಿದ್ದಾರೆ. ಹಿಂದುಗಳೊಡನೆ ಯಾವ ಮುಸಲ್ಮಾನನೂ ಸ್ನೇಹದಿಂದಿರಲಾಗದು. ಹಿಂದುಗಳನ್ನು ಸ್ನೇಹದಿಂದ ನೋಡುವ ಮುಸಲ್ಮಾನರು ದೊಡ್ಡ ಮೂರ್ಖರು. ರಾಷ್ಟ್ರೀಯ ಮುಸಲ್ಮಾನರಾದ ಇವರೊಡನೆ ಕೈಗೊಡುವುದಕ್ಕಿಂತ, ಬ್ರಿಟಿಷರು ಭಾರತವನ್ನು ಇನ್ನೆರಡು ಶತಮಾನಗಳ ತನಕ ಆಳಿದರೂ ನನಗೆ ಸಂತೋಷವಾಗಿದೆ. ಭಾರತದ ಮುಂದಿನ ರಾಜ್ಯಘಟನೆಯಲ್ಲಿ ಬಹುಸಂಖ್ಯಾಕರಾಗಿರುವ ಹಿಂದುಗಳು ಅಲ್ಪಸಂಖ್ಯಾಕರಂತೆ ಇರಬೇಕು. ೨೬೦ ಮಿಲಿಯ ಹಿಂದುಗಳನ್ನು ೮೦ ಮಿಲಿಯ ಮುಸಲ್ಮಾನರಿಗಿಂತ ಹೇಗೆ ಕಡಿಮೆ ಮಾಡಿ ತೋರಿಸಬಹುದೆಂಬುದಕ್ಕೆ ನಾನು ಒಂದು ನವೀನ ಗಣಿತ ಸಿದ್ಧಾಂತವನ್ನು ಹುಡುಕಿ ತೆಗೆಯುತ್ತಾ ಇದ್ದೇನೆ. ಭಾರತಕ್ಕಿಂತ ಮುಸ್ಲಿಂ ಲೀಗು ಮಹತ್ವದ್ದು, ಮತ್ತೆ ನಾನು ಲೀಗಿಗಿಂತ ಹೆಚ್ಚು ಮಹತ್ವದವನಾಗಿದ್ದೇನೆ. ಆದ್ದರಿಂದ ಹಾಕಿರಿ, ಜಯಕಾರ—'ಜಿನ್ನಾ ಸಾಹೇಬಕೀ ಜೈ!' ಈಗ ನೀವೆಲ್ಲರೂ ಹೊರಟು ಹೋಗಿ. ಮುಂದೆ ನಾನಾಗಿ ಮಾತನಾಡುವ ತನಕ ನೀವು ಒಂದು ಚಕಾರ ಶಬ್ದವನ್ನೂ ಎತ್ತಬಾರದು.'

ಸಹಾಯ ಭರವಸೆ

ಕನಸು ಮುಂದರಿದಿದೆ. ಹೊರಗಿನ ಮುಸಲ್ಮಾನ ರಾಷ್ಟ್ರಗಳ ಸಹಾಯ ಪಡೆದು ಭಾರತವನ್ನು ಗೆಲ್ಲುವ ಆಸೆ ಜಿನ್ನಾ ಸಾಹೇಬರಿಗಾಗಿದೆ. ಜಿನ್ನರು ಟರ್ಕಿಗೆ ಒಂದು ವಿನಂತಿಪತ್ರವನ್ನು ಕಳುಹಿಸಿದ್ದಾರೆ. ಅದಕ್ಕೆ ಉತ್ತರವೂ ಬಂದಿದೆ—'ಮತಭೇದ ಮತ್ತು ಜಾತಿಭೇದವನ್ನು ಮನ್ನಿಸಿ ಎಲ್ಲಿಯೂ ರಾಷ್ಟ್ರನಿರ್ಮಾಣವಾಗಿರುವುದಿಲ್ಲ. ಆದ್ದರಿಂದಲೇ ನಾವು ಟರ್ಕಿಯಲ್ಲಿ ಜಾತಿಮತಕ್ಕೆ ಯಾವ ಮಹತ್ವವನ್ನೂ ಕೊಟ್ಟಿರುವುದಿಲ್ಲ. ಖಿಲಾಫತ್ತನ್ನು ತೆಗೆದು ಹಾಕಿದ್ದೇವೆ. ಭಾರತದಲ್ಲಿ ಮುಸಲ್ಮಾನ ರಾಜ್ಯ ಕಟ್ಟಲಿಕ್ಕೆ ನಿಮಗೆ ನಮ್ಮ ಸಹಾಯ ದೊರೆಯುವುದಿಲ್ಲ.' ಜಿನ್ನರು ಈಜಿಪ್ಟನ್ನು ಕೇಳಿದಾಗ ಅದರಿಂದ ಬಂದ ಉತ್ತರ— 'ನೀವು ನಮ್ಮ ಹಾಗೆ ಅಲ್ಪಸಂಖ್ಯಾಕ ಪ್ರಶ್ನೆಯನ್ನು ತೀರಿಸಿರುವುದಿಲ್ಲ. ಧರ್ಮಕ್ಕಿಂತ ರಾಜಕೀಯ ಸ್ವಾತಂತ್ರ್ಯವು ಶ್ರೇಷ್ಠವಾದ್ದು. ಮನುಷ್ಯನು ಸ್ವತಂತ್ರನಾಗಿರುವಾಗ ದೇವರನ್ನು ಕಾಣಬಲ್ಲನು. ಗುಲಾಮನಾಗಿದ್ದಾಗ ಅವನು ದೇವರಿಂದ ದೂರವಾಗುತ್ತಾನೆ. ಎಲ್ಲಾ ಪಾಪಗಳು ತೊಳೆದುಹೋಗುತ್ತವೆ. ಆದರೆ ಗುಲಾಮನಾಗಿರುವ ಪಾಪವು ಎಂದೂ ತೊಳೆದು ಹೋಗುವುದಿಲ್ಲ. ನೀವು ಗುಲಾಮರಂತೆ ಇರುತ್ತೀರಾದ್ದರಿಂದ ನಿಮಗೆ ನಮ್ಮ ಸಹಾಯವಿಲ್ಲ.' ಆದರೂ ಜಿನ್ನರಿಗೆ ತೃಪ್ತಿ ಇಲ್ಲ. ಹಠ ಮತ್ತು ಛಲದಿಂದ ಕಾರ್ಯವನ್ನು ಸಾಧಿಸಬಹುದೆಂದು ಅವರು ತಿಳಿಕೊಂಡಿದ್ದಾರೆ. ಎಲ್ಲಾ ಮುಸಲ್ಮಾನ ರಾಷ್ಟ್ರಗಳಿಂದ ಅವರು ನಿರಾಶಾಸೂಚಕ ಪತ್ರಗಳನ್ನು ಪಡೆದಿದ್ದಾರೆ. ಆದರೂ ಭಾರತದ ಶಾಂಹನ್ಶಾಹರಾಗುವ ಆಶೆ ಅವರನ್ನು ಬಿಟ್ಟುಹೋಗಿಲ್ಲ. ಅವರು ಗಂಟೆಯನ್ನು ಬಾರಿಸಿದರು. ಆಗಲೇ ೩೦೦೦೦೦ ಕಾಖ್ಸಾರರೊಂದಿಗೆ ಅಲ್ಲಾಮಾ ಮಶ್ರಿಕಿ ಅಭಿವಾದನ ಮಾಡಿ ನಿಂತುಕೊಂಡನು.

'ನಿಮಗೆ ಹುಚ್ಚು ಹಿಡಿದಿದೆ'

ಜಿನ್ನರು ಇನ್ನೊಂದು ಗಂಟೆಯನ್ನು ಬಾರಿಸಿದರು. ಟರ್ಕಿ, ಈಜಿಪ್ತ, ಅರೇಬಿಯ, ಈರಾಕ್, ಈರಾಣ, ಅಫಘಾನಿಸ್ಥಾನ, ಸಿಂಕಿಯಾಂಗ್, ಟರ್ಕಿಸ್ಥಾನ, ಮಂಗೋಲಿಯದ ಅಸಂಖ್ಯಾತ ಸೇನೆ ಅವರ ಮುಂದಿನಿಂದ ಹಾದುಹೋಯಿತು. 'ನಾನು ನಿಮಗೆ ವಿಜಯವನ್ನೂ ಕೀರ್ತಿಯನ್ನೂ ತಂದುಕೊಡುವೆನು' ಎಂದು ಜಿನ್ನರು ಆ ಸೇನೆಯನ್ನು ಉದ್ದೇಶಿಸಿ ಎದೆ ತಟ್ಟಿ ಹೇಳಿದರು. 'ನಾವು ಜಗತ್ತನ್ನು ಗೆಲ್ಲುವೆವು, ಜಗತ್ತನ್ನು ಆಳುವೆವು. ರಶ್ಯ, ಜಪಾನ, ಜರ್ಮನಿ, ಇಟಲಿ, ಬ್ರಿಟನು, ಅಮೇರಿಕಗಳನ್ನು ನಾವು ಧೂಳೀಪಟ ಮಾಡುವೆವು. ಇಸ್ಲಾಮಿನ ವೀರರು ಧರ್ಮಪ್ರಚಾರ ಮತ್ತು ರಾಜ್ಯವಿಸ್ತರಣೆಯ ಕಾರ್ಯವನ್ನು ಎಲ್ಲಿ ಮುಗಿಸಿ ಹೋಗಿದ್ದರೋ, ಅಲ್ಲಿಂದ ನಾವು ಅದನ್ನು ಪುನಃ ಪ್ರಾರಂಭಿಸುವೆವು. ನಮ್ಮ ಆಚಾರವಿಚಾರ, ರೀತಿನೀತಿ, ದೇಶಭಾಷೆ, ಮನೆಮಠ, ಸಭ್ಯತೆ ಸಂಸ್ಕೃತಿ ಎಲ್ಲಾ ಬೇರೆ ಬೇರೆ ಆಗಿರಬಹುದು. ಆದರೆ ನಾವೆಲ್ಲ ಮುಸಲ್ಮಾನರು. ಆದ್ದರಿಂದ ನಾವು ಎಲ್ಲಿದ್ದರೂ ಒಂದು ಮುಸಲ್ಮಾನ ಜನಾಂಗಕ್ಕೆ ಸೇರಿದವರು. ಬನ್ನಿರಿ, ನಾನು ಹೇಳಿದ ಹಾಗೆ ಕೇಳಿರಿ.'

ಸೇನಾಧಿಕಾರಿಗಳು ಜಿನ್ನರ ಮಾತುಗಳನ್ನು ಕೇಳಿದರು. ನಗಲಾರಂಭಿಸಿದರು. ಬರಬರುತ್ತ ನಗು ಮಿಗುತ್ತ ಬಂದಿತು. 'ಜಿನ್ನರೇ! ನಿಮಗೆ ಹಿಡಿದಿದೆ ಹುಚ್ಚು! ನಿಮ್ಮನ್ನು, ನಿಮ್ಮ ದೇಶದವರನ್ನು ಸುಧಾರಿಸಿಕೊಳ್ಳಲಾಗದ ನೀವು ನಮ್ಮನ್ನೇನು ಸುಧಾರಿಸುವಿರಿ? ನಮ್ಮನ್ನು ಯಾವ ವಿಜಯಪಥಕ್ಕೆ ಕೊಂಡುಹೋಗುವಿರಿ?' ಎಂದು ಅವರಲ್ಲೊಬ್ಬನು ಹೇಳಿದನು. ಅದನ್ನು ಕೇಳಿ ಮಿಕ್ಕವರು ಇನ್ನೂ ಗಹಗಹಿಸಿ ನಗಲಾರಂಭಿಸಿದರು.

'ನಮಗೆ ನಿಮ್ಮ ಸಹಾಯವಿಲ್ಲ'

ಪ್ರಧಾನ ಸೇನಾಧಿಪತಿ ಹೇಳಿದ— 'ಜಿನ್ನರೇ! ಜಗತ್ತಿನಲ್ಲಿ ಹೊಸ ಕ್ರಮ, ಹೊಸ ವ್ಯವಸ್ಥೆ ಏರ್ಪಡುತ್ತ ಇದೆ. ಇದು ಪ್ರಜಾಸತ್ತೆಯ ಕಾಲ. ಈ ಕಾಲದಲ್ಲಿ, ಧರ್ಮಕ್ಕಿಂತ ನ್ಯಾಯ ಮತ್ತು ನೀತಿಗೆ ಬೆಲೆ ಹೆಚ್ಚು. ನಾವು ಸ್ವತಂತ್ರ ಮತ್ತು ಸಬಲ ಹಿಂದುಸ್ಥಾನದೊಂದಿಗೆ ಒಡಂಬಡಿಕೆ ಮಾಡಿಕೊಂಡು ಸ್ನೇಹದಿಂದಿರಬಹುದು. ಆದರೆ ಗುಲಾಮ ಹಿಂದುಸ್ಥಾನದೊಂದಿಗೆ ನಮ್ಮ ಯಾವ ಸಂಬಂಧವೂ ಇಲ್ಲ. ನೀವು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸದ ಹೊರತು ನಾವು ನೀವು ಪರಸ್ಪರ ಸಹಾಯ ಸಹಕಾರಗಳನ್ನು ಕೊಡಲಾರೆವು. ನಾವು ಸ್ವತಂತ್ರರು, ನೀವು ಗುಲಾಮರಿದ್ದೀರಿ! ನೀವು ನಮಗೆ ಏನು ಸಹಾಯ ಮಾಡುವಿರಿ?'

ಜಿನ್ನರು ಇದನ್ನು ಕೇಳಿ ಬೆಪ್ಪಾಗಿ ನಿಂತರು. ಚಕ್ರವರ್ತಿ ಪಟ್ಟ ಕಟ್ಟಿಕೊಳ್ಳುವ ಅವರ ಎಲ್ಲಾ ಪ್ರಯತ್ನಗಳು ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾದುವು. ಅವರು ಗುಮ್ಮಟನಂತೆ ನಿಂತಿರುವುದನ್ನು ನೋಡಿ ಸೇನಾಧಿಕಾರಿಗಳು, ಮತ್ತು ಅವರ ಅಸಂಖ್ಯಾತ ಸೈನಿಕರು ಒಂದೇ ಸಮಯಕ್ಕೆ ಗೊಳ್ ಗೊಳ್ಳೆಂದು ನಗಲಾರಂಭಿಸಿದರು. ನಗೆಗಡಲಿನಲ್ಲಿ ಜಿನ್ನರು ಮುಳುಗಿಹೋದರು. ಅವರಿಗೆ ಉಸಿರು ಕಟ್ಟಿಬಂದಿತು. ಪ್ರಾಣ ಹೋಗುವಂತಾಯಿತು. ಯಾರೋ ಅವರನ್ನು ಎತ್ತಿ ಮೇಲಕ್ಕೆ ಹಾಕಿದಂತೆ ಭಾಸವಾಯಿತು. ಅವರು ಕಣ್ತೆರೆದು ನೋಡಿದರು. ಯಾರೂ ಏನೂ ಇಲ್ಲ. ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡಿದ್ದರು. ಮೈ ಎಲ್ಲಾ ಬೆವರಿಹೋಗಿತ್ತು.

ನೋಟೀಸು

ಕಾಸರಗೋಡು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 129/1940

1. [illegible] [illegible] [illegible]
2. [illegible]
3. [illegible]
4. [illegible] ಮತ್ತು [illegible] — [illegible] ಇವರ [illegible] 1ನೇ ಅರ್ಜಿದಾರರು. ಕಾಸರಗೋಡು ತಾಲೂಕು [illegible] ಗ್ರಾಮದ [illegible] ವಾಸಿಗಳು — ಅರ್ಜಿದಾರರು

ಮತ್ತು

[illegible], [illegible] ಜಿಲ್ಲೆ, [illegible] [illegible], [illegible] ಗ್ರಾಮದ [illegible] ವಾಸಿಗಳು — ಪ್ರತಿವಾದಿಗಳು

ಇವರೊಳಗೆ

ತಾರೀಕು 16-8-40.

ಸದ್ರಿ ಅರ್ಜಿದಾರರ ಪರವಾಗಿಂದ ನೋಟೀಸು:—

[illegible] [illegible] ಎಂಬವರಿಗೆ, ದಿ [illegible] ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಕಂಪೆನಿ [illegible] ದಿ [illegible] ಇಂಡಸ್ಟ್ರಿಯಲ್ ಎಂಡ್ ಟ್ರೇಡಿಂಗ್ ಸಿಂಡಿಕೇಟ್ ಲಿಮಿಟೆಡ್ [illegible] ಇದರ [illegible] ಬ್ರಾಂಚಿನಿಂದಲೂ [illegible] ವಿಧರಿಸಿದಂತೆ. [illegible] ರೂಪಾಯಿ 565-3-0ನ್ನು [illegible] ನ್ಯಾಯವಾದ ಪ್ರತಿನಿಧಿ [illegible] ಸರ್ಟಿಫಿಕೇಟು [illegible] ಮಾಡಿದ ಅರ್ಜಿಯು ತಾರೀಖು 28-8-1940ಕ್ಕೆ [illegible] ಈ ಮೂಲಕ ತಿಳಿಸಲಾಗುತ್ತದೆ.

Kasaragod,
16-8-1940.

K. P. MADHAVA RAO,
Advocate for
Petitioners.



ತೆರೆಗಳ ಮೇಲೆ ತೆರೆಗಳು ಎದ್ದು, ಅಭ್ಬರಿಸಿ ಬರುವ ಸಮುದ್ರದ ಭೀಕರ ದೃಶ್ಯವನ್ನು ಕಂಡು, ಎದೆಗಾರಿಕೆಯಿಲ್ಲದ ಹೆಂಗಸರೂ ಮಕ್ಕಳೂ ಬಹಳವಾಗಿ ಅಂಜಿಕೊಳ್ಳುತ್ತಾರೆ! ದಡದಲ್ಲಿ ನಿಂತ ಧೀರರಿಗೆ ಗೊತ್ತು, ತಮ್ಮ ಕಾಲಬುಡದ ಮಳಲ ರಾಶಿಗೆ ಅಪ್ಪಳಿಸಿ ತೆರೆಗಳು ಸತ್ವ ಹೀನವಾಗಿ ಅಪಾಯವಿಲ್ಲದೆಯೇ ಮರಳಿ ಹೋಗುವವೆಂದು.

◈

ಬ್ರಿಟನಿನ ಆಕಾಶದ ಅಂತರಾಳದಲ್ಲಿ ತಂಡ ತಂಡಗಳಾಗಿ ನಾಜೀ ವಿಮಾನಗಳು ಹಾರಾಡಿದವು. ಸಾವಿರಕ್ಕೂ ಮಿಕ್ಕ ವಿಮಾನಗಳು ಏಕಕಾಲದಲ್ಲಿಯೇ ಲಂಡನಿಗೆ ದಾಳಿಯಿಡಲು ಯತ್ನಿಸಿದವು

◈

ಜರ್ಮನ್ ವೈಮಾನಿಕರು ವಿಮಾನಗಳಲ್ಲಿ ಬಾಂಬುಗಳನ್ನು ಮಾತ್ರವಲ್ಲ, ಮೆಶಿನ್ ಗನ್ನುಗಳನ್ನೂ ತುಂಬಿಸಿ ತಂದಿದ್ದರಂತೆ!

◈

ಅಂತೂ ಹಿಟ್ಲರನ ಪಡೆಯು ಲಂಡನಿಗೆ ದಾಳಿಯಿಡಲು ಬರುವಾಗ ಬಹಳ ಅಭ್ರಟೆಯಿಂದಲೇ ಬಂದಿತ್ತು!

◈

ಎಲ್ಲೋ ಒಂದು ಆಸ್ಪತ್ರೆಗೆ, ನಡೆಯುತ್ತಿರುವ ಒಂದು ಹೆಂಗಸಿಗೆ, ಯಾರದೋ ಒಂದು ಮನೆಯ ಕಿಟಿಕಿಗೆ ಬಾಂಬೆಸೆದು ಬಿಟ್ಟರು ಇದಂತೆ ಆದ ಅಪಾಯ–ನಾಜೀ ವೈಮಾನಿಕರು ಇದರಿಂದ ಏನು ಮಹಾ ಸಾಹಸ ಮಾಡಿದ ಹಾಗಾಯಿತು?

◈

ಇಷ್ಟಕ್ಕೇ, ಬ್ರಿಟಿಷ್ ವೈಮಾನಿಕ ದಳದವರು ನೂರಾರು ನಾಜೀ ವಿಮಾನಗಳನ್ನು ನೆಲಕ್ಕುರುಳಿಸಿದರಂತೆ!

◈

ಅಷ್ಟು ಅಲ್ಪ ಅಪಾಯಕ್ಕೇ ಇಂತಹ ಪ್ರತೀಕಾರವಾಗಿದ್ದಲ್ಲಿ, ಹೆಚ್ಚಿನ ಅಪಾಯಗಳನ್ನು ಮಾಡಿದ್ದರೆ, ನಾಜೀ ವೈಮಾನಿಕರ ಗತಿ ಏನಾಗುತ್ತಿತ್ತೊ?

◈

ತೆರೆಗಳು ವ್ಯರ್ಥವಾಗಿ ದಡಕ್ಕೆ ಅಪ್ಪಳಿಸುತ್ತವೆ; ಧೀರರು ಅಂಜುವುದೇ ಇಲ್ಲ ತೆರೆಗಳು ಮತ್ತೂ ಮಸಗಿ ಬರುತ್ತಾ ಇರುತ್ತವೆ.

◈

ಸುಮಾರು ನಲ್ವತ್ತೈದು ಮಂದಿ ಪ್ರಖ್ಯಾತ ಅಂಗ್ಲೇಯ ಲೇಖಕರು ಒಂದು ಜಂಟಿಯಾದ ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ.

"ಇಂದಿನ ನಾಜೀ ಯುದ್ಧದಲ್ಲಿ ನಮ್ಮ ಜೀವವು ಮಾತ್ರ ಬೆದರಿಸಲ್ಪಟ್ಟಿದ್ದಲ್ಲ; ಆತ್ಮದ ಸ್ವಾತಂತ್ರ್ಯವೂ ನಡುಗಿಸಲ್ಪಟ್ಟಿದೆ. ನಾಜೀ ಶಕ್ತಿಯು ಆಳುವಲ್ಲಿ ಆತ್ಮ ಸ್ವಾತಂತ್ರ್ಯವೆಂಬುದು ಅಳಿದಿದೆ, ಅದು ಅಳಿದ ಮೇಲೆ ಜೀವಿಸಿ ಫಲವಿಲ್ಲ ಆದಕಾರಣ ಜಗತ್ತಿನ ಪ್ರತಿಯೊಂದು ಜನಾಂಗದ ಸ್ವಾತಂತ್ರ್ಯಕ್ಕಾಗಿ, ನಮ್ಮ ಮಕ್ಕಳ ಸ್ವತಂತ್ರ ಆತ್ಮ ರಕ್ಷಣೆಯ ಸಲುವಾಗಿ ಇಂದು ನಾಜಿಗಳ ವಿರುದ್ಧ ಕಾದಾಡಬೇಕೆಂದು ನಾವು ಬಿನ್ನಹ ಮಾಡುತ್ತೇವೆ"

◈

ಅವರ ಪ್ರತಿಯೊಂದು ಶಬ್ದವನ್ನೂ ಭಾರತವು ಒಪ್ಪುತ್ತದೆ, ಸ್ವಾತಂತ್ರ್ಯಕ್ಕಾಗಿಯೇ ಭಾರತವು ಕಾದಾಡಲು ಸಿದ್ಧವಾಗಿದೆ.

◈

ಇಂದಿನ ಯುದ್ಧದ ಪರಿಸ್ಥಿತಿಯಲ್ಲಿ ಭಾರತದ ಯುವಕರಿಗೆ ಹೆಚ್ಚು ಹೆಚ್ಚಾಗಿ ಸೈನಿಕ ಶಿಕ್ಷಣವನ್ನು ಕೊಡುವುದ ಅವಶ್ಯವಷ್ಟೆ?

◈

ಸರಕಾರವೂ ಇಂದು ಈ ಕಡೆಗೆ ಗಮನ ಕೊಡುತ್ತಿದೆ ಅದೂ ನ್ಯಾಯವೇ ಎನ್ನಬೇಕ

◈

ಆದರೆ, ಶುದ್ಧ ಅಹಿಂಸೆಯ ಧೋರಣೆಯುಳ್ಳ, ಜಾತೀಯ ಸಂಸ್ಥೆಗಳಾಗಿರದ, ಶಿಸ್ತು ವಿಧೇಯತೆಗಳ ತರಬೇತಿಯನ್ನು ಹೊಂದುವ ಸ್ವಯಂಸೇವಕರ ಚಟುವಟಿಕೆಗಳನ್ನು ನಿಷೇಧಿಸುವ ಸರಕಾರದ ಆಜ್ಞೆಯನ್ನು ಭಾರತದ ಮುಖಂಡರನೇಕರು ಕಟುವಾಗಿ ಖಂಡಿಸಿದ್ದಾರೆ

◈

ಬ್ರಿಟನು ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿದೆ, ಭಾರತದ ತರುಣರು ಜಗತ್ತಿನ ಸ್ವಾತಂತ್ರ್ಯವುಳಿಸಲು ಬ್ರಿಟನಿಗೆ ಬೆಂಬಲ ನಿಲ್ಲಬೇಕು, ಆದರೆ ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಅವರು ತಮ್ಮ ದೇಶದಲ್ಲಿಯೇ ಎದೆ ಮುಂದೆ ಮಾಡಿ ಶಿಸ್ತಿನಿಂದ ನಡೆಯಬಾರದೋ ಏನೊ?

◈

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ

ಶಾಲಾ ಪುಸ್ತಕಗಳು!

1939ನೇ ಮೇ ತಿಂಗಳಲ್ಲಿ ಸರಕಾರವು ಹೊರಡಿಸಿದ ಪಾಠಪಟ್ಟಿಗೆ ಸರಿಯಾಗಿ ಬರೆದ ದು

ಚರಿತ್ರೆ ಮತ್ತು ಕಥೆಗಳು

ಪುಸ್ತಕ	ಬೆಲೆ
3ನೇ ದರ್ಜೆ	0 2 6
4ನೇ ,,	0-3 0
5ನೇ	0 3 6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

ಪುಸ್ತಕ	ಬೆಲೆ
3ನೇ ದರ್ಜೆ	0 1 6
4ನೇ ,,	0–2 0
5ನೇ	0–?–6

ಸಿವಿಕ್ಸ್ ಅಥವಾ ಪ್ರಜಾಧರ್ಮ

3ನೇ ದರ್ಜೆ ಬೆಲೆ 0–1 6 4ನೇ ದರ್ಜೆ ಬೆಲೆ 0–?–0 5ನೇ ದರ್ಜೆ ಬೆಲೆ 0–2–6
6ನೇ ,, 0–3–0 7ನೇ ,, 0 3–0 8ನೇ ,, 0–3–0

ಹೆಣ್ಮಕ್ಕಳ ಶಾಲೆಗಳಿಗಾಗಿ ಗೃಹವ್ಯವಸ್ಥೆ, ಆರೋಗ್ಯಶಾಸ್ತ್ರ ಮತ್ತು ಸಿವಿಕ್ಸ್

4ನೇ ದರ್ಜೆಗೆ 0—2—6 5ನೇ ದರ್ಜೆಗೆ 0—3—6

ಪ್ರಾಥಮಿಕ ಭೂವಿವರ

ಜಿಲ್ಲೆಯ ಒಬ್ಬ ಪ್ರಸಿದ್ಧ ಭೂಗೋಳ ಶಿಕ್ಷಕರಿಂದ ರಚಿತವಾದುದು)

4ನೇ ತರಗತಿಗೆ 0–2–6 5ನೇ ತರಗತಿಗೆ 0 3–6 6ನೇ ತರಗತಿಗೆ 0–5–0
7ನೇ ತರಗತಿಗೆ 0–6–0 8ನೇ ತರಗತಿಗೆ 0–7–0

ಪ್ರಾಥಮಿಕ ಲಘುವಿಜ್ಞಾನ

(ಶ್ರೀ ಎಸ್ ರಾಮಕೃಷ್ಣಾಚಾರ್, ಬಿ ಎ, ಎಲ್ ಟಿ ವಿರಚಿತ)

6ನೇ ತರಗತಿಗೆ 0–6–0 7ನೇ ತರಗತಿಗೆ 0–6–0 8ನೇ ತರಗತಿಗೆ 0 6 0

ವ್ಯಾಕರಣ ಮತ್ತು ಪ್ರಬಂಧ

(ವಿದ್ವಾನ್ ಶ್ರೀ ಕೆ ಕೆ ರೈ ವಿರಚಿತ)

4ನೇ ಮತ್ತು 5ನೇ ತರಗತಿಗೆ 0—2—0 6ನೇ ತರಗತಿಗೆ 0—2—0
7ನೇ ,, 0—2–6 8ನೇ ,, 0—3—0

ಸಮಾಜಶಾಸ್ತ್ರ (ಟ್ರೈನಿಂಗ್ ಶಾಲೆಗಳಿಗೆ) ಬೆಲೆ: 1—0—0

ದೊರೆಯುವ ಸ್ಥಳ– **ಶಾರದಾ ಛಾಪಖಾನೆ ಮಂಗಳೂರು.**

ನೋಟೀಸು

ಮಂಗಳೂರು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮ ನಂ. 11/1939
ಕ್ರಮ ಅಮ್ಲಜಾರಿ ನಂ. 344/1940.

ಯು ಬೇಡಪ್ಪ ಕಿಣಿ—ವಾದಿ—ಅರ್ಜಿದಾರ. ವಕೀಲ ಶ್ರೀ. ಜಿ. ಉಪೇಂದ್ರ ಪ್ರಭು—

ಮತ್ತು

1 ಎಸ್ ಬಾಬು ಮೋಹನ ಸುವರ್ಣ
2 ಎಸ್ ವಜ್ರದತ್ತ ಸುವರ್ಣ
3 ಎಸ್ ಶಿವನಾಥ ಸುವರ್ಣ
ಮಂಗಳೂರು ಶಹರವಾದ ಪಾಂಡೇಶ್ವರದಲ್ಲಿ ಮಿನರ್ವ ಹೋಟೆಲ ಬಳಿಯಲ್ಲಿರುವವರು — ಪ್ರತಿವಾದಿಗಳು ರೆಸ್ಪೋಂಡೆಂಟರು

ಸದ್ರಿ ರೆಸ್ಪೋಂಡೆಂಟರಿಗೆ–

ಸದ್ರಿ ಕ್ರಮ ನಂ 11/1939ನೇ ವ್ಯಾಜ್ಯದಲ್ಲಿ ನಿಮ್ಮ ಮೇಲೆ ಆದ ಡಿಕ್ರಿ ಪ್ರಕಾರ ಬರತಕ್ಕ ಹ್ಯಾವೇಜಿನ ವಸೂಲಿ ಕುರಿತು ಡಿಕ್ರಿಯಿಂದ ತೋರುವ ಸ್ಥಿರಾಸ್ತಿಗಳನ್ನು ಏಲಂ ಮಾಡಬೇಕಾಗಿ ಅರ್ಜಿದಾರನು ಸದ್ರಿ ಅಮ್ಲಜಾರಿ ದಾಖಲುಮಾಡಿದ್ದರಿಂದ ಏಲಂ ಇಷ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ ಸದ್ರಿ ಅಮಲಜಾರಿಯು ತಾ 12 9 1940ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದ್ದಾರೆ ಆದುದರಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ನೀವು ಆದನ್ನು ಸದ್ರಿ ಕೋರ್ಟಿನಲ್ಲಿ ತಾ 12 1940ರಲ್ಲು ಹಗಲು 10½ ಗಂಟೆಗೆ ಹಾಜರ್ ಆಗಿ ಬ್ಯಾಕಿಡು ವಾದಿಸತಕ್ಕದ್ದು ತಪ್ಪಿದ್ದರೆ ನಿಮ್ಮನ್ನು ಎಕ್ಸ್ ಪಾರ್ಟಿ ಮಾಡಿ ನಿಮ್ಮ ಗೈರ್‌ಹಾಜರ್‌ಯಲ್ಲಿ ಸದ್ರಿ ಅಮ್ಲಜಾರಿಯು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಇದರಿಂದ ತಿಳಿಸಲಾಗುತ್ತದೆ

ಮಂಗಳೂರು 19-8 1940 — **G UPENDRA PRABHU**, Vakil for Plaintiff— Petitioner

NOTICE

IN THE COURT OF THE DISTRICT MUNSIF OF MANGALORE

S C NO 286 1940

Between -

Haji K Abdulkhader Bava— *Plaintiff*

and

1 E F Pinto
2 J A Pinto — *Defendant*

To 1st Defendant E L Pinto, Coffee Planter, residing in Candle Garden, Mangalore.

Is hereby given that the above named plaintiff has filed the above suit against you and 2nd defendant for the recovery of Rs. 142-4 with future interest and cost of suit due in respect of dealings carried on with the plaintiff and the said suit stands posted to 9-9-1940 at 11 A M.

You are hereby required to appear either in person or by a pleader on the said date and hour before the said Court and contest the same, otherwise the same will be decided in your absence.

Mangalore. 14-8 1940 — **K. RAMMOHAN RAO**, Vakil for Plaintiff

ವಿಜ್ಞಾನಯುಗ

ಲೋಕನಾಶಕವಾದ ರಾಕೆಟೆಂಬ ಆಕಾಶಬಾಣ

ಇಂದಿನ ಯುದ್ಧಾಸ್ತ್ರಗಳಲ್ಲಿ ಇದು ಒಂದು ಅದ್ಭುತವಾದುದಾಗಿದೆ. ನೂರಾರು ಮೈಲುಗಳ ದೂರದಲ್ಲಿ ನಿಂತು ಎಸೆದರೆ ಇದು ಹೋಗಿ ಬೀಳುವುದು. ಇದರಿಂದ ಚಂದ್ರಲೋಕವನ್ನು ಭೇದಿಸುವುದೂ ಸಾಧ್ಯವಿದೆಯೆಂದು ಅಭಿಪ್ರಾಯವಾಗಿದೆ. ರಾಕೆಟ್ ಬಾಂಬುಗಳಿಂದ ಪ್ರಪಂಚದ ಒಂದು ಮೂಲೆಯಲ್ಲಿ ನಿಂತು ಇನ್ನೊಂದು ಮೂಲೆಯ ಪಟ್ಟಣಗಳನ್ನು ನಾಶಪಡಿಸುವುದು ಸಾಧ್ಯವಿದೆ.

ಉತ್ತರ ಸಮುದ್ರದಿಂದ ಹಾರಿಸಿದ ರಾಕೆಟು ಬ್ರಿಟನಿಗೆ ಹೋಗಿ ಬೀಳಬಹುದಂತೆ. ಇದು ಹಿಟ್ಲರನ ಗುಪ್ತಾಸ್ತ್ರವೇ ಎಂದು ಹಲವರ ಊಹೆ. ಹೇಗಿದ್ದರೂ ಇಂತಹ ಅಸ್ತ್ರಗಳಿಂದ ಜಗತ್ತಿನ ಪ್ರಳಯವು ಸಮೀಪಿಸಿದಂತೆಯೇ ಆಗುತ್ತಿದೆ.

ದ್ರಾವಕ ಅನಿಲದ ಬಾಂಬುಗಳು

ಆಮ್ಲಜನಕ, ಜಲಜನಕಗಳಂಥ ಅನಿಲಗಳನ್ನು ದ್ರವರೂಪಕ್ಕೆ ತಂದು ಅವುಗಳಿಂದ ಬಾಂಬುಗಳನ್ನು ತಯಾರಿಸಬಹುದು. ಈ ಬಾಂಬುಗಳು ಎರಡು ಚೂರು ಸ್ಫೋಟನವಾದರೂ, ಅದರಿಂದ ದೊಡ್ಡದೊಂದು ಊರೇ ಧ್ವಂಸವಾಗಬಹುದು. ಯೂರೋಪಿನಲ್ಲಿ ಈಗ ನಡೆಯುತ್ತಿರುವ ಯುದ್ಧದಲ್ಲಿ ಜರ್ಮನರು ಈ ಬಾಂಬುಗಳನ್ನು ಉಪಯೋಗಿಸಬಹುದೆಂದು ಕೆಲವರು ಊಹಿಸಿದ್ದರು. ಆದರೆ ಈ ಬಾಂಬುಗಳನ್ನು ಶೋಧನಾಲಯಗಳಲ್ಲಿ ಪರೀಕ್ಷಾರ್ಥ ತಯಾರಿಸಬೇಕೇ ಹೊರತು, ಅವುಗಳನ್ನು ವಿಮಾನಗಳಲ್ಲಿ ಒಂದು ಕಡೆಯಿಂದ ಒಂದು ಕಡೆಗೆ ಕೊಂಡು ಹೋಗಲಿಕ್ಕಾಗುವುದಿಲ್ಲವೆಂದು ಜರ್ಮನಿನ ವೈಜ್ಞಾನಿಕರು ಹೇಳಿರುವರು. ಯಾಕೆಂದರೆ ಇವು ಬಹು ಸ್ವಲ್ಪ ಘರ್ಷಣದಿಂದಲೂ ಒಡೆಯುತ್ತವೆ. ಇವುಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಜರ್ಮನ್ ವಿಮಾನಗಳು ಆಕಾಶಕ್ಕೆ ಏರಬೇಕಾದರೆಯೇ, ಈ ಬಾಂಬುಗಳು ಒಡೆದುದು ಅಲ್ಲದೆ, ಅವುಗಳನ್ನು ಹೊತ್ತುಕೊಂಡಿದ್ದ ವಿಮಾನಗಳೂ ಒಡೆದು ಧೂಳಾದುವೆಂದು ಪ್ರಕಟವಾಗಿದೆ. ಆದುದರಿಂದ ರಣಕ್ಷೇತ್ರದಲ್ಲಿ ಈ ಬಾಂಬುಗಳನ್ನು ಉಪಯೋಗಿಸುವರೆಂಬುದಕ್ಕೆ ಯಾವ ಆಧಾರವೂ ಇರುವುದಿಲ್ಲ.

ಗಾಯಗೊಂಡವರಿಗೆ ನವೀನ ಚಿಕಿತ್ಸೋಪಾಯ

ಸ್ಪೈನಿನ ಕಳೆದ ಬಾರಿಯ ಅಂತಃಕಲಹದಿಂದ ಬಹಳ ಜನ ಹಾನಿ, ಧನಹಾನಿ ಆಯಿತು. ಆದರೆ ಅದೇ ಸಮಯ ಅದರಿಂದ ಗಾಯಗೊಂಡವರ ಒಂದು ನವೀನ ಚಿಕಿತ್ಸೋಪಾಯವನ್ನು ಕಂಡುಹಿಡಿಯುವುದು ಸಾಧ್ಯವಾಯಿತು. ಈಗ ಗಾಯಗಳ ಮೇಲೆ ಕಟ್ಟುವ ಮುಲಾಂಪಟ್ಟಿಯನ್ನು ಪ್ರತಿದಿನವೂ ಬಿಚ್ಚಿ ತೆಗೆದು, ಕ್ರಿಮಿನಾಶಕ ದ್ರಾವಕಗಳಿಂದ ತೊಳೆಯುವುದರಿಂದ ಗಾಯಗೊಂಡವರು ಅಸಹನೀಯ ನೋವು ಯಾತನೆಗಳನ್ನು ಅನುಭವಿಸಬೇಕಾಗುತ್ತದೆ. ಆದರೆ ಈ ಹೊಸ ಕ್ರಮದಲ್ಲಿ ಗಾಯಗೊಂಡವನಿಗೆ ಟಿಟಾನಿಸ ಮತ್ತು ಗ್ಯಾಂಗರೀನ ನಿರೋಧಕ ಇಂಜೆಕ್ಷನುಗಳನ್ನು ಕೊಡುವರು, ಮತ್ತೆ ಗಾಯವನ್ನು ಉಗುರು ಬೆಚ್ಚಗಿನ ಉಪ್ಪುನೀರಿನಿಂದ ತೊಳೆದು, ಹರಿದ ಮಾಂಸವನ್ನು ಕತ್ತರಿಸಿ ಆ ಮೇಲೆ ಅದರ ಸುತ್ತಲೂ ಪ್ಲಾಸ್ಟರು ಕಟ್ಟುವರು. ಮತ್ತೆ ಗಾಯವು ಪೂರ್ಣ ಮಾಸುವ ತನಕ ಅದನ್ನು ಬಿಚ್ಚಬೇಕಾಗಿಲ್ಲ. ರಕ್ತದಲ್ಲಿ ವಿಷ ಕ್ರಿಮಿಗಳು ಸೇರಿದ್ದರೆ, ಅದನ್ನು ಸಲ್ಫಪ್ಯಾಡ್ ಗುಳಿಗೆಗಳನ್ನು ತಿನ್ನಲು ಕೊಟ್ಟು ನಾಶಮಾಡುವರು. ಗಾಯಗೊಂಡವನಿಗೆ ಜ್ವರವು ಬರುತ್ತಿದೆಯೋ ಎಂದು ಕೆಲವು ದಿನಗಳ ತನಕ ನೋಡಿಕೊಂಡಿರಬೇಕು. ಜ್ವರ ಬರುತ್ತಿದ್ದರೆ ಮಾತ್ರ ಪ್ಲಾಸ್ಟರನ್ನು ಬಿಚ್ಚಿ ಗಾಯವನ್ನು ಪರೀಕ್ಷಿಸಿ ಪುನಃ ಬೇರೆ ಪ್ಲಾಸ್ಟರನ್ನು ಕಟ್ಟುವರು. ಈ ಚಿಕಿತ್ಸಾಕ್ರಮದಲ್ಲಿ ನೋವು ಏನೂ ಇರುವುದಿಲ್ಲ. ಜ್ವರ ಬರುವ ಪ್ರಸಂಗಗಳು ಬಹಳ ಅಪರೂಪವಾಗಿರುತ್ತವೆ. ಬ್ರಿಟನಿನ ಆಸ್ಪತ್ರೆಗಳಲ್ಲಿ ಈಗ ಇದೇ ಕ್ರಮವನ್ನು ಗಾಯಗೊಂಡವರ ಚಿಕಿತ್ಸೆಗೆ ಅನುಸರಿಸುತ್ತಿದ್ದಾರೆ.

ಒಡೆಯದ ಗ್ರಾಮಫೋನು ರಿಕಾರ್ಡು

ಈಗ ಮಾರಾಟಕ್ಕಿರುವ ಗ್ರಾಮಫೋನು ರಿಕಾರ್ಡುಗಳು ಮೇಲಿನಿಂದ ಕೆಳಗೆ ಬಿದ್ದರೆ ಒಡೆಯುತ್ತವೆ. ಆದರೆ ಕೆಲವು ಭಾರತೀಯ ವೈಜ್ಞಾನಿಕರು ಒಡೆಯದ ರಿಕಾರ್ಡುಗಳನ್ನು ತಯಾರಿಸುವ ಸಫಲ ಪ್ರಯತ್ನಗಳನ್ನು ಮಾಡಿರುವರೆಂದು ಭಾರತೀಯ ಅರಗು ಸಂಶೋಧನಮಂಡಲವು ಹೇಳಿದೆ. ಎಲ್ಯುಮಿನಿಯಮಿನ ತಗಡುಗಳನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಅವುಗಳ ಎರಡೂ ಬದಿಗಳಿಗೆ ವೈಜ್ಞಾನಿಕ ಉಪಾಯಗಳಿಂದ ಅರಗಿನ ಲೇಪ ಹಚ್ಚಿ ತಯಾರಿಸಿದ ರಿಕಾರ್ಡು ಈಗ ಮಾರಾಟಕ್ಕಿರುವ ರಿಕಾರ್ಡಿನಂತೆಯೆ ಉತ್ತಮ ಸಂಗೀತವನ್ನು ಕೊಡುತ್ತದೆ ಆದರೆ ಅದು ಕೆಳಗೆ ಬಿದ್ದರೂ ಒಡೆಯಲಾರದು. ಇವುಗಳ ಕ್ರಯವನ್ನು ಮತ್ತೂ ಕಡಿಮೆ ಮಾಡುವುದಕ್ಕೋಸ್ಕರ ಕಾಗದದ ದಪ್ಪನಾದ ರಟ್ಟನ್ನು ಬೇಕಾದ ಆಕಾರದಲ್ಲಿ ಕತ್ತರಿಸಿ, ಅದಕ್ಕೂ ಅರಗಿನ ಲೇಪ ಹಚ್ಚಿ ರಿಕಾರ್ಡು ತಯಾರಿಸುವ ಸಂಶೋಧನೆಯೂ ನಡೆದಿದೆ. ಇವೆರಡೂ ಪ್ರಯತ್ನಗಳು ಸಂಪೂರ್ಣ ಸಫಲವಾದರೆ ಗ್ರಾಮಫೋನು ರಿಕಾರ್ಡುಗಳ ಕ್ರಯವು ಈಗಿನದಕ್ಕಿಂತ ಅರ್ಧದಷ್ಟು ಕಡಿಮೆಯಾಗಬಹುದು.

ಸೀನುವುದರ ಭಾವಚಿತ್ರ

ಒಂದು ನಿಮಿಷದ ಲಕ್ಷದಲ್ಲಿ ಒಂದು ಪಾಲಿನಷ್ಟು ಸಮಯದಲ್ಲಾಗುವ ಬದಲಾವಣೆಯನ್ನು ಅಂಕಿಸುವ ಸೂಕ್ಷ್ಮ ಕೆಮರಗಳನ್ನು ಈಗ ತಯಾರಿಸುತ್ತಿರುವುದರಿಂದ, ಮನುಷ್ಯನು ಸೀನುವಾಗ ಉಂಟಾಗುವ ಪರಿವರ್ತನೆಗಳನ್ನು ತೋರಿಸುವ ಭಾವಚಿತ್ರಗಳನ್ನು ತೆಗೆಯುವುದು ಈಗ ಸಾಧ್ಯವಾಗಿದೆ. ಪ್ರೊಫೆಸರ ಮಾರ್ಶಲ ಡಬ್ಲ್ಯೂ ಜೇಮಿಸ್ಸನ ಎಂಬ ಅಮೇರಿಕದ ವಿಜ್ಞಾನಿಗಳೊಬ್ಬರು ಸೀನುವಾಗಿನ ಭಾವಚಿತ್ರವನ್ನು ತೆಗೆದು, ಸೀನುವಾಗ ವಾಯುಕಣಗಳು, ಬಾರೂದು ಸುಟ್ಟಾಗ ಹಾರಿದಂತೆಯೇ ಆಕಾಶದಲ್ಲಿ ಹಾರುವವೆಂದೂ ಈ ಹಾರುವ ವೇಗವು ನಿಮಿಷಕ್ಕೆ ೧೫೦ ಅಡಿ, ಅಂದರೆ ಮಿನಿಟಿಗೆ ಎರಡು ಮೈಲುಗಳಷ್ಟು ಇರುವದೆಂದೂ ತೋರಿಸಿಕೊಟ್ಟಿದ್ದಾರೆ.

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶವು'

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಥ್ರೂ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ–ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರಿ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಶಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS,

The Combined Booking Agency, MANGALORE.

The Joint Booking Office KODIALBAIL.

ಗುಣಕಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣನಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬ್ಯು ಸರ್ಟಿಫಿಕೇಟು_ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾದಾಹ್ಹರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೦

ವಿ. ಪಿ. ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ವಿರಜಿ, S. M. C

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪ್ಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗ್ಯೆರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—12—0	4—14—0
,, ದುಯಂ ,, ,,	4—10—0	4—10—0
,, ಅವ್ವಲ್ ಸುಗ್ಗಿ ,,	4—8—0	4—10—0
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ _ಸುಲಿದದ್ದು 1000ಕ್ಕೆ	35—0—0	40—0—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
,, ದಿಲ್‌ಪಸಂದಿ ,,	—	—
ತೆಂಗಿನ ಎಣ್ಣೆ ಮುಡಿಕ್ಕೆ	8—10—0	8—10—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	4—0—0	4—0—0
ಗೇರುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಣಮೆಣಸು ಹುಂಡ್ರೆಡ್ವೇಟಿಗೆ	18—8—0	14—0—0

ಸ್ವದೇಶಾಭಿಮಾನಿ

The Bombay Life Assurance Company, Ltd.
(Estd. 1908).

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF OUR FOLLOWING OFFICES AT

Puthiyara Calicut	Car Street, Mangalore	Central Station Road, Trivandrum
Gautam Nivas, Charni Road, Girgaum, Bombay No 4	Post Box No 337 Mount Road, Madras	Visvesvarapuram Circle, Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಛಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷಘಾತ, ಮೂಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Printed & Published by A. S. Kamath at the Sharada Press, Car Street, Mangalore.

Std. 1906

ಸ್ವದೇಶಾಭಿಮಾನಿ

SWADESHABHIMANI

ಯೋಧರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಒದಗಿಸುವ ಜನರ ರಕ್ಷಣೆಗೆ ಸಿದ್ಧರಾಗಿ ನಿಂತವರು.

KANNADA ILLUSTRATED WEEKLY

ಅಮೇರಿಕದಲ್ಲಿ ನಾಜೀ-ಫೆಸಿಸ್ಟ ದ್ವೇಷ!

ಸಿನಿಮಾ ಮಂದಿರದಲ್ಲಿ ನಡೆದಾ ಮಾರಾ

ಯುರೋಪಿನಲ್ಲಿ ನಾಝಿಗಳು ಮತ್ತು ಅವರೊಂದಿಗೆ ಕೂಡಿ ಫೆಸಿಸ್ಟರು ಮಾಡುತ್ತಿರುವ ಅತ್ಯಾಚಾರದಿಂದ ದೂರದ ಅಮೇರಿಕನರೂ ಸಂತಪ್ತರಾಗಿರುವರು. ಹಿಟ್ಲರ ಮುಸಲೋನಿಯರು ಕೂಡಿ ಯುರೋಪಿನಲ್ಲಿ ನಿರಪರಾಧಿ ಮತ್ತು ಅಬೋಧ ಸ್ತ್ರೀ ಪುರುಷ ಮಕ್ಕಳ ಬಿಸಿ ರಕ್ತದ ಕಾಲುವೆಯನ್ನು ಹರಿಸಿದ್ದಾರೆ. ಹೀಗಾದ್ದರಿಂದ ಅಮೆರಿಕದಲ್ಲಿ ನಾಝಿ ಮತ್ತು ಫೆಸಿಸ್ಟರೆಂದರೆ ಜನರು ಹಲ್ಲು ಕಡಿಯುತ್ತಿರುವರೆಂದು ಅಲ್ಲಿಯ 'ಟ್ಯಾವರ್' ಎಂಬ ಪತ್ರಿಕೆಯು ಹೇಳುತ್ತದೆ.

ಕೊಲಂಬಿಯದ ಬೊಗೊಟದಲ್ಲಿ, ಬೊಲಿವಿಯದ ಲಾಪಾಜದಲ್ಲಿ ಉರುಗ್ವೆಯ ಮೊಂಟವೀಡೊದಲ್ಲಿ, ವಿದ್ಯಾರ್ಥಿಗಳೆಲ್ಲರು ಒಟ್ಟುಗೂಡಿ ಜರ್ಮನ ಮತ್ತು ಇಟಾಲಿಯನ್ ಲಿಗೇಶನ್ನುಗಳನ್ನು ಕಲ್ಲು ಒಡೆದು ಹಾಳು ಮಾಡಿರುವರು. ಬ್ಯೂನೋಸ್ ಪರೇಸದ ಒಂದು ಸಿನೇಮ ಮಂದಿರದಲ್ಲಿ ಸೀಜ್‌ಫ್ರೀಡ್ ಲ್ಯಾನ್ ಎಂಬ ಒಂದು ಚಲಚ್ಚಿತ್ರವನ್ನು ತೋರಿಸುವ ವ್ಯವಸ್ಥೆ ಆಗಿತ್ತು. ಅದು ನಾಝಿಗಳ ಪಂಥ ಪರಾಕ್ರಮಗಳನ್ನು ತೋರಿಸಿ ಜನತೆಯ ಮನಸ್ಸನ್ನು ಅವರ ಕಡೆಗೆ ಒಲಿಸಿ ಕೊಳ್ಳಲಿಕ್ಕೆ ಮಾಡಿ ಚಿತ್ರ ಪಟವಾಗಿತ್ತು. ಸುಮಾರು ೨೦೦ ಮಂದಿ ನಾಝಿ ಉತ್ಸಾಹಿಗಳು ಮಂದಿರದಲ್ಲಿ ಸೇರಿಕೊಂಡಿದ್ದರು. ಆದರೆ ೫೦೦ಕ್ಕೂ ಹೆಚ್ಚಿಗೆ ಅವರ ವಿರೋಧಿಗಳು ಅಲ್ಲಿ ಸೇರಿಕೊಂಡಿದ್ದರೆಂಬುದು ಅವರಿಗೆ ತಿಳಿದಿರಲಿಲ್ಲ. ನಾಝಿ ವಿರೋಧಿಗಳಲ್ಲಿ ಹೆಚ್ಚಿನವರು ಆಟಗಾರರೂ ಅಂಗಸಾಧಕರೂ ಆಗಿದ್ದರು.

ಚಿತ್ರಪಟವನ್ನು ತೋರಿಸಲಾರಂಭಿಸಿದರು. ಅದರಲ್ಲಿ ಹಿಟ್ಲರನ ಆಗಮನವಾದೊಡನೆ ಉತ್ಸಾಹಿಗಳು ಜಯ ಘೋಷ ಮಾಡಿದರು. ಆಗಲೇ ವಿರೋಧಿಗಳು ಹಿಟ್ಲರ್ ವಿರೋಧ ಕೂಗಿದರು. ಸರಿ; ಗಲಭೆ ಗಲಾಟೆಗಳಿಗೆ ಆಗಲೇ ಆರಂಭ. ಜೀವಗಳು ನೊಂದಿದವು. ಸ್ತ್ರೀಯರು ಮಕ್ಕಳು ಅರಚಿಕೊಂಡರು. ನಾಝಿ ಉತ್ಸಾಹಿಗಳ ಬೆನ್ನು ತಲೆಗಳ ಮೇಲೆ ಎಂಥರ ಹಿಡಿದ ಬಂಧಕೆಂತೆ ಏಟುಗಳು ಬೀಳಲಾರಂಭಿಸಿದುವು. ಪೋಲೀಸರು ಶಾಂತಿ ಸ್ಥಾಪನೆಗೆ ಬಂದಾಗ, ನಾಝಿ ವಿರೋಧಿಗಳು ಅವರ ಕೈಗಳಿಂದಲೇ ಶಾಂತಿ ಸ್ಥಾಪಕ ದೊಣ್ಣೆಗಳನ್ನು ಕಿತ್ತುಕೊಂಡು ನಾಝಿ ವಿರೋಧಿಗಳ ಪೂಜೆ ಮಾಡಲಾರಂಭಿಸಿದರು. ಪೋಲೀಸರು ಸುಮಾರು ಮೂವತ್ತು ನಿವಾಸಿಗಳನ್ನು ಬಂಧನಮಾಡಿ ಮರುದಿನ ಬಿಟ್ಟು ಬಿಟ್ಟರು. ಸೀಜ್‌ಫ್ರೀಡ್ ಲ್ಯಾನನ್ನು ತೋರಿಸಲಾರದಾಗಿ ಸರಕಾರದ ನಿರ್ಬಂಧವಾಯಿತು.

ಹೋರಾಟದ ಪಂಥ... ಜನ್ಮಸಿದ್ಧ ಹಕ್ಕಿದೆ ಎನ್ನುವ ಮಂತ್ರಿಗಳಾದ ಜಾರ್ಜ ನ್ಯೂ ಡಾಲ್ ಎಂಬವರು ನಾಝಿ ಸಹಾನುಭೂತಿಯುಳ್ಳ ಎಸೆಂಬ್ಲಿ ಮೆಂಬರ ಮೂರ್ಖ ಯಗ್ ಎಂಬವನನ್ನು ದ್ವಂದ್ವಕ್ಕೆ ಕರೆದು ಪಂಥ ಹಾಕಿ ತನ್ನ ಮಂತ್ರಿಪದವಿಗೆ ರಾಜೀನಾಮೆ ಕಳುಹಿಸಿದ್ದಾರೆ. ಪಂಥದಲ್ಲಿ ಸಾಂಚೆಜನನ್ನು ಸೋಲಿಸಿ ನಾಝಿ ವಿರೋಧ ಸ್ವಾತಂತ್ರ್ಯವನ್ನು ಕಾಯುವದಕ್ಕಾಗಿಯೇ ಅವರು ಈ ರೀತಿ ಮಾಡಿರಬಹುದು.

ಉತ್ತರ ಅಮೆರಿಕದಲ್ಲಿ

ಸ್ವತಂತ್ರ ಸಂಯುಕ್ತ ಸಂಸ್ಥಾನಗಳು ಮತ್ತು ಬ್ರಿಟಿಷ ವಸಾಹತು ಕೆನಡಗಳು ಒಂದಾಗಿರುವವು. ಹೊರ ಆಕ್ರಮಣಗಳಿಂದ ಕೆನಡವನ್ನು ಸಂರಕ್ಷಿಸುವ ಭಾರವನ್ನು ಬ್ರಿಟಿಷ ಸರಕಾರವು ಸಂಯುಕ್ತ ಸಂಸ್ಥಾನ ಸರಕಾರಕ್ಕೆ ಕೊಡಲಿಚ್ಛಿಸಿ ಸರಕಾರವು ಆ ಭಾರವನ್ನು ತನ್ನ ಮೇಲೆ ತೆಗೆದು ಕೊಂಡಿದೆ. ನಾಝಿಗಳು ಅಲ್ಲಿಯೂ ವಿರೋಧಿಸಲಿಕ್ಕಾಗಿ ಸಂಬಂಧಪಟ್ಟ ರಾಷ್ಟ್ರಗಳು ಈ ವ್ಯವಸ್ಥೆಗೆ ಒಪ್ಪಿದಾಗಿದೆ. ಅಲ್ಲವಾದರೆ ಕೆನಡವು ಸಂಯುಕ್ತ ಸಂಸ್ಥಾನಗಳ ಸಂರಕ್ಷಣೆಗೆ ಒಳಪಟ್ಟಿರುವುದು ಲಕ್ಷ್ಯ ಎಂದೂ ಮೆಚ್ಚಿಕೆಯಿಲ್ಲ.

ನಿಮ್ಮ ಜೀವನೋಪಾಯವು ಆರೋಗ್ಯವನ್ನವಲಂಬಿಸಿದೆ!



ಆರೋಗ್ಯದ ಪ್ರಥಮ ಸೂತ್ರ

ಪದೇ ಪದೇ ಅನಾರೋಗ್ಯದಿಂದಿರುವ ಮನುಷ್ಯನು ತನ್ನ ಕೆಲಸದಿಂದ ಗೈರುಹಾಜರಿಯಾಗುವನಲ್ಲದೆ ತನ್ನ ಅಮೂಲ್ಯವಾದ ಸಂಬಳವನ್ನು ಕೂಡ ಕಳೆದುಕೊಳ್ಳುವನು. ಇದರಿಂದ ಅವನಿಗೂ ಅವನ ಕುಟುಂಬಕ್ಕೂ ತುಂಬಾ ಕಷ್ಟವಾಗುವುದು. ಆದಕಾರಣ ಪ್ರತೀ ಒಬ್ಬರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಚೆನ್ನಾಗಿ ಕೆಲಸಮಾಡಿ ಉತ್ತಮವಾದ ಸಂಬಳವನ್ನು ಸಂಪಾದಿಸಲು ಎಚ್ಚರದಿಂದಿರಬೇಕು.

ಆರೋಗ್ಯವನ್ನು ಕಾಪಾಡಲು ನಿಮ್ಮ ದೇಹದ ಅಂತರೇಂದ್ರಿಯಗಳು ನಿರ್ಮಲವಾಗಿರಬೇಕು. ಯಾವಾಗಲೂ ಒಂದು ಗ್ಲಾಸು ಉಕ್ಕಿ ಬರುವ ಎಂಡ್ರೂಸ್ ಲವಣವನ್ನು ಸೇವಿಸಿದರೆ ಅಂತರೇಂದ್ರಿಯಗಳು ಸ್ವಚ್ಛವಾಗುವುವು. ಇದು ನಿಮ್ಮ ಹೊಟ್ಟೆಯನ್ನು ನಿರ್ಮಲವಾಗಿರಿಸಿ, ಆರೋಗ್ಯಕ್ಕೆ ಹಾನಿಪ್ರದವಾದ ಮಲಿನ ಪದಾರ್ಥಗಳನ್ನು ಹೊರಗೆಡುವುದು. ಎಂಡ್ರೂಸ್ ಲವಣವು ನಾಲಗೆ ಮತ್ತು ಬಾಯಿಯನ್ನು ಸಹ ಸ್ವಚ್ಛವಾಗಿರಿಸಿ ಉದರ ರೋಗಗಳನ್ನು ನಿವಾರಿಸಿ ಪಿತ್ತ ರೋಗವನ್ನೂ ಅಜೀರ್ಣವನ್ನೂ ನಾಶಮಾಡುತ್ತದೆ.

ಎಂಡ್ರೂಸ್ ಲವಣವು ನಿಮ್ಮ ದೇಹದ ಅಂತರೇಂದ್ರಿಯಗಳನ್ನು ನಿರ್ಮಲವಾಗಿರಿಸುತ್ತದೆ ● ರಕ್ತವನ್ನು ತಂಪಾಗಿರಿಸಿ ಶುದ್ಧವಾಗಿರಿಸುತ್ತದೆ ● ಚರ್ಮವನ್ನು ನಿಚ್ಚಳವಾಗಿರಿಸುತ್ತದೆ ● ಉದರ, ಪ್ಲೀಹ, ಮಲಬದ್ಧತೆ ಮೊದಲಾದ ಬಾಧೆಯನ್ನು ನಿಲ್ಲಿಸುತ್ತದೆ ● ಇದು ಅಭ್ಯಾಸವಾಗುವಂತಿಲ್ಲ ಮಕ್ಕಳಿಂದ ಪ್ರಾರಂಭಿಸಿ ಇಡೀ ಕುಟುಂಬಕ್ಕೂ ಇದು ಹಿತ್ಕರವಾಗಿದೆ.



ಎಂಡ್ರೂಸ್ ಲವಣವು ಈ ಮನುಷ್ಯನಿಗೆ ಮಾಡಿದ ಉಪಕಾರವನ್ನು ಓದಿರಿ: "ಹತ್ತು ವರ್ಷಕಾಲ ನಾನು ಉದರ ವೇದನೆ, ಎದೆಯುರಿತದಿಂದ ನರಳಿದೆ. ನಾನು ಪ್ರತಿಯೊಂದು ಮದ್ದನ್ನು ಪ್ರಯೋಗಿಸಿ ನಿರಾಶನಾದೆ. ಕಡೆಗೆ ಎಂಡ್ರೂಸ್ ಲವಣದಿಂದ ಗುಣಹೊಂದಿದೆನು"

ಎಂಡ್ರೂಸ್ ಲಿವರ್ ಸೋಲ್ಟ್

ANDREWS LIVER SALT

ನಿಮ್ಮ ದೇಹದ ಒಳಭಾಗವನ್ನು ಸ್ವಚ್ಛಪಡಿಸುವುದು

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

30—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೩೦—೮—೧೯೪೦

ವೈಸರಾಯರ ಸೂಚನೆಗಳು ಕಾಂಗ್ರೆಸಿಗೆ ಒಪ್ಪಿಗೆಯಿಲ್ಲ!

"ವೈಸರಾಯರು ಮತ್ತು ಭಾರತ ಚಿವರು ಕೊಟ್ಟ ಹೇಳಿಕೆಗಳು ತ್ಯಂತ ವಿಷಾದವನ್ನುಂಟುಮಾ ಡೆ. ಕಾಂಗ್ರೆಸು ಪೂನದ ನಿರ್ಣಯ ಲ್ಲಿ ನೀಡಿದ ಸ್ನೇಹ ಹಸ್ತವನ್ನು, ್ರಿಟಿಷ್ ಸರಕಾರವು ನಿರಾಕರಿಸಿದೆ ವರ ಹೇಳಿಕೆಯು ಪ್ರಜಾಪ್ರಭುತ್ವ ತ್ವಕ್ಕೆ ಒಪ್ಪುವುದಿಲ್ಲ. ಭಾರತದ ತಸಾಧನೆಗೆ ಸಮರ್ಪಕವಾಗಿಲ್ಲ. ದ್ದರಿಂದ ಅದನ್ನು ಅಂಗೀಕರಿಸಲು ಾಧ್ಯವಿಲ್ಲ; ಮಾತ್ರವಲ್ಲದೆ ಭಾರತ ಲ್ಲಿ ಸಾರ್ವಜನಿಕವಾಗಿ ವೈಸರಾ ಯರ ಹೇಳಿಕೆಯನ್ನು ಖಂಡಿಸ ೀಕು. ಪ್ರಾಂತಗಳಲ್ಲಿ ಚುನಾಯಿತ ಾದ ಶಾಸನ ಸಭೆಯ ಸದಸ್ಯರು ಸೇ ವೈಸರಾಯರ ಹೇಳಿಕೆಯನ್ನು ಖಂ ಸಬೇಕು."

ಈ ಸಾರಾಂಶದ ನಿರ್ಣಯವೊಂದನ್ನು ರ್ಧಾದಲ್ಲಿ ಕಳೆದವಾರ ಕೂಡಿದ ಕಾಂ ್ರೆಸು ವರ್ಕಿಂಗ್ ಕಮಿಟಿಯು ಮಾಡಿ ದನ್ನು ಸರಕಾರಕ್ಕೆ ಕಳುಹಿಸಿದೆ ಅದರ ಿಸ್ತೃತತಾತ್ಪರ್ಯವು ಈ ರೀತಿಯಾಗಿದೆ

"ಕಾಂಗ್ರೆಸ್, ಸ್ನೇಹಹಸ್ತವನ್ನು ನೀಡಿ ು. ವೈಸರಾಯರ, ಭಾರತ ಸಚಿವರ ಾತುಗಳನ್ನು ಪರಿಶೀಲಿಸಿದರೆ ಸರಕಾ ವು ಅದನ್ನು ತಿರಸ್ಕರಿಸಿದಂತೆ ತಿಳಿಯುತ್ತದೆ. ಾರತದ ನ್ಯಾಯವಾದ ಸ್ವಾತಂತ್ರ್ಯದ ಕ್ಕನ್ನು ಅವರು ಒಪ್ಪುವುದಿಲ್ಲ. ಭಾರ ಕ್ಕೆ ಸಂಪೂರ್ಣ ರಾಷ್ಟ್ರೀಯ ಸ್ವಾತಂ ್ರ್ಯವು ಬೇಕು. ಇದು ಭಾರತದ ಹಕ್ಕು ಅದನ್ನು ನಿರಾಕರಿಸಿದುದನ್ನು ಕೂಡ ವರ್ಕಿಂಗ್ ಕಮಿಟಿಯು, ಭಾರತದ ಬ್ರಿಟ ನ ಸಾಮ್ರಾಜ್ಯ ವ್ಯೂಹದಲ್ಲಿರಲು ಸಾಧ ಿಲ್ಲವೆಂದು ಮನಗಂಡಿದೆ. ಸಂಪೂರ್ಣ ಸ್ವತಂತ್ರವಾಗುವುದೇ ಕಾಂಗ್ರೆಸಿನ ಧ್ಯೇಯ

ಬ್ರಿಟಿಷ್ ಸರಕಾರವು ಭಾರತದ ಅಂ ತಃಕಲಹ, ಅಲ್ಪಸಂಖ್ಯಾಕರ ವಿಚಾರ ಗಳನ್ನು ಮುಂದೊಡ್ಡಿ ಸ್ವಾತಂತ್ರ್ಯದ ಹಾದಿಯಲ್ಲಿರುವ ಅಡಚಣೆಗಳನ್ನು ಹೇ ಳುವುದು. ಬ್ರಿಟನು ಭಾರತದ ಅಧಿಕಾರ ವನ್ನು ಭಾರತದ ಚುನಾಯಿತ ಪ್ರತಿನಿಧಿ ಗಳ ವಶ ಬಿಟ್ಟುಕೊಡಲು ಇಷ್ಟಪಡುವು ದಿಲ್ಲ. ಅಲ್ಪಸಂಖ್ಯಾಕರ ಸಮಸ್ಯೆಯ ತೀರ್ಮಾನದ ವಿಷಯ ಕಾಂಗ್ರೆಸು ತನ್ನ

ಭಾರತದ ಸ್ವಾತಂತ್ರ್ಯವನ್ನು ಮನ್ನಿಸಬೇಕು!

ಪ್ರಜಾಪ್ರಭುತ್ವ ತತ್ವವು ಅನ್ವಯಿಸಬೇಕು

ದೇಶದಲ್ಲೆಲ್ಲಾ ಖಂಡನೆಯ ನಿರ್ಣಯ!

ವರ್ಕಿಂಗ್ ಕಮಿಟಿಯ ನಿರ್ಧಾರ

ನೀತಿಯನ್ನು ಸಾರಿದೆ ಕಾಂಗ್ರೆಸು ಕೇಳಿ ದ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿ ವಿಚಾರ ವನ್ನು ಸರಕಾರವು ಅಲ್ಲಗಳೆದಿದೆ ತಾತ್ಕಾಲಿಕವಾಗಿ ಕೇಂದ್ರದಲ್ಲಿ ರಾಷ್ಟ್ರೀ ಯ ಸರಕಾರವನ್ನು ರಚಿಸುವ ಸೂಚನೆ ಯನ್ನೂ ಮನ್ನಿಸಿಲ್ಲ. ಅಲ್ಪ ಸಂಖ್ಯಾಕರ ವಿಚಾರ ಮೊದಲಾದ ವನ್ನು ಬಹುಸಂ ಖ್ಯಾಕರ ವಿರುದ್ಧ ಹಿಡಿದೆತ್ತಿ ಹೇಳುವ ಈ ಅಡಚಣೆಗಳಿಂದ ಬ್ರಿಟಿಷ್ ಸರಕಾ ರವು ತನ್ನ ರಾಜ್ಯಾಧಿಕಾರದ ವ್ಯಾಮೋಹ ವನ್ನು ಬಿಟ್ಟುಕೊಡುವ ಮನಸ್ಸುಳ್ಳದ್ದಾ ಗಿಲ್ಲವೆಂದು ತಿಳಿಯುತ್ತದೆ. ಭಾರತದ ಸಹಜವಾದ ಸ್ವಾತಂತ್ರ್ಯ ಹಕ್ಕನ್ನು ಬ್ರಿಟ ನ ನಿರಾಕರಿಸುವುದು ಕಾಂಗ್ರೆಸಿಗೆ ಕ್ರೂ ರ ವ್ಯಸನಗಳನ್ನುಂಟು ಮಾಡಿದೆ. ಬ್ರಿಟ ನು ಇಲ್ಲಿ ಸಲ್ಲದ ನೆವಗಳನ್ನು ಮುಂದೊ ಡ್ಡಿ, ನಿರಂಕುಶವಾಗಿ ನಡೆಯುತ್ತಿರುವಾಗ, ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನ ಸ್ಥಾನಗಳನ್ನು ಯುದ್ಧಾನಂತರ ಕೊಡುತ್ತೇವೆಂದು ಹೇಳಿದುದನ್ನು ನಂಬ ಲಾಗುವುದಿಲ್ಲ.

ಬ್ರಿಟನು ರಾಷ್ಟ್ರೀಯ ಸರಕಾರದ ಕೇ ಳಿಕೆಗೆ ಗಮನಕೊಟ್ಟಿದರೆ ಯುದ್ಧದಲ್ಲಿ ರಾಷ್ಟ್ರದ ಸಹಾಯ ಸಿಗುತಿತ್ತು. ಬ್ರಿಟನು ಬಹು ಸಂಖ್ಯಾಕರನ್ನು ಅಲಕ್ಷಿಸಿ ಅಲ್ಪಸಂಖ್ಯಾಕರ ಸಲಹೆ ಪ್ರೋತ್ಸಾಹದಿಂ ದ ಆಡಳಿತ ನಡೆಸುವಂತಿದೆ. ಬ್ರಿಟನು ಅಧಿ ಕಾರವನ್ನು ಬಿಡುವ ಉದಾರತೆ ತೋರು ವುದಿಲ್ಲ.

THE

BANK OF MANGALORE LTD.,

MANGALORE.

ESTD 1931

Branches—

Mudabidri & Padubidri

Fixed Deposits will be received at following rates of interest

For	3 months	3½%
„	6	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರುವ ವೈಸರಾಯರ ಹೇಳಿಕೆಯನ್ನು ಕಾಂಗ್ರೆಸು ಒಪ್ಪಿಕೊಳ್ಳಲಾರದು. ವೈಸರಾಯರ ಹೇಳಿಕೆ, ಕಾಂಗ್ರೆಸಿನ ಕೇಳಿಕೆಗಳಿಗೆ ಅಜ ಗಜಾಂತರವಿದೆ. ಆದ್ದರಿಂದ ಭಾರತೀ ಯರು ಎಲ್ಲಾ ಕಡೆಗಳಲ್ಲಿಯೂ ಇದನ್ನು ಖಂಡಿಸಿ ಸಭೆ ಜರಗಿಸಬೇಕು, ಶಾಸನ ಸಭೆಯ ಸದಸ್ಯರೂ ಇದನ್ನು ಖಂಡಿಸ ಬೇಕು. ವೈಸರಾಯರ ಹೇಳಿಕೆಯ ಬ್ರಿಟನಿನ ತೀರ್ಮಾನವಾದರೆ, ಅದ ಭಾರತದ ಬಹು ಸಂಖ್ಯಾಕರ ಹಿತಕ್ಕೆ ವಿರುದ್ಧವಾಗಿದೆ. ಇದರ ಪರಿಣಾಮವು ಏನಾಗುವುದೋ ಹೇಳಲಾಗುವುದಿಲ್ಲ. ಭಾರತವನ್ನು ದರ್ಪದಿಂದಾಳುವುದು ಬ್ರಿ ಟನಿನ ಹಠವಾಗಿದೆ. ಕಾಂಗ್ರೆಸ ಕೆಲಸ ಗಾರರನ್ನು ದಿನೇ ದಿನೇ ಬಂಧಿಸುತ್ತಿರು ವುದನ್ನು, ದಬ್ಬಾಳಿಕೆ ನಡೆಸುವುದನ್ನು ನೋಡಿದರೆ ಇದು ವ್ಯಕ್ತವಾಗುತ್ತದೆ.

ಯುದ್ಧ ಕಾಲದಲ್ಲಿ ಬ್ರಿಟನಿಗೆ ತಡೆಯ ನ್ನೊಡ್ಡಬಾರದೆಂಬುದನ್ನು ಬ್ರಿಟನು ಕಾಂಗ್ರೆಸಿನ ದೌರ್ಬಲ್ಯವೆಂದು ತಪ್ಪಾಗಿ ತಿಳಕೊಂಡದ್ದು ವಿಷಾದಕರ. ಕಾಂಗ್ರೆ ಸನ್ನು ಬ್ರಿಟನು ಹೋರಾಟಕ್ಕೆಳೆಯುತ್ತದೆ. ಭಾರತದ ಗೌರವ ಸ್ವಾತಂತ್ರ್ಯಗಳನ್ನು ಕಾಪಾಡುವುದೇ ಕಾಂಗ್ರೆಸಿನ ಕರ್ತವ್ಯ ವಾಗಿದೆ"

ಅಖಿಲಭಾರತ ಕಾಂಗ್ರೆಸ್ ಕಮಿಟಿ

ಸಪ್ಟಂಬರ ೧೫ರಲ್ಲಿ

ಪರಿಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಿ ಮುಂದಿನ ಕಾರ್ಯವನ್ನು ಸಿದ್ಧಪಡಿಸುವ ಬಗ್ಗೆ ಸಪ್ಟಂಬರ ೧೫ಕ್ಕೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸಭೆ ಜರಗುವುದು

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ತಾರೀಕು 30—8—1940

ಚರ್ಚಿಲ್ಲರ ನಿರ್ಧಾರ!

ಕಳೆದ ವಾರ ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರು ಯುದ್ಧ ಪರಿಸ್ಥಿತಿಯನ್ನು ವಿವರಿಸುತ್ತಾ ತಮ್ಮ ನಿರ್ಧಾರವನ್ನು ಬಹಳ ಸ್ಫೂರ್ತಿಮಯವಾದ ರೀತಿಯಲ್ಲಿ ಸಾರಿದರು. ಚರ್ಚಿಲ್ಲರ ಮಾತು ಯುದ್ಧಾಸಕ್ತರಾದ ಬ್ರಿಟಿಷರನ್ನು ವಿಜಯ ಮಾರ್ಗದಲ್ಲಿ ಮುನ್ನಡೆಸಲು ಹುರಿದುಂಬಿಸುವಷ್ಟು ಪ್ರಭಾವಶಾಲಿಯಾಗಿತ್ತು! ಅವರ ಪ್ರತಿಯೊಂದು ವಾಕ್ಯದಲ್ಲಿಯೂ ಪ್ರತಿಯೊಂದು ಶಬ್ದದಲ್ಲಿಯೂ ಯುದ್ಧವನ್ನು ಬ್ರಿಟಿಷರು ಲೀಲಾಜಾಲವಾಗಿ ಗೆಲ್ಲುವರೆಂಬ ನಿಶ್ಚಿತ ನಿರ್ಧಾರವು ಪೂರ್ಣವಾಗಿ ತುಂಬಿತ್ತು!

ಜರ್ಮನರು ಬ್ರಿಟನಿನ ಆಕಾಶದಲ್ಲಿ ವಿಮಾನಗಳ ತೆರೆಯುಬ್ಬಿಸುತ್ತಿರುವ ಈ ಆಕ್ರಮಣದ ಕಾಲದಲ್ಲಿ, ಚರ್ಚಿಲ್ಲರ ಮಾತಿನ ಪ್ರಭಾವವು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗುವುದೆಂಬುದನ್ನು ಊಹಿಸಲು ಸಾಧ್ಯವಿದೆ. ಚರ್ಚಿಲ್ಲರೊಡನೆ ಬ್ರಿಟಿಷ್ ಜನಾಂಗವು, ಬ್ರಿಟಿಷ್ ಸಾಮ್ರಾಜ್ಯದ ಜನರೂ ವಿಜಯವನ್ನು ಆಶಾದೃಷ್ಟಿಯಿಂದಲೇ ಹಾರೈಸುತ್ತಿರುವರು.

ಬ್ರಿಟಿಷ್ ದ್ವೀಪವು ಹಿಂದೆ ಯಾವ ಕಾಲದಲ್ಲಿಯೂ ಇರದಷ್ಟು ಭದ್ರವಾದ ಸೈನ್ಯದಿಂದ ಕಾಯಲ್ಪಟ್ಟಿದೆ. ನೌಕಾದಳವು ಹಿಂದಿಗಿಂತ ಪ್ರಬಲವಾಗಿದೆ; ವೈಮಾನಿಕರು ನಾಜೀ ವೈಮಾನಿಕರಿಗಿಂತ ಅಧಿಕ ಬಲಶಾಲಿಗಳಾಗಿದ್ದಾರೆ; ಬ್ರಿಟನಿಗೆ ಮುಂದೆ ಬೆದರಿಕೆಯೆಂಬುದಿಲ್ಲವೆಂದು ಚರ್ಚಿಲ್ಲರು ನಿರ್ಧಾರವಾಗಿ ಸಾರಿದ್ದಾರೆ.

"ನಾನಿದನ್ನು ಹೆಗ್ಗಳಿಕೆಗಾಗಿ ಹೇಳುವುದಿಲ್ಲ; ನಾವು ಎದುರಿಸಬೇಕಾದ ಸಂಕಷ್ಟಗಳು ಹಲವಿವೆ. ಹಾಗೆಯೇ ನಮಗೆ ಇಂದು ಜಯಿಸುವ ಸೂಚನೆಗಳು ತುಂಬಾ ಇವೆ" ಎಂದರು.

ಬ್ರಿಟಿಷರ ಅದೃಷ್ಟವನ್ನು ವಿಜಯದ ದಾರಿಗೆ ಸಾಗಿಸುವ ದೃಢ ನಿರ್ಧಾರವುಳ್ಳ ಚರ್ಚಿಲ್ಲರಂತಹ ಪ್ರಧಾನರು ಇಂದು ದೊರೆತಿರುವುದು ಬ್ರಿಟನಿನ ಭಾಗ್ಯವೆನ್ನಬೇಕು.

ಕಾಂಗ್ರೆಸಿನ ಉತ್ತರ!

ವೈಸರಾಯರು ಮತ್ತು ಭಾರತ ಸಚಿವರು ಮೊನ್ನೆ ಭಾರತದ ರಾಜಕೀಯ ಸುಧಾರಣೆಗಳ ಕುರಿತು ಕೊಟ್ಟ ಸೂಚನೆಗಳಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಹಳ ದೀರ್ಘಕಾಲದ ವಿಚಾರದ ಮೇಲೆ ತನ್ನ ಉತ್ತರವನ್ನು ಕಳುಹಿಸಿದೆ. ಕಾಂಗ್ರೆಸಿನ ಕೇಳಿಕೆಯನ್ನು ವೈಸರಾಯರಾಗಲೀ ಭಾರತ ಸಚಿವರಾಗಲೀ, ಒಂದಿಷ್ಟು ಮಾನ್ಯಮಾಡದೆ ಇರುವುದರಿಂದ ಅವರ ಸೂಚನೆಗಳನ್ನು ಕಾಂಗ್ರೆಸು ಒಪ್ಪುವುದಿಲ್ಲವೆಂದೂ, ವೈಸರಾಯರ ಹೇಳಿಕೆಯು ವಿಷಾದಕರವಾಗಿದೆಯೆಂದೂ ತಿಳಿಸಿ ಅದನ್ನು ಸಾರ್ವತ್ರಿಕವಾಗಿ ಖಂಡಿಸುವ ನಿರ್ಣಯವಾಗಿದೆ.

ಕಾಂಗ್ರೆಸು ಕಳೆದ ಹಲವು ವರ್ಷಗಳಿಂದ ಯಾವ ತತ್ವದ ಸಲುವಾಗಿ ಅತುಲ ಸ್ವಾರ್ಥತ್ಯಾಗದಿಂದ ದುಡಿಯುತ್ತಿದೆಯೆಂಬುದು ಇಂದು ಜಗತ್ತಿಗೇ ಗೊತ್ತು. ಭಾರತದ ಸ್ವಾತಂತ್ರ್ಯದ ವಿಚಾರದಲ್ಲಿ ವೈಸರಾಯರಾಗಲಿ ಭಾರತ ಸಚಿವರಾಗಲಿ ಮಾತೆತ್ತದೆ, ಯುದ್ಧ ಮುಗಿದ ನಂತರ ಸಾಮಂತ ಸ್ವರಾಜ್ಯದ ವಿಚಾರ ಮಾಡಲಾಗುವುದೆಂದು ಮಾತ್ರ ಹೇಳಿ ಮಹಾ ತತ್ವಕ್ಕಾಗಿ ನಿಂತ ಕಾಂಗ್ರೆಸ್ಸಿನ ಸಹಕಾರವನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ. ದೇಶದ ಪ್ರಬಲ ರಾಜಕೀಯ ಸಂಸ್ಥೆಯಾದ ಕಾಂಗ್ರೆಸಿನ ಸಹಕಾರವಿಲ್ಲದೆ, ಬ್ರಿಟನಿಗೆ ಭಾರತದ ಸಂಪೂರ್ಣ ಬೆಂಬಲವೂ ಸಿಗುವಂತಿಲ್ಲ.

ಮುಂದೆ ವೈಸರಾಯರು ಈ ವಿಚಾರದಲ್ಲಿ ಏನು ಮಾಡಲಿರುವರೋ ನೋಡತಕ್ಕದ್ದಿದೆ. ಕಾಂಗ್ರೆಸು ಬ್ರಿಟನಿನ ಸಂಕಷ್ಟಕಾಲದಲ್ಲಿ ಸತ್ಯಾಗ್ರಹವನ್ನು ಆರಂಭಿಸಲು ಉತ್ಸಾಹಗೊಂಡಿಲ್ಲ. ದೇಶದ ಸ್ವಾತಂತ್ರ್ಯ ಗೌರವಗಳು ಅದಕ್ಕೆ ಎಲ್ಲದಕ್ಕಿಂತಲೂ ಮಿಗಿಲಾಗಿದೆಯೆಂದು ವರ್ಧಾದ ನಿರ್ಣಯವು ಸಾರಿದೆ; ಬಿಕ್ಕಟ್ಟನ್ನು ಪರಿಹರಿಸುವುದು ಬ್ರಿಟಿಷ್ ಸರಕಾರಕ್ಕೆ ಇನ್ನೂ ಸಾಧ್ಯವಿಲ್ಲದಿಲ್ಲ. ರಾಷ್ಟ್ರಪತಿಗಳು ಅಂದಂತೆ "ಕಾಂಗ್ರೆಸು ಇನ್ನೂ ಸಂಧಿಗೆ ಮುಕ್ತದ್ವಾರವಾಗಿದೆ."

ರಾಜಾಜಿಯವರ ಸಲಹೆ

ಅಲ್ಪ ಸಂಖ್ಯಾತರ ಸಮಸ್ಯೆಯನ್ನು ಮುಂದಿಟ್ಟು ಭಾರತ ಸಚಿವರು ಭಾರತದ ರಾಜಕೀಯದ ಬಿಕ್ಕಟ್ಟಿನ ಕುರಿತು ಕೊಟ್ಟ ಹೇಳಿಕೆಗೆ ರಾಜಾಜಿಯವರು ಒಂದು ಉದಾತ್ತವಾದ, ಗಂಭೀರವಾದ ಸಲಹೆಯನ್ನಿತ್ತಿರುವರು. ಅಲ್ಪ ಸಂಖ್ಯಾತರ ಸಮಸ್ಯೆಯನ್ನು ಕಾಂಗ್ರೆಸು ಸ್ವಾರ್ಥತ್ಯಾಗದಿಂದಲಾದರೂ ಪರಿಹರಿಸುವುದು; ಆದರೆ ಬ್ರಿಟಿಷ್ ಸರಕಾರವು ನಿಜವಾಗಿ ಭಾರತದ ಬಿಕ್ಕಟ್ಟನ್ನು ಪರಿಹರಿಸಲು ಸಿದ್ಧವಾಗಿದೆಯೇ ಎಂದು ಅವರು ಈ ಸಲಹೆಯಿಂದ ಎಮೆರಿಯವರನ್ನು ಪಂಥಕ್ಕೆ ಆಹ್ವಾನಿಸಿದ್ದಾರೆ!

ಮುಸ್ಲಿಂಲೀಗಿನವರು ಪ್ರಧಾನಮಂತ್ರಿಯನ್ನು ಆರಿಸಿ, ಅವರಿಗೆ ಇಷ್ಟಬಂದ ಮಂತ್ರಿಮಂಡಳವನ್ನು ರಚಿಸಬಹುದು; ಕಾಂಗ್ರೆಸು ಇಂದು ಬಹುಸಂಖ್ಯಾತವಾಗಿರುವುದಾದರೂ, ಮಂತ್ರಿಮಂಡಳವನ್ನು ಅಪೇಕ್ಷಿಸುವುದಿಲ್ಲ. ಮಂತ್ರಿಮಂಡಲವು ಅಲ್ಪಸಂಖ್ಯಾತರಾದ ಮುಸ್ಲಿಮರಿಗಿರಲಿ, ಈ ಬಗ್ಗೆ ಕಾಂಗ್ರೆಸಿನ ಅನುಯಾಯಿಗಳನ್ನು ನಾನು ಒಪ್ಪಿಸುತ್ತೇನೆ ಎಂದು ಎಮೆರಿಯವರಿಗೆ ಉತ್ತರವಾಗಿ ಅವರು ತನ್ನ ಸಲಹೆಯನ್ನು ಲಂಡನಿನ ಡೈಲಿ ಹೆರಾಲ್ಡ್ ಪತ್ರಿಕೆಗೆ ಕಳುಹಿಸಿಕೊಟ್ಟಿದ್ದಾರೆ. ಮುಸ್ಲಿಂ ಲೀಗಾದರೂ ಇಂತಹ ಸೂಚನೆಗೆ ಆಕ್ಷೇಪವೆತ್ತಲಾರದು. ಇಂದು ಬ್ರಿಟನಿನ ಹಾಗೂ ಭಾರತದ ರಾಜಕೀಯ ನಿಪುಣರ ದೃಷ್ಟಿಯು ರಾಜಾಜಿಯವರ ಈ ಸಲಹೆಯ ಕಡೆಗೆ ಹರಿದಿದೆ. ರಾಷ್ಟ್ರೀಯ ಸರಕಾರವನ್ನು ರಚಿಸಿ, ಬ್ರಿಟನು ಭಾರತದ ಬೆಂಬಲವನ್ನು ಹೊಂದಲು ಹಿಂದಾಗಲಾರದೆಂದು ನಾವು ಹಾರೈಸುತ್ತೇವೆ.

ಕ್ರಾಂತಿಜೀವಿ ಟ್ರೋಟ್ಸ್ಕಿ

ರಶ್ಯನ್ ಕ್ರಾಂತಿಯಲ್ಲಿ ಲೆನಿನನೊಡನೆ ದುಡಿದ ಕ್ರಾಂತಿ ಪುರುಷ ಟ್ರೋಟ್ಸ್ಕಿ. ರಶ್ಯದ ನವರಚನೆಯಲ್ಲಿ ಲೆನಿನನಷ್ಟೇ ಮನ್ನಣೆ ಇವನಿಗೂ ಸಲ್ಲಬೇಕಾಗಿದೆ. ಇಂತಹ ಪ್ರಸಿದ್ಧ ಪುರುಷನು ಕಡೆಗೆ ಸ್ಟಾಲಿನನಿಂದ ಹೊರಹಾಕಲ್ಪಟ್ಟವನಾಗಿ ದೇಶ ದೇಶಗಳಲ್ಲಿ ಅಲೆದಾಡಿ ಕೊನೆಗೆ ಮೆಕ್ಸಿಕೋದಲ್ಲಿದ್ದು, ಅಲ್ಲಿ ಕಳೆದವಾರ ಒಬ್ಬ ದುರಾತ್ಮನ ಕೈಯಿಂದ ದುರ್ಮರಣವನ್ನು ಹೊಂದಿದನು! ಟ್ರೋಟ್ಸ್ಕಿಯು ಯಾವದೇ ರೀತಿಯಲ್ಲಿ ಜೀವನಯಾತ್ರೆ ಮುಗಿಸಿದರೂ, ಆತನ ಕೀರ್ತಿ ರಶ್ಯನ್ ಕ್ರಾಂತಿಯ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಉಲ್ಲಿಖಿತವಾಗಿರುವುದು.

ಲೆನಿನನು ಸತ್ತ ನಂತರ ಟ್ರೋಟ್ಸ್ಕಿಯೇ ರಶ್ಯದ ಅಧಿಕಾರಿಯಾಗುವನೆಂದು ಜಗತ್ತು ನಂಬಿತ್ತು. ಆದರೆ ಲೆನಿನನ ಕೈಕೆಳಗೆ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದ ಸ್ಟಾಲಿನನು ತನ್ನ ತಂತ್ರದಿಂದ ಟ್ರೋಟ್ಸ್ಕಿಯನ್ನು ಪರಾಜಿತನನ್ನಾಗಿ ಮಾಡಿದ. ಕೊನೆಗೆ ಟ್ರೋಟ್ಸ್ಕಿಗೆ ಗಡೀಪಾರು ಶಿಕ್ಷೆ ವಿಧಿಸಲಾಯಿತು. ಟ್ರೋಟ್ಸ್ಕಿ ಎಲ್ಲೆಲ್ಲೂ ಅಲೆದಾಡಿದ.

ಹೀಗೆ ಸ್ಟಾಲಿನ್-ಟ್ರೋಟ್ಸ್ಕಿಯರಿಗೆ ಅಧಿಕಾರದಲ್ಲಿ ಕಲಹವು ಪ್ರತ್ಯಕ್ಷವಾಗಿ ಬಂದಿದ್ದರೂ ಅವರು ತತ್ವತಃ ಭಿನ್ನರಾಗಿದ್ದರು. ಸ್ಟಾಲಿನನು ರಾಷ್ಟ್ರ ಸಮತಾವಾದಿ; ತನ್ನ ರಾಷ್ಟ್ರದಲ್ಲಿ ವ್ಯವಸ್ಥೆಪಡಿಸಿ, ಮತ್ತೆ ಬೇರೆ ಕಡೆಗೆ ಸಮತಾವಾದವನ್ನು ಸಾರಬೇಕೆನ್ನುವವ; ಟ್ರೋಟ್ಸ್ಕಿ ವಿಶ್ವದಲ್ಲಿಯೇ ಒಮ್ಮೆಗೇ ಸಮತಾವಾದದ ಕ್ರಾಂತಿಯಾಗಬೇಕೆಂದು ಸಾರುವ ಹಠಗಾರ. ಭಂಡವಾಳ ಶಾಹಿಯು ಪ್ರಪಂಚದ ಯಾವುದೇ ಕಡೆಯಲ್ಲಿದ್ದರೂ ಅದು ವಿಘ್ನ ತರುವುದೆಂದು ಅವನು ನಂಬಿದ್ದ. ಇವರಲ್ಲಿ ಯಾರ ತತ್ವ ಸರಿ, ಯಾರ ತತ್ವ ತಪ್ಪು ಎನ್ನುವುದನ್ನು ಜಗತ್ತು ಮುಂದೆ ನಿರ್ಣಯಿಸಲಿದೆ! ಆದರೆ ನಿಶ್ಚಲವಾದ ಧ್ಯೇಯ, ಸಾಹಸ, ಸಂಘಟನಾಶಕ್ತಿ, ಎದೆಗಾರಿಕೆ ವ್ಯಕ್ತಿತ್ವಗಳಿಗಾಗಿ ಆತನನ್ನು ಕೊಂಡಾಡದವರಿಲ್ಲ.

ಸೋಮಾಲಿಲೇಂಡು

ಸೋಮಾಲಿಲೇಂಡಿನಲ್ಲಿ ಇಂದು ಯುದ್ಧವಿಲ್ಲ. ಕಳೆದ ೧೯ನೆಯ ತಾರೀಕಿಗೆ ಅದನ್ನು ಇಟೆಲಿಗೆ ಪಾಲಿಮಾಡಿ ಕೊಟ್ಟಿದೆಯಾಗಿ ಬ್ರಿಟಿಷರು ಸಾರಿದ್ದಾರೆ. ಮಾತ್ರವಲ್ಲದೆ, ಇಟೆಲಿಯು ಸೋಮಾಲಿಲೇಂಡನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ಹೆಚ್ಚಿನ ಲಾಭವಿಲ್ಲವೆಂದೂ ತಿಳಿಸಿದ್ದಾರೆ. ಅಂತೂ ಕೊನೆಗೆ ಬ್ರಿಟನು, ತನ್ನ ಮನೆಯ ಮೇಲೆ ಆಗುತ್ತಿರುವ ಪ್ರಬಲ ಆಕ್ರಮಣವನ್ನು ಆಲೋಚಿಸಿ, ಸೋಮಾಲಿಲೇಂಡನ್ನು ಇಟೆಲಿಯ ಕೈವಶ ಒಪ್ಪಿಸಿತೆಂದು ವಿಚಾರಿಸಬೇಕಾಗಿದೆ.

ಇಟೆಲಿಯು ಆಫ್ರಿಕದಲ್ಲಿ ಹೀಗೆ ವಿಜೃಂಭಿಸುತ್ತಿರುವುದು ಜಗತ್ತಿನ ಶಾಂತಿ ಸ್ವಾತಂತ್ರ್ಯಗಳ ದೃಷ್ಟಿಯಿಂದ ಒಳಿತಾಗಿಲ್ಲ. ಇಥಿಯೋಪಿಯವನ್ನು ಬಗ್ಗು ಬಡಿದ ಇಟೆಲಿಯು ಮುಂದೆ ತನ್ನ ಧೋರಣೆಯನ್ನು ಮುಂದುವರಿಸಿತು. ಇಥಿಯೋಪಿಯನರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರೂ, ತಿರಿಗಿ ಒಮ್ಮೆ ಅದನ್ನು ಇಟೆಲಿಯ ವಜ್ರಮುಷ್ಟಿಯಿಂದ ಬಿಡಿಸಿಕೊಳ್ಳುವ ಘನವಾದ ಆಶೆಯನ್ನು ಇಟ್ಟುಕೊಂಡಿದ್ದರು. ಅಬಿಸೀನಿಯದಲ್ಲಿ ಅಲ್ಲಿನ ವೀರರು ದಂಗೆ ಏಳುತ್ತಿರುವ ಸುದ್ದಿಯು ಕೇಳಿಬರುತ್ತಿತ್ತು. ಆದರೆ ಈಗ ಬ್ರಿಟಿಷ್ ಸೋಮಾಲಿಲೇಂಡು, ಅಬಿಸೀನಿಯಾ, ಎರಿಟ್ರಿಯಗಳನ್ನೂ ಸ್ವಾಧೀನ ತೆಗೆದುಕೊಂಡು ಮುಂಬರುವ ಇಟೆಲಿಯ ವಿಜೃಂಭಣೆಯು ಇಥಿಯೋಪಿಯನರ ಸ್ವಾತಂತ್ರ್ಯ ಮಾರ್ಗದಲ್ಲಿ ಮಹಾಕಂಟಕವಾಗಿ ಪರಿಣಮಿಸುವುದು!

ಬ್ರಿಟಿಷರು ಸೋಮಾಲಿಲೇಂಡನ್ನು ಇಟೆಲಿಯು ವಶಪಡಿಸಿಕೊಂಡಿದುದರಿಂದ ಅದರ ಸಂಬಂಧವು ಭಾರತಕ್ಕೆ ಮತ್ತೂ ಸಮೀಪವಾಯಿತು. ಅಂತೂ ಇಂದಿನ ಬ್ರಿಟನಿನ ರಕ್ಷಣೆಯಲ್ಲಿರುವ ಭಾರತದ ಮೇಲೆ ಇಟೆಲಿಯು ಆಕ್ರಮಿಸುವ ಮಹಾ ಸಾಹಸವನ್ನು ಮಾಡಲು ಮುಂಗುವರಿಯದಂತೇ ನಾವು ಹಾರೈಸಬಹುದು. ಆದರೆ ಪ್ರಪಂಚವೇ ಇಂದು ಯುದ್ಧ ಕೋಲಾಹಲದಿಂದ ಅಲ್ಲೋಲಕಲ್ಲೋಲವಾಗುತ್ತಿರುವಾಗ, ಯಾವ ರೀತಿಯ ತೆರೆಯು ಎಲ್ಲಿಗೆ ಅಪ್ಪಳಿಸುವುದೆಂದು ಹೇಳಲು ಸಾಧ್ಯವಿಲ್ಲ. ಭಾರತದ ರಕ್ಷಣೆಯ ವಿಷಯವಾಗಿ ಹೆಚ್ಚು ಭದ್ರತೆಯನ್ನುಮಾಡಿಕೊಳ್ಳುವುದರಲ್ಲಿಯೂ ತಪ್ಪಿಲ್ಲ. ಕಳೆದ ಎಷ್ಟೋ ವರ್ಷಗಳ ಬ್ರಿಟನಿನಾಧಿಕಾರದ ಮೇಲೂ ಇಂದು ಭಾರತದಲ್ಲಿ ಪರರ ಆಕ್ರಮಣವನ್ನು ತಡೆಯುವಷ್ಟು ಬಲವಂತವಾದ ಸೈನ್ಯಶಕ್ತಿಯಿಲ್ಲ; ಸೈನ್ಯ ಸಾಮಗ್ರಿಗಳನ್ನು ಒದಗಿಸಿ ಭಾರತವನ್ನು ಭದ್ರಪಡಿಸದೆ ಇರುವುದು ನೀತಿಯಲ್ಲ.

ಅಂತೂ ಇಂತಹ ವಿಷಮ ಸಂಧರ್ಭದಲ್ಲಿ ಬ್ರಿಟನು ಸೋಮಾಲಿಲೇಂಡಿನಲ್ಲಿ ಯುದ್ಧಮಾಡುತ್ತಿರುವುದು ಸಾಧ್ಯವಾಗದೆ ಹೋಗಿದ್ದರೂ, ಅದರಿಂದ ಆಗುವ ಪರಿಣಾಮಗಳ ಕಡೆಗೆ ಪ್ರಪಂಚದ ಇತರ ರಾಷ್ಟ್ರಗಳು ವಿಚಾರಿಸದಿರಲಾರವು. ಜರ್ಮನ್, ಇಟೆಲಿಗಳ ಸರ್ವಾಧಿಕಾರಿಗಳಂತಹ ಲೋಕಕಂಟಕರನ್ನು ತಡೆಯದೆ ಮುಂದುವರಿಯ ಬಿಡುವುದರಿಂದ ಲೋಕಶಾಂತಿಯ ದೃಷ್ಟಿಯಲ್ಲಿ ತಪ್ಪಾಗಿದೆ.

ಅಹಿಂಸೆಯ ಮೂಲಕ ಸಂಪತ್ತನ್ನು ಹಂಚಬಹುದೆ?

ಸಂಪತ್ತನ್ನು ಸಮಾನವಾಗಿ ಹಂಚುವ ಕಾರ್ಯವು ಅಹಿಂಸೆಯಿಂದ ಸಾಧ್ಯವಿದೆ; ಇದನ್ನು ನಂಬುವವನು ಮೊದಲು ತನ್ನ ಸ್ವಕೀಯ ಕಾರ್ಯಗಳಲ್ಲಿ ಅದನ್ನು ಮೊದಲು ಆಚರಣೆಗೆ ತರಬೇಕು. ದೇಶದ ದಾರಿದ್ರ್ಯವನ್ನು ವಿಚಾರಿಸಿ ತಾನು ತನ್ನ ಅಗತ್ಯವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ತನ್ನ ಸಂಪಾದನೆಯು ಅಗೌರವ ಕಾರ್ಯಗಳಿಂದ ದೂರವಾಗಿರಬೇಕು. ಕೀರ್ತಿಯ ಆಸೆ ಇರಬಾರದು. ಎಲ್ಲಾ ವಿಧಗಳಿಂದಲೂ ಸಂಯಮವು ಅವಶ್ಯ. ಜೀವನದಲ್ಲಿ ಹೊಸ ರೀತಿಯನ್ನು ತರಬೇಕು. ಹೀಗೆ ತನ್ನ ಜೀವನದ ವಿಷಯದಲ್ಲಿ ಸಾಧ್ಯವಾದುದನ್ನೆಲ್ಲಾ ಮಾಡಿಕೊಂಡವನೇ ತನ್ನ ನೆರೆಕರೆಯವರಿಗೆ ಸಂಪತ್ತಿನ ಹಂಚುವಿಕೆಯ ಕುರಿತು ಉಪದೇಶಿಸಲು ಅರ್ಹನಾಗುವನು.”

ಹೀಗೆಂದು ಮಹಾತ್ಮಾಜಿಯವರು ಹರಿಜನದಲ್ಲಿ ದೇಶದ ಆರ್ಥಿಕ ವ್ಯವಸ್ಥೆಯ ವಿಷಯವಾಗಿ ಒಂದು ಮಹತ್ವದ ಲೇಖನ ಬರೆದಿರುವರು. ಅವರು ದೇಶದ ವ್ಯವಸ್ಥೆಯ ಬಗ್ಗೆ ಹದಿಮೂರು ಸೂತ್ರಗಳನ್ನು ಹಿಂದೆ ಸೂಚಿಸಿದ್ದರು. ಹಿಂದೂ ಮುಸ್ಲಿಂ ಐಕ್ಯ, ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಗ್ರಾಮೋದ್ಯೋಗ ಉದ್ಧಾರ, ಗ್ರಾಮ ನೈರ್ಮಲ್ಯ, ಪ್ರಾಯಸ್ಥರ ವಿದ್ಯಾಭ್ಯಾಸ, ಮೂಲಭೂತ ಶಿಕ್ಷಣ, ಮಹಿಳೋದ್ಧಾರ, ಹಿಂದೀ ಪ್ರಚಾರ, ಸ್ವಭಾಷಾಪ್ರೇಮ, ಆರ್ಥಿಕ ಸಮಾನತೆಯ ಕರ್ತವ್ಯಗಳೆಂದ ಅವರ ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳಲ್ಲಿ ಅವುಗಳನ್ನು ಆಚರಿಸಿ ಬರುವುದು ಅವಶ್ಯವೆಂದು ತಿಳಿಸಿರುವರು. ಅವುಗಳಲ್ಲಿ ಆರ್ಥಿಕ ಸಮಾನತೆಯ ವಿಚಾರವಾಗಿ ಅವರು ಬರೆದ ಲೇಖನದ ಸಾರಾಂಶ ಹೀಗಿದೆ–

“ಆರ್ಥಿಕ ಸಮಾನತೆಯ ಪ್ರಥಮ ಕಾರ್ಯವೆಂದರೆ, ಪ್ರತಿಯೊಬ್ಬನೂ ತನಗೆ ಅವಶ್ಯವಿರುವಷ್ಟು ಮಾತ್ರವಲ್ಲದೆ ಅದಕ್ಕಿಂತ ಹೆಚ್ಚಿಗೆ ಉಪಯೋಗಿಸತಕ್ಕದಲ್ಲ ಎಂಬುದು. ಒಬ್ಬನಿಗೆ ಅಜೀರ್ಣವಿದ್ದು ಆತನು ಕಡಿಮೆ ಉಣ ಬಲ್ಲನಾದರೆ, ಇನ್ನೊಬ್ಬನು ಚೆನ್ನಾಗಿ ಜೀರ್ಣ ಶಕ್ತಿಯಿದ್ದು ಹೆಚ್ಚು ಉಣತಕ್ಕವನಾದರೆ ಇಬ್ಬರಿಗೂ ಅವರವರಿಗೆ ಬೇಕಾದಷ್ಟು ಒದಗತಕ್ಕದ್ದು ನ್ಯಾಯವಾಗಿದೆ. ಇದನ್ನು ಕಾರ್ಯರೂಪಕ್ಕೆ ತರಲು, ಇಂದಿನ ಸಮಾಜ ರೀತಿಯನ್ನೇ ಬದಲಾಯಿಸಬೇಕಾದೀತು. ಅಹಿಂಸೆಯಲ್ಲಿ ವಿಶ್ವಾಸವುಳ್ಳ ಸಮಾಜವು ಸೇರಿ ಆದರ್ಶವನ್ನು ಕಾಣಲಾರದು ನಾವೆಂದು ಗುರಿಯನ್ನು ಕಾಣದಿರಬಹುದು; ಆದರೆ ನಾವದರ ಸಮೀಪಿಸುತ್ತಿದ್ದೇವೆ. ನಾವು ಗುರಿಯ ಕಡೆಗೆ ಮುಂದುವರಿದು ಹೋದಂತೆ ಆನಂದ ಹೊಂದುವೆವು; ಹಾಗೆ ಆನಂದ ಪಡುವುದೆಂದರೆ

ಹಣವಂತರು ಸಮಾಜದ ಹಿತಕ್ಕಿರಬೇಕು

—ಗಾಂಧಿಜಿಯವರ ಲೇಖನ—

ಅಹಿಂಸಾಮಯ ಸಮಾಜದ ರಚನೆಗೆ ನಾವು ನಮ್ಮ ಪಾಲಿನ ಸೇವೆಸಲ್ಲಿಸಿದಂತೆ

“ಹೀಗೆ ಪ್ರತಿಯೊಬ್ಬ ವ್ಯಕ್ತಿಯೂ, ಇತರರು ಆರಂಭಿಸಬೇಕೆಂದು ಕಾಯದೆ ತಾನು ಪ್ರಥಮತಃ ಆರಂಭಿಸಬೇಕಾಗಿದೆ. ಒಬ್ಬ ವ್ಯಕ್ತಿಯು ಕೆಲವು ನಿಯಮಗಳನ್ನು, ನ್ಯಾಯವಾಗಿ ಪಾಲಿಸುತ್ತ ಬಂದರೆ ಮುಂದೆ ಅಂತಹ ವ್ಯಕ್ತಿಗಳ ಗುಂಪು ಹೆಚ್ಚಿ ಸಮಾಜವೇ ಆ ರೀತಿ ನಿರ್ಮಾಣವಾಗುತ್ತದೆ ಜನರ ಕಾರ್ಯವನ್ನಾರಂಭಿಸಲು ಹೆದರುತ್ತಾರೆ ತಮ್ಮ ಉದ್ದೇಶವು ನ್ಯಾಯವಿದ್ದು ಅವನ್ನು ಮಾಡಿಯೇ ತೀರಬೇಕೆಂದು ದೃಢತೆಯಿರಬೇಕಾದುದವಶ್ಯ

‘ಈ ಆರ್ಥಿಕ ಸಮಾನತೆಯ ತತ್ವದಲ್ಲಿ ಹಣವಂತರು ತಮ್ಮ ಹೆಚ್ಚಿನ ಹಣದ ಬಗ್ಗೆ ಇತರರಿಗೆ ಜವಾಬ್ದಾರರಾಗಿರಬೇಕಾದ ಅಂಶವು ಇರುತ್ತದೆ. ಕೆಲವು ಸಲ ತನ್ನ ನೆರೆಕರೆಯವರಿಗಿಂತ ಒಂದು ಕಾಸು ಆತನಲ್ಲಿ ಹೆಚ್ಚಿಲ್ಲವೆಂದ ಸಾಧಿಸಬಹುದ, ಹಾಗಾದರೆ ಅದನ್ನು ಸರಿಗೊಳಿಸುವುದು ಹೇಗೆ? ಹಿಂಸೆಯೇ ಅದಕ್ಕೆ ಪ್ರಯೋಗಿಸಲ್ಪಡಬೇಕೆ? ಹಿಂಸಾ ಕಾರ್ಯವು ಸಮಾಜಕ್ಕೆ ಪ್ರಯೋಜನಕಾರಿಯಾಗಲಾರದು ಒಬ್ಬನ ಹಣವನ್ನು ಸಂಪಾದಿಸಲು ಒಲ್ಲವನಾದರೆ ಆತನನ್ನು ಕಳಕೊಳ್ಳುವುದರಿಂದ ಸಮಾಜಕ್ಕೆ ದಾರಿದ್ರ್ಯ ಬಂದಂತೆ ಆದುದರಿಂದ ಅಹಿಂಸಾ ಮಾರ್ಗವೇ ಉತ್ತಮ. ಒಬ್ಬ ಹಣವಂತನು ಅವನಷ್ಟಕ್ಕೆ ಬಿಡಲ್ಪಟ್ಟರೂ ಅವನು ತನ್ನ ಅಗತ್ಯಕ್ಕಿರುವುದನ್ನು ವೆಚ್ಚ ಮಾಡಿ, ಉಳಿದ ಹಣದ ವಿಷಯ ಮಿಕ್ಕುಳಿದವರಿಗೆ ಬಾಧ್ಯನಾಗಿರುವಂತೆ ವರ್ತಿಸಬೇಕಾಗಿದೆ ಈ ವಿಧದ ಸೂಚನೆಯಲ್ಲಿ ಹಣಗಾರನು ಮರ್ಯಾದೆಯಿಂದ ನಡೆಯುತ್ತಿರಬೇಕೆಂಬುದು ಸ್ಥಾಪಿಸಲ್ಪಡುತ್ತದೆ

ಯಾವಾಗ ಒಬ್ಬ ಮನುಷ್ಯನು ತನ್ನನ್ನು ಸಮಾಜದ ಸೇವಕನಾಗಿ ತಿಳಕೊಂಡು ಸಮಾಜದ ಸಲುವಾಗಿ ಸಂಪಾದಿಸುತ್ತಾನೋ, ಅದರ ಸಲುವಾಗಿ ವ್ಯಯ ಮಾಡುತ್ತಾನೋ ಆಗ ಆತನ ಹೃದಯವನ್ನು ನೈರ್ಮಲ್ಯವು ಪ್ರವೇಶಿಸುತ್ತದೆ ಮನುಷ್ಯನ ಹೃದಯವು ಈ ರೀತಿಯಿಂದ ತಿರುಗಿದ ಪಕ್ಷದಲ್ಲಿ ಯಾವುದೇ ದ್ವೇಷ ಕಲಹಗಳಿಲ್ಲದೆ ಹೊಸ ಸಮಾಜದ ರಚನೆಯಾಗುವುದ

‘ಇಲ್ಲಿ ಇಂತಹ ಕಾರ್ಯಗಳಿಗೆ ಚರಿತೆಯಲ್ಲಿ ಉದಾಹರಣೆಯುಂಟೆಯೇ ಎಂಬ ಪ್ರಶ್ನೆ ಬರುವುದು ಸಹಜವಿದೆ ವ್ಯಕ್ತಿಗಳಲ್ಲಿ ಇಂತಹ ಪರಿವರ್ತನೆಯಾದದ್ದಿದೆ ಇಡೀ ಸಮಾಜದಲ್ಲಿ ಆದುದನ್ನು ತೋರಿಸಲು ಸಾಧ್ಯವಿಲ್ಲದಿರಬಹುದು ಇದರಿಂದ ತಿಳಿಯುವುದೇನೆಂದರೆ, ಅಹಿಂಸಾ ಮಾರ್ಗದಲ್ಲಿ ಇಂತಹ ಪ್ರಯೋಗವು ದೊಡ್ಡ ಪ್ರಮಾಣದಲ್ಲಿ ಆಗಲಿಲ್ಲವೆಂದು.

ನಮ್ಮಲ್ಲಿ ಅಹಿಂಸೆಯು ಕೇವಲ ವ್ಯಕ್ತಿಗಳ ಮಾತ್ರ ಉಪಯೋಗ ಸಾಧನವೆಂದು ತಪ್ಪು ಅಭಿಪ್ರಾಯ ಬಂದಿದೆ ಇದು ಸರಿಯಲ್ಲ; ಅಹಿಂಸೆಯು ಇಡೀ ಸಮಾಜ ಕಾರ್ಯಕ್ಷೇತ್ರವುಳ್ಳದ್ದಾಗಿದೆ ಇದನ್ನು ತಿಳಿಸಲಿ ನನ್ನೀ ಪ್ರಯೋಗ ಪ್ರಯತ್ನಗಳಾಗಿವೆ

“ಇಂದಿನ ಈ ವಿಚಿತ್ರ ಕಾಲದಲ್ಲಿ ಯಾವುದೂ ಪ್ರಯೋಜನವಿಲ್ಲದ್ದೆಂದು ಯಾರೂ ಹೇಳಲು ಸಾಧ್ಯವಿಲ್ಲ. ಎಷ್ಟೋ ಅಸಾಧ್ಯಗಳು ಇಂದು ಸಾಧ್ಯವಾಗಿವೆ ಹಿಂಸಾಕ್ಷೇತ್ರದಲ್ಲಿ ಆದ ಸಂಶೋಧನೆಗಳಿಂದಲೇ ನಾವು ಬೆರಗಾಗಿದ್ದೇವೆ ಆದರೆ ಅಹಿಂಸಾಕ್ಷೇತ್ರದಲ್ಲಿ ಇದಕ್ಕಿಂತ ಪ್ರಬಲವಾದ, ಯಾರೂ ಕನವರಿಸದಂತಹ ಅದ್ಭುತ ಸಂಶೋಧನೆಗಳು ಆಗಲಿವೆ ಧರ್ಮದ ಇತಿಹಾಸವು ಇಂತಹ ಪ್ರಯೋಗಗಳಿಂದ ತುಂಬಿದೆ ಧರ್ಮವನ್ನು ಸಮಾಜದಿಂದ ಕಿತ್ತುಹಾಕುವುದು ವ್ಯರ್ಥ ಪ್ರಯತ್ನ ಇದರಿಂದ ಸಮಾಜದಲ್ಲಿ ಅನರ್ಥವೇ ಆಗುವುದು

ಹಲವು ಅಂಧಾಚಾರಗಳು ಕಾಲದಿಂದ ಕಾಲಕ್ಕೆ ಬಂದು ಧರ್ಮವನ್ನು ಹಾಳುಮಾಡುತ್ತೇವೆ ಅವುಗಳು ಬಂದು ಹೋಗಬಹುದು ಆದರೆ ಧರ್ಮವು ಶಾಶ್ವತ ಧರ್ಮದ ಮೊದಲ ಲಕ್ಷಣವೆಂದರೆ ದೇವರ ನಿಯಮಕ್ಕೆ ವಿಧೇಯತೆಯೆಂಬುದಾಗಿದೆ ದೇವರು ಮತ್ತು ಅವರ ನಿಯಮಗಳು ವಿಶೇಷದವುಗಳು. ದೇವರು ಬದಲಾಗದ ನಿಯಮ. ಅವತಾರ ಮೊದಲಾದವುಗಳಲ್ಲಿ ಅಶಾಶ್ವತವಿಯದ ಸೂಕ್ಷ್ಮ ದರ್ಶನವಿದೆ

“ಹೀಗೆಲ್ಲಾ ಮಾಡಿ ಕೊನೆಗೂ ಹಣವಂತರು, ದರಿದ್ರರ ರಕ್ಷಕರಾಗಿ ನಿಲ್ಲದಿದ್ದರೆ, ದರಿದ್ರರು ಅವರಿಂದ ಒತ್ತಲ್ಪಟ್ಟು ಉಪವಾಸದಿಂದ ಸಾಯಬೇಕಾದರೆ ಆಗ ಏನ ಮಾಡಬಹುದು? ಇದರ ಸಲುವಾಗಿಯೇ ನಾನು ಅಹಿಂಸಾ ಸತ್ಯಾಗ್ರಹವನ್ನು ಉಪದೇಶಿಸಿರುವುದು ಇದು ನ್ಯಾಯವಾದ ಮಾರ್ಗ ದೇಶದಲ್ಲಿ ಬಡವರ ಸಹಾಯವಿಲ್ಲದೆ ದೊಡ್ಡವನು ಹಣಗಳಿಸಲಾರ ಮನುಷ್ಯನು ಆದಿಯಲ್ಲಿ ಪಶುಸಂಸರ್ಗದಿಂದ ಹಿಂಸಾಪ್ರವೃತ್ತಿಯನ್ನು ಹೊಂದಿಕೊಂಡು ಹಿಂಸಾಮಯನಾಗಿದ್ದಾನೆ ಆದರೆ ಆತನು ಪಶುಜಾತಿಯಿಂದ ಮನುಷ್ಯ ಜಾತಿಗೆ ಎತ್ತಲ್ಪಟ್ಟಾಗ ಮಾತ್ರ ಆತನಿಗೆ ಅಹಿಂಸೆಯ ಬೆಲೆ ತಿಳಿಯುವುದು. ಆದಕಾರಣ ಇದಕ್ಕಾಗಿ ಬಡವರು ಈ ಅಹಿಂಸಾ ಪ್ರಯೋಗವನ್ನು ಮಾಡಬೇಕಾಗಿದೆ. ಇದರಿಂದ ಅವರ ದಾರಿದ್ರ್ಯ ಸಂಕಷ್ಟವು ತೊಲಗುವುದು.”



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡಿಸುವ ಆಶೆಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು ‘ಪುರೋಹಿತ–ಶ್ವಾಸಹಾರಿ’ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳುತ್ತಿದ್ದ ಕೂಡಲೇ ಕೆಮ್ಮು ನಿಲ್ಲುವುದು, ಶ್ಲೇಷ್ಮ ಕಡಿಮೆಯಾಗುವುದು, ಕೆಡಕು ಕೊಂಡರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು ಪುರೋಹಿತ ಶ್ವಾಸಹಾರಿಯು ೪ ಔ., ೬ ಔ. ಮತ್ತು ೧೨ ಔ. ಬಾಟ್ಲಿಗಳಲ್ಲಿ ಕ್ರಮವಾಗಿ ರೂ. ೨-೨-೦ ೩-೧೨-೦ ಮತ್ತು ೬-೮-೦ ಗಳಿಗೆ ಎಲ್ಲಾ ಕಡೆ ಸಿಗುವುದು ತರಿಸಿಕೊಳ್ಳುವ ವಿಳಾಸ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು.

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.



ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರಿ

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ.

ಮುಸ್ಲಿಂ ಲೀಗು ಮಂತ್ರಿಮಂಡಲ ರಚಿಸಲಿ

ಅಮೆರಿಯವರಿಗೆ ರಾಜಾಜಿಯವರ ಉತ್ತರ

ಸ್ವಯಂಸೇವಕ ದಳಗಳಿಗೆ ನಿರ್ಬಂಧವೆ?

ಅಹಿಂಸೆಯಿಂದ ದೇಶರಕ್ಷಣೆ?

[illegible] ಭಾರತದ ರಾಜಕೀಯ ವ್ಯವಸ್ಥೆಗೆ [illegible] ಭಾರತ [illegible] ಕೊಟ್ಟಿದ್ದ ರೆ [illegible] ಆಕ್ಷೇಪಗಳೆಲ್ಲವನ್ನು ನಮ್ಮೊಳಗೆ ಭೇದಹೋರಿಸಿ, ರಾಷ್ಟ್ರೀಯ ವ್ಯವಸ್ಥೆಯನ್ನು ಹಿಂದೆ ದೂಡುವುದು ಬೇಡ; ಬೇಕಾದರೆ ಮುಸ್ಲಿಂ ಲೀಗಿನವರೇ ಸರಕಾರದ ಮುಖ್ಯ ಮಂತ್ರಿಗಳಾಗಿ ಮಂತ್ರಿಮಂಡಲವನ್ನು ರಚಿಸಲಿ; ನಾನು ಕಾಂಗ್ರೆಸಿನವರನ್ನು ಈ ಬಗೆಗೆ ಸಮಾಧಾನ ಪಡಿಸುವೆನು ಎಂದು ರಾಜಾಜಿಯವರು "ಡೈಲಿ ಹೆರಾಲ್ಡ್" ಪತ್ರಿಕೆಗೆ ಒಂದು ತಂತಿ ಕಳುಹಿಸಿದ್ದಾರೆ. ಅಲ್ಪಸಂಖ್ಯಾಕರ ಸಮಸ್ಯೆಯನ್ನು ಅಷ್ಟು ದೊಡ್ಡದು ಮಾಡುವುದು ಅವಶ್ಯವಿಲ್ಲವೆಂದು ರಾಜಾಜಿಯವರು ಸರಕಾರಕ್ಕೆ ಈ ಸೂಚನೆಯನ್ನು ಕೊಟ್ಟಿರುತ್ತಾರೆ.

ಅದರ ಸಾರಾಂಶವು ಹೀಗಿದೆ:—

"ಬ್ರಿಟಿಷ್ ಸರಕಾರವು ಅಲ್ಪಸಂಖ್ಯಾಕರ ಸಮಸ್ಯೆಯನ್ನು ಅಷ್ಟು ದೊಡ್ಡದು ಮಾಡುವ ಅವಶ್ಯಕತೆಯಿಲ್ಲ. ಕೂಡಲೇ ರಾಷ್ಟ್ರೀಯ ಸರಕಾರವನ್ನು ಏರ್ಪಡಿಸುವುದಿದ್ದರೆ, ಅಲ್ಪ ಸಂಖ್ಯಾಕರ ಆಕ್ಷೇಪವು ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಮುಸ್ಲಿಂ ಲೀಗಿನವರು ಸರಕಾರದ ಮುಖ್ಯ ಮಂತ್ರಿಗಳಾಗಿ ಮಂತ್ರಿ ಮಂತ್ರಿಮಂಡಳವನ್ನು ನೇಮಿಸಲಿ, ಕಾಂಗ್ರೆಸು ಇದಕ್ಕೆ ಅಭ್ಯಂತರ ಮಾಡದಂತೆ ನಾನು ಯತ್ನಿಸುತ್ತೇನೆ. ಮುಸ್ಲಿಂ ಲೀಗಿನ ಪ್ರಧಾನ ಮಂತ್ರಿಯು ತನಗೆ ಇಷ್ಟ ಬಂದ ಹಾಗೆ ಮಂತ್ರಿಮಂಡಳವನ್ನು ರಚಿಸಬಹುದು. ಬ್ರಿಟಿಷ್ ಸರಕಾರವು ನಿಜವಾಗಿ ಭಾರತದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವುದಿದ್ದರೆ ಈ ಸಲಹೆಗೆ ಒಪ್ಪಬೇಕು."

ಹೀಗೆಂದು ರಾಜಾಜಿಯವರು ಲಂಡನಿನ ಡೈಲಿ ಹೆರಾಲ್ಡ್ ಪತ್ರಿಕೆಗೆ ಕಳುಹಿಸಿದ ಈ ತಂತಿಯು ಎಲ್ಲೆಡೆಗಳಲ್ಲಿಯೂ ಪ್ರಸಿದ್ಧವಾಗಿದೆ. ಇದು ಭಾರತದಲ್ಲಿಯೂ, ಬ್ರಿಟನಿನಲ್ಲಿಯೂ ರಾಜಕಾರಣಿಗಳ ಗಮನವನ್ನು ಸೆಳೆದಿದೆ. ಅಲ್ಪಸಂಖ್ಯಾಕರ ನೆವನವೆತ್ತಿ ರಾಷ್ಟ್ರೀಯ ಸರಕಾರದ ಕೇಳಿಕೆಯನ್ನು ಮುಂದೊಡ್ಡುವ ಸರಕಾರದ ಹೇಳಿಕೆಯಲ್ಲಿ ಎಷ್ಟರಮಟ್ಟಿಗೆ ಪ್ರಾಮಾಣಿಕತೆಯಡಗಿದೆಯೆಂಬ ವಿಷಯವು ಇದರಿಂದ ಸ್ಪಷ್ಟನಾಗಬಹುದೆ?

ಸ್ವಯಂಸೇವಕ ದಳದ ಕುರಿತು ವರ್ಕಿಂಗಕಮಿಟಿಯ ನಿರ್ಣಯ

ಸರಕಾರವು ಸ್ವಯಂಸೇವಕ ದಳಗಳ ವಿಷಯ ಇತ್ತೀಚೆಗೆ ಹೊರಡಿಸಿದ ಪ್ರಕಟಣೆಯ ವಿಚಾರವಾಗಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಒಂದು ನಿರ್ಣಯ ಮಾಡಿತು; ಅದರ ಸಾರಾಂಶವು ಹೀಗಿದೆ:

"ಸರಕಾರದ ಪ್ರಕಟಣೆ ಅಸ್ಪಷ್ಟವಾಗಿದೆ. ಅದರ ಉದ್ದೇಶವೇನೆಂದು ತಿಳಿಯುವುದಿಲ್ಲ. ಈ ಪ್ರತಿಬಂಧಕ ಕಾನೂನನ್ನು [illegible] ಉಪಯೋಗಿಸುವಾಗ, ಅದನ್ನು ದುರುಪಯೋಗಪಡಿಸಬಹುದು. ರಾಜಕೀಯ ಜಾತೀಯತೆಯ ಉದ್ದೇಶದಿಂದ ಸರಕಾರದೆದುರು ಸೈನ್ಯವನ್ನು ಸಿದ್ಧಪಡಿಸುವುದು ನ್ಯಾಯವಲ್ಲ. ಆದರೆ ಸಾಮಾನ್ಯವಾದ ಸ್ವಯಂಸೇವಕ ದಳಗಳಿಗೂ ಸೈನ್ಯದ ಶಿಸ್ತು ವ್ಯವಸ್ಥೆಗಳಿಗೂ ವ್ಯತ್ಯಾಸವಿದೆ. ಕಾಂಗ್ರೆಸು ಸ್ವಯಂಸೇವಕ ದಳಗಳು ಸೈನ್ಯಗಳಲ್ಲ, ಹಿಂಸೆ ಮಾಡುವವಲ್ಲ. ಈ ಕಾನೂನನ್ನು ಕಾಂಗ್ರೆಸು ಸ್ವಯಂಸೇವಕ ದಳಗಳ ಮೇಲೆ ಉಪಯೋಗಿಸಬಾರದಾಗಿ ಈ ಕಮಿಟಿಯು ತಿಳಿಸುತ್ತದೆ.

"ಸರಕಾರದವರು ಈ ಪ್ರತಿಬಂಧಕ ಕಾನೂನನ್ನು ಹೊರಡಿಸುವುದನ್ನು, ದೇಶದ ರಾಜಕೀಯ ಸ್ಥಿತಿಯನ್ನು ವಿಮರ್ಶಿಸಿದರೆ ಸರಕಾರದ ಉದ್ದೇಶವು ಸಾಧುವಾಗಿಲ್ಲವೆಂದು ತೋರುತ್ತದೆ. ಕಾಂಗ್ರೆಸು ಸ್ವಯಂ ಸೇವಕರ ಚಟುವಟಿಕೆಗಳನ್ನು ತಡೆಯುವರೆ ಈ ಕಾನೂನು ಮಾಡಲಾಗಿದೆಯೆಂದು ಊಹಿಸಬೇಕಾಗಿದೆ. ಕಾಂಗ್ರೆಸಿನ ಸ್ವಯಂ ಸೇವಕ ದಳಗಳು ರಚನಾತ್ಮಕ ಕಾರ್ಯವನ್ನು ಶಿಸ್ತು ವ್ಯಾಯಾಮಗಳನ್ನು ಕಲಿಸುವ ಅಹಿಂಸಾ ದಲಗಳು. ಕಾಂಗ್ರೆಸಿನ ರಾಜಕೀಯ ಅಭಿಪ್ರಾಯವನ್ನು ಇತರರ ಮೇಲೆ ಬಲತ್ಕಾರಿಸುವುದಿಲ್ಲ. ಆದಕಾರಣ ಸರಕಾರವು ಅವರ ಮೇಲೆ ಈ ಕಾನೂನನ್ನು ಪ್ರಯೋಗಿಸಬಾರದಾಗಿ ವರ್ಕಿಂಗ್ ಕಮಿಟಿಯು ಸಾರುತ್ತದೆ. ಕಾಂಗ್ರೆಸು ಸ್ವಯಂ ಸೇವಕರು ಶಾಂತರಾಗಿ ತಮ್ಮ ಕಾರ್ಯಗಳನ್ನು ನಡೆಸಬೇಕು. ಇದು ಅವರ ಹಕ್ಕು."

ಅಹಿಂಸೆಯಿಂದ ದೇಶ ರಕ್ಷಣೆಯೆಂತು?

ಮಹಾತ್ಮರ ಹೇಳಿಕೆ

"ನನ್ನ ಕೈಯಲ್ಲಿ ಸರಕಾರದ ಅಧಿಕಾರವನ್ನು ಕೊಡಲು ಯಾರೂ ನನ್ನನ್ನು ನಂಬುವುದಿಲ್ಲವಷ್ಟೆ? ಇಲ್ಲವಾದರೆ, ನಾನು ಅಹಿಂಸೆಯಿಂದ ಸರಕಾರ ನಡೆಸುವುದು ಹೇಗೆಂಬುದನ್ನು ತೋರಿಸಿ ಬಿಡುತ್ತಿದ್ದೆ. ನಾನು ಪೋಲೀಸ ದಳವನ್ನು ಇಡುವುದಾದರೂ ಅದು ಸುಧಾರಣೆ ಹೊಂದಿದ ರೀತಿಯದಾಗಿರುವುದು' ಹೀಗೆಂದು ಗಾಂಧೀಜಿಯವರು ಅಹಿಂಸೆಯಲ್ಲಿ ವಿಶ್ವಾಸವುಳ್ಳ ಕೆಲವರು ಒಂದು ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಉತ್ತರ ಕೊಡುತ್ತಾ ಹೇಳಿದರು. ಅಹಿಂಸೆಯ ಮಿತಿಯನ್ನು ಹೇಳುತ್ತಾ ಅವರು ಕಾಂಗ್ರೆಸು ಅಂಗೀಕರಿಸಿದ ಅಹಿಂಸೆ ರಾಜಕೀಯ ಕ್ಷೇತ್ರದಲ್ಲಿ. ಆದರೆ ಅಹಿಂಸೆಯ ಪೂರ್ಣತೆ ಇದಿ[illegible] ಸಮಾಜದ ವ್ಯವಸ್ಥೆಯಲ್ಲಿದೆಯೆಂದರು.

ದುರ್ಬಲರಾದ ಪೋಲರು ಜರ್ಮನಿ[illegible]ದುರು ಒಂದು ರೀತಿಯ ಅಹಿಂಸೆಯ ಎ[illegible] ರಾಟವನ್ನೇ ಮಾಡಿದರು. ಆದರೆ ನಾ[illegible] ಹಾಗಲ್ಲ. ನಾವಿಲ್ಲಿ ನಾಲ್ಕು ನೂರು ಮಿ[illegible]ಯ ಜನರಿದ್ದೇವೆ. ನಾವು ನಮ್ಮ ಎದುರಾ[illegible]ಳಿಯನ್ನು ಎದುರಿಸಲು ಮಾಡುವ ಸಿದ್ಧ[illegible]ಯು ಅಹಿಂಸೆಯಾಗಲಾರದು. ನಾ[illegible] ಯೂರೋಪಿನ ರಾಷ್ಟ್ರಗಳಂತೆ ಮ[illegible] ಸುಲಿಗೆಗೆ ಹೊರಡಬೇಕಾಗುವುದು. ಇ[illegible]ರಿಂದ ಲೋಕಕ್ಕೆ ಅನರ್ಥವೇ ಒದಗ[illegible]ವುದು. ದಿಲ್ಲಿಯ ಠರಾವಿನಿಂದ ನಾವಿದವರೆಗೆ ಮಾಡಿದ್ದು ಅಹಿಂಸೆಯಲ್ಲ, ಒಂದ ರೀತಿಯ ಹಿಂಸೆಯೆಂದೇ ಸ್ಪಷ್ಟಪಡಿಸ[illegible] ಹಾಗಾಗಿದೆಯೆಂದರು.

"ನಾವು ಅಹಿಂಸೆಯಿಂದ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ, ದೇಶದ ಬಹು[illegible]ಮಂದಿಯು ಅಹಿಂಸೆಯನ್ನು ಪಾಲಿ[illegible] ಬೇಕು, ಹೀಗೆ ಪಾಲಿಸದೆ ಸ್ವರಾಜ್ಯ ಸಿ[illegible]ಲಾರದು' ಹೀಗೆ ಪಾಲಿಸಿ ಶಿಕ್ಷಣಹೊಂದಿದವರು ಅಹಿಂಸೆಯಿಂದ ದೇಶದ ಸರಕಾರವನ್ನು ನಡೆಸಬಲ್ಲರು.

"ಕೇವಲ ಇಪ್ಪತ್ತು ಸಾವಿರ ಅಹಿಂಸಾ ಸೈನಿಕರಿಂದ ನಾನು ಜಗತ್ತಿಗೆ ಹೇಗೆ ಹಿಂಸಾ ಸೈನ್ಯವನ್ನು ಎದುರಿಸಬಹುದೆಂಬುದನ್ನು ತೋರಿಸಬಲ್ಲೆ, ದಂಡಿ ಯಾತ್ರೆ ಹೊರಟದ್ದಾಗ ಮೋತೀಲಾಲರು ನಗಾಡ್ಡರು, ಆದರೆ ಅದರ ಪರಿಣಾಮ. ಅವರನ್ನು ಕಡೆಗೆ ತಲೆದೂಗಿಸಿತು, ನಮ್ಮ ನ್ಯಾಯವಾದ ಮಾರ್ಗದಲ್ಲಿ ದೇವ[illegible] ನಮಗೆ ಶಕ್ತಿ ಕೊಡುತ್ತಾನೆ.

"ನಾನು ಜಗತ್ತಿನಿಂದ ವಿಶ್ರಾಂತಿ ಹೊಂದಲಿಕ್ಕೆ ಹೊಂದಲು ಬಯಸುವುದಿಲ್ಲ. ಸೇವಾಗ್ರಾಮದಲ್ಲಿದ್ದೇ ನಾನ ಮಾಡತಕ್ಕ ಅಲ್ಪಕರ್ತವ್ಯಗಳನ್ನು ಮಾಡಲಿದ್ದೇನೆ. ಮುಖ್ಯವಾಗಿ ದೃಢವಿಶ್ವಾಸವಿರಬೇಕು. ಅಹಿಂಸಾಯೋಜನೆಯು ಸುಲಭ, ಸರಳ ಮತ್ತು ನ್ಯಾಯವಾದುದ ಮಾತ್ರವಲ್ಲದೆ ಜಯಶೀಲವಾದುದದು' ಎಂದು ಅವರು ಹೇಳಿದರು.

೧,೦೦೦ ರೂಪಾಯಿಗಳ ಬಕ್ಷೀಸು

ಕೆಳಗಿನ ಔಷಧಗಳಲ್ಲಿ ಗುಣವಿಲ್ಲೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ ಇನಾಮು.

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು: ೪—೮—೦

ಪ್ರಮೇಹ ಮೈಯಲ್ಲಿ ಬೇರಿಸಿದರೆ ತಮ್ಮ ಮತ್ತು ತಮ್ಮ ಭಾವೀ ಪೀಳಿಗೆಯ ನಾಶಮಾಡದೆ ಬಿಡಲಾರದು. ಇಂಥ ಮಹಾ ಹಾನಿಕಾರಕ ಎಲ್ಲ ೨೦ (ಇಪ್ಪತ್ತು) ಪ್ರಕಾರದ ಪ್ರಮೇಹ ಪರಮಾ ಅದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಅದೆ.

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತಿದೆ. ಮೂತ್ರ ಮಾರ್ಗ ಸ್ವಚ್ಛವಾಗಿ ಮೂತ್ರದ ಕಾಲಕ್ಕೆ ಉಂಟಾಗುವ ವೇದನೆ ಮತ್ತು ಉರುವು ಇಲ್ಲದಂತಾಗುತ್ತದೆ. ಕೀವು ಮತ್ತು ಪ್ರಮೇಹ ಹೋಗುವದು ಬಂದಾಗುತ್ತದೆ. ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ. ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ ಏನೂ ಇಲ್ಲ. ಕಿಮ್ಮತ್ತಿನ ಹೊರ್ತಾಗಿ ಅಂಚೆ ವೆಚ್ಚ ಬೇರೆ.

ಕಿ.] ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪದರ ಶೆರಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ-ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಾದ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳದಿ, ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟು ನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತೆ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟುದೋಷ ಇವುಗಳಿಂದ ಕಿಪ್ಪೊಟ್ಟೆ ಗರ್ಭಾಶಯ ಇಲ್ಲವೆ ಕುಸುಮದಲ್ಲಿ ಆಗುವ ವೇದನೆ, ನಡ, ತಲೆ, ತೊಡೆ ಮತ್ತು ಸಂದು ಇವುಗಳಲ್ಲಿ ನೋವು, ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ ಆಗದಿರುವಿಕೆ, ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನು ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಇಲ್ಲ. ಅಂ. ವೆ. ಬೇರೆ.

ಕರ್ತ:-ವೈದ್ಯರಾಜ ಎ. ಬಿ. ಸಿದನಾಳ,

ಮನೆ ನಂಬರ ೧೩೮೯, ಎಸ್. ಎಮ್. ಬಸವಣಗಲ್ಲಿ, ಬೆಳಗಾವಿ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S C S. No 167,1940.

ರುದ್ರು ಕಡಂಬೇದು . ವಾದಿಳ[illegible]

ಮತ್ತು

ಎಚ್ ನಾರಾಯಣ ಪ್ರತಿವಾ[illegible]

ಇವರೊಳಗೆ

ಪ್ರತಿವಾದಿ ಎಚ್ ನಾರಾಯಣ, Clerk L F. Assistant Engineer' Office, Mangalore ಇವರಿಗೆ [illegible] ಮೂಲಕ ತಿಳಿಸುವುದೇನೆಂದರೆ—

ಪ್ರತಿವಾದಿಯು ವಾದಿಗೆ ತಾರೀಕು 3-3-1938ರಲ್ಲು ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ವ್ಯವೇಜು ಬರಮಾಡಿಕೊಳ್ಳುವ ಬಗ್ಗೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರು ಬಗ್ಗೆ ತಾರೀಕು 18—9-1940ಕ್ಕೆ ಇಟ್ಟಿದೆ.

ನೀವು ಸದ್ರಿ ದಿನ ಬೆಳಿಗ್ಗೆ ಹನ್ನೊಂದು ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸಲಾದೀತು—By Order of the Court.

Karkala, 23-8-1940. } N Mohandas Adyanthaya Advocate for Plaintiff

ದೇಶವನು ಹಂಚುವುದು ದೇಹವನ್ನು ಸೀಳಿದಂತೆ!

ಂದುಗಳು ಯಾವ ಸತ್ಯವು, ಯೋಗಿಗಳು, ಅವರೆಲ್ಲ ಹಿಂದೂ ಯಿಂದ ಕಸ್ಮಾತುವಾದಿ ಮತ್ತು ಸ್ತರತೆಯಿಂದ ಜಗನ್ನಾಥದ ತನಕ ರುವ ಹಿಂದೂದೇಶವನ್ನು ತಮ್ಮ ಶ ಅಥವಾ ಮಾತೃಭೂಮಿಯೆಂ ತಿಳಿದು ಬಂದಿದ್ದಾರೆ. ತಮ್ಮ ಶವನ್ನು ವಿಭಾಗಿಸುವ ಯೋಚ ಯನ್ನು ಅವರು ಒಪ್ಪಲಾರರು. ಈ ಯೋಜನೆಯು ಹಿಂದುಗಳ ಸ್ಕೃತಿ ಸಂಸ್ಕೃತಿಗಳ ಮೂಲಕ್ಕೇ ಡಲಿ ಏಟನ್ನು ಕೊಡುವುದರಿಂದ ಸ್ವ ದೇಶ, ಧರ್ಮ ಮತ್ತು ಸಂಸ್ಕೃ ಯ ಪ್ರೇಮಿಯಾಗಿರುವ ಪ್ರತಿ ಬ್ಬ ಹಿಂದುವೂ, ದೇಶವು ಹರಿ ಹೋಗುವುದನ್ನು ಪ್ರಾಣಕೊಟ್ಟಾ ರೂ ವಿರೋಧಿಸುವನು ಎಂದು ಲೋಕನಾಯಕ ಅಣೆಯವರು ಂದೂ ಲೀಗ್ ಪರಿಷತ್ತಿನಲ್ಲಿ ಹೇಳಿ ರು.

ಹತ್ತು ಶತಮಾನಗಳ ಹಿಂದೆ ಅರೇ ಯ ಅಥವಾ ಪರ್ಶಿಯದಿಂದ ಬಂದಿರ ಹುದಾದ ಕೆಲವರು ಮುಸಲ್ಮಾನರು ರತದಲ್ಲಿ ಇಂದಿಗೆ ಹಲವರಾಗಿದ್ದಾರೆ. ಂದುಗಳು ಪರಮತೀಯರ ಕಡೆಗೆ ಟ್ಟಿರುವ ಉದಾರ ಭಾವ ಮತ್ತು ಸಹಿ ತೆಗೆ ಇದು ಪರಿಣಾಮವಾಗಿದೆ. ರತದಲ್ಲಿ ಭಾರತೀಯನಾಗಿ ಇರಲಿ ಸುವ ಪ್ರತಿಯೊಬ್ಬ ವಿದೇಶಿಯನನ್ನೂ ಂದುಗಳು ಸುಸ್ವಾಗತವನ್ನು ಕೊಟ್ಟು ಮ್ಮ ದೇಶದಲ್ಲಿ ಇರಬಿಡುತ್ತಾರೆ. ಆದರೆ ೕಗಿನ ಮುಸಲ್ಮಾನರು ಕೃತಘ್ನತೆಯನ್ನು ೕರಿಸುತ್ತಾರೆ. ಸಂಕುಚಿತ ಜಾತೀಯ ಸ್ವಾರ್ಥದ ಹೊಯಿಲಿನಲ್ಲಿ ತೇಲಿಹೋ ತ್ತ ಅವರು ಭಾರತೀಯ ರಾಷ್ಟ್ರೀಯ ಾವನೆಗೆ ವಿಘ್ನಕಾರಿಗಳಾಗಿ ಪರಿಣಮಿಸಿ ವರು. ಹಿಂದೂ-ಬೌದ್ಧ ಸಂಸ್ಕೃತಿಗ ನ್ನು ನಾಶಮಾಡಿ ಏಶ್ಯದಲ್ಲಿ ಪೂರ್ವಕ್ಕೆ ಲ್ಲಿಯ ತನಕ ಸಾಧ್ಯವೋ ಅಲ್ಲಿಯ ನಕ ಮುಸಲ್ಮಾನ ರಾಜ್ಯವನ್ನು ಸ್ಥಾಪಿ ವುದನ್ನೇ ಲೀಗಿನ ಮುಸ್ಲಿಮರು ಕನಸು ಾಣುವಂತಿದೆ.

ಮುಸಲ್ಮಾನರು ಪಾಕಿಸ್ತಾನದ ಛಲ ಡಿಯುವುದರಿಂದ ಹಿಂದುಗಳೊಡನೆ ಗಳನ್ನು ಆಹ್ವಾನಿಸುತ್ತಾರೆ. ಧರ್ಮ ಪ್ರಶ್ನೆ ಬಂದಾಗ ಹಿಂದುಗಳಿಗೆ ತಮ್ಮ ೕಶ ಮತ್ತು ಧರ್ಮಗಳಿಗಿಂತ ಪ್ರಿಯ ಾದುದು ಬೇರೊಂದು ಇರಲಾರದು. ಮುಸಲ್ಮಾನರನ್ನು ದೇಶದಿಂದ ಹೊರಗ ಟ್ಟುವ ಯೋಚನೆಯನ್ನು ಹಿಂದುಗಳು ನಸಿನಲ್ಲಿಯೂ ಮಾಡಲಾರರು. ಮುಸ ಲ್ಮಾನರು ಇಲ್ಲಿ ಶಾಂತಿ ಮಾರ್ಗದಿಂದ ತಮಗೆ ಬೇಕಾದ ವೃತ್ತಿ ಕಸಬುಗಳನ್ನು ಅನುಸರಿಸಿಕೊಂಡು ಸ್ವತಂತ್ರ ಜೀವನ ವನ್ನು ನಡೆಸಬಹುದು. ಆದರೆ ಅವರು ಹಿಂದೂದೇಶವನ್ನು ತಮ್ಮ ಮಾತೃಭೂಮಿ ಯನ್ನಾಗಿ ತಿಳಿದಿರಬೇಕು. ತಮ್ಮ ಜಾತೀ ಯ ಸ್ವಕೀಯ ಭಾವನೆಯನ್ನು ಬಿಟ್ಟು ಯಕ್ಯವಾಗಿರಬೇಕು.

ರಕ್ತದ ಕಾಲುವೆಯನ್ನು ಹರಿಯಬಿಟ್ಟಂತೆ!

ಲೋಕನಾಯಕ ಅಣೆಯವರ ಹಿತೋಕ್ತಿ!

ಲೀಗಿನ ಮುಸಲ್ಮಾನರು ಸ್ವಾರ್ಥದ ಪರಾಕಾಷ್ಠತೆಯನ್ನು ತೋರಿಸಿದ್ದಾರೆ. ಅರೇಬಿಯವು ಮುಸಲ್ಮಾನ ಅರಬರ ಸ್ವದೇಶವಾದುದರಿಂದ, ಅದರಲ್ಲಿ ವಿದೇಶಿ ಯಹೂದಿಯರಿಗೆ ಪಾಲು ದೊರೆಯಕೂ ಡದೆಂದು ಮುಸಲ್ಮಾನರು ಹೇಳುತ್ತಾರೆ. ಆದರೆ ಅದೇ ಬಾಯಿಯಿಂದ, ಹಿಂದೂ ಗಳ ಸ್ವದೇಶವಾಗಿರುವ ಹಿಂದುಸ್ಥಾನ ವನ್ನು ತಮಗೆ ಪಾಲುಮಾಡಿಕೊಡಬೇ ಕೆಂದು ಹೇಳುತ್ತಾರೆ! ಹೀಗೆ ಹೇಳಲಿಕ್ಕೆ ಅವರಿಗೆ ಸ್ವಲ್ಪವಾದರೂ ನಾಚಿಕೆ, ಸಂ ಕೋಚವಾಗುವುದಿಲ್ಲ. ಅರೇಬಿಯದಲ್ಲಿ ಯಹೂದಿಯರಿಗಿಲ್ಲದ ಅಧಿಕಾರ ಹಿಂದು ದೇಶದಲ್ಲಿ ಮುಸಲ್ಮಾನರಿಗೆ ಎಲ್ಲಿಂದ ಬರಬೇಕು? ಲೀಗಿನ ಮುಸಲ್ಮಾನ ರು ಜಾತಿಯತೆಯ ಸ್ವಾರ್ಥದಿಂದ ಅಂಧ ರಾಗಿದ್ದಾರೆಂಬುದಕ್ಕೆ ಬೇರೆ ದೃಷ್ಟಾಂತ ಬೇಕೆ?

ಹಿಂದುಸ್ಥಾನವನ್ನು ಇಬ್ಭಾಗಿಸುವ ಪಾಕಿಸ್ತಾನ ಯೋಜನೆಯ ಮೂಲದಲ್ಲಿ ಮುಸಲ್ಮಾನರ ಧರ್ಮಾಂಧತೆಯು ತುಂ ಬಿದೆ. ನ್ಯಾಯ, ನೀತಿ ಯಾವದಕ್ಕೂ ಸಮ್ಮತವಾಗದ ಈ ಯೋಜನೆಯು ಕಾರ್ಯರೂಪಕ್ಕೆ ಬಂದರೆ ದುರ್ಭಾಗ್ಯ ಹಿಂದೂದೇಶದಲ್ಲಿ ಶಾಶ್ವತ ಶಾಂತಿಯು ಎಷ್ಟು ಮಾತ್ರಕ್ಕೂ ನೆಲಗೊಳ್ಳಲಾರದು. ಮುಸಲ್ಮಾನರು ಬಹುಸಂಖ್ಯಾಕರಾಗಿ ರುವ ಸಿಂಧ, ಬಲೂಚಿಸ್ಥಾನ, ಗಡಿ ನಾಡು, ಪಂಜಾಬ, ಬಂಗಾಳ, ಅಸ್ಸಾ ಮುಗಳು ಮುಸಲ್ಮಾನರ ಶಾಸನ ಸೂತ್ರ ಕ್ಕೆ ಒಳಪಡಬೇಕೆಂಬುದು ಪಾಕಿಸ್ತಾನ ಯೋಜನೆಯ ಸಿದ್ಧಾಂತವಾಗಿದೆ. ಆದರೆ ಈ ಯೋಜನೆಯು ಸರ್ವಥಾ ಅವ್ಯವ ಹಾರಿಕವಾಗಿರುವದು. ಪಂಜಾಬ ಬಂ ಗಾಳಗಳಲ್ಲಿ ಮುಸಲ್ಮಾನರು ಅಧಿಕ ಸಂಖ್ಯಾಕರಾಗಿದ್ದಾರಾದರೂ, ಆ ಎರಡು ಪ್ರಾಂತ್ಯಗಳ ಹಲವು ಜಿಲ್ಲೆಗಳಲ್ಲಿ ಹಿಂದು ಗಳು ಬಹುಸಂಖ್ಯಾಕರಾಗಿರುವರು.

ಈ ಜಿಲ್ಲೆಗಳು ಆ ಪ್ರಾಂತ್ಯಗಳಿಂದ ಬೇರೆ ಟ್ಟರೆ, ಉಳಿದ ಭಾಗದ ವಿಸ್ತೀರ್ಣ, ಜ ಸಂಖ್ಯೆ ಸಂಪತ್ತು ಬಹಳ ಕಡಿಮೆಯಾಗ ವುದು. ಮತ್ತೆ ಆ ಉಳಿದ ಭಾಗಗಳ ದರೂ ಪ್ರತ್ಯೇಕ ಮತ್ತು ಸ್ವತಂತ್ರ ಮು ಲ್ಮಾನ ಶಾಸನಕ್ಕೆ ಒಳಪಟ್ಟಾಗ, ಅಲ್ಲ ನೆಲಸಿರುವ ಧನಾಢ್ಯ ಮತ್ತು ಧಂಡವಾ ಳಿಗರಾದ ಹಿಂದುಗಳು ತಮ್ಮ ಸಂಪತ್ತಿ ಯೊಡನೆ ಹಿಂದೂ ಪ್ರಾಂತ್ಯಗಳಿಗೆ ಬಂದು ವಾಸಮಾಡುವರು. ಮುಸಲ್ಮಾನ ಪ್ರಾಂ ತ್ಯಗಳು ಉಳಿದ ಪ್ರಾಂತ್ಯಗಳಿಂದ ಸ್ವ ತಂತ್ರವಾಗಿರುವುದರಿಂದ ಅವು ಅಂತ ರಂಗ ಬಹಿರಂಗ ರಕ್ಷಣೆಗೆ ಆಧುನಿಕ ಶಸ್ತ್ರೋಪಕರಣಗಳಿಂದ ಸುಸಜ್ಜಿತವಾದ ದೊಡ್ಡ ಸೇನೆಗಳನ್ನು ಇಟ್ಟಿರಬೇಕಾಗು ತ್ತದೆ. ಪರಂತು ಈಗಾಗಲೇ ಆರ್ಥಿಕ ಅಭಾವದಿಂದ ಕಂಗೆಟ್ಟಿರುವ ಸಿಂಧ, ಗಡಿನಾಡಿನಂಥ ಪ್ರಾಂತ್ಯಗಳು ಪಾಕಿಸ್ತಾ ನಕ್ಕೆ ಸೇರಿದಾಗ ಅವುಗಳಲ್ಲಿ ಭಯಂಕರ ಸಾಂಪತ್ತಿಕ ಬಿಕ್ಕಟ್ಟು ಮಂದಿಕಕ್ಕೂ ಬರು ವದು. ಈ ಯೋಜನೆಯಿಂದ ಮುಸಲ್ಮಾ ನರಿಗೇ ಕಷ್ಟಗಳು ಹೆಚ್ಚಲಿಕ್ಕಿವೆ.

ಭಿನ್ನ ಭಿನ್ನ ಮತ ಸಿದ್ಧಾಂತಗಳ ಮೇಲೆ ಸ್ಥಾಪಿತವಾದ ರಾಜ್ಯಗಳು ನೆ ಹೊರೆಯಲ್ಲಿರುವುದರಿಂದ ಆ ರಾಜ್ಯಗಳ ನಿವಾಸಿಗಳು ಯಾವಾಗಲೂ, ಪರಸ್ಪ ದ್ವೇಷ, ಸ್ವಾರ್ಥ ಮತ್ಸರಗಳಿಂದ ಪ್ರೇ ತರಾಗಿ ಹೋರಾಟದಲ್ಲಿಯೇ ದಿನಕಳೆಯ ಬೇಕಾಗುತ್ತದೆ. ಪಾಕಿಸ್ತಾನವಾಗಿ ಎಂಬ ಕಾರಣದಿಂದ ಮನುಷ್ಯ ಸ್ವಭಾ ವು ಬದಲಾಗುವುದಿಲ್ಲ. ಆದ್ದರಿಂದ ಪಾ ಕಿಸ್ತಾನದ ಜಿಸೆಯಿಂದ ಹಿಂದುಸ್ಥಾ ದೊಳಗಿನ ಮತ ಸಂಬಂಧವಾದ ಜಗ ಗಳು ಕಡಿಮೆಯಾಗುವುದರ ಬದಲಿಗೆ ಅವು ಇನ್ನೂ ಬೆಳೆದು, ಹಿಂದೂದೇಶದ ಹಿಂದು ಮುಸಲ್ಮಾನ ರಕ್ತದ ಕಾಲು ಗಳೇ ಹರಿದು ಹೋಗಬಹುದು. ಈ ಯೋಜನೆಯು ಕಾರ್ಯರೂಪದಲ್ಲಿರು ತನಕ ಒಂದು ಜಾತಿಯ ಸಂಪೂರ್ಣ ನಾಶವಾದ ಹೊರತು ಇನ್ನೊಂದು ನೆಮ ದಿಯಿಂದ ಇರಲಾರದು. ಆದ್ದರಿಂದ ಈ ಯೋಜನೆಯು ಹಿಂದುಗಳಿಂದ ಮಾ ವಲ್ಲದೆ, ಮುಸಲ್ಮಾನರಿಂದಲೂ ಖಂ ನೀಯವಾಗಿದೆ.



ಆಯುರ್ವೇದಾಶ್ರಮಂ

1898ರಲ್ಲಿ ಸ್ಥಾಪಿತವಾದುದು ಮದರಾಸು.

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾ ಮೇಹರೋಗ, ಶರೀ ದುರ್ಬಲತೆ, ನಿಸ್ಸತ್ವ, ರ್ಯ ನಷ್ಟ, ಮುಂತಾ ಅನೇಕ ರೋಗಗಳ ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನ ಉಂಟುಮಾಡಿ ಸಂಭೋಗ ಶಕ್ತಿಯ ಕೊಡುದರಲ್ಲಿ ಅಮೋಘವಾದದ್ದು. ಮ್ಮ ರೋಗಗಳನ್ನು ಗುಣಪಡಿಸಿ, ಶ ರಶಕ್ತಿಯನ್ನುಂಟುಮಾಡಲು 2 ಡಬ್ಬಿ ಲೀ ಸಾಕು. 20 ತೊಲೆಗಳ ಡಬ್ಬಿ ರು 1—4—0 (ವಿ.ಪಿ.ಚಾರ್ಜ ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ.,

ಆಯುರ್ವೇದಿಕ್ ಸದನ, ...

ಜಿಲ್ಲಾ ಸಮಾಚಾರ



ಮಂಗಳೂರು

ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ — ಸ್ವಯಂಸೇವಕ ದಳಗಳ ವಿಷಯವಾಗಿ ಇತ್ತೀಚೆಗೆ ಸರಕಾರದವರು ಹೊರಡಿಸಿದ ನಿರ್ಬಂಧದ ಆಜ್ಞೆಯನ್ನು ಪರಿಶೀಲಿಸುತ್ತಾ ಈ ವಿಷಯವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮುಂದಿನ ವರ್ತನೆಯನ್ನು ಸ್ಪಷ್ಟೀಕರಿಸುವ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಅಲ್ಲಿಗೆ ಅರಿಕೆ ಮಾಡಿಕೊಳ್ಳಬೇಕೆಂದು ಕಾಂಗ್ರೆಸ್ ಕಮಿಟಿಯ ಮೂಲಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ವಿನಂತಿಸಬೇಕೆಂದೂ, ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಸಪ್ತಾಹವಾಗಿ ಆಚರಿಸಬೇಕಾಗಿಯೂ ಕಾಂಗ್ರೆಸ್ ಕೆಲಸಗಾರರೆಲ್ಲಾ ಉತ್ಸಾಹದಿಂದ ಸಾಧ್ಯವಿದ್ದಷ್ಟು ಹೆಚ್ಚು ಸದಸ್ಯರನ್ನು ಸೇರಿಸ ಕೊಳ್ಳಬೇಕಾಗಿಯೂ ಸ್ಥಳೀಯ ಸಂಸ್ಥೆಗಳು ತಮ್ಮ ಕಟ್ಟಡಗಳ ಮೇಲೆ ಆರೋಹಿಸುವ ಧ್ವಜದ ಕುರಿತಾದ ಸರಕಾರದ ಆಜ್ಞೆಯನ್ನು ಈ ಕಮಿಟಿಯು ಸರಿಯಾಗಿ ಪರಿಶೀಲಿಸುತ್ತಾ ಸ್ಥಳೀಯ ಸಂಸ್ಥೆಗಳು ಯಾವದಾದರೂ ಸಂದರ್ಭಗಳಲ್ಲಿ ತಮ್ಮ ಕಚೇರಿಗಳ ಮೇಲೆ ಆರೋಹಿಸುವ ತ್ರಿವರ್ಣದ ಧ್ವಜವು ಯಾವುದಾದರೂ ಪಕ್ಷದ ಧ್ವಜವಾಗಿರದೆ, ರಾಷ್ಟ್ರೀಯ ಧ್ವಜವಾಗಿರುವುದರಿಂದ ಈ ಧ್ವಜದ ಕುರಿತಾಗಿ ಸರ್ಕಾರವು ಹೊರಡಿಸಿದ ಆಜ್ಞೆಯು ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲಗಳು ಕೈಕೊಂಡ ಧೋರಣೆಯನ್ನು ಮುಂದೊತ್ತಿರವೆಂದು ಹೇಳುತ್ತಿರುವ ಸರಕಾರದ ಹೇಳಿಕೆಗೆ ಒಪ್ಪುವುದಿಲ್ಲವೆಂದೂ ಈ ಕುರಿತು ಯೋಗ್ಯ ರೀತಿಯಲ್ಲಿ ಕಾಂಗ್ರೆಸ್ ಮುನ್ಸಿಪಲ್ ಪಕ್ಷದವರು ಬರಲಿರುವ ಮುನ್ಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ನಿಷೇಧ ಠರಾವನ್ನು ಮಂಜೂರು ಮಾಡುವಂತೆ ಅವರನ್ನು ಕೇಳಿಕೊಳ್ಳಬೇಕೆಂದೂ ಮಾರ್ನಮಿ ಕಟ್ಟೆಯ ಯಸ್ ಯಂ ಯಸ್ ವೀವಿಂಗ್ ಫ್ಯಾಕ್ಟರಿಯ ಮುಂದೆ ತಾ [illegible] ರಲ್ಲಿ ಪೋಲೀಸರು ಮಜೂರರ ಮೇಲೆ ಹಾಗೂ ಸ್ತ್ರೀ ಬಾಲರ ಮೇಲೆ ಮಾಡಿದ ಲಾಠಿ ಚಾರ್ಜ ವರ್ತನೆಯನ್ನು ಖಂಡಿಸಬೇಕೆಂದೂ ನಿರ್ಣಯಗಳಾದವು.

ಶ್ರೀ. ಬಿ. ಜಿ ಖೇರ್ ಮತ್ತು ಶ್ರೀಮತಿ ರಮೇಶ್ವರಿ ನೆಹರುಗಳ ಆಗಮನ:—ಶ್ರೀ ಬಿ ಜಿ ಖೇರರು, ಶ್ರೀಮತಿ ರಮೇಶ್ವರಿ ನೆಹರುಗಳು ಹರಿಜನರ ಕ್ಷೇತ್ರ ಪ್ರವೇಶದ ವಿಷಯದಲ್ಲಿ ಚಳವಳ ನಡೆಸಲು ಸದ್ಯದಲ್ಲಿಯೇ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಪ್ರವಾಸ ಮಾಡುವರೆಂದೂ ಜಿಲ್ಲಾ ಹರಿಜನ ಸೇವಕ ಸಂಘದವರು ಅವರ ಸಂಚಾರದ ಕಾರ್ಯಕ್ರಮಗಳನ್ನು ಸಿದ್ಧಪಡಿಸಿರುವರಾಗಿಯೂ ವಾರ್ತೆಯಿದೆ.

ಎಲಿಮೆಂಟರಿ ಶಾಲೆಗಳ ಗ್ರಾಂಟು
ಡಿರೆಕ್ಟರ್ ಅಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಅವರಲ್ಲಿ ಮನವಿ ಮಾಡಿಕೊಂಡ ಪ್ರತಿಫಲವಾಗಿ, ಅವರು "ಎಲಿಮೆಂಟರಿ ಶಾಲೆಗಳ ೧೯೪೦-೪೧ನೆ ವರ್ಷದ ಗ್ರಾಂಟನ್ನು ನಿಶ್ಚೈಸುವಾಗ ೧೯೪೦ನೇ ವರ್ಷದ ಶಾಲಾ ದಿನಗಳು ೨೦೦ ಎಂಬುದಾಗಿ ಪರಿಗಣಿಸಬೇಕು" ಎಂದು ಹುಕುಮು ಕೊಟ್ಟದ್ದಾಗಿ ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಅಲೆಯ ಬಿಡುಗಡೆ:—ಕ್ಷಿರಂಗಳ ಗ್ರಾಮದ ನಾರಾಯಣ ಶೆಟ್ಟಿ ಎಂಬವನು ಅದೇ ಗ್ರಾಮದ ಕೃಷ್ಣನ ಎಂಬ ೩೫ ವರ್ಷ ಪ್ರಾಯದ ಮಾಪಿಳ್ಳೆ ಹೆಂಗಸನ್ನು ಆವಳು ಗುಡ್ಡೆ ದಾರಿಯಾಗಿ ಹೋಗುವಾಗ ಕೊಂದು ಅವಳ ಆಭರಣಗಳನ್ನು ಸುಲಿಗೆ ಮಾಡಿದ್ದಾನಾಗಿ ಅವನ ಮೇಲೆ ಇ. ಪಿ. ಕೋಡಿನ ೩೦೨ನೇ ಕಲಂ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರಿಗೆ ಸೆಶ್ಶನ್ ಕೋರ್ಟಿಗೆ ಕಮಿಟು ಆಗಿತ್ತು. ಆಲೆಯು ತಾನು ಯಾವ ತಕ್ಸೀರನ್ನೂ ಮಾಡಿರಲಿಲ್ಲವಾಗಿಯೂ ಆ ಸಮಯ ತಾನು ಊರಲ್ಲಿರಲಿಲ್ಲವಾಗಿಯೂ ಸಾಧಿಸಿದ್ದನು. ಎಲ್ಲಾ ಎಸೆಸರೂ ಆಲೆಯು ತಪ್ಪುಗಾರನಲ್ಲವೆಂತ ಕೊಟ್ಟ ಅಭಿಪ್ರಾಯವನ್ನು ಅಂಗೀಕರಿಸಿ ಮಂಗಳೂರು ಸೆಶ್ಶನ್ಸ್ ಜಡ್ಜರಾದ ಶ್ರೀ ಟಿ ಎಸ್ ರಾಮಚಂದ್ರನ್‌ರವರು ಆಲೆಯನ್ನು ಬಿಡುಗಡೆ ಮಾಡಿದರು.

ನೇಯಿಗೆ ಕೆಲಸಗಾರರ ಮುಷ್ಕರ
ಮಂಗಳೂರು ನೇಯಿಗೆ ಕೆಲಸಗಾರರ ಮುಷ್ಕರದ ವಿಚಾರದಲ್ಲಿ ಕೆಲಸಗಾರರಿಗೂ ಮಾಲೀಕರಿಗೂ ಒಂದು ರಾಜಿಯಾಗುವ ಸಂಭವವಿರುವುದಾಗಿ ತಿಳಿದು ಬರುತ್ತದೆ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾ. ವಿಟ್ಠಲ್ ಶೆಟ್ಟಿ [illegible] ಈ ವಿಷಯದಲ್ಲಿ ಯತ್ನಿಸುತ್ತಿರುವರೆಂದು ಕೇಳುತ್ತೇವೆ.

ಮಹಿಳೆಯರಿಗೆ ಹಿಂದೀ ತರಗತಿಗಳು. ಕೆನರಾ ಹುಡುಗಿಯರ ಶಾಲೆಯ ಹಳೆಯ ವಿದ್ಯಾರ್ಥಿನಿಯರ ಸಂಘದ ಆಶ್ರಯದಲ್ಲಿ ಮಹಿಳೆಯರಿಗಾಗಿ ಹಿಂದೀ ತರಗತಿ ೧೯೪೦ನೇ ಸಪ್ಟಂಬರ [illegible] ಆರಂಭಿಸಲ್ಪಡುವವು. ರಾಷ್ಟ್ರಭಾಷಾ [illegible] ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಮಹಿಳೆಯರೇ ಶಿಕ್ಷಣ ಕೊಡುವರು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಶೋಚನೀಯ ನಿಧನ
[illegible] ಕನ್ನಡದ ಸಾರಸ್ವತ ಸಮಾಜಕ್ಕೆ ಸೇರಿದ ಉಗ್ರಾಣ ರತ್ನಾಕರ [illegible] ಯ ಕಳೆದ ಮಂಗಳವಾರ ಮಧ್ಯಾಹ್ನ [illegible] ವೆನ್‌ಲೋಕ್ ಆಸ್ಪತ್ರೆಯಲ್ಲಿ ದೈವಾಧೀನರಾದರು. ಇವರು ಹಲವು ವರ್ಷಗಳಿಂದ ಇಲ್ಲಿ ಮುರಲಿ ಮತ್ತು ಹಿಂದುಸ್ಥಾನಿ ಗಾಯನ ಕಲೆಯ ಶಿಕ್ಷಕರಾಗಿದ್ದು [illegible] ಉತ್ಕೃಷ್ಟ ಹುಟ್ಟುವಂತೆ ಕಲಿಸಿ, ಹೆಚ್ಚು ಜನರ ಪ್ರೀತಿಗೆ ಪಾತ್ರರಾಗಿದ್ದರು. ಇವರ ಹೆಂಡತಿ ಮತ್ತು ಮೂವ ಸಣ್ಣ ಮಕ್ಕಳ ಈ ಆಪಾರ ದುಃಖದಲ್ಲಿ ನಾವು ಸಹಭಾಗಿಗಳಾಗುವೆವು.

ಉಡುಪಿ

ಖಾಸಗಿ ಶಾಲಾ ಉಪಾಧ್ಯಾಯ ಸಂಘ. [illegible] ತಾಲೂಕು ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಯೂನಿಯನ್ನಿನ ವರ್ಷಾವಧಿ ಮಹಾಸಭೆಯು ತಾ. ೧೮ರಲ್ಲು ನೋಡರ್ನ್ ಹಾ ಎ ಶಾಲೆಯಲ್ಲಿ ಸೀನಿಯರ್ ಇನ್ಸ್‌ಪೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಸೇರಿತು.

ಅದರಲ್ಲಿ ಈ ಕೆಳಗಿನ ಠರಾವುಗಳಾದುವು:—(೧) ಪ್ರಾಥಮಿಕ ಶಾಲೆಗಳ ವರ್ಷಾವಧಿ ಶಾಲಾದಿನಗಳನ್ನೂ ದಿನವಹಿ ತಾಸುಗಳನ್ನೂ ಸರಕಾರದವರು ಒಂದೇ ಸವನೆ ಏರಿಸಿದುದರಿಂದ ಅಧ್ಯಾಪಕ ವೃಂದಕ್ಕೂ ವಿದ್ಯಾರ್ಥಿಗಳಿಗೂ ಬಹಳ ಕಷ್ಟವಾಗಿದೆ. ಕನಿಷ್ಠ ಪಕ್ಷ ಶಾಲಾ ದಿನಗಳನ್ನು ೨೦೦ಕ್ಕಾದರೂ ಇಳಿಸಬೇಕು. ೨ ಹಾ ಎ ಶಾಲೆಯ ಎಂಟನೆಯ ತರಗತಿಯ ಮಕ್ಕಳು ಹೈಸ್ಕೂಲಿಗೆ ಹೋಗುವ ಸಂದರ್ಭದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪರೀಕ್ಷೆಯೊಂದನ್ನು ವಿಶೇಷತಃ ಡಿಪ್ಯುಟಿ ಇನ್ಸ್‌ಪೆಕ್ಟರರು ಕೈಕೊಂಡು ಸರ್ಟಿಫಿಕೇಟು ಕೊಟ್ಟಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಯಾವದೊಂದು ಆತಂಕವಿಲ್ಲದೆ ಹೈಸ್ಕೂಲಲ್ಲಿ ಪ್ರವೇಶ ಸಿಗುವಂತಾಗಬೇಕು. ೩. ಸೆಕೆಂಡರಿ ಮತ್ತು ಶಾಲೇಬ್ರುಗಳಲ್ಲಿಯ ಅಧ್ಯಾಪಕರು ಲೋಕಲ್ ಬೋರ್ಡು ಸಂಸ್ಥೆಗಳ ಚುನಾವಣೆಗಳಲ್ಲಿ ಭಾಗವಹಿಸಲು ಮತ್ತು ಉಮೇದ್ವಾರರಾಗಿ ನಿಲ್ಲಲು ದೊರೆತ ಹುಕುಮು ಎಯಿಡೆಡ್ ಶಾಲೆಗಳಿಗೂ ಅನ್ವಯಿಸುವಂತಾಗಬೇಕು. ೪. ಲೋಕಲ್ ಬೋರ್ಡು ಹಾ ಎ ಶಾಲೆಗಳ ಕನ್ನಡ ಪಂಡಿತರಿಗೆ ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ಸನ್ನದು ದೊರೆತಂತೆ ಖಾಸಗಿ ಶಾಲಾ ವಿದ್ವಾನರಿಗೂ ಅದೇ ರೀತಿಯ ಸವಲತ್ತು ದೊರೆತು ತದ್ರೀತಿ ಗ್ರಾಂಟು ಲೆಕ್ಕಿಸುವಂತಾಗಬೇಕು. ೫. ನಾಲ್ಕು ಯಾ ಅಧಿಕ ಉಪಾಧ್ಯಾಯರಿರುವ ಪ್ರಾಥಮಿಕ ಶಾಲೆಗಳ ಹೆಡ್ಮಾಸ್ತರರು ವಿದ್ವಾನರಾಗಿದ್ದಲ್ಲಿ ಅಂತಹವರಿಗೂ ಇದೇ ರಿಯಾಯಿತಿ ದೊರೆಯತಕ್ಕದ್ದು. ೬. ಪ್ರತಿಯೋರ್ವ ಉಪಾಧ್ಯಾಯರಿಗೆ ಸರಾಸರಿ ೩೦ ದಿನಗಳ ಹಾಜರಿ ಮತ್ತು ವರ್ಷಾವಧಿ ಶಾಲಾ ದಿನಗಳು ೨೨೦ ಇವೆರಡೂ ಕಷ್ಟಸಾಧ್ಯವಾದುದರಿಂದ ಗ್ರಾಂಟು ಲೆಕ್ಕಿಸುವರೆ ಪ್ರತಿ ೩೫ ವಿದ್ಯಾರ್ಥಿಗಳ ಸರಾಸರಿ ಹಾಜರಿಯು ಇಬ್ಬರು ಅಧ್ಯಾಪಕರಿಗೆ ಅನ್ವಯಿಸುವಂತೆ ಕಾನೂನಿನಲ್ಲಿ ತಿದ್ದುಪಡಿಯಾಗಬೇಕು.

ಸಂಸ್ಕೃತ ಕಾಲೇಜು ವರ್ಧಂತಿ ಸಮಾರಂಭ:—ಶ್ರೀಮನ್ಮಧ್ವ ಸಿದ್ಧಾಂತ ಪ್ರಬೋಧಿನಿ ಮಹಾ ಪಾಠಶಾಲೆಯ ವರ್ಧಂತ್ಯುತ್ಸವವು ತಾ [illegible] ರಲ್ಲಿ ಪರ್ಯಾಯ ಅದಮಾರು ಮಠಾಧೀಶ ಶ್ರೀ ಶ್ರೀ ವಿಬುಧಪ್ರಿಯ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡು

ಕರ್ನಾಟಕ ಸಂಘ ಕಳೆದ ತಾ ೧೯ರಂದು ಇಲ್ಲಿನ ಬೋರ್ಡು ಹೈಸ್ಕೂಲಿನ ಕರ್ನಾಟಕ ಸಂಘದಲ್ಲಿ ದಿವಂಗತ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ ಕುರಿತು ಶೋಕ ಪ್ರದರ್ಶನ ಸಭೆಯೊಂದು ಸುರತ್ಕಲ್ ಶ್ರೀ [illegible] ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಉದ್ಯಾವರ ಭವಾನೀಶಂಕರರಾಯರು ಶ್ರೀಮಾನ್ ಮಹಾರಾಜರ ಕಾರ್ಯಕಲಾಪಗಳನ್ನು ವಿವರಿಸಿ ಭಾಷಣವಿತ್ತರು. [illegible] ಕೇಶವ ಭಟ್ಟರ ಧನ್ಯವಾದ ಸಮರ್ಪಣೆಗಳೊಂದಿಗೆ ಸಭೆಯು ಕೊನೆಗೊಂಡಿತು.

ನೋಟೀಸು
ಮಂಗಳೂರು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
S E P No 452 1940
(S C No 19/1940)

ಎ ಕಲ್ಯಾಣಿ ಶೆಡ್ತಿ ಎ ಬಾಬು ಶೆಟ್ಟಿ ಶೆಟ್ಟಿ ಹೆಂಡ್ತಿ ಮಂಗಳೂರು ಕಸಬಾ ವೈಕ ಅತ್ತಾವರದಲ್ಲಿರುವವಳು } ಡಿಕ್ರಿದಾರಳು ಅರ್ಜಿದಾರಳು

ಮತ್ತು

ಎಸ್ ನಾರಾಯಣ ದಾಸ್ ಟ್ರಾವೆಲಿಂಗ್ ಕಸಬಾ ಬಂಗರದ ಮಗ ಕ್ಲಾರ್ಕ, ಮಂಗಳೂರು ಕಸಬಾ ವೈಕ ಬಂದರ ಕಟ್ಟೆಯಲ್ಲಿರುವವ } ಪ್ರತಿವಾದಿ ಜಡ್ಜ್‌ಮೆಂಟ್ ಡೆಟರ್

ಜಡ್ಜ್‌ಮೆಂಟ್ ದೇಣೇದಾರನಾದ ಸದ್ರಿ ಯಸ್ ನಾರಾಯಣ ದಾಸ್‌ಗೆ-

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ಅರ್ಜಿದಾರಳು ಸದ್ರಿ ಅಮಲ್ಜಾರಿಯಲ್ಲಿ ಜಪ್ತಾದ ಚರಸೊತ್ತುಗಳ ವಿಕ್ರಯದ ಬಗ್ಗೆ ಅರ್ಜಿಹಾಕಿದ್ದಾಳೆ.

ಆದುದರಿಂದ ಸದ್ರಿ ಜಪ್ತಾದ ಸೊತ್ತುಗಳ ವಿಕ್ರಯದ ಇಸ್ತಿಹಾರದ ಶರತುಗಳನ್ನು ನಿರ್ಣಯಿಸಲಿಕ್ಕೆ 1940ನೇ ಇಸವಿ ಸಪ್ಟಂಬರ ತಿಂಗಳು 3ನೇ ತಾರೀಕು ನಿಶ್ಚಯಿಸಲಾಗಿಯದೆಂತ ನಿನಗೆ ಇದರಿಂದ ತಿಳಿಸಲಾಗಿಯದೆ.

Mangalore, 23-8-1940 }　　M. N. CHOUTA, Vakil for Petitioner

ಯುವಜನ ಸಂಘ

ಕಳೆದ ಸೋಮವಾರ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರು ಶ್ರೀ ಕೃಷ್ಣನ ವಿಷಯವಾಗಿ ಸೊಗಸಾದ ಭಾಷಣವೊಂದನ್ನು ಮಾಡಿದರು. ಶ್ರೀ ಬಿ ಎಸ್ ಕಕ್ಕಿಲ್ಲಾಯರು ಭಾಷಣಕರ್ತರಿಗೂ ಅಂದಿನ ಸಭಾಧ್ಯಕ್ಷರಿಗೂ ಸಂಘದ ಪರವಾಗಿ ಧನ್ಯವಾದಗಳನ್ನರ್ಪಿಸಿದರು.

ಕಾರ್ಕಳ

ಶ್ರೀ ಕೃಷ್ಣ ಜಯಂತಿ:—ಸ್ಥಳೀಯ ಆರ್ಯ ಸಮಾಜದಲ್ಲಿ ಶ್ರೀ ಕೃಷ್ಣ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಆ ಸಂಬಂಧ ಶ್ರೀ ವೆಂಕಟ್ರಮಣ [illegible] ಎಲಿಮೆಂಟರಿ ಶಾಲೆಯಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಸಾರ್ವಜನಿಕ ಸಭೆಯು ಕೂಡಿ ಶ್ರೀ [illegible] ಶ್ರೀ ಕೃಷ್ಣನ ಜನ್ಮ ಮತ್ತು ಅವನ ಮಹತ್ಕಾರ್ಯಗಳ ಕುರಿತು ಉಪಯೋಗವಾದ ಭಾಷಣವನ್ನು ಕೊಟ್ಟರು. ಶ್ರೀ ಕೇಶವ [illegible] ಶೆಣ್ಣೆಯವರು ಧನ್ಯವಾದ ಸಮರ್ಪಣೆ ಮಾಡಿದರು.

ಚುನಾವಣೆ. ಪಂಚಾಯತ [illegible] ಕೋರ್ಟಿನಲ್ಲಿ ಖಾಲಿಬಿದ್ದ ಒಂದು ಸ್ಥಾನಕ್ಕೆ ಶ್ರೀ [illegible] ಸಾರ್ವಜನಿಕ ವಿರೋಧವಿಲ್ಲದೆ [illegible] ಆರಿಸಲ್ಪಟ್ಟರು.



ಕಾಯಿಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು ಮುಟ್ಟುಕಟ್ಟು ಬಂಜೆತನ ಮುಂತಾದವು ಇರಲಿಲ್ಲ. ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು.

ಆದರೆ ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ. ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ. ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ'ಸೇವನೆ ಬಿಟ್ಟರೆ ಬೇರೆ ದಾರಿಯಿಲ್ಲ. ಗರ್ಭಾಶಯದ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸುವ ಮಾಡುವುದೆಂದರೆ,

' ಲೋಧ್ರ '

ಕೇಸರಿ ಕುಟೀರಂ
ರಾಯಪೇಟೆ :: ಮದರಾಸು
ಮಂಗಳೂರು ಪ್ರವರ್ತಕರು
ಪೊಪ್ಯುಲರ್ ಸ್ಟೋರ್ಸ್ ರಥಬೀದಿ

★ ಯುದ್ಧ ವಾರ್ತೆ

ಲಂಡನ್-ಬರ್ಲಿನ್‌ಗಳ ಮೇಲೆ ಧಾಳಿ!

ಪ್ರಚಂಡ ಹೋರಾಟವಾರಂಭವಾಗಿದೆ!

ಸೋಮಾಲಿಲೇಂಡು ಕೈಬಿಟ್ಟಿತು!

ಹಂಗೇರಿಯಾ ರುಮೇನಿಯಾ ಮಾತುಕತೆ

ಇಟಲಿ ಗ್ರೀಸು ಕಲಹವೆ?



ಈ ವಾರವೂ ಯೂರೋಪಿನಲ್ಲಿ ವಿಮಾನಗಳ ತುಮುಲಯುದ್ಧಗಳು ನಡೆದವು. ಜರ್ಮನರು ಫ್ರಾನ್ಸಿನಿಂದ ಹೊರಕ್ಕೆಸೆಯುವ ಫಿರಂಗಿಗಳನ್ನು ಹಿಡುತ್ತಿರುವರೆಂದು ತಿಳಿದಿದೆ. ಜರ್ಮನ್ ವೈಮಾನಿಕರು ಹಲವು ಸಲ ಲಂಡನಿಗೆ ಧಾಳಿಯಿಡಲು ಬಂದರು. ಹಲವು ಕಡೆ ಅಲ್ಪ ಸ್ವಲ್ಪ ಹಾನಿಗಳಾಗಿವೆಯೆಂದೂ ತಿಳಿದಿದೆ. ಹಾಗೆಯೇ ಬ್ರಿಟಿಷ್ ವೈಮಾನಿಕರೂ ಜರ್ಮನಿಗೆ ಧಾಳಿಯಿಟ್ಟರು. ಬರ್ಲಿನಿಗೆ ಬಾಂಬೆಸದಿರುವರಾಗಿಯೂ ಪ್ರಕಟವಾಗಿದೆ. ಹೀಗೆ ಬಲು ಹುಮ್ಮಸಿನಿಂದ ಇಂದು ರಣರಂಗಕ್ಕೆ ಇಳಿದು ಕಾದಾಡುತ್ತಿದ್ದಾರೆ. ಎರಡು ಕಡೆಗಳಲ್ಲಿಯೂ ಸಾಕಷ್ಟು ಹಾನಿಗಳು ಆಗಿವೆ. ಬ್ರಿಟಿಷ್ ಜರ್ಮನರಿಗೆ ಹ್ಯೊಕ್ಕೆಯಾಗಿದೆ.

ಡೋವರಿಗೆ ಬಾಂಬು ಬಿದ್ದಿದೆ

ಡೋವರಿನ ಮೇಲೆ ಜರ್ಮನರು ಅನೇಕ ಸಲ ಬಾಂಬುಗಳನ್ನೆಸೆದಿರುವರು. ಇದು ಫ್ರೆಂಚ್ ಕರಾವಳಿಯಿಂದ ಬಿಸ್ಕುಟ ಬಲು ದೂರಹೋಗುವ ಫಿರಂಗಿಗಳಿಂದ ಹೊಡೆದವುಗಳೆಂದು ತಿಳಿಯಲಾಗಿದೆ. ಕೆಲವು ಮನೆಗಳು; ಕೆಲವು ಜನರೂ ನಾಶವಾಗಿರುವರು. ವಾಲ್ಪದ ಮೇಲೆಯೂ ಶತ್ರು ವೈಮಾನಿಕರು ದಾಳಿ ನಡೆಸಿದರು.

ಸೋಮಾಲಿಲೇಂಡ್ ಖಾಲಿಯಾಗಿದೆ

ಬ್ರಿಟಿಷ್ ಸೋಮಾಲಿಲೇಂಡಿನಲ್ಲಿ ಯುದ್ಧವು ಕೊನೆಗೊಂಡಿದೆ. ಅದನ್ನು ಇಟಲಿಯು ಸ್ವಾಧೀನಪಡಿಸುವುದರಿಂದ ಅದಕ್ಕೆ ಹೆಚ್ಚಿನ ಪ್ರಯೋಜನವಿಲ್ಲವೆಂದು ಹೇಳಲಾಗಿದೆ.

ಬ್ರಿಟನಿನ ಮೇಲೆ ದಾಳಿ!

ಈ ವಾರ ಬ್ರಿಟನಿನ ಮೇಲೆ ಜರ್ಮನ್ ವಿಮಾನಗಳು ಪ್ರಚಂಡವಾಗಿ ಧಾಳಿ ನಡೆಸಿದವು. ಅದರಲ್ಲಿ ಹಲವು ವಿಮಾನಗಳನ್ನು ಬ್ರಿಟಿಷರು ನೆಲಕ್ಕುರುಳಿಸಿರುವರೆಂದು ಪ್ರಕಟಿಸಿರುತ್ತಾರೆ.

ಆಕಾಶದಲ್ಲಿ ಜರ್ಮನ್ ವಿಮಾನ ಮತ್ತು ಬ್ರಿಟಿಷ್ ವಿಮಾನಗಳಿಗೆ ಹಲವೆಡೆಗಳಲ್ಲಿ ಭಯಂಕರ ಹೋರಾಟವು ನಡೆಯಿತು. ಮೆಶಿನ್ ಗನ್ನುಗಳೂ ಉಪಯೋಗಿಸಲ್ಪಟ್ಟವು. ಶತ್ರು ವಿಮಾನಗಳು ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ ಸಮುದ್ರ ತೀರವಾಗಿ ಬಂದಿದ್ದವು. ಇವು ಮೂರು ತಂಡಗಳಾಗಿ ಬಂದುವೆಂದು ಅಧಿಕಾರೀ ಪ್ರಕಟಣೆಯು ತಿಳಿಸುತ್ತದೆ. ಕೆಂಟಿನಲ್ಲಿ ಕೆಲವು ಬಾಂಬುಗಳು ಬಿದ್ದಿವೆ. ಆಗ್ನೇಯ ಭಾಗದಲ್ಲಿ ಶತ್ರುಗಳು ಬಾಂಬುಹಾಕಿದಾಗ ಲಂಡನ್ ನಗರದಲ್ಲಿ ಎಚ್ಚರಿಕೆ ಕೊಡಲಾಯಿತು. ಕೆಲವು ಕಡೆ ಖಾಸಗಿ ಆಸ್ತಿ ಪಟಾರಗಳಿಗೆ ಹೆಚ್ಚು ನಷ್ಟವಾಗಿದೆಯೆಂದು ತಿಳಿದಿದೆ.

ಎರಡನೆಯ ಧಾಳಿ!

ಲಂಡನಿನ ಮೇಲೆ ಎರಡನೆಯ ದಾಳಿ ನಡೆಯಿತು. ಆ ಸ್ಫೋಟಗಳ ವಿಚಿತ್ರ ಶಬ್ದಗಳು ಭಯಂಕರವಾಗಿ ಕೇಳಿದವು. ಒಂದು ಗಾಲ್ಫ್ ಆಟದ ಬಯಲಿಗೆ ೧೭ ಬಾಂಬುಗಳು ಬಿದ್ದುವು. ಬೇರೆ ಬೇರೆ ಜಿಲ್ಲೆಗಳಿಗೂ ಬಾಂಬುಗಳು ಬಿದ್ದಿರುವ ವಾರ್ತೆ ಬಂದಿದೆ. ಈ ಧಾಳಿಯಲ್ಲಿ ಕಡಿಮೆಗೆ ೩೦೦ ವಿಮಾನಗಳು ಭಾಗವಹಿಸಿರಬಹುದೆಂದು ತಿಳಿದಿದೆ

ಹಂಗೇರಿಯಾ ರುಮೇನಿಯಾ ಮಾತುಕತೆ ಮುರಿಯಿತು!

ಹಂಗೇರಿಯಾ ರುಮೇನಿಯಾಗಳೊಳಗೆ ಇದ್ದ ವಿವಾದದ ಇತ್ಯರ್ಥದ ಸಲುವಾಗಿ ಮಾತುಕತೆ ತಾ. ೧೬ಕ್ಕೆ ಆರಂಭವಾಗಿತ್ತು. ಆದರೆ ಕೆಲ ದಿನಗಳ ಮಾತುಕತೆಯಿಂದ ಯಾವ ಇತ್ಯರ್ಥಕ್ಕೂ ಬಾರದೆ, ಕೊನೆಗೆ ಮಾತುಕತೆ ಮುರಿದು ಹೋಯಿತೆಂದು ತಿಳಿದಿದೆ

ಬ್ರಿಟನನ್ನು ನಿರ್ಬಂಧಿಸುವರಂತೆ!

ಜರ್ಮನ್ ಪ್ರಕಟಣೆ

ಇಂಗ್ಲೆಂಡನ್ನು ಪೂರ್ಣ ಪ್ರತಿಬಂಧಿಸಿ ಅಲ್ಲಿಗೆ ಇತರ ದೇಶಗಳ ಸಂಬಂಧವನ್ನು ತಪ್ಪಿಸಿ ಬಿಡುವರತೆ ನಾವು ಕಾರ್ಯಗಳನ್ನು ಕೈಕೊಳ್ಳುವೆವೆಂದು ಜರ್ಮನ್ ಪ್ರಕಟಣೆಯೊಂದು ಸಾರುತ್ತದೆ. ಇಂಗ್ಲೆಂಡು ಸಮುದ್ರ ಯುದ್ಧದಲ್ಲಿ ನೀತಿಯನ್ನು ತಪ್ಪಿ ನಡೆದುದರ ಪ್ರತೀಕಾರವಾಗಿ ಹೀಗೆ ಮಾಡಲಾಗುವುದಂತೆ.

ಇಂಗ್ಲೆಂಡಿನ ಹಡಗುಗಳ ಓಡಾಟ ತಪ್ಪಿಸುವುದು; ತಟಸ್ಥ ರಾಷ್ಟ್ರಗಳ ಹಡಗಗಳಿಗೆ ಅಪಾಯದ ಎಚ್ಚರ ಕೊಡುವುದು ಬ್ರಿಟನಿನ ಸುತ್ತ ಸಮುದ್ರದಲ್ಲಿ ಕೋಟೆಗಳನ್ನು ಹಾಕುವುದು, ಮತ್ತು ಹಡಗುಗಳ ಮೇಲೆ ವಿಮಾನ ದಾಳಿ ಮಾಡುವುದು ಇವೇ ನಿರ್ಬಂಧದ ದಾರಿಗಳಂತೆ!

ಈ ಕುರಿತು ಬ್ರಿಟನಿನಲ್ಲಿ ಊಹಾಪೋಹಗಳು ಹುಟ್ಟಿವೆ! ಹಾಗೆ ನಿರ್ಬಂಧಿಸುವುದು ಜರ್ಮನಿಗೆ ಸಾಧ್ಯವಿಲ್ಲವೆಂದು ಬ್ರಿಟನಿನ ಜನರು ದೃಢ ನಿಶ್ಚಯದಿಂದ ಇರುವರಂತೆ!

ಸೋಮಾಲಿಲೇಂಡಿನ ಪರಿಸ್ಥಿತಿ ಕೊನೆಗೊಂಡಿತು!

ಇಟಲಿಯವರು ಸೋಮಾಲಿಲೇಂಡಿನಲ್ಲಿ ಮುಂದೊತ್ತಿದರು. ಇದನ್ನು ಯಶಸ್ವಿಯಾಗಿ ಜನನಿವಾಸರಹಿತವಾಗಿ ಮಾಡಲಾಗಿದೆಯೆಂದು ಯುದ್ಧ ಕಚೇರಿಯ ವಾರ್ತೆ. ಏಡನಿಗೆ ಎಲ್ಲರೂ ಪರಾಜಿತರಾಗಿ ಹೋಗಿರುವರಂತೆ, ಅಂತೂ ಬ್ರಿಟಿಷ ಸೋಮಾಲಿಲೇಂಡಿನ ಅವಸ್ಥೆ ತೀರಿದಂತೆಯೇ. ಆದರೆ ಬ್ರಿಟಿಷರಿಗೆ ನಷ್ಟವಾಗಲಿಲ್ಲವಂತೆ!

ಜಿಬ್ರಾಲ್ಟರಿಗೆ ಬಾಂಬು

ಶತ್ರು ವಿಮಾನಗಳು ಜಿಬ್ರಾಲ್ಟರಿಗೆ ಬಾಂಬುಗಳನ್ನೆಸೆದವೆಂದೂ ಅವುಗಳು ಹೆಚ್ಚಾಗಿ ನೀರಿಗೆ ಬಿದ್ದುವೆಂದೂ ಸುದ್ದಿ.

ಇಟಲಿ ಗ್ರೀಸು ಕಲಹ

ಕೆಲ ಸಮಯದಿಂದ ಇಟಲಿ-ಗ್ರೀಸುಗಳೊಳಗೆ ವಿವಾದವೆದ್ದಿದೆ. ಗ್ರೀಸು ಬ್ರಿಟನಿನ ಸಹಾಯ ಸಂಬಂಧ ಬಿಡಬೇಕೆಂದು ಇಟಲಿ ಒತ್ತಾಯ. ಕರ್ಫುವನ್ನು ಬಿಟ್ಟುಕೊಡಬೇಕೆಂದು ಇಟಲಿ ಗ್ರೀಸಿನೊಡನೆ ಕೇಳಿದೆಯೆಂದೂ ವಾರ್ತೆ.

ಬ್ರಿಟಿಷ್ ಮಂತ್ರಿಮಂಡಳದ ಬದಲಾವಣೆ?

ಬ್ರಿಟಿಷ್ ಮಂತ್ರಿಮಂಡಳದಲ್ಲಿ ಬದಲಾವಣೆಯಾಗಬೇಕೆಂಬ ಸೂಚನೆಯು ಬಂದಿದೆಯಾಗಿ ತಿಳಿದುಬರುತ್ತದೆ.

ದಕ್ಷಿಣ ಡೊಬ್ರುಜಾ

ಬಾಲ್ಕನಿನಲ್ಲಿ ದಕ್ಷಿಣ ಡೊಬ್ರುಜಾ ಪ್ರದೇಶವನ್ನು ರುಮೇನಿಯವು ಬಲ್ಗೇರಿಯಕ್ಕೆ ಬಿಟ್ಟುಕೊಟ್ಟಿತು.



ಬ್ರಿಟಿಷ್ ನೌಕಾ ಸೈನ್ಯದವರಿಂದ ರಕ್ಷಿತವಾಗಿರುವ ವ್ಯಾಪಾರ ಹಡಗೊಂದು ಉತ್ತರ ಸಾಗರದಲ್ಲಿ ಅಪಾಯ ಭಯವಿಲ್ಲದೆ ತೇಲಾಡುತ್ತದೆ

ಬ್ರಿಟನಿಗೆ ಅಮೇರಿಕದಿಂದ ಆಯುಧಗಳು

ಜುಲಾಯಿ ತಿಂಗಳಲ್ಲಿ ಅಮೇರಿಕದಿಂದ ಬ್ರಿಟನಿಗೆ ೨೪ ಮಿಲಿಯ ಡಾಲರುಗಳ ಬೆಲೆಯ ಆಯುಧ ಸಾಮಾಗ್ರಿಗಳು ಕಳುಹಿಸಲಾಗಿದೆಯಂತೆ.

ಈಜಿಪ್ಟಿನ ಮೇಲೆ ಇಟಲಿ ದಾಳಿಯೆ?

ಈಜಿಪ್ಟಿನ ಪ್ರಧಾನರಾದ ಹಸನ್ ಸಾಬ್ರಿ ಪಾಶಾರವರು ತಮ್ಮೊಂದು ಹೇಳಿಕೆಯಲ್ಲಿ ಇಟಲಿಯು ಈಜಿಪ್ಟನ್ನು ಆಕ್ರಮಿಸಿದರೆ ತಾವು ಸರ್ವಶಕ್ತಿಯಿಂದ ಎದುರಾಡುವೆವೆಂದು ಸಾರಿರುವರು. ಇಟಲಿಯು ಆಕ್ರಮಿಸುವ ಸಿದ್ಧತೆಯಲಿದೆಯೆ?

ಕೆನಡಾ ಅಮೇರಿಕಾ ಸಂಬಂಧ

ಇವುಗಳ ಸಂಯುಕ್ತ ರಕ್ಷಣಾ ಧೋರಣೆಯನ್ನನುಸರಿಸಿ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರೂ, ಕೆನಡದ ಮುಖ್ಯಮಂತ್ರಿ ಮ್ಯಾಕೆಂಜಿಯವರೂ ಒಂದು ಮಾತುಕತೆ ನಡೆಸಿ ಒಂದು ಸಮಿತಿಯನ್ನೇರ್ಪಡಿಸಿರುವರು.

ಆಕಾಶದಿಂದ ಅಗ್ನಿ ವರ್ಷ

ಇಂದು ಜರ್ಮನರೂ ಬ್ರಿಟಿಷರೂ ಆಕಾಶಗಳಿಂದ ಬಾಂಬಿನ ಅಗ್ನಿ ವರ್ಷವನ್ನೇ ಸುರಿಸುತ್ತಿರೆನ್ನಬೇಕು. ಫಿರಂಗಿಗಳ ಹೊಡೆತದಿಂದ ಜನರು ಎಲ್ಲೆಲ್ಲೂ ಭಯಕಂಪಿತರಾಗಿರುವರು.

ಭಾರತದ ರಾಜಕೀಯದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ ಮತ್ತು ರಾಜಾಜಿಯವರು ಎಮೆರಿಯವರಿಗೆ ಕೊಟ್ಟ ಸಲಹೆಗಳ ವಿಚಾರವು ಹೆಚ್ಚು ಪ್ರಧಾನವಾಗಿದೆ. (ಅದರ ವಿವರವನ್ನು ಬೇರೆ ಕಡೆ ಕೊಟ್ಟಿದೆ). ವೈಸರಾಯರ ಮತ್ತು ಭಾರತ ಸಚಿವರ ಹೇಳಿಕೆಗಳು ಕಾಂಗ್ರೆಸಿಗೆ ಸಮ್ಮತಿಯಿಲ್ಲವೆಂದು ವರ್ಕಿಂಗ್ ಕಮಿಟಿ ಸಾರಿದ್ದು ಮಾತ್ರವಲ್ಲದೆ, ವೈಸರಾಯರ ಹೇಳಿಕೆಯನ್ನು ಸಾರ್ವತ್ರಿಕವಾಗಿ ಖಂಡಿಸುವ ನಿರ್ಣಯವನ್ನೂ ಮಾಡಿದೆ. ಸ್ವಯಂಸೇವಕ ದಳದ ವಿಚಾರ, ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಕಾಂಗ್ರೆಸ್ ಕೆಲಸಗಾರರ



ಅಲ್ಪಸಂಖ್ಯಾಕ ಸಮಸ್ಯೆಯನ್ನು :: :: ರಾಜಾಜಿ ಪರಿಹರಿಸುತ್ತಾರೆ!

ಮುಸ್ಲಿಂ ಲೀಗು ಮಂತ್ರಿಮಂಡಳ!

ಭಾರತ ಸಚಿವರಿಗೆ ಉತ್ತರ! ಸಂಧಿಯ ದ್ವಾರವು ಮುಚ್ಚಿಲ್ಲ!

ಮುಖಂಡರ ಗೂಢಾಲೋಚನೆ!

ಬಂಧನದ ವಿಚಾರವಾಗಿಯೂ ನಿರ್ಣಯಗಳಾಗಿವೆ ಕಾಂಗ್ರೆಸು, ಸ್ವಾತಂತ್ರ್ಯ ನಿರ್ಣಯವಾಗದೆ, ಅದರ ಸೂಚನೆಯಾಗಿ ರಾಷ್ಟ್ರೀಯ ಸರಕಾರದ ರಚನೆಯಾಗದೆ ಬ್ರಿಟನಿನ ಯುದ್ಧದಲ್ಲಿ ಸಹಕರಿಸುವುದಿಲ್ಲವಾಗಿ ತಿಳಿಯಬಹುದಾಗಿದೆ.

ರಾಜಾಜಿಯವರ ಸಲಹೆ!

ಈ ಸಂದರ್ಭದಲ್ಲಿ ರಾಜಾಜಿಯವರು ಗಂಭೀರವಾದೊಂದು ಸಲಹೆಯನ್ನು ಎಮೆರಿಯವರಿಗೆ ಕಳುಹಿಸಿರುವರು ಎಮೆರಿಯವರು ಅಲ್ಪಸಂಖ್ಯಾಕರ ಆತಂಕವನ್ನು ತರುವದು ಬೇಡವೆಂದೂ, ಸರಕಾರದಲ್ಲಿ ಪ್ರಧಾನ ಮಂತ್ರಿಯನ್ನು ಮುಸ್ಲಿಂ ಲೀಗೇ ಹೊಂದಿ ಮಂತ್ರಿಮಂಡಳ ರಚಿಸಲು ಕಾಂಗ್ರೆಸು ಒಪ್ಪುವುದೆಂದೂ ಅವರು ಹೇಳಿದ್ದಾರೆ ಈ ಗಂಭೀರವಾದ ಸೂಚನೆಯು ಕುರಿತು ಸರ್ವರ ದೃಷ್ಟಿ ಹರಿದಿದೆ. ಬ್ರಿಟನಿನ ರಾಜನೀತಿಜ್ಞರು ಏನು ಮಾಡಲಿರುವರೋ ನೋಡಬೇಕಾಗಿದೆ.

ಎ. ಐ. ಸಿ. ಸಿ. ಸಭೆ

ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳನ್ನು ಕಾಂಗ್ರೆಸು ಆಲೋಚಿಸಬೇಕಾಗಿದೆ. ಆದ ಕಾರಣ ಎ ಐ ಸಿ ಸಿ. (ಅಖಿಲ ಭಾರತ ಕಾಂಗ್ರೆಸ್ ಕಮಿಟಿ)ಯ ಸಭೆಯನ್ನು ಬರುವ ತಿಂಗಳ ೧೫ಕ್ಕೆ ಕರೆಯಲಿರುವರೆಂದು ತಿಳಿದಿದೆ

ಕಲಹವನ್ನು ಎಬ್ಬಿಸುತ್ತದೆ

ನ್ಯೂ ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸು ಕೆಲಸಗಾರರ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಶ್ರೀ ಆಸಾಫ್ ಅಲ್ಲಿಯವರು ಕಾಂಗ್ರೆಸಿನ ನಿರ್ಣಯವನ್ನು ವಿವರಿಸಿ, ಸರಕಾರವು ಕಾಂಗ್ರೆಸಿನ ಸೂಚನೆಗಳಿಗೆ ಕಿವಿಗೊಡದೆ ಕಲಹವನ್ನು ಎಬ್ಬಿಸುತ್ತದೆ, ಆದಕಾರಣ ಮುಂದಿನ ಹೋರಾಟಕ್ಕೆ ಸರ್ವರೂ ಸಿದ್ಧರಾಗಿರಬೇಕೆಂದರು

ಗಾಂಧಿ-ಗಾಂಧಿಗಳ ಭೇಟಿ

ಸುಭಾಷ್ [illegible] ಗಾಂಧಿಜಿಯವರ [illegible] ನಾಡಿನ ಗಾಂಧಿಯವರನ್ನು ವಧಾ೯ಕ್ಕೆ ಬರಬೇಕಾಗಿ ತಂತಿ ಮೂಲಕ ಆಮಂತ್ರಿಸುವರು. ಈ ಆಮಂತ್ರಣದಲ್ಲಿ ವಿಶೇಷವಿದೆಯೆಂದು ತಿಳಿಯಲಾಗಿದೆ

ಮುಖಂಡರ ಗೂಢಾಲೋಚನೆ

ಕಾಂಗ್ರೆಸು ಮುಖಂಡರು, ಅಜಾದ್, ನೆಹರು, ಸರೋಜಿನಿ, ಸಯ್ಯದ್ ಮಹಮ್ಮದ್, ರಾಜೇಂದ್ರ ಬಾಬು, ಬಜಾಜ್ ಪಟೇಲ್ ಇವರು ವಧಾ೯ದಲ್ಲಿ ಆರು ತಾಸುಗಳ ತನಕ ಮಾತುಕತೆ ನಡೆಸಿದರು ಇದು ಯಾವ ವಿಷಯ ಮಾತನಾಡಿದರೆಂದು ಗುಪ್ತವಾಗಿರಿಸಲಾಗಿದೆ

ವಧಾ೯ನಿರ್ಣಯವನ್ನು ಸ್ವಾಗತಿಸಿದರು

ಮದ್ರಾಸು ಶಾಸನಸಭೆಯ ಸದಸ್ಯರು

ಮದ್ರಾಸು ಶಾಸನ ಸಭೆಯ ಕಾಂಗ್ರೆಸು ಪಕ್ಷದ ಸದಸ್ಯರು ತಾ ೨೬ರಂದು ಮದ್ರಾಸಿನಲ್ಲಿ ಒಂದು ಸಭೆ ಸೇರಿ ವಧಾ೯ದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯವನ್ನು ಸ್ವಾಗತಿಸಿದರು

ಈ ಸಭೆಗೆ ಇತರ ಪಕ್ಷದ ಸದಸ್ಯರೂ ಆಹ್ವಾನಿತರಾಗಿದ್ದರು.

ಆಣೆ-ವೈಸರಾಯ್ ಭೇಟಿ

ವೈಸರಾಯರು ಶ್ರೀ ಎಂ ಎಸ್ ಆಣೆಯವರನ್ನು ಆಮಂತ್ರಿಸಿದರು ಅವರೊಳಗೆ ಮಾತ ಕತೆ ನಡೆದಿದೆ ವಿಸ್ತಾರಿಸುವ ವೈಸರಾಯ ಕೌನ್ಸಿಲಿನಲ್ಲಿ ಆಣೆಯವರು ಅಧಿಕಾರ ವಹಿಸಲು ಒಪ್ಪಿಕಿರುವರೆಂದು ಸುದ್ದಿ

ಬ್ರಿಟನಿಗೆ ಅಧಿಕಾರ ಬಿಡಲು ಮನಸ್ಸಿಲ್ಲ

ನೆಹರುಗಳ ಧಿರೋಕ್ತಿ

ಬೊಂಬಾಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಭಾಷಣ ಕೊಡುತ್ತಾ ನೆಹರುಗಳು ಭಾರತದ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸು ತನಗೆ ಅಧಿಕಾರಬೇಕೆಂದು ಕೇಳಿಲ್ಲ ಬ್ರಿಟನು ಜನತೆಯ ಕೈಯಲ್ಲಿ ಅಧಿಕಾರ ಕೊಡಲಿ, ಅವರು ತಮಗೆ ಬೇಕಾದದನ್ನು ಆರಿಸಲಿ, ಆದರೆ ಬ್ರಿಟನಿಗೆ ತನ್ನ ಹಿಡಿತವನ್ನು ಬಿಡಲು ಮನಸ್ಸಿಲ್ಲವೆಂದರು. ಇದ ಭಾರತೀಯ ಗೌರವಕ್ಕೆ ಕೊರತೆಯೆಂದರ

ಪ್ರೇಮಕಲೆಯು ಅಶ್ಲೀಲ ಪುಸ್ತಕವಲ್ಲ

ಖಟ್ಲೆಯ ತೀರ್ಪು

ಧಾರವಾಡ,

ಕಳೆದ ತಾ ೨೩ನೇ ಮಧ್ಯಾಹ್ನ ೩॥ ಗಂಟೆಗೆ ಇಲ್ಲಿಯ ಓನರರಿ ಮ್ಯಾಜಿಸ್ಟ್ರೇಟರಾದ ಶ್ರೀ॥ ಬೈಂದೂರರವರು ಪ್ರೇಮಕಲಾ ಪುಸ್ತಕ ಮೇಲಿನ ಖಟ್ಲೆಯ ತೀರ್ಪನ್ನು ಓದಿತೋರಿಸಿ ಇದರ ಲೇಖಕರಾದ ಡಾ ಗೋಪಾಲಕೃಷ್ಣ ರಾವ್ ಪ್ರಕಾಶಕರಾದ ಶ್ರೀ ಭಾಲಚಂದ್ರ ಘಾಣೆಕರ ಸಂಪಾದಕ ಸಮಾಜ, ಮುದ್ರಕರಾದ ಶ್ರೀ ವ್ಹಿ. ಎಮ್ ಜೋಶಿ ಜಾಹಿರಾತು ಮಾಡಿದ ಶ್ರೀ ಸಿ ವ್ಹಿ ಹುರೀಮಠ ಸಂಪಾದಕ ಕರ್ನಾಟಕ ಬಂಧು ಈ ನಾಲ್ಕು ಆರೋಪಿಗಳು ನಿರ್ದೋಷಿಗಳೆಂದೂ, ಜಪ್ತು ಮಾಡಿದ ಇವರ ಪುಸ್ತಕ ಬ್ಲಾಕ್ ಮೊದಲಾದ ಎಲ್ಲಾ ಸಾಹಿತ್ಯಗಳನ್ನು ಕೊಡಲಾಗುವದೆಂದೂ ಹೇಳಿದರು

ಈ ಖಟ್ಲೆಯು ಕಳೆದ ಹನ್ನೊಂದು ತಿಂಗಳಿಂದ ನಡೆದಿದ್ದು ಕನ್ನಡದ ಕೆಲವು ಹಿರಿಯ ಸಾಹಿತಿಗಳು ಆರೋಪಿತರ ಪರವಾಗಿ ಸಾಕ್ಷಿಕೊಟ್ಟಿದ್ದರಿಂದ ತೀರ್ಪನ್ನು ಕೇಳಲು ಅನೇಕರು ಉತ್ಸುಕರಾಗಿದ್ದರು. ಈ ಸಲ ಕನ್ನಡ ಸಾಹಿತ್ಯ ಸಮ್ಮೇಲನಾಧ್ಯಕ್ಷರಾದ ಶ್ರೀ. ಮುದವೀಡು ಕೃಷ್ಣರಾಯರು, ಕರ್ನಾಟಕ ಕಾಲೇಜಿನ ಕನ್ನಡ ಪ್ರೊಫೆಸರರಾದ ಶ್ರೀ ಎಸ್. ಎಸ್ ಮಾಳವಾಡರವರು, ನಾಟ್ಯ ಸಮ್ಮೇಲನಾಧ್ಯಕ್ಷರಾದ ಶ್ರೀ ಆರ್ ವ್ಹಿ ಜಹಗೀರದಾರರು, ಜಯಂತಿ ಮಾಸಪತ್ರಿಕೆಯ ಸಂಪಾದಕ ಕವಿಭೂಷಣ ಶ್ರೀ ಕೃಷ್ಣಶರ್ಮಾ ಬೆಟಗೇರಿಯವರ , ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಡಾ ಕಮಲಾಪೂರ ಕಾಂತರಾಯರು ಇವರೇ ಮೊದಲಾದವರು ಏಕಕಂಠದಿಂದ ಈ ಪುಸ್ತಕವು ನವದಂಪತಿಗಳಿಗೆ ಅತ್ಯಂತ ಉಪಯುಕ್ತವಾಗಿದೆಯೆಂದೂ, ಶಾಸ್ತ್ರೀಯವಾದ ಪುಸ್ತಕವೆಂದೂ ಗಂಭೀರ ಭಾಷೆಯಲ್ಲಿ ಬರೆಯಲ್ಪಟ್ಟಿದೆಯೆಂದೂ, ಚಿಕ್ಕ ಮಕ್ಕಳ ಮೇಲೆ ಕೆಟ್ಟ ಪರಿಣಾಮವನ್ನು ಮಾಡುವ ಯಾವ ಸಂಗತಿಯೂ ಇದರಲ್ಲಿಲ್ಲವೆಂದೂ, ತಮ್ಮ ಸಾಕ್ಷಿಯಲ್ಲಿ ಹೇಳಿದರು.

ಕನ್ನಡ ಪುಸ್ತಕದ ಮೇಲಿನ ಖಟ್ಲೆಯು ಇದೇ ಮೊಟ್ಟಮೊದಲಿನದಾಗಿದ್ದರಿಂದ ಓನರರಿ ಮ್ಯಾಜಿಸ್ಟ್ರೇಟರಾದ ಶ್ರೀ. ಬೈಂದೂರರವರು ಮೊದಲಿನಿಂದ ಕುದಿಯುವರೆಗೂ ಒಳ್ಳೇ ನ್ಯಾಯ ದೃಷ್ಟಿಯಿಂದ ಎರಡೂ ಪಕ್ಷದವರ ವಾದವಿವಾದಗಳನ್ನು ನೋಡುತ್ತಲಿದ್ದರು. ಇವರು ಕೊಟ್ಟ ತೀರ್ಪು ೨೨ ಪುಟದಷ್ಟು ದೊಡ್ಡದಾಗಿದೆ.

ಮಂಗಳೂರು

ಸೌತ್ ಕೆನರಾ ಪ್ರೆಸ್ಸ್ ವರ್ಕರ್ಸ್ ಯೂನಿಯನ್

ಇದರ ಮೂರನೆಯ ವರ್ಷದ ಮಹಾಸಭೆಯು ಶ್ರೀ ಪಿ ಲೋಬೋ ಇವರ ಅಧ್ಯಕ್ಷತೆಯಿಂದ ತಾ ೧೮ರಂದು ಜರುಗಿತು. ವರ್ಷದ ವರದಿ ಮತ್ತು ಆಯವ್ಯಯಗಳು ಮಂಜೂರಾದುವು ಮುಂದಿನ ವರ್ಷದ ಅಧಿಕಾರಿಗಳಾಗಿ ಕೆಳಗಿನವರನ್ನು ಆರಿಸಲಾಯಿತು. ಯೂನಿಯನಿನ ಅಧ್ಯಕ್ಷರ ಆರುವಿಕೆಯನ್ನು ಮುಂದಿನ ಆಡಳಿತೆ ಕಮಿಟಿಗೆ ಕೊಡಲಾಯಿತು ಉಪಾಧ್ಯಕ್ಷ ಶ್ರೀ ಬಿ ಲೋಬೊ, ಕಾರ್ಯದರ್ಶಿ ಶ್ರೀ. ಬಿ. ನಾರಾಯಣ ಶೆಟ್ಟಿ, ಜತೆಕಾರ್ಯದರ್ಶಿ ಶ್ರೀ. ಬಿ. ನಾರಾಯಣ ಶಿರಿಯಾನ್, ಕೋಶಾಧಿಕಾರಿ ಶ್ರೀ. ಕೆ ಐತಪ್ಪ ಶೆಟ್ಟಿ. ಎಸ್ ಎಂ ಎಸ್. ನೇಯಿಗೆ ಕಾರ್ಖಾನೆಯಲ್ಲಿ ಮುಷ್ಕರ ಹೂಡಿದ ಕೆಲಸಗಾರರಲ್ಲಿ ಸಹಾನುಭೂತಿ ವ್ಯಕ್ತಪಡಿಸುವ ಕೆಲಸಗಾರರ ಹಾಗೂ ಸ್ತ್ರೀಯರ ಮೇಲೆ ಪ್ರಯೋಗಿಸಿದ ಲಾಠಿ ಚಾರ್ಜನ್ನು ಖಂಡಿಸುವ ಮತ್ತು ಮಜೂರರ ಹೇಳಿಕೆಗಳನ್ನು ಮನ್ನಿಸಬೇಕೆಂಬ ಠರಾವು ಮಾಡಲಾಯಿತು

ಪೆರಡಾಲ

ಶ್ರೀ ಕೃಷ್ಣ ಜಯಂತಿಯು ಇಲ್ಲಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಮನಾರ ಹೈಸ್ಕೂಲಿನ ಪಂಡಿತರಾದ ವಿದ್ವಾನ್ ಶ್ರೀ ಟಿ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಗೀತಾ ಪಾರಾಯಣ, ಸಂಸ್ಕೃತ ಕನ್ನಡ ಪುರಾಣ ವಾಚನ, ಕಥಾರಚನೆ ಸಂಗೀತ, ಭಾಷಣ, ಕವಿತಾರಚನೆ, ಸಮಸ್ಯಾಪೂರಣ ಇತ್ಯಾದಿ ಸ್ಪರ್ಧೆಗಳನ್ನೇರ್ಪಡಿಸಿದ್ದು ಅವುಗಳಲ್ಲಿ ಗೆದ್ದವರಿಗೆ ಬಹುಮಾನಗಳು ಕೊಡಲ್ಪಟ್ಟುವು ರಾತ್ರಿ ವಿದ್ಯಾರ್ಥಿಗಳಿಂದ [illegible] ಅಭಿಮನ್ಯು ನಾಟಕವು ಅಭಿನಯಿಸಲ್ಪಟ್ಟಿತು.

ಇಲ್ಲಿನ ಬೋರ್ಡು ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿಯೂ ಶ್ರೀ ಕೃಷ್ಣ ಜಯಂತ್ಯುತ್ಸವವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ಅಂದವಾದ ಮುದ್ರಣಕ್ಕೆ,
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ.

ಮೆಕಾಲೆಯ ಮಾತು ನಗೆಗೇಡಾಗುತ್ತಿದೆ!

ಮಾತು ಬೇರೆ; ಕೃತಿ ಬೇರೆಯೆ?

ನೇಶನಲ್ ಹೆರಾಲ್ಡಿನ ಟೀಕೆ

ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ ಭಾರತೀಯರು ಇಂಗ್ಲಿಷ್ ಕ್ರಮದ ಸರಕಾರವನ್ನು ಕೇಳುವ ದಿನವು ಬ್ರಿಟಿಷರ ಇತಿಹಾಸದಲ್ಲಿ ಅವರ ಹೆಮ್ಮೆಯ ದಿನವಾಗಿ ಉಳಿಯುವುದೆಂದು ಲೋರ್ಡ್ ಮೆಕಾಲೆಯವರು ಅಂದಿದ್ದಾಗ, ಅವರು ನಾಳೆಗೆ ಕಚ್ಚಿ ಮಾತಾಡಿದ್ದಿರಬೇಕು. ಆದರೆ ಈಗ ಬ್ರಿಟಿಷ್ ಸರಕಾರದ ಧೋರಣೆಯನ್ನು ವಿವರಿಸಿ, ಮಾತನಾಡುವ ಪ್ರತಿಯೊಂದು ಬಾರಿಯೂ ಅವರು ಹೆಚ್ಚೆಚ್ಚು ನಗೆಗೇಡಾಗಿದ್ದಾರೆ ಎಂದು ಎಮರಿಯವರ ಪಾರ್ಲಿಮೆಂಟರಿ ಭಾಷಣದ ಕುರಿತು ನೇಶನಲ್ ಹೆರಾಲ್ಡ್ ಪತ್ರಿಕೆಯು ಬರೆಯುತ್ತದೆ.

"ಎಮರಿಯವರು ಬ್ರಿಟಿಷ್ ಸರಕಾರದ ನೀತಿ ಧೋರಣೆಗಳನ್ನು ವಿವರಿಸಲಿಕ್ಕೆ ಹೇಗೆ ಹೇಗೆ ಪ್ರಯತ್ನಿಸುತ್ತ ಹೋಗುತ್ತಿದ್ದಾರೋ ಹಾಗೆ ಹಾಗೆ ಬ್ರಿಟಿಷ್ ಸರಕಾರದ ನಿಜ ಸ್ವರೂಪವು ಅದಷ್ಟು ಸ್ಪಷ್ಟವಾಗಿ ನಮ್ಮ ಮುಂದೆ ಬರುತ್ತದೆ. ಅವರ ಭಾಷಣಗಳಲ್ಲಿ ನ್ಯಾಯ ನೀತಿಗೆ ತಣಿಯದ ಬ್ರಿಟಿಷ್ ಸಾಮ್ರಾಜ್ಯ ತೃಷ್ಣೆ ಮತ್ತು ನ್ಯಾಯನೀತಿಗಳ ಮೇಲೆ ಬೇಸ ನಡೆಯಲಿಚ್ಛಿಸುವ ಭಾರತೀಯ ರಾಷ್ಟ್ರೀಯತೆಯೊಳಗಾಗುತ್ತಿರುವ ಸಂಘರ್ಷವು ಚೆನ್ನಾಗಿ ಚಿತ್ರಿತವಾಗುತ್ತವೆ.

"ಕೊನ್ಸ್ಟಿಟ್ಯೂಯೆಂಟ ಎಸೆಂಬ್ಲಿಯೆಂಬ ಜನತೆಯಿಂದ ಚುನಾಯಿತವಾದ ಘಟನಾ ಸಮಿತಿಯಲ್ಲಿ ಭಾರತದ ರಾಜ್ಯ ಘಟನೆಯು ಸಿದ್ಧವಾಗಬೇಕೆಂದು ಕಾಂಗ್ರೆಸು, ಅರ್ಥಾತ್ ಭಾರತವು ಕೇಳುತ್ತಿರುವಾಗ, ಭಿನ್ನ ಭಿನ್ನ ಶಕ್ತಿಗಳು ಎಂದೂ ಒಂದಾಗಿ ಕೆಲಸ ಮಾಡಲಾಗದಂಥ ಒಂದು ರಾಜ್ಯ ವ್ಯವಸ್ಥೆ ಕಡೆಗೆ ಎಮರಿಯವರು ಬೆರಳು ನೀಡಿದ್ದಾರೆ. ಭಾರತವು ರಾಷ್ಟ್ರೀಯ ಸರಕಾರವನ್ನು ಅಪೇಕ್ಷಿಸಿರುವದಾದರೆ, ಎಮರಿಯವರು ಮುಖಂಡರೆನ್ನಿಸಿಕೊಳ್ಳುವ ಕೆಲವು ಮಂದಿಯನ್ನು ಅಧಿಕಾರ ಸ್ಥಾನಕ್ಕೇರಿಸುವ ಎಗ್ಸಿಕ್ಯೂಟಿವ್ ಕೌನ್ಸಿಲನ್ನು ತೋರಿಸಿ ಕೊಡುತ್ತಾರೆ. ಇಂಡಿಯವು ತನ್ನ ರಕ್ಷಣೆಯ ಏರ್ಪಾಡನ್ನು ತಾನೇ ಮಾಡಿಕೊಳ್ಳುವ ಸ್ವಾತಂತ್ರ್ಯವು ತನಗಿರಬೇಕೆಂದು ಹೇಳುತ್ತಿದ್ದಾದರೆ, ಭಾರತದ ಸರ್ವಸೇನಾಧಿಪತಿಗಳು ಹೇಳುವ ವ್ಯವಸ್ಥೆಗೆ ನೀವು ಒಪ್ಪಿರಿ ಎಂದು ಅಮೇರಿಯವರು ಅನ್ನುತ್ತಾರೆ. ಎಮರಿಯವರು ಹೆಚ್ಚೆಚ್ಚು ಮಾತನಾಡಿದಂತೆ, ಅವರು ಭಾರತವನ್ನು ಅನಿಶ್ಚಿತ ಕಾಲದ ತನಕ ಸ್ವತಂತ್ರವಾಗಿ ಆಳುವ ದೃಢ ನಿರ್ಧಾರ ಮಾಡಿರುವುದು ಗೊತ್ತಾಗುತ್ತದೆಯೋ ಹೊರತು ಮತ್ತೇನಿಲ್ಲ.

"ಹೀಗೆ ಕಾಂಗ್ರೆಸಿನ ಕೇಳಿಕೆಗಳನ್ನು ಸಂಪೂರ್ಣವಾಗಿ ನಿರಾಕರಿಸಿ, ಅಲ್ಪಸಂಖ್ಯಾಕರ ಸಮ್ಮತಿಯಿಲ್ಲದ ಯಾವ ಸರಕಾರ ಕ್ರಮಕ್ಕೂ ತಾವು ಒಪ್ಪುವುದಿಲ್ಲವೆಂದು ಎಮರಿಯವರು ಹೇಳಿರುವುದರಿಂದ, ಇಲ್ಲಿ ಚಿರಕಾಲ ಅಲ್ಪ ಸಂಖ್ಯಾಕರೂ ಬಹು ಸಂಖ್ಯಾಕರೂ ಪರಸ್ಪರ ಹೋರಾಡಿಕೊಂಡಿರುವಂತೆ ಅವರು ಆಸ್ಪದ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಬ್ರಿಟನು ಯುರೋಪಿನಲ್ಲಿ ಜೀವನ ಮರಣದ ಬಿಕ್ಕಟ್ಟಿನಲ್ಲಿ ಸಿಲುಕಿರುವಾಗಲೂ ಈ ಆತ್ಮ ಘಾತುಕ ಮತ್ತು ವಂಚಕ ಧೋರಣೆಯನ್ನು ಇಟ್ಟುಕೊಂಡಿರುವುದಕ್ಕಾಗಿ ಖೇದವಾಗುತ್ತದಲ್ಲದೆ, ಆ ಬಗ್ಗೆ ದೇಶದಲ್ಲಿ ಘೋರ ಅಸಂತುಷ್ಟಿಯು ಹರಡಿಕೊಂಡಿರುವಂತೆಯೂ ಆಗಿರುವುದು. ಕಾಂಗ್ರೆಸು ಮೊನ್ನೆಯ ವರ್ಧಾದ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಮಾಡಿರುವ ನಿರ್ಣಯವು ಇದಕ್ಕೆ ಪ್ರಮಾಣವಾಗಿದೆ."

ನೋಟಿಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 450/40

O. S. No. 75 of 1939

ಮಮ್ಮಕ್ಕೆ . . . ವಾದಿಳು.

ಗೋವಿಂದ ಭಟ್ಟ ಕೂಡಾ ೧೧ ಜನರು . ಪ್ರತಿವಾದಿರು – ಎದ್ರಿರು.

೧ನೇ ಎದ್ರಿ–ಮುತ್ತು ಹೆಂಗುಸು, ೮ನೇ ಪ್ರತಿವಾದಿ–ಅಪ್ಪು ಹೆಂಗಸಿನ ತಂಗಿ, ನೆಟ್ಟಣಿಗೆ ಗ್ರಾಮ.

ಮೇಲಿನ ವ್ಯವಹರಣೆಯಲ್ಲಿ ವಾದಿಳು ದಾವಾ ದಾವೆಯು ವಸೂಲು ಹೊಂದುವರೆ ಪ್ರತಿನಿಧಿ ನಿಶ್ಚಯಿಸಬೇಕಾಗಿ ಅರ್ಜಿ ಕೊಟ್ಟಿದ್ದು ಅದು ತಾ. 6—9—1940ಕ್ಕೆ ಡೇಟಿಸಿನ ತನ್ನ ಮೈದೆ ಆಗಿರುತ್ತದೆ. ಆದುದರಿಂದ ಎದ್ರಿಯು ಏನಾದರೂ ಆಕ್ಷೇಪ ಹೇಳುವುದಿದ್ದರೆ ಆ ದಿವಸ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದರೆ ಅವಳನ್ನು ಬಿಟ್ಟು ಏಕ ದಾವ ವ್ಯವಹರಣೆಯನ್ನು ತನ್ನಿಯಿಂದ ಮುಂದರಿಸಲಾಗುವುದು. ಎಂತ ಈ ನೋಟೀಸ ಮುಖಾಂತರ ತಿಳಿಸಿ ಮಾಡಿಯದೆ.

Puttur, | S. RAMACHANDRA RAU,
1-8-1940. | Pleader for Plaintiff.

ಇಂಡಿಯಾ ದೇಶವನ್ನು ಬಲಿಷ್ಠವಾಗಿ ಮಾಡಿರಿ

ನಿಮ್ಮ ದೇಶದ ಬಲವೇ ನಿಮಗೆ ಭದ್ರತೆ



ಡಿಫೆನ್ಸು ಸೇವಿಂಗ್ಸು ಸರ್ಟಿಫಿಕೇಟುಗಳನ್ನು ರೂ. 10, 50, 100, 500 ಗಳಿಗೆ ಜಾರೀಮಾಡುತ್ತಾರೆ. ಈ ಮೊತ್ತಗಳು ಹತ್ತು ವರ್ಷದ ಅನಂತರ ಒಂದೊಂದು ಹತ್ತು ರೂಪಾಯಿಗೆ ರೂ. 13-9-0 ಆಗಿ ವಾಪಸುಕೊಡಲ್ಪಡುವುವು. ಈರೀತಿಯಾಗಿ ನಿಮಗೆ ಸುಮಾರು 3½% ಕಾಂಪೌಂಡು ಬಡ್ಡಿ ಬರುತ್ತದೆ. ಈ ಆದಾಯಕ್ಕೆ ಇನ್‌ಕಂಟ್ಯಾಕ್ಸ್ ಇರಲಾರದು. ಒಬ್ಬೊಬ್ಬರು ಗರಿಷ್ಠವಾಗಿ 5,000 ರೂ. ಗಳ ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳಬಹುದು. ನಿಮ್ಮ ಸಮೀಪದಲ್ಲಿರುವ ಪೋಸ್ಟಾಫೀಸಿಗೆ ದರಖಾಸ್ತು ಮಾಡಿಕೊಳ್ಳಿರಿ.

ಆರುವರ್ಷದ ಡಿಫೆನ್ಸು ಬಾಂಡುಗಳು ರೂ. 100 ಗಳಿಗಾಗಲಿ, ಆಮೇಲೆ ನೂರುನೂರಿನ ಹೆಚ್ಚು ಮೊತ್ತಗಳಿಗಾಗಲಿ ಜಾರೀಮಾಡುತ್ತಾರೆ. ಈ ಮೊತ್ತಗಳು 1946 ಆಗಸ್ಟ್ 1 ತಾರೀಖಿಗೆ ನೂರಕ್ಕೆ 101 ರೂ. ಆಗಿ ವಾಪಸುಕೊಡಲ್ಪಡುವುವು. 3% ಬಡ್ಡಿ ಆರು ತಿಂಗಳಿಗೆ ಒಂದೊಂದು ಸಾರಿ ಕೊಡಲ್ಪಡುವುದು; ಒಬ್ಬೊಬ್ಬರು ಎಷ್ಟು ಮೊತ್ತಕ್ಕಾಗಲಿ, ಪರಿಮಿತಿಯೇನೂ ಇಲ್ಲದೆ ತೆಗೆದುಕೊಳ್ಳಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಗವರ್ನಮೆಂಟು ಟ್ರೆಜರಿಗಳಲ್ಲಿ ಯಾವುದಕ್ಕಾಗಲಿ ದರಖಾಸ್ತು ಮಾಡಿಕೊಳ್ಳಿರಿ.

ಬಡ್ಡಿ ಯಿಲ್ಲದ ಬಾಂಡುಗಳನ್ನು 50 ರೂ. ಗಳಿಗೆ ಮೇಲೆ ಎಷ್ಟು ಮೊತ್ತಕ್ಕಾದರೂ ಜಾರೀಮಾಡುತ್ತಾರೆ. ಈ ಮೊತ್ತಗಳನ್ನು 3 ವರ್ಷಗಳ ಅನಂತರ ವಾಪಸುಮಾಡುತ್ತಾರೆ. ಒಂದು ವರ್ಷದ ಅನಂತರ ಬೇಕಾದರೆ 3 ತಿಂಗಳ ನೋಟೀಸು ಕೊಡಬೇಕಾಗಿರುತ್ತದೆ. ಅತ್ಯವಸರ ಸಂದರ್ಭಗಳನ್ನು ರುಜು ಮಾಡುವುದಾದರೆ ಯಾವಾಗಲಾದರೂ ವಾಪಸುಕೊಡಲ್ಪಡುವುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಗವರ್ನಮೆಂಟ್ ಟ್ರೆಜರಿಗಳಲ್ಲಿ ಯಾವುದಕ್ಕಾಗಲಿ ದರಖಾಸ್ತು ಮಾಡಿಕೊಳ್ಳಿರಿ.

ತನ್ನ ರಕ್ಷಣೆಗಾಗಿ—ನಿಮ್ಮ ರಕ್ಷಣೆಗಾಗಿ ಕೂಡ ಇಂಡಿಯಾದೇಶಕ್ಕೆ ಇನ್ನೂ ಅನೇಕ ಮಂದಿ ಶಿಕ್ಷಣಪಡೆದ ಜನರು, ಅನೇಕ ಟಾಂಕುಗಳು, ಅನೇಕ ವಿಮಾನಗಳು, ಅನೇಕ ಮದ್ದುಗುಂಡುಗಳು ಬೇಕಾಗಿವೆ. ಡಿಫೆನ್ಸು ಲೋನುಗಳಿಗೆ ಚಂದಾಗಳನ್ನು ಕೊಡುವುದರಿಂದ ನೀವು ಮೇಲ್ಕಂಡ ಅವಶ್ಯಕತೆಗಳನ್ನು ಪಡೆಯುವುದಕ್ಕೆ ಸಹಾಯಮಾಡುವುದು ಮಾತ್ರವಲ್ಲದೆ ಇಂಡಿಯಾದೇಶದ ರಕ್ಷಣೆಯನ್ನು, ನಿಮ್ಮ ರಕ್ಷಣೆಯನ್ನು ಕೂಡ ಸ್ಥಿರಪಡಿಸಿ ಕೊಳ್ಳುವಿರಿ.

ಇದುಮಾತ್ರವಲ್ಲದೆ, ಇದರಿಂದ ನೀವು ನಿಮ್ಮ ಧನಕ್ಕೆ ಸುರಕ್ಷಿತವಾದ ಲಾಭಗಳನ್ನು ಪಡೆಯುವಿರಿ. ಇದಕ್ಕೆ ಪ್ರಭುತ್ವದ, ಮತ್ತು ದೇಶದ ಸರ್ವ ಆಧಾರಗಳ ಪ್ರೋತ್ಸಾಹವಿದೆ. ನೀವು ಹಾಕಿದ ಧನಕ್ಕೆ ಯಾವಾಗಲೂ ನಷ್ಟವಿರಲಾರದು.

ಇಂಡಿಯಾ ಡಿಫೆನ್ಸು ಲೋನುಗಳನ್ನು ಕೊಂಡಿರಿ

KN. G.I.1

ವಿಚಿತ್ರ ಪ್ರಪಂಚ

ವಿಷವಾಯುವನ್ನು ಕಾರುವ ಬಾವಿ!

ಕುಮಾರಬಾಲಿ ಎಂಬಲ್ಲಿ ಅಗೆದ ಒಂದು ಬಾವಿಯು ವಿಷಗಾಳಿಯನ್ನು ಕಾರಲಾರಂಭಿಸಿದ್ದರಿಂದ ಅಲ್ಲಿಯ ಮೂವರು ಮುಸಲ್ಮಾನ ಒಕ್ಕಲಿಗರು ಅವ ಮೃತ್ಯುವಿಗೆ ಬಲಿಯಾಗಬೇಕಾಯಿತು. ಬಾವಿಯು ಸುಮಾರು ೨೦–೨೫ ಗಜ ಆಳವಾಗಿತ್ತು. ನೀರು ಸೇದಲಿಕ್ಕೆ ಹೋದಾಗ ಹಗ್ಗ ಕಡಿದು ಒಂದು ಮಣ್ಣಿನ ಕೊಡವು ಅದರಲ್ಲಿ ಬಿದ್ದಿತು. ಅಲ್ಲಿಯ ಜನರು ಬಹಳ ಬಡವರು. ಆದ್ದರಿಂದ ಬಾವಿಯಲ್ಲಿ ಬಿದ್ದುದು ಮಣ್ಣಿನ ಕೊಡವಾದರೂ ಅವರು ಅದನ್ನು ಅದರಲ್ಲಿಯೇ ಬಿಟ್ಟಿರಲು ಸಿದ್ಧರಿರಲಿಲ್ಲ. ಒಬ್ಬ ಮುಸಲ್ಮಾನನು ಬಾವಿಯೊಳಗೆ ಇಳಿದು ತಕ್ಷಣ ಮೃತನಾದನು. ಮತ್ತೆ ಇಬ್ಬರು ಅದರಲ್ಲಿ ಇಳಿದಾಗ ಅವರೂ ಹಿಂದಿನವನ ದಾರಿ ಹಿಡಿದರು. ಕೊನೆಗೆ ತನಗೇನಾದರೂ [illegible] ಆಳಕ್ಕು ಬಂದು ತಾನು ಹಗ್ಗವನ್ನು ಅಲುಗಾಡಿಸಿದಾಗ ತನ್ನನ್ನು ಮೇಲಕ್ಕೆತ್ತಬೇಕೆಂದು ಸೂಚನೆ ಕೊಟ್ಟು ನಾಲ್ಕನೆಯವನು ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಬಾವಿಗೆ ಇಳಿದನು. ಅರ್ಧಕ್ಕೆ ಇಳಿಯುತ್ತಿರುವಾಗಲೇ 'ನಾನು ಸುಟ್ಟುಹೋಗುತ್ತಿದ್ದೇನೆ' ಎಂದು ಕೂಗಿಡುತ್ತ ಅವನು ಹಗ್ಗವನ್ನು ಅಲ್ಲಾಡಿಸಿದನು. ಜನರು ಅವನನ್ನು ಮೇಲಕ್ಕೆ ಎತ್ತಿ ಹಾಕಿದರು. ಆದ್ದರಿಂದ ಅವನು ಬದುಕಿದ. ಬಾವಿಯ ಅಡಿಯ ಮಣ್ಣಿನೊಳಗಿಂದ ಒಂದು ಜಾತಿಯ ವಿಷಗಾಳಿಯು ಹೊರಟು ಬಾವಿಯನ್ನು ತುಂಬಿಕೊಂಡಿದ್ದುದರಿಂದ ಮೊದಲಿನ ಮೂವರು ಸತ್ತರೆಂದು ಮತ್ತೆ ಗೊತ್ತಾಯಿತು. ಮರುದಿನ ಬಾವಿಯನ್ನು ಮುಚ್ಚಿಬಿಟ್ಟರು.

ಶೀತರೋಗಕ್ಕೆ ಪ್ರೇಮವು ಮದ್ದೆ?

"ನೀವು ಆಗಾಗ ಶೀತರೋಗದಿಂದ ಬಾಧೆಪಡುತ್ತಿದ್ದೀರಾದರೆ ಯಾರಾದರೊಬ್ಬ ಹುಡುಗಿಯನ್ನು ಪ್ರೀತಿಸಿ ಅವಳನ್ನು ಕೂಡಿಕೊಳ್ಳಿ — ಅಂದರೆ ನಿಮ್ಮ ಪ್ರೇಮಲೀಲೆಯಿಂದ ಶೀತರೋಗವು ತಕ್ಷಣ ಮಾಯವಾಗುವುದು" ಎಂದು ಒಬ್ಬ ಫ್ರೆಂಚ ಡಾಕ್ಟರರ ದಿವ್ಯ ಔಷಧವನ್ನು ಹೇಳಿದ್ದಾರೆ. ಪ್ರೇಮಕೇಳಿಯು ನಡೆಯುತ್ತಿರುವಾಗ ಅಂಗಾಂಗಗಳು ಬಿಸಿಯೇರಿ ಉದ್ರೇಕಗೊಳ್ಳುವುದರಿಂದ ರಕ್ತಪ್ರವಾಹ ಚೆನ್ನಾಗಿ ನಡೆಯುತ್ತದೆ. ಆದ್ದರಿಂದ ಸುಖವೂ ಆರೋಗ್ಯವೂ ಆಗುತ್ತದೆ ಎಂಬುದು ಆ ಡಾಕ್ಟರರ ಅಭಿಪ್ರಾಯವಾಗಿದೆ. ಆದರೆ ಲಂಡನಿನ ಇನ್ನೊಬ್ಬ ಡಾಕ್ಟರರು [illegible] ಇದ್ದಾರೆ. [illegible] ತಮ್ಮನ್ನು [illegible] ಗೆಳೆಯರಿಂದ [illegible] ಯಾವಾಗಲೂ [illegible] ಇರುತ್ತಾರೆ. ಆದ್ದರಿಂದ ಅವರು ಯಾವಾಗಲೂ ಆರೋಗ್ಯವಾಗಿ ಇರುತ್ತಾರೆ ಎಂಬುದು ಈ ಎರಡನೆ ಡಾಕ್ಟರರ ಅಭಿಪ್ರಾಯವು. ಆದ್ದರಿಂದ ಆರೋಗ್ಯವಾಗಿರಲಪೇಕ್ಷಿಸುವವರು ಈ ಮದ್ದನ್ನುಪಯೋಗಿಸಿದರಾಯಿತು.

ಕುರಿಗಳ ಮೈಮೇಲೆ ಹುಲ್ಲು ಬೆಳೆಯುವುದು

ಗ್ಲಾಸ್ಗೋದ ಒಬ್ಬ ಒಕ್ಕಲಿಗನು ತಾನು ಸಾಕಿದ್ದ ಕುರಿಗಳ ಉಣ್ಣೆಯು ಹಸುರಾಗಿ ಬೆಳೆಯುತ್ತಿರುವುದನ್ನು ಕಂಡು ಬಹಳ ದುಃಖಿತನಾದನು. ಅವನಿಗೆ ಅದೊಂದು ಅದ್ಭುತವೂ ಆಗಿದ್ದಿತು. ಉಣ್ಣೆ ಎಲ್ಲಾ ಹಸುರಾಗಿಬಿಟ್ಟರೆ, ಮತ್ತೆ ಅದಕ್ಕೆ ಕ್ರಯ ಎಲ್ಲಿಂದ ಬರುವದು ಎಂಬ ಚಿಂತೆ ಅವನಿಗೆ ಹತ್ತಿತ್ತು. ಆದರೆ ಚಿಂತೆಯೇ ಮಿತ್ರ, ಸಂತೋಷವೇ [illegible] ಕಣ್ಣಾರೆ ಕಂಡ ರೂಪ [illegible] ನೋಡಬೇಕು ಎಂದೆಣಿಸಿ ಅವನು ಆ ಕುರಿಗಳ ಸಮೀಪ ಹೋಗಿ ಪರೀಕ್ಷಿಸಿ ನೋಡಿದ. ಅವುಗಳ ಮೈಮೇಲಿನ ಉಣ್ಣೆ ಯಥಾರ್ಥದಲ್ಲಿ ಹಸುರಾಗಿರಲಿಲ್ಲ. ಅವು ಮೈದಾನಿನಲ್ಲಿ ಎತ್ತರಕ್ಕೆ ಬೆಳೆದಿದ್ದ ಹುಲ್ಲನ್ನು ಮೇಯುತ್ತಿರುವಾಗ ಆ ಹಣ್ಣಾಗಿ ಒಣಗಿ ಉದುರಲಿಕ್ಕಾಗಿದ್ದ ಹುಲ್ಲಿನ ಬೀಜಗಳು ಆ ಕುರಿಗಳ ಮೈಮೇಲೆ ಬಿದ್ದು ಉಣ್ಣೆಯೊಳಗೆ ಸಿಕ್ಕಿಕೊಂಡಿದ್ದವು. ಆ ಸಮಯಕ್ಕೆ ಸರಿಯಾಗಿ ಚಿಕ್ಕ [illegible] ಅವುಗಳ ಮೈ [illegible] ಹುಲ್ಲು ಬೀಜಗಳು ಅಲ್ಲಿಯೇ ಮೊಳೆತ [illegible] ಎತ್ತರಕ್ಕೆ ಬೆಳೆದಿದ್ದ ಆ ಹುಲ್ಲಿನ ನಿಮಿತ್ತದಿಂದಾಗಿ ಕುರಿಗಳ ಮೈ ಹಸುರಾಗಿದ್ದಂತೆ ಭಾಸವಾಗುತ್ತಿತ್ತು.

ಹೊಟ್ಟೆಯುರಿಗಾಗಿ ದಾವೆ!

ಬುಡಾಪೆಸ್ಟ ನಗರದೊಳಗಿನ [illegible] ಒಂದು ವಿಚಿತ್ರ ದಾವೆಯ ವಿಚಾರಣೆಗೆ ಬಂದಿದ್ದು ಅದೀಗ ಫಿರ್ಯಾದಿಯ ಪರವಾಗಿ ಇತ್ಯರ್ಥಗೊಳಿಸಲ್ಪಟ್ಟಿದೆ. ಆ ನಗರದ ಒಂದಾನೊಂದು ಕಾರ್ಖಾನೆಯಲ್ಲಿ ಒಬ್ಬ ಕೂಲಿಕಾರ ಕೆಲಸಕ್ಕಿದ್ದ. ಕಾರ್ಖಾನೆಯಲ್ಲಿ ಏನೋ ಒಂದು ಅಪಘಾತವಾಗಿ ಈ ಕೂಲಿಕಾರನು ಗಾಯಪಟ್ಟುದರಿಂದ, ಅವನು ಆ ಗಾಯದ ದೆಸೆಯಿಂದ ಗುಣಮುಖನಾದರೂ, ಮತ್ತೆ ಅವನಿಗೆ ತಣಿಸಲಾಗದ ಬಾಯಾರಿಕೆಯ ರೋಗವಾಯಿತು. ಎಷ್ಟೊಂದು ನೀರನ್ನು ಕುಡಿಯುತ್ತಿದ್ದರೂ, ಅವನ ನೀರಡಿಕೆ ಆರದೆ ಹೊಟ್ಟೆಯೊಳಗೆ ಪ್ರಚಂಡ ಬೆಂಕಿಯು ಸುಡುತ್ತಿರುವ ಹಾಗೆ ಭಾಸವಾಗುತಿತ್ತು. ಆದ್ದರಿಂದ ಅವನು ಪರಿಹಾರ ಕೊಡಿಸಬೇಕೆಂದು ತನ್ನ ಮಾಲಿಕನ ವಿರುದ್ಧ ಕೋರ್ಟಿನಲ್ಲಿ ವ್ಯಾಜ್ಯ ಮಾಡಿದ. ನ್ಯಾಯಾಧೀಶರು ಪ್ರಸಿದ್ಧ ಚಿಕಿತ್ಸಕರ ಮೂಲಕ ಪರೀಕ್ಷೆ ಮಾಡಿಸಿ, ಅವನ ಆ ಅದ್ಭುತ ರೋಗವು ಯಥಾರ್ಥವಾದುದೆಂದು ವಿಚಾರಣೆಯ ಮೂಲಕ [illegible] ಮಾಲೀಕನು ಒಂದು ವರ್ಷದ [illegible] ತಿಂಗಳೊಂದರ [illegible] ಮಾಸಾಶನ ಕೊಡಬೇಕೆಂದೂ, ಈ ಅವಧಿಯ ನಂತರ ಪುನಃ ಆ ಕೂಲಿಕಾರನನ್ನು ಪರೀಕ್ಷಿಸಿ ರೋಗ ಗುಣವಾಗದಿದ್ದರೆ ಅವನು ರೋಗಮುಕ್ತನಾಗುವ ತನಕ ಮಾಸಾಶನವನ್ನು ಕೊಡುತ್ತಲೇ ಬರಬೇಕೆಂದೂ ದಾವೆಯ ತೀರ್ಮಾನ ಮಾಡಿದ್ದಾರೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

PHYSICAL FITNESS
is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA
AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S, Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನು ಉಲ್ಲಾಸಗೊಳಿಸುವುದು,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟಿ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

ಕ್ರಾಂತಿಯಜ್ಞದಲ್ಲಿ ಆಹುತಿಯಾದ ಜೀವರತ್ನ!

ಧೀರ ಟ್ರೋಟ್ಸ್ಕಿಯ ದುರ್ಮರಣ

ಮೆಕ್ಸಿಕೋದಲ್ಲಿ ನೆಲಸಿದ್ದು, ಟ್ರೋಟ್ಸ್ಕಿ ಇಂದಿನ ರಶ್ಯದ ರಾಜನೀತಿಯನ್ನೂ ಸ್ಟಾಲಿನನ ಒಡೆತನವನ್ನೂ ಕಟುವಾಗಿ, ನಿರಂತರವಾಗಿ, ಟೀಕಿಸುತ್ತಿದ್ದ. ಟ್ರೋಟ್ಸ್ಕಿಯೂ ರಶ್ಯನ್ ಸಮತಾವಾದಿ! ಸಮತಾವಾದಿ ಸಮತಾವಾದಿಗಳೊಳಗೇ ಕಚ್ಚಾಟ ಹುಟ್ಟಿತು. ರಶ್ಯದಿಂದ ಸ್ಟಾಲಿನನು ಟ್ರೋಟ್ಸ್ಕಿಯನ್ನು ಬೆಂಬತ್ತಿದ. ಮತ್ತೆ ಎಲ್ಲೆಲ್ಲೂ ಅಲೆದಾಡಿ ಮೆಕ್ಸಿಕೋದಲ್ಲಿ, ಸ್ಟಾಲಿನನ ಒಳಸಂಚಿನವರ ಹೆದರಿಕೆಯಿಂದ ಮುಳ್ಳಿನ ಹಾಸಿಗೆಯಲ್ಲಿದ್ದಂತೆ, ಇರಲು, ಫ್ರೆಂಕ್‌ಜಾನ್‌ಸನನೆಂಬ ಯಹೂದಿ, ಮಿತ್ರನಂತೆ ಬಳಿಗೆ ಬಂದು ಶತ್ರುವಾಗಿ ತಲೆಗೆ ಬಡಿದ ಪೆಟ್ಟು ಬಲವಂತವಾಗಿ ಈ ತಿಂಗಳ ೨೧ರಂದು ಹೀಗೆ ದುರ್ಮರಣ ಒದಗಿತು! "ನಾನು ರಾಜಕೀಯ ದುರಾತ್ಮನ ಕೈಯಿಂದ ಮರಣ ಹೊಂದುತ್ತೇನೆ; ನನ್ನ ಮಿತ್ರರಿಗೆ ನಮ್ಮ ಕಾರ್ಯವನ್ನು ಮುಂದುವರಿಸಲು ಹೇಳಿ, ನಮ್ಮ ಕ್ರಾಂತಿಗೆ ಖಂಡಿತ ಜಯವು ದೊರಕುತ್ತದೆ, ಅವರು ಕಾರ್ಯವನ್ನು ಮುಂದೊತ್ತಲಿ" ಸಾವ ಸಮಯಕ್ಕೂ ಇಂತಹ ಕ್ರಾಂತಿಯ ಪ್ರತೀಕಾರದ ಮಾತುಗಳನ್ನೇ ಆಡಿ ಟ್ರೋಟ್ಸ್ಕಿ ಕಣ್ಮುಚ್ಚಿದ!

ರಶ್ಯದ ಕ್ರಾಂತಿಯ ಇತಿಹಾಸದಲ್ಲಿ ಲೆನಿನನೊಡನೆ ಆತನ [illegible] ಹೆಸರುವಾಸಿಯಾಗಿ ಮುಂದೆ ಬಂದವನು ಲಿಯೊನ್ ಟ್ರೋಟ್ಸ್ಕಿಯು. ರಶ್ಯದ ಕ್ರಾಂತಿಯ ಪ್ರಾರಂಭದಿಂದಲೇ ಲೆನಿನನೊಂದಿಗೆ ಅದಕ್ಕಾಗಿ ಅವಿಶ್ರಾಂತದ ದುಡಿದವನು. ಹಾಗಾಗಿ ಪ್ರಪಂಚದ ಸ್ಮರಣೆಯಲ್ಲಿ ರಶ್ಯದ ಕ್ರಾಂತಿಯು ಹೊಳೆದಾಗ ಲೆನಿನನ ಜತೆಗೆ ಟ್ರೋಟ್ಸ್ಕಿಯೂ ಬಂದ [illegible]ವನು.

ಟ್ರೋಟ್ಸ್ಕಿಯು ೧೮೭೯ರಲ್ಲಿ ರಶ್ಯದಲ್ಲಿ ಯೆಹೂದೀ ದಂಪತಿಗಳ ಮಗನಾಗಿ ಹುಟ್ಟಿದ. ಬಾಲ್ಯದಲ್ಲಿಯೇ ಈತನು ಕ್ರಾಂತಿಕಾರಿಗಳೊಡನೆ ಬೆರೆತುಕೊಂಡನು. ಅದರಿಂದ ೧೮೯೮ರಲ್ಲಿ ಅವನನ್ನು ಸೆರೆಹಿಡಿದರು. ಮುಂದೆ ಆತನು ರಶ್ಯದಿಂದ ತಲೆಮರೆಸಿಕೊಂಡು ಸೈಬೀರಿಯಕ್ಕೆ ಹೋಗಬೇಕಾಯಿತು. ಅಲ್ಲಿಂದ ಲಂಡನಿಗೆ ತೆರಳಿದ. ಅಲ್ಲಿ ಲೆನಿನನ ಪರಿಚಯವಾಯಿತು. ಅವರು ಮುಂದೆ ಜತೆಯಿಂದ ದುಡಿದರು. ರಶ್ಯದ ಕ್ರಾಂತೀ ಪತ್ರಿಕೆಗಳಲ್ಲಿ ಬಹಳ ಅವರು ತಮ್ಮ ತತ್ವಗಳನ್ನು ಪ್ರಚಾರಪಡಿಸಿದರು. ಮುಂದೆ ಆತನು ರಶ್ಯಕ್ಕೆ ಬಂದನು. ಆದರೆ ಅಲ್ಲಿ ತಿರುಗಿಯೂ ವಿಪತ್ತೇ ಆತನನ್ನು ಕಾದಿತ್ತು. ಹಾಗಾಗಿ ಆತನು ಸೈಬೀರಿಯಾ ವಿಯೆನ್ನಾಗಳಲ್ಲಿ ತಲೆಮರೆಸಿಕೊಂಡಿರಬೇಕಾಯಿತು. ಆಗ ಮಹಾಯುದ್ಧದ ಕಾಲ. 'ಪ್ರಪಂಚ ಯುದ್ಧ'ದ ಕುರಿತು ಒಂದು ಪುಸ್ತಕವನ್ನು ಆತ ಬರೆದ. ಅದು ಜರ್ಮನಿಯಲ್ಲಿ ಪ್ರಕಟವಾಯಿತು. ಅದರಿಂದ ಆತನು ಸೆರೆಮನೆಯಲ್ಲಿ ಕೆಲಕಾಲ ತಳ್ಳಲ್ಪಟ್ಟನು. ಮುಂದೆ ಬಿಡುಗಡೆಯೊದಗಿತು. ೧೯೧೬ರಿಂದ ಆತನು ಫ್ರಾನ್ಸಿನಿಂದಲೂ ಹೊರಡಬೇಕಾಗಿ ಬಂತು. ಮಧ್ಯದಾರಿಯಲ್ಲಿ ಸ್ಪೈನಿನ ಅಧಿಕಾರಿಗಳು ಆತನನ್ನು ಒಮ್ಮೆ ಸೆರೆಹಿಡಿದರು. ಆದರೆ ಅಮೇರಿಕಕ್ಕೆ ಆತನು ಹೋಗುವುದಾಗಿ ತಿಳಿದು ಬಿಟ್ಟುಬಿಟ್ಟರು. ಅಲ್ಲಿಯೂ ಆತನು 'ರಶ್ಯನ್ ಕ್ರಾಂತಿಯ ಪತ್ರಿಕೆ'ಯೊಂದನ್ನು ಹೊರಡಿಸಿ ಕ್ರಾಂತಿಗಾಗಿಯೇ ದುಡಿದನು.

ರಶ್ಯದ ನವರಚನೆಯಲ್ಲಿ

೧೯೧೭ರ ಕಾಲ ರಶ್ಯದಲ್ಲಿ 'ಜವಾದ ಕ್ರಾಂತಿ', ಕ್ರಾಂತಿಕಾರರ ಕನಸು ಅಂದು ಪ್ರಾರಂಭಿಸಿತ್ತು. ಟ್ರೋಟ್ಸ್ಕಿಯ ಮಿತ್ರರು ಆತನು ರಶ್ಯಕ್ಕೆ ಮರಳಿ ಬರಬೇಕೆಂದು ಹಾರೈಸಿದರು. ಆದರೆ ದಾರಿಯಲ್ಲಿ ಆತನನ್ನು, ಕೆಲಕಾಲ ಬ್ರಿಟಿಷ್ ಅಧಿಕಾರಿಗಳು ಬಂಧಿಸಿಟ್ಟಿದ್ದರು. ಅವನೂ ಲೆನಿನ್ ಬಂದಿಳಿದ ಕೆಲವೇ ಸಮಯದಲ್ಲಿ ರಶ್ಯಕ್ಕೆ ತಲುಪಿದ. ಇಬ್ಬರೂ ತಿರುಗಿ ಜತೆಯಾದರು! ಟ್ರೋಟ್ಸ್ಕಿ ಕ್ರಾಂತಿಯ ದಂಡನ್ನು ಒಟ್ಟುಗೂಡಿಸಿದ. ಕ್ರಾಂತಿಯ ತೆರೆ ಮುಸಗಿತು. ಕ್ರಾಂತಿಗೆ ಮುಂದೆ ಜಯವಾಯಿತು! ಹೀಗೆ ಲೆನಿನನೂ ಟ್ರೋಟ್ಸ್ಕಿಯೂ ರಶ್ಯದ ಕ್ರಾಂತಿಯಲ್ಲಿ ಸರಿಸಮಾನವಾಗಿ ದುಡಿದು ರಶ್ಯದ ನವರಚನೆ ಮಾಡಿದರು.

ಮುಂದೆ ಅವನ ಹೊಸ ಸೋವಿಯೆಟ್ ರಶ್ಯದ ವಿದೇಶಾಂಗ ಮಂತ್ರಿಯಾಗಿ ಕೆಲಸ ಮಾಡಿದನು. ಜರ್ಮನರೊಡನೆ ಶಾಂತಿ ಒಪ್ಪಂದವನ್ನು [illegible] ಕಾಲದಲ್ಲಿ ಆತನ ಅತ್ಯಂತ ಗಣನೀಯನಾಗಿದನು. ಮುಂದೆ ರಶ್ಯದಲ್ಲಿ ಒಳದಂಗೆಗಳು ಉಂಟಾದವು. ಆಗ ಆತನ ಯುದ್ಧ ಸಚಿವತ್ವವನ್ನು ವಹಿಸಿಕೊಂಡನು. ಅಂದಿನ ಆತನ ಕಾರ್ಯಗಳೇ ಮುಂದೆ ಸೋವಿಯೆಟ್ ರಶ್ಯದ ಭದ್ರವಾದ ಸ್ಥಾಪನೆಗೆ ಬಹಳ ಮಟ್ಟಿಗೆ ಕಾರಣಗಳಾಗಿವೆಯೆನ್ನುವುದನು ರಶ್ಯನ್ ಕ್ರಾಂತಿಯ ಇತಿಹಾಸವನ್ನು ಓದಿದವರು ಬಲ್ಲರು. ಆತನು ರಾಜ್ಯಘಟನೆಯ ವಿಷಯದಲ್ಲಿಯೂ ಹಲವು ಪ್ರಾಮುಖ್ಯ ಮಾರ್ಪಾಟುಗಳನ್ನು ಮಾಡಿದ್ದನು.

ಸ್ಟಾಲಿನನೊಡನೆ ಭಿನ್ನಾಭಿಪ್ರಾಯ

ಹೀಗೆ ಮಾಡುತ್ತಾ ಮುಂದೆ ಆತನು ದೇಶದ ವ್ಯವಸ್ಥೆಯ ಕಡೆಗೆ ಮನವಿರಿಸಿದನು. ಆದರೆ, ಇಷ್ಟರಲ್ಲಿಯೇ ಸ್ಟಾಲಿನನಿಗೂ ಟ್ರೋಟ್ಸ್ಕಿಗೂ ಭಿನ್ನಾಭಿಪ್ರಾಯಗಳು ನುಸುಳುತ್ತಿದ್ದವು. ೧೯೨೪ರಲ್ಲಿ ಲೆನಿನನು ಮೃತನಾದ. ಲೆನಿನನ ಪಕ್ಷದ ಕಾರ್ಯದರ್ಶಿಯಾಗಿದ್ದ ಸ್ಟಾಲಿನನು ಟ್ರೋಟ್ಸ್ಕಿಯನ್ನು ಕೂಡಲೇ ಎಲ್ಲಾ ಅಧಿಕಾರಗಳಿಂದಲೂ ತೆಗೆದುಹಾಕಿಬಿಟ್ಟನು. 'ಸ್ಟಾಲಿನನನ್ನು ಕಾರ್ಯದರ್ಶಿ ಪದವಿಯಿಂದ ತಳ್ಳಿಹಾಕುವಂತೆ ಟ್ರೋಟ್ಸ್ಕಿಯೂ ಯತ್ನಿಸಿದ. ಹೀಗೆ ಇವರೊಳಗೆ ಉಂಟಾದ ಕಲಹಕಾರಣವು ಅಧಿಕಾರ ಲಾಲಸೆಯಿಂದಲೇ ಬಂದಿತ್ತೋ ಎಂಬೀ ವಿಚಾರವೂ ಮಾಡಬೇಕಾದುದೇ! ಆದರೆ ಅವರಲ್ಲಿ ತತ್ವತಃ ಒಬ್ಬರೊಡನೊಬ್ಬರಿಗೆ ಸರಿಬೀಳುತ್ತಿರಲಿಲ್ಲವೆಂಬುದೂ ಮುಖ್ಯವಾದ ವಿಷಯವಾಗಿದೆ.

ಟ್ರೋಟ್ಸ್ಕಿಯೊಡನೆ ಪತ್ರಿಕಾ ಪ್ರತಿನಿಧಿಯು ಒಮ್ಮೆ "ನೀವು ಇಂದು ರಶ್ಯದ ಮುಂದಾಳುವಾಗಿದ್ದರೆ, ಅದರ ರಾಜಕೀಯ ಧೋರಣೆ ಹೇಗೆ ಇರುತ್ತಿದ್ದೀರಿ?' ಎಂದು ಪ್ರಶ್ನಿಸಿದ. ಅದಕ್ಕೆ ಅವನ ಕೊಟ್ಟ ಉತ್ತರ ಹೀಗಿತ್ತು. 'ನೀನು ಕೇಳಿದ ಪ್ರಶ್ನೆ ಅಂತರಾಷ್ಟ್ರೀಯ ದೃಷ್ಟಿಯಲ್ಲಿ ತಪ್ಪು. ನಾನು ಇಂದಿನ ರಶ್ಯದ ಧುರೀಣನಾಗುವುದು ಸಾಧ್ಯವಿಲ್ಲ. ಅದಕ್ಕೆ ಸ್ಟಾಲಿನನೇ ಹೇಳಿದವ[illegible] ಅಧಿಕಾರಲಾಲಸೆಯುಳ್ಳವನಾಗಿಲ್ಲ. ರಶ್ಯದ ಕ್ರಾಂತಿಯ ದಿನ[illegible] ಬೇಸರಗೊಂಡಿತ್ತು, ಬೇಸರ [illegible] ಸಹಜವಾಗಿ [illegible] ಮನೋಭಾವವೂ ಒಂದು ಸೇರಿಬಿಡುತ್ತದೆ. ಅಂತಹ ಸಂದರ್ಭದಲಿ ಸ್ಟಾಲಿನ್ ಮುಂದಾಳಾಗಿ ಬಂದ.'

ಸ್ಟಾಲಿನನ ತತ್ವ ತನ್ನ ರಾಷ್ಟ್ರದಲ್ಲಿ ಸಮತಾವಾದವನ್ನು ಹರಡುವುದು. ಆದರೆ ಟ್ರೋಟ್ಸ್ಕಿ ಜಗತ್ತಿಗೇ ಸಮತಾವಾದವನ್ನು ಹೊತ್ತು ಸಾರಬೇಕೆಂದು ವಾದಿಸುವವ. ಇವರ ತತ್ವದಲ್ಲಿ ಯಾರದ ತಪ್ಪು ಯಾರದ ಸರಿ ಒಂದಕ್ಕೆ [illegible] ಜಗತ್ತು ಸರಿಯಾದ ಉತ್ತರ ಕೊಡಬೇಕು. ಹೇಗಿದ್ದರೂ ಮುಂದೆ ಸ್ಟಾಲಿನನ ದ್ರೋಹದಿಂದ ಆತನು ರಶ್ಯದಿಂದ ಹೊರಟುಹೋಗಬೇಕಾಗಿ ಬಂತು. ಆತನ ಮೇಲಿದ್ದ ಅಪವಾದನೆ ಆತನ ರಾಜಕೀಯ ಭಿನ್ನಾಭಿಪ್ರಾಯವಾಗಿರಲಿಲ್ಲ. ಆತನು ಪಕ್ಷದಲ್ಲಿ ಒಡಕನ್ನುಂಟುಮಾಡುವ ಗುಪ್ತ ಕಾರ್ಯವನ್ನು ಸಾಧಿಸುತ್ತಿದ್ದನೆಂಬುದು! ಈ ಅಪವಾದನೆಯಿಂದ ಆತನಿಗೆ ಗಡಿಪಾರು ಶಿಕ್ಷೆಯು ವಿಧಿಸಲಾಗಿತ್ತು.

ಕೊನೆಗೂ ಅಲೆದಾಟ

೧೯೨೯ರಲ್ಲಿ ತನ್ನ ಪದವಿಯಿಂದ ಚ್ಯುತನಾದವನು ಕಾಕಸಸ್‌ಗೆ ಒಂದು ಅಲ್ಲಿಂದ ಟರ್ಕಿಗೆ ಪ್ರಯಾಣ ಮಾಡಿದ. ಸ್ಟಾಲಿನನ ವಿರುದ್ಧ ಮಾಡಬೇಕಾಗಿದ್ದ ತನ್ನ ನಿಶ್ಚಿತ ಹೋರಾಟವು ಅವನ ನೆಲೆಯಿಲ್ಲದ, ಬಿಡುವಿಲ್ಲದ ಈ ಅಲೆದಾಟದಲ್ಲಿಯೂ ಆತನ ಯೋಚನೆಯಿಂದ ದೂರವಾಗಿರಲಿಲ್ಲ!

೧೯೩೩ರಲ್ಲಿ ಆತನು ಫ್ರಾನ್ಸಿಗೆ ಬಂದನು. ಅಲ್ಲಿಂದ ನಾರ್ವೆಗೆ ತೆರಳಿ ೧೯೩೬ರ ತನಕ ಅಲ್ಲಿರಲು, ರಶ್ಯನ್ ಸರಕಾರವು ಆತನನ್ನು ಅಲ್ಲಿಂದ ಹೊರಡಿಸಬೇಕಾಗಿ ನಾರ್ವೇ ಸರಕಾರವನ್ನು ಒತ್ತಾಯಪಡಿಸಿತು. ಮುಂದೆ ಆತನು ಮೆಕ್ಸಿಕೋಗೆ ತೆರಳಿದ. ಅಲ್ಲಿ ಆತನು ಸ್ಟಾಲೀನನ ವಿರುದ್ಧ ತನ್ನ ಪ್ರಚಂಡ ಪ್ರಚಾರವನ್ನೇ ಆರಂಭಿಸಿದ. ನಾಲ್ಕನೆಯ ಅಂತರಾಷ್ಟ್ರೀಯದಲ್ಲಿ ಸ್ಟಾಲಿನನ್ನು ತಲೆ ಕೆಳಗು ಮಾಡುವ ಆಸೆ ಅವನಲ್ಲಿತ್ತು,

ಇಷ್ಟರಲ್ಲಿ ಟ್ರೋಟ್ಸ್ಕಿಯ ತತ್ವದ ವಿರುದ್ಧ ರಶ್ಯದಲ್ಲಿ ಭಯಂಕರ ಶಾಸನಗಳು ಎತ್ತಲ್ಪಟ್ಟಿದವು. ಸ್ಟಾಲೀನನು ಅವನ ಅನುಯಾಯಿಗಳನ್ನು ಚಿತ್ರಹಿಂಸೆಗೆ ಗುರಿಮಾಡುತ್ತಿದ್ದ. ಟ್ರೋಟ್ಸ್ಕಿಯ ತತ್ವವು ರಶ್ಯದಲ್ಲಿ ತಲೆ ಎತ್ತದಂತೆ ಮಾಡುವುದು ಆತನ ಹಟವಾಗಿತ್ತು. ಟ್ರೋಟ್ಸ್ಕಿಯು ತನ್ನ ವಿರುದ್ಧ ಸ್ಟಾಲಿನನು ರಶ್ಯದಲ್ಲಿ ಮಾಡುವ ಆರೋಪಗಳ ನ್ಯಾಯವಾದ ವಿಚಾರಣೆಯಾಗಬೇಕೆಂದು ವಾದಿಸಿದ. ಹೊರಗಿನ ಸಹಾಯದಿಂದ ಕೂಡಿದ ಒಂದು ವಿಚಾರಣಾ ಸಮಿತಿಯು ಏರ್ಪಟ್ಟಿತು. ಆ ಸಮಿತಿಯು ಟ್ರೋಟ್ಸ್ಕಿಯು ತಪ್ಪಿತಸ್ಥನಲ್ಲವೆಂದೇ ಸಾರಿತ್ತು.

ಮೆಕ್ಸಿಕೋದಲ್ಲಿ ಇದ್ದಷ್ಟು ಕಾಲವೂ ಟ್ರೋಟ್ಸ್ಕಿಯು ಸ್ಟಾಲಿನನ ಗುಪ್ತಚಾರರ ಗೂಢಕಾರ್ಯಗಳಿಂದ ಬಹಳ ಅಪಾಯಸ್ಥಿತಿಯಲ್ಲಿದ್ದನು. ಮನೆಸುತ್ತ [illegible] ಕೊಂಡ [illegible] ಸ್ಟಾಲಿನ್ [illegible] ಕೈಯಿಂದ ಮರಣ [illegible] ಕ್ರಾಂತಿಯು [illegible] ಜೀವಕ್ಕೆ [illegible] ಕೊನೆಗಾಲ [illegible] ಟ್ರೋಟ್ಸ್ಕಿಯ ವಿಷಯದಲ್ಲಿ [illegible] ತಪ್ಪಲಿಲ್ಲ.

ಪ್ರಪಂಚ ರಂಗದಲ್ಲಿ ಅದ್ಭುತವಾಗಿ ಮೆರೆದ ತೋರಿದ ಒಬ್ಬ ಉಜ್ವಲ ಕ್ರಾಂತಿ ಪುರುಷ, ವಿಶ್ವ ಸಮತಾವಾದದ ಮಹಾತತ್ವದ ಕನಸುಗಾರ, ಅದ್ಭುತ ಕಾರ್ಯಗಳನ್ನು ಮಾಡಿತೋರಿಸಿದ ಮಹಾ ಸಾಹಸಿ, ಎಲ್ಲದಕ್ಕಿಂತಲೂ ಹೆಚ್ಚು ಹಿಡಿದ ತತ್ವದ ಸಲುವಾಗಿ ಬಂದ ಬವಣೆಗಳನ್ನು ಎದುರಿಸಿ ಹೋರಾಡಿದ ಕೆಚ್ಚೆದೆಯ ಕಟ್ಟಾಳು, ಟ್ರೋಟ್ಸ್ಕಿ ಇಂದು ಕಣ್ಮರೆಯಾಗಿದ್ದಾನೆ! ಕಾದಿ ಕಡಿದ ವೀರ ಮತ್ತೆ ಮಲಿಯಾಗಿ ಬೀಳಲುಂಟೋ ಏನೋ ಈಗ ಹೀಗೆ ಇಂದು ಅದೃಶ್ಯವಾಗಿದೆ!

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ಸಿನೆಮಾ ಪುಟ

ಶಾಂತ್ಹಾಆಪ್ಟೆಯು ತಿರಿಗಿ ಅಭಿನಯಲೋಕದಲ್ಲಿ

ಒಬ್ಬ ಸಾಮಾನ್ಯ ಶಾಲಾ ಬಾಲಿಕೆಯಂತಿದ್ದ ಶಾಂತಳನ್ನು ಪ್ರಭಾತ ಚಿತ್ರ ಕಂಪೆನಿಯು ಯಶಸ್ವೀ ನಿರ್ದೇಶಕರಾದ ಶಾಂತಾರಾಮರು, ಭಾರತದಲ್ಲಿ ಅತ್ಯಂತ ಕೀರ್ತಿವೆತ್ತ ನಟಿ, ಸಂಗೀತಗಾರಳು, ಕಲಾಕುಶಲಳಾಗಿ ಮಾರ್ಪಡಿಸಿದರೆನ್ನಬೇಕು. ಆದರೆ, ಪ್ರಭಾತ ಚಿತ್ರ ಕಂಪೆನಿಯೊಡನೆ ಆಕೆಯ ವ್ಯವಹಾರವು ಮಧುರವಾಗಿ ನಡೆಯದೆ, ಉಂಟಾದ ವಿಷಯ ಸಿನೆಮಾ ಜಗತ್ತಿಗೆಲ್ಲಾ ಗೊತ್ತು ಕಳೆದ ಒಂದೆರಡು ವರ್ಷಗಳಿಂದ ಶಾಂತಳ ಅಭಿನಯವನ್ನು ಕಾಣದೆ ಆಕೆಯ ಮೆಚ್ಚಿಗೆ ಪ್ರೇಕ್ಷಕರಿಗೆ ನಿಜವಾಗಿ ನಿರಾಶೆಯೇ ಹುಟ್ಟಿರಬೇಕು ಆದರೆ ಇಂದು ತಿರಿಗಿ ಒಂದು ಸುಸಂಧಿಯು ದೊರಕಿದೆ'

ಆಗೊಸ್ತ ೧ತ್ತಕ್ಕೆ ಆಕೆ ಪ್ರಭಾತದೊಡನೆ ಮಾಡಿದ ಒಪ್ಪಂದವು ಮುಗಿಯುವುದು ಈಗ ಸಿರ್ಕೋ ಪ್ರೊಡಕ್ಸನಿನವರು ಎರಡ ಚಿತ್ರಗಳ ಮಟ್ಟಿಗೆ ಆಕೆಯೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ ಆ ಎರಡು ಚಿತ್ರಗಳ ಬಗ್ಗೆ ೭೫,೦೦೦ ರೂಪಾಯಿಗಳು ಅವಳಿಗೆ ಕೊಡಲ್ಪಡುವವಲ್ಲದೆ ಚಿತ್ರಗಳ ಹನ್ನೆರಡು ತಿಂಗಳ ಪ್ರದರ್ಶನ ಲಾಭದಲ್ಲಿ ಶೇಕಡ ಹತ್ತರ ಲಾಭವನ್ನೂ ಹಂಚುವದಾಗಿಯೂ ತಿಳಿಯುತ್ತದೆ

ಶಾಂತಾ ಆಪ್ಟೆಯ ಮೊದಲ ಚಿತ್ರವು "ಭೈರವೀ" ಎಂಬ ಹೆಸರಿನದೆಂದೂ ಅದನ್ನು ದೇವಿಕಾ ಬೋಸ್ ನಿರ್ದೇಶಿಸುವರೆಂದೂ ತಿಳಿದಿದೆ

ನ್ಯೂಥಿಯೇಟರ್ಸಿನ ಬೆಂಕಿಯ ವಿಷಯವಾಗಿ

ನ್ಯೂ ಥಿಯೇಟರ್ಸಿನ ಹಿತಚಿಂತಕರಿಗೂ ಮಿತ್ರರಿಗೂ ನಿಜವಾಗಿ ನ್ಯೂಥಿಯೇಟರಿಗೆ ಮೊನ್ನೆಆದ ಬೆಂಕಿಯ ವಿಷಯವು ಬಹಳ ದುಃಖಕರವಾದ ಸುದ್ಧಿಯಾಗಿಯೇ ಬಂದಿರಬೇಕು ಆದರೆ ಇದು ಬಹಳ ಚಿಲ್ಲರೆಯ ಒಂದು ಘಟನೆಯೆಂದೂ, ಎಸೋಸಿಯೇಟೆಡ್ ಬಾತ್ಮೀದಾರನು ಅದನ್ನು ಬಹಳ ವಿಶೇಷ ಮಾಡಿದನೆಂದೂ ತಿಳಿದುಬರುತ್ತದೆ.

ಲೆಬೋರೇಟರಿಯ ನಂ ೧ನೆಯ ಕೋಣೆಯಲ್ಲಿ ಮಾತ್ರ ಬೆಂಕಿಯ ಅನಾಹುತವಾಯಿತು. ಅವರ ಹಿಂದಿನ ಚಿತ್ರಗಳಾದ "ಹಾರ್ ಜೀತ್" "ನರ್ತಕಿ" ಇವುಗಳ ಕೆಲವು ನೆಗೆಟಿವ್‌ಗಳು ಸುಟ್ಟುಹೋದುವಂತೆ! ಆದರೆ ಕೂಡಲೇ ಅವುಗಳು ಸಮರ್ಪೂಕವಾಗಿ ಮಾಡಲ್ಪಟ್ಟವು.

ಇದರಿಂದ ಸ್ಟುಡಿಯೋದ ನಿತ್ಯ ನಿರಂತರ ಕೆಲಸಗಳಿಗೆ ಯಾವ ತೊಂದರೆಗಳೂ ಒದಗಲಿಲ್ಲ. ನಿರ್ದೇಶಕರಾದ ದೇವಿಕಾ ಬೋಸ್ ಮತ್ತು ನಿತಿನ್ ಬೋಸರು ತಮ್ಮ ಚಿತ್ರಗಳ ತಯಾರಿಯಲ್ಲಿ ಕಳೆ...

ಬೇಸರದಿಂದ ಕಂಗೆಟ್ಟಾಗ ದ್ರಾಕ್ಷಾರಸವು ಮನಸೆಳೆದಿತ್ತು!

ಜರ್ಮನಿಯಲ್ಲಿ ಶಾಂತಾರಾಮರು ಅನುಭವ!

ಪ್ರಭಾತ ಚಿತ್ರ ಕಂಪೆನಿಯು ಅಂದು ಅಷ್ಟು ಪ್ರಖ್ಯಾತಿಗೆ ಬಂದಿರಲಿಲ್ಲ 'ಸೈರಂಧ್ರಿ' ಚಿತ್ರದ ಬಣ್ಣಗಾರಿಕೆಯ ಬಗೆ ಅವರು ಜರ್ಮನಿಗೆ ತೆರಳಿದ್ದರು ತನ್ನ ಕಂಪನಿಯಾದ ಪ್ರಭಾತದ ಮುಂದಿನ ಭವಿಷ್ಯಗಳೆಲ್ಲಾ ಅವರ ಚಿತ್ರಪಟದಲ್ಲಿ ಬಂದವು ಯಾವುದೂ ತೋರಲಿಲ್ಲ ಈ ಬೇಸರವನ್ನು ಕಳೆಯಲು ತಾನು ದ್ರಾಕ್ಷಾರಸ (ಅಮಲು)ವನ್ನು ಯಾಕೆ ಕುಡಿಯಬಾರದು ಎಂದು ವಿಚಾರಿಸಿದರು

ಅವರು ಹೋಟೆಲಿಗೆ ಹೋಗಿ ಯಾವುದೋ ಒಂದು ಬಗೆಯ ದ್ರಾಕ್ಷಾರಸವನ್ನು ತರಲು ಹೇಳಿದರು ಆಗ ಅವರ ಆತ್ಮದ ದನಿಯು "ನೀನು ಇದನ್ನು ಕುಡಿದರೆ ಏನಾಗುವಿ? ಈ ವಿದೇಶಿಯರ ಮುಂದೆ ಹುಚ್ಚನಾಗ ವಿ' ಎಂದ ಹೇಳ ವಂತೆ ಅವರಿಗೆ ಅನಿಸಿತ ಕೂಡಲೇ ಅಲ್ಲಿಂದ ಎದ್ದು ಅದರ ಹಣಕೊಟ್ಟು ತನಗೆ ದ್ರಾಕ್ಷಾರಸವನ್ನು ತಂದಿರಿಸಿದ್ದ ಸೇವಕಳು ಆಶ್ಚರ್ಯಪಡುತ್ತಿರಲು ಅವರು ಹೋಟೆಲನ್ನು ಬಿಟ್ಟು ಹೊರಟೇ ಹೋದರಂತ

ಹುಡುಗಿಯರನ್ನು ಹಣಕ್ಕಾಗಿ ಕೊಣಿಸುತ್ತಿದ್ದರು!

ಭಾರತದ ಫಿಲ್ಮುಗಳ ಹಿಂದ ಮದಿನಗಳನ್ನು ಹೇಳುತ್ತಾ ಬಾಬುರಾವ್ ಪಟೇಲರು ಹೀಗೆ ಬರೆಯುತ್ತಾರೆ

'ಹದಿನೈದು ವರ್ಷಗಳ ಹಿಂದೆ ನಾನು ನೋಡಿದುದು ಏವು ಸ್ಟುಡಿಯೋಗಳು ವೇಶ್ಯಾ ಭವನಗಳಿಂದ ಉತ್ತಮವಿರಲಿಲ್ಲ ನಟಿಯರು ಬೀದಿಯ ಸೂಳೆಯರಿಗಿಂತ ಶ್ರೇಷ್ಠರಿರಲಿಲ್ಲ ಹಲವು ನಿರ್ದೇಶಕರು ವಿಟಪುರುಷರೇ ಆಗಿದ್ದರು ಸಿನೆಮಾ ಕಂಪೆನಿಯವರು ಹುಡುಗಿಯರನ್ನು ದುಡ್ಡುಕೊಟ್ಟು ಪಡೆದು, ದುಡ್ಡಿಗಾಗಿ ಕುಣಿಸುತ್ತಿದ್ದರು, ಕಥಾಲೇಖಕರು ಒರಿಯ ಅನುಕೂಲ ಶಾಸ್ತ್ರ ಪ್ರವೀಣರು ಹಲವು ಚಿತ್ರ ನಿರ್ಮಾಪಕರು ಸಂದರ್ಭವನ್ನು ಅನುಸರಿಸಿ ನಡೆವವರಾಗಿದ್ದರು

'ಆದರೆ ಇಂದು ಆ ಚಿತ್ರವು ಅಳಿಸಿ ಹೋಗಿದೆ. ಅಲ್ಲಿ ಇಂದು ಕಲೆಯ ದೇಗುಲವನ್ನು ನಾವು ಕಾಣಬಹುದು. ಹಳೆಯ ಸೂಳೆಯರು ಇಂದಿಲ್ಲ, ಕುಲೀನರು ಸಂಸ್ಕೃತವಿದ್ಯಾವತಿಯರು ಬಂದಿದ್ದಾರೆ. ಹಲವು ಸಾಹಸಿಗಳು ಮಹತ್ವಾಕಾಂಕ್ಷಿಯುಳ್ಳ ಕಲಾದೃಷ್ಟಿಯಿಂದ ದುಡಿಯುತ್ತಾರೆ. ಹಳೆಯ ಕ್ರಮವೆಲ್ಲಾ ಇಂದು ಹೊಸತಾಗಿದೆ; ಆದರೂ ಮುಂದೆ ಸುಧಾರಣೆಗಳು ಆಗತಕ್ಕದ್ದಿವೆ. ಆದರೆ ಈ ಸಿನೆಮಾ ಜಗತ್ತು ಒಂದು ವಿಚಿತ್ರ ಜಗತ್ತು, ಇಲ್ಲಿ ಸತ್ಯ ಹೇಳುವುದು ಅಪ್ರಿಯವಾದುದು'

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ಶಕ್ಯವಾದ ಸುಲಭ ರೀತಿಯಲ್ಲಿ ನಾಶಮಾಡಿರಿ ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ ಇದು ಕಂರುಹುಣ್ಣು, ಮುದ್ದಣ ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುಕೆಯನ್ನೂ ಗುಣಮಾಡುತ್ತದೆ

ಕುಟಿಕೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು ಆದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ ಕುಟಿಕೂರದ (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು

ಕುಟಿಕೂರಾ ಮುಲಾಮನ್ನು cuticura ointment) ಗಜ್ಜಿ, ಕುರು ವ್ರಣ, ಹುಣ್ಣು ಮುದ್ದಣ ವಿಷಕಾರಿಗಾಯ ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು
Cuticura Ointment

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at all our Branches

For particulars call at or write to
Any of our nearest Branches

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction Chit Fund ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars
K. P. GURU Managing Dir.

ಅಲಂಕಾರಕ್ಕಾಗಿಯೋ ಆಚಾರಕ್ಕಾಗಿಯೋ?

ಹಚ್ಚೆಯ ಗುರುತು ಚುಚ್ಚಿಸಿಕೊಳ್ಳುವರೇಕೆ?

ಬೇರೆ ಬೇರೆ ದೇಶಗಳಲ್ಲಿರುವ ಸಂಪ್ರದಾಯಗಳು

[ಕೊಪ್ಪದ ಶ್ರೀ ರಾಮಸ್ವಾಮಿ ಅಯ್ಯಂಗಾರ್]

[illegible] ಬಣ್ಣದ [illegible] ಹಚ್ಚೆ ಗುರುತು ಚುಚ್ಚುವ [illegible] [illegible] ಮನುಷ್ಯ ಶರೀರವನ್ನು [illegible] ಸೂಜಿಯ ಮೊನೆಯಿಂದ ಕೆಲಕೆಲವು ಆಕಾರಗಳಿಂದ (Design) ಅಲಂಕರಿಸುವುದೇ ಹಚ್ಚೆ ಗುರುತಿನ ಮುಖ್ಯೋದ್ದೇಶವಾಗಿದೆ. ಇದು ಸಾಧಾರಣವಾಗಿ ಹಸುರು ಬಣ್ಣದಿಂದ ಬೊಟ್ಟುಗಳಂತೆ ಹಚ್ಚುವುದರಿಂದ ಇದಕ್ಕೆ ನಮ್ಮವರು ಹಚ್ಚೆ ಗುರುತೆಂದು ಅನ್ನುತ್ತಿರುವರು. ಬರಿದು ಹಸುರಿನಿಂದಲೇ ಅಲ್ಲದೆ ಇಷ್ಟವಾದ ಬಣ್ಣಗಳಿಂದಲೂ ಕೂಡ ಇದನ್ನು ಚುಚ್ಚಿಸಿಕೊಳ್ಳುತ್ತಿರುವರು. ಇದಕ್ಕೆ ಇಂಗ್ಲಿಷಿನಲ್ಲಿ Tattoing ಎನ್ನುವರು. ಈ ಹಚ್ಚೆ ಗುರುತು ಹೆಂಗಸರಲ್ಲಿಯೆ ಹೆಚ್ಚಾಗಿ ವ್ಯಾಪ್ತವಾಗಿರುವುದು. ಅಲಂಕಾರಕ್ಕಾಗಿ ಗಂಡಸರನ್ನು ಆಕರ್ಷಿಸಲು ಹೆಂಗಸರು ಹಚ್ಚೆ ಗುರುತುಗಳನ್ನು ಚುಚ್ಚಿಸಿ ಕೊಳ್ಳುವುದು ರೂಢಿಗೆ ಬಂದಿರುವುದು.

ಇದಕ್ಕೆ ದೇವತಾನುಸರಣೆಯು ಕೂಡಾ (Divine Sanction) ಇದೆ. ವಿಷ್ಣುದೇವರು ರಾಕ್ಷಸರೊಂದಿಗೆ ಹೋರಾಡುವುದಕ್ಕೆ ಹೊರಟಾಗ್ಗೆ ಲಕ್ಷ್ಮೀದೇವಿಯು ರಕ್ಷಣೆಗಾಗಿ ಆತಯ ಕೈಮೇಲೆ ತನ್ನ ಆಯುಧಗಳ ಚಿತ್ರಗಳು ಸೂರ್ಯನನ್ನೂ, ಚಂದ್ರನನ್ನೂ, ತುಳಸಿಯ ಗಿಡವನ್ನೂ ಹಚ್ಚೆಯ ಗುರುತಿನಿಂದ ಚುಚ್ಚಿ ಹೊರಟರಂತೆ. ಇವು ಆತಯ ಕೈಮೇಲೆ ಇದ್ದುದರಿಂದ ಕೇಡುಕೇನೂ ಬಾರದೆಂದು ವ್ಯಾಖ್ಯಾನ ಮಾಡಿದರಂತೆ! ಹಿಂದೂದೇಶದಲ್ಲಿ ವೈದ್ಯರು ಕೂಡ ವೈದ್ಯ ಲಾಭವು ಇದರಲ್ಲಿರುವುದೆಂದು ಇದನ್ನು ಚುಚ್ಚಿಸಿಕೊಂಡರು!

ಆಸ್ಸಾಂ ದೇಶದಲ್ಲಿ ಜನರು ಹಚ್ಚೆ ಹುಯ್ಯಿಸಿಕೊಂಡರೆ ದೇವತೆಗಳು ಅವರು ಯಾವ ಜಾತಿಗೆ ಸೇರುವರೋ ತಿಳಿಯಪಡಿಸುವ ಸೂಚನೆಯು, ಅಲ್ಲದೆ ಭಾರ್ಯಾಭರ್ತರ ವಿಚಕ್ಷಣತೆಯು ಕೂಡ ತಿಳಿಯಪಡಿಸಲು ಈ ಹಚ್ಚೆಯ ಗುರುತುಗಳನ್ನು ಹಾಕಿಸಿಕೊಳ್ಳುವರು! ಕೆಲವು ನಂದ ಇದನ್ನು ಬಾಧೆಯ ನಿವಾರಣೆಗಾಗಿ ಅನುಸರಿಸುತ್ತಿರುವರು!

ಮಲಯಾಳ ದೇಶದವರು ಕಪ್ಪು, ಬಿಳುಪು, ಕೆಂಪು ಬಣ್ಣಗಳಿಂದ ರೋಗ ನಿವಾರಣೆಗಾಗಿ ಚುಚ್ಚಿಸಿಕೊಳ್ಳುವವರು. ಆ ದೇಶದಲ್ಲಿ ಎಳೆ ಕೂಸುಗಳಿಗೆ ಕೂಡ ಅದೃಷ್ಟವಂತರು ಆಗಲು ಹಚ್ಚೆ ಗುರುತುಗಳನ್ನು ಚುಚ್ಚುವರು. ಸಾಂಘಿಕಾಚಾರಗಳಿಂದಲೂ ಕೂಡ ಮಲೆಯಾಳ ದೇಶದವರು ತಪ್ಪದೆ ಬೇರೆ ಬೇರೆ ತರಹಗಳಾಗಿ ಚುಚ್ಚಿಸಿಕೊಳ್ಳುತ್ತಿರುವರು. ದಕ್ಷಿಣ ಕನ್ನಡದಲ್ಲಿಯೂ ಈ ಪದ್ಧತಿಯು ಅಲ್ಪಸ್ವಲ್ಪ ಪ್ರಚಾರವಿದೆ.

ಹಿಂದೂದೇಶದಲ್ಲಿ ಹೆಂಗಸರೇ—ಸಾಧಾರಣವಾಗಿ ಕಮ್ಮಾರರು, ಒಕ್ಕಲಿಗರು, [illegible] ಮೊದಲಾದ ಜಾತಿಯವರು—ಇದನ್ನು ಚುಚ್ಚಿಸಿಕೊಳ್ಳುತ್ತಿರುವುದು ರೂಢಿಯಾಗಿದೆ. ಹಿಂದೂ ದೇಶದಲ್ಲಿ ಈ ಹಚ್ಚೆಯ ಗುರುತು ಚುಚ್ಚುವವರು ಅಷ್ಟು ಶಕ್ತಿವಂತರಾಗದೆ ಹೋದರೂ ಕೆಳಗಿನ ಜಾತಿಯವರು ಏನೋ ಮೂಢ ನಂಬಿಕೆಯುಳ್ಳವರಾಗಿರುವುದರಿಂದ ಚುಚ್ಚಿಸಿಕೊಳ್ಳಬೇಕೆಂದು ಅವರಿಗೆ ಒಂದು ಬಗೆಯಾದ ನಂಬಿಕೆಯನ್ನುಂಟುಮಾಡುವರು. ಕೆಳಗಿನ ಜಾತಿಯವರು ಸೌಂದರ್ಯ ಲಾವಣ್ಯಕ್ಕಾಗಿಯೂ ಕೂಡಾ ಇದನ್ನು ಅನುಸರಿಸುವರು. ಪ್ರಯಾಣಿಕರೂ ಪೋಲೀಸಿನವರೂ ಸಾಧಾರಣವಾಗಿ ಅವರು ಅವರು ಯಾವ ಜಾತಿಗೆ ಸೇರಿದವರೋ ತಿಳಿಯಪಡಿಸಲು ಹೊಟ್ಟೆಯ ಮೇಲಾಗಲಿ ಮುಂಗೈ ಮೇಲಾಗಲಿ, ಬೆನ್ನಿನ ಮೇಲಾಗಲಿ ಚುಚ್ಚಿಸಿಕೊಳ್ಳುವರು. ಈ ಹಚ್ಚೆಯ ಬೊಟ್ಟುಗಳನ್ನು ಬೇರೆ ಬೇರೆ ವಿಧಗಳಾಗಿ ಹಲವು ತರಹ ಜಾತಿಗಳವರು ನಂಬುತ್ತಿರುವರು. ಆಫ್ರಿಕಾ ದೇಶದವರಿಗೆ ಈಗಲೂ ಒಂದು ಮೂಢ ನಂಬಿಕೆಯು ಇರುವುದು. ಸತ್ತು ಹೋದವನನ್ನು ಅವನ ಪಿತೃ ದೇವತೆಗಳು ನಡುವೆ ತಡೆದು ಅವನಿಗೆ ಹಚ್ಚೆಯ ಗುರುತು ಸಂಘದಲ್ಲಿರುವನೆಂದು ತಿಳಿಯಪಡಿಸಲು ಇರುವುದೊ ಇಲ್ಲವೊ ನೋಡುವರಂತೆ. ಈ ನಂಬಿಕೆಯು ಬಹು ಆಶ್ಚರ್ಯಕರವಾಗಿರುವುದು. ದಕ್ಷಿಣ ಹಿಂದೂದೇಶಸ್ಥರಿಗೆ ಕೂಡಾ ಈ ರೀತಿಯಾದ ನಂಬಿಕೆಯು ಇರುವುದು. ಈ ಹಚ್ಚೆಯ ಗುರುತುಗಳಿಲ್ಲದೆ ಸತ್ತು ಹೋದರೆ ಅವರ ಕುಲದೇವತೆಗಳು ನರಕ ಬಾಧೆಗಳನ್ನು ಪಡುವವರಂತೆ. ಈ ನಂಬಿಕೆಯ ಮೇಲೆ ಹಚ್ಚೆಯ ಬೊಟ್ಟು ಚುಚ್ಚಿಸಿಕೊಳ್ಳುವುದು ತಪ್ಪದೆ ಸರಿಯಾಗಿದೆ.

ಪ್ರಪಂಚದಲ್ಲಿ ಇದರ ಬಣ್ಣಗಳು ಆಕಾರಗಳೂ ಬೇರೆ ಬೇರೆ ತರಹಗಳಾಗಿರುವುವು. ದಕ್ಷಿಣ ಹಿಂದೂಸ್ಥಾನದಲ್ಲಿ ಹೂವುಗಳು, ಒಡವೆಗಳು, ಪ್ರಾಣಿಗಳು, ದೇವರ ವಿಗ್ರಹಗಳು ಇವು, ಸಾಧಾರಣವಾಗಿ ಹಚ್ಚೆ ಗುರುತು ಹಾಕಿಸಿಕೊಳ್ಳುವುದರಲ್ಲಿ ಇರುವುವು. ಪಂಜಾಬು ದೇಶದಲ್ಲಿ ಅವರವರ ಹೆಸರುಗಳೂ, ಕುಣಿಯುವ ಹೆಂಗಸರು ಜಟ್ಟಿಗಳನ್ನು ಶರೀರದ ಮೇಲೆ ಚುಚ್ಚಿಸಿಕೊಳ್ಳುತ್ತಿರುವರು. ನೀಲಿಯ ಬಣ್ಣದಿಂದಲೂ, ಕಪ್ಪು, ಹಸುರು ಬಣ್ಣದಿಂದಲೂ ಚುಚ್ಚಿಸಿಕೊಳ್ಳುವ ರೂಢಿಯಿರುವುದು. ಕೆಲವು ತರಹಗಳ ಬಳ್ಳಿಗಳ ರಸ, ತೆಂಗಿನ ಚಿಪ್ಪು ಸುಟ್ಟು ಕರಿಯೊಂದಿಗೆ ಕಲಿಯಿಸಿ ಎದೆಯ ಹಾಲಿನಿಂದಲೋ, ನೀರಿನಿಂದಲೋ ಸೇರಿಸಿ ಚುಚ್ಚಿಸಿಕೊಳ್ಳುತ್ತಿರುವರು. ಇವರ ಹಚ್ಚೆ ಗುರುತುಗಳು ಬಹಳ ಸ್ಪಷ್ಟವಾಗಿರುವುವು.

ಮೊದಲು ಯಾವ ಸ್ಥಳದ ಮೇಲೆ ಚುಚ್ಚಿಸಿಕೊಳ್ಳಬೇಕೊ ಅಲ್ಲಿ ಮಸಿಯಿಂದ ಆಯಾ ಚಿತ್ರಗಳನ್ನು ಬರೆದು ಮೂರು ಅಥವಾ ನಾಲ್ಕು ಸೂಜಿಗಳನ್ನು ದಾರದಿಂದ ಸೇರಿಸಿ ಕಟ್ಟಿ ಅವುಗಳಿಂದ ಚುಚ್ಚುವರು. ತರುವಾಯ ಶುಭ್ರವಾಗಿ ತೊಳೆದು ನೋವು ತಗ್ಗಲು ಎಣ್ಣೆ ಬಳಿಯುವರು. ಸೂಜಿಗಳಿಂದ ಚುಚ್ಚುವುದರಿಂದ ಬಾಧೆಯು ಹೆಚ್ಚಾಗಿದ್ದಲ್ಲಿ ಮತ್ತಾಗಿರಲು ಆ ಮನುಷ್ಯನಿಗೆ ಅಫೀಂ ತಿನ್ನಿಸುವರು.

ಎಲ್ಲಾ ರಾಜ್ಯಗಳಿಗಿಂತ ಜಪಾನ್ ದೇಶದಲ್ಲಿ ಈ ಹಚ್ಚೆ ಗುರುತುಗಳಿಗೆ ಹೆಚ್ಚು ಪ್ರಾಮುಖ್ಯವಿರುವುದು. ಸಾಧಾರಣವಾಗಿ ಜಪಾನ್ ದೇಶದವರ ಶರೀರಗಳ ಮೇಲೆ ಹಚ್ಚೆಯ ಗುರುತಿನಿಂದ ಚುಚ್ಚಿದ ಬುದ್ಧ ವಿಗ್ರಹವು ಕಾಣಿಸುತ್ತಲಿರುವುದು. ಈ ದೇಶದಲ್ಲಿಯೂ ಕೂಡ ಪೂರ್ವದ ಪುರಾಣಗಳಲ್ಲಿ ಹೇಳಲ್ಪಟ್ಟಿರುವುದೆಂಬ ನಂಬಿಕೆಯಿಂದ ಇದನ್ನು ಆಚರಿಸಿದ್ದಾರೆ. ಆದರೆ ಈಗ ಅದು ಬಂದು ಆ ದೇಶದಲ್ಲಿ ಒಂದು ಲಾವಣ್ಯವಾಗಿರುವುದು.

ಅಮೇರಿಕಾ ಹಿಂದುಗಳು (American Indians) ಮುಖಗಳ ಮೇಲೆಯೇ ಚುಚ್ಚಿಸಿಕೊಳ್ಳುತ್ತಿರುವರು. ಮೂಗು, ಕಿವಿಗಳ ಮೇಲೆ ಹಚ್ಚೆಯ ಚುಕ್ಕೆಗಳಿಂದ ವಲಯಾಕಾರವಾಗಿ ಚುಚ್ಚಿಸಿಕೊಳ್ಳುವರು.

ಮದುವೆಗಳಲ್ಲಿಯೂ, ಉತ್ಸವಗಳಲ್ಲಿಯೂ ಮೇಲಿನ ದೇಶಗಳಲ್ಲಿ ಇದಕ್ಕೆ ಪರಿಗಣತೆಯು ಹೆಚ್ಚಾಗಿರುವುದು. ಬೆಟ್ಟದ ಗುಹೆಗಳಲ್ಲಿರುವವರಿಗೆ ಕೂಡ ಇದರಲ್ಲಿ ಇಷ್ಟವಿರುವುದು. ಆಫ್ರಿಕಾ ಯುವತಿಯರು ಅವರ ಮದುವೆಗಳಿಗೆ ಬೆನ್ನಿನ ಮೇಲೆ ತಪ್ಪದೆ ಚುಚ್ಚಿಸಿಕೊಳ್ಳುವವರಂತೆ. ಸಿಂಹಗಳ ಚಿತ್ರಗಳಾಗಲಿ, ದೊಡ್ಡದೊಡ್ಡ ಹಾವುಗಳ ಗೊಂಬೆಗಳಾಗಲಿ ಮದುವೆಗೆ ಮೊದಲು ತಪ್ಪದೆ ಹಾಕುವರು.

(ಶ್ರೀ ಮಧುನಾ ಪಂತುಲ ವೆಂಕಟ ಸೂರ್ಯನಾರಾಯಣ ಮೂರ್ತಿ ಇವರ ತೆಲುಗು ಲೇಖನದಿಂದ)



: : ನೋಟಗಳು : :

ಗಾಂಧಿಜಿಯವರ ಸತ್ಯಾಗ್ರಹ ಚಳವಳಿಯಿಂದ ಸ್ಫೂರ್ತಿಗೊಂಡ ರೆವೆರೆಂಡ್ ಟೆಂಪ್ಲಿನ್ ಎಂಬ ಅಮೇರಿಕದಿಂದ ಬಂದ ಕ್ರೈಸ್ತ ಧರ್ಮೋಪದೇಶಕರು 'ಕ್ರೈಸ್ತಾಗ್ರಹ'ವೆಂಬ ಚಳವಳಿಯೊಂದನ್ನು ಆರಂಭಿಸುವುದಾಗಿ ಬೊಂಬಾಯಿಯಲ್ಲಿ ತಿಳಿಸಿದ್ದರು.

❖

ಕಾಂಗ್ರೆಸು ತನ್ನ ಇತ್ತೀಚೆಯ ನಿರ್ಣಯದಂತೆ ಅಹಿಂಸೆಯಲ್ಲಿ ವಿಶ್ವಾಸವನ್ನು ಕಡಿಮೆಮಾಡಿರುವುದಾಗಿ ಕಂಡುಬಂದರೂ, "ಕ್ರೈಸ್ತಾಗ್ರಹ" ಚಳವಳಿದವರು ತಮ್ಮ ಅಹಿಂಸೆಯ ಪ್ರತಿಜ್ಞೆಯನ್ನು ಬಿಟ್ಟುಬಿಡುವವರಲ್ಲವೆಂದವರು ಸಾರುತ್ತಾರೆ!

❖

ಗಾಂಧಿಜಿಯವರು ಪ್ರತಿಯೊಂದರಲ್ಲಿಯೂ ಸತ್ಯವನ್ನು ಶೋಧಿಸುವಂತೆ, ಅವರು ಪ್ರತಿಯೊಂದರಲ್ಲಿಯೂ ಕ್ರೈಸ್ತನನ್ನು ಅನ್ವೇಷಿಸುತ್ತಾರೆ!

❖

'ಇಂದಿನ ಯೂರೋಪು ರಾಜನೀತಿಯು ಭಯಾನಕಘೋರತನದ್ದು; ದಲಿತ ಮಾನವ ಜನಾಂಗಕ್ಕೆ ಅದು ಎಂದೂ ಉದ್ಧಾರದ ದ್ವಾರ ತೋರಿಸಲಾರದು; ಯೂರೋಪು ಬೇಗನೇ ಗಾಂಧಿಜಿಯವರ ಅಹಿಂಸೆಯ ಮಾರ್ಗವನ್ನು ಅನುಸರಿಸಬೇಕಾಗುವದು. ಹಿಂದೆ ಕ್ರೈಸ್ತನು ಅನ್ಯಾಯದ ಎದುರು ಆತ್ಮ ಬಲಿದಾನ ಮಾಡಿದ; ಇಂದಿನ ಗಾಂಧಿಯ ಚಿತ್ರವೂ ಅದೇ ಆಗಿದೆ.' ಹೀಗೆಂದು ಅವರು ನೆನ್ನೆ ಅಮೇರಿಕಕ್ಕೆ ತೆರಳುವಾಗ ಸಾರಿದರು.

❖

ಧರ್ಮೋಪದೇಶಕರು ದೇಶದ ರಾಜನೀತಿಯಲ್ಲಿ ಕೈಹಾಕಬಾರದೆಂದು ನಿಯಮವಿದ್ದರೂ ಅವರು ಅದನ್ನು ಮೀರಿ ಕಾಂಗ್ರೆಸು ಚಳವಳಿಯಲ್ಲಿ ವಿಶೇಷ ಉತ್ಸಾಹ ತೋರಿಸಿದ್ದುದರಿಂದ, ಅಮೇರಿಕಕ್ಕೆ ಅವರಿಗೆ ಬೇಗನೇ ಮರಳಿ ಬರುವಂತೆ ಆಜ್ಞೆ ಬಂತು!

ಬರುವ ಕಾಂಗ್ರೆಸ್ ಅಧಿವೇಶನವು, ಇತಿಹಾಸ ಪ್ರಸಿದ್ಧವಾದ ಕುರುಕ್ಷೇತ್ರದಲ್ಲಿ ನಡೆಯುವುದಾಗಿ ಲಾಹೋರಿನ ಸುದ್ದಿಗಾರನೊಬ್ಬನು ಬರೆಯುತ್ತಾನೆ.

❖

ಅಲ್ಲಿನ ಒಬ್ಬ ಧಾರ್ಮಿಕ ಬುದ್ಧಿಯ ಕಾಂಗ್ರೆಸು ಕೆಲಸಗಾರರೊಬ್ಬರು, ಈ ವರ್ಷದ ಕಾಂಗ್ರೆಸು ಅಧಿವೇಶನವನ್ನು ಪುರಾಣ ಪ್ರಸಿದ್ಧ ಸ್ಥಳವೆನಿಸಿದ ಕುರುಕ್ಷೇತ್ರದಲ್ಲಿ ಮಾಡುವುದಾದರೆ, ತಾನು ೨೫,೦೦೦ ರೂಪಾಯಿಗಳನ್ನು ಅದಕ್ಕಾಗಿ ಕೊಡುವೆನೆಂದು ತಿಳಿಸಿರುವರಂತೆ! ಪ್ರಾಂತಿಕ ಕಾಂಗ್ರೆಸು ಕಮಿಟಿಯು ಈ ಕೇಳಿಕೆಯನ್ನು ಮನ್ನಿಸುವಂತಿದೆಯೆಂದೂ ತಿಳಿಯಲಾಗಿದೆ.

❖

ಕುರುಕ್ಷೇತ್ರದಲ್ಲಿ ಕಾಂಗ್ರೆಸ್ ಅಧಿವೇಶನವು ಆಗುವ ಮೊದಲು, ಸಮಸ್ತ ಭಾರತವೇ ಕುರುಕ್ಷೇತ್ರವಾಗಿ ಪರಿವರ್ತಿಸದಿದ್ದರೆ ಸಾಕು!

"ಕಾಂಗ್ರೆಸು, ಸರಕಾರದೊಡನೆ ಸಂಧಿಯ ಬಾಗಿಲನ್ನು ಮುಚ್ಚಿಲ್ಲ" ವೆಂದು ರಾಷ್ಟ್ರಪತಿ ಅಜಾದರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು. ಸರಕಾರವೇ ಪೂನದ ನಿರ್ಣಯದಿಂದ ಕಾಂಗ್ರೆಸ್ಸು ನೀಡಿದ ಸ್ನೇಹಹಸ್ತವನ್ನು ತಿರಸ್ಕರಿಸಿದೆಯೆಂದೂ ಅಭಿಪ್ರಾಯಪಿತ್ತರು.

❖

ಕಾಂಗ್ರೆಸು ಬ್ರಿಟನಿನ ಈ ವಿಷಮ ಕಾಲದಲ್ಲಿ ಆಂದೋಲನವನ್ನು ಆರಂಭಿಸಲು ಇಚ್ಛಿಸುವುದಿಲ್ಲವೆಂದು ಕಾಂಗ್ರೆಸ್ ಮುಖಂಡರ ಸ್ಪಷ್ಟವಾದ ಮಾತು.

ರಾಷ್ಟ್ರೀಯ ಸರಕಾರದ ರಚನೆಗೆ ಅಲ್ಪಸಂಖ್ಯಾಕರ ಆತಂಕವನ್ನೆತ್ತಿದ ಎಮೆರಿಯವರಿಗೆ ರಾಜಾಜಿಯವರು ಒಂದು ವಿಶೇಷವಾದ ಗೌರವಪೂರ್ಣವಾದ ಸಲಹೆ ಕೊಟ್ಟಿದ್ದಾರೆ!

❖

"ಮುಸ್ಲಿಂ ಲೀಗು ಪ್ರಧಾನ ಮಂತ್ರಿತ್ವವನ್ನು ಸ್ವೀಕರಿಸಿ ಮಂತ್ರಿಮಂಡಳವನ್ನು ರಚಿಸಲಿ; ಕಾಂಗ್ರೆಸನ್ನು ನಾನು ಒಪ್ಪಿಸುತ್ತೇನೆ" ಎಂದಿದ್ದಾರೆ! ಬ್ರಿಟನಿನ ಹಾಗೂ ಭಾರತದ ರಾಜನೀತಿಜ್ಞರು ಈ ಸಲಹೆಗೆ ತಲೆದೂಗಿದ್ದಾರೆ.

❖

ಮುಸ್ಲಿಂ ಲೀಗಿನವರೂ ಈ ಸಲಹೆಯನ್ನು ಒಪ್ಪದಿರಲಾರರು!

❖

ಎಮೆರಿಯವರು ಏನುಮಾಡಲಿರುವರೋ ಮುಂದೆ ನೋಡಬೇಕಾಗಿದೆ!

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಆಕ್ಷೇಪವಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.



ಹುಣ್ಣು, ವೃಣ, ಕಾಲುಕುಂಟು ಮುಂತಾದ ಬೇನೆಗಳಿಗೆ ದಿವ್ಯೌಷಧಿ

ಜ್ಯಾಂಬಕು ಒಂದೂ ಕಲೆಯನ್ನುಂಟುಮಾಡುವುದಿಲ್ಲ!

ಹುಣ್ಣು, ವೃಣ, ಕಾಲುಕುಂಟು ಮುಂತಾದ ಬೇನೆಗಳು ಸಣ್ಣ ಕೆರೆಯುವಿಕೆ ಯಾ ತಗಲುವಿಕೆಯಿಂದ ಬರಬಹುದು. ಜ್ಯಾಂಬಕು ಎಲ್ಲಾ ವೃಣಗಳಿಗೂ ಫಲಕಾರಿಯಾದ ಔಷಧಿ. ಜ್ಯಾಂಬಕಿನಲ್ಲಿರುವ ಔಷಧೀಯ ಗಿಡಮೂಲಿಕೆಗಳ ತೈಲವು ನರನಾಡಿಗಳನ್ನು ಸೇರುತ್ತವೆ. ಇದರಿಂದ ನೋವು ಗುಣವಾಗುತ್ತದೆ. ಬಾತುವಿಕೆಯು ಕಡಿಮೆಯಾಗುತ್ತದೆ, ವೃಣಗಳಿಂದ ಬರುವ ಚರ್ಮಕ್ಕೆ ಒದಗುತ್ತದೆ. ಜ್ಯಾಂಬಕು ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುವುದು. ಇದು ಗಜ್ಜಿ, ಮೂಲವ್ಯಾಧಿ ಮುಂತಾದಕ್ಕೆ ದಿವ್ಯೌಷಧಿ. ಎಲ್ಲಾ ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ಪೆಟ್ಟಿಗೆ ಒಂದಕ್ಕೆ ರೂ. 1 ಮತ್ತು 2–4–0ರಂತೆ ಮಾರುತ್ತಾರೆ.

ಏಜಂಟ್ಸ್:

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಿ. ಟಿ. ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬಿನಿಂದ ವಿರಹಿತವಾದುದು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ವ್ಹಾಯಸರಾಯರ ಹೇಳಿಕೆಯ ನಿಷೇಧ ದಿನ

[ರವಿವಾರ ೧ನೇ ಸಪ್ಟಂಬರ್ ೧೯೪೦]

ವರ್ಧಾದಲ್ಲಿ ಇದೇ ಕೂಡಿದ ವರ್ಕಿಂಗ ಕಮಿಟಿಯು ನಿರ್ಣಯದಲ್ಲಿ ಹಿಂದೀಯರ ಬೇಡಿಕೆಗಳ ಹಾಗು ಸರಕಾರದ ಘೋಷಣದ ನಡುವೆ ಎಷ್ಟು ಅಂತರವಿದೆಯೆಂಬುದನ್ನು ತೋರಿಸಿ, ಸರಕಾರದ ಧೋರಣೆಯನ್ನು ಖಂಡಿಸಿರುವರು. ಅಲ್ಲದೆ ಜನರಾದರೂ ಸಾರ್ವಜನಿಕ ನಿಷೇಧ ಪರ ಸಭೆಗಳನ್ನು ಈ ಬಗ್ಗೆ ಕರೆಯಬೇಕೆಂದು ಬಿನ್ನವಿಸಿಕೊಂಡಿರುವರು.

ಅದರಂತೆ ನಮ್ಮ ಪ್ರಾಂತದಲ್ಲಿ ಮುಂದಿನ ರವಿವಾರ ಸೆಪ್ಟಂಬರ್ ೧ನೇ ತಾರೀಖನ್ನು 'ವ್ಹಾಯಸರಾಯರ ಹೇಳಿಕೆಯ ನಿಷೇಧ ದಿನ'ವೆಂದು ಆಚರಿಸತಕ್ಕದ್ದು. ಅಂದು ಸಂಜೆಯಲ್ಲಿ ಪ್ರಾಂತದ ಎಲ್ಲೆಡೆಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ಕರೆದು, ಕಾಂಗ್ರೆಸು ಈ ವರೆಗೆ ಯುದ್ಧದ ಬಗ್ಗೆ ತಳೆದಿರುವ ಧೋರಣ, ಯುದ್ಧದಲ್ಲಿ ಸಹಕರಿಸಬೇಕಾದರೆ ಕಾಂಗ್ರೆಸ್ಸು ಹಾಕಿರುವ ಕರಾರುಗಳು, ಸರಕಾರದ ನೀತಿ, ವ್ಹಾಯಸರಾಯ್ ಹಾಗು ಭಾರತ ಮಂತ್ರಿಗಳ ಹೇಳಿಕೆಗಳು ಮತ್ತು ಅದಕ್ಕೆ ಉತ್ತರವಾಗಿ ವರ್ಕಿಂಗ ಕಮಿಟಿಯು ಸ್ವೀಕರಿಸಿದ ಸದ್ಯದ ನಿರ್ಣಯ ಇವುಗಳನ್ನು ವಿವರಿಸಬೇಕು. ವರ್ಕಿಂಗ ಕಮಿಟಿಯ ಸದ್ಯದ ಠರಾವನ್ನು ಪೂರ್ಣ ಓದಿ, ಅದರಲ್ಲಿ ಅಡಕವಾಗಿರುವ ಅಂಶಗಳನ್ನು ತಿಳಿಸಿ ಹೇಳಿ ಸಭೆಯಲ್ಲಿ ವರ್ಕಿಂಗ್ ಕಮಿಟಿಯ ಠರಾವಿಗೆ ಬೆಂಬಲಕೊಡಬೇಕು. ಹಾಗು ವ್ಹಾಯಸರಾಯರ ಘೋಷಣೆ ಮತ್ತು ಭಾರತ ಮಂತ್ರಿಗಳ ಸ್ಪಷ್ಟೀಕರಣಗಳನ್ನು ನಿಷೇಧಿಸುವ ಠರಾವನ್ನು ಸಭೆಯಲ್ಲಿ ಪಾಸುಮಾಡಬೇಕು.

ಕಾಂಗ್ರೆಸ್ ಸದಸ್ಯತ್ವದ ಅವಧಿ ಹೆಚ್ಚಿತು

(ಕೊನೆಯ ತಾರೀಕು ೩೧-೧೦-೪೦)

ವರ್ಧಾದಲ್ಲಿ ಕೂಡಿರುವ ವರ್ಕಿಂಗ್ ಕಮಿಟಿಯು ಪ್ರಾಂತೀಯ ಸಮಿತಿಗಳ ಬಿನ್ನಹವನ್ನು ಲಕ್ಷಿಸಿ ಈ ವರ್ಷ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಮಾಡುವ ಅವಧಿಯನ್ನು ೨ ತಿಂಗಳು ಬೆಳೆಸಿರುವುದು. ಅಂದರೆ ಈಗ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಕು ಈ ವರ್ಷ ಅಕ್ಟೋಬರ ೩೧ ಇರುವುದು. ಕಾರಣ ಈ ಎರಡು ತಿಂಗಳ ಅವಧಿಯನ್ನು ಎಲ್ಲ ಅಧೀನ ಕಾಂಗ್ರೆಸ್ ಸಮಿತಿಗಳೂ ಕಾಂಗ್ರೆಸ್ ಕಾರ್ಯಕರ್ತರೂ ಯೋಗ್ಯ ರೀತಿಯಿಂದ ಉಪಯೋಗಿಸಿಕೊಂಡು ಆದಷ್ಟು ಹೆಚ್ಚಿಗೆ ತಮ್ಮಲ್ಲಿ ಕಾಂಗ್ರೆಸ್ ಸದಸ್ಯರಾಗುವಂತೆ ಪ್ರಯತ್ನಿಸತಕ್ಕದ್ದು. ಅದರಂತೆ ಜನರಾದರೂ ಇಲ್ಲಿಯ ವರೆಗೆ ಕಾಂಗ್ರೆಸ್ ಸದಸ್ಯರಾಗದಿದ್ದರೆ ಅವಧಿಯು ಮುಗಿಯುತ್ತೆಂದು ಸುಮ್ಮನೆ ಇರದೆ ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ ಸದಸ್ಯರಾಗಿ ಕಾಂಗ್ರೆಸಿನಲ್ಲಿನ ತಮ್ಮ ಅಚಲವಾದ ವಿಶ್ವಾಸವನ್ನು ತೋರಿಸುವರಾಗಿ ನಂಬಲಾಗಿದೆ ಎಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ.

ವಿಜ್ಞಾನಯುಗ

ಜರ್ಮನರ ಹೊಸ ಹೊಸ ಶಸ್ತ್ರಾಸ್ತ್ರಗಳು

ಜರ್ಮನ್ನರು ಯೂರೋಪಿನ ಈಗಿನ ಮಹಾಯುದ್ಧದಲ್ಲಿ ಉಪಯೋಗಿಸುವದಕ್ಕೋಸ್ಕರ ಕೆಲವು ಹೊಸಶಸ್ತ್ರಾಸ್ತ್ರಗಳನ್ನು ಹುಡುಕಿತೆಗೆದಿರುವರೆಂದೂ, ಅವು ಅದ್ಭುತವೂ ಭಯಂಕರವೂ ಆಗಿವೆ ಎಂದೂ ಒಂದು ಸ್ಪೆನಿಷ್ ಪತ್ರಿಕೆ ಬರೆದಿದೆ. ಇವುಗಳಲ್ಲಿ ಅತಿ ಮನೋರಂಜಕವಾದ ಶಸ್ತ್ರವೆಂದರೆ–ರೇಡಿಯೋದ ಮೂಲಕ ವಾಯುಮಂಡಲದಲ್ಲಿ ಕೆಲವು ಚುಂಬಕ ಮತ್ತು ವಿದ್ಯುದ್ವಾಹಕ ತರಂಗಗಳನ್ನು ಎಬ್ಬಿಸಿ, ಅವುಗಳ ಸ್ಪರ್ಶವಾದೊಡನೆ ಮನುಷ್ಯನಿಗೆ ವಾತರೋಗವನ್ನು ಬರಮಾಡಿಸುವದಾಗಿದೆ. ಇದರ ಪ್ರಭಾವಕ್ಕೆ ಬಿದ್ದವನು ಎಂಥ ಬಲಿಷ್ಠನಾದರೂ, ಆಚೆ ಈಚೆ ಒಂದಿಷ್ಟಾದರೂ ಅಲುಗಾಡಲಿಕ್ಕಾಗದೆ ಮರದ ಗೊಂಬೆಯಂತೆ ಚೇತನಹೀನನಾಗಿ ನೆಲದ ಮೇಲೆ ಬೀಳುವನು ಆದರೆ ಈ ಬಗೆಯ ಸಾಧನವು ಕಲ್ಪನಾಲೋಕದ ಒಂದು ವಿಚಿತ್ರವಾಗಿರಬಹುದಲ್ಲದೆ, ಅದು ಯಥಾರ್ಥದಲಿ ಇದ್ದಿರಲಾರದೆಂದು ವಿಜ್ಞಾನಿಗಳು ನಂಬಿರುವರು

೧೫೦ ಮೈಲು ಗುಂಡು ಹಾರಿಸುವ ಭೀಷಣ ಫಿರಂಗಿ

ಜರ್ಮನರ ಯುದ್ಧ ನೈಪುಣ್ಯದ ಕುರಿತು ಹೀಗೆ ವಿಷ್ಟೋ ಮನೋರಂಜಕ ಕತೆಗಳು ಕೇಳಿಬರುತ್ತವೆ ಇಷ್ಟರ ತನಕ ೫೦ ಮೈಲಿಗಿಂತ ಹೆಚ್ಚು ದೂರ ಗುಂಡು ಹಾರಿಸುವ ಫಿರಂಗಿಗಳು ಯಾವ ರಾಷ್ಟ್ರದಲ್ಲಿಯೂ ಇರುವುದಿಲ್ಲ. ಜರ್ಮನರು ೧೫೦ ಮೈಲು ದೂರ ಗುಂಡು ಹಾರಿಸುವ ಭೀಮಕಾಯ ಫಿರಂಗಿಗಳನ್ನು ತಯಾರಿಸಿರುವರಂತೆ. ಶತ್ರುನಿಪಾತ ಮಾಡುವದಕ್ಕಾಗಿ ಇವನ್ನು ಫ್ರಾನ್ಸಿನ ಪಶ್ಚಿಮೋತ್ತರ ಕರಾವಳಿಯಲ್ಲಿ ಹೊಂದಿಸಿಟ್ಟಿರುವರಾಗಿಯೂ ಸುದ್ದಿ ಇದೆ ಇವುಗಳಿಂದ ಹೊರಟ ಗುಂಡುಗಳು ಬ್ರಿಟನಿನ ೧೭ ಜಿಲ್ಲೆಗಳಲ್ಲಿಯೂ, ಬೋರ್ನಮೌತ್ ಒಕ್ಸಫರ್ಡ್, ನೊರ್ತಾರ್ಮ್ಟನ್, ಪೀಟರ್ ಬರೋ, ಮತ್ತು ಹಾರ್ವಿಚ್ ಪಟ್ಟಣಗಳಲ್ಲಿಯೂ ಹೋಗಿ ಬೀಳಬಹುದೆಂದೂ, ಅವಕ್ಕೆ ಹಾನಿಯನ್ನು ತರಬಹುದೆಂದೂ ಹೇಳಲಾಗುತ್ತದೆ

ಇನ್‌ಫ್ಲುಯೆಂಜಕ್ಕೆ ದಾಕಿನ ಮದ್ದು

ಇನ್‌ಫ್ಲುಯೆಂಜಕ್ಕೆ ಹೊಟ್ಟೆಗೆ ಮದ್ದನ್ನು ಕೊಡುವರು ಆದರೆ ದಾಕು ಹಾಕುವ ಕ್ರಮವಿದ್ದಿಲ್ಲ ಪರಂತು ಸಾಬೂನ ಮತ್ತು ಬಿಸಿನೀರ ಮಿಶ್ರಣದಲ್ಲಿ ಇನ್‌ಫ್ಲುಯೆಂಜದ ರೋಗಾಣುಗಳು ನಾಶವಾಗುತ್ತವೆಂದ ಈಗ ತಿಳಿದುಬಂದಿರುವದರಿಂದ ಆ ರೋಗಕ್ಕೆ ದಾಕು ಹಾಕುವದನ್ನು ವಿಜ್ಞಾನಿಗಳ ಕಂಡುಹಿಡಿದಿದ್ದಾರೆ ಆದರೆ ಸಾಬೂನ ಮತ್ತು ಬಿಸಿನೀರಿನ ಮಿಶ್ರಣವನ್ನು ದಾಕಿನ ಮೂಲಕ ರಕ್ತದೊಳಗೆ ಸೇರಿಸಿದಾಗ ಅದು ರೋಗಾಣುಗಳನ್ನು ಯಾವ ಪ್ರಕಾರ ನಾಶಮಾಡುತ್ತದೆಂಬುದು ಖಚಿತವಾಗಿ ಗೊತ್ತಾಗಿರುವುದಿಲ್ಲ. ಈಗ ಈ ಪರೀಕ್ಷೆ ಕೇವಲ ಇಲಿಮೊಲಗಳಂಥ ಚಿಕ್ಕ ಪ್ರಾಣಿಗಳ ಮೇಲೆ ಮಾತ್ರ ಆಗಿದೆ ಈ ವಿಜ್ಞಾನಿಗಳು ದಾಕುಹಾಕಿ ಮನುಷ್ಯರ ಮೇಲೂ ಈ ಪ್ರಯೋಗವನ್ನು ನಡೆಯಿಸಿ ನೋಡಲಿಕ್ಕೆ ಸಿದ್ಧರಾಗಿಲ್ಲ ಆದರೆ ಇನ್ನು ಸ್ವಲ್ಪ ಸಮಯದಲ್ಲಿಯೇ, ಮನುಷ್ಯರ ಮೇಲೂ ಪರೀಕ್ಷೆ ಆಗಿ ಇನ್‌ಫ್ಲುಯೆಂಜಕ್ಕೆ ಸರ್ವ ಸುಲಭವಾದ ದಾಕಿನ ಮದ್ದು ತಯ್ಯಾರಿಸಬಹುದು

ರೋಗ ಕಾರಣವಾದ ಆತ್ಮಸಾಕ್ಷಿ

ಆತ್ಮಸಾಕ್ಷಿ ಅಥವಾ ಅಂತಃ ಪ್ರೇರಣೆಯು ರೋಗ ಕಾರಣವಾಗುತ್ತದೆ ಬೆಕ್ಕಿನ ತಲೆ ಒಡೆದರೆ, ತರುಣನ ತಲೆಭಾರದರೂ ನಡುಗುತ್ತದೆಂಬ ಮಾತು ಯಥಾರ್ಥವಾಗಿದೆ ಲೀಸೆಸ್ಟರಿನ ಮನೋರೋಗದ ಚಿಕಿತ್ಸಾಲಯದಲ್ಲಿ ಒಬ್ಬ ರೋಗಿ ಬಂದಿದ್ದಳು ತನ್ನನ್ನು ಬಾಲ್ಯದಿಂದಲೂ ಬಹು ಪ್ರೇಮದಿಂದ ಸಾಕಿ ಸಲಹಿದ್ದ ತಂದೆಯನ್ನು ಅವಳು ಅವನ ವೃದ್ಧಾಪ್ಯದಲ್ಲಿ ಕಡೆಗಣಿಸಿದ್ದಳು. ಅವಳ ಅಲಕ್ಷ್ಯ ಮತ್ತು ಅಜಾಗರೂಕತೆಯಿಂದ ತಂದೆ ಮೃತನಾದ ಅವನ ಮರಣಕ್ಕೆ ತಾನೇ ಕಾರಣಳೆಂಬ ಬೋಧೆಯಾದಾಗಲೆಲ್ಲಾ ಅವಳು ಯಾವದೋ ಅಜ್ಞಾತ ಭಯದಿಂದ ಕಂಪಿಸುತ್ತಿದ್ದಳು ಅವಳ ಜೀವನವು ನೀರಸವಾಯಿತು ಆವಳಿಗೆ ತನ್ನ ಬಾಳಿನಲ್ಲಿ ಯಾವ ಆಶೆಯೂ ಉಳಿಯಲಿಲ್ಲ ಒಂದು ದಿನ ಕೂತುಕೊಂಡಿದ್ದಂತೆಯೇ ಅವಳ ಕುತ್ತಿಗೆ ಮರದ ಕೀಲಿನಂತೆ ಸ್ಥಿರವಾಯಿತು ಅದನ್ನು ಅತ್ತಿತ್ತ ಅಲ್ಲಾಡಿಸುವದಾಗಲಿಲ್ಲ ತಂದೆಯನ್ನು ಕೊಂದವಳು ಎಂಬ ಅಪಕೀರ್ತಿಯ ಲಜ್ಜೆಯಿಂ ಜನರಿಗೆ ತನ್ನ ಮುಖ ತೋರಿಸಲಿಕ ಅವಳಿಗೆ ಸಂಕೋಚವಾಗುತ್ತಿತ್ತು. ಇವ ಈ ಪೂರ್ವೇತಿಹಾಸವನ್ನು ತಿಳಿದು ಪಾ ಬೋಧೆಯೂ ರೋಗ ತರುವದೆಂ ಚಿಕಿತ್ಸಕನು ಊಹಿಸಿದನು. ದುಃ ಅವಳ ಪಾಪವು ತೊಳೆದು ಹೋಗಿ ಮ ಸ್ಸು ಸ್ವಸ್ಥವಾಗುವಂತೆ ಅವನು ಬೇಕಾ ಉಪಾಯಗಳನ್ನು ಹೂಡಿದನು. ತಾ ಪಾಪರಹಿತೆ ಎಂಬುದು ಅವಳಿಗೆ ಗೊತ ದೊಡನೆಯೇ ಅವಳು ಹಿಂದಿನ ಮನೋ ವೇದನೆಗಳನ್ನೆಲ್ಲ ಮರೆತು ಮೊದಲಿನಂ ಯೇ ಸಂತೋಷದ ಜೀವನವನ್ನು ನಡ ತೊಡಗಿದಳು. ಆದ್ದರಿಂದ ಶರೀರದಿಂ ಮಾತ್ರವಲ್ಲ, ಮನಸ್ಸಿನಿಂದಲೂ ಆರೋ ಗ್ಯವಾಗಿರಬೇಕೆಂದು ಆಶಿಸುವವರು ಪವಿ ಮತ್ತು ಪರಿಶುದ್ಧ ಜೀವನವನ್ನು ನಡ ವದು ಅಗತ್ಯವಾಗಿದ

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಾಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ

ಕಾಯಂ ನಿಶ್ಚಿತ ಬೋನಸ್ ರೂ 10/-
\+
ಸರ್ವಸಾಧಾರಣ ಬೋನಸ್ ರೂ 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಎಸ್. ನಾಯಕ್
ಆರ್ಗನೈಸರ್
ಪೆಂಟ್ಲಂಡ್ ಪೇಟೆ, ಮಂಗಳೂರು.

ಅಥವಾ

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸ

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾರೀಕು 8—9—1940 ತಾರೀಕು 8—9—1940

ಮೈಸೂರು

ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ!

★

ಮಂಗಳೂರಿನಿಂದ ಮೈಸೂರಿಗೆ ಸ್ಪೆಶ್ಯಲು ಸರ್ವಿಸುಗಳ ಏರ್ಪಾಡನ್ನು ಮಾಡಿರುವೆವು.

ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಕೇಳಿ ತಿಳಕೊಳ್ಳಬಹುದು—

ಮಂಗಳೂರಿನಿಂದ ಮೈಸೂರಿಗೆ ರೂಪಾಯಿ 4-8-0 ಮಾತ್ರ

JOINT MANAGERS,

The Combined Booking Agency,
MANGALORE

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುಸೂತ್ರವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮಂಜೂರ ಸರ್ಟಿಫಿಕೆಟು—ಡಾ ವೈದ್ಯ ಎಲ್ ಸಿ ಪಿ ಎಸ್. ಕೊಡುವರಾಗಿಹರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅದ್ಯ ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯು ಕ್ರಯವೂ ೪-೦-೦ ಬಿ ಪಿ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ವಿರಜೆ, S M C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲ್ಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ ಶ 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
„ ದುಯಂ „ „	1—16—0	
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುಡ್ಡು „	4—12—0	4—14—0
„ ದುಯಂ „ „	4—10—0	4—10—0
„ ಅವ್ವಲ್ ಸುಗ್ಗಿ „	4—8—0	4—10—0
„ ದುಯಂ „ „	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
„ ಸಿಪ್ಪೆ ಇದ್ದದು „	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
„ ದಿಲ್‌ಪಸಂದಿ „	—	—
ತೆಂಗಿನ ಎಣ್ಣೆ ಮಣಕ್ಕೆ	8—10—0	8—10—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—0—0	4—0—0
ಗೇರುಬೀಜ ಮುಡಿಗೆ	8—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಳ್ಳೇಮೆಣಸು ಹಂಡ್ರೆಡ್‌ವೇಟಿಗೆ	13—8—0	14—0—0

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 30—8—1940 [ಸಂಚಿಕೆ 35

The Bombay Life Assurance Company, Ltd.,
(Estd 1908)

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburb

The Bombay Life Building,

Sir Lalubhai Samaldas Road

Gandhi Nagar, UDIPI

OR ANY OF OUR FOLLOWING OFFICES AT

Puthiyara Calicut	Car Street Mangalore	[illegible] Station Road [illegible]
Gautam Nivas Charni Road Girgaum Bombay No. 4	Post Box No. [illegible]37 Mount Road Madras	[illegible] Bangalore City

(Regd)

ಅಮೃತಾಂಜನ

ತಲೆಪೀಡನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

KANNADA ILLUSTRATED WEEKLY

[illegible]

...ಯುದ್ಧದಲ್ಲಿ ಸೋತೆ ನಾವು, ಈ ಬಾರಿ ಗೆಲ್ಲುವೆವೋ? ಬಹಳ ಸಂದೇಹವಿದೆ, ಇಲ್ಲ; ಖಂಡಿತ ನಾವು ಗೆಲ್ಲಲಿಕ್ಕೇ ಇಲ್ಲ' ಎಂದು ಗುಟ್ಟಾಗಿ ಮಾತಾಡಿಕೊಳ್ಳುವರು ಎಂದು ಜರ್ಮನ ಕಡೆಯ ಪತ್ರಿಕೆಗಳೇ ಬರೆಯಲಾರಂಭಿಸಿವೆ.

ನಾಝಿಗಳ ಬೋಧನೆ

ಜನರು ಭವಿತವ್ಯದ ಕುರಿತು ಧೃತಿಗೆಡುತಿದ್ದಾರೆಂಬುದು ನಾಝಿಗಳಿಗೆ ಚೆನ್ನಾಗಿ ಗೊತ್ತಾಗಿದೆ. ಆದ್ದರಿಂದ ಜನರ ಭಯ ನಿವಾರಣೆ ಮಾಡಿ ಅವರಲ್ಲಿ ಸಾಹಸವನ್ನು ತುಂಬಿಸುವುದಕ್ಕೋಸ್ಕರ ನಾಝಿಗಳು ಅನೇಕ ಉಪಾಯಗಳಿಂದ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದಾರೆ. ಕಳೆದ ಬಾರಿಯ ಮಹಾಯುದ್ಧಕ್ಕೂ ಈ ಬಾರಿಯ ಯುದ್ಧಕ್ಕೂ ಯಾವ ಸಾಮ್ಯವೂ ಇರುವುದಿಲ್ಲವೆಂದು ಅವರು ಹೇಳುತಿದ್ದಾರೆ. ಈಗ ಯೂರೋಪಿನಲ್ಲಿ ಜರ್ಮನಿಯು ಒಂದು ಸಂಘಟಿತ ಮತ್ತು ಸುದೃಢ ಮಹಾ ರಾಷ್ಟ್ರವಾಗಿರುವುದು, ನಾಝಿಗಳಿಗೆ ಅವರು ಹಿಡಿದ ಕಾರ್ಯಗಳಲ್ಲೆಲ್ಲ ಯಶಸ್ಸು ಸಫಲತೆಯೂ ಪ್ರಾಪ್ತವಾಗಿರುವುದು; ಆಸ್ಟ್ರಿಯ ಹಂಗೇರಿಗಳಂಥ ದೇಶಗಳನ್ನು ಸೇರಿಸಿಕೊಂಡು ವಿಶಾಲ ರಾಷ್ಟ್ರವನ್ನು ಸ್ಥಾಪಿಸಿರುವುದು, ಜರ್ಮನಿಯನ್ನು ಸುತ್ತು ಹಾಕುವ ಶತ್ರುಗಳ ಪ್ರಯತ್ನಗಳೆಲ್ಲ ವಿಫಲವಾಗಿರುವುದು. ಈ ಎಲ್ಲಾ ಘಟನೆಗಳಿಂದ ಈಶ್ವರ ಕೃಪೆಯು ಜರ್ಮನರಿಗಿರುತ್ತದೆಂದು ನಾಝಿಗಳು ಜರ್ಮನ ಜನತೆಗೆ ಬೋಧಿಸಲಾರಂಭಿಸಿದ್ದಾರೆ.

ಧೃತಿ ಕೆಟ್ಟವರಿಗೆ ಸ್ಥಾನ ಮರ್ಯಾದೆ ಇಲ್ಲ

'ತಾನೊಂದೆಣಿಸಿದರೆ ದೈವ ಬೇರೊಂದೆಣಿಸುವುದು. ಕಾರ್ಯಕಾರಣ ಸಂಬಂಧವಿಲ್ಲದೆ ಜಗತ್ತಿನಲ್ಲಿ ಏನೂ ಆಗುವುದಿಲ್ಲ. ದೇವರು ನಮ್ಮೊಡನೆ ಇದ್ದಾನೆಂಬುದಕ್ಕೆ ಕಳೆದ ಕೆಲವು ವರ್ಷಗಳಿಂದ ನಡೆದಿರುವ ಘಟನೆಗಳೇ ಪ್ರಮಾಣವಾಗಿವೆ. ನಾವು ವಿಜಯಿಗಳಾಗಬೇಕೆಂಬುದೇ ದೇವರ ಇಚ್ಛೆಯಾಗಿರುವುದು. ದೇವರು ಅಯೋಗ್ಯರಿಗೆ ಯಾವ ಯೋಗ್ಯ ಕೆಲಸವನ್ನು ಒಪ್ಪಿಸುವುದಿಲ್ಲ. ವಿಶ್ವವಿಜಯಿಗಳಾಗಲು ನಾವು ಯೋಗ್ಯರಾಗಿರುವುದರಿಂದಲೇ ದೇವರು ಆ ಕಾರ್ಯವನ್ನು ನಮಗೆ ಒಪ್ಪಿಸಿದ್ದಾನೆ.' ಎಂದು ಒಂದು ನಾಝಿ ಪತ್ರಿಕೆ ಬರೆದಿದೆ. 'ಜರ್ಮನರು ಈಗ ಹೇಡಿಗಳಾಗಿ ಹೆದರಿ ಹಿಂದೆ ಬೀಳುವರಾದರೆ ಮತ್ತೆ ಅವರು ಎಂದೆಂದಿಗಾಗಿ ಒಂದು

ತಾಯಂದಿರು ಮತ್ತು [illegible]
'ಓವಲ್‌ಟಿನ್' [illegible]
ಮಾಡುವುದು.

ಯಾವಾಗಲೂ ನೈಸರ್ಗಿಕವಾದ ಆಹಾರವೇ ಉತ್ತಮ. ತಾಯಂದಿರು ತಮ್ಮ ಮಕ್ಕಳಿಗೆ ಅಂಥಾ ನೈಸರ್ಗಿಕ ಆಹಾರವಾದ ಮೊಲೆಹಾಲನ್ನಿಣ್ಣಿಸಿ ಅವನ್ನು ಏನೊಂದು ಪ್ರಯಾಸ ಪಡದೆ ಸಂಗೋಪನೆ ಮಾಡುವ ಶಕ್ತಿಯು ಬರಬೇಕಾದರೆ ಬಾಹಾಂತಿತನದ ಮೊದಲೂ ನಂತರವೂ 'ಓವಲ್‌ಟಿನ್'ನ್ನು ಸೇವಿಸಬೇಕು. ಇದರಿಂದ ತಾಯಂದಿರಿಗೆ ಹಾಲು ಸಮೃದ್ಧವಾಗುವುದೆಂಬುದು ಖಾತ್ರಿ.

ಪ್ರಕೃತಿಯು ಸಂಪನ್ನವಾದ ಶಕ್ತಿವರ್ಧಕ ಆಹಾರ—ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು ಮತ್ತು ನೈಸರ್ಗಿಕ ಆಹಾರ ಸತ್ವ (Vitamins)ಗಳಿಂದ ತಯಾರಿಸಲ್ಪಟ್ಟ ಈ 'ಓವಲ್ಟಿನ್' ಪರಿಪೂರ್ಣವಾಗಿ ರುಚಿಕರವಾದ ಆಹಾರವಾಗಿದ್ದು ತಾಯಂದಿರಿಗೆ ಆರೋಗ್ಯ, ತ್ರಾಣ ಮತ್ತು ಚೇತನವನ್ನುಂಟುಮಾಡಿ ಪೋಷಿಸುತ್ತದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ (ಇಂಡಿಯಾ) ಲಿಮಿಟೆಡ್,
ಕೃಷ್ಣನ್ಸ್ ಹೋಲ್ ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್'

'ಓವಲ್‌ಟಿನ್ ಬಿಸ್ಕಟುಗಳು' ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. 4 ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತ್ಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OVn839

ಕಿದೇ ಇರಬೇಕಾಗುವುದು ಜರ್ಮನಿಯು ಯಾವ ಗ್ರಾಹಿಯೂ ಆಗಲಾರದು. ಸ್ಥಾನವೂ ಮರ್ಯಾದೆಯೂ ಇರುವುದಿಲ್ಲ' ಎಂದು ಅದೇ ಪತ್ರಿಕೆಯು ಜರ್ಮನ ಜನತೆಗೆ ಎಚ್ಚರವನ್ನು ಕೊಟ್ಟಿರುವದು. ಭವಿಷ್ಯವೆಷ್ಟು ಉಜ್ವಲವಾಗಿ ಮಾಡಿದ ಈಶ್ವರನ ಅನುಗ್ರಹಕ್ಕೆ ಪಾತ್ರವಾದ ನವ ವೀರ [illegible] ಜರ್ಮನಿಯಲ್ಲಿ ಈ ಹೇಡಿಗಳಿಗೆ ಯಾವ

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6—9—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೬—೯—೧೯೪೦

ರಾಜಾಜಿಯವರ ಸೂಚನೆಗೆ ಎಮೆರಿಯವರ ಮೌನವೇಕೆ?

ಉತ್ತರ ಕೊಡುವುದು ಕಷ್ಟವೆನ್ನುತ್ತಾರೆ ರಾಜಾಜಿ

'ಮನೆ ಹಾಳಾಗದೆ ಒಕ್ಕಲು ಕಿತ್ತುಹೋಗಬೇಕು'

'ಮುಸ್ಲಿಂ ಲೀಗು ಮಂತ್ರಿಮಂಡಳವನ್ನು ರಚಿಸಲಿ, ಕಾಂಗ್ರೆಸನ್ನು ಒಪ್ಪಿಸುವ ಕೆಲಸ ನನ್ನದು ಎಂಬ ಸೂಚನೆಯನ್ನು ನಾನು ವರ್ಕಿಂಗ್ ಕಮಿಟಿಯ ಸಭೆಗೆ ಹೋಗುವುದಕ್ಕಿಂತ ಮೊದಲು ಭಾರತ ಸಚಿವರಿಗೆ ಆ ಮೂಲಕ ಬ್ರಿಟಿಷ್ ಸರಕಾರಕ್ಕೆ ಕೊಟ್ಟಿರುವುದನ್ನು ನೀವು ವಿಚಾರಿಸತಕ್ಕದ್ದು. ನನಗೆ ಕಾಂಗ್ರೆಸಿನ ವಿಷಯದಲ್ಲಿ ಅಂತಹ ವಿಶ್ವಾಸವಿದೆ. ಯಾಕೆನ್ನುತ್ತೀರಾ? ಕಾಂಗ್ರೆಸಿನ ಇಚ್ಛೆಯು ಮುಸ್ಲಿಂ ಲೀಗಿನ ಹಕ್ಕು ಸ್ವಾತಂತ್ರ್ಯಗಳನ್ನು ಅಪಹರಿಸುವುದಲ್ಲ; ಕಾಂಗ್ರೆಸಿನ ಇಚ್ಛೆಗೆ ಬೇಕಾದುದು ಬ್ರಿಟಿಷರ ಕೈಯಿಂದ ಪ್ರಜೆಗಳ ಕೈಗೆ ಸ್ವಾತಂತ್ರ್ಯ ಬರಬೇಕೆಂಬುದು. ಇದಕ್ಕೆ ಭಾರತ ಸಚಿವರಾದ ಎಮೆರಿಯವರು ಉತ್ತರ ಕೊಡಲಿಲ್ಲ. ಬ್ರಿಟಿಷ್ ಸರಕಾರವೂ ಉತ್ತರ ಕೊಡಲಿಲ್ಲ. ಇದರ ಕಾರಣವು ಏನೇ ಆಗಿರಲಿ ಇದಕ್ಕೆ ಉತ್ತರ ಕೊಡುವುದು ಬಹಳ ಕಷ್ಟದ ಕೆಲಸವಾಗಿದೆ."

ಹೀಗೆಂದು ರಾಜಾಜಿಯವರು ಮದ್ರಾಸಿನ ಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ಸ್ಫೂರ್ತಿದಾಯಕವಾದೊಂದು ಭಾಷಣ ಕೊಡುತ್ತಾ ಹೇಳಿದರು.

ಅವರು ವಿವರಿಸಿದ ಕೆಲವು ವಿಷಯಗಳು ಇವು —

ಭಾರತವು ಸ್ವತಂತ್ರವಾಗಬೇಕಾಗಿದೆ

ಯಾವುದೇ ದೇಶವಾದರೂ ಸ್ವತಂತ್ರವಾಗುವುದು ಅದರ ಸ್ವಂತ ಪರಿಶ್ರಮದಿಂದಲೇ. ಭಾರತವೂ ಅದರ ಸ್ವಂತ ಪರಿಶ್ರಮದಿಂದ ಸ್ವತಂತ್ರವಾಗಬೇಕು. ಹಾಗಾದರೆ ನಮ್ಮ ಮಾರ್ಗದಲ್ಲಿರುವ ಕಂಟಕವು ಯಾವುದು? ಮೊದಲು ನಾವು ನಮ್ಮ ಅಭಿಪ್ರಾಯವನ್ನು ಒಳ್ಳೆಯ ಇಂಗ್ಲಿಷಿನಲ್ಲಿ ತಿಳಿಸಿದರೆ ಸಾಕಾದೀತು ಎಂದು ಗ್ರಹಿಸಿದ್ದೆವು, ಆದರೆ ಇಂದು ಅದು ಸಾಲದಾಗಿದೆ. ಸ್ವಾರ್ಥ, ದುರಾಶೆ, ದ್ವೇಷಗಳಿಂದ ಕೂಡಿದ ಜನರನ್ನು ನಾವು ಗೆಲ್ಲಬೇಕಾಗಿದೆ, ಸಂಕುಚಿತ ಬುದ್ಧಿಯವರಿಗೆ ನಮ್ಮ ವಿಶಾಲ ಮತಿಯನ್ನು ತೋರಿಸಬೇಕಾಗಿದೆ; ನಾವು ಸ್ವಾರ್ಥತ್ಯಾಗಮಾಡಬೇಕಾಗಿದೆ. ಇದರಿಂದ ಸ್ವತಂತ್ರರಾಗಬಹುದು. ದ [illegible] ನೆಗೆ ವ [illegible] ಇದೀ ಜನಾಂಗವೇ ಅಭಿಮಾನಪಟ್ಟಿದೆ.

ದುರದೃಷ್ಟದ ದಿನ'

ನಮ್ಮ ದೇಶಕ್ಕೆ ಜನವರಿ ೧೯ ಬಹಳ ದುರದೃಷ್ಟದ ದಿನ. ಆ ದಿನ ಮರಾಠರು ಪಾಣಿಪತ್ತಿನಲ್ಲಿ ಅಹಮ್ಮದ್ ಶಹಾ ಅಬ್ದಾಲಿಯ ದಾಳಿಯಿಂದ ಪರಾಜಿತರಾದರು. ಅದೇ ದಿನ ವೆಲ್ಲೆಸ್ಲಿ ಮರಾಠರನ್ನು ಸೋಲಿಸಿದ. ಅದೇ ದಿನ ಜಲಿಯನ್‌ವಾಲಾಬಾಗ ನಡೆಯಿತು. ಅದೇ ದಿನ ಜಲಿಯನ್‌ವಾಲಾ ಬಾಗದಿನವೂ ಸಂಭವಿಸಿತು. ಬ್ರಿಟಿಷರು ಈ ರಾಜ್ಯವನ್ನು ಮರಾಠರಿಂದ ಬಹುಭಾಗವನ್ನು ಅಲ್ಪ ಭಾಗ ಸಿಕ್ಕಿದುದರಿಂದ [illegible] ದೀಯ [illegible] ಹೇಗಿದ್ದರೂ ಕಡೆಗೆ ಕಾಂಗ್ರೆಸ್ಸಿನ ಹತ್ತಿರ, ಇದೀ ಜಗತ್ತೇ ಭಾರತವು ಸ್ವತಂತ್ರವಾಗಬೇಕೆಂದು ನಿಶ್ಚಯಮಾಡಿದೆ.

ಹಾಗಾದರೆ ನಾವು ಏನು ಮಾಡತಕ್ಕದ್ದು? ಸ್ವಾತಂತ್ರ್ಯವನ್ನು ಯಾವ ದ್ವೇಷದುರಭಿಪ್ರಾಯವಿಲ್ಲದೆ ಗಳಿಸಬೇಕು. ಮನೆಯನ್ನು ಹಾಳುಮಾಡಿ ಒಕ್ಕಲು ಹೋಗುವ ಒಕ್ಕಲುಗಳಿದ್ದಾರೆ. ಹಾಗೆ ನಮ್ಮಲ್ಲಿ ಆಗಬಾರದು. ಬ್ರಿಟಿಷರು ಮತ್ತು ನಮ್ಮೊಳಗೆ ದುರಭಿಪ್ರಾಯ ಹುಟ್ಟದೆ ನಾವು ಸ್ವತಂತ್ರರಾಗುವುದು ಬೇಕಾಗಿದೆ. ಬ್ರಿಟಿಷರು ಹೋಗುವಾಗ, ಮನೆ ಬಿಟ್ಟುಹೋಗುವಾಗ ಅದರ ವಸ್ತುಗಳನ್ನು ಕೆಡಿಸಿ ಹೋಗುವಂತೆ ಮಾಡಿ ಪ್ರಯೋಜನವೇನು?— ಉದಾಹರಣೆಗೆ ಐರ್ಲೆಂಡಿನ ಚರಿತ್ರೆಯನ್ನು ನೋಡಿ. ಅವರಿಗೆ ಬೇಗನೇ ಸ್ವಾತಂತ್ರ್ಯ ಕೊಟ್ಟಿದ್ದರೆ, ಇಂದು ಬ್ರಿಟಿಷರಿಗೆ ಅವರ ಉತ್ತಮ ಗೆಳೆಯರಾಗಿರುತ್ತಿದ್ದರು.

ಇಂದು ಭಾರತದಲ್ಲಿ ಏನು ನಡೆಯುತ್ತದೆ? ನಾನು ಮತ್ತು ನನ್ನ ಗೆಳೆಯರು ಬ್ರಿಟಿಷರ ಮಿತ್ರರಾಗಿದ್ದೇವೆ. "ನಾವು ಹಿಂದಿನದೆಲ್ಲವನ್ನೂ ಮರೆತು ಬಿಡುತ್ತೇವೆ, ನೀವು ಮಾಡಬೇಕೆ"ಂದು ನಾವು ಪ್ರೇಮದಿಂದ ಹೇಳುತ್ತಿದ್ದೇವೆ. ನೀವು ಪಾಲಾಗಿದ್ದೀರಿ, ಹಾಳಾಗಿದ್ದೀರಿ, ಕೊಡಲಾರಿರಿ ಕೊಡಲಾರಿರಿ ಎಂದವರು ನಿಕೃಷ್ಟ ಸ್ಥಿತಿಯ ಉತ್ತರ ಕೊಡುತ್ತಾರೆ. ನಮ್ಮನ್ನು ಕತ್ತೆಗಳಂತೆ ಕಾಣುತ್ತಾರೆ. ಬ್ರಿಟಿಷರು, ರಾಜನೀತಿಯಲ್ಲಿ, ನೀತಿಯಲ್ಲಿ ತರ್ಕದಲ್ಲಿ ವಿಶಾರದರಂತೆ. ಅವರ ಇಷ್ಟು ಕಾಲದ ರಕ್ಷಣೆಯಲ್ಲಿ ಈ ಕತ್ತೆಯು ಒಳ್ಳೆಯ ಬುದ್ಧಿ ಕಲಿತಿಲ್ಲವಾದರೆ ಕತ್ತೆಯನ್ನು ಅದರ ಪಾಲಿಗೆ ಬಿಟ್ಟುಬಿಡಲಿ ಎಂದು ನಾವು ಇಂದಿಗೆ ಹೇಳುತ್ತೇವೆ. ಬ್ರಿಟಿಷರು ತಮ್ಮ ಕರ್ತವ್ಯವನ್ನು ಯೋಗ್ಯ ಸಮಯದಲ್ಲಿ ಮಾಡುತ್ತಿದ್ದರೆ ಯುದ್ಧದ ಇತಿಹಾಸವೇ ಬೇರಾಗುತ್ತಿತ್ತು!

ಎಮೆರಿಯವರು ಮೂಕರಾದರೆ?

ಹಿಂದೂ ಮುಸ್ಲಿಮರ ಜಗಳವು ಬ್ರಿಟಿಷರಿಗೆ ಆತಂಕವಾಗಿದ್ದರೆ ಅದಕ್ಕೆ ನಾನು ಅದನ್ನು ನಾವೇ ತೀರಿಸುವುದಾಗಿ ಮೇಲೆ ಹೇಳಿದ ರೀತಿಯಾಗಿ ಸೂಚನೆ ಕೊಟ್ಟಿದ್ದೇನೆ. ಕಾಂಗ್ರೆಸನ್ನು ಒಪ್ಪಿಸುವ ಜವಾಬ್ದಾರಿಯನ್ನು ನಾನು ಹೊತ್ತಿದ್ದೇನೆ. ಎಮೆರಿಯವರು ಇನ್ನೂ ಮೂಕರಾಗಿರುವುದೇಕೆ? ಉತ್ತರವಿತ್ತಿಲ್ಲವೇಕೆ?

ಕೆಲವರು ನನ್ನ ಸೂಚನೆಯು ಪ್ರಯೋಜನವಿಲ್ಲವೆನ್ನುತ್ತಾರೆ. ಹಿಂದುಗಳು ಬಹುಮತವಿರುವಲ್ಲಿ ಮುಸ್ಲಿಂ ಲೀಗು ಮಂತ್ರಿಗಳಾಗಿ ಪ್ರಯೋಜನವಿಲ್ಲವೆನ್ನುತ್ತಾರೆ. ಬಹುಸಂಖ್ಯಾಕ ಹಿಂದುಗಳನ್ನು ಅಲ್ಪಸಂಖ್ಯಾಕರಾಗಿ ಮಾಡಲು ಸಾಧ್ಯವುಂಟೆ? ಬ್ರಿಟನಿನಲ್ಲಿ ಅಲ್ಪಸಂಖ್ಯಾಕ ಪಕ್ಷದ ಚರ್ಚಿಲ್ಲರು ಇಂದು ಪ್ರಧಾನ ಮಂತ್ರಿಯಾಗಿ ಕಾರ್ಯ ನಡೆಸುವುದಿಲ್ಲವೆ? ಮುಖ್ಯ ನ್ಯಾಯ, ದೇಶವಾತ್ಸಲ್ಯವಿದ್ದರೆ ಅಲ್ಪಸಂಖ್ಯಾಗಿ ಪ್ರಧಾನ ಮಂತ್ರಿಗೂ ಕಾರ್ಯನಿರ್ವಾಹಮಾಡಲು ಸಾಧ್ಯವಿದೆ.

ಯುದ್ಧದ ಕೊನೆಗೆ ಬಹುಜನರು ಪಾಕಿಸ್ತಾನವೇ ಆಗಬೇಕೆಂದು ಹೇಳಿದರೂ ನಾನು ಒಪ್ಪುವೆನು. ಅಂತೂ ಪ್ರಜೆಗಳ ಕೈಗೆ ಅಧಿಕಾರ ಬರಬೇಕು.'

ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ-ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ ಬೇರು ಸಹಿತ ಕಿತ್ತುಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಶ್ಲೇಷ್ಮ ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು, ಸಾವಕಾಶವಾಗಿ ಶಕ್ತಿಯು ತುಂಬಿಬಂದು ಶ್ವಾಸನಳಿಗಳ ಮುಖ್ಯವಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೩ ಔ, ೬ ಔ, ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ. [illegible] ಮತ್ತು [illegible]ಗಳಿಗೆ ಎಲ್ಲಾ ಕಡೆ ಸಿಗುವುದು. ತರಿಸಿಕೊಳ್ಳುವ ವಿಳಾಸ:

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ದಮ್ಮಿಗೆ ಖಚಿತವಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರಿ

ಸ್ವದೇಶಾಭಿಮಾನಿ

ತಾರೀಖು 6—9—1940

ಒಂದು ವರ್ಷ!

ಮಹಾಯುದ್ಧವು ಆರಂಭವಾಗಿ ಒಂದು ವರ್ಷವು ಸಂದಿತು! ಈ ಒಂದು ವರ್ಷದ ನೆನಪು ಜಗತ್ತಿನ ಸ್ಮೃತಿಯಲ್ಲಿ ಎಷ್ಟು ಹೊಸತಾಗಿದೆಯೋ ಅಷ್ಟು ಭೀಷಣವೂ ಭಯಾನಕವೂ ಆಗಿದೆ.

ಪ್ರಜಾಪ್ರಭುತ್ವ ತತ್ವವು ಸರ್ವಾಧಿಕಾರದ ಕಾಲಬುಡದಲ್ಲಿ ಒತ್ತಿ ತುಳಿಯಲ್ಪಡುತ್ತಿದೆ! ರಾಷ್ಟ್ರಗಳ—ಜನಾಂಗಗಳ ಸ್ವಾತಂತ್ರ್ಯವು ಸುಲಿಗೆಸೂರೆಯಾಗಿದೆ! ನಡೆಗಿದ ಅನ್ಯಾಯವನ್ನು ಕೂಗಿ ಸಾರುವುದರೂ ಕೇಳಿ ಸಂತೈಸುವವರಿಲ್ಲದಾಗಿದೆ. ಜನತೆಯ ಹೃದಯದಲ್ಲಿ ಭಯಚಿಂತೆ ಉದ್ವೇಗಗಳ ತರಂಗಗಳೇ ಉಂಟಾಗಿವೆ.

ಕೊನೆಗೆ ಈ ಒಂದು ವರ್ಷದ ಭೀಕರ ಯುದ್ಧದ ಸಿಂಹಾವಲೋಕನದಿಂದ ನಾಜಿಗಳ ಉಪಟಳವು ಎಷ್ಟೊಂದು ಲೋಕಕ್ಕೆ ಕ್ರೂರ ಹಳರಯಾಗಿದೆಯೆಂಬುದು ಪ್ರಪಂಚದ ದೃಷ್ಟಿಪಥದಲ್ಲಿ ಅಚ್ಚಳಿಯದೆ ಉಳಿಯುವುದು. ಆದುದರಿಂದಲೇ, ಸರ್ವಾಧಿಕಾರವನ್ನು ಪಶುನೀತಿಯನ್ನು ಎದುರಿಸಲು ಲೋಕದ ಪ್ರಜಾಪ್ರಭುತ್ವ ರಾಷ್ಟ್ರಗಳು ಇಂದು ಸೊಂಟಕಟ್ಟಿ ನಿಂತಿವೆ.

ಹಿಟ್ಲರನು ಇಷ್ಟು ಪ್ರಚಂಡನಾಗಿ ಮುಂದುವರಿಯುವನೆಂದು ಜಗತ್ತು ಆರಂಭದಲ್ಲಿ ತಿಳಿದಿರಲಿಲ್ಲ. ಆದುದರಿಂದಲೇ ಆರಂಭದಲ್ಲಿ ಶಾಂತಿಯ, ತಾಟಸ್ಥ್ಯದ ವ್ಯವಸ್ಥೆಯನ್ನೇ ಹಲವು ರಾಷ್ಟ್ರಗಳು ಮಾಡಿದವು! ಮಹಾಯುದ್ಧವನ್ನು ನಿವಾರಿಸಲು ಯುರೋಪಿನ ಹಲವು ರಾಜನೀತಿಜ್ಞರು ಯತ್ನಿಸಿದರು! ಯುದ್ಧದ ಪ್ರಾರಂಭದಲ್ಲಿಯಾದರೂ ತಟಸ್ಥ ರಾಷ್ಟ್ರಗಳು, ತಮ್ಮ ತಾಟಸ್ಥ್ಯ ಘೋಷಣೆಯಿಂದ ತಮ್ಮ ರಾಷ್ಟ್ರಕ್ಕೆ ಹಿಟ್ಲರನ ದಂಡೆಯಾತ್ರೆ ಒದಗದೆಂದೇ ಆಪರದೆಂದು ನಂಬಿದ್ದುವು! ಆದರೆ ಎಲ್ಲರ ಆಸೆ ಭರವಸೆಗಳು ಮುಂದೆ ಧೂಳೀಮಯವಾದುವು!

ಒಂದರ ಮೇಲೊಂದರಂತೆ ಸಣ್ಣ ಪುಟ್ಟ ರಾಷ್ಟ್ರಗಳನ್ನು ನಾಜಿಗಳು ನುಂಗತೊಡಗಿದರು. ತಮ್ಮ ರಕ್ತತೃಷ್ಣೆಯನ್ನು ಆರಿಸಲು ಪ್ರವೃತ್ತರಾದರು! ತಮ್ಮ ರಾಷ್ಟ್ರ ಮತ್ತು ಜನರ ಆಹಾರವೊಂದಲ್ಲದೆ ಅವರಿಗೆ ಲೋಕದಲ್ಲಿ ಮುಖ್ಯವಿದವು ಯಾವುದೂ ಪ್ರಮುಖವಾದುದೆಂದೂ, ಬಾಳತಕ್ಕುವವೆಂದೂ ತೋಚಲಿಲ್ಲ. ಪೋಲೆಂಡು, ಹಾಲೆಂಡು, ಬೆಲ್ಜಿಯಮ್, ಫ್ರಾನ್ಸುಗಳು ಇತ್ಯಾದಿಯಾಗಿ ರಾಷ್ಟ್ರಗಳೆಲ್ಲಾ ಉರುಳಿ ಹೋದವು. ಹಿಟ್ಲರನು ಪ್ರಚಂಡನಾಗಿ ಮುಂದೊತ್ತುವುದನ್ನು ಕಂಡು ಅಮೇರಿಕ ಮತ್ತು [illegible] ಗಳೂ ಎಚ್ಚತ್ತು [illegible] ವೇಗವನ್ನು ತಡೆಗಟ್ಟಲು ದೃಢ ನಿಶ್ಚಯ ಮಾಡಿದುವು!

ಕೊನೆಗೆ ಬ್ರಿಟನು ಇಂದು ಏಕಾಂಗಿಯಾಗಿ ಹಿಟ್ಲರನನ್ನು ಎದುರಿಸಿ ನಿಂತಿದೆ. ಇತರ ಪ್ರಜಾಪ್ರಭುತ್ವ ರಾಷ್ಟ್ರಗಳೂ ತಮ್ಮ ಸಹಾಯ ಸಹಾನುಭೂತಿಗಳನ್ನು ಕಳುಹಿಸಿವೆ; ಬ್ರಿಟನು ವಿಜಯಿಯಾಗಲೆಂದು ಹಾರೈಸುತ್ತಿವೆ; ಬ್ರಿಟನು ತನ್ನ ಜಯದ ಕುರಿತು ಧೈರ್ಯಮಾಡಿ ನಿಂತಿದೆ! ಬ್ರಿಟನಿನ ಈ ಧೈರ್ಯಕ್ಕೆ ಜಗತ್ತೇ ಅದನ್ನು ಕೊಂಡಾಡಬೇಕು. ಇಂಗ್ಲೆಂಡು ಬರ್ಲಿನುಗಳ ಮೇಲೆ ಎರಡು ಕಡೆಯವರೂ ಬಾಂಬುಗಳನ್ನು ಎಸೆಯುತ್ತಾ ತಾಡನಕ್ಕೆ ಪ್ರತಿತಾಡನ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಒಂದು ರೀತಿಯಿಂದ ನೋಡಿದರೆ, ಪ್ರಚಂಡ ಯುದ್ಧವು ಈಗ ಪ್ರಾರಂಭವಾಗಿದೆಯೆನ್ನಬೇಕು. ಅದರ ಉಗ್ರತೆಯನ್ನು, ಪರಮಾವಧಿ ಪ್ರಚಂಡತೆಯನ್ನು ಕಂಡು ಜೀವಲೋಕವು ತತ್ತರಿಸುವಂತಾಗಬಹುದು; ನೆಲೆಯಿಲ್ಲದೆ, ನೆಲವಿಲ್ಲದೆ ಕಠಿಣ ಸಂಕಷ್ಟಕ್ಕೆ ಒಳಗಾಗಬಹುದು; ಆದುದರಿಂದ ಸಾಮ್ರಾಜ್ಯಶಾಹಿಕ ಬುದ್ಧಿಯಿಂದ, ಸ್ವಾತಂತ್ರ್ಯಾಪಹಾರದ ದೃಷ್ಟಿಯಿಂದ ಲೋಕಕಂಟಕರಾಗಿ ಮುಂದುವರಿಯುವವರನ್ನು ಇದಿರಿಸಲು ಒಂದಾಗುವುದು ಸ್ವಾತಂತ್ರ್ಯ ಪ್ರೇಮಿಗಳ ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಿದೆ!

ಸಿಲೋನಿಗೆ ಸ್ವಾತಂತ್ರ್ಯ

ಇದು ಸ್ವಾತಂತ್ರ್ಯದ ಯುಗ. ಜಗತ್ತಿನ ಸ್ವಾತಂತ್ರ್ಯ ರಕ್ಷಣೆಗಾಗಿ ಅದ್ಭುತವಾಗಿ ಪ್ರಚಂಡವಾಗಿ ಕಾದಾಡುವ ಕಾಲ. ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾಗಿ ಸ್ವತಂತ್ರವಾಗಿರುವ ರಾಷ್ಟ್ರಗಳು ಜೀವದ ಹಂಗು ತೊರೆದು ಹೋರಾಡುವ ಸಮಯ. ಇಂತಹ ಸಮಯದಲ್ಲಿ ಸ್ವಾತಂತ್ರ್ಯವನ್ನು ಕಳೆದುಕೊಂಡ ರಾಷ್ಟ್ರಗಳು ತಮ್ಮ ಹಲಕಾಲದ ಪಾರತಂತ್ರ್ಯವನ್ನು ನೀಗಾಡಿಸಿಕೊಳ್ಳಲು ಪ್ರಯತ್ನಪಡುತ್ತಿದ್ದರೆ ಅದನ್ನು ಅನ್ಯಾಯವೆನ್ನುವವರು ತಿಳಿಗೇಡಿಗಳು.

ಸಿಲೋನಿಯರೂ ಇಂದು ಸ್ವಾತಂತ್ರ್ಯಕ್ಕಾಗಿ ಸ್ವರಾಜ್ಯಕ್ಕಾಗಿ ಆಶಿಸಿದ್ದಾರೆ. ಈ ವಿಷಯದಲ್ಲಿ ಸಿಲೋನು ಭಾರತದ ಮಾರ್ಗದಲ್ಲಿಯೇ ನಡೆಯುತ್ತಿದೆ. ಕಳೆದ ವಾರ ಸೇರಿದ ಸಿಂಹಾಳೀ ಮಹಾಸಭೆಯ ವಾರ್ಷಿಕೋತ್ಸವದಂದು ಅವರು ಮುಂದಿನ ಸುಧಾರಣೆಯಲ್ಲಿ ಸಿಲೋನಿಗೆ ಸಾಮಂತ ಸ್ವರಾಜ್ಯವು ಸಿಗಬೇಕೆಂದು ಒಂದು ನಿರ್ಣಯವನ್ನು ತಂದಿದ್ದರು. ಆ ನಿರ್ಣಯವು ಅವಿರೋಧವಾಗಿ ಸಭೆಯ ಮಂಜೂರಾತಿ ಪಡೆಯಿತು.

ಈ ನಿರ್ಣಯವನ್ನು ಮುಂದಿನ ಅಲ್ಲಿನ ವಿದ್ಯಾ ಮಂತ್ರಿಗಳಾದ ಸಿ. ಡಬ್ಲ್ಯೂ. ಡಬ್ಲ್ಯೂ. ಕನ್ನಂಗಾರರು, ಸ್ವಾತಂತ್ರ್ಯವು ಸ್ವರಾಜ್ಯದ ಕೇಳಿಕೆಯು ನಮ್ಮ ಜನ್ಮಸಿದ್ಧವಾದ ಹಕ್ಕು ಎಂದು ಸಾರಿದರು. ಪ್ರಕೃತ ಸಂದರ್ಭದಲ್ಲಿ ಬ್ರಿಟನು ವಿಷಮ ಪರಿಸ್ಥಿತಿಯಲ್ಲಿರುವಾಗ ಅದನ್ನು ಸಂಕಟ [illegible] ಸಿಲೋನೀಯರ [illegible] ಯಲ್ಲಬದ್ಧರೂ ಸ್ವಾತಂತ್ರ್ಯ ಪ್ರಾಪ್ತಿಯು ನಮ್ಮ ಉದ್ದೇಶವಾಗಿದೆಯೆಂದು ಅವರು ಸ್ಪಷ್ಟೀಕರಿಸಿದರು.

ಮುಂದೆ ಅದನ್ನು ಸಮರ್ಥಿಸಿ ಎ. ರತ್ನಯಾಕೆ, ಡಿ. ಎ. ಜಯಸಿಂಘೆ ಇವರು ಮಾತನಾಡುತ್ತಾ ಸಿಲೋನಿಯರು ಈ ವಿಷಯದಲ್ಲಿ ಒಂದೇ ಕುಲದವರೆಂದು ಒಕ್ಕಟ್ಟನ್ನು ಸಾಧಿಸಬೇಕೆಂದೂ, ದುಡಿಯಬೇಕೆಂದೂ ಕೇಳಿಕೊಂಡರು.

ನಿರ್ಣಯವು ಅವಿರೋಧವಾಗಿ ಮಂಜೂರಾಗಿದೆ! ಸ್ವಾತಂತ್ರ್ಯಕ್ಕಾಗಿ ಸಿಂಹಳೀಯರು ತಮ್ಮ ಅತ್ಯಂತ ಆತುರವನ್ನು ಹೋರಾಟವನ್ನು ವ್ಯಕ್ತಪಡಿಸಿದ್ದಾರೆ.

ಯೂರೋಪಿನಲ್ಲಿ ಯೂರೋಪಿನ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುತ್ತಿರುವ ಬ್ರಿಟಿಷ್ ಸರಕಾರವು ತಾನಿಂದು ಅಲ್ಲಿ ಜೀವದ ಹಂಗು ತೊರೆದು ಹೋರಾಡುವ ಆ ಉದಾತ್ತ ಸ್ವಾತಂತ್ರ್ಯ ರಕ್ಷಣೆಯ ತತ್ವವನ್ನು ಭಾರತ ಸಿಂಹಳಗಳ ವಿಷಯವಾಗಿ ಪ್ರಯೋಗಿಸಲು ಮನಸ್ಸಿಡದಿದ್ದರೆ, ನೀತಿಯ ದೃಷ್ಟಿಯಲ್ಲಿ, ಕರ್ತವ್ಯ ಕಾರ್ಯದಲ್ಲಿ ಬ್ರಿಟನು ಮಹಾಪ್ರಮಾದವನ್ನು ಮಾಡಿದಂತಾಗುವುದು.

ಮೈಸೂರಿನ ಮಹಾರಾಜರು

ಮೈಸೂರಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಕೀರ್ತಿಶೇಷರಾಗಿ ಅವರ ಸೋದರ ಕುಮಾರರಾದ ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರು ಮುಂದು ಮೈಸೂರಿನ ಗದ್ದುಗೆಯನ್ನು ಅಲಂಕರಿಸುವರು. ಈ ಪಟ್ಟಾಭಿಷೇಕ ಮಹೋತ್ಸವವು ಈ ತಿಂಗಳ ತಾರೀಕು ಎರಡು ಜರಗಲಿದೆ. ಮೈಸೂರಿಗೆ ಮೈಸೂರೇ ಈ ಆನಂದೋತ್ಸವದಲ್ಲಿ ನಲಿಯುತ್ತಿದೆ ಎಂಬುದನ್ನು ಪ್ರತ್ಯೇಕ ಹೇಳಬೇಕಾದ ಅವಶ್ಯವಿಲ್ಲ. ನೂತನ ಪ್ರಭುಗಳು ಮೈಸೂರಿನ ಕೀರ್ತಿಯನ್ನು ಇನ್ನಷ್ಟು ಬೆಳಗಿಸಿ ಕನ್ನಡ ನಾಡಿನ ಮನ್ನಣೆಯ ದೊರೆಗಳಾಗಿ ಬಹುಕಾಲ ವಿರಾಜಮಾನರಾಗಲೆಂದು ನಾವೂ ಬಯಸುತ್ತೇವೆ.

ಈ ಸಂದರ್ಭದಲ್ಲಿ ಮೈಸೂರಿನ ಕುರಿತು ಒಂದೆರಡು ವಿಷಯಗಳನ್ನು ಹೇಳುವುದು ಪ್ರಸಂಗೋಚಿತವಾಗಿದೆ. ಮಾದರಿಯ ಮೈಸೂರು, ರಾಮರಾಜ್ಯವೆಂದು ಕೊಂಡಾಡಲ್ಪಟ್ಟ ಮೈಸೂರು ಅನೇಕ ವಿಧಗಳಲ್ಲಿ ಹಲವು ಸಂಸ್ಥಾನಗಳಿಗೆ ಆದರ್ಶ ಸಂಸ್ಥಾನವಾಗಿ ಕನ್ನಡನಾಡಿಗೆ ಹೆಮ್ಮೆಯನ್ನೇ ತಂದಿದೆ. ಆದರೆ, ಇತ್ತೀಚಿಗೆ ಸಹಜವಾಗಿ ಪ್ರಪಂಚದ ಜನತೆಯಲ್ಲಿ, ಪ್ರಜೆಗಳಲ್ಲಿ ಉಂಟಾದ ರಾಜಕೀಯ ಚೈತನ್ಯದಲ್ಲಿ, ಜನ್ಮಹಕ್ಕಾದ ರಾಜಕೀಯ ಸುಧಾರಣೆ ಸ್ವಾತಂತ್ರ್ಯಗಳನ್ನು ಪ್ರಜೆಗಳು ಕೇಳುವಲ್ಲಿ ಪ್ರಭುಗಳು ಆ ಕಡೆಗೆ ಔದಾರ್ಯ ತೋರಿಸದೆ ಇದ್ದುದು ಪ್ರಗತಿಪರವಾದ ಪ್ರಪಂಚದಲ್ಲಿ ಮೈಸೂರಿನ ಅಪ್ರಾಗತಿಕತೆಯನ್ನು ವ್ಯಕ್ತಗೊಳಿಸಿದೆ. ಅದರಿಂದ ಮೈಸೂರಿನ ಶುಭ್ರಯಶಸ್ಸಿಗೆ ಕಳಂಕವನ್ನು ತರುವ ಘಟನೆಗಳು ನಡೆದುಹೋಗಿವೆ. ಅವನ್ನು ವಿಸ್ತರಿಸಿ ಬರೆಯುವುದು [illegible] ಪ್ರಸಂಗವಲ್ಲ. ಆದರೆ ನೂತನ ಮಹಾಪ್ರಭುಗಳ ಒಡೆತನದಲ್ಲಿ ಲೋಕಸಮ್ಮತವಾದ ರಾಜಕೀಯ ಸುಧಾರಣೆಗಳು ಉಂಟಾಗಿ ಪ್ರಜೆಗಳ ತಮ್ಮ ಜನ್ಮಸಿದ್ಧವಾದ ರಾಜಕೀಯ ಸುಧಾರಣೆಗಳನ್ನು ಪಡೆಯುವಂತಾಗಲಿ ಎಂದು ನಾವು ಆತುರದಿಂದ ಆಶಿಸುತ್ತೇವೆ. ಪ್ರಭುಗಳ ಪಟ್ಟಾಭಿಷೇಕ ಕಾಲದಲ್ಲಿ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವಂತಹ ಶುಭಸೂಚನೆಗಳು ಮುಂದಿನ ಮೈಸೂರಿನ ಭಾಗ್ಯೋದಯವನ್ನು ಸಾರುವಂತಹುಗಳಾಗಿ ಪರಿಣಮಿಸಿ ರಾಜ ಪ್ರಜೆಗಳಲ್ಲಿ ಅತ್ಯಂತ ಮಧುರ ಸಂಬಂಧವು ಬೆಳಗಲಿ ಎಂದು ನಾವು ಆಶಿಸುತ್ತೇವೆ.

ನೂತನ ಪ್ರಭುಗಳಾದ ಶ್ರೀ ಮಜ್ಜಯ ಚಾಮರಾಜೇಂದ್ರ ಒಡೆಯರಿಗೆ ಸರ್ವ ಮಂಗಳವೂ ನಿತ್ಯಮಂಗಳವನ್ನುಂಟುಮಾಡಲಿ ಎಂಬುದು ನಮ್ಮ ಬೇಡಿಕೆ.

ಸ್ವೀಕಾರ-ವಿಮರ್ಶೆ

ಶ್ರೀ ಕೃಷ್ಣ ಜಯಂತಿ ಸಂಚಿಕೆ

(ನವಯುಗ) ಪುಟ ೬೦ ಬೆಲೆ ಎರಡಾಣೆ

ಯುದ್ಧದ ಬಲಪಂತವಾದ ಹೊಡೆತಕ್ಕೆ ಪತ್ರಿಕೆಗಳನ್ನು ಬಹಳವಾಗಿ ಬಲಿಯಾಗಿರುವ ಈ ಕಾಲದಲ್ಲಿ, ಯಾವ ದೃಷ್ಟಿಯಿಂದಲೂ, ಪತ್ರಿಕೆಗಳನ್ನು ನಡೆಸಿಕೊಂಡು ಬರುವುದೇ ಕಷ್ಟಸಾಧ್ಯವಾಗಿ ಪರಿಣಮಿಸಿರುವಾಗ ಕಾಲದಲ್ಲಿ 'ನವಯುಗ' ವರ್ಷಕ್ಕೆ ಒಂದೆರಡು ವಿಶೇಷ ಸಂಚಿಕೆಗಳನ್ನು ಹಿಂದೆ ಹೊರಡಿಸುತ್ತಿದ್ದಂತೆ ಈ ವರ್ಷವೂ ತಪ್ಪದೆ ಯಶಸ್ವಿಯಾಗಿ ನಿರ್ವಹಿಸಿದ್ದು ಅತ್ಯಂತ ಸಾಹಸ ಕೆಲಸವಾಗಿದೆ. ಆದುದರಿಂದಲೇ ಅಭಿನಂದನೀಯವಾಗಿದೆ.

ಈ ಜಯಂತಿ ಸಂಚಿಕೆಯು ಆಕರ್ಷಕವಾಗಿ ಹಲವು ವರ್ಣ ಚಿತ್ರಗಳಿಂದ ಕೂಡಿದೆ. ಸೊಗಸಾದ, ಹಸನಾದ ಕತೆಗಾರರಾದ ಶ್ರೀ ಕೊರಡ್ಕಲ್ ರಂತಹರ ಕತೆಗಳಿವೆ; ವಿಚಾರ ಪ್ರಚೋದಕವಾದ ಶ್ರೀ. ಎ. ಬಿ. ಶೆಟ್ಟರಂತಹ ರಾಜಕೀಯ ತಜ್ಞ ಲೇಖನಗಳಿವೆ; ಮನೋಹರವಾದ, ಶ್ರೀ. ಪ್ರತಿಭಾಯರಂತಹರ ಕವಿತೆಗಳಿವೆ. ಯಶಸ್ವಿ ನಾಟಕ ಲೇಖಕರಾದ ಸಂಪಾದಕರೇ ಬರೆದ ಒಂದು ಸೊಗಸಾದ ಏಕಾಂಕ ನಾಟಕವಿದೆ. ಶ್ರೀಮತಿಯರಾದ ಸರಸ್ವತೀ ಬಾಯಿ ರಾಜವಾಡೆ, ಲೀಲಾ ಬಾಯಿ ಕಾಮತ್, ಮೊದಲಾದ ಸ್ತ್ರೀ ಲೇಖಕರೂ ಉತ್ತಮ ಬರಹಗಳಿಂದ ಸಂಚಿಕೆಯ ಅಂದವನ್ನು ಹೆಚ್ಚಿಸಿದ್ದಾರೆ. ಜಯಂತಿ ಸಂಚಿಕೆಯು ಹೀಗೆ ಜಯ ಶೀಲವಾಗಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ಜನತಾ ಜನಾರ್ದನನ ಸೇವೆಯನ್ನು ಮಾಡುತ್ತಾ ಇಂದು [illegible] ಪತ್ರಿಕಾಲೋಕದಲ್ಲಿ ಒಂದು ಯೋಗ್ಯಸ್ಥಾನವನ್ನು ಪಡೆದ ನವಯುಗವು ತನ್ನ ಮುಂದಿನ ಪ್ರೌಢಿಮೆಯ ಕಾಲದಲ್ಲಿ ಇನ್ನಷ್ಟು ಯಶಸ್ವಿಯಾಗಿ ಬೆಳೆಯಲಿ ಎಂದು ನಾವು ಹಾರೈಸುತ್ತೇವೆ.

ಸಾದರ ಸ್ವೀಕಾರ

೧ ಸ್ವಾಮಿ ಶಿವಾನಂದ ಸರಸ್ವತಿಯವರ ಚರಿತ್ರೆ—ಸ್ವಾಮಿ ಕೃಷ್ಣಾನಂದ ಸ್ವತಿಯವರು ಬರೆದುದು.

೨ ಮಾಂಸಾಹಾರವನ್ನು ಏಕೆ ವರ್ಜಿಸಬೇಕು?—ಶ್ರೀ. ಜಯಾದಲಾ ಗೋಯಂದ್ಕಾ ಇವರು ಬರೆದುದು. ಅನುವಾದಕ ಶ್ರೀ ಎಂ. ಶಿವರಾಮೆಗೌಡ ಬಿ. ಎ; ಎಲ್. ಟಿ.

೩. ಬ್ರಹ್ಮಚರ್ಯ ಸಾಧನೆ—ಶ್ರೀ ಶಿವಾನಂದ ಸರಸ್ವತಿಯವರು ಬರೆದುದು. ಅನುವಾದ ಎಚ್. ಶೇಷಗಿರಿ ಪ್ರಭು.

ಈ ಮೂರು ಪುಸ್ತಕಗಳೂ ದಿವ್ಯ ಜೀವನ ಸಂಘದ ಪ್ರಕಟಣೆಗಳು; ಲೋಕೋಪಕಾರಾರ್ಥವಾಗಿ, ಜಿಜ್ಞಾಸುಗಳಿಗೆ ಉತ್ತಮ ವಿಷಯವನ್ನು ತಿಳಿಸಿ ಜೀವನವನ್ನು ದಿವ್ಯಗೊಳಿಸುವ ಇಂತಹ ಅಮೂಲ್ಯ ಪುಸ್ತಕಗಳನ್ನು ಪ್ರಕಾಶಕರು ಉಚಿತವಾಗಿ ಹಂಚುತ್ತಿರುವುದು ಶ್ಲಾಘನೀಯವಾಗಿದೆ.

ಅಧಿಕಾರ ಬಿಟ್ಟುಕೊಡಲು ಬ್ರಿಟಿಷರಿಗೆ ಮನಸ್ಸಿಲ್ಲ!

ರಾಜಾಜಿಯವರ ಭಾಷಣ

ವೈಸರಾಯ್ - ಅಜಾದರ ಪತ್ರವ್ಯವಹಾರ

"ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಲು ಸೆರೆಮನೆಗೆ ಹೋಗಿ ಸೇರುವುದು ಸುಲಭ; ಕಾಂಗ್ರೆಸು ಇದುವರೆಗೆ ಕಾನೂನು ಭಂಗ ಚಳುವಳಿಯನ್ನು ಹೂಡಲು ನಿರ್ಧರಿಸದೆ ಇರುವುದು ಬ್ರಿಟನ್ನಿನ ಶತ್ರುಗಳಿಗೆ ಪರೋಕ್ಷವಾಗಿ ಸಹ ಯಾವ ರೀತಿಯಲ್ಲಿಯೂ ಸಹಾಯವಾಗುವಂತೆ ವರ್ತಿಸಬಾರದು ಎಂಬ ಭಾವನೆಯಿಂದಲೇ ಆಗಿದೆ, ಬ್ರಿಟನು ಮಾತ್ರ ಕಾಂಗ್ರೆಸಿನ ಈ ಉದಾರ ನೀತಿಯನ್ನು ಅರ್ಥಮಾಡಿಕೊಂಡಿಲ್ಲ. ಭಾರತದಲ್ಲಿರುವ ಭಿನ್ನಾಭಿಪ್ರಾಯಗಳನ್ನೂ ಪಂಗಡಗಳ ವೈಷಮ್ಯವನ್ನೂ ಆಳರಸರು ಹೆಚ್ಚು ಮಾಡುತ್ತಿದ್ದಾರೆ. ಬ್ರಿಟಿಷ್ ಸರ್ಕಾರದ ಈಗಿನ ಹೇಳಿಕೆಯಿಂದ ಇದು ಚೆನ್ನಾಗಿ ವ್ಯಕ್ತವಾಗಿರುತ್ತದೆ. ಮೂಲಾಧಾರವಾದ ಅಂಶಗಳ ಮೇಲೆ ಬ್ರಿಟಿಷರು ಭಿನ್ನಾಭಿಪ್ರಾಯಗಳನ್ನು ರಚಿಸುತ್ತಲಿರುವುದು ನಮಗೆ ಬಹಳ ಜುಗುಪ್ಸೆಯನ್ನುಂಟು ಮಾಡಿದೆ ಇದನ್ನು ನಾವು ಸಹಿಸಲಾರೆವು" ಎಂಬದಾಗಿ ರಾಜಾಜಿಯವರು ಮದ್ರಾಸ್ ಲಾ. ಕಾಲೇಜಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ರಾಜಾಜಿಯವರು ತಮ್ಮ ಭಾಷಣದಲ್ಲಿ ಈ ವಿಷಯಗಳನ್ನು ಹೇಳಿದರು.

ಮುಂದಿರುವ ಸಮಸ್ಯೆ

'ನಮ್ಮ ಕಾರ್ಯಸಾಧನೆಯಲ್ಲಿ ಎರಡು ಮುಖ್ಯಾಂಶಗಳಿರುವುವು ಮೊದಲನೆಯದು ಭಾರತದ ಸ್ವಾತಂತ್ರ್ಯವು ಸನ್ನಿಹಿತವಾಗಿರುವುದು. ಎರಡನೆಯದು, ನಾವು ಆ ಸ್ವಾತಂತ್ರ್ಯವನ್ನು ನಮ್ಮ ಸ್ವಪ್ರಯತ್ನದಿಂದಲೇ ಸಾಧಿಸುವುದು ಭಾರತಕ್ಕೆ ಸ್ವಾತಂತ್ರ್ಯ ಬೇಕೆಂಬ ವಿಷಯವನ್ನು ಬ್ರಿಟಿಷರು ಒಪ್ಪಿಕೊಂಡಿದ್ದಾರೆ ಇಂಗ್ಲೆಂಡಿಗೂ ಭಾರತಕ್ಕೂ ಪರಸ್ಪರ ಸ್ನೇಹವೂ ಪ್ರೇಮವೂ ಹೆಚ್ಚಾಗುವಂತೆ ಸೌಹಾರ್ದತೆಯಿಂದಲೇ ಭಾರತವು ಸ್ವಾತಂತ್ರ್ಯವನ್ನು ಪಡೆಯುವ ಮಾರ್ಗವನ್ನು ರಚಿಸಬೇಕಾಗಿದೆ ಇದೇ ಈಗಿನ ನಮ್ಮ ಸಮಸ್ಯೆಯಾಗಿದೆ'

ಅಧಿಕಾರ ಬಿಡಲು ಮನಸ್ಸಿಲ್ಲ

"ಕಾಂಗ್ರೆಸಿನ ನ್ಯಾಯವಾದ ಕೇಳಿಕೆಗೆ ಭಾರತ ಸಚಿವರು ನಿಕೃಷ್ಟ ದೃಷ್ಟಿಯಿಂದ 'ನ' ಕಾರ ಹೇಳಿದರು ಭಾರತದಲ್ಲಿ ಸಂಯುಕ್ತ ರಾಷ್ಟ್ರೀಯ ಸರ್ಕಾರವನ್ನು ಸಹ ನಿರ್ಮಿಸಲು ಎಮರಿಯವರು ನಿರಾಕರಿಸಿದ್ದರೆ. ಭಾರತದ ರಾಷ್ಟ್ರೀಯ ಸರಕಾರ ರಚನೆಯಲ್ಲಿ ವೈಸರಾಯರು ತಮ್ಮ ಪಾತ್ರವಹಿಸಬಹುದೆಂದು ಸೂಚಿಸಿದ್ದರು. ಬ್ರಿಟಿಷ್ ಸರಕಾರವು ಅಧಿಕಾರ ತ್ಯಾಗ ಮಾಡಲು ಸಿದ್ಧವಿಲ್ಲವೆಂಬುದು ಇದು ಚೆನ್ನಾಗಿ ವ್ಯಕ್ತಗೊಂಡಿದೆ.

ಲೀಗಿನ ಮಂತ್ರಿಮಂಡಳ

"ಕೇಂದ್ರ ಸರಕಾರದ ರಚನೆಯಲ್ಲಿ ಮುಸ್ಲಿಂ ಲೀಗು ಮುಖ್ಯ ಮಂತ್ರಿಯನ್ನು ರಚಿಸಲೆಂದು ನಾನು ಸೂಚನೆಯನ್ನು ಮಾಡಿದ್ದು ಮುಸ್ಲಿಂ ಲೀಗನ್ನು ಅನ್ಯ ಮಾರ್ಗಕ್ಕೆ ಎಳೆಯಬೇಕೆಂದಲ್ಲ. ಶಾಸನ ಸಭೆಗಳಲ್ಲಿ ಹಿಂದುಗಳ ಬಹುಮತ ಬಲವಿದೆ ಇದರ ಮುಂದೆ ಮುಸ್ಲಿಂ ಮುಖ್ಯ ಮಂತ್ರಿಯ ಅಧಿಕಾರವೆಲ್ಲಿ ಎಂದು ಕೆಲವರು ಆಕ್ಷೇಪಿಸಿದ್ದಾರೆ ಇದಕ್ಕೆ ನನ್ನ ಉತ್ತರವಿಷ್ಟೆ. ಮುಸ್ಲಿಂ ಲೀಗು ನೇಮಿಸುವ ಮುಖ್ಯ ಮಂತ್ರಿಗೆ ದಕ್ಷತೆಯೂ, ದೇಶಾಭಿಮಾನವೂ, ಕಾರ್ಯಸ್ಥೈರ್ಯವೂ ಇರುವುದಾದರೆ ಅವರು ಶಾಸನ ಸಭೆಗಳ ಬೆಂಬಲ ಪಡೆಯುವರೆಂದೇ ನನ್ನ ಹೇಳಿಕೆ ಪ್ರಜಾಪ್ರತಿನಿಧಿಗಳ ಬೆಂಬಲವಿದ್ದರೆ ಅವರ ಜನಾಂಗಕ್ಕೆ ಯಾವ ತೊಂದರೆಯನ್ನೂ ಮಾಡಲಾರರು"

ವೈಸರಾಯ್ ಅಜಾದ್ ಪತ್ರಗಳು

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರಿಗೂ ವೈಸರಾಯರಿಗೂ ಈ ತಿಂಗಳ ಆರಂಭದಲ್ಲಿ ನಡೆದ ಪತ್ರವ್ಯವಹಾರಗಳು ಪ್ರಕಟವಾಗಿರುತ್ತವೆ ವೈಸರಾಯರು ಮೌಲಾನಾ ಅಬುಲ್ ಕಲಂ ಅಜಾದರಿಗೆ ಬರೆದ ಪತ್ರವು ಹೀಗಿದೆ

ವೈಸರಾಯರ ಪತ್ರ

'ನಮ್ಮ ಎಗ್ಸಿಕ್ಯೂಟಿವ್ ಕೌನ್ಸಿಲನ್ನು ವಿಸ್ತರಿಸಲಾಗುತ್ತದೆ ಹೆಚ್ಚು ಮಂದಿ ಸದಸ್ಯರನ್ನು ಸೇರಿಸಿಕೊಳ್ಳಬೇಕೆಂದಿದ್ದೇವೆ ಪ್ರತಿನಿಧಿಗಳಾದ ಕೆಲವು ಭಾರತೀಯ ಪ್ರಮುಖ ಮುಖಂಡರನ್ನು ನಮ್ಮ ಎಗ್ಸಿಕ್ಯೂಟಿವ್ ಕೌನ್ಸಿಲಿಗೆ ಸೇರಿಸಿಕೊಳ್ಳಲಾಗುವುದು ಮತ್ತು ಸಮರಬೋಧಕ ಸಮಿತಿಯೊಂದನ್ನು ಸಹಾ ರಚಿಸಬೇಕೆಂದು ನನಗೆ ಆಜ್ಞೆಯಾಗಿದೆ ಈ ಸಮಿತಿಯವರು ಆಗಾಗ ಸಭೆ ನಡೆಸಿ ಯುದ್ಧ ಸಹಾಯಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡುವರು ಈ ಸಮಿತಿಗೆ ಸಂಸ್ಥಾನಗಳ ಪ್ರತಿನಿಧಿಗಳನ್ನು ಸಹಾ ಸೇರಿಸಿಕೊಳ್ಳಲಾಗುವುದು ಕಾಂಗ್ರೆಸಿನವರು ನನ್ನ ಈ ಕಾರ್ಯದಲ್ಲಿ ಸಹಕರಿಸುವರೆಂದು ನಂಬುತ್ತೇನೆ ಕೇಂದ್ರ ಸರಕಾರದ ಈ ವ್ಯವಸ್ಥೆಯಲ್ಲಿಯೂ, ಸಮರಬೋಧಕ ಸಮಿತಿಗೂ ಕಾಂಗ್ರೆಸಿನವರು ಸೇರಿದರೆ ನನಗೆ ಬಹಳ ಸಂತೋಷವುಂಟಾಗುತ್ತದೆ ಈ ಬಗ್ಗೆ ನೀವು ಬೇಗನೆ ಉತ್ತರ ಕೊಟ್ಟರೆ ಸಂತೋಷಪಡುತ್ತೇನೆ ಆಗಸ್ಟ್ ೨ನೆ ತಾರೀಕಿನ ಒಳಗೆ ನಿಮ್ಮ ಉತ್ತರವು ಬರಬೇಕು ಮತ್ತು ಈ ವಿಚಾರಗಳ ಬಗ್ಗೆ ನೀವು ನನ್ನೊಡನೆ ಅನಂತರ ಚರ್ಚೆ ನಡೆಸಬಹುದು. ಅನಂತರ ನೀವು ಕಾಂಗ್ರೆಸಿನ ಬಗ್ಗೆ ನನಗೆ ಕ್ರಮ ಪ್ರಕಾರ ಉತ್ತರ ಕಳುಹಿಸಬಹುದು. ನೀವೂ ಮತ್ತು ನಿಮ್ಮ ಮಿತ್ರರೂ ನನ್ನ ಬಳಿಗೆ ಈ ಬಗ್ಗೆ ಮಾತನಾಡಲು ಬರುವುದು ನನಗೆ ಸಂತೋಷವನ್ನುಂಟುಮಾಡುವುದು ನನ್ನ ಆಹ್ವಾನವನ್ನು ನೀವು ಪರಿಶೀಲಿಸಿ ಸೌಹಾರ್ದತೆಯಿಂದ ಮಾತುಕತೆ ನಡೆಸುವಿರೆಂದು ನಂಬುತ್ತೇನೆ ಸಾಮ್ರಾಜ್ಯ ಸರಕಾರದ ಆಜ್ಞೆಯಂತೆ ನಾನು ಎಗ್ಸಿಕ್ಯೂಟಿವ್ ಕೌನ್ಸಿಲನ್ನು ವಿಸ್ತರಿಸುವೆನು. ಸಮರಬೋಧಕ ಸಮಿತಿ ಏರ್ಪಡಿಸಬೇಕು ಆಗಸ್ಟ್ ಕೊನೆಯ ಒಳಗೆ ನಾನು ಈ ಕೆಲಸಗಳನ್ನು ಮಾಡಬೇಕಾಗಿದೆ ಸದಸ್ಯರ ಹೆಸರುಗಳನ್ನು ಪ್ರಕಟಿಸಬೇಕಾಗಿ ನೀವು ಆದಷ್ಟು ಬೇಗನೆ ಜವಾಬು ಕೊಡಬೇಕು.

ಮೌಲಾನಾ ಅಜಾದರ ಉತ್ತರ

ವೈಸರಾಯರ ಈ ಪತ್ರಕ್ಕೆ ಉತ್ತರವಾಗಿ ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರು ತಂತಿ ಮೂಲಕ ಈ ರೀತಿ ಉತ್ತರವನ್ನು ಕಳುಹಿಸಿದರು.

"ನಿಮ್ಮ ಪತ್ರಕ್ಕೂ ಆ ಮೂಲಕ ಕಳುಹಿಸಿದ ಆಹ್ವಾನಕ್ಕೂ ಬಹಳ ವಂದನೆಗಳು ಸಾಮ್ರಾಜ್ಯ ಸರಕಾರದವರು ತಮ್ಮ ಕಾರ್ಯನೀತಿಯ ಮಾರ್ಗವನ್ನು ಈಗಾಗಲೇ ನಿರ್ಧರಿಸಿಕೊಂಡಿರುವುದರಿಂದ ನಾವು ಉಭಯತ್ರರೂ ಸೇರಿ ಚರ್ಚೆ ನಡೆಸುವುದರಿಂದೇನು ಪ್ರಯೋಜನ? ಮಾತುಕತೆಗಳಿಂದ ಪ್ರಯೋಜನವುಂಟಾಗುವುದಾದರೆ ನಾನು ಸಂತೋಷದಿಂದ ನಿಮ್ಮ ಆಹ್ವಾನವನ್ನು ಸ್ವೀಕರಿಸುತ್ತಿದ್ದೆನು ನಿಮ್ಮ ಹತ್ತಿರ ಮಾತುಕತೆ ನಡೆಸುವುದರಿಂದ ಪ್ರಯೋಜನವೇನಾದರೂ ಉಂಟೇ ಎಂಬುದನ್ನು ದಯವಿಟ್ಟು ತಿಳಿಸಬೇಕು."

ವೈಸರಾಯರ ಪ್ರತ್ಯುತ್ತರ

ಇದಕ್ಕೆ ವೈಸರಾಯರು ತಂತಿ ಮೂಲಕ ಈ ರೀತಿ ಪ್ರತ್ಯುತ್ತರ ಕೊಟ್ಟಿರುವರು.

"ನೀವು ಕಳುಹಿಸಿದ ತಂತಿ ಸಮಾಚಾರವು ತಲುಪಿದೆ ಸಾಮ್ರಾಜ್ಯ ಸರಕಾರದ ಧೋರಣೆಯು ನಾನು ಕೊಟ್ಟ ಹೇಳಿಕೆಯಲ್ಲಿ ವ್ಯಕ್ತಗೊಂಡಿದೆ ನಾನು ಸೂಚಿಸಿದ ಅಂಶಗಳಿಗೆ ವಿಚಾರದಂತೆ, ಕಾಂಗ್ರೆಸಿನವರು ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿಯೂ ಸಮರಬೋಧಕ ಸಮಿತಿಯಲ್ಲಿಯೂ ಭಾಗವಹಿಸುವರೆಂದು ನಂಬುತ್ತೇನೆ ಈ ಬಗ್ಗೆ ಬಂದು ಮಾತನಾಡಿದರೆ ತುಂಬಾ ಸಂತೋಷ"

ಮೌಲಾನಾ ಅಜಾದರ ಪ್ರತ್ಯುತ್ತರ

ವೈಸರಾಯರಿಗೆ ತಮ್ಮ ಪ್ರತ್ಯುತ್ತರವನ್ನು ಮೌಲಾನ ಅಬುಲ್ ಕಲಂ ಅಜಾದರು ತಂತಿ ಮೂಲಕ ಈ ರೀತಿ ಕಳುಹಿಸಿದರು–

'ನೀವು ಕಳುಹಿಸಿದ ತಂತಿ ಸಮಾಚಾರಕ್ಕೆ ಬಹಳ ವಂದನೆಗಳು ನೀವು ಆಗಸ್ಟ್ ೮ನೇ ತಾರೀಕಿನಲ್ಲಿ ಹೊರಡಿಸಿದ ಹೇಳಿಕೆಯಲ್ಲಿ ಕಾಂಗ್ರೆಸ್ಸಿಗೆ ಸಮ್ಮತಿಯಾಗುವ ಅಂಶವೇನೂ ಇಲ್ಲ ಉಭಯತ್ರರೂ ಸಮ್ಮತಿಯಿಂದ ಚರ್ಚಿಸುವ ಅಂಶವೇನೂ ಇಲ್ಲ. ರಾಷ್ಟ್ರೀಯ ಸರಕಾರದ ರಚನೆಯ ಬಗ್ಗೆ ಸಹಾ ಯಾವ ಸಲಹೆಯನ್ನೂ ನೀವು ಸೂಚಿಸಿರುವುದಿಲ್ಲ. ಬೇರೆ ರಾಜಕೀಯ ಮುಖ್ಯಾಂಶಗಳು ಹಾಗಿರಲಿ. ಪ್ರಕೃತಸ್ಥಿತಿಯಲ್ಲಿ ನಿಮ್ಮೊಡನೆ ಸಂಧಾನ ನಡೆಸಿದರೆ ಪ್ರಯೋಜನವಾಗಲಾರದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ಆಗಸ್ಟ್ ೧೮ರಲ್ಲಿ ನಡೆಯುತ್ತದೆ. ಕಾಂಗ್ರೆಸು ತನ್ನ ಮುಂದಿನ ಮಾರ್ಗವನ್ನು ಗೊತ್ತುಮಾಡಿಕೊಳ್ಳುವುದು."

About Ourselves

For a long time it has been our policy to concentrate largely on loans on the security of jewellery and gold. For this we were criticized and even laughed at. Well-meaning friends advised us that we should give up mere pawn-broking and money-lending and devote ourselves to "real" banking.

But to-day all our friends are congratulating us because in a war-stricken world of ever-shifting values of gold has remained a stable commodity.

RESOURCES OF A CRORE.

Estd: 1906

CANARA BANK, LIMITED.

ಬ್ರಿಟನಿನ ಜಯಕ್ಕೆ ಕಾಂಗ್ರೆಸಿನ ಆಶೀರ್ವಾದ ಬೇಕಾಗಿದೆ!

ಸರಕಾರಕ್ಕೆ ನಿವೃತ್ತ ಅಧಿಕಾರಿಗಳೊಬ್ಬರ ಸಲಹೆ

ಮೆಂಚೆಸ್ಟರ ಗಾರ್ಡಿಯನದಲ್ಲಿ ಒಂದು ಲೇಖನವನ್ನು ಬರೆಯುತ್ತಾ, ಹಿಂದೆ ಇಲ್ಲಿ ಉಚ್ಚ ಸರಕಾರ ಅಧಿಕಾರಿಗಳಾಗಿದ್ದ ಯಸ್. ವ್ಹಾ. ಗ್ರಿನ್ ಐ. ಸಿ. ಯಸ್‌ರವರು, ಹೇಗೂ ಮಾಡಿ, ಎಲ್ಲಾ ಉಪಾಯಗಳಿಂದ ಕಾಂಗ್ರೆಸಿನ ಸಹಾಯ ಸಹಕಾರಗಳನ್ನು ಪಡೆಯಲಿಕ್ಕೆ ಬ್ರಿಟಿಷ ಸರಕಾರವು ಪ್ರಯತ್ನಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

ಭಾರತೀಯರ ಸಹಾಯದ ಅಗತ್ಯ

ಹಿಟ್ಲರಿಜಮನ್ನು ವಿರೋಧಿಸಿ, ಅದರ ನಿರ್ನಾಮ ಮಾಡಲಿಕ್ಕೆ ಹಿಂದುಸ್ಥಾನದ ಸಂಪೂರ್ಣ ಆಶೀರ್ವಾದವು ಅಗತ್ಯವೆಂಬುದನ್ನು ಬ್ರಿಟನು ತಿಳಿದಿದೆ. ಬ್ರಿಟಿಷ್ ಸರಕಾರಕ್ಕೆ ಯುದ್ಧ ಕಾರ್ಯವನ್ನು ಜಯಶೀಲವಾಗಿ ಮುಂದೊತ್ತಲಿಕ್ಕೆ ಹಿಂದೀಯರ ಹಾರ್ದಿಕ ಸಹಾಯ ಸಹಕಾರಗಳು ಬೇಕಾಗಿರುವುದು ನಿಜ. ಬ್ರಿಟಿಷರಿಗೆ ಹಿಂದುಸ್ಥಾನದ ಮುಸಲ್ಮಾನರು ಬೇಕಾಗಿದ್ದಾರೆ. ಅದ್ದರಿಂದ, ಅವರು ವಿರೋಧಿ ಅಥವಾ ಉದಾಸೀನರಾಗುವಂಥ ಯಾವ ಕೆಲಸ ಕಾರ್ಯಗಳನ್ನು ಬ್ರಿಟಿಷ ಸರಕಾರವು ಮಾಡಕೂಡದು. ಆದರೆ ಮುಸಲ್ಮಾನರ ಸಹಾಯವು ಬ್ರಿಟಿಷರಿಗೆ ಎಷ್ಟು ಅಗತ್ಯವೋ, ಅದಕ್ಕಿಂತ ಹೆಚ್ಚಲ್ಲವಾದರೂ ಅಷ್ಟೇ ಸಹಾಯವು ಬ್ರಿಟಿಷರಿಗೆ ಕಾಂಗ್ರೆಸಿನದ್ದೂ ಅಗತ್ಯವಾಗಿದೆ.

ಭ್ರಮೆಯಲ್ಲಿ ಬೀಳಬೇಡಿ

ಹಿಂದುಸ್ಥಾನದ ಇತರ ಅಲ್ಪ ಸಂಖ್ಯಾಕರು ಮುಸಲ್ಮಾನರು ಮತ್ತು ಬ್ರಿಟನಿನೊಂದಿಗೆ ಸೇರಿಕೊಳ್ಳುವುದರಿಂದ, ತಾವು ಕಾಂಗ್ರೆಸನ್ನು ಅಲಕ್ಷಿಸಬಹುದೆಂಬ ಭ್ರಮೆಯಲ್ಲಿ ಬ್ರಿಟಿಷರು ಎಂದೂ ಬೀಳಕೂಡದು. ಕಾಂಗ್ರೆಸು ಬ್ರಿಟನನ್ನು ವಿರೋಧಿಸಲಿಕ್ಕೆ ಹೊರಡುವದಾದರೆ ಇತರ ಎಲ್ಲಾ ಅಲ್ಪ ಸಂಖ್ಯಾಕರು ಮಾತ್ರವಲ್ಲ, ಮುಸಲ್ಮಾನರಲ್ಲಿ ಬಹು ಮಂದಿ ಕೂಡ ಕಾಂಗ್ರೆಸನ್ನು ಸೇರಿಕೊಳ್ಳುವುದು ಖಂಡಿತ. ಅದರಿಂದ ಬ್ರಿಟನಿಗೆ ಭಾರತೀಯರ ಸಹಾಯವು ದುರ್ಬಲವಾಗುವುದು. ಹಿಂದೆ ಒಂದು ಬಾರಿ ಹೀಗೆಯೇ ಆಗಿದೆ. ಮುಂದೆ ಕೂಡ ಹೀಗೆ ಆಗುವುದರಲ್ಲಿ ಆಶ್ಚರ್ಯವಿಲ್ಲ.

ಆದ್ದರಿಂದ ಬ್ರಿಟನು ಕಾಂಗ್ರೆಸ್ ಮುಖಂಡರ ಸಹಾನುಭೂತಿಯನ್ನು ಸಂಪಾದಿಸುವುದು ಅತ್ಯಗತ್ಯವಾಗಿದೆ. ಕಾನ್ಸ್ಟಿಟ್ಯುಯೆಂಟ್ ಎಸೆಂಬ್ಲಿ ವಿಷಯಕವಾದ ಕಾಂಗ್ರೆಸಿನ ಬೇಡಿಕೆಯನ್ನು ಬ್ರಿಟಿಷ್ ಸರಕಾರವು ಮನ್ನಿಸಬೇಕು. ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ, ಅಥವಾ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ, ಇವುಗಳಲ್ಲಿ ಯಾವುದು ಬೇಕೆಂಬುದನ್ನು ನಿರ್ಧರಿಸುವ ಭಾರ ಈ ಕಾನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಮೇಲೆಯೇ ಇರಲಿ.

ಎಮೆರಿಯವರು ಭಾರತಕ್ಕೆ ಬರಲಿ

ಸ್ವಯಂ ನಿರ್ಧಾರದ ಅಧಿಕಾರವನ್ನು ಬ್ರಿಟನು ಭಾರತಕ್ಕೆ ತಿರಸ್ಕರಿಸುವುದರಿಂದ ಕಾಂಗ್ರೆಸಿನ ಸಹಕಾರವು ಬ್ರಿಟನಿಗೆ ದೊರೆಯಲಿಕ್ಕೆ ತಡೆಯಾಗಿದೆ. ಬ್ರಿಟಿಷ ಸರಕಾರವು ಮುಂದೇನು ಮಾಡಲಿದೆ ಎಂಬ ಕುರಿತು ಮುಸಲ್ಮಾನರಿಗೂ ಕಾಂಗ್ರೆಸಿಗೂ ಸಮಾಧಾನಕರವಾದ ಉತ್ತರವನ್ನು ಕೊಡಲಿಕ್ಕೆ ಕೇವಲ ವ್ಯಾಸರಾಯರೊಬ್ಬರೇ ಸಮರ್ಥರಾಗಲಾರರು. ಅಥವಾ ಭಾರತಕ್ಕೆ ಬೇಕಾದುದನ್ನು ಬ್ರಿಟಿಷ ಸರಕಾರದಿಂದ ಕೊಡಿಸಲಿಕ್ಕೂ ಅವರು ಸಮರ್ಥರಾಗಿರಲಾರರು. ಭಾರತ ಸಚಿವ ಎಮೆರಿಯವರೂ ವ್ಯಾಸರಾಯರೂ ಒಂದು ಕೂಡಿ, ಪರಸ್ಪರ ಮಾತುಕತೆಗಳಿಂದ ಅವರು ಕಾಂಗ್ರೆಸ ಮತ್ತು ಮುಸಲ್ಮಾನ ಮುಖಂಡರೊಳಗೆ ಒಂದು ಒಡಂಬಡಿಕೆಗೆ ಬರಬಹುದಾಗಿದೆ. ಅದ್ದರಿಂದ ಎಮೆರಿಯವರು ಒಮ್ಮೆ ಭಾರತಕ್ಕೆ ಬರಬೇಕೆಂದು ಗ್ರಿನ್ನರು ಸೂಚಿಸಿದ್ದಾರೆ.

ಬ್ರಿಟನು ಯುದ್ಧದಲ್ಲಿ ಗೆಲ್ಲಬೇಕು. ಲೋಕದ ಸ್ವಾತಂತ್ರ್ಯವು ಉಳಿಯಬೇಕು. ಅದಕ್ಕಾಗಿ ಕಾಂಗ್ರೆಸು ಬೆಂಬಲಕೊಡಲು ಸಿದ್ಧವಿದೆ; ಆದರೆ ಕಾಂಗ್ರೆಸಿನ ಬೆಂಬಲವನ್ನು ಹಾರೈಸುವಾಗ ಅದರ ಮಾತಿಗೆ ಸ್ವಲ್ಪವಾದರೂ ಬೆಲೆ ಕೊಡಬೇಕಲ್ಲವೆ?

ಇಂಡಿಯಾ ದೇಶವನ್ನು ಬಲಿಷ್ಠವಾಗಿ ಮಾಡಿರಿ

ಇಂಡಿಯಾ ವಿಮಾನಬಲವನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಹಾಯಮಾಡಿರಿ

ಡಿಫೆನ್ಸು ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ರೂ. 10, 50, 100, 500 ಗಳಿಗೆ ಜಾರೀಮಾಡುತ್ತಾರೆ. ಈ ಮೊತ್ತಗಳು ಹತ್ತು ವರ್ಷದ ಅನಂತರ ಒಂದೊಂದು ಹತ್ತು ರೂಪಾಯಿಗೆ ರೂ. 13-9-0 ಆಗಿ ವಾಪಸುಕೊಡಲ್ಪಡುವುವು. ಈರೀತಿಯಾಗಿ ನಿಮಗೆ ಸುಮಾರು 3½% ಕಾಂಪೌಂಡುಬಡ್ಡಿ ಬರುತ್ತದೆ. ಈ ಆದಾಯಕ್ಕೆ ಇನ್‌ಕಂಟ್ಯಾಕ್ಸ್ ಇರಲಾರದು. ಒಬ್ಬೊಬ್ಬರು ಗರಿಷ್ಠವಾಗಿ 5,000 ರೂ. ಗಳ ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳಬಹುದು. ನಿಮ್ಮ ಸಮೀಪದಲ್ಲಿರುವ ಪೋಸ್ಟಾಫೀಸಿಗೆ ದರಖಾಸ್ತು ಮಾಡಿಕೊಳ್ಳಿರಿ.

ಆರುವರ್ಷದ ಡಿಫೆನ್ಸು ಬಾಂಡುಗಳು ರೂ. 100 ಗಳಿಗಾಗಲಿ, ಆಮೇಲೆ ನೂರುನೂರಿನ ಹೆಚ್ಚು ಮೊತ್ತಗಳಿಗಾಗಲಿ ಜಾರೀಮಾಡುತ್ತಾರೆ. ಈ ಮೊತ್ತಗಳು 1946 ಆಗಸ್ಟು 1 ತಾರೀಖಿಗೆ ನೂರಕ್ಕೆ 101 ರೂ. ಆಗಿ ವಾಪಸುಕೊಡಲ್ಪಡುವುವು. 3% ಬಡ್ಡಿ ಆರು ತಿಂಗಳಿಗೆ ಒಂದೊಂದುಸಾರಿ ಕೊಡಲ್ಪಡುವುದು. ಒಬ್ಬೊಬ್ಬರು ಎಷ್ಟು ಮೊತ್ತಕ್ಕಾಗಲಿ, ಮಿತಿಯೇನೂ ಇಲ್ಲದೆ ತೆಗೆದುಕೊಳ್ಳಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಗವರ್ನಮೆಂಟು ಟ್ರೆಜರಿಗಳಲ್ಲಿ ಯಾವುದಕ್ಕಾಗಲಿ ದರಖಾಸ್ತು ಮಾಡಿಕೊಳ್ಳಿರಿ.

ಬಡ್ಡಿಯಿಲ್ಲದ ಬಾಂಡುಗಳನ್ನು 50 ರೂ. ಗಳಿಗೆ ಮೇಲೆ ಎಷ್ಟು ಮೊತ್ತಕ್ಕಾದರೂ ಜಾರೀ ಮಾಡುತ್ತಾರೆ. ಈ ಮೊತ್ತಗಳನ್ನು 3 ವರ್ಷಗಳ ಅನಂತರ ವಾಪಸುಮಾಡುತ್ತಾರೆ. ಒಂದು ವರ್ಷದ ಅನಂತರ ಬೇಕಾದರೆ 3 ತಿಂಗಳ ನೋಟೀಸು ಕೊಡಬೇಕಾಗಿರುತ್ತದೆ. ವಿಶೇಷವಾದ ಸಂದರ್ಭಗಳನ್ನು ಬಿಟ್ಟುಬಿಟ್ಟು ಮಾಡುವುದಾದರೆ ಯಾವಾಗಲಾದರೂ ವಾಪಸುಕೊಡಲ್ಪಡುವುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಗವರ್ನಮೆಂಟ್ ಟ್ರೆಜರಿಗಳಲ್ಲಿ ಯಾವುದಕ್ಕಾಗಲಿ ದರಖಾಸ್ತು ಮಾಡಿಕೊಳ್ಳಿರಿ.

ಹೊಸ ಇಂಡಿಯಾ ವಿಮಾನದಳವು ನೂರಾರು ಶ್ರೇಷ್ಠರಾದ ಇಂಡಿಯಾ ವೈಮಾನಿಕರನ್ನು ತಯಾರಿಸುತ್ತದೆ. ಡಿಫೆನ್ಸು ಲೋನುಗಳಿಗೆ ಚಂದಾಗಳನ್ನು ಕೊಡುವುದರಮೂಲಕ, ಅವರಿಗೆ ವಿಮಾನಗಳನ್ನು ಕೊಡುವುದಕ್ಕೆ ಸಹಾಯ ಮಾಡಿರಿ. ಇಂಡಿಯಾ ದೇಶದ ರಕ್ಷಣೆಗೆ, ನಿಮ್ಮ ರಕ್ಷಣೆಗೆ ಕೂಡ ನಮಗೆ ಇನ್ನಷ್ಟು ಶಿಕ್ಷಣಪಡೆದ ಜನರು, ಇನ್ನಷ್ಟು ಟ್ಯಾಂಕುಗಳು, ಇನ್ನಷ್ಟು ವಿಮಾನಗಳು, ಇನ್ನಷ್ಟು ಮರಕು ಹಾಕಿಗಳು ಬೇಕಾಗಿವೆ.

ಡಿಫೆನ್ಸು ಲೋನುಗಳಿಗೆ ಚಂದಾಗಳನ್ನು ಕೊಡುವುದರಿಂದ ನೀವು ಭದ್ರವೂ, ಲಾಭಕರವೂ ಆದ ವಿನಿಯೋಗವನ್ನು ಮಾಡುವಿರಿ. ಇದಕ್ಕೆ ಪ್ರಭುತ್ವದ, ಹಾಗೆ ದೇಶದ ಸಮಸ್ತ ಮೂಲಾಧಾರಗಳಿನ ಪ್ರೋತ್ಸಾಹವಿದೆ. ನಿಮ್ಮ ದ್ರವ್ಯಕ್ಕೆ ಯಾವಾಗಲೂ ನಷ್ಟವಿರಲಾರದು.

ಇಂಡಿಯಾ ಡಿಫೆನ್ಸು ಲೋನುಗಳನ್ನು ಕೊಂಡಿರಿ

KN. 312

ಈ ವಾರದ ಕಥೆ:

ಜಲಪ್ರಳಯ!

ಕತೆಗಾರರು ಶ್ರೀ ಕೆ. ಎಸ್ ಶೆಟ್ಟಿ, ಕಾರ್ಕಳ

ಎಲ್ಲರು ಬಹು ಚಿಂತಿತರಾಗಿದ್ದರು. ಯಾರಿಗೂ ಆದ್ಯಂತವು ತೋರುತ್ತಿದ್ದಿಲ್ಲ. ನದಿಯು ಉಕ್ಕೇರಿ ಹರಿಯುತಿದ್ದಿತು. ನೀರು ಹತ್ತು ಅಡಿ ಏರಿದ್ದಿತು ಆಕಾಶವು ಕಾರ್ಮೋಡಗಳಿಂದ ಆವರಿಸಿದ್ದಿತು. ನಡು ಹಗಲಿನ ಸಮಯವಾಗಿದ್ದಿತಾದರೂ ಸೂರ್ಯಾಸ್ತಮಾನವಾದಂತೆ ತೋರುತ್ತಿತ್ತು. ಜನರು ಮಧ್ಯಾಹ್ನದ ಊಟ ಉಪಚಾರಗಳನ್ನು ತೀರಿಸಿದ್ದರು ಆಗಲೇ ಸಿಡಿಲು ಬಡಿದಂತಾಯಿತು. ಊರಿಗೆ ಊರು ಥರಥರ ನಡುಗಿತು. ಒಬ್ಬನು ಒಂದೆಡೆಗೆ ಓಡಿದನಾದರೆ ಮತ್ತೊಬ್ಬನು ಮತ್ತೊಂದೆಡೆಗೆ ಓಡಿದ. ಎಷ್ಟೋ ಮಂದಿ ಅತ್ತಿತ್ತ ಓಡುತ್ತ ಬಿದ್ದು ಎದ್ದರು. ತಾಯಂದಿರು ತಮ್ಮ ಮಕ್ಕಳು ಮರಿಗಳನ್ನು ಸಂಭಾಳಿಸ ನೋಡಿದರು. ಆಗಲೇ ಗಲಭೆಗಳು ಎದ್ದುವು—ಊರೆಲ್ಲಾ ನೆರೆಯಿಂದ ಜಲಪ್ರಳಯವಾಗಿತ್ತು!

ಶಂಕರರಾಯರ ಊರಿನ ಹೆಸರು ಪಡೆದ ಜಮೀನುದಾರರಾಗಿದ್ದರು ಹದಿಮೂರು ವರೆ ಸಾವಿರ ರೂಪಾಯಿಗಳ ಹುಟ್ಟುವಳಿ ಅವರಿಗೆ ಜಮೀನ ಮಾತ್ರದಿಂದಲೇ ಇತ್ತು. ಲೇವಾದೇವಿ ವಹಿವಾಟುಗಳಿಂದ ಬೇರೆ ಸಾವಿರಾರು ರೂಪಾಯಿಗಳನ್ನು ಸಂಪಾದಿಸುತಿದ್ದರು ಅವರ ಒಬ್ಬನೇ ಮಗ ಮಾಧವರಾಯನು ಸಮಯಕ್ಕೆ ಕಾಲೇಜಿನಲ್ಲಿ ಓದುತಿದ್ದ ಅವನು ಪ್ರತಿಭಾಶಾಲಿ ವಿದ್ಯಾರ್ಥಿ ಮನೆಯಿಂದ ತಿಂಗಳ ತಿಂಗಳ ಬೇಕಾದಷ್ಟು ಹಣ ಬರುತಿತ್ತು ವಿದ್ಯಾರ್ಥಿ ಜೀವನವು ಬಹು ಸುಖದಿಂದ ಕಳೆಯುತಿದ್ದಿತ

ಪ್ರಳಯ ಕಾಲ ನೆರೆಯೊಮ್ಮೆ ಬಂದಿತು ಒಂದೆರಡು ತಾಸು ಗಳ ತರುವಾಯ ಹೊರಟುಹೋಯಿತು. ಆದರೆ ಬಂದ ಹಾಗೆ ಅದು ಹೋಗುವಾಗ ಒಂದೇ ಆಗಿ ಹೋಗಲಿಲ್ಲ ನೂರಾರು ಮಂದಿ ನಿರ್ಧನಿಕರ ಮನೆಮಾರು, ದನಕರು, ಚಂಬ ಚರಿಗೆ ಇತ್ಯಾದಿ ತೇಲಿಸಿಕೊಂಡೇ ಹೋಗಿದ್ದಿತು. ಊರಿನಲ್ಲಿ 'ತ್ರಾಹಿ ತ್ರಾಹಿ' ಉಂಟಾಗಿದ್ದಿತು. ಪ್ರಾಪದ ಜನರು ವೈದಾಸಿನಲ್ಲಿ ಉಳಕೊಂಡಿದ್ದರು ಗಾಳಿ ಮಳೆ ಚಳಿ ಬಿಸಿಲುಗಳಿಂದ ಕಾಪಾಡಿಕೊಳ್ಳಲಿಕ್ಕೆ ಒಂದು ಆಶ್ರಯವೂ ಇಲ್ಲ ಜಲಪ್ರಳಯದ ಅನಂತರ ಕಷ್ಟಗಳನ್ನು ಅನುಭವಿಸಲಿಕ್ಕೆ ಬದುಕಿರುವುದಕ್ಕಿಂತ ಆ ಪ್ರವಾಹದಲ್ಲಿ ಬಿದ್ದು ಸಾಯುವುದೇ ಅವರಿಗೆ ಹೆಚ್ಚು ಸುಖವಾಗಿತ್ತು

ಆಗಲೇ ಯಾರೋ ಒಬ್ಬರು ಮಹಾನುಭಾವರು ಅವರ ಕಡೆಗೆ ಬರುತ್ತಿರುವಂತೆ ತೋರಿತು. ಅವರ ಸಂಗಡ ಇಬ್ಬರು ಸೇವಕರೂ ಇದ್ದರು ಮಹಾನುಭಾವ ಯುವಕನೊಬ್ಬನು ನೆರೆಯ ಹಾವಳಿಯನ್ನು ಕಣ್ಣಾರೆ ನೋಡಿದ ಅವನ ಕೋಮಲ ಹೃದಯವು ವೈದಾನಿನಲ್ಲಿ ಕಾಡಿದ ಸ್ತ್ರೀಪುರುಷ ಬಾಲಕರ ಆರ್ತಧ್ವನಿಯನ್ನು ಕೇಳಿ ನೀರು ನೀರಾಯಿತು. ಅವನು ಊರ ಗೌಡನನ್ನು ಕರೆದು ೧೦೦೦ ರೂಪಾಯಿಗಳ ಒಂದು ಚೀಲವನ್ನು ಅವನ ಕೈಯಲ್ಲಿಟ್ಟು 'ಇವುಗಳಿಂದ ಇವರಿಗೆ ಸಹಾಯ ಮಾಡು' ಎಂದು ಹೇಳಿ ಯುವಕನು ಮರಳಿದ

◈

ಪ್ರಾತಃಕಾಲದ ಸಮಯ ಶಂಕರರಾಯರು ಆರಾಮ ಕುರ್ಚಿಯಲ್ಲಿ ಕುಳಿತು ಹೊಗೆಸೊಪ್ಪು ಸೇದುತಿದ್ದರು ಎದುರಿಗೆ ಮಾಧವರಾಯನು ಅಪರಾಧಿಯ ಹಾಗೆ ನಿಂತಿದ್ದ ಶಂಕರರಾಯರು ಹಲ್ಲು ಕಡಿಯುತ್ತ—'ಏನು, ಆ ಬಡಮಾಶ ಜನರಿಗೆ ಒಂದು ಸಾವಿರ ರೂಪಾಯಿ ಗಳನ್ನು ಕೊಟ್ಟೆಯಾ? ಮಹಾದಾಸಿಯಾಗಿ ಬಿಟ್ಟೆಯಲ್ಲವೆ?' ಎಂದರು

ಮಾಧವನು ತಲೆತಗ್ಗಿಸಿ ನೆರೆಯಿಂದ ಪೀಡಿತರಾದ ಆ ಜನರ ಕರುಣ ಕತೆಯನ್ನು ಹೇಳಿದ ಆದರೆ ಶಂಕರರಾಯರ ಕಲ್ಲಿನಂಥ ಕಠಿನ ಹೃದಯವು ಕರಗಲಿಲ್ಲ ಊರ ಮುಂದಿಗೆ ಆ ಸಮಯದಲ್ಲಿ ಸಹಾಯ ಮಾಡುವುದು ಅವರದೇ ಕರ್ತವ್ಯವಾಗಿದ್ದಿತ ಆದರೆ ಅವರ ಸ್ವತಃ ಆ ಮಹಾಕರ್ತವ್ಯದಿಂದ ವಿಮುಖರಾಗಿದ್ದರು ಅದೆ, ಆ ಕರ್ತವ್ಯದ ಒಂದು ಸಣ್ಣ ಅಂಶವನ್ನು ಪೂರೈಸಿದ ಮಗನ ಮೇಲೆಯೂ ಸಿಟ್ಟಾಗಿದ್ದರು. ಮಾಧವರಾಯನು ಕೊಟ್ಟ ಆ ಹಣವನ್ನು ತನಗೆ ಬಾಕಿ ಇದ್ದ ಆ ತರೆಲ್ಲರ ಗೇಣಿಯನ್ನು ಆಗಲೇ ವಸೂಲು ಮಾಡಿ ಬರಬೇಕೆಂದು ಅವರು ಒಕ್ಕಲಿಗದವರನ್ನು ಕಳುಹಿಸಿದರು.

ಊರಿಗೆ ಬಂದಿದ್ದಾಗ ಮಾಧವನು ಲಲಿತೆಯೊಂದಿಗೂ ಮಾತಾಡಿದ್ದನೆಂದ ಸ್ವಲ್ಪ ಮೇಲ್ಜನರ ನಾನಾ ತರದ ಗಾಳಿ ಸುದ್ದಿ ಗಳನ್ನು ಕಟ್ಟಿದ್ದರು ಲಲಿತೆ ವಿಧವೆ ತಾಯ ನೊಬ್ಬಳ ಮಗಳು, ಅವಳ ಮೂರು ವರ್ಷದವಳಾಗಿದ್ದಾಗ, ಅವಳ ತಂದೆ ಸಿಡುಬಿನಿಂದ ಸ್ವರ್ಗಸ್ಥರಾಗಿದ್ದರು ಆಗ ಅವಳಿಗೆ ೧೫-೧೬ ವರ್ಷ ಪ್ರಾಯ ಅವಳ ತಾಯಿ ದಾರಿದ್ರ್ಯ ಮತ್ತು ವೈಧವ್ಯದ ದುಃಖಗಳನ್ನು ಅನುಭವಿಸುತ್ತ ಜರ್ಜರಿತಳಾಗಿದ್ದಳು ಅದರ ಮೇಲೆ ಲಲಿತೆಯು ಏರುವ ವಯಸ್ಸು ಜೀವನದ ಒಂದು ಮಹಾ ದುರ್ಘಟನೆಯಾಗಿದ್ದಿತು ಲಲಿತೆಯ ಭವಿಷ್ಯದ ಕುರಿತು ನಿರಾಶಳಾಗಿ ಅವಳು ಮಧ್ಯಾಹ್ನದ ಸಮಯ, ಒಂದೊಂದು ನಿಟ್ಟುಸಿರನ್ನು ಬಿಡುತಿದ್ದಾಗ ಸೂರ್ಯ ಭಗವಾನನ ಪ್ರಜ್ವಲ ಮುಖಮಂಡಲವೂ ಮಂದವಾದಂತೆ ಭಾಸವಾಗುತಿದ್ದಿತು ಲಲಿತೆ ಶಾಲೆಗೆ ಹೋದವಳಲ್ಲ. ಓದುಬರಹ ಅವಳಿಗೆ ಏನೂ ಬರುವುದಿಲ್ಲ, ಆದರೆ ಅವಳ ಸಾಧುತ್ವದಲ್ಲಿರುವ ಆ ಮಾಧುರ್ಯ ಮತ್ತು ದೇಹ ಸೌಂದರ್ಯಗಳ ಸೌರಭವು ನಾಲ್ಕೂ ಕಡೆಗಳ ಯುವಕರ ಮನಸ್ಸನ್ನು ಅವಳ ಕಡೆಗೆ ಆಕರ್ಷಿಸುತ್ತಿದ್ದಿತು.

ಉಚ್ಚ ಶಿಕ್ಷಣವನ್ನು ಪಡೆದು ಸಂಸ್ಕೃತಿ ಹೊಂದಿದ ಮಾಧವನ ನೇತ್ರಗಳು ಸೌಂದರ್ಯದ ಪರೀಕ್ಷೆ ಕೊಡಲು ತಕ್ಕ ಯೋಗ್ಯತೆಯನ್ನು ಸಂಪಾದಿಸಿದ್ದುವು ಅಲ್ಲವಾದರೆ ಚೆಂದ ಬಟ್ಟೆಗಳನ್ನುಟ್ಟು ವೈದಾನಿನ ಒಂದು ಮೂಲೆ ಯಾರಿಗೂ ಕಾಣಿಸದ ಹಾಗೆ ತನ್ನ ತಾಯೊಂದಿಗೆ ಕೂತ ಅವಳ ಮೇಲೆ ಮಾಧವನ ದೃಷ್ಟಿ ಬೀಳುತ್ತಿರಲಿಲ್ಲ

ಈ ಸಮಾಚಾರವೂ ಶಂಕರರಾಯರ ಕಿವಿಗಳಿಗೆ ಬಿದ್ದಿತು. ಅವರು ಲಲಿತೆಯನ್ನೂ ಅವಳ ಮುದಿ ತಾಯಿಯನ್ನೂ ಕರೆಸಿ, ಆ ವಿಧವೆಯೊಡನೆ ಹೀಗೆಂದರು – 'ಏನು, ರಂಡೆ ಮಗಳೆ ನೀನು ನಿನ್ನ ಮಗಳನ್ನು ಮಾಧವನೊಂದಿಗೆ ಮಾತಾಡಲು ಯಾಕೆ ಬಿಟ್ಟೆ ನೀನು ಮಾಧವನನ್ನು ಏನೆಂದು ತಿಳಕೊಂಡೆ?' ಮಾತನಾಡುತ್ತ ಶಂಕರರಾಯರ ಕಣ್ಣುಗಳಿಂದ ಕಿಡಿಗಳು ಹಾರುತಿದ್ದುವು ಹಲ್ಲುಗಳು ತಮ್ಮಷ್ಟಕ್ಕೆ ಕಡಿದು ಕೊಳ್ಳುತಿದ್ದುವು ಸಂತಪ್ತವಾದ ಅವರ ಆ ಗಾತ್ರಗಳು ಕಂಪಿಸುತಿದ್ದುವು ವಿಧವೆ ತಾಯಿ ಒಮ್ಮೆಗೆ ಲಲಿತೆಯ ಕಡೆಗೆ ಮತ್ತೊಮ್ಮೆ ಆಕಾಶದ ಕಡೆಗೆ ಮಗದೊಮ್ಮೆ ಶಂಕರರಾಯರ ಕಡೆಗೆ ನೋಡಿದಳು ಲಲಿತೆಯ ಕಡೆಗೆ ನೋಡಿದಾಗ ಅವಳ ದೃಷ್ಟಿಯಲಿ ಒದವಿಕೆ ಇದ್ದಿತ ಆಕಾಶದ ಕಡೆಗೆ ನೋಡಿದಾಗ ನಿರಾಶೆ ಇದ್ದಿತ ಮತ್ತೆ ಶಂಕರರಾಯರ ಕಡೆಗೆ ನೋಡಿದಾಗ ಅವಳ ಕಣ್ಣುಗಳಲಿ ಪ್ರತಿಕಾರದ ಭಯಂಕರ ಅಗ್ನಿಯು ಪ್ರಜ್ವಲಿಸುತಿದ್ದಿತು. ವಿಧವೆ ಮೌನಳಾಗಿರುವುದನ್ನು ನೋಡಿ ಶಂಕರರಾಯರು ಇನ್ನೂ ಅನೇಕ ಬೈಗಳಿಂದ ಅವಳನ್ನು ಉಪಚರಿಸಿ ಕಳುಹಿಸಿದರು.

◈

ಹುಲಿನ ಚಾಪೆಯ ಮೇಲೆ ವಿಧವೆ ಮೃತ್ಯು ಮುಖಳಾಗಿ ಮಲಗಿದ್ದಳು ಊರ ಬೇರೆ ಜನರು ತಮತಮಗಾಗಿ ಮನೆ ಮಾರುಗಳನ್ನು ಕಟ್ಟಿಕೊಂಡಿದ್ದರು ಆದರೆ ಇವಳೊಬ್ಬಳಿಗೆ ಮಾತ್ರ ಯಾರೂ ಸಹಾಯ ಮಾಡಿರಲಿಲ್ಲ ಶಂಕರರಾಯರ ಕಟ್ಟಪ್ಪಣೆ ಹಾಗಿದ್ದಿತು. ಲಲಿತೆಯು ನಿರಾಶಿತಳಾದ ತನ್ನ ವಿಧವೆ ತಾಯಿಯ ಮಗ್ಗುಲಲ್ಲಿ ಕುಳಿತಿದ್ದಳು ವಿಧವೆ ಕಠಿನ ಕಾಯಿಲೆಯಿಂದ ನರಳುತಿದ್ದಾಳೆಂದೂ, ಅವರಿಗೆ ಬೇರೆ ಆಶ್ರಯವಿಲ್ಲವೆಂದೂ, ಜನರಿಗೆ ಗೊತ್ತಿದ್ದಿತಾದರೂ ಅವರು ಅವಳ ಗುಡಿಸಲ ಕಡೆಗೆ ಕಣ್ಣೆತ್ತಿ ಕೂಡ ನೋಡುತ್ತಿರಲಿಲ್ಲ. ಪರಮ ಪಿತ ಮತ್ತು ಪರಮ ದಯಾಳುವಾದ ಭಗವಂತನೊಡನೆ ಲಲಿತೆ ಮಾಡುತಿದ್ದ ಅನವರತದ ಪ್ರಾರ್ಥನೆಯೇ ಅವಳ ವಿಧವೆ ತಾಯಿಗೆ ಸಂಜೀವನ ಓಷಧಿಯಾಗಿ ಪರಿಣಮಿಸಿತು.

ಇದು ಆಗಿ ಒಂದು ವರ್ಷದ ಅನಂತರ ಊರಿಗೆ ಪುನಃ ನೆರೆ ಬಂದಿದೆ ಈ ಪ್ರಳಯದಲ್ಲಿ ಶ್ರೀಮಂತ ಬಡವ ಎಂಬ ಯಾವ ಭೇದವೂ ಉಳಿಯಲಿಲ್ಲ ಎಲ್ಲರೂ ಅದರಲ್ಲಿ ಕೊಚ್ಚಿಕೊಂಡು ಹೋದರು ಒಂದು ಮರದಡಿಯಲ್ಲಿ ಶಂಕರರಾಯರು ಗಾಯಗೊಂಡು ಬಿದ್ದಿದ್ದರು. ಪಾಪದ ಲಲಿತೆ ಎಲೆ ಉರಿಸಿ ತನ್ನ ತಾಯಿಯ ಎತ್ತು ಶಂಕರರಾಯರ ಮೈ ಕಾಯಿಸುತಿದ್ದಳ ಸ್ವಲ್ಪ ಹೊತ್ತಿನಲ್ಲಿ ಎಚ್ಚರಕ್ಕೆ ಬಂದಾಗ ಶಂಕರರಾಯರು ತನ್ನ ಮುಂದೆ ಮಾಧವ ಮತ್ತು ಲಲಿತೆ ನಿಂತಿರುವುದನ್ನು ನೋಡಿದರು ಅವರ ಕಣ್ಣುಗಳಿಂದ ಆ ಸಮಯದಲ್ಲಿ ನೀರು ಬಂದಿತು ಅವರು ಒಮ್ಮೆ ತನ್ನ ಮೈಕಾಯಿಸುತಿದ್ದ ಲಲಿತೆಯ ಕಡೆಗೆ, ಮತ್ತೊಮ್ಮೆ, ಅಲ್ಲಿ ಬಿದ್ದುಕೊಂಡಿದ್ದ ಅವಳ ವಿಧವೆ ತಾಯಿಯ ಕಡೆಗೆ ನೋಡಿದರ ವಿಧವೆಯು ಅವರು ಸಂಕಟದ ಉಸಿರನ್ನು ಕಂಡ ಬೆದರಿದರು.'

ಶಂಕರರಾಯರು ಲಲಿತೆ ಮತ್ತು ಮಾಧವನನ್ನು ಹತ್ತಿರ ಕರೆದು ಅವರ ಕಿವಿಗಳಲ್ಲಿ ಏನೋ ಪಿಸ ಗುಟ್ಟಿದರು. ಮತ್ತೆ ಅವರ ನೇತ್ರಗಳು ಎಂದೆಂದಿಗೂ ಮುಚ್ಚಿಕೊಂಡವು! ಲಲಿತೆ ಮಾಧವರು ಒಬ್ಬರೊಬ್ಬರ ಕಣ್ಣುಗಳಲ್ಲಿ ನೀರು ತುಂಬಿಸಿ ನೋಡುತ್ತಲೇ ಇದ್ದರು ಅಷ್ಟರಲಿ ಲಲಿತೆಯು ವಿಧವೆ ತಾಯಿ ಒಂದು ದೊಡ್ಡ ಬಿಕ್ಕಳ ತೆಗೆದಳ ಅವರಿಬ್ಬರ ದೃಷ್ಟಿಯು ಅವಳ ಕಡೆಗೊಮ್ಮೆ ಆಕರ್ಷಿತವಾಯಿತ

ಮಾಧವನ ತಂದೆ ಮತ್ತು ಲಲಿತೆಯ ತಾಯಿ ಇಬ್ಬರೂ ಈ ಸಂಸಾರದಿಂದ ಹೊರಟುಹೋದರು ಆ ಅಸಹಾಯ ಸ್ಥಿತಿಯಲ್ಲಿ ಲಲಿತೆ ಮತ್ತು ಮಾಧವರು ಒಬ್ಬರನೊಬ್ಬರು ಆಲಂಗಿಸಿಕೊಂಡರು ಹಳೆಯ ನೆನಹುಗಳ ತೆರೆಗಳು ಅವರ ಹೃದಯಗಳಲ್ಲಿ ಅಲ್ಲೋಲ ಕಲ್ಲೋಲವನ್ನೆಬ್ಬಿಸುತಿದ್ದುವು ಮಹತ್ತರವಾದ ನೆರೆಯ ಇನ್ನೊಂದು ಪ್ರವಾಹವು ವಾಯು ವೇಗದಿಂದ ಹಾರಿ ಬಂದಿತ ಅದರಲ್ಲಿ ಆಸಕ್ತ ಪ್ರೇಮಿಗಳು, ಯಾವ ದಿಕ್ಕಿಗೆಂದ ತಿಳಿಯಲಿಲ್ಲ ಎಲ್ಲಿಗೋ ತೊಳೆದು ಹೋದರು

"ನಳಿನೀ ಕಹಾನಿಯಾಂ"

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ, ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಮ್,
P. O. Pendem (ಬೆಳಗಾವಿ ಡಿ

ಒಂದು ವರ್ಷದ ಭೀಷಣ ಮಹಾಯುದ್ಧ!

ಸೆಯ ಇಸವಿ ಸಪ್ಟಂಬರ ಯ ದಿನವು ಪ್ರಪಂಚದ ಇತಿಸದಲ್ಲಿ ರಕ್ತಾಕ್ಷರದಿಂದ ಚಿತ್ರಿತಗುವ ದಿನ! ಅಂದು ಮಹಾಯುದ್ಧವು ಪ್ರಾರಂಭವಾಯಿತು! ರ್ಯ ಹನನ ಕಾರ್ಯವು ಶಂಡತೆಯನ್ನು ಹೊಂದಿತು! ೀಕ ಶಾಂತಿಯು ಕದಡಿತು! ವಕರು ರಣರಂಗದಲ್ಲಿ ನೆತ್ತನ್ನು ಸುರಿಸಲು ಹೋದರು! ಹೆಂಗ್ಸು ಮಕ್ಕಳು ವೃದ್ಧರಾದಿಯಾಗಿ ಗಳ ನಿರ್ದಯವಾದ ಬಾಂಬು ಬೆಂಕಿಗಳ ಸುರಿಮಳೆಗೆ ಬಲಿದರು! ಶತಮಾನಗಳಿಂದ ಸ್ವಾತ್ರ್ಯವನ್ನು ಅನುಭವಿಸಿದ್ದ ಷ್ಟ್ರಗಳು ಶರಣಾಗಿ ಕೆಡೆದವು! ಸ್ಕೃತಿ ಜೀವನವೇ ತತ್ತರಿಸಡಗಿತು! ಮಹಾಯುದ್ಧವು ರಂಭವಾಗಿ ಇಂದಿಗೆ ಒಂದು ರ್ಷವು ಸಂದಿತು! ಯುದ್ಧದ ಭೀಕರತೆಯು ಇನ್ನಾದರೂ ಕಮ್ಮಿಯಾಗಿ ಲೋಕದಲ್ಲಿ ಶಾಶ್ವತವಾದ ಶಾಂತಿಯು ನೆಲಸುವುದೆ?

ಇಂದು ಯುರೋಪಿನಲ್ಲಿ ಕೆಲವು ರಾಷ್ಟ್ರಗಳು ಬಡಿದಾಡುತ್ತಿರುವುದರಿಂದ ಮಿಕ್ಕರಿಗೆ ಬಂದ ಕಷ್ಟವೇನು ಎಂದು ವಿಚಾರಿಸುವುದು ತಪ್ಪು. ಇಂದು ಗೋಲದ ಯಾವುದೇ ಕಡೆಯಲ್ಲಿ ಮೀಟಿದ ತಂತಿ ಇನ್ನೊಂದು ಕಡೆಗೆ ಪ್ರತಿಧ್ವನಿ ಕೊಡುತ್ತದೆ. ಇಂದು ಮನುಷ್ಯನ ಜೀವನ ವ್ಯವಹಾರವು ಹೀಗೆ ಅನ್ಯೋನ್ಯತೆಯಿಂದ ಬಿಗಿದಿದೆ! ವಿಜ್ಞಾನವು ಇದಕ್ಕೆ ಸಹಾಯಮಾಡಿತು, ಆದರೆ ಸ್ವಾರ್ಥ ಸಾಧಕರು ವಿಜ್ಞಾನದ ಪ್ರಯೋಜನವನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿ ಲೋಕೋಪದ್ರವಕ್ಕೆ ಪ್ರಾರಂಭಿಸಿದರು! ಸತ್ತ ಮರವನ್ನು ಕಡಿಯಲು ಕೊಟ್ಟ ಕೊಡಲಿಯನ್ನು ಪ್ರಾಣಿಗಳ ಮನುಷ್ಯರ ಮೇಲೆ ಬೀಸತೊಡಗಿರುವರು!

ಯುದ್ಧವು ಒಂದು ವರ್ಷವನ್ನು ದಾಟಿತು! ಈ ಒಂದು ವರ್ಷದ ಸಿಂಹಾವಲೋಕನವು ಭೀಷಣವಾಗಿದೆ! ಯುದ್ಧಕ್ಕೆ ಆಹುತಿಯಾಗಿ ಒಂಭತ್ತು ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು, ಗೆದ್ದ ರಾಷ್ಟ್ರದ ಪದಹತಿಯಲ್ಲಿ ಜರ್ಜರಿತವಾಗುತ್ತಿವೆ! ಪೋಲೆಂಡು ಪತನವಾಯಿತು! ಫಿನ್‌ಲೆಂಡು ಪರಾಜಿತವಾಯಿತು! ನಾರ್ವೆ ಡೆನ್ಮಾರ್ಕುಗಳು ಭಗ್ನವಾದುವು! ಹಾಲೆಂಡು ಬೆಲ್ಜಿಯಂಗಳು ಉರುಳಿದವು! ಬಾಲ್ಟಿಕ್ ರಾಷ್ಟ್ರಗಳು ಪರಿಭವ ಕಷ್ಟಕ್ಕೀಡಾದವು! ಆಸ್ಟ್ರಿಯಾ, ಅಬಿಸೀನಿಯಾ, ಜೆಕೋಸ್ಲೊವೇಕಿಯಗಳು ಅದಕ್ಕಿಂತ ಹಿಂದೆಯೇ ಶರಣಾಗಿ ಹೋಗಿದ್ದವು!

ಪತನಹೊಂದಿದ ರಾಷ್ಟ್ರಗಳು

ಪೋಲೆಂಡು ಮೊದಲಾಗಿ ಜರ್ಮ-

ಸ್ವತಂತ್ರ ರಾಷ್ಟ್ರಗಳು ಶರಣಾಗಿವೆ!

ಜೀವಲೋಕವು ತಳಮಳಗೊಂಡಿದೆ!!

ಪ್ರಪಂಚದ ಶಾಂತಿಯು ಕದಡಿದೆ!!!

ನಿಯ ಆಕ್ರಮಣಕ್ಕೆ ಸಿಕ್ಕಿದುದು; ಇದನ್ನು ಕೊನೆಗೆ ರಶ್ಯ ಜರ್ಮನಿಗಳು ತಿವೊಳಗೆ ಹರಿದು ಹಂಚಿಕೊಂಡು ತಮ್ಮ ರಾಜ್ಯಭಾಗಕ್ಕೆ ಸಮರ್ಪಣೆ ಮಾಡಿಕೊಂಡವು! ಫಿನ್‌ಲೆಂಡಿನ ಸ್ವಾತಂತ್ರ್ಯವನ್ನು ರಶ್ಯವೊಂದೇ ಕಿತ್ತುಕೊಂಡಿತು! ಈ ಯುದ್ಧವು ೧೯೩೯ರ ದಶಂಬರದಲ್ಲಿ ಪ್ರಾರಂಭವಾಗಿ ಮಾರ್ಚಿಯ ವರೆಗೆ ಸಾಗಿತು. ಫಿನ್ನರು ಅಷ್ಟು ದೀರ್ಘ ಕಾಲ, ಪ್ರಬಲ ಶತ್ರುವಿನೊಡನೆ ಸಮಸಾಹಸದಿಂದ ಕಾದಾಡಿದರು. ಹೀಗೆ ಅಲ್ಲಿ ಯುದ್ಧವು ಕೊನೆಗೊಂಡಾಗ, ಹಿಟ್ಲರ್ ಎಪ್ರಿಲ್ ಮೊದಲನೆಯ ವಾರದಲ್ಲಿ ಡೆನ್ಮಾರ್ಕಿಗೆ ದಾಳಿ ಮಾಡಿದನು. ಡೆನ್ಮಾರ್ಕು ಹಿಟ್ಲರನಿಗೆ ತಲೆಬಾಗಿತು! ಮುಂದೆ ನಾರ್ವೆ ಸರಕಾರದೊಡನೆ ಕಾದಾಟ ನಡೆಯಿತು! ಅದೂ ಹಿಟ್ಲರನನ್ನು ಇದಿರಿಸಲಾರದೆ ಪಲಾಯನ ಮಾಡಿತು! ಮತ್ತೆ ಮೇ ೧೦ರಂದು ಜರ್ಮನರು, ಬೆಲ್ಜಿಯಂ ಲಕ್ಸಂಬರ್ಗ್‌ಗಳ ಮೇಲೆ ಆಕ್ರಮಣ ನಡೆಸಿದರು! ಹಾಲೆಂಡು ಮೇ ತಿಂಗಳ ಮೂರನೆಯ ವಾರದಲ್ಲಿ ಜರ್ಮನರ ಸೆರೆಗೆ ಸಿಲುಕಿತು. ಬೆಲ್ಜಿಯಂ ೧೮ ದಿನಗಳ ಯುದ್ಧದಲ್ಲಿ ಪರಾಜಯಹೊಂದಿತು! ಮುಂದೆ ಫ್ರಾನ್ಸಿನ ಪತನದ ದುರಂತವೂ ನಡೆಯಿತು! ಪ್ರಪಂಚದಲ್ಲಿ ಅತ್ಯಂತ ವಿಭವ, ಸುಂದರ ನಾಗರಿಕ ರಾಷ್ಟ್ರವೆನಿಸಿದ ಫ್ರಾನ್ಸು ಹಿಟ್ಲರನ ಉದ್ವೇಗವನ್ನು ಎದುರಿಸಲಾರದೆ ಜೂನ್ ಇಪ್ಪತ್ತೈದಕ್ಕೆ ಶರಣೆಂದಿತು! ಮುಂದೆ ಜೂನ್ ತಿಂಗಳಲ್ಲಿಯೇ ಅತ್ತ ರಶ್ಯವು ಬಾಲ್ಟಿಕನಲ್ಲಿ ಬೆಸರೇಬಿಯಾ, ಬುಕೋವಿನಾ ಪ್ರಾಂತಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿತು! ಹೀಗೆ ಇಷ್ಟೆಲ್ಲಾ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡವು!

ಬ್ರಿಟನಿನೊಡನೆ ಹೋರಾಟ

ಹೀಗೆ ಜರ್ಮನಿಯು ಮದೋನ್ಮತ್ತನಾಗಿ ಲೋಕಶಾಂತಿಯನ್ನು ಕೆಡಿಸಿ ದುಂಡುವರಿಯುತ್ತಿರುವುದನ್ನು ಕಂಡು ಬ್ರಿಟನು ಜರ್ಮನಿಯೊಡನೆ ಯುದ್ಧ ಪ್ರಕಟಣೆ ಮಾಡಿತು! ಒಂದೊಂದೇ ರಾಷ್ಟ್ರಗಳನ್ನು ಗೆಳಂಕರಿಸಿ ವಿದ್ಯುದ್ವೇಗದಿಂದ ಬಂದ ಹಿಟ್ಲರನ ಇಂದು ಫ್ರಾನ್ಸಿನ ಗಡಿಯಲ್ಲಿ ನಿಂತು ಬ್ರಿಟನಿನೊಡನೆ ಕಾದಾಟಕ್ಕಿಳಿದಿದ್ದಾನೆ! ಕಳೆದ ಕೆಲವು ವಾರಗಳಿಂದ ಬ್ರಿಟನಿನ ಮೇಲೆ ಇಂಗ್ಲೆಂಡಿನ ಮೇಲೆ ಯುದ್ಧವು, ಆಕ್ರಮಣವು ಪ್ರಬಲವಾಗಿ ಆರಂಭವಾಗಿದೆಯೆಂದು ತಿಳಿದು ಬರುತ್ತದೆ. ಇಂಗ್ಲಿಷ್ ಕಡಲಾಳುವೆಯಲ್ಲಿ, ಜರ್ಮನ್ ವಿಮಾನಿಕರ ಸಹಸ್ರ ಸಂಖ್ಯೆಯಿಂದ ಹಾರಾಡತೊಡಗಿದ್ದಾರೆ. ಲಂಡನಿನ ಕೆಲವು ಸ್ಥಳಗಳಲ್ಲಿ ಬಾಂಬುಗಳು ಬಿದ್ದಿವೆ. ಬಹಳ ನಷ್ಟಗಳೂ ಆಗಿವೆ.

ಬ್ರಿಟನಿಗೆ ಜರ್ಮನಿಯ ಈ ದುರ್ಬುದ್ಧಿಯು ಹಿಂದಿನಿಂದಲೇ ತಿಳಿದಿತ್ತು. ಬ್ರಿಟನು ಎಂತಹ ಬಲವಂತವಾದ ಆಕ್ರಮಣಕ್ಕೂ ಬೆದರದಷ್ಟು ಭದ್ರವಾಗಿದೆ. ಜರ್ಮನಿಯ ಮೇಲೆ ಬರ್ಲಿನಿನ ಮೇಲೆ ಬ್ರಿಟಿಷ್ ವೈಮಾನಿಕರು ಆಕ್ರಮಣ ನಡೆಸುತ್ತಿರುವರೆಂದೂ ತಿಳಿದಿದೆ. ಅಂತೂ ಎರಡು ಕಡೆಯವರು, ಅತ್ಯಂತ ಪ್ರಬಲರಾಗಿ ಇಂದು ಕಾದಾಟಕ್ಕಿಳಿದಿದ್ದಾರೆ. ಯುದ್ಧದ ಭೀಷಣತೆಯು ದಿನದಿಂದ ದಿನಕ್ಕೆ ಹೆಚ್ಚುತ್ತಾ ಇದೆ.

ಯುದ್ಧದಿಂದಾದ ನಷ್ಟ

ಯುದ್ಧದಿಂದ ಅಂತರ್‌ರಾಷ್ಟ್ರೀಯ ವ್ಯವಹಾರವು ತಳಮಳಗೊಂಡಿದೆ. ಗೋಳದ ಯಾವುದೇ ಕಡೆಯಲ್ಲಿಯೂ ಶಾಂತಿಯಿಲ್ಲ. ಜೀವನ ವ್ಯಾಪಾರವು ಕಷ್ಟವಾಗಿದೆ. ಜನರು ಅತ್ಯಂತ ದಾರಿದ್ರ್ಯಕ್ಕೆ ಬಲಿಯಾಗಿದ್ದಾರೆ. ಜೀವನಕ್ಕೆ ಬೇಕಾದ ವಸ್ತುಗಳ ಬೆಲೆಯು ಎಲ್ಲಾ ರಾಷ್ಟ್ರದಲ್ಲಿಯೂ ಮಿತಿಮೀರಿದೆ. ರಾಷ್ಟ್ರಗಳು ಯುದ್ಧಸಾಮಗ್ರಿಗಳನ್ನು ಕೂಡುವುದರಲ್ಲಿಯೇ ಆಸಕ್ತವಾಗಿ, ಇತರ ಕೈಗಾರಿಕೆಗಳಿಗೆ ಬಲವಂತವಾದ ಧಕ್ಕೆ ಬಂದಿದೆ. ಯುರೋಪಿನಲ್ಲಿ ಎಲ್ಲೆಲ್ಲೂ ಬರಗಾಲದ ಭಯಂಕರ ಕ್ಷಾಮದ ಲಕ್ಷಣಗಳು ತಲೆದೋರಿವೆ. ಸ್ವಾತಂತ್ರ್ಯವನ್ನು ಅಪಹರಿಸಿದ ರಾಷ್ಟ್ರಗಳಿಂದ ಧನ ಜನ ಸಂಪತ್ತುಗಳ ಸುಲಿಗೆ ಸೂರೆಯು ನಡೆಯುತ್ತಿದೆ!

ಯುದ್ಧದಿಂದ ಒದಗಿದ ಪ್ರಾಣಹಾನಿಯು ಮಿತಿಗೆ ಮೀರಿದ್ದಾಗಿದೆ! ಮುಳುಗಿದ ಹಡಗುಗಳು ಅಸಂಖ್ಯವಾಗಿವೆ. ಭಗ್ನವಾದ ನಗರಗಳು ಲೆಕ್ಕವಿಲ್ಲದಷ್ಟಾಗಿವೆ.

ಪ್ರಚಂಡ ಯುದ್ಧವು ಇಂದು ಪ್ರಾರಂಭವಾಗಿದೆ ಮಾತ್ರ. ಇನ್ನು ಎಷ್ಟು ಕಾಲ ಈ ಯುದ್ಧವು ನಡೆಯುವುದೋ! ಲೋಕ ಶಾಂತಿಯು ಬ್ರಿಟನಿನ ವಿಜಯದಲ್ಲಿಯೇ ಇದೆಯೆಂದು ಎಲ್ಲರೂ ನಂಬುತ್ತಾರೆ.

THE
BANK OF MANGALORE LTD.,
MANGALORE
ESTD 1931
Branches-
Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

DIAMONDS! DIAMONDS!
BEST BRILLIANCY!
K. R. K. SHET,
MANGALORE.
ಮಂಗಳೂರಿನ ಪ್ರಸಿದ್ಧ ಜವಾಹಿರ ವ್ಯಾಪಾರಿ
ವಜ್ರಗಳು!
ಎಮ್ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.
ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.
ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್, ಜುವೆಲ್ಲರ್.

ಜಿಲ್ಲಾ ಸಮಾಚಾರ



ಮಂಗಳೂರು

ಪ್ರಯಾಣ ಸೌಕರ್ಯ:— ಮೈಸೂ ನ ಹೊಸ ರಾಜರ ಪಟ್ಟಾಭಿಷೇಕ ಮಹೋತ್ಸವವು ತಾ ೮-೯-೪೦ರಂದು ನರಗುವುದು. ಈ ಬಗ್ಗೆ ಮಂಗಳೂರಿನ ಂಬೈಂಡ್ ಮತ್ತು ಜೊಯಿಂಟ್ ಬುಕ್ಕಿಂಗ್ ಸರ್ವಿಸಿನವರು ಮೈಸೂರಿಗೆ ಸ್ಪೆಶ್ಯಲ್ ಬಸ್ ಸರ್ವಿಸನ್ನು ಏರ್ಪಡಿಸಿರುವುದು ಸಂತೋಷದ ವಿಷಯವಾಗಿದೆ ಮೈಸೂ ಲ್ಲಿ ಬಸ್ ಕಂಪೆನಿಯ ವಿಶ್ರಾಂತಿ ಗೃಹ ದಲ್ಲಿ ಯಾತ್ರಿಕರಿಗೆ ಉಳಕೊಳ್ಳಲೂ ಸಹ ವೇಕಾದ ಸೌಕರ್ಯಗಳನ್ನೂ ಮಾಡಿರುವ ಂದು ತಿಳಿದುಬರುತ್ತದೆ

ಯಂ. ಎನ್ ರ್‍ಯಾಗಳ ಆಗಮನ— ಬರುವ ನವಂಬರ ತಿಂಗಳ ಎರಡನೆಯ ವಾರದಲ್ಲಿ ಪ್ರಸಿದ್ಧ ಸಮತಾವಾದಿ ಧುರೀ ಣರೂ, ರ್‍ಯಾಡಿಕಲ್ ಕಾಂಗ್ರೆಸ್ ಪಕ್ಷದ ಸ್ಥಾಪಕ ಹಾಗೂ ಹಾಗೂ ನಾಯಕರೂ ಆಗಿರುವ ಶ್ರೀ ಯಂ ಎನ್ ರ್‍ಯಾಗಳವರು ದಕ್ಷಿಣ ಹಿಂದುಸ್ಥಾನದ ಪ್ರವಾಸವನ್ನು ಮಾಡುತ್ತಾ, ದ ಕನ್ನಡ ಕ್ಕೂ ಬರುವವರಿದ್ದಾರೆಂದು ತಿಳಿದ ಬಂ ದಿದೆ. ಸ್ಥಳೀಯ ರ್‍ಯಾಡಿಕಲ್ ಕಾಂಗ್ರೆಸ್ ಪಕ್ಷದವರು ರಾಂ ರ್‍ಯಾಗಳಿಗೆ ಆಮಂತ್ರಣ ಕೊಟ್ಟಿರುವರೆಂತಲೂ ತಿಳಿದುಬರುತ್ತದೆ

ಆಲಿರ ಬಿಡುಗಡೆ:— ಕಾರ್ಕಳ ತಾ ಲೂಕು, ಮೂಡು ಕೆರೆಜಾಜ ಗ್ರಾಮದ ಸಾಂದಿಪೂಜಾರಿ ಕೂಡ ಆರು ಜನರನ್ನು ಹಿದರಿಯವರು ತಾರೀಖು ೨೨ ೧೧ ೩೯ ಲ್ಲಿ ಅದೇ ಗ್ರಾಮದ ಓಡಿ ಯಾನೆ ರಾಮಪ್ಪನನ್ನು ದೊಣ್ಣೆಗಳಿಂದ ಹೊಡೆದು ಮತ್ತು ಚೂರಿಯಿಂದ ಕಡಿದು ಆತನು ಪೆಟ್ಟುಗಳಿಂದ ಮೃತಪಟ್ಟ ಕಾರಣ ಐ. ಪಿ ಕೋಡಿನ ೩೦೨, ೧೪೭, ೧೪೮, ೧೪೯ ಪ್ರಕಾರ ಶಿಕ್ಷೆಯಾಗತಕ್ಕ ತಕ್ಷೀರು ನಡೆಸಿದ್ದರಾಗಿ ಮಂಗಳೂರು ಸೆಶ್ಯನ್ ಕೋರ್ಟಿಗೆ ಕಮಿಟು ಮಾಡಲ್ಪಟ್ಟಾಗಿತ್ತು. ಮೃತನು ಒಂದನೆಯ ಆಲಿಯ ಅಳಿಯನಾ ಗಿದ್ದನು. ಒಂದನೆಯ ಆಲಿಗೂ ಅವನು ಬಿಟ್ಟಿದ್ದ ಅವನ ಹೆಂಡತಿ ಚಂದು ಹೆಂಗ ಸಿಗೂ ಅವಳ ಮಗಳು ಸೀತು ಹೆಂಗಸಿ ನ ಗಂಡ ಮೃತನಿಗೂ ದ್ವೇಷ ಇತ್ತು. ಎಂಬದಾಗಿಯೂ ಆ ದ್ವೇಷದ ಮೂಲಕ ಮೇಲಿನ ತಕ್ಷೀರನ್ನು ಆಲಿರು ನಡಿಸಿದ್ದಾ ರೆಯೂ ಮುದ್ದೈ ಕಡೆಯಿಂದ ಹೇಳಲ್ಪ ಟ್ಟಾಗಿತ್ತು. ತಾವು ಯಾವ ತಕ್ಷೀರನ್ನೂ ಮಾಡಲಿಲ್ಲವಾಗಿ ಆಲಿರ ಸಾಧನೆಯಾ ಗಿತ್ತು. ಆಲಿರು ತಪ್ಪುಗಾರರಲ್ಲ ಎಂಬ ಅಸ್ಸೆ ಎಸೆಸರರ ಏಕಾಭಿಪ್ರಾಯವನ್ನು ಅಂಗೀಕಾರ ಮಾಡಿ ಮಂಗಳೂರಿನ ಸೆಶ್ಯ ನ್ ಜಡ್ಜರಾದ ಶ್ರೀ. ಟಿ. ಎಸ್. ರಾಮ ಚಂದ್ರನ್ ಐ. ಸಿ. ಎಸ್. ಅವರು ಆಲಿ ಗಳನ್ನು ತಾರೀಖು ೨೨-೮-೪೦ರಲ್ಲಿ ಬಿಡು ಗಡೆಮಾಡಿದರು.

ಶ್ರೀ ಕೃಷ್ಣ ಜಯಂತಿ ಸಮಿತಿ: ಈ ಸಮಿತಿಯವರು ಅತ್ತಾವರದಲ್ಲಿ ವರ್ಷಂ ಪ್ರತಿ ನಡೆಸುತ್ತಿರುವ ಕಾರ್ಯಕ್ರಮಗ ಳನ್ನು ನಡಿಸಿ ಅವುಗಳಲ್ಲಿ ಭಾಗವನ್ನು ವಹಿಸಿದ ಜನರಿಗೆ ಹುರುಪು ಹುಟ್ಟುವಂತೆ ಯುಕ್ತ ರೀತಿಯಿಂದ ಈ ಕೃತ್ಯಗಳನ್ನು ಮಾಡಿದವರಿಗೆ ಪಾರಿತೋಷಿಕಗಳನ್ನೂ ಸಮರ್ಪಿಸಿದರು ಈ ಸಮಾರಂಭದಲ್ಲಿ ಹತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಜನಸಂದಣಿಯು ಕೂಡಿತ್ತು ಈ ಸಮಿತಿಯು ಮೈಸೂರ ಶ್ರೀ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರರವರ ನಿಧನದ ಕುರಿತು ಸಂತಾಪ ಸೂಚಕ ಸಭೆಯೊಂ ದನ್ನು ಕೂಡಿಸಿ ರಾಜಕುಟುಂಬಕ್ಕೆ ಸಂತಾಪ ಸೂಚಕ ಠರಾವೊಂದನ್ನು ಕಳುಹಿಸುವ ನಿರ್ಣಯ ಮಾಡಿತು

ಮಂಗಳೂರು ನಗರ ಸಭೆ— ಸ್ಥಳೀ ಯ ನಗರ ಸಭೆಯು ಕಳೆದ ಶುಕ್ರವಾರ ಸೇರಿತು ಕೋಟಿ ಮತ್ತು ಜಾಡಮಾಲಿ ಗಳ ವೇತನ ವಿಚಾರ ಯೋಚಿಸಲು ಒಂ ದು ಉಪ ಸಮಿತಿ ಸ್ಥಾಪಿಸಲಾಯಿತು ಮದ್ರಾಸು 'ದುರಾಚಾರ ಪ್ರತಿಬಂಧಕ' ಕಾನೂನಿನ ನಿಯಮಗಳನ್ನು ನಗರದೊಳ ಗೆ ಜಾರಿಗೆ ತರುವರೆ ನಿಯುಕ್ತವಾದ ಸಮಿ ತಿಯು ಪ್ರಕೃತ ಅದನ್ನು ತರುವುದು ಸಾ ಧ್ಯವಿಲ್ಲವೆಂದು ತಿಳಿಸಿದುದರಿಂದ ಆ ವಿಷ ಯ ಕಮಿಶನರು ಅಭಿಪ್ರಾಯ ತಿಳಿಸಬೇ ಕೆಂದಾಯಿತ ದಕ್ಷಿಣ ಕನ್ನಡಕ್ಕೆ ಈ ತಿಂಗಳ ಮೂರನೆಯ ವಾರದಲ್ಲಿ ಬರುವ ಮದ್ರಾಸಿನ ಮೇಯರಾದ ಶ್ರೀ ಸತ್ಯ ಮೂರ್ತಿಗಳಿಗೆ ಸ್ವಾಗತವೀಯಬೇಕೆಂ ದಾಯಿತು.

ಉಡುಪಿ

ಸತ್ಯಮೂರ್ತಿಯವರ ಆಗಮನ— (ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರೂ ಮದ್ರಾಸ್ ಕೊರ್ಪರೇಶನಿನ ಮೇಯರರೂ ಆಗಿರುವ) ಶ್ರೀ. ಎಸ್. ಸತ್ಯಮೂರ್ತಿಯವರು ಸಪ್ಟಂಬರ ತಿಂಗಳ ಅಂತ್ಯದಲ್ಲಾಗಲೀ ಅಕ್ಟೋಬರ ತಿಂಗಳ ಆದಿಯಲ್ಲಾಗಲೀ ಉಡುಪಿಗೆ ಬರಲಿರು ವರೆಂದೂ ನಗರ ಸಭೆಯು ವರವಾಗಿ ಮಾನ ಪತ್ರ ಕೊಡುವ ಮತ್ತು ಮುನಿಸಿ ಪಲ್ ಕೌನ್ಸಿಲಿನ ಹೊಸ ಕಟ್ಟಡದ ಶಂಕು ಸ್ಥಾಪನೆ ಅವರಿಂದಲೇ ಮಾಡಿಸುವ ಯೋ ಜನೆಯು ನಡೆಯುತ್ತಲಿದೆಯೆಂದೂ ತಿಳಿದು ಬರುತ್ತದೆ.

ಉಚ್ಚ ಪರೀಕ್ಷೆಯಲ್ಲಿ ಸಫಲತೆ— ಕಾರ್ಕಳ ಬೋರ್ಡು ಹೈಸ್ಕೂಲಿನ ಹಿಂದೀ ಅಧ್ಯಾಪಕರಾದ ವಿದ್ವಾನ್ ಶ್ರೀ ಕಟೀಲ್ ಗಣಪತಿ ಶರ್ಮಾ, ವಿಶಾರದ, ಇವರು ಅಖಿಲ ಭಾರತ ಪಂಡಿತ್ ಪರಿಷತ್, ಅಯೋಧ್ಯಾ, ಈ ಸಂಸ್ಥೆಯ 'ಸಾಹಿತ್ಯಾ ಲಂಕಾರ' ಎಂಬ ಉಚ್ಚ ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ಉತ್ತೀರ್ಣರಾಗಿರು ತ್ತಾರೆ ಶ್ರೀ ಶರ್ಮರು ಮೇಲಿನ ಪರೀ ಕ್ಷೆಯಲ್ಲಿ ನೂರಕ್ಕೆ ಲಆಕ್ಕಿಂತಲೂ ಮೇಲ್ಪ ಟ್ಟ ಮಾರ್ಕುಗಳನ್ನು ಪಡೆದು, ಅಖಿಲ ಭಾರತದಲ್ಲಿ ಸರ್ವ ಪ್ರಥಮ (First in first class)ರಾಗಿ ಉತ್ತೀರ್ಣಹೊಂದಿ, ರಜತಪದಕವನ್ನು ಸಹ ಪಡೆದಿರುತ್ತಾರೆ. ಕರ್ನಾಟಕದಲ್ಲಿ ಹಾಗೂ ಪ್ರಾಯಶಃ ದಕ್ಷಿಣ ಭಾರತದಲ್ಲಿ ಈ ಪರೀಕ್ಷೆ ಪಾಸಾ ದವರಲ್ಲಿ ಇವರೇ ಮೊದಲಿನವರಾಗಿದ್ದು ಅದರಲ್ಲೂ ರಜತಪದಕವನ್ನು ಕೂಡಾ ಪಡೆ ದಿರುವುದು ನಮ್ಮ ಜಿಲ್ಲೆಗೊಂದು ಅಭಿ ಮಾನದ ಸಂಗತಿಯಾಗಿದೆ



ಕಾರ್ಕಳ

ಯೂನಿಯನಿಗೆ ಮಂಜೂರಾತಿ— ಇಲ್ಲಿ ಕೆಲವು ತಿಂಗಳುಗಳ ಹಿಂದೆ ಸ್ಥಾಪಿ ತವಾದ ಈ ತಾಲೂಕಿನ ಬೋರ್ಡು ಎಲಿ ಮೆಂಟರಿ ಶಾಲೆಗಳ ಉಪಾಧ್ಯಾಯರ ಯೂನಿಯನಿಗೆ ವಿದ್ಯಾ ಇಲಾಖಾ ಡ್ಯಾರೆ ಕ್ಟರರ ಮಂಜೂರಾತಿಯು ದೊರಕಿದೆ.

ಹೆಲ್ತ ಕಮಿಟಿಯ ಸಭೆ— ಕಾರ್ಕಳ ಹೆಲ್ತ ಕಮಿಟಿಯ ಒಂದು ಸಭೆಯು ತಾ ೩೧-೮-೧೯೪೦ರ ದಿನ ಸಾಯಂ ಕಾಲ ಶ್ರೀ ಓ ಪ್ಯಾಕಾರರವರ ಅಧ್ಯಕ್ಷತೆ ಯಲ್ಲಿ ಕೂಡಿ ಹೆಲ್ತ ಇನ್ಸಪೆಕ್ಟರ ಶ್ರೀ. ಕೇಶವ ಮೇನನರವರು ವಾಂತಿಭೇದಿ, ಉಷ್ಣ ಹೊರಕಡೆ, ಸನ್ನಿಪಾತ ಮೊದಲಾದ ಜ್ವರಗಳು ಬಂದಾಗ ಸಾರ್ವಜನಿಕರು ಅನುಸರಿಸಬೇಕಾದ ಉಪಾಯಗಳ ಕುರಿ ತು ಮದ್ರಾಸು ಸಾರ್ವಜನಿಕ ಆರೋಗ್ಯ ಮಸೂದೆಗನುಗುಣವಾಗಿ ಮದ್ರಾಸ ಸರ ಕಾರದವರು ಮಾಡಿದ ನಿಯಮ ನಿಬಂಧನೆ ಗಳನ್ನು ಓದಿ ಹೇಳಿ ವಿವರಿಸಿದರು.

ಕಾಸರಗೋಡು

ಕ್ರಿಕೆಟ್ ಪಂದ್ಯಾಟ— ಕಳೆದ ವಾರ ಇಲ್ಲಿ, ನಿಲೇಶ್ವರ ಟೌನ್ ಟೀಮಿನ ವರಿಗೂ ಕಾಞಂಗಾಡ್ ಟೌನ್ ಟೀಮಿ ನವರಿಗೂ ಕ್ರಿಕೆಟ್ ಪಂದ್ಯಾಟಗಳು ಜರಗಿ ನಿಲೇಶ್ವರದವರು ವಿಜಯಿಗಳಾಗಿರುವರು.

ಪೆರಡಾಲ

ಪ್ರೆಸಿಡೆಂಟರ ಸಂದರ್ಶನ.— ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾ॥ ಕೆ ವಿಟ್ಠಲ ಶೆಟ್ಟರು ಇಲ್ಲಿನ ಬೋರ್ಡು ಹಯ್ಯರ್ ಎಲಿಮೆಂಟರಿ ಶಾಲೆ ಯನ್ನು ಬಂದು ಸಂದರ್ಶಿಸಿದರು ಶಾಲೆ ಯು ಹೊಂದಿದ ಅಭಿವೃದ್ಧಿಯ ಕುರಿತು ತನ್ನ ತೃಪ್ತಿಯನ್ನೂ ಸಂತೋಷವನ್ನೂ ವ್ಯಕ್ತಗೊಳಿಸಿರುವರು.

ರೂರಲ್ ಡಿಸ್ಪೆನ್ಸರಿ:— ಇಲ್ಲಿಗೆ ದಯ ಮಾಡಿಸಿದ ಜಿಲ್ಲಾ ಬೋರ್ಡು ಪ್ರೆಸಿಡೆಂಟ ರಲ್ಲಿ ಊರವರು ತಮ್ಮಲ್ಲಿ ಆಗಬೇಕಾದ ರೂರಲ್ ಡಿಸ್ಪೆನ್ಸರಿಯ ವಿಷಯವಾಗಿ ಪುನಃ ಬಿನ್ನಹ ಮಾಡಿಕೊಂಡಿದ್ದಾರೆ. ಊರವರ ಬೇಡಿಕೆಯಲ್ಲಿನ ಅವಶ್ಯಕತೆಯನ್ನು ಮನ ಗಂಡು ಈ ವಿಷಯದಲ್ಲಿ ತಮ್ಮ ಸಹಕಾರ ವನ್ನು ಪ್ರೆಸಿಡೆಂಟರು ವ್ಯಕ್ತಪಡಿಸಿದ್ದಾರೆ.

ಡಿ॥ ಬೋ॥ ಮೆಂಬರರ ಠರಾವು:— ಪೆರಡಾಲಿನ ಮಹಾಜನರು ವಿನಂತಿಸಿ ಕೊಂಡ ಮೇರೆಗೆ ಪೆರಡಾಲ ಗ್ರಾಮದ ಬದಿಯಡ್ಕವೆಂಬಲ್ಲಿ ಆದಷ್ಟು ಬೇಗನೇ ಒಂದು ಹೊಸ ರೂರಲ್ ಡಿಸ್ಪೆನ್ಸರಿಯನ್ನು ತೆರೆಯಬೇಕೆಂಬ ಠರಾವೊಂದನ್ನು ಈ ಸರ್ಕಲಿನ ಡಿ॥ ಬೋ॥ ಮೆಂಬರರಾದ ಶ್ರೀ. ಬಂಬ್ರಾಣ ಗುತ್ತಪ್ಪ ರೈಗಳು ತಾ.. ೧೧ರಲ್ಲಿ ಜರಗುವ ಜಿ॥ ಬೋ॥ ಸಭೆಯಲ್ಲಿ ಮುಂದಿಡಲಿರುವರೆಂದು ತಿಳಿದುಬಂದಿದೆ. ಡಿ॥ ಬೋ॥ ಸದಸ್ಯರೆಲ್ಲರ ಉದಾರ ಸಹಕಾ ರವನ್ನು ಊರಿನವರು ಹಾರೈಸುತಿದ್ದಾರೆ.

ಹರಿಕಥೆ— ಕಳೆದ ವಾರ ಪೆರಡಾಲ ಬೋ॥ ಹಾ॥ ಎ॥ ಶಾಲೆಯಲ್ಲಿ ಶ್ರೀಯುತ ಮುಳ್ಳಿ ಶಂಕರನಾರಾಯಣ ಶಾಸ್ತ್ರಿಗಳು

ಪ್ರಚಂಡ ವಿಮಾನಧಾಳಿಯು ನಡೆಯಿತು!

ನಾಜೀ ವಿಮಾನಗಳುರುಳಿದವು!

★ ಯುದ್ಧ ವಾರ್ತೆ

ದಿನಕ್ಕೆ ಆರೇಳು ಸಲ ಆಕ್ರಮಣ!

ಹಂಗೇರಿ ರುಮೇನಿಯ ಒಪ್ಪಂದ!

ಟ್ರಾನ್ಸಿಲ್ವೇನಿಯದಲ್ಲಿ ಬಂಡಾಯ!

ಈ ವಾರದಲ್ಲಿ ಜರ್ಮನರು ಬ್ರಿಟನನಲ್ಲಿ ದಿನಕ್ಕೆ ಹಲವು ಸಲವೆಂಬಂತೆ ಆಕ್ರಮಣ ಮಾಡುತ್ತಿರುವರು. ಹಲವು ಕಡೆಗಳಲ್ಲಿ ನಷ್ಟಗಳೂ ಆಗಿವೆ. ಯುದ್ಧದ ಆಕ್ರಮಣವು ಈ ವಾರ ಹಿಂದಿಗಿಂತ ಪ್ರಚಂಡವಾಗಿದೆ.

ಬ್ರಿಟಿಷ್ ವೈಮಾನಿಕರು ಬರ್ಲಿನಿಗೂ ಧಾಳಿಯಿಟ್ಟಿದ್ದಾರೆ.

ಹಂಗೇರಿ ರುಮೇನಿಯಾ ಒಪ್ಪಂದಕ್ಕೆ ವಿರುದ್ಧ ಟ್ರಾನ್ಸ್‌ವೇಲಿಯದ ಜನರು ಬಂಡಾಯವೆಬ್ಬಿಸಿರುವರು.

ಇಂಗ್ಲೆಂಡಿನ ಮೇಲೆ ವಿಮಾನ ದಾಳಿ

ಜರ್ಮನರು ಕಳೆದ ತಿಂಗಳ ೮ರಿಂದ ಆರಂಭಿಸಿ ಲಂಡನಿನ ಮೇಲೆ ವಿಮಾನ ದಾಳಿ ಮಾಡಲು ತೊಡಗಿರುವರು ಮೊದಲನೆಯ ಸಲ ೧೫ನೆಯ ತಾರೀಕಿನ ವರೆಗೆ ನಡೆಯಿತು ಮತ್ತೆ ೨೦ರ ಮೇಲೆ ಎರಡನೆ ಸಲ ತೀವ್ರವಾಗಿ ಪ್ರಾರಂಭವಾಯಿತು.

ಫಿರಂಗಿಗಳ ಉಪಯೋಗ

ಮೊದಲನೆಯ ಸಲದಲ್ಲಿ ಬಾಂಬುಗಳನ್ನು ಮಾತ್ರ ಒಗೆದಿದ್ದರು, ಆದರೆ ಎರಡನೆಯ ಸಲ ಮೆಶಿನ್‌ಗನ್‌ಗಳೆಂಬ ಭಯಂಕರ ಫಿರಂಗಿಗಳನ್ನೂ ಉಪಯೋಗಿಸಿರುವರು ಜರ್ಮನರ ಫಿರಂಗಿಗಳ ಗರ್ಜನೆಯು ಭಯಂಕರವಾಗಿ ಕೇಳುತ್ತಿತ್ತು. ಫ್ರಾನ್ಸಿನ ದಡದಿಂದ ದೂರಕ್ಕೆ ಹಾರುವ ಫಿರಂಗಿಗಳನ್ನು ಉಪಯೋಗಿಸಿದ್ದರೆಂದು ತಿಳಿದಿದೆ

ಕೆಲವು ಹಾನಿಗಳು

ಎರಡನೆಯ ಸಲದ ದಾಳಿಯಿಂದ, ಇಂಗ್ಲೆಂಡಿಗೆ ಹಲ ಕೆಲವು ನಷ್ಟಗಳು ಸಂಭವಿಸಿವೆ ದಕ್ಷಿಣ ವೇಲ್ಸಿನಲ್ಲಿ ಒಂದು ಪಟ್ಟಣದ ಮೇಲೆ ಬಾಂಬು ಒಗೆಯಲ್ಪಟ್ಟಿದೆ. ಅನೇಕ ಜನರು ಮಡಿದಿದ್ದಾರೆ. ಲಂಡನಿನ ಉಪನಗರವೊಂದಕ್ಕೆ ಬಾಂಬು ಸಿಡಿದು ಅಲ್ಲಿನ ಸಿನೆಮಾಗೃಹವೊಂದು ಕೆಡೆದಿದೆ. ಈಶಾನ್ಯ ಮತ್ತು ಆಗ್ನೇಯ ಭಾಗಗಳಲ್ಲಿಯೂ ಬಾಂಬಿನಿಂದ ಹಾನಿಗಳಾದುವು.

ಲಂಡನಿನಲ್ಲಿ ಜರ್ಮನ್ ವೈಮಾನಿಕರು

ತಾ. ೩೧ರಂದು ಜರ್ಮನ್ ವೈಮಾನಿಕರು ಲಂಡನಿಗೆ ಇಳಿದು ಸ್ವಲ್ಪ ಸಮಯ ಇದ್ದು, ಮತ್ತೆ ಹಾರಿ ಅದೃಶ್ಯರಾದರು. [illegible] ಸಂಗಡವೆ ಬಾಂಬುಗಳನ್ನು [illegible] ನ [illegible] ಗಳುಂಟಾಗಲಿಲ್ಲವೆಂದು ತಿಳಿದಿದೆ.

ಅದೇ ದಿನ ಪೋರ್ಟ್ ಮೌತಿನ ಮೇಲೆ ನಾಜೀ ವಿಮಾನಗಳಿಂದ ಬಾಂಬು ಸುರಿಸಲ್ಪಟ್ಟಿತ್ತು ಅದೇ ದಿನ ರಾತ್ರಿ ಲಂಡನ್ ಪಟ್ಟಣದ ಮೇಲೆ ಮೂರನೆಯ ಬಾರಿ ದಾಳಿ ನಡೆಯಿತು ಇದರಿಂದ ಪೂರ್ವಭಾಗದಲ್ಲಿ ಹೆಚ್ಚು ಹಾನಿಯಾಗಿದೆ. ಮನೆಗಳಿಗೆ ಬೆಂಕಿ ಹತ್ತಿದ್ದುವು

ದೀರ್ಘ ವಿಸ್ತಾರದಲ್ಲಿ ದಾಳಿ

ತಾ. ೩೧ರಂದೂ ದಾಳಿ ನಡೆದಿದೆ ತಾ ೨೭ರ ಸಾಯಂಕಾಲದಿಂದ ಮುಂದಿನ ಸೂರ್ಯೋದಯದ ತನಕ ದಾಳಿ ನಡೆಯಿತು ಸುಮಾರು ೫೦೦ ಮೈಲು ವಿಸ್ತಾರದ ಬ್ರಿಟಿಷ್ ಕರಾವಳಿಯಲ್ಲಿ ಜರ್ಮನರು ಬಾಂಬುಗಳನ್ನು ಎಸೆಯುತಿದ್ದರು ನೈಋತ್ಯ ಇಂಗ್ಲೆಂಡಿನಿಂದ ಈಶಾನ್ಯ ಇಂಗ್ಲೆಂಡಿನವರೆಗೆ ಆಕಾಶ ಭಾಗವನ್ನೇ ಕವಿದಿದ್ದುವು ನಗರದ ಮೇಲೆ ಬಾಂಬುಗಳನ್ನೊಗೆಯಲಾಗಿದೆ. ನಾಜಿ ವೈಮಾನಿಕರು ಪೆರಚೂಟುಗಳಿಂದ ಇಳಿವ ಯತ್ನ ಮಾಡಿದರು.

ಲಂಡನಿನ ಮೇಲೆ ಬಾಂಬು!

ತಾ ೨೮ರಂದು ಜರ್ಮನ್ ವೈಮಾನಿಕರು ಎರಡು ತಾಸುಗಳ ತನಕ ಬಾಂಬಿನ ಮಳೆಯನ್ನೇ ಸುರಿಸಿದರೆಂದು ತಿಳಿದು ಬಂದಿದೆ ವೇಲ್ಸ್ ಮೊದಲಾದ ಕಡೆಗಳಲ್ಲಿಯೂ ಬಾಂಬುಗಳು ಸಿಡಿದಿವೆ ಇದರಿಂದ ಉಂಟಾದ ಹಾನಿ ಬಹಳ ವಿರಬಹುದೆಂದು ಊಹಿಸಲಾಗಿದೆ.

ಪ್ರತಿಯೊಂದು ದಿನದ ಧಾಳಿಯಲ್ಲಿಯೂ ಅನೇಕ ಜರ್ಮನ್ ವಿಮಾನಗಳು ಉರುಳಿಸಲ್ಪಡುತ್ತಿವೆಯೆಂದು ಸುದ್ದಿ

ನಾಲ್ಕು ಸಲ ವಿಮಾನ ಧಾಳಿ

ತಾ. ೩೦ರಂದು ಲಂಡನಿನ ಮೇಲೆ ನಾಲ್ಕು ಸಲ ವಿಮಾನ ದಾಳಿಯಾಯಿತೆಂದು ತಿಳಿದುಬರುತ್ತದೆ

ಶತ್ರು ವಿಮಾನಗಳು ಅನೇಕ ಗುಂಪು ಗುಂಪುಗಳಾಗಿ ಬರುತಿದ್ದವು ಬ್ರಿಟಿಷ್ ವೈಮಾನಿಕರು ಅವುಗಳನ್ನು ಚೆದರಿಸುತ್ತಿದ್ದರು. ವೀರಾವೇಶದಿಂದ ಕಾದಾಡುತ್ತಿದ್ದರು.

ಸೂರ್ಯಾಸ್ತಮಾನವಾಗುವುದರೊಳಗೆ ಆ ಒಂದೇ ದಿನ ನಾಲ್ಕು ಸಲ ಆಕ್ರಮಣ ನಡೆಯಿತು.

ಇದರಲ್ಲಿ ಅನೇಕ ಶತ್ರು ವಿಮಾನಗಳು ಉರುಳಿಸಲ್ಪಟ್ಟವೆಯೆಂದೂ ತಿಳಿದಿದೆ,

ದೀರ್ಘವಾದ ವಿಮಾನ ದಾಳಿ

ಆರುವರೆ ಗಂಟೆಯ ತನಕ

ಲಂಡನಿನ ಮೇಲೆ ತಾ. ೩೧ರಂದು ಸುಮಾರು ೬½ ತಾಸುಗಳ ತನಕ ದೀರ್ಘಕಾಲದ ವಿಮಾನ ದಾಳಿ ನಡೆಯಿತೆಂದು ಗೊತ್ತಾಗಿದೆ ಸರ್ಚ್‌ಲೈಟುಗಳ ಮೂಲಕ ವಿಮಾನಗಳನ್ನು ಕಂಡು ಹುಡುಕಿ ಹಿಂಡಟ್ಟಲಾಗಿದೆಯಂತೆ

ಇಡೀ ದಿನ ಕಾಳಗ ನಡೆಯಿತು

ತಾ ೧ರಂದು ತಿರಿಗಿ ಭಯಂಕರ ಯುದ್ಧವು ಇಡೀ ದಿನ ನಡೆಯಿತು ಈಗ ಹೆಚ್ಚಾಗಿ ಉದ್ಯೋಗ ಕೇಂದ್ರಗಳಲ್ಲಿ ಬಾಂಬು ಬಿದ್ದಿವೆ ಅನೇಕ ಕಟ್ಟಡಗಳಿಗೆ ಹಾನಿಯೊದಗಿದೆ ಲಂಡನಿನ ಸುತ್ತದ ಬೇರೆ ಬೇರೆ ಭಾಗಗಳಲ್ಲಿಯೂ ಆಕ್ರಮಣವಾಗಿತ್ತು ಬ್ರಿಟಿಷ ವೈಮಾನಿಕರ ಭಯಂಕರರಾಗಿ ಕಾದಾಡಿದರು ಈ ದಿನ ಏಳು ಸಲ ಧಾಳಿ ನಡೆಯಿತ ಏಳನೆಯ ಸಲ ಧಾಳಿ ಬಹಳ ತೀವ್ರವಾಗಿತ್ತು.

ತಾ ೨ರಂದೂ ತಿರಿಗಿ ಧಾಳಿ ನಡೆದಿದೆ ಇದರಲ್ಲಿ ೨೫ ಜರ್ಮನ್ ವಿಮಾನಗಳು ಉರುಳಿಸಲ್ಪಟ್ಟಿವೆ

ಗೋರಿಂಗನು ಕೊಲ್ಲಲ್ಪಟ್ಟನೆ?

ಲಂಡನ ಮೇಲೆ ವಿಮಾನದಲ್ಲಿ ಹಾರಾಡುತ್ತಿದ್ದಾಗ ಫೀಲ್ಡ್ ಮಾರ್ಶಲ್ ಗೋರಿಂಗನು ಕೊಲ್ಲಲ್ಪಟ್ಟಿದ್ದಾನೆಯೆಂದು ವಾರ್ತೆ ಇದೆ ಜರ್ಮನಿಯು ಅದು ಸುಳ್ಳು ಸದ್ದಿಯೆಂದು ಪ್ರಕಟಣೆಕೊಟ್ಟಿದೆ

ಜರ್ಮನಿನ ಮೇಲೆಯೂ ದಾಳಿ

ಬ್ರಿಟಿಷ್ ವೈಮಾನಿಕರು ಅತ್ಯಂತ ಸಾಹಸದಿಂದ ಜರ್ಮನಿಯ ಮೇಲೆಯೂ ಧಾಳಿ ನಡೆಸುತ್ತಿದ್ದಾರೆ ಬರ್ಲಿನಿನ ಮೇಲೆ ಅನೇಕ ಸಲ ಬಾಂಬುಗಳೆಸೆಯಲ್ಪಟ್ಟವು ವಿಮಾನ ಸಿಲ್ಪಾಣ ಮತ್ತು ಕಾರ್ಖಾನೆಗಳಿಗೆ ಬಾಂಬೆಸೆದಿರುವರು

ಟ್ರಾನ್ಸ್‌ಲ್ವೇನಿಯದಲ್ಲಿ ಬಂಡಾಯ

ರುಮೇನಿಯ ಹಂಗೇರಿಗಳೊಳಗಿದ್ದ ವಿಚಾರವನ್ನು ಜರ್ಮನ್ ಇಟಲಿಗಳು ರಾಜಿ ಮಾಡಿ ಟ್ರಾನ್ಸ್‌ಲ್ವೇನಿಯವನ್ನು ರುಮೇನಿಯವು ಹಂಗೇರಿಗೆ ಕೊಡಬೇಕಾಗಿ ತೀರ್ಮಾನಿಸಿದರಷ್ಟೆ? ಈ ವಿಷಯದಲ್ಲಿ ಅಲ್ಲಿನ ಮಜೂರ ಮುಖಂಡರಾದ ಎಂ. ಮಾನ್ಯೂ ಎಂಬವರ ಮುಂದಾಳುತನದಲ್ಲಿ ಜನತೆಯು ಆ ತೀರ್ಪಿನ ವಿರುದ್ಧ ಬಂಡಾಯವನ್ನು ಎಬ್ಬಿಸಿರುವುದೆಂದು ತಿಳಿದುಬಂದಿದೆ. ಅವರು ಹಿಟ್ಲರನಿಗೆ ಒಂದು ವಿನಂತಿ ಕಳುಹಿಸಿದ್ದಾರೆ. ಈ ಪಂಚಾತಿಕೆಯಿಂದ ಬಹಳ ಅನ್ಯಾಯವಾಗಿದೆ; ದಯಮಾಡಿ ಇದನ್ನು ರದ್ದು ಮಾಡಿರಿ' ಎಂದು ಅದರಲ್ಲಿ ತಿಳಿಸಿರುವರು.

ಹಂಗೇರಿ ರುಮೇನಿಯಾ ವ್ಯಾಜ್ಯದ ತೀರ್ಮಾನ

ಜರ್ಮನಿಯ ವಾರ್ತೆಯು, ಹಂಗೇರಿ ರುಮೇನಿಯಾಗಳೊಳಗೆ ವಿಯೆನಾದಲ್ಲಿ ವಿವಾದವು ಪರಿಸಮಾಪ್ತಿಯಾಯಿತೆಂದು ತಿಳಿಸುತ್ತದೆ ಜರ್ಮನಿಯ ವಿದೇಶಾಂಗ ಮಂತ್ರಿ ರಿಬನ್ ಟ್ರೂಪ್, ಮತ್ತು ಇಟಲಿಯ ಪ್ರತಿನಿಧಿ ಕೌಂಟ್ ಸಿಯಾನೋ ಇವರು ಪಂಚಾತಿಕೆ ನಡೆಸಿದರು

ಒಪ್ಪಂದವು ನೂರ ನಲ್ವತ್ತೈದು ಸಾಹಸ ಚದುರ ಕಿಲ್ಲೋಮೀಟರುಗಳನ್ನು ಟ್ರಾನ್ಸಿಲ್ವೇನಿಯಾ ಪ್ರಾಂತ್ಯವನ್ನು ಕ್ಲೂಜ್ ಎಂಬ ಪಟ್ಟಣ ಮತ್ತು ಜಿಲ್ಲೆಯೊಡನೆ ಹಂಗೇರಿಗೆ ಕೊಡಬೇಕೆಂದಾಯಿತೆಂದ ತಿಳಿದಿದೆ ಜರ್ಮನ್ ಇಟಲಿಯ ಅಧಿಕಾರಿಗಳ ರುಮೇನಿಯದ ಜನತೆ ಸ್ಥಿರತೆಗಳ ಬಗ್ಗೆ ಭರವಸ ಕೊಟ್ಟಿರುತ್ತಾರಂತೆ

ಬ್ರಿಟನು ಸ್ಪೈನುಗಳ ಸಂಬಂಧ

ಜಿಬ್ರಾಲ್ಟರಿನ ಮೇಲೆ ಆಕ್ರಮಣ ಮಾಡಲು ಯತ್ನಿಸುತ್ತಿರುವ ಜರ್ಮನಿಗೆ ಸ್ಪೈನು ಸಂರಾಗವಾಗಿ ದಾರಿ ಬಿಟ್ಟುಕೊಡುವುದಿಲ್ಲವೆಂದು ತಿಳಿದಿದೆ. ಕಳೆದ ಕೆಲವು ವಾರಗಳಿಂದ ಸ್ಪೈನ ಬ್ರಿಟನುಗಳೊಳಗೆ ಮಾತುಕತೆ ನಡೆಯುತ್ತದೆ ಯುದ್ಧದ ಬಳಿಕ ಸ್ಪೈನಿಗೆ ಜಿಬ್ರಾಲ್ಟರಿನಲ್ಲಿ ಸ್ಥಾನಮಾನ ಆಡಳಿತವನ್ನೊದಗಿಸುವ ಭರವಸೆ ಕೊಡುವ ಸೂಚನೆ ಮಾಡಿದೆಯೆಂದೂ ವಾರ್ತೆ

ಭಾರತ ರಾಜಕೀಯದಲ್ಲಿ ಈ ವಾರ ಹೆಚ್ಚಿನ ಘಟನೆಗಳು ನಡೆದಿಲ್ಲ. ರಾಜಾಜಿಯವರ ಸೂಚನೆಗೆ ಸರಕಾರದ ಉತ್ತರವಿಲ್ಲ, ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿಯು ಸೇರಿ ಪಾಕಿಸ್ಥಾನ ಯೋಜನೆಯನ್ನು ಸಮರ್ಥಿಸಿತು ಸಂಯುಕ್ತ ಪ್ರಾಂತದಲ್ಲಿ



ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳಸಿರಿ ಜೀವಶಕ್ತಿಯೊಂದು ಸಂಜೀವಿನಿ

ಬಳಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ
ನರಗಳಿಗೆ
ಅತ್ಯುತ್ತಮ ಟಾನಿಕ್.

K.A.

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.



ವೈಸರಾಯರ ಹೇಳಿಕೆಗೆ ಕಾಂಗ್ರೆಸಿನ ನಿಷೇಧ

ಸಾರ್ವಜನಿಕ ಖಂಡನಾ ಸಭೆಗಳು

ಸೇವಾದಲಗಳ ಮೇಲೆ ನಿರ್ಬಂಧ!

ಬೋಸರಿಗೆ ಬಿಡುಗಡೆಯಿಲ್ಲ!

ಕಾಂಗ್ರೆಸಿಗೆ ಬ್ರಿಟನು ಶತ್ರುವಲ್ಲ!

ಅನೇಕ ಬಂಧನಗಳು ಆಗಿವೆ ವೈಸರಾಯರ ಹೇಳಿಕೆಯನ್ನು ದೇಶದಲ್ಲಿ ಎಲ್ಲೆಲ್ಲಿಯೂ ಖಂಡಿಸಿ ಸಭೆಗಳು ಜರಗಿದವು.

ಬೋಸರನ್ನು ಬಿಡುಗಡೆ ಮಾಡುವುದಿಲ್ಲ

ಹಾಲ್ವೆಲ್ ಸತ್ಯಾಗ್ರಹದ ಕಾಲ ಬಂಧನಗೊಂಡ ಸುಭಾಸ ಬೋಸರನ್ನು ಬಿಡುಗಡೆ ಮಾಡುವುದಿಲ್ಲವಾಗಿ ತಿಳಿದಿದೆ ಅವರ ಮೇಲೆ ಸತ್ಯಾಗ್ರಹ ಮಾತ್ರವಲ್ಲದೆ ಇನ್ನೆರಡು ರಾಜಕೀಯ ಅಪಾದನೆಗಳೂ ಇವೆಯಂತೆ'

ಮದ್ರಾಸಿನ ಯುದ್ಧ ಸಹಾಯ ಪ್ರಚಾರ

ಗಾಂಧಿಜಿಯವರ ಹೇಳಿಕೆ

ಮದ್ರಾಸಿನಲ್ಲಿ ಯುದ್ಧ ಸಹಾಯ ಕೊಡುವುದರ ಸಲುವಾಗಿ ಪ್ರಚಾರ ಮಾಡುತ್ತ ಇಂದ ಬ್ರಿಟನು ಯುದ್ಧ ಮಾಡುವುದು ಬುದ್ಧನ, ಮಹಾತ್ಮಾ ಗಾಂಧಿಯವರ ಉದಾತ್ತ ತತ್ವಗಳಿಗಾಗಿ ಅಶೋಕನ ಉದಾತ್ತ ನೀತಿಗಾಗಿ ಎಂಬೀ ರೀತಿ ಪ್ರಚಾರ ಮಾಡಲಾಗುತ್ತಿದೆ ಈ ರೀತಿ ಗಾಂಧಿಜಿಯವರಿಗೆ ತಿಳಿಸಲು ಅವರು ತನ್ನ ತತ್ವವೂ ಇಂದಿನ ಬ್ರಿಟಿಷರ ಯುದ್ಧ ತತ್ವವೂ ಒಂದೇ ಆಗಿಲ್ಲವೆಂದೂ, ಬುದ್ಧನು ಇಂದು ಇದ್ದಿದ್ದರೆ ಯುದ್ಧವಾಗಲು ಬಿಡುತ್ತಿದ್ದಿಲ್ಲವೆಂದೂ, ಅಶೋಕನ ನೀತಿಯು ಈ ಯುದ್ಧಕ್ಕೆ ಅನ್ವಯಿಸುವುದು ಸಾಧ್ಯವಿಲ್ಲವೆಂದೂ ಸ್ಪಷ್ಟಪಡಿಸಿ ಸತ್ಯದಸಂಗತಿಗೆ ಇಂತಹ ಪ್ರಚಾರದ ರೂಪಕೊಡುವುದು ಸರಿಯಲ್ಲವೆಂದ ಬರೆದಿರುವರು

'ರಾಜಾಜಿಯರ ಸಲಹೆಯು ಗಮನಾರ್ಹವಾದುದು'

ಪಾರ್ಲಿಮೆಂಟು ಪ್ರಮುಖರ ಅಭಿಪ್ರಾಯ

ಹೌಸ್ ಆಫ್ ಲಾರ್ಡ್ಸ್‌ನಲಿ ವಿರೋಧ ಪಕ್ಷದ ನಾಯಕರಾಗಿರುವ ಲಾರ್ಡ್ ಸ್ಯಾಬೋಲಿಯವರು ಶ್ರೀ ಸಿ ರಾಜಗೋಪಾಲಾಚಾರಿಯವರ ಇತ್ತೀಚಿನ ಸಲಹೆಯ ಬಗ್ಗೆ [ಭಾರತದ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವೇರ್ಪಟ್ಟಿದೆ ಮತ್ತು ರಾಂತಿಯನ್ನು ನೀರ ಕಮಾಡ ಲು ವಸ್ಸ ಲೀಗಿಗೆ ಅಧಿಕಾರವಿರಲಿ ಮತ್ತ ಆ ಮುಖ್ಯ ಮಂತ್ರಿಯ ತಮ್ಮ ಮಂತ್ರಿ ಮಂಡಳವನ್ನೇರ್ಪಡಿಸಿಕೊಳ್ಳಲಿ ಎಂಬುದೇ ರಾಜಾಜಿಯವರ ಸಲಹೆ] 'ಯುನೈಟೆಡ್ ಪ್ರೆಸ್'ಗೆ ಕೊಟ್ಟ ಭೇಟಿಯೊಂದರಲ್ಲಿ ಆ ಸಲಹೆ ತುಂಬಾ ಗಮನಾರ್ಹವಾದ ವಿಚಾರ ಎಂದು ಹೇಳಿದರು.

ಪಾಕಿಸ್ತಾನ್ ಖಂಡನೆ

ಲಾರ್ಡ್ ಸ್ಯಾಬೋಲ್ಡಿಯವರು ಮುಂದರಿಯುತ್ತಾ ಕೆಲವು ಮಂದಿ ಮುಸ್ಲಿಮರು ಪಾಕಿಸ್ತಾನ್ ಯೋಜನೆಯನ್ನು [ಭಾರತವನ್ನು ಎರಡು ಹೋಳನ್ನಾಗಿ ಮಾಡುವ ಯೋಜನೆ] ಮುಂದಿಟ್ಟಿದ್ದಾರೆಂದು ಹೇಳಿ ಅದನ್ನು ತೀವ್ರವಾಗಿ ಖಂಡಿಸುತ್ತಾ, ಅದೊಂದು ಅನಿಷ್ಟಕರ ಯೋಜನೆಯೆಂದೂ ಹೇಳಿದರು.

ಕಾಂಗ್ರೆಸು ಬ್ರಿಟನಿನ ದ್ವೇಷಿಯಲ್ಲ

ರಾಷ್ಟ್ರಪತಿ ಅಜಾದರ ಹೇಳಿಕೆ

ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಜಾದ್‌ರವರು ಪತ್ರಿಕಾ ಪ್ರತಿನಿಧಿಯೊಬ್ಬರಿಗೆ ಕೊಟ್ಟ ಭೇಟಿಯೊಂದರಲ್ಲಿ, ಕಾಂಗ್ರೆಸ್ಸು ಬ್ರಿಟಿಷ್ ಸರಕಾರದ ಶತ್ರುವೆಂದೂ ಮತ್ತ ಬ್ರಿಟಿಸ್ಸಿಗೆ ಸೋಲಾಗಲೆಂದು ಕಾಂಗ್ರೆಸ್ಸು ಹಾರೈಸುತ್ತಿದೆ ಎಂಬುದಾಗಿಯೂ ಕೆಲವು ಕಡೆಗಳಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಅದು ಶುದ್ಧ ಸುಳ್ಳು ನಾವು ಬ್ರಿಟನನ್ನು ಕೇಳುತ್ತಿರುವುದು ಭಾರತದ ಆ ಜನ್ಮಸಿದ್ಧ ಮತ್ತು ನ್ಯಾಯವಾದ ಕೇಳಿಕೆಯೇ ಹೊರತು ಮತ್ತೇನೂ ಅಲ್ಲ ಭಾರತದ ಈ ಕೇಳಿಕೆಯನ್ನು ಈಡೇರಿಸಿಕೊಳ್ಳಲು ಕೈಗೊಳ್ಳುವ ಕಾರ್ಯಕ್ರಮವನ್ನು ಬ್ರಿಟನ್ನಿನ ಸೋಲಿಗಾಗಿ ಎಂದು ಮಾಡುವರೆಂದ ಭಾವಿಸುವುದು ತಪ್ಪು ಕಾಂಗ್ರೆಸು ನಾಜೀ ಪದ್ಧತಿಯ ಅದ್ಯಂತವನ್ನೂ ಪ್ರತಿಭಟಿಸುತ್ತದೆ ಆದರೆ, ಬ್ರಿಟನ್ನು ತಾನ ಪ್ರಜಾಪ್ರಭುತ್ವ ಪದ್ಧತಿಗಾಗಿ ಹೋರಾಡುತ್ತಿರುವುದಾಗಿ ಹೇಳಿಕೊಳ್ಳುವುದರಲ್ಲಿ ಕಾಂಗ್ರೆಸು ನಂಬಿಕೆಯನ್ನು ಕಳೆದುಕೊಂಡಿದೆ' ಎಂದರು.

ಸ್ವಯಂ ಸೇವಕರ ನಿರ್ಬಂಧ

ಕಾನ್‌ಪುರದ ಮ್ಯಾಜಿಸ್ಟ್ರೇಟರು ಅಲ್ಲಿನ ಕಾಂಗ್ರೆಸು ಸ್ವಯಂ ಸೇವಕರು ಡ್ರಿಲ್ ಮಾಡಕೂಡದೆಂದು ಎಚ್ಚರಿಸಿರುವರು. ಆದರೆ ಕಾಂಗ್ರೆಸು ಕಮಿಟಿಯು ಮೊದಲಿನಂತೆಯೇ ಕಾರ್ಯಕ್ರಮ ಮಾಡಲು ನಿಶ್ಚಯಿಸಿದೆ ಈ ಕುರಿತು ಅಲ್ಲಿ ಹಲವರ ಬಂಧನಗಳ ಆಗುತ್ತಿವೆ

ನಿಷೇಧ ದಿನಾಚರಣೆ

[ದಕ್ಷಿಣ ಕನ್ನಡ]

ಮಂಗಳೂರು

ನಿಷೇಧ ದಿನಾಚರಣೆ:—ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಮಂಗಳೂರಿನ ಮೈದಾನಿನಲ್ಲಿ ತಾರೀಕು ೧ನೇ ಸಾಯಂಕಾಲ ೬ಗಂಟೆಗೆ ಭಾರತದ ರಾಜಕೀಯದ ಕುರಿತು ವೈಸರಾಯರು ಕೊಟ್ಟ ಹೇಳಿಕೆಯ ವಿಷಯ ನಿಷೇಧ ದಿನಾಚರಣೆಯು ಮಂಗಳೂರ ನಗರಸಭೆ ಚೇರ್ಮನರಾದ ಶ್ರೀ ವೆಂಕಟ್ರಾಯ ಬಾಳಿಗ ಎಂ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಚಂಡ ಜನ ಸಂದಣಿಯು ಕೂಡಿತ್ತು

ಆ ಸಭೆಯಲ್ಲಿ ಈ ಕೆಳಗಿನ ಎರಡು ಠರಾವುಗಳು ಸರ್ವಾನುಮತದಿಂದ ಪಾಸಾದವು.

"ವ್ಯಾಸರಾಯರು ಕಳೆದ ತಿಂಗಳು ತಾರೀಕು ೮ರಲ್ಲು ಹಿಂದೂಸ್ಥಾನದ ವಿಷಯ ಬ್ರಿಟಿಷ್ ಸರಕಾರದ ಧೋರಣೆಯನ್ನು ಸ್ಪಷ್ಟಪಡಿಸಿ ಪ್ರಕಟಿಸಿದ ಹೇಳಿಕೆ, ವ ಅದರ ಕುರಿತು ಬ್ರಿಟಿಷ್ ಭಾರತ ಮಂತ್ರಿಯವರು ಬ್ರಿಟಿಷ್ ಪಾರ್ಲಿಮೆಂಟನಲ್ಲಿ ಮಾಡಿದ ಭಾಷಣವನ್ನು ವಿಮರ್ಶಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿರುವ ಠರಾವುಗಳನ್ನು ಈ ಸಭೆಯು ಮಂಜೂರು ಮಾಡುತ್ತದೆ ಮತ್ತು ಪೂರ್ಣ ಬೆಂಬಲವಿದೆ ಎಂತ ಈ ಮೂಲಕ ಸೂಚಿಸುತ್ತದೆ ಇದೇ ತಿಂಗಳು ತಾ ೧೫ರಲ್ಲಿ ಬೊಂಬಾಯಿಯಲ್ಲಿ ಕೂಡುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಹಿಂದೂಸ್ತಾನದ ಜನಾಂಗದ ಗೌರವ ಅಭಿವೃದ್ಧಿಯನ್ನು ಕಾಪಾಡುವಗೋಸ್ಕರ ಅವಶ್ಯವಿರುವ ಕೆಲಸಗಳನ್ನು ಕೈಗೊಳ್ಳಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ ವೈಸರಾಯರ ಮತ್ತು ಬ್ರಿಟಿಷ್ ಭಾರತ ಮಂತ್ರಿಗಳ ಹೇಳಿಕೆಗಳನ್ನು ಖಂಡಿಸಿ ಈ ಕೆಳಗಿನ ಮಹನೀಯರು ಮಾತನಾಡಿದರು ಶ್ರೀ ಕೆ ರಾಮಕೃಷ್ಣ ಕಾರಂತರು (ಎಂ ಎಲ್.ಎ) ಎ ಬಿ ಸೆಟ್ಟರು, (ಎಂ. ಎಲ್.ಎ) ಡಾಕ್ಟರ ವಿಠ್ಠಲ ಸೆಟ್ಟರು, (ಡಿ. ಬೋ. ಪ್ರೆಸಿಡೆಂಟರು.) ಶ್ರೀ. ಕೆ. ಈಶ್ವರ, (ಎಂ ಎಲ್. ಎ.) ಬಿ ಸುಬ್ಬಣ್ಣ ಸೆಟ್ಟರು, (ಡಿ ಬೋ. ಮೆಂಬರ್). ಡಾಕ್ಟರ್ ಯು ಪಿ. ಮಲ್ಯರು (ಮುನ್ಸಿಪಲ್ ಕಾಂಗ್ರೆಸ್ ಪಾರ್ಟಿ ಸೆಕ್ರೆಟರಿ) ಮತ್ತು ಶ್ರೀ. ವೆಂಕಟ್ರಾಯ ಬಾಳಿಗರು (ಎಂ. ಎಲ್. ಎ.)

ಪಾಣೆಮಂಗಳೂರು ನಿಷೇಧ ದಿನಾಚರಣೆ—ತಾರೀಕು ೧-೯-೪೦ರಲ್ಲಿ ಪಾಣೆಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ವೈಸರಾಯರ ಹೇಳಿಕೆ ನಿಷೇಧ ದಿನ ಚರಣೆಯ ಸಭೆ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಿ ಮಾಧವ ಪಡಿಯಾರ್ ರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ

ನಿಷೇಧ ದಿನಾಚರಣೆ-ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರ ಗೊತ್ತುಮಾಡಿದ ಮೇರೆಗೆ, ಭಾರತ ಸ್ವಾತಂತ್ರ್ಯದ ಕುರಿತು ವ್ಯಾಸರಾಯರು ಮಾಡಿದ ಪ್ರಕಟನೆಯನ್ನು ನಿಷೇಧಿಸುವದಕ್ಕೋಸ್ಕರ ತಾ ೧-೯-೧೯೪೦ ದಿನ ಸಾಯಂಕಾಲ ಸ್ವರಾಜ್ಯ ಮೈದಾನಿನಲ್ಲಿ ಶ್ರೀ ದಾಮೋದರ ಬಂಗೇರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೂಡಿತ ಶ್ರೀ ಕೆ ಪಿ ರಾಮಪೊದುವಾಳರವರು ಒಂದು ಚಿಕ್ಕ ಭಾಷಣವನ್ನು ಕೊಟ್ಟು ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು ಅನಂತರ ವ್ಯಾಸರಾಯರ ಪ್ರಕಟನೆಯನ್ನು ನಿಷೇಧಿಸಿ ಒಂದು ನಿರ್ಣಯವು ಮಂಜೂರಾಯಿತು. ಯುದ್ಧ ನಿಧಿಯ ಬಗ್ಗೆ ಆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಠರಾವು ಕೂಡ ಈ ಸಭೆಯಲ್ಲಿ ಸಾರ್ವಜನಿಕರ ಅವಗಾಹನೆಗೆ ತರಲ್ಪಟ್ಟು ಜನರು ಈ ನಿಧಿ ಸಂಗ್ರಹ ಸಂಬಂಧ ಯಾವ ತರಹದ ಜುಲುಮೆ ಒತ್ತಾಯಗಳಿಗೂ, ಒಳಪಡಬಾರದೆಂದು ಸ್ಪಷ್ಟಮಾಡಲಾಯಿತು.

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ

R I A 337/1940

(O S 106/193-)

ಅರ್ಜಿದಾರ ಕುದ್ಯಾಂತಿ ನಾರಾಯಣ ಪೈ

ಎದುರು. 1 ಅಬ್ದುಲ್ ರ್‍ಯಾಮನ್ ಬ್ಯಾರಿ

2 ಕುಂಞಾಮದೆ ಬ್ಯಾರಿ

3 ಕುಂಞಾಚಮ್ಮ

4 ಆಸೀಯಮ್ಮ

5 ಅಬ್ದುಲ್ ರೈಮಾನ್ ಬ್ಯಾರಿ

ದಕೀರ ಬ್ಯಾರಿ

1ರಿಂದ 4ನೇ ಎದುರು ಹಂಮದ ಕುಂಞಾ ಬ್ಯಾರಿಯ ಮಕ್ಕಳು 5ನೇ ಎದು ದಸ್ತಾರಿ ಪೋಕ್ ಬ್ಯಾರಿಯ ಮಗ ಮೂರೂಜ ಗ್ರಾಮ ಕಾಸರಗೋಡು ತಾಲೂಕು

1ರಿಂದ 5 ರ 6ನೇ ಎದುರಿಗೆ ಕೂಡಾ ಈ ನೋಟೀಸು ಮೂಲಕ ತಿಳಿಸುವದೇನಂದರೆ —

ಮೇಲ್ಕಂಡ ವ್ಯಾಜ್ಯದ ಅರ್ಜಿದಾರನ ಸ್ವಾಂಹಾಜ್ರ ಸಂಬಂಧ ಡಿಸ್‌ಮಿಸ್ ಆದ್ದನ್ನು ರಿಸ್ಟೋರ್ ಮಾಡಿ ಪುನಃ ಫೈಲಿಗೆ ತೆಗೆಯಬೇಕಾಗಿ ಅರ್ಜಿದಾರನು ಅರಕೊಂಡ R. I. A 337/1940ನೆ ಅರ್ಜಿಯು ತನಿಖೆ ಬಗ್ಗೆ ತಾ 18-9 1940ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವಂತ ಹಾಜರಾಗಿ ವ್ಯವಹರಿಸಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಗೈರ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾಗುವದೆಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಡಲ್ಪಟ್ಟದ್ದಾಗಿರುತ್ತದೆ.

Puttur, S. K. 31-8-1940. } B. ACHYUTA BALIGA Pleader for Petitioner

ಹೈದರಾಲಿಯು ಧರ್ಮಾತ್ಮನಾಗಿದ್ದನು!

ಚರಿತ್ರೆಯಲ್ಲಿ ಸತ್ಯಾಂಶವು ಮರೆಯಾಗಿದೆ!

— ಒಂದು ಸಂಶೋಧನಾ ಲೇಖ —

ಭಾರತದ ಇತಿಹಾಸದಲ್ಲಿ ಮೈಸೂರಿನ ಗಂಡುಗಲಿಗಳೆನಿಸಿದ ಹೈದರಾಲಿ ಟಿಪ್ಪು ಸುಲ್ತಾನರ ವಿಷಯಗಳು ಒಳ್ಳೆಯ ರೀತಿಯಲ್ಲಿ ಉಲ್ಲೇಖಿತವಾಗಿಲ್ಲ. ಬ್ರಿಟಿಷ್ ಇತಿಹಾಸಕಾರರು ಹೈದರಾಲಿಯನ್ನು ಒಬ್ಬ ದಂಗೆಗಾರರನೆಂಬಂತೆ ಚಿತ್ರಿಸಿ ಆತನ ಉಜ್ವಲವಾದ ಜೀವನ ಚಿತ್ರಕ್ಕೆ ಕಳಂಕದ ಮಸಿ ಹಚ್ಚಿದ್ದಾರೆ. ಹಿಂದೂ ಮುಸ್ಲಿಮರೊಳಗೆ ನಿರಂತರ ದ್ವೇಷ ಬೆಳೆಯಲೆಂದು ಹೀಗೆ ಎರಡು ಪಂಗಡದವರಿಗೆ ದ್ವೇಷವನ್ನು ಹೆಚ್ಚಿಸುವಂತೆ ಇತಿಹಾಸವನ್ನು ಬರೆಯುವುದೂ, ಆ ಇಬ್ಬರ ದ್ವೇಷ ಕಲಹಗಳಿಂದ ಆದಾಯ ಪಡೆಯುವುದೂ ಕೆಲವರ ತಂತ್ರವೇ ಆಗಿದೆ. ಅದೇ ಇತಿಹಾಸವನ್ನು ಸತ್ಯಸಂಗತಿಯೆಂದು ನಂಬಿ ನಮ್ಮ ಬಾಲಕರು ಓದುತ್ತಾರೆ; ಉಪಾಧ್ಯಾಯರು ಕಲಿಸುತ್ತಿದ್ದಾರೆ. ಆದರೆ ಹೈದರಾಲಿಯು ಎಷ್ಟರ ಮಟ್ಟಿಗೆ ಯೋಗ್ಯನಾಗಿದ್ದನೆಂಬ ವಿಚಾರವಾಗಿ 'ರಿವ್ಯೂ ಓಫ್ ದಿ ಮಿತಿಕ್ ಸೊಸೈಟಿ ಓಫ್ ಇಂಡಿಯಾ' ಪತ್ರಿಕೆಯಲ್ಲಿ ಲೇಖನವೊಂದು ಬಂದಿದೆ.

ಹೈದರಾಲಿಯು ಪ್ರಜೆಗಳಿಗೆ ತಂದೆಯಂತಿದ್ದನು, ಬಡವರ ದಾತಾರನಾಗಿದ್ದನು, ಅನಾಥರಕ್ಷಕನಾಗಿದ್ದನು ಎಂಬಂಶವನ್ನು ಆ ಲೇಖನವು ಆಧಾರ ಸಹಿತ ಸ್ಪಷ್ಟ ಮಾಡುತ್ತದೆ. ಅದ್ದರ ಕೆಲವಂಶವು ಇಂತಿದೆ:—

ನ್ಯಾಯ ಸಿಂಹ

ತನ್ನ ಪ್ರಜೆಗಳೊಡನೆ, ಮತ್ತು ಅಧಿಕಾರಿಗಳೊಡನೆ ನಡೆದುಕೊಳ್ಳುವಲ್ಲಿ ಹೈದರನು ನ್ಯಾಯ ಸಿಂಹನೇ ಆಗಿದ್ದನು. ತನ್ನ ಇಪ್ಪತ್ತೊಂದು ವರ್ಷದ ಆಳ್ವಿಕೆಯಲ್ಲಿ ಆತನು ತನ್ನೀ ಉದಾತ್ತತತ್ವಕ್ಕೆ ಭಂಗ ತಂದುದಿಲ್ಲ. ಧೀನರಿಗೆ ಆದ ಅನ್ಯಾಯವನ್ನು ಯಾವಾಗಲೂ, ಸರಿಯಾಗಿ ವಿಚಾರಣೆ ಮಾಡಿ ಸತ್ಯವನ್ನು ಕಂಡುಹಿಡಿಯುತ್ತಿದ್ದನು. ಅನ್ಯಾಯ ಮಾಡಿದವರು ತನಗೆ ಎಷ್ಟೇ ಆಪ್ತರಾಗಿರಲಿ ಅವರನ್ನು ಆತನು ಕ್ಷಮೆ ಮಾಡಿದ್ದಿಲ್ಲ.

ಒಮ್ಮೆ ಹೈದರಾಲಿಯು ಕೊಯಂಬುತ್ತೂರಿಗೆ ಯಾತ್ರೆಗಾಗಿ ಹೊರಟಿದ್ದ. ಒಬ್ಬ ಒಡ್ಡ ಹೆಂಗಸು ಆತನ ಗಾಡಿಯ ಮುಂದೆ ದಂಡವತ್ ಪ್ರಣಾಮ ಮಾಡಿ "ದೊರೆಯೇ! ನ್ಯಾಯದಾನ ಮಾಡು" ಎಂದು ಅಂಗಲಾಚಿ ಬೇಡಿದಳು. ಅವಳಿಗೆ ಆತನು ನ್ಯಾಯದಾನ ಮಾಡಿದ.

"ತನ್ನೊಬ್ಬಳೇ ಒಬ್ಬಳು ಮಗಳನ್ನು ಆಗೀ ಮಹಮ್ಮದನು ಬಾರಿಸಿಬಿಟ್ಟಿದ್ದಾನೆ" ಆಕೆ ಕಂಬನಿಗರೆದು ಹೇಳಿದಳು. "ಆಗಿ ಮಹಮ್ಮದನು ಇಲ್ಲಿಂದ ಹೋಗಿ ತಿಂಗಳೊಂದು ದಾಟಿತು. ನೀನು ಇದುವರೆಗೆ ನನಗಿದನ್ನು ಏಕೆ ತಿಳಿಸಲಿಲ್ಲವಮ್ಮಾ?" ಹೈದರಾಲಿ ಕರುಣೆಯಿಂದ ಕೇಳಿದ. "ದೊರೆಯೇ, ಹೈದರ ಶಹನಿಗೆ ದೂರು ಕೊಟ್ಟೆ, ಆದರೆ ಪ್ರಯೋಜನವಾಗಲಿಲ್ಲ" ಆಕೆ ಬಿನ್ನವಿಸಿದಳು. ಹೈದರ್ ಶಹ ಮೈಸೂರರ ಮನೆಯ ಬಾಗಿಲು ಕಾವಲುಗಾರ. ಕಾವಲುಗಾರನ ನ್ಯಾಯ ವಿಚಾರಣೆಯು ಕೂಡಲೇ ನಡೆಯಿತು! ಎಲ್ಲರಿಗೂ ಆಶ್ಚರ್ಯ! ಹೈದರ್ ಶಹ ಹೈದರಾಲಿಯ ಅಚ್ಚುಮೆಚ್ಚಿನವ! ಸ್ವತಃ ಟಿಪ್ಪುವೇ ಆತನನ್ನು ಕ್ಷಮಿಸಬೇಕೆಂದು ತಂದೆಯೊಡನೆ ದೂರಿಟ್ಟನು! ಆದರೆ ಅಪರಾಧಿಗೆ ಮರಣ ದಂಡನೆಯಾಯಿತು! ಮಗಳನ್ನು ಆ ಮುದುಕಿಯ ವಶ ಒಪ್ಪಿಸಲಾಯಿತು. ಆಗಿ ಮಹಮ್ಮದನಿಗೆ ಮರಣ ದಂಡನೆಯಾಯಿತು! ಹೈದರ್ ಎಂತಹ ನ್ಯಾಯಾತ್ಮನಿದ್ದ. ಬಡವೆಯ ಕರುಳಿನ ಕೂಗು ಹೈದರಾಲಿಯನ್ನು ಮುಟ್ಟಿತು! ತನ್ನ ವಿಶ್ವಾಸದ ಸೇವಕನನ್ನು ಶಿಕ್ಷೆಗೆ ಗುರಿಪಡಿಸಲು ಆತನು ಹಿಂಜರಿಯಲಿಲ್ಲ!

ಆಂಗ್ಲೇಯರ ಪ್ರಶಂಸೆ!

ಒಮ್ಮೆ ಹಲವು ಆಂಗ್ಲೇಯರನ್ನು ಹೈದರನು ಸೆರೆ ಹಿಡಿದಿದ್ದನು. ಅವರಲ್ಲಿ ಜಾನ್ ಲಿಂಡ್ಸೆಯೆಂಬವನೊಬ್ಬ. ಆತನೇ ಹೈದರಾಲಿಯ ಗುಣವನ್ನು ಬಾಯಿತುಂಬಾ ಪ್ರಶಂಸಿಸಿರುವನು. ಬಂಧಿಯಾಗಿ ಬಂದ ಆಂಗ್ಲೇಯರನ್ನು ಹೈದರಾಲಿಯು ಒಮ್ಮೆಯೂ ತಿರಸ್ಕಾರವಾಗಿ ಅಗೌರವವಾಗಿ ಕಾಣಲಿಲ್ಲವೆಂದು ಆತನು ಬರೆದಿರುತ್ತಾನೆ. ಗಾಯಗೊಂಡ ಬಂಧಿಗಳಿಗೆ ಆತನು ಡಾಕ್ಟರರನ್ನು ಕರೆಸಿ ಉಪಚಾರಗಳನ್ನು ಮಾಡಿಸಿದ್ದನಂತೆ! ಅವರ ಖರ್ಚಿಗಾಗಿ ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿದ್ದನಂತೆ! ಅವರು ಸೆರೆಮನೆಯಲ್ಲಿಯೂ ಮನೆಯಂತೆಯೇ ತಿಂದು ಕುಡಿದು ನಿದ್ರಿಸಿ ಸುಖವಾಗಿದ್ದರಂತೆ! ಇಂತಹ ಉದಾರತೆಯು ಈಗೆಲ್ಲ ಯಾರಲ್ಲಿ ಉಂಟು? ಹೀಗಿದ್ದರೂ ಹೈದರಾಲಿಯನ್ನು ದುಷ್ಟನೆಂದು ದಂಗೆಕೋರನೆಂದು ಚಿತ್ರಿಸುವುದು ಇತಿಹಾಸಕಾರರಿಗೆ ಒಪ್ಪಿದ್ದೆ? ಇದಕ್ಕಿಂತ ದೊಡ್ಡ ಮಹಾದ್ರೋಹವೇನಿದೆ?

ಹೈದರಾಲಿಯ ಮಗ ಟಿಪ್ಪುವಿನ ವಿಷಯದಲ್ಲಿಯೂ ಚರಿತ್ರೆಕಾರರು ಸತ್ಯಾಂಶವನ್ನು ಮರೆಮಾಡಿ ದುರ್ಗುಣಗಳಿಗೆ ಭೂತ ಕನ್ನಡಿ ಹಿಡಿದು ತೋರಿಸಿದ್ದಾರೆ!

ಆಕಸ್ಮಿಕ ಶೀತದಿಂದ ನಿಮೋನಿಯಾ ಆಗುತ್ತದೆ

ಆಕಸ್ಮಿಕ ಶೀತ ಮತ್ತು ಹವೆಯ ಬದಲಾವಣೆಗಳಿಂದ ನಿಮೋನಿಯಾ ಜ್ವರ, ನೆಗಡಿ ಮೊದಲಾದವು ಆಗುತ್ತವೆ. ಆದುದರಿಂದ ನೀವು ಸ್ವಲ್ಪ ಜ್ವರ ಇಲ್ಲವೇ ನೆಗಡಿ ಪ್ರಾರಂಭವಾದ ಕೂಡಲೇ ವಿಷಹಾರಕವಾದ ಪೆಪ್ಸ್ ಮಾತ್ರೆಗಳನ್ನು ಉಪಯೋಗಿಸಿರಿ.

ಇದು ಬಾಯಿಗೆ ಹಾಕಿದ ಕೂಡಲೇ ಅದು ಬಾಯಿಯಲ್ಲಿ ಕರಗಿ ನಿಮ್ಮ ಶ್ವಾಸದೊಡನೆ ಸೇರಿ ಶ್ವಾಸಕೋಶಗಳನ್ನು ಸೇರುತ್ತವೆ. ಪೆಪ್ಸ್ ಮಾತ್ರೆಗಳನ್ನು ಉಪಯೋಗಿಸುವುದರಿಂದ ಹೀಗೆ ಶ್ವಾಸಕೋಶದ ಹಿಮ ಬಾಧೆಯು ಹೋಗಿ ಮೈಯ ಶೀತೋಷ್ಣವು ಸಮತೂಕವಾಗುವುದು. ಅವುಗಳು ರೋಗಾಣುಗಳನ್ನು ನಾಶಮಾಡುತ್ತವೆ, ಕಂಠವನ್ನು ಸ್ವಚ್ಛಮಾಡುತ್ತವೆ, ವಾಯುನಾಳವನ್ನು ಸರಿಯಾಗಿಡುತ್ತದೆ, ನಿಮ್ಮ ಎದೆಯನ್ನು ಬಲಪಡಿಸುತ್ತದೆ.
ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ್ ರೂ 1ಕ್ಕೆ ಸಿಗುತ್ತವೆ

ಏಜಂಟರು
ಮೆಸರ್ಸ್ ದಂಧಾ ವತ್ತು ಕಂಪನಿ ಲಿಮಿಟೆಡ್ ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಕ ಮಾತ್ರೆಗಳು



ಸಿನೆಮಾ ಪುಟ

...ಂತಾ ಆಪ್ಟೆ ಶಕುಂತಲಾ ಪಾತ್ರದಲ್ಲಿ

ಪ್ರಸಿದ್ಧ ನಿರ್ದೇಶಕರಾದ ದೇವಿಕಾ ...ಕೀಸರ ಸಹಕಾರವನ್ನು ಹೊಂದಿ ಈಗ ...ಕೋರ್ ಚಲಚ್ಚಿತ್ರ ಕಂಪನಿಯವರು ...ಂತಾ ಆಪ್ಟೆಯ ಪಾತ್ರದ ವಿಷಯದಲ್ಲಿ ...ಂದೆ ಮಾಡಿದ ಹಂಚಿಕೆಯನ್ನು ಬದ...ಯಿಸಿರುವರೆಂದು ತಿಳಿದಿದೆ.

ಹಿಂದೆ ಅವರು ಭೈರವಿ ಎಂಬ ಹೆಸರಿನ ...ಂದು ಚಿತ್ರವನ್ನು ತಯಾರಿಸಬೇಕೆಂದು ...ಲೋಚಿಸಿದ್ದರು. ಆದರೆ ಈಗ ಅವರು ...ಸಿದ್ಧ ಪೌರಾಣಿಕ ಕಥೆಯಾದ ಶಾಕುಂ...ಲವನ್ನು ತಯಾರಿಸುವರೆಂದೂ ಅದರಲ್ಲಿ ...ಕೆಗೆ ಶಕುಂತಳಾ ಪಾತ್ರವು ಕೊಡಲಾ...ವುದೆಂದೂ ಬೊಂಬಾಯಿಯ ಸುದ್ದಿಗಾರ ...ಬ್ಬನು ಬರೆಯುತ್ತಾನೆ. ಈ ಚಿತ್ರವು ...ರಾಠಿ ಹಿಂದೀ ಎರಡು ಭಾಷೆಗಳಲ್ಲಿ ...ಯಾರಾಗುವುದಂತೆ. ದುಷ್ಯಂತನ ...ತ್ರವನ್ನು ಚಂದ್ರಮೋಹನನು ವಹಿಸು...ರೆಂದು ತಿಳಿದಿದೆ.

ಇಷ್ಟರಲ್ಲಿ ಕೆಲವರು ಆಕೆಯು ಹಿಂದೀ ...ತ್ರದಲ್ಲಿ ಭಾಗವಹಿಸುವುದಿದ್ದರೆ ...ಲ್ ಟಾಕಿ ಡಿಸ್ಟ್ರಿಬ್ಯೂಟರರ ತಯಾ...ಯ ತಮಿಳು ಚಿತ್ರದಲ್ಲಿ ಭಾಗವಹಿ...ವ ವಿಷಯವೇನಾಯಿತು ಎಂದು ...ತೂಹಲದಿಂದ ಶಂಕಿಸುತ್ತಿದ್ದಾರೆ.

...ಗಲ್ ಕಾಲೇಜಿನಲ್ಲಿ ಹಾಡಿದ್ದ!

...ಜಿಂದಗಿಯಲ್ಲಿ ಸೈಗಲ್ ಹಾಡಿದ ...ಸೋಜಾ ರಾಜಕುಮಾರೀ' ಹಾಡಿನ ...ರಿತು ...ಮಿರರ್ ಪತ್ರಿಕೆಯಲ್ಲಿ ಬಹಳ ...ಮೋದಕರವಾದ ಒಂದು ಸುದ್ದಿ ...ಂದಿದೆ.

ಈ ಹಾಡನ್ನು ಸೈಗಲ್ ಪ್ರಥಮತಃ ...ಾಡಿದ್ದು ಕಾಲೇಜಿನಲ್ಲಿರುವಾಗ ...ಂಬಯಿ ಕಾಲೇಜೊಂದರಲ್ಲಿ ಸೈಗಲ್ ...ಲಿಯುತ್ತಿದ್ದ ಅಲ್ಲಿನ ಪ್ರೊಫೆಸರರೊ...ರು 'ಸೊ' ಎಂಬುದನ್ನು ಬಹಳ ಹೆಚ್ಚಾಗಿ ...ವಾಕ್ಯದಲ್ಲಿ ಉಪಯೋಗಿಸುತ್ತಿದ್ದರು ...ಗಲ್ 'ಸೊ'ವಿನಿಂದ ಒಂದು ವಾಕ್ಯ ...ರಂಭಿಸಿದ ಮತ್ತೆ ಅದನ್ನು ಹೊಡೆದ ...ಬ್ಬ ಸಹಪಾಠಿಯು ಆ ವಾಕ್ಯವನ್ನು 'ಸೋ...ಾ ರಾಜಕುಮಾರಿ' ಎಂದು ಹಾಡಿನ ...ಪದಲ್ಲಿ ಬರೆದು ಮುಗಿಸಿದ. ಸರಿ, ...ಳಕ್ಕೆ ಪ್ರಾರಂಭವಾಯಿತು. ಕ್ಲಾಸಿನ ...ಲ್ಲರೂ "ಸೋಜಾ ರಾಜಕುಮಾರೀ" ...ಾಡಲಾರಂಭಿಸಿದರು. ಪ್ರೊಫೆಸರರಿ...ೂ ಹಾಡನ್ನು ಕೇಳಿ ನಗು ತಡೆಯು...ದು ಆಗಲಿಲ್ಲವಂತೆ!

...ರುಣಫೇಮಸ್ ಸ್ಟುಡಿಯೋ

ಪೂನಾದಲ್ಲಿ ಶ್ರೀ ಶಿರಾಜ್ ಅವರು ...ರುಣಫೇಮಸ್ ಸ್ಟುಡಿಯೋ ಒಂದನ್ನು ...ಾರಂಭಿಸಿದ್ದಾರೆ. ಇದರ ಪ್ರಾರಂಭೋ...ವವು ಪ್ರಭಾತದ ಪ್ರಸಿದ್ಧ ನಿರ್ದೇಶಕ...ಾದ ಶಾಂತಾರಾಮರಿಂದ ನೆರವೇರಿಸ...ಟ್ಟಿತು.

ನಟಿ ನಟಿಯರೊಳಗೆ ಮತ್ಸರ

ನಿರ್ದೇಶಕರ ಮೇಲೆ ಕಣ್ಣು

ಲೋಕದಲ್ಲಿ ತನ್ನ ಗಂಡನನ್ನು ಇನ್ನೊಬ್ಬ ಹೆಂಗುಸು ಪ್ರೀತಿಸುತ್ತಾಳೆಂದು ತಿಳಿದರೆ, ಆತನ ಹೆಂಡತಿಗೆ ಆಕೆಯಲ್ಲಿ ಮತ್ಸರ ಹುಟ್ಟುವುದು ಉಂಟು, ಆದರೆ ಸಿನೆಮಾ ನಿರ್ದೇಶಕರೊಬ್ಬರನ್ನು ಮತ್ತೊಬ್ಬ ನಟಿಯು ಪ್ರೀತಿಸಿದಳೆಂದು ಹೊಸಬಳ ಮೇಲೆ ಹಳೆ ನಟಿಯು ಮತ್ಸರಪಡುವುದೂ ಇದೆಯೆ?

ಇಂತಹ ಸುದ್ದಿಯೊಂದು ಕಲ್ಕತ್ತದಿಂದ ಬಂದಿದೆ. ಇದು ಸ್ಟುಡಿಯೋದೊಳಗಿನ ಗುಟ್ಟು. ಒಬ್ಬ ನಿರ್ದೇಶಕರ ಮೇಲೆ ಒಂದು ನಟಿಗೆ ಪ್ರೇಮ ಬಿತ್ತು. ಆಕೆ ಅವರನ್ನು ನೆರಳಿನಂತೆ ಬೆನ್ನು ಹಿಡಿದಿದ್ದಳು. ಆದರೆ ಅವರನ್ನು ಇನ್ನೊಬ್ಬ ನಟಿಯೂ ತನ್ನಂತೆ ಪ್ರೇಮಿಸುತ್ತಿರುವಳೆಂದು ತಿಳಿದು ಮೊದಲಿನವಳು ಬಹಳ ಮತ್ಸರಗೊಂಡಳು. ಆಕೆಯನ್ನು ದೇವಸ್ಥಾನಕ್ಕೆ ಹೋಗುವ ಎಂದು ಕರೆದುಕೊಂಡು ಹೋಗಿ ಅಲ್ಲಿ ಅವಳನ್ನು ಗಂಗಾನದಿಗ ದೂಡಿಹಾಕಿದಳು. ಇದ ಹೀಗೆ ನಡೆಯುತ್ತಿರ ಲಾಗ, ಅತ್ತ ಆ ನಿರ್ದೇಶಕರ ಮೂರನೆಯ ನಟಿಯೊಬ್ಬಳೊಡನೆ ವಿಹಾರಕ್ಕೆ ಹೊರಟು ಹೋಗಿದ್ದರಂತೆ.

ಇದು ಸ್ಟುಡಿಯೋದೊಳಗಿನ ಸದ್ದಿ, ವ್ಯಕ್ತಿಗಳು ಯಾರೆಂದು ತಿಳಿಸಲಿಲ್ಲ ಸುದ್ದಿಗಾರರು. ಒಟ್ಟಿನ ಮರ್ಯಾದೆ ತೆಗೆಯಬಹುದೆ?

ಸಾವಿರ ಮುಖದ ಮನುಷ್ಯ

ಸಿನೆಮಾ ರಂಗದಲ್ಲಿ

ಸಾವಿರ ಮುಖದ ಮನುಷ್ಯ ಎಂದರೆ ಯಾರಾದರೂ ಆಶ್ಚರ್ಯಪಡಬಹುದಲ್ಲವೆ? ರಾವಣನಿಗೂ ಇದ್ದದು ಹತ್ತು ಮಾತ್ರ. ಸಾವಿರ ಮುಖವೆಂದರೆ ಎನ್ನಬಹುದು. ಸಹಜವಾಗಿ ಹುಟ್ಟಬಹುದಾದ ಸಂದೇಹ. ಆದರೆ ತಮ್ಮ ಅಭಿನಯ ಸಾಮರ್ಥ್ಯದಿಂದ ಸಾವಿರಾರು ಜನರ ರೂಪವನ್ನು ಮಾಡಿ ತೋರಿಸಿದ ಕುಶಲ ಕಲೆಗಾರರಾದ ರಾಮಕುಮಾರರನ್ನು ತಿಳಿದವರಿಗೆ ಈ ಸಂಶಯವು ಪರಿಹಾರವಾದೀತು. ಇವರು ಯಾರಾದರೊಬ್ಬನ ವೇಷದಲ್ಲಿ ಬಂದರೆ ನಿಜವಾದ ಮನುಷ್ಯ ಯಾರು, ವೇಷ ಯಾರೆಂದು ಗುರುತು ಹಚ್ಚಲು ಸಾಧ್ಯವಿಲ್ಲದಷ್ಟು ನೈಸರ್ಗಿಕತೆಯನ್ನು ಮುಖದಲ್ಲಿ ತರುತ್ತಾರೆ. ಅದೇ ಅವರಿಗೆ ಸಾವಿರ ಮುಖದ ರಾಮಕುಮಾರರೆಂಬ ಹೆಸರು.

ಇವರು ಲೇಖಕರು, ನಿರ್ದೇಶಕರು, ನಿರ್ಮಾಪಕರು, ಅಭಿನಯಕಾರರಾಗಿ 'ಬಾಲ್ಯವಿವಾಹ'ವೆಂಬ ಹೊಸ ಸಾಮಾಜಿಕ ತಮಿಳು ಚಿತ್ರವೊಂದನ್ನು ತಯಾರಿಸಿದ್ದಾರೆ. ಅದು ಅತ್ಯಂತ ಯಶಸ್ವಿಯಾಗಿದೆ.

ನಾರ್ಸಿ ಭಾಗತ್

ಪ್ರಕಾಶ ಚಿತ್ರಪಟದವರ ಪ್ರಸಿದ್ಧ ಭಕ್ತಿಪ್ರಧಾನ ಚಿತ್ರವಾದ ನರ್ಸೀ ಭಾಗತ್ ಚಿತ್ರವು ಪೂರ್ಣವಾಗುತ್ತಾ ಬಂತು. ಇದರ ನಿರ್ದೇಶಕರು ವಿಜಯ ಭಟ್.

ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚತ್ತು ಅಳುತ್ತಿವೆಯೇ?

ಮಗುವನ್ನು ಮಿಾಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum P wder) ಹಚ್ಚಿರಿ. ಆಗ ಮಗುವಿಗೆ ರಾತ್ರಿ ಎಚ್ಚರವಾಗದು — ಅಂದರೆ ನಿಮಗೆ ಕೂಡಾ ತೊಂದರೆಯಾಗದೆ ನಿದ್ರೆ ಬೀಳುವುದು. ಕುಟಿಕೂರಾ ಟಾಲ್ಕಮಿನ ಗುಣವು ಎಷ್ಟು ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆ ಯು ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾಳಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನು Cuticura Talcum ಶಿಫಾರಸು ಮಾಡುತ್ತಾರೆ. ... ಮತ್ತು ... ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿ. ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನು ಮತ್ತು ... ಬೇಗನೆ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಜೀವವಿಮೆಯೇ ...ವಾದ ... ಗಳಲ್ಲಿ ಹಣ ಪಾವತಿ ಮಾಡಿ ... ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ... ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯ ... ಹಣ ಕೇಳಿಸಲು ಸಾಧ್ಯ ...

ಪ್ರತಿ ವರ್ಷವೂ ... ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲಿಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್'ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗೌ॥ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್

ಸೌತ್ ಪೆರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ಕಾಂಗ್ರೆಸಿನ ಭಿನ್ನ ಪಕ್ಷಗಳ ಏಕ ಸೂತ್ರಧಾರರು!

ಪಂಡಿತ ನೆಹರುಗಳ ವ್ಯಕ್ತಿತ್ವ

ನೇಶನಲ್ ಹೆರಾಲ್ಡಿನ ಸ್ಪಷ್ಟೀಕರಣ!

ಪಂಡಿತ ಜವಾಹರಲಾಲರ ನೀತಿ ಮರ್ಮವನ್ನು ತಿಳಿದುಕೊಳ್ಳಲು ಅವರ ಗುಣಸ್ವಭಾವಗಳನ್ನು ಗಂಭೀರವಾಗಿ ವಿಚಾರಿಸಬೇಕು. ಅವರಿಗೆ ಕಾಂಗ್ರೆಸು ಜೀವನ ಸರ್ವಸ್ವವಾಗಿದೆ. ಆದುದರಿಂದಲೇ ಅವರ ಒಂದೊಂದು ಮಾತು, ಒಂದೊಂದು ಕಾರ್ಯವು ಕಾಂಗ್ರೆಸಿನ ಶಕ್ತಿಯನ್ನು ಅದರ ವರ್ಚಸ್ಸನ್ನು ಬೆಳೆಸುತ್ತವೆ. ಕಾಂಗ್ರೆಸಿನೊಳಗೆ ಚೆದರಿಹೋಗುತ್ತಿರುವ ಒಂದಕ್ಕೊಂದು ವಿರೋಧವಾದ ಬೇರೆ ಬೇರೆ ಶಕ್ತಿಗಳನ್ನು ಒಂದುಗೂಡಿಸುವ ಸಾಮರ್ಥ್ಯವುಳ್ಳವರೂ, ಒಂದುಗೂಡಿಸುವಲ್ಲಿ ಸಫಲರಾದವರೂ, ಇಂದು ಕಾಂಗ್ರೆಸಿನಲ್ಲಿ ಇವರೊಬ್ಬರೇ ಆಗಿರುವರು ಎಂದು ನೇಶನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಬ್ಬ ಲೇಖಕರು ಬರೆಯುತ್ತಿದ್ದಾರೆ.

"ಕಾಂಗ್ರೆಸಿನೊಳಗೆ ಅವರು ಪ್ರತ್ಯೇಕವಾದ ತಂಡಗಳನ್ನು ಕಟ್ಟಿಕೊಂಡಿರುವದಿಲ್ಲ. ಅಂಥ ಪಕ್ಷಗಳನ್ನು ಕಟ್ಟಿಕೊಂಡು ತಮ್ಮ ವರ್ಚಸ್ಸು ವ್ಯಕ್ತಿತ್ವಗಳನ್ನು ಎಲ್ಲರ ಮೇಲೆ ತೋರಿಸಬೇಕೆಂಬ ಅಭಿಲಾಷೆಯೂ ಅವರಿಗಿರುವದಿಲ್ಲ. ಆದ್ದರಿಂದಲೇ ಕಾಂಗ್ರೆಸಿನಲ್ಲಿ ಅವರವರ ವರ್ಚಸ್ಸೂ ವ್ಯಕ್ತಿತ್ವವೂ ಬೆಳೆಯುತ್ತಲಿದೆ. ಹಕ್ಕಿಗಳ ಗುಂಪಿನಲ್ಲಿ ಗರುಡಪಕ್ಷಿಯಂತೆ ರಾರಾಜಿಸುತ್ತಿದ್ದಾರೆ.!

"ಯಾವುದಾದರೊಂದು ಚರ್ಚಾಸ್ಪದ ವಿಷಯದ ಕುರಿತು ತೀವ್ರ ಮತಭೇದವುಂಟಾಗಿ ಕಾಂಗ್ರೆಸು ಒಡೆಯಲಿಕ್ಕಾದಾಗ, ಜವಾಹರರು ಯಾವ ಪಕ್ಷದೊಡನೆಯೂ ತಮ್ಮ ಪೂರ್ಣ ಸಹಾನುಭೂತಿಯನ್ನು ತೋರಿಸದೆ ಬೇರೆಯಾಗಿ ಉಳಿಯುತ್ತಾರೆ. ತ್ರಿಪುರಿ ಕಾಂಗ್ರೆಸಿನ ಸಮಯದಲ್ಲಿ ಅವರು ಇದೇ ಕಾರ್ಯಕುಶಲತೆಯನ್ನು ತೋರಿಸಿ ಕಾಂಗ್ರೆಸನ್ನು ಕಾಪಾಡಿದರು. ಕಟ್ಟಾಭಿಕ್ಷೊ ವೃತ್ತಿಯುಳ್ಳ ಜನರಿಗೆ ರಾಷ್ಟ್ರಧರ್ಮ ಮತ್ತು ಕೊನೆಯ ಗುರಿಯನ್ನು ತೋರಿಸಿಕೊಟ್ಟು ತಮ್ಮ ಜಗಳವನ್ನು ನಿಲ್ಲಿಸುವದಕ್ಕೆ ಪ್ರಯತ್ನ ಮಾಡಿದರು. ಕಾಂಗ್ರೆಸಿನ ಬಲಪಕ್ಷದ ಆಕ್ರಮಣಗಳಿಂದ ಅಲ್ಪಸಂಖ್ಯಾಕ ಸಮಾಜವಾದಿಗಳನ್ನು ಕಾಪಾಡುವವರು ಇವರೇ! ಸಮಾಜವಾದಿಗಳ ಕಟುಟೀಕೆಗಳಿಂದ ಬಲಪಕ್ಷದ ಸರದಾರ ಶ್ರೇಷ್ಠರನ್ನು ಸಮರ್ಥಿಸುವವರು ಇವರೇ! ಅವರಿಗೆ ಪಕ್ಷಾಭಿಮಾನವಿಲ್ಲ. ಅವರು ಯಾರೊಡನೆಯೂ ತಮ್ಮ ಪೂರ್ಣ ಸಂಬಂಧವನ್ನು ಕಟ್ಟಿಕೊಳ್ಳುವದಿಲ್ಲ. [illegible]ರುವ ಬಣಗಳು ಒಬ್ಬ ಕೂಡಿ, ಇರಬಹುದಾದ ಕಾರ್ಯಕ್ಷೇತ್ರವನ್ನು ಉಪಾಯದಿಂದ ಕಂಡುಹಿಡಿದು ಆ ಕಾರ್ಯಕ್ಷೇತ್ರಕ್ಕೇ ಪ್ರತಿಯೊಬ್ಬನನ್ನು ಅವರು ಪ್ರೇರೇಪಿಸುತ್ತಾರೆ. ಜವಾಹರಲಾಲರ ಈ ಕಾರ್ಯಕುಶಲತೆಯಿಂದಾಗಿ ಕಾಂಗ್ರೆಸು ಅಂತಃಕಲಹದಿಂದ ಭಿನ್ನಭಿನ್ನವಾಗದೆ ಅಖಂಡವಾಗಿ ಉಳಿದುಬಂದಿದೆ.

"ಅವರು ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸಿನ ಯಶಸ್ಸಿಗಾಗಿ ಹಗಲಿರುಳು ಸತತ ಪರಿಶ್ರಮ ಮಾಡಿದರು. ಅವರು ಚುನಾವಣೆಯ ಕ್ಷೇತ್ರದಲ್ಲಿ ಅಭೂತಪೂರ್ವ ವಿಜಯವನ್ನು ತಂದು ಕೊಟ್ಟರು. ಆದರೆ ಅಧಿಕಾರವನ್ನು ಸ್ವೀಕರಿಸುವ ಸಮಯ ಬಂದಾಗ, ಎಲ್ಲರಿಗಿಂತಲೂ ಹಿಂದಕ್ಕೆ ಉಳಿದರು. ಸರಕಾರದಲ್ಲಿ ಅವರು ವಿಚಾರಿಸಿದಂತಹ ಕ್ರಾಂತಿಕಾರೀ ಸುಧಾರಣೆಗಳನ್ನು ಮಾಡಲಿಕ್ಕೆ ಕಾಂಗ್ರೆಸಿನೊಳಗೆ ಯಾರೂ ಸಮರ್ಥರಾಗಿರಲಿಲ್ಲ. ಓಡಲಾರದವರನ್ನು ತನ್ನೊಟ್ಟಿಗೆ ಓಡಿಸಿ ಸೋಲುವದಕ್ಕಿಂತ, ತಾವೇ ಅವರೊಂದಿಗೆ ಮೆಲ್ಲಗೆ ನಡೆದು ಸಮಯಾನುಕೂಲವಾದಾಗ ವಿಜಯವನ್ನು ಸಂಪಾದಿಸುವದು ಬುದ್ಧಿವಂತಿಕೆಯಾಗಿದೆ ಎಂಬುದು ಅವರ ವಿಚಾರವಾಗಿದೆ. ಇಂದು ಕಾಂಗ್ರೆಸಿನೊಳಗೆ ಐಕ್ಯವನ್ನು ಸ್ಥಾಪಿಸುವದೇ ಅವರ ಪ್ರಧಾನ ಕಾರ್ಯವಾಗಿದೆ.

"ಕಾಂಗ್ರೆಸಿಗೆ ಹಿಂದಿಗಿಂತಲೂ ಈಗ ಜವಾಹರಲಾಲರ ಆಗತ್ಯವು ಅಧಿಕವಾಗಿರುವದು. ಅಹಿಂಸೆಯನ್ನು ಪ್ರತಿಯೊಂದು ಕ್ಷೇತ್ರದಲ್ಲಿ ಜೀವನ ಧ್ಯೇಯವನ್ನಾಗಿಟ್ಟುಕೊಳ್ಳುವ ಕುರಿತು ಕಾಂಗ್ರೆಸಿನೊಳಗೆ ತೀವ್ರ ಮತಭೇದವುಂಟಾಗಿರುವದು. ಪೂರ್ಣ ಅಹಿಂಸಾವಾದಿಗಳಾದ ಗಾಂಧಿ ಪಕ್ಷವು ಆಗತ್ಯ ಬಿದ್ದರೆ ಕಾಂಗ್ರೆಸಿನಿಂದ ಹೊರಗಾಗಬಹುದೆಂದು ಮಹಾತ್ಮಾ ಗಾಂಧಿಯವರು ಮೊದಲೇ ಮುಂಜಾಗ್ರತೆಯ ಸೂಚನೆಯನ್ನು ಕೊಟ್ಟಿರುತ್ತಾರೆ. ತತ್ವ ಪಾಲನ ದೃಷ್ಟಿಯಿಂದ ಅವರು ಹಾಗೆ ಮಾಡುವದು ಸರಿಯಾದುದೇ ಆಗಿರಬಹುದಾದರೂ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸು ಹೀಗೆ ಎರಡಾಗುವದು ಕಾಂಗ್ರೆಸಿಗೆ, ದೇಶಕ್ಕೆ ಮತ್ತು ಪ್ರಪಂಚಕ್ಕೆ ಹಿತಕಾರಿಯಾಗಿರುವದಿಲ್ಲ. ಆದ್ದರಿಂದ ಕಾಂಗ್ರೆಸಿನೊಳಗೆ ಒಡೆದು ಹೋಗಿರುವ ಭಿನ್ನ ಶಕ್ತಿಗಳನ್ನು ಒಂದುಗೂಡಿಸುವ ಮಹಾಕಾರ್ಯವು ಈಗ ಪುನಃ ಜವಾಹರಲಾಲರ ಪಾಲಿಗೆ ಬಂದಿದೆ.

ಅವರು ಕಾಂಗ್ರೆಸನ್ನು ಕ್ರಾಂತಿಕಾರಿ ಮಾರ್ಗದಲ್ಲಿ ಇನ್ನೊಂದು ಹೆಜ್ಜೆ ಮುನ್ನಡೆಯಿಸುವರು. ಅವರು ಯಾರನ್ನೂ ಟೀಕಿಸದೆ, ಯಾರನ್ನೂ ಗಣಿಸದೆ, ಯಾವ ಪಕ್ಷವನ್ನೂ ಸೇರದೆ, ಸಮಾಧಾನಿಗಳಾಗಿ ಇದ್ದರೆ ಅದರಿಂದ ಕಾಂಗ್ರೆಸಿಗೆ ಬಹಳ ಹಿತವಾಗುವುದು ದೇಶಕ್ಕೆ ಕ್ಷೇಮವಾಗುವುದು. ಅವರು ಒಂದೊಂದೇ ಹೆಜ್ಜೆಯನ್ನು ಕ್ರಮವಾಗಿ, ಸ್ಥಿರವಾಗಿ, ದೃಢವಾಗಿ ಮುಂದಿಟ್ಟು ಕಾಂಗ್ರೆಸನ್ನು ಮುನ್ನಡೆಯಿಸುವರು. ಕಾಂಗ್ರೆಸಿಗೂ ಸರಕಾರಕ್ಕೂ ಹೋರಾಟವು ನಿಕಟವಾಗಿದೆ. ಜವಾಹರಲಾಲರ ಕಾರ್ಯ ಶಕ್ತಿಯಿಂದ ದೇಶದಲ್ಲಿ ಹೊಸಜೀವವು ಊದಿಕೊಳ್ಳುವದು; ಜನ ಜೀವನದಲ್ಲಿ ಮಿಂಚಿನ ಸಂಚಾರವಾಗುವದು. ರಾಷ್ಟ್ರವು ಸಿದ್ಧಿ ಗುರಿಯನ್ನು ಮುಟ್ಟುವದು"

ಯಾವುದೇ ಬಂದರೂ
ಇದು ಸಿದ್ಧವಿರಲಿ!
ಚರ್ಮರೋಗಕ್ಕೆ ಜ್ಹಾಂಬಕ್
ಅಖಿಲ ಜಗತ್ತಿನಲ್ಲಿಯೇ
ಪ್ರಸಿದ್ಧವಾದುದು.

ಪ್ರತಿಯೊಂದು ಮನೆಯಲ್ಲಿಯೂ ಜ್ಹಾಂಬಕ್ ಅವಶ್ಯವಾಗಿ ಇರಬೇಕು. ಈ ವನೌಷಧಿಗಳಿಂದ ಮಾಡಿದ ಲೇಪವು ಚರ್ಮರೋಗಗಳಿಗೆ ಬಹಳ ಗುಣಕಾರಿಯಾದ ಔಷಧ. ಇದರಿಂದ ನೋವು ಕಡಿಮೆಯಾಗುತ್ತದೆ. ಬಾತುಹೋದುದು ಕಡಿಮೆಯಾಗುತ್ತದೆ, ಮಂತ್ರದಂತೆ ಇದು ಅದ್ಭುತ ಗುಣಕೊಡುತ್ತದೆ. ಜ್ಹಾಂಬಕ್‌ನ್ನು ಡಾಕ್ಟರರೂ ನರ್ಸುಗಳೂ ಎಲ್ಲಾ ಕಡೆಗಳಲ್ಲಿಯೂ ಉಪಯೋಗಿಸುತ್ತಾರೆ. ಕಡಿತಕ್ಕೆ, ಗಾಯಕ್ಕೆ, ಸುಟ್ಟಿದ್ದಕ್ಕೆ, ಕಾಲುನೋವಿಗೆ, ತುರಿಕಜ್ಜಿ ವಿಷಗಾಯ ಮೊದಲಾದವುಗಳಿಗೆಲ್ಲಾ ಇಂದೇ ಒಂದು ಪೆಟ್ಟಿಗೆ ಜ್ಹಾಂಬಕ್ ಕೊಂಡುಕೊಳ್ಳಿರಿ. ಎಲ್ಲಾ ಮದ್ದಿನ ವ್ಯಾಪಾರಿಗಳಲ್ಲಿಯೂ ಜ್ಹಾಂಬಕನ್ನು 1 ರೂಪಾಯಿ ಮತ್ತು 2-4-0 ರಂತೆ ಮಾರುತ್ತಾರೆ.

ಏಜಂಟರು:

ಮೆಸೆರ್ಸ್ ದಾಧಾ ಮತ್ತು ಕಂಪೆನಿ ಪಿ. ಟಿ. ಮದ್ರಾಸು.

ಯಾವಾಗಲೂ ಜ್ಹಾಂಬಕನ್ನು ಉಪಯೋಗಿಸಿರಿ

ZAM-BUK

ಇದರಲ್ಲಿ ಪಶುಗಳ ಕೊಬ್ಬು ಸೇರಿಲ್ಲ

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of

Rs. 50/-, 100/-, 500/-, 1,000/- & 5,000/-
are now issued at all our Branches.

For particulars call at or write to

Any of our nearest Branches

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*.

ಯುದ್ಧದಲ್ಲಿ ಮರೆಯಲಾಗದ ಕಲ ದಿನಗಳು!

— ಸಪ್ಟಂಬರದಿಂದ ಸಪ್ಟಂಬರದ ತನಕ —

೧೯೩೯ ಸಪ್ಟಂಬರ ೧—ಹಿಟ್ಲರನು ಪೋಲೆಂಡಿಗೆ ಆಕ್ರಮಿಸಿದ್ದು

೧೯೩೯ ಸಪ್ಟಂಬರ ೩ ಬ್ರಿಟನು ಮತ್ತು ಫ್ರಾನ್ಸುಗಳು ಜರ್ಮನಿಯ ವಿರುದ್ಧ ಯುದ್ಧವನ್ನು ಸಾರಿದ್ದು

೧೯೩೯ ಸಪ್ಟಂಬರ ೩೦—ಹಿಟ್ಲರನು ಪೋಲೆಂಡನ್ನು ಗೆದ್ದದ್ದು

೧೯೩೯ ನವಂಬರ ೩೦—ರಶ್ಯವು ಫಿನ್‌ಲೆಂಡನ್ನು ಆಕ್ರಮಿಸಿದ್ದು

೧೯೪೦ ಜನವರಿ ೫ ಕದನವನ್ನು ತೀವ್ರಮಾಡಬೇಕೆಂಬ ತಮ್ಮ ಹೇಳಿಕೆಗೆ ಬೆಂಬಲ ಸಿಗದೆ ಇರಲು ಸಂಗ್ರಾಮ ಸಚಿವರಾದ ಹೋರ್ ಬೆಲಿಶರು ರಾಜಿಯಿತ್ತದ್ದು

೧೯೪೦ ಮಾರ್ಚಿ ೧೩—ಫಿನ್ಲೆಂಡು ರಶ್ಯಕ್ಕೆ ಶರಣಾದದ್ದು

೧೯೪೦ ಮಾರ್ಚಿ ೧೮—ಹಿಟ್ಲರ್ ಮುಸಲೋನಿಗಳ ಬ್ರೆನ್ನರ್ ಭೇಟಿ

೧೯೪೦ ಮಾರ್ಚಿ ೨೧—ದಲಾಡಿಯು ರ ಸ್ಥಾನದಲ್ಲಿ ಫ್ರಾನ್ಸಿನಲ್ಲಿ ರೆನಾರ ಪ್ರಧಾನ ಮಂತ್ರಿಯಾದುದು.

೧೯೪೦ ಎಪ್ರಿಲ್ ೯—ಜರ್ಮನಿಯು ನಾರ್ವೆಯ ಮೇಲೆ ಆಕ್ರಮಣ ಮಾಡಿದ್ದು

೧೯೪೦ ಮೇ ೧೦—ಜರ್ಮನ್ ನೆದರ್ಲೆಂಡ್ ಮತ್ತು ಬೆಲ್ಜಿಯಮುಗಳನ್ನು ಆಕ್ರಮಿಸಿದ್ದು

೧೯೪೦ ಮೇ ೨೧—ಚೆಂಬರ್ಲೆನರು ಬ್ರಿಟಿಷ್ ಪ್ರಧಾನ ಮಂತ್ರಿ ಪದವಿಗೆ ರಾಜಿನಾಮೆ ಕೊಡಬೇಕಾಗಿ ಬಂದು ಚರ್ಚಿಲ್ಲರು ಪ್ರಧಾನ ಮಂತ್ರಿಯಾದುದು

೧೯೪೦ ಮೇ ೧೪—ನೆದರ್‌ಲೇಂಡ್ ಶರಣಾದುದು

೧೯೪೦ ಮೇ ೨೮—ರಾಜ ಲಿಯೊಪಾಲ್ಡನು ಪ್ರಜೆಗಳ ಅಭಿಪ್ರಾಯದ ವಿರುದ್ಧ ಜರ್ಮನಿಯ ಸ್ವಾಧೀನವಾದುದು.

೧೯೪೦ ಜೂನ್ ೧೦—ಜರ್ಮನರು ನಾರ್ವೆಯನ್ನು ಆಕ್ರಮಿಸಿದುದು

೧೯೪೦ ಜೂನ್ ೧೧—ಇಟೆಲಿಯು ಯುದ್ಧದಲ್ಲಿ ಪ್ರವೇಶ ಮಾಡಿದುದು.

೧೯೪೦ ಜೂನ್ ೧೪—ಪ್ಯಾರಿಸು ಜರ್ಮನಿಗೆ ಬಲಿಯಾದುದು

೧೯೪೦ ಜೂನ್ ೧೫—ರಶ್ಯವು ಲಿಥುನಿಯವನ್ನು ಆಕ್ರಮಿಸಿದುದು.

೧೯೪೦ ಜೂನ್ ೧೬—ರಶ್ಯವು ಲಿಟ್ವಿಯ ಮತ್ತು ಎಸ್ಟೋನಿಯ ಆಕ್ರಮಣ ಮಾಡಿದುದು. ಫ್ರಾನ್ಸಿನಲ್ಲಿ ರೆನಾರ ರಾಜಿನಾಮೆ. ಪಿಟೆನರು ಪ್ರಧಾನ ಮಂತ್ರಿಯಾದುದು.

೧೯೪೦ ಜೂನ್ ೧೭—ಫ್ರಾನ್ಸ್ ಜರ್ಮನಿಯ ವಶವಾದುದು. ಪಿಟೆನ್ ಸರಕಾರದ ಸ್ಥಾಪನೆ. ಮೆಜನೋವ್ಯೂಹವನ್ನು ಭೇದಿಸಿದ್ದು.

೧೯೪೦ ಜೂನ್ ೨೨—ಫ್ರಾನ್ಸ್ ಜರ್ಮನಿಯೊಡನೆ ಒಪ್ಪಂದ ಮಾಡಿದ್ದು.

೧೯೪೦ ಜೂನ್ ೨೫—ಫ್ರಾನ್ಸು ಇಟಲಿಯೊಡನೆ ಒಪ್ಪಂದ ಮಾಡಿದ್ದುದು.

೧೯೪೦ ಜೂನ್ ೧೭—ಬಾಲ್ಟಿಕ್ ರಾಷ್ಟ್ರಗಳ ಒಗ್ಗೆ ರಶ್ಯದ ಕೇಳಿಕೆ

೧೯೪೦ ಜೂನ್ ೧೮—ರಶ್ಯದ ಕೇಳಿಕೆಯನ್ನು ಬಾಲ್ಟಿಕ್‌ಗಳು ಒಪ್ಪಿದುದು

೧೯೪೦ ಜೂನ್ ೨೯—ರುಮೇನಿಯದೊಡನೆ ರಶ್ಯದ ಕೇಳಿಕೆ

೧೯೪೦ ಜೂನ್ ೩೦—ರುಮೇನಿಯದ ಒಪ್ಪಿಗೆ

೧೯೪೦ ಜುಲಾಯಿ ೧೮—ಇಂಗ್ಲೆಂಡಿನ ಮೇಲೆ ಜರ್ಮನ್ ಧಾಳಿಯು ಆರಂಭವಾದುದು

೧೯೪೦ ಅಗಸ್ಟ್ ೧೧, ೧೨, ೧೩—ಇಂಗ್ಲೆಂಡಿನ ಮೇಲೆ ಭಯಂಕರಧಾಳಿ

೧೯೪೦ ಅಗಸ್ಟ್ ೨೧—ಬ್ರಿಟನಿನ ಮೇಲೆ ಸಿಡಿವ ಕೋವಿಗಳ ಪ್ರಯೋಗ

ಮಹಾಯುದ್ಧದ ಪ್ರಾಣಹಾನಿ—

ಪೋಲೆಂಡಿನಲ್ಲಿ—ಪೋಲೆಂಡಿನಲ್ಲಿ ಸತ್ತ ಜರ್ಮನರ ಸಂಖ್ಯೆ ೧೦,೫೭೨ ಪತ್ತೆಯಾಗದವರು ೩೪,೦೦೦ ಇಸ್ಸಿತರ ಲೆಕ್ಕದ ಜರ್ಮನರ ಮರಣ ೫೦,೦೦೦ ವಿಮಾನಧಾಳಿಯಿಂದ ಸತ್ತ ಪೋಲರ ಸಂಖ್ಯೆ ೧೬,೦೦೦ ಕೊಲ್ಲಲ್ಪಟ್ಟ ಪೋಲ ಮುಖಂಡರ ೧೬,೦೦೦ ಯುದ್ಧದಲ್ಲಿ ಸತ್ತವರು ೨೫,೦೦೦

ಫಿನ್‌ಲೆಂಡಿನಲ್ಲಿ

ಯುದ್ಧದಲ್ಲಿ ಮಡಿದ ಫಿನ್ನರು ೨೦,೦೦೦ ಮಡಿದ ರಶ್ಯನ್ ಸೈನಿಕರು ೪೮,೭೪೫

ಹಾಲೆಂಡ್ ಬೆಲ್ಜಿಯಂಗಳಲ್ಲಿ

ಯುದ್ಧದಲ್ಲಿ ಸತ್ತ ಮತ್ತು ಗಾಯಗೊಂಡ ಬೆಲ್ಜಿಯಂಸೈನಿಕರು ೨,೦೦,೦೦೦

ಫ್ರಾನ್ಸಿನಲ್ಲಿ

ನಾಶಹೊಂದಿದ ಫ್ರೆಂಚರು ೫,೦೦,೦೦೦

ಜರ್ಮನರ ಹಾನಿ

ಹಾಲೇಂಡ್ ಬೆಲ್ಜಿಯಂ ಫ್ರಾನ್ಸುಗಳಲ್ಲಿ ಮರಣ ಹೊಂದಿದ ಜರ್ಮನರು ೫ ಲಕ್ಷ

ಬ್ರಿಟನಿನ ಹಾನಿ

ಫ್ರಾನ್ಸಿನಲ್ಲಿ ಮರಣಹೊಂದಿದವರು ಮತ್ತು ಗಾಯಗೊಂಡವರು ೯೫,೦೦೦.

(ಈ ಸಂಖ್ಯೆಗಳು ಇಂಗ್ಲಿಷ್ ಪತ್ರಿಕೆಗಳ ವರದಿಯಿಂದ ಸಂಗ್ರಹವಾದದ್ದು ಸರಿಸಮಾನ ಲೆಕ್ಕದಿಂದ ಇದನ್ನು ನೋಡಬೇಕು.

ಯುದ್ಧಕ್ಕಾಗಿ ಸಂಪತ್ತಿನ ಸೂರೆ!

ಬ್ರಿಟನು ಪ್ರತಿವಾರಕ್ಕೆ ೫೭೦ಲಕ್ಷ ಪವನಿನಂತೆ, ವರ್ಷಕ್ಕೆ ೨೮೦೦೦ ಲಕ್ಷ ಪವನಿನಂತೆ, ಅಮೇರಿಕಾ ೪೦೦ ಕೋಟಿ ಡಾಲರಿನಂತೆ, ಆಫ್ರಿಕಾ ೪೩೦ ಲಕ್ಷ ಪವನಿನಂತೆ ವೆಚ್ಚಮಾಡುತ್ತದೆ; ಫ್ರಾನ್ಸು ೩೦೦೦ ಲಕ್ಷ ಪವನು, ಆಸ್ಟ್ರೇಲಿಯ ೧೮೦ ಲಕ್ಷ ಪವನು ಬೆಲ್ಜಿಯಂ ೪೦೦ ಲಕ್ಷ ಪವನುಗಳನ್ನು ವೆಚ್ಚಮಾಡಿತು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 247/1940

ಜಿಂನಪ್ಪ ನಾಯಕ . . . ವಾದಿ

ಮತ್ತು

ಪದ್ಮಾವತಿ ಅಮ್ಮ ಸಹಾ ಪ್ರವಾದಿರು

ಕೋರ್ಟ್ ಹುಕ್ಕುಂ ಪ್ರಕಾರ ಸದ್ರಿ ದಾವೆಯ ಈ ಕೆಳಗೆ ಹೆಸರು ಕಾಣಿಸಿದ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

1 ಪದ್ಮಾವತಿ ಅಮ್ಮ— ಪಟ್ಟಸೆಟ್ಟಿ ಪದ್ಮನಾಭ ಸೆಟ್ರ ವಿಧವೆ—ಕಾರ್ಕಳ ತಾಲೂಕು ಪ್ರಾಂಪ್ರ ಗ್ರಾಮ

2 ಸರೋದೇವಿ ಯಾನೆ ತಂಗಮ್ಮ } 1ನೇ ಪ್ರತಿವಾದಿಳ ಮಕ್ಕಳು
3 ಅಮ್ಮಣ್ಣಿ ಯಾನೆ ಸೋಮವತಿ }

ಕಾರ್ಕಳ ತಾಲೂಕು, ಪ್ರಾಂಪ್ರ ಗ್ರಾಮ

10 ಕೃಷ್ಣಯ್ಯ—ಚಿತ್ರಾಪುರ ನಾರ್ಣಪ್ಪಯ್ಯನ ಮಗ—ಕಾರ್ಕಳ ತಾಲೂಕು ಪ್ರಾಂಪ್ರ ಗ್ರಾಮದಲ್ಲಿ

13 ತೀಂಗೇಶ್ವರ— ನರಸಿಂಗರಾಯರ ಮಗ ಕೊಪ್ಪ ತಾಲೂಕು ಶೃಂಗೇರಿ ಕಸಬ ಗ್ರಾಮದಲ್ಲಿ

15 ಚನ್ನಿನಿ ನ್ಯಾಕಬಾಯಿ—ಉಮಗುಂಡಿ ವೆಂಕಪ್ಪ ನ್ಯಾಕನ ಮಗಳು—ಕಾರ್ಕಳ ತಾಲೂಕು ಪತ್ತಿಗೆ ಗ್ರಾಮದಲ್ಲಿ

21 ರಾಮನ ಪೈ ಗುರ್ಪುರ ರಂಗ ಪೈಗಳ ಮಗ—ಮಂಗಳೂರು ತಾಲೂಕು ಮೂಳೂರು ಗ್ರಾಮದಲ್ಲಿ

24 ಮಾಧವ ಪೈ ಗುರ್ಪುರ ರಘುನಾಥ ಪೈಗಳ ಮಗ—ಕಾರ್ಕಳ ತಾಲೂಕು ಮುಡಾರ ಗ್ರಾಮದಲ್ಲಿರುವವ

26 ಲಕ್ಷ್ಮೀಶ ಪೈ ದಾಮೋದರ ಪೈಗಳ ಮಗ ಕಾರ್ಕಳ ಪ್ರಾಂಪ್ರ ಗ್ರಾಮದಲ್ಲಿ

27 ಪದ್ಮನಾಭ ಪೈ-ಮ್ಯಾನೇಜರು—ವೆಂಕಟಾ ಯ ಪೈ ಮಗ ಇವರ ಒಗ್ಗೆ ಗಾರ್ಡಿಯನ ತಾಯಿ ಪದ್ಮಾವತಿ ಅಮ್ಮ ಕಾರ್ಕಳ ತಾಲೂಕು ಮರ್ಣಾಡಿ ಗ್ರಾಮದ ದೂಡ್ಡಬಿದ್ರಿ ಮಾದವ ಪೈರ ಮನೆಯಲ್ಲಿರುವವಳು

1ನೇ ಪ್ರತಿವಾದಿಳ ಗಂಡ 2 3ನೇ ಪ್ರತಿವಾದಿರ ತಂದೆ ಹಾಲಿ ಮೃತಪಟ್ಟ ಮೂಡಬಿದ್ರಿ ಪಟ್ಟಸೆಟ್ಟಿ ಪದ್ಮನಾಭ ಸೆಟ್ರು ವಾದಿಗೆ ತಾ 12-" 1918ರಲ್ಲಿ ರೂಪಾಯಿ 1000ಕ್ಕೆ ಬರಕೊಟ್ಟ ತೋರದವೃ ದಸ್ತಾವೇಜಿನ ಬಾಬ್ತು ಬಡ್ಡಿ ಅಸ್ಲು ಒಟ್ಟು ಅ್ಯವಜು ರೂಪಾಯಿ ಕ್ಕೆ ದಾವೆ ಮಾಡಿದ್ದಾಗಿದ್ದು ಸದ್ರಿ ಚಿಟ್ಟಿ ಭಂಡಿನ ಒಗ್ಗೆ ಸದ್ರಿ ಆತನ ಆಸ್ತಿ ಚಿಟ್ಟಿ ಮೆಂಬರ್‍ಗೆ ಜವಾಬ್ದಾರಿ ಮಾಡಿಕೊಟ್ಟಿರುವದಾಗಿ ತಿಳಿದು ಬಂದಿರುವದರಿಂದ ಸದ್ರಿ ಚಿಟ್ಟಿ ಮೆಂಬರ ನ ಕೆಲವು ಮೆಂಬರ ವಾರಿಸದಾರರನ್ನು ಸಂತ್ರದ ಪರಾಧೀನಗಾರರಾಗಿ ಕಕ್ಷಿಯಲ್ಲಿ ಸೇರಿಸಿ ವಾದಿಯು ದಾಕಲು ಮಾಡಿದ ಸದ್ರಿ ಮೇಲಿನ ದಾವೆಯು ಮೇಲೆ ಹೆಸರು ಕಾಣಿಸಿದ ಪ್ರತಿವಾದಿರ ಹಾಜರಾತಿ ಒಗ್ಗೆ ಇದೇ ಬರುವ ತಾ 18-9 1940ಕ್ಕೆ ಇಟ್ಟಿರುವದರಿಂದ ಸದ್ರಿ ಪ್ರತಿವಾದಿರು ಅವರ ಉದಾಹರಣೆ ಇರುವಲ್ಲಿ ಸದ್ರಿ ತಾರೀಕಿನ ಮೊದಲು ಕೋರ್ಟಿಗೆ ಅರಿಕೆ ಮಾಡಿ ಸ್ವತಹ ವ ಪ್ಲೀಡರ ಮುಖಾಂತ್ರ ಉದಹರಿಸಿಕೊಳ್ಳಬೇಕಾಗಿರುತ್ತದೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ತಾ 18-9-1940ರಲ್ಲು ಕ್ರಮ ಪ್ರಕಾರ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಕಾರ್ಕಳ, ತಾ, 28-8-1940 } H. K. Gopalkrishna Rao. Vakil for Plaintiff

HALFTONE & LINE
BLOCK MAKING
UNDERTAKEN
Sharada Press,
MANGALORE

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮನಂಬ್ರ 168/1940

ವಾಸ್ದೇವ ಭಟ್ಟ ಕೂಡ ... ವಾದಿರು

ಮತ್ತು

ಅಚ್ಯುತ ಭಟ್ಟ ಕೂಡ . ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ 4ನೇ ಪ್ರತಿವಾದಿ ನಾರಾಯಣ ಭಟ್ಟ, 5ನೇ ಪ್ರತಿವಾದಿ ಮಾಧವಭಟ್ಟ, ಬಡ್ಕೆಕೆರೆ ಗೋವಿಂದ ಭಟ್ಟರ ಮಕ್ಕಳು, 6ನೇ ಪ್ರತಿವಾದಿ ಗೋವಿಂದ ಭಟ್ಟ 1ನೇ ಪ್ರತಿವಾದಿ ಅಚ್ಯುತ ಭಟ್ಟನ ಮಗ ಇವರೆಲ್ಲರೂ ಕಾರಡ್ಕ ಗ್ರಾಮದ ಬಡ್ಕೆಕರೆ ಎಂಬಲ್ಲಿರುವವರು, ಇವರಿಗೆ ತಿಳಿಸುವುದೇನಂದರೆ—

1ರಿಂದ 5ನೇ ವರೆಗಿನ ಪ್ರತಿವಾದಿರು ವಾದಿರಿಗೆ ತಾರೀಕು 21 12-1929ರಲ್ಲು ರೂಪಾಯಿ 10 000-0-0ಕ್ಕೆ ಬರಕೊಟ್ಟ ಆದವು ದಸ್ತಾವೇಜು ಪ್ರಕಾರ 1339ನೇ ಇಸ್ಸಿ ವಿಷುಸಗುವಿಗೆ ಸಲತಕ್ಕ 1 ವರ್ಷದ ಬಡ್ಡಿ ಐವಜು ರೂಪಾಯಿ 625ನ್ನು ದಾವಾ ಆಡವಿನ ಆಸ್ತಿ ವಿಲಿವಿನಿಂದ ವಾದಿರಿಗೆ ಸಲತಕ್ಕ ಅಸಲು ಐವಜು ವ ಸಂತ್ರದ ಒಡ್ಡಿಗೆ ಒಳಪಡಿಸಿ ಐವಜು ವಸೂಲು ಪಡಿಯುವ ಬಾಗೆ ಡಿಕ್ರಿ ಕೊಡಿಸಬೇಕಾಗಿ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 7 9 1940ಕ್ಕೆ ಇಟ್ಟಿರುವದರಿಂದ ಆ ದಿವಸ ಸದ್ರಿ ಪ್ರತಿವಾದಿರು ಮೇಲ್ಕಂಡ ಕೋರ್ಟ ಮುಂದೆ ಹಾಜ್ರಾಗಲು ತಪ್ಪಿದರೆ ಎಕ್ಸಪಾರ್ಟಿ ಮಾಡಿ ವ್ಯಾಜ್ಯವು ಇತ್ಯರ್ಥ ಪಡಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಗುತ್ತದೆ

Kasaragod } (sd)S Lakshman Rao
28 8 1940 } Vakil for Plaintiff

ಅದೆಂತಹ ಬಲವೋ

ಎಳ್ಳು ಹುಡಿ ಎಣ್ಣೆ ತೆಗೆದು ಅನ್ನದೊಂದಿಗೆ ಬೆರಸಿ ಊಟಮಾಡುತಿದ್ದರು ನಮ್ಮ ಹಿರಿಯರು ಎಂದು ಪೂರ್ವಕಾಲದವರು ಹೇಳುತ್ತಿದ್ದರು ಅದು ಸತ್ಯವೋ ಅಸತ್ಯವೋ ನಾವು ನೋಡಲಿಲ್ಲವಾದರೂ ಪೂರ್ವಿಕರು ಮಾತ್ರ ಶರೀರ ಕಷ್ಟದಿಂದ ದೃಢಕಾಯರಾಗಿದ್ದರೆಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತೇವೆ.

ನಮ್ಮಲ್ಲಿ ಅನೇಕರಿಗೆ ಆ ಶಕ್ತಿ, ಆ ಬಲ, ಆ ಪಟುತ್ವ ಇರುವುದಿಲ್ಲ ದೇಹಶ್ರಮದಿಂದ ಕೆಲಸ ಮಾಡಲು ಅವಕಾಶವಿಲ್ಲವೆಂದು ಈ ನೀರಸ ಜೀವನವನ್ನು ಕಳೆಯಬಾರದು ನಾವು ಒಳ್ಳೇ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆಕಾಂತಿಗಳಿಂದ ಕೂಡಿರಬೇಕು ಆದುದರಿಂದ 'ಅಮೃತ' ಔಷಧವನ್ನು ಶೀಘ್ರವಾಗಿ ಸೇವಿಸಬೇಕು. ಅಮೃತವನ್ನು ಸೇವಿಸಿದರೆ ನಿಮಗೆ ಜೀವನ ಸೌಖ್ಯಗಳನ್ನು ಅನುಭವಿಸಲು ಬೇಕಾದ ಪುಷ್ಟಿ ರಕ್ತವೂ, ಬಲವೂ ಉಂಟಾಗುತ್ತದೆ.

"ಅಮೃತ"ವು ಎಲ್ಲಾ ಔಷಧ ಶಾಪುಗಳಲ್ಲಿಯೂ ದೊರೆಯುತ್ತದೆ

ಕೇಸರಿ ಕುಟೀರಂ ಮದ್ರಾಸು

ವಿಜ್ಞಾನಯುಗ

ಪುಸ್ತಕಗಳಿಂದಲೂ ರೋಗ ಹರಡುತ್ತದೆ

ಕಣ್ಣಿಗೆ ಕಾಣದ ಅತಿ ಸೂಕ್ಷ್ಮ ಜೀವಾಣುಗಳಲ್ಲಿ ಹಲವು ಜಾತಿಯವುಗಳು ಭಿನ್ನ ಭಿನ್ನ ರೋಗಕಾರಣಗಳಾಗಿ ಇರುತ್ತವೆ. ಈ ಜೀವಾಣುಗಳು ರಕ್ತದಲ್ಲಿ ಸೇರಿಕೊಂಡು ರೋಗಗಳನ್ನು ಉಂಟುಮಾಡುವ ಮೊದಲು, ಕಸ ಕಿಪ್ಪೆ, ಕೊಳೆ, ಕೆಸರು, ಮೊದಲಾದುವನ್ನು ವಾಹನ ಸಾಧನಗಳನ್ನಾಗಿ ಮಾಡಿಕೊಂಡಿರುತ್ತವೆ. ಪುಸ್ತಕದ ಹಾಳೆಗಳನ್ನು ಹಿಡಿದು ಓದುತ್ತಿರುವುದರಿಂದ, ಕೈಯ್ಯ ಕೊಳೆ ಆ ಹಾಳೆಗಳಿಗೂ ಅಂಟಿಕೊಂಡು, ರೋಗಾಣುಗಳು ಮನುಷ್ಯ ಶರೀರವನ್ನು ಸೇರಿಕೊಳ್ಳುವುವೆಂಬುದನ್ನು ಅಮೇರಿಕದ ವಿಜ್ಞಾನಿಗಳು ಕಂಡುಹಿಡಿಯುತ್ತಲಿರುವರು. ಕಾಗದವು ಹೊಸದಾಗಿ ಹೊಳೆಯುತ್ತಿರುವಷ್ಟು ಕಾಲ ಅದರಿಂದ ಹೊರಡುತ್ತಿರುವ ವಿದ್ಯುತ್ಕಣಗಳು ಆ ಹಾಳೆಗಳಿಗೆ ಅಂಟಿಕೊಂಡಿರಬಹುದಾದ ರೋಗಾಣುಗಳನ್ನು ನಾಶ ಮಾಡುತ್ತವಂತೆ. ಪರಂತು ಹಾಳೆಗಳು ಕೊಳೆಯಾದಾಗ, ರೋಗಾಣುಗಳು ಆ ಸ್ವಲ್ಪ ಕೊಳೆಯಲ್ಲಿಯಾದರೂ ಸುಖವಾಗಿ ಬೆಳೆದು ಬಲಿತು, ಓದುತ್ತಿರುವವರ ಶರೀರವನ್ನು ಸೇರಿ ರೋಗಗಳನ್ನುಂಟು ಮಾಡುವುವಂತೆ. ಆದ್ದರಿಂದ ಕೊಳೆಯಾಗಿ ಹಳತಾದ ಪುಸ್ತಕಗಳನ್ನು ಯಾರೂ ಮುಟ್ಟಬಾರದೆಂಬುದು ಈ ವಿಜ್ಞಾನಿಗಳ ಅಭಿಪ್ರಾಯವಾಗಿದೆ.

ಹಿಂದೂ ವಿಜ್ಞಾನಿಯ ಚುಂಬನ ಯಂತ್ರ

ಡಾಕ್ಟರ ಯಸ್ ಎ ಭಿಸೆಯವರು ಲೋಕಪ್ರಸಿದ್ಧ ಹಿಂದೂ ವಿಜ್ಞಾನಿಗಳೂ ಸಂಶೋಧಕರೂ ಆಗಿರುವರು. ಇವರು ವಿಲಾಯತಿಗೆ ಅಭ್ಯಾಸಕ್ಕಾಗಿ ತೆರಳಿದ್ದ ಸಮಯದಲ್ಲಿ ಕಂಡುಹಿಡಿದಿದ್ದ ಚುಂಬನ ಯಂತ್ರದ ಒಂದು ಮನೋರಂಜಕವಾದ ಕತೆಯು ಈಗ ಪ್ರಕಟವಾಗಿದೆ

ವಿಲಾಯತಿಯಲ್ಲಿ ಕ್ರಿಸಮಸ ಹಬ್ಬದ ಕಾಲದಲ್ಲಿ ಮಿಸಲೆಟೊ ಎಂಬ ಗಿಡದ ಗೆಲ್ಲಿನಡಿಯಲ್ಲಿ ನಿಲ್ಲುವ ಯಾವ ಹೆಂಗಸನ್ನಾದರೂ ಹುಡುಗಿಯನ್ನಾದರೂ ಚುಂಬಿಸುವ ಸ್ವಾತಂತ್ರ್ಯ ಅಧಿಕಾರಗಳು ಅಲ್ಲಿಯ ಗಂಡಸರಿಗೆ ಮತ್ತು ಹುಡುಗರಿಗೆ ಇದೆ. ಅದೇ ರೀತಿ ಗಂಡಸರು ಅಥವಾ ಹುಡುಗರು ಯಾರಾದರೂ ಆ ಗಿಡದ ಗೆಲ್ಲಿನಡಿಯಲ್ಲಿ ನಿಂತಿದ್ದಾರಾದರೆ ಅವರನ್ನು ಚುಂಬಿಸಿ ಪುರಸ್ಕಾರ ಕೇಳುವ ಅಧಿಕಾರ ಹೆಂಗಸರು ಮತ್ತು ಹುಡುಗಿಯರಿಗೂ ಇದೆ. ಕ್ರಿಸಮುಸ್ ಹಬ್ಬದ ಕಾಲದಲ್ಲಿ ಹೀಗೆ ಚುಂಬಿಸಲಿಕ್ಕೆ ಯಾರೂ ಆಕ್ಷೇಪ ಮಾಡಕೂಡದು.

ಆದ್ದರಿಂದ ಈ ಹಬ್ಬದ ಕಾಲದಲ್ಲಿ ಜನರು ಸಿಕ್ಕಿದಲ್ಲೆಲ್ಲ ಮಿಸಲೆಟೊ ಗಿಡದ ಗೆಲ್ಲುಗಳನ್ನು ತೂಗಿಸುವರು. ಆ ಗಿಡದ ಗೆಲ್ಲುಗಳು ತೂಗಿರದ ಸ್ಥಳಗಳು ದೊರೆಯುವುದೇ ಬಹು ಅಪರೂಪ. ಡಾಕ್ಟರ ಭಿಸೆಯವರಿಗೆ ವಿಲಾಯತಿಯವರ ಈ ಪದ್ಧತಿಯನ್ನು ಕೇಳಿ ಅತ್ಯಂತ ಆಶ್ಚರ್ಯವಾಯಿತು. ತನ್ನನ್ನು ಯಾರೂ ಚುಂಬಿಸಬಾರದು, ಆದರೆ ತಾನು ಮನಸ್ಸಿಗೆ ಬಂದ ಹುಡುಗಿಯನ್ನು ಚುಂಬಿಸಬೇಕು ಎಂಬ ಇಚ್ಛೆ ಅವರಲ್ಲಿ ಪ್ರಬಲವಾಗಿ ಅವರು ಅದಕ್ಕನುಕೂಲವಾದ ಒಂದು ಯಂತ್ರ ಸಾಧನವನ್ನು ಬೇಗನೇ ಕಂಡುಹಿಡಿದರು. ಈ ಯಂತ್ರದ ರಬ್ಬರಿನ ಒಂದು ನಳಿಗೆಯ ಒಂದು ತುದಿಯಲ್ಲಿ ಮಿಸಲೆಟೊ ಗಿಡದ ಒಂದು ಗೆಲ್ಲು ಕಟ್ಟಿರುತಿತ್ತು. ಅದರ ಇನ್ನೊಂದು ತುದಿಯಲ್ಲಿ ಒಂದು ಗಾಳಿಯ ಚೆಂಡಿತ್ತು. ರಬ್ಬರು ನಳಿಗೆಯನ್ನು ಕೋಟಿಗೆಯ ಹಿಂಭಾಗದಲ್ಲಿ ಅಡಗಿಸಿಟ್ಟು, ಗಾಳಿ ಚೆಂಡನ್ನು ಕಂಕುಳಲ್ಲಿಟ್ಟು ಒತ್ತಿದಾಗ, ನಳಿಗೆಯು ಹಿಂದಿನಿಂದ ಮೇಲಕ್ಕೆ ಹಾರಿ, ಎದುರು ನಿಂತಿರಬಹುದಾದ ಹುಡುಗಿ ಅಥವಾ ಹೆಂಗಸಿನ ತಲೆ ಮೇಲೆ ಅದರ ತುದಿಯಲ್ಲಿದ್ದ ಮಿಸಲೆಟೊ ಗಿಡದ ಗೆಲ್ಲು ತೂಗುತಿತ್ತು.

ಈ ಯಂತ್ರದ ಉಪಯೋಗ ಮಾಡಿ ತರುಣ ಭಿಸೆಯವರ ಅನೇಕ ಹುಡುಗಿಯರನ್ನು ಚುಂಬಿಸಿ ತಮ್ಮ ಮನಸ್ಸಿನ ಚಾಪಲ್ಯವನ್ನು ನೀಗಿಸಿಕೊಂಡರಂತೆ. ಆದರೆ ಬೇರೆ ಯಾರ ಕೂಡೆಯೂ ಈ ಯಂತ್ರವಿರದುದರಿಂದ, ಭಿಸೆಯವರನ್ನು ಚುಂಬಿಸಿ ಅವರಿಂದ ಪುರಸ್ಕಾರ ಕೇಳುವದು ಯಾವ ಹುಡುಗಿಗೂ ಸಾಧ್ಯವಾಗಲಿಲ್ಲ!

ಯಂತ್ರದ ಮಾರಾಟದ ಅಧಿಕಾರವನ್ನು ಕೇಳಿ ಅನೇಕ ಕಂಪೆನಿಗಳು ಅವರಿಗೆ ಪತ್ರ ಬರೆದಿದ್ದರು. ಆದರೆ ಚುಂಬನದ ಯಂತ್ರವನ್ನು ಮಾರಿ, ತಾನು ಹಣ ಮಾಡಲಿಕ್ಕೆ ಬಂದವನಲ್ಲವೆಂದು ಹೇಳಿ ಅವರು ಆ ಎಲ್ಲಾ ಪ್ರಾರ್ಥನೆಗಳನ್ನು ತಿರಸ್ಕರಿಸಿದರಂತೆ ಮತ್ತು ಅವರು ತಮ್ಮ ಆ ಯಂತ್ರವನ್ನು ತಾವು ಚುಂಬಿಸಿದ ಒಬ್ಬ ಚೆಲುವೆಗೆ ಉಪಹಾರವಾಗಿ ಕೊಟ್ಟರಂತೆ.

ಸೊಳ್ಳೆಗಳ ಮೃಷ್ಟಾನ್ನ ಭೋಜನ

ಸೊಳ್ಳೆಗಳು ವಿಶೇಷವಾಗಿ ಮನುಷ್ಯ ರಕ್ತವನ್ನು ಕುಡಿದು ಸೊಕ್ಕಿಹೋಗುವದನ್ನು ನಾವು ನೋಡುತ್ತೇವೆ. ಆದರೆ ಅಮೇರಿಕದ ಕೆಲವರ ವಿಜ್ಞಾನಿಗಳ ಅನೇಕ ಪರಿಶೋಧನೆಗಳನ್ನು ಮಾಡಿ, ಮನುಷ್ಯ ರಕ್ತಕ್ಕಿಂತಲೂ ಸೊಳ್ಳೆಗೆ ಕುದುರೆ ರಕ್ತವು ಹೆಚ್ಚು ರುಚಿಕರವಾದುದೆಂದು ಹೇಳಿದ್ದಾರೆ. ಹತ್ತಿರ ಕುದುರೆಗಳನ್ನು ಕಟ್ಟಿರುವಲ್ಲಿ, ಅವು ಮನುಷ್ಯರನ್ನು ಕಡಿಯುವ ಭಯವಿರುವದಿಲ್ಲ. ನಾಯಿ ಬೆಕ್ಕುಗಳ ರಕ್ತವು ಸೊಳ್ಳೆಗಳಿಗೆ ಅಷ್ಟು ರುಚಿಯಾಗಿರುವದಿಲ್ಲವಂತೆ. ಆದ್ದರಿಂದ ಅವುಗಳನ್ನು ಸೊಳ್ಳೆಗಳು ಕಡಿಯುವದು ಕಡಿಮೆ. ಆದರೆ ಹಂದಿಗಳ ರಕ್ತವು ಮಾತ್ರ ಈ ಸೊಳ್ಳೆಗಳಿಗೆ ಮೃಷ್ಟಾನ್ನ ಭೋಜನವಾಗಿರುವದಂತೆ. ಆದ್ದರಿಂದ ಹಂದಿಗಳಿರುವಲ್ಲಿ ಅವು ಅವನ್ನು ಬಿಟ್ಟು ಮತ್ತೆ ಯಾವದರ ರಕ್ತವನ್ನು ಹೀರಲಿಕ್ಕೆ ಹೋಗಲಾರವು!

ಬೊಜ್ಜು ಮರಣ ಕಾರಣ

ಪ್ರಪಂಚದಲ್ಲಿ ಅನೇಕ ಮಂದಿ ಬೊಜ್ಜು ಬೆಳೆಸಿಕೊಂಡವರು ಇದ್ದಾರೆ. ಶರೀರದಲ್ಲಿ ಬೆಳೆಯುವ ಬೊಜ್ಜು, ಮನುಷ್ಯನ ಸುಖದ ಒಂದು ಚಿಹ್ನವೆಂದು ಬಹು ಜನರು ತಿಳಿಕೊಳ್ಳುತ್ತಾರೆ. ಆದರೆ ವಿಜ್ಞಾನಿಗಳ ಮತ್ತು ವೈದ್ಯರ ಅಭಿಪ್ರಾಯವು ಇದಕ್ಕೆ ತೀರಾ ಭಿನ್ನವಾಗಿದೆ. ಬೊಜ್ಜು ಬೆಳೆದವರು ಏನೂ ಸುಖಿಗಳಾಗಿ ಇರುವದಿಲ್ಲ. ಸೂಕ್ಷ್ಮಕಾಯರಿಗಿಂತ ಸ್ಥೂಲಕಾಯರು ಸಾಯುವದು ಬೇಗ. ಬೊಜ್ಜು ಅನಾರೋಗ್ಯದ ಲಕ್ಷಣವಾಗಿದೆ. ಬೊಜ್ಜಿನಿಂದ ಶಕ್ತಿಯು ಬರುವದಿಲ್ಲ. ಅದರಿಂದ ಶರೀರದ ಸೌಂದರ್ಯವು ಕೆಟ್ಟುಹೋಗುತ್ತದೆ, ಶರೀರ ಬಲವೂ ಕುಂದಿರುತ್ತದೆ. ಆದ್ದರಿಂದ ಆರೋಗ್ಯರಾಗಿಯೂ ದೀರ್ಘಾಯುಗಳಾಗಿಯೂ ಇರಬೇಕಾದರೆ ಬೊಜ್ಜನ್ನು ಕರಗಿಸಿಕೊಳ್ಳುವದು ಅಗತ್ಯವೆಂದು ವಿಜ್ಞಾನಿಗಳ ಅನ್ನುತ್ತಾರೆ. ಹಿತಮಿತವಾದ ಆಹಾರವನ್ನು ಉಂಡು, ವ್ಯಾಯಾಮ, ಅಂಗಸಾಧನೆ ಮಾಡುವದರಿಂದ ಬೊಜ್ಜು ಹೋಗುವದೆಂದು ಕೆಲವರು ಅಭಿಪ್ರಾಯಪಡುವರು. ಪರಂತು ಅಂಗಸಾಧನೆಗಿಂತಲೂ ಬೊಜ್ಜನ್ನು ಕರಗಿಸಲಿಕ್ಕೆ ಆಹಾರದಲ್ಲಿ ಮಿತಿಯು ಅತಿ ಅಗತ್ಯವೆಂದು ವಿಜ್ಞಾನಿಗಳ ಹೇಳಿದ್ದಾರೆ.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಿಕೊಳ್ಳಿರಿ

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮ ಇತರ ಅಪಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ಕಾಯಂ ನಿಶ್ಚಿತ ಬೋನಸ್ ರೂ 10/
+
ಸರ್ವಸಾಧಾರಣ ಬೋನಸ್ ರೂ 11/

ಹೀಗೆ ಜುಮ್ಲಾ ರೂ 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್
ಆರ್ಗನೈಸರ್
ಪೆಂಟ್ಲೆಂಡ್ ಪೇಟೆ, ಮಂಗಳೂರು.

ಅಥವಾ

ಕೆ ಕೆ ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸ

ದಿ ಕಂಬೈನ್ಡ ಬುಕ್ಕಿಂಗ್ ಏಜನ್ಸಿ — ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾರೀಕು 8—9—1940   ತಾರೀಕು 8—9—1940

ಮೈಸೂರು

ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರ

ಪಟ್ಟಾಭಿಷೇಕ ಮಹೋತ್ಸವ!

★

ಮಂಗಳೂರಿನಿಂದ ಮೈಸೂರಿಗೆ ಸ್ಪೆಶ್ಯಲು ಸರ್ವಿಸುಗಳ ಏರ್ಪಾಡನ್ನು ಮಾಡಿರುವೆವು.

ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಕೇಳಿ ತಿಳಕೊಳ್ಳಬಹುದು—

ಮಂಗಳೂರಿನಿಂದ ಮೈಸೂರಿಗೆ ರೂಪಾಯಿ 4-8-0 ಮಾತ್ರ

JOINT MANAGERS.

The Combined Booking Agency,
MANGALORE.

The Joint Booking O
KODIALBAIL.

ಗುಣಬಾರದಿದ್ದರೆ   ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

<u>ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)</u>

ಬಹಳ ಹೆರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂತಾನ(?) ಪೂರ್ಣವಾಗಿಯೂ ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಣಿಸುತ್ತಿದ್ದು(?), ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆದು(?) ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯ ರೂ. ೬-೦-೦ [illegible]

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

U. K. BHUJANGA NAY
CLOTH COMMISSION AGE
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ದುಕಾನ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	—	
„ ದುಯಂ „ „	1—15—0	
„ ಅವ್ವಲ್ ಸುಗ್ಗಿ „		
„ ದುಯಂ „ „		—
ಅಕ್ಕಿ ಅವ್ವಲ್ ಗುಡ್ಡ „	4—12—0	4—14—0
„ ದುಯಂ „ „	4—10—0	4—10—0
„ ಅವ್ವಲ್ ಸುಗ್ಗಿ „	4—8—0	4—10—0
„ ದುಯಂ „ „	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
„ ಸಿಪ್ಪೆ ಇದ್ದದ್ದು „	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
„ ಬಿಲ್ ಕಸಂದಿ „	—	—
[illegible]	-10—0	8—10—0
[illegible] 1000ಕ್ಕೆ	4—0—0	4—0—0
[illegible]	-12—0	4—0—0
[illegible]	35—0—0	42—8—0
[illegible]	13—8—0	14—0—0

ಸ್ವದೇಶಾಭಿಮಾನಿ

ಸಂಪುಟ ೩೩] | ಶುಕ್ರವಾರ 6—9—1940 | [ಸಂಚಿಕೆ 36

The Bombay Life Assurance Company, Ltd.,
(Estd. 1908)

BATTLE OF LIFE

Fight Boldly and Nobly for a Just cause against Uncertainty of Life, of your Income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND
Chief Agents for Bombay City & Suburbs,
The Bombay Life Buildi...,
Sir Lalubhai Samaldas Road,
Gandhi Nagar, UDIPI

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಘೋಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತೂತಕಜ್ಜಿ, ಹುಳುಕಡ್ಡಿ, ಬಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಶಾ ಸಂಸ್ಥೆಯಲ್ಲಿ ದೊರೆಯುವುದು.

ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ಆಫ್ರಿಕದ ಸಮರಾಂಗಣದಲ್ಲಿ ಬ್ರಿಟಿಷ್ ಪಕ್ಷದ ಭಾರತೀಯ ಯೋಧನು ರಣ ಕಹಳೆಯನ್ನು ಊದುತ್ತಾನೆ

KANNADA ILLUSTRATED WEEKLY

ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 6—9—1940 [ಸಂಚಿಕೆ 36

The Bombay Life Assurance Company, Ltd.,
(Estd. 1908)

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ನಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ಆಫ್ರಿಕದ ಮರುಭೂಮಿಯಲ್ಲಿ ಬ್ರಿಟಿಷ್ ದಳದ ಭಾರತೀಯ ಯೋಧನು ರಣ ಕಹಳೆಯನ್ನು ಊದುತ್ತಾನೆ

KANNADA ILLUSTRATED WEEKLY

ಕುಮಾರವ್ಯಾಸ ಪ್ರಶಸ್ತಿ

[illegible] ಶ್ರೀ ನಾರಣಪ್ಪನು [illegible] ಕನ್ನಡಿಗರ [illegible] ಹೀಗೆ ಕುಮಾರವ್ಯಾಸನ [illegible] ಕವಿ [illegible] ಆತನ ಕಾಲ, ಮತಧರ್ಮ, ಕಾವ್ಯ ಶೈಲಿಗಳ ಕುರಿತು ಕನ್ನಡದ ಪ್ರಸಿದ್ಧರಾದ ಹಲವು ಮಂದಿ ವಿದ್ವಾಂಸರ, ರಸಿಕರ, ಲೇಖನಗಳನ್ನು ಒಟ್ಟುಗೂಡಿಸಿ ಈ ಬೃಹತ್ ಕೃತಿಯೊಂದನ್ನು ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದವರು ಒದಗಿಸಿಕೊಟ್ಟು, ಕನ್ನಡ ಸಾಹಿತ್ಯ ಸರಸ್ವತಿಯ ಸೇವೆ ಸಲ್ಲಿಸಿದ್ದು ಮಾತ್ರವಲ್ಲ, ಕನ್ನಡಿಗರೆಲ್ಲರ ಪ್ರಶಂಸೆಗೂ ಪಾತ್ರರಾಗಿದ್ದಾರೆ.

ಇವರಲ್ಲಿ ಪ್ರೊ| ಬಿ. ಎಂ. ಶ್ರೀಕಂಠಯ್ಯನವರ ಮುನ್ನುಡಿ ಸಹಿತ ಹದಿನೈದು ಲೇಖನಗಳಿವೆ. ಶ್ರೀ. ಗುಂಡಪ್ಪನವರ ಇಂಗ್ಲಿಷ್ ಲೇಖನದಿಂದ ಎತ್ತಿಕೊಟ್ಟ ಒಂದು ಅಭಿಪ್ರಾಯವೂ ಇದೆ. ಪ್ರೊ| ಶ್ರೀ ಕಂಠಯ್ಯನವರು ಕುಮಾರವ್ಯಾಸನ ಕುರಿತು ತನ್ನ ಮುನ್ನುಡಿಯಲ್ಲಿ ಅತ್ಯಂತ ಸ್ಫೂರ್ತಿದಾಯಕವಾಗಿ-ಕಾವ್ಯಮಯವಾಗಿ, ಹಲವು ಸೊಗಸಾದ ಮಾತುಗಳನ್ನು ಹೇಳಿದ್ದಾರೆ. ಮೊದಲ ಲೇಖನವು ಕುಮಾರವ್ಯಾಸನನ ವಿಚಾರವಾಗಿ, ಇತಿಹಾಸ ಸಂಶೋಧನಾ ಪ್ರವೀಣರಾದ ಶ್ರೀ. ಗೋವಿಂದ ಪೈಗಳ ಲೇಖನವೆಂದರೆ ಲೇಖನ ಮಹತ್ವಕ್ಕೆ ಬೇರೆ ವಿವರಣೆ ಬೇಡ. ಹಲವಾರು ಆಧಾರಗಳನ್ನಿತ್ತು ವಾದವಿವಾದಗಳನ್ನು ಮಥಿಸಿ ಕುಮಾರವ್ಯಾಸನು ಕ್ರಿ. ಶ. ೧೪ನೆಯ ಶತಮಾನದವನೆಂದು ಅವರು ನಿರ್ಧರಿಸಿದ್ದಾರೆ. ಶ್ರೀ. ಮಂ. ಅ. ದೊರೆಸ್ವಾಮಿ ಅಯ್ಯಂಗಾರರು ಕುಮಾರವ್ಯಾಸನ ಮತ ಧರ್ಮದ ಕುರಿತು ಬಹಳ ವಿಸ್ತಾರವಾದೊಂದು ಲೇಖನವನ್ನು ಬರೆದು ಅದರಲ್ಲಿ ಕುಮಾರವ್ಯಾಸನು ಜಾತಿಯಲ್ಲಿ ಬ್ರಾಹ್ಮಣನಿರಬೇಕೆಂದೂ, ಕವಿಯು ವೈಷ್ಣವನಿರಬೇಕೆಂದೂ ವಾದಿಸಿರುವರು. ಶ್ರೀ. ಕಡಂಗೋಡ್ಲು ಶಂಕರಭಟ್ಟರು ಕುಮಾರವ್ಯಾಸನ ಪ್ರತಿಭೆಯನ್ನು ತಮ್ಮ ಪ್ರತಿಭಾಸ್ಫೂರ್ತ ಕವಿದೃಷ್ಟಿಯಿಂದ ವಿಮರ್ಶಿಸಿ ಕಾವ್ಯ ರಸಿಕರಿಗೆ ಕುಮಾರವ್ಯಾಸನ ಕಾವ್ಯದಲ್ಲಿ ತಲೆದೂಗಿಸುವಂತಹ ಅಂಶಗಳಿವು ಎಂಬುದನ್ನು ಎತ್ತಿ ತೋರಿಸಿದ್ದಾರೆ. ಶ್ರೀ. ಉಗ್ರಾಣ ಮಂಗೇಶರಾಯರು ತಮ್ಮ ಪ್ರಬಂಧದಲ್ಲಿ ಕನ್ನಡ ಭಾರತವು ಪುರಾಣವಾಗಿರದೆ ಸರಸ ಕಾವ್ಯವಾಗಿದೆಯೆಂಬುದನ್ನು ತಿಳಿಸಿದ್ದಾರೆ. ಕನ್ನಡಭಾರತಕ್ಕೂ ಸಂಸ್ಕೃತಭಾರತಕ್ಕೂ ಇರುವ ಸಂಬಂಧವನ್ನು ಶ್ರೀ. ಪಾನ್ಯಂ ಸುಂದರಶಾಸ್ತ್ರಿಗಳು ಕರ್ಣಪರ್ವದ ಹೋಲಿಕೆಯೊಡನೆ ವಿಮರ್ಶಿಸಿ ಕುಮಾರವ್ಯಾಸನು ಅನುಸರಿಸಿರುವ ಹಲವು ಸ್ವಾತಂತ್ರ್ಯದ ಸಂಗತಿಗಳನ್ನು ತೋರಿಸಿದ್ದಾರೆ. ಶ್ರೀ. ಎಲ್. ಗುಂಡಪ್ಪನವರು ಪಂಪ-ನಾರಣಪ್ಪರನ್ನು ಹೋಲಿಸಿ ಇಬ್ಬರೂ ಕನ್ನಡದಲ್ಲಿ ಹೇಗೆ ವಿಶಿಷ್ಟವಾದ ಸ್ಥಾನಗಳನ್ನು ಪಡೆದಿರುವರೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ವ್ಯಾಸ, ಪಂಪ, ನಾರಣಪ್ಪ ಈ ಮೂವರ ಭಾರತಗಳಲ್ಲಿ ಚಿತ್ರಿತವಾದ ಶ್ರೀ.ಕೃಷ್ಣನ ಪಾತ್ರದ ವಿಷಯದಲ್ಲಿ ಶ್ರೀ. ಸೀ. ಯವರು ಒಂದು ಸೊಗಸಾದ ವಿಮರ್ಶಾತ್ಮಕ ಲೇಖನವನ್ನು ಬರೆದಿರುವರು. ಕುಮಾರವ್ಯಾಸನು ಚಿತ್ರಿಸಿರುವ ದ್ರೌಪದೀ ಪಾತ್ರದ ವಿಷಯವನ್ನು ಅದರ ವಿಶಿಷ್ಟಗುಣ ವರ್ಣನೆಗಳೊಡನೆ ಶ್ರೀ. ಸಿ. ಕೆ. ವೆಂಕಟರಾಮಯ್ಯನವರು ವಿವರಿಸಿದ್ದಾರೆ. [illegible] ಕರ್ಣನ ಪಾತ್ರವನ್ನು ಬರೆದು [illegible] ಶ್ರೀ. ಕೆ. ವಿ. ಪುಟ್ಟಪ್ಪನವರು [illegible] ಗದ್ಯದಲ್ಲಿ ಕುಮಾರವ್ಯಾಸನ [illegible] ಮುಂದೆ [illegible] ದ. ರಾ. ಬೇಂದ್ರೆ [illegible] ಕುಮಾರ[illegible] ಕಾವ್ಯದೋಳ್

[illegible] ಕುಮಾರವ್ಯಾಸನ ಕಾವ್ಯದಲ್ಲಿ ವಿಷ್ಣು ರಸವತ್ತಾಗಿ ಸ್ಫುರಿಸಿರುವುದೆಂಬುದನ್ನು ಶ್ರೀ. ಶಿವರಾಮ [illegible] ಹಲವು ಚಿತ್ರಗಳ ಕಡೆಗೆ ಬೆಳಕು ಚೆಲ್ಲಿದ್ದಾರೆ. ಶ್ರೀ. ಮು. ಶ್ರೀ. ತೊಣ್ಣಪಾಚಾರ್ಯರು ಕನ್ನಡ ಭಾರತದಲ್ಲಿ ರಸಸ್ವರೂಪತೆಯು ವಿಷಯವನ್ನು ಅಲಂಕಾರದ ದೃಷ್ಟಿಯಿಂದ ರಸವತ್ತಾಗಿ ವಿವೇಚಿಸಿದ್ದಾರೆ. ಶ್ರೀ. ತೀ. ನಂ. ಶ್ರೀ. ಕಂಠಯ್ಯನವರು ಕನ್ನಡ ಭಾರತದಲ್ಲಿ ಶೃಂಗಾರದ ಸನ್ನಿವೇಶಗಳ ಕುರಿತು ರಸಿಕ ಲೇಖನವೊಂದನ್ನು ಬರೆದಿದ್ದಾರೆ. ಕೊನೆಯ ಎರಡು ಪ್ರಬಂಧಗಳು ನಾರಣಪ್ಪನ ಶೈಲಿಯ ಕುರಿತು ಬರೆದವುಗಳು. ಮೊದಲನೆಯದು ಶ್ರೀ. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳಿಂದ, ಎರಡನೆಯದು ಶ್ರೀ. ಎಸ್. ವಿ. ರಂಗಣ್ಣನವರಿಂದ. ಹೀಗೆ ಕನ್ನಡದ ಹೆಸರಾಂತ ಸಾಹಿತಿಗಳ ಲೇಖನ ಸಂಕಲನದಿಂದ ಕುಮಾರವ್ಯಾಸನ ಕುರಿತು ಬರೆದ ಪ್ರಬಂಧ ಸಂಗ್ರಹ ಗ್ರಂಥವು ವಾಚನೀಯವಾಗಿದೆ. ಕುಮಾರವ್ಯಾಸನ ಕುರಿತು ಅಭಿಮಾನವುಳ್ಳವರು ಅಭ್ಯಾಸ ಮಾಡುವವರು ಅವಶ್ಯ ಓದಬೇಕಾದಷ್ಟು ಮಹತ್ವದ್ದಾಗಿಯೂ, ಸಾರವತ್ತಾಗಿಯೂ ಇದೆ.

ಪುಸ್ತಕದಲ್ಲಿ ಮೂರು ಚಿತ್ರಗಳಿವೆ. ಮೊದಲನೆಯದು ಕುಮಾರವ್ಯಾಸನಿಗೆ ಕಾವ್ಯ ಸ್ಫೂರ್ತಿಯನ್ನಿತ್ತ ಗದುಗಿನ ಶ್ರೀ. ವೀರ ನಾರಾಯಣ ಸ್ವಾಮಿಯದು. ಎರಡನೆಯದು ಈ ಗ್ರಂಥಕ್ಕಾಗಿ ಲೇಖನ ಮಾಲೆಯನ್ನು ಸಂಗ್ರಹಿಸಿ ದುಡಿದ, ದಿವಂಗತರಾದ ಟಿ. ಎಸ್. ವೆಂಕಣ್ಣಯ್ಯನವರದ್ದು. ಮೂರನೆಯದು, ಕುಮಾರವ್ಯಾಸನ ಮೇಲಿನ ಅತಿಶಯ ಭಕ್ತಿಯಿಂದ, ಆತನ ಪ್ರಶಸ್ತಿಯೊಂದನ್ನು ಮಾಡಬೇಕೆಂದು ಸಲಹೆ ಸೂಚನೆಗಳನ್ನು ಕೊಟ್ಟು, ಅದಕ್ಕಾಗಿ ಮುಂಚಿತವಾಗಿಯೇ ನೂರು ರೂಪಾಯಿಗಳ ಉದಾರ ಧನ ಸಹಾಯವನ್ನೂ ಮಾಡಿದ ದಿವಂಗತ ಪಂಜೆ ಮಂಗೇಶ ರಾಯರದು. ಈ ಗ್ರಂಥವನ್ನು ಪ್ರಕಾಶಕರು, ಲೇಖನ ಸಂಗ್ರಹ ಮಾಡಿ ಅದು ಪ್ರಕಟವಾಗುವ ಮೊದಲೇ ಕಣ್ಮರೆಯಾದ ವೆಂಕಣ್ಣಯ್ಯನವರಿಗೆ ಕಾಣಿಕೆಯಿತ್ತಿದ್ದಾರೆ. ಕುಮಾರವ್ಯಾಸನ ಕುರಿತು ಮಾಡಿದ ಅಭ್ಯಾಸಗಳ, ಕೃತಿಗಳ, ಆತನ ಪ್ರಶಸ್ತಿಯೊಂದನ್ನು ಮಾಡಬೇಕೆಂಬ ಮಹೋದ್ದೇಶ, ಅದಕ್ಕಾಗಿ ಮುಂಚಿತವಾಗಿಯೇ ಮಾಡಿದ ಉದಾರ ಧನ ಸಹಾಯ, ಇವುಗಳನ್ನೆಲ್ಲಾ ವಿಚಾರಿಸಿದರೆ, ದಕ್ಷಿಣ ಕನ್ನಡದ ಕನ್ನಡಿಗರು ಈ ಕಾರ್ಯವನ್ನು, ಕುಮಾರವ್ಯಾಸ ಪ್ರಶಸ್ತಿಯೊಂದನ್ನು ಮೊದಲೇ ಮಾಡಿ ಬಿಟ್ಟಿದ್ದರೆ, ದಿ. ಪಂಜೆ ಮಂಗೇಶರಾಯರಿಗೆ ಇಂತಹ ಕಾಣಿಕೆಯು ಸಲ್ಲುತ್ತಿತ್ತು. ಒಪ್ಪುತ್ತಿತ್ತು ಎಂದು ಅನಿಸುತ್ತದೆ. ಆದರೆ, ಪಂಜೆಯವರಿಂದ ಸ್ಫೂರ್ತಿಗೊಂಡವರು ಅವರಿಂದ ಲಾಭಗೊಂಡವರು, ಅವರ ಹುಟ್ಟೂರಿನವರು ಆದ ದಕ್ಷಿಣ ಕನ್ನಡಿಗರು ಮಾಡಬೇಕಾದ, ಮಾಡಬಯಸಿದ್ದ 'ಪಂಜೆಯವರ ಪ್ರಶಸ್ತಿ'ಯ ಕಾರ್ಯವೇ ಇನ್ನೂ ಮೂಲೆಪಾಲಾಗಿ ಹೋಗಿರುವಾಗ, 'ಕುಮಾರವ್ಯಾಸನ ಪ್ರಶಸ್ತಿ'ಯಂತಹ ವಿಚಾರಕ್ಕೆ ಅವರು ಮೈಸೂರ ಬಂಧುಗಳ ಶರಣು ಹೊಕ್ಕದ್ದು ಸರಿಯೆನ್ನಿಸುತ್ತದೆ. ಕಾಣಿಕೆಯ ವಿಷಯ ವಿಶ್ವಾಸವಲ್ಲ; ಇಬ್ಬರು ಮಹನೀಯರೂ ಕನ್ನಡಲೋಕ ಪೂಜ್ಯರು; ಅವರಿಬ್ಬರ ಆಶೆ, ಉತ್ಸಾಹ, ಕಾರ್ಯಗಳನ್ನು ಕೊನೆಗೊಳಿಸಿ ಇಂತಹ ಅಮೂಲ್ಯ ಗ್ರಂಥವೊಂದನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಮೈಸೂರು ಕರ್ನಾಟಕ ಸಂಘದವರಿಗೆ ಕನ್ನಡಿಗರೆಲ್ಲರೂ ಚಿರ ಋಣಿಗಳು.

—ಕಯ್ಯಾರ.

ಪ್ರಕಾಶಕರು: ಕರ್ನಾಟಕ ಸಂಘ, ಮಹಾರಾಜರವರ ಕಾಲೇಜ್, ಮೈಸೂರು, ಪುಟ್ಟ [illegible] ಪುಟಗಳು, ಬೆಲೆ ಎರಡು ರೂಪಾಯಿ

ತಣ್ಣಗಾದ "ಓವಲ್ಟಿನ್" ಪಾನೀಯವನ್ನು ಒಂದು ಗ್ಲಾಸ್ ತಣ್ಣಗಿನ ಹಾಲಿಗೆ ಎರಡು ಚಮಚೆಯಷ್ಟು 'ಓವಲ್ಟಿನ್'ನ್ನು ಬೆರಸಿ ಚೆನ್ನಾಗಿ ಕದಡಿಸಿ ಕೂಡಲೇ ತಯಾರಿಸಬಹುದು. ಇದರ ಗುಣವು ಮೆಚ್ಚುಗೆಯ ಪಾನೀಯ ಮಾತ್ರವಲ್ಲದೆ ದೇಹವನ್ನು ಪೋಷಿಸಿ ಬಲವನ್ನೂ ಧಾತುವನ್ನೂ ವೃದ್ಧಿ ಮಾಡುತ್ತದೆ.

ಒಂದು ಗ್ಲಾಸು ತಂಪಾದ 'ಓವಲ್ಟಿನ್'ನ್ನು ಇಂದೇ ಪರೀಕ್ಷಿಸಿರಿ. 'ಓವಲ್ಟಿನ್' ತಣ್ಣಗಾಗಿ ಯಾ ಬಿಸಿಯಾಗಿ ಸೇವಿಸಿದರೂ ಒಂದೇ ಶಕ್ತಿದಾಯಕವಾಗಿರುತ್ತದೆ. ಅದು ಪಾಕ ಮಾಡಿದ ಹುರಿದ ಬಾರ್ಲಿ, ದನದ ಹಸಿ ಹಾಲು, ಅನುಕೂಲವಾದ ಪ್ರಾಕೃತಿಕ ವಿಟಮಿನ್ (ಆಹಾರ ಸತ್ವ) ಮತ್ತು ಅನೇಕ ರಂಜಕಗಳಿಂದ ಕೂಡಿದ ಪೌಷ್ಟಿಕ ಆಹಾರವಾಗಿರುತ್ತದೆ. 'ಓವಲ್ಟಿನ್'ನೊಡನೆ ಗುಣದಲ್ಲಿಯೂ, ಪರಿಮಾಣದಲ್ಲಿಯೂ, ಬೆಲೆಯಲ್ಲಿಯೂ ಇದರ ಹೋಲಿಕೆಯ ಬೇರೆ ಪಾನೀಯಗಳೇ ಇಲ್ಲ. ಬದಲಿ ಪಾನೀಯಗಳ ಗೊಡವೆಯೇ ಬೇಡ.

'ಒವಲ್ಟಿನ್'

OVALTINE [illegible]

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗಬಲ್ಲುದು.

ವಿತರಣಾಕಾರರು: ಮೆಸರ್ಸ್ ಗ್ರೇಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್
ಕೆಥೆಸ್ ಹೋಲ್, ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್, ಮದ್ರಾಸು.
ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು. ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು. ಅವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. ನಾಲ್ಕು ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ರಾತಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/3039

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

13-9-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೩-೯-೧೯೪೦

ಜನ್ಮಸಿದ್ಧವಾದ ಹಕ್ಕನ್ನು ವಂಚಿಸಲು ಸಾಧ್ಯವಿಲ್ಲ!

ಇಂದು ಅಪ್ರಾಕೃತಿಕ ವ್ಯಕ್ತಿಯು ಜನರನ್ನು ತಮ್ಮ ವಶ ಪಡಿಸಿಕೊಂಡು ಕೆಲಸ ಮಾಡುವುದು ಸುಲಭವಾಗಿ ತೋರಬಹುದು. ಆದರೆ ಇದು ಎಂದಿಗೂ ಯೋಗ್ಯವೆನಿಸಲಿಕ್ಕಿಲ್ಲ. ಭಾರತ ಸಚಿವರಾದ ಎಮೆರಿಯವರು ಇಂದು ಕಾಂಗ್ರೆಸಿನ ವಿರುದ್ಧ ಹೋರಾಟವನ್ನೇ ಪ್ರಕಟ ಮಾಡಿದ್ದಾರೆ ಇದು ನಮಗೆ ಹೊಸ ಅನುಭವವಲ್ಲ ಹಲವು ಸಲ ಬ್ರಿಟಿಷ್ ರಾಜನೀತಿಜ್ಞರು ನಮ್ಮಲ್ಲಿ ಇದೇ ರೀತಿ ವರ್ತಿಸಿದ್ದಾರೆ ಎಲ್ಲರೂ ತಮ್ಮ ವರ್ತನೆಯ ಬಗ್ಗೆ ಮುಂದೆ ಪಶ್ಚಾತ್ತಾಪ ಪಟ್ಟಿದ್ದಾರೆ ಎಮೆರಿಯವರೂ ಅಂತಹ ಅನುಭವವನ್ನು ಪಡೆಯಬೇಕು. ಯಾವುದೇ ರಾಷ್ಟ್ರವನ್ನಾದರೂ, ಅದೇ ಹಕ್ಕನ್ನು ಬಹುಕಾಲ ಅಲ್ಲಗಳೆದು ನೋಕ ಮೋಹ: ವುದು ಸಾಧ್ಯವಿಲ್ಲ" ಹೀಗೆಂದು ಬೊಂಬಯಿಯಲ್ಲಿ ಸಾರ್ವಜನಿಕ ಭಾಷಣ ಮಾಡುತ್ತಾ ಮುಂಬಯಿಯ ಮಾಜಿ ಮಂತ್ರಿಗಳಾದ ಶ್ರೀ. ಕೆ ಎಂ. ಮುನ್ಶಿಯವರು ಹೇಳಿದರು

ಅವರ ಭಾಷಣದ ತಾತ್ಪರ್ಯ ಹೀಗಿತ್ತು

"ನಾನು ಭಾರತ ಬ್ರಿಟನ್ನುಗಳ ಸ್ನೇಹ ಸಂಬಂಧದ ವಿಷಯದಲ್ಲಿ ವಿಶ್ವಾಸವಿಟ್ಟವನು ಮತ್ತು ವಿಶ್ವಾಸವುಳ್ಳವನು. ಮಾತ್ರವಲ್ಲದೆ ವಿಚಾರಗಳೆಲ್ಲಾ ಸರಿಯಾಗಿ ಸಾಗಿದ ಪಕ್ಷದಲ್ಲಿ ಭಾರತವು ಈ ಯುದ್ಧದಲ್ಲಿ ಸೇರಬೇಕೆಂದ ನಂಬುವವನೂ ಆಗಿದ್ದೆನು ಆದರೆ ಈಗ ಆ ಆಶೆ ಅಡಗುತ್ತಾ ಬರುತ್ತವೆ ಭಾರತದ ನಿಷ್ಕಲಂಕ ಪ್ರೇಮವನ್ನು ಸಂಪಾದಿಸುವುದು ಬ್ರಿಟಿಷರ ವರ್ತನೆಯ ಮೇಲೆ ಹೊಂದಿಕೊಂಡಿತ್ತು ಆದರೆ ಬ್ರಿಟಿಷರಿಗೆ ದೌರ್ಭಾಗ್ಯದಿಂದ ಅಂತಹ ವಿಚಾರದ ಅಪೇಕ್ಷೆಯು ಹುಟ್ಟುವುದಿಲ್ಲ ಭಾರತಕ್ಕೆ ಸ್ವಾತಂತ್ರ್ಯ ಪಡೆಯಲು ಯೋಗ್ಯತೆಯಿಲ್ಲವೆಂದು ಅವರು ತಿಳಿಯುತ್ತಾರೆ ಬ್ರಿಟಿಷರ ಅಭಿಪ್ರಾಯವು ಭಾರತವು ಎಂದೆಂದೂ ಪರತಂತ್ರವೇ ಆಗಿ ಉಳಿದು ದುರ್ಬಲವಾಗಿಯೇ ಕೊಳೆಯಬೇಕೆಂದು ಇದ್ದಂತೆ ತೋರುತ್ತದೆ.

ಸರಕಾರದ ವರ್ತನೆಯ ಕುರಿತು ಮುನ್ಶಿಯವರ ಹೇಳಿಕೆ

ರಾಜಾಜಿಯವರ ಸ್ಫೂರ್ತಿಯ ಭಾಷಣ!

'ಬ್ರಿಟನು ತಾನು ತಿಳಿದೇ ಕೆಲಸಗಳನ್ನು ಮಾಡುತ್ತಿರುವಾಗ ಅದನ್ನು ತಡೆಗಟ್ಟುವವರಿಲ್ಲ. ಆದರೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ವಿಷಯದಲ್ಲಿ ಬೇರೆ ಇಲ್ಲ. ಭಾರತದ ಉದ್ದೇಶಕ್ಕೆ ಹಾನಿಕರವಾದ ಯಾವುದೇ ಕೆಲಸಕ್ಕಾದರೂ ಅದು ಸಹಾಯ ಕೊಡಲಾರದು.

'ಸಂಯುಕ್ತ ಸ್ವರಾಜ್ಯವು ಭಾರತಕ್ಕೆ ಕೊಡಲ್ಪಡುವುದೆಂದು ನಾವು ಕೇಳುತ್ತೇವೆ ಆದರೆ ಅದು ಎಲ್ಲಿದೆ? ಯಾರು ಅದನ್ನು ಕೊಟ್ಟರು? ಯಾವಾಗ? ಅಂತಹುದನ್ನು ಕೊಡಬೇಕೆಂಬ ಶುದ್ಧ ಮನಸ್ಸಾದರೂ ಎಲ್ಲಿದೆ? ಭಾರತೀಯರು ಅಧಿಕಾರದಲ್ಲಿ ಸ್ವಲ್ಪ ಭಾಗವನ್ನು ಕೊಡಬೇಕೆಂದು ಕೇಳಿದರು, ಆದರಿಂದ ಅವರು ಯುದ್ಧದಲ್ಲಿ ಹೆಚ್ಚು ಸಶಕ್ತರಾಗಿ ಸಹಕರಿಸಲು ಬಯಸಿದ್ದರು. ಆದರೆ ಅಂತಹ ರಾಜಕೀಯ ತತ್ವಕ್ಕೆ, ಜಾತೀಯತೆಯ ಅಡ್ಡಿಯ ರೂಪದಲ್ಲಿ ಉತ್ತರ ಬಂತು ಅವರು ಜಿನ್ನರ ಜಾತೀಯತೆಯ ಮಾತುಗಳನ್ನು ಅಂಗೀಕರಿಸುವಂತಿದೆ. ದೇಶದಲ್ಲೆಲ್ಲಾ ಬಂಧನಗಳು ಆಗುತ್ತಾ ಇವೆ ಸ್ನೇಹದಿಂದಿರುವ ರಾಷ್ಟ್ರವನ್ನು ತುಳಿತದಿಂದಾಳುವ ಕಾರ್ಯವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ"

ಚಕ್ರವರ್ತಿ ರಾಜಾಜಿಯವರು ಕಳೆದ ಕೆಲವು ವಾರಗಳಿಂದ ತಮಿಳು ನಾಡು ಮತ್ತು ನೆರೆಯೂರುಗಳಲ್ಲಿ ಪ್ರಚಂಡ ಪ್ರಯಾಣ ಮಾಡುತ್ತಿದ್ದಾರೆ ಅವರೊಡನೆ ಶ್ರೀ ರಮಾನಾಥನ್ ಮೊದಲಾದ ಮಾಜಿ ಮಂತ್ರಿಗಳೂ ಕಾಂಗ್ರೆಸ ಮುಖಂಡರೂ ಇರುತ್ತಾರೆ ಹೋದ ಹೋದ ಕಡೆಗಳಲ್ಲಿ ಕಾಂಗ್ರೆಸಿನ ಕೇಳಿಕೆ ಬ್ರಿಟಿಷ್ ಸರಕಾರದ ಕಾತ್ರ ಮುಂದಿನ ಸಿದ್ಧತೆಯ ವಿಷಯ ಜನತೆಗೆ ಬೋಧಿಸುತ್ತಿದ್ದಾರೆ ರಾಜಾಜಿಯವರ ಭಾಷಣಗಳ ಜನತೆಯ ಮೇಲೆ ಅದ್ಭುತ ಪರಿಣಾಮವನ್ನು ಹುಟ್ಟಿಸುತ್ತವೆ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮದ ಕುರಿತು ಜನತೆಯ ಬೆಂಬಲವನ್ನು ಈ ರೀತಿಯಲ್ಲಿ ಒಟ್ಟು ಗೂಡಿಸುತ್ತಿದ್ದಾರೆ

ಅವರು ಮೊನ್ನೆ ಮಧುರೆಯಲ್ಲಿ ಮಾಡಿದ ಭಾಷಣದ ಒಂದರ ಸಾರಾಂಶವು ಹೀಗಿತ್ತು

"ಬ್ರಿಟಿಷರು ಭಾರತೀಯರನ್ನು ಪಶುಗಳಂತೆ ತಿಳಕೊಂಡರು. ಯುದ್ಧದಲ್ಲಿ ಬ್ರಿಟಿಷರು ಹೇಳಿದಂತೆ ದುಮುಕಬೇಕೆಂದು ಅವರ ಒತ್ತಾಯ ಕಾಂಗ್ರೆಸು ಕೇಳಿದ್ದು ದೇಶದ ರಕ್ಷಣೆಯ ವಿಷಯದಲ್ಲಿ ಭಾರತೀಯರಿಗೂ ಅಧಿಕಾರವನ್ನು ಕೊಡಿರೆಂದು. ಜಗತ್ತಿನಲ್ಲಿ ಪ್ರಚಂಡ ಮಾರ್ಪಾಟು ಆಗಿರುವಾಗ, ಬ್ರಿಟನಿನಲ್ಲಿಯೇ ನೂತನ ರಾಷ್ಟ್ರೀಯ ಸರಕಾರವಾಗಿರುವಾಗ ಭಾರತದಲ್ಲಿ ಅದು ಸಲ್ಲದೆಂಬ ಮಾತನ್ನು ಹೇಳುವ ಬ್ರಿಟಿಷರ ಅಭಿಪ್ರಾಯವನ್ನು ವಿಚಾರಿಸಿದರೆ, ಅವರು ಪ್ರಜಾಪ್ರಭುತ್ವಕ್ಕಾಗಿ ಯುದ್ಧ ಮಾಡುವರೆಂಬ ಉದ್ದೇಶದ ವಿಷಯದಲ್ಲಿ ಸಂಶಯವೇ ಉಂಟಾಗುತ್ತದೆ

"ಪೂನದ ನಿರ್ಣಯಕ್ಕೆ, ಅಹಿಂಸಾವಾದಿಗಳಾದ ಗಾಂಧೀಜಿಯವರ ಅಡ್ಡಿ ಬಾರದಿರುವುದು ಬಹಳ ಹೆಚ್ಚಿನ ವಿಷಯ. ಹೀಗೆ ಕಾಂಗ್ರೆಸು ರಾಷ್ಟ್ರೀಯ ಸರಕಾರವನ್ನು ರಚಿಸಿದಲ್ಲಿ ಸಹಾಯ ಹಸ್ತವನ್ನು ಕೊಡುವುದಾಗಿ ಹೇಳಿದ್ದಕ್ಕೆ ಬ್ರಿಟನು ಮುಸ್ಲಿಮರ, ಹರಿಜನರ, ಅಲ್ಪಸಂಖ್ಯಾತರ ಆತಂಕವನ್ನು ಎತ್ತಿ ನೆವನ ಹೇಳುತ್ತಿದೆ ಮುಸ್ಲಿಂಲೀಗಿನವರೇ ಪ್ರಧಾನ ಮಂತ್ರಿಯಾಗಿ ಮಂತ್ರಿಮಂಡಳವನ್ನು ರಚಿಸಲಿ ಎಂದ ಹೇಳಿದುದಕ್ಕೂ ಉತ್ತರವಿಲ್ಲ ಹೀಗೆ ಭಾರತದ ರಾಷ್ಟ್ರೀಯ ಹಿತವನ್ನು ಬ್ರಿಟನು ಪೂರೈಸುವುದಿಲ್ಲ ಇಂದು ಮಹಾತ್ಮಾಜಿಯವರೂ ಅಶಾಂತರಾಗಿದ್ದಾರೆ. ಜನತೆಯೂ ಅಶಾಂತವಾಗಿದೆ ಮುಂದಿನ ವಿಷಯವು ಸ್ವಾತಂತ್ರ್ಯಪ್ರಾಪ್ತಿಗೆ ಕಾಂಗ್ರೆಸ ಹೋರಾಡುವುದು, ಇದು ಅದರ ಕರ್ತವ್ಯವಾಗಿದೆ ಜನರ ಭಿನ್ನಭೇದವಿಲ್ಲದೆ ಇದರಲ್ಲಿ ಸಹಕರಿಸುವರೆಂದು ನಮಗೆ ನಿಶ್ಚಯವಾಗಿ ತಿಳಿದಿದೆ'

ಎಮೆರಿಯವರ 'ನ'ಕಾರ

ಬ್ರಿಟಿಷ್ ಸರಕಾರವು ಹೊರಡಿಸಿದ ಹೇಳಿಕೆಯನ್ನು ಭಾರತದ ಮುಖಂಡರು ಅಂಗೀಕಾರ ಮಾಡದೆ ತಿರಸ್ಕರಿಸಿದ್ದಾರೋ ಎಂಬ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಕೇರಿ ಎಂಬ ಸದಸ್ಯರು ಭಾರತ ಸಚಿವರಾದ ಎಮೆರಿಯವರೊಡನೆ ಪ್ರಶ್ನೆ ಹಾಕಿದರು. ಅದಕ್ಕೆ ಉತ್ತರವಾಗಿ ಎಮೆರಿಯವರು ಕಾಂಗ್ರೆಸಿನವರು ಆ ಹೇಳಿಕೆಯನ್ನು ತಿರಸ್ಕರಿಸುವರೆಂದೂ ಮುಸ್ಲಿಂ ಲೀಗು ಸ್ವಾಗತಿಸಿದೆಯೆಂದೂ, ಬೇರೆ ಪಕ್ಷಗಳ ಅಭಿಪ್ರಾಯವು ಇದುವರೆಗೆ ಪ್ರಕಟವಾಗಲಿಲ್ಲವೆಂದೂ ಉತ್ತರವಿತ್ತರು.

ಆ ಮೇಲೆ ಸಮತಾವಾದಿ ಸದಸ್ಯರಾದ ಗಲೇಚರ್ ಎಂಬವರು ಕಾಂಗ್ರೆಸು ಭಾರತದ ರಾಜಕೀಯದಲ್ಲಿ ಮಹತ್ವದ ಸ್ಥಾನ ಪಡೆದಿರುವುದರಿಂದ ಎಮೆರಿಯವರು ಆ ವಿಷಯದಲ್ಲಿ ಹೊಸ ರೀತಿಯಿಂದ ಕಾಂಗ್ರೆಸಿನೊಡನೆ ವ್ಯವಹಾರ ಮಾಡುವರೇ ಎಂದು ಪ್ರಶ್ನಿಸಿದರು. ಅದಕ್ಕೆ ಎಮೆರಿಯವರು 'ನಕಾರ ('No) ಎಂದು ಹೇಳಿಬಿಟ್ಟರು'

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಪಿ,
P. O. Peridepi (ಬೆಳಾರು ಡಿ)

ಸ್ವದೇಶಾಭಿಮಾನಿ

[illegible] 18—9—1940

ಭಾರತ ಸಚಿವರ ನಕಾರ!

ಪಾರ್ಲಿಮೆಂಟಿನಲ್ಲಿ ಪೊಸ್ಟ್ ಭಾರತ ಸಚಿವರಾದ ಎಮೆರಿಯವರೊಡನೆ ಸದಸ್ಯರೊಬ್ಬರು, ಭಾರತದಲ್ಲಿ ಕಾಂಗ್ರೆಸು ಒಂದು ಪ್ರಧಾನ ರಾಜಕೀಯ ಪಕ್ಷವಾಗಿರುವುದರಿಂದ, ಮೊದಲಿನ ಸರಕಾರದ ಹೇಳಿಕೆಯನ್ನು ಅದು ತಿರಸ್ಕರಿಸಿದರೂ, ಮುಂದೆ ಕಾಂಗ್ರೆಸ್ಸಿನೊಡನೆ ಇನ್ನು ಹೊಸ ರೀತಿಯಲ್ಲಿ ಬ್ರಿಟಿಷ್ ಸರಕಾರವು ವ್ಯವಹರಿಸುವುದೇ ಎಂದು ಪ್ರಶ್ನೆ ಹಾಕಿದರು. ಅದಕ್ಕೆ ಭಾರತ ಸಚಿವರು ನಿಶ್ಚಯವಾಗಿ ಇಲ್ಲವೆಂಬಂತೆ 'ನಕಾರದ ಉತ್ತರವನ್ನು ಕೊಟ್ಟಿದ್ದಾರೆ. ಬ್ರಿಟಿಷ್ ಸರಕಾರವು ಇಂದಿನ ಈ ವಿಷಮ ಪರಿಸ್ಥಿತಿಯನ್ನು ಯೋಚಿಸಿಕೊಂಡು ಲೋಕಶಾಂತಿಯ ದೃಷ್ಟಿಯಿಂದ ಭಾರತದ ವಿಚಾರವಾಗಿ ನ್ಯಾಯರೀತಿಯಲ್ಲಿ ನಡೆದು ರಾಜಕೀಯ ವಾತಾವರಣವನ್ನು ನಿರ್ಮಲವಾಗಿರಿಸುವುದೆಂದು ಆಶಿಸಿದ್ದ ಹಲವರ ಆಶೆಯು ನಿರಾಶೆಯಾಗಿದೆ! ಹೀಗೆ ನಿರಾಶೆಗೊಳಿಸಿದುದು ಬ್ರಿಟಿಷ್ ಸರಕಾರದ ರಾಜಕೀಯ ನೈಪುಣ್ಯತೆಯ ವಿಷಯದಲ್ಲಿ ಕಲಂಕವಾಗಿದೆ! ಕಾಂಗ್ರೆಸು ಧುರೀಣರಾದರೂ; ಬ್ರಿಟನು ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಯೋಜನೆಗೆ ಸಿದ್ಧವಾಗದಿರುವ ವಿಷಯದಿಂದ ಬ್ರಿಟನಿನ ಪ್ರಾಮಾಣಿಕತನದಲ್ಲಿ ಸಂಶಯಗೊಳ್ಳುವಂತಾಗಿದೆ.

ಈ ಯುದ್ಧ ಕಾಲದಲ್ಲಿ ಕೆಲವು ತಿಂಗಳುಗಳಿಂದ ಪ್ರಪಂಚದ ಬೇರೆ ಬೇರೆ ಭೂಭಾಗಗಳಲ್ಲಿ ಆದ ಪ್ರಚಂಡ ಪರಿವರ್ತನೆಯನ್ನು ವಿಚಾರಿಸಿದರೆ ಯಾರಾದರೂ ದಿಗಿಲು ಪಡಬೇಕು; ಎಷ್ಟೋ ರಾಷ್ಟ್ರಗಳಲ್ಲಿ ಏನೇನೋ ಆಗಿ ಬಿಟ್ಟಿವೆ. ಯುದ್ಧ ಆರಂಭವಾಗುವ ಮೊದಲು ಇದ್ದ ಭೂಸ್ಥಿತಿಯು ರಾಜಕೀಯ ವಾತಾವರಣವು ಇಂದು ಅಳಿದಿದೆ. ತೀರಾ ಭಿನ್ನತೆಯುಂಟಾಗಿದೆ; ಪೂರಾ ವಿಪರೀತವಾಗಿದೆ. ಇದಕ್ಕೆ ಬ್ರಿಟನೂ ಅಪವಾದವಾಗಲಿಲ್ಲ. ಹಾಗೆ ಅಪವಾದವಾಗುವುದು ಪ್ರಗತಿಯ ಪಥದಲ್ಲಿರುವ ಯಾವ ರಾಷ್ಟ್ರಕ್ಕಾದರೂ ಸಾಧ್ಯವಿಲ್ಲ. ಆದರೆ ಭಾರತದ ವಿಷಯದಲ್ಲಿ ಮಾತ್ರ ಯಾವ ಬದಲಾವಣೆಯೂ ಇರದೆ, ವೈಸರಾಯರು ಹಿಂದೆ ಹೇಳಿದ ಅರ್ಥದ ಪ್ರಕಟಣೆಯನ್ನೇ ಇಂದೂ ಹೇಳುವುದು ಅತ್ಯಾಶ್ಚರ್ಯವನ್ನುಂಟುಮಾಡುತ್ತದೆ.

ಬ್ರಿಟನಿನಲ್ಲಿ ಯುದ್ಧಾರಂಭ ಕಾಲದಲ್ಲಿ ಚೆಂಬರ್ಲೈನರ ಮಂತ್ರಿಮಂಡಳವಿತ್ತು. ಜನರು [illegible] ಅನುಲಕ್ಷಿಸಿ ಅವರು ತಮ್ಮ [illegible] ರಾಜೀನಾಮೆ ಕೊಡಬೇಕಾಯಿತು; ಪ್ರಸಕ್ತದ ಮಂತ್ರಿಮಂಡಳದ ಹೊಸ ರಾಷ್ಟ್ರೀಯ ಸರಕಾರವು ಸ್ಥಾಪಿತವಾಯಿತು. ಚರ್ಚಿಲರ ಅತ್ಯಂತ ಧುರಂಧರತ್ವದಿಂದ ಬ್ರಿಟನು ನವಸ್ಫೂರ್ತಿಯನ್ನು ಹೊಂದಿತು. ಹಿಟ್ಲರನ ಪ್ರಚಂಡ ದಾಳಿಯನ್ನು ನವಶಕ್ತಿಯಿಂದ ಎದುರಿಸಿ ಇಂದು ಕಾದಾಡುತ್ತಿದೆ. ರಾಷ್ಟ್ರೀಯ ಸರಕಾರವು, ಶುದ್ಧ ರಾಷ್ಟ್ರೀಯ ಸರಕಾರವು ಬ್ರಿಟನಿನಲ್ಲಿಯೇ ಯುದ್ಧದ ವಿಷಯದಲ್ಲಿ ಅದ್ಭುತ ಸಹಾಯವನ್ನಾಗಿದೆ. ಹೀಗಿರುವಾಗ ಭಾರತದಲ್ಲಿ ಇಂತಹ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಿ ಜನತೆಯನ್ನು ನವಸ್ಫೂರ್ತಿಯಿಂದ, ಹೊಸ ಶಕ್ತಿಯಿಂದ ತುಂಬಿಸಿ ಯುದ್ಧಕ್ಕಿಳಿಸಲು ಬ್ರಿಟಿಷ್ ಸರಕಾರವು ಅಪೇಕ್ಷಿಸದಂತೆ ಕಂಡುಬರದಿರುವುದು, ಇದು ಬ್ರಿಟಿಷ್ ರಾಜನೀತಿಗೆ ನಿಜವಾಗಿಯೂ ಬಲು ದೊಡ್ಡ ಕೊರತೆಯಾಗಿದೆ.

ಇಂದು ಮುಸ್ಲಿಂ ಲೀಗಿನ ಹಾಗೂ ಇತರ ಅಲ್ಪಸಂಖ್ಯಾಕರನ್ನು ಹತ್ತಿರ ಮಾಡಿಕೊಂಡು ಭಾರತದ ರಾಜ್ಯಸೂತ್ರವನ್ನು ಬ್ರಿಟನು ನಡೆಸುವುದಾಗಿ ತಿಳಿದಂತಿದೆ. ಇದರಿಂದ ಅಪೇಕ್ಷಿತ ಫಲವು ಕೈಗೂಡುವುದೇ, ರಾಜ್ಯಸೂತ್ರವು ಯಶಸ್ವಿಯಾಗುವುದೇ ಎಂಬ ಕುರಿತು ಸಂಶಯಗೊಳ್ಳಬೇಕಾಗಿದೆ. ಕಾಂಗ್ರೆಸಿನಂತಹ ಪ್ರಬಲ ಬಹುಮತ ಪಂಗಡದ ಕೇಳಿಕೆಯನ್ನು ಮನ್ನಿಸದಿರುವುದರಿಂದ ಪರಿಣಾಮವು ಯೋಗ್ಯವಾಗುವುದೇ ಎಂದೂ ವಿಚಾರಿಸಬೇಕು. ಕಾಂಗ್ರೆಸನ್ನು ಪ್ರಧಾನವಡಿಸದೆ ಮುಸ್ಲಿಂ ಲೀಗಿನಂತಹ ಜಾತೀಯ ಪಕ್ಷಗಳನ್ನು ಪ್ರೋತ್ಸಾಹಿಸುವುದರಿಂದ, ರಾಷ್ಟ್ರದಲ್ಲಿ ಜಾತೀಯತೆಯ ಭಿನ್ನಭೇದವು ಅಳಿದು ಐಕ್ಯವಾಗಲು ಸಾಧ್ಯವುಂಟೆ? ಹೀಗೆ ವರ್ತಿಸುವುದು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯದ ಹಾದಿಯಲ್ಲಿ ಯೋಗ್ಯವೆನಿಸಬಹುದೆ? ಹೀಗೆ ಮಾಡಿದರೆ, ಬ್ರಿಟನಿಗಾದರೂ, ಇಂದಿನ ಯುದ್ಧದಲ್ಲಿ ಭಾರತದ ಸಂಪೂರ್ಣ ಬೆಂಬಲವು ದೊರಕೀತೇ? ಈ ಎಲ್ಲಾ ವಿಚಾರಗಳನ್ನು ಬ್ರಿಟನು ಮಾಡುವುದು ಅವಶ್ಯವಿದೆ. ಭಾರತ ಸಚಿವರ ನಕಾರದಿಂದ ಭಾರತದ ರಾಜಕೀಯವು ಸುಗಮವಾಗುವ ಬದಲು ವಿಪರೀತಕ್ಕಿಳಿಯುವುದೆಂಬ ಸಂಶಯವು ತಲೆಯೆತ್ತಿದೆ. ಕಾಂಗ್ರೆಸು ಧುರೀಣರು ಇನ್ನು ಮುಂದೆ ಉಳಿದ ಒಂದೇ ಮಾರ್ಗವೆಂದು, ಚಳವಳವನ್ನು ಬೋಧಿಸುತ್ತಿದ್ದಾರೆ. ತಾ॥ ೧೫ರಲ್ಲಿ ಸೇರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಏನನ್ನು ನಿರ್ಣಯಿಸುವುದೋ ನೋಡತಕ್ಕದ್ದಿದೆ. ಅಂತೂ ಕಾಂಗ್ರೆಸು ಮಂಡಲದಲ್ಲಿ ಭಾರತ ಸಚಿವರ ನಕಾರದಿಂದ ಅಸಂತುಷ್ಟಿ ನೆಲಸಿದೆಯೆಂಬುದು ನಿರ್ವಿವಾದವಾಗಿದೆ.

ಇಂತಹ ಶೋಚನೀಯ ಪರಿಸ್ಥಿತಿಯು ಒದಗಬಾರದೆಂದು ಸರ್ವರೂ ಹಾರೈಸುತ್ತಾರೆ. ಇನ್ನಾದರೂ ಬ್ರಿಟನು ಭಾರತದ, ಕಾಂಗ್ರೆಸಿನ ಕೇಳಿಕೆಯನ್ನು ಮನ್ನಣೆ ಮಾಡಬಹುದು, ಪ್ರಜೆಗಳ ಕೈಗೆ ನ್ಯಾಯವಾದ ಅಧಿಕಾರವನ್ನು ಕೊಟ್ಟು ಭಾರತದ ನೈತಿಕ ಹಾಗೂ ಇತರ ಬೆಂಬಲಗಳನ್ನು ಪಡೆಯಬಹುದು ಹೀಗೆ ಮಾಡಿ ಪ್ರಪಂಚವನ್ನೇ ನಡುಗಿಸಿ ಬಿಟ್ಟ, ಸರ್ವಾಧಿಕಾರಿ ಪ್ರಭುತ್ವಕ್ಕೆ ಎದುರಾಗಿ ಪ್ರಚಂಡ ಹೋರಾಟ ಹೂಡಿ ವಿಜಯವನ್ನು ಸಾಧಿಸಲೆಂದು ಹಾರೈಸಬೇಕಾಗಿದೆ.

ಬ್ರಿಟನು ಅಮೇರಿಕ ಒಪ್ಪಂದ

ಬ್ರಿಟನು ಮತ್ತು ಅಮೇರಿಕಗಳ ವ್ಯವಹಾರದ ಕಡೆಗೆ ಯುದ್ಧಾರಂಭವಾದ ಮೇಲೆ ಪ್ರಪಂಚದ ದೃಷ್ಟಿ ಹರಿಯುತ್ತಿದೆ. ಇತ್ತೀಚೆಗೆ ಅವುಗಳೊಳಗೆ ಆದ ಒಪ್ಪಂದದ ವಿಷಯವು ಅತ್ಯಂತ ಮಹತ್ವವಾದುದಾಗಿದೆ.

ಕೆನಡವು ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಯ ವಿಷಯದಲ್ಲಿ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಬ್ರಿಟನಿಗೆ ಸಂಕಷ್ಟವೆಲ್ಲಿಯಾದರೂ ಸಂಭವಿಸಿದರೆ ಕೆನಡವು ಯುದ್ಧರಂಗವಾಗಬೇಕು. ಕೆನಡಾಕ್ಕೆ ಅಮೇರಿಕವು ಸಹಾಯವಾಗಬ್ಬನೆನ್ನುತ್ತಿದೆ. ಇದನ್ನು ನಿರ್ಧಾರಗೊಳಿಸುವ ಸಲುವಾಗಿ ಅಮೇರಿಕ ಡಿಫೆನ್ಸ್ ಬೋರ್ಡನ್ನು ಸ್ಥಾಪಿಸಿತ್ತು. ಮತ್ತೀಚೆಗೆ ಅಲ್ಲಿನ ಕೆಲವು ನೆಲ್ದಾಣಗಳ ವಿಷಯವಾಗಿ ಈಗ ಒಪ್ಪಂದವಾಗಿದೆ.

ಈ ಒಪ್ಪಂದದಲ್ಲಿ ನ್ಯೂ ಫೌಂಡ್ ಲೇಂಡ್ ಮತ್ತು ಬರ್ಮೂಡ ವಿಮಾನ ನಿಲ್ದಾಣಗಳನ್ನು ಗೇಣಿಗೆ ಕೊಡಲು ಸಮ್ಮತಿಸಿದೆ. ಅಮೇರಿಕದಿಂದ ೫೦ ವಿಧ್ವಂಸಕಗಳನ್ನು ಬ್ರಿಟನು ಹೊಂದಿದೆ. ವೆಸ್ಟ್ ಇಂಡೀಸಿನ ನಿಲ್ದಾಣಗಳನ್ನು ಬ್ರಿಟನು ಅಮೇರಿಕಕ್ಕೆ ಒಪ್ಪಿಸಿದೆ.

ಅಮೇರಿಕದ ಜವಾಬುದಾರಿಯು ಇದರಿಂದ ಹೆಚ್ಚಿದೆ. ಇದು ಅವಶ್ಯವಾಗಿ ಆಗಬೇಕಾದ ಹೆಚ್ಚಬೇಕಾದ ಜವಾಬುದಾರಿ..ಯೆಂದನ್ನು ಅಧ್ಯಕ್ಷ ರೂಸ್‌ವೆಲ್ಟರೇ ಸಮ್ಮತಿಸಿದ್ದಾರೆ. ಹೀಗೆ ಎರಡು ರಾಷ್ಟ್ರಗಳವರು ಅನ್ಯೋನ್ಯ ಸಂಬಂಧವನ್ನು ಈ ಒಪ್ಪಂದದ ಮೂಲಕ ಬಲಪಡಿಸಿದ್ದಾರೆ. ಬ್ರಿಟನಿಗೆ ಇದರಿಂದ ಅಟ್ಲಾಂಟಿಕಿನ ರಕ್ಷಣೆಯು ಸುರಕ್ಷಿತವಾದಂತಾಗಿದೆ. ಮಾತ್ರವಲ್ಲದೆ, ನ್ಯೂಜಿಲೇಂಡ್, ಆಸ್ಟ್ರೇಲಿಯಗಳ ಭದ್ರತೆಯೂ ಒದಗಿತು. ಹಿಟ್ಲರ್ ಶಾಹಿಯ ವಿರುದ್ಧ ಹೋರಾಡಲು ಹೀಗೆ ಅಮೇರಿಕಾ ಬ್ರಿಟನು ಸಮೀಪ ಸಮೀಪ ಬರುತ್ತಿವೆ.

ಪದಚ್ಯುತನಾದ ರಾಜ

ರುಮೇನಿಯದಲ್ಲಿ ನಡೆಯುತ್ತಿರುವ ನಾಟಕದ ಒಂದು ಅಂಕವು ಅಲ್ಲಿನ ರಾಜ ಕೇರೊಲನ ಪದಚ್ಯುತಿಯಿಂದ ಕೊನೆಗೊಂಡಿತು. ಕಳೆದ ಕೆಲವು ಸಮಯಗಳಿಂದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿದ್ದಂತೆ, ರುಮೇನಿಯದಲ್ಲಿಯೂ ಹಲವು ಬದಲಾವಣೆಗಳು ಉಂಟಾದುವು. ಅದರೆಲ್ಲದರಲ್ಲಿಯೂ ರಾಜನ ಈ ಪದಚ್ಯುತಿಯು ಅತ್ಯಂತ ಮಹತ್ವದ್ದಾಗಿದೆ. ಅಯರ್ನ್‌ಗಾರ್ಡರ ಪ್ರಾಬಲ್ಯವು ರುಮೇನಿಯದಲ್ಲಿ ಪ್ರಬಲವಾಗಲು, ಅವರೆದುರು ತನ್ನ ಅಧಿಕಾರವನ್ನು ನಡೆಸಲು ಸಾಧ್ಯವಿಲ್ಲದವನಾಗಿ, ಶಕ್ತಿಹೀನನಾಗಿ, ಕೇರೊಲನು ಸಿಂಹಾಸನವನ್ನು ಬಿಟ್ಟುಕೊಟ್ಟಿರುವನು.

ರಾಜಾ ಕೇರೊಲನು ಕಳೆದ ಹತ್ತು ವರ್ಷಗಳಿಂದ ರುಮೇನಿಯದ ಆಳ್ವಿಕನಾಗಿರುವನು. ರಾಜಪಟ್ಟಕ್ಕೆ ಬರುವುದಕ್ಕಿಂತ ಮೊದಲೇ ಆತನು ಬಹಳ ಅಪಕೀರ್ತಿಗೆ ಪಾತ್ರನಾಗಿದ್ದನು; ರಾಜ್ಯ ಪದವಿಗೆ ಬಂದ ಮೇಲೂ ತನ್ನ ಧೋರಣೆಯಲ್ಲಿ ಒಂದು ನಿಶ್ಚಯವಿಲ್ಲದೆ, ನ್ಯಾಯದ ಸರಿಯಾದ ಮಾರ್ಗವಿಲ್ಲದೆ ಇಚ್ಛೆಯಂತೆ ನಡೆದನು. ಆಗ ಅಯರ್ನ್ ಗಾರ್ಡರೆಂಬ ಸಂಘದವರು ಅಲ್ಲಿ ಪ್ರಬಲರಾದರು. ಅವರನ್ನು ಹದಗೊಳಿಸಲು ಕೇರೊಲನು ಯತ್ನಿಸದಿರಲಿಲ್ಲ. ಆದರೆ ಅವನ ಪ್ರಯತ್ನ ಫಲಿಸದೆ ಹೀಗೆ ಅವನೇ ಪದವೀ ತ್ಯಾಗ ಮಾಡಬೇಕಾಗಿ ಬರತು.

ಕೇರೊಲನ ಆಡಳಿತವು ಹೋಗಿ ಅಯರ್ನ್ ಗಾರ್ಡರು ಅಧಿಕಾರಕ್ಕೇರಿದ್ದಾರೆ. ರುಮೇನಿಯದ ಜನತೆಯು, ನೀರೊಳ್ಳೆಯ ಬಾಯಿಯಿಂದ ತಪ್ಪಿಸಿ ವಿಷಸರ್ಪದ ಬಾಯಿಗೆ ಬಿದ್ದ ಕಪ್ಪೆಯಂತೆ ಆಗಿದೆ. ಆದರೆ ರುಮೇನಿಯವು ಯಾವಾಗಲೂ ಬದಲಾವಣೆಗಳನ್ನು ಕಂಡ ನಾಡು. ಅಯರ್ನ್‌ಗಾರ್ಡರ ಒಡೆತನಕ್ಕೂ ಮುಂದೆ ಒಂದು ಅವಧಿಯು ಕಾದಿದೆಯೋ ನೋಡಬೇಕಾಗಿದೆ.

ನೇಯ್ಗೆ ಕೆಲಸಗಾರರ ಮುಷ್ಕರ

ಕಳೆದ ಕೆಲವಾರಗಳಿಂದ ಮಂಗಳೂರಲ್ಲಿ ನೇಯ್ಗೆ ಕೆಲಸಗಾರರ ಮುಷ್ಕರವು ನಡೆದು ಅದರಿಂದ ಉಂಟಾದ ಅನಿಷ್ಟ ಸಂಗತಿಗಳ ವಿಷಯ ಜನತೆಗೆ ಚೆನ್ನಾಗಿ ತಿಳಿದುಬಂದಿದೆ. ಅವುಗಳನ್ನು ತಿರಿಗಿ ಹೇಳುವಷ್ಟು ಅದು ಹಿತಕರವಾಗಿರುವುದಿಲ್ಲ. ಪ್ರಕೃತ ಅಂತಹ ಮುಷ್ಕರವು ಎರಡು ಕಡೆಯವರಿಗೂ ಹಿತವಾಗಿ ಕೊನೆಗೊಂಡಿರುವ ವಿಚಾರವು ಎಲ್ಲರಿಗೂ ಅತ್ಯಂತ ಸಂತೋಷವನ್ನುಂಟುಮಾಡಿದೆ.

ಇಂತಹ ಮುಷ್ಕರವನ್ನು ಸುಸೂತ್ರವಾಗಿ ತೀರ್ಮಾನಿಸುವಲ್ಲಿ ಮುಂದಾಳಾಗಿ ಬಂದು ದುಡಿದ ನಮ್ಮ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾ. ಕೆ. ವಿಟ್ಠಲ ಶೆಟ್ಟರಿಗೆ ಸರ್ವರೂ ಅಭಿವಂದನೆಗಳನ್ನು ಸಲ್ಲಿಸಬೇಕಾಗಿದೆ. ಈ ಸಂದರ್ಭದಲ್ಲಿ ಮಾಲಿಕರ ಪರವಾಗಿಯೂ ಕೂಲಿಗಾರರ ಪರವಾಗಿಯೂ ಪ್ರತಿನಿಧಿಗಳಾಗಿ ನಿಂತು ಕೆಲಸಮಾಡಿದ, ಪಂಚಾಯಿತಿಕೆ ನಡೆಸಿ ತೀರ್ಮಾನವಿತ್ತ ಶ್ರೀಗಳಾದ ಹಮ್ಮಬ್ಬ ಸಾಹೇಬ್, ಜೆ. ಪಿ. ರೇಗೊ, ಜೆ. ಯಂ. ಸಿಕ್ವೇರಾ ಇವರಿಗೂ ಅಭಿನಂದನೆಗಳು.

ಶ್ರೀ ಡಾ ವಿಟ್ಠಲ ಶೆಟ್ಟರು ಮುಷ್ಕರದ ಸಂದರ್ಭದಲ್ಲಿ ಸೆರೆಮನೆಗೊಯ್ಯಲ್ಪಟ್ಟ ಕೆಲಸಗಾರರ ಮುಖಂಡರನ್ನು ಬಿಡುಗಡೆ ಮಾಡುವ ವಿಷಯದಲ್ಲಿಯೂ ಯತ್ನಿಸುತ್ತಿರುವರೆಂದು ತಿಳಿಯುತ್ತೇವೆ. ಈ ಪ್ರಯತ್ನದಲ್ಲಿಯೂ ಅವರು ಯಶಸ್ವಿಯಾಗುವಂತೆ ಪರಿಸ್ಥಿತಿಯು ಅನುಕೂಲವಾಗಲಿ ಎಂದು ಹಾರೈಸುತ್ತೇವೆ.

ಭಾರತ ಬ್ರಿಟನುಗಳ ಮಧುರ ಸಂಬಂಧ ಬೆಳೆಯಬೇಕು!

ಸಮಸ್ಯೆಗೊಂದು ಪರಿಹಾರ

ಲೇಖಕ: 'ನಿರೀಕ್ಷಕ'



ರಾಷ್ಟ್ರಪತಿ ಮೌಲಾನಾ ಆಜಾದರು.

ಇಂದು ಲೋಕವನ್ನು ಪಾಶವೀ ಶಕ್ತಿಯು ಮರ್ದನ ಮಾಡುತ್ತಾ ಬರುತ್ತಿರುವಾಗ, ಭಾರತ ಬ್ರಿಟನು ಗಳಂತಹ ಎರಡು ದೊಡ್ಡ ರಾಷ್ಟ್ರಗಳೊಳಗೆ–ಪ್ರಜಾಪ್ರಭುತ್ವವಾದೀ ರಾಷ್ಟ್ರಗಳೊಳಗೆ – ಮಧುರ ಸಂಬಂಧವು ಬೆಳೆಯುವುದು ಜಗದ ನವ ನಿರ್ಮಾಣಕ್ಕೆ–ಲೋಕಶಾಂತಿಗೆ ಅವಶ್ಯವಾಗಿದೆ. ಸ್ವತಂತ್ರವಾದ ಭಾರತವು, ತನ್ನ ಪ್ರಜಾಪ್ರಭುತ್ವ ತತ್ವದ ಪ್ರೇರಣೆಯ ಸಂಚಲನ ಶಕ್ತಿಯಿಂದಲೂ, ಇದುವರೆಗೆ ಬ್ರಿಟನನೊಡನೆ ಇರುವ ಬಹುಕಾಲದ ಸಂಬಂಧದ ಫಲವಾಗಿಯೂ, ಈ ಮಹಾಯುದ್ಧದಲ್ಲಿ ಬ್ರಿಟನಿಗೆ ತನ್ನ ಶಕ್ತಿಪೂರ್ಣ ಬೆಂಬಲವನ್ನು ಕೊಡುವುದು, ಈ ಉಭಯ ರಾಷ್ಟ್ರಗಳೊಳಗೆ ಸ್ನೇಹವು ಬೆಳೆಯುವುದು ಹಿಂದಿಗಿಂತಲೂ ಇಂದು ಮಹತ್ವದ ಪ್ರಯೋಜನವುಳ್ಳದ್ದಾಗಿದೆ. ಇಂದೊದಗಿರುವ ತಡೆಯು ಕಾಂಗ್ರೆಸು, ಬ್ರಿಟಿಷ್ ಪ್ರಭುತ್ವಗಳೊಳಗಿನ ವಿವಾದವು–ಈ ಸಮಸ್ಯೆಯು, ಪರಿಹಾರವಾಗದಷ್ಟು ಬೇಗ ಇಬ್ಬರಿಗೂ ಒಳ್ಳೆಯವುಂಟು. ಅದನ್ನು ಹಾರೈಸುವುದು ಉಭಯ ಜನಾಂಗದವರ ಕರ್ತವ್ಯವಾಗಿದೆ!

ಬಹುಕಾಲದಿಂದ ಕಾಂಗ್ರೆಸು ಯಾವ ಕೇಳಿಕೆಯನ್ನು ಸಾರುತ್ತಾ ಬಂದಿತ್ತೋ ಅದನ್ನು ವಿಮರ್ಶಿಸಿದವರಿಗೆ, ಮೊನ್ನೆ ವರ್ಧಾದಲ್ಲಿ ಮಾಡಿದ ವರ್ಕಿಂಗ್ ಕಮಿಟಿಯ ನಿರ್ಣಯವು ಹೆಚ್ಚು ಆಶ್ಚರ್ಯವನ್ನು ಹುಟ್ಟಿಸಲಾರದು. ಆ ನಿರ್ಣಯವು, ವೈಸರಾಯರ ಹೇಳಿಕೆಯು ರಾಷ್ಟ್ರದ ಅಪೇಕ್ಷೆಯನ್ನು ಪೂರೈಸಲಾರದು ಎಂದು ಸ್ಪಷ್ಟವಾಗಿ ತಿಳಿಸಿದೆ.

ರಾಷ್ಟ್ರದ ಕೇಳಿಕೆಯೇನು?

ವೈಸರಾಯರ ಹೇಳಿಕೆ ಮತ್ತು ಕಾಂಗ್ರೆಸಿನ ನಿರ್ಣಯಗಳೊಳಗಿರುವ ಭೇದವನ್ನು ಸಂಪೂರ್ಣ ಅರ್ಥಮಾಡಿಕೊಳ್ಳಬೇಕಾದರೆ, ಭಾರತದ ರಾಜಕೀಯವನ್ನು ಬಹಳ ಹಿಂದಿನಿಂದಲೇ ಸಿಂಹಾವಲೋಕನ ಮಾಡಬೇಕಾಗಿದೆ. ಸೂಕ್ಷ್ಮದಲ್ಲಿ ಹೇಳುವುದಾದರೂ, ಭಾರತಕ್ಕೆ ಸ್ವಾತಂತ್ರ್ಯವು ಬೇಕಾಗಿದೆಯೆಂಬ ವಿಷಯವನ್ನು ಕಾಂಗ್ರೆಸು ಶಾಸನಭಂಗ ಚಳವಳವನ್ನು ಆರಂಭಿಸಿ, ಅದನ್ನು ಯಶಸ್ವಿಯಾಗಿ ನಡೆಸಿ ಬ್ರಿಟಿಷ್ ಸರಕಾರಕ್ಕೆ ಮಾತ್ರವಲ್ಲ ಇಡೀ ಪ್ರಪಂಚಕ್ಕೇ ತಿಳಿಸಿದೆ. ಸತ್ಯಾಗ್ರಹವು ಭಾರತದ ಕೇಳಿಕೆಯಲ್ಲಿರುವ ಶಕ್ತಿ ನೀತಿಗಳನ್ನು ಸ್ಪಷ್ಟಮಾಡಿದೆ. ಪ್ರಾರಂಭದಲ್ಲಿ ಕೆಲವರಿಗೆ, ಬ್ರಿಟಿಷ್ ಸರಕಾರವನ್ನು ಕಿತ್ತುಹಾಕಿ ಸ್ವತಂತ್ರ ಸರಕಾರವನ್ನು ಸ್ಥಾಪಿಸಬೇಕೆಂದು ಭಾರತೀಯರು ಕ್ರಾಂತಿ ಮಾಡುತಿದ್ದಾರೆಂಬ ತಪ್ಪಭಿಪ್ರಾಯವಿತ್ತು; ಆದರೆ ಗಾಂಧೀಜಿಯವರು ತನ್ನ ಶಿಸ್ತಿನ, ಅಹಿಂಸೆಯ ಪ್ರಭಾವದಿಂದ ಅದಕ್ಕೆ ಸತ್ಯದ, ನೀತಿಯ ಪೂರ್ಣ ರೂಪವನ್ನು ಕೊಟ್ಟು ರಾಷ್ಟ್ರದ ಕೇಳಿಕೆಯಲ್ಲಿರುವ ಗೌರವವನ್ನು ಸ್ಪಷ್ಟಪಡಿಸಿರುವರು. ಅದರ ಫಲವಾಗಿಯೇ ಬ್ರಿಟಿಷ್ ಸರಕಾರವೂ ಕೂಡಾ ರಾಜಕೀಯ ಸುಧಾರಣೆಗಳನ್ನು ತಂದು ಭಾರತೀಯರ ಸ್ವಾತಂತ್ರ್ಯ ದಾಹವನ್ನು ತೃಪ್ತಿಪಡಿಸಲು ಮನಸ್ಸು ಮಾಡಿತು. ... ಹೊಸ ರಾಜ್ಯ ಘಟನೆಯ ... ಸುಧಾರಣೆಗಳ ಕೊನೆಯ ತೀರ್ಮಾನ. ಕಾಂಗ್ರೆಸ್ಸಾದರೂ ಅದರ ಎರಡನೆಯ ಭಾಗವಾದ ಫೆಡರೇಶನನ್ನು ಅಲ್ಲಗಳೆದು ಪ್ರಾಂತೀಯ ಸರಕಾರದ ಅಧಿಕಾರವನ್ನು ನಿರ್ವಹಿಸಿ ಕೊಂಡು ಪ್ರಗತಿಯಲ್ಲಿ ಸರಕಾರಕ್ಕೆ ಅನುಕೂಲವಾಗಿಯೇ ಮುಂದುವರಿಯುತ್ತಿತ್ತು.

ಹೊಸ ಸಮಸ್ಯೆಯುಂಟಾಯಿತು

ಮುಂದೆ ಯುರೋಪಿನಲ್ಲಿ ಪ್ರಪಂಚ ಯುದ್ಧವು ಪ್ರಾರಂಭವಾಯಿತು. ಕಾಂಗ್ರೆಸ್ಸಾದರೂ, ಪ್ರಜಾಪ್ರಭುತ್ವದಲ್ಲಿರುವ ಅಚಲ ವಿಶ್ವಾಸದ ಫಲವಾಗಿ ಬ್ರಿಟನಿಗೆ ಯುದ್ಧದಲ್ಲಿ ಸಹಕಾರವನ್ನು ಕೊಡುವ ಭರವಸೆಯಿಂದಿತ್ತು. ಆದರೆ ಬ್ರಿಟನು ಯಾವ ತತ್ವಕ್ಕಾಗಿ, ಸ್ವಾತಂತ್ರ್ಯ ರಕ್ಷಣೆಗಾಗಿ ಯುದ್ಧಕ್ಕಿಳಿಯಿತೋ, ಆ ತತ್ವವನ್ನು ಭಾರತದಲ್ಲಿಯೂ ಅನ್ವಯಿಸಿ, ರಾಷ್ಟ್ರದ ಕೇಳಿಕೆಯನ್ನು ಮನ್ನಿಸಬೇಕಾಗಿ ಕಾಂಗ್ರೆಸು ಅಪೇಕ್ಷಿಸಿತು. ಆದರೆ ಬ್ರಿಟನು ಆ ತತ್ವವನ್ನು ಭಾರತದಲ್ಲಿ ಅನ್ವಯಿಸಿ ಸ್ವಾತಂತ್ರ್ಯದ ಭರವಸೆ ಕೊಡಲು ಹಿಂದೆ ಬಿದ್ದುದರ ಕಾರಣ, (ಭಾರತ ಸಚಿವರೇ ಒಪ್ಪಿದ್ದಾರೆ!) ಕಾಂಗ್ರೆಸು, ಪ್ರಾಂತಗಳ ಮಂತ್ರಿಗಳನ್ನು ರಾಜಿನಾಮೆ ಕೊಡಬೇಕಾಗಿ ಕೇಳಿತು; ಆಗ ಭಾರತ ರಾಜಕೀಯದಲ್ಲಿ ಹೊಸ ಸಮಸ್ಯೆಯು ಉದಯವಾಯಿತು.

ಕಾಂಗ್ರೆಸು ಅಧಿಕಾರ ಪರಿತ್ಯಾಗ ಮಾಡಿದ ಮೇಲಾದರೂ, ಬ್ರಿಟನಿಗೆ ಅದು ಸ್ವಾತಂತ್ರ್ಯ ಭರವಸೆ ಕೊಟ್ಟಲ್ಲಿ ಯುದ್ಧದಲ್ಲಿ ಸಹಕರಿಸಬಹುದಾಗಿ ತಿಳಿಸಿತ್ತು. ಈ ವಿಷಯವನ್ನು ಭಾರತದ ಧುರೀಣರು ಹಲವಾರು ಪ್ರಕಟಣೆಗಳಿಂದ ಸ್ಪಷ್ಟಪಡಿಸಿದರು. ಇಂತ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಭಾರತದ ಬಿಕ್ಕಟ್ಟನ್ನು ಪರಿಹರಿಸಲು ಸಹಜವಾಗಿ, ನ್ಯಾಯವಾಗಿ ಹಿಂದಾಗಲಾರದು ಎಂದು ಎಲ್ಲರೂ ಬಗೆದಿದ್ದರು. ಕೊನೆಗೆ ವೈಸರಾಯರ ಮೊನ್ನೆಯ ಹೇಳಿಕೆ ಬಂತು; ಕಾಂಗ್ರೆಸಿನ ಕೇಳಿಕೆಯನ್ನು ನಿರಾಶೆಗೊಳಿಸಿ ಬಂತು! ಭಾರತ ಸಚಿವರೂ, ವೈಸರಾಯರ ಕೇಳಿಕೆಯನ್ನೇ ಪುಷ್ಟೀಕರಿಸಿ ಕಾಂಗ್ರೆಸಿನ ನಿರಾಶೆಯನ್ನು ಬಲಗೊಳಿಸಿದರು.

ಅಭಿಪ್ರಾಯಭೇದವೆಲ್ಲಿ?

ಈ ಸಂದರ್ಭದಲ್ಲಿ ಕಾಂಗ್ರೆಸು ಮತ್ತು ಬ್ರಿಟಿಷ್ ಸರಕಾರಗಳೊಳಗೆ ಇರುವ ಅಭಿಪ್ರಾಯ ಭೇದವೆಲ್ಲಿ ಎಂಬುದನ್ನು ವಿಚಾರಿಸಬೇಕು. ಬ್ರಿಟಿಷ್ ಸರಕಾರವಾದರೂ ಭಾರತಕ್ಕೆ ಸ್ವಯಂಭರಣವನ್ನು ಕೊಡಬೇಕೆಂದು ತಿಳಿಯುತ್ತಿದೆ. ಆದರೆ ಅದು ಹೇಳುವುದು ಬ್ರಿಟಿಷ ಸಾಮ್ರಾಜ್ಯಾಂತರ್ಗತ ಸ್ವಯಂಭರಣವು ಕೊಡಲಾಗುವುದೆಂದು. ಕಾಂಗ್ರೆಸು ಕೇಳುವುದು, ಬ್ರಿಟಿಷರ ಅಧೀನವಿರದ ಸಂಪೂರ್ಣ ಸ್ವಾತಂತ್ರ್ಯದ ರಾಜ್ಯಭರಣವನ್ನು. ಈ ಎರಡು ಅಭಿಪ್ರಾಯಗಳೊಳಗೆ ಬಹಳ ಹೆಚ್ಚಿನ ಅಂತರವಿದೆ. ಆದರೆ ನಾವು ವಿಚಾರಿಸಬೇಕಾದುದು ಈ ಅಂತರವು ಪರಿಹಾರವಾಗಲಹುದೇ ಎಂಬುದನ್ನು. ಭಾರತಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೂ ಕೂಡಾ ಅಲ್ಪ ಪ್ರಯೋಜನವನ್ನು ಕೊಡದು ಎಂಬುದು ನಿಶ್ಚಯ. ಆದರೆ ಭಾರತಕ್ಕೆ ಎಂತಹ ಸರಕಾರವಾಗಬೇಕೆಂದು ನಿಶ್ಚಯಿಸುವವರು ಬ್ರಿಟಿಷರೋ ಅಲ್ಲವೇ ಭಾರತೀಯರೋ ಎಂದು ವಿಚಾರಿಸಬೇಕಾಗಿದೆ. ಕಾಂಗ್ರೆಸು, ಮುಂದಿನ ಆಡಳಿತವು ಹೇಗಿರಬೇಕೆಂಬುದನ್ನು ಜನತೆಯು ನಿರ್ಣಯಿಸಲಿ ಎಂದು ತಿಳಿಸುತ್ತದೆ.

ಆದರೆ ಇಂತಹ ಸಂದರ್ಭದಲ್ಲಿ ಬ್ರಿಟಿಷರು ಹೇಳುವಂತೆ ಬ್ರಿಟಿಷ್ ಸರಕಾರಕ್ಕೆ ಹಲವು ಜವಾಬ್ದಾರಿಗಳು ಇವೆಯೆಂಬುದೂ ಒಂದು ವಿಚಾರವಾಗಿದೆ. ಅಲ್ಪಸಂಖ್ಯಾಕ ಸಮಸ್ಯೆಯು ಅದರಲ್ಲಿ ಅವರು ಎತ್ತಿ ತೋರಿಸುವ ಒಂದು ಆತಂಕವು. ಆದರೆ ರಾಷ್ಟ್ರದ, ಪ್ರಜಾಪ್ರಭುತ್ವ ಆಡಳಿತದ ವಿರೋಧವಾಗಿ ಅಲ್ಪಸಂಖ್ಯಾಕ ಸಮಸ್ಯೆಯನ್ನು ತಂದೊಡ್ಡುವುದು ನ್ಯಾಯವಾಗುವುದೆ?

ಅಲ್ಪಸಂಖ್ಯಾಕ ಸಮಸ್ಯೆ

ಭಾರತದ ಸಮಸ್ಯೆಗಳನ್ನು, ಸ್ವಾತಂತ್ರ್ಯದ ಮಾರ್ಗದಲ್ಲಿ ಮುಂದುವರಿಯುವ ಯತ್ನಮಾಡದೆಯೇ ತೀರ್ಮಾನಿಸುವುದು ಸಾಧ್ಯವಿಲ್ಲ. ಮುಖ್ಯವಾಗಿ ಗಮನಿಸಬೇಕಾದುದು ರಾಷ್ಟ್ರದ ಅಪೇಕ್ಷೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾಕರಿಗೆ ಯೋಗ್ಯವಾದ ಮನ್ನಣೆ ಸ್ಥಾನಗಳು ದೊರಕದೆ ಇರುವುದಿಲ್ಲ. ಮುಸ್ಲಿಂ ಲೀಗಿನವರೂ, ಇತರ ರಾಜರುಗಳೂ ಅವರ ನ್ಯಾಯವಾದ ಹಕ್ಕಿನಿಂದ ಬಹಿಷ್ಕೃತರಾಗಲಾರರು. ಆದಕಾರಣ ಇದನ್ನು ಪರಿಹರಿಸಬೇಕೆಂದು ಹೇಳುವುದಾದರೂ ಉಭಯ ಪಕ್ಷಗಳೂ ಸವಿನಯ ಒಲವು ಇದ್ದರೆ ಆಗುತ್ತಿತ್ತಲ್ಲ. ಬ್ರಿಟನು ಮೊದಲಾಗಿ ಭಾರತದ ಸ್ವಾತಂತ್ರ್ಯ ಕೇಳಿಕೆಯನ್ನು ಮನ್ನಿಸಿ ಕಾರ್ಯಗಳನ್ನು ಪ್ರಮಾಣಿಕತೆಯಿಂದ ಕೈಕೊಳ್ಳಬೇಕು. ನಿಜವಾದ ಪ್ರಜಾಪ್ರಭುತ್ವದಲ್ಲಿ, ಅಲ್ಪಸಂಖ್ಯಾಕರಿಗೆ ಮನ್ನಣೆಯಿದೆ; ನ್ಯಾಯವಿದೆ, ಆದರೆ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರುವಂತಹ ದುಶ್ಶಕ್ತಿಗಳಿಗೆ ಎಲ್ಲಿಯೂ ಎಡೆ ದೊರೆಯಲಾರದು.

ಹೀಗೆ ಉಭಯ ಪಕ್ಷದವರೂ ಸವಿನಯ ಬಂದಾಗ, ಹೊರಗಿನ ಪ್ರಜಾಪ್ರಭುತ್ವ ಶಕ್ತಿಗಳು ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಹೆಚ್ಚಿನ ಒತ್ತಾಯವನ್ನು ತಂದು ಹೆಚ್ಚು ಜಾಗೃತವಾಗಿಯೂ ಸುಸೂತ್ರವಾಗಿಯೂ ಕಾರ್ಯಗಳನ್ನು ನಿರ್ವಹಿಸಲು ಸಹಾಯಮಾಡುವವು. ಆಗ, ಈ ಎರಡು ಮಹಾ ಪ್ರಜಾಪ್ರಭುತ್ವ ರಾಷ್ಟ್ರಗಳು ಭುಜಕ್ಕೆ ಭುಜ ಕೊಟ್ಟು ನಿಂತು, ಜಗತ್ತಿನ ಶಾಂತಿಯನ್ನು ಕೆಡಿಸಿ ಬರುವ ವ್ಯಾಸಿಸ್ಟ್ ನಾಜಿಸಂಗಳನ್ನು ಬಲಗುಂದಿಸಲು ಸಂಪೂರ್ಣ ಸಮರ್ಥವಾಗಿ ವಿಜಯಿಗಳಾಗುವವು.

ಭಾರತದ ಸಂಪೂರ್ಣ ಸ್ವಾತಂತ್ರ್ಯ ಮಾತ್ರವಲ್ಲ, ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಸಂಯುಕ್ತ ರಾಜ್ಯಘಟನೆಯಂತಹ ಉದಾತ್ತ ವಿಚಾರವನ್ನು ಮಾಡುತ್ತಿರುವ ಭಾರತದ ಧುರೀಣರಿಗೆ ಬರಿಯ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೆಂಬೀ ಪದದ ಉಪಯೋಗವು ಏನೂ ತೃಪ್ತಿಯನ್ನು ಕೊಡಲಾರದು.

ವೈಸರಾಯರಾದ ಲಿನ್‌ಲಿತ್‌ಗೋರು

ಹಿಟ್ಲರನ ಉನ್ಮತ್ತ ಭಾಷಣ!

ಬ್ರಿಟನು ಭಗ್ನವಾಗುವುದಂತೆ!

ಬ್ರಿಟಿಷರು ಹಡಗುಗಳ್ಳರಂತೆ

[ಜರ್ಮ]ನಿಯ ನೀತಿಯಿಂದ ಲೋಕೋದ್ಧಾರವಂತೆ!

ತಾ. ೪ರಂದು ಹಿಟ್ಲರನು ಒಂದು ಮಹತ್ವದ ಭಾಷಣವನ್ನು ಮಾಡಿದನು. ಅದರಲ್ಲಿ ತನ್ನ ಮುಂದಿನ ಕಾರ್ಯನೀತಿಗಳನ್ನು ತಿಳಿಸಿದನು. ಬ್ರಿಟನನ್ನು ಬಿಡದೇ ಮುತ್ತಿಗೆ ಹಾಕುವುದಾಗಿ ಬೆದರಿಸಿದನು. ಬ್ರಿಟನಿನ ಧೋರಣೆಯಿಂದ ಲೋಕಕ್ಕೆ ಅಪಾಯವುಂಟೆಂದು ಸಾರಿದನು. ಜರ್ಮನಿಯ ನೀತಿಯು ಲೋಕದ ಉದ್ಧಾರಕ್ಕಾಗಿದೆಯೆಂದು ಬೊಬ್ಬಿಟ್ಟನು. ಯುರೋಪು ಖಂಡದ ಕೊನೆಯ ದ್ವೀಪವಾದ ಬ್ರಿಟನು ಕೆಡೆದು ಬೀಳುವುದಾಗಿ ಆಡಂಬರ ಮಾಡಿದನು.

ಅವನ ಭಾಷಣದ ಸಾರಾಂಶ ಹೀಗಿತ್ತು:-

ಇನ್ನೊಂದು ಜನಾಂಗವನ್ನು ಶಿಕ್ಷಿಸಲು ವಂಥ ಹೂಡುವುದನ್ನು ಸಹಿಸುವವರು ಯಾರು? ಆದಕಾರಣ ಇದರ ತೀರ್ಮಾನವಾಗುವ ವರೆಗೆ ನಾನು ಯುದ್ಧ ಮಾಡುವೆನು.

"ಬ್ರಿಟಿಷ್ ವೈಮಾನಿಕರು, ಇರುಳಿನಲ್ಲಿ ಕಳಿಯುದಂತೆ ದಾಳಿ ಮಾಡುವರು. ಹಗಲಲ್ಲಿ ದಾಳಿಯಿಡಲು ಅವರಿಗೆ ಸಾಮರ್ಥ್ಯವಿಲ್ಲ. ಶಾಂತರಾದ ನಾಗರಿಕರ ಮೇಲೆ ದೀನ ಜನರ ಮೇಲೆ ಅವರು ಬಾಂಬೆಸೆಯುವರು. ಮೂರು ತಿಂಗಳ ತನಕ ನಾನಿದಕ್ಕೆ ಸುಮ್ಮನಿದ್ದೆ. ಇದರಿಂದ ಅವರೂ ಸುಮ್ಮನಿರುವರೆಂದು ಭಾವಿಸಿದೆ. ಆದರೆ ಜರ್ಮನರು ಹೇಡಿಗಳೆಂದು ಇದರಿಂದ ಚರ್ಚಿಲರು ಭಾವಿಸಿಕೊಂಡರು.

"ಇತರ ಅನೇಕ ರಾಷ್ಟ್ರಗಳೊಡನೆ ಫ್ರಾನ್ಸೂ ತಲೆಬಾಗಿದೆ. ಈ ಕುರಿತು ಬ್ರಿಟನು ಏನು ಹೇಳುವುದು? ಬ್ರಿಟನಿನ ಸೈನ್ಯವನ್ನು ಒಂದೇ ಕಡೆಯಲ್ಲಿ ಒಟ್ಟು ಸೇರಿಸಲು ಈಗ ಸಾಧ್ಯವಾಯಿತ್ತೆಂದೆ? ಅವರಿಗೂ ಅದೇ ಬೇಕಾಯಿತು; ಮೊದಲನೆಯ ಹೊಡೆತವನ್ನು ಫ್ರಾನ್ಸು ಸಹಿಸಿ, ಬ್ರಿಟನನ್ನು ಸಿದ್ಧವಾಗಿರುವಂತೆ ಅದು ಮಾಡಿತು.

"ಬ್ರಿಟಿಷರು ಹೇಳುವರು, ಜರ್ಮನರು ಬ್ರಿಟನನ್ನು ಎಂದು ಆಕ್ರಮಿಸುವರೆಂದು? ಇದಕ್ಕೆ ನಮ್ಮ ಉತ್ತರವಿದು.- "ಸಮಾಧಾನದಿಂದಿರಿ; ನಾವು ಬೇಗನೇ ಬರಲಿದ್ದೇವೆ."

"ಜಗತ್ತಿಗೆ ಆಗ ಬಿಡುಗಡೆಯಾಗುವುದು. ಇಡೀ ಖಂಡವನ್ನು ಬಂಧನದಲ್ಲಿಡಲು ಒಂದು ಜನಾಂಗವು ಯತ್ನಮಾಡುತ್ತದೆ. ಈ ಅನ್ಯಾಯವನ್ನು ಕೊನೆಗಾಣಿಸಬೇಕು, ಆ ಜನಾಂಗವನ್ನು ಸದೆಬಡಿಯಬೇಕು. ತಮ್ಮ ಇಷ್ಟದಂತೆ ನಡೆದು, ೪೫ ಕೋಟಿ ಜನರನ್ನು ದುಃಖದಲ್ಲಿ ನರಳಿಸಿದ ಹಡಗುಗಳ್ಳರ ರಾಜ್ಯಕ್ಕೆ ಮುಂದೆ ಅದು ಸಾಧ್ಯವಾಗದಂತೆ ಮಾಡಬೇಕು. ತಮ್ಮ ದರ್ಪದಿಂದ ಒಂದು ಜನಾಂಗವು ಆದಕಾರಣ ಜರ್ಮನರೂ ರಾತ್ರಿಯ ಕಾಲದಲ್ಲಿ ದಾಳಿ ನಡೆಸುವರು.

"ಈ ರಾತ್ರಿ ಹಡಗುಗಳ್ಳರ ಸಾಮರ್ಥ್ಯವನ್ನು ನಾವು ನಿಲ್ಲಿಸುವೆವು. ನಮ್ಮಿಬ್ಬರಲ್ಲಿ ಯಾರಾದರೊಬ್ಬರು ನಾಶವಾಗುವ ದಿನವೊಂದು ಬರುವುದು. ಹಾಗೆ ನಾಶವಾಗುವುದು ಜರ್ಮನಿಯಲ್ಲ. ಈಗ ಉಳಿದಿರುವ, ನಮ್ಮ ಶತ್ರು, ಯೂರೋಪಿನ ಕೊನೆಯದ್ವೀಪವಾದ ಬ್ರಿಟನು ಖಂಡಿತ ನಿರ್ನಾಮವಾಗುವುದು.

"ಬ್ರಿಟನು ಜರ್ಮನರನ್ನು ಪ್ರಬಲವಾಗಿ ದ್ವೇಷಿಸುವುದು. ನಾವು ಸಾಮಾಜಿಕ ನೀತಿಯಿಂದ, ಮುಂದಾಗಿ ಹಂಚಿಕೆ ಮಾಡಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ನಮ್ಮ ಮೇಲೆ ಹಾಗೆ ದ್ವೇಷ; ಇದರಿಂದ ನಿಶ್ಚಯ ಅವರಿಗೆ ಬಹಳ ಅಪಾಯವಾಗಲಿದೆ. ನಮ್ಮ ನೀತಿಯು ಗೆಲುವುದರಿಂದಲೇ ಜಗತ್ತಿಗೆ ಸುಖವಿದೆ; ಉದ್ಧಾರವಿದೆ; ನಮ್ಮ ನೀತಿಯು ಯಾವ ರಾಷ್ಟ್ರಕ್ಕೆ ಒಗ್ಗುವುದಿಲ್ಲವೋ ಆ ರಾಷ್ಟ್ರವು ಒಂದಲ್ಲದಿದ್ದರೆ ಒಂದು ದಿನ ಭಗ್ನವಾಗಲೇ ಬೇಕು. ಇದು ನನ್ನ ನಿಶ್ಚಿತ ನಿರ್ಣಯವಾಗಿದೆ"

About Ourselves

For a long time it has been our policy to concentrate largely on loans on the security of jewellery and gold. For this we were criticized and even laughed at. Well-meaning friends advised us that we should give up mere pawn-broking and money-lending and devote ourselves to "real" banking.

But to-day all our friends are congratulating us because in a war-stricken world of ever-shifting values gold has remained a stable commodity.

RESOURCES OF A CRORE. Estd: 1906 CANARA BANK, LIMITED.

THE Canara Banking Corporation Ltd., (INCORPORATED IN BRITISH INDIA) Estd: 1906

THREE YEAR'S CASH CERTIFICATES

bearing interest at 4% p. a. in denominations of

Rs. 50/-, 100/-, 500/-, 1,000 -& 5,000 -

are now issued at all our Branches

For particulars call at or write to

Any of our nearest Branches

ಎಂಡ್ರೂಸ್ ಲಿವರ್ ಸೋಲ್ಟ್

ANDREWS Liver Salt



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ

'ಕುಮುದ, ಕುಮುದ ಒಂದಿಷ್ಟು ನೀರು ಕೊಡವ್ವಾ' ಎಂದು ರಾಧಮ್ಮನು ಹಾಸಿಗೆಯಲ್ಲಿ ಹೊರಳಾಡುತ್ತಾ ಹೇಳಿದರು.

ಮಧ್ಯಾಹ್ನದ ಸಮಯವಾಗಿತ್ತು. ಹತ್ತಿರದಲ್ಲಿ ಕುಳಿತು ಓದುತ್ತಿದ್ದ ಕುಮುದೆಳು ಎದ್ದು ಬಂದು ತಾಯಿಗೆ ನೀರು ಕೊಟ್ಟಳು. ಅಷ್ಟರಲ್ಲಿ ಹೊರಗೆ ಯಾರೋ ಗೇಟು ತೆರೆದಂತಾಯಿತು. ಕುಮುದಳು ಹೊರಗೆ ಬಂದು ನೋಡುವಲ್ಲಿ ಆಕೆಯ ಅಕ್ಕನ ಗಂಡ ಗೋಪಾಲನು ಒಳಗೆ ಬರುತ್ತಿದ್ದನು. ಕುಮುದಳು ಒಳಗೆ ಹೋಗಿ ಆ ಸಮಾಚಾರವನ್ನು ತಾಯಿಗೆ ತಿಳಿಸಿದಳು.

'ಹೋಗು ಮಗು, ಅವನನ್ನು ಒಳಗೆ ಕರೆದುಕೊಂಡು ಬಾ' ರಾಧಮ್ಮ ಹೇಳಿದರು. ಕುಮುದಳು 'ಸರಿ' ...

'ಹೀಗೆ ನೀನು ಅವನೆದುರಿಗೆ ಹೋಗಲಿಕ್ಕೆ ನಾಚಿಕೆಪಟ್ಟರೆ ಶಾಲೆಯಲ್ಲಿ ಮಕ್ಕಳಿಗೆ ಹೇಗೆ ಕಲಿಸುತ್ತೀಯೋ?' ಅವನೇನು ಹೊಸಬನಲ್ಲ. ಸಣ್ಣವಳಾಗಿರುವಾಗ ನೀನು ಅವನೊಡನೆ ಆಟವಾಡುತ್ತಾ ಇದ್ದಿ. ... ಟ್ರೇನ್ ಕಲಿತು ಉಪಾಧ್ಯಾಯಿನಿಯಾದ ಕೂಡಲೇ ನೀನು ದೊಡ್ಡವಳಾಗಿ ಹೋಗಲಿಲ್ಲ. ಹೋಗು, ಎಷ್ಟು ಹೊತ್ತು ನಿಂತಿರುವನೋ?' ಎಂದ ರಾಧಮ್ಮನ ಕುಮುದಳನ್ನು ಒತ್ತಾಯ ಪಡಿಸಿದರು. ಕುಮುದಳು ಹೊರಗೆ ಬಂದು ಭಾವನಿಗೆ ನಮಸ್ಕರಿಸಿ ಒಳಗೆ ಕರೆದುಕೊಂಡು ಬಂದು ತಾಯಿಯ ಬಳಿಯಲ್ಲಿ ಕುಳಿತಳು. ಕ್ಷೇಮಸಮಾಚಾರ ಕೇಳಿ ಆದ ಕೂಡಲೆ ಕುಮುದಳು ಎದ್ದು ಅತಿಥಿ ಸತ್ಕಾರ ಮಾಡಲಿಕ್ಕೆ ಒಳಗೆ ಹೋದಳು. ... ಒಳಗೆ ಒಂದರ ... ತಾಯಿಯೊಳಗೆ ಸಂಭಾಷಣೆಯಾಗುವುದು ಅವಳಿಗೆ ಕೇಳಿ ಬಂತು.

'ನೋಡು ಮಗು, ಈ ... ಅವರು ನನ್ನನ್ನು ಬಿಟ್ಟು ... ದುವೆ ಮಾಡಿದರೂ ನನಗಷ್ಟು ಬೇಸರ ತೋರಲಿಲ್ಲ. ಕುಮುದಳಿಗೆ ಸಿಕ್ಕುವ ಇಪ್ಪತ್ತು ರೂಪಾಯಿ ಸಂಬಳದಿಂದ ನಾವಿಬ್ಬರೂ ಹೇಗೂ ದಿನ ಕಳೆಯುತ್ತಿದ್ದೆವು. ಎಳೆಟು ದಿನಗಳ ಹಿಂದೆ ಯಾರೋ ನಾನು ಅವರನ್ನು ಬೈಯುತ್ತೇನೆಂದು ಚಾಡಿ ಹೇಳಿದ್ದರಿಂದ ಕುಮುದಳ ತಂದೆಯವರು ಎಂದು ನನ್ನನ್ನು ಬೆನ್ನು ಮುರಿಯುವ ತನಕ ಹೊಡೆದು ಹೋದರು. ಇಷ್ಟೆಲ್ಲಾ ಅಪಮಾನವಾದ ಮೇಲೆ ಬದುಕುವುದಕ್ಕಿಂತ ಸಾಯುವುದೇ ಲೇಸು. ಆದರೆ ಕುಮುದಳನ್ನು ಮದುವೆ ಮಾಡಿಕೊಟ್ಟಲ್ಲಿ ನಾನು ಸುಖದಿಂದ ಸಾಯುತ್ತಿದ್ದೆ.'

'ನಾವೆಲ್ಲರೂ ಇರುವಾಗ ನೀವು ಹೀಗೆ ಅಧೈರ್ಯಪಟ್ಟಲ್ಲಿ ನಾವಿದ್ದು ಫಲವೇನು? ಕುಮುದಳ ವಿಷಯ ನೀವೇನೂ ಯೋಚನೆ ಪಡುವುದು ಬೇಡ. ನನಗೂ ಶಾರದೆಗೂ, ಯಾವಾಗಲೂ ಕುಮುದಳ ಯೋಚನೆ. ನಾನು ಆದಷ್ಟು ಬೇಗ ಯೋಗ್ಯವರನನ್ನು ನೋಡಿ ನಿಮಗೆ ತಿಳಿಸುತ್ತೇನೆ. ಪಕ್ಕದ ಬೀದಿ ನೆಂಟಸ್ತಿಕೆ ಸಿಕ್ಕದಿದ್ದಲ್ಲಿ ನನ್ನ ತಮ್ಮ ಮಾಧವನಿದ್ದಾನೆ. ಅವನಿಗೇನೆ ಕುಮುದಳನ್ನು ಕೊಟ್ಟರೆ

ಈ ವಾರದ ಕಥೆ:

ಬಡವರ ಹುಡುಗಿ!

[ಬರೆದವರು: ಶ್ರೀಮತಿ ಲೀಲಾಬಾಯಿ ಕಾಮತ್, ಉಡುಪಿ]

ಹಾಲಿನಲ್ಲಿ ಸಕ್ಕರೆ ಬೆರಸಿದ ಹಾಗಾಯಿತು' ಹೀಗೆ ಗೋಪಾಲನು ಅತ್ತೆಯನ್ನು ಸಮಾಧಾನಪಡಿಸಿದನು.

ಎರಡು ದಿನಗಳಿದ್ದು ಗೋಪಾಲನು ಊರಿಗೆ ಹೋದನು. ಹದಿನೈದು ದಿನಗಳಾದವು. ತಾಯಿ ಮಗಳಿಬ್ಬರೂ ಅವನ ಪತ್ರ ನಿರೀಕ್ಷಿಸುತ್ತಾ ಇದ್ದರು. ಕಡೆಗೆ ಒಂದು ದಿನ ಅವರಿಗೆ ಪತ್ರವೊಂದು ಬಂತು. ನಡುಗುವ ಕೈಯಿಂದ ಕುಮುದಳು ಅದನ್ನು ಒಡೆದು ನೋಡಿದಳು. ಪತ್ರದಲ್ಲಿ ಹೀಗಿತ್ತು -

ನಾನು ನನ್ನ ತಂದೆಯೊಡನೆ ಮಾಧವನಿಗೆ ಕುಮುದಳನ್ನು ತರುವ ವಿಷಯ ಹೇಳಿದಾಗ ಅವರು ಕೋಪದಿಂದ ಕಿಡಿಕಿಡಿಯಾದರು. 'ನಿನಗೆ ಬಡವರ ಹುಡುಗಿಯನ್ನು ತಂದು ನಾವು ಪಟ್ಟ ಕಷ್ಟ ಸಾಕು. ವರದಕ್ಷಿಣೆ ಕಪ್ಪ, ನೆಂಟರಿಷ್ಟರಿಗೆ ಉಡುಗೊರೆ ಉಚಿತ ಏನೂ ಕೊಡಲಿಲ್ಲ. ಅದೂ ಸಾಲದೆ ಇನ್ನೊಬ್ಬನಿಗೂ ಹಾಗೆ ಮಾಡಬೇಕೆಂದು ಎಣಿಸುವಿಯಾ?' ಎಂದಿಗೂ ಆಗಲಿಕ್ಕಿಲ್ಲ. ಮಗನನ್ನು ವಿಲಾಯತಿಗೆ ಕಳುಹಿಸುವ ನೆಂಟಸ್ತಿಕೆಬಂದಲ್ಲಿ ಮಾತ್ರ ಮಾಧವನಿಗೆ ಮದುವೆ ಮಾಡುವೆನು. ಬಡವರ ಹುಡುಗಿಯನ್ನು ಎಂದಿಗೂ ತರಲಿಕ್ಕಿಲ್ಲ ಹೀಗೆಂದು ಹೇಳಿದರು.'

ಇದನ್ನು ಕೇಳಿ 'ಹಾ ದೈವವೇ' ನನ್ನ ಆಶೆಯನ್ನು ನಿರಾಶೆ ಮಾಡಿದೆಯಾ?' ಎಂದು ಹೇಳಿ ರಾಧಮ್ಮನು ಪ್ರಜ್ಞೆ ತಪ್ಪಿ ಹಾಸಿಗೆಯ ಮೇಲೆ ಬಿದ್ದುಬಿಟ್ಟರು.

ದಿನಗಳು ಕಳೆದಂತೆ ರಾಧಮ್ಮನ ಸ್ಥಿತಿ ಕೆಡುತ್ತಾ ಬಂತು. ಕುಮುದಳಾದರೊ ಅವಳನ್ನು ಸಮಾಧಾನಪಡಿಸಿ ಒಳ್ಳೇ ರೀತಿಯಿಂದ ಆರೈಕೆ ನೋಡುತ್ತಿದ್ದಳು. ಆದರೂ ಬಂಡೆಕಲ್ಲಿನ ಮೇಲೆ ನೀರು ಹೊಯ್ದಂತೆ ರಾಧಮ್ಮನ ಸ್ಥಿತಿಯಾಗಿತ್ತು. ಕಡೆಗೊಂದು ದಿನ ಬಡವರ ಮಕ್ಕಳು ಏನಪರಾಧ ಮಾಡಿದ್ದಾರೆಂದು ಪರಮಾತ್ಮನ ಕೂಡೆ ನ್ಯಾಯ ಕೇಳಲಿಕ್ಕೆ ರಾಧಮ್ಮ ಹೊರಟೇ ಹೋದರು.

ತಾಯಿ ಸತ್ತ ದುಃಖವನ್ನು ಮರೆಯಲು ಕುಮುದಳು ತನ್ನ ಶಾಲೆಯ ಕೆಲಸಕ್ಕೆ ಹೆಚ್ಚು ಗಮನ ಕೊಡುತ್ತಾ ಬಂದಳು. ಅಸಹಾಯ ಸ್ಥಿತಿಯಲ್ಲಿರುವ ಇವಳನ್ನು ಹೇಗಾದರೂ ಮಾಡಿ ಶೀಲಭ್ರಷ್ಟಳನ್ನಾಗಿ ಮಾಡಬೇಕೆಂದು ಅನೇಕರು ಪ್ರಯತ್ನಿಸಿದರು. ಆದರೆ ಅವರ ಬೇಳೆ ಬೇಯಲಿಲ್ಲ. ಇದನ್ನು ನೋಡಿ ಆ ದುಷ್ಟರು ಇಡೀ ಊರಿನಲ್ಲಿ ಅನೇಕ ಕೆಟ್ಟ ಸುದ್ದಿಗಳನ್ನು ಹರಡಿಸಿದರು. 'ಎಳೆ ಪ್ರಾಯದ ಹುಡುಗಿ, ಒಬ್ಬಳೇ ಮನೆಯಲ್ಲಿ ಇದ್ದಾಳೆ. ಏನು ಮಾಡಿದರೂ ಕೇಳುವವರ್‍ಯಾರು? ಇಂಥಾ ಶೀಲಭ್ರಷ್ಟಳಾದವಳು ಕಲಿಸುವ ಶಾಲೆಗೆ ನಿಮ್ಮ ಹೆಮ್ಮಕ್ಕಳನ್ನು ಹೇಗೆ ಕಳುಹಿಸುತ್ತೀರಿ?' ಇತ್ಯಾದಿ, ಇತ್ಯಾದಿ.

ಈ ಸುದ್ದಿ ಕುಮುದಳ ತಂದೆಯ ಕಿವಿಯಲ್ಲಿ ಕೂಡಾ ಬಿತ್ತು. ಅವನೂ ಕುಮುದಳನ್ನು ಬೈಯಲಿಕ್ಕೆ ಸುರುಮಾಡಿದನು. ಇದನ್ನೆಲ್ಲಾ ನೋಡಿ ಕುಮುದೆಯ ಧೈರ್ಯವು ತಣ್ಣಗಾಯಿತು. ಏನು ಮಾಡಲಿಕ್ಕೂ ತೋಚದೆ ಅವಳು ತನ್ನ ಭಾವ ಗೋಪಾಲನಿಗೆ ಪತ್ರ ಬರೆದಳು. ನಾಲ್ಕೈದು ದಿನಗಳೊಳಗೆ ಅವಳಿಗೆ ಪತ್ರದ ಪ್ರತ್ಯುತ್ತರ ಬಂತು. ಅದು ಮಾಧವನದಾಗಿತ್ತು. 'ನೀನು ವ್ಯರ್ಥವಾಗಿ ಅಕ್ಕನಿಗೆ, ಭಾವನಿಗೆ ಪತ್ರ ಬರೆಯಬೇಡ. ಮದುವೆಮಾಡಿಕೊಳ್ಳುವವನು ನಾನು, ನಿನ್ನ ಭಾವನಲ್ಲ. ಹಿರಿಯರು ಒತ್ತಾಯಪಡಿಸಿ ಮದುವೆ ಮಾಡುವ ದಿನಗಳು ಕಳೆದವು. ನಾನು ಬಡವರ ಹುಡುಗಿಯನ್ನು ಮದುವೆಮಾಡಿಕೊಳ್ಳುವಷ್ಟು ಅಭಾಗ್ಯವಂತನಲ್ಲ. ಬೇಕೆಂದು ನನ್ನ ಮೇಲೆ ಆಶೆ ಇಟ್ಟುಕೊಳ್ಳಬೇಡ. ಇದೆ ನನ್ನ ಕೊನೆಯ ಉತ್ತರ. ಇತಿ,

'ಮಾಧವ'

ಪತ್ರವನ್ನು ಓದಿ ಕುಮುದಳಿಗೆ ದಿಕ್ಕು ತೋಚದಂತಾಯಿತು. ಕುಮುದಳ ಕಣ್ಣಿನಿಂದ ನೀರಿನ ಪ್ರವಾಹವು ಹರಿಯತೊಡಗಿತು. ಅವಳ ಬಾಯಿಯಿಂದ ಈ ಮಾತುಗಳು ಹೊರಟವು 'ಬಡವರ ಹುಡುಗಿಯರ ಜೀವನವು ಶಾಪರೂಪವಾಗಿದೆ. ಅದರಲ್ಲೂ ಅವಳು ಸೌಂದರ್ಯವತಿಯಾದಲ್ಲಿ ಕೇಳುವುದೇ ಬೇಡ! ದೇವರೇ ಈ ಶಾಪದಿಂದ ಬಡವರ ಮಕ್ಕಳನ್ನು ಯಾವಾಗ ಉದ್ಧರಿಸುವೆ?'

ಕತ್ತಲಾಗುತ್ತ ಬಂತು. ಕುಮುದಳು ಕುಳಿತಲ್ಲೇ ಇದ್ದಳು. ಬಂಧುಬಾಂಧವರಿದ್ದೂ ಅವಳು ಅನಾಥಳಾಗಿದ್ದಳು. ಅವಳಿಗೆ ದುಷ್ಟರಿಂದ ತನ್ನ ಶೀಲವನ್ನು ಕಾಪಾಡುವುದೂ ಕಷ್ಟವಾಗಿ ತೋರಿತು. ಏನು ಮಾಡಲಿ? ಎಲ್ಲಿಗೆ ಹೋಗಲಿ? ಎಂಬ ಚಿಂತೆಯು ಅವಳನ್ನು ಆವರಿಸಿತು. 'ಧೈರ್ಯಗೆಡಬೇಡ, ಶೀಲ ಬಿಡಬೇಡ. ನಿನ್ನನ್ನು ಕಾಯುವವನು ನಾನಿದ್ದೇನೆ' ಎಂಬ ಅವ್ಯಕ್ತವಾಣಿಯೊಂದು ಅವಳಿಗೆ ತನ್ನ ಹೃದಯದಿಂದ ಕೇಳಿಬಂತು.

ಮರುದಿನ ಬೆಳಗಾಯಿತು. ಕುಮುದಳ ಮನೆಯ ಬಾಗಿಲು ತೆರೆದಿತ್ತು. ಆದರೆ ಕುಮುದಳು ಅಲ್ಲಿ ಇರಲಿಲ್ಲ. ಇಡೀ ಊರಿನಲ್ಲಿ ಏನೇನೋ ಸುದ್ದಿ ಹಬ್ಬಿಹೋಯಿತು. ಬೇಕಾದವರು ಬೇಕಾದ ಹಾಗೆ ಮಾತಾಡಿದರು.

★

'... ಹೇಳಿದರು ...?'

ಮುಸಲಿನಿಯ ದೃಷ್ಟಿ ಪೂರ್ವರಾಷ್ಟ್ರಗಳ ಕಡೆಗೆ ತಿರುಗಿದೆಯೆ?

ಆಫ್ರಿಕಾ ಯುದ್ಧದ ಚಲನವಲನಗಳು

ಹಿಟ್ಲರ್ ಪೋಲೆಂಡನ್ನು ಆಕ್ರಮಿಸಿ ಯೂರೋಪಿನಲ್ಲಿ ರಣಭೇರಿ ಹೊಡೆದ. ಆತನ ದುರಭಿಲಾಷೆಯು ಬರೀ ಡಾನ್ಜಿಗನ್ನು ಆಕ್ರಮಿಸುವುದು ಮಾತ್ರವಲ್ಲ, ಜರ್ಮನಿಯ ಒಡೆತನವನ್ನು ಅಖಿಲ ಯೂರೋಪಿನಲ್ಲಿ ಸ್ಥಾಪಿಸುವಂತಹುದೇ ಆಗಿದೆಯೆಂಬುದನ್ನು ಇಂದು ಎಲ್ಲರೂ ಬಲ್ಲರು. ಮುಸಲನಿಯಾದರೂ ಆತನಿಗಿಂತ ಕಡಿಮೆ ಸ್ವಾರ್ಥದವನಲ್ಲ. ಆದರೆ ಯೂರೋಪಿನಲ್ಲಿ ತನ್ನ ಆಟವನ್ನು ಅಷ್ಟೊಂದು ನಡೆಸಲು ಸಾಧ್ಯವಿಲ್ಲದೆ ಆತನು ಪೂರ್ವದ ರಾಷ್ಟ್ರಗಳ ಕಡೆಗೆ ಕಣ್ತಿರುಗಿಸಿರುವನೇ ಎಂಬ ಬಲವಂತವಾದ ಸಂಶಯವು ಇಂದು ಜಗತ್ತಿನ ಗಮನಕ್ಕೆ ಬಂದಿದೆ. ಆಫ್ರಿಕದ ಯುದ್ಧದಿಂದ ರಣರಂಗವು ಭಾರತಕ್ಕೂ ಸಮೀಪದ ಪ್ರದೇಶಕ್ಕೆ ಬಂದಂತಾಗಿದೆ. ಹಾಗಾಗಿ ಮುಸಲನಿಯ ಮಹತ್ವಾಕಾಂಕ್ಷೆಯೇನಿರಬಹುದೆಂಬ ವಿಚಾರವನ್ನು ಈ ಸಂದರ್ಭದಲ್ಲಿ ವಿಮರ್ಶಿಸುವುದು ಪ್ರಸ್ತುತವಾಗಿದೆ.

ಆಫ್ರಿಕದ ಯುದ್ಧವು ಅಷ್ಟೊಂದು ಮಹತ್ವದ ಸುದ್ದಿಯಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ; ಏಕೆಂದರೆ ಬ್ರಿಟನು ಜರ್ಮನಿಗಳೊಳಗೆ ನಡೆಯುವ ಮಹಾಯುದ್ಧದ ಒಂದು ಅಂಗವಾಗಿಯೇ ಅದು ನಡೆದು ಎಲ್ಲರೂ ಲಂಡನ್ ಬರ್ಲಿನ್‌ಗಳ ವರ್ತಮಾನಕ್ಕೇ ಹೆಚ್ಚು ಗಮನವಿತ್ತಿದ್ದರು.

ಏಡನನ್ನು ಸ್ವಾಧೀನಪಡಿಸುವುದೆ?

ಇಟಲಿಯು ಆಫ್ರಿಕದಲ್ಲಿ ನಡೆಸಿದ ಯುದ್ಧಗಳನ್ನು ಸೂಕ್ಷ್ಮವಾಗಿ ಅದರ ಭೌಗೋಲಿಕ ಪರಿಸ್ಥಿತಿಗಳನ್ನು ಅಭ್ಯಾಸಿಸಿಕೊಂಡು ವಿಮರ್ಶಿಸಿದವರಿಗೆ ಅದು ಏಡನನ್ನು ಸ್ವಾಧೀನಪಡಿಸಲು ಆಶಿಸುತ್ತದೆಯೆಂಬಂಶವು ತಿಳಿದುಬರುತ್ತದೆ. ಇದಕ್ಕಾಗಿಯೇ ಏಡನಿನಲ್ಲಿರುವ ಬ್ರಿಟಿಷರ ನೌಕಾದಳ ಮತ್ತು ವಿಮಾನದಲಗಳನ್ನು ಇಟಲಿಯ ಸೈನಿಕರು ಆಕ್ರಮಿಸಿ ಉಪದ್ರವ ಕೊಡುತ್ತಿದ್ದಾರೆ. ಇದುವರೆಗೆ ಅದು ಒಂದಿಷ್ಟು ತನ್ನ ಕಾರ್ಯದಲ್ಲಿ ವಿಜಯಹೊಂದದೆ ಇರುವುದನ್ನು ಆಲೋಚಿಸಿದರೆ, ಮುಂದಕ್ಕೂ ಅದು ಈ ತನ್ನ ಕಠಿಣ ಕಾರ್ಯದಲ್ಲಿ ಯಶಸ್ವಿಯಾಗಲಾರದು ಎಂಬ ಅಂಶವೇ ಸ್ಪಷ್ಟವಾಗುತ್ತದೆ.

ಏಡನನ್ನು ಸ್ವಾಧೀನಪಡಿಸಿಕೊಳ್ಳುವ ಮಹತ್ವಾಕಾಂಕ್ಷೆಯಿರುವುದೇ ಪೂರ್ವರಾಷ್ಟ್ರಗಳ ಕಡೆಗೆ ತನ್ನ ದಾಳಿಯನ್ನು ಮುಂದುವರಿಸಬೇಕೆಂದು ಬಗೆದಿರುವ ಸೂಚನೆಯಾಗಿದೆ. ಏಡನನ್ನು ಹಿಡಿಯದಿದ್ದರೆ ತನ್ನ ಆ ಆಶೆಯ ಕುರಿತು ಆತನು ಕನಸಿಸುವುದೇ ಸಾಧ್ಯವಿಲ್ಲದಾಗಿದೆ. ಭಾರತವು ಈ ವಿಷಯದ ಕುರಿತು ಬಹಳ ಆಳವಾಗಿ ಆಲೋಚಿಸತಕ್ಕದ್ದಿದೆ. ಬ್ರಿಟನು ಯಾವುದೇ ರೀತಿಯಿಂದಲಾದರೂ ಏಡನನ್ನು ಶತ್ರುಗಳ ವಶ ಬಿಟ್ಟುಕೊಡುವವನ್ನು ದುರ್ಬಲವಾಗಿಲ್ಲವೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಭಾರತದ ಭದ್ರತೆಗೆ ಏಡನು ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ಏಡನನ್ನು ಭಾರತ ಸರಕಾರದ ರಕ್ಷಣೆಯೊಳಗೆ ಮಾಡಿಕೊಂಡ ಸಮಯದಲ್ಲಿ ಭಾರತದ ರಕ್ಷಣೆಗೆ ಏಡನು ಎಷ್ಟು ಆವಶ್ಯವಾಗಿದೆಯೆಂಬಂಶವು ಸ್ಪಷ್ಟಮಾಡಲಾಗಿದೆ.

ಬ್ರಿಟಿಷರ ಪ್ರಾಬಲ್ಯ

ಇಂದು ಮುಸಲನಿಯ ಸೈನ್ಯ ಚಲನವಲನಗಳನ್ನು ಪರೀಕ್ಷಿಸುವವರಿಗೆ, ಆತನು ಆಫ್ರಿಕದಲ್ಲಿ ಬ್ರಿಟಿಷರನ್ನು ದಿಗ್ಬಂಧನಗೊಳಿಸಲು ಯತ್ನಿಸುತ್ತಿರುವನೆಂಬಂಶವೂ ತಿಳಿಯದಿರದು. ಅದಕ್ಕೇ ಮೊಟ್ಟಮೊದಲಾಗಿ ಬ್ರಿಟಿಷ್ ಸೋಮಾಲಿಲೇಂಡ್ ಈಜಿಪ್ಟ್‌ಗಳ ಕಡೆಗೆ ಆತನ ದೃಷ್ಟಿ ಹರಿದಿರುವಂತಿದೆ. ತತ್ಕಾಲಕ್ಕೆ ಅದು ಇಟಲಿಗೆ ಅಸಾಧ್ಯ ಮಾತ್ರವೇ ಅಲ್ಲ, ಭೂಮಧ್ಯ ಸಾಗರದಲ್ಲಿ ಬ್ರಿಟನಿಗೆ ಇರುವ ಪ್ರಾಬಲ್ಯವು ಅದರ ಭದ್ರತೆಯನ್ನು ಮತ್ತಷ್ಟು ಬಲವಂತವಾಗಿ ಮಾಡಿದೆ. ಈಜಿಪ್ಟನ್ನು ಆಕ್ರಮಿಸುವಂತಹ ಮುಸಲನಿಯ ಆಶೆಯಲ್ಲಿ ಸುವೇಜ್ ಕೆನಾಲನ್ನು ಹಿಡಿಯುವ ದುರಭಿಪ್ರಾಯವೂ ಅಡಕವಾಗದೆ ಇಲ್ಲ. ಈಜಿಪ್ಟಿಗೆ ಆಕ್ರಮಣ ಮಾಡುವಂತಹುದು, ಕೈರೋಗೆ ವಿಮಾನ ಕೊಡೆಗಳಿಂದ ಬಂದಿಳಿಯುವುದರಿಂದ ಮಾತ್ರ ಸಾಧ್ಯವಿದೆ. ಬ್ರಿಟಿಷ್ ವೈಮಾನಿಕ ದಳದವರ ಅತುಲ ಶಕ್ತಿಯನ್ನು ಹೋಲಿಸಿದರೆ ಅದು ಎಷ್ಟರ ಮಟ್ಟಿಗೆ ವ್ಯರ್ಥ ಪ್ರಯತ್ನವಾಗಬಹುದೆಂಬ ವಿಚಾರವು ತಿಳಿಯದಿರದು. ಅಷ್ಟು ಮಾತ್ರವಲ್ಲದೆ ಇಟಲಿಯ ಬಲಗೈಯ್ಯಂತಿರುವ ಜರ್ಮನಿಯಾದರೂ ಇಂದು ಅದಕ್ಕೆ ಒದಗುತ್ತಿರುವ ಮಹಾನಷ್ಟಗಳನ್ನು ವಿಚಾರಿಸಿ ಈ ಸಂದರ್ಭದಲ್ಲಿ ಇಟಲಿಗೆ ಯಾವುದೇ ರೀತಿಯ ಸೈನ್ಯ ಸಹಾಯವನು ಕೊಡುವುದೂ ಸಾಧ್ಯವಿಲ್ಲ. ಸುವೇಜ್ ಕೆನಾಲನ್ನು ಹಿಡಿಯುವುದು ಕೈರೊವನ್ನು ಸ್ವಾಧೀನಪಡಿಸಿಕೊಂಡ ಮೇಲೆ ಮಾತ್ರ ಸಾಧ್ಯವಿದೆ.

ಭಾರತದ ಗಮನಕ್ಕೆ ಕಾರಣ

ಈಜಿಪ್ಟ್ ಮತ್ತು ಪೆಲಿಸ್ತೈನುಗಳ ವಿಷಯವು ಭಾರತಕ್ಕೆ ಹೆಚ್ಚಿನ ವಿಚಾರ ಕಾರಣಗಳಾಗಿವೆ. ಇವುಗಳ ಮೂಲಕ ಇಲ್ಲಿಗೆ ದಾಳಿಯಿಡುವುದು ಸಾಧ್ಯವಾಗಿದೆ. ಅಲ್ಲಿ ನಿಂತಿರುವ ಬ್ರಿಟಿಷ್ ಮತ್ತು ಭಾರತದ ಸೈನ್ಯವು ಇಟಲಿಯ ಎಂತಹ ಮಹತ್ವದ ಆಕ್ರಮಣವನ್ನಾದರೂ ತಡೆಯಲು ಇಂದು ಬಲವಂತವಾಗಿದೆ. ಅಷ್ಟುಮಾತ್ರವಲ್ಲದೆ ಅಲೆಕ್ಸಾಂಡ್ರಿಯದಲ್ಲಿರುವ ಬ್ರಿಟಿಷ್ ವೈಮಾನಿಕ ದಳವು ಇಟಲಿಗೆ ಬಲವಂತವಾದ ಪೆಟ್ಟನ್ನು ಕೊಡದೆ ಇರಲಾರದು.

ಮುಸಲನಿಯ ನಿರಾಶೆ

ಹೀಗೆ ಆಫ್ರಿಕದಲ್ಲಿ ಕಲಹವನ್ನು ಕೆರಳಿಸುವ ಮುಸಲನಿಯ ಕಾರ್ಯಗಳನ್ನು ಪರಿಶೀಲಿಸಿದರೆ ಆತನಿಗೆ ಪೂರ್ವದ ರಾಷ್ಟ್ರಗಳ ಕಡೆಗೆ ಕಣ್ಣು ತಿರುಗಿದೆಯೆಂಬಂಶವು ತಿಳಿಯಬರುತ್ತದೆ. ಆದರೆ ಇಟಲಿಯು ಬರಿಯ ದುರಾಶೆಯನ್ನು ಮಾತ್ರ ತಳೆದಿದೆ. ಬ್ರಿಟಿಷ್ ರಕ್ಷಣೆಯೆದುರು ಇಟಲಿಯು ತನ್ನ ಗಾಳಿಗೋಪುರವನ್ನು ಕಟ್ಟಿ ಅದರಲ್ಲಿ ಒಕ್ಕಲಾಗುವ ಆಶೆ ಮಾಡುವುದು ಸಾಧ್ಯವಿಲ್ಲ.

THE

BANK OF MANGALORE LTD.,

MANGALORE.

ESTD 1931

Branches—

Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	6¼%

Interest Payable Quarterly.

Savings Bank deposit 3½% on daily balances.

kinds of banking business transacted

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲ್ ನಂ. 428/1937

ಸ್ಮಾಲ್ ಅಮಲ್‌ಜ್ಯಾರಿ ನಂ. 668/1940

1 ಬಿ. ಉಪೇಂದ್ರ ಪ್ರಭು ವಾದಿ ಇವರ ಮೊಕ್ತೇಸರ ...
2. ಜಿ. ರಮಾನಾಥ ಪ್ರಭು ಅನಂತ ಶೆಣೈ ... } ಅರ್ಜಿದಾರರು

ಮತ್ತು

1 ದೇಜು ಹೆಂಗ್ಸು ಮಾಟಿರ ಬೈಲು ಲಕ್ಷ್ಮಿ ಹೆಂಗ್ಸಿನ ಮಗಳು
2 ಕೊರಗ ಶೆಟ್ಟಿ 1ನೇ ಪ್ರತಿವಾದಿಯ ಮಗ ಮಂಗಳೂರು ತಾಲೂಕು ಮೂಳೂರು ಗ್ರಾಮಸ್ಥರು } ಪ್ರತಿವಾದಿಗಳು

ಸದ್ರಿ ರೆಸ್ಪಾಂಡೆಂಟರಿಗೆ—

ಸದ್ರಿ 1ನೆ ಅರ್ಜಿದಾರರು ನಿಮ್ಮ ಮೇಲೆ ಮಾಡಿದ ಸದ್ರಿ ಸ್ಮಾಲ್ ನಂ. 428/1937ನೆ ದಾವಾದಲ್ಲಿ ಆದ ಡಿಕ್ರಿ ಪ್ರಕಾರ ನಿಮ್ಮಿಂದ ಬರತಕ್ಕ ಅಸಲು ಬಡ್ಡಿ ಕೋರ್ಟು ಖರ್ಚು ವಗೈರೆ ವಸೂಲು ಮಾಡುವದಕ್ಕೆ 2ನೇ ಅರ್ಜಿದಾರರಿಗೆ ಟ್ರಾನ್ಸ್ಫರ ಮಾಡಿ ಕೊಟ್ಟಿರುತ್ತಾರೆ ಸದ್ರಿ ಟ್ರಾನ್ಸ್ಫರು ಸ್ಥಿರಪಡಿಸಬೇಕಾಗಿ ವಗೈರೆ ಅರ್ಜಿದಾರರು ಮಾಡಿದ ಸದ್ರಿ ಅಮಲ್‌ಜ್ಯಾರಿಯು ತನಿಖೆ ಬಗ್ಗೆ ತಾ. 24-9-1940ಕ್ಕೆ ಇಟ್ಟಿರುತ್ತದೆ ಆದ್ದರಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ನೀವು ಅದನ್ನು ಸದ್ರಿ ತಾರೀಕಿನಲ್ಲಿ ಹಗಲು 10 ಗಂಟೆಗೆ ಹಾಜರು ಆಗಿ ಜಾಹೀರು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ವಗೈರೆ ಹಾಜರಿನಲ್ಲಿ ಸದ್ರಿ ಅಮಲ್‌ಜ್ಯಾರಿಯು ತೀ. ಮಾಡಲಾಗುವದು.

ಮಂಗಳೂರು 31-8-1940 } B. Srinivasa Pai, Vakil for Petitioners

ಜಿಲ್ಲಾ ಸಮಾಚಾರ

ಮಂಗಳೂರು

ಹಡಗುಗಳ ಪ್ರಯಾಣ:—

ಹವಾಮಾನವು ಸರಿಯುದ್ದಲ್ಲಿ ಬರುವ ತಾ ೧೫ರ ಅವಧಿಯಲ್ಲಿ ಒಂದು ಹಡಗವು ಬೊಂಬಯಿಯಿಂದ ಬಿಟ್ಟು, ಮರ್ಮಗೋವಾ, ಕದ್ರಿ, ಕುಮಟಾ, ಕುಂದಾಪುರ ಮತ್ತು ಮಲ್ಪೆದಾರಿಯಾಗಿ ತಾ ೧೭ಕ್ಕೆ ಮಂಗಳೂರಿಗೆ ಬರುವುದಾಗಿಯೂ, ತಾ ೧೮ರ ಅವಧಿಯಲ್ಲಿ ಇಲ್ಲಿಂದ ಆ ಹಡಗು ಹೋಗುವುದಾಗಿಯೂ, ಕರಾಚಿಯಿಂದ ತಾ ೧೦ಕ್ಕೆ ಹೊರಡುವ ಹಡಗೊಂದು ಮಂಗಳೂರು ಮಾರ್ಗದ ಹಡಗನ್ನು ಬೊಂಬಯಿಯಲ್ಲಿ ಸಂಧಿಸುವುದಾಗಿಯೂ, ಮುಂದಕ್ಕೆ ವಾರಕ್ಕೊಮ್ಮೆ ಇಲ್ಲವೇ ಹತ್ತು ದಿನಗಳಿಗೊಮ್ಮೆ ಹಡಗವೊಂದು ಹೀಗೆ ಪ್ರಯಾಣ ಮಾಡಲು ಏರ್ಪಡಿಸಿರುವುದಾಗಿಯೂ ಬೋಂಬೆ ಸ್ಟೀಮ್ ನೆವಿಗೇಶನ್ ಕಂಪೆನಿಯವರು ತಿಳಿಸುತ್ತಾರೆ.

ನೇಯ್ಗೆಯವರ ಮುಷ್ಕರ ನಿಂತಿತು:— ಮಂಗಳೂರಲ್ಲಿ ನಡೆಯುತ್ತಿದ್ದ ನೇಯ್ಗೆ ಕೆಲಸಗಾರರ ಮುಷ್ಕರವು ಜಿ. ಬೋ. ಅಧ್ಯಕ್ಷರಾದ ಡಾ. ಕೆ. ವಿಟ್ಠಲ ಶೆಟ್ಟರ ಪ್ರಯತ್ನದಿಂದ ಎರಡು ಕಡೆಯವರಿಗೂ ಸಮಾಧಾನಕರವಾಗುವ ರೀತಿಯಲ್ಲಿ ತೀರ್ಮಾನವಾಯಿತು. ಮಾಲಕರ ಪರವಾಗಿ ಎಡ್ವೊಕೇಟ್ ಹಮ್ಮಬ್ಬನವರೂ, ಕೆಲಸಗಾರರ ಕಡೆಯಿಂದ ಎಡ್ವೊಕೇಟ್ ಜೆ. ಯಂ. ಸಿಕ್ವೇರರೂ ಪಂಚಾಯತಿದಾರರಾಗಿ ನೇಮಕ ಪಟ್ಟಿದ್ದರು. ಸಭಿಸೂಚಕರಾಗಿ ಶ್ರೀ ಜೆ. ಪಿ. ರೇಗೊರವರು ಆರಿಸಲ್ಪಟ್ಟರು. ಆ ತೀರ್ಮಾನದಲ್ಲಿ—ಮುಷ್ಕರ ಮಾಡಿದ ಕೆಲಸಗಾರರಿಗೆಲ್ಲಾ ಕೆಲಸ ಕೊಡಬೇಕು. ಯಾರನ್ನೂ ಹೊರಹಾಕ ಕೂಡದು, ಕೆಲವು ವಿಷಯಗಳಿಗೆ ಮಾಲಕರು ನಿಶ್ಚಯ ಮಾಡಿದ್ದುದಕ್ಕಿಂತ ಸ್ವಲ್ಪ ಹೆಚ್ಚು ಸಂಬಳ ದೊರೆಯಬೇಕು. ಇತರ ವಿಷಯಗಳಿಗೆ ಕಳೆದ ಮೇ ತಿಂಗಳಲ್ಲಿದ್ದ ಸಂಬಳವನ್ನೇ [illegible]ಯುಂ ಇಡಬೇಕು. ಮುಂದಿನ ಸಣ್ಣಪುಟ್ಟ ಭೇದ ಭಾವಗಳನ್ನು ಮಾಲಕ ಮಜೂರರೇ ಒಟ್ಟಾಗಿ ಪಂಚಾಯತಿಕೆಯ ಮೂಲಕ ತೀರಿಸಿಕೊಳ್ಳಬೇಕು; ಈಗ ಇರುವ ಕೇಸುಗಳನ್ನು, ಹಿಂತೆಗೆಯುವಂತೆಯೂ ಕೆಲಸಗಾರರ ಮುಖಂಡರನ್ನು ಬಿಡುಗಡೆ ಮಾಡುವಂತೆಯೂ ಎರಡು ಕಡೆಯವರೂ ಪ್ರಯತ್ನಿಸಬೇಕು. ಹೀಗೆ ಇದೇ ತಾ ೧ರಲ್ಲಿ ತೀರ್ಮಾನವಾಗಿ ತಾ ೨ರಲ್ಲಿ ಮಜೂರರು ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹೋಗಿದ್ದಾರೆ. ಈ ವಿವಾದವನ್ನು ಎರಡು ಕಡೆಯವರಿಗೂ ಒಪ್ಪುವಂತಹ ರೀತಿಯಲ್ಲಿ ತೀರ್ಮಾನಿಸಲು ದುಡಿದ ಡಾ. ವಿಟ್ಠಲ ಶೆಟ್ಟಿಯವರಿಗೂ ಅವರಿಗೆ ಸಹಾಯಕರಾಗಿ ಪ್ರಯತ್ನ ಮಾಡಿದ ಶ್ರೀಗಳಾದ ಜೆ. ಪಿ. ರೇಗೋ; ಅಡ್ವೊಕೇಟರುಗಳಾದ ಜೆ. ಯಂ. ಸಿಕ್ವೇರ, ಹಮ್ಮಬ್ಬ ಸಾಹೇಬ್ ಇವರುಗಳಿಗೂ ಅಭಿನಂದನೆ. ಮುಷ್ಕರದ ಸಂಬಂಧ ಸೆರೆಮನೆಯಲ್ಲಿರುವವರನ್ನು ಬಿಡುಗಡೆ ಮಾಡುವ ವಿಷಯವಾಗಿ ಡಾ. ವಿಟ್ಠಲ ಶೆಟ್ಟಿ ಪ್ರಯತ್ನಿಸುತ್ತಿರುವರೆಂದು ತಿಳಿದಿದೆ.

ವೈ. ಯಂ. ಎಸ್. ಎ:— ಸ್ಥಳೀಯ ವೈ. ಯಂ. ಎಸ್. ಎ ಸಭೆಯ ಆಶ್ರಯದಲ್ಲಿ ಕಳೆದ ಶನಿವಾರ ರಾತ್ರಿ ೯ ಘಂಟೆಗೆ ದೇ. ಭ. ನಾರಾಯಣ ಶೆಟ್ಟಿಯವರು 'ಹರಿಜನೋದ್ಧಾರ' ಎಂಬ ವಿಷಯವನ್ನೆತ್ತಿಕೊಂಡು ಭಾಷಣವಿತ್ತರು. ಹರಿಜನ ಸೇವೆಯು ಏಕೆ ಪವಿತ್ರವಾದುದು ಕಾಂಗ್ರೆಸಿನವರು ಅವರ ಉದ್ಧಾರದ ಕಾರ್ಯವನ್ನು ಕೈಕೊಂಡ ಉದ್ದೇಶ, ಮಹಾತ್ಮರು ಹರಿಜನರ ಸೇವೆಗೆ ಕೊಡುತ್ತಿರುವ ಮಹತ್ವ, ಭವಿಷ್ಯ ಭಾರತದಲ್ಲಿ ಹರಿಜನರಿಗೆ ಸಿಗಬೇಕಾದ ಸ್ಥಾನ, ಮಾನ ಹರಿಜನೋದ್ಧಾರವನ್ನು ಯಶಸ್ವಿಯಾಗಿ ಜರಗಿಸುವ ವಿಧಾನ—ಇವೇ ಮೊದಲಾದ ವಿಷಯಗಳನ್ನು ವಿವರಿಸಿ ಭಾಷಣ ಮಾಡಿದರು. ಸಂಘದ ಅಧ್ಯಕ್ಷರು ಅಗ್ರಾಸನ ವಹಿಸಿದ್ದರು.

ಪತ್ರಿಕೋದ್ಯೋಗಿಗಳು:— ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಕಳೆದ ಆದಿತ್ಯವಾರ ಡಿ. ಸಿ. ಮಿಶನ್ ಶಾಲೆಯಲ್ಲಿ ಜರುಗಿ, ಮೈಸೂರ ಮಹಾರಾಜರವರ ಪಟ್ಟಾಭಿಷಿಕ್ತರಾದ ನಿಮಿತ್ತ ಅವರನ್ನು ಅಭಿವಂದಿಸಿ ಒಂದು ಠರಾವನ್ನು ಮಾಡಿತು. ನಮ್ಮ ಜಿಲ್ಲೆಗೆ ಸದ್ಯದಲ್ಲೇ ಬರಲಿರುವ ಶ್ರೀ ಬಿ. ಜಿ. ಖೇರ್ ಮತ್ತು ಶ್ರೀ ಸತ್ಯಮೂರ್ತಿಗಳಿಗೆ ಮಾನಪತ್ರಗಳನ್ನೀವ ಯತ್ನಮಾಡಬೇಕೆಂದೂ, ಪತ್ರಿಕೋದ್ಯೋಗಕ್ಕೆ ಸಂಬಂಧಿಸಿದ ಚಿಕ್ಕ ಭಂಡಾರವೊಂದನ್ನು ತೆರೆಯಬೇಕೆಂದೂ ನಿಶ್ಚಯಿಸಲ್ಪಟ್ಟಿತು.

ಶ್ರೀ ಆರ್. ಯಂ. ಸವೂರ್: ಕೊಯಂಬುತ್ತೂರು ಸರ್ಕಲಿನ ಶಾಲಾ ಡಿವಿಜನಲ್ ಇನ್ಸ್‌ಪೆಕ್ಟರರಾದ ಶ್ರೀ. ಆರ್. ಯಂ. ಸವೂರ್‌ರವರನ್ನು ಜಿಲ್ಲಾ ಟೀಚರ್ಸ್ ಗಿಲ್ಡಿನ 'ಟೀಚರ್ಸ್ ಕೌನ್ಸಿಲ್'ನವರು, ಕೆನರಾ ಹೈಸ್ಕೂಲಿನಲ್ಲಿ ಕಳೆದ ಆದಿತ್ಯವಾರ ಉಪಹಾರ ಸತ್ಕಾರವಿತ್ತು ಮನ್ನಿಸಿದರು. ಈ ಸಂದರ್ಭದಲ್ಲಿ ನಾಲ್ಕನೇ ಫಾರ್ಮಿನಲ್ಲಿ ಆರಂಭವಾಗಲಿರುವ ದ್ವಿದಳ ಪದ್ಧತಿಯ ವಿದ್ಯಾಭ್ಯಾಸ' (ವೊಕೇಶನಲ್ ಮತ್ತು ಪ್ರಿವೊಕೇಶನಲ್) ದ ವಿಚಾರ ಹಾಗೂ ಪ್ರಾಕೃತದ ಗ್ರಾಂಟು ಹಂಚುವಿಕೆಯ ಕಾನೂನುಗಳಿಂದಾಗಿ ಎಲಿಮೆಂಟರಿ ಶಾಲೆಗಳಿಗಾದ ಕಷ್ಟಗಳ ಕುರಿತಾದ ಚರ್ಚೆ ನಡೆಯಿತು.

ಲೇಬರ್ ಅಡ್ವೈಸರಿ ಕಮಿಟಿ

ಜಿಲ್ಲಾ ಲೇಬರ್ ಅಡ್ವೈಸರಿ ಕಮಿಟಿಗೆ, ಆಗೋಸ್ತು ೨೭ನೇ ತಾರೀಕಿನಿಂದ ಒಂದು ವರ್ಷದ ತನಕ ಶ್ರೀಗಳಾದ ಕೆ. ಈಶ್ವರ, ಯು. ಗೋವಿಂದ ರಾವ್, ಯು. ರಾಮಚಂದ್ರ, ಕೆ. ಕೃಷ್ಣ ಮತ್ತು ಡಾ. ಎಚ್. ವಿ. ಅಡಪ ಇವರು ಸದಸ್ಯರಾಗಿ ಸರಕಾರದಿಂದ ನೇಮಿಸಲ್ಪಟ್ಟಿ

ಡಿ. ಸಿ. ಮಿಶನ್

ಡಿ. ಸಿ. ಮಿಶನಿನ ಮಹಾಸಭೆಯು, ಕಳೆದ ಆದಿತ್ಯವಾರ ಡಿ. ಸಿ. ಮಿಶನ್ ಶಾಲೆಯಲ್ಲಿ ಡಾ. ಅಡಪರ ಅಧ್ಯಕ್ಷತೆಯಲ್ಲಿ ಜರುಗಿತು. ವಾರ್ಷಿಕ ವರದಿ ಮತ್ತು ಶೋಧಕ ಲೆಕ್ಕಪತ್ರಗಳು ಸ್ವೀಕೃತವಾದುವು. ಬಜೆಟ್ ಪಾಸಾಯಿತು.

ಕಾಸರಗೋಡು

ಮರಿಯುಂ ಬೀಬಿ ಶಮ್ನಾಡ್ ಮೆಟರ್ನಿಟಿ ವಾರ್ಡ್— ಖಾನ್ ಬಹದೂರ್ ಮಹಮ್ಮದ್ ಶಮ್ನಾಡ್ ಸಾಹೇಬರವರು ತನ್ನ ಮೃತ ಪತ್ನೀ ಸುಶೀಲೆಯಾದ ಮರಿಯುಂ ಬೀಬಿ ಶಮ್ನಾಡ್ ಎಂಬವರ ಸ್ಮರಣಾರ್ಥವಾಗಿ ಕಾಸರಗೋಡು ಗವರ್ನ್‌ಮೆಂಟ್ ಆಸ್ಪತ್ರೆಯ ಸಮೀಪ ಕಟ್ಟಿಸಿರುವ ಮೆಟರ್ನಿಟಿ ವಾರ್ಡಿನ ಪ್ರವೇಶ ಸಮಾರಂಭವನ್ನು ಮದ್ರಾಸ್ ಗವರ್ನರರವರ ಮುಖ್ಯ ಎಡ್ವೈಸರರಾದ ಜಿ. ಟಿ. ಬೋಗ್ ದೊರೆಗಳವರು ಈ ದಿನ ನಡೆಸುವರೆಂದು ತಿಳಿಯುತ್ತದೆ.

ಹರಿಜನರ ಮೇಲೆ ಬಲಾತ್ಕಾರ:- ಆಪಾದಿತನ ದಸ್ತಗಿರಿ:— ಕಂಬಳೆ ಸರ್ಕಲಿನ ಕೂಲಿಯಾಳುಗಳನ್ನು ಒದಗಿಸಿಕೊಡುವ ಒಬ್ಬ ಮೇಸ್ತ್ರಿಯು ಸುಮಾರು ೧೫ ವರ್ಷದ ಒಬ್ಬ ಹರಿಜನ ಬಾಲಕನನ್ನು ಸ್ವಲ್ಪ ಹಣ ಆತನಿಂದ ಬರತಕ್ಕದ್ದಿದೆಯೆಂಬ ನೆವನದಿಂದ, ಬಲಾತ್ಕಾರ ಪೂರ್ವಕವಾಗಿ ಬಸ್ಸಿನಲ್ಲಿ ಹತ್ತಿಸಿ ಘಟ್ಟಕ್ಕೆ ಕೊಂಡು ಹೋದ ವರ್ತಮಾನ ತಿಳಿದು, ಇದೇ ಸರ್ಕಲಿನ ಹರಿಜನ ಸೇವಕರಾದ ಶ್ರೀ ಬಿ. ದೇವಪ್ಪ ಆಳ್ವರೂ, ಡಿ. ಬೋ. ಸದಸ್ಯರಾದ ಶ್ರೀ ಸುಂದರನವರೂ ವಿಚಾರಿಸಿ ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಾ ಸಂಘದ ಮುಖಾಂತರ ಕಲೆಕ್ಟರ ದೊರೆಗಳವರಿಗೆ ಬರಕೊಂಡಲ್ಲಿ ಸದ್ರಿ ಆಪಾದಿತನು ದಸ್ತಗಿರಿ ಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟು ತಾ ೧೩ಕ್ಕೆ ಪುತ್ತೂರು ಡಿವಿಜನಲ್ ಆಫೀಸರರ ಮುಂದೆ ವಿಚಾರಣೆ ಮಾಡಲಿರುವುದೆಂದು ಬಾತ್ಮಿ.

ಕಾರ್ಕಳ

ಉಚ್ಚ ಪರೀಕ್ಷೆಗಳಿಗೆ ಕೇಂದ್ರ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಬರುವ ನವಂಬರ ತಿಂಗಳ ಪ್ರವೇಶಿಕ ಮತ್ತು ವಿಶಾರದ ಪರೀಕ್ಷೆಗಳಿಗೂ ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಪ್ರಾರಂಭಿಕ ಪರೀಕ್ಷೆಗಳಿಗೂ ಕಾರ್ಕಳವು ಒಂದು ಕೇಂದ್ರವಾಗಿದೆ ಎಂದೂ ಈ ಕೇಂದ್ರದಿಂದ ಆ ಪರೀಕ್ಷೆಗಳನ್ನು ಕೊಡಲಿಚ್ಛಿಸುವ ಹಿಂದೀ ಭಾಷಾಭ್ಯಾಸಿಗಳು ಈ ತಿಂಗಳ ಅಂತ್ಯದೊಳಗಾಗಿ ಶುಲ್ಕಸಮೇತವಾದ ಆವೇದನ ಪತ್ರಗಳನ್ನು ಕೆಮ್ಮೊಡನೆ ಕಳುಹಿಸಿಕೊಟ್ಟರಾದರೆ ಮುಂದಿನ ವ್ಯವಸ್ಥೆ ಮಾಡಲಾಗುವದೆಂದೂ ಸ್ಥಳೀಯ ಹಿಂದಿ ಪ್ರಚಾರಕ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಉಪಾಧ್ಯಾಯರ ಸಭೆ:— ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ ೭-೯-೪೦ರ ದಿನ ಶ್ರೀ ಬಿ. ವಿ. ರಮಣರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಭಾಸ್ಕರ ರಾಯರು ಸಾಧ್ಯಕ್ಕ ಶಿಕ್ಷಣಕ್ಕೆ ಬೇಕಾದ ಸಾಧನಗಳು ಎಂಬ ಕುರಿತು ಭಾಷಣವನ್ನು, ಶ್ರೀ ಜೆರೋಮ್ ಪಾಲಾರವರು ಮೂರನೆ ದರ್ಜೆಗೆ ಸ್ಥಳೀಯ ಚರಿತ್ರೆಯ ಪಾಠವನ್ನು ಕೊಟ್ಟರು. ಪ್ರಾಥಮಿಕ ಶಿಕ್ಷಣದ ಸಂಬಂಧ ಸರಕಾರದ ಕಾರ್ಯಧೋರಣ ಮತ್ತು ಉಪಾಧ್ಯಾಯರ ಕರ್ತವ್ಯ ಗುರಿಗಳ ಕುರಿತು ಅಧ್ಯಕ್ಷರು ಸೊಗಸಾದ ಭಾಷಣವನ್ನು ಕೊಟ್ಟರು.

ಮದ್ರಾಡಿ:— ಗ್ರಾಮ ಕಾಂಗ್ರೆಸ್ ಕಮಿಟಿ ಸಪ್ಟಂಬರ ತಾ ೧ನೇ ಸಾಯಂಕಾಲ ಶ್ರೀ. ಎಂ. ನಾಥಿರಾಜ ಕಕ್ಕೂರರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರಗಿ ವೈಸರಾಯಿಗಳ ಹೇಳಿಕೆಯ ನಿಷೇಧ ದಿನಾಚರಣೆಯನ್ನು ಆಚರಿಸಲಾಯಿತು.

ಉಡುಪಿ

ಹರಿಜನ ಕೊರಗರಿಗೆ ಅನ್ನದಾನ ಮತ್ತು ಶ್ರೀ ಕೃಷ್ಣನಿಗೆ ಹೂವಿನ ಪೂಜೆ ಸೇವೆ:— ಪರ್ಯಾಯ ಶ್ರೀ ಅದ್ಮಾರ್ ಮಠದ ಶ್ರೀ ವಿಬುಧ ಮಾನ್ಯ ತೀರ್ಥ ಸ್ವಾಮಿಗಳವರು ತಮ್ಮ ೧೯ನೇ ಜನ್ಮದಿನ ಸಮಾರಂಭದ ಸಲುವಾಗಿ ಕಳೆದ ಸೋಮವಾರ ಹರಿಜನ ಕೊರಗರಿಗೆ ಅನ್ನಪಾಯಸಾದಿಗಳನ್ನು ದಾನಮಾಡಿಸಿದರು. ಅಂದು ರಾತ್ರಿ ಶ್ರೀ ಕೃಷ್ಣನಿಗೆ ಹೂವಿನ ಪೂಜೆಯನ್ನು ಸಹ ಸಲ್ಲಿಸಿದರು.

[೧೧ನೆಯ ಪುಟಕ್ಕೆ ಮುಂದುವರಿದಿದೆ]

NOTICE

In the Court of the District Munsif of Mangalore

S. E. A. No. 319 of 1940
in
S. C. S. No. 896 of 1939

Between

1. M. Vittal Nayak (Plaintiff's assignee)
2. Yeshwantha Govinda Bichu (Plaintiff)

} **Petitioners**

and

Kota Ananada Krishna Chetty son of Manirathnam Chetty Diamond and Precious Stone merchant 217 China Bazaar Madras residing at Ratnalaya 9 Singara Mudaliar Street Madras } **Respondent**

To the respondent abovenamed

Take notice that the abovesaid petition filed by the petitioners for recognising the assignment of the decree by the 2nd Petitioner in favour of the 1st petitioner and for transfer of the decree to the Small Causes Court Madras for further execution proceedings stands posted to 28-9-'40 on which date you may either appear in person or by pleader, failing which the petition will be heard in your absence.

Mangalore, 9-9-1940 } B. Janardan Mallya, Pleader for Petitioners.

...ಮಾನ ದಾಳಿಯು ಪ್ರಚಂಡವಾಗಿದೆ!

ರಾತ್ರಿ ಹಗಲು ಬಾಂಬಿನ ಸುರಿಮಳೆ!

★ ಯುದ್ಧ ವಾರ್ತೆ



ಜಪಾನು-ಅಮೇರಿಕಗಳ ಘರ್ಷಣೆಯೆ?

ರುಮೇನಿಯ ರಾಜನ ಪದಚ್ಯುತಿ!

ಚೆಂಬರ್ಲೇನರು ನಿವೃತ್ತರಾಗುವರೆ?

ಲಂಡನಿಗೆ ಭಯಂಕರ ದಾಳಿ ನಡೆಯುತ್ತಿದೆ. ನಿರ್ದಯರಾದ ನಾಜಿ ವೈಮಾನಿಕರು ನಿರಪರಾಧಿಗಳಾದ ನಾಗರಿಕರ ಮೇಲೆ ಬಾಂಬೆಸೆಯುತ್ತಿದ್ದಾರೆ; ನೂರಾರು ಮಂದಿ ಸಾಯುತ್ತಾರೆ; ಅನೇಕರು ಗಾಯಗೊಂಡಿದ್ದಾರೆ.

ಹೀಗೆ ನಾಜಿಗಳು ಆಕ್ರಮಿಸಿ ಬರುತ್ತಿದ್ದಾಗ, ಬ್ರಿಟಿಷ ವೈಮಾನಿಕರು ಅವರನ್ನು ಪ್ರತಿಭಟಿಸಿ ಕಾದಾಡುತ್ತಾರೆ. ಅನೇಕ ವಿಮಾನಗಳನ್ನು ಉರುಳಿಸಿದ್ದಾರೆ. ಲಂಡನಿನ ಈಸ್ಟ್ ಎಂಡ್ ಪ್ರದೇಶದಲ್ಲಿ ಬಹಳ ಹೆಚ್ಚಿನ ಆಘಾತವುಂಟಾಗಿದೆ.

ಹೀಗಾಗಿ ಯುದ್ಧವು ಇಂದು ಬಹಳ ಉಗ್ರ ರೂಪವನ್ನು ತಾಳಿದೆಯೆಂದು ಯೂರೋಪಿನ ಪತ್ರಿಕೆಗಳ ಅಭಿಪ್ರಾಯ ಪಡುತ್ತವೆ.

ಲಂಡನಿನ ಮೇಲೆ ನಿರಂತರ ದಾಳಿ!

ಲಂಡನಿನ ಮೇಲೆ ಜರ್ಮನಿಯ ನೂರಾರು ವಿಮಾನಗಳು ಎಡೆಬಿಡದೆ ಬಾಂಬುಗಳನ್ನು ಎಸೆಯಲು ಆರಂಭಿಸಿವೆ. ವಿಮಾನ ಯುದ್ಧವು ದಿನದಿಂದ ದಿನಕ್ಕೆ ಉಗ್ರವಾಗುತ್ತಾ ಹೋಗುತ್ತದೆ. ಲಂಡನಿನ ಬಳಿಯ ಕೆಲಸಗಾರರ ಸಂಕಷ್ಟವು ದಾಳಿಯಿಂದ ಹೆಚ್ಚತೊಡಗಿದೆ. ಅನೇಕರು ಮಡಿದಿರುವರು; ಅನೇಕರು ಗಾಯಗೊಂಡಿರುವರು.

ಬರ್ಲಿನಿಗೂ ದಾಳಿ

ಹೀಗೆಯೇ ಬ್ರಿಟಿಷ್ ವಿಮಾನಗಳು ಬರ್ಲಿನಿನ ಮೇಲೆ ದಾಳಿ ನಡೆಸಿದುವು. ಅವುಗಳು ಸುರಿಸಿದ ಬಾಂಬಿನ ಅಗ್ನಿವರ್ಷದಿಂದ ಬರ್ಲಿನಿನಲ್ಲಿ ಜ್ವಾಲೆಯು ಕಾಣುತ್ತಿತ್ತಂತೆ. ಇಕ್ಕಡೆಗಳ ಹೋರಾಟದಲ್ಲಿ ಜನತೆಯು ಮೃತ್ಯುವಿಗೆ ದಿಕಣವಾಗುತ್ತಿದೆ.

ಫ್ರಾನ್ಸಿನಲ್ಲಿ

ಫ್ರಾನ್ಸಿನ ಸರ್ವಾಧಿಕಾರೀ ಸರಕಾರವಾದ ವಿಚಿ ಸರಕಾರವು ಹಿಂದಿನ ಮಂತ್ರಿಗಳಾದ ಡಲಾಡಿಯರ್, ರೈನಾಡ್, ಗಿಮಲಿನ್ ಇವರನ್ನು ಸಾರ್ವಜನಿಕ ಶತ್ರುಗಳೆಂದು ಆರೋಪದ ಮೇಲೆ ಕೈದು ಮಾಡಿರುವುದು.

ಹಿಟ್ಲರನು ಆರ್ಭಟಿಸುತ್ತಾನೆ!

ಹಿಟ್ಲರನು 'ಚಳಿಗಾಲದ ಸಹಾಯ' ವೆಂಬ ಚಳವಳದ ಆರಂಭೋತ್ಸವವನ್ನು ನೆರವೇರಿಸುತ್ತಾ ಒಂದು ಉದ್ಧಟ ಭಾಷಣವನ್ನು ಮಾಡಿದ್ದಾನೆ. ಅದರಲ್ಲಿ ಬ್ರಿಟಿಷ ರಿಗೆ ಭಾಗಿಲ[illegible]ಸ್ಥಿತಿಯು ಅನುಕೂಲವಾಗಿದೆ. ಆದುದರಿಂದ ಅವರು ಇಂದು ತಪ್ಪಿಸಿಕೊಂಡಿದ್ದಾರೆ. ಬ್ರಿಟಿಷ್ ವಿಮಾನಗಳು ರಾತ್ರಿಕಾಲದಲ್ಲಿ ಹಾರಾಡಿ ಜರ್ಮನಿಗೆ ಬಾಂಬೆಸೆಯುತ್ತಿರುವರೆಂದೂ, ತಾನೂ ಇನ್ನು ಮುಂದೆ ಅದೇ ರೀತಿ ಮಾಡಲಿರುವೆನೆಂದೂ, ಒಂದು ರಾಷ್ಟ್ರವನ್ನು ಹಿಡಿದು ಆಳುವ ಇನ್ನೊಂದು ರಾಷ್ಟ್ರ ಯೂರೋಪಿನಲ್ಲಿ—ಬ್ರಿಟನಂತಹ ರಾಷ್ಟ್ರ—ಇರುವವರೆಗೆ ಶಾಂತಿಯಿಲ್ಲವೆಂದೂ ಅದನ್ನು ತಾನು ಆಕ್ರಮಿಸುವುದಾಗಿಯೂ ಹೇಳಿದನು.

ಚರ್ಚಿಲ್ಲರ ವೀರಾವೇಶ

ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಒಂದು ಭಾಷಣ ಮಾಡುತ್ತಾ ಬ್ರಿಟನು ಅಮೇರಿಕಗಳೊಳಗೆ ಇತ್ತೀಚೆಗೆ ಆದ ಒಪ್ಪಂದದ ಕುರಿತು ಮಾತನಾಡಿದರು. ವಿಮಾನ ಯುದ್ಧದಲ್ಲಿ ಬ್ರಿಟನಿಗೆ ಹೆಚ್ಚಿನ ನಷ್ಟವಾಗಲಿಲ್ಲವೆಂದರು. ಕೊನೆಗೆ ಜರ್ಮನಿ ದಾಳಿಯು ಮುಗಿದಿಲ್ಲವೆಂದೂ ಎಚ್ಚರದ ಮಾತು ಹೇಳಿದರು.

ಚೆಂಬರ್ಲೇನರು ರಾಜಕೀಯದಿಂದ ನಿವೃತ್ತರಾಗುವರೆ?

ಚೆಂಬರ್ಲೇನರು ಅನಾರೋಗ್ಯದ ನಿಮಿತ್ತ ರಾಜಕೀಯ ಕಾರ್ಯಗಳಿಂದ ನಿವೃತ್ತರಾಗುವರೆಂದೂ ಅವರ ಬದಲು ಲಾರ್ಡ್ ಹೆಲಿಫಾಕ್ಸರು ಕೆಲಸ ನಡೆಸುವರೆಂದೂ ಬಲವಂತವಾದ ವಾರ್ತೆಯಿದೆ. ಲಾರ್ಡ್ ಹೆಲಿಫಾಕ್ಸರ ಬದಲು ವಿದೇಶೀ ಮಂತ್ರಿಯವರಾಗಿ ಎಮೆರಿಯವರು ಬರಬಹುದೆಂದೂ ಸುದ್ದಿಯಿದೆ.

ಗ್ರೀಸ್ ಮತ್ತು ಬ್ರಿಟನು

ಗ್ರೀಸಿನ ಮೇಲೆ ಆಕ್ರಮಣ ನಡೆದರೆ ಬ್ರಿಟನು ಅದಕ್ಕೆ ಸಹಾಯ ಕೊಡುವುದು ಖಂಡಿತವೆಂದು ಲಾರ್ಡ್ಸ್ ಸಭೆಯಲ್ಲಿ ಹೆಲಿಫಾಕ್ಸರು ನುಡಿದರು.

ಇಟಲಿ--ಯುಗೋಸ್ಲೇವಿಯ

ಇಟಲಿಯು ಆಲ್ಬೇನಿಯಕ್ಕೆ ತನ್ನ ಸೈನ್ಯವನ್ನು ಕಳುಹಿಸುತ್ತಿದೆ. ಇದು ಗ್ರೀಸಿನ ಯುಗೋಸ್ಲೇವಿಯದ ಮೇಲೆ ಬೀಳಬಹುದೇ ಎಂದು ಶಂಕೆಯುಂಟಾಗಿದೆ. ರೋಮಿನಿಂದ ಗ್ರೀಸಿನ ವಿರೋಧವಾಗಿ ಪ್ರಚಾರವು ಆಗುತ್ತಾ ಇದೆ.

ಗ್ರೀನಿಲಾಂಡು-ಅಮೇರಿಕ

ಗ್ರೀನ್ ಲೇಂಡಿನ ಕ್ರಯೋಲೈಟ್ ಗನಿಗಳಲ್ಲಿ ಅಮೇರಿಕದ ರಕ್ಷಕರು ಕಾವಲಿದ್ದಾರೆ. ಇದರ ವಿಷಯದಲ್ಲಿ ಮುಂದೆ ಏನೇನು ಗಲಾಟೆಗಳು ಹುಟ್ಟಲಿವೆಯೋ ನೋಡತಕ್ಕದ್ದಿದೆ.

ಅಮೇರಿಕ-ಜಪಾನುಗಳ ಘರ್ಷಣೆ

ಪೂರ್ವದಲ್ಲಿ ಜಪಾನು ವಿಜೃಂಭಿಸುತ್ತಿರುವುದನ್ನು ಕಂಡು ಅಮೇರಿಕವು ಜಪಾನನ್ನು ಪ್ರತಿಭಟಿಸುವಂತಹ ಸೂಚನೆಗಳು ಕಂಡುಬರುತ್ತಿವೆ. ಇದರ ಪೂರ್ವಸಿದ್ಧತೆಯಾಗಿ ರಶ್ಯ-ಅಮೇರಿಕಗಳೊಳಗೆ ಮಾತುಕತೆಯೂ ನಡೆಯುತ್ತಿದೆಯೆಂದು ವಾರ್ತೆ.

ರಶ್ಯ-ಹಂಗೇರಿ-ಜರ್ಮನಿ

ರಶ್ಯಾ ಹಂಗೇರಿಗಳೊಳಗೆ ಒಂದು ವ್ಯಾಪಾರದ ಒಪ್ಪಂದವಾಗಿ ಒಂದು ಮಿಲಿಯ ಬೆಲೆಯ ಸರಕುಗಳು ಮೊದಲನೆಯ ವರ್ಷ ವಿನಿಮಯ ಮಾಡಿಕೊಳ್ಳುವುದಾಗಿ ನಿಶ್ಚಯವಾಗಿದೆ. ಬೆಸ್ಸರೇಬಿಯಾ, ಉತ್ತರ ಬುಕೋವಿನಾಗಳ ವಿಷಯ ರಶ್ಯ ಜರ್ಮನಿಗಳೊಳಗೆ ಒಂದು ಕರಾರು ಆಗಿದೆ.

ಹಂಗೇರಿಯ ಟ್ರಾನ್ಸಿಲ್ವೇನಿಯ

ಹಂಗೇರಿಯದ ಸೈನ್ಯವು ಟ್ರಾನ್ಸಿಲ್ವೇನಿಯದ ಗಡಿಯನ್ನು ದಾಟಿ ಕೆಲಭಾಗವನ್ನು ಆಕ್ರಮಿಸಿಕೊಂಡವು. ರುಮೇನಿಯದ ಪ್ರಧಾನರು ಈ ವಿಷಯದಲ್ಲಿ ಹಂಗೇರಿಯವರಿಗೆ ರುಮೇನಿಯದ ಅಡ್ಡಿ ಬರಕೂಡದೆಂದು ತಿಳಿಸಿದ್ದಾರೆ.

ಚೀನದ ಪರಾಕ್ರಮ

ಕಳೆದ ತಿಂಗಳ ತಾ. ೨೦ರಿಂದ ಚೀನೀಯರ ಸೈನ್ಯಗಳು ಜಪಾನೀಯರ ವಶವಾಗಿ ಪೆಕ್ಕಿಂಗ್ ಹಾಂಕೋ ಟಂಗ್ಸು ಮೊದಲಾದ ಪ್ರದೇಶಗಳ ಮೇಲೆ ಬಲವಂತವಾದ ದಾಳಿ ನಡೆಸುತ್ತಿವೆ. ರೈಲು ಮಾರ್ಗಗಳನ್ನು ತಂತೀಗಳನ್ನೂ ನಾಶಪಡಿಸಿವೆ. ಬಹಳ ಪರಾಕ್ರಮದಿಂದ ಚೀನೀಯರು ಇಂದು ಯುದ್ಧಮಾಡುತ್ತಿದ್ದಾರೆ. ಚೋಸಿ ನದಿಯ ಸೇತುವೆಯನ್ನು ಚೀನಿಯರು ಮುರಿದಿದ್ದಾರೆ. ಚೋಟೋ ಮತ್ತು ಶಂಟೆಫೀ ಪ್ರಾಂತ್ಯಗಳಲ್ಲಿ ಕಾಳಗ ನಡೆಯುತ್ತಿದೆ.

ರುಮೇನಿಯದ ರಾಜರ ಪದಚ್ಯುತಿ

ರುಮೇನಿಯದ ಅರಸರಾದ ಕೆರೊಲರು ಸಿಂಹಾಸನ ತ್ಯಾಗಮಾಡಿ ಹೋಗಿರುವರು. ಅಲ್ಲಿನ ಪ್ರಧಾನ ಮಂತ್ರಿಗಳಾದ ಜನರಲ್ ಎಂಟೋನಿಸ್ಕು ಇವರು ರಾಜರ ಹಲವು ಅಧಿಕಾರಗಳನ್ನು ಕೇಳಿದುದರಿಂದ, ರುಮೇನಿಯದಲ್ಲಿ ಇತ್ತೀಚೆಗೆ ಬಂಡಾಯದ ಚಿಹ್ನೆಗಳು ಹಲವು ತಲೆದೋರಿದುದರಿಂದ, ಐಯರ್ನ್ ಗಾರ್ಡರು ಬಹಳವಾಗಿ ಪೀಡೆ ಕೊಡಹತ್ತಿದುದರಿಂದ ರಾಜರು ಪದಚ್ಯುತರಾಗಬೇಕೆಂದು ಕೇಳಿಕೆಗಳು ಬಂದುದರಿಂದಲೂ ಅವರು ತನ್ನ ಸಿಂಹಾಸನವನ್ನು ತ್ಯಜಿಸಿ ಪದವೀತ್ಯಾಗ ಮಾಡಬೇಕಾಯಿತು. ಅವರು ತಮ್ಮ ಮಗನಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟು ಸ್ವಿಜರ್ಲೆಂಡಿಗೆ ತೆರಳಿರುವರು.

ರುಮೇನಿಯದ ಮಹಾ ರಾಣಿಯು ಮಗನಾದ ಮೈಕಲನೊಂದಿಗೆ ಬೂಕಾರೆಸ್ಟಿನಲ್ಲಿರುವಳು. ಆದರೆ ಕೆರೊಲರು ಶಾಶ್ವತವಾಗಿ ಎಲ್ಲಿ ನೆಲಸುವರೆಂದು ತಿಳಿದು ಬಂದಿಲ್ಲ.

ಕೆರೊಲನ ಮೇಲೆ ಗುಂಡು

ರುಮೇನಿಯದ ಅರಸನಾದ ಕೆರೊಲನನ್ನು ವಧಿಸಲು ಆತನು ಕುಳಿತಿದ್ದ ರೈಲುಬಂಡಿಗೆ ಯಾರೋ ಗುಂಡು ಹಾರಿಸಿದರು. ಗುಂಡು ಹಾರಿಸಿದವರು ಐಯರ್ನ್ ಗಾರ್ಡ್ ಪಂಗಡದವರೆಂದು ಊಹಿಸಲಾಗಿದೆ. ಆದರೆ ಗುಂಡು ಹಾಕಿದ್ದು ತಗಲಿಲ್ಲವೆಂದೂ ಅವನು ಪ್ರೈಲ್ಗಿದಕ್ಕೆ ಸುಖವಾಗಿ ತಲಪಿದ್ದನಾಗಿಯೂ ತಿಳಿದಿದೆ.

ಯುದ್ಧ ಭೂಮಿಯಿಂದ

ಬ್ರಿಟನಿನ ಆಕಾಶದಲ್ಲಿ ತಾ ೯ರಂದು ನಾಜೀ ವೈಮಾನಿಕರಿಗೂ ಬ್ರಿಟಿಷ್ ವೈಮಾನಿಕರಿಗೂ ಪ್ರಚಂಡ ಕಾಳಗ ನಡೆಯಿತು. ೬೭ ಶತ್ರು ವಿಮಾನಗಳು ಕೆಳಗುರುಳಿದವು. ನಾಜಿಗಳು ಎರಡು ಸಲ ಆಕ್ರಮಿಸಿದರು.

ರಾತ್ರಿ ಕಾಲದಲ್ಲಿಯೂ ನಾಜಿಗಳ ದಾಳಿಯು ಸುರುವಾಗಿದೆ. ಇದರಿಂದ ಹೆಚ್ಚಿನ ಸಂಕಷ್ಟವು ಉಂಟಾಗಿದೆ.

ಹಂಬರ್ಗಿನ ಮೇಲೆ ಮೂರು ತಾಸುಗಳ ತನಕ ಬಿಡದೆ ದಾಳಿಯಾಯಿತು. ನಾಜಿ ವಿಮಾನ ದಾಳಿಯಿಂದ ಗಾಯಗೊಂಡವರನ್ನು ಅರಸರು ಬಂದು ಸಂದರ್ಶಿಸಿ ಸಹ ಸಂತಾಪ ಸೂಚಿಸಿದರು.

★

ಬೊಂಬಯಿಯಲ್ಲಿ ಭಾರತದ ಮುಖಂಡರು ಬಂದು ಸೇರುತ್ತಿದ್ದಾರೆ. ನೆಹರುಗಳು ಅಲ್ಲಾಬಾದಿನಲ್ಲಿ ವಿದ್ಯಾರ್ಥಿಗಳಿಗೊಂದು ಭಾಷಣ ಮಾಡುತ್ತಾ ಮುಂದಿನ ಹೋರಾಟಕ್ಕೆ ವಿದ್ಯಾರ್ಥಿಗಳೂ ಸಿದ್ಧರಾಗಿರಬೇಕೆಂದರು. ಸರ್ದಾರ ಪಟೇಲರು ಸರಕಾರದ ನೀತಿಯನ್ನು ಖಂಡಿಸುತ್ತಾ ಅದು ವಿಭಗಿಸಿ ಆಳುವ ರೀತಿಯೆಂದರು.

ಭಾರತದಲ್ಲಿ ದಿನಂಪ್ರತಿಯೂ ಈಗ ಡಿಫೆನ್ಸು ಆಕ್ಟಿನನ್ವಯ ಅನೇಕ ಮುಖಂಡರನ್ನು ಬಂಧಿಸಲಾಗುತ್ತಿದೆ. ಮದ್ರಾಸಿನ ಎಂ. ಎಲ್. ಎ. ಗಳಾದ ಶ್ರೀ ಡಿ. ರಾಮಲಿಂಗರೆಡ್ಡಿಯಾರನ್ನು ಬಂಧಿಸಿದ್ದಾರೆ.

ಭಾರತದ ರಾಜಕೀಯದಲ್ಲಿ ಮಹತ್ವದ ಘಟನೆಗಳು ಉಂಟಾಗುವ ಸೂಚನೆ ತೋರುತ್ತದೆ. ಪಂಡಿತ ನೆಹರು, ರಾಜಾಜಿ, ರಾಷ್ಟ್ರಪತಿ ಮೊದಲಾದವರು ಕಾಂಗ್ರೆಸಿನ ಮುಂದಿನ ಕಾರ್ಯಕ್ರಮದ ಕುರಿತು ಹೋರಾಟವಲ್ಲದೆ ಬೇರೆ ದಾರಿಯಿಲ್ಲವೆಂಬ ರೀತಿ ಉಪದೇಶಿಸುತ್ತಾರೆ. ಬೊಂಬಯಿಯಲ್ಲಿ ತಾ ೧೫ರಂದು ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸಭೆಯು ಸೇರುವುದು. ಅದರ ನಿರ್ಣಯವನ್ನು ಸರ್ವರೂ ಕುತೂಹಲದಿಂದ ನಿರೀಕ್ಷಿಸುತ್ತಾರೆ.

ಭಾರತ ಸಚಿವರಾದ ಎಮೆರಿಯವರು ಕಾಂಗ್ರೆಸಿನ ಕುರಿತು 'ನಕಾರ' ವಿತ್ತ ವಿಷಯವಾಗಿ ಎಲ್ಲಾ ಕಡೆಗಳಲ್ಲಿಯೂ ತೀವ್ರವಾದ ಅಸಂತೃಪ್ತಿಯು ತಲೆದೋರಿದೆ.

ರಾಷ್ಟ್ರಪತಿ ಅಜಾದರು

ರಾಷ್ಟ್ರಪತಿಗಳಾದ ಮೌಲಾನಾ ಅಬುಲ್ ಕಲಂ ಅಜಾದರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಫೀಸನ್ನೂ, ಶಿಕ್ಷಣ ಶಿಬಿರವನ್ನೂ ಸಂದರ್ಶಿಸಿದರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 992/1927

R. E. P. 448/1940

2ನೇಯಾತಿ ಕಾಯರ ತಿಮ್ಮಕ್ಕಮ್ಮ—Petitioner

1 ಮ್ಯಾನರ ಕಂಬು— ಸುಬ್ರಾಯ ಭಟ್ಟರ ಮಗ—ಗಾಡಿಯಾಣ್ಣ ಗಣಪತಿಭಟ್ಟ, ಕಿಲ ಉತ್ತರಭಟ್ಟ [illegible] ಪೆರುವಜೆ ಗ್ರಾಮ 2 ಸರಸ್ವ[illegible]—ಸುಬ್ರಾಯ ಭಟ್ಟ [illegible] ಸಪ್ರ ಗ್ರಾಮ — Respondents

ಮೇಲಿನ ಅಮ್ಲುಜಾರಿಯಲ್ಲಿ ಅರ್ಜಿದಾರಳಿಗೆ ಬಂದ ಜೀವನಾಂಶದ ಡಿಕ್ರಿವನಿಗೆ ಎದುರ ಸ್ಥಿರ ಆಸ್ತಿಯನ್ನು ಏಲಮಿಗೆ ಅಪೇಕ್ಷಿಸಿ, ಏಲಂ ಇಸ್ತಿಹಾರ ದರ್ಖಾಸ್ತು ಹಾಜರು ಪಡಿಸಿರುವುದರಿಂದ ಸದ್ರಿ ಏಲಂ ಇಸ್ತಿಹಾರಿನ ಶರತುಗಳನ್ನು ನಿರ್ಣೈಸಲಿಕ್ಕೆ ತಾ. 27—9—1940ಕ್ಕೆ ನೋಟೀಸಿನ ತಸ್ತಿ ವ್ಯಾದೆ ನಿಶ್ಚಯಿಸಿರುವುದರಿಂದ ಎದುರು ತಮ್ಮ ಆಕ್ಷೇಪಗಳೇನಾದರೂ ಹೇಳಿಕೊಳ್ಳುವುದಿದ್ದರೆ ಮೇಲಿನ ವ್ಯಾದೆಗೆ ತಪ್ಪದೆ ಕೋರ್ಟಿಗೆ 11 ಘಂಟೆಗೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಹೇಳಿಕೊಳ್ಳತಕ್ಕದ್ದು, ಆ ರೀತಿ ಹಾಜರಾಗಲು ತಪ್ಪಿದರೆ ಎದುರನ್ನು ಗೈರ್ಹಾಜರ್ ಎಂತ, ಮಾಡಿ ಈ ವ್ಯವಹಾರವನ್ನು ತಕ್ಷೀರಿಯಿಂದ ಮುಂದರಿಸಲಾಗುತ್ತದೆ ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಹೊರಡಿಸಿಯದೆ.

ತಾ. 6—9—'40 Puttur } S. Ramchandra Rau, Pleader for Petitioner



ಕಾಂಗ್ರೆಸಿನ ಮುಂದಿನ ಹಜ್ಜೆ ಯಾವುದು?

ಮುಂದಾಳುಗಳ ತೀವ್ರ ಪ್ರಚಾರ!

ಮುಂಬಯಿಯಲ್ಲಿ ಎ. ಐ. ಸಿ. ಸಿ. ಅಧಿವೇಶನ!

ಭಾರತ ಸಚಿವರ ನಕಾರ!

ಶ್ರೀ. ಎಂ. ಎನ್. ರ್ರಾಯರ ಮೇಲೆ ಶಿಸ್ತು? **ಸತ್ಯಮೂರ್ತಿಗಳ ವಾದ!**

ರಾಜಾಜಿಯವರಿಗೆ ಬೆಂಬಲ

ಬಾಶೀರ್ ಅಹಮ್ಮದರ ಸೂಚನೆ

ರಾಜಾಜಿಯವರು ಅಲ್ಪ ಸಂಖ್ಯಾಕರ ಸಮಸ್ಯೆಯ ಪರಿಹಾರವಾಗಿ ಕೊಟ್ಟ ಸೂಚನೆಯು ಯೋಗ್ಯವಾಗಿದೆಯೆಂದೂ ಪಾಕಿಸ್ತಾನ ಯೋಜನೆಯು ಆಗತಕ್ಕಂತಹ ಸೂಚನೆಯಲ್ಲವೆಂದೂ ಶ್ರೀ ಬಾಶೀರ್ ಅಹಮ್ಮದರು ಹೇಳುತ್ತಾರೆ

ಬ್ರಿಟನಿಗೆ ಸಹಾಯ ಮಾಡಿರಿ

ರಾಯರುಗಳ ವಾದ; ಶಿಸ್ತು ಜಾರಿ

ಫಾಸಿಸಂ ನಾಜಿಸಂಗಳನ್ನು ನಾಶಗೊಳಿಸುವ ಸಲುವಾಗಿ ಭಾರತೀಯರು ಬ್ರಿಟನಿಗೆ ಇಂದು ಸಂಪೂರ್ಣ ಸಹಾಯ ಮಾಡಬೇಕೆಂದು ಶ್ರೀ ಎ ಎನ್ ರಾಯರುಗಳ ವಾದಿಸುತ್ತಿದ್ದಾರೆ ... ಕಾಂಗ್ರೆಸು ಮುಂದಾಳುಗಳ ಧೋರಣೆಯನ್ನು ಖಂಡಿಸುತ್ತಾರೆ ಇದು ಕಾಂಗ್ರೆಸಿನ ತತ್ವಕ್ಕೆ ಸರಿಯಲ್ಲವೆಂದು ... ಪ್ರಾಂತದ ಕಾಂಗ್ರೆಸ ಕಮಿಟಿ ಅವರು ಮೇಲೆ ಶಿಸ್ತು ಜಾರಿಯ ವಿಚಾರ ಮಾಡುತ್ತದೆ.

ಸತ್ಯಮೂರ್ತಿಗಳ ವಾದ

ಶ್ರೀ ಸತ್ಯಮೂರ್ತಿಗಳು ೧೯೩೧ ಕಾಂಗ್ರೆಸಿನವರು ಆದಷ್ಟು ಅಧಿಕಾರ ಸ್ಥಾನವನ್ನು ಆಕ್ರಮಿಸಿ ಕೊಂಡಿರುವುದು ಮುಂದಿನ ಸ್ವಾತಂತ್ರ್ಯ ಪ್ರಾಪ್ತಿಗೆ ಯೋಗ್ಯ ಮಾರ್ಗವೆಂದು ಹೇಳತೊಡಗಿದ್ದಾರೆ ಇದರಿಂದ ಭಾರತದ ಕೇಳಿಕೆಯು ಶಕ್ತಿ ಪೂರ್ಣವಾಗುವುದೆಂದು ಅವರ ನಂಬಿಕೆ

ಸ್ವಯಂಸೇವಕ ದಳದ ಸಭೆ

ಆರ್ ಎಸ್. ಪಂಡಿತರ ಟೀಕೆ

ಸ್ವಯಂಸೇವಕ ದಳಗಳನ್ನು ನಿಷೇಧಿಸಿದ ಸರಕಾರದ ಆಜ್ಞೆಯನ್ನೂ ಸಂಯುಕ್ತ ಪ್ರಾಂತ್ಯದಲ್ಲಿ ಆಗುವ ಆ ಸಂಬಂಧದ ಬಂಧನಗಳನ್ನೂ ಖಂಡಿಸಿ, ಶ್ರೀ ಆರ್ ಎಸ್ ಪಂಡಿತರು ಒಂದು ಪ್ರಕಟಣೆ ಕೊಟ್ಟಿರುವರು. ಅವರು ಎ ಐ ಸಿ ಸಿ ಸಭೆಯ ಸಮಯದಲ್ಲಿ ಸ್ವಯಂಸೇವಕ ದಳದ ಸಭೆಯು ಜರಗುವುದೆಂದೂ ಅಗ ಅಲ್ಲಿ ಆ ಕುರಿತು ವಿಚಾರಮಾಡಲಾಗುವುದೆಂದೂ ಹೇಳಿರುವರು.

ಸ್ವಯಂ ಸೇವಕರ ಬಂಧನ

ಕಾನ್ಪುರದಲ್ಲಿ ಕಾಂಗ್ರೆಸ್ ಸೇವಾದಳದ ಸ್ವಯಂ ಸೇವಕರನ್ನು ಹಲವು ಮಂದಿಯನ್ನು ಬಂಧಿಸಿರುವರು.

ಸಾವರ್ಕಾರರ ಅಸೌಖ್ಯ

ಅನಾರೋಗ್ಯದಿಂದಿರುವ ಹಿಂದೂ ಮಹಾಸಭೆಯ ಮುಖಂಡರಾದ ಶ್ರೀ ವಿ ಟಿ ಸಾವರ್ಕಾರರು ಶಸ್ತ್ರಕ್ರಿಯೆಗೊಳಗಾಗಿದ್ದಾರೆ ಗುಣಮುಖರಾಗುತ್ತಿದ್ದಾರೆ

ಭಾರತದಲ್ಲಿ ನೆಲಮಾಳಿಗೆ

ವಿಮಾನ ದಾಳಿಯಾದರೆ ಅದರಿಂದ ರಕ್ಷಿಸಿಕೊಳ್ಳುವ ನೆಲಮಾಳಿಗೆಗಳು ಪಾಶ್ಚಾತ್ಯ ದೇಶಗಳಲ್ಲಿವೆ ಭಾರತದಲ್ಲಿ ಬೊಂಬಾಯಿಯ ಕೋಟ್ಯಾಧೀಶ್ವರರೊಬ್ಬರು ಅಂತಹ ವಸತಿಯೊಂದನ್ನು ಕಟ್ಟಿಸುತ್ತಿದ್ದಾರೆ

ಮೈಸೂರಲ್ಲಿ ಬಿಡುಗಡೆ

ಮೈಸೂರಿನ ನೂತನ ರಾಜರ ಪಟ್ಟಾಭಿಷೇಕದ ಸಂತೋಷದ ಸಲುವಾಗಿ ಅಲ್ಲಿನ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ತೀರ್ಮಾನವಾದಂತೆ ೨೬೭ ಮಂದಿಯನ್ನು ಬಿಡುಗಡೆ ಮಾಡಲಾಗಿದೆ. ಇನ್ನೂ ಇತರ ಹಲವು ಮಂದಿ ಕೈದಿಗಳನ್ನು ಬಿಡುಗಡೆ ಮಾಡಿರುವರೆಂದಾಗಿ ತಿಳಿಯುತ್ತದೆ

ಎ. ಐ. ಸಿ. ಸಿ. ಸಭೆಗೆ ಮಹಾತ್ಮರೂ ಬರುವರು

ಬೊಂಬಯಿಯಲ್ಲಿ ತಾ ೧೫ರಲ್ಲಿ ಎ ಐ ಸಿ ಸಿ ಸಭೆಯು ಜರಗಲಿದೆ ಕಾಂಗ್ರೆಸು ಭಾರತ ಸಚಿವರ ನಕಾರದಿಂದ ಮುಂದೆ ನಿಶ್ಚಿತವಾದ ಮಾರ್ಗವೊಂದನ್ನು ನಿಶ್ಚಯಿಸಲು ಸೇರುವುದು ಇದಕ್ಕೆ ಗಾಂಧಿಜಿಯವರೂ ಬರಲಿರುವರೆಂದು ತಿಳಿದಿದೆ

'ಹರಿಜನ ಸೇವಕ'

ಹರಿಜನ ಪತ್ರಿಕೆಯ ಹಿಂದೀ ಭಾಷಾಂತರವಾದ ಹರಿಜನ ಸೇವಕವು ಇನ್ನು ಮುಂದೆ ಪೂನೆಯಲ್ಲಿ ಪ್ರತಿ ಶನಿವಾರ ಪ್ರಕಟವಾಗುವುದು. (ಇದುವರೆಗೆ ದಿಲ್ಲಿಯಲ್ಲಿ ಆಗಿತ್ತು)

ಮಂಗಳೂರು

ಜಿಲ್ಲಾ ಬೋರ್ಡು ಸಭೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸಭೆಯ ತಾ ೧೯ರಲ್ಲಿ ಡಿ ಬೋ ಆಫೀಸಿನಲ್ಲಿ ಪ್ರೆಸಿಡೆಂಟ್ ಡಾ ಕೆ ಪಿ ಉಲ್ಲಾಳ ಕೆ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರಂಭದಲ್ಲಿ ಮೈಸೂರ ಮಹಾರಾಜರ ನಿಧನದ ಬಗೆ ಸಂತಾಪ ಸೂಚಕ ಠರಾವು ಪಾಸಾಯಿತು. ಆ ಮೇಲೆ ೧೯೩೯ ಇಸವಿಯ ವರ್ಷಗಳ ಆಡಳಿತದ ವರದಿಯನ್ನು ತಯಾರಿಸಿದ ವಿಷಯದಲ್ಲಿ ಪ್ರೆಸಿಡೆಂಟರನ್ನು ಪ್ರಶಂಸಿಸಿ ಶ್ರೀಗಳಾದ ಚಮ್ನಾಡ್ ಸಾಹೇಬ್, ಪೆರ್ನಾಂಡಿಸ್ ವೈಕುಂಠ ಬಾಳಿಗರು ಭಾಷಣವಿತ್ತರು ಹಲವು ಗವರ್ನಮೆಂಟ್ ಆರ್ಡರುಗಳು ರಿಕಾರ್ಡು ಮಾಡಲ್ಪಟ್ಟವು ಶಿರ್ವ ಬೋರ್ಡು ಹುಡುಗಿಯರ ಶಾಲೆಯ ವಿಷಯದಲ್ಲಿ ಡಿ ಬೋ ತೀರ್ಮಾನವನ್ನು ಟೀಕಿಸಿ ಕೆಥೊಲಿಕ್ ವಿದ್ಯಾಸಂಸ್ಥೆಯವರು ಹೊರಡಿಸಿದ ಪ್ರಕಟಣೆಯ ವಿಷಯ ಡಿ ಬೋ ಪ್ರೆಸಿಡೆಂಟರು ಅದಕ್ಕೆ ಕೊಟ್ಟ ಉತ್ತರವನ್ನು ಪ್ರೆಸಿಡೆಂಟರು ಸಭೆಯ ಮುಂದಿಟ್ಟರು ಪ್ರೆಸಿಡೆಂಟರ ಉತ್ತರ ಮಾನ್ಯವಾಯಿತು. ಪುತ್ತೂರು ಹೈಸ್ಕೂಲಿಗೆ ಒಂದು ಹಿಂದೂಸ್ಥಾನೀ ಉಪಾಧ್ಯಾಯರನ್ನು ಕೊಡುವುದಾಗಿ ನಿರ್ಣಯವಾಯಿತು. ಉಪಾಧ್ಯಾಯರ ಸಂಬಳ ಕಡಿತದ ವಿಷಯ, ಬಜೆಟ್ ಕಮಿಟಿಯ ಠರಾವನ್ನು ಮುಂದುವರಿಸಲಾಯಿತು. ಮುಂಡ್ಕೂರಿನಲ್ಲಿ ತೆರೆಯಲಿರುವ ರೂರಲ್ ಡಿಸ್ಪೆನ್ಸರಿಯು ಆಯುರ್ವೇದಿಕ್ ಆಗಬೇಕೆಂದು ನಿರ್ಣಯವಾಯಿತು.

ಪೆರಡಾಲ

ಡಿ ಬೋ ಪ್ರೆಸಿಡೆಂಟರಲ್ಲಿ ಶಿಷ್ಟ ಮಂಡಲದ ಬಿನ್ನಹ: – ತಾ ೧೨ರಂದು ಪೆರಡಾಲ ಗ್ರಾಮಸ್ಥರನೇಕರಿಂದ ಕೂಡಿದ ಶಿಷ್ಟ ಮಂಡಳವೊಂದು (Deputation) ಜಿಲ್ಲಾ ಬೋರ್ಡು ಪ್ರೆಸಿಡೆಂಟರನ್ನು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಬಂದು ಸಂದರ್ಶಿಸಿ ತಮ್ಮಲ್ಲಿ ಜಿಲ್ಲಾ ಬೋರ್ಡಿನವರು ಒಂದು ರೂರಲ್ ಡಿಸ್ಪೆನ್ಸರಿಯನ್ನು ತೆರೆಯಬೇಕಾಗಿ ಬಿನ್ನಹ ಮಾಡಿಕೊಂಡರು ಪ್ರೆಸಿಡೆಂಟರು ಊರವರ ನ್ಯಾಯವಾದ ಕೇಳಿಕೆಯ ವಿಷಯದಲ್ಲಿ ತನ್ನ ಪೂರ್ಣ ಸಮ್ಮತಿಯನ್ನು ಸೂಚಿಸಿ, ಬೋರ್ಡಿನ ಪ್ರಕೃತ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿ, ತತ್ಕಾಲಕ್ಕೆ ಬೋರ್ಡಿನಿಂದ, ಅಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವ ಡಾಕ್ಟರರಿಗೆ ಸಹಾಯ ದ್ರವ್ಯ ಕೊಡಿಸುವ ಯತ್ನ ಮಾಡುವುದಾಗಿ ಭರವಸೆಯಿತ್ತಿದ್ದಾರೆ

ವಿಟ್ಲ

ಮಕ್ಕಳ ಹಬ್ಬ:—ಸ್ಥಳೀಯ ಬೋ ಹ. ಎಲಿಮೆಂಟರಿ ಈ ತಿಂಗಳ ಬಾಟ್ಟು ತಿಂಗಳ ಹಬ್ಬವು ತಾ ೩ರಂದು ಶ್ರೀಯುತ ವಿ ನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಿಂದ ವರದಿ ವಾಚನ, ಮಕ್ಕಳ ವಿನೋದಾವಳಿಗಳು ಆದ ತರುವಾಯ ಶ್ರೀಯುತ ಎ. ಜಿ. ತಿರುಮಲೇಶ್ವರ ಭಟ್ಟರಿಂದ 'ಹಳ್ಳಿಯ ಸಾಹಿತ್ಯ' ಎಂಬ ವಿಷಯದಲ್ಲಿ ಭಾಷಣವಾಯಿತು.

ಮೊಗವೀರ ಯುವಕ ಸಂಘ ಮುಂಬಯಿ

ಶ್ರೀ. ಬಿ ಜಿ ಖೇರರ ಭಾಷಣ

ಈ ಸಂಘದ ಸಪ್ತಮ ವಾರ್ಷಿಕ ಮಹೋತ್ಸವವೂ ಮೊಗವೀರ ಉದ್ಯೋಗ ಶಾಖೆಯ ಉದ್ಘಾಟನ ಸಮಾರಂಭವೂ ಮುಂಬಯಿಯ ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀ ಬಿ ಜಿ ಖೇರರವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು ಮುಂಬಯಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷರಾದ ರಾಜಮಾನ್ಯ ಎ ಎ ... ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರಾದ ರಾಜಮಾನ್ಯ ಜಿ ಪಿ ಮಂಗಾಂವ್ಕಾರರೇ ಮೊದಲಾದ ಮಹನೀಯರು ನೆರೆದಿದ್ದರು

ದೇವತಾ ಪ್ರಾರ್ಥನೆ, ಸಂಘದ ಸಂಕ್ಷಿಪ್ತ ಚರಿತ್ರೆಯ ವಾಚನಗಳಾದ ಒಳಿಕ ಬಾಲ್ಯವಿವಾಹ ಮತ್ತು ವರದಕ್ಷಿಣೆಯ ನಿಷೇಧ ಸಂಬಂಧವಾಗಿ ಪ್ರತಿಜ್ಞೆಯನ್ನು ಸಂಘದ ಕಾರ್ಯನಿರ್ವಾಹಕ ಮೆಂಬರರೂ, ಸ್ವಯಂಸೇವಕರೂ ಇತರ ಮೆಂಬರರೂ ಕೆಲವು ಜಾತಿ ಮತ್ತು ಪರಜಾತಿ ಗೃಹಸ್ಥರೂ ತೆಗೆದುಕೊಂಡರು

ಅಧ್ಯಕ್ಷರು ಸರಳ ಹಾಗೂ ಸಮಯೋಚಿತ ಹಿಂದೀ ಭಾಷಣದಲ್ಲಿ ಹೀಗೆಂದರು. ಮೊಗವೀರ ಯುವಕ ಸಂಘವು ತಮ್ಮ ಜನರ ಉನ್ನತಿಗಾಗಿ ಮಾಡುವ ಕೆಲಸವನ್ನು ನಾನು ಕೊಂಡಾಡುತ್ತೇನೆ. ಮೊಗವೀರರಲ್ಲಿ ಜಾಗ್ರತೆ ಉಂಟಾಗಿದೆಂಬುದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬ ಯುವಕ ಯುವತಿಗೆ ಉಚ್ಚ ಶಿಕ್ಷಣವನ್ನು ಆಗತ್ಯಕೊಡುವ ಏರ್ಪಾಡುಯಿರಲಿ ಇಂಥ ಶಿಕ್ಷಣ ಸಿಕ್ಕಿದರೂ ನಿಮ್ಮ ಸ್ವಂತ ಭಾಷೆಯನ್ನು ಮರೆಯಬೇಡಿರಿ ಒಬ್ಬ ಯುವಕನು ತನ್ನ ಸ್ವತಂತ್ರ ಜೀವನವನ್ನು ನಡೆಸಬೇಕು ನಿಮ್ಮ ಸ್ವತಂತ್ರ ಜೀವನದ ವೃತ್ತಿಯಾದ ಮತ್ಸ್ಯ ವ್ಯವಸಾಯವನ್ನು ಮರೆತರಲ್ಲ. ಆದಷ್ಟು ಶ್ರಮವಹಿಸಿ. ಅನಂತರ ಶ್ರೀ ಪಠ್ಠಾನರು, ಶ್ರೀ ಜಿ ವಿ ನರಸಿಂಹರಾಯರೂ ದಿವಾನ್ ಬಹದ್ದೂರು ಕೆ ರಾವಸ್ವಾಮಿಯವರು, ಯುವಕರು ಸ್ವತಂತ್ರ ಜೀವನವನ್ನು ನಡೆಸುವ ಕಡೆಗೆ ತಮ್ಮ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಹೇಳಿ ತಮ್ಮ ಅರ್ಥಗರ್ಭಿತವಾದ ಭಾಷಣದಿಂದ ಸಭೆಯನ್ನು ಆನಂದಗೊಳಿಸಿದರು ದಿವಾನ್ ಬಹದ್ದೂರ್ ಕೆ ರಾವಸ್ವಾಮಿಯವರ ಧರ್ಮಪತ್ನಿಯವರಾದ ಕಮಲಮ್ಮನವರು ಸಂಘದ ಕಾರ್ಯಕಲಾಪಗಳಿಂದ ಸಂತೋಷಪಟ್ಟು ರೂಪಾಯಿ ೧೦೧ನ್ನು ಸಮಾಜ ಸುಧಾರಣೆಯ ನಿಧಿ ಫಂಡಿಗೆ ದಾನವಾಗಿ ಕೊಟ್ಟಿರುವರು ಸಂಕರ ಕೆ ಎನ್ ಗ್ಯಾಕೊಂಡೆ ಮತ್ತು ಇತರ ಕೆಲವು ಮಹನೀಯರು ಸಂಘದ ಕೆಲಸಗಳನ್ನು ಪ್ರಶಂಸಿಸಿ ಮಾತಾಡಿದರು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನರ್ಪಿಸಿ, ಸಂಘದ ಸದಸ್ಯರಿಂದ ಸಾಮಾಜಿಕ ನಾಟಕ ಒಂದು ಅಭಿನಯಿಸಲ್ಪಟ್ಟಿತು.

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೆ

ಬಂದು ವಿಚಾರಿಸಿರಿ.

ಭಾರತದಲ್ಲಿ ಬ್ರಿಟಿಷರ ಜವಾಬ್ದಾರಿಯೇನು?

ರಾಷ್ಟ್ರವಾಣಿಯ ಮಾರ್ಮಿಕ ಲೇಖ

ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಬೇಕಾದರೆ ತಾವು ಹಿಂದು ಮುಂದು ಬಹಳ ಯೋಚಿಸಬೇಕಾಗುತ್ತದೆ. ಆ ವಿಷಯದಲ್ಲಿ ನೀವು ದುಡುಕಬಾರದು. ಅದರಲ್ಲಿ ನಮ್ಮ ಜವಾಬುದಾರಿ ಬಹಳ ಇದೆ ಎಂದು ಬ್ರಿಟಿಷರು ಹಿಂದುಸ್ಥಾನದ ಸ್ವರಾಜ್ಯ ಪ್ರಶ್ನೆ ಮುಂದೆ ಬಂದಾಗಲೆಲ್ಲ ಹೇಳುತ್ತಾರೆ. ಆದರೆ ಹಿಂದುಸ್ಥಾನದಲ್ಲಿ ಬ್ರಿಟಿಷರ ಜವಾಬುದಾರಿ ಎಂಥಹುದಾಗಿರುವುದೆಂದು 'ರಾಷ್ಟ್ರವಾಣಿ'ಯಲ್ಲಿ ಒಂದು ಮಾರ್ಮಿಕ ಲೇಖನವು ಬಂದಿದೆ.

ವ್ಯಾಪಾರಕ್ಕಾಗಿ ಬಂದವರು ಬ್ರಿಟಿಷರು

'ಬ್ರಿಟಿಷರು ಹಿಂದುಸ್ಥಾನಕ್ಕೆ ವ್ಯಾಪಾರಿಗಳಾಗಿ ಬಂದರು. ಆಗಿನ ಮೊಗಲಾಯಿ ಅರಸರುಗಳು ಅವರಿಗೆ ಸ್ವಾಗತವನ್ನು ಕೊಟ್ಟು, ಸರ್ವ ಪ್ರಕಾರದ ವ್ಯಾಪಾರದ ಅನುಕೂಲತೆಗಳನ್ನು ಒದಗಿಸಿ ಕೊಟ್ಟರು. ೧೬೧೬ರಲ್ಲಿ ಸರ್ ಥಾಮಸ್ ರೋ ಎಂಬವನು ಇಂಗ್ಲಂಡಿನ ಅರಸು ಜೇಮ್ಸನ ರಾಯಭಾರಿಯಾಗಿ ಹಿಂದುಸ್ಥಾನಕ್ಕೆ ಬಂದ. ಇಲ್ಲಿ ಬಂದು ಜಹಾಂಗೀರಬಾದಶಹನನ್ನು ದರಬಾರದಲ್ಲಿ ಭೇಟಿ ತೆಗೆದುಕೊಂಡು, ಬ್ರಿಟಿಷರು ಇಲ್ಲಿ ಯಾವದೇ ತರದ ವಿಘ್ನಗಳಿಲ್ಲದೆ ನಿರಾತಂಕವಾಗಿ ವ್ಯಾಪಾರಮಾಡಬಹುದೆಂದು ಆತನಿಂದ ರಾಯಸವನ್ನು ಪಡೆದು ಈ ರೀತಿ ದೇಶದಲ್ಲಿ ಕಾಲೂರಲಿಕ್ಕೆ ಅನುಕೂಲ ಮಾಡಿಕೊಂಡ ತರುವಾಯ ಆ ಬ್ರಿಟಿಷ ವ್ಯಾಪಾರಿಗಳು ಮಾಡಿದ ಕಾರ್ಯಗಳು ರೋಮಾಂಚನಗೊಳಿಸುವಂಥವುಗಳು ಇಗವೆ.

ರೋಮಾಂಚನಗೊಳಿಸುವವು!

"ಸೂರತದಲ್ಲಿ ಬ್ರಿಟಿಷ ವ್ಯಾಪಾರಿಗಳು ತಮ್ಮ ನೌಕಾಪಡೆಯನ್ನು ಕಳುಹಿಸಿ ದೇಶೀ ವ್ಯಾಪಾರಿಗಳನ್ನು ಅವರ ಸರಕು ತುಂಬಿದಹಡಗುಗಳಿಗೆ ಉಪದ್ರವಿತ್ತರು. ಇದು ಬಂಗಾಳದಲ್ಲಿಯೂ ಅವ್ಯಾಹತವಾಗಿ ನಡೆಯಿತು. ಐದು ವರ್ಷಗಳ ತನಕ ಈ ರೀತಿ ಬ್ರಿಟಿಷರು ನಡೆದರು. ಜನರ ಗೋಳು ಬಾದಶಹನ ಕಿವಿತನಕ ಮುಟ್ಟಿತು. ಆದ್ದರಿಂದ ಅವರು ಸಂತಪ್ತನಾಗಿ ಬ್ರಿಟಿಷರಿಗೆ ಕೊಟ್ಟ ವ್ಯಾಪಾರದ ಎಲ್ಲಾ ಅನುಕೂಲತೆಗಳನ್ನೂ ಹಿಂದಕ್ಕೆ ತೆಗೆದುಕೊಂಡನು. ಸೂರತದ ಗವರ್ನರನಾಗಿದ್ದ ಸಿದ್ದೀ ಯಾಕೂಬನು ಬೊಂಬಾಯಿಯನ್ನು ಹಸ್ತಗತ ಮಾಡಿ, ಬ್ರಿಟಿಷ್ ಕಂಪೆನಿಯವರನ್ನು ಕೈದು ಮಾಡಿದನು. ಸಿದ್ದಿಕನು ಅವರಿಗೆ ಕೋಳ ಹಾಕಿ ಬೊಂಬಾಯಿಯ ಬೀದಿಗಳಲ್ಲಿ ಪ್ರಕಟರೂಪದಿಂದ ಕೊಂಡು ಹೋದನು.

ಕ್ಷಮಾಪಣ-ಕಟ್ಟಪ್ಪಣೆ

"ಇಷ್ಟಾಗುತ್ತಾಗ ಬ್ರಿಟಿಷರು ನಿರ್ವಾಗಹವಿಲ್ಲದೆ ಮೊಗಲ್ ಬಾದಶಹರ ಕ್ಷಮಾಪಣೆ ಕೇಳಬೇಕಾಯಿತು. ಆಗ ಅವರಂಗಜೇಬನು ದಿಲ್ಲಿಯಲ್ಲಿ ಆಳುತ್ತಿದ್ದನು. ದರ್ಬಾರಿನಲ್ಲಿ ಬ್ರಿಟಿಷ್ ಪ್ರತಿನಿಧಿಗಳು ಅವನಿಗೆ ನೆಲದ ಮೇಲೆ ಬಿದ್ದು ಸಲಾಮು ಮಾಡಬೇಕಾಗಿದ್ದಿತು. ಅವರಂಗಜೇಬನು ಅವರ ಕೃತಘ್ನ ಸ್ವಭಾವವನ್ನು ತುಂಬಾ ಬೈದು ಭಂಗಿಸಿದ್ದ. ಬ್ರಿಟಿಷರು ತನ್ನ ತಪ್ಪುಗಳನ್ನು ಒಪ್ಪಿಕೊಂಡು, ಮೊದಲಿನಂತೆ ವ್ಯಾಪಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಅವರಂಗಜೇಬನನ್ನು ಅಂಗಲಾಚಿ ಬೇಡಿಕೊಂಡರು.

ಅವರಂಗಜೇಬನು ರಾಜನೀತಿ ವಿಶಾರದನಾಗಿದ್ದನು. ಕಂಪೆನಿಯ ಗವರ್ನರನಾಗಿದ್ದ ಚಾಲ್ಡನು ೯ ತಿಂಗಳೊಳಗಾಗಿ ವಿಲಾಯಿತಿಗೆ ಹೊರಟು ಹೋಗಬೇಕೆಂದೂ, ಮತ್ತೆ ಅವನು ಎಷ್ಟು ಮಾತ್ರಕ್ಕೂ ದೇಶದಲ್ಲಿ ಎಲ್ಲಿಯೂ ಕಾಲಿಡಬಾರದೆಂದೂ ಕಟ್ಟಪ್ಪಣೆ ಕೊಟ್ಟು ವ್ಯಾಪಾರಕ್ಕೆ ಒಪ್ಪಿಗೆ ಕೊಟ್ಟನು. ಆದರೆ ಒಂದು ಶರ್ತದ ಮೇಲೆ-ಬ್ರಿಟಿಷರು ಸೂರತ, ಮೊದಲಾದ ಕಡೆಗಳಲ್ಲಿ ಲೂಟಿ, ಮೊದಲಾದ ಕಾರಣಗಳಿಂದ ಪ್ರಜೆಗಳಿಗೆ ಮಾಡಿದ ನಷ್ಟ ಮತ್ತು ಹಾನಿಯನ್ನು ಪ್ರಜೆಗಳಿಗೆ ತೃಪ್ತಿಕರವಾದ ಪರಿಹಾರ ಮಾಡಿ ತುಂಬಿಸಿಕೊಡಬೇಕಾಗಿದ್ದಿತು.

ಸುಂಕವಿಲ್ಲದೆ ವ್ಯಾಪಾರ

"ಈ ಏರ್ಪಾಡಿಗೆ ಒಪ್ಪಿ ಬ್ರಿಟಿಷರು ಇಲ್ಲಿ ಪುನಃ ವ್ಯಾಪಾರಕ್ಕಾರಂಭಿಸಿದರು. ೧೭೧೫ರಲ್ಲಿ ಅವರು ಫರೂಖಸಿಯಾರ ಬಾದಶಹನಿಂದ ಸುಂಕ ಕೊಡದೆ ವ್ಯಾಪಾರ ಮಾಡಲಿಕ್ಕೆ ಅನುಮತಿ ತೆಗೆದುಕೊಂಡರು. ಅವರು ಒಟ್ಟಿನ ಮೇಲೆ ವರ್ಷಕ್ಕೆ ೧೦,೦೦೦ ರೂಪಾಯಿ ಸರಕಾರಕ್ಕೆ ಕೊಟ್ಟರೆ ಸಾಕಾಗಿದ್ದಿತು. ಮಾತ್ರವಲ್ಲ; ಬ್ರಿಟಿಷರು ದೇಶದ ಯಾವ ಭಾಗದಲ್ಲಿ ವ್ಯಾಪಾರ ಮಾಡಲಿಚ್ಛಿಸಿದರೂ ಅಲ್ಲಿ ಅವರಿಗೆ ೪೦ ಎಕರೆ ಜಮೀನು ದೇಕಾಸ್ತಿಗೆ ಕೊಡುವಂತೆಯೂ ಅವರ ಬಾದಶಹನನ್ನು ಬೇಡಿಕೊಂಡಿದ್ದರು. ಉದಾರ ಫರೂಖಶಿಯಾರನು ಇದಕ್ಕೂ ಒಪ್ಪಿಗೆ ಕೊಟ್ಟಿದ್ದ.

"ಎಲ್ಲಿ ಹೋದರೂ ೪೦ ಎಕರೆ ಜಮೀನು ಕೊಡುವಂತೆ ಬಾದಶಹನ

[೧೫ನೆಯ ಪುಟಕ್ಕೆ ಮುಂದುವರಿದಿದೆ]

ಹಿಂದೂ ದೇಶವನ್ನು ಬಲಗೊಳಿಸಿರಿ

ನಿಮ್ಮ ರಾಷ್ಟ್ರದ ಶಕ್ತಿಯೇ ನಿಮಗೆ ಸುರಕ್ಷತೆ ಕೊಡುವುದು.

ಅದರ ರಕ್ಷಣೆಗೆ — ನಿಮ್ಮ ರಕ್ಷಣೆಗೆ — ಹಿಂದೂ ದೇಶಕ್ಕೆ ಅನೇಕ ಮಂದಿ ಸೈನ್ಯ ಶಿಕ್ಷಣ ಪಡೆದವರು, ಅನೇಕ ಟ್ಯಾಂಕ್‌ಗಳು, ಅನೇಕ ವಿಮಾನ ಪಡೆಗಳು, ಅನೇಕ ಮಿಷಿನ್ ಗನ್‌ಗಳ ಅವಶ್ಯಕತೆಯಿದೆ. ಡಿಫೆನ್ಸ್ ಲೋನ್‌ಗಳಿಗೆ ಚಂದಾ ಕೊಡುವದರಿಂದ ಈ ಅವಶ್ಯಕತೆಗಳನ್ನು ಒದಗಿಸಲು ಸಹಾಯ ಮಾಡಿದಂತಾಗುತ್ತೆ ಮತ್ತು ಹಿಂದುಸ್ಥಾನದ ಮತ್ತು ನಿಮ್ಮ ರಕ್ಷಣೆಯನ್ನು ಕೂಡ ದೃಢಪಡಿಸಿದಂತಾಗುತ್ತೆ.

ಇದಲ್ಲದೆ ನಿಮ್ಮ ಹಣ ಸುರಕ್ಷಿತವಾಗಿದ್ದು ಲಾಭ ದೊರೆಯುವುದು. ಇದಕ್ಕೆ ಸರ್ಕಾರದ ಮತ್ತು ಇಡೀ ರಾಷ್ಟ್ರದ ಆಸರವಿದೆ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ರೂ. ೧೦, ೫೦, ೫೦೦ ಗಳಿಗೆ ಸಿಗುತ್ತಾವೆ. ಈ ಮೊತ್ತಗಳು ಹತ್ತು ವರ್ಷದನಂತರ ಕ್ರಮ ರೂ. ೧೪ ... ಆಗಿ ಸಿಗುವುದು. ... ಆದಾಯ ತೆರಿಗೆಯಿಲ್ಲ. ... ರೂ. ೫೦೦೦ ಗಳಿಗಿಂತ ಹೆಚ್ಚು ... ಪಡೆಯಲು ಸಾಧ್ಯವಿಲ್ಲ. ನಿಮ್ಮ ಸಮೀಪದ ಅಂಚೆ ಕಚೇರಿಯಲ್ಲಿ ಕೇಳಿ.

೩ ವರ್ಷ ಡಿಫೆನ್ಸ್ ಬಾಂಡ್‌ಗಳು ರೂ. ... ನೂರರ ... ಸಿಗುವುವು. ... ೧೯೪೩ ಆಗಸ್ಟ್ ೧ನೇ ... ನೂರಕ್ಕೆ ೧೦೧ ರಂತೆ ಹಿಂದಕ್ಕೆ ಕೊಡಲ್ಪಡುವುದು. ... ಬಡ್ಡಿ. ಅದು ೬ ತಿಂಗಳಿಗೊಂದು ಸಾರಿ ಪಡೆಯಬಹುದು. ... ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸರ್ಕಾರಿ ಟ್ರೆಜರಿ ... ಅರ್ಜಿಮಾಡಿಕೊಳ್ಳಬಹುದು.

ಬಡ್ಡಿಯಿಲ್ಲದ ಬಾಂಡುಗಳು ರೂ. ೫ಂಕ್ಕೆ ಮೇಲ್ಪಟ್ಟು ಸಿಗುತ್ತವೆ. ೩ ವರ್ಷಗಳ ನಂತರ ಹಣ ವಾಪಸು ಪಡೆಯಬಹುದು. ೧ ವರ್ಷವಾದ ಮೇಲೆ ಹಣ ಪಡೆಯಬೇಕಾದರೆ ೩ ತಿಂಗಳಿಗೆ ಮುಂಚೆ ನೋಟೀಸ್ ಕೊಡಬೇಕು. ... ಯಾವಾಗಲಾದರೂ ಪಡೆಯಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಅಥವಾ ಸರ್ಕಾರಿ ಟ್ರೆಜರಿ ಇವುಗಳಲ್ಲಿ ಅರ್ಜಿಮಾಡಿಕೊಳ್ಳಿರಿ.

ಇಂಡಿಯಾ ಡಿಫೆನ್ಸ್ ಲೋನ್‌ಗಳನ್ನು ಕೊಳ್ಳಿರಿ.

ವಿಚಿತ್ರ ಪ್ರಪಂಚ

ಹೆಣ್ಣು ಜಾತಿಯ ಮೇಲೆ ಸೇಡು!

ತಾನು ಪ್ರೀತಿಸಿದ್ದ ಒಬ್ಬಾಕೆ ಇನ್ನೊಬ್ಬನನ್ನು ವಿವಾಹವಾದ್ದರಿಂದ ನಿರಾಶನಾದ ಜಾನ್ಸನ್ ಎಂಬ ಅಮೇರಿಕದ ಒಬ್ಬ ಡಾಕ್ಟರನು ಹೆಣ್ಣು ಜಾತಿಯನ್ನೇ ಪ್ರಬಲವಾಗ ದ್ವೇಷಿಸಿ, ಸೇಡು ತೀರಿಸಲಾರಂಭಿಸಿರುವನು ಮತ್ತು ಅದರ ಫಲವಾಗಿ ಅನೇಕ ಬಾರಿ ಪಟ್ಟೆಯಾಗಿ ದಂಡನೆಗೂ ಶಿಕ್ಷೆಗೂ ಗುರಿಯಾಗಿರುವನು. ಒಮ್ಮೆ ಅಸ್ವಸ್ಥೆಯಾಗಿ ಬಂದಿದ್ದ ಒಬ್ಬ ತರುಣಿಗೆ ಸ್ನಾನಕ್ಕೆ ಹಂಡೆ ತುಂಬ ತಾಯಿ ಹಾಕಿಇಟ್ಟಿದ್ದ. ಅವಳು ತಿಳಿಯದೆ, ನೀರೆಂದು ತಾಯಿಯನ್ನೇ ಸ್ನಾನಮಾಡಿ ಮೈಯೆಲ್ಲ ಮಸಿಮಾಡಿಕೊಂಡಳು. ಕೋರ್ಟಿನಲ್ಲಿ ಫಿರ್ಯಾದಾಗಿ ಡಾಕ್ಟರನು ೬೦೦೦ ಡಾಲರು ನಷ್ಟ ಕೊಡಬೇಕಾಯಿತು. ಮುಂದೆ ಒಂದು ದಿನ ಅವನು ಪ್ರಾಯದ ಕೆಲವು ಹುಡುಗಿಯರನ್ನು ಮನೆಗೆ ಕರೆಸಿ, ಅವರನ್ನು ಬಟ್ಟೆಕೊಟ್ಟು ಸ್ನಾನಕ್ಕಾಗಿ ತನ್ನ ಸ್ನಾನದ ಕೋಣೆಗೆ ಕಳುಹಿಸಿಕೊಟ್ಟ. ಆ ನಲ್ಲೆಯರು ನೀರಿಗಿಳಿದೊಡನೆಯೇ ಅವರ ಬಟ್ಟೆಗಳು ಹರಿದು ಚೂರಾದುವು. ಅವರು ಬಹಳ ಸಮಯದ ತನಕ ಕೋಣೆಯಲ್ಲಿ ನಗ್ನರಾಗಿಯೇ ಇರಬೇಕಾಯಿತು. ತಮಗಾದ ಈ ಅಪಮಾನಕ್ಕಾಗಿ ಅವರು ಫಿರ್ಯಾದಿ ಮಾಡಲು ಡಾಕ್ಟರನು ಪುನಃ ಅವರಿಗೆ ಕೆಲವು ಸಾವಿರ ಡಾಲರುಗಳನ್ನು ಪರಿಹಾರ ಕೊಡಬೇಕಾಯಿತು. ಇನ್ನೊಮ್ಮೆ ತನ್ನ ಮನೆಯ ಒಂದು ಸಭೆಗೆ ತಾನು ಮೊದಲು ಪ್ರೀತಿಸಿದ ಆ ಹುಡುಗಿಯನ್ನೂ ಅವಳ ಗಂಡನನ್ನೂ ಕರೆಸಿದ. ಗಂಡನು ಸಭಾ ಕಾರ್ಯಗಳಲ್ಲಿ ಇದ್ದಾಗ, ಆಕೆ ವಿಶ್ರಮಿಸಲಿಕ್ಕೆ ಹೋದಳು. ಅವಳ ಕೋಣೆಯಲ್ಲಿ ಈ ಡಾಕ್ಟರನು ಅನೇಕ ವೈಜ್ಞಾನಿಕ ಉಪಾಯಗಳ ಮೂಲಕ ಭೂತ ಪಿಶಾಚಿ ಮೊದಲಾದವುಗಳ ಭಯಂಕರ ಸ್ವರೂಪಗಳನ್ನು ಆಕೆಗೆ ತೋರಿಸಿ ಭಯಗೊಳಿಸಿದ. ಈ ಅಪರಾಧದ ಮೇಲೆ ಅವನಿಗೆ ಒಂದು ವರ್ಷದ ಸಕ್ರಮ ಶಿಕ್ಷೆಯಾಯಿತು. ಆದರೂ ಹೆಣ್ಣು ಜಾತಿಯ ಮೇಲೆ ಸೇಡು ತೀರಿಸಿಕೊಳ್ಳುವ ಅವನ ಆಶೆ ಇನ್ನೂ ಪೂರ್ತಿ ಆಗಿರುವುದಿಲ್ಲ!

ಎಳೆಹೆಂಗಸಿಗೂ ಯುದ್ಧಕ್ಕೆ ಆಹ್ವಾನ

೨೧ ವರ್ಷ ಪ್ರಾಯವಾದ ಗಂಡಸರೆಲ್ಲರೂ ಸೇನೆಗೆ ಸೇರಬೇಕೆಂಬ ನಿರ್ಬಂಧವು ಈಗ ಬ್ರಿಟನಿನಲ್ಲಿದೆ. ಈ ನಿರ್ಬಂಧದ ಕಾನೂನಿಗನುಗುಣವಾಗಿ ಡೆಸ್ಮಂಡ ಡೇವಿಸ ಎಂಬ ೨೧ ವರ್ಷ ಪ್ರಾಯದ ಒಬ್ಬ ವ್ಯಕ್ತಿ ಸೇನೆಗೆ ಸೇರಬೇಕೆಂದು ಸೇನಾಧಿಕಾರಿಗಳ ಆಹ್ವಾನ ಹೋಯಿತು. ನೋಟೀಸನ್ನು ಓದಿ ವ್ಯಕ್ತಿಗೆ ಪರಮಾಶ್ಚರ್ಯವಾಯಿತು. ಕಾರಣ, ಡೆಸ್ಮಂಡ ಡೇವಿಸ ಎಂಬ ಆ ವ್ಯಕ್ತಿ ಗಂಡಲ್ಲ, ಹೆಣ್ಣಾಗಿದ್ದಿತು. ಆದರೆ ಆಜ್ಞೆಯಂತೆ ಹೋಗದಿರುವುದಾದರೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುವುದು. ಆದುದರಿಂದ ಡೆಸ್ಮಂಡಳು ನೋಟೀಸನ್ನು ತೆಗೆದುಕೊಂಡು ಸೇನಾಧಿಕಾರಿಯ ಮುಂದೆ ಹಾಜರಾದಳು. ಅವಳನ್ನು ನೋಡಿ ಅಧಿಕಾರಿಯ ತಲೆ ಸಂಕೋಚದಿಂದ ತಗ್ಗಿತು. ಅವನು ಒಬ್ಬ ಹೆಂಗಸನ್ನು ಯುದ್ಧಕ್ಕೆ ಕರೆದಿದ್ದನು! ತನಿಖೆ ಮಾಡಿ ನೋಡುವಾಗ, ಡೆಸ್ಮಂಡ ಡೇವಿಸ ಎಂಬ ಹೆಸರು ಗಂಡಸಿನದರಂತೆ ತೋರಿದುದರಿಂದ, ಈ ಪ್ರಮಾದವಾಯಿತೆಂದು ಹೇಳಿ ಡೇವಿಸಮ್ಮಳನ್ನು ಹಿಂದಕ್ಕೆ ಕಳುಹಿಕೊಟ್ಟರು.

ಬೆಲ್ಜಿಯಮಿನ ಹುಚ್ಚರ ಪಟ್ಟಣ

ಬೆಲ್ಜಿಯಮಿನ ಘೀಲ್ ಎಂಬುದು ಆ ದೇಶದ ಹುಚ್ಚರ ಪಟ್ಟಣವಾಗಿದೆ. ಅದರ ನಿವಾಸಿಗಳೆಲ್ಲರೂ ಹುಚ್ಚರಾಗಿರುವರು. ಹುಚ್ಚರು ಇಲ್ಲಿ ಮಾವನ ಮನೆಯ ಅಳಿಯಂದಿರ ಹಾಗೆ ಸರಕಾರ ಅಥವಾ ಸಂಬಂಧಿಗಳ ಅತಿಥಿಗಳಾಗಿ ಸುಖದಿಂದ ಕಾಲಯಾಪನೆ ಮಾಡುತ್ತಾರೆ. ಅವರು ಆ ಊರಿನೊಳಗಿರುವಷ್ಟು ಕಾಲ ಏನು ಮಾಡಲಿಕ್ಕೂ ಸ್ವತಂತ್ರರು. ಆದರೆ ಅಲ್ಲಿಂದ ಹೊರಗೋಡಿದರೆಂದರೆ, ಹುಚ್ಚರ ಆಸ್ಪತ್ರೆಯನ್ನು ಸೇರಬೇಕಾಗುತ್ತದೆ. ಅದಕ್ಕೆ ಹೆದರಿ ಅವರು ಯಾರ ಗೋಜಿಗೂ ಹೋಗದೆ, ಸಂಭಾವಿತರಾಗಿ ಇರುತ್ತಾರೆ. ಇವರು ಹುಚ್ಚು ಬುದ್ಧಿವಂತರೂ, ಬುದ್ಧಿವಂತ ಹುಚ್ಚರೂ ಆಗಿದ್ದಾರೆ. ಆದುದರಿಂದ ಆಸ್ಪತ್ರೆಗಿಂತ ಊರೇ ಆಗಬಹುದೆಂಬುದು ಅವರಿಗೆ ಮನಿತವಾಗಿದೆ.

ನಾಯಿಗೆ ಮರಣಾಂತ ಶಿಕ್ಷೆ

ಅಮೇರಿಕದ ಉಚ್ಚ ನ್ಯಾಯಸ್ಥಾನದಲ್ಲಿ ಕಳೆದ ಒಂದು ವರ್ಷದಿಂದ ಒಂದು ವಿಚಿತ್ರ ವ್ಯವಹರಣೆಯು ನಡೆಯುತ್ತಲಿದೆ. ಮೂರು ಮೂರು ಬಾರಿ ದಾರಿಗರನು ಕಚ್ಚಿ ಹಾನಿ ಮಾಡಿದ್ದರಿಂದ, ಪೋಲೀಸರು ಫಿರ್ಯಾದಿ ಮಾಡಿ ಬೋಬ್ ಎಂಬ ನಾಯಿಗೆ ಕೆಳ ಕೋರ್ಟಿನಲ್ಲಿ ಮರಣಾಂತ ಶಿಕ್ಷೆ ಆಗಿದ್ದಿತು. ಸಾಮಾನ್ಯವಾಗಿ ಇಂಥ ಫಿರ್ಯಾದಿಗಳಲ್ಲಿ ಯಾರೂ ಅಪೀಲು ಮಾಡುವುದಿಲ್ಲವಾದರೂ, ಈ ನಾಯಿಯ ಯಜಮಾನಿ ಹೆಲೆನ ಎಂಬಾಕೆ, ಅಮೇರಿಕದ ಉಚ್ಚ ನ್ಯಾಯಸ್ಥಾನಕ್ಕೆ ಅಪೀಲು ಮಾಡಿ, ನಾಯಿಯ ಪ್ರಾಣರಕ್ಷಣೆಗಾಗಿ ಭಗೀರಥ ಪ್ರಯತ್ನ ನಡೆಸುತ್ತಿರುವಳು. ಅವಳು ಈ ವಿಷಯದಲ್ಲಿ ತೋರಿಸಿರುವ ಸಹನಾಶಕ್ತಿ ಮತ್ತು ಸಾಹಸವು ಅಮೇರಿಕದ ಲಕ್ಷಾಂತರ ಜನರ ಮೆಚ್ಚುಗೆಯನ್ನು ಪಡೆದಿರುವುದು. ಅಪೀಲು ನಾಯಿಯ ಗುಣಕ್ಕೆ ಇತ್ಯರ್ಥವಾಗಲಿ ಅಥವಾ ಅದರ ಅವಗುಣಕ್ಕೆ ತೀರ್ಮಾನವಾಗಲಿ; ಆ ನಾಯಿ ಬದುಕಲಿ, ಅಥವಾ ಅದು ಸಾವಿಗೆ ಕೊಡಲ್ಪಡಲಿ, ಹೇಗಿದ್ದರೂ ಈ ವಿಚಿತ್ರ ವ್ಯವಹರಣೆಯಿಂದ ಅದರ ಕೀರ್ತಿ ಎಲ್ಲೆಲ್ಲೂ ಹರಡಿತು!

ಹುಡುಗಿಯರ ಮಾರಾಟ

ಸಿಮ್ಲಾ ಮತ್ತು ಅದರ ಸುತ್ತಮುತ್ತಲಿನ ಗುಡ್ಡ ಕಾಡುಪ್ರದೇಶಗಳ ಆದಿ ನಿವಾಸಿಗಳಲ್ಲಿ ವಿವಾಹಿತ ತರುಣಿಯರನ್ನು ಒಬ್ಬರಿಂದೊಬ್ಬರಿಗೆ ಮಾರುವ ರೂಢಿಯು ಇರುತ್ತದೆ. ಅಷ್ಟು ಮಾತ್ರವಲ್ಲ; ಅವರಲ್ಲಿ ಧನಿಕರೆನ್ನಿಸಿಕೊಂಡವರು ಡಜನ್ ಗಟ್ಟಲೆ ಹುಡುಗಿಯರನ್ನು ಮದುವೆಯಾಗುತ್ತಾರೆ. ಈ ಪದ್ಧತಿಗಳನ್ನು ನಿಲ್ಲಿಸುವುದಕ್ಕೋಸ್ಕರ ಕಾನೂನಾಗಬೇಕೆಂದು ಪಾಟಿಯಾಲಾ ಸರಕಾರವನ್ನು ಪ್ರಾರ್ಥಿಸಲಿಕ್ಕೆ ಖಂಡನಘಾಟಿಯಾಲಾ ಸರಕಾರವನ್ನು ಪ್ರಾರ್ಥಿಸಲಿಕ್ಕೆ ಖಂಡನಘಾಟಿ ಎಂಬಲ್ಲಿ ಒಂದು ಸಭೆ ನೆರೆದಿದ್ದಿತು. ಆ ಸಭೆಯಲ್ಲಿ ಕೂಡಿದ ಒಬ್ಬಾಕೆ ೨೦ ಬಾರಿ ಮಾರಾಟವಾಗಿದ್ದಳು, ಮತ್ತು ಒಬ್ಬಾತ ೨೨ ಮಂದಿ ಹುಡುಗಿಯನ್ನು ಮದುವೆಯಾಗಿರುವನೆಂದು ಸಭೆಯ ಅಧ್ಯಕ್ಷರು ಹೇಳಿದ್ದನ್ನು ಕೇಳಿ ಜನರಿಗೆ ಪರಮಾಶ್ಚರ್ಯವಾಯಿತು. ತಮ್ಮ ಸಮಾಜದಲ್ಲಿ ಯಾರು ಏನು ಮಾಡುತ್ತಾರೆಂಬುದು, ಅವರಿಗೇ ತಿಳಿದಿರಲಿಲ್ಲ. ಅಲ್ಲಿ ಹೆಂಗಸರಾಗಲೀ ಗಂಡಸರಾಗಲೀ ೧೦–೧೨ ಬಾರಿ ಮದುವೆಯಾಗುವುದು ಒಂದು ಸಾಮಾನ್ಯ ಪದ್ಧತಿ ಆಗಿಬಿಟ್ಟಿದೆಯಂತೆ!

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ.

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,—ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು.

ಧಾರ್ಮಿಕ ವಿಚಾರ:

ಅನಂತ ಚತುರ್ದಶಿ

[ವಿದ್ವಾಂಸನಾದ ಬ್ರಾಹ್ಮಣನು ವಿದ್ಯಾದಾನ ಮಾಡಲಿಲ್ಲ; ಆತನು ಮುಂದಿನ ಜನ್ಮದಲ್ಲಿ ಮರವಾಗಿ ಹುಟ್ಟಿದ, ಆ ಮರದ ಹಣ್ಣನ್ನು ಹುಳ ಹಕ್ಕಿಗಳೂ ಮುಟ್ಟದಾದವು; ಧನಿಕ ವ್ಯಾಪಾರಿಯೊಬ್ಬನು ಬಡವರಿಗೆ ಸಹಾಯ ಮಾಡಲಿಲ್ಲ. ಆತನು ಪಶುವಾಗಿ ಹುಟ್ಟಿದ; ಹುಲ್ಲುಗಾವಲಿದ್ದರೂ ಪಶುವಿನ ಹಸಿವು ಇಂಗಲಿಲ್ಲ; ಇಹದಲ್ಲಿ ಸತ್ಕರ್ಮ ಮಾಡದವರಿಗೆ ಪರದಲ್ಲಿಯೂ ಸುಖವಿಲ್ಲವೆಂಬುದು ಅನಂತ ವ್ರತದ ತತ್ವವಾಗಿದೆ.]

ಭಾದ್ರಪದ ಶುಕ್ಲ ಚತುರ್ದಶಿಯಂದು ಹಿಂದುಗಳ ವಿಶೇಷ ಹಬ್ಬ, ಅತ್ಯಂತ ಪುಣ್ಯದಾಯಕವಾದ ಹಬ್ಬ ಅನಂತ ಚತುರ್ದಶಿಯು ಸರ್ವತ್ರ ಹಿಂದೂದೇಶದಲ್ಲಿ ಆಚರಿಸಲ್ಪಡುತ್ತದೆ. ಜನರು, ಪುಣ್ಯ ಕಾರ್ಯಗಳನ್ನು ಮಾಡಬೇಕು; ಲೋಕೋಪಕಾರಿಗಳಾಗಿ ಜೀವಿಸಬೇಕು; ಸ್ವಾರ್ಥವನ್ನು ವರ್ಜಿಸಬೇಕು; ಜೀವನವನ್ನು ಹೀಗೆ ಪಾವನವಾಗಿಮಾಡುವುದರಿಂದ ಮಾತ್ರ ಶ್ರೇಯಸ್ಸು, ಯಶಸ್ಸು ಇದೆಯೆಂಬುದೇ ಈ ನೋಂಪಿಯ ಗುಟ್ಟು. ರಾಜ್ಯವನ್ನು ಕಳಕೊಂಡ ಪಾಂಡವರಿಗೆ ಶ್ರೀ ಕೃಷ್ಣನು ಈ ತತ್ವವನ್ನು ತಿಳಿಸಿ, ತಿರಿಗಿ ಅವರು ಸುಖದಿಂದ, ಸಂಭ್ರಮದಿಂದ ರಾಜ್ಯವನ್ನಾಳುವಂತೆ ಮಾಡಿದನೆಂಬುದು ಮಹಾ ಭಾರತದಲ್ಲಿ ಉಕ್ತವಾಗಿದೆ.

ಪಾಂಡವರು ಜೂಜಾಡಿ ಕೌರವನೊಡನೆ ಸೋತು, ಹಾಕಿದ ಪಂಥಕ್ಕೆ ಅನುಗುಣವಾಗಿ ಕಾಡಿಗೆ ಹೋಗಬೇಕಾಯಿತು. ಕಾಡಿನಲ್ಲಿ ಬಹಳ ಕಾಲ ಅಂಡಲೆದರು. ಒಮ್ಮೆ ಭಗವಾನ್ ಶ್ರೀ ಕೃಷ್ಣನು ಅಲ್ಲಿಗೆ ಬಂದನು. ಪಂಚ ಪಾಂಡವರು, ಭಗವಂತನ ಪಾದದಲ್ಲಿ ಅಡ್ಡಬಿದ್ದು, ತಮ್ಮನ್ನು ಹಿಡಿದ ಈ ದಾರಿದ್ರ್ಯವು ಎಂದು ಹೋಗುವುದೋ, ತಿರಿಗಿ ನಾವೆಂದು ಸಾಮ್ರಾಜ್ಯವನ್ನು ಪಡೆಯುವೆವೋ ಎಂದು ಕೇಳಿಕೊಂಡರು. ಕರುಣಾಳುವಾದ ಭಗವಂತನು ಅವರಿಗೆ ಬಹಳ ಪುಣ್ಯದಾಯಕವಾದ ಅನಂತನ ವ್ರತವನ್ನು ತಿಳಿಸಿ, ಅದನ್ನು ಆಚರಿಸುವುದರಿಂದ ನೀವು ತಿರಿಗಿ ಕಳೆದ ಸಾಮ್ರಾಜ್ಯವನ್ನು ಪಡೆಯುವಿರಿ ಎಂದು ಉಪದೇಶಿಸಿದನು. ಅದರ ವಿಷಯವಾಗಿ ಕೃತಯುಗದಲ್ಲಿ ನಡೆದ ಒಂದು ಕಥೆಯನ್ನು ಅವರಿಗೆ ವಿವರಿಸಿದನು.

ಕೃತಯುಗದಲ್ಲಿ ಸುಮಂತುವೆಂಬ ಒಬ್ಬ ನಿಷ್ಠಾವಂತ ಬ್ರಾಹ್ಮಣನಿದ್ದನು. ಆತನಿಗೆ ಮಹಾ ಪತಿವ್ರತೆಯಾದ ಪತ್ನಿಯೊಬ್ಬಳಿದ್ದಳು. ಆಕೆ ಸುಶೀಲೆಯೆಂಬ ಕನ್ಯಾರತ್ನವನ್ನು ಹೆತ್ತು ತೀರಿಹೋದಳು. ಮುಂದೆ ಆ ಬ್ರಾಹ್ಮಣನು ಎರಡನೆಯ ಹೆಂಡತಿಯನ್ನು ಮಾಡಿಕೊಂಡನು. ಆಕೆ ಬಹಳ ನಿಷ್ಠುರದವಳೂ, ಕರ್ಕಶಳೂ ಆಗಿದ್ದಳು.

ಸುಮಂತುವು ತನ್ನ ಮಗಳಿಗೂ ಹೆಂಡತಿಗೂ ಸರಿಬೀಳದಿರುವುದನ್ನು ನೋಡಿ ಮಗಳನ್ನು ಕೌಂಡಿನ್ಯ ಋಷಿಗೆ ಧಾರೆಯೆರೆದು ಕೊಟ್ಟನು. ಮಗಳನ್ನೂ ಅಳಿಯನನ್ನೂ ಕೊಟ್ಟು ಕಳುಹಿಸುವಾಗ, ಅವರಿಗೆ ದಾರಿಯಲ್ಲಿ ಹಸಿವಾದರೆ ತಿನ್ನಲು ಏನಾದರೂ ಕೊಡಬೇಕೆಂದು ಸುಮಂತು ಆಲೋಚಿಸಿದನು. ಇದನ್ನು ತಿಳಿದ ಅವನ ಹೆಂಡತಿಯು ಮನೆಗೆ ಹೋಗಿ ಸಾಮಾನಿನ ಕೋಣೆಯ ಬಾಗಿಲು ಹಾಕಿಬಿಟ್ಟಳು. ಬ್ರಾಹ್ಮಣನು ಹೊರಗೆ ಒಂದು ಮೂಲೆಯಲ್ಲಿದ್ದ ಸ್ವಲ್ಪ ಗೋಧಿಹಿಟ್ಟನ್ನು ಮಗಳಿಗೆ ಕಟ್ಟಿಕೊಟ್ಟು ಅವರನ್ನು ಆಶೀರ್ವದಿಸಿ ಕಳುಹಿಸಿದನು.

ಅವರು ಕಾಡಿನ ನಡುವೆ ನಡೆದು ಮುಂದೆ ಹೋಗುತ್ತಾ ಸುಮಾರು ೨ ತಾಸು ಹೊತ್ತಿಗೆ ಒಂದು ನದಿಯ ತೀರಕ್ಕೆ ಬಂದರು. ಋಷಿಯು ಅಲ್ಲಿಯೇ ಆಶ್ರಮ ಮಾಡಿ ಅನುಷ್ಠಾನಕ್ಕೆ ಕುಳಿತನು. ಅಲ್ಲಿ ಕೆಲವು ಜನ ಹೆಂಗುಸರು ಕೆಂಪು ಬಟ್ಟೆಯುಟ್ಟು ಕಲಶಪೂಜೆ ಮಾಡುತ್ತಿದ್ದರು. ಅವರು ಅನಂತನ ವ್ರತವನ್ನು ಮಾಡುವುದಾಗಿ ತಿಳಿಯಿತು. ಸುಶೀಲೆಯೂ ಅವರೊಡನೆ ಅನಂತನ ವ್ರತವನ್ನು ಮಾಡಿದಳು. ಅನಂತನ ವ್ರತದಿಂದ ಆಶ್ರಮದಲ್ಲಿ ವೈಭವವು ಹೆಚ್ಚಾಯಿತು.

ಕೌಂಡಿನ್ಯನೊಡನೆ ಒಮ್ಮೆ ಸುಶೀಲೆಯು ಈ ಐಶ್ವರ್ಯವೆಲ್ಲವೂ ಅನಂತನ ವ್ರತದ ಪ್ರಭಾವದಿಂದ ಎಂದು ಹೇಳಿದಳು. ಕೌಂಡಿನ್ಯನಿಗೆ ಆಕೆಯ ಮಾತು ಮೆಚ್ಚಲಿಲ್ಲ; ಅವನು ಕಿಡಿಕಿಡಿಯಾದನು. ಅದೆಲ್ಲವೂ ತನ್ನ ತಪಸ್ಸಿನ ಮಹಾತ್ಮ್ಯದಿಂದ ಎಂದು ಋಷಿಯು ಹೇಳಿದನು. ಮುಂದೆ ಅವರು ಅನಂತನ ವ್ರತವನ್ನು ಮಾಡಲಿಲ್ಲ.

ಕೆಲಕಾಲ ಕಳೆಯಲು, ಒಂದ ಸಂಪತ್ತು ಹಿಂದೆ ಹೋಯಿತು. ಅವರು ದರಿದ್ರರಾದರು! ಋಷಿಗೆ ಆಗ ತಿಳಿಯಿತು, ತಾನು ಅನಂತ ವ್ರತವನ್ನು ತಿರಸ್ಕರಿಸಿದುದು ತಪ್ಪಾಯಿತೆಂದು. ಮತ್ತೆ ಕೌಂಡಿನ್ಯ ಋಷಿಯು ಪಶ್ಚಾತ್ತಾಪಗೊಂಡು ಅನಂತ ದೇವರನ್ನು ದರ್ಶನ ಮಾಡದೆ ಆಶ್ರಮಕ್ಕೆ ಮರಳಲಾರೆನೆಂದು ಪ್ರತಿಜ್ಞೆ ಹಾಕಿ ಆ ಗ್ರಾಮದಿಂದ ಹೊರಟು ಹೋದನು.

ಮಾರ್ಗದಲ್ಲಿ ಒಂದು ಹಣ್ಣುಗಳಿಂದ ತೂಗಿದ ಮಾವಿನ ಮರವು ಕಾಣಸಿಕ್ಕಿತು. ಹಕ್ಕಿಗಳಾಗಲಿ ಹುಳಗಳಾಗಲಿ ಆ ಮರದ ಹಣ್ಣನ್ನು ಮುಟ್ಟುತ್ತಿರಲಿಲ್ಲ. ಅಲ್ಲಿ ಕೆಲ ದನಗಳು, ಕರುಗಳು ಇದ್ದುವು. ಅವುಗಳೆಲ್ಲಾ ಹಸಿವಿನಿಂದ ಕಂಗಾಲಾಗಿದ್ದುವು. ಸ್ವಲ್ಪ ಮುಂದೆ ಹೋದಾಗ ಒಂದು ಕತ್ತೆ, ಆನೆ, ಎರಡು ಸರೋವರಗಳು ಕಾಣಸಿಕ್ಕಿದವು. ಅವುಗಳೊಡನೆ ನೀವು ಯಾರಾದರೂ ಅನಂತನನ್ನು ಕಂಡಿರುವಿರೇ ಎಂದು ಕೌಂಡಿನ್ಯನು ಪ್ರಶ್ನಿಸಿದನು. ಅವುಗಳು ಇಲ್ಲವೆಂದವು. ಮಾತ್ರವಲ್ಲದೆ ನೀನು ಮುಂದೆ ಕಾಣುವಿಯಾದರೆ ನಮ್ಮ ಕಷ್ಟವನ್ನು ದಯಮಾಡಿ ತಿಳಿಸಿಬಿಡು ಎಂದೂ ಹೇಳಿದವು.

ಕೌಂಡಿನ್ಯನು ಕಠಿಣ ತಪಸ್ಸು ಮಾಡಿದನು. ಅನಂತನು ಪ್ರತ್ಯಕ್ಷನಾದನು; ಬೇಕಾದ ಸಂಪತ್ತುಗಳನ್ನು ವರವಾಗಿ ಕೊಟ್ಟನು. ಆಗ ಕೌಂಡಿನ್ಯನು ದಾರಿಯಲ್ಲಿ ಕಂಡ ಮರ, ಆನೆ, ಸರೋವರಗಳ ವಿಷಯವಾಗಿ ದೇವರಲ್ಲಿ ದೂರಿಟ್ಟನು. ಆಗ ಅನಂತನು ಅವರು ಹಿಂದಿನ ಜನ್ಮದಲ್ಲಿ ಪರೋಪಕಾರ, ದಾನ, ಸತ್ಕರ್ಮಗಳನ್ನು ಮಾಡದವರು, ಅವರಿಗೆ ಇಂತಹ ಅವಸ್ಥೆ ಬಂದಿತು ಎಂದು ಹೇಳಿದನು. ಮುಂದೆ ದೇವರಿಂದ ಅವುಗಳಿಗೆ ಸದ್ಗತಿಯಾಗುವ ಭರವಸೆ ಪಡೆದು ಕೌಂಡಿನ್ಯ ಋಷಿಯು ಆಶ್ರಮಕ್ಕೆ ಮರಳಿ ಪತ್ನಿಯೊಡನೆ ಅನಂತ ವ್ರತವನ್ನಾಚರಿಸುತ್ತಾ ಸುಖವಾಗಿ ಬಾಳಿದನು.

ಹೀಗೆ ಅನಂತ ಚತುರ್ದಶಿಯು ಅನಂತ ಫಲಗಳನ್ನು ಕೊಡುವುದೆಂದು ಶ್ರೀ ಕೃಷ್ಣನು ಪಾಂಡವರಿಗೆ ಉಪದೇಶಿಸಿದನು.

ಮುಂದೆ ಪಾಂಡವರು ತಪ್ಪದೆ ಅನಂತ ವ್ರತವನ್ನು ಮಾಡಿದರು. ಕಳೆದ ರಾಜ್ಯವನ್ನು ಹೊಂದಿ ಸುಖದಿಂದ ಧರ್ಮಪರಾಯಣರಾಗಿ ಬಾಳಿದರು, ಎಂಬುದು ಜಗತ್ ಪ್ರಸಿದ್ಧವಾದ ಮಹಾ ಭಾರತದಲ್ಲಿ ವರ್ಣಿತವಾಗಿದೆ.



ನಿಮಗೆ ನೆಟ್ಟಗಾಗದ ಕಾರಣ ಒಂದೇ, ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ-ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೀಕು ಕಡಿಮೆಯಾಗುವುದು, ಕೌಚವತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು, ಸಾವಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಫುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು ೪ ಔ., ೬ ಔ. ಮತ್ತು ೧೨ ಔ. ಬಾಟ್ಲಿಗಳಲ್ಲಿ ಕ್ರಮವಾಗಿ ರೂ.೨-೬-೦, ೩-೧೨-೦ ಮತ್ತು ೬-೮-೦ಗಳಿಗೆ ಎಲ್ಲಾ ಕಡೆ ಸಿಗುವುದು. ತರಸಿಕೊಳ್ಳುವ ವಿಳಾಸ:

ಡಾ| ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:
ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ
ಪುರೋಹಿತ ಶ್ವಾಸಹಾರೀ

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ
ಡೋಂಗರೇ
ಇವರ
ಬಾಲಾಮೃತ
ವನ್ನು ಕೊಡುವುದರಿಂದ ಅವರು
ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಬಡವರ ಹುಡುಗಿ!

[ಟನೆಯ ಪುಟದಿಂದ]

'ಕುಮುದ ಇಂಡಸ್ಟ್ರಿಯಲ್ ಮಿಲ್ಸ್' ಕಂಪೌಂಡಿನಲ್ಲಿ ಅನೇಕ ತರುಣರು ನೆರೆದಿದ್ದರು. ಇಪ್ಪತ್ತು ರೂಪಾಯಿ ವೇತನದ ಹದ್ನೈದು ಕೆಲಸಗಳು ಖಾಲಿ ಇದ್ದುದರಿಂದ ಅರ್ಜಿ ಹಾಕಿದ ಯುವಕರನ್ನು ಈ ದಿನ ಭೇಟಿಗೆ ಕರೆದಿದ್ದರು. ಸರಿ ಹತ್ತು ಗಂಟೆಗೆ ಕಪ್ಪು ಮೋಟರೊಂದು ಬಂದು ಕಂಪೌಂಡಿನಲ್ಲಿ ನಿಂತಿತು. ಜವಾನನು ಬಂದು ಕಾರಿನ ಬಾಗಿಲು ತೆರೆದನು. ಸುಂದರ ಸ್ತ್ರೀಯೊಬ್ಬಳು ಕಾರಿನಿಂದ ಕೆಳಗಿಳಿದು ಒಳಗೆ ಹೋದಳು. ಯುವಕರು ಪಿಸು ಪಿಸು ಮಾತಾಡತೊಡಗಿದರು.

'ಈ ದಿನ ಯಜಮಾನರು ಬರುವುದಿಲ್ಲ ಕಾಣುತ್ತದೆ' ಎಂದ ಒಬ್ಬ. 'ಯಜಮಾನರು ಬಾರದಿದ್ದಲ್ಲಿ ಅವರ ಪತ್ನಿಯು ಬಂದಿದ್ದಾರೆ. ಗಂಡನಿಗಿಂತ ಹೆಂಡತಿ ಕಮ್ಮಿ ಯೋಗ್ಯತೆಯವರಲ್ಲ. ಇಬ್ಬರೂ ಒಂದೇ ಮನಸ್ಸಿನಿಂದ, ಬುದ್ಧಿವಂತಿಕೆಯಿಂದ ಕೆಲಸ ನಡೆಸುತ್ತಾರೆ' ಎಂದ ಎರಡನೆಯವ.

'ಹೌದು ನಾನು ಸಹ ಕೇಳಿದ್ದೇನೆ. 'ಬಿಹಾರ ಇಂಡಸ್ಟ್ರಿಯಲ್ ಮಿಲ್' ಎಂಬ ಹೆಸರನ್ನು ಬದಲಾಯಿಸಿ, 'ಕುಮುದ ಇಂಡಸ್ಟ್ರಿಯಲ್ ಮಿಲ್' ಎಂದು ಹೆಸರಿಡಲಿಕ್ಕೆ ಅವರ ಅನನ್ಯ ಪ್ರೇಮವೇ ಕಾರಣವಂತೆ' ಮೂರನೆಯವನೆಂದ.

'ಇನ್ನೊಂದನ್ನು ನೀವು ಕೇಳಲಿಲ್ಲವೆಂದು ಕಾಣುತ್ತದೆ. ತಾನು ಮಿಲ್ಲಿನಲ್ಲಿ ಕೆಲಸಕ್ಕೆ ಇರುವಾಗ ಬಡವರ ಕಷ್ಟ ಅನುಭವಿಸಿದ ಇವಳ ತಾನ ಮಿಲ್ಲಿನ ಯಜಮಾನಿಯಾದ ಕೂಡಲೇ ಕೆಲಸಗಾರರಿಗೆ ಬಹಳ ಸೌಕರ್ಯವಿಟ್ಟಿದ್ದಾಳಂತೆ. ಹೆಂಗಸರು ಕೆಲಸಕ್ಕೆ ಹೋದಾಗ ಅವರ ಎಳೆಗೂಸುಗಳನ್ನು ನೋಡಲು ದಾದಿಗಳಂತೆ. ಮಕ್ಕಳಿಗೋಸ್ಕರ ಶಾಲೆಗಳಂತೆ. ಕೆಲಸದ ಹೆಂಗಸರು ಹೆತ್ತಾಗ ಅವರಿಗೆ ವೇತನ ಕೊಟ್ಟು ಎರಡು ತಿಂಗಳ ರಜೆಯಂತೆ. ಇಂಥಾ ಹೆಂಡತಿ ಸಿಕ್ಕಬೇಕಾದರೆ ಆತನು ಎಷ್ಟು ಜನ್ಮ ಪುಣ್ಯ ಮಾಡಿದ್ದನೊ?'

ಗಂಟೆ ಬಾರಿಸಿತು. ಒಬ್ಬೊಬ್ಬರಿಗೇನೆ ಒಳಗಿನಿಂದ ಕರೆ ಬಂತು. ಆಫೀಸು ಕೋಣೆಯಲ್ಲಿ ಯಜಮಾನನ ಪತ್ನಿಯೂ ಮೆನೇಜರನೂ, ಹಣ್ಣು ಹಣ್ಣು ಮುದುಕನಾದ ಸಲಹೆಗಾರನೂ ಕುಳಿತಿದ್ದರು.

ಪ್ರತಿಯೊಬ್ಬನು ಒಳಗೆ ಬಂದ ಕೂಡಲೇ ಮೆನೇಜರನು ಕೆಲವು ಪ್ರಶ್ನೆ ಕೇಳುತಿದ್ದನು. ಸಲಹೆಗಾರನು ಕೆಲವನ್ನು ಕೇಳುತಿದ್ದನು. ಯಜಮಾನಿಯು ಕೆಲವು ಪ್ರಶ್ನೆ ಕೇಳಿದ ಕೂಡಲೇ ಆ ಯುವಕನ ಪರೀಕ್ಷೆ ಮುಗಿಯುತಿತ್ತು. ಕ್ರಮಾನುಸಾರ ಹೆಸರು ಓದುತ್ತಾ 'ಆರ್ ಮಾಧವ ರಾವ್' ಎಂಬವನ ಸರ್ತಿ ಬಂತು. 'ಮಾಧವರಾವ್' ಎಂದ ಕೂಡಲೇ ಯಜಮಾನಿಯು ಬೆಚ್ಚಿಬಿದ್ದಳು. ಮೆನೇಜರನಿಂದ ಅವನ ಅರ್ಜಿ ತೆಗೆದುಕೊಂಡು ಓದಿದಳು.

ಮಾಧವರಾಯನು ಒಳಗೆ ಬಂದನು. ಕ್ರಮಾನುಸಾರ ಇಬ್ಬರೂ ಪ್ರಶ್ನೆ ಕೇಳಿ ಆಯಿತು. ಈಗ ಯಜಮಾನಿಯ ಸರ್ತಿ ಬಂತು.

ಯಜಮಾನಿ—'ತಮಗೆ ಮದುವೆ ಆಗಿದೆಯೊ?' ಎಂದಳು.

ಎಂಥಾ ವಿಚಿತ್ರ ಪ್ರಶ್ನೆ! ಇದನ್ನು ಕೇಳಿ ಸಲಹೆಗಾರ ಮತ್ತು ಮೆನೇಜರನು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು.

ಮಾಧವ—'ಹೌದು'

ಯಜಮಾನಿ—'ತಾವು ಇಂಗ್ಲೆಂಡಿಗೆ ಹೋಗಿ ಬಂದಿರೊ?'

'ಇಂಗ್ಲೆಂಡ್' ಎಂದು ಕೇಳಿದ ಕೂಡಲೇ ಯುವಕನು ಬೆಚ್ಚಿಬಿದ್ದನು. ಯಜಮಾನಿಯು ಮುಖ ದಿಟ್ಟಿಸಿ ನೋಡಿ ಮೋರೆ ತಗ್ಗಿಸಿದನು.

'ತಾವು ಯಾಕೆ ಜವಾಬು ಕೊಡುವುದಿಲ್ಲ' ಎಂದು ಮೆನೇಜರನು ಕೇಳಿದನು. ಯುವಕನ ಕಣ್ಣು ಇದಿರಿಗೆ ಒಂದು ಚಿತ್ರ ನಿಂತಂತಾಗಿತ್ತು. ಅದರಲ್ಲಿ ಏನಿದೆ ಎಂದು ಅವನೇ ಬಲ್ಲ!

ಯಜಮಾನಿಯು ಅಲ್ಲಿ ಕುಳಿತವರನ್ನು ಉದ್ದೇಶಿಸಿ ಹೇಳಿದಳು 'ಹಿಂದುಗಳಿಗೆ ಹುಡುಗಿಯೆಂದರೆ ಅಷ್ಟಷ್ಟೆ. ಹುಡುಗಿ ಹುಟ್ಟಿದ ಕೂಡಲೇ ತಂದೆತಾಯಿಗಳ ತಲೆಯ ಮೇಲೆ ಒಂದು ಹೊರೆ ಇಟ್ಟಂತೆ ಆಗುತ್ತದೆ. ಆ ಹೊರೆಯನ್ನು ಅವರು ಯಾರಾದರೊಬ್ಬ ಯುವಕನ ಭುಜದ ಮೇಲೆ ಇರಿಸಲಿಕ್ಕೆ ಇಚ್ಛಿಸುತ್ತಾರೆ. ಆದರೆ ಯುವಕರಾದರೊ ಆ ಹೊರೆಯನ್ನು ಕೆಳಗಿಳಿಸುವುದನ್ನು ಮರೆತು, ಅದನ್ನು ವರದಕ್ಷಿಣೆಯಿಂದ ಇನ್ನಷ್ಟು ಭಾರ ಮಾಡುತ್ತಾರೆ. ಈ ಯುವಕನು ಕೂಡಾ ಹಿಂದೆ ಒಬ್ಬ ಬಡ ಹುಡುಗಿಯನ್ನು ವರದಕ್ಷಿಣೆ ಇಲ್ಲದೆ ಮದುವೆಯಾದಲ್ಲಿ ತನ್ನ ಭಾಗ್ಯವು ಕೆಟ್ಟೀತೆಂದು ಎಣಿಸಿ ಅವಳನ್ನು ಧಿಕ್ಕರಿಸಿದ್ದನು. ಇವನ ಆಶೆಯಾದರೊ ಧನಿಕನ ಮಗಳನ್ನು ಮದುವೆಯಾಗಿ ಇಂಗ್ಲೆಂಡಿಗೆ ಹೋಗಿ ಬರಬೇಕೆಂದ ಇತ್ತು.'

'ನಿಜವಾಗಿಯೂ ಹಿಂದುಗಳ ಈ ರೀತಿಯು ಲಜ್ಜಾಹೀನವಾಗಿದೆ. ವಿವಾಹವೆಂದರೆ ಅರ್ಧ ಅಂಗವನ್ನು ಪೂರ್ಣ ಮಾಡುವುದು ಎಂದು ಅರ್ಥ. ವಿವಾಹದ ಉದ್ದೇಶವು ಜೀವನವು ಸರಳ ಮತ್ತು ಸುಖಮಯವೂ ಆಗಿ ಸಾಗಬೇಕು ಎಂದಿದ್ದರೂ ಅದನ್ನು ಯಾರೂ ಲಕ್ಷ್ಯಮಾಡುವುದಿಲ್ಲ. ಈಗಿನ ಕಾಲದಲ್ಲಿ ವರನೆಂದರೆ ವ್ಯಾಪಾರದ ಮಾತಾಗಿದೆ. ಒಬ್ಬನು ಎರಡು ಸಾವಿರವೆಂದರೆ ಇನ್ನೊಬ್ಬನು ಮೂರು ಸಾವಿರವೆನ್ನುತ್ತಾನೆ. ಹೀಗೆ ವರನ ದರ ಏರುತ್ತಾ ಬಂದಿದೆ' ಎಂದು ಮುದುಕನಾದ ಸಲಹೆಗಾರನು ಹೇಳಿದನು.

ಇವರ ಮಾತುಗಳನ್ನು ತಲೆ ಬಾಗಿಸಿ ನಿಂತು ಮಾಧವನು ಕೇಳುತಿದ್ದನು. ಮತ್ತೆ ಅಲ್ಲಿ ನಿಲ್ಲುವುದಾಗದೆ ಕೂಡಲೇ ಆತನು ಅಲ್ಲಿಂದ ಹೊರಗೆ ನಡೆದೇಬಿಟ್ಟ.

[ಹಿಂದಿಯಿಂದ]

ಆರೋಗ್ಯ ಮತ್ತು ಸೌಂದರ್ಯರಕ್ಷೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟು ಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು ಮುಖ್ಯ. ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸಾಬೂನು
CUTICURA SOAP

(ನೇ ಪುಟದಿಂದ)

ಒಪ್ಪಿದ್ದರಿಂದ ಬ್ರಿಟಿಷ್ ವ್ಯಾಪಾರಿಗಳಿಗೆ ಬಂಗಾಳದಲ್ಲಿ ನೀಲಿಯ ಕಾರ್ಖಾನೆಗಳನ್ನು ಸ್ಥಾಪಿಸಲಿಕ್ಕೆ ಬಹಳ ಅನುಕೂಲವಾಯಿತು. ಅದರಿಂದ ದೇಶೀ ವ್ಯಾಪಾರಿಗಳಿಗೂ ಅವರಿಗೂ ಸ್ಪರ್ಧೆ ಹೋರಾಟವಾಗಲಿಕ್ಕೆ ಅನುವಾಯಿತು. ಈ ಸಂಘರ್ಷಣದ ಪರಿಣಾಮವಾಗಿ ಪ್ಲಾಸ್ಸಿಯ ಕದನವು ನಡೆಯಿತು. ಮುಂದೆ ಬಲಿಷ್ಠ ಬ್ರಿಟಿಷರು ನ್ಯಾಯನೀತಿಗಳನ್ನು ಒದಿಗಿಟ್ಟು, ದೇಶದ ಒಂದೊಂದೇ ತುಂಡು ಪ್ರದೇಶವನ್ನು ತಮ್ಮ ಶಾಸನಾಧಿಕಾರಕ್ಕೆ ಸೇರಿಸುತ್ತ ಬಂದರು.

ಬ್ರಿಟಿಷರು ಮಾಡಬೇಕಾದ ಉಪಕಾರ

"ಇವೆಲ್ಲ ಐತಿಹಾಸಿಕ ಘಟನೆಗಳಾಗಿವೆ. ಆದ್ದರಿಂದ ಹಿಂದುಸ್ಥಾನದಲ್ಲಿ ಬ್ರಿಟಿಷರಿಗೆ ಏನಾದರೂ ಜವಾಬುದಾರಿ ಇರುವದಾದರೆ, ಅದು, ಹಿಂದುಸ್ಥಾನಕ್ಕೆ ಸ್ವರಾಜ್ಯಕೊಟ್ಟು ಅವರು ಹಿಂದೆ ಮಾಡಿದ ಅಪರಾಧಗಳನ್ನು ತೊಳೆದುಕೊಳ್ಳಬೇಕಾಗಿದೆ. ಹಿಂದುಸ್ಥಾನದೊಡನೆ ಬ್ರಿಟಿಷರ ಪೂರ್ವ ಸಂಬಂಧವು ಗೌರವಾಸ್ಪದವಾಗಿರುವುದಿಲ್ಲ. ಅವರು ಈಗಲೂ ಹಿಂದುಸ್ಥಾನದ ಮೇಲೆ ಅಧಿಕಾರ ಕೋರುವುದು ಮರ್ಯಾದಾವಹವಾಗಿಯೂ ಇರುವುದಿಲ್ಲ. ಆದ್ದರಿಂದ ಕಾಂಗ್ರೆಸಿನವರು ಹೇಳುವ ಪಾಠವಾ... ಹಿಂದುಸ್ಥಾನದ ಮೇಲಿನ ತಮ್ಮ ಅಧಿಕಾರವನ್ನು ಬ್ರಿಟಿಷರು ಬಿಟ್ಟುಕೊಡುವುದೇ ಅವರು ದೇಶಕ್ಕೆ ಮಾಡಬಹುದಾದ ಮಹೋಪಕಾರವಾಗಿದೆ."

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲರ್.

ಸಿನೇಮಾ ಪುಟ

ಶಾಂತಾ ಆಪ್ಟೆ ಸಾವಿತ್ರಿಯಾಗಿ

ಶಾಂತಾ ಆಪ್ಟೆಯ ಮುಂದಿನ ಅಭಿನಯದ ವಿಷಯವಾಗಿ ಸಿನೇಮಾಲೋಕದಲ್ಲಿ ಬಹಳ ಆಕಾಂಕ್ಷೆಯುಂಟಾಗಿದೆ. ಪ್ರಭಾತ್ ಟಾಕಿಯ ತರುಣ ಚಿತ್ರದಲ್ಲಿ ಆಕೆ 'ಸಾವಿತ್ರಿ'ಯ ಪಾತ್ರ ವಹಿಸಿ ಅಭಿನಯಿಸುವಳೆಂದು ಈಗ ತಿಳಿದು ಬಂದಿದೆ.

ಸಾವಿತ್ರಿ ಚಿತ್ರದ ತಯಾರಿಕೆಗಾಗಿ ಪೂರ್ವ ಸಿದ್ಧತೆಗಳೆಲ್ಲಾ ಪೂರೈಸಿಗೊಂಡಿವೆಯೆಂದೂ ತಿಳಿದು ಬರುತ್ತಿದೆ.

ಶ್ರೀ. ವಿ. ಎ. ಚೆಲ್ಲಪ್ಪ (ಟಿ ಪಿ ರಾಜಲಕ್ಷ್ಮಿಯ ಸಹಾಭಿನಯಗಾರ)ನು ಆಪ್ಟೆಯ ಸಹಾಭಿನಯಗಾರನಾಗಿ ನಟಿಸುವನೆಂದೂ ಸುದ್ದಿ.

ಆತನು ಸತ್ಯವಾನನ ಅಭಿನಯ ಮಾಡುತ್ತಾನೋ (ಹಾಗಾದರೆ ತಮಿಳ ರಾಜ ಭಾಗವತರಿಗೆ ಅಭಿನಯವಿಲ್ಲವಾಗುವುದು) ಅಥವಾ ಯಮನ ಪಾತ್ರವನ್ನು ಅಭಿನಯಿಸುತ್ತಾನೋ ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ.

ನವಂಬರದಲ್ಲಿ ಇದರ ತಯಾರಿಯು ಸಿದ್ಧತೆಯಾಗುವುದೆಂದು ತಿಳಿದು ಬಂದಿದೆ.

ಮೀರಾಬಾಯಿ

ನಮ್ಮಕಾಲಾ ಫಿಲ್ಮ್ಸನವರ 'ಮೀರಾಬಾಯಿ' ಚಿತ್ರವು ಈ ತಿಂಗಳ ಕೊನೆಯ ವಾರದಲ್ಲಿ ಪ್ರದರ್ಶಿತವಾಗುವುದು. ಈ ಚಿತ್ರದ ವಿಷಯ ಸಿನೇಮಾ ಪ್ರೇಕ್ಷಕರಲ್ಲಿ ಅತ್ಯಂತ ಕುತೂಹಲವು ಉಂಟಾಗಿದೆ. ಆಂಧ್ರ ಸಂಗೀತ, ನೃತ್ಯ ನರ್ತನೆ, ಅಭಿನಯ, ನಿರ್ದೇಶಕತ್ವ ಮೊದಲಾದವುಗಳು ಸಮರಸವಾಗಿ ಚಿತ್ರವು ಅತ್ಯುತ್ತಮವಾಗಿದೆಯೆಂದು ತಿಳಿಯುತ್ತದೆ

ಪೂನದ ಯುವತಿ ಜನರ ಮೇಲೆ ಜೋಡೆಸೆದಳು!

ಪೂನಾ ಇಂದು ಹೊಸ ವಿಲಾಸದಲ್ಲಿ ಪಾಶ್ಚಿಮಾತ್ಯ ದೇಶಗಳನ್ನೂ ಮೀರುತ್ತಿದೆ, ಹೊಸ ಹರೆಯದ ಜವ್ವನಿತಿಯರು ಸೈಕಲು ಹತ್ತಿ ಹಾರುವುದನ್ನೋ, ಯುವಕರೊಡಗೂಡಿ ನಿರ್ಲಜ್ಜೆಯಿಂದ ನೀರಲ್ಲಿ ಕಿವಿ ಜಲ ಕೇಳಿ ಮಾಡುವುದನ್ನೋ ನೋಡಿದರೆ ಪಾಶ್ಚಾತ್ಯ ಬಾಲೆಯರೂ ಬೆರಗಾಗಬೇಕು, ಆದರೆ ಅದಕ್ಕೆ ವಿರುದ್ಧ ಹತ್ತನೆಯ ಶತಮಾನದ ಆಚಾರವಂತರಾದ ಜನರೂ ಅಲ್ಲಿದ್ದಾರೆ ಯಾವಳಾದರೂ ಒಬ್ಬ ಹುಡುಗಿ ಒಬ್ಬ ಹುಡುಗನನ್ನು ನೋಡಿಬಿಟ್ಟರೆ ಸಾಕು, 'ಶಾಂತಂ ಪಾಪಂ'' ಎಂದು ಗಾಂಧಿಜಿಯವರಿಗೆ ಆ ವಿಷಯ ಪತ್ರ ಬರೆದು ಪೀಡಿಸುವವರೂ ಇದ್ದಾರೆ ಇಂತಹ ವಿಚಾರವೊಂದು ಮೊನ್ನೆ "ಲಪಂಡಾವ" ಚಿತ್ರವು ದರ್ಶನ ಸಮಯದಲ್ಲಿ ನಡೆಯಿತು

"ಲಪಂಡಾವ" ಚಿತ್ರವು ಬಹಳ ಅಸಭ್ಯ ವರ್ತನೆಗಳಿಂದ ಕೂಡಿದೆ ಎಂಬುದು ಸ್ಥಳೀಕ ಪತ್ರಿಕೆಯೊಂದರಲ್ಲಿ ವಿಮರ್ಶೆ ಬಂತು. ಹಾಗಾಗಿ ಅದರ ಚರ್ಚೆಗೆಂದು ಒಂದು ಕಲಾವಂತರ ಸಾಹಿತಿಗಳ, ಸಿನೇಮಾ ಪ್ರಿಯರ ಸಭೆ ಕೂಡಿತು. ಅದರಲ್ಲಿ ಶ್ರೀ. ಕೃಷ್ಣ ಮರಾಠೆಯವರು ಒಂದು ವಾಕ್ಯವನ್ನು (ಲಪಂಡಾವ ಕಥೆಗೆ ಆಧಾರವಾದ ಕಾದಂಬರಿಯಿಂದ) ಓದಿ ಹೇಳಿದರು. ಸಭಿಕರೆಲ್ಲರೂ ಅಟ್ಟಹಾಸದಿಂದ ನಗಾಡಿದರು. ಅಂತಹ ಅಸಭ್ಯ ಮಾತಿಗಾಗಿ ನಗಾಡುವವರ ಮೇಲೆ ಜೋಡಿನ ಅಭಿಷೇಕವಾಗಬೇಕೆಂದು ಒಬ್ಬ ವಿವಾಹಿತೆ ಯುವತಿಯು ಹೇಳಬಿಟ್ಟಳು! ತರುಣರಿಗೆ ಸಿಟ್ಟು ಬಂತು; ಆಕೆ ಆ ಮಾತನ್ನು ಹಿಂದೆಗೆಯಬೇಕೆಂದು ಹೇಳಿದರು; ಆಕೆ ಕೇಳಲಿಲ್ಲ. ಗಲಭೆಯಾಯಿತು; ಸಭೆ ಚೆದರಿತು; ಮತ್ತೊ ಕೆಲವು ತರುಣರು ಅವಳ ಬಳಿ ಬಂದು ಕ್ಷಮೆ ಕೇಳುವಂತೆ ಹೇಳಿದರು ಸಿಟ್ಟಿನಿಂದ ಅವಳು ತನ್ನ ಜೋಡನ್ನು, ಆ ಗುಂಪಿನ ಮೇಲೆ ಎಸೆದೇ ಬಿಟ್ಟಳು. ಗುಲ್ಲು ಹೆಚ್ಚಾಯಿತು. ಅಷ್ಟರಲ್ಲಿ ಪೋಲೀಸರು ಅಲ್ಲಿಗೆ ಬಂದಿದ್ದುದರಿಂದ ಎಲ್ಲವೂ ಸುಸೂತ್ರವಾಗಿ ಕೊನೆಗೊಂಡಿತು

ನಾಸೀಮ್

ಮಿಸ್, ನಾಸೀಮಳು ಮಿನರ್ವದ ಮುಂದಿನ ಚಿತ್ರ 'ಮಹಾತ್ಮಾ ಸಿಕಂದರ' ದಲ್ಲಿ ನಾಯಿಕಾ ಪಾತ್ರವನ್ನು ವಹಿಸುವಳೆಂದು ತಿಳಿದು ಬಂದಿದೆ.

ಮೋಡರ್ನ್ ಥಿಯೇಟರ್ಸ್

"ಭಕ್ತ ಗೌರಿ" ಮತ್ತು ಊರ್ವಶೀಯ ಪ್ರೇಮ" ಈ ಎರಡು ಚಿತ್ರಗಳ ತಯಾರಿಯು ಮೋಡರ್ನ್ ಥಿಯೇಟರ್ಸಿನಲ್ಲಿ ಭರದಿಂದ ಸಾಗುತ್ತಿದೆ.

ಕಿಶೋರ್ ಶಾಹೂ

ಪ್ರಸಿದ್ಧ ಸಿನೆಮಾಕಲಾ ಪ್ರವೀಣನಾದ ಕಿಶೋರ್ ಶಾಹೂ ಬಾಂಬೇ ಟಾಕೀಸನ್ನು ಸೇರುವುದಾಗಿ ತಿಳಿದಿದೆ. ಈ ಕಂಪೆನಿಯನ್ನು ಇತ್ತೀಚೆಗೆ ಸೇರಿದ ಮಿಸ್. ಸ್ನೇಹ ಪ್ರಭಾ ಪ್ರಧಾನಳ ಜತೆ ಅಭಿನಯಗಾರನಾಗಿ ಆತನು ಇದರಲ್ಲಿ ಅಭಿನಯಿಸುವನೆಂದೂ ತಿಳಿಯುತ್ತದೆ. 'ಪ್ರಧಾನ' ಚಿತ್ರವು ಸಿದ್ಧತೆಯಲ್ಲಿದೆ.

ತಾಯಿನಾಡು

ನಿರ್ದೇಶಕ ಸಂಪತ್ ಕುಮಾರರು "ತಾಯಿನಾಡು" ಎಂಬ ಚಾರಿತ್ರಿಕ ಕಥೆಯೊಂದನ್ನು ನಿರ್ದೇಶಿಸುವರೆಂದು ತಿಳಿದಿದೆ ಇದು ಸಾಹಸ ವರ್ಣನೆಗಳುಳ್ಳ ಕಥೆಯೆಂದು ಸುದ್ದಿ ಕೊಯಂಬುತೂರಿನ ಕುಮಾರ ಪಿಕ್ಚರ್ಸ್ ಮತ್ತು ಸೇಲಮಿನ ಮೋಡರ್ನ್ ಥಿಯೇಟರ್ಸಿನವರು ಇದನ್ನು ಜತೆಯಲ್ಲಿ ತಯಾರಿಸುವರಂತೆ

ಥಿಯೇಟರಿನ ಮುಂದೆ ಪಿಕೆಟಿಂಗ್

ಭಾವ ನಗರದ ನಟರಾಜ ಥಿಯೇಟರಿನಲ್ಲಿ ಸಂತ ಧ್ಯಾನೇಶ್ವರ ಚಿತ್ರವು ಪ್ರದರ್ಶಿತವಾಗುತಿತ್ತು ಎಂದಿನ ದರಕ್ಕಿಂತ ಹೆಚ್ಚಿನ ದರ ಇಡಲ್ಪಟ್ಟಿತು ಅದನ್ನು ಕಡಿಮೆಮಾಡಬೇಕೆಂದು ಕೆಲವರು ಯುವಕರು ಮೇನೇಜರರಲ್ಲಿ ಹೋಗಿ ಹೇಳಿದರು. ಅವರು ಒಪ್ಪಲಿಲ್ಲ ಪಿಕೆಟಿಂಗ್ ಆರಂಭವಾಯಿತು ಕೊನೆಗೆ ಪಿಕೆಟಿಂಗ್ ಮಾಡಿದವರ ಉದ್ದೇಶವು ಸಫಲವಾಯಿತೆಂದೂ ತಿಳಿದು ಬರುತ್ತದೆ

ಕೋಕಿಲಗಾನೆ ಸುಬ್ಬುಲಕ್ಷ್ಮಿಗೆ ಬಿರುದು

"ಇಷೈವಾಣಿ"

ಕೋಕಿಲಗಾನ ಶ್ರೀಮತಿ ಎಂ ಎಸ್ ಸುಬ್ಬುಲಕ್ಷ್ಮಿಗೆ ಕುಂಭಕೋಣದ ಇಷೈ ವೆಳ್ಳಲಾರ್ ಸಂಘದವರು 'ಇಷೈವಾಣಿ' ಎಂಬ ಬಿರುದನ್ನು ದಯಪಾಲಿಸಿ ಗೌರವಿಸಿದರು.

ಸುಪ್ರಸಿದ್ಧ ಫೀಟಿಲು ವಿದ್ವಾಂಸರಾದ ಶ್ರೀ. ರಾಜಮಾಣಿಕ್ಯಂ ಪಿಳ್ಳೆಯವರು ಮತ್ತು ಶ್ರೀ ಶ್ರೀನಿವಾಸಯ್ಯರ್‌ರವರೂ ಭಾಷಣ ಮಾಡಿ ಶ್ರೀಮತಿ ಸುಬ್ಬುಲಕ್ಷ್ಮಿಯ ಸಂಗೀತ ಶಾಸ್ತ್ರ ಪಾಂಡಿತ್ಯವನ್ನು ಕೊಂಡಾಡಿದರು

ನ್ಯೂಥಿಯೇಟರ್ಸ್

ಪನಿಮುಜುಮ್‌ದಾರರು ನಿರ್ದೇಶಿಸಿದ 'ಡಾಕ್ಟರ್'(ಬಂಗಾಳಿ) ಚಿತ್ರವು ಕಳೆದ ವಾರ ಪ್ರದರ್ಶಿತವಾಗಿದೆ. ಹರಜೀತ್ (ಹಿಂದೀ) ನರ್ತಕಿ (ಬಂಗಾಳಿ) ಪ್ರದರ್ಶನಕ್ಕೆ ಸಿದ್ಧವಾಗಿದೆ. ನಿತಿನ್‌ಬೋಸರು 'ಸ್ವಾಮಿ' ಎಂಬ ಚಿತ್ರವನ್ನು ತಯಾರಿಸುವರೆಂದು ತಿಳಿದಿದೆ. ಇದು ಶರಚ್ಚಂದ್ರರ ಕಥೆಯ ಆಧಾರದಿಂದಲ್ಲ. ಇದರಲ್ಲಿ ಕನನ್ ಮತ್ತು ಸೈಗಲರು ಅಭಿನಯಿಸುವರು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 706/1939

O. S. 53/1935

ಶೇಡಿ ಸೆಟ್ಟಿ ಕೂಡಾ... ಅರ್ಜಿದಾರರು

ಮತ್ತು

ಅಡುಪೆ ಯಾನೆ ಮೊಳಯ್ಯ ಸೆಟ್ಟಿ ಕೂಡಾ—ಎದ್ರಿರು ಎದ್ರಿರು—

6. ಸದಾನಂದ } ರುದ್ರಯ್ಯ ಹೆಗ್ಡೆ
7 ಬಾಲಚಂದ್ರ } ಯ ಮಕ್ಕಳು

ಕಾರ್ಕಳ ತಾಲೂಕು ಪಳುಕೂರು ಗ್ರಾಮದಲ್ಲಿ ವಾಸವರು

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಪ್ರತಿವಾದಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಈಗ ಅರ್ಜಿದಾರರು ಯೇಲಂಗೆ ಅಪೇಕ್ಷಿಸಿದ ಎದ್ರಿರ ಬಾಬ್ತು ಸ್ಥಿರಾಸ್ತಿಗಳ ಯೇಲ ಯಿಸ್ತಿಹಾರಿನ್ನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಆ ಯೇಲಂ ಕಾಲದಲ್ಲಿ ಅರ್ಜಿದಾರರಿಗೆ ಯೇಲಂನಲ್ಲಿ ಬಿಡ್ ಮಾಡುವರೆ ಪರ್ಮಿಶನ್ ಕೊಡಬೇಕಾಗಿಯೂ ದರ್ಖಾಸ್ತು ಆಪೇಲು ಡಿಕ್ರಿ ಆಪೇಲಿನಲ್ಲಿ ಮುಟ್ಟ ಮಾಡಿ ಕೊಡುವ ರಶೀದಿ ಮುಂಜೂರು ಮಾಡಬೇಕಾಗಿಯೂ ವಗೈರೆ ಪರ್ಮಿಶನ್ ಕೇಳಿ ಬರೆಕೊಂಡ ಅರ್ಜಿಯು ಕೂಡಾ ತಾ 3 10 1940ಕ್ಕೆ ಇಟ್ಟಿರುತ್ತದೆ ನಿಮಗೇನಾದರೂ ಆಕ್ಷೇಪ ಹೇಳುವುದಿದ್ದರೆ ತಾ 3-10-1940ನೇ ಹಗಲು ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜ್ರಿಯಿಂದ ಅವುಗಳು ತೀರ್ಮಾನಿಸಲ್ಪಡುವವು; ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

ಕೋರ್ಟಿನ ಹುಕುಂ ಪ್ರಕಾರ

ಕಾರ್ಕಳ } K. Mahabala Hegde
ತಾ 7-9-1940 } ಅರ್ಜಿದಾರರ ವಕೀಲ್



ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ. ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ. ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ'ಸೇವನೆ ಬಿಟ್ಟರೆ ಬೇರೆ ದಾರಿಯಿಲ್ಲ ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಚೇತವಮ' ಮಾಡುವುದೆಂದರೆ,

'ಲೋಧ್ರ'

ಕೇಸರಿ ಕುಟೀರಂ,
ರಾಯಪೇಟೆ :: ಮದರಾಸು.
ಮಂಗಳೂರು ಪ್ರತಿನಿಧಿಗಳು;
ಪೊಪ್ಯುಲರ್ ಸ್ಟೋರ್ಸ್ ರಥಬೀದಿ.

ಹಿಟ್ಲರನ ಕೊನೆದಿನಗಳು ಸಮೀಪಿಸಿದುವೆ

ಹೆಪ್ಸಬರ್ಗ್ ಚಿನ್ನಾಭರಣಗಳ ಶಾಪ!

ಹೆಪ್ಸಬರ್ಗ್ ರಾಜಕುಟುಂಬಕ್ಕೆ ಸೇರಿದ ಚಿನ್ನಾಭರಣ ಮತ್ತು ನಗನಾಣ್ಯಗಳ ಕುರಿತು ಸರ್ವಸಾಮಾನ್ಯ ಜನರಲ್ಲಿ ಹರಡಿಕೊಂಡಿರುವ ಭಾವನೆ ಮತ್ತು ಹಿಂದೆ ಆ ನಗನಾಣ್ಯಗಳಿಗೆ ಸಂಬಂಧಪಟ್ಟು ನಡೆದ ಘಟನೆಗಳಲ್ಲಿ ಏನಾದರೂ ಸತ್ಯಾಂಶವಿರುವದು ನಿಜವಾದರೆ, ಹಿಟ್ಲರನ ಕೊನೆ ದಿನಗಳು ಈಗ ಸಮೀಪವಾಗಿರುವವೆಂದು ಧಾರಾಳವಾಗಿ ಹೇಳಬಹುದು.

ಕಳವಿನ ಕತೆ

ಆಸ್ಟ್ರಿಯದ ರಾಜಕುಟುಂಬವನ್ನು ಹೆಪ್ಸಬರ್ಗ್ ಎಂದು ಕರೆಯುತ್ತಾರೆ ವಿಯನ್ನದ ರಾಜಧಾನಿಯಲ್ಲಿ ಈ ರಾಜಕುಟುಂಬದ ಕೆಲವು ಚಿನ್ನಾಭರಣ ನಗನಾಣ್ಯಗಳು ಇರುವವು ಇವುಗಳು ಕಳವಾಗಿರುವವೆಂದೂ, ಯಾರು ಅವನ್ನು ವಿಯನ್ನದಿಂದ ಬೇರೆಕಡೆ ಕೊಂಡುಹೋಗುವರೋ ಅಥವಾ ದುರುಪಯೋಗ ಮಾಡುವರೋ ಅವರು ಅಪಮೃತ್ಯುವಿಗೂ ಕಷ್ಟನಷ್ಟಗಳಿಗೂ ಗುರಿಯಾಗುವರಾಗಿಯೂ, ಯೂರೋಪಿನ ಜನರಲ್ಲಿ ನಂಬಿಗೆ ಇದೆ ಹಿಂದೆ ಈ ನಗನಾಣ್ಯಗಳನ್ನು ವಿಯನ್ನದಿಂದ ಹೊರಗೆ ಕೊಂಡುಹೋದ ಪ್ರತಿಯೊಂದು ಸಂದರ್ಭದಲ್ಲಿ ಕೊಂಡುಹೋದ ಜನರು ನಾನಾ ವಿಧದ ಗಂಡಾಂತರಗಳಿಗೆ ಬಲಿಯಾದುದರಿಂದಲೇ ಯೂರೋಪಿನ ಜನರು ಕಳವಿನ ಕತೆಯನ್ನು ಅಕ್ಷರಶಃ ನಂಬುತ್ತಾರೆ

ಐತಿಹಾಸಿಕ ಘಟನೆ

ಈಚೆಗೆ ಕೆಲವೇ ವರ್ಷಗಳ ಹಿಂದೆ ನಡೆದ ಕತೆಯನ್ನು ಜನರು ಹೇಗೆ ಮರೆಯಬಹುದು? ಅವರು ಅದನ್ನು ಮರೆಯಲಾರದಿರುವದರಿಂದಲೇ ಹಿಟ್ಲರನ ಸಾವು ಸಮೀಪವಾಗಿದೆ ಎಂದು ಅವರು ಹೇಳಲಾರಂಭಿಸಿದ್ದಾರೆ ಕಳೆದ ಮಹಾಯುದ್ಧದಲ್ಲಿ ಹೆಪ್ಸಬರ್ಗ್ ರಾಜಕುಟುಂಬವು ಪದಭ್ರಷ್ಟವಾಗಲು, ಅದಕ್ಕೆ ಸೇರಿದ ಕೆಲವು ಚಿನ್ನಾಭರಣಗಳ ಪ್ರಿನ್ಸ ನಿಕೊಲಸ ಎಂಬವನ ಹಸ್ತಗತವಾದುವು ಅವನು ಇದನ್ನು ತೆಗೆದುಕೊಂಡು ಫ್ರಾನ್ಸಿಗೆ ಪಲಾಯನ ಮಾಡಿದ ಪ್ಯಾರಿಸಿನಲ್ಲಿ ಈ ರಾಜಕುಮಾರನಿಗೆ ಪ್ರಾಪ್ತವಾದ ದುರ್ಗತಿಯನ್ನು ಕಂಡು ಅವನ ಪ್ರಾಣಶತ್ರುವಿಗೂ ಕಣ್ಣೀರು ಇಳಿಯಬೇಕು ಪ್ಯಾರಿಸಿಗೆ ಬಂದ ಕೆಲವೇ ದಿನಗಳ ಅನಂತರ ಅವನು ಗಾಡಿಹೊಡೆಯುವವನಾಗಿ ದಿನ ಕಳೆಯಬೇಕಾಯಿತು ಸಾಯುವಾಗ ಈ ರಾಜಕುಮಾರನು ಬೀದಿಯ ಭಿಕ್ಷುಕನಾಗಿ ಒಂದು ಅನಾಥಾಲಯದಲ್ಲಿ ಗತಿಗೋತ್ರವಿಲ್ಲದವನಾಗಿ ಬಿದ್ದುಕೊಂಡಿದ್ದ. ಈಗ ಇವೇ ಆಭರಣಗಳನ್ನು ಹಿಟ್ಲರನು ದೋಚಿಕೊಂಡಿದ್ದಾನೆ. ಆದ್ದರಿಂದ ಆಭರಣಗಳ ಶಾಪವು ಅವನಿಗೆ ಬಂದಿದೆ ಎಂದು ಜನರು ಹೇಳಲಿಕ್ಕೆ ಅವಕಾಶವಾಗಿದೆ

ಹಿಟ್ಲರನ ಸೋಲು

ಯುದ್ಧರಂಗದಲ್ಲಿ ಈಗ ನಡೆಯುತ್ತಿರುವ ಘಟನೆಗಳು ಜನರ ನಂಬಿಗೆಗೆ ಮತ್ತಷ್ಟು ಬಲವನ್ನು ಕೊಡುತ್ತವೆ ಕೀರ್ತಿಯ ಉಚ್ಚ ಶಿಖರವನ್ನು ಏರಿದ ಹಿಟ್ಲರನು ಪತನೋನ್ಮುಖನಾಗಿರುವನು ಬ್ರಿಟನಿನೊಡನೆ ಹೂಡಿರುವ ಯುದ್ಧದಲ್ಲಿ ಅವನ ತೇಜೋಭಂಗವಾಗುತ್ತಲಿದೆ ಯುದ್ಧವಾರಂಭವಾಗಿ ಒಂದು ವರ್ಷವಾದರೂ ಬ್ರಿಟನಿನ ಕೂದಲ ಒಂದು ಎಳೆಯನ್ನಾದರೂ ಕೊಂಕಿಸಲಿಕ್ಕೆ ಅವನಿಂದ ಸಾಧ್ಯವಾಗಿಲ್ಲ ಅವನು ಬ್ರಿಟನಿನೊಡನೆ ಯುದ್ಧದ ಪ್ರತಿಯೊಂದು ಕಾರ್ಯದಲ್ಲಿ ವಿಫಲನಾಗಿದ್ದಾನೆ ಯೂರೋಪಿನಲ್ಲೆಲ್ಲ ತನ್ನ ರಾಕ್ಷಸೀ ಅತ್ಯಾಚಾರಗಳ ಮೂಲಕ ಹಾಹಾಕಾರವನ್ನೆಬ್ಬಿಸಿದ ಹಿಟ್ಲರನಿಗೆ ಬ್ರಿಟನು ಪ್ರಾಣಘಾತುಕವಾಗಿ ಎದ್ದು ನಿಂತಿದೆ ಹಿಟ್ಲರನ ಸೋಲಿನ ಪೂರ್ವಲಕ್ಷಣವೆಂಬಂತೆ ಜರ್ಮನಿಯಲ್ಲಿ ರಾಜಧಾನಿ ಬರ್ಲಿನಿನಲ್ಲಿಯೇ ಬ್ರಿಟಿಷರ ಯುದ್ಧ ವಿಮಾನಗಳು ಒಂದು ಬಾಂಬು ಹಾಕುತ್ತಲಿರುವವು ಬ್ರಿಟನ್ ಅಮೇರಿಕದ ಒತ್ತಿಗೆ ಎರಡು ಕಡೆಯ ಹಸ್ತಾಕ್ಷರ ಬಿದ್ದಿರುವದ ಸೈನ್ಯಸರಂಜಾಮು ಯುದ್ಧೋಪಕರಣಗಳಲ್ಲಿ ಬ್ರಿಟನಿನ ಬಲವು ಪ್ರತಿ ದಿನ ಬೆಳೆಯುತ್ತಾ ಇದೆ ಆಫ್ರಿಕದ ಫ್ರೆಂಚ್ ವಸಾಹತುಗಳು ನಾಝಿ ಪ್ರೇರಿತ ಫ್ರೆಂಚ್ ಸರಕಾರದ ವಿರುದ್ಧ ದಂಗೆ ಎದ್ದಿರುವವು ಈ ದಂಗೆಯು ಜರ್ಮನಾಧೀನವಾದ ಇತರ ರಾಷ್ಟ್ರಗಳಿಗೂ ಹಬ್ಬುವ ಹಾಗೆ ಲಕ್ಷಣಗಳು ಕಾಣುತ್ತವೆ

ಸೋಲು ಸಮೀಪವಾಗಿದೆ

ಹಿಟ್ಲರನು ಯುದ್ಧದಲ್ಲೇ ಪ್ರಾಣಾಹುತಿ ಕೊಡಬಹುದು. ಅಥವಾ ಪಲಾಯನ ಮಾಡಲೂ ಬಹುದು. ಹೇಗಿದ್ದರೂ ಸೋತು ಸುಣ್ಣವಾದ ಹಿಟ್ಲರ ಬಹಳ ದಿನಗಳ ತನಕ ಬದುಕಿ ಇರಲಾರ ಹೆಪ್ಸಬರ್ಗ್ ಚಿನ್ನಾಭರಣಗಳ ಶಾಪವೇ ಹಿಟ್ಲರನ ಸೋಲಿಕ್ಕೆ ಕಾರಣವೆಂದು ಜನರು ತಿಳಿದಿದ್ದಾರೆ ಹಿಟ್ಲರನು ಬೆಂಕಿಯೊಡನೆ ಆಡುತ್ತಿರುವನೆಂದು ಜನರು ಹೇಳಿಕೊಳ್ಳುತ್ತಿರುವರು

HALFTONE & LINE BLOCK MAKING UNDERTAKEN

Sharada Press, MANGALORE

: : ನೋಟಿಗಳು : :

ಹಾಲ್ವೆಲ್ ಪ್ರತಿಮೆಯ ಕತೆಯು ಈಗ ಮುಗಿಯುತ್ತಾ ಬರುತ್ತದೆ!

◆

ಅದನ್ನು ಮೊದಲಿದ್ದ ಬಹಿರಂಗ ಜಾಗದಿಂದ ಕಿತ್ತು ಬೇರೆ ಕಡೆ ಬೇಗನೇ ಒಯ್ಯಲಾಗುತ್ತದೆಯಂತೆ! ಅಂತೂ ಬಹಿರಂಗವಾಗಿ ಅಂತಹ ಸ್ಮಾರಕವು ಇರಬಾರದೆಂದ ನಿಶ್ಚಯವಾಗಿದೆ

◆

ಹೀಗಾಗಿ ಅದನ್ನು ಒಂದು ಚರ್ಚಿನಲ್ಲಿ ಇರಿಸುವ ಅಭಿಪ್ರಾಯಮಾಡಿರುವರೆಂದು ತಿಳಿಯುತ್ತದೆ! ಹಾಲ್ವೆಲ್ಲನ ಮೂರ್ತಿಗೆ ಇದು ಬಹಳ ಯೋಗ್ಯವಾದ ಸ್ಥಳ!

◆

ಅದನ್ನು ಅಲ್ಲಿ ನಿಲ್ಲಿಸಿ ಮತ್ತಷ್ಟು ಪ್ರಯಾಸಪಡಿಸುವುದಕ್ಕಿಂತ ಚರ್ಚಿನಲ್ಲಿ ಹೂತು ಹಾಕಿದ್ದರೆ ಬಹಳ ಸುಖವಿತ್ತು!

◆

ಭಾರತೀಯರ ಗೌರವಕ್ಕೆ ಹಾನಿಕರವಂತಹ ಪ್ರತಿಮೆಯೊಂದು ಮುಂದಕ್ಕೆ ಎಂದೆಂದೂ ಅವರ ದೃಷ್ಟಿಪಥದಿಂದ ದೂರವಾಗುತ್ತಿತ್ತು

◆

ಸುಳ್ಳು ಸಾರಿದ ಮನುಷ್ಯ ಇಲ್ಲಿ ಮುಳುಗಿದ್ದಾನೆ ಹೀಗೆಂದ ಪ್ರತಿಮೆಯನ್ನು ಹೂತ ಗೋರಿಯ ಮೇಲೆ ಶಾಶ್ವತವಾದ ಶಿಲೇಖವೊಂದನ್ನು ಬರೆದರೆ ಹಾಲ್ವೆಲ್ಲನ ಸ್ಮರಣೆಯು ಉಳಿದಂತೆ ಆಗುವುದಲ್ಲವೆ ಇದರಿಂದ ಎರಡು ಪಕ್ಷದವರಿಗೂ ಸಮಾಧಾನವಾದೀತು!

ಯುದ್ಧದ ವಿಚಾರವಾಗಿ ಕಾಂಗ್ರೆಸಿನ ವರ್ತನೆಯನ್ನು ದೂರಿ ಸನಾತನವಾದಿ ಮುಖಂಡರಾದ [illegible] ರ್ [illegible] ಬ್ರಿಟನಿಗೆ ಶರತ್ತಿಲ್ಲದೆ ಭಾರತವು ಬೆಂಬಲ ಕೊಡಬೇಕೆಂದು ಹೇಳುತ್ತಾರೆ

◆

ಅವರ ಬಹಳ [illegible] ಸಮತಾವಾದಿಗಳೆಂದುದರಿಂದ ಸಮತಾವಾದದ ಮೂಲಕವೇ ನಿಜವಾದ ಸ್ವಾತಂತ್ರ್ಯ ರಕ್ಷಣೆಯೆಂದ [illegible] ಪವಿತ್ರವಾದ ಧರ್ಮ ಸಮತೆಯ ವಿರೋಧ ತತ್ವಗಳಾದ ನಾಜೀ ತತ್ವದ ಫ್ಯಾಸಿಸ್ಟ್ ತತ್ವಗಳ ನಾಶಕ್ಕಾಗಿ ಬ್ರಿಟನಿಗೆ ಭಾರತವು ಶರತ್ತಿಲ್ಲದೆ ಬೆಂಬಲಕೊಡಬೇಕೆಂಬುದು ಅವರ ವಾದದ ಮೂಲಾಂಶವಾಗಿದೆ!

◆

ಕಾ। ರಾಯ್‌ಗಳು ಹಲವು ಕಡೆಗಳಲ್ಲಿ ಈ ರೀತಿಯ ಅಭಿಪ್ರಾಯವನ್ನು ಸಾರಿ, ಇಂದಿನ ಕಾಂಗ್ರೆಸು ಮುಖಂಡರ ಅಭಿಪ್ರಾಯವನ್ನು ದೂರಿ ಭಾಷಣ ಲೇಖನಗಳನ್ನಿತ್ತರು.

◆

ಕಾಮ್ರೇಡ್ ರಾಯ್‌ಗಳು ಪ್ರಬಲ ಸಮತಾವಾದಿಯಾಗಿ ಬ್ರಿಟನಿಗೆ ಭಾರತವು ಬೆಂಬಲ ಕೊಡಬೇಕೆಂದು ವಾದಿಸುವುದೂ ನಾಜೀ ಫ್ಯಾಸಿಸ್ಟ್ ತತ್ವಗಳ ವಿರೋಧ ವರ್ತಿಸುವುದೂ ಸರಿಯಾದುದ! ಆದರೆ ನಾಜೀ ಫ್ಯಾಸಿಸ್ಟ್ ವಿರೋಧವಾದ ಸಮತಾವಾದದ ಮೂಲಭೂಮಿಯಾಗಿರುವ ರಶ್ಯವೇ ಇಂದು ಬ್ರಿಟನಿಗೆ ಸಹಾಯವೀಯದೆ ಜರ್ಮನಿಗೆ ಪ್ರೋತ್ಸಾಹ ಕೊಡುವಂತೆ ವರ್ತಿಸುವ ಬಗ್ಗೆ ಕಾ। ರಾಯ್‌ಗಳ ರಶ್ಯದ ಧುರೀಣರನ್ನು ಯಾಕೆ ಟೀಕಿಸುವುದಿಲ್ಲವೋ, ರಶ್ಯದ ಧೋರಣೆಯನ್ನು ಯಾಕೆ ಖಂಡಿಸುವುದಿಲ್ಲವೋ ಅರ್ಥವಾಗುವುದಿಲ್ಲ!

◆

ಜಗತ್ತಿನ ಸ್ವಾತಂತ್ರ್ಯ ರಕ್ಷಣೆಗೆ, ಫ್ಯಾಸಿಸ್ಟ ನಾಜಿಸ್ಟರ ವಿನಾಶಕ್ಕಾಗಿ ಬ್ರಿಟನ ರಶ್ಯಗಳ ಸ್ನೇಹಸಂಬಂಧವಾಗುವುದು ಇಂದು ಬಹಳ ಪ್ರಯೋಜನಕಾರಿಯಾದುದೆಂದು ರಾಯ್‌ಗಳು ಮರೆತರೆ ಸರಿಯೇ ಏನೋ?

Notice

THE BOMBAY LIFE ASSURANCE COMPANY LTD.,

Notice having been given of the loss of Policy No 50230 on the life of Mr K. Somayya Shetty a duplicate Policy will be issued unless objection is lodged with us within one month from this date.

Bombay 9-9-1940 | Jyotendra L. Mehta, Managing Director.

NOTICE

In the Court of the District Munsif of Mangalore

R I A N 104 1940
IN O S No 414 1935

Between

B J Lob — *Petitioner (Plaintiff)*

and

A N Achar and others — *Respondents (Defendants)*

To Respondents Nos 2 Narayana Achar [illegible] Vyasarayachar sons of Subrayachar Codial bail, Mangalore

Please take notice that the Petitioner above-named has applied for a final decree for sale in the above suit in terms of the preliminary decree dated 20–11–1939 and that the said application stands posted to 2–10–1940 at 11 a.m for hearing.

(BY ORDER OF THE COURT)

Mangalore, 7-9-1940 | L. C. Pais, B A B L, Vakil for Petitioner.

ವಿಜ್ಞಾನಯುಗ

ಮೊಲೊಟೊರವರ ಬ್ರೆಡ್ ಬಾಸ್ಕೆಟು

ಯುರೋಪಿನ ರಣರಂಗದಲ್ಲಿ ಯುದ್ಧಕ್ಕೆ ಪ್ರುಟಬರುತ್ತಿದ್ದಂತೆ ವಿಜ್ಞಾನಿಗಳು ಹೊಸಹೊಸ ಭೀಕರ ಶಸ್ತ್ರಾಸ್ತ್ರಗಳನ್ನು ಕಂಡುಹಿಡಿದು, ಯುದ್ಧಕ್ಕೆ ಪ್ರಳಯ ಸ್ವರೂಪವನ್ನು ತಂದುಕೊಡುತಿದ್ದಾರೆ. ಈಗ ವಿಮಾನಗಳಲ್ಲಿ ಎತ್ತರದಿಂದ ಬೀಳುವ ಬಾಂಬುಗಳಲ್ಲಿ ಅನೇಕವು ಗುರಿತಪ್ಪಿ ವ್ಯರ್ಥವಾಗುತ್ತವೆ. ರಶ್ಯದ ವಿಜ್ಞಾನಿಗಳು ಮೊಲೊಟೊವರ ಬ್ರೆಡ್ ಬಾಸ್ಕೆಟ್ ಎಂಬ ಹೊಸ ಜಾತಿಯ ಬಾಂಬನ್ನು ಕಂಡುಹಿಡಿದು ಈ ದೋಷವನ್ನು ದೂರಮಾಡಿದ್ದಾರೆ. ಬಾಸ್ಕೆಟಿನೊಳಗೆ ಅನೇಕ ಬೆಡ್ಡುಗಳು ತುಂಬಿರುವ ಹಾಗೆ, ಒಂದು ದೊಡ್ಡ ಬಾಂಬಿನಂತೆ ತೋರುವ ಈ ಹೊಸ ಸಾಧನದಲ್ಲಿ ನೂರಾರು ಚಿಕ್ಕ ಬಾಂಬುಗಳು ಅಡಗಿರುತ್ತವೆ. ಬ್ರೆಡ್ ಬಾಸ್ಕೆಟ್ ವಿಮಾನದಿಂದ ಕೆಳಗೆ ಬೀಳುತ್ತಿರುವಾಗ, ನಡುದಾರಿಯಲ್ಲಿ ಅದು ಎರಡಾಗಿ ಸಿಡಿಯುತ್ತದೆ. ಆಗ ಅದರೊಳಗಿರುವ ನೂರಾರು ಚಿಕ್ಕ ಬಾಂಬುಗಳು ಹೂ ಮಳೆಗರೆದ ಹಾಗೆ ಕೆಳಗೆ ಚೆದರಿ ಬಿದ್ದು ನೂರಾರು ಸ್ಥಳಗಳಲ್ಲಿ ಒಂದೇ ಸಮಯಕ್ಕೆ ದೊಡ್ಡ ಬೆಂಕಿಗಳನ್ನು ಎಬ್ಬಿಸಿ ಶತ್ರು ಪಾಳೆಯವನ್ನೋ, ನಗರವನ್ನೋ ಒಂದೇ ಬಾರಿಗೆ ಧ್ವಂಸ ಮಾಡಿಬಿಡುವವು. ಫಿನ್ಲೆಂಡಿನ ಯುದ್ಧದಲ್ಲಿ ರಶ್ಯನರು ಇವೇ ಬ್ರೆಡ್ ಬಾಸ್ಕೆಟುಗಳನ್ನು ಮೇಲಿನಿಂದ ಕೆಳಗೆ ಬಿಟ್ಟು ರಕ್ತದಾಹದ ನರಪಿಶಾಚಿಗಳಿಗೆ ರಕ್ತಮಾಂಸಗಳನ್ನು ಒದಗಿಸಿಕೊಟ್ಟಿದ್ದರಂತೆ!

ಯುದ್ಧಕಾಲದಲ್ಲಿ ಕಾಂಕ್ರೀಟಿನ ಹಡಗುಗಳು

ಶತ್ರುಪಕ್ಷದವರು ಸಮುದ್ರಗಳಲ್ಲಿ ಲೋಹಚುಂಬಕ ತೋಟಿಗಳನ್ನು ಹಾಕಿರುವದರಿಂದ, ಉಕ್ಕು, ಕಬ್ಬಿಣ ಮೊದಲಾದ ಲೋಹಕವಚಗಳಿಂದ ಕಟ್ಟಿದ ಹಡಗುಗಳು ಆ ತೋಟಿಗಳ ಹಾವಳಿಗೆ ಬಲಿಯಾಗಿ ಸಮುದ್ರಪಾಲಾಗುತ್ತವೆ. ಬ್ರಿಟನಿನಲ್ಲಿ ಈಗ ಕಾಂಕ್ರೀಟು ಅಥವಾ ಸುಣ್ಣ, ಮಣ್ಣು ಮತ್ತು ಜಲ್ಲಿಯಿಂದ ತಯಾರಿಸಿದ ಹೊಸ ಜಾತಿಯ ಹಡಗುಗಳನ್ನು ಉಪಯೋಗಿಸಲಾರಂಭಿಸಿದ್ದಾರೆ. ಕಾಂಕ್ರೀಟಿನ ಹಡಗುಗಳನ್ನು ಸಣ್ಣ, ದೊಡ್ಡ, ಯಾವ ಆಕಾರ ಪರಿಮಾಣಗಳಲ್ಲಿಯಾದರೂ ಕಟ್ಟಬಹುದಾಗಿದೆ ಮಾತ್ರವಲ್ಲದೆ ಅವುಗಳನ್ನು ಕಟ್ಟಿಸುವ ಖರ್ಚು ಶೇಕಡಾ ಇಪ್ಪತ್ತು ಕಡಿಮೆಯಾಗಿರುತ್ತದೆ. ಅವುಗಳಿಗೆ ಲೋಹಚುಂಬಕ ತೋಟಿಗಳ ಬಾಧೆಯೂ ಇರುವದಿಲ್ಲ. ಬ್ರಿಟನಿನಲ್ಲಿ ಇವುಗಳನ್ನು ಕಟ್ಟಿಸಲಿಕ್ಕೆ ಬೇಕಾದ ಹಸಿ ಪದಾರ್ಥಗಳೂ ಧಾರಾಳವಾಗಿ ದೊರೆಯುವದರಿಂದ, ಅವೀಗ ಹೆಚ್ಚೆಚ್ಚಾಗಿ ಸಮುದ್ರಗಳಲ್ಲಿ ಓಡಾಡಲಾರಂಭಿಸಿರುವವಂತೆ.

ಯಂತ್ರಚಾಲನಗೆ ಹೊಸ ಗೇಸು

ಪೆಟ್ರೋಲಿನ ಉತ್ಪತ್ತಿ ಕಡಿಮೆಯಾಗುತ್ತಲಿದೆ ಎಂಬ ಸಂದೇಹ ಮತ್ತು ಯುದ್ಧಕಾಲಗಳಲ್ಲಿ ಅದು ರಾಷ್ಟ್ರಗಳಿಗೆ ಸಕಾಲದಲ್ಲಿ ಸರಾಗವಾಗಿಯೂ, ಧಾರಾಳವಾಗಿಯೂ ದೊರೆಯುವದಿಲ್ಲವೆಂಬ ಭಯ — ಇವುಗಳಿಂದಾಗಿ ಪಾಶ್ಚಾತ್ಯ ಅನೇಕ ವಿಜ್ಞಾನಿಗಳು ಪೆಟ್ರೋಲಿನ ಬದಲಿಗೆ ಮತ್ತೇನನ್ನಾದರೂ ಹುಡುಕಿ ತೆಗೆಯುವ ಪ್ರಯತ್ನದಲ್ಲಿದ್ದಾರೆ. ಈ ಪ್ರಯತ್ನಗಳಲ್ಲಿ ಇಟಲಿ ಸಾಕಾವಷ್ಟು ಸಫಲವಾಗಿರುವಂತೆ ತೋರುತ್ತದೆ. ಇಟಲಿಯ ಉತ್ತರ ಭಾಗದಲ್ಲಿರುವ ವಿಶಾಲವಾದ ಜವುಗ ಪ್ರದೇಶಗಳಲ್ಲಿ ಮಿಥೇನ ಎಂಬ ಒಂದು ವಿಚಿತ್ರ ಗೇಸು ಭೂಗರ್ಭದಲ್ಲಿ ಉಂಟಾಗಿ ವಾತಾವರಣವನ್ನು ಸೇರಿಕೊಳ್ಳುತ್ತದೆ. ಇದು ಜನಕದಂತೆ ತಾನಾಗಿ ಉರಿಯುವ ಒಂದು ಅನಿಲ. ವಾತಾವರಣದಲ್ಲಿ ಸೇರಿದ್ದಾಗ ಮಿಣುಕಿಡುವ ಜ್ವಾಲೆ ಕಾಣಿಸಿಕೊಳ್ಳುವದರಿಂದ ಇಟಲಿಯ ಹಳ್ಳಿಗರು ಇದನ್ನೇ ಭೂತದ ಸೂಡಿ ಎಂದು ನಂಬುವರು. ವಿಜ್ಞಾನಿಗಳು ಈ ಗೇಸನ್ನೇ ಸಂಗ್ರಹಿಸಿ ಪೆಟ್ರೋಲಿನಂತೆ ಉಪಯೋಗಿಸತೊಡಗಿರುವರು. ಇಟಲಿಯಲ್ಲಿ ಮೋಟರು ಮೊದಲಾದ ಚಿಕ್ಕ ಯಂತ್ರಗಳನ್ನು ಈ ಗೇಸಿನಿಂದಲೇ ನಡೆಸಲಾರಂಭಿಸಿದ್ದಾರೆ.

ಸಾಣಿ ತಲೆಗೆ ಉಪಾಯ

ಹಲವರ, ವಿಶೇಷವಾಗಿ ಗಂಡಸರ ತಲೆಯು ಸಾಣೆಯಾಗಿರುವದುಂಟು— ಅಂದರೆ, ಅವರ ತಲೆ ಮೊದಲು ಉದುರಿ ಹೋಗಿ, ನೆತ್ತಿಯು ಬೋಳಾಗಿರುತ್ತದೆ. ಅಮೇರಿಕದ ಒಬ್ಬ ವಿಜ್ಞಾನಿಯು ತಲೆಯು ಸಾಣೆಯಾಗಲಿಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾನೆ. ಕೂದಲಿನ ಬುಡಗಳಿಗೆ ವ್ಯಾಯಾಮವು ದೊರೆಯದೆ ರಕ್ತಚಲನೆಯಾಗದಿರುವದು, ಕೂದಲು ಯಾವಾಗಲೂ ಒದ್ದೆಯಾಗಿರುವದು, ವಂಶಪರಂಪರೆಯಿಂದ ಬಂದ ದೋಷ ಅಥವಾ ಗಾಳಿ ಸಂಚಾರಕ್ಕೆ ತಡೆಯಾಗಿ ಯಾವಾಗಲೂ ತಲೆಗೆ ಹೇಟು ಅಥವಾ ಟೊಪ್ಪಿ ಇಟ್ಟುಕೊಳ್ಳುವದು — ಇವು ತಲೆಯು ಸಾಣೆಯಾಗುತ್ತಿದೆ. ಆದ್ದರಿಂದ ಹೇರ ವಸನ ಹೆಂಗಸರ ಕೂದಲನ್ನು ಉದ್ದಕ್ಕೆ ಬೆಳೆಸಿರುವದರಿಂದ ಅವರು ಒಪ್ಪೆಯಲ್ಲಿ ಹೊರಳುವಾಗ ಕೂದಲಿನ ಬುಡಗಳಿಗೆ ವ್ಯಾಯಾಮ ದೊರೆಯುವದು. ಬಲವಾಗಿ ಬಾಚುವಾಗ ಕೂದಲನ್ನು ಬಿಗಿದು ಕಟ್ಟಿಕೊಳ್ಳುವದರಿಂದಲೂ ದಪ್ಪವಾದ ಹೇಟು ಟೊಪ್ಪಿಗಳನ್ನು ಇಟ್ಟುಕೊಳ್ಳುವದಿಲ್ಲವಾದ್ದರಿಂದಲೂ ಅವರ ತಲೆಗೆ ಸಾಣೆ ಹಿಡಿಯುವದು ಕಡಿಮೆ. ಆದ್ದರಿಂದ ತಲೆಗೆ ಸಾಣೆಹಿಡಿಯಬಾರದೆನ್ನುವವರು ಮೇಲಿನ ಕಾರಣಗಳನ್ನು ತೆಗೆದುಕೊಳ್ಳುವದು ಅಗತ್ಯ.

ಅತಿ ಬೆಲೆಯ ಹಾಲು

ಅಮೇರಿಕದ ಪಶುಪಾಲನ ಇಲಾಖೆಯ ಅಧಿಕಾರಿಗಳ ಮಾಡಿದ ಪರಿಶೋಧನೆಗಳ ಪ್ರಕಾರ, ಬಿಳಿ ಎಲ್ಲಾ ಪ್ರಾಣಿಗಳ ಹಾಲಿಗಿಂತ ರೈನ್ ಡಿಯರ್ ಎಂಬ ಜಿಂಕೆಜಾತಿಯ ಪ್ರಾಣಿಯ ಹಾಲು ಹೆಚ್ಚು ಬೆಲೆಯುಳ್ಳದ್ದಾಗಿ ಇರುವದು. ಯಾಕೆಂದರೆ ಅದರ ಹಾಲಿನಲ್ಲಿ ಶೇಕಡಾ ೨೦ರಷ್ಟು ಬೆಣ್ಣೆ ಇರುತ್ತದೆ. ಬೇರೆ ಯಾವ ಜಾತಿಯ ಪ್ರಾಣಿಯ ಹಾಲಿನಲ್ಲೂ ಇದರಲ್ಲಿರುವಷ್ಟು ಬೆಣ್ಣೆಯ ಅಂಶವು ಹೆಚ್ಚಾಗಿ ಇರುವದಿಲ್ಲ.

ಎಣ್ಣೆ ಒತ್ತಿ ಅದುರು ಒಡೆಯುವದು

ಗಣಿಗಳಲ್ಲಿ ತೋಟಿಹಾಕಿ ಅದುರುಗಳನ್ನು ಒಡೆಯುವದು ರೂಢಿಯಾಗಿದೆ. ಇದರೆ ಹೀಗೆ ಮಾಡುವದರಿಂದ ಅನೇಕ ಬಾರಿ ಗಣಿಗಳಲ್ಲಿ ಕೆಲಸ ಮಾಡುವ ಜನರು ಅಪಘಾತಗಳಿಗೆ ಬಲಿಯಾಗಬೇಕಾಗುತ್ತದೆ. ಅದಕ್ಕೋಸ್ಕರ ವಿಜ್ಞಾನಿಗಳು ಈಗ ಒಂದು ಹೊಸ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಭೂಮಿಯ ಮೇಲಿನಿಂದ ಅದುರುಗಳ ಪದರಿನತನಕ ಆಳಕ್ಕೆ ಮಾತುಗಳನ್ನು ಕೊರೆದು ಅವುಗಳಲ್ಲಿ ರಬ್ಬರಿನ ನಳಿಗೆಗಳನ್ನು ಸೇರಿಸಿ, ಎಣ್ಣೆಹಾಕಿ ಬಲವಾದ ಒತ್ತಡವನ್ನು ಹಾಕುವದರಿಂದ ಅದುರುಗಳು ತಾವಾಗಿ ಸಿಡಿಬಿಟ್ಟು ಒಡೆಯುತ್ತವೆ. ಅದರಿಂದ ಕೆಲಸಗಾರರ ಸಿಡಿಯುವ ಅಪಾಯಕ್ಕೆ ಗುರಿಯಾಗುವದಿಲ್ಲ.

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯು ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10 ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಯ ಪ್ರತಿನಿಧಿಗಳಿಂದ ತಿಳಕೊಳ್ಳಿರಿ

ಕಾಯಂ ನಿಶ್ಚಿತ ಬೋನಸ್ ರೂ 10

ಸರ್ವಸಾಧಾರಣ ಬೋನಸ್ ರೂ 11

ಹೀಗೆ ಜುಮ್ಲಾ ರೂ 21-ರ ಬೋನಸ್ ಇದೆ!

★ ★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್, ಆರ್ಗನೈಸರ್, ಪೆಂಟ್ಲೆಂಡ್ ಪೇಟೆ, ಮಂಗಳೂರು
ಅಥವಾ
ಕೆ. ಶ್ರೀನಿವಾಸನ್, ಬ್ರಾಂಚ್ ಮ್ಯಾನೆಜರ್, 4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾ ಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ— ಉಡುಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ—ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಟಿಕೇಟನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

JOINT MANAGERS.

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಿಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಸ್ತ್ರೀಯರಿಗೆ ಗರ್ಭಧಾರಣ ಬಂದಾಗುವುದು. ಕವನಂಜರ ಏನು ಮಾಡಿದರೂ ಸುರುವಾಗುವುದಿಲ್ಲ. ಪೊಳ ಲೇ ಪೂರಾ ವಿಚಾರಮಾಡಿ ಔಷಧ ದೇಶಿರಿ, ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳದಸಮಾಹಿದು, ಆಚೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅ ಜು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯದ. ೪—೦—೦ ಪಿ. ಪಿ. ೧ ೮

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ್, S. M. C

ಸಾಹುಕಾರ ಶ್ರೀನಿವಾಸರಂಗಪ್ಪೆ

[ಸ್ಥಾಪನೆ: ಕ್ರಿ. ಶ. 1868]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		-
,, ದುಯಂ ,, ,,		—
ಅಕ್ಕಿ ಅವ್ವಲ್ ಗುಡ್ಡು ,,	4—12—0	4—14—0
,, ದುಯಂ ,, ,,	4—10—0	4—10—0
,, ಅವ್ವಲ್ ಸುಗ್ಗಿ ,,	4—8—0	4—10—0
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
,, ಸಿಪ್ಪೆ ಇದ್ದದು ,,	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
,, ದಿಲ್‌ಪಸಂದ ,,	—	—
ತೆಂಗಿನ ಎಣ್ಣೆ ಮಣಕ್ಕೆ	8—10—0	8—10—0
ಸಿಪ್ಪೆಯುದ್ದ ಅಡಕೆ 1000ಕ್ಕೆ	4—0—0	4—0—0
ಗೇರುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	18—8—0	14—0—0

ಸ್ವದೇಶಾಭಿಮಾನಿ

[ಸಂಪುಟ 34] ಶುಕ್ರವಾರ 13-9-1940 [ಸಂಚಿಕೆ 37

The Bombay Life Assurance Company, Ltd.

(Estd. 1908)

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit

THEN YOU CAN BE PROUD THAT YOU HAVE CONQUERED YOUR ENEMIES OF MODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

Please make haste and write to us for your requirements to-day alone

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & [illegible]

The Bombay Life Building,

Sir Lalubhai Samaldas Road,

Gandhi Nagar, UDIPI

OR ANY OF OUR FOLLOWING OFFICES AT

Puthiyara	Car Street,	Central Station Road
Calicut	Mangalore	Trivandrum
Gautam Nivas Charni Road	Post Box No. [illegible]	Visweswarapuram Circle
Girgaum Bombay No. 4	Mount Road Madras	Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಧಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಪ್ರಮುಖ ಊರಲ್ಲಿ ಕ್ಕಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್, ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

'ಭಾರತ ಭಾಗ್ಯವಿಧಾತಾ'

KANNADA ILLUSTRATED WEEKLY

ಗಾಳಿಗೋಪುರ

[illegible] ಜೀವನಸಂಗ್ರಾಮ [illegible] ಸರಸ ವಿನೋದ [illegible] [illegible] ಹಾಸ್ಯರಸ [illegible] ನವನ್ನು ಪ್ರತಿಬಿಂಬಿಸುವ [illegible] ಸಾಹಿತ್ಯದಲ್ಲಿ ಹಾಸ್ಯಕ್ಕೆ ಪ್ರಾಧಾನ್ಯತೆ ದೊರೆತಿರುವುದಿಲ್ಲ. ಸಂಸ್ಕೃತ ನಾಟಕವನ್ನನುಸರಿಸಿ ಬರೆದ ಕನ್ನಡ ನಾಟಕಗಳ ವಿದೂಷಕ ಪಾತ್ರದಲ್ಲಿ ಮಾತ್ರ ಸ್ವಾಭಾವಿಕತೆಯನ್ನು ಹಾಸ್ಯಕ್ಕೆ [illegible] ಮೂಡಿಸದ ನಗು ಕಾಣುತ್ತದೆ; ಮತ್ತೆ ಕಾವ್ಯದರ [illegible] ವ್ಯಾಸನ ವಿರಾಟಪರ್ವದ ಉತ್ತರಕುಮಾರ, [illegible] ಮುದ್ದಣ ಮನೋರಮೆಯರ ಸಂಭಾಷಣೆ ಇವುಗಳನ್ನು ಬಿಟ್ಟರೆ [illegible] ಹಾಸ್ಯ ಬೇರೆ ಅಪರೂಪ. ಜೀವನದಲ್ಲಿ ಹಾಸ್ಯಕ್ಕೆ [illegible] ಸಂದರ್ಭಗಳುಂಟು; ಹೆಚ್ಚು ಪುರಸ್ಕಾರವೂ ಉಂಟು; ಅಂತೆಯೇ ರಸಪಂಕ್ತಿಯಲ್ಲಿ ಹಾಸ್ಯವು ಎರಡನೆಯ ಸ್ಥಾನವನ್ನು ಪಡೆದಿದೆ; ಪಶ್ಚಿಮದ ಸಾಹಿತ್ಯಾಭ್ಯಾಸದಿಂದ ಕನ್ನಡಿಗರು ಈಗ [illegible] ಸಾಹಿತ್ಯ, ಹಾಸ್ಯಸಾಹಿತ್ಯಗಳ ಕಡೆಗಿರುವ ತಮ್ಮ ನ್ಯೂನತೆಯನ್ನು ಪರಿಹರಿಸಲು ಯತ್ನಿಸುತ್ತಿದ್ದಾರೆ. ಅಂತಹ ಹೊಸಗನ್ನಡ ಸಾಹಿತ್ಯ ಸೇವಕರಲ್ಲಿ ಈ 'ಗಾಳಿಗೋಪುರ'ವನ್ನು ಕಟ್ಟಿದ ಶ್ರೀ ನಾ. ಕಸ್ತೂರಿಯವರೂ ಒಬ್ಬರು. 'ಗಾಳಿಗೋಪುರ'ವನ್ನು ಬಹಳ ನಿಪುಣತೆಯಿಂದ, ನೈಸರ್ಗಿಕತೆಯಿಂದ ವಿವಿಧ ಘಟನಾಸಾಮರ್ಥ್ಯದಿಂದ ಶ್ರೀ ಕಸ್ತೂರಿಯವರು ಹಾಸ್ಯಸಾಹಿತ್ಯದ ಒಂದು ಉತ್ತಮವಾದ ರಚನೆಯಾಗಿ ತಯಾರಿಸಿದ್ದಾರೆ. ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು ತಮ್ಮ ಎಂಟನೆಯ ವರ್ಷದ ಮೊದಲು ಕಾಣಿಕೆಯಾಗಿ ಈ ಸರಸ ಕೃತಿಯೊಂದನ್ನು ಕನ್ನಡ ತಾಯಿಗೆ ಇಂದು ಅರ್ಪಿಸಿದ್ದಾರೆ.

ಇದಕ್ಕೆ ಶ್ರೀ ಬೇಂದ್ರೆಯವರು 'ನಲ್ನುಡಿ'ಯ ಮುನ್ನುಡಿಯೊಂದನ್ನು ಬರೆದಿರುವರು. ಅದರಲ್ಲಿ ಶ್ರೀ ಕಸ್ತೂರಿಯವರನ್ನು, ಅವರ ಲೇಖನ ಕೌಶಲ್ಯವನ್ನು, ಪ್ರಕೃತ ಗ್ರಂಥದ ವಿಮರ್ಶೆಯೊಡನೆ ಪರಿಚಯ ಮಾಡಿಕೊಟ್ಟಿದ್ದಾರೆ. "ಕಸ್ತೂರಿಯವರ ಕೃತಿಯು ಕಟು ತತ್ತ್ವದರ್ಶನವು ನಾಡಿಗೆ ಹಚ್ಚಿ ಅನೇಕ ಮೂಗಗಳನ್ನು ನೇರವಾಗಿಸಿ ತಲೆಗೇರಿದ ಜಾಡ್ಯವನ್ನು ಇಳಿಸಲೆಂದೂ ಹಾಸ್ಯದ ಲಶುನ ರಸಾಯನವು ಕನ್ನಡದ ಜನಮನವನ್ನು ಎಚ್ಚರಗೊಳಿಸುತ್ತಿರಲೆಂದೂ ಯಥಾರ್ಥವಾಗಿ ಆಶಿಸಿದ್ದಾರೆ.

ಚಿತ್ರದುರ್ಗದ ಉದಾರ ಶಿರೋಮಣಿಗಳ ಮಕ್ಕಳು ಹನುಮಂತ ಮತ್ತು ಶೀನ. ಹನುಮಂತ ಮೂರು ಸಲ ಬಿ. ಎ.ಗೆ ಕುಳಿತ; ಮತ್ತೆ ಉದಾರ ಶಿರೋಮಣಿಗಳ ಕೈಬರಿದಾಗಲು ಆತನನ್ನು ತುಮಕೂರಲ್ಲಿ ಗುಮಾಸ್ತೆಯಲ್ಲಿ ಸೇರಿಸಿ 'ಇಂಡಾ'ಗೆ ಬರೆಯಲು ಹಚ್ಚುವರು; ಆತನಿಗೆ ಮೇಜರ್ ಭೀಮರಾಯರ ಮಗಳು ಲಲಿತುವಿನೊಡನೆ ವಿವಾಹ ನಾಟಕವಾಗುವುದು; ಮದುವೆ ದಿವಸ ನಡೆದ ಕೆಲವು ಘಟನೆಗಳಿಂದ ಹನುಮಂತ ಹೇಳದೆ ಕೇಳದೆ ತಿಂಗಳೂರಿಗೆ ಹೋಗುತ್ತಾನೆ. ಅಲ್ಲಿ ನೌಕರಿಗಾಗಿ ಅಲೆದಾಡುತ್ತಾನೆ. ಪಚ್ಚೈಶಾಲು ಅಯ್ಯಂಗಾರರಂತಹವರು ಆವನನ್ನು ಸುಲಿದರೂ, ಕೊನೆಗೆ ಒಂದು ಸರ್ಕಸ್ ಕಂಪನಿಯಲ್ಲಿ ಕೆಲಸ ಸಿಗುತ್ತದೆ. ವಿದ್ಯಾರ್ಥಿಯಾಗಿದ್ದಾಗ ಕತ್ತೆ ಕೂಗುವುದನ್ನು ಆತ ಕಲಿತಿದ್ದು ಚೆನ್ನಾಗಿ ಅಭ್ಯಾಸ ಮಾಡಿದ್ದ; ಆ ಕತ್ತೆ ಕೂಗುವ ಕೆಲಸ ಆತನಿಗೆ. ಕರಡಿಯ ವೇಷಹಾಕಿ ಕತ್ತೆಯಂತೆ ಕೂಗುವನು. ಸರ್ಕಸಿನವರು ಆದೊಂದು ವಿಚಿತ್ರ ಮೃಗವೆಂದು ಪ್ರದರ್ಶಿಸುವರು! ಕರಡಿ ವೇಷದ ಕತ್ತೆ ಕೂಗುವ ಆ ಮೃಗವನ್ನು, ಹನುಮಂತನನ್ನು, ಆಂಗ್ಲೋ ಇಂಡಿಯನ್ ಹುಡುಗಿಯು ಕೊಳ್ಳುತ್ತಾಳೆ. ಎಲ್ಲಿಯೂ ಪ್ರಯೋಜನವಿಲ್ಲದ ಹನುಮಂತ ದಿನಕ್ಕೆ ಆರೇಳು ರೂಪಾಯಿ ದುಡಿದು, ತನ್ನನ್ನು ಕೊಳ್ಳುವ ಆಂಗ್ಲೋ ಇಂಡಿಯಳನ್ನೇ ವಿವಾಹವಾಗುತ್ತಾನೆ; ಇತ್ತ ಆತನ ತಮ್ಮ, ಬುದ್ಧಿವಂತನಾದ ಶೀನ [illegible] [illegible] ಉದ್ದೇಶವಾಗಿ [illegible] [illegible] ಹಾಸ್ಯ [illegible] ಇದೆ.

ಕಥಾವಸ್ತು (ಪ್ಲಾಟ್) ಹಟ್ಟಿನ ಸ್ವಾರಸ್ಯ ಕಾಣುತ್ತದೆಂದು ಹೇಳಬರುವುದಿಲ್ಲ. ಆದರೆ [illegible] ಕತೆಯನ್ನು ವಿಸ್ತರಿಸಿದ ರೀತಿ, ಒಂದೊಂದೇ ಘಟನೆಗಳನ್ನು ವಿಸ್ತಾರವಾಗಿ ಹೆಣೆಯಲ್ಪಟ್ಟ ಕಲಾಸ್ವರೂಪವು ಅನಾಮಾನ್ಯವಾದುದು! ಉದಾರ ಶಿರೋಮಣಿ, ಆನಂದರಾಯರು, ಮೇಜರ್ ಭೀಮರಾಯರು, ಸರ್ಕಸಿನ ಪ್ರೊಫೆಸರ್ ಪಶುಪತಿ, 'ಬಿಸಿಬಿಸಿ' ದಾಕ್ಷಾಯಣಿ ಡಾರ್ [illegible] ಬೋಧರಾಯರು, ಪ್ರಿಗರ್ ಸುಬ್ಬ ಶಾಸ್ತ್ರಿ, ಥಿಯೋಡೋರ್ ನಂಬರ್ [illegible], ಪಚ್ಚೈಶಾಲಿನ ಅಯ್ಯಂಗಾರರು, ಜೀವಿಯ ಬೈರಾಗಿ ಮುಣ್ಣಿ [illegible], ಇವರೆಲ್ಲರೂ 'ಗಾಳಿಗೋಪುರ'ಕ್ಕೆ ಆಧಾರಭೂತರಾಗಿ ನಿಂತ ಕಂಬಗಳು; ನಗೆಯ ಮೂರ್ತಿಗಳು. ಶ್ರೀ ಕಸ್ತೂರಿಯವರು ಈ ಹಲವು ಪಾತ್ರಗಳಲ್ಲಿ ಸಮಾಜದ ಒಂದೊಂದು ನ್ಯೂನತೆಯನ್ನು ಒಂದೊಂದು ವ್ಯಕ್ತಿಯ ಮೂಲಕ ಚಿತ್ರಿಸಿ ತೋರಿಸಿದ್ದಾರೆ. ಮದುವೆ ನಾಟಕದ ನೋಟೀಸು, ಉದಾರ ಶಿರೋಮಣಿ ಬಿರುದು ದಾನ, ಜೇನ ಮಂತ್ರ, ಇಂಗೋಪತಿ, ವಿಟಮಿನ್, ಪತ್ರಿಕೆಯ ಜಾಹೀರಾತು ಇತ್ಯಾದಿಗಳಲ್ಲಿ ಉಕ್ಕಿ ಬರುತ್ತಿರುವ ಹಾಸ್ಯಲಹರಿಯು ಓದಲ್ಲದೆ ವಿವರಿಸಿ ತೀರದಷ್ಟು ಸ್ವಾರಸ್ಯವಾಗಿದೆ.

ಕಥೆಯ ಘಟನೆಗಳು ಸರಸ ವಿಡಂಬನೆಗಳಾಗಿ ಸಾಗುವದಿದ್ದರೂ, ಒಟ್ಟಿನಲ್ಲಿ ಕಥಾವಸ್ತು ಅಸ್ವಾಭಾವಿಕವಾಗಿದೆ. ಬುದ್ಧಿವಂತನಾದ ಶೀನ ಹುಚ್ಚನಾಗಿ ನಿಷ್ಪ್ರಯೋಜಕನಾಗುತ್ತಾನೆ. ತಿಳಿಗೇಡಿ ಹನುಮನು ವಿನಾಥರೂ ಮಾಡಿ ಒಂದು ಜೀವನವನ್ನು ಗಳಿಸಿಕೊಳ್ಳುತ್ತಾನೆ. ಅಂತೂ ಒಂದು ರೀತಿಯ ಕೃತ್ರಿಮತೆಯಿಂದ ಕಥಾವಸ್ತುವು ಬೆಳೆದು ಆಕಸ್ಮಾತಾಗಿ ಕೊನೆಗೊಳ್ಳುತ್ತದೆ. ಮನುಷ್ಯರ ವಿಚಾರ, ಭವಿಷ್ಯ ಚಿಂತನೆಗಳೆಲ್ಲವೂ 'ಗಾಳಿಗೋಪುರ'ವೆಂಬ ತತ್ತ್ವವನ್ನು ಲೇಖಕರು ಮಾಡಿರಬಹುದೇ?

ಬಿಡಿಬಿಡಿಯಾಗಿ ತೋರುವ ಹಲವು ಹಾಸ್ಯದ ಸನ್ನಿವೇಶಗಳನ್ನು ಜತೆಗೂಳಿಸಿ ಹದಿನಾರು ಅಧ್ಯಾಯಗಳಾಗಿ ಕಥೆಯನ್ನು ಬೆಳಗಿಸಿ ಶಿಥಿಲ ಶಿಥಿಲವಾದ ಸೂತ್ರಗಳಿಂದಲೇ ಕಟ್ಟಿದ ಈ ಸಾಮಾಜಿಕ ಕಾದಂಬರಿಯು ನಿಜವಾಗಿಯೂ ನಗುವಿನ ಅಲೆಗಳ ಮೇಲೆ ತೇಲಾಡುವ 'ಗಾಳಿಗೋಪುರ'ವಾಗಿ ನಿಂತಿದೆ. ಅಧ್ಯಾಯಕ್ಕೊಂದೊಂದು ವಿಪರೀತ ಶಿರೋನಾಮೆ, ಶಿರೋನಾಮೆಯ ಕೆಳಗೆ ಅಸಂಬದ್ಧವೆನಿಸುವುದಾದರೂ ಸಂಬಂಧವನ್ನು ತೋರಿಸುವ ಇತರ ಕವಿಗಳ ಕವಿತೆಯ ಚೂರುಗಳು, ವ್ಯಕ್ತಿಗಳ ಗುಣ ಸ್ವಭಾವಗಳಿಗೆ ಅನುಸರಿಸಿರುವ ಹೆಸರು ಮತ್ತು ವಿಶೇಷಣ ಪದಗಳು, ಎಲ್ಲಾ ಕಡೆಯ ಕನ್ನಡಿಗರಿಗೂ ಸರಲವಾಗಿ ಅರ್ಥವಾಗುವಂತಹ ಸುಲಭವೂ ನವೀನವೂ ಆದ ಶೈಲಿ ಇದರಿಂದ 'ಗಾಳಿಗೋಪುರ'ವು ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಗಳಿಸುವುದು.

ತುದಿಯಿಂದ ಕೊನೆಯ ತನಕ ಹರಿಯುವ ಹಾಸ್ಯಲಹರಿಯನ್ನು ಬೇರೆ ಬೇರೆ ಘಟನೆಗಳು ವಿವಿಧ ವಿನೋದಗಳು ಬೆಳಗಿಸುತ್ತವೆ. ಕನ್ನಡದಲ್ಲಿ ಚಲಚ್ಚಿತ್ರವನ್ನು ನಿರ್ಮಿಸುವವರು, ಈ ಕಥೆಯನ್ನು ಸಿನೆಮಾಲೋಕಕ್ಕೆ ತಿರುಗಿಸಲು ಪ್ರಯತ್ನಪಟ್ಟರೆ ಒಂದು ಉತ್ತಮ ಹಾಸ್ಯಚಿತ್ರವನ್ನು ತಯಾರಿಸಬಹುದಾಗಿ ನಮ್ಮ ನಂಬಿಕೆ.

ಶ್ರೀ ಕಸ್ತೂರಿಯವರ ಹಾಸ್ಯವು ರಸಿಕರನ್ನು ತಲೆದೂಗಿಸುವಂತಹುದು. ಕನ್ನಡ ಸಾಹಿತ್ಯಲೋಕದಲ್ಲಿ ಮುಂದಕ್ಕೆ ಇಂತಹ ಕೃತಿಗಳು ಹೆಚ್ಚು ಹೆಚ್ಚಾಗಲಿ, ಎಂದು ನಮ್ಮ ಹಾರೈಕೆ.

— ಕಡ್ಯಾರ

*ಬರೆದವರು ನಾ. ಕಸ್ತೂರಿ, ಎಂ. ಎ; ಬಿ. ಎಲ್, ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಬೆಲೆ 1-4-0.

About Ourselves

For a long time it has been our policy to concentrate largely on loans on the security of jewellery and gold. For this we were criticized and even laughed at. Well-meaning friends advised us that we should give up mere pawn-broking and money-lending and devote ourselves to "real" banking.

But to-day all our friends are congratulating us because in a war-stricken world of ever-shifting values gold has remained a stable commodity.

RESOURCES OF A CRORE. Estd: 1906 **CANARA BANK, LIMITED.**

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9	3% „
One year	3½% „
Two years	4% „
SHORT TERM Deposits	2½% p. a.
Current Account	1% p. a.
Savings Bank	2½% „

Particulars of other kinds of deposits on application.

THE

BANK OF MANGALORE LTD.,

MANGALORE.

ESTD 1931

Branches:-

Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

20-9-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೦-೯-೧೯೪೦]

ಯುದ್ಧವಿರುದ್ಧ ಪ್ರಚಾರಕ್ಕೆ ಗಾಂಧಿಜಿ ವೈಸರಾಯರನ್ನು ಕೇಳುವರು

ಕಾಂಗ್ರೆಸಿನಲ್ಲಿ ಪ್ರಚಂಡ ಭಾಷಣ!

ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಪ್ರಚಂಡ ಅಧಿವೇಶನ ನೆರೆಯಿತು. ಮಹಾತ್ಮಾಜಿಯವರು ಮುಂದಾಳುತನ ವಹಿಸಬೇಕಾಗಿ ಕಮಿಟಿಯು ಏಕಕಂಠದಿಂದ ಒಪ್ಪಿತು. ಮಹಾತ್ಮಾಜಿಯವರು ಕಾಂಗ್ರೆಸ್ ಕಮಿಟಿಯ ಮುಂದೆ ಪ್ರಚಂಡವಾದ ಭಾಷಣ ಮಾಡಿದರು. ಅದು ಭಾರತದ ರಾಜಕೀಯದಲ್ಲಿ ಬಹಳ ಉದಾತ್ತವಾಗಿದೆ. ಅತ್ಯಂತ ಮನನೀಯವಿದೆ.

'ಸದ್ಯಕ್ಕೆ ಸಾರ್ವಜನಿಕ ಶಾಸನಭಂಗ ಮಾಡುವ ಪ್ರಸಂಗ ಬಂದಿಲ್ಲ. ವೈಯಕ್ತಿಕ ಸತ್ಯಾಗ್ರಹ ಆರಂಭವಾಗಬಹುದು. ಮುಂದೇನು ಮಾಡಬಹುದೆಂದು ನಾನು ವಿಚಾರಮಾಡುತ್ತಿದ್ದೇನೆ. ಅದು ಹೊಳೆದ ಕೂಡಲೇ ನಿಮಗೆ ತಿಳಿಸುತ್ತೇನೆ. ಹೊಳೆಯದಿದ್ದರೆ ಅದನ್ನು ತಿಳಿಸುತ್ತೇನೆ. ನಾನು ಮತ್ತೆ ವೈಸರಾಯರ ಬಳಿಗೆ ಹೋಗುತ್ತೇನೆ. ಅವರಿಗೆ ಈ ನಿರ್ಣಯವನ್ನು ತೋರಿಸುತ್ತೇನೆ.' ಯುದ್ಧದ ಪರಿಸ್ಥಿತಿಯು ಕಾಂಗ್ರೆಸಿನ ಅಸ್ತಿತ್ವವನ್ನು ಅಲ್ಲಗಳೆಯುವುದಲ್ಲವೇ ಎಂದು ಕೇಳುತ್ತೇನೆ. ಬ್ರಿಟಿಷರ ಸಂಕಷ್ಟದ ಬಗ್ಗೆ ಸಹಾನುಭೂತಿಯಿದೆ. ಆದರೆ ಯುದ್ಧದಲ್ಲಿ ನಾವು ಭಾಗವಹಿಸಲಾರೆವು. ಹಿಂದೂಸ್ಥಾನ ಈ ಯುದ್ಧದ ವಿರುದ್ಧ ಪ್ರಚಾರಮಾಡಲು ಕಾಂಗ್ರೆಸ್ ಮುಖಂಡರಿಗೆ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ನಾನು ವೈಸರಾಯರೊಡನೆ ಕೇಳುತ್ತೇನೆ. ಆ ಸ್ವಾತಂತ್ರ್ಯ ಸಿಕ್ಕಿದರೆ ಸತ್ಯಾಗ್ರಹ ಹೂಡುವ ಪ್ರಸಂಗವೇ ಬರುವುದಿಲ್ಲ' ಎಂದು ಅವರು ಹೇಳಿದರು.

ಮಹಾತ್ಮರ ಭಾಷಣ

ಮಹಾತ್ಮರು ಭಾಷಣಮಾಡಲೆದ್ದಾಗ ಪ್ರಚಂಡ ಕರತಾಡನವಾಯಿತು. ಧ್ವನಿವಾಹಕ ಯಂತ್ರದೆದುರು ಮಹಾತ್ಮರು ಕುಳಿತು ಮಾತನಾಡಿದರು. ಅದರ ವಿವರ ಹೀಗಿದೆ.

'ಕಳೆದ ೫೦ ವರ್ಷಗಳಲ್ಲಿ ನಾನು ಬಹಳ ಹೊಣೆಗಾರಿಕೆಯ ಕೆಲಸಗಳನ್ನು ವಹಿಸಿಕೊಂಡಿದ್ದೆನು. ಆದರೆ ಸದ್ಯಕ್ಕೆ ನೀವು ನನ್ನ ಮೇಲೆ ಹೊರಿಸಿರುವ ಈ ಹೊಣೆಗಾರಿಕೆ ಎಲ್ಲಕ್ಕೂ ಹೆಚ್ಚು ಗಂಭೀರ ಸ್ವರೂಪದ್ದೆಂದು ನನಗನಿಸುತ್ತದೆ. ಆದುದರಿಂದ ಈ ಬಗ್ಗೆ ನಾನು ಸ್ವಲ್ಪ ತಡೆದು ಗಂಭೀರ ರೀತಿಯಿಂದ ವಿಚಾರಮಾಡಬೇಕಾಗಿದೆ. ಇದರಲ್ಲಿ ಅನೇಕ ಸಂಗತಿಗಳು ನನಗೆ ಭೀತಿಯನ್ನುಂಟುಮಾಡುತ್ತಿವೆ. ಆದರೆ ನಾನು ಅನುಸರಿಸತಕ್ಕ ಮಾರ್ಗದ ಬಗ್ಗೆ ಮಾತ್ರ ನನ್ನ ಮನಸ್ಸಿನಲ್ಲಿ ಯಾವದೇ ಬಗೆಯ ಸಂದೇಹವಿರುವದಿಲ್ಲ. ನನ್ನ ಧ್ಯೇಯದಲ್ಲಿ ಯಾವಾಗಲೂ ಸಂಪೂರ್ಣ ವಿಶ್ವಾಸವನ್ನಿಟ್ಟುಕೊಂಡು ನಾನು ಕಾರ್ಯ ಮಾಡುತ್ತ ಬಂದಿರುವೆನು. ಒಮ್ಮೆ ನಾನು ಹೊಣೆಗಾರಿಕೆಯನ್ನು ಹೊತ್ತುಕೊಂಡೆನೆಂದರೆ ಯಾವ ಬಗೆಯ ಭೀತಿಯೂ ನನ್ನನ್ನು ಆ ಕಾರ್ಯದಿಂದ ಪರಾವೃತ್ತ ಮಾಡಲಾರದು.

'ನನ್ನನ್ನು ಒಂದು ಹಡಗದ ಕಪ್ತಾನನಿಗೆ ಹೋಲಿಸಿಕೊಳ್ಳುವೆನು. ಪ್ರಯಾಣಕ್ಕೆ ಹೊರಡುವ ಮೊದಲು ಬೇಕಾದಷ್ಟು ವಿಚಾರ ಮಾಡಬಹುದು. ಆದರೆ ಒಮ್ಮೆ ಪ್ರಯಾಣ ಮಾಡಲು ನಿರ್ಧರಿಸಿದ ಬಳಿಕ ನಿರ್ದಿಷ್ಟ ಸ್ಥಳಕ್ಕೆ ಹೋಗಿ ಮುಟ್ಟುವ ವರೆಗೆ ಹಿಂದೆ [illegible] ಎಂತಹ ಗಂಡಾಂತರ ಬಂದರೂ ಸ್ವೀಕೃತ ಕಾರ್ಯವನ್ನು ಕೊನೆಗಾಣಿಸದೆ ಬಿಡದು. ೨೦ ವರ್ಷಗಳ ಹಿಂದೆ ಇದ್ದಂತೆಯೇ ನಾನೀಗ ಇರುವದಿಲ್ಲ. ಆಗ ಇದ್ದಷ್ಟು ಸಾಮರ್ಥ್ಯವು ನನ್ನಲ್ಲಿರುವದಿಲ್ಲ. ಆಗಿನಂತೆ ಈಗಲೂ ಇಡೀ ದೇಶವನ್ನು ಸಂಚರಿಸುವ ಉತ್ಸಾಹವೂ ನನ್ನಲ್ಲಿರುವದಿಲ್ಲ. ಕಳೆದ ೨೦ ವರ್ಷಗಳಲ್ಲಿ ಕಾಂಗ್ರೆಸಿನಲ್ಲಿಯೂ ಅನೇಕ ಬದಲಾವಣೆಗಳಾಗಿವೆ. ಕಾಂಗ್ರೆಸಿನಲ್ಲಿ ಹೊಸ ಹುರುಪಿನ ಜನರು ಬರಹತ್ತಿರುವರು. ಕಾಂಗ್ರೆಸಿನ ನೇತೃತ್ವದ ಹೊಣೆಯಿಂದ ನನ್ನನ್ನು ಮುಕ್ತಮಾಡಿರೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೇಳಿಕೊಳ್ಳುವ ಪ್ರಸಂಗವೂ ಮೊನ್ನೆ ಬಂದಿತ್ತು. ಉದ್ದಿಷ್ಟ ಕಾರ್ಯದಲ್ಲಿ ನಿಮ್ಮ ಅಂತಃಕರಣಪೂರ್ವಕವಾದ ಬೆಂಬಲವನ್ನು ಪಡೆಯುವದು ಶಕ್ಯವಿಲ್ಲದಿದ್ದರೆ ನೀವು ನಿಮಗೆ ತೋಚಿದಂತೆ ಕಾರ್ಯ ಮಾಡುವದು ಒಳ್ಳೆಯದು. ಹಾಗೆ ನನ್ನ ಈ ಧೋರಣದಲ್ಲಿ ನಿಮ್ಮ ಸಂಪೂರ್ಣ ಸಹಾಯವಿಲ್ಲದಿದ್ದರೆ ನೀವು ಈ ನಿರ್ಣಯವನ್ನು ನಿರಾಕರಿಸಿರಿ. ಇದರಿಂದ ನನಗೆ ಯಾವದೇ ಬಗೆಯ ಕೆಡುಕೆನಿಸಲಾರದೆಂದು ನಾನು ನಿಮಗೆ ಆಶ್ವಾಸನ ಕೊಡುವೆನು.

'ಅಹಿಂಸೆಯಲ್ಲಿ ಸಂಪೂರ್ಣ ನಿಷ್ಠೆಯುಳ್ಳವರಾಗಿರೆಂದು ಕಳೆದ ೨೦ ವರ್ಷಗಳಿಂದ ನಾವು ಜನರಿಗೆ ಹೇಳುತ್ತ ಬಂದಿರುವೆವು. ೧೯೨೦ರಲ್ಲಿ ನಾವು ಮೊದಲನೇ ಅಹಿಂಸಾತ್ಮಕ ಅಸಹಕಾರವನ್ನು ಹೂಡುವಾಗ' ಖಿಲಾಫತ ಚಳವಳಿ ಮತ್ತು ಪಂಜಾಬದಲ್ಲಿಯ ಅತ್ಯಾಚಾರದ ಪ್ರಶ್ನೆಗಳನ್ನು ಮುಂದೆ ಮಾಡಿದ್ದೆವು. ಆಗ ನಮ್ಮ ಚಳವಳಿಯಲ್ಲಿ ಸ್ವರಾಜ್ಯ ಶಬ್ದವೇ ಇಲ್ಲದ್ದಕ್ಕಾಗಿ ಅನೇಕ ಗೆಳೆಯರಿಗೆ ಆಶ್ಚರ್ಯವೆನಿಸಿತು. ಆದರೆ ಖಿಲಾಫತ ಪ್ರಶ್ನೆಯನ್ನು ಬಿಡಿಸಿ ಪಂಜಾಬದಲ್ಲಿಯ ಅತ್ಯಾಚಾರದ ಪರಿಮಾರ್ಜನೆಯನ್ನು ಮಾಡಿದರೆ ನಾವು ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಬಹುದೆಂದು ನನ್ನ ಅಭಿಪ್ರಾಯ. ಯುದ್ಧಪ್ರಯತ್ನಗಳಲ್ಲಿ ಕಾಂಗ್ರೆಸು ಸಹಕಾರದ ಹಸ್ತವನ್ನು ಮುಂದೆ ಮಾಡಿತ್ತು. ಈ ಸಹಕಾರದ ಹಸ್ತವನ್ನು ಸರಕಾರವು ಸ್ವೀಕರಿಸುವದು ಬಹಳ ಸುಲಭವಾಗಿತ್ತು. ಇದಕ್ಕಾಗಿ ಕಾಂಗ್ರೆಸು ಅಹಿಂಸೆಯ ಧ್ಯೇಯವನ್ನು ಮರ್ಯಾದಿತಗೊಳಿಸಲು ಸಿದ್ಧವಾಗಿತ್ತು. ಆಂತರಿಕ ಅಶಾಂತಿ ಮತ್ತು ಬಾಹ್ಯ ದಾಳಿಯಲ್ಲಿ ಅಹಿಂಸೆಯನ್ನು ಸ್ವಲ್ಪಮಟ್ಟಿಗೆ ಮರ್ಯಾದಿತಗೊಳಿಸಲಾಗುವದೆಂದು ವರ್ಕಿಂಗ್ ಕಮಿಟಿಯು ನಿರ್ಣಯಿಸಿತ್ತು.

"ಕಾಂಗ್ರೆಸ್ ಸಂಸ್ಥೆಯ ಸಂಘಟನೆ ಮತ್ತು ಶಕ್ತಿಯು ಪ್ರಚಂಡವಿರುವವು. ಕಾಂಗ್ರೆಸ ಸದಸ್ಯರ ಬೆಂಬಲಕ್ಕೆ ದೇಶದಲ್ಲಿಯ ಕೋಟ್ಯಾವಧಿಯ ಜನರ ಬೆಂಬಲವಿರುವದು. ಪಂಜಾಬ ಬಂಗಾಲ ಮತ್ತು ಸಿಂಧ ಪ್ರಾಂತಗಳಲ್ಲಿ ಮುಸಲ್ಮಾನರು ಕಾಂಗ್ರೆಸ್ಸನ್ನು ವಶಪಡಿಸಿಕೊಳ್ಳಲು ಯಾವದೇ ಬಗೆಯ ನಿರ್ಬಂಧವಿರುವದಿಲ್ಲ. ಕಾಂಗ್ರೆಸ್ಸಿನ ಧ್ಯೇಯವನ್ನು ಒಪ್ಪಿ ಅದಕ್ಕಾಗಿ ಕಾರ್ಯಮಾಡಲು ಸಾಧ್ಯವಿದ್ದ ಪ್ರತಿಯೊಬ್ಬ ಭಾರತೀಯನಿಗೆ ಕಾಂಗ್ರೆಸಿಗೆ ಸೇರಲು ಮುಕ್ತದ್ವಾರವಿದೆ. ಮೌಲಾನಾ ಅಬ್ದುಲ್ ಕಲಂ ಆಜಾದರು ತಮ್ಮ ಸಂಗಡ ಅನೇಕ ಮುಸಲ್ಮಾನ ಬಾಂಧವರನ್ನು ಕಾಂಗ್ರೆಸ ಪಕ್ಷದಲ್ಲಿ ತಂದರೆಂದು ಈಗ ಈ ಸ್ಥಾನದಲ್ಲಿರುವುದಿಲ್ಲ. ಆದರೆ ಭಾರತೀಯನೆಂಬ ಹಕ್ಕಿನಿಂದಲೇ ಅವರಿಂದು ಕಾಂಗ್ರೆಸ್ಸಿನಲ್ಲಿರುವರು. ವರ್ಕಿಂಗ ಕಮಿಟಿಯ ಮೇಲೆ ಅಷ್ಟೇ ಏಕೆ ನನ್ನ ಮೇಲೆ ಕೂಡ ಅವರು ಯಾವ ಬಗೆಯ ವರ್ಚಸ್ಸನ್ನು ಹೂಡಿಸುವರೆಂಬುದು ನಿಮಗೆಲ್ಲ ಗೊತ್ತಿದೆ. [illegible] ಖಾನ ಬಂಧುಗಳೂ ಇದ್ದಾರೆ. ಭಾರತಮಾತೆಯನ್ನು ಬಂಧಮುಕ್ತಮಾಡಿ ಕೋಟ್ಯಾವಧಿ ಭಾರತೀಯರ ಸೇವೆಮಾಡುವ ಪ್ರಬಲೇಚ್ಛೆಯ ಹೊರತು ನಮ್ಮ [illegible] ಅವರಲ್ಲಿ ಬೇರೆ ಯಾವ ಸಂಬಂಧವಿದೆಯು? ಆದರೆ ಮುಸಲ್ಮಾನರ ೮ ಕೋಟಿ ಇರುವರು. ಪಾರಸಿಗಳು ಕೇವಲ ಒಂದು ಲಕ್ಷ ಜನರಿದ್ದರೂ ಕಾಂಗ್ರೆಸ್ಸು [illegible] ಪಾರಸಿಗಳ ಸೊತ್ತು ಆಗಿರುವುದು. ನಾವು ನಮ್ಮ ತಪ್ಪಿನಿಂದ ಅಸ್ಪೃಶ್ಯರೆಂದು ಕರೆಯುವ ಹರಿಜನರ ಸೊತ್ತೂ ಕಾಂಗ್ರೆಸ್ಸು ಇರುವುದು. ಕಾಂಗ್ರೆಸ್ಸು ಹಿಂದುಗಳ ಸಂಸ್ಥೆಯೆಂಬ ತಪ್ಪು ತಿಳುವಳಿಕೆಯಾದವರು ಹಿಂದುಗಳಲ್ಲಿ ಯಾರಾದರೂ ಇದ್ದರೆ ಅವರು ಕೂಡಲೇ ಕಾಂಗ್ರೆಸ್ ಬಿಟ್ಟು ಹೋಗಬೇಕೆಂದು ನಾನು ಬಿನ್ನವಿಸುತ್ತೇನೆ.

"ಕಾಂಗ್ರೆಸ್ಸು ಪ್ರಜಾಪ್ರಭುತ್ವ ಸಂಸ್ಥೆ. ಆದರೆ ಕಾಂಗ್ರೆಸ್ಸು ಅಹಿಂಸೆಯಲ್ಲಿ ಸಂಪೂರ್ಣ ವಿಶ್ವಾಸವಿದ್ದ ಸಂಸ್ಥೆಯಿದ್ದುದರಿಂದ ಫೆಸಿಜಂ, ನಾಜಿಜಂ ಇಲ್ಲವೆ ಇಂಪೀರಿಯಾಲಿಜಂಗಳಿಗೆ ಆ ಸಂಸ್ಥೆಯಲ್ಲಿ ಯಾವದೇ ಬಗೆಯ ಆಸ್ಪದವಿರುವುದಿಲ್ಲ. ನಮ್ಮ ಮುಂದಿರುವ ಕಾರ್ಯವನ್ನು ಮಾಡಬೇಕಾದರೆ ದೇಶದಲ್ಲಿಯ ಅತ್ಯಂತ ಅಲ್ಪಸಂಖ್ಯಾಕ ಪಕ್ಷದವರನ್ನು ಕೂಡ ನಮ್ಮ ಚಳವಳಿಯಲ್ಲಿ ಸೇರಿಕೊಳ್ಳಲು ನಾವು ಸಮರ್ಥರಾಗಬೇಕು. ಆ ಬಗೆಯಾಗಿ ನಾವು ಅಲ್ಪಸಂಖ್ಯಾಕರನ್ನ ನಮ್ಮ ಸಂಸ್ಥೆಯಲ್ಲಿ ಸೇರಿಕೊಳ್ಳಲು ಸಮರ್ಥರಾಗದಿದ್ದರೆ ಆ ಅಲ್ಪಸಂಖ್ಯಾಕರ ಸಂಖ್ಯೆ ಎಷ್ಟೇ ಕಡಿಮೆಯಿದ್ದರೂ ಕಾಂಗ್ರೆಸ್ಸು ಸ್ವೀಕರಿಸಿದ ಮಾರ್ಗದಿಂದಲೇ ಆ ಅಲ್ಪಸಂಖ್ಯಾಕರಿಗೆ ನಮ್ಮ ಪ್ರಗತಿಗೆ ಅಡ್ಡಿಯನ್ನುಂಟುಮಾಡಲು ಶಕ್ಯವಾಗಬಹುದು. ತನ್ನ ಬಹುಸಂಖ್ಯೆಯ ಬಲದಿಂದ ಕಾಂಗ್ರೆಸ್ಸಿಗೆ ಆಳುವದು ಬೇಕಿಲ್ಲ.

ಹನ್ನೆರಡನೇ ಪುಟವನ್ನು ನೋಡಿರಿ.

ಸ್ವದೇಶಾಭಿಮಾನಿ

ತಾರೀಕು 20—9—1940

ಕಾಂಗ್ರೆಸಿನ ನಿರ್ಣಯ

ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆ ಸೇರಿ ಒಂದು ಮಹತ್ವದ ನಿರ್ಣಯವನ್ನು ಮಾಡಿದೆ. ಬ್ರಿಟನು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲು ಇಷ್ಟಪಡುವುದೆಂದು ಸಾರಿದ್ದರೂ, ಆ ಬಗ್ಗೆ ಅದರ ಪ್ರಾಮಾಣಿಕತೆಯನ್ನು ಸ್ಪಷ್ಟಗೊಳಿಸಿ, ಸ್ವಾತಂತ್ರ್ಯದ ಹಾದಿಯನ್ನು ಸುಗಮವಾಗಿ ಮಾಡುವ ಸಲುವಾಗಿ, ರಾಷ್ಟ್ರೀಯ ಸರಕಾರದ ರಚನೆಯನ್ನು ಮಾಡಿದ್ದಲ್ಲಿ ಕಾಂಗ್ರೆಸು ಇಂದಿನ ಯುದ್ಧದಲ್ಲಿ ಬ್ರಿಟನಿಗೆ ಸಹಾಯ ಕೊಡುವುದಾಗಿ ಸಾರಿದ್ದರೂ, ಆ ಬೇಡಿಕೆಯನ್ನು ಅಲ್ಲಗಳೆದು, ಕಾಂಗ್ರೆಸು ನೀಡಿದ ಸಹಕಾರ ಹಸ್ತವನ್ನು ತಿರಸ್ಕರಿಸಿದ ಬ್ರಿಟನಿಗೆ ಈ ನಿರ್ಣಯದ ರೂಪದಲ್ಲಿ ಕಾಂಗ್ರೆಸು ಇಂದು ತನ್ನ ಮುಂದಿನ ಕಾರ್ಯಕ್ರಮವನ್ನು ತಿಳಿಸಿದೆ. ಕಾಂಗ್ರೆಸಿನ ಈ ಗಂಭೀರವಾದ ನಿರ್ಣಯವು ಭಾರತದ ರಾಜಕೀಯ ಪರಿಸ್ಥಿತಿಯನ್ನು ಕೆಲಕಾಲದಿಂದ ವಿಮರ್ಶಿಸುತ್ತಾ ಬಂದವರಿಗೆ ಆಶ್ಚರ್ಯವೆಂದು ತೋರುವ ಹಾಗಿಲ್ಲ. ಈ ಸಂದರ್ಭದಲ್ಲಿ, ಕಾಂಗ್ರೆಸು ಈ ರೂಪದಿಂದ ಒಂದು ಮಹತ್ವವಾದ ನಿರ್ಣಯವನ್ನು ಮಾಡಿ, ತನ್ನ ಮುಂದಿನ ಹೆಜ್ಜೆಯನ್ನು ಗುರುತಿಸಿಕೊಳ್ಳಬೇಕಾದ ಕಾರಣ ಅದಕ್ಕನುಗುಣವಾಗಿಯೇ ಇಂದು ತನ್ನ ಅಂಗೀಕೃತ ತತ್ವವಾದ ಅಹಿಂಸೆಗೆ ಅನುಸರಿಸಿ, ಮಹಾತ್ಮಾಜಿಯವರ ಮುಂದಾಳುತನವನ್ನು ಸಂಪಾದಿಸಿಕೊಂಡು, ಸ್ವಾತಂತ್ರ್ಯ ಪ್ರಾಪ್ತಿಯ ಕಾರ್ಯಕ್ರಮವನ್ನು ರಾಷ್ಟ್ರದ ಮುಂದಿಟ್ಟಿದೆ

ಅಹಿಂಸೆಯ ಸ್ಪಷ್ಟೀಕರಣ

ಈ ಸಂದರ್ಭದಲ್ಲಿ ತಿರಿಗಿ ಕಾಂಗ್ರೆಸು ಅಹಿಂಸೆಯ ಸ್ಪಷ್ಟೀಕರಣವನ್ನೂ ಮಾಡಿದೆ. ಕಳೆದ ಇಪ್ಪತ್ತು ವರ್ಷಗಳಿಂದಲೂ ಕಾಂಗ್ರೆಸು ಅಹಿಂಸೆಯ ತತ್ವವನ್ನು ಅಂಗೀಕರಿಸಿ ಕಾರ್ಯವನ್ನು ಮಾಡಿತ್ತು. ಅಹಿಂಸೆಯ ತತ್ವವು ಗಾಂಧಿಜಿಯವರಿಗೆ ಒಂದು ಉಚ್ಚ ಜೀವನಧರ್ಮ. ಕಾಂಗ್ರೆಸಿಗೆ, ಅದು ಗಾಂಧಿಜಿಯವರ ಮುಂದಾಳುತನದಲ್ಲಿ ಒಂದು ರಾಜಕೀಯ ಧರ್ಮ. ಹಾಗಾಗಿ ಒಂದು ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಅಹಿಂಸಾ ತತ್ವವನ್ನು ರಾಜಕೀಯ ದೃಷ್ಟಿಯಿಂದಲೇ ವಿಚಾರ ಮಾಡುವುದು ನ್ಯಾಯವಿತ್ತು. ಅದೇ ದೃಷ್ಟಿಯಿಂದ ವಿಚಾರ ಮಾಡಿತ್ತು.

ಕಾಂಗ್ರೆಸು ಸ್ವಾತಂತ್ರ್ಯ [illegible] ಅಂಗೀಕರಿಸಿದ ಕಾಲದಲ್ಲಿ ರಾಷ್ಟ್ರ [illegible] ಅಹಿಂಸೆ [illegible] ರ್ಥವಾಗಲಿಲ್ಲ. ಮುಂದೆ ಯುದ್ಧವಾರಂಭವಾಗಲು, ಪ್ರಾಂತದಲ್ಲಿ ಅಧಿಕಾರದಲ್ಲಿರುವ ಜನತೆಯ ಪ್ರತಿನಿಧಿಗಳೊಡನೆ ವಿಚಾರವಿನಿಮಯವನ್ನೂ ಕೂಡ ಮಾಡದೆ ಬ್ರಿಟನು ಭಾರತವನ್ನು ಯುದ್ಧದಲ್ಲಿಳಿಸಲು, ಕಾಂಗ್ರೆಸು ಮಂತ್ರಿಮಂಡಲಗಳು ರಾಜೀನಾಮೆಯಿತ್ತುದರಿಂದ ಅವರಿಗೆ ಅಹಿಂಸಾತತ್ವದ ವಿಷಯದಲ್ಲಿ ಹೆಚ್ಚಿನ ಪ್ರಯೋಗಮಾಡಲೂ ಸಂದರ್ಭವೊದಗಲಿಲ್ಲ. ಆದರೂ ಮುಂದೆ, ಡಿಲ್ಲಿಯಲ್ಲಿ ಸೇರಿದ 'ಕಾಂಗ್ರೆಸ್' ವರ್ಕಿಂಗ್ ಕಮಿಟಿಯು ಸ್ವರಾಜ್ಯದ ಹಾದಿಯಲ್ಲಿ ಬ್ರಿಟನು ಮುನ್ನಡೆಯುವುದಿದ್ದರೆ, ಭಾರತವು ಬ್ರಿಟನಿಗೆ ಯುದ್ಧದಲ್ಲಿ ಸಹಕಾರ ಕೊಡುವುದಾಗಿ ನಿರ್ಣಯ ಮಾಡಿತ್ತು. ಆ ಸಂದರ್ಭದಲ್ಲಿ ಕಾಂಗ್ರೆಸಿನ ಪ್ರಮುಖ ಮಂಡಳದಲ್ಲಿರುವ ಬಹುಮಂದಿಯು, ಗಾಂಧಿಜಿಯವರಂತೆ ಮನೋವಾಕ್ಕಾಯಗಳಿಂದ ಅಹಿಂಸೆಯನ್ನು ಪಾಲಿಸುವುದು ರಾಜಕೀಯದಲ್ಲಿ ಶಕ್ಯವಿಲ್ಲವೆಂಬ ಅಭಿಪ್ರಾಯಕ್ಕೆ ಬಂದುದರಿಂದ ಆಂತರಿಕ ಕಲಹ ಮತ್ತು ಬಹಿರಾಕ್ರಮಣಗಳ ವಿಷಯದಲ್ಲಿ ಕಾಂಗ್ರೆಸು ಹಿಂಸೆಯನ್ನು ಅಂಗೀಕರಿಸುವುದಾಗಿ ಸ್ಪಷ್ಟಪಡಿಸಿತು. ಈ ಮಹತ್ವದ ನಿರ್ಣಯವನ್ನು ಮಾಡುವ ಸಂದರ್ಭದಲ್ಲಿ ಕಾಂಗ್ರೆಸು ಮಹಾತ್ಮಾಜಿಯವರನ್ನು ತತ್ವತಃ ಭಿನ್ನರಾದ ಅವರನ್ನು ದೂರವಿರಿಸುವಷ್ಟು ದುಃಖದ ಪ್ರಸಂಗವನ್ನೂ ಕಂಡುಕೊಂಡಿತು. ಅಂತೂ ಹಾಗೆ ಬ್ರಿಟನಿಗೆ ಕಾಂಗ್ರೆಸು ಸಹಕಾರದ ಹಸ್ತವನ್ನು ನೀಡಿತು

ಇಂದಿನ ವಿಷಮ ಸಂದರ್ಭದಲ್ಲಿ ಗಾಂಧಿಜಿಯವರ ಮುಂದಾಳುತನವು ರಾಷ್ಟ್ರಕ್ಕೆ ಅವಶ್ಯ ಬೇಕಾಗಿದೆ, ಉಪಯೋಗವಿದೆ, ಅವರ ಮುಂದಾಳುತನಕ್ಕೆ ಮಾರ್ಗವನ್ನು ಎಲ್ಲರೂ ಕೂಡಿ ಇಂದು ಕಲ್ಪಿಸಿಕೊಟ್ಟಿದ್ದಾರೆ, ಪೂರ್ಣ ಅಹಿಂಸೆಯನ್ನು ಪಾಲಿಸಲು ಒಪ್ಪಿಕೊಂಡಿದ್ದಾರೆ. ಮುಂದಿನ ಸ್ವರಾಜ್ಯ ಪಾರ್ಲಿಮೆಂಟಿನಲ್ಲಿ ಕೇವಲ ಕಾಂಗ್ರೆಸ ಮಾತ್ರ ಇರುವುದಲ್ಲ. ಭಾರತದ ಭಿನ್ನ ಭಿನ್ನ ಪಂಗಡಗಳಿರುವವು; ಆಗ ದೇಶದ ತತ್ವವು ಪೂರ್ಣ ಅಹಿಂಸೆಯಾಗಬೇಕೋ ಬೇಡವೋ ಎಂಬುದನ್ನು ಅವರೆಲ್ಲರೂ ನಿಷ್ಕರ್ಷಿಸುವರೆಂಬುದು ಸರ್ವರಿಗೂ ತಿಳಿದಿದೆ. ಪ್ರಕೃತ ಕಾಂಗ್ರೆಸು ಪೂರ್ಣ ಅಹಿಂಸೆಗೆ ಪ್ರತಿಜ್ಞೆಬದ್ಧವಾಗಿದೆ, ಗಾಂಧಿಜಿಯವರು ನಾಯಕತ್ವದ ಸೂತ್ರವನ್ನು ಹಿಡಿದು ನಿಂತಿದ್ದಾರೆ.

ಮಹಾತ್ಮರ ಮುಂದಾಳುತನ

'ಕಳೆದ ಕೆಲವು ಕಾಲದಿಂದ ಕಳೆದ ರಾತ್ರಿಯೇನನಗೆ ವಿಶ್ರಾಂತಿಯು ಸಿಕ್ಕಿದ್ದಿದೆ; ಮಹಾತ್ಮಾಜಿಯವರು ತಿರಿಗಿ ಕಾಂಗ್ರೆಸಿನ ಮುಂದಾಳುತನ ವಹಿಸಿಕೊಂಡಿದ್ದಾರೆ; ಖಂಡಿತವಾಗಿಯೂ ಅವರು ನಮ್ಮನ್ನೆಲ್ಲಾ ವಿಜಯಮಾರ್ಗದಲ್ಲಿ 'ಮುನ್ನಡೆಸುವರು'' ಹೀಗೆಂದು ರಾಷ್ಟ್ರಪತಿ ಆಜಾದರು ಹೇಳಿದರು. ಗಾಂಧಿಜಿಯವರೇ ಹೇಳುವಂತೆ ಇಂದು ಅವರಿಗೆ ಕಾಂಗ್ರೆಸಿನ ಮುಂದಾಳುತನ ಕೊಟ್ಟು, ಅವರ ಮೇಲೆ ಕಾಂಗ್ರೆಸ್ ಹಿಂದಿಗಿಂತಲೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಿದೆ. ಆದರೂ ಗಾಂಧಿಜಿಯವರು ಹೊಣೆಗಾರಿಕೆಯನ್ನು ತಿರಸ್ಕರಿಸಲಿಲ್ಲ. ಬಿದ್ದ ಭಾರವನ್ನು ದೂರ ಸರಿಸಲಿಲ್ಲ. ರಾಷ್ಟ್ರವನ್ನು ಸ್ವಾತಂತ್ರ್ಯದ ಹಾದಿಯಲ್ಲಿ ಮುನ್ನಡೆಸುವ ಮಹಾಧೈರ್ಯದಿಂದ ಮುಂದೆ ಬಂದಿದ್ದಾರೆ, ಕಾಂಗ್ರೆಸಿನಲ್ಲಿ ಸರ್ವಪಕ್ಷದವರೂ, ವಿಶೇಷತಃ ಸೋಶಿಯಲಿಸ್ಟರು ಮಹಾತ್ಮರಿಗೆ ಪ್ರಬಲ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ; ಇಡೀ ಪ್ರಪಂಚದಲ್ಲಿಯೇ ಉತ್ತಮ ರಾಜಕೀಯ ನಿಪುಣನೆಂದು, ಸತ್ಯವಂತನೆಂದು, ದೈವಿಕ ಪುರುಷನೆಂದು, ಮಹಾತ್ಮನೆಂದು ಪ್ರಖ್ಯಾತನಾದ ಗಾಂಧಿಜಿ ತಿರಿಗಿ ಕಾಂಗ್ರೆಸಿನ ಸಾರಥಿಯಾಗಿ ಹೊಸ ಚಮತ್ಕಾರದಿಂದ, ಹಳೆಯ ಮುದುಕರಾದರೂ, ಹೊಸ ಹುರುಪಿನಿಂದ ಮುಂದೆ ಬಂದಿದ್ದಾರೆ

ಗಾಂಧಿಜಿಯವರು ಮುಂದಾಳುತನವನ್ನು ವಹಿಸಿಕೊಳ್ಳಬೇಕಾದರೆ, ಡಿಲ್ಲಿ ಮತ್ತು ಪೂನಾಗಳಲ್ಲಿ ಮಾಡಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವು ಅಂತರವಿತ್ತು. ಕಾಂಗ್ರೆಸು ಶುದ್ಧ ಅಹಿಂಸೆಯ ದಾರಿಯಿಂದ ವಿಚಲಿತವಾದ ಚಿಹ್ನೆಯು ನಿರ್ಣಯಗಳಲ್ಲಿ ಇದ್ದುದರಿಂದ ಅವರ ಆ ನಿರ್ಣಯಗಳಿರುವವರೆಗೆ ಮುಂದಾಳುತನವನ್ನು ವಹಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದಕಾರಣ ಕಾಂಗ್ರೆಸು ಕಮಿಟಿಯು ಆ ನಿರ್ಣಯಗಳನ್ನು ರದ್ದುಗೊಳಿಸಿ ತಿರಿಗಿ ಗಾಂಧಿಜಿಯವರ ಮಾರ್ಗವನ್ನು ನಿರ್ವಿಘ್ನಗೊಳಿಸಿರುವುದು. ಎಲ್ಲಿಯವರೆಗೆ ಬ್ರಿಟನ ರಾಷ್ಟ್ರೀಯ ಸರ್ಕಾರವನ್ನು ರಚಿಸಿ, ಸ್ವಾತಂತ್ರ್ಯ ಮಾರ್ಗದಲ್ಲಿ ಭಾರತವು ಹೋಗಲು ಭಾರತೀಯರನ್ನು ನಂಬುವುದಿಲ್ಲವೋ, ಅಲ್ಲಿಯವರೆಗೆ ಒಳಗಿನ ಹಾಗೂ ಹೊರಗಿನ ಕಡೆಗಳ ವಿಷಯವಾಗಿ ಭಾರತ ಸರಕಾರದ ತತ್ವವು ಹಿಂಸಾಮಯವೋ ಅಹಿಂಸಾಮಯವೋ ಎಂದು ನಿರ್ಧರಿಸುವುದೂ ಅವಶ್ಯವಿಲ್ಲವೆಂದು ತಿಳಿಕೊಂಡಿರುವುದರಿಂದ ಕಾಂಗ್ರೆಸಿನ ಹಿಂದಿನ ನಿರ್ಣಯಗಳು ತನ್ನಿಂದ ತಾನೇ ರದ್ದಾಗಿರುವುದಾಗಿ ಕಾಂಗ್ರೆಸು ಇಂದು ಸಾರಿದೆ

ಅಭಿಪ್ರಾಯ ಸ್ವಾತಂತ್ರ್ಯ ಬೇಕು

"ಭಾರತೀಯರಿಗೆ ಅಭಿಪ್ರಾಯ ಸ್ವಾತಂತ್ರ್ಯ ಬೇಕು, ಅದಿಲ್ಲದಿದ್ದರೆ ಅವರಿಗೆ ಜಗತ್ತಿನಲ್ಲಿಯೇ ಸ್ಥಾನವಿಲ್ಲ. ಬರಿಯ ನಿರಂತರ ದಾಸ್ಯವೇ ಅವರಿಗೆ ಗತಿ" ಹೀಗೆಂದು ಮಹಾತ್ಮಾಜಿಯವರು ಸಾರಿರುವರು. ಈ ದೃಷ್ಟಿಯಿಂದಲೇ, ಕಾಂಗ್ರೆಸು ಇಂದು, ತಾನು ನೀಡಿದ ಸಹಕಾರವನ್ನು ಬ್ರಿಟನು ಅಲ್ಲಗಳೆದ ಮೇಲೆ ಜನತೆಯ ಸಲುವಾಗಿ ಯಾವ ರೂಪದಲ್ಲಿ ಉಪಯೋಗವಾಗುವಂತಹ ಕಾರ್ಯಕ್ರಮವನ್ನು ಕೈಕೊಳ್ಳಬಹುದೆಂದು ವಿಚಾರ ಮಾಡಿತು. ಕಾಂಗ್ರೆಸಿನ ಇಂದಿನ ನಿರ್ಣಯ ಮತ್ತು ಗಾಂಧಿಜಿಯವರ ಉದಾತ್ತ ಘೋಷಣೆಗಳನ್ನು ವಿಚಾರಿಸಿದರೆ, ಭಾರತವು ಇಂದು ಅಪೇಕ್ಷಿಸುವುದು, ಅಭಿಪ್ರಾಯಸ್ವಾತಂತ್ರ್ಯವನ್ನು ಜನತೆಗೆ ಕೊಡಬೇಕೆಂಬುದಾಗಿದೆಯೆಂದು ತಿಳಿದುಬರುತ್ತದೆ.

ಐರ್ಲೆಂಡು ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ರಾಷ್ಟ್ರ. ಅದಕ್ಕೆ ಬ್ರಿಟನಿಗಿಂತಲೂ ಹೆಚ್ಚಾಗಿ ಜರ್ಮನಿಯ ದಾಳಿಯ ಭೀತಿಯಿದೆ, ಆದರೂ ಅದು ತನ್ನ ತಾಟಸ್ಥ್ಯವನ್ನು ಮುರಿದಿಲ್ಲ. ಹಾಗಿರುವಾಗ ಭಾರತಕ್ಕೆ—ಮುಂದೆ ಸ್ವಾತಂತ್ರ್ಯ ಕೊಡಲಾಗುವದೆಂದು ಸಾರಿದ ರಾಷ್ಟ್ರಕ್ಕೆ—ಇಂದಿನ ಯುದ್ಧದಲ್ಲಿ ತನ್ನ ಸ್ವಂತ ಅಭಿಪ್ರಾಯದಂತೆ ನಡೆಯಲು ಆಸ್ಪದ ಕೊಡುವುದು ಬ್ರಿಟನಿನ ಉದಾತ್ತತೆಯನ್ನು ಸಾರುವುದು. "ಬ್ರಿಟನ ಭಾರತಕ್ಕೆ ಈ ಅಭಿಪ್ರಾಯಸ್ವಾತಂತ್ರ್ಯ ಕೊಡಲಿ [illegible] ಉತ್ತಮ ನೀತಿಯನ್ನು ಜಗತ್ತಿಗೆ ತಿಳಿಸಲಿ" ಎಂದು ಗಾಂಧಿಜಿಯವರೇ ಹೇಳಿದ್ದಾರೆ.

ಮಹಾತ್ಮರು ಬೇಗನೇ ವೈಸರಾಯರ ಸಂದರ್ಶನಕ್ಕೆ ತೆರಳುವರು. ಯುದ್ಧ ವಿರುದ್ಧ ಪ್ರಚಾರ ಮಾಡಲು, ಅಹಿಂಸಾ ತತ್ವದಂತೆ ಪ್ರಚಾರ ಮಾಡಲು—ಕಾಂಗ್ರೆಸಿನ ಮುಖಂಡರಿಗೆ ಸಮ್ಮತಿ ಕೊಡಬೇಕೆಂದು ಕೇಳುವರು. ವೈಸರಾಯರು ಇದಕ್ಕೆ ಸಮ್ಮತಿಸಿದರೆ ಸತ್ಯಾಗ್ರಹ ಹೂಡುವ ಅವಶ್ಯವಿಲ್ಲವೆಂದಿದ್ದಾರೆ ಗಾಂಧಿಜಿಯವರು. ವೈಸರಾಯರು ಸಮ್ಮತಿಸಬಹುದೇ ಎಂಬ ವಿಷಯ ಈಗ ಹೇಳುವುದು ಅಕಾಲಿಕವಾದುದು, ಅನುಚಿತವಾದುದು

ಅದೆಂತಹ ಬಲವೋ

'ಎಳ್ಳು ಹಿಂಡಿ ಎಣ್ಣೆ ತೆಗೆದು ಅನ್ನದೊಂದಿಗೆ ಬೆರಸಿ ಊಟಮಾಡುತಿದ್ದರು ನಮ್ಮ ತಾತನವರು' ಎಂದು ಪೂರ್ವಕಾಲದವರು ಹೇಳುತ್ತಿದ್ದರು. ಅದು ಸತ್ಯವೋ ಅಸತ್ಯವೋ ನಾವು ನೋಡಲಿಲ್ಲ. ನಮ್ಮ ಪೂರ್ವಿಕರು ಮಾತ್ರ ಶರೀರ ಕಷ್ಟದಿಂದ ದೃಢಕಾಯರಾಗಿದ್ದರೆಂಬುದನ್ನು ಮಾತು ಒಪ್ಪಿಕೊಳ್ಳುತ್ತೇವೆ.

ನಮ್ಮಲ್ಲಿ ಅನೇಕರಿಗೆ ಆ ಶಕ್ತಿ, ಆ ಬಲ, ಆ ಪಟುತ್ವ ಇರುವುದಿಲ್ಲ. ದೇಹಶ್ರಮದಿಂದ ಕೆಲಸ ಮಾಡಲು ಅವಕಾಶವಿಲ್ಲವೆಂದು ಈ ನೀರಸ ಜೀವನವನ್ನು ಕಳೆಯಬಾರದು. ನಾವು ಒಳ್ಳೇ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆ ಕಾಂತಿಗಳಿಂದ ಕೂಡಿರಬೇಕು. ಆದುದರಿಂದ 'ಅಮೃತ' ಔಷಧವನ್ನು ಶೀಘ್ರವಾಗಿ ಸೇವಿಸಬೇಕು. ಅಮೃತವನ್ನು ಸೇವಿಸಿದರೆ ನಮಗೆ ಜೀವನ ಸೌಖ್ಯಗಳನ್ನು ಅನುಭವಿಸಲು ಬೇಕಾದ ಉಷ್ಣರಕ್ತವೂ, ಬಲವೂ ಉಂಟಾಗುತ್ತದೆ.

"ಅಮೃತ"ವು ಎಲ್ಲಾ ಔಷಧಿ ಶಾಪುಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ ಮದ್ರಾಸು

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯ

ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಸೇರಿತು. ಅದು ಈ ಕೆಳಗಿನ ನಿರ್ಣಯವನ್ನು ಮಾಡಿದೆ:—

ನಿರ್ಣಯ

“ಪೂನೆಯಲ್ಲಿ ತಾ. ೨೭-೭-೪೦ನೇ ದಿನ ಕೂಡಿದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಯ ನಂತರ ದೇಶದಲ್ಲಿ ನಡೆದ ಘಟನೆಗಳನ್ನು ಈ ಸಭೆಯು ಕೂಲಂಕಷವಾಗಿ ವಿಚಾರ ಮಾಡಿದೆ. ಕಳೆದ ಅಗಸ್ಟ ತಿಂಗಳಲ್ಲಿ ವರ್ಕಿಂಗ್ ಕಮಿಟಿಯು ವರ್ಧಾದಲ್ಲಿ ಕೂಡಿ ಪಾಸ್ ಮಾಡಿದ ನಿರ್ಣಯದ ಬಗ್ಗೆಯೂ ಈ ಸಭೆಯು ವಿಚಾರ ಮಾಡಿದೆ. ವರ್ಕಿಂಗ್ ಕಮಿಟಿಯು ಈ ನಿರ್ಣಯಗಳಿಗೆ ಮಾನ್ಯತೆ ಕೊಟ್ಟು ಅವನ್ನು ದೃಢಪಡಿಸುತ್ತದೆ”

ಕಾಂಗ್ರೆಸ್ ಸಹಕಾರದ ಧಿಕ್ಕಾರ

“ಹಿಂದುಸ್ತಾನದಲ್ಲಿ ಉಂಟಾದ ತೊಡಕನ್ನು ಬಿಡಿಸಿ ರಾಷ್ಟ್ರೀಯ ಧ್ಯೇಯವನ್ನು ಮುಂದುವರಿಸುವದಕ್ಕಾಗಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಹಾತ್ಮಾಗಾಂಧಿಯವರ ಮಾರ್ಗದರ್ಶಕತ್ವವನ್ನು ಸಹ ಬಿಟ್ಟುಗೊಟ್ಟು ಬ್ರಿಟಿಷರೊಡನೆ ಸಹಕಾರ ಮಾಡಲು ಬಯಸಿ ದಿಲ್ಲಿಯಲ್ಲಿ ೭-೭-೪೦ನೇ ದಿನ ಕೂಡಿದ ಸಭೆಯಲ್ಲಿ ಕೆಲವೊಂದ ಸೂಚನೆಯನ್ನು ಸರಕಾರಕ್ಕೆ ಮಾಡಿದರು. ಪೂಣೆಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಈ ಸೂಚನೆಗೆ ಮನ್ನಣೆ ಕೊಟ್ಟರು. ಆದರೆ ಬ್ರಿಟಿಷ ಸರಕಾರದವರು ಈ ಸೂಚನೆಯನ್ನು ನಿರಾಕರಿಸಿದರು. ಹಿಂದುಸ್ತಾನದ ಸ್ವಾತಂತ್ರ್ಯ ಹಕ್ಕಿಗೆ ಕೂಡ ಮನ್ನಣೆಕೊಡಲು ಸರಕಾರವು ಸಿದ್ಧವಿಲ್ಲ ಎಂಬುದು ಇದರಿಂದ ಗೊತ್ತಾಗುವದಲ್ಲದೆ ಈ ದೇಶವನ್ನು ಅನಿಯಮಿತ ಅವಧಿಯವರೆಗೆ ಬ್ರಿಟಿಷರ ದಾಸ್ಯದಲ್ಲಿಯೇ ಇಟ್ಟುಕೊಳ್ಳಬೇಕೆಂದು ಅದು ಬಯಸುವದೆಂದು ಸಿದ್ಧವಾಗುತ್ತದೆ. ಬ್ರಿಟಿಷ ಸರಕಾರದವರು ತಮ್ಮ ವರ್ಚಸ್ಸನ್ನು ಹಿಂದುಸ್ತಾನದ ಮೇಲೆ ಹೇರಬೇಕೆಂದು ನಿರ್ಧರಿಸಿರುವರೆಂದೂ ಇದರಿಂದ ಗೊತ್ತಾಗುವದು.

ಯುದ್ಧ ಧೋರಣೆಗೆ ಒಪ್ಪದು

“ಜರ್ಮನಿಯ ವಿರುದ್ಧ ಹೂಡಲ್ಪಟ್ಟ ಈ ಯುದ್ಧದಲ್ಲಿ, ಭಾರತೀಯರ ಅಭಿಪ್ರಾಯವನ್ನು ಲೆಕ್ಕಿಸದೆ ಬ್ರಿಟಿಶ ಸರಕಾರದವರು ಹಿಂದುಸ್ತಾನವನ್ನು ಯುದ್ಧದಲ್ಲಿ ನೂಕಿ ಅದರ ಜನ ಧನ ಶಕ್ತಿಯನ್ನು ಆ ಕಾರ್ಯದಲ್ಲಿ ಉಪಯೋಗಿಸುತ್ತಿರುವದನ್ನು ನಿಷೇಧಿಸುವದನ್ನು ಕೂಡ ಬ್ರಿಟಿಶ ಸರಕಾರದವರು ಸಹಿಸಲಾರರೆಂಬುದು ಅವರ ಇತ್ತೀಚಿನ ಧೋರಣದಿಂದ ವ್ಯಕ್ತವಾಗುತ್ತದೆ. ಆದುದರಿಂದ ಭಾರತೀಯರ ನೈಜವಾದ ಹಕ್ಕುಬಾಧ್ಯತೆಗಳಿಗೆ ಈ ರೀತಿ ಆಘಾತವಾಗುತ್ತಿರುವ ಧೋರಣೆಗೆ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಎಂದಿಗೂ ತಲೆಬಾಗದು. ಈ ಬಗೆಯ ಧೋರಣೆಯಿಂದ ಸಾರ್ವಜನಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಡ್ಡಿಯುಂಟಾಗುವದಲ್ಲದೆ ಅದರಿಂದ ಜನರ ಅವನತಿಯಾಗಿ ಅವರ ದಾಸ್ಯವು ಹೀಗೆಯೇ ಬೆಳೆಯುತ್ತ ಹೋಗುವದೆಂದು ಕಾಂಗ್ರೆಸಿಗೆ ಎನಿಸುವದು.

ಮಹಾತ್ಮರು ಮುಂದಾಳುತನ ವಹಿಸುವರು
ಪೂನದ ನಿರ್ಣಯವು ರದ್ದು ಮಾಡಲ್ಪಟ್ಟಿತು!

ಮಹಾತ್ಮರ ನೇತೃತ್ವ

“ಬ್ರಿಟಿಶ ಸರಕಾರದವರು ಈ ಬಗೆಯ ಧೋರಣೆಯನ್ನು ಅನುಸರಿಸಿ ಅಸಹ್ಯ ಪರಿಸ್ಥಿತಿಯನ್ನುಂಟು ಮಾಡಿರುವರಲ್ಲದೆ ಜನತೆಯ ಮರ್ಯಾದೆ ಮತ್ತು ಮೂಲಭೂತ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸುವದಕ್ಕಾಗಿ ಹೋರಾಟ ಹೂಡುವದನ್ನು ಕಾಂಗ್ರೆಸಿನ ಮೇಲೆ ಹೇರಬಯಸುತ್ತಾರೆ. ಹಿಂದುಸ್ತಾನದ ಸ್ವಾತಂತ್ರ್ಯ ಸಂಪಾದನೆಗಾಗಿ ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ಸು ಅಹಿಂಸಾ ಧೋರಣೆಗೆ ಬದ್ಧವಾಗಿದೆ. ಆದುದರಿಂದ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಈ ಭಯಂಕರ ಗಂಡಾಂತರ ಸಮಯದಲ್ಲಿ ಕಾಂಗ್ರೆಸಿಗೆ ಮಾರ್ಗತೋರಿಸಬೇಕೆಂದು ಮಹಾತ್ಮಾ ಗಾಂಧಿಯವರಿಗೆ ಕಾಂಗ್ರೆಸು ಬಿನ್ನವಿಸುತ್ತದೆ. ಪೂಣೆಯ ಕಾಂಗ್ರೆಸ್ ಸಭೆಯಲ್ಲಿ ದೃಢೀಕರಿಸಲ್ಪಟ್ಟ ದಿಲ್ಲಿ ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಮಹಾತ್ಮಾ ಗಾಂಧಿಯವರಿಗೆ ಈ ಬಗೆಯ ನೇತೃತ್ವವನ್ನು ವಹಿಸಲು ಬರುತ್ತಿರಲಿಲ್ಲ. ಆದರೆ ಈಗ ಆ ಬಗೆಯ ನಿರ್ಬಂಧ ಉಳಿದಿರವುದಿಲ್ಲ ಆ ಗೊತ್ತುವಳಿಯು ತನ್ನಿಂದ ತಾನೇ ರದ್ದಾಗಿದೆ

ಮುಂದಿನ ಧೋರಣೆ

“ಯುದ್ಧದಲ್ಲಿ ಬಿದ್ದ ಬ್ರಿಟಿಶ ಹಾಗು ಉಳಿದ ದೇಶಗಳ ಜನತೆಯ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯೂ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಈ ಗಂಡಾಂತರ ಹಾಗು ಕಷ್ಟ ನಷ್ಟಗಳ ಸಮಯದಲ್ಲಿ ಬ್ರಿಟಿಷ ಜನರು ತೋರಿಸಿದ ಧೈರ್ಯ ಮತ್ತು ಕಷ್ಟಸಹಿಷ್ಣುತೆಗಳ ಬಗ್ಗೆ ಕಾಂಗ್ರೆಸಿನವರು ಅವರನ್ನು ಪ್ರಶಂಸಿಸದೆ ಇರಲಾರರು. ಅವರ ಬಗ್ಗೆ ಕಾಂಗ್ರೆಸ್ಸಿಗರಿಗೆ ಯಾವದೇ ಬಗೆಯ ದ್ವೇಷ ಭಾವನೆಯಿರಲಾರದು. ಅವರಿಗೆ ಯಾವದೇ ಬಗೆಯ ತೊಂದರೆಯಾಗುವಂಥ ಕಾರ್ಯಗಳನ್ನು ಕಾಂಗ್ರೆಸ್ಸಿಗರು ಕೈಕೊಳ್ಳಲಿಕ್ಕೆ ಸತ್ಯಾಗ್ರಹ ಶಾಸ್ತ್ರವೇ ನಿರ್ಬಂಧಪಡಿಸುತ್ತದೆ. ಆದರೆ ಸ್ವಯಂ ಹಾಕಿಕೊಂಡ ಈ ಸಂಯಮದಿಂದ ಆತ್ಮನಾಶವೇ ಆಗುವಂಥ ಪ್ರಸಂಗ ಮಾತ್ರ ಬರಕೂಡದು. ಈ ಅಹಿಂಸಾ ಧೋರಣೆಯಂತೆ ಕಾರ್ಯ ಮಾಡಲು ಕಾಂಗ್ರೆಸಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬ ಬಗ್ಗೆ ಕಾಂಗ್ರೆಸು ಆಗ್ರಹ ಹಿಡಿಯುವದೇ ಆವಶ್ಯಕವಾಗುವದು. ಆದರೆ ಸದ್ಯಕ್ಕೆ ಈ ಅಹಿಂಸಾತ್ಮಕ ಪ್ರತೀಕಾರವನ್ನು ವಿಸ್ತಾರಗೊಳಿಸಲು ಕಾಂಗ್ರೆಸು ಬಯಸುವುದಿಲ್ಲ. ಆದರೆ ಜನತೆಯ ಸ್ವಾತಂತ್ರ್ಯ ರಕ್ಷಣೆಗೆ ಈ ಬಗೆಯ ಪ್ರತಿಕಾರ ಹೂಡುವುದವಶ್ಯವಿದ್ದಲ್ಲೆಲ್ಲ ಅಷ್ಟರಮಟ್ಟಿಗೆ ಮಾತ್ರ ಅಹಿಂಸಾತ್ಮಕ ಪ್ರತಿಕಾರ ಹೂಡಲಾಗುವುದು.

ಅಹಿಂಸೆಯ ಸ್ಪಷ್ಟೀಕರಣ

“ಅಹಿಂಸೆಯ ಧೋರಣೆಯ ಬಗ್ಗೆ ಕೆಲವೊಂದು ತಪ್ಪು ತಿಳಿವಳಿಕೆಯುಂಟಾದ್ದರಿಂದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಇಂದು ಪುನಃ ಸ್ಪಷ್ಟೀಕರಿಸ ಬಯಸುತ್ತದೆ ಹಿಂದೆ ಪಾಸುಮಾಡಲ್ಪಟ್ಟ ನಿರ್ಣಯಗಳಿಂದ ಉಂಟಾದ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸಲು ಈ ಸ್ಪಷ್ಟೀಕರಣ ಮಾಡಲಾಗುತ್ತದೆ

ಅಹಿಂಸೆಯೇ ಕಾಂಗ್ರೆಸಿನ ಧೋರಣೆಯೆಂಬುದರಲ್ಲಿ ಈ ಕಮಿಟಿಯು ಸಂಪೂರ್ಣ ವಿಶ್ವಾಸವಿದೆ ಹಿಂದುಸ್ತಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಅಹಿಂಸೆಯ ಉಪಯೋಗ ಮಾಡಿಕೊಳ್ಳುವದಿಷ್ಟೇ ಅಲ್ಲದೆ ಸ್ವಾತಂತ್ರ್ಯ ಸಿಕ್ಕಿದಬಳಿಕ ಸ್ವತಂತ್ರ ಹಿಂದುಸ್ತಾನದಲ್ಲಿಯೂ ಶಕ್ಯವಿದ್ದಷ್ಟು ಇದೇ ಧೋರಣೆಯನ್ನು ಅನುಸರಿಸಲಾಗುವುದೆಂದು ಕಾಂಗ್ರೆಸಿಗೆ ಬಲವಾದ ವಿಶ್ವಾಸವಿದೆ

“ಜಗತ್ತು ನಾಶವಾಗುವದನ್ನು ಇಷ್ಟೇ ಅಲ್ಲದೆ ಮೊದಲಿನ ಕಾಡುಸ್ಥಿತಿಗೆ ಹೋಗುವುದನ್ನು ತಪ್ಪಿಸಬೇಕಾದರೆ ಎಲ್ಲೆಡೆಯಲ್ಲಿಯೂ ನಿಶಸ್ತ್ರೀಕರಣವಾಗಿ ನ್ಯಾಯವಾದ ನವಆರ್ಥಿಕ ಮತ್ತು ರಾಜಕೀಯ ತಳಹದಿಯ ಮೇಲೆ ರಾಷ್ಟ್ರಗಳ ಪುನರ್ಘಟನೆಯಾಗಬೇಕೆಂದು ಈ ಕಮಿಟಿಯ ಸ್ಪಷ್ಟ ಅಭಿಪ್ರಾಯವಾಗಿದೆಯಲ್ಲದೆ ಇತ್ತೀಚೆಗೆ ನಡೆದ ಜಗತ್ತಿನಲ್ಲಿಯ ಘಟನೆಗಳೂ ಇದನ್ನೇ ಸ್ಪಷ್ಟಪಡಿಸುತ್ತವೆ ಆದುದರಿಂದ ಜಗತ್ತೆಲ್ಲ ಈ ಬಗೆಯ ನಿಶಸ್ತ್ರೀಕರಣ ಧೋರಣೆ ಸ್ವೀಕರಿಸಬೇಕೆಂಬ ಬಗ್ಗೆ ಸ್ವತಂತ್ರ ಹಿಂದುಸ್ತಾನವು ಪ್ರಯತ್ನಿಸುವದಲ್ಲದೆ ಇದಕ್ಕಾಗಿ ತಾನೇ ಧುರೀಣತ್ವವನ್ನು ವಹಿಸುವದೆಂದು ಸಾರಿ ಹೇಳುತ್ತದೆ ಆದರೆ ಇಂಥ ಧುರೀಣತ್ವವನ್ನು ಸ್ವೀಕರಿಸುವದು ಬಾಹ್ಯ ಘಟನೆಗಳ ಮತ್ತು ಆಂತರಿಕ ಪರಿಸ್ಥಿತಿಗಳನ್ನವಲಂಬಿಸಿರುವದು ಅನಿವಾರ್ಯವಾಗಿದೆ. ಆದರೆ ಸ್ವತಂತ್ರ ಹಿಂದುಸ್ತಾನವು ಈ ಬಗೆಯ ನಿಃಶಸ್ತ್ರೀಕರಣ ಧೋರಣೆಯನ್ನು ಜಾರಿಗೆ ತರಲು ಶಕ್ಯವಿದ್ದಷ್ಟು ಪ್ರಯತ್ನಿಸುವದು ಈ ಬಗೆಯ ಪರಿಣಾಮಕಾರಕ ನಿಃಶಸ್ತ್ರೀಕರಣವಾಗಿ ರಾಷ್ಟ್ರೀಯ—ಹೋರಾಟಗಳು, ಕೊನೆಗೊಂಡು, ಜಗತ್ತಿನಲ್ಲಿ ಶಾಂತಿ ಪ್ರಸ್ಥಾಪಿತವಾಗುವದೂ ಕೊನೆಯಲ್ಲಿ ಯುದ್ಧ ಮತ್ತು ರಾಷ್ಟ್ರೀಯ ಕಲ್ಪಾಟಗಳ ಕಾರಣಗಳನ್ನು ಹೋಗಲಾಡಿಸುವದನ್ನೇ ಅವಲಂಬಿಸುವದು. ಈ ಬಗೆಯ ಕಾರಣಗಳನ್ನು ನಿರ್ಮೂಲ ಮಾಡಬೇಕಾದರೆ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಆಳುವದು ಮತ್ತು ಒಂದು ಜನಾಂಗವು ಮತ್ತೊಂದು ಜನಾಂಗವನ್ನು ಇಲ್ಲವೆ ಜನಸಮೂಹವನ್ನು ದಾಸ್ಯದಲ್ಲಿಡುವುದನ್ನು ಕೊನೆಗೊಳಿಸಲೇ ಬೇಕು. ಈ ಧ್ಯೇಯವನ್ನು ಸಾಧಿಸುವದಕ್ಕಾಗಿಯೇ ಹಿಂದುಸ್ಥಾನವು ಶಾಂತ ರೀತಿಯಿಂದ ಪ್ರಯತ್ನಿಸುವದು ಮತ್ತು ಈ ಧ್ಯೇಯವನ್ನಿಟ್ಟುಕೊಂಡ ಭಾರತೀಯರು ಹಿಂದುಸ್ಥಾನದ ಸ್ವಾತಂತ್ರ್ಯ ಸಂಪಾದಿಸಬೇಕೆಂದು ಬಯಸುವರು. ಈ ಬಗೆಯ ಸ್ವಾತಂತ್ರ್ಯವೆಂದರೆ ಜಗತ್ತಿನಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಿ ಅದನ್ನು ಪ್ರಗತಿಪಥಕ್ಕೊಯ್ಯುವದಕ್ಕಾಗಿ ಉಳಿದ ಸ್ವತಂತ್ರ ರಾಷ್ಟ್ರಗಳೊಡನೆ ನಿಕಟ ಸಂಬಂಧವನ್ನಿಟ್ಟುಕೊಳ್ಳುವದರ ಪೀಠಿಕೆಯಂತಿರುವದು

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 344/1940

ಗಣಪಯ್ಯ ಅಡಿಗ ಮಂಜುನಾಥ ಅಡಿಗರ ಮಗ ಕುಂದಾಪುರ ತಾಲೂಕು ಕನ್ಯಾನ ಗ್ರಾಮ — ವಾದಿ

ಸುಬ್ರಾಯ ಅಡಿಗ ವೆಂಕಟ್ರಮಣ ಅಡಿಗರ ಮಗ ಸದರೀ ಗ್ರಾಮನಿವಾಸಿ — ಪ್ರತಿವಾದಿ

ಸದರಿ ಪ್ರತಿವಾದಿಗೆ ತಿಳುಹಿಸುವ್ವದೇನಂದರೆ

ವಾದಿಗೆ ನಿಮ್ಮ ಅಣ್ಣ ವಿಶ್ವೇಶ್ವರ ಅಡಿಗರು ಕುಟುಂಬದ ಪ್ರಯೋಜನದ ಬಗ್ಗೆ ತಾ 2 4 36ರಲ್ಲಿ ರೂ. 200-0 0ಕ್ಕೆ ಬರೆದುಕೊಟ್ಟ ಈಡು ದಸ್ತಾವೇಜು ಪ್ರಕಾರ ಬಾಬಾ ರೂ 248-7-0ಕ್ಕೆ ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಸದರಿ ದಾವೆಯನ್ನು ತಾರೀಕು 24 9–40ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಉದಾಹರಣೆ ಇದ್ದರೆ ತಕ್ಕ ಸಮಯದಲ್ಲಿ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ದಾಖಲು ಮಾಡ ತಕ್ಕದೆಂತ ಈ ಮೂಲಕ ನಿಮಗೆ ತಿಳುಹಿಸಿಯದೆ. ಇಲ್ಲವಾದರೆ ನಿಮ್ಮ ಗೈರಹಾಜರಿಯಿಂದ ಸಂಬ್ರವು ತೀರ್ಮಾನಿಸಲ್ಪಡುವುದು

ತಾ 12-9-40 ಕುಂದಾಪುರ — M. M. Ural, Advacate For Petitioner

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಡಿಗ್ & ಕೋ.,
ಆಯುರ್ವೇದಿಕ್ ಫಾರ್ಮಸಿ, ಪೆರ್ಡೂರು
P. O. Peridepi (ಸೌತ್ ಕೆನರಾ)

ಈ ವಾರದ ಕಥೆ:

ಪೀಡಿತ ಆತ್ಮಗಳು!

ಅನುವಾದಕರು: ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈ

ವಸಂತಿ ಜಮೀನದಾರ ಭಾರ್ಗವರಾಯನ ಮನೆ ಅಂಗಳವನ್ನು ಗುಡಿಸುತ್ತಿದ್ದಳು. ಅವಳು ನಡುನಡುವೆ ಹರಿದ ಬಟ್ಟೆಯಿಂದ ಮೈಯನ್ನು ಮುಚ್ಚುವ ಪ್ರಯತ್ನ ಮಾಡುತ್ತಿದ್ದಳು. ಚೆದರಿ ಬಿದ್ದ ತಲೆಕೂದಲು ಪ್ರಭಾತಕಾಲದ ಮಂದಮಾರುತನ ತೆರೆಗಳಿಗೆ ಸಿಕ್ಕಿ ಓಲಾಡುತ್ತಿದ್ದುವು. ದಾರಿದ್ರ್ಯದೇವಿಗೆ ಬಲಿಯಾಗಿದ್ದಳಾದರೂ ವಸಂತಿಯ ಅಂಗಸೌಷ್ಠವವು ಆಗ ಕೂಡ ಪೂರಾ ಕೆಟ್ಟಿರಲಿಲ್ಲ. ವಸಂತಿಯ ದೇಹಸೌಂದರ್ಯವು ಅವಳ ಮಾನಮರ್ಯಾದೆಗಳಿಗೆ ಕಾಲಸ್ವರೂಪವಾಗಿ [illegible]ಗಲೂ ವಿರಾಜಮಾನವಾಗಿತ್ತು.

‘ಜೀವರಕ್ಷಣೆಗಾಗಿ ಕೊನೆಗೆ ಈ ದೇಹಸೌಂದರ್ಯವನ್ನು ಶ್ರೀಮಂತರ ಸಂತೆಯಲ್ಲಿ ಮಾರಬೇಕಾಗುವುದೆ?’ ಹೀಗೆ ಆಲೋಚಿಸಿ ಅವಳಿಗೆ ಶೋಕವುಂಟಾಯಿತು. ಪತಿದೇವನ ಆ ಮಾತುಗಳು ಆಗ ಅವಳ ಕರ್ಣಕುಹರಗಳಲ್ಲಿ ಪ್ರತಿಧ್ವನಿಸಿದವು:

‘ವಸಂತಿ! ವಸಂತಿ!’

ಗುಡಿಸಲಿನ ಮುರುಕು ಮಗ್ಗುಲಿನಿಂದ ಒಂದು ಆರ್ತಸ್ವರವು ವಸಂತಿಯನ್ನು ಕರೆಯಿತು. ಅವಳು ಪ್ರಿಯತಮನ ಬಳಿಗೆ ಬಂದು ಚರಣಪ್ರದೇಶದಲ್ಲಿ ಕುಳಿತಳು. ಪ್ರಾಣನಾಥನ ಎರಡು ಶುಷ್ಕ ಬಾಹುವ್ಯಾಲಿಗಳು ವಸಂತಿಯ ಕೊರಳಿಗೆ ಸಮರ್ಪಿತವಾದುವು.

‘ವಸಂತಿ, ತಡೆಯಲಾರದ ನೋವು! ದೇವರು ಯಾವಾಗ ಈ ಯಾತನೆಯನ್ನು ಮುಗಿಸುವನೋ?’ ರೋಗಿ ಕಾತರನಾಗಿ ಕೇಳಿದ. ‘ಸ್ವಾಮಿ, ಯಾಕೆ ಇಷ್ಟು ಅಧೀರರಾಗುವಿರಿ? ದೇವರು ಕಾಪಾಡುವನು.’ ವಸಂತಿಯ ಕಣ್ಣುಗಳಿಂದ ನೀರು ಅವಿಚ್ಛಿನ್ನವಾಗಿ ಹರಿಯಿತು. ಅವಳು ಪುನಃ ಹೇಳಿದಳು—‘ಸ್ವಾಮಿ! ಬಡವರನ್ನು ತಿನ್ನಲಿಕ್ಕಾಗಿಯೇ ಜಗತ್ತು ಇರುವಂತೆ ಕಾಣುತ್ತದೆ. ಅಲ್ಲವಾದರೆ ಮನುಷ್ಯನು ಹೀಗೆ ಸ್ವಾರ್ಥಲೋಲುಪ ಹಿಂಸ್ರಪ್ರಾಣಿ ಆಗುತ್ತಿದ್ದಿಲ್ಲ.’

‘ವಸಂತಿ ಹಾಗೆ ಹೇಳಬೇಡ. ಆಗುವುದೆಲ್ಲವೂ ಒಳ್ಳೆಯದಕ್ಕಾಗಿಯೇ. ನಾವು ಯಾವ ಪಾಪವನ್ನೂ ಮಾಡಿಲ್ಲ. ಧರ್ಮವನ್ನು ನಾವು ರಕ್ಷಿಸಿದರೆ, ಧರ್ಮವು ನಮ್ಮನ್ನು ರಕ್ಷಿಸುವುದು.’

‘ಸ್ವಾಮಿ! ಏನ ಹೇಳುತ್ತೀರಿ? ಎಲ್ಲಿದೆ ಧರ್ಮ? ಧಾರ್ಮಿಕರಾಗಿ ನಮಗೆ ಕಷ್ಟ ತಪ್ಪಲಿಲ್ಲ. ಧರ್ಮವನ್ನು ಬಿಟ್ಟೆವೆಂದರೆ ನಾವು ಈಗ್ಲಾದರೂ ಸುಖವಾಗಿ ಜೀವನ ಮಾಡಬಹುದು.’

‘ವಸಂತಿ, ನನಗೆ ತಿಳಿಯದು. ಸ್ತ್ರೀಯರು ಅಬೋಧೆಯರು. ಮಾನ ಮರ್ಯಾದೆಗಳನ್ನು ಮಾರಿ ಜೀವಿಸುವುದಕ್ಕಿಂತ ಹಸಿವು ತೃಷೆಗಳಿಂದ ಸಾಯುವುದು ಲೇಸು.’

‘ಸ್ವಾಮಿ! ಮಾನ ಮರ್ಯಾದೆಗಳು ಕೇವಲ ಬಡವರಿಗಾಗಿ ಇರುವುವೆ? ನಮ್ಮ ಈ ದುಃಖಪೂರ್ಣ ಜೀವನದ ಕೊನೆ ಎಂದು?’

ಸುಕುಮಾರ ಯಾವ ಉತ್ತರವನ್ನೂ ಕೊಡಲಿಲ್ಲ. ವಸಂತಿಯೂ ಮಾತಾಡಲಿಲ್ಲ. ಆ ದಂಪತಿಗಳ ಶೋಕಸಂತಪ್ತ ಹೃದಯಗಳಿಂದ ಹೊರಟ ಒಂದು ಬಿಸಿಯುಸಿರು, ಗುಡಿಸಲಿನ ಸಂದಿಗಳಿಂದ ಹೊರಟು ವಾಯುಮಂಡಲದಲ್ಲಿ ವಿಲೀನವಾಯಿತು.

ಕೊನೆಗೆ ಸುಕುಮಾರ ಹೇಳಿದ—‘ವಸಂತಿ! ಧಾರ್ಮಿಕ ಜೀವನಕ್ಕೆ ಸಮಾಜವು ಬೇಕಾದರೆ ಯಾವ ಬೆಲೆಯನ್ನೂ ಕೊಡದಿರಲಿ. ನಾವು ಮಾತ್ರ ಸಾಯುವ ತನಕವೂ ಧರ್ಮಪಾಲನೆ ಮಾಡಬೇಕಾಗುವುದು. ದಾರಿದ್ರ್ಯದ ಬಲಿವೇದಿಯ ಮೇಲೆ ನಾವು ನಮ್ಮ ಪ್ರಾಣಗಳನ್ನು ಬಲಿಕೊಟ್ಟರೂ ಚಿಂತೆ ಇಲ್ಲ. ಮೋಕ್ಷಮಾರ್ಗವು ನಮಗೆ ಸುಗಮವಾಗುವುದು.’

ಬೂದಿ ಮುಚ್ಚಿದ ಕೆಂಡದಂತೆ ವಸಂತಿಯ ಹೃದಯವು ಉರಿಯತೊಡಗಿತು. ಅವಳು ಪತಿದೇವನ ಗುಳಿಬಿದ್ದ ಗಲ್ಲಗಳನ್ನು ಮುದ್ದಿಟ್ಟು ಅಳಲಾರಂಭಿಸಿದಳು. ಅದನ್ನು ನೋಡಿ ಸುಕುಮಾರನ ಕಣ್ಣುಗಳಿಂದಲೂ ನೀರು ಹರಿಯತೊಡಗಿತು.

‘ವಸಂತಿ! ದಣಿದೆಯಾ?’ ಯಾರೋ ಅವಳನ್ನು ಕರೆದು ಕೇಳಿದ ಹಾಗಾಗಿ ಅವಳು ಮೋರೆ ತಿರುಗಿಸಿ ನೋಡಿದಳು. ಎದುರಿಗೆ ಭಾರ್ಗವನು ನಿಂತಿದ್ದ. ‘ವಸಂತಿ! ಸರಿ ನಾನು ಹೋಗುತ್ತೇನೆ. ನನ್ನ ಅಂದಿನ ಪ್ರಶ್ನೆಗೆ ನೀನು ಯಾವ ಅನುಕೂಲ ಉತ್ತರವನ್ನೂ ಕೊಡಲಿಲ್ಲ,’ ಭಾರ್ಗವ ಹೇಳಿದ.

ಅವಳು ಒಮ್ಮೆಗೆ ತಿರಸ್ಕಾರಪೂರ್ಣ ದೃಷ್ಟಿಯಿಂದ ಅವನನ್ನು ದಿಟ್ಟಿಸಿ ನೋಡಿದಳು. ಧನಸಂಪತ್ತಿನ ಭಯಂಕರ — [illegible] ಸತೀತ್ವದ ಭಗ್ನಾವಶೇಷ ... ಅಲ್ಲಿ ಎಂತಿತ್ತು. ಅವಳು ಆ ತುಚ್ಛ ಮನುಷ್ಯನನ್ನು ಮನಸಾ ಬೈದಳು. ಆದರೆ ವಸಂತಿಯ ಹೃದಯಕ್ಷೇತ್ರದಲ್ಲಿ ಜೀವನದ ಆಶೆ ಮತ್ತು ಆತ್ಮಾಭಿಮಾನ—ಇವುಗಳೊಳಗೆ ಪ್ರಬಲ ಯುದ್ಧವು ಆರಂಭವಾಯಿತು. ಆ ಸ್ತ್ರೀಲಂಪಟನಿಗೆ ಒಂದು ಬಾರಿಗೆ ‘ಆಗಬಹುದು’ ಎಂದಳಾದರೆ ಅವಳ ದಾರಿದ್ರ್ಯವು ಸಂಪೂರ್ಣ ದೂರವಾಗುವುದು. ಎರಡು ಆತ್ಮಗಳ ಶರೀರ ರಕ್ಷಣೆಯಾಗುವುದು. ಈ ವಿಚಾರ ಸಂಘರ್ಷದಲ್ಲಿ ಜೀವನದ ಆಶೆಯು ಆತ್ಮಾಭಿಮಾನವನ್ನು ಸೋಲಿಸಿತು. ವಸಂತಿ ಎದುರು ನಿಂತ ಪುರುಷಮೃಗದೊಡನೆ—‘ಆಗಬಹುದು, ಅಡ್ಡಿ ಇಲ್ಲ’ ಎಂದಳು.

‘ಇಗೋ, ಇವು ನೂರು ರೂಪಾಯಿಗಳ ಎರಡು ನೋಟುಗಳು. ಸಂಕೋಚಪಡಬೇಡ. ಬೇಕಾದಾಗ ಕೇಳು, ಎಷ್ಟು ಬೇಕಾದರೂ ಕೊಡುತ್ತೇನೆ’ ಎಂದು ಭಾರ್ಗವ ಹೇಳಿದ.

ವಸಂತಿಯ ಶರೀರವು ಸುಳಿಗಾಳಿಗೆ ಸಿಲುಕಿದ ತರಗೆಲೆಯ ಹಾಗೆ ಕಂಪಿಸಿತು. ‘ತಮ್ಮ ಮರ್ಜಿ ಇದ್ದ ಹಾಗೆ ಆಗಲಿ. ಇವತ್ತು ರಾತ್ರಿ ತಮ್ಮ ಕೋಣೆಗೆ ಬರುವೆನು’ ಎಂದು ಅವಳು ಆ ನೋಟುಗಳನ್ನು ತೆಗೆದುಕೊಂಡಳು.

ಭಾರ್ಗವನ ಸಂತೋಷಕ್ಕೆ ಪಾರವುಳಿಯಲಿಲ್ಲ. ಅವನು ಮನಮೋದಕ ತಿನ್ನುತ್ತ ಮನೆ ಕಡೆಗೆ ನಡೆದ.

ಮಧ್ಯರಾತ್ರಿ ಆಗಿತ್ತು. ಎಲ್ಲೆಡೆಗಳಲ್ಲಿ ಗಾಢಾಂಧಕಾರವು ತುಂಬಿತ್ತು. ವಸಂತಿಗೆ ಆಗಲೂ ನಿದ್ದೆ ಇಲ್ಲ. ‘ಅಯ್ಯೋ, ಅಪ್ಪಾ!’ ಎಂದು ಸುಕುಮಾರ ಆಗಾಗ ನರಳುತ್ತಿದ್ದ. ಅವಳು ಅವನಿಗೆ ಔಷಧ ಕೊಟ್ಟಳು.

ಸ್ವಲ್ಪ ಸಮಯದ ನಂತರ ಸುಕುಮಾರನಿಗೆ ಸ್ವಲ್ಪ ಜೊಂಪು ಹಿಡಿಯಿತು. ವಸಂತಿ ಎದ್ದು ಹೊರಗೆ ಬಂದಳು. ಇಡೀ ಜಗತ್ತು ನಿದ್ರಾಮಯ. ಆದರೆ ಕೋಟೆಯೊಳಗಿನ ಭಾರ್ಗವನ ಮನೆಯ ಒಂದೊಂದು ಕೋಣೆಯಲ್ಲಿ ಮಾತ್ರ ಆಗಲೂ ಒಂದು ದೀಪ ಉರಿದು ಹೊರಗೆ ಪ್ರಕಾಶವನ್ನು ಕೊಡುತ್ತಿತ್ತು. ಅವಳು ಮೆಲ್ಲಮೆಲ್ಲನೆ ನಡೆದು ಭಾರ್ಗವನ ಮನೆಯ ಮುಂದುಗಡೆ ಬಂದಳು. ಆದರೆ ಏನೋ ಯೋಚನೆ ಹುಟ್ಟಿ ಒಂದು ಮರದ ಬುಡದಲ್ಲಿ ಕೂತಳು. ‘ಇಷ್ಟು ದಿನಗಳ ತನಕ ಕಾಪಾಡಿದ್ದ ನನ್ನ ಸತೀತ್ವವು ಇನ್ನೊಂದು ಅರೆಗಳಿಗೆಯಲ್ಲಿ ಆ ವಿಷಯಾಸಕ್ತ ನರಪಿಶಾಚಿಯ ಭಯಂಕರ ಕಾಮಾಗ್ನಿಗೆ ಆಹುತಿಯಾಗುವುದು. ಅಯ್ಯೋ!’ ವಸಂತಿ ಕೊರಗಿದಳು. ಆಗ ಪತಿದೇವನ ಮಾತುಗಳು ಪುನಃ ಅವಳ ಕಿವಿಗಳಲ್ಲಿ ಪ್ರತಿಧ್ವನಿಸಿದವು—‘ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುವುದು.’ ಗುಡಿಸಲಿನೊಳಗಿನ ರೋಗಶಯ್ಯೆ ಮತ್ತು ಅದರ ಮೇಲೆ ಬಿದ್ದು ನರಳುತ್ತಿರುವ ಆ ಕೃಶಕಾಯ ಶರೀರವು ಅವಳ ಕಣ್ಣಮುಂದೆ ಸುಳಿಯಿತು.

‘ಕೂಡದು. ಆತ್ಮಹತ್ಯೆಯನ್ನಾದರೂ ಮಾಡಿಕೊಳ್ಳಬಹುದು. ಆದರೆ ಸತೀತ್ವವನ್ನು ಎಷ್ಟು ಮಾತ್ರಕ್ಕೂ ಮಾರಕೂಡದು.’ ಈ ನಿರ್ಧಾರ ಮಾಡಿ ವಸಂತಿ ಬಂದ ದಾರಿಯಿಂದ ಹಿಂದಿರುಗಿದಳು.

ಸುಂದರ ಪ್ರಭಾತ ಸಮಯ. ಆದರೆ ಭಾರ್ಗವನ ಮುಖಮಂಡಲದ ಮೇಲೆ ಕ್ರೋಧಾಗ್ನಿಯು ಜ್ವಲಿಸುತ್ತಿತ್ತು. ‘ಹೆಂಗಸರನ್ನು ನಂಬುವವ ಮಹಾಮೂರ್ಖ’ ಎಂದು ಆತ್ಮಗತ ಹೇಳಿ—‘ಇಲ್ಲ, ಇದರ ಪ್ರತೀಕಾರ ತಕ್ಕೊಳ್ಳದೆ ಇರಬಾರದು’ ಎಂದು ಅವನು ವಸಂತಿಯ ಗುಡಿಸಲ ಕಡೆಗೆ ನಡೆದ. ಗುಡಿಸಲು ಮುಚ್ಚಿತ್ತು. ‘ಯಾರು ಒಳಗೆ?’ ಆದರೆ ಬಾಗಿಲು ತೆರೆಯಲಿಕ್ಕೆ ಯಾರೂ ಬರಲಿಲ್ಲ. ‘ಮುಂಡೆ ಮಕ್ಕಳು!’ ಎಂದು ಅವನು ಬಾಗಿಲು ದೂಡಿ ಒಳಗೆ ಹೋದ.

ಕರವಸ್ತ್ರದಿಂದ ಕಣ್ಣುಗಳನ್ನು ಒರಸಿಕೊಂಡು ಭಾರ್ಗವ ನೋಡಿದ. ಮುಂದೆ ಎರಡು ಮೃತ ಶರೀರಗಳು ಒಂದನ್ನೊಂದು ಬಿಗಿದಪ್ಪಿ ಬಿದ್ದಿದ್ದುವು. ಅದನ್ನು ನೋಡಿ ಕಲ್ಲೆದೆಯ ಭಾರ್ಗವನ ತಲೆ ತಿರುಗಿತು. ಅವನ ಹೃದಯದೊಳಗಿನ ವಿಷವಾಯು ಹೊರಗೆ ಹೊರಟಿತು. ಕಣ್ಣುಗಳು ಅಶ್ರುಪೂರ್ಣವಾದುವು. ಹೃದಯಾಂತರಂಗದಲ್ಲಿ ದಯಾಸೂರ್ಯನ ದಿವ್ಯಜ್ಯೋತಿಯು ಪ್ರಸ್ಫುಟಿತವಾಯಿತು. ಭಾರ್ಗವನ ಆತ್ಮವು ಕಾಮುಕತೆಯ ಬಂಧನದಿಂದ ಮುಕ್ತವಾಯಿತು. ಅವನು ಆ ಮೃತಶರೀರಗಳಿಗೆ ಪ್ರದಕ್ಷಿಣೆ ತಿರುಗಿ ಸಾಷ್ಟಾಂಗ ನಮಸ್ಕಾರ ಮಾಡಿದ.

ವಸಂತಿಯ ಕೈಯಲ್ಲಿ ಮುಚ್ಚಿದ ಒಂದು ಪತ್ರ ಇದ್ದಿತು. ಭಾರ್ಗವ ಅದನ್ನು ತೆರೆದು ನೋಡಿದ. ‘ಸ್ವಾಭಿಮಾನ ಮತ್ತು ಸತೀತ್ವದ ಪಾಲನೆಗಾಗಿ, ನಾವು ಒಬ್ಬ ದೀನ ಸ್ತ್ರೀ ಮತ್ತು ಅವಳ ರೋಗಿಪತಿ—ದಾರಿದ್ರ್ಯದ ಬಲಿವೇದಿಯ ಮೇಲೆ ಪ್ರಾಣಾಹುತಿ ಕೊಟ್ಟಿದ್ದೇವೆ. ಇದರೊಂದಿಗಿರುವ ಕರೆನ್ಸಿ ನೋಟುಗಳು, ದರಿದ್ರಸ್ತ್ರೀಯ ಸತೀತ್ವವನ್ನು ಖರೀದಿ ಮಾಡಲಿಕ್ಕೆ ಬಂದ ಒಬ್ಬ ಧನಿಕ ನರಾಧಮನು ಕೊಟ್ಟವುಗಳಾಗಿವೆ. ನೋಡಿದವರು ಅವನ್ನು ಕೂಡಲೇ ಸುಟ್ಟುಹಾಕಬೇಕೆಂದು ಪ್ರಾರ್ಥಿಸುತ್ತೇವೆ.

ಇತಿ ಎರಡು ಪೀಡಿತ ಆತ್ಮಗಳು’

ಭಾರ್ಗವನು ಪತ್ರವನ್ನು ಓದಿ ಮುಗಿಸಿದ. ಅವನ ಕಣ್ಣುಗಳಿಂದ ನೀರ ಧಾರೆ ಕಟ್ಟಿ ಹರಿಯಿತು. ಜೇಬಿನೊಳಗಿನ ಬೆಂಕಿಪೆಟ್ಟಿಗೆ ತೆಗೆದು ಕಡ್ಡಿ ಗೀರಿದ. ನೋಟುಗಳಿಗೆ ಬೆಂಕಿಕೊಟ್ಟ. ಕ್ಷಣಾರ್ಧದಲ್ಲಿ ಅವು ಸುಟ್ಟುಹೋದವು. ಭಸ್ಮವು ಭೂಮಿಗೆ ಬಿದ್ದಿತು. ಜೊತೆಯ ಮೇಲೆ ಕೈ ಎತ್ತಿ ಉನ್ಮತ್ತನಂತೆ ಅವನು ಅವನ್ನು ನೋಡುತ್ತ ನಿಂತ.

(ಒಂದು ಮಲಯಾಳಿ ಕತೆಯ ಆಧಾರದಿಂದ

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್. ಜುವೆಲರ್.

ಕಮ್ಯೂನಲ್ ಎವಾರ್ಡಿಗೆ ಅಲ್ಪಸಂಖ್ಯಾಕ ವಿರೋಧ

ಅಖಿಲ ಭಾರತ ನಿಷೇಧ ದಿನಾಚರಣೆ

—ಕ್ರೈಸ್ತ ಮುಖಂಡರ ಭಾಷಣ—

ಬ್ರಿಟಿಷ್ ಸರಕಾರವು ಭಾರತದ ಇಚ್ಛೆಗೆ ವಿರೋಧವಾಗಿ ಭಾರತದ ಮೇಲೆ ಹೊರಿಸಿದ ಕಮ್ಯೂನಲ್ ಎವಾರ್ಡ್ ಈ ದೇಶದ ರಾಜಕೀಯ ಜೀವನಕ್ಕೆ ವಿಷಸ್ವರೂಪವಾಗಿರುವದೆಂಬುದನ್ನು ರಾಷ್ಟ್ರೀಯ ಹಿತದವರೆಲ್ಲರೂ ಸಾರಿದ್ದಾರೆ. ಮುಸ್ಲಿಂಲೀಗಿನ ಬೆನ್ನು ಚಪ್ಪರಿಸುವುದಕ್ಕಾಗಿಯೇ ಈ ಎವಾರ್ಡನ್ನು, ದೇಶದಲ್ಲೆಲ್ಲ ವಿರೋಧವಿದ್ದರೂ ಅದನ್ನು ಎತ್ತಿ ಹಿಡಿಯಲಾಗಿದೆಯೆಂದು ಈ ಎವಾರ್ಡಿಗೆ ಭಾರತದ ವಿರೋಧವನ್ನು ಸಾರ್ವತ್ರಿಕವಾಗಿ ಪ್ರಕಟಿಸುವುದಕ್ಕೋಸ್ಕರ ಕಳೆದ ತಿಂಗಳು ಈ ಎವಾರ್ಡಿನ ಅಖಿಲ ಭಾರತ ನಿಷೇಧ ದಿನವು ಆಚರಿಸಲ್ಪಟ್ಟಿತು. ಈ ಸಂಬಂಧ ಕಲ್ಕತ್ತೆಯಲ್ಲಿ ಕೂಡಿದ ಪ್ರಚಂಡ ಸಭೆಯಲ್ಲಿ ಅಖಿಲ ಭಾರತ ಕ್ರೈಸ್ತ ಮುಖಂಡರಲ್ಲಿ ಅಗ್ರಗಣ್ಯರಾಗಿರುವ ಡಾ॥ ಎಚ್ ಸಿ ಮುಖರ್ಜಿಯವರು ಕೊಟ್ಟ ಭಾಷಣವು ಮನನೀಯವಾಗಿರುವುದು. ಅದರ ಒಂದಂಶವನ್ನು ಇಲ್ಲಿ ಕೊಡಲಾಗಿದೆ

ಪ್ರತ್ಯೇಕ ಪ್ರಾತಿನಿಧ್ಯದ ಪರಿಣಾಮ

ಭಾರತದಲ್ಲಿ ಇತರ ಆಗಮನವಾದ ಮೊದಲುಗೊಂಡು ಇಲ್ಲಿ ಹಿಂದುಗಳು ಮತ್ತು ಆ ಇತರರೊಳಗೆ, ಮುಖ್ಯವಾಗಿ ಮುಸಲ್ಮಾನರೊಳಗೆ ಭೇದವೂ ಅಸಮಾಧಾನವೂ ಇದ್ದುದನ್ನು ಒಪ್ಪುವುದಾದರೂ ಕೂಡ ಮೋರ್ಲೆ ಮಿಂಟೊ ರಾಜಕೀಯ ಸುಧಾರಣೆಗಳು ಆದ ತರುವಾಯವಲ್ಲಿಯೇ ಹಿಂದು ಮುಸಲ್ಮಾನರೊಳಗಿನ ವಿರೋಧವು ಬೆಳೆಯುತ್ತ ಬಂದಿತೆಂಬುದು ಐತಿಹಾಸಿಕ ವಿಷಯವಾಗಿದೆ. ಈ ವಿರೋಧವು ಬೆಳೆಯುತ್ತಿರುವದರ ಮುಖ್ಯ ಕಾರಣವು, ಸರಕಾರವು ಕೊಟ್ಟ ಪ್ರತ್ಯೇಕ ಪ್ರಾತಿನಿಧ್ಯದ ಪರಿಣಾಮವಾಗಿದೆ.

ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿದರೆ, ಪ್ರತ್ಯೇಕ ಪ್ರಾತಿನಿಧ್ಯವು ಅರಾಷ್ಟ್ರೀಯ ಮಾತ್ರವಲ್ಲ, ಅದು ವಿಘಾತುಕವೂ ಆಗಿರುವುದು ಕಂಡುಬರುತ್ತದೆ. ಆದುದರಿಂದ ರಾಷ್ಟ್ರೀಯ ಐಕ್ಯ ಮತ್ತು ಸ್ನೇಹಕ್ಕೆ ದೊಡ್ಡ ಆತಂಕವಾಗಿರುವ ಈ ಪ್ರತ್ಯೇಕ ಪ್ರಾತಿನಿಧ್ಯ ಕ್ರಮವನ್ನು ವಿರೋಧಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯವಾಗಿದೆ. ಪ್ರತ್ಯೇಕ ಪ್ರಾತಿನಿಧ್ಯವು ರಾಷ್ಟ್ರೀಯ ಜೀವನಕ್ಕೆ ಮಾತ್ರವಲ್ಲ, ಜಾತಿಯ ಹಿತಕ್ಕೂ ಬಾಧಕವಾಗಿದೆ. ಆದುದರಿಂದ ಯಾವ ಜಾತಿಯವನಿದ್ದರೂ ಅದನ್ನು ನಿಷೇಧಿಸಿ ವಿರೋಧಿಸುವುದು ಅವನ ಧರ್ಮವಾಗಿರುವುದು.

ಜಗಳಕ್ಕೆ ಕಾರಣವಾದ ಎವಾರ್ಡು

ಪ್ರತ್ಯೇಕ ಪ್ರಾತಿನಿಧ್ಯ ಕ್ರಮವನ್ನು ಪುರಸ್ಕರಿಸುವ ಕಮ್ಯೂನಲ್ ಎವಾರ್ಡು, ರಾಷ್ಟ್ರೀಯ ಜೀವನದಲ್ಲಿ ಒಡಕನ್ನು ಉಂಟುಮಾಡಲಿಕ್ಕೆ ಸಹಕಾರಿಯಾಗಿರುವುದು.

ಈ ಎವಾರ್ಡಿನ ಫಲವಾಗಿ 'ಭಾರತೀಯರು ಒಂದು ಜನಾಂಗ' ಎಂಬ ಭಾವನೆಯು ಶಿಥಿಲವಾಗುತ್ತ ಬಂದಿದೆ ಎಷ್ಟೋ ತ್ಯಾಗ ಮಾಡಿ, ಎಷ್ಟೋ ಬಲಿಕೊಟ್ಟು, ನಮ್ಮ ಹಿರಿಯರು ಈ 'ಒಂದು ಜನಾಂಗ'ದ ಪವಿತ್ರ ಭಾವನೆಯನ್ನು ಪೋಷಿಸುತ್ತ ಬಂದರು ಈಗ ಹಿಂದಿನವರ ಆ ತ್ಯಾಗವೂ ಬಲಿಯೂ ಈ ಎವಾರ್ಡಿನಿಂದ ನಿಷ್ಫಲವಾಯಿತು ಎಂದಂತಾಗಿದೆ ಈಗ ಪ್ರತಿಯೊಂದು ಜಾತಿ ಮತ್ತು ಪ್ರತಿಯೊಂದು ವ್ಯಕ್ತಿಯು ಕೇವಲ ತನ್ನ ಸ್ವಾರ್ಥಕ್ಕಾಗಿ ಕೆಲಸ ಮಾಡುತ್ತಾ ಇದೆ ಸ್ವಾರ್ಥಿಗಳೂ ಮಹತ್ವಾಕಾಂಕ್ಷಿಗಳೂ ಆದ ಜನರಿಗೆ ಪ್ರಪಂಚದ ಬೆಳಕನ್ನು ಕಾಣಲಿಕ್ಕೆ ಈ ಎವಾರ್ಡು ದಾರಿಮಾಡಿ ಕೊಡುತ್ತದೆ ಆದುದರಿಂದಲೇ ರಾಷ್ಟ್ರೀಯ ಜೀವನದಲ್ಲಿ ಹೆಸರು ಕೂಡ ಕೇಳಲ್ಪಡದಂಥ ಎಷ್ಟೋ ಜನರು ಈ ಎವಾರ್ಡಿನ ಫಲವಾಗಿ ಮುಖಂಡತ್ವದ ಪದವಿಯಲ್ಲಿ ಶೋಭಿಸುತ್ತಿದ್ದಾರೆ

ಜನಾಂಗದ ಶಾಪ

ಕಮ್ಯೂನಲ್ ಎವಾರ್ಡು ಎಂಬುದು ಜನಾಂಗಕ್ಕೆ ಬಂದ ದೊಡ್ಡ ಶಾಪವಾಗಿರುವುದು ರಾಜಕೀಯದಲ್ಲಿ ಇದು ಸ್ವಾರ್ಥಸಾಧನೆಗೆ ತುಂಬ ಅನುಕೂಲ ಮಾಡಿ ಕೊಟ್ಟಿದೆ ಈ ಎವಾರ್ಡಿನ ದುಷ್ಪರಿಣಾಮಗಳಿಂದ ಜನತೆಯನ್ನು ಕಾಪಾಡುವ ಒಂದೇ ಉಪಾಯವಿದೆ ಯಾವ ಜಾತಿ [illegible]ದವನಿದ್ದರೂ, ಅವನ ಆರ್ಥಿಕ ಸ್ಥಿತಿಯ[illegible] ಹೊರತ ಅವನ [illegible] ಜೀವನಕ್ಕೆ [illegible] ವುದಿಲ್ಲವೆ [illegible] ಸ್ಪಷ್ಟಮಾಡ[illegible] ಶಿಕ್ಷಣ[illegible] ನಮ್ಮ ದೇಶದ [illegible] ಕೊಡಬೇಕಾಗಿದೆ [illegible] ಒಂದೇ [illegible] ಜಾತಿ [illegible] ಜನರಿದ್ದ[illegible] ಆರ್ಥಿಕ ಸ್ಥಿತಿಯಲ್ಲಿ ಭಿನ್ನತೆ [illegible] ವುದಿಲ್ಲ [illegible] ಜಾತಿಯನ್ನು [illegible] ಇನ್ನು [illegible] ಯಾವ ಜಾತಿಯ ಹಿತಸಂಧನೆಯ [illegible]

ಆಗುವುದಿಲ್ಲ ಆದರೆ ಹೀಗೆ ಪ್ರಚಾರ ಕಾರ್ಯವಾಡಿ ಸಫಲರಾಗಲಿಕ್ಕೆ ಬಹಳ ಸಮಯವು ಹೋಗುತ್ತದೆ.

ಆದುದರಿಂದ ಕಮ್ಯೂನಲ್ ಎವಾರ್ಡನ್ನು ಪೂರ್ಣ ತೆಗೆದು ಹಾಕುವುದು ಅಥವಾ ಅದರ ಹೆಚ್ಚು ಆಕ್ಷೇಪಕರವಾದ ಕಲಮುಗಳನ್ನು ಬದಲಾಯಿಸಲಿಕ್ಕೆ ಪ್ರಚಂಡ ಆಂದೋಲನವನ್ನು ಹೂಡುವುದೊಂದೇ, ಜನರು ಮಾಡಬೇಕಾದ ಸದ್ಯದ ಕರ್ತವ್ಯವಾಗಿದೆ ಈ ಆಂದೋಲನದಲ್ಲಿ ಹಿಂದುಗಳಷ್ಟೇ ಅಲ್ಲ ಮುಸಲ್ಮಾನರ ಕ್ರೈಸ್ತರು ಮೊದಲಾದ ಎಲ್ಲ ಜಾತಿ ಮತಗಳ ಜನರೂ ಸೇರಬೇಕು. ಜನಮತವು ಎವಾರ್ಡಿಗೆ ತೀವ್ರ ವಿರೋಧವಾಗಿದೆ ಎಂದು ತಿಳಿಯಬಂದಾಗ ಅದರಲ್ಲಿ ಅಗತ್ಯವುಳ್ಳ ಪರಿವರ್ತನೆಗಳನ್ನು ಮಾಡದೆ ಸರಕಾರಕ್ಕೆ ಬೇರೆ ಉಪಾಯವೇ ಉಳಿಯುವುದಿಲ್ಲ ಆದುದರಿಂದ ಎವಾರ್ಡಿಗೆ ವಿರುದ್ಧ ಜನಮತವುಂಟಾಗ[illegible] ಪ್ರತಿಯೊಬ್ಬರು ಪ್ರಯತ್ನಿಸಬೇಕು.

೧,೦೦೦ ರೂಪಾಯಿಗಳ ಬಕ್ಷೀಸು

ಕೆಳಗಿನ ಔಷಧಗಳಲ್ಲಿಗ ಗುಣವಿಲ್ಲೆಂದ ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ ಇನಾಮ

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು: ೪—೮—೦

ಪ್ರಮೇಹ ವ್ಯಾಧಿಯಲ್ಲಿ ಭೋಗಿಸಿದರೆ ತಮ್ಮ ಪತ್ನಿ ತಮ್ಮ [illegible] ನಾಶವಾಡದೆ ಬಿಡಲಾರದು ಇಂಥ ವಿಷ [illegible] (ಇಪ್ಪತ್ತು) ಪ್ರಕಾರದ ಪ್ರಮೇಹ ಪರಮಾ ಅದರಿಂದ ಉದ್ಭವಿಸಿದ [illegible] ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಇದೆ

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತಿದೆ ಮೂತ್ರ ಮಾರ್ಗ ಸ್ವಚ್ಛವಾಗಿ ಮೂತ್ರವ[illegible] ಉಂಟಾಗುವ ವೇದನೆ ಮತ್ತು ಉರುಪು ಇಲ್ಲದ[illegible] ಕೀವು ಮತ್ತು ಪ್ರಮೇಹ ಹೋಗುವದು ಬಂದಾಗುತ್ತದೆ ಮೂತ್ರಾಶಯದ ಎಲ್ಲ [illegible] ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರ ಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ ಅನುಪಾನ ಪತ್ರಿಕೆ ಔಷಧದ ಕೂಡ ಪಥ್ಯ ಇಲ್ಲ ಕಿಮ್ಮತ್ತಿನ ಹೊರ್ತಾಗಿ ಅಂಚೆ ವೆಚ್ಚ ಬೇರೆ

ಕಿ.] ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪ್ರದರ ಶೆರಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ-ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಿನ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳದಿ, ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟು ನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತೆ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟುದೋಷ ಇವುಗಳಿಂದ ಕಿಬ್ಬೊಟ್ಟೆ ಗರ್ಭಾಶಯ ಇಲ್ಲವೆ ಕುಸುಮದಲ್ಲಿ ಆಗುವ ವೇದನೆ, ನಡ, ತಲೆ, ತೊಡೆ ಮತ್ತು ಸಂದು ಇವುಗಳಲ್ಲಿ ನೋವು, ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ ಆಗದಿರುವಿಕೆ, ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಇಲ್ಲ. ಅ. ವೆ. ಬೇರೆ.

ಚಿಕಿತ್ಸಕ:—ವೈದ್ಯರಾಜ ಎ. ಬಿ. ಸಿದನಾಳ,

ಮನೆ ನಂಬರ ೧೩೭೪, ಎಸ್. ಎಮ್. ಬಸವಣಗಲ್ಲಿ, ಬೆಳಗಾವಿ.

ನೋಟೀಸು

ದಕ್ಷಿಣ ಕನ್ನಡ ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

[illegible] P N [illegible] 50,1936

R I A 7[illegible]/1940

[illegible] ಯಜಮಾನಾ

[illegible] ವಾದಿಗಳು

[illegible] ಬಾಧಿತ [illegible] ಇವರು

ಈ ಮೇಲ್ಕಂಡ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ —

The Hindusthan Cooperative Insurance Society Ltd, Calcutta ಈ ಕಂಪೆನಿಯಲ್ಲಿ 6ನೇ ಅರ್ಜಿದಾರನು ಪಡೆದ ನಂಬ್ರ 9707ನೇ ಪೊಲಿಸಿಯನ್ನು ಟ್ರಾನ್ಸ್‌ಫರ್ ಹೊಂದಿ ಮಾಡ[illegible] ಕೇಸಿನ [illegible] ಸದ್ರಿ ಪೊಲಿಸಿ [illegible] ರೂಪಾಯಿ 601 10—0ನ್ನು ವಸೂಲು ಮಾಡುವ ಸದ್ರಿ ಅರ್ಜಿ ವ್ಯವಹರಣೆಯಲ್ಲಿ ಮೈನರು 2 3 4ನೇ ಅರ್ಜಿದಾರರ ಮೇಲೆ ಗಾರ್ಡಿಯನ್ನರಾಗಿದ್ದ 1ನೇ ಅರ್ಜಿದಾರನ [illegible] 5ನೇ ಅರ್ಜಿದಾರರಿಗೆ ತಾ 8 7-36ರಲ್ಲಿ ಕೊಡಲ್ಪಟ್ಟ ಸಕ್ಸೆಶನ್ ಸರ್ಟಿಫಿಕೇಟನ್ನು extend ಮಾಡಿ 1ರಿಂದ 4ನೇ ವರೆಗಿನ ಅರ್ಜಿದಾರರ ಭಾಗದ ಕುಟುಂಬದ ಈಗಿನ ಯಜಮಾನನಾದ 1ನೇ ಅರ್ಜಿದಾರಗೆ ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದ್ರಿ R. 1, A ನಂಬ್ರ 798/40ನೇ ಅರ್ಜಿಯು ತಾ 30-9-40ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ಒಳಗೆ ಸದ್ರಿ ಅರ್ಜಿ ತನಿಖೆ ನಡೆಯುವ ಸದ್ರಿ ಕೋರ್ಟಿನ ಮುಂದೆ ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ವ್ಯಾಕ್ತಿ ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

Udipi
Dated 9-9-40

M. Damodar Kamath
Advocate For Petitr.

ಜಿಲ್ಲಾ ಸಮಾಚಾರ



★

ಮಂಗಳೂರು

ನಗರ ಸಭೆ:— ಕಳೆದ ಸೋಮವಾರ ಚೆಯರ್‌ಮೇನರಾದ ಶ್ರೀ. ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಚಿತ್ರಾ ಟಾಕೀಸ್‌ನಿಂದ ಕೂಳೂರು ರಸ್ತೆಗೆ 'ದಾಮರು' ಹಾಕುವ ಬಗ್ಗೆ ರೂ. 16,800 ಮತ್ತು ಕಲೆಕ್ಟರ ಬಂಗ್ಲೆ ಗೇಟಿನಿಂದ ಮುನ್ಸಿಪಾಲಿಟಿ ಗಡಿಯ ತನಕ ಕಾನ್ವೆಂಟಿನ ಇದಿರಿನಿಂದಾಗಿ ಹಾದು ಹೋಗುವ ಮಾರ್ಗಕ್ಕಾಗಿ ರೂ. 7800 ಮಂಜೂರಾಯಿತು. ಮಂಗಳೂರಿಗೆ ಬಂದಾಗ, ಶ್ರೀ. ಯಸ್. ಸತ್ಯಮೂರ್ತಿಯವರಿಗೆ ಮಾನಪತ್ರ ಸಮರ್ಪಿಸಲು ಕೌನ್ಸಿಲು ನಿಶ್ಚಯಿಸಿತು. ಸೆಂಟ್ ಹುಡುಗಿಯರ ಶಾಲೆಗೆ ಮಂಜೇಶ್ವರ ರಾಮಕೃಷ್ಣ ರಾವ್ ಎಂಡೋಮೆಂಟಿನ ಬಾಬ್ತಿನಿಂದ, ರೂ. 120 ಕೊಡಲಾಯಿತು.

ರೈಲಿನಡಿಗೆ ಬಿದ್ದು ಮರಣ:— ಕಾಸರಗೋಡು ಪೆಸೆಂಜರ್ ರೈಲು, ಮಂಗಳೂರಿನ ಕಡೆಗೆ ಬರುತ್ತಿದ್ದಾಗ, ಕಳೆದ ತಾ. ೧೪ನೇ ದಿನ ಸಂಜೆ ಮಂಗಳೂರಿನ ಉಳ್ಳಾಲ ಸಂಕದ ಬದಿಯಲ್ಲಿ, ಒಬ್ಬನ ಮೇಲೆ ಹಾದು ಅವನು ಮೃತನಾದನೆಂದು ತಿಳಿದು ಬರುತ್ತದೆ

ಶ್ರೀ. ಕೈ. ಈಶ್ವರ್ ಎಂ. ಎಲ್. ಎ. ಈ ರೀತಿ ಬರೆಯುತ್ತಾರೆ "ದ. ಕ. ಜಿಲ್ಲಾ ಹರಿಜನರಲ್ಲಿ ಮತ್ತು ಹರಿಜನ ಕೆಲಸಗಾರರಲ್ಲಿ ವಿನಂತಿ:

ನಮ್ಮ ಜಿಲ್ಲೆಗೆ ಲೇಬರ್ ಇಲಾಖೆಯು ಬಂದು ಸುಮಾರು 15 ವರ್ಷಗಳು ದಾಟಿತು. ಸರಕಾರದವರು ಹರಿಜನರ ಏಳಿಗೆಯ ಬಗ್ಗೆ ಈ ಇಲಾಖೆಯನ್ನು ತೆರೆದಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ, ಈ ಇಲಾಖೆ ಬಂದುದರಿಂದ ಮಾತ್ರ ಹರಿಜನರಿಗೆ ದರಖಾಸ್ತಿಗೆ ಸ್ಥಳವು ದೊರಕಿತು. ನಮ್ಮ ಬಗ್ಗೆ ಈ ಜಿಲ್ಲೆಯಲ್ಲಿ ಸಾಧಾರಣ 50 ಶಾಲೆಗಳನ್ನು ತೆರೆದು ಹರಿಜನಮಕ್ಕಳಿಗೆ ವಿದ್ಯಾಭ್ಯಾಸವನ್ನೂ ಕೊಡುತ್ತದೆ ಮಾತ್ರವಲ್ಲದೆ ಎಷ್ಟೋ ಕಡೆಯಲ್ಲಿ ನೀರಿನ ಅನುಕೂಲತೆಯನ್ನೂ ಮಾಡಿಕೊಟ್ಟಿದೆ, ಮತ್ತು ಇನ್ನೂ ಅನೇಕ ತರದ ಪ್ರಯೋಜನವು ಕೆಲಸಗಳನ್ನೂ ಈ ಇಲಾಖೆಯಿಂದ ಈ ವರೆಗೂ ದೊರೆತಿರುತ್ತದೆ, ಇಂಥ ಪ್ರಯೋಜನವನ್ನು ಈಗಿನ ಸರಕಾರವು ತೆಗೆದು ಹಾಕುವ ಸ್ಥಿತಿಗೆ ಬಂದು ಮುಟ್ಟಿದೆ. ಆದುದರಿಂದ ನಾನು ನಿಮ್ಮ ಕೂಡೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಪ್ರತಿ ಒಬ್ಬ ಹರಿಜನ ಕೆಲಸಗಾರರು. ಹರಿಜನ ಸಂಘಗಳು, ಮತ್ತು ಹರಿಜನ ಉಪಾಧ್ಯಾಯರುಗಳು, ಈ ತನಕ ಹರಿಜನರಿಗೆ ದೊರೆತ ಅನುಕೂಲವನ್ನು ವಿವರಿಸಿ, ಪ್ರತಿ ಗ್ರಾಮಗಳಲ್ಲಿ ಹರಿಜನ ಸಭೆಗಳನ್ನು ಮಾಡಿ, ಈ ಸಂಗತಿಯನ್ನು ಸಭೆಯ ಮುಂದಿಟ್ಟು ಈ ಇಲಾಖೆಯನ್ನು ತೆಗೆದುಹಾಕಬಾರದೆಂದು ಠರಾವುಗಳನ್ನು ಮಾಡಿ ಅದಷ್ಟು ಬೇಗನೆ ಮದ್ರಾಸ್ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕಾಗಿ ನನ್ನ ವಿನಂತಿ."

ಲೇಡಿಸ್ ಕ್ಲಬ್

ಮಿಸೆಸ್ ಲೀಲಾಬಾಯಿ ಕಡುಬಿದ್ರಿಯವರನ್ನು ಬೀಳ್ಕೊಳ್ಳಲು; ಸತ್ಕಾರ ಕೂಟವೊಂದು ಜರುಗಿತು, ನಾಲ್ಕು ವರ್ಷಗಳಿಂದ "ಗೇಮ್ಸ್ ಸೆಕ್ರೆಟರಿ" ಆಗಿ ಕೆಲಸ ಮಾಡಿದ ಶ್ರೀಮತಿಯವರ ಕುರಿತು ಮಿಸೆಸ್. ಎಚ್. ಪಿ. ಪಿ. ರೊಡ್ರಿಗಸ್ ಮಾತನಾಡಿದರು, ಕ್ಲಬ್ಬಿನ ಅಧ್ಯಕ್ಷೆಯಾದ ಮಿಸೆಸ್, ಲಕ್ಷ್ಮಿ ಶಿಯೊವ್ವಿ(?)ನ್‌ರವರು ಶ್ರೀಮತಿಯವರಿಗೆ ಹಾರವನ್ನರ್ಪಿಸಿದರು. ಉತ್ತಮ ವ್ಯಂಗ್ಯಗೀತೆಯನ್ನು ಹಾಡುವವರಾಗಿ ಅಪೇಕ್ಷಿತವಾದ ಬಹುಮಾನವನ್ನು, ಈ ಸಂದರ್ಭದಲ್ಲಿ ಶ್ರೀಮತಿ ಅಮೃತ ಕಲಾ ಹಳ್ಳಿಪುರ್‌ರು ಪಡೆದರು.

ಹೆಂಪನಕಟ್ಟೆ ಶ್ರೀ. ದೂಮ ಮೂಲ್ಯರ ನಿಧನ:— ಕುಲಾಲ ಸಮಾಜದ ಪ್ರಮುಖ ವ್ಯಕ್ತಿಗಳಲ್ಲೊಬ್ಬರಾದ ಹಂಪನಕಟ್ಟೆ ದೂಮ ಮೂಲ್ಯರು ಇದೇ ತಾ. 8ರಂದು ದೈವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಶ್ರೀಯುತರು, ಈ ಸಮಾಜದ ಹೆಸರುವಾಸಿ ಮನುಷ್ಯರೂ, ಸಜ್ಜನರೂ, ಜನಪ್ರಿಯರೂ, ಸಮಾಜ ಪ್ರೇಮಿಯೂ ಆಗಿದ್ದರು. "ಕುಲಾಲರ ಯಾನೆ ಮೂಲ್ಯರ ಶ್ರೀರಾಮ ಸೇವಾ ಸಮಿತಿ" ಎಂಬ ಜಾತ್ಯಭ್ಯುದಯ ಸಂಘವು ಇವರ ಮನೆಯಲ್ಲೇ ಸ್ಥಾಪಿತವಾಗಿ ಅದರ ಕಾರ್ಯಕಲಾಪಗಳು ಅಲ್ಲಿಯೇ ನಡೆಯಲು ಆಶ್ರಯವನ್ನು ಕೊಟ್ಟು ಪ್ರೋತ್ಸಾಹವನ್ನಿತ್ತಿದ್ದರು. ಇವರ ನಿಧನದಿಂದ ಕುಲಾಲ ಸಮಾಜಕ್ಕೆ ಅಪಾರ ನಷ್ಟವಾಗಿದೆ. ಇವರ ಆತ್ಮಕ್ಕೆ ಚಿರಶಾಂತಿಯಿರಲಿ!

ಪುತ್ತೂರು

ಜೀವಾವಧಿ ಶಿಕ್ಷೆ:— ಪುತ್ತೂರು ತಾಲೂಕಿನ ಒನ್ನೂರು ಗ್ರಾಮದ ಕೃಷ್ಣ ಗೌಡ ಎಂಬಾತನು, ಕಳೆದ ತಾ. 3—3—40ರಲ್ಲಿ ತನ್ನ ಹೆಂಡತಿ ಸುಬ್ಬು ಎಂಬಾಕೆಯನ್ನು ಕತ್ತಿಯಿಂದ ಕಡಿದು ಕೊಂದನೆಂಬ ಆರೋಪಕ್ಕೆ ಗುರಿಪಡಿಸಲ್ಪಟ್ಟಿದ್ದ. ಈ ದಾವೆ ಜಿಲ್ಲಾ ಜಡ್ಜರ ಮುಂದೆ ತನಿಖೆಗೆ ಬಂದಿತ್ತು. ಮೃತಳ ಗಂಡನು ಕುಡಿಕನಾಗಿದ್ದುದರಿಂದ ಹುಂಬಾ ಪೀಡಿಸುವನೆಂದು, ತನ್ನ ಮಕ್ಕಳೊಡನೆ ಸುಮಾರು 13 ವರ್ಷದಿಂದ, ಬೇರೆಯಾಗಿಯೇ ಇದ್ದಳು. ಕೊಲೆ ನಡೆದ ದಿನ ಅಪಾದಿತನು ಮೃತಳನ್ನು ಒಂದು ಅಡಿಕೆ ತೋಟದಲ್ಲಿ ನೋಡಿದನೆಂದೂ, ಅಲ್ಲಿ ಅವಳನ್ನು ಕಡಿದು ಕೊಂದನೆಂದೂ ಹೇಳಲಾಗಿದೆ. ಅಪಾದಿತನು ತಾನು ನಿರಪರಾಧಿಯೆಂದು, ವಾದಿಸಿದನು. ಎಸೆಸರಲ್ಲಿ ಮೂವರು ಬೇರೆಂದು ಅಪಾದಿತ ಕೊಲೆ ನಡಿಸಿಲ್ಲವೆಂದೂ, ಇತರರು ಕುಡಿದಾಗ ಈ ಕೃತ್ಯ ನಡೆಸಿದನೆಂದೂ, ಅಭಿಪ್ರಾಯಪಟ್ಟರು, ಜಡ್ಜರಾದ ಶ್ರೀ. ಟಿ. ಯಸ್. ರಾಮಚಂದ್ರನ್‌ರವರು ಅಪಾದಿತನು ಅಪರಾಧಿಯೆಂದು ತಾ. ೯ರಂದು ಆತನನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಿದರು.

ಮುಲ್ಕಿ

ಬಿಲ್ಲವ ಸಮಾಜ ಸಂಘ:— ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಮಹಾಸಭೆಯು ಕಳೆದ ತಾ. 8—9—1940ನೇ ರವಿವಾರ ಅಪರಾಹ್ನ ಗಂಟೆ 1ಕ್ಕೆ ಮಂಗಳೂರು ಶ್ರೀ. ಕೆ. ವೈ. ಪೂಜಾರಿ, ಬಿ. ಎ. ಬಿ. ಯಲ್. ಎಡ್ವೋಕೇಟ್, ಇವರ ಅಧ್ಯಕ್ಷತೆಯಲ್ಲಿ ಕಾರ್ನಾಡು ಬಿ. ಇ. ಯಂ. ಶಾಲಾ ಕಟ್ಟಡದಲ್ಲಿ ಜರಗಿತು.

ಕಾರ್ಕಳ

ದಿವ್ಯ ಜೀವನ ಸಂಘ:— ಋಷಿಕೇಶದ ಶ್ರೀ ಸ್ವಾಮಿ ಶಿವಾನಂದ ಸರಸ್ವತಿಯವರ ದಿವ್ಯ ಜೀವನ ಸಂಘದ ಒಂದು ಶಾಖೆಯು ಕಾರ್ಕಳದಲ್ಲಿ ಸ್ಥಾಪಿಸಲ್ಪಟ್ಟಿದ್ದು ಅದಕ್ಕೆ ಇಲ್ಲಿಯ ವಕೀಲ ಶ್ರೀ. ಕೆ. ವೆಂಕಟೇಶ ಶೈಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿದ್ದಾರೆ.

ಮಹಿಳೆ ಮೇಜಿಸ್ಟ್ರೇಟರ ನೇಮಕ: ಸ್ಥಳೀಯ ಬೆಂಚ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಖಾಲಿಬಿದ್ದ ಒಂದು ಸ್ಥಾನಕ್ಕೆ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ಯಚ್. ದೇವರಾವ್ ಬಿ. ಎ. ಯಲ್. ಟಿ. ಯವರ ಪತ್ನಿ ಶ್ರೀಮತಿ ಲಲಿತಾದೇವಿಯವರು ಗೌರವ ಮೆಜಿಸ್ಟ್ರೇಟರಾಗಿ ಸರಕಾರದಿಂದ ನೇಮಿಸಲ್ಪಟ್ಟಿದ್ದಾರೆ. ಇಲ್ಲಿ ಈ ಹುದ್ದೆಗೆ ಮಹಿಳೆಯರ ನೇಮಕವಾಗಿರುವುದು ಇದೇ ಮೊದಲನೆಯ ಬಾರಿ.

ಉಪಾಧ್ಯಾಯಿನಿಯರ ಸಂಘ:— ಈ ಕೇಂದ್ರದ ಬಾಲಿಕಾ ಪಾಠಶಾಲೆಗಳ ಉಪಾಧ್ಯಾಯಿನಿಯರ ತಿಂಗಳ ಸಭೆಯು ತಾ. 14—9—1940ರ ದಿನ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟ್ರೆಸ್ ಶ್ರೀಮತಿ ಪ್ರೀಟೋರವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ. ಕೆ. ಬಂಗೇರರವರು ಕನ್ನಡ ಭಾಷಾ ಶ್ರೀಮತಿ ಮಾರ್ಗರೆಟ್ ಪಾವ್‌ಲೀನರವರು ಮೊದಲನೆಯ ದರ್ಜೆಗೆ ಕನ್ನಡ ಮಾದರಿ ಪಾಠವನ್ನೂ ಕೊಟ್ಟರು. ಶಾಲೆಗಳನ್ನು ಉತ್ತಮ ಸ್ಥಿತಿಗೆ ತರಲು ಬಾಲಿಕಾ ಶಿಕ್ಷಣದ ಪರಿಣಾಮಕಾರಿ ಪ್ರಚಾರ ಕಾರ್ಯವನ್ನು ಮಾಡುವ ಕುರಿತು ಸೂಚನೆಗಳನ್ನು ಕೊಟ್ಟು ಅಧ್ಯಕ್ಷೆಯರು ಭಾಷಣ ಮಾಡಿದ ಬಳಿಕ ಸಭೆ ಮುಗಿಯಿತು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. P. No. 190/40

1. ಕೆ. ಲಕ್ಷ್ಮಿ ಅಮ್ಮ, ಮೃತಪಟ್ಟ ಪೆರಿಯ ಕೇಂದಾಲಬಾಯರ ಹೆಂಡ್ತಿ

2. ಶಾರದ
3. ಅನಂತನ್
4. ಕರುಣಾಕರನ್
5. ಪದ್ಮಾವತಿ

} 1ನೇ ಅರ್ಜಿದಾರರ ಮಕ್ಕಳು ಪ್ರಾಯಸ್ಥರು ಪ್ರೇಮಲೋಕ ಕಳು ತಾಯಿ 1ನೇ ಅರ್ಜಿದಾರಳು, ಕಾಸರಗೋಡು ತಾಲೂಕು ಕಾಞಂಗಾಡ ಗ್ರಾಮದ ಮಾಡಿಲೋಂ(?)ದಲ್ಲಿರುವವರು. — ಅರ್ಜಿದಾರರು

ಮತ್ತು

1. ಪೆರಿಯ ರಾಮನ್ ನಾಯರ್, ತಾಯಿ ಅಂಬುನ ಮಗ.
2. ಪೆರಿಯ ಉಕ್ಕ ಅಮ್ಮ, 1ನೇ ಯವನ ಸಹೋದರಿ.
3. ನಾರಾಯಣಿ ಅಮ್ಮ 2ನೇ ಯವಳ ಮಗಳು, ಸಬ್ರಿ ತಾಲೂಕು ಪೆರಿಯ ಗ್ರಾಮದಲ್ಲಿ ರುವವರು —

} ಪ್ರತಿವಾದಿಗಳು

ಸದ್ರಿ ಅರ್ಜಿದಾರರು ತಿಳಿಸುವುದೇನೆಂದರೆ—

1ನೇ ಅರ್ಜಿದಾರಳ ಗಂಡ ಪ ಮಾಧವನವರ ತಂದೆ, ಮೃತಪಟ್ಟ ಪೆರಿಯ ಕೇಂದಾಂಬುನ್ನ್ಯರಿಗೆ ಪೆರಿಯ ಪೋಸ್ಟಾಫೀಸ್ ಎಲಿಮೆಂಟರಿ ಶಾಲೆಯ ಬಾಬ್ತು ತಿಂಗಳು 1ಕ್ಕೆ ರೂ 4-0-0ರಂತೆ ಈ ಕಳೆದ ಜುಲಾಯಿ ತಿಂಗಳಿಗೆ ಬರತಕ್ಕ ಬಾಕಿ ರೂಪಾಯಿ 16/ನ್ನು ಸೌ. ಕ. ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಪಡೆಯಲು ಮೃತಪಟ್ಟವರ ವಾರಿಸ್ದಾರರು ನೆಲೆಯಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಅರ್ಜಿಯು ತಾ. 3-10-40ಕ್ಕೆ ವಿಚಾರಣೆಗೆ ಇರುವುದರಿಂದ ಆ ಕುರಿತು ಆಕ್ಷೇಪ ಇದ್ದವರು ಮೇಲ್ಕಂಡ ಕೋರ್ಟಿನಲ್ಲಿ ಅದರ ಆಕ್ಷೇಪ ಹ್ಯಾಜರು ಮಾಡಿಕೊಳ್ಳಬಹುದೆಂದು ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

Kasaragode 17—9—1940 } (Sd) V. K. Kunhi Raman Nayar
Advocate For Peti.

ಕರ್ನಾಟಕ

೨೫ನೆಯ ಕನ್ನಡ ಸಾಹಿತ್ಯ ಸಮ್ಮೇಲನ, ಧಾರವಾಡ:— ಮುಂಬರುವ ಡಿಸೆಂಬರ ತಿಂಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನದ ೨೫ನೆಯ ಅಧಿವೇಶನವನ್ನು ಧಾರವಾಡದಲ್ಲಿ ಜರುಗಿಸಬೇಕೆಂದು ಧಾರವಾಡ ಹಾಗೂ ಅದರ ನೆರೆಯ ಪ್ರದೇಶದ ಜನರು ಅಪೇಕ್ಷಪಟ್ಟ ಮೇರೆಗೆ ಆಮಂತ್ರಣವನ್ನೀಯಲಾಗಿತ್ತು. ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಆ ಆಮಂತ್ರಣವನ್ನು ಸ್ವೀಕರಿಸಿ ಅದರಂತೆ ಬರೆದು ತಿಳಿಸಿರುವರು. ಸಮ್ಮೇಲನವನ್ನು ನೆರೆಯಿಸುವ ಬಗ್ಗೆ ವಿಚಾರ ವಿನಿಮಯ ಮಾಡಲು ಕರ್ನಾಟಕ ವಿದ್ಯಾವರ್ಧಕ ಸಂಘದ ಪರವಾಗಿ ಧಾರವಾಡ ನಾಗರಿಕರು, ಕಾರ್ಯಕರ್ತರು, ಸಾಹಿತ್ಯಭಕ್ತರು ಇವರೆಲ್ಲರ ಸಭೆ 1—9—40ಕ್ಕೆ ಕರೆಯಲಾಗಿತ್ತು.

ಶ್ರೀ. ಎಚ್. ಯಸ್. ಶಿವಲಿಂಗ ಶಾಸ್ತ್ರಿಗಳು ಕೋಶಾಧ್ಯಕ್ಷರಾಗಿಯೂ, ಕರ್ನಾಟಕ ವಿದ್ಯಾವರ್ಧಕ ಸಂಘದ ಸದ್ಯದ ಕಾರ್ಯದರ್ಶಿಗಳು ಸಮ್ಮೇಳನದ ಅಧಿವೇಶನದ ಕಾರ್ಯದರ್ಶಿಗಳಾಗಿಯೂ ಪ್ರೊ. ಎಸ್. ಎಸ್. ಬಸವನಾಳರು ಸ್ವಾಗತ ಸಮಿತಿಯ ತಾತ್ಪೂರ್ತಿಕ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ. ಸಮ್ಮೇಳನದ ಜತೆಗೆ ನಾಟ್ಯಸಮ್ಮೇಳನ, ಗದ್ಯ ಪದ್ಯ ಗೋಷ್ಠಿ ಕಲಾಪ್ರದರ್ಶನ ಮೊದಲಾದವು ನೆರಲಿವೆಯೆಂದು ತಿಳಿದುಬರುತ್ತದೆ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 161/1940

ಪುಟ್ಟಣಯ್ಯ . . ವಾದಿ

ಮತ್ತು

ರಾಮರಾಯ ಕೂಡಾ ಪ್ರತಿವಾದಿರು ಇವರೊಳಗೆ

1ನೇ ಪ್ರತಿವಾದಿ ರಾಮರಾಯ, ಪಡುಬೈಲು(?) ಕಾಶಿ ಸುಬ್ರಾಯರ ಮಗ, ಉಡುಪಿ ತಾಲೂಕು ಬೈಕಾಡಿ ಗ್ರಾಮದಲ್ಲಿರುವವ. ಇವರಿಗೆ—

ವಾದಿಗೆ 1ನೇ ಪ್ರತಿವಾದಿಯು ಸ್ವತಹಾ ಮತ್ತು 1-2ನೇ ಪ್ರತಿವಾದಿರ ಕುಟುಂಬದ ಯಜಮಾನನಾಗಿಯೂ 3ನೇ ಪ್ರತಿವಾದಿಯು ಮೈನರ್ 2ನೇ ಪ್ರತಿವಾದಿಯ ಗಾರ್ಡಿಯನನಾಗಿಯೂ ತಾರೀಕು 31-5-1938ರಲ್ಲಿ ರೂಪಾಯಿ 1000ಕ್ಕೆ ಬರೆದು ಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಅಸಲು ಬಡ್ಡಿ ಕೂಡಾ ರೂಪಾಯಿ 1119-4-4 ಕ್ಕೆ ಸದ್ರಿ ಈಡಿಗೆ ಕಾರಣವಾದ ದಾವಾ ಆಸ್ತಿಗಳ ಮಾರಾಟದ ಬಗ್ಗೆ ಕೂಡಾ ಡಿಕ್ರಿ ಕೇಳಿ ವಾದಿಯು ಹಾಕಿದ್ದ ಮಾಡಿರುವ ಮೇಲಿನ ದಾವೆಯು ತಾರೀಕು 12—10—1940ಕ್ಕೆ 1ನೇ ಪ್ರತಿವಾದಿಗೆ ನೋಟೀಸು ಜಾರಿಯಾಗದೆ ಎಂದು ಆ ದಿವಸ ಸದ್ರಿ 1ನೇ ಪ್ರತಿವಾದಿಯು ಮೇಲ್ಕಂಡ ಕೋರ್ಟಿನ ಮುಂದೆ ಹಗಲು ಹತ್ತು ಗಂಟೆಗೆ ಹಾಜರಾಗಿ ತನ್ನ ಹಾಜರಾತಿಯಿದ್ದ ಸಂಗ್ತಿಯಲ್ಲಿ ಹಾಜರು ಮಾಡಿಕೊಳ್ಳತಕ್ಕದೆಂತಲೂ ತಪ್ಪಿದ್ದ ಸದ್ರಿ ದಾವೆಯು ಅವರ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದೆಂತಲೂ ಈ ಮೂಲಕ ತಿಳಿಸಲಾಗಿರುವದು.

ಉಡುಪಿ ತಾ. 14-9-'40 } V. R. Kidiyur, Counsel for Plaintiff.

ಅರಮನೆಯ ಮೇಲೆ ವಿಮಾನದಾಳಿ!

ರಾಜದಂಪತಿಗಳಿಗೆ ಅಪಾಯವಿಲ್ಲ

★ ಯುದ್ಧ ವಾರ್ತೆ



ಸೈಂಟ್ ಪಾಲ್‌ನ ಬಳಿ ಬಾಂಬು! ಲಂಡನಿಗೆ ಐದಾರು ಸಲ ಆಕ್ರಮಣ!

ಈಜಿಪ್ಟಿನಲ್ಲಿ ಇಟಲಿಯ ಮುನ್ನಡೆ!

ಜರ್ಮನಿಗೆ ಅಪಾರ ಹಾನಿ

ಈ ವಾರದಲ್ಲಿ ಜರ್ಮನರು ಲಂಡನಿನ ಮೇಲೆ ಇನ್ನಷ್ಟು ಉಗ್ರ ರೂಪದಿಂದ ದಾಳಿ ಮಾಡಲು ಆರಂಭಿಸಿದ್ದಾರೆ ದಿನಕ್ಕೆ ನಾಲ್ಕೈದು ಸಲ ವಿಮಾನ ದಾಳಿ ನಡೆಯುತ್ತಿದೆ. ಜರ್ಮನರ ಹಲವು ವಿಮಾನಗಳು ಇದರಲ್ಲಿ ಧ್ವಂಸವಾಗುತ್ತವೆ. ಲಂಡನಿನ ಕೇಂದ್ರದಲ್ಲಿಯೇ ಬಾಂಬುಗಳು ಬಿದ್ದು ಹಲವು ಕಟ್ಟಡಗಳು ಇದರಿಂದ ಹಾಳಾದುವು ಕೆಲವು ಕಡೆಗಳಲ್ಲಿ ಬಾಂಬುಗಳು ಬಿದ್ದು ಬೆಂಕಿಯು ಜ್ವಾಲೆಯು ಉಂಟಾಗಿ ಜನರು ಅಲ್ಲಿಂದ ಬಿಡಾರ ಬಿಟ್ಟು ಹೊರಟು ಹೋಗಬೇಕಾಯಿತು.

ಅರಮನೆಯ ಮೇಲೆ ಬಾಂಬು

ಈ ವಾರದಲ್ಲಿ ಅತ್ಯಂತ ಭಯಾನಕ ವಾರ್ತೆಯೆಂದರೆ ಬ್ರಿಟನಿನ ಅರಸರ ನಿವಾಸಗೃಹವಾದ ಬಕ್ಕಿಂಗ್‌ಹಾಮ್ ಅರಮನೆಯ ಮೇಲೆ ಜರ್ಮನರ ಬಾಂಬುಗಳು ಸಿಡಿದುದು ಇದರಿಂದ ಇಡೀ ಅರಮನೆಯು ಮಟ್ಟಿಗೆ ಏನೂ ತೊಂದರೆಯಾಗಿಲ್ಲ. ಆದರೆ ಅರಮನೆಯ ಕೆಲವು ಪ್ರದೇಶದಲ್ಲಿ ಮಾತ್ರ ನಷ್ಟವಾಗಿದೆಯೆಂದು ಸುದ್ದಿ. ಅರಮನೆಗೆ ಎರಡು ಮೂರು ಸಲ ವಿಮಾನದಾಳಿ ನಡೆಸಿದರು. ನಾಜಿಗಳು ಹೀಗೆ ಹಟದಿಂದ ಮುತ್ತುತ್ತಿದ್ದಾರೆ. ರಾಜರಾಣಿಯವರು ಅರಮನೆಯ ಅಡಿಯ ನೆಲಮಾಳಿಗೆಯಲ್ಲಿದ್ದು ಸುರಕ್ಷಿತರಾಗಿದ್ದರು. ಅರಮನೆಯ ಇಗರ್ಜಿಯು ಬಾಂಬಿನಿಂದ ಕೆಡೆದುಬಿದ್ದಿದೆ.

ಸೈಂಟ್ ಪಾಲ್ ಇಗರ್ಜಿಗೆ ಬಾಂಬು

ಜರ್ಮನರು ಕೆಲವು ಬಾಂಬುಗಳನ್ನು ಲಂಡನಿನ ಪ್ರಸಿದ್ಧ ದೇವಾಲಯವಾದ ಸೈಂಟ್ ಪಾಲ್ ಇಗರ್ಜಿಗೆ ಎಸೆದಿರುವರು! ಆದರೆ ಅದರಿಂದ ವಿಶೇಷ ಹಾನಿಯಾಗಿಲ್ಲವೆಂದು ತಿಳಿದು ಬರುತ್ತದೆ.

ಪಾರ್ಲಿಮೆಂಟಿನ ಬಳಿ ಬಾಂಬು

ಪಾರ್ಲಿಮೆಂಟಿನಲ್ಲಿ ಹೌಸ್ ಓಫ್ ಲಾರ್ಡ್ಸ್ ಮಂದಿರದ ಕಟ್ಟಡವು ಬಾಂಬಿನ ಸಿಡಿತದಿಂದ ವಿಶೇಷ ಜಖಂ ಹೊಂದಿರುವುದಾಗಿ ಸುದ್ದಿ ಬಂದಿದೆ. ಡೌನಿಂಗ್ ಸ್ಟ್ರೀಟಿನಲ್ಲಿಯೂ ಕೆಲವು ಬಾಂಬುಗಳು ಬಿದ್ದವು!

ಲಂಡನಿನ ತಲೆ ರಕ್ತಮಯವಾಗಿದೆ!

ಹಿಟ್ಲರನ ದಾಳಿಯಿಂದ ಲಂಡನಿನ ತಲೆಯು ರಕ್ತಮಯವಾಗಿದೆ, ಆದರೆ ಅದು ಆತನಿಗೆ ಇದುವರೆಗೆ ಬಾಗಿಲ್ಲ ಬಾಗುವಂತೆಯೂ ಇಲ್ಲವೆಂದು ಎಂದು ಬ್ರಿಟನು ನಿರ್ಧಾರ ಮಾಡಿರುವಾಗಿ ಪತ್ರಿಕಾಭಿಪ್ರಾಯವಾಗಿದೆ

ಲಂಡನು ಭದ್ರವಾಗಿದೆ

ಎಷ್ಟೇ ವಿಮಾನದಾಳಿಗಳಾಗುತ್ತಿದ್ದರೂ ಲಂಡನು ವ್ಯಾಪಾರ ವ್ಯವಹಾರಗಳಿಗೆಲ್ಲಾ ಸುರಕ್ಷಿತವಾಗಿ ಇನ್ನೂ ಭದ್ರವಾಗಿದೆಯೆಂದು ತಿಳಿಯುತ್ತದೆ

ಡೋವರಿನ ಮೇಲೆ ಗುಂಡಿನ ಮಳೆ!

ಡೋವರಿನಲ್ಲಿ ವ್ಯಾಪಾರ ನಡೆಯುತ್ತಿದ್ದಾಗ ಜರ್ಮನರ ಗುಂಡುಗಳು ಬಿದ್ದವು ಜನರು ಓಡಿಹೋಗುತ್ತಿದ್ದಾಗ ಹೆಚ್ಚು ಹೆಚ್ಚು ಗುಂಡು ಬಿದ್ದವು ೧೧ ಜನರಿಗೆ ಗಾಯವಾಗಿದೆ ಮರಣದ ಸುದ್ದಿಯಿಲ್ಲ

ಸಾರ್ವಭೌಮ ದಂಪತಿಗಳು ಆಪತ್ತಿನಿಂದ ಪಾರಾದರು

ಬಕಿಂಗ್‌ಹಾಂ ಅರಮನೆಯ ಮೇಲೆ ೫ ಬಾಂಬುಗಳು ಬಿದ್ದವು

ಆ ಸಮಯದಲ್ಲಿ ರಾಜ ದಂಪತಿಗಳ ಅರಮನೆಯಲ್ಲಿಯೇ ಇದ್ದರು ದೈವವಶಾತ್ ಅವರಿಗೆ ಯಾವ ಅಪಾಯವೂ ಉಂಟಾಗಲಿಲ್ಲ ಅರಮನೆ ಕಟ್ಟಡಕ್ಕೆ ಮಾತ್ರ ಅಲ್ಪ ಸ್ವಲ್ಪ ಜಖಂ ಆಯಿತೆಂದು ವರದಿಯಾಗಿದೆ

ಬಕಿಂಗ್‌ಹಾಂ ಅರಮನೆ ಮೇಲೆ ನಾಜಿಗಳಿಗೆ ಸೇರಿದ ಟ್ವಿನ್ ಎಂಜಿನ್ ವಿಮಾನವೊಂದು ಕಾಣಿಸಿಕೊಂಡಿತು. ಅನಂತರ ಬಾಂಬುಗಳು ಏಕಪ್ರಕಾರವಾಗಿ ಉರುಳಿ ಬಂದುವು ತ್ವರಿತ ತ್ವರಿತವಾಗಿ ಆಸ್ಫೋಟನಗಳ ಭಾರಿ ಶಬ್ದವು ಕೇಳಿ ಬಂತು ಕಲ್ಲು ಚೂರುಗಳು ರಸ್ತೆಯ ಪಕ್ಕದಲ್ಲಿ ಬಿದ್ದವು ಓಡಾಡುತ್ತಿದ್ದ ಜನರು ಆಶ್ರಯ ಸ್ಥಾನಗಳಿಗಾಗಿ ಓಡುತ್ತಿದ್ದರು.

ಅರಮನೆಯೊಳಗೆ ರಾಜರೂ, ಆಶ್ರಯ ಸ್ಥಾನದಲ್ಲಿದ್ದರು ಅಲ್ಲಿನ ಹುದ್ದೇದಾರರೂ ಕೂಡ ಆಶ್ರಯ ಸ್ಥಾನಕ್ಕೆ ಹೋಗಿದ್ದರು.

ಗೋರಿಂಗನು ಲಂಡನ್ ಮೇಲೆ ಹಾರಾಡುತ್ತಾನೆ?

ಫೀಲ್ಡ್ ಮಾರ್ಶಲ್ ಗೋರಿಂಗನು ಲಂಡನ್ ಮೇಲೆ ಹಾರಾಡುತ್ತಿರುವನೆಂದು ಬರ್ಲಿನ್ ವಾರ್ತೆ.

ಜರ್ಮನರು ೧೫ ದಿನಗಳಲ್ಲಿ ಒಪ್ಪಂದಕ್ಕೆ ಬರುವರಂತೆ!

೧೫ ದಿನಗಳಲ್ಲಿ ಜರ್ಮನರು ಒಪ್ಪಂದಕ್ಕೆ ಬರುವರೆಂದು ಈ ವರೆಗೆ ಪಡೆದ ರಾಷ್ಟ್ರಗಳನ್ನೂ ಬಿಟ್ಟು ಕೊಡುವರೆಂದೂ ಮೆಂಜಿಸರೆಂಬವರು ಊಹಿಸುತ್ತಾರೆ

ಒಟ್ಟು ೨೧೪೩ ಜರ್ಮನ್ ವಿಮಾನಗಳು ಉರುಳಿದುವು

ಯುದ್ಧ ಸುರುವಾದಂದಿನಿಂದ ಒಟ್ಟು ೨೧೪೩ ಜರ್ಮನ್ ವಿಮಾನಗಳ ನಾಶವಾದವೆಂದೂ, ಬ್ರಿಟಿಷರ ೫೬೦ ವಿಮಾನಗಳು ನಾಶವಾದುವೆಂದೂ ಲಂಡಿನನ ಸುದ್ದಿ

ಲಂಡನಿನ ಮೇಲೆ ಆರು ಸಲ ದಾಳಿ

ಅರಮನೆಯ ಮೇಲೆ ಬಾಂಬು ರಾಣೀನಿವಾಸಕ್ಕೆ ಪೆಟ್ಟು!

ತಾ ೧೫ರಂದು ಲಂಡನಿನ ಮೇಲೆ ೬ ಸಲ ದಾಳಿ ನಡೆಯಿತು ಅರಮನೆಗೂ ಬಾಂಬು ೩ ಬಿದ್ದಿದೆ ಅಂತಃಪುರಕ್ಕೂ ಪೆಟ್ಟು ಬಿದ್ದಿದೆ

ಆಗ್ನೇಯ ದಿಕ್ಕಿನಲ್ಲಿ ವಿಮಾನ ಕೊಡೆಗಳಿಂದ ಜರ್ಮನರು ಇಂದಿಳಿದರು

ಈಜಿಪ್ಟಿನ ಮೇಲೆ ಇಟಲಿ ದಾಳಿ

ಇಟಲಿ ಸೇನೆಯು ಈಜಿಪ್ಟಿಗೆ ನುಗ್ಗಿದೆಯೆಂದು ತಿಳಿದಿದೆ ಸೊಲ್ಲುಮ್ ಕೋಟೆಯನ್ನು ಸ್ವಾಧೀನಪಡಿಸಿದೆಯೆಂದೂ ಸುದ್ದಿ.

ಈ ಕುರಿತು ಈಜಿಪ್ತ ಸರಕಾರದಲ್ಲಿ ವಿಚಾರ ನಡೆಯುತ್ತದೆ

ಈ ವಾರದ ಭಾರತ ರಾಜಕೀಯದಲ್ಲಿ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನವೇ ಬಹಳ ಪ್ರಾಮುಖ್ಯವಾಗಿದೆ. ಹಲಕಾಲದಿಂದ ಸರಕಾರಕ್ಕೆ ಸಹಕಾರ ಕೊಡಲು ಕಾಂಗ್ರೆಸಿನವರು ಮಾಡಿದ ಸೂಚನೆಗಳು ತಿರಸ್ಕೃತವಾಗಲು ಕಡೆಗೆ ನಿರ್ವಾಹವಿಲ್ಲದೆ ಯಾವುದೇ ರೀತಿಯ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿ ಕಾಂಗ್ರೆಸ್ ಮುಖಂಡರು ಅಭಿಪ್ರಾಯ ಮಾಡಿ ಸಭೆಸೇರಿದ್ದರು.

ಮಹಾತ್ಮರು ಮುನ್ನಡೆಸುವರು

ಈ ಸಭೆಯಲ್ಲಿ ಆದ ಮುಖ್ಯ ನಿರ್ಣಯವೆಂದರೆ, ಕಾಂಗ್ರೆಸಿನ ಕಡಿವಾಣವನ್ನು ತಿರಿಗಿ ಮಹಾತ್ಮಾಜಿಯವರ ಕೈಯಲ್ಲಿ ಒಪ್ಪಿಸಿದುದು ಅದರ ಸಲುವಾಗಿ ಪೂಣೆಯ ನಿರ್ಣಯವು ರದ್ದಾದುದು. ಮಹಾತ್ಮಾಜಿಯವರು ಮುಂದೆ ಏನು ಮಾಡಲಿರುವರೋ ಅದನ್ನು ಅವರ ಸಂದೇಶವನ್ನು, ರಾಷ್ಟ್ರವಿಡೀ ಹಾತೊರೆದು ಕಾದು ನಿಂತಿದೆ!

ವೈಸರಾಯರ ಬಳಿಗೆ ಹೋಗುವರು

ಮಹಾತ್ಮರು ಈ ಸಂದರ್ಭದಲ್ಲಿ ಬಹಳ ಮಹತ್ವದ ಭಾಷಣವನ್ನು ಕೊಟ್ಟರು ಅದರಲ್ಲಿ ಅವರು ಪ್ರಕೃತ ಸಾಮೂಹಿಕ ಚಳವಳವನ್ನು ಆರಂಭಿಸಲಾಗುವುದಿಲ್ಲವೆಂದೂ, ವೈಯುಕ್ತಿಕ ಚಳವಳವನ್ನು ನಡೆಸುವ ವಿಷಯವು ನಿಶ್ಚಯವಾಗಿಲ್ಲವೆಂದೂ ಮುಂದಿನ ಕಾರ್ಯದ ಕುರಿತು ತಾನು ವಿಚಾರ ಮಾಡುತ್ತಿರುವೆನಂದೂ ಹೇಳಿರುವರು ಅವರು ಮತ್ತೆ ಹೇಳಿರುವುದೇನೆಂದರೆ, ಭಾರತದಲ್ಲಿ ಹಿಂಸಾ ಯುದ್ಧಕ್ಕೆ ಬೆಂಬಲವು ದೊರಕಲಾರದೆಂದೂ, ಆದುದರಿಂದ ಯುದ್ಧ ಸಹಕಾರವಿಲ್ಲವೆಂಬ ವಿಷಯದಲ್ಲಿ ಅಹಿಂಸಾ ಮಾರ್ಗದಿಂದ ಪ್ರಚಾರ ಮಾಡಲು ಕಾಂಗ್ರೆಸ್ ಮುಖಂಡರಿಗೆ ತಡೆ ಮಾಡಬಾರದಾಗಿ ತಾನು ವೈಸರಾಯರಲ್ಲಿ ಹೋಗಿ ಕೇಳುವೆನೆಂದು ಅವರು ಅದಕ್ಕೆ ಸಮ್ಮತಿಸಿದರೆ ಪ್ರಕೃತ ಚಳವಳದ ಸಂದರ್ಭವೇ ಹುಟ್ಟುವುದಿಲ್ಲವೆಂದೂ ಸ್ಪಷ್ಟಪಡಿಸಿರುವರು

ಈ ಸಭೆಗೆ ಕಾಂಗ್ರೆಸ್ ಕಮಿಟಿಗೆ ರಾಜಿಯಿತ್ತ ಗಡಿನಾಡಿನ ಗಾಂಧಿ ಅಬ್ದುಲ್ ಗಫರ್ ಖಾನರೂ ಬಂದಿದ್ದರು

ಜಿನ್ನಾ-ವೈಸರಾಯ ಭೇಟಿ

ಮುಸ್ಲಿಂ ಲೀಗಿನ ಕಾರ್ಯಕಾರೀ ಮಂಡಳಿಯ ಠರಾವನ್ನು ಜಿನ್ನರು ವೈಸರಾಯರಿಗೆ ಕಳುಹಿಸಿದ್ದಾರೆ ಅವರಿಬ್ಬರೊಳಗೆ ತಾ. ೨೪ರಂದು ಭೇಟಿಯು ನಿಶ್ಚಯವಾಗಿದೆಯೆಂದು ತಿಳಿದು ಬರುತ್ತದೆ ಕಾಂಗ್ರೆಸಿನ ಹಜ್ಜೆಯೇನೆಂದು ತಿಳಿಯಲು ಭೇಟಿಯ ಅವಧಿಯು ಹೀಗೆ ಮುಂದೂಡಲಾಗಿತ್ತು.

ಭಾರತದಲ್ಲಿ ಬಂಧನಗಳು

ಭಾರತದಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿಗೆ ಅನ್ವಯವಾಗಿದನಂಪ್ರತಿ ಹಲವು ಮಂದಿ ಕಾಂಗ್ರೆಸ್ ಕೆಲಸಗಾರರ ಧುರೀಣರ ಬಂಧನಗಳು ಆಗುತ್ತಾ ಇವೆ ಉತ್ತರ ಹಿಂದೂಸ್ಥಾನದಲ್ಲಿಯೇ ಇದು ವಿಶೇಷವಾಗಿತ್ತು ಈಗ ದಕ್ಷಿಣ ಹಿಂದೂಸ್ಥಾನದಲ್ಲಿಯೂ ಆ ಬಂಧನಗಳು ಹೆಚ್ಚುತ್ತಿವೆ.

ಗಾಂಧೀಜಿಯವರ ಸ್ಪಷ್ಟೀಕರಣ

ಗಾಂಧೀಜಿಯವರು ಸ್ವಾತಂತ್ರ್ಯ ಪ್ರಾಪ್ತಿಯ ವಿಷಯವಾಗಿ ಮಾತನಾಡುತ್ತಾ "ನಮಗೆ ಅಭಿಪ್ರಾಯ ಸ್ವಾತಂತ್ರ್ಯ ಸಿಗಬೇಕು ಅದೇ ಸ್ವಾತಂತ್ರ್ಯ ಪ್ರಾಪ್ತಿಗೆ ಹಾದಿ! ಅದನ್ನೇ ನಾವಿಂದು ಕೇಳುತ್ತೇವೆ, ಪೂರ್ಣ ಅಹಿಂಸೆಯನ್ನು ಪಾಲಿಸುವುದು ಅಗತ್ಯ" ಎಂದು ಹೇಳಿದರು

MUNICIPALITY OF M[...]

Notice under Section 7[...] Municipalities Act V of 1920 as Am[...]

ಮಂಗಳೂರು ಮುನಿ[...]

Notice under proviso to section 78(3) of the Madras District Municipalities Act V of 1920 as amended by Act X of 1930

It is hereby notified for the information of the Public that the Municipal Council in its Resolution No. 38, dated the 8th July 1940 resolved that it intends to levy under Section 81 (1) (c) of the Madras District Municipalities Act 1920 (as amended by subsequent Acts) every half year with effect from 1st April 1941 a Lighting Tax to provide for expenses connected with the lighting of this Municipality by gas or electricity at the rate of ½ per cent of the annual value of buildings and lands situated within the Municipal limits of Mangalore The matter of levying the aforesaid tax will be further proceeded with by the Council after five weeks from the date of publication of this notice in South Kanara District Gazette and any objections received within the period of the said five weeks from the publication of this notice will be considered by the Council.

Municipal Office, Mangalore 29—8—40

M. Narayana Shenoy, Commissioner, Mangalore, Municipality



ಭಾರತಕ್ಕೆ ಅಭಿಪ್ರಾಯ ಸ್ವಾತಂತ್ರ್ಯವಿರಬೇಕು

ಸ್ವಾತಂತ್ರ್ಯಕ್ಕೆ ಇದೇ ಹಾದಿ!

ಮುಂಬಯಿಯಲ್ಲಿ ಕಾಂಗ್ರೆಸ್ ಅಧಿವೇಶನ!

ಮಹಾತ್ಮರು ಧುರೀಣತೆ ವಹಿಸುವರು

ಕೇರಳದಲ್ಲಿ ಪೋಲೀಸರು ಗುಂಡು ಹಾರಿಸಿದರು

ಕೇರಳದಲ್ಲಿ ಜನರ ಮೇಲೆ ಪೋಲೀಸರು ಗುಂಡು ಹಾರಿಸಿದರು!

ಪೋಲೀಸ್ ಆಫೀಸರರನ್ನು ಜನರು ಕಲ್ಲೆಸೆದು ಕೊಂದರು'

ತಲಚೇರಿಯಲ್ಲಿ ಪೋಲೀಸರು ಲಾಠೀ ಚಾರ್ಜ್ ಮಾಡಿದ್ದು ಸಾಕಾಗದೆ, ಕಡೆಗೆ ಗುಂಡು ಹಾರಿಸಿ ಮೂರು ಜನರನ್ನು ಕೊಂದರೆಂದೂ ಐವರಿಗೆ ಗಾಯವಾಗಿದೆಯೆಂದೂ ತಿಳಿಯುತ್ತದೆ. ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಆಜ್ಞೆಯನ್ನನುಸರಿಸಿ ಮಲಬಾರಿನ ತಲಿಚೇರಿ ಕನ್ನನ್ನೂರು, ಕಲ್ಲಿಕೋಟೆ, ಪೊನ್ನಾನಿ ಮೊದಲಾದ ಕಡೆಗಳಲ್ಲಿ ಕಾಂಗ್ರೆಸ್ ಕಮಿಟಿಯವರು ನಿಷೇಧ ದಿನಾಚರಣೆ ಮಾಡಿದರು. ಪೋಲೀಸರು ಅಲ್ಲಿಗೆ ಬಂದ ಮುಷ್ಕರರನ್ನು ಬಂದಿಸಿ ಜನರನ್ನು ಚದರ ಹೇಳಿದರು. ಜನರ ಮೇಲೆ ಗುಂಡು ಹಾರಿಸಲಾಯಿತು. ಕೆಲವರು ಅದರಲ್ಲಿ ತೀರಿಹೋದರು. ಕನ್ನನೂರಿನಲ್ಲಿ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಜನರು ಕಲ್ಲೆಸೆದು ಕೊಂದಿರುವರು

ಗವರ್ನ್‌ಮೆಂಟ್ ಸುದ್ದಿಯಂತೆ, ತಾರ್ರಿನ್‌ಸೇರಿಯಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರನು ಸತ್ತಿರುವನೆಂದೂ ಎರಡು ಜನ ಕಾನ್‌ಸ್ಟೇಬಲರು ಗಾಯಗೊಂಡಿರುವರೆಂದೂ ಅವರಲ್ಲಿ ಒಬ್ಬನು ಮೃತಿ ಹೊಂದಿರುವನೆಂದೂ ತಿಳಿಯುತ್ತದೆ. ಮತ್ತನ್ನೂರಿನಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರನೂ ಐದು ಕಾನ್‌ಸ್ಟೇಬಲರೂ ಗಾಯಗೊಂಡಿರುವರೆಂದೂ ತಿಳಿಯುತ್ತದೆ. ತಲಚೇರಿಯಲ್ಲಿ ಜ್ಯೂಂಟ್ ಮೆಜಿಸ್ಟ್ರೇಟರಿಗೂ ಪೋಲೀಸ್ ಪಾರ್ಟಿಗೂ ಕಲೆಸೆದಿರುವರಂತೆ

ಮಹತ್ವದ ಕಾಂಗ್ರೆಸ್ ಸಭೆ!

ಅಖಿಲಭಾರತ ಕಾಂಗ್ರೆಸ್ ಕಮಿಟಿಯು ತಾ ೧೫ರಂದು ಮಧ್ಯಾಹ್ನ ೨ ಘಂಟೆಗೆ ಈಸ್ಟ್ ಇಂಡಿಯಾ ಕಾಟನ್ ಅಸೋಸಿಯೇಶನಿನ ಭವ್ಯ ಮಂದಿರದಲ್ಲಿ ಪ್ರಾರಂಭವಾಯಿತು. ಮಹಾತ್ಮಾಗಾಂಧಿಯವರೆ ಸಕಾಲಕ್ಕೆ ಸಭಾಗೃಹಕ್ಕೆ ಬಂದ ಕೂಡಲೆ ಕಿಕ್ಕಿರಿದು ನೆರೆದಿದ್ದ ಸಭಿಕರು ಹರ್ಷೋದ್ಗಾರಗಳಿಂದ ಅವರನ್ನು ಸ್ವಾಗತಿಸಿದರು. ಸಭೆ ಪ್ರಾರಂಭವಾಗುವುದು ಇನ್ನೂ ಬಹಳ ಹೊತ್ತು ಇರುವಾಗಲೇ ಮುಂಬಯಿ ದ್ವೀಪದ ಪೂರ್ವ ಬದಿಯಲ್ಲಿರುವ ಈ ಕಟ್ಟಡದ ಎಲ್ಲ ಮಾರ್ಗಗಳ ಜನದಟ್ಟಣೆಯಿಂದ ತುಂಬಿಹೋಗಿದ್ದವು. ಮಾರ್ಗದ ಎರಡೂ ಬದಿಗಳಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಮುಖಂಡರು ಸಭಾಗೃಹಕ್ಕೆ ಬರುವಾಗ ಜನರು ಹರ್ಷೋದ್ಗಾರಗಳನ್ನು ಪ್ರದರ್ಶಿಸಿ ಅವರನ್ನು ಸ್ವಾಗತಿಸಿದರು

ಸಭಾಗೃಹವು ರಾಷ್ಟ್ರಧ್ವಜಗಳಿಂದಲೂ ರಾಷ್ಟ್ರ ಧುರೀಣರ ಭಾವಚಿತ್ರಗಳಿಂದಲೂ ಬಹಳ ಅಂದವಾಗಿ ಸುಶೋಭಿತಗೊಳಿಸಲಾಗಿತ್ತು. ಮುಂಬಯಿಯಲ್ಲಿ ವರ್ಕಿಂಗ್ ಕಮಿಟಿಯ ಸದಸ್ಯರು ಕುಳಿತಿದ್ದರು. ಅಧ್ಯಕ್ಷರ ಎಡಗಡೆ ಮಹಾತ್ಮಾ ಗಾಂಧಿಯವರು ವಿರಾಜಮಾನರಾಗಿದ್ದರು. ವಂದೇ ಮಾತರಂ ಪದದಿಂದ ಸಭೆಯ ಕಾರ್ಯ ಪ್ರಾರಂಭವಾಯಿತು. ಅನಂತರ ಅಬುಲ್‌ಕಲಂ ಅಜಾದರು ಚಿಕ್ಕ ಭಾಷಣದಲ್ಲಿ ಮಹಾತ್ಮಾ ಗಾಂಧಿಯವರು ಮತ್ತೆ ಕಾಂಗ್ರೆಸ್ಸಿನ ಧುರೀಣತ್ವವನ್ನು ವಹಿಸಲು ಒಪ್ಪಿರುವರೆಂದು ಸಾರಿದರು. ಕೂಡಲೇ ಸಭಿಕರು ಸುದೀರ್ಘ ಕರತಾಡನ ಮಾಡಿ ಹರ್ಷೋದ್ಗಾರಗಳನ್ನು ಪ್ರದರ್ಶಿಸಿದರು. ಅನಂತರ ಅಜಾದರು ಪುಣೆಯಲ್ಲಿ ಕಾಂಗ್ರೆಸು ಕೂಡಿದಂದಿನಿಂದ ಈ ವರೆಗೆ ಆದ ಘಟನೆಗಳನ್ನು ವಿಮರ್ಶಿಸಿ ಕಳೆದ ಆರು ವಾರಗಳಲ್ಲಿ ಸಂಭವಿಸಿದ್ದನ್ನು ಕೂಲಂಕಷವಾಗಿ ವಿಚಾರಿಸಿ ಕಾಂಗ್ರೆಸು ಪುಣೆಯ ನಿರ್ಣಯವನ್ನು ಹಿಂತೆಗೆದುಕೊಂಡು, ಮಹಾತ್ಮಾ ಗಾಂಧಿಯವರನ್ನು ಸೇನಾಪತಿಗಳನ್ನಾಗಿ ನೇಮಿಸಿದ ರಾಮಗಡ ಗೊತ್ತುವಳಿಯನ್ನೆ ಪುನಃ ಪಾಸಮಾಡಬೇಕಾದ ಅವಶ್ಯಕತೆಯುಂಟಾಗಿದೆಂಬುದಾಗಿಯೂ ತಿಳಿಸಿದರು

ಅನಂತರ ಪಂಡಿತ ಜವಾಹರಲಾಲ ನೆಹರೂರವರು ವರ್ಕಿಂಗ್ ಕಮಿಟಿಯು ಪಾಸು ಮಾಡಿದ ಗೊತ್ತುವಳಿಯನ್ನು ಸಭೆಯಲ್ಲಿ ಮಂಡಿಸಿದರು. ಸರದಾರ ವಲ್ಲಭಭಾಯಿ ಪಟೇಲರು ಇದಕ್ಕೆ ಅನುಮೋದನ ಕೊಟ್ಟರು.

ಮಹಾತ್ಮಾ ಗಾಂಧಿಯವರು ... ಮಿಟಿಗಳ ಕನಕ ಭಾಷಣ ಮಾಡಿ ... ರಿಸಿದರು

... ಸ್ವರ ... ಅನೇಕ ಕಾಂಗ್ರೆಸ್ ... ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಿದವರು ...

ಮತ್ತು ... ತಿದ್ದುಪಡಿ ಸೂಚನೆಗಳು ಇದ್ದುವು. ಅವುಗಳೆಲ್ಲವೂ ಹಿಂದೆಗೆಯಲ್ಪಟ್ಟವು. ಮುಖ್ಯ ಠರಾವು ಸಭೆಯಿಂದ ಅಂಗೀಕೃತವಾಯಿತು. ಗಾಂಧಿಜಿಯವರು ಕೂಡಲೇ ವೈಸರಾಯರಿಗೆ ಭೇಟಿಯಾಗಲು ಪತ್ರ ಬರೆಯಲಿರುವರೆಂದು ತಿಳಿದುಬರುತ್ತದೆ

ಶಾಸನ ಸಭೆ ಸೇರಿಸಲು ಸಾಧ್ಯವಿಲ್ಲ

'ಪ್ರಕೃತ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶೆ ಮಾಡಬೇಕಾಗಿದೆ ಈ ಬಗ್ಗೆ ಶಾಸನ ಸಭೆಯ ಮೀಟಿಂಗನ್ನು ಸೇರಿಸಬೇಕು' ಎಂಬುದಾಗಿ ಮದರಾಸ್ ಅಸೆಂಬ್ಲಿ ಅಧ್ಯಕ್ಷರಾದ ಶ್ರೀ ಬುಲುಸ್ ಸಾಂಬಮೂರ್ತಿಯವರು ಮದರಾಸ್ ಗವರ್ನರರಿಗೆ ಪತ್ರ ಬರೆದಿದ್ದರು.

ಇದಕ್ಕೆ ಉತ್ತರವಾಗಿ ಗವರ್ನರರು ಹೀಗೆ ಬರೆದಿರುವರು:-" ಈಗಿನ ರಾಜ್ಯಾಂಗ ಶಾಸನ ತಿಸ್ತು ನಿಯಮಗಳಂತೆ ಶಾಸನ ಸಭೆಗಳ ಮೀಟಿಂಗನ್ನು ಸೇರಿಸಲು ಅವಕಾಶವಿರುವುದಿಲ್ಲ. ಶಾಸನ ಸಭೆಗಳ ಅಧಿವೇಶನವನ್ನು ಸೇರಿಸಲು ನನಗೆ ಸಾಧ್ಯವಿಲ್ಲ. ಅಲ್ಲದೆ ಹಾಗೆ ಅಧಿವೇಶನವನ್ನು ಕರೆಯುವ ಹಕ್ಕು ಅಸೆಂಬ್ಲಿ ಸ್ಪೀಕರರವರಿಗೆ ಸಹಾ ಇದೆಯೆಂದು ನಾನು ಸಮ್ಮತಿಸಲಾರೆನು. ಆದರೆ ಶಾಸನ ಸಭೆಗಳ ಸದಸ್ಯರು ಖಾಸಗಿಯಾಗಿ ಒಂದು ಸನ್ನಲ್ಲಿ ಮಾತನಾಡಬಹುದು. ಶಾಸನ ಸಭಾ ಭವನದಲ್ಲಿ ಅಧಿಕಾರವಿಲ್ಲದವರಿಗೆ ಸಭೆ ನಡೆಸಲು ಅವಕಾಶವಿಲ್ಲ. ಹಾಗೆ ಏರ್ಪಾಡು ಮಾಡುವುದು ಸಾಧ್ಯವಿಲ್ಲ.

OF MANGALORE

13 f the Madras District ... as Amended by Act ... 1930

ಮುನಿಸಿಪಾಲಿಟಿ

೧೯೩೦ನೇ ಇಸ್ವಿ X ನೇ ಆಕ್ಟಿನ ಮೇರೆಗೆ ತಿದ್ದುಪಡಿಯಾದ 1920ನೇ ಇಸವಿ ಮದ್ರಾಸು ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟೀಗಳ V ನೇ ಆಕ್ಟಿನ ಸೆಕ್ಷನ್ 78 (3) ಪ್ರೊವಿಸೊ ಪ್ರಕಾರ ಪ್ರಕಟಿಸಲ್ಪಟ್ಟ ನೋಟೀಸು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ —

ಮಂಗಳೂರು ಮ್ಯುನಿಸಿಪಲ್ ಕೌನ್ಸಿಲು ಈ 1940ನೇ ಇಸ್ವಿ ಜುಲ್ಯಾ ತಿಂಗಳ ತಾರೀಕು ... ನಡೆದ ಸಭೆಯ 38ನೇ ನಿರ್ಣಯದ ಪ್ರಕಾರ ನಂತರದ ಆಕ್ಟುಗಳಿಂದ ತಿದ್ದುಪಡಿ ಹೊಂದಿದ 1920ನೇ ಇಸ್ವಿಯ ಮದ್ರಾಸು ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿ ಆಕ್ಟಿನ 81 (1) (c) ಸೆಕ್ಷನ್ ಮೇರೆಗೆ ಸಂ 1941ನೇ ಇಸ್ವಿ ಎಪ್ರಿಲ್ ತಿಂಗಳ 1ನೇ ತಾರೀಕಿನ ಆರಭ್ಯ, ಮಂಗಳೂರು ಮ್ಯುನಿಸಿಪಾಲಿಟಿಯೊಳಗಿರುವ ಪ್ರತಿಯೊಂದು ಸ್ಥಳ ಮತ್ತು ಕಟ್ಟೋಣಗಳ ವರ್ಷಾವಧಿ ಮೌಲ್ಯದ ಮೇಲೆ ಪ್ರತಿಯೊಂದು ಅರ್ಧ ವರ್ಷಕ್ಕೆ ಶೇಕಡಾ ½ ದರದಲ್ಲಿ ಮ್ಯುನಿಸಿಪಾಲಿಟಿಯು ಬೀದಿಗಳಲ್ಲಿ ಗೇಸ್ ಅಥವಾ ವಿದ್ಯುದ್ದೀಪದಿಂದ ಬೆಳಕನ್ನು ಹಚ್ಚುವ ಖರ್ಚಿನ ಬಗ್ಗೆ ಹೀಪದ ತೆರಿಗೆಯನ್ನು ಹೊರಿಸುವುದಾಗಿ ನಿಶ್ಚಯಿಸಿರುತ್ತದೆ

ಈ ತೆರಿಗೆಯನ್ನು ಹೊರಿಸುವ ವಿಷಯವನ್ನು ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನವರು ಈ ನೋಟೀಸನ್ನು ದಕ್ಷಿಣ ಕನ್ನಡಾ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ ತಾರೀಕಿನಿಂದ ಐದು ವಾರಗಳ ನಂತರದ ಪುನಃ ವಿಮರ್ಶಿಸುವರು. ಈ ಐದು ವಾರಗಳ ಸಮಯದೊಳಗೆ ಈ ತೆರಿಗೆಯ ಬಗ್ಗೆ ಯಾವ ಆಕ್ಷೇಪಣೆಗಳಿದ್ದರೂ ಬರೆದಲ್ಲಿ ಅಂಥವುಗಳು ಕೌನ್ಸಿಲಿನವರಿಂದ ಗಮನಿಸಲ್ಪಡುವುವು.

ಮುನಿಸಿಪಲ್ ಆಫೀಸು, ಮಂಗಳೂರು 29-8-40 — ಎಲ್. ನಾರಾಯಣ ಶೆಟ್ಟಿ, ಕಮಿಶನರ್, ಮಂಗಳೂರು ಮ್ಯುನಿಸಿಪಾಲಿಟಿ.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

(…ನೇ ಪುಟದಿಂದ)
...ದೇಶದ ಸೇವೆಯನ್ನು ಮಾಡು ವುದೇ ಅದರ ಗುರಿ. ಅದರ ಸವಸ್ಯತ್ವವು ಬೆಳೆಯುತ್ತಲಿ ಇದೆ. ಅದು ಸತ್ಯ ಅಹಿಂಸೆಗಳ ಶುದ್ಧ ಮಾರ್ಗವನ್ನು ಅನುಸರಿಸುತ್ತಿರುವ್ದುದೆಂದು ಅದರ ಶಕ್ತಿ ಸಾಮರ್ಥ್ಯಗಳು ಬೆಳೆದಿವೆ.

"ನಾನು ಹಡಗದ ಕಪ್ತಾನನು. ಹಡಗಗಳಲ್ಲಿಯ ಕಪ್ತಾನನಂತೆ ನನ್ನಲ್ಲಿಯೂ ಪ್ರತಿಯೊಬ್ಬ ನಾವಿಕನ ಸಂಪೂರ್ಣ ವಿಶ್ವಾಸ ಮತ್ತು ನಂಬಿಕೆ ಇರಲೇ ಬೇಕು. ಇಲ್ಲದಿದ್ದರೆ ಆ ಹಡಗವು ಒಡೆದು ಹೋಗಬಹುದು ಅದರಿಂದ ಹಡಗದಲ್ಲಿದ್ದವರಷ್ಟೇ ಮುಳುಗುವದಲ್ಲದೆ ಇಡೀ ದೇಶವೇ ಕಷ್ಟನಷ್ಟಗಳಿಗೀಡಾಗಬಹುದು ಸೆರೆಮನೆಗೆ ಹೋಗಲು ನಾನು ಆತುರನಿಲ್ಲೆಂದು ಹೇಳಬಯಸುವೆ ಆದರೆ ಸರಕಾರದವರು ತಮ್ಮ ಮನಸ್ಸಿಗೆ ಬಂದಾಗ ನನ್ನನ್ನು ಸೆರೆಮನೆಗಟ್ಟಬಹುದು. ಆದರೆ ಅಂಥ ಪ್ರಸಂಗ ಬರದೆ ಶಾಸನ ಭಂಗವನ್ನು ಮಾಡುವ ಉದ್ದೇಶ ನನ್ನದಿರುವದಿಲ್ಲ. ನಿಮ್ಮ ಮುಂದಿರುವ ಈ ನಿರ್ಣಯವನ್ನು ನಾನೇ ಬರೆದಿರುವೆನೆಂದು ಹೇಳಬಯಸುವೆನು. ನಿರ್ಣಯದಲ್ಲಿ ಅಹಿಂಸೆಗೆ ಹೆಚ್ಚು ಮಹತ್ವ ಕೊಡುವ ವಾಕ್ಯವನ್ನು ತೆಗೆದುಹಾಕಬೇಕೆಂದು ನನ್ನ ಇಚ್ಛೆ ಇತ್ತು. ಜವಾಹರಲಾಲರೂ ಅದಕ್ಕೊಪ್ಪಿದ್ದರು. ಆದರೆ ಮೌಲಾನಅಬುಲ್ ಕಲಂ ಅಜದ್ದರು ಆ ವಾಕ್ಯವಿರಲೇ ಬೇಕೆಂದು ಆಗ್ರಹ ಹಿಡಿದರು ನಮ್ಮ ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲಿ, ಅಷ್ಟೆ ಅಲ್ಲದೆ ಸ್ವಾತಂತ್ರ್ಯ ಸಂಪಾದಿಸಿದ ಬಳಿಕವೂ ಶಕ್ಯವಿದ್ದಷ್ಟು ಅಹಿಂಸೆಯನ್ನು ಆಚರಿಸಲಾಗುವದೆಂದು ಈ ನಿರ್ಣಯದಲ್ಲಿ ಸ್ಪಷ್ಟಪಡಿಸಲಾಗಿದೆ.

"ನಾವು ಸ್ಥಾಪಿಸಲಿರುವ ಪಾರ್ಲಿಮೆಂಟಿನಲ್ಲಿ ಎಲ್ಲ ಪಕ್ಷಗಳಿಗೂ ಪ್ರಾತಿನಿಧ್ಯ ಕೊಡಲಾಗುವದು ವಯಸ್ಕರಿಗೆಲ್ಲ ಮತಾಧಿಕಾರ ಕೊಡಲಾಗುವದೆಂದು ನಾವು ಈ ಮೊದಲೆ ಸಾರಿದ್ದೇವೆ

ಹಿಂಸೆಯಲ್ಲಿ ನನ್ನ ವಿಶ್ವಾಸವಿಲ್ಲದ್ದರಿಂದ ಸರಕಾರದೊಡನೆ ಸಹಕರಿಸಲಾಗದೆಂದೂ ಈ ನಿರ್ಣಯವು ಸಾರಿ ಹೇಳುತ್ತದೆ ಆದರೆ ಬ್ರಿಟಿಷರಿಗೆ ನಾವು ಕೇಡು ಬಗೆಯಲಾರೆವೆಂಬುದನ್ನು ಸ್ಪಷ್ಟಗೊಳಿಸಬಯಸುತ್ತೇನೆ. ಬ್ರಿಟನು ಪರಾಜಯ ಹೊಂದುವದು ನಮ್ಮ ಇಚ್ಛೆಯಿರುವದಿಲ್ಲ. ಆದರೆ ಸಧ್ಯಕ್ಕೆ ಅದು ಹೂಡಿದ ಯುದ್ಧದಲ್ಲಿ ಮಾತ್ರ ಕಾಂಗ್ರೆಸ್ಸಿನಿಂದ ಅದು ಯಾವ ಬಗೆಯ ಸಹಕಾರವನ್ನಪೇಕ್ಷಿಸಬಾರದು. ಬ್ರಿಟನು ಹೂಡಿದ ಈ ಜೀವನ ಮರಣಗಳ ಹೋರಾಟದಲ್ಲಿ ನಾವು ಸತ್ಯಾಗ್ರಹವನ್ನೂ ಹೂಡಲಾರೆವು. ಶತ್ರುಗಳ ಅಶಕ್ತತೆಯ ಲಾಭ ಪಡೆಯುವದರಲ್ಲಿ ಸತ್ಯಾಗ್ರಹಿಗೆ ವಿಶ್ವಾಸವಿರುವದಿಲ್ಲ. ನಮ್ಮ ಶಕ್ತಿ ಸಾಮರ್ಥ್ಯಗಳಿಂದಲೇ ನಮ್ಮ ಧ್ಯೇಯವನ್ನು ನಾವು ಸಾಧಿಸಿಕೊಳ್ಳತಕ್ಕವರು. ಅಂತೆಯೇ ನಾವು ಈಗ ಬ್ರಿಟಿಷರಿಗೆ ತೊಂದರೆ ಕೊಡಲಾರೆವೆಂದು ಹೇಳಿದ್ದೇವೆ.

ಗಾಂಧೀಜಿಯವರ ಭಾಷಣ!

"ಈ ದೇಶದಲ್ಲಿ ನಾಗರಿಕ ಮೂಲಭೂತ ಹಕ್ಕುಗಳ ರಕ್ಷಣೆಮಾಡಲು ಸ್ವಾತಂತ್ರ್ಯವಿರಬೇಕೆಂದು ಕಾಂಗ್ರೆಸು ಕೇಳುತ್ತಿದೆ. ಯುದ್ಧದ ಬಗ್ಗೆ ನಮಗೆ ಸರಿಯೆನಿಸಿದ್ದನ್ನು ಹೇಳಲು ನಮಗೆ ಸ್ವಾತಂತ್ರ್ಯವಿರತಕ್ಕದ್ದು. ಯುದ್ಧದಲ್ಲಿ ಹಿಂದುಸ್ಥಾನವು ಸಹಕರಿಸುವುದೆಂದು ಬ್ರಿಟಿಷ್ ಸರಕಾರವು ಹೇಗೆ ಹೇಳಬಲ್ಲದು? ಸ್ವಾಯತ್ತ ಪ್ರಾಂತಗಳನ್ನು ಕೂಡ ಕೇಳದೆ ಹಿಂದುಸ್ಥಾನವು ಯುದ್ಧದಲ್ಲಿ ತಮ್ಮೊಡನೆ ಸಹಕರಿಸುವದೆಂದು ಸಾರಿ ಬ್ರಿಟಿಷ್ ಸರಕಾರದವರು ಗುರುತರದಂಥ ತಪ್ಪು ಮಾಡಿರುವರು ಸರಕಾರದವರು ಹೀಗೆ ಸಾರಿದಾಗ ಪ್ರಾಂತಿಕ ಸ್ವಾಯತ್ತತೆಯು ಎಷ್ಟು ಟೊಳ್ಳುಪೊಳ್ಳಾಗಿರುವದೆಂಬುದರ ಅನುಭವ ನಮಗೆ ಬಂದಿತು ಕಾಂಗ್ರೆಸ್ ಮಂತ್ರಿಮಂಡಳಗಳು ರಾಜೀನಾಮೆ ಕೊಟ್ಟದ್ದಕ್ಕೂ ಇದೇ ಕಾರಣ. ಒಂದು ವರ್ಷದ ವರೆಗೆ ಒಳ್ಳೇ ತಾಳ್ಮೆಯಿಂದ ನಾವು ದಾರಿ ನೋಡಿದೆವು. ಅದರಿಂದ ನಮ್ಮ ಶಕ್ತಿ ಸಾಮರ್ಥ್ಯಗಳೂ ಬೆಳೆದಿದೆಯೆಂದು ನನಗನಿಸುತ್ತದೆ. ನನ್ನಲ್ಲಿಯಂತೂ ಶಕ್ತಿ ಸಾಮರ್ಥ್ಯ ಹೆಚ್ಚಿದೆ. ಕೊನೆಯಲ್ಲಿ ನಾವು ಮಾಡಿದ ಸೂಚನೆಯಿಂದಂತೂ ನಾವು ಶಕ್ಯವಿದ್ದಷ್ಟು ಹೆಚ್ಚು ಸಹಕಾರ ಕೊಟ್ಟಿದ್ದೆವು ಕಾಂಗ್ರೆಸ್ಸಿಗೆ ಅಧಿಕಾರ ದೊರಕಿಸಿ ಕೊಡುವದು ನಮಗೆ ಬೇಕಿರಲಿಲ್ಲ, ಆದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಂಪಾದಿಸುವದೇ ಕಾಂಗ್ರೆಸ್ಸಿನ ಗುರಿಯಾಗಿತ್ತು ಆದರೆ ಬ್ರಿಟಿಷ್ ಸರಕಾರದವರು. ವ್ಹಾಯಿಸರಾಯರವರನ್ನು ಹಿಂದುಸ್ಥಾನದಲ್ಲಿಯ ೩೦ ಕೋಟಿ ಜನರ ಒಡೆಯರನ್ನಾಗಿ ಮಾಡಿದರು ಇಂಥ ಪರಿಸ್ಥಿತಿಯನ್ನು ಯಾರು ಸಹಿಸಬಲ್ಲರು? ಒಬ್ಬ ಮನುಷ್ಯನಿಗೆ ಇಷ್ಟೊಂದು ಸರ್ವಾಧಿಕಾರ ಕೊಡುವದೇಕೆ? ವ್ಹಾಯಿಸರಾಯರ ಬಗೆ ವ್ಯಕ್ತಿಕವಾಗಿ ನನಗೇನೂ ಆಕ್ಷೇಪ ಇರುವದಿಲ್ಲ, ಅವರು ನನ್ನ ಗೆಳೆಯರಿರುವರು, ಯುದ್ಧದ ಬಗ್ಗೆ ನಮಗೆ ತೋಚಿದಂತೆ ಹೇಳಲು ಸಂಪೂರ್ಣ ಸ್ವಾತಂತ್ರ್ಯವಿರಲೇ ಬೇಕು. ನಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುವದಕ್ಕೆ ಅವಶ್ಯವಿದ್ದುದನ್ನು ನಾವು ಮಾಡಲು ಸ್ವತಂತ್ರರು ನಾವು ನಮ್ಮ ಸ್ವಾತಂತ್ರ್ಯವನ್ನು ಕೇಳುತ್ತಿರುವದಿಲ್ಲ. ಬ್ರಿಟಿಷರ ಸ್ವಾತಂತ್ರ್ಯವೇ ಈಗ ಗಂಡಾಂತರದಲ್ಲಿರುವಾಗ ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಅವರಿಗೆ ಹೇಗೆ ಕೇಳುವೆವು? ಈ ಹೋರಾಟದಲ್ಲಿ ನಮ್ಮೊಡನೆ ಸಹಕರಿಸಿರೆಂದು ಅವರು ನಮ್ಮನ್ನು ಕೇಳುತ್ತಿರುವರು. ಆದರೆ ಹಾಗೆ ಮಾಡುವದು ನಮಗೆ ಶಕ್ಯವಿಲ್ಲದ್ದಕ್ಕಾಗಿ ನಾವು ವಿಷಾದಿಸುತ್ತೇವೆ

"ಜರ್ಮನಿ, ಇಟಲಿ ಇಲ್ಲವೆ ಜಪಾನಗಳ ಬಗ್ಗೆ ನನಗೆ ಯಾವ ಭೀತಿಯೂ ಇರುವದಿಲ್ಲೆಂದು ನಾನು ಒಳ್ಳೇ ನಮ್ರತೆಯಿಂದ ಹೇಳಲಿಕ್ಕೆ ಬೇಕಾಗುವದು. ಸತ್ಯಾಗ್ರಹಿಗೆ ಯಾರ ಭೀತಿಯೂ ಇಲ್ಲ ಬ್ರಿಟಿಷರು ಪರಾಜಯ ಹೊಂದಬೇಕೆಂದು ನಾನು ಬಯಸುವದಿಲ್ಲ ಅವರ ಧೈರ್ಯವನ್ನು ನಾನು ಪ್ರಶಂಸಿಸುತ್ತೇನೆ ಆದರೆ ಬ್ರಿಟಿಷರು ಈ ದೇಶವನ್ನು ಬಿಟ್ಟುಹೋದ ಕೂಡಲೆ ನನ್ನ ರಕ್ಷಣೆ ಮಾಡಿಕೊಳ್ಳದಷ್ಟು ನಾನು ಅಸಮರ್ಥನಿದ್ದರೆ ಸ್ವಾತಂತ್ರ್ಯದ ಹಕ್ಕು ನನಗಿಲ್ಲೆಂದೂ ನಾನು ಹೇಳಲೇ ಬೇಕಾಗುವದು.

"ಯೂರೋಪಿನಲ್ಲಿಯ ಯುದ್ಧವು ಅತ್ಯಂತ ಅಮಾನುಷ ರೀತಿಯಿಂದ ನಡೆದಿದೆ ಇಂಥ ಯುದ್ಧದಲ್ಲಿ ನಮ್ಮ ಸಹಕಾರವನ್ನು ಅವರು ಅಪೇಕ್ಷಿಸಕೂಡದು ಅವರೆಲ್ಲರಿಗೆ ಒಳಿತಾಗಲೆಂದು ನಾನು ಬಯಸುವೆನು ಆದರೆ ನನ್ನೀ ಶಬ್ದಗಳು ಅವರ ಕಿವಿಗೆ ಮುಟ್ಟುವದಾದರೆ, ನೀವೆಲ್ಲರೂ ಒತ ಬದಿಗೆ ಮಾಡಿಕೊಂಡು ಶಾಂತಿಯ ದಾರಿ ಇರುವುದಿಲ್ಲೆಂದು ನಾನು ಹೇಳಬಯಸುವೆನು ಎಪ್ಪಾದರೂ ಅವರು ಒಬ್ಬ ಯುರೋಪ ರಾಷ್ಟ್ರದ ಜನಾಂಗಕ್ಕೆ ಸೇರಿದವರು ಹಿಂದುಸ್ಥಾನವನ್ನು ಗೆಲ್ಲುವುದಕ್ಕಾಗಿ ಈ ಯುದ್ಧ ಹೂಡಲ್ಪಟ್ಟಿಲ್ಲ ಹಿಂದುಸ್ಥಾನದಲ್ಲಿ ಒಬ್ಬನೇ ಒಬ್ಬ ನಿಜ ಕಾಂಗ್ರೆಸ್ಸಿಗನು ಜೀವಂತನಾಗಿರುವ ವರೆಗೆ ಅವನ ಈ ದೇಶವು ಭಾರತೀಯರದು, ಮತ್ತು ಯಾವಾಗಲೂ ಭಾರತೀಯರದೇ ಉಳಿಯುವದೆಂದು ಅವನು ಸಾರಿ ಸಾರಿ ಹೇಳುವನು. ಹೊರಗಿನಿಂದ ಯಾರಾದರೂ ದಾಳಿಮಾಡಬಯಸಿದರೆ ಅದನ್ನು ತಡೆಯಲು ಹಸನ್ಮುಖನಾಗಿ ಸಾಯಲು ಕೂಡ ನಾನು ಸಿದ್ಧನಿರುವೆನು. ದಾಳಿಗಾರರ ವಿರುದ್ಧ ನಮಗೆ ಯಾವದೇ ಬಗೆಯ ದ್ವೇಷ ಭಾವನೆಯಿರುವದಿಲ್ಲ. ಸೆಂಟಪಾಲ್ಸಿನ ಮೇಲೆ ಬಾಂಬುಗಳನ್ನು ಒಗೆದರೆಂಬದನ್ನು ಓದಿದ ಕೂಡಲೆ ನನಗೆ ಅತ್ಯಂತ ದುಃಖವಾಯಿತು. ಜುಮ್ಮ ಮಸೀದೆಯ ಮೇಲೆ ಇಲ್ಲವೆ ಕಾಶಿ ವಿಶ್ವನಾಥ ಮಂದಿರದ ಮೇಲೆ ಬಾಂಬು ಬಿದ್ದರೆ ಆಗುವಷ್ಟು ದುಃಖ ನನಗಾಯಿತು.

[೧೩ನೇ ಪುಟದಿಂದ ನೋಡಿರಿ.]

ನೋಟಿಸು.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್,
ಪೆಂಟ್ಲಾಂಡ್ ಪೇಟೆ; ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ದಿ ಜವಾಹರ ಬೇಂಕ್ (ರಿಜಿಸ್ಟರ್ಡ್) ಮತ್ತು ದಿ ಅತ್ತೂರ್ ಎಂಡ್ ಜವಾಹರ ಬೇಂಕ್ ಲಿಮಿಟೆಡ್ ಪೆಂಟ್ಲಾಂಡ್‌ಪೇಟೆ ಮಂಗಳೂರು ಈ ಬೇಂಕುಗಳಲ್ಲಿ ಚಿನ್ನಾಭರಣಗಳ ಆಧಿನ ಮೇಲೆ ಸಾಲಪಡಕೊಂಡ ನಂತರ ಕ್ಲಪ್ತ ವ್ಯಾಧಿಗೆ ಬಡ್ಡಿ ಕೊಡದೆ ಬಾಕಿಮಾಡಿರುವುದರಿಂದ, ಬಡ್ಡಿಯನ್ನು ಕಟ್ಟುವರೆ ಅವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ ಕೆಲವು ಜಾರಿಯಾಗದೆಯು ಇನ್ನು ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾರೀಕು 26 9—1940ನೇ ಗುರುವಾರ ದಿವಸ ಯಾ ಅದಕ್ಕಿಂತ ಮೊದಲೇ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟಿಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ತಾರೀಕು 28 9 1940ನೇ ಶನಿವಾರ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾನ್ನ ಘಂಟೆ ೩ಕ್ಕೆ ಬಹಿರಂಗವಾಗಿ ಏಲಂ ಮಾಡಲ್ಪಡುವುದು

	ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1	149 37 12 5 37	ನಾಗಪ್ಪ ಶೆಟ್ಟಿ S/o ಕೊರಗ ಶೆಟ್ಟಿ, ದೇರೆಬೈಲು ಗೇರುಬೀಜದ ಕಂಪನಿ ಬಳಿ P O ದೇರೆಬೈಲು	
2	11?7 ? 5 ? 38	ಸೋಮಪ್ಪ ಶೆಟ್ಟಿ N/o ಲಿಂಗುಭಂಡಾರಿ ತಾಳಿಪಾಡಿ ಅಗ್ಗಿಪಾಡಿ ಗ್ರಾಮ P O ಗುರುಪುರ	[illegible]
3	534-39 29 4 39	ಪೊರಲು ?o ಬಬ್ಬು ಉರುವ ವಯರ್‌ಲೆಸ್ ಮೈದಾನ್ P O ಉರುವ ಮಂಗಳೂರು	6
4	627 39 11 5 39	ಬಿ ಬಾಲು S/o ಪಕೀರ, ಬಜ್ಪೆ P. O ಬಜ್ಪೆ ಮಂಗಳೂರು	6
5	676 39 19 5-39	ರೋಮನ್ ಬಾಯಿ D/o ದೂಜೆ ಫೆರ್ನಾಂಡೀಸ್ ಉರುವ ವಯರ್‌ಲೆಸ್ ಮೈದಾನ್, ಮಂಗಳೂರು	12
6	790 39 8 6-39	ಶೇಕ್ ಸುಲೇಮಾನ್ ಸಾಹೇಬ್ S/o ಶೇಕ್ ಇಮಾಮ್ ಸಾಹೇಬ್, ತಣ್ಣೀರುಬಾವಿ ಗ್ರಾಮ P O ಪಣಂಬೂರು	6
7	821-39 12-6 39	ಸುಂದ D/o ಮಂಜುನಾಥ, ಉರುವ ಮಾರಿಗುಡಿ ಬಳಿ, P O ಉರುವ ಮಂಗಳೂರು	6
8	1178 39 10-8-39	ಸುಂದ D/o ಮಂಜುನಾಥ, ಉರುವ, ಪೆಂಟ್ಲಾಂಡ್‌ಪೇಟೆ ಅಪ್ಪಯ್ಯಗಟ್ಟಿ ಮನೆ ಬಳಿ, ಮಂಗಳೂರು	5
9	1239 39 24 8 39	ಮಾಂಕು ಶೆಟ್ಟಿ S/o ಸುಬ್ಬ ಶೆಟ್ಟಿ, ಕೊಡಿಯಾಲಬೈಲು ಲಚ್ಚಿಲು ಸಮೀಪ, ಮಂಗಳೂರು	5
10	1431-39 26-9 39	ಕೂಸಪ್ಪ ಶೆಟ್ಟಿಗಾರ S/o ಸೇಸು ಶೆಟ್ಟಿಗಾರ, ಮಗ್ಗದ ಕೆಲಸ ಬೆಂದೂರು, ಸಿಲ್ವಸಿಕೇರರ ಮಗ್ಗದ ಆಫೀಸು, P O ಕಂಕನಾಡಿ	6
11	1442-39 28-9-39	ಪೂವಪ್ಪ ಪಂಡಿತ N/o ಅಂತಪ್ಪ, ದೇರೆಬೈಲು ಗ್ರಾಮ, ಕೊಟ್ಟಾರ, P. O. ಬಜ್ಪೆ	5
12	1539-39 13-10-39	ಪೂವಪ್ಪ ಪಂಡಿತ S/o ನಾರಾಯಣ ಭಂಡಾರಿ, ದೇರೆಬೈಲು ಗ್ರಾಮ, ಕೊಟ್ಟಾರ, P O. ಬಜ್ಪೆ.	6
13	1667-39 14-11-39	ಗೋಪಾಲ N/o ಬೊಗ್ಗು ಪೂಜಾರಿ, ಟೈಲರ್ ತಾಲೂಕು ಪೋಲೀಸ್‌ಸ್ಟೇಶನ್ ಬಳಿ, ಮಂಗಳೂರು.	9
14	1758-39 7-12-39	ಎಮ್. ನಾಣಿಕ್ಕ N/o ಕೊರಗ ದೇವಡಿಗ, ಮಣ್ಣಗುಡ್ಡ, ಮಂಗಳೂರು.	8
15	1798-39 15-12-39	ನಾರ್ಣಪ್ಪ ದೇವಡಿಗ N/o ಕೊರಗ ದೇವಡಿಗ, ಮಣ್ಣಗುಡ್ಡ, ಬರ್ಕೆ, ಮಂಗಳೂರು.	5

Office of the Bank,
Pentlandpet,
Mangalore.
17—9—1940.

B. Narayana Shetty,
Agent,
The Attur & Jawahar Bank, Ltd.,
Pentlandpet, Mangalore.

ವಿಚಿತ್ರ ಪ್ರಪಂಚ

ಗುಂಡಿಗೆ ಬಾಯಿಕೊಡುವ ಇಂದ್ರಜಾಲ ವಿದ್ಯೆ

ಅಮೇರಿಕದ ಥಿಯೋಡರ ಎನ್ನಿಮನ್ ಎಂಬವನು ಒಂದು ಅದ್ಭುತ ಇಂದ್ರಜಾಲ ವಿದ್ಯೆಯನ್ನು ಪ್ರದರ್ಶಿಸುತ್ತಿರುವನು. ಜನರೇ ಗುಂಡು ತುಂಬಿಸಿ ಅವರೇ ಹಾರಿಸಿದ ಬಂದೂಕಿನ ನಳಿಗೆಯಿಂದ ಹೊರಟ ಬಿಸಿಬಿಸಿ ಗುಂಡನ್ನು ಸ್ವಲ್ಪ ದೂರದಲ್ಲಿ ನಿಂತು, ಸಾವಿರಾರು ಪ್ರೇಕ್ಷಕರು ನೋಡುತ್ತ ಹಾಗೆಯೇ ಬಾಯಿಯಲ್ಲಿ ಹಿಡಿದು ಅದರ ಬಿಸಿ ಆರುವ ಮೊದಲೇ ಅದನ್ನು ಪ್ರೇಕ್ಷಕರಿಗೆ ತೋರಿಸುವ ಅವನ ಈ ಅದ್ಭುತ ವ್ಯಾಪಾರವನ್ನು ಕಂಡು ಸರಕಾರದ ಉಚ್ಚ ಅಧಿಕಾರಿಗಳು ಕೂಡ ಆಶ್ಚರ್ಯ ಸಾಗರದಲ್ಲಿ ಮುಳುಗಿ ಹೋಗಿರುವರು! ಅವನು ಯಾವ ರೀತಿಯಲ್ಲಿ ಈ ಚಮತ್ಕಾರವನ್ನು ಮಾಡಿ ತೋರಿಸುತ್ತಾನೆಂಬುದು ಇದುತನಕ ಯಾರಿಗೂ ತಿಳಿದಿರುವುದಿಲ್ಲ!

ತಂದೆಯ ಕಾಮುಕ್ಕೆ ಮಗನ ಬಲಿ

ಹಿಂದುಸ್ಥಾನದ ಇತಿಹಾಸದಲ್ಲೇ ಅದ್ಭುತವೂ ವಿಚಿತ್ರವಾದ ಒಂದು ದಾವೆಯ ಇತ್ಯರ್ಥವು ಕೆಲ ದಿನಗಳ ಹಿಂದೆ ನಾಗಪುರದ ಸೆಶ್ಶನ ಕೋರ್ಟಿನಲ್ಲಿ ಆಯಿತು. ಅತಿ ಕಾಮಿಯಾದ ಗೋವರ್ಧನದಾಸನೆಂಬ ಒಬ್ಬ ತಂದೆ ಪ್ರಾಯಭರಿತನಾದ ಮಗನಿಗೆ ಒಬ್ಬ ಹುಡುಗಿಯನ್ನು ತಂದು ಮದುವೆ ಮಾಡುವ ವಿಚಾರದಲ್ಲಿ ಮಗನೊಂದಿಗೆ ಜಗಳಾಡಿ ಅವನನ್ನು ಕೊಂದು ಹಾಕಿದನೆಂದು ಪೋಲೀಸರು ಫಿರ್ಯಾದಿ ಮಾಡಿದ್ದರು. ಮಗನಿಗೆ ಮದುವೆ ಮಾಡಲಿದ್ದ ಹುಡುಗಿಯನ್ನು ಗೋವರ್ಧನದಾಸನು ತನಗಾಗಿ ಅಪೇಕ್ಷಿಸಿ ಮಗನನ್ನು ಕೊಂದದ್ದು ನಿಜವೆಂದು ರುಜುವಾತಾಗಿ ಕೋರ್ಟಿನವರು ಅವನಿಗೆ ಮರಣಾಂತ ಶಿಕ್ಷೆಯನ್ನು ವಿಧಿಸಿರುವರು.

ಹುಟ್ಟುಗುಣ ಗಟ್ಟಹತ್ತಿದರೂ ಹೋಗದು

ಪ್ರಪಂಚದಲ್ಲಿರುವ ಕೆಲವು ಜನರ ಸ್ವಭಾವವು ವಿಚಿತ್ರವಿರುತ್ತದೆ. ಅನುಕೂಲ ಪ್ರತಿಕೂಲ ಎಷ್ಟು ಘಟನೆಗಳು ಘಟಿಸಿದರೂ ಅವರ ಹುಟ್ಟುಗುಣ ಬೇರೆ ಒದಗುವುದಿಲ್ಲ. ಇಂಥ ಜನರನ್ನು ನೋಡಿಯೇ ಪೂರ್ವಜರು —'ಗಟ್ಟ ಹತ್ತಿದರೂ ಹುಟ್ಟುಗುಣ ಹೋಗದು' ಎಂಬ ಗಾದೆ ಮಾತನ್ನು ಕಟ್ಟಿರಬಹುದು. ಭಯಂಕರವತ್ತು ಪ್ರಚಂಡ ಯುದ್ಧದ ಬೇಗೆಯನ್ನು ಸಹಿಸಲಾರದೆ ಹಿಂದುಸ್ಥಾನದ ಆಶ್ರಯವನ್ನು ಕೋರಿ ಬಂದ ಒಬ್ಬ ಇಂಗ್ಲಿಷ್ ಮಹಿಳೆ ಉತ್ತರ ಭಾರತದ ಒಂದು ರೈಲ್ವೆ ಗಾಡಿಯ ಎರಡನೆ ತರಗತಿಯ ಡಬ್ಬಿಯಲ್ಲಿ ಪ್ರಯಾಣ ಮಾಡುತ್ತ, ಅದೇ ತರಗತಿಯ ಟಿಕೇಟ ಪಡೆದು ಆ ಕೋಣೆಗೆ ಬಂದಿದ್ದ ಒಬ್ಬ ಬಂಗಾಳಿ ಮಹಿಳೆಗೆ ಪ್ರವೇಶವನ್ನು ನಿರಾಕರಿಸಿ ತಾನು ಭಾರತವನ್ನು ಆಳುವ ಜನಾಂಗಕ್ಕೆ ಸೇರಿದ ಉಚ್ಚಳು ಎಂಬ ಹೆಮ್ಮೆಯ ಭಾವವನ್ನು ತೋರಿಸಿದಳಂತೆ! ಆಳುವ ಜನಾಂಗಕ್ಕೆ ಸೇರಿದವಳಾದರೂ ತನ್ನ ಜೀವರಕ್ಷಣೆಗಾಗಿ ಆಳಿಸಿಕೊಳ್ಳುವ ಜನಾಂಗದ ಆಶ್ರಯದಲ್ಲಿದ್ದಾಳೆಂಬುದೂ ಆ ಇಂಗ್ಲೀಷ್ ಸ್ತ್ರೀಯ ಮನಸ್ಸಿಗೆ ಹೊಳೆಯಲಿಲ್ಲ. ವಿಚಿತ್ರ ಬುದ್ಧಿ!

ಲಕ್ನೋವಿನ ಶ್ರೀಮಂತ ಭಿಕ್ಷುಕ

ಲಕ್ನೋವಿನಲ್ಲಿ ಚುಟ್ಟಾನ ಎಂಬ ಒಬ್ಬ ಶ್ರೀಮಂತ ಭಿಕ್ಷುಕನಿದ್ದಾನೆ. ಅವನ ಒಂದು ದಿನದ ಸಂಪಾದನೆ, ಸಾಧಾರಣ ಒಬ್ಬ ಡೆಪ್ಯುಟಿ ಕಲೆಕ್ಟರ್, ಜಿಲ್ಲಾ ಮುನ್ಸಿಫನದಷ್ಟು ಇರುತ್ತದೆ. ಅಷ್ಟು ಹಣವನ್ನು ಅವನು ಭಿಕ್ಷೆ ಬೇಡಿಯೇ ಸಂಪಾದಿಸುತ್ತಾನೆ. ಅವನೀಗ ಲಕ್ನೋದ ಒಂದು ಕೋರ್ಟಿನಲ್ಲಿ ಮಖನ್‌ಲಾಲ್ ಎಂಬವನ ಮೇಲೆ ಒಂದು ಫಿರ್ಯಾದಿ ದಾಖಲು ಮಾಡಿರುವನು.

ದಿನದ ಭಿಕ್ಷೆಯನ್ನು ತೀರಿಸಿ ತನ್ನ ಗುಡಿಸಲಿಗೆ ಹಿಂತಿರುಗುತ್ತಿದ್ದಾಗ ಮಖನಲಾಲನು ಇವನನ್ನು ಸಂಧಿಸಿ, ಆ ದಿನ ಸಂಪಾದಿಸಿದ್ದ ೪೦ ರೂಪಾಯಿಗಳನ್ನು ಲೂಟಿ ಮಾಡಿದನಂತೆ. ದಾರಿಗರು ಪಲಾಯನ ಮಾಡುತ್ತಿರುವ ಮಖನಲಾಲನನ್ನು ಬೆನ್ನು ಹಿಡಿದು ಪೋಲೀಸರ ವಶಮಾಡಿದರು. ಫಿರ್ಯಾದಿಯ ದಾನಶೀಲತೆ ಎಷ್ಟಿದೆ ಎಂಬುದು ಚುಟ್ಟಾನನ ಒಂದು ದಿನದ ೪೦ ರೂಪಾಯಿಗಳ ಸಂಪಾದನೆಯಿಂದ ತಿಳಿಯುತ್ತದೆ. ಜನರು ಇಷ್ಟು ದಾನಶೀಲರಾಗಿದ್ದರೂ, [illegible] ವಿಚಾರ ಮಾಡದೆ ದಾನ ಮಾಡುತ್ತಿರುವುದರಿಂದ ಅವರ ದಾನವು ಸತ್ಪಾತ್ರವನ್ನು [illegible]

ಅಂಧವಿಶ್ವಾಸದ ಪರಮಲೀಲೆ

ಅಮೇರಿಕವು ಒಂದು ವಿಚಿತ್ರ ರಾಜ್ಯ. ಅಲ್ಲಿ ಎಲ್ಲಾ ಬಗೆಯ ವಿಚಿತ್ರ ಸಂಗತಿಗಳು ಕಾಣಲಿಕ್ಕೆ ಸಿಕ್ಕುತ್ತವೆ. ಅಲ್ಲಿಯ ಜನರು ಬಹಳ ನಾಗರಿಕರೆಂದು ಹೆಚ್ಚು ಪ್ರಸಿದ್ಧರಾಗಿದ್ದರಾದರೂ, ಆ ದೇಶದಲ್ಲಿ ನಡೆಯುತ್ತಿರುವ ಕೆಲವು ಸಂಗತಿಗಳಿಂದ ಒಮ್ಮೊಮ್ಮೆ ಅವರು ತೀರ ಅನಾಗರಿಕರಿಗಿಂತಲೂ ಕೀಳಾಗಿ ಕಾಣುತ್ತಾರೆ. ಕೆಲವೇ ವರ್ಷಗಳ ಹಿಂದೆ ನಡೆದಿರುವ ಘಟನೆ ಇದು. ತನ್ನನ್ನೂ ತನ್ನ ೧೩ ವರ್ಷದ ಒಬ್ಬ ಬಾಲಿಕೆಯನ್ನೂ ಕುದಿಯುತ್ತಿರುವ ಎಣ್ಣೆಯ ಕಾವಲಿಯಲ್ಲಿ ಮುಳುಗಿಸಿ ದೇವರಿಗೆ ಬಲಿಕೊಡಲಿಕ್ಕೆ ಊರ ಜನರು ಪ್ರಯತ್ನಿಸುತ್ತಿರುವರಾಗಿ ಒಬ್ಬ ನಿಗ್ರೋ ಜಾತಿಯ ಹೆಂಗಸು ಪೋಲೀಸರಿಗೆ ದೂರು ಕೊಟ್ಟಳು. ಪೋಲೀಸರು ತನಿಖೆಮಾಡಿ ನೋಡಿದಾಗ ಅವಳ ಮಾತು ಸತ್ಯವೆಂದು ಕಂಡಿತು. ಅವಳ ಗಂಡನು ಮನೆಯಲ್ಲಿ ದೊಡ್ಡದೊಂದು ಕಾವಲಿಯಲ್ಲಿ ಎಣ್ಣೆಯನ್ನು ಕಾಯಿಸುತ್ತ ಇದ್ದ. ಅವರು ಹೋಗಿ ಆತನನ್ನು ಎಣ್ಣೆ ಕುದಿಸುತ್ತಿದ್ದಾಗಲೇ ಕೈದು ಮಾಡಿದರು. ಹೆಂಡತಿ ಮಕ್ಕಳನ್ನು ಬಲಿಕೊಡುವಷ್ಟು ಅಮೇರಿಕದಲ್ಲಿ ಅಂಧವಿಶ್ವಾಸವಿದೆ!

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ

PHYSICAL FITNESS
is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist, U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ- ಕನ್ನಡ
ಸ್ಥಳೀಯ ಸ್ಟೋಕಿಸ್ಟರು. (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಪಟ್ಟಾಭಿಷೇಕವಾಗಲು ಕನ್ನಡ ನಾಡೇ ನಲಿಯಿತು!

ಮೈಸೂರಿನ ಹೊಸ ಅರಸರ ರಮ್ಯ ಜೀವನ

[ಈ ತಿಂಗಳ ಆರಲ್ಲಿ ಮೈಸೂರು ಪಟ್ಟದಲ್ಲಿ ಶ್ರೀ ಜಯಚಾಮರಾಜ ಒಡೆಯರು ವಿರಾಜಮಾನರಾದರು. ಈ ಸುಮುಹೂರ್ತದಲ್ಲಿ ಮೈಸೂರು ಮಾತ್ರವಲ್ಲ ಅಖಿಲ ಕನ್ನಡ ನಾಡೇ ನಲಿಯಿತು. ಹೊಸ ಅರಸರು ವಿಶಾಲಮತಿಗಳು; ಪ್ರಜೆಗಳೊಡನೆ ಕೂಡಿ ಕಲಿತು ಬೆಳೆದವರು. ಪ್ರಪಂಚದ ಅನುಭವ ಮಾಡಿಕೊಂಡವರು. ಇವರ ಕಾಲದಲ್ಲಿ ಮೈಸೂರು ಹೊಸ ಉತ್ಸಾಹದಿಂದ ಮೆರೆಯಬಹುದೆಂಬ ಆಸೆ ಎಲ್ಲರಿಗಿದೆ. ಪಾಶ್ಚಾತ್ಯ ದೇಶಗಳನ್ನೂ ಸುತ್ತಿ ಬಂದ ಮಹಾರಾಜರು ಮೈಸೂರು ರಾಜಕೀಯದಲ್ಲಿ ಸುವ್ಯವಸ್ಥೆಯನ್ನು ತಂದಿರಿಸಿ ನ್ಯಾಯವಾಗಿ ಸಲಬೇಕಾದ ಜವಾಬ್ದಾರಿ ಸರಕಾರವನ್ನು ಕೊಡಲು ಮನಸ್ಸು ಮಾಡುವರೆಂದು ಪ್ರಜೆಗಳು ಹಾತೊರೆಯುತ್ತಿದ್ದಾರೆ. ಭಗವಂತನು ಅವರಿಗೆ ಸುಮತಿಯನ್ನೂ ಆಯುರಾರೋಗ್ಯಗಳನ್ನೂ ದಯಪಾಲಿಸಲಿ!]

ಶ್ರೀ ಜಯಚಾಮರಾಜ ಒಡೆಯರವರು ಸ್ವರ್ಗಸ್ಥರಾದ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರ ಏಕಮಾತ್ರ ಪುತ್ರರು. ೧೮–೭–೧೯೧೯ರಲ್ಲಿ ಅವರ ಜನನವಾಯಿತು. ಯೂರೋಪಿನ ಸಂಗ್ರಾಮವು ಮುಗಿದು ಬ್ರಿಟಿಷರ ವಿಜಯದಲ್ಲಿ ಮುಕ್ತಾಯವಾದ ಸಮಯ. ಅದರ ಸೂಚಕವಾಗಿಯೇ 'ಜಯ' ಎಂಬ ಪೂರ್ವಪದವು ರಾಜಕುಮಾರರ ಹೆಸರಿಗೆ ಸೇರಿಸಲ್ಪಟ್ಟಿತು. ಇವರ ಬಾಲ್ಯ ಶಿಕ್ಷಣಕ್ಕಾಗಿಯೇ ಅರಮನೆಯಲ್ಲಿ ಪ್ರತ್ಯೇಕ ಶಾಲೆಯೊಂದು ನಿರ್ಮಾಣವಾಯಿತು. ವಿದ್ಯಾಭ್ಯಾಸ ಮುಂದುವರಿದು ರಾಜಕುಮಾರರು ಎಸ್. ಎಸ್. ಎಲ್. ಸಿ ಪರೀಕ್ಷೆ ಮಾಡಿದರು

ಸಾಮಾನ್ಯ ಪ್ರಜೆಯಂತೆ ಶಿಕ್ಷಣ

ಆನಂತರ ಅವರು ಸಾಮಾನ್ಯ ಪ್ರಜೆಗಳ ಮಕ್ಕಳಂತೆಯೇ ತಾವೂ ಇಂಟರ್ ಮೀಡಿಯಟ್ ಕಾಲೇಜನ್ನು ಸೇರಿದರು. ಅರಸುಕುಮಾರರೆಂದು ಅವರ ವಿಚಾರದಲ್ಲಿ ಯಾವ ವಿಶೇಷ ಗಮನವನ್ನೂ ಕೊಡಲಿಲ್ಲ. ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು

ಕಾಲೇಜಿಗೆ ಸೇರಿದರೆ. ಇತಿಹಾಸ, ರಾಜನೀತಿ ಮತ್ತು ಅರ್ಥಶಾಸ್ತ್ರ ಈ ಮೂರು ವಿಷಯಗಳನ್ನು ತಮ್ಮ ವಿಶೇಷ ಅಧ್ಯಯನಾಂಗಗಳನ್ನಾಗಿ ತೆಗೆದುಕೊಂಡರು. ರಾಜನೀತಿ, ಆಡಳಿತ ಶಾಸ್ತ್ರಗಳಲ್ಲಂತೂ ವಿಶೇಷ ಆಸಕ್ತಿ ತೋರಿಸಿದರು

ಇತಿಹಾಸಾಧ್ಯಯನದಲ್ಲಿ, ಅದರಲ್ಲೂ ಇಂದಿನ ಸಮಸ್ಯೆಗಳ ವಿಚಾರದಲ್ಲಿ ಭಾರತೀಯ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳ ಪರೀಕ್ಷೆಯಲ್ಲಿ ಶ್ರದ್ಧಾಶಕ್ತಿ ಅಪಾರ. ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ಗೌರವಾಧ್ಯಕ್ಷರನ್ನಾಗಿ ಮಹಾರಾಜರನ್ನು ಏಕವಾಕ್ಯದಿಂದ ಆರಿಸಿದರು. ಸಂಘದ ಅಧ್ಯಕ್ಷರಾಗಿ ಅವರು ಆರಂಭಭಾಷಣ ಮಾಡಿದರು 'ಚೀನ ಜಪಾನ್ ಯುದ್ಧ ಭವಿಷ್ಯ ನುಡಿದರು'

ಪ್ರಭುಗಳ ಔದಾರ್ಯ

ಆಧುನಿಕ ಕನ್ನಡ ಸಾಹಿತಿಗಳ ಕೆಲಸದಲ್ಲೂ ಇವರ ಆಸಕ್ತಿ ಹೆಚ್ಚು. ಕರ್ನಾಟಕ ಸಾಂಸ್ಕೃತಿಕ ಏಕೀಕರಣ ಪ್ರಯತ್ನದಲ್ಲೂ ಇವರು ಶ್ರದ್ಧಾಳುಗಳು. ಇವರು ವಿದ್ಯಾರ್ಥಿಗಳ ಪ್ರತಿಯೊಂದು ಪ್ರಯತ್ನಕ್ಕೂ, ಸಂಸ್ಥೆಗೂ ಉದಾರವಾಗಿ ಧನಸಹಾಯ ಮಾಡುತಿದ್ದರು. ರಾಜರಂತೆ ಕೊಡುತಿದ್ದರು. ಮಹಾರಾಜರ ವಿದ್ಯಾರ್ಥಿ ಜೀವನದ ಸವಿನೆನಪಿಗೆ ಇಂದಿಗೂ ವಿಶ್ವವಿದ್ಯಾನಿಲಯ ಸಂಘದ ವಾಚನಾಲಯವು ದೊಡ್ಡ ಸ್ಮಾರಕವೆನಿಸಿ ನಿಂತಿದೆ. ಅವರಿತ್ತ ರಾಜಯೋಗ್ಯವಾದ ಹಣದಿಂದ ಅದನ್ನು ಆಧುನಿಕ ಸಾಧನಗಳಿಂದ ಅನುಗೊಳಿಸಲು ಸಾಧ್ಯವಾಯಿತು.

ತೃಪ್ತಿಯಿಲ್ಲದ ಜ್ಞಾನದಾಹ

— ಮಹಾರಾಜರು ಕಾಲೇಜಿನಲ್ಲಿ ಅಧ್ಯಾಪಕರ ಮೂಲಕವಾಗಿ ಬಂದ ಜ್ಞಾನದಿಂದಲೇ ತೃಪ್ತರಾಗುತ್ತಿರಲಿಲ್ಲ. ಗ್ರಂಥಗಳ ಅಧ್ಯಯನ [illegible] ಒಂದು ಪ್ರತ್ಯೇಕ 'ಲೈಬ್ರರಿ' ಇದೆ. ಗ್ರಂಥಾವಲೋಕನ ಕಾರ್ಯದಲ್ಲಿ ಅವರು ಬಹಳ ಮಟ್ಟಿನ ಅಭಿರುಚಿ ಮತ್ತು ವಿವೇಕವನ್ನು ವ್ಯಕ್ತಗೊಳಿಸುತಿದ್ದರು. ತಮಗೆ ಯಾವ ಯಾವ ವಿಚಾರಗಳಲ್ಲಿ ಆಸಕ್ತಿ ಹೆಚ್ಚೋ ಅವುಗಳಲ್ಲಿ ತಮ್ಮ ಅಧ್ಯಾಪಕರೊಂದಿಗೆ ಚರ್ಚೆ ನಡೆಸುತಿದ್ದರು.

ಪ್ರತಿ ನಿತ್ಯವೂ ಅವರು ಬೆಳಗ್ಗೆ ಬಹು ಬೇಗ ಏಳುವರು. ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿ ಅಧ್ಯಯನಕ್ಕಾರಂಭಿಸುವರು. ಕ್ಷಣ ಪುರುಸತ್ತಿಲ್ಲದೆ ದಿನವಾದ್ಯಂತವೂ ಕೆಲಸಮಾಡುವರು. ಸಂಗೀತಾಭ್ಯಾಸ, ಹಿಂದೀ ಶಿಕ್ಷಣ, ಪ್ರಾರ್ಥನೆ ಮತ್ತು ಧರ್ಮಸಂಬಂಧವಾದ ಕೆಲವು ವ್ಯಾಯಾಮಗಳು ಮತ್ತು ಪಾಠಗಳು, ನಾನಾ ಬಗೆಯ ಆಟಪಾಟಗಳು. ಹೀಗೆ ಲೆಕ್ಕವಿಲ್ಲದಷ್ಟು ಕಾರ್ಯಕಲಾಪಗಳು ಅವರದು. ಟೆನ್ನಿಸ್, ರ್ಯಾಕೆಟ್ಸ್ ಅಂದರೆ ಅವರಿಗೆ ವಿಶೇಷ ಆಶೆ. ಕಾಲ ತಪ್ಪಿ ಒಂದು ದಿನವಾದರೂ ಶಾಲೆಗಾಗಲಿ ಕಾಲೇಜಿಗಾಗಲಿ ಹೋದವರಲ್ಲ. ರಾಜಕುಮಾರರಿಗೆ ಯೋಗ್ಯವೆನಿಸಿದ ಸರ್ವ ಕರ್ಮಗಳನ್ನೂ ಚಾಚೂ ತಪ್ಪದೆ ನಿತ್ಯವೂ ನಡೆಸುತಿದ್ದರು

ಮಹತ್ವಪೂರ್ಣ ವಿದ್ಯಾರ್ಥಿ ದೆಶೆ

ಅರಸುಕುಮಾರರು ಕಾಲೇಜಿನಲ್ಲಿ ಕಳೆದ ನಾಲ್ಕು ವರ್ಷಗಳು ಅವರ ಜೀವನದಲ್ಲಿ ಮಹತ್ವಪೂರ್ಣವಾದುವು. ತಮ್ಮ ಸಹಜ ವಿನಯ ಮತ್ತು ಗೆಳೆತನದಿಂದ ವಿದ್ಯಾರ್ಥಿಗಳನ್ನೆಲ್ಲ ಆಕರ್ಷಣ ಮಾಡಿಬಿಡುತ್ತಿದ್ದರು

ಅಧ್ಯಯನ ಶ್ರದ್ಧೆ, ಕಾಲೇಜಿನ ಅವರ ಜೀವನದಲ್ಲಿ ಪ್ರಧಾನವಾಗಿ ಎದ್ದು ಕಾಣುವುದು. ಮುಖ್ಯ ಸಂಸ್ಥಾನವೊಂದರ ಆಡಳಿತ ಸೂತ್ರಗಳನ್ನು ವಹಿಸುವವರಾಗಿ ಅದಕ್ಕೆ ತಕ್ಕ ಯೋಗ್ಯತಾ ಸಿದ್ಧಿ ಪಡೆಯಬೇಕೆಂಬ ಸಂಕಲ್ಪ ಮಾಡಿಬಿಟ್ಟಿದ್ದರು. ಅದನ್ನೂ ಸಾಧಿಸುವುದರಲ್ಲಿ ಸ್ಥಿರಚಿತ್ತರಾಗಿದ್ದರು

ಚನ್ನಾಗಿ ಮಾತನಾಡುವುದನ್ನೂ ಕಲಿಯಬೇಕು, ಚನ್ನಾಗಿ ಬರೆಯುವುದನ್ನೂ ಅಭ್ಯಾಸಮಾಡಬೇಕು, ಇದರ ಮೇಲೆ ತನ್ನ ಪ್ರಭಾವ ನಿಂತಿದೆಯೆಂಬುದನ್ನರಿತ ಅವುಗಳನ್ನು ಸಾಧಿಸಲು ಆರಂಭಿಸಿದರು. ಭಾಷಾಭ್ಯಾಸವನ್ನು ಬಹಳ ಚೆನ್ನಾಗಿ ಮಾಡಿದರು

ಭರತಖಂಡವನ್ನೆಲ್ಲ ಸುತ್ತಿ ಸುಳಿಯ ಮಾಡುತ್ತಿರುವ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಗ್ರಹಿಸುವುದರಲ್ಲಿ ಅಪಾರ ಆಸಕ್ತಿ ಇವರಿಗೆ. ಇದಕ್ಕಾಗಿ ಇತಿಹಾಸ, ಅರ್ಥಶಾಸ್ತ್ರ, ಆಡಳಿತ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಅಪಾರ ಸಾಹಿತ್ಯವನ್ನು ಓದಿದರು. ಈ ವಿಚಾರ ಚರ್ಚೆಗಳನ್ನು ತಮ್ಮ ಅಧ್ಯಾಪಕರೊಂದಿಗೆ ನಡೆಸುತ್ತಿದ್ದರು. ಸಾಂಪ್ರತ ಸಮಾಚಾರ ವಿಚಾರ ಚರ್ಚೆಗಳಲ್ಲೂ ಅವರಿಗೆ ಶ್ರದ್ಧೆ ಬಹಳ. ಅವರು ಮೊದಲನೆ ವರ್ಗದಲ್ಲಿ ಬಿ. ಎ. ಪಾಸಾದರು.

ಆಡಳಿತೆಯ ಅನುಭವ

ಬಿ. ಎ ಪರೀಕ್ಷೆಯಾದ ಮೇಲೆ ಅರಸುಕುಮಾರರಿಗೆ ನಾನಾ ಆಡಳಿತ ಶಾಖೆಗಳ ಕಾರ್ಯವಿವರಣೆಗಳ ಅನುಭವ ಪಡೆಯಲಿಕ್ಕಾಗಿ ಏರ್ಪಾಡು ನಡೆಸಲಾಯಿತು. ಇಂಡಿಯನ್ ಸಿವಿಲ್ ಸರ್ವಿಸಿನ ಶ್ರೀ ಎಲ್ವಿನ್‌ರವರನ್ನು ಮಹಾರಾಜರ ಸಹವಾಸಿಗಳನ್ನಾಗಿ ನೇಮಿಸಲಾಯಿತು. ಅವರು ಮೈಸೂರು ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಸಂಚಾರಮಾಡಿದರು.

ಮೈಸೂರಿನ ಮಹಾರಾಜರಾದ ಶ್ರೀ. ಜಯಚಾಮರಾಜ ಒಡೆಯರು

ರೈತರೊಂದಿಗೆ ನಿಕಟ ಸಂಬಂಧವನ್ನು ಉಂಟುಮಾಡಿಕೊಂಡರು. ಆಡಳಿತೆಯ ಸಕಲ ಶಾಖೆಗಳ ಅನುಭವವನ್ನು ಮಾಡಿಕೊಂಡರು

ವಿವಾಹ

೧೯೩೮ನೆಯ ಮೇ ತಿಂಗಳಲ್ಲಿ ಚರಖಾರಿ ಸಂಸ್ಥಾನದ ಮಹಾರಾಜರ ಸಹೋದರಿ ಶ್ರೀ ಸತ್ಯಪ್ರೇಮಾ ಕುಮಾರಿದೇವಿಯವರ ಪಾಣಿಗ್ರಹಣ ಮಾಡಿದರು

೧೯೩೭ರಲ್ಲಿ ಇವರು ಚೀನ ಜಪಾನ್‌ಗಳಲ್ಲಿ ಸಂಚಾರಮಾಡಿ ಬಂದರು. ೧೯೩೯ರಲ್ಲಿ ಮಹಾರಾಜರು ತಮ್ಮ ಮಾತಾಪಿತೃಗಳು, ಸಹೋದರಿಯವರು, ಧರ್ಮಪತ್ನಿಯವರೇ ಮೊದಲಾದವರೊಂದಿಗೆ ಯೂರೋಪಿನ ಸಂಚಾರಕ್ಕೆ ಹೊರಟರು. ಆದರೆ ಯುದ್ಧಾರಂಭವಾದ್ದ ಕಾರಣ ಅವರು ಎಲ್ಲರನ್ನೂ ಕರೆದುಕೊಂಡು ವಿಮಾನ ಹತ್ತಿ ೧೯೩೯ನೇ ಅಕ್ಟೋಬರ ತಿಂಗಳಲ್ಲಿ ಮೈಸೂರಿಗೆ ಹಿಂತಿರುಗಿದರು

ವಿಶ್ವಕರ್ನಾಟಕದಿಂದ,

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public

Apply for particulars—

K R. GURU, *Managing Director*.

NOTICE

In the Court of the District Munsif of Mangalore

S C No 2c0/1940

Between —

The Catholic Bank Ltd Mangalore } *Plaintiff*

and

M Narasimha and others } *Defendants*

To 3rd Defendant. A Jannappa, Bill Collector of the Mangalore Municipality.

Please take notice that the Plaintiff abovenamed has filed the above suit for recovery of Rs. 102—0—2 due on account of balance amount of principal and interest as per on demand promissory note executed by the Defendants in favour of the Plaintiff Bank for Rs. 100 on 28-11-1938 and that the said suit stands posted to 7—10—1940 for final disposal.

(By order of the Court)

Mangalore, 10-9-1940. } L. C. Pais, B.A., B.L., Vakil for Plaintiff

ಶಾಂತಾ ಆಪ್ಟೆ ಕಲ್ಕತ್ತೆಕ್ಕೆ

ರಾಯೆಲ್ ಟಾಕಿ ಡಿಸ್ಟ್ರಿಬ್ಯೂಟರ್ಸ್ನವರು ತಮ್ಮ ಪೌರಾಣಿಕ ತಮಿಳು ಚಿತ್ರದ ತಯಾರಿಕೆಗಾಗಿ ದಿನವೊಂದನ್ನು ಈಗ ನಿಶ್ಚಯಿಸಿದ್ದಾರೆ. ಆದರಲ್ಲಿ ಶಾಂತಾ ಆಪ್ಟೆ ಅಭಿನಯಿಸುವಳು. ಅದು ನ್ಯೂ ಥಿಯೇಟರ್ಸ್ ಸ್ಟುಡಿಯೋದಲ್ಲಿ ತಯಾರಿಸಲಾಗುವುದೆಂದು ಸುದ್ದಿ. ಶಾಂತಾ ಕಲ್ಕತ್ತೆಗೆ ತೆರಳಲಿರುವಳು

ಪ್ರಭಾತ ನಗರದಿಂದ

ಶಾಂತಾರಾಮರು ಪಡೋಸಿ ಚಿತ್ರದಲ್ಲಿ ತನ್ನ ಕುಶಲ ನಿರ್ದೇಶಕತ್ವದ ಪ್ರಾವೀಣ್ಯತೆಯನ್ನು ಬಹಳ ಚನ್ನಾಗಿ ಪ್ರಯೋಗಿಸಿದ್ದಾರೆಂದು ತಿಳಿದುಬಂದಿದೆ

ಪರ್ಶಿಯದ ಮಹಾಕವಿ ಉಮ್ಮರ ಖಯ್ಯಾಮನ ಜೀವನ ಚಿತ್ರದ ಚಿತ್ರ ತಯಾರಿಯ ಕಾರ್ಯವನ್ನು ಬೇಗನೇ ಶಾಂತಾರಾಮರು ಕೈಕೊಳ್ಳುವರೆಂದೂ ಗೊತ್ತಾಗಿದೆ.

ಡಾಮ್ಲೆ ಮತ್ತು ಪಾಟೀಲಾಲರು 'ಸಂತಸಖೂ' ಚಿತ್ರದ ರಿಹರ್ಸಲಿನಲ್ಲಿ ಮಗ್ನರಾಗಿದ್ದಾರೆ. ಇದು ಮಹಾ ಕೃಷ್ಣ ಭಕ್ತೆಯ ಜೀವನ ಕಥೆ

ಸ್ವಾಮಿ

ಸೈಗಲ್ ಮತ್ತು ಕನನ್‌ಬಾಲಾ ಇವರು ಅಭಿನಯಿಸುವ ಸ್ವಾಮಿ ಎಂಬ ಚಿತ್ರವನ್ನು ನಿತಿನ್‌ಬೋಸರು ನಿರ್ದೇಶಿಸುವರು

"ನರ್ಸೀಭಾಗತ್' ಪ್ರಕಟವಾಯಿತು

ಪ್ರಕಾಶ ಚಿತ್ರಪಟದ ನೂತನ ತಯಾರಿಯಾದ ನರ್ಸಿಭಾಗತ್ ಎಂಬ ಭಕ್ತಿ ಚಿತ್ರ ಕಳೆದ ವಾರ ಬೊಂಬಾಯಿಯಲ್ಲಿ ಪ್ರಥಮವಾಗಿ ಪ್ರದರ್ಶಿತವಾಯಿತು ಇದರಲ್ಲಿ ವಿಷ್ಣುಪಂತ ಪಗ್ನೀಸ್, ದುರ್ಗಾ ಖೋಟೆ ಇವರು ಅಭಿನಯಿಸಿರುವರು

ಲೀಲಾ ಚಿಟ್ನೆಸರ ಹೊಸ ಚಲಚ್ಚಿತ್ರ ಕಂಪೆನಿ

ಶ್ರೀಮತಿ ಲೀಲಾ ಚಿಟ್ನೆಸ್ ಶ್ರೀಗಳಾದ ಅಗ್ರವಾಲ್, ಭವಾನಿ ಮತ್ತು ಗ್ಯಾನಿ ಇವರು ಹೊಸತೊಂದು ಚಲಚ್ಚಿತ್ರ ಕಂಪೆನಿಯನ್ನು ತೆರೆದಿದ್ದಾರೆ

ರಣಜಿತ್‌ರ ೩ ಚಿತ್ರಗಳು

ಗೀಳಗರ ತಯಾರಿಯಾಗಿ ರಣಜಿತ್ ಚಿತ್ರ ಕಂಪೆನಿಯವರು ಭಕ್ತ ಸುಧಾಮ, ಸೂರ್‌ದಾಸ್, ಭಾರತ ರಾಣಿ ಎಂಬೀ ಮೂರು ಚಿತ್ರಗಳನ್ನು ತಯಾರು ಮಾಡುವರಾಗಿ ತಿಳಿಯುತ್ತದೆ.

ಮಂದರಾವತಿ

ಅರ್ವಿ ಚಿತ್ರ ಕಂಪೆನಿಯವರು ಮಂದರಾವತಿಯೆಂಬ ಪೌರಾಣಿಕ ಚಿತ್ರವೊಂದನ್ನು ತಯಾರಿಸುತ್ತಾರೆ.

ಶೈಲಕ್ ಚಿತ್ರ

ಭಾರತೀ ಮುವಿಟೋನಿನವರು ತಯಾರಿಸುವ ಶೈಲಕ್ ಚಿತ್ರದ ತಯಾರಿಯ ಸಂದರ್ಭದಲ್ಲಿ ಪ್ರಸಿದ್ಧ ಚಲಚ್ಚಿತ್ರ ಕಲಾವಂತರಾದ ಶ್ರೀ ದಾದಾ ಪಾಲ್ಕೆಯವರನ್ನು ಆಮಂತ್ರಿಸಿದ್ದರು. ನೂತನ ನಿರ್ದೇಶಕರ ಕಲಾ ನೈಪುಣ್ಯವನ್ನು ಹಿರಿಯರಾದ ಅವರು ಕೊಂಡಾಡಿದರು.

ಸಿನೆಮಾ ಪುಟ

ವರ್ಣಮಯ 'ಕರ್ಣ'

ದ್ವಾರಕಾ ಪ್ರೊಡಕ್ಷನ್ಸಿನವರು ತಮ್ಮ ದಾನಶೂರ ಕರ್ಣ ಚಿತ್ರವನ್ನು ವರ್ಣಮಯವಾಗಿ ತಯಾರಿಸುತ್ತಾರೆ

ವಿಚಿತ್ರ ದೀಪ

ಗೌತಮ ಫಿಲ್ಮ್ಸ್‌ನವರ ಅಲ್ಲಾಉದ್ದೀನನ ವಿಚಿತ್ರ ದೀಪವೆಂಬ ಅರ್ಧ ತಯಾರಿಯಾದ ಕಥೆಯು ಬರುವ ತಿಂಗಳ ಆರಂಭದಿಂದ ಪೂರ್ಣಗೊಳಿಸಲಾಗುವುದೆಂದು ವಾರ್ತೆ

ಗಜಾನನ ಜಾಗೀರ್ದಾರ್

ಪಡೋಸಿ ಚಿತ್ರವು ಮುಗಿದ ಕೂಡಲೇ ಶ್ರೀ ಗಜಾನನ ಜಾಗೀರ್ದಾರರು ಅತ್ರಿ ಪಿಕ್ಚರ್ಸ್‌ನವರ ಪಯಾಜಿ ದಾಸೀ ಎಂಬ ಕಥೆಯನ್ನು ನಿರ್ದೇಶಿಸುವರು.

ತಿರುವಾಂಕೂರು ರಾಜರ ಜೀವನ ಕಥೆಯ ಚಲಚಿತ್ರ ನಿರ್ಮಾಣ

ಇಂದಿನ ತಿರುವಾಂಕೂರು ಮಹಾರಾಜರಾದ ಮಾರ್ತಾಂಡ ವರ್ಮರ ಜೀವನ ಚರಿತ್ರೆಯನ್ನು ಚಿತ್ರಿಸುವ ಚಲಚ್ಚಿತ್ರವೊಂದನ್ನು ತ್ರಿವೇಂದ್ರಮಿನ ಸೆಂಚುರಿ ಸಿನೆಟೋನಿನವರು ಮಲೆಯಾಳ ತಮಿಳು ಭಾಷೆಗಳಲ್ಲಿ ತಯಾರಿಸುವರೆಂದು ತಿಳಿಯುತ್ತದೆ ಈ ಚಿತ್ರದಲ್ಲಿ ಹಲವು ಮಂದಿ ಉಚ್ಚ ಶಿಕ್ಷಿತರಾದ ಸ್ತ್ರೀಪುರುಷರು ಪಾತ್ರ ವಹಿಸಲು ಉಮೇದ್ವಾರರಾಗಿ ಮುಂದೆ ಬಂದಿರುವರಂತೆ

ಸಬಿತಾದೇವಿ

ಸುದಾಮ ಚಿತ್ರ ಕಂಪನಿಯವರ ಹೊಸ ಚಿತ್ರ 'ಸಜ್ನಿ'ಯಲ್ಲಿ ಸಬಿತಾದೇವಿ ಅಭಿನಯಿಸುವಳು

ಧರ್ಮಪತ್ನಿ

ತೆಲಗು ಸಾಮಾಜಿಕ ಚಿತ್ರ ಧರ್ಮಪತ್ನಿ'ಯಲ್ಲಿ ಶಾಂತ ಕುಮಾರಿ ಅಭಿನಯಿಸಿರುವಳು

ಭಾರತದ ಮೊದಲನೆಯ ಆಂಗ್ಲ ಭಾಷಾ ಚಿತ್ರ

ವಾಡಿಯಾವವರ ಆಂಗ್ಲ ಭಾಷೆಯ ಚಿತ್ರವೊಂದನ್ನು ತಯಾರಿಸುವರು. ರಾಜ ಸರ್ಕಸ್ ಮಧುಚಂದ ಎಂದು ಇದರ ಹೆಸರಿಡಲಾಗುವುದು ಹಿಂದೀ ಬಂಗಾಳಿಯಲ್ಲಿ ಈ ಚಿತ್ರವು ಆಗಿದೆ ವಾಡಿಯಾ [illegible] ಹೊಸ ಸಾಹಸಕ್ಕೆ ಅಭಿನಂದನೆಗಳು


ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

"ಮಗ ವು ಮನುಷ್ಯನ ತಂದೆ" ಒಂದು ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯವನ್ನವಲಂಬಿಸಿದೆ. ನಿರುತ್ಸಾಹಿಗಳಾದ ಮತ್ತು ದುರ್ಬಲರಾದ ಮಕ್ಕಳು ಬಾಲ ಪ್ರಾಶದಿಂದ ಉತ್ತೇಜಗೊಂಡು ಬೆಳೆಯುವರು ಅದರ ರುಚಿಕರ ವಾಸನೆ ಕಂಡರೆ ಮಕ್ಕಳಿಗೆ ಪ್ರೀತಿ

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ

ಬಾಲ ಪ್ರಾಶ

ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

K.A.4

ಯುದ್ಧ ನಿಧಿ

ದ ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

ರೂ. 1000—0—0

ಮಂಗಳೂರು ಕ್ಲಬ್.

ರೂ. 200—0—0

ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗಡೇರು.

ರೂ. 171—0—0

ಉಡುಪಿ ಹೆಮ್ಮಕ್ಕಳ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ವಿವಿಧ ವಿನೋದಾವಳಿಯಿಂದ

ರೂ. 164—1—0

ಕುಂದಾಪುರದಲ್ಲಿನ ಬೆನಿಫಿಟ್ ಶೋ.

ರೂ. 105—0—0

ಬಸ್ತಿ ರಾಮಯ್ಯ ಶ್ಯಾನುಭಾಗ, ಎಂ ವೆಂಕಟೇಶ ಪೈ

ರೂ 101—0—0

ಶ್ರೀ ಈಶ್ವರಾನಂದ ಭಾರತಿ ಸ್ವಾಮಿ

ರೂ 100—0—0

ಎ ಸಿ ವುಡ್‌ಹೌಸ್, ವಾಲ್ಕಾರ್ಟ್ ಬ್ರದರ್ಸ್, ಮಂಗಳೂರಿನ ಲಾರ್ಡ್ ಬಿಷೊಪರು, ಕೆ ಪಿ ಶೇಷಗಿರಿ ಪ್ರಭು, ಡಬ್ಲ್ಯು. ಜೆಫ್ರಿಸ್, ಕಟ್ಟೆಮಾರು ರಘುಚಂದ್ರ ಬಲ್ಲಾಳ್

ರೂ 83—6—0

ಉಡುಪಿಯಲ್ಲಿನ 2 ಸಿನೆಮಾ ಪ್ರದರ್ಶನಗಳ ಉತ್ಪತ್ತಿ

ರೂ 75 0 0

ಪಿ ಸಿ ಕೇರಳ ವರ್ಮ ರಾಜ ಡಬ್ಲ್ಯು. ಜಿ ಜಾಕ್ಸನ್, ನೆಲ್ಲೂಟ್ಟು ರಾಮಣ್ಣ ರೈ

ರೂ 50—0—0

ಬಿ. ಸದಾಶಿವಯ್ಯ, ಸಪ್ಪೂರು ಮಂಜಯ್ಯ ಶೇರಿಗಾರ, ವಿಟ್ಲದ ರವಿವರ್ಮ ಕೃಷ್ಣರಾಜರು ಎ ಡಿಗೆ ಮಹಾಲಿಂಗ ಭಟ್ಟ ಕೋಡಿಂಗಾರ ಚಿಕ್ಕಪ್ಪ ರೈ ವ ನಿರಲ ಶೆಟ್ಟಿ, ಡಾ ಬಿ ರಾಮ ಬಾಳಿಗ, ವೈ ಕೃಷ್ಣಪ್ಪ ಶೆಟ್ಟಿ, ಕುಂದಾಪು [illegible] ಜೋಸೆಫ, ಸೈಂಟ್ ಜೋಸೆಫ್ಸ ಎಕ್ಸೆಲ ಇಂಡಸ್ಟ್ರಿಯಲ್ ವರ್ಕ್‌ಶಾಪ್

ರೂ 40—0—0

ಸಲ್ಲ [illegible] ರಾಮಣ್ಣ ಶೆಟ್ಟಿ, ಲಕ್ಷ್ಮಣ ಶೆಟ್ಟಿ

ರೂ 35—0—0

ಎಸ್ ಅಂತಯ್ಯ ಶೆಟ್ಟಿ, ಕೆ ಎಸ್ ಅಡಿಗ, ಬಿಶಪ್ಸ್ ಹೌಸ್ ಮತ್ತು ಕೊಡಿಯಾಲಬೈಲು ಧರ್ಮಶಾಲೆಯ ಸಿಬಂದಿ

ರೂ 31—0—0

ಪಿ ಅಪ್ಪಣ್ಣ ಪ್ರಭು ಎಂಡ್ ಸನ್ಸ್

ರೂ 30—0—0

ಎಸ್ ಕರಿಯಪ್ಪ ಒಂಟಿ

ರೂ 27—0—0

ಉಡುಪಿ ಬಾರಿನ ಮೆಂಬರರು.

ರೂ 25—0—0

ಅನಂತರಾಜ ಅರಿಗ, ಕುಂಜಣ್ಣ ರೈ, ಬೆಳ್ಪಾಡಿ ರಾಮಣ್ಣ ರೈ, ಗಿಳಿಯಾರ ಕೇಶವ ಭಟ್ಟ, ಪೂವಳ ಮಹಾಲಿಂಗ ಭಟ್ಟ, ಈ ಎ ಎಂ. ಸ್ವಾಮಿ, ಓ ಎಲ್. ಎಲ್ ಬ್ರೀನ್, ಜೆ ಆರ್ ಫಷ್ಟರ್, ಟಿ ಸಿ. ರಾಮವರ್ಮ ಎಲಿಯರಾಜ; ಕೆ. ಪಿ. ಶೇಷಗಿರಿ ಪ್ರಭು, ಎ ಚಿಕ್ಕಪ್ಪ ಭಂಡಾರಿ, ಕಾಸರಗೋಡು ಕೋಓಪರೇಟಿವ್ ಟೌನ್ ಬ್ಯಾಂಕ್, ಮಯ್ಯಾಡಿ ರಾಮವರ್ಮರಾಜ ರಾಮಂತರಸು, ರಾವ್ ಸಾಹೇಬ್ ಯು. ಮಂಜಪ್ಪ, ಕೆ. ಎಸ್. ಯು. ನಾಯರ್, ಚೆಪ್ಪಾಡಿ ಕುಂಜಿರಾಮನ್ ನಾಯರ್, ರಾವ್ ಸಾಹೇಬ್ ವಿ. ಆರ್. ಎಲ್. ಎಸ್. ಅರಸು; ಎನ್. ನಾರಾಯಣ ಭಟ್, ಕಾಂಚಾನ ವೆಂಕಟಸುಬ್ರಮಣ್ಯ ಅಯ್ಯರ್, ಜೆ. ಎಲ್ ಡೊಮಿನಿಕ್, ಜಿ. ಸೋಮಶೇಖರ ರಾವ್, ಎನ್. ಕೃಷ್ಣ ಭಟ್, ಎಸ್. ಕೆ. ಎಗ್ರಿಕಲ್ಚರಿಸ್ಟ್ಸ್ ಕೋಓಪರೇಟಿವ್ ಹೋಲ್‌ಸೇಲ್ ಸೊಸೈಟಿ ಲಿಮಿಟೆಡ್.

ರೂ 20—0—0

ಬಿ. ಗಣೇಶ, ಬೀರಣ್ಣ ರೈ, ರೈಟ್. ರೆವರೆಂಡ್ ಡಾ. ವಿ. ಆರ್ ಫೆರ್ನಾಂಡೀಸ್; ಮಂಜಯ್ಯ ಶೆಟ್ಟಿ, ಪಾಂಡಿರಾಜ ಬಲ್ಲಾಳ್, ನಾಗಯ್ಯ ಶೆಟ್ಟಿ; ಡಾ. ಪಿ. ಭವಾನಿರಾವ್, ಆರ್. ಎಂ. ಶೆಣೈ,

ಮಿಲಿಯನಾಧಿಪ ರಾಜರ ಪ್ರಜೆಗಳು ಅನ್ನವಿಲ್ಲದೆ ಹುಲ್ಲು ತಿನ್ನುತ್ತಾರೆ!

ಹೈದರಾಬಾದಿನ ಬಡವರ ಸಂಕಷ್ಟ

ಹೈದರಾಬಾದಿನ ನಿಜಾಮರು ಪ್ರಪಂಚದಲ್ಲಿ ಅತ್ಯಂತ ಐಶ್ವರ್ಯವಂತರಲ್ಲಿ ಒಬ್ಬರು, ಮಿಲಿಯಾಧಿಪರು. ಇವರ ಸಂಸ್ಥಾನದಲ್ಲಿ ಬಡಜನರು ಕೋಳಿಗೂ ಗತಿಯಿಲ್ಲದೆ ಪಶುಗಳಂತೆ ಹುಲ್ಲು ತಿನ್ನುತ್ತಿದ್ದಾರೆ ಎಂಬ ಸಂಗತಿಯು ನಿಜವಾಗಿಯೂ ಯಾರಿಗೆ ತಾನೇ ಸಂಕಷ್ಟವನ್ನುಂಟು ಮಾಡಲಿಕ್ಕಿಲ್ಲ? ರಾಜರು ಮಿಲಿಯಾಧಿಪತಿಗಳಾಗಿದ್ದರೂ ಪ್ರಜೆಗಳು ಬಡತನದಲ್ಲೇ ನರಳುತ್ತಿರುವರೆಂಬುದು ರಾಜಪ್ರಜೆಗಳ ಅನ್ಯೋನ್ಯತೆಗೆ ಹೇಗಿದೆಯೆಂಬುದಕ್ಕೆ ಒಂದು ನಿದರ್ಶನ. ಹೈದರಾಬಾದಿನಲ್ಲಿ ಸಂಚರಿಸಿದ ರೆವೆರೆಂಟ್ ಅಯೋನಾರ್ಡ್‌ಸ್ಮಿತ್ ಎಂಬ ವಿದ್ಯಾವಂತ ಪಾದ್ರಿಯವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ

“ಮುಂಬಾಯಿಂದ ನಾನು ಹೈದರಾಬಾದಿಗೆ ತೆರಳಿ ಒಬ್ಬ ಪ್ರಮುಖ ಕ್ರೈಸ್ತರಲ್ಲಿ ನೆಲೆಸಿಂತೆ. ಅವರು ನನ್ನನ್ನು ಬರಗಾಲ ಒಂದರ ಪ್ರದೇಶಕ್ಕೆ ಒಯ್ದರು. ಬರಗಾಲವೆಂದರೆ ದವಸಧಾನ್ಯಗಳ ಅಭಾವವೆಂದು ಇಂದು ಅರ್ಥವಲ್ಲ. ಕಾರಣ, ಹೇರಿ ಇರಿಸಿದ ಧಾನ್ಯಗಳು ಸುಲಭವಾಗಿ ಬೇರೆ ಕಡೆಗೆ ಧನಾಢ್ಯರಿಂದ ಸಾಗಿಸಿ ವಿಕ್ರಯಿಸಲ್ಪಡುತ್ತಿವೆ. ನಿಜವಾಗಿಯೂ ಬರಗಾಲವೆಂದರೆ ಕೊಳ್ಳುವ ಶಕ್ತಿ, ಮಂದಿಯಲ್ಲಿ ಕಡಿಮೆಯಾದುದೇ. ಹಲವು ವರ್ಷಗಳ ದುಃಸ್ಥಿತಿ ಎಂದರೆ ರೈತರ ಬಳಿ ಏನೇನೂ ಕಾಳುಕಡ್ಡಿ ಇಲ್ಲದೆ ಬೆಳೆ ಸಾಕಷ್ಟು ಉತ್ಪನ್ನವಾಗಿರದೆ, ಹಸಿದು ಸಾಯುವ ಬಾಳು ಹೊರತು, ಧನಿಗೆ ಧಾನ್ಯದ ಕೊರತೆ ಇದೆಯೆಂದಲ್ಲ. ಅಲ್ಲದೆ ಹಣ ಸಾಲ ಕೊಡುವವ ಸಾಲ ಕೊಡ, ಜನಾಂಗ ಉಣ್ಣಲಾರದೆ ನರಳುವುದು”

“ಬರಗಾಲದಿಂದ ಮಂದಿ ನರಳುತ್ತಿದ್ದಾರೆಂದು ಅದೆಷ್ಟು ರೀತಿಯಿಂದ ಹೇಳಿದರೂ, ಸರಕಾರಕ್ಕೆ ಗೊತ್ತಾಗುವುದೇ ಕಷ್ಟವಾಗಿದೆ. ಈ ಸುದ್ದಿ ಅಧಿಕಾರಿಗಳಿಗೆ ತಲುಪಲು ಎಷ್ಟೋ ಕಾಲ ಬೇಕಾಗುವದಲ್ಲದೆ, ಅವರೂ ಈ ಕಡೆ ಗಮನ ಕೊಡುವುದೇ ಇಲ್ಲ”

“ಹೆಚ್ಚಿನ ಜನರು ಹುಲ್ಲು ತಿನ್ನುವ ಸ್ಥಿತಿಗೆ ಇಳಿದಿದ್ದಾರೆ. ಹಸಿವೆಯನ್ನು ತಡೆಯಲಾರದೆ ಹೊಟ್ಟೆ ತುಂಬಲು ಬೇರೆ ಏನೂ ದೊರೆಯದಿರುವದರಿಂದ ಹುಲ್ಲು ತಿಂದು ಜೀವಿಸುತ್ತಿದ್ದಾರೆ! ‘ನಮಗೂ ಆಕಳುಗಳಿಗೂ ಇಂದು ವ್ಯತ್ಯಾಸವಿಲ್ಲ. ಇಬ್ಬರಿಗೂ ಹುಲ್ಲೇ ಆಹಾರ’ ಎಂದೊಬ್ಬ ನನೊಡನೆ ಹೇಳಿದ. ಕೆಲವು ಮಂದಿ [illegible] ಇಟ್ಟು ನೆರೆ ಸೇರಿ [illegible] ಹಾಕಿ; ಅಲ್ಲಾದರೂ [illegible] ಬಳಲಿ [illegible] ನಾನು [illegible] ಬರಗಾಲವೆಂಬು ದು ಆರಂಭವಾಗಿತ್ತು. ಅದರ ನಂತರ ದಲ್ಲಿ ಅನ್ನವಿಲ್ಲದೆ ಮಂದಿ ಸಾಯುವ ಪ್ರಕರಣ ಆರಂಭವಾಗಿತ್ತು.”

“ಇಪ್ಪತ್ತನೆಯ ಶತಮಾನದಲ್ಲಿ, ಇಂದು, ವರ್ಷಕ್ಕೆ ಆರು ಲಕ್ಷ ಪವನುಗಳ ಉತ್ಪನ್ನವಿದ್ದು, ಜಗತ್ತಿನ ಅತ್ಯಂತ ಧನಾಢ್ಯರಲೊಬ್ಬನೆಂದು ಪರಿಗಣಿತನಾದ ಅರಸರ ರಾಜ್ಯದಲ್ಲಿ ಈ ಗತಿ ಎಂದರೆ ಭಾರತದ ಒಡವರ ಏಳಿಗೆ ಎಂದು?”

ಭಾರತದ ಮುಸ್ಲಿಂ ವಿದ್ವಾಂಸರೊಬ್ಬರಿಗೆ ನೋಬೆಲ ಬಹುಮಾನ?

ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ. ರಾಜ ಉದ್ದೀನರವರಿಗೆ ಭೌತಿಕ ಶಾಸ್ತ್ರ ಸಂಶೋಧನೆಗಾಗಿ ಈಸಲ ನೋಬೆಲ್ ಬಹುಮಾನವು ಬಂದಿದೆಯೆಂದು ಹೈದರಾಬಾದಿನಲ್ಲಿ ವಾರ್ತೆಯಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಭಾರತೀಯ ಮುಸ್ಲಿಮರಲ್ಲಿ ನೊಬೆಲ್ ಬಹುಮಾನ ಪಡೆದವರಲ್ಲಿ ಇವರೇ ಮೊದಲಿಗರು. ಈ ಹಿಂದೆ ಡಾ ಸಿ. ವಿ. ರಾಮನ್, ಹಾಗು ರವೀಂದ್ರನಾಥ ಟಾಗೋರರಿಗೆ ನೋಬೆಲ್ ಬಹುಮಾನಗಳು ದೊರೆತಿವೆ

ಕಾಂಗ್ರೆಸಿಗೆ ಮುಸ್ಲಿಂ ವಿದ್ಯಾರ್ಥಿಗಳ ಬೆಂಬಲ

ಆಲಿಗರ ಮುಸ್ಲಿಂ ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಪಕ್ಷದ ಮುಸ್ಲಿಂ ವಿದ್ಯಾರ್ಥಿಗಳ ನಿರ್ಣಯದ ಸಾರಾಂಶ:

“ನಾವು ವೈಸರಾಯರ ಮತ್ತು ಭಾರತ ಸಚಿವರ ಹೇಳಿಕೆಗಳನ್ನು ಓದಿ ವಿಷಾದಗೊಂಡಿದ್ದೇವೆ. ಕಾಂಗ್ರೆಸಿನ ಸ್ನೇಹಪೂರ್ಣ ಸಹಕಾರವನ್ನು ತಿರಸ್ಕರಿಸಿ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಅಲ್ಲಗಳೆದದ್ದು ದುಃಖದಾಯಕವಾಗಿದೆ. ಈ ಸಂದರ್ಭದಲ್ಲಿ ನಾವು ಬ್ರಿಟಿಷ್ ಸರಕಾರದ ಧೋರಣೆಯನ್ನು ಖಂಡಿಸುವದಲ್ಲದೆ ಕಾಂಗ್ರೆಸಿನ ಮುಂದಿನ ಹೋರಾಟದಲ್ಲಿ ನಮ್ಮ ಪೂರ್ಣ ಬೆಂಬಲವನ್ನು ಕೊಡುವುದಾಗಿ ಈ ಮೂಲಕ ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿಸುತ್ತೇವೆ”

ಹಿಂದೂದೇಶವನ್ನು ಬಲಗೊಳಿಸಿರಿ

ನಿಮ್ಮ ಭವಿಷ್ಯತ್ತನ್ನು ರಕ್ಷಿಸಿಕೊಳ್ಳಿರಿ

ನಿಮ್ಮ ದೇಶದ ಐಶ್ವರ್ಯ ಮತ್ತು ಆಸರೆಗೆ ಬೆಂಬಲವಿರುವ ನಿಮ್ಮ ದೇಶದಲ್ಲಿಯೇ ನಿಮ್ಮ ಹಣವನ್ನು ವಿನಿಯೋಗಿಸಿ. ಇಂಡಿಯಾ ಸರ್ಕಾರದವರು ನಿಮ್ಮ ಹಣವನ್ನು ಬಡ್ಡಿ ಸಮೇತ ವಾಪಸು ಕೊಡುವರೆಂಬ ಭರವಸೆ ಇದೆ



ನಿಮ್ಮ ದೇಶವನ್ನು ರಕ್ಷಿಸಿರಿ

ರಾಷ್ಟ್ರೀಯ ಸೈನ್ಯ, ನೌಕಾ ಮತ್ತು ವೈಮಾನಿಕ ದಳವನ್ನು ಬಲಗೊಳಿಸುವುದರ ಮೂಲಕ ನಿಮ್ಮ ದೇಶವನ್ನು ಸುರಕ್ಷಿತವನ್ನಾಗಿ ಮಾಡಿರಿ



ನಿಮ್ಮ ದೇಶದ ಕೈಗಾರಿಕೆಗೆ ಸಹಾಯ ಮಾಡಿ

ತನ್ನ ಸೈನ್ಯಗಳನ್ನು ಸಜ್ಜುಗೊಳಿಸುವುದರಲ್ಲಿ ಹಿಂದುಸ್ಥಾನದ ಕೈಗಾರಿಕೆಯು ಮುಖ್ಯಭಾಗವನ್ನು ವಹಿಸುತ್ತದೆ. ಆದ್ದರಿಂದ ನಿಮ್ಮ ಬೆಂಬಲವು ನಿಮ್ಮ ದೇಶೀಯರಿಗೆ ಕೆಲಸ ಒದಗಿಸಲು ಸಹಾಯಕವಾಗುತ್ತದೆ



ಹಿಂದೀ ವಿಮಾನದಳವನ್ನು ಕಟ್ಟಲು ಸಹಾಯ ಮಾಡಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು ರೂ. ೧೦, ೫೦, ೫೦೦ ಗಳಿಗೆ ಕೊಡುತ್ತಾರೆ. ಈ ಮೊತ್ತಗಳು ಹತ್ತು ವರ್ಷದ ನಂತರ ಪ್ರತಿ ರೂ. ೧೦ಕ್ಕೆ ೧೩—೯—೦ ಆಗಿ ವಾಪಸು ಸಿಗುವುದು. ಸುಮಾರು ಶೇಕಡ ೩! ಚಕ್ರಬಡ್ಡಿಯು ದೊರೆಯುತ್ತದೆ. ಇದಕ್ಕೆ ಆದಾಯ ತೆರಿಗೆಯಿಲ್ಲ. ಪ್ರತಿ ಒಬ್ಬರೂ ರೂ. ೫೦೦೦ ಗಳಿಗಿಂತ ಹೆಚ್ಚು ಬಾಂಡ್ ಪಡೆಯಲು ಸಾಧ್ಯವಿಲ್ಲ. ನಿಮ್ಮ ಸಮೀಪದ ಅಂಚೆ ಕಚೇರಿಯಲ್ಲಿ ಕೇಳಿ.

೬ ವರ್ಷದ ಡಿಫೆನ್ಸ್ ಬಾಂಡ್‌ಗಳು ರೂ. ೧೦೦ ಅಥವಾ ನೂರರ ಅಪವರ್ತ್ಯಗಳಲ್ಲಿ ಸಿಗುವುವು. ಈ ಹಣವು ೧೯೪೬ ಆಗಸ್ಟ್ ೧ನೇ ತಾರೀಖಿಗೆ ನೂರಕ್ಕೆ ೧೦೧ರಂತೆ ಹಿಂದಕ್ಕೆ ಕೊಡಲ್ಪಡುತ್ತ ಶೇಕಡ ೩ರ.ತೆ ಬಡ್ಡಿ ಆರು ತಿಂಗಳಿಗೊಂದು ಸಾರಿ ಪಡೆಯಬಹುದು. ಒಬ್ಬರೇ ಎಷ್ಟು ಬಾಂಡುಗಳನ್ನಾದರೂ ಕೊಳ್ಳಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸರ್ಕಾರಿ ಟ್ರಿಜರಿ ಇವುಗಳಲ್ಲಿ ಅರ್ಜಿ ಮಾಡಿಕೊಳ್ಳಿರಿ.

ಬಡ್ಡಿಯಿಲ್ಲದ ಬಾಂಡುಗಳು ರೂ. ೫ಕ್ಕೆ ಮೇಲ್ಪಟ್ಟು ಸಿಗುತ್ತವೆ. ೩ ವರ್ಷಗಳ ನಂತರ ಹಣ ವಾಪಸು ಪಡೆಯಬಹುದು. ೧ ವರ್ಷದ ನಂತರ ಹಣ ಪಡೆಯಬೇಕಾದರೆ ೩ ತಿಂಗಳಿಗೆ ಮುಂಚೆ ನೋಟೀಸ್ ಕೊಡಬೇಕು. ಅಕ್ಷಗಕ್ಷವಿದೆಯೆಂದು ರುಜುವಾತು ಮಾಡಿಕೊಟ್ಟರೆ ಯಾವಾಗಲಾದರೂ ಪಡೆಯಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಅಥವಾ ಸರ್ಕಾರಿ ಟ್ರೆಜರಿ ಇವುಗಳಲ್ಲಿ ಅರ್ಜಿ ಮಾಡಿಕೊಳ್ಳಿರಿ.

ಇಂಡಿಯಾ ಡಿಫೆನ್ಸ್ ಲೋನ್‌ಗಳನ್ನು ಕೊಳ್ಳಿರಿ

Kn 31 4

ಗಾಂಧಿಜಿಯವರ ಭಾಷಣ!

[೧೬ನೆಯ ಪುಟದಿಂದ]

ಬರಡಸಿನ ಪತನ ಇಲ್ಲವೆ ಇಂಗ್ಲಂಡಿನ ಪತನವಾದರೂ ಬ್ರಿಟಿಷ್ ಜನತೆಯು ಪರಾಜಯವಾಯಿತೆಂದು ನಾನು ಭಾವಿಸಲಾರೆ. ಅವರ ಸಾಮ್ರಾಜ್ಯವು ಪ್ರಚಂಡವಿದ್ದು, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೇಂಡ್ ಮೊದಲಾದ ದೂರ ಪ್ರದೇಶಗಳಿಂದಲೆ 'ಅವರು ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಯತ್ನಿಸುವರು ಆದರೆ ಬ್ರಿಟನು ಎಷ್ಟೇ ಅಡಚಣಿಯಲ್ಲಿದ್ದರೂ ಹಿಂದುಸ್ಥಾನವು ಮಾತ್ರ ತಾನು ಅನುಸರಿಸಬೇಕಾದ ಮಾರ್ಗದಿಂದ ಎಂದೂ ಪರಾವೃತ್ತವಾಗದು ಇಡೀ ಜಗತ್ತಿಗೆ ಹಿಂದುಸ್ಥಾನವು ಒಂದು ಹೊಸ ಪಾಠ ಹೇಳಿಕೊಡಬೇಕಾಗಿದೆಯೆಂದು ನನ್ನ ನಂಬಿಗೆ

"ಕಾಂಗ್ರೆಸ್ಸಿನ ಮಾರ್ಗದರ್ಶಿತ್ವವನ್ನು ವಹಿಸುವ ಹೊಣೆಗಾರಿಕೆಯನ್ನು ಮತ್ತೊಮ್ಮೆ ನೀವು ನನ್ನ ಮೇಲೆ ಹೊರಿಸಿರುವದರಿಂದ ಸವಿನಯ ಶಾಸನ ಭಂಗ ಇಲ್ಲವೆ ಅಸಹಕಾರ ಪ್ರಾರಂಭ ಸೂಚನೆಯೆಂದು ಅದರ ಅರ್ಥವಾಗಬಹುದು. ಆದರೆ ನಾನು ಏನು ಮಾಡುವೆನೆಂಬುದನ್ನು ಈಗಲೆ ನಿಮಗೆ ಹೇಳಲಾರೆ ಸದ್ಯಕ್ಕೆ ನನಗೆ ಯಾವದೂ ಹೊಳೆಯದಾಗಿದೆ ಕಾರ್ಗತ್ತಲೆಯಲ್ಲಿ ಮಾರ್ಗ ಹುಡುಕುತ್ತಿರುವ ಮನುಷ್ಯನ ಧುರೀಣತ್ವವನ್ನು ಸ್ವೀಕರಿಸಲು ನೀವು ಸಿದ್ಧರಾಗಿರಬೇಕೆಂಬುದನ್ನು ನೆನಪಿನಲ್ಲಿಡಿರಿ ನಾನು ಯಾವುದೇ ಬಗೆಯ ಒಡಂಬಡಿಕೆ ಮಾಡುವೆನೆಂದ ಹಲವರಿಗೆ ಸಂಶಯ ಆದರೆ ಈ ನಿರ್ಣಯದಲ್ಲಿಯೇ ಅದಕ್ಕೆ ಬೇಕಾದಷ್ಟು ಅವಕಾಶವಿದೆಯೆಂದು ನಾನು ಸ್ಪಷ್ಟವಾಗಿ ಹೇಳಬಯಸುವೆ ಈ ನಿರ್ಣಯವನ್ನು ತೆಗೆದುಕೊಂಡು ನಾನು ವ್ಹಾಯಸರಾಯರೆಡೆಗೆ ಹೋಗುವೆನು ಸದ್ಯದ ಧೋರಣೆಯಿಂದ ಕಾಂಗ್ರೆಸ್ಸಿನ ಅಸ್ತಿತ್ವವೇ ಹಾಳಾಗುವಂಥ ಪರಿಸ್ಥಿತಿಯುಂಟಾಗದಿಲ್ಲವೇ ಎಂದು ನಾನು ಅವರನ್ನು ಕೇಳುವೆನು ಯುದ್ಧದ ಬಗ್ಗೆ ನಮಗೆ ತೋಚಿದ್ದನ್ನು ಹೇಳಲು ಅಧಿಕಾರವಿದೆ ಆದರೆ ನಾವು ನಮ್ಮ ಅಹಿಂಸೆಯ ಧೋರಣೆಯನ್ನು ಬಿಡದೇ ಈ ಬಗೆಯ ಪ್ರಚಾರ ಮಾಡಲೇಬೇಕು ಹಿಂಸೆಯ ಪ್ರಚಾರ ಮಾಡುವವರನ್ನು ಸರಕಾರದವರು ಸೆರೆಹಿಡಿಯಬಹುದು ಆದರೆ ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ನಾವು ಮೌನವಿಂದಿರಲಾರೆವು. ಹಿಂದುಸ್ಥಾನವು ಸಣ್ಣ ದೇಶವಲ್ಲ ಅಹಿಂಸಾ ಮಾರ್ಗವಾಗಿ ಹಿಂದುಸ್ಥಾನವು ಸ್ವಾತಂತ್ರ್ಯ ಸಂಪಾದಿಸಿದರೆ ಅದು ಇಡೀ ಜಗತ್ತಿಗೆ ಒಂದು ಸಂದೇಶವನ್ನು ಕೊಡಬಲ್ಲದು. ಇಂದು ಈ ಅಮಾನುಷ ಮತ್ತು ಕ್ರೂರ ಯುದ್ಧದಲ್ಲಿ ಬಿದ್ದ ಯುರೋಪಿನ ರಾಷ್ಟ್ರಗಳು ಇದ್ದರಿಂದ ಬಹಳ ಪಾಠ ಕಲಿಯಬಹುದು ಅದರ ಧೈರ್ಯ ಮತ್ತು ನಾಶಕಾರಕ ಸಂಶೋಧನೆಗಳ ಬಗ್ಗೆ ನಾವು ಆ ರಾಷ್ಟ್ರದವರನ್ನು ಪ್ರಶಂಸಿಸಬಹುದಾದರೂ ನಿಮ್ಮ ಬುದ್ಧಿಭ್ರಂಶವಾಗಿದೆಯೆಂದು ನಾವು ಅವರಿಗೆ ಸ್ಪಷ್ಟವಾಗಿ ಹೇಳಲೇಬೇಕು ಹಿಂದುಸ್ಥಾನವು ಅವರಿಗೆ ಒಂದು ಪಾಠ ಹೇಳಿಕೊಡಬೇಕಾಗಿದೆ ಇಂಥ ಘಾತುಕ ಮತ್ತು ಅಮಾನುಷ ಯುದ್ಧದಲ್ಲಿ ಬೀಳದೆ ಮಾನವ ಜನಾಂಗದ ಸುಖ ಶಾಂತಿಗಳಿಗಾಗಿ ತಮ್ಮ ಜ್ಞಾನ ಮತ್ತು ಜಾಣತನದ ಉಪಯೋಗ ಮಾಡಿಕೊಳ್ಳಿರೆಂದು ನಾನು ಹಿಟ್ಲರ ಮುಸೊಲಿನಿ, ಸ್ಟಾಲೀನ್ ಮತ್ತು ಚರ್ಚಿಲ್ಲರಿಗೆ ಹೇಳಬಯಸುತ್ತೇನೆ

"ಹೀಗೆ ಯಾವ ಕಾರ್ಯವನ್ನು ಮಾಡಬೇಕಾಗುವದೆಂಬುದನ್ನು ನಾನು ಹೇಳಲಾರೆ ಆದರೆ ನೀವು ಯಾವುದನ್ನು ಮಾಡಬಾರದೆಂಬುದನ್ನು ಮಾತ್ರ ಹೇಳುವೆನು. ಮೊದಲನೆಯದಾಗಿ ಸಾರ್ವಜನಿಕ ಸವಿನಯ ಕಾಯದೆಭಂಗದ ಮಾತಂತೂ ಇಲ್ಲವೇ ಇಲ್ಲ, ವೈಯಕ್ತಿಕ ಸವಿನಯ ಕಾಯದೆಭಂಗ ಅದೂ ಇನ್ನೂ ನಿಶ್ಚಿತವಿಲ್ಲ ಸಂಭವವಾಗಬಹುದು — ಆದರೆ ನಾನು ಆ ಬಗ್ಗೆ ಇನ್ನೂ ವಿಚಾರ ನಡಿಸಿರುವೆನೆಂದು ಮಾತ್ರ ಹೇಳುವೆನು ಆದರೆ ನನಗಿನ್ನು ಯಾವದೂ ಹೊಳೆದಿಲ್ಲ ಆ ಬಗೆಯ ಬೆಳಕು ನನಗೆ ಹೊಳೆದ ಕೂಡಲೇ ನಿಮ್ಮ ಮುಂದೆ ಅದನ್ನು ಇಡುವೆನು ಆದರೆ ಅದರಲ್ಲಿ ನಾನು ಯಶಸ್ವಿಯಾದರೆ ಮೌಲಾನಾ ಅಬುಲ್ ಕಲಾಂ ಅಜಾದ ಸಾಹೇಬರೆಡೆಗೆ ನಾನು ಹೋಗುವೆನು ಒಂದು ವೇಳೆ ಅವರು ತುರುಂಗದಲ್ಲಿದ್ದರೆ ಅಲ್ಲಿಗೇ ಹೋಗಿ ಅವರನ್ನು ಭೇಟಿಯಾಗುವೆನು ಆದರೆ ನಿಮಗೆ ಅದನ್ನು ತಿಳಿಸುವೆನೆಂಬುದು ಮಾತ್ರ ನಿಶ್ಚಿತ ನನಗೆ ಸಾಕಷ್ಟು ಶಕ್ತಿ ಸಾಮರ್ಥ್ಯ ಧೈರ್ಯಗಳನ್ನು ದೇವ ಪಾಲಿಸಬೇಕೆಂದು ನೀವು ಪರಮಾತ್ಮನನ್ನು ಪ್ರಾರ್ಥಿಸಿರಿ ನನ್ನ ಮೇಲೆ ಹೊರಿಸಿದ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾಕಷ್ಟು ಜ್ಞಾನವನ್ನೂ ಪರಮಾತ್ಮನು ನನಗೆ ಕೊಡಲೆಂದು ಆಶಿಸಿ ಬೇಡಿ ಕೇಳಿರೆಂದು ನಿಮಗೆಲ್ಲರಿಗೆ ಕೇಳಿಕೊಳ್ಳುತ್ತೇನೆ

ಹಿಟ್ಲರನ ಮರಣ ೧೯೪೪ರಲ್ಲಿ
ಕ್ರಿಶ್ಚಿಯನ್ ಪಾದ್ರಿಯ ಭವಿಷ್ಯ

ಮೈಕಲ್ ಡಿನೋಸ್ಟ್ರಡಾಮಸ್ ಎಂಬ ಕ್ರಿಶ್ಚಿಯನ್ ಪಾದ್ರಿಯು ಹಲವು ಭವಿಷ್ಯಗಳನ್ನು ಹೇಳಿದ್ದನು. ಆತನು ತನ್ನ ಮರಣ, ನೆಪೋಲಿಯನನ ಮರಣ, ಫ್ರಾಂಕೋ-ಪ್ರಶ್ಯನ್ ಯುದ್ಧ ಮೊದಲಾದವುಗಳ ವಿಷಯ ಹೇಳಿದ್ದು ಎಲ್ಲಾ ಸತ್ಯವಾಗಿವೆ! ಆತನು ಹಿಟ್ಲರನ ಕುರಿತು ಹೀಗೆ ಹೇಳಿರುವನು.

"೧೯೪೪ರಲ್ಲಿ ಹಿಟ್ಲರನು ಒಂದು ಕಬ್ಬಿಣದ ಪಂಜರದಲ್ಲಿ ಬಂಧಿತನಾಗಿ ಮೃತನಾಗುವನು. ಅವಿಗ್ನೇನ್‌ದಲ್ಲಿ ವಾಸಿಸುವ ರಾಜನೊಬ್ಬನು ಆತನ ಸಾಮ್ರಾಜ್ಯವನ್ನು ಹಾಳುಗೆಡಹುವನು, ಪೋಯಿದೀಯರ್ಸಿನ ಬಳಿ ಅವರಿಗೆ ಕಾಳಗವಾಗುವುದು. ಪೋಪರು ರೋಮನ್ನು ಬಿಡಬೇಕಾಗುವುದು. ವೆಟಿಕಾನ್ ಮತ್ತು ಕ್ರೆಂಲಿನ್‌ಗಳು ಭಸ್ಮವಾಗುವವು"

ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗಾಯದ ವಿಷಯು ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುರುಕನ್ನು ಖಂಡಿತ ಗುಣಗೊಳಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶ ಮಾಡಿ ಕಾಲ್ಮರಕನ್ನು ಅಧಿಕಗೊಳಿಸುವ ವಿಷವನ್ನು ನಾಶವಮಾಡಿ, ವಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯ ಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ, ಕರ ... ಗಾಯ ಪಟ್ಟು ... ಮುದ್ದಣ ... ತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT



ನಿಮ್ಮದು ಯಾಕೆ ಆಗಬಾರದು?

ನಿಮಗೆ ನೆಟ್ಟಗಾಗದ ಕಾರಣ ಒಂದೇ ಅಂದರೆ ಗುಣಪಡುವ ಆಶಯಿಂದ ನೀವು ಇಲ್ಲಿಯವರೆಗೆ ದೊರಕಿಸಿದ ಔಷಧಗಳೆಲ್ಲ ನಿರುಪಯೋಗಿಯಾಗಿದ್ದವು ಪುರೋಹಿತ-ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿನೊಂದಿಸದೆ ಬೇರು ಸಹಿತ ಕಿತ್ತೊಗೆದು ಗುಣವಾಗುತ್ತದೆ ಅದನ್ನು ತೆಗೆದುಕೊಳ್ಳುತ್ತಿದ್ದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು ಔಷಧತೊಂದರೆ ಉಳಿಯುವುದಿಲ್ಲ, ಪಚನಶಕ್ತಿಯು ನೆಟ್ಟಗಾಗುವುದು ನಾವು ಕಾಶವಾಗಿ ಶಕ್ತಿಯು ತುಂಬಿಬಂದು ಪುಪ್ಪುಸವು ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ನೆಟ್ಟಗಾಗುವುದು ಪುರೋಹಿತ ಶ್ವಾಸಹಾರಿಯು ೩ ಔ, ೬ ಔ ಮತ್ತು ೧೨ ಔ ಬಾಟ್ಲಿಗಳಲ್ಲಿ ಕ್ರಮವಾಗಿ ರೂ. ೨-೧೨ ಮತ್ತು ೬ ... ಗಳಿಗೆ ಎಲ್ಲ ಕಡೆಸಿಗುವುದು ತರಿಸಿಕೊಳ್ಳುವ ವಿಳಾಸ.

ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಮುಂಬಯಿಯ ಸೋಲ್ ಏಜಂಟರು
ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨

ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ
ಪುರೋಹಿತ ಶ್ವಾಸಹಾರೀ

ವಿಜ್ಞಾನಯುಗ

ನಿದ್ರೆಯಿಂದ ಎಚ್ಚರಿಸುವ ಹೊಸಜಾತಿಯ ಗಡಿಯಾರ

ಅಮೇರಿಕದ ಒಬ್ಬ ವಿಜ್ಞಾನಿಯು ನಿದ್ರೆಯಲ್ಲಿದ್ದವರನ್ನು ಎಚ್ಚರಿಸುವ ಒಂದು ವಿಚಿತ್ರ ಗಡಿಯಾರವನ್ನು ಕಂಡುಹಿಡಿದು ಅದನ್ನು ಸರಕಾರದಲ್ಲಿ ರಿಜಿಸ್ಟರು ಮಾಡಿದ್ದಾನೆ. ಈ ಗಡಿಯಾರವು ಇತರ ಎಲಾರಮು ಟ್ಯಾಬ್ ಪೀಸುಗಳಂತೆ ಎಚ್ಚರಿಕೆಯ ಗಂಟೆಯನ್ನು ಮಾತ್ರ ಬಾರಿಸುವುದಿಲ್ಲ. ಈ ಗಡಿಯಾರವು ನಿಶ್ಚಿತ ಸಮಯದಲ್ಲಿ ಒಳಗಿನ ಯಂತ್ರ ಸಲಕರಣೆಯಿಂದ ಲೋಹದ ಕೆಲವು ದಾರಗಳನ್ನು ಕೆಳಗೆ ಇಳಿಸುತ್ತದೆ. ಈ ದಾರಗಳು ನೆಲ ಅಥವಾ ಮಂಚದ ಮೇಲೆ ಮಲಗಿ ನಿದ್ರಿಸುತ್ತಿರುವವನ ಮುಖ ಮೊದಲಾದ ಅಂಗ ಭಾಗಗಳ ಮೇಲೆ ಹರಿದಾಡಲಾರಂಭಿಸಿ ಅವನನ್ನು ನಿದ್ರೆಯಿಂದ ಎಚ್ಚರಿಸುವವು. ನಿದ್ರಿಸುವವನು ಈ ದಾರಗಳಿಂದ ಸಾಕಷ್ಟು ದೂರ ಹೊರಳಾಡಿ ಹೋದರೂ ಕೂಡ ದಾರಗಳು ಅವನನ್ನು ಅಲ್ಲಿಗೇ ಬಿಡುವದಿಲ್ಲ. ಅವು ಮೆತ್ತೆ ಮತ್ತು ಉದ್ದಕ್ಕೆ ಇಳಿಯುತ್ತ ಹೋಗಿ, ಉಪದ್ರವ ಕೊಟ್ಟಾದರೂ ಅವನನ್ನು ಎಚ್ಚರಿಸುವವು. ಆದರೆ ಈ ಕಾರ್ಯನಿರ್ವಾಹದಲ್ಲಿ ಹೊಸ ಗಡಿಯಾರವು ಎಲಾರಮ್ ಟ್ಯಾಬ್ ಪೀಸುಗಳಂತೆ ಯಾವ ಶಬ್ದಾಡಂಬರವನ್ನು ತೋರಿಸುವುದಿಲ್ಲ. ಗಾಢ ನಿದ್ರೆಯಲ್ಲಿರುವ ಪ್ರೇಮಿಯನ್ನು ರಸಿಕಪತ್ನಿಯು ಬಂದು ರಾತ್ರಿಯಲ್ಲಿ ಎಚ್ಚರಿಸುವ ಹಾಗೆ ನಿದ್ರೆಯಲ್ಲಿರುವವನನ್ನು ಮೆಲ್ಲಗೆ ಸುಖವಾಗಿ ಎಬ್ಬಿಸುತ್ತದೆ.

ಸೂಜಿಗೆ ದಾರಹಾಕಲಿಕ್ಕೆ ಉಪಾಯ

ಸೂಜಿಗೆ ದಾರ ಹಾಕುವುದು ಸ್ವಲ್ಪ ಪ್ರಯಾಸದ ಕೆಲಸ. ಅವಸರದಲ್ಲಿ ಅದನ್ನು ಮಾಡಲಾಗುವುದಿಲ್ಲ. ಮಂದ ದೃಷ್ಟಿಯುಳ್ಳವರಿಗಂತೂ ಈ ಕೆಲಸವು ಕಬ್ಬಿಣದ ಕಡಲೆಗಳನ್ನು ತಿಂದ ಹಾಗೆ ಇರುತ್ತದೆ. ಅದಕ್ಕೋಸ್ಕರ ಅಮೆರಿಕದ ಒಬ್ಬ ವಿಜ್ಞಾನಿಯು ಸೂಜಿಗೆ ದಾರವನ್ನು ಹಾಕಲಿಕ್ಕೆ ಒಂದು ಉಪಾಯವನ್ನು ಕಂಡುಹಿಡಿದಿದ್ದಾನೆ. ಈ ಉಪಾಯವು ವಿಜ್ಞಾನಿಯು ಕಂಡು ಹಿಡಿದ ಹೊಸ ಬಗೆಯ ಸೂಜಿಯಲ್ಲಿ ಇರುತ್ತದೆ. ನೂಲನ್ನು ಒಂದು ಗೋಣಸು ಮಾಡಿ ಆ ಹೊಸ ಜಾತಿಯ ಸೂಜಿಯಲ್ಲಿರುವ ಚಡಿಯಲ್ಲಿಟ್ಟು ಮೆಲ್ಲಗೆ ಅದನ್ನು ಮುಂದಕ್ಕೆ ಜಾರಿಸಿದರಾಯಿತು, ನೂಲು ಸೂಜಿಯ ತೂತಿನಿಂದ ಈಚೆಗೆ ಬರುವುದು!

ದಾಕು ಹಾಕುವ ಬಗ್ಗೆ ಹೊಸ ದ್ರಾವಕ

ವಿಜ್ಞಾನಿಗಳು ದಾಕು ಹಾಕುವ ಬಗ್ಗೆ ಒಂದು ಹೊಸ ದ್ರಾವಕವನ್ನು ಕಂಡು ಹಿಡಿದಿದ್ದಾರೆ. ಈ ದ್ರಾವಕವು ಇಷ್ಟರ ತನಕ ದಾಕಿನ ಸೀರಿನಂತೆಯೇ ಪರಿಣಾಮಕಾರಿಯಾಗಿದೆ. ಆದರೆ ಈಗಿನ ದಾಕು ಹಾಕುವ ಕ್ರಮದಲ್ಲಿರುವದಕ್ಕಿಂತ ಹೊಸ ಕ್ರಮದಲ್ಲಿ ಕೆಲವು ಪ್ರಯೋಜನಗಳು ಇರುವುವು. ಈಗ ದಾಕು ಹಾಕುವಾಗ ದಾಕಿನ ಕಲೆಗಳು ಕಾಣಿಸಿಕೊಳ್ಳುತ್ತವೆಯಷ್ಟೆ? ಆದರೆ ಹೊಸ ಕ್ರಮದಿಂದ ದಾಕ ಹಾಕಿದಾಗ ಈ ಕಲೆಗಳು ತೋರುವದಿಲ್ಲ. ಅಲ್ಲದೆ ಈ ಹೊಸ ಕ್ರಮದಿಂದ ದಾಕ ಹಾಕಿಸಿಕೊಂಡಾಗ ಜ್ವರ ನೋವು, ವೇದನೆಗಳಿರುವದೂ ಇಲ್ಲ. ದಾಕಿನ ಪರಿಣಾಮವಾಗಿ ಬೇರೆ ರೋಗದ ಚಿಹ್ನೆಗಳು ಕಾಣಿಸಿಕೊಳ್ಳುವದೂ ಇಲ್ಲ. ಆದುದರಿಂದ ಈ ಹೊಸ ಕ್ರಮವು ಪ್ರಚಾರವಾಗುತ್ತ ಬಂದಹಾಗೆ ದಾಕಿನ ಸಂಬಂಧ ಸರ್ವಸಾಮಾನ್ಯ ಜನರ ಹಲವು ಆಕ್ಷೇಪಗಳು ತಾವಾಗಿ ದೂರವಾಗಬಹುದು.

ಮರಳಿನಿಂದ ಕಬ್ಬಿಣ

ಇಟಲಿಯ ಒಬ್ಬ ವಿಜ್ಞಾನಿಯು ಸಮುದ್ರದ ದಂಡೆಯ ಹೊಯಿಗೆಯಿಂದ ಕಬ್ಬಿಣವನ್ನು ಎತ್ತಿಕೊಳ್ಳುವ ಒಂದು ಯಂತ್ರ ಸಾಧನವನ್ನು ಕಂಡು ಹಿಡಿದಿದ್ದಾನೆ. ಈ ಯಂತ್ರದಲ್ಲಿ ಒಂದು ಸೂಜಿ ಕಲ್ಲು ಇರುತ್ತದೆ. ಅದು ಕಬ್ಬಿಣವನ್ನೊಳಗೊಂಡ ಹೊಯಿಗೆ ಕಣಗಳನ್ನು ಆಕರ್ಷಿಸಿ ಹಿಡಿಯುತ್ತದೆ. ಉಳಿದ ಹೊಯಿಗೆಯು ಯಂತ್ರದೊಳಗಿನ ನೀರಿನ ಪ್ರವಾಹದಿಂದ ತೊಳೆದು ಹೋಗುತ್ತದೆ. ಹೊಯಿಗೆಯ ಕಣಗಳಲ್ಲಿ ಕಬ್ಬಿಣವು ಸೇರಿರುವ ಮರಳು ದಂಡೆಗಳ ಸಮೀಪ ವಾಸವಾಗಿರುವ ಇಟಾಲಿಯನ ಕುಟುಂಬಗಳಿಗೆ ಈ ಯಂತ್ರಗಳನ್ನು ಕೊಟ್ಟು ಅವರ ಮೂಲಕ ಕಬ್ಬಿಣದ ಹೊಯಿಗೆ ಕಣಗಳನ್ನು ರಾಶಿ ಹಾಕುವ ಮತ್ತು ಅವುಗಳಿಂದ ಕಬ್ಬಿಣವನ್ನು ತಯಾರಿಸುವ ಆಲೋಚನೆಯು ಇಟಲಿ ಸರಕಾರಕ್ಕಿದೆ. ಈ ಯಂತ್ರಗಳು ಚಿಕ್ಕವಾಗಿದ್ದು ಸಣ್ಣ ಕುಟುಂಬಗಳೂ ಅವುಗಳನ್ನು ಸುಲಭ ಬೆಲೆಗೆ ಕೊಂಡುಕೊಳ್ಳುವಂತೆ ಇರುವುವು.

ಸೂರ್ಯಕಿರಣಗಳಿಗೆ ಕ್ರಿಮಿನಾಶಕ ಗುಣವಿದೆ

ಬಿಸಿಲಿನ ಬಾಧೆ ಹೆಚ್ಚಾದರೆ ಅದರಿಂದ ಪ್ರಾಣಹಾನಿಯಾಗುವುದಿದೆ. ಆದರೆ ಸೂರ್ಯ ಕಿರಣಗಳು ಸಂಜೀವನವಾಗಿರುವವು. ಬೇರೆ ಯಾವ ವಸ್ತುವಿನಲ್ಲಿಯೂ ಇಲ್ಲದಷ್ಟು ಕ್ರಿಮಿ ನಾಶಕ ಶಕ್ತಿಯು ಸೂರ್ಯಕಿರಣಗಳಲ್ಲಿ ಇರುತ್ತದೆ. ರೋಗಾಣುಗಳಲ್ಲಿ ಹೆಚ್ಚಿನವುಗಳು ಸೂರ್ಯಕಿರಣಗಳಲ್ಲಿ ನಾಶವಾಗುತ್ತವೆ. ಅನೇಕ ರೋಗಗಳಿಗೆ [illegible] ಕಾರಣವಾಗಿದೆ. ಯಾಕಂದರೆ [illegible] ಮೂಲಕವಾಗಿ ರೋಗಾಣುಗಳು ರೋಗಿಯ ಶರೀರವನ್ನು ಪ್ರವೇಶಿಸುವವು. ಆದರೆ ಮಾಂತಿ ಭೇದಿ, ಕ್ಷಯ ಮೊದಲಾದ ಸೋಂಕು ರೋಗಗಳ ಅಣುಗಳು ನೀರನ್ನು ಬಿಸಿಮಾಡಿದಾಗ ಸಾಯುವವು. ನೀರಿನ ಮೇಲೆ ಬಿಸಿಲು ಬಿದ್ದಾಕ್ಷಣ ನೀರಿನೊಳಗಿನ ಸೇಕಡ [illegible]ರಷ್ಟು ರೋಗಾಣುಗಳು ಸತ್ತು ಹೋಗುವವು. ಉಗುಳು, ಮಲಮೂತ್ರ, ಕಫ ಮೊದಲಾದವುಗಳಲ್ಲಿರುವ ರೋಗಾಣುಗಳ ಕೂಡ ತೀಕ್ಷ್ಣ ಬಿಸಿಲು ಬಿದ್ದಾಗ ನಾಶವಾಗುವವು. ಆದುದರಿಂದಲೇ ಹಿಂದಿನವರು ಬಿಸಿಲು ಸಂಚಾರದ ಆವಶ್ಯಕತೆಯನ್ನು ತಿಳಿಸಿದರು. ಸೂರ್ಯಾಭಿಮುಖವಾಗಿ ಅರ್ಘ್ಯ ಕೊಡುವದು, ಸೂರ್ಯನಮಸ್ಕಾರ ಮೊದಲಾದ ವಿಧಿಗಳಲ್ಲಿ ಆರೋಗ್ಯ [illegible]ವೇ ಅಡಕವಾಗಿರುವದು ಕಂಡುಬರುತ್ತದೆ. ಆದುದರಿಂದ ನಮ್ಮ ಶಕ್ತಿಗೆ ಅನುಕೂಲವಾಗಿ ಬಿಸಿಲಿನಲ್ಲಿ ಸಂಚಾರ ಮಾಡುವದು ಆರೋಗ್ಯ ಸಂಪಾದನೆಗೆ ಸಹಕಾರಿಯಾಗಿದೆ.

ಮಂಗಳೂರು
ಶೋಚನೀಯ ನಿಧನ!

ಮಂಗಳೂರಿನಲ್ಲಿ ಕ್ರಿಕೆಟ್ ಹಾಕಿ ಮೊದಲಾದ ಆಟಗಳಲ್ಲಿ ಪ್ರಸಿದ್ಧರಾದ ಶ್ರೀ ದ. [illegible]ರಾಯರು ಕೆಲದಿನಗಳ ಹಿಂದೆ ಹಾಕಿ ಆಡುತ್ತಿದ್ದಾಗ ಪೆಟ್ಟಾಗಿ ತಾ. 19ರಂದು ಬೆಳಗೆ ಮೃತರಾದರೆಂದು ತಿಳಿಸಲು ಅತ್ಯಂತ ವಿಷಾದಪಡುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ.

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ ★ ಬೆಂಕಿಯ ಅನಾಹುತ ★ ಕಡಲಿನ ಅಪಾಯ ★ ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10 ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ

ಕಾಯಂ ನಿಶ್ಚಿತ ಬೋನಸ್ ರೂ 10/

ಸರ್ವಸಾಧಾರಣ ಬೋನಸ್ ರೂ 11

ಹೀಗೆ ಜುಮ್ಲಾ ರೂ 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಏಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ ಎನ್ ನಾಯಕ್
ಆರ್ಗನೈಸರ್
ಪೆಂಟ್ಲೆಂಡ್ಸ್ ಪೇಟೆ, ಮಂಗಳೂರು,

ಅಥವಾ

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀಘ್ರ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ—ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗ್ಯೆರೆ ಸ್ಥಳಗಳಿಗೆ ಹೋಗುವರಿಗೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

JOINT MANAGERS,

The Combined Booking Agency,
MANGALORE.

The Joint Booking Office
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಕಾಲ ಹಡಿಯುವುದರಿಂದ ಹೆಂಗಸರ ಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಆಗುತ್ತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕಡಾಖಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. [illegible] ಔಷಧ [illegible] ಸರ್ಟಿಫಿಕೆಟು ... ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಸಾಹೇಬ, ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವಾ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಬಟ್ಟೆಯ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗ್ಯೆರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	—	
„ ದುಯಂ „ „	1—15—0	
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುಡ್ಡ „	4—12—0	4—14—0
„ ದುಯಂ „ „	4—10—0	4—10—0
„ ಅವ್ವಲ್ ಸುಗ್ಗಿ „	4—8—0	4—10—0
„ ದುಯಂ „ „	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
„ ಸಿಪ್ಪೆ ಇದ್ದದು „	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
„ ದಿಲ್‌ಪಸಂದಿ „	—	—
ತೆಂಗಿನ ಎಣ್ಣೆ ಮುಡಿಕ್ಕೆ	8—10—0	8—10—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	4—0—0	4—0—0
ಜೀರುಬೀಜ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	42—8—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	13—8—0	14—0—0

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2—13—0 | Regd No. M.3406

ಸ್ವದೇಶಾಭಿಮಾನಿ

ಸಂಪುಟ 34] | ತಾರೀಖು 20—9—1940 | [ಸಂಚಿಕೆ 38

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs 1.42 Crores
Total Funds exceed	Rs. 1.52 Crores
Premium income during the year exceeds ..	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to any of our following Offices:—

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕೆ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತಾ

(ಬ್ರ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಕುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಕನ್ನಡ ಯುವತಿಯರ ... ಕನ್ಯೆಯರು!

... ಸಮಾಜದಲ್ಲಿ ... ಕ್ರಾಂತಿ!

... ಹೊರಗೆ ಬಂದು ... ಸಾರ್ವಜನಿಕ ಕಾರ್ಯಗಳಲ್ಲಿ ... ಅತ್ಯಂತ ... ನಾಗುತ್ತಿರುವರು!

ಪ್ರತಿಷತ್ತಿನ ಅಧ್ಯಕ್ಷೆಯರ ಮೆರವಣಿಗೆಯಲ್ಲಿ ಮಹಿಳೆಯರು ಮಾತ್ರ ಇದ್ದರು! ಪುರುಷ ಸ್ವಯಂಸೇವಕರಿಗೆ ಅವತ್ತು ಆ ದಿನ ಯಾವ ಕಾರ್ಯಕಲಾಪಗಳನ್ನು ನಡೆಸುವ ಸಂದರ್ಭವನ್ನೇ ಕೊಟ್ಟಿರಲಿಲ್ಲ. ಅಷ್ಟು ಉತ್ಸಾಹ ಅವರಲ್ಲಿತ್ತು!

ಹಿಂದೂ ವಿಶ್ವನ ಸಂಘಕ್ಕೆ ಸೇರಿದ ಹಿಂದು ಢಳದ ಹರಿಯುದ ಯುವತಿಯರು ಕುದುರೆಯ ಮೇಲೆ ಕುಳಿತು ಅಧ್ಯಕ್ಷೆಯರ ಮುಂದುಗಡೆ ಸಾಗುತ್ತಿದ್ದರು! ಅವರ ಹಿಂದೆ, ಎತ್ತಿದ ಕತ್ತಿಯನ್ನು ಝಳಪಿಸುತ್ತಾ ಸಿಖ್ ಸುಂದರಿಯರು ಸಾಲಾಗಿ ಸಾಗುತ್ತಿದ್ದರು!

ನೀಲಬಣ್ಣದ ವೇಷದಿಂದ ರಾಷ್ಟ್ರೀಯ ಯುವತೀ ಸಂಘದ ಕನ್ಯೆಯರು ಬೇಂಡ್ ವಾದ್ಯವನ್ನು ಬಾರಿಸುತ್ತಾ ಅವರ ಹಿಂಬದಿ ಬರುತ್ತಿದ್ದರು! ಅವರ ಹಿಂದೆ ಸೊಂಟದಲ್ಲಿ ಕತ್ತಿಯನ್ನು ತೂಗಾಡಿಸಿಕೊಂಡು ಹಿಂದೂ ವಿಶ್ವನಿನ ಮಹಿಳೆಯರನೇಕರು ಜಗಜಟ್ಟಿಗಳಂತೆ ಶಿಸ್ತು ಕಟ್ಟಿನಿಂದ ನಡೆಯುತ್ತಿದ್ದರು! ಆರ್ಯಕನ್ಯಾ ಮಹಿಳಾ ವಿದ್ಯಾಲಯದ ವಿದ್ಯಾರ್ಥಿನಿಯರು ಕೈಯ್ಯಲ್ಲಿ ಕೋವಿಗಳನ್ನು ಹಿಡಕೊಂಡು ಗಂಭೀರವಾಗಿ ಸಾಗುತ್ತಿರುವದು ಸರ್ವರ ದೃಷ್ಟಿಯನ್ನೂ ಆ ಕಡೆ ಆಕರ್ಷಿಸುತ್ತಿತ್ತು. ಅವರ ಹಿಂದಡೆ, ಮುಖಕ್ಕೆ ಪರದೆ ಹಾಕದೆ, ಅನೇಕ ಮಂದಿ ಮಾರ್ವಾರಿ ಹೆಂಗಸರು ಸಾಗುತ್ತಿದ್ದರು. (ಕಲ್ಕತ್ತೆಯಲ್ಲಿ ಮಾರ್ವಾರಿ ಹೆಂಗುಸರು ಮುಖಕ್ಕೆ ಪರದೆ ಹಾಕದೆ ಸಾಗುವ ದೃಶ್ಯವು ಬಹಳ ಅಪರೂಪವಾದುದು).

ಪರ್ದಾಪದ್ಧತಿಯು ಸಮಾಜವಿರುದ್ಧ ಧರ್ಮವಿರುದ್ಧ, ಲೋಕವಿರುದ್ಧ,—ಆದುದರಿಂದ ಅದನ್ನು ನಿರ್ಮೂಲಗೊಳಿಸಲೇ ಬೇಕು'ಹೀಗೆಂದು ಪರಿಷದಧ್ಯಕ್ಷೆಯರಾದ ಶ್ರೀಮತಿ ರಾಧಾದೇವಿಯವರು ಸಾರಿದರು!

ಉತ್ತರ ದೇಶದ ಭಾರತೀಯ ಸ್ತ್ರೀ ಸಮಾಜದಲ್ಲಿ ಇದು ಅತ್ಯಂತ ರೋಮಾಂಚಕಾರೀ ಕ್ರಾಂತಿಯಾಗಿದೆ!

ಜಗತ್ತಿನ ನಾಗರಿಕತೆಯ ರಕ್ಷಣಾರ್ಥವಾಗಿಯಂತೆ!

ಯುದ್ಧನಿಧಿಗೆ ಅರವಿಂದರ ಸಹಾಯ

ಶ್ರೀ ಅರವಿಂದ ಘೋಷರು ಯುದ್ಧ ನಿಧಿಗೆ ೩೦೦೦ ರೂಪಾಯಿಗಳನ್ನು ಕಳುಹಿಸಿರುವರು. ಅದರೊಡನೆ ಈ ಸಾರಾಂಶದ ಪತ್ರ ಬರೆದಿರುವರು.

"ನಾಜಿ ವಿರುದ್ಧ ಹೂಡಿದ ಯುದ್ಧಕ್ಕೆ ನನ್ನ ಸಂಪೂರ್ಣ ಬೆಂಬಲ. ಬ್ರಿಟಿಷರ ಈ ಯುದ್ಧದಿಂದ ಜಗತ್ತಿನ ನಾಗರಿಕತೆ, ಯಾಗುವುದೆಂದು ನಾವು ಭಾವಿಸುತ್ತೇವೆ. ಸುವ್ಯವಸ್ಥೆಯ ಯುಗವು ಪ್ರಾರಂಭವಾ ಧಾರ್ಮಿಕತೆಯ, ಸಂಸ್ಕೃತಿಯ ಸಂರಕ್ಷಣೆ ಮುಂದೆ ಬಿಕ್ಕಟ್ಟಿನ ಯುಗವಾರಂಭವಾಗಿ ಗಲಿ ಎಂದು ನಾವು ಹಾರೈಸುತ್ತೇವೆ."

ನಿಮ್ಮ ಇಡೀ ಕುಟುಂಬಕ್ಕೆ ಆರೋಗ್ಯ ಮತ್ತು ಬಲವನ್ನೀಯುವುದು!



ನಿಮ್ಮ ಕುಟುಂಬದ ಸೌಖ್ಯ ಆರೋಗ್ಯ ಮತ್ತು ಬಲ ಹಾಗೂ ನವಚೇತನವು ನಿಮ್ಮ ತಕ್ಕುದಾದ ಪೋಷಣೆಯ ಮೇಲೆ ಹೊಂದಿಕೊಂಡಿದೆ. ಆದಕಾರಣ ನಿಮ್ಮ ಕುಟುಂಬದ ಶಕ್ತಿಯುತವಾದ ಆರೋಗ್ಯವನ್ನು ಭದ್ರಪಡಿಸಲು ಯೋಗ್ಯವೂ ಉಚಿತವೂ ಆದ ಪೋಷಣೆಯನ್ನೀಯಿರಿ.

"ಓವಲ್ಟಿನ್" ಎಂಬ ಶ್ರೇಷ್ಠವಾದ ಶಕ್ತಿವರ್ಧಕ ಆಹಾರ ಪಾನಕವು ದೇಹಕ್ಕೆ ಸಂಪೂರ್ಣವಾಗಿ ತಕ್ಕುದಾದ ಪೋಷಣೆಯನ್ನೀಯುವುದು. ಇದು ಪ್ರಕೃತಿಯು ಸಂಪನ್ನವಾದ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಿದುದಾಗಿರುತ್ತದೆ—ಮಾಗಿ ನೆನೆಹಾಕಿ ಹುರಿದ ಬಾರ್ಲಿ, ದನದ ಹಾಲು ಮತ್ತು ನೈಸರ್ಗಿಕ ಶಕ್ತಿವರ್ಧಕ ವಿಟಮಿನ್ ಮತ್ತು ಫೋಸ್ಫೆಟೈಡ್ಸ್‌ಗಳಿಂದ ಕೂಡಿದೆ. ಪ್ರತೀ ದಿನವೂ ಸೇವಿಸುವ ಅತ್ಯಂತ ರುಚಿಕರವಾದ ಒಂದು ಕಪ್ಪು "ಓವಲ್ಟಿನ್" ನಿಮ್ಮನ್ನೂ ನಿಮ್ಮ ಕುಟುಂಬವನ್ನೂ ಚುರುಕಾದ ಉತ್ತಮ ಆರೋಗ್ಯದಲ್ಲಿರಿಸುವುದು. "ಓವಲ್ಟಿನ್"ನ್ನು ಉಪಯೋಗಿಸಲು ಪ್ರಾರಂಭಿಸಿರಿ—ಮತ್ತು ಇದರಿಂದ ನಿಮ್ಮ ಕುಟುಂಬಕ್ಕೆ ಯಾವ ರೀತಿಯ ಪ್ರಯೋಜನವು ದೊರಕುವುದೆಂದು ಗಮನಿಸಿರಿ.

ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:-

ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್

ಹೆಡ್ ಹೋಸ್, ಫರ್ಸ್ಟ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್, ಮದ್ರಾಸು.

ಬೊಂಬೈ, ಕಲ್ಕತ್ತಾ ಹಾಗೂ ಕರಾಚಿಯಲ್ಲಿದೆ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರ...'

'ಓವಲ್‌ಟಿನ್' ಬಿಸ್ಕುಟುಗಳು:— ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ್ಯ ಬಲಿಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/16/39

YIKSJW...

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27-1-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೭-೧-೧೯೪೦]

ದುರ್ಬಲನಾಗಿದ್ದುದರಿಂದ ಅನ್ಯಾಯ ಮಾಡಿದೆ!

ಯುದ್ಧದ ಮುಗಿಲು ಮರೆಯಾಗಿ ಭಾರತವು ತನ್ನ ಹಕ್ಕನ್ನು ಗಳಿಸಿಕೊಂಡಾಗ, ಕಾಂಗ್ರೆಸಿನವರು ತಮ್ಮ ಪ್ರಧಾನ ಮಂತ್ರಿಯಾಗಿ ಹಿಂದುವೊಬ್ಬನನ್ನು ಎಷ್ಟು ಪ್ರೀತಿಯಿಂದ ಸ್ವಾಗತಿಸುವರೋ ಅಷ್ಟೇ ಪ್ರೀತಿಯಿಂದ ಧಾರ್ಮಿಕ ವಿಶ್ವಾಸವು ಹೇಗೇ ಇದ್ದರೂ, ಒಬ್ಬ ಮುಸ್ಲಿಮನನ್ನೊ, ಸಿಕ್ಖನನ್ನೋ, ಕ್ರಿಶ್ಚಿಯನನನ್ನೋ, ಪಾರ್ಸಿಯನ್ನೋ ಪ್ರಧಾನ ಮಂತ್ರಿಯಾಗಿ ಸ್ವಾಗತಿಸುವರು. ರಾಜಾಜಿಯವರ ಸರಸ ಉತ್ತರವು (Sporting offer) ಇದಕ್ಕಿಂತ ಹೆಚ್ಚಾಗಲಿ, ಕಡಿಮೆಯಾಗಲಿ ಅರ್ಥ ಕೊಡಲಾರದೆಂದು ನಾನು ತಿಳಿಯುತ್ತೇನೆ. ನಾನಾ ಊಹನೆಗಳು ಸಮಾಧಾನವಾದಾಗ, ಟೀಕಾಕಾರರೊ ಇದನ್ನು ಈ ರೀತಿಯಾಗಿಯೇ ಅರ್ಥ ಮಾಡಿಕೊಳ್ಳುವರು. ಒಬ್ಬ ಸಾರ್ವಜನಿಕ ಕೆಲಸಗಾರನ ವಿಷಯವಾಗಿ ಅಪಾರ್ಥ ಮಾಡುವುದು ತಪ್ಪು. ಅಪಾರ್ಥ ಮಾಡಿದರೂ ರಾಜಾಜಿಯವರೇನೂ ನಷ್ಟಕ್ಕೊಳಗಾಗಲಾರರು. ಆದರೆ ಅಂತಹ ಅಪಾರ್ಥಗಳಿಂದ ಒಬ್ಬ ನಿಜವಾದ ಸೇವಕನ ಸೇವೆಯು ರಾಷ್ಟ್ರಕ್ಕೆ ದೊರಕದೆ, ರಾಷ್ಟ್ರಕ್ಕೇ ದೊಡ್ಡ ಹಾನಿಯಾಗಬಹುದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸು ಇಂದು ತನ್ನ ಮೂಲಭೂತ ಹಕ್ಕಾದ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿಯಬೇಕಾದ ಸಂದರ್ಭದಲ್ಲಿ, ರಾಷ್ಟ್ರಸೇವಕರ ಕುರಿತು ಅಪಾರ್ಥ ಮಾಡುವ ಟೀಕೆಗಳನ್ನು ಮಾಡುವುದು ಕೇವಲ ವಿದ್ರೋಹಕರವಾದುದು."

ಹೀಗೆಂದು ಮಹಾತ್ಮಾ ಗಾಂಧಿಜಿ, ರಾಜಾಜಿಯವರು ಮುಸ್ಲಿಂ ಲೀಗಿನವರು ಮಂತ್ರಿಮಂಡಳ ರಚಿಸಲಿ ಕಾಂಗ್ರೆಸಿನವರನ್ನು ನಾನೊಪ್ಪಿಸುತ್ತೇನೆ ಎಂದು ಪ್ರೆಸಿಗೆ ಕೊಟ್ಟ ಉತ್ತರದ ಕುರಿತು ಬಂದ ಟೀಕೆಗಳ ವಿಷಯವಾಗಿ ಹರಿಜನದಲ್ಲಿ ಒಂದು ಲೇಖನ ಬರೆದಿರುವರು. ಮಹಾತ್ಮರು ಇನ್ನೂ ಕೆಲವು ವಿಷಯಗಳನ್ನು ಅದರಲ್ಲಿ ವಿವರಿಸಿರುವರು. ಅದರ ಸಾರಾಂಶ ಹೀಗಿದೆ:

ರಾಜಾಜಿಯವರನ್ನು ಟೀಕಿಸುವುದು ಸರಿಯಲ್ಲ

— ಮಹಾತ್ಮರ ನಿವೇದನೆ —

"ನ್ಯೂ ಡಿಲ್ಲಿಯಲ್ಲಿ ಮಾಡಿದ ಪಿಸ್ತೂಲಿನ ... ವನ್ನು ನಾನೇ ಒತ್ತಾಯ ಪಡಿಸದೆ ಇದ್ದರೆ ರಾಜಾಜಿಯವರು ಅದನ್ನು ಮುಂದೆ ತರುತ್ತಿರಲಿಲ್ಲ. ತನ್ನ ತೀರ್ಮಾನ ಮತ್ತು ವಿಶ್ವಾಸದ ವಿಷಯದಲ್ಲಿ ಬಹಳ ದೃಢವಾದ ನಂಬಿಕೆಯುಳ್ಳ ರಾಜಾಜಿಯವರು ನಾನು ತಪ್ಪು, ಅವರು ಸರಿಯೆಂದು ಹೇಳಿದಾಗ ನಂತರ ನನ್ನಷ್ಟೇ ... ಅವರ ದಾರಿಯಲ್ಲಿ ... ಲು ಒಪ್ಪಿನ ನಂತರ ದೌರ್ಬಲ್ಯವನ್ನು ತೋರಿಸಿ ಅವರಿಗೆ ಅನ್ಯಾಯ ಮಾಡಿದೆನು. ಒಬ್ಬ ದುರ್ಬಲನು ಅಕಸ್ಮಾತ್ತಾಗಿ ... ಒಬ್ಬ ... ಅಕಸ್ಮಾತ್ತಾಗಿ ಅನ್ಯಾಯ ಮಾಡುತ್ತಾನೆ. ನಾನು ರಾಜಾಜಿಯವರನ್ನು ನಿರ್ದಯವಾದ ಅನ್ಯಾಯದ ಟೀಕೆಗಳಿಗೆ ಗುರಿಮಾಡಿದುದರಿಂದ ನಾನು ಅನ್ಯಾಯ ಮಾಡಿದೆ. ಇಂದು ಮಾಡಿದ ತಪ್ಪನ್ನು ತಿದ್ದಿಕೊಂಡುದರಿಂದ ಕಾಂಗ್ರೆಸಿಗೆ ಹಾನಿಯೇನೂ ಒದಗಲಿಲ್ಲವೆಂದು ನಾನು ತಿಳಿಯುತ್ತೇನಾದರೂ, ಒಬ್ಬ ಮಹಾಪುರುಷನು ತಾನು ಸರಿಯೆಂದು ತಿಳಿದಿರುವುದನ್ನು ಮಾಡಬಿಡದಿರುವುದೂ ತಪ್ಪು. ರಾಜಾಜಿಯವರು ಇಂದೂ ತಮ್ಮ ನಿರ್ಧಾರವು ಸರಿಯೆಂದೇ ನಂಬುತ್ತಾರೆ. ಅವರ ಅಭಿಪ್ರಾಯವೇ ಉಳಿಯುತ್ತಿದ್ದ ಪಕ್ಷದಲ್ಲಿ ಇಂದಿರುವ ಈ ನಿರ್ಣಯವು ಆಗುತ್ತಿರಲೇ ಇಲ್ಲ. ನಾನು ಇಂದೂ ಕಾಂಗ್ರೆಸಿನ ಹೊರಗೇ ಇರುತ್ತಿದ್ದೆ.

"ನಾನು ರಾಜಾಜಿಯವರಿಗೆ ಅನ್ಯಾಯ ಮಾಡಿದಂತೆ, ವರ್ಕಿಂಗ್ ಕಮಿಟಿಗೂ ಅನ್ಯಾಯ ಮಾಡಿದೆನು. ನಾನು ದೃಢನಾಗಿದ್ದರೆ ಯಥಾರ್ಥ ನಿರ್ಣಯವೇ ಆಗುತ್ತಿರಲಿಲ್ಲ. ನಾನು ಸತ್ಯಾಗ್ರಹದ ವಿಷಯದಲ್ಲಿ ಅದರ ಮೂಲ ಪುರುಷನಾಗಿ ಒಬ್ಬನೇ ಒಬ್ಬ ಅಧಿಕಾರಿಯೆಂತೆನೆಂದು ಸ್ವೀಕೃತನಾಗಿರುವುದರಿಂದ ಆ ವಿಷಯವನ್ನು ವಿತರಣೆಯಿಂದ ತೀರ್ಮಾನಿಸತಕ್ಕುದಲ್ಲವೆಂದ ನನ್ನ ಅಭಿಪ್ರಾಯ ಪಡುತ್ತೇನೆ. ನನ್ನ ಸಹೋದ್ಯೋಗಿಗಳು ನನ್ನನ್ನು ಮಾರ್ಗದರ್ಶಕನಲ್ಲವೆಂದ ದೂರವಿರಿಸುವುದರಿಂದ ಮಾತ್ರ ಅವರು ನನ್ನ ತೀರ್ಮಾನವನ್ನು ತಿರಸ್ಕರಿಸಬಹುದು. ಅವರು ಯಥಾರ್ಥದಲ್ಲಿ ಹಾಗೆ ಮಾಡಿದರೆ ಅರ್ಥವು ಅದಲ್ಲವೆಂದು ತಿಳಿಯುತ್ತದೆ. ಅವರ ನನ್ನನ್ನು ದೂರವಿರಿಸಲು ಬಹಳ ಸಂಕೋಚಪಡುತ್ತಾರೆ. ನಾನೇ ಒತ್ತಾಯ ಮಾಡಿದುದರಿಂದ ಅವರು ಹಾಗೆ ಮಾಡಿದರು. ನನ್ನ ದೌರ್ಬಲ್ಯವು ಯಥಾರ್ಥದಲ್ಲಿ ಪ್ರಾರಂಭವಾಯಿತು ... ಒ ದಿಲ್ಲಿ ... ಅಹಿಂಸೆಯ ಪ್ರಯೋಗದ ವಿಷಯ ವಿವರಿಸಬೇಕಿತ್ತು. ಸತ್ಯಾಗ್ರಹದ ಕಾರಣ ಕರ್ತ, ವ್ಯಾಖ್ಯಾತನಾಗಿ ನನ್ನನ್ನು ಒಬ್ಬನನ್ನೇ ಆಗಿರಿಸಿದ ಮೇಲೆ ವರ್ಕಿಂಗ್ ಕಮಿಟಿಯವರೂ ಆ ಕುರಿತು ಚರ್ಚಿಸಿ ತೀರ್ಮಾನಿಸುವುದು ಸರಿಯಾಗದು.

"ಅಹಿಂಸೆಯ ಕುರಿತು ಮಾಡಿದ ಇಂದಿನ ನಿರ್ಣಯದಿಂದ ನಾವು ರಾಷ್ಟ್ರವನ್ನು ಅನ್ಯಾಯದಿಂದ ತಪ್ಪಿಸಿಕೊಂಡೆವು. ಇಂದು ಕಾಂಗ್ರೆಸಿನವರು ಇದಕ್ಕನುಗುಣವಾಗಿ ನಡೆದರೆ ಭಾರತವು ತನ್ನ ದಾರಿಯ ಕಡೆಗೆ, ಬೇರೆ ಯಾವುದೇ ರೀತಿಯಿಂದಲೂ ಹೊಂದಲು ಸಾಧ್ಯವಿಲ್ಲದಂತಹ ಮಾರ್ಗದಲ್ಲಿ ನಡೆದು ಉತ್ತಮ ಸ್ಥಿತಿಯನ್ನು ಹೊಂದುವುದು."

ಹಿಂದೂ ಮಹಾಸಭೆಯ ಶರ್ತಗಳು

ಡಾ ಮೂಂಜೆ, ಮತ್ತು ವೈಸರಾಯ್ ಇವರೊಳಗಾದ ಸಂಭಾಷಣೆಯ ಕುರಿತು ವಿಮರ್ಶಿಸಿ ಆ ವಿಷಯದಲ್ಲಿನ ವೈಸರಾಯರ ಸೂಚನೆಗಳಿಗೆ ಉತ್ತರವಾಗಿ ಕೋರಿಕೆಯೊಂದು ಪ್ರಕಟವಾಗಿದೆ.

ಕೋರಿಕೆಗಳಲ್ಲಿ, ಮುಸ್ಲಿಮರಿಗೆ ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಎರಡು ಸ್ಥಾನಗಳಾದರೆ, ಮಹಾಸಭೆಗೂ ಅಷ್ಟೇ ಸ್ಥಾನಗಳ ಮಾತ್ರವೇ ಅದರಲ್ಲಿ ದೊರಕಿದರೆ ಸಾಲದು. ಮಹಾಸಭೆಯ ಹೊರಗಿರುವ ಹಿಂದೂಗಳಿಗೂ ಮೂರು ಸ್ಥಾನಗಳು ಸಿಕ್ಕಬೇಕು. ಆ ಮೂರರಲ್ಲಿ ಒಂದು ಮುಸ್ಲಿಮರಲ್ಲದ ಮೈನಾರಿಟಿ ಸಮಾಜಕ್ಕೆ ಕೊಡಬೇಕು ಎಂಬುದೂ ಒಂದಾಗಿದೆ ಎಂದು ಹೇಳಲಾಗಿದೆ.

ನೋರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸ್ವದೇಶಾಭಿಮಾನಿ

ತಾರೀಕು 27—9—1940

ಹಿಟ್ಲರನ ಹಂಚಿಕೆಗಳೇ?

ಹಿಟ್ಲರನು ಕೆಲಕಾಲದಿಂದ ಬ್ರಿಟನಿನ ಮೇಲೆ ವೈಮಾನಿಕ ದಾಳಿ ನಡೆಸುತ್ತಾ ಹಲವು ತೊಂದರೆಗಳನ್ನು ಕೊಡುತ್ತಿರುವನು. ಆದರೆ ಆತನ ಕನಸಾಗಿರುವ ಬ್ರಿಟನಿನ ಆಕ್ರಮಣ ಯತ್ನವು ಕೈಗೂಡದೆ ಇದೆ. ಇದರ ಮಧ್ಯೆ, ಸಪ್ಟಂಬರ ೧೫ರಂದು ಆತನು ಆಕ್ರಮಣಕ್ಕಾಗಿ ಸಿದ್ಧತೆ ಮಾಡಿದ್ದನೆಂದೂ ಆದರೆ ಆ ದಿನ ಹವೆಯು ಕೆಟ್ಟುಹೋದ್ದರಿಂದ ಆಕ್ರಮಣ ಮಾಡಲಿಲ್ಲವೆಂದೂ ಲಂಡನಿನ ಸುದ್ದಿಯು ತಿಳಿಸುತ್ತದೆ. ಅಂತೂ ಹಿಟ್ಲರನು ಬ್ರಿಟನನ್ನು ಬಾಂಬುಗಳ ಸುರಿಮಳೆಯಿಂದ ಬೆದರಿಸಿದ್ದು ಮಾತ್ರವಲ್ಲ ಮುತ್ತಿಗೆ ಮಾಡಲೂ ಯತ್ನ ಮಾಡುತ್ತಿರುವನೆಂದೂ ಆ ವಿಷಯವಾಗಿ ಹಲವು ಹಂಚಿಕೆಗಳನ್ನೂ ಮಾಡುತ್ತಿರುವನಾಗಿಯೂ ಊಹಿಸಲು ಎಡೆಯಾಗಿದೆ. ಇತ್ತೀಚೆಗೆ ಬಂದ ವಾರ್ತೆಯಂತೆ, ಹಿಟ್ಲರನು ಸ್ವತಃ ಉತ್ತರ ಫ್ರಾನ್ಸಿಗೆ ಬಂದಿದ್ದು ಗೋರಿಂಗನೊಡನೆ ಮುಂದಿನ ಮಾರ್ಗದ ಕುರಿತು ವಿಚಾರ ಮಾಡಿದನೆಂದೂ ತಿಳಿದುಬರುತ್ತದೆ.

ಆದರೆ ಇದು ವರೆಗಿನ ವೈಮಾನಿಕ ದಾಳಿಯಿಂದ ಬ್ರಿಟನು ಅಂಜಿರುವುದಿಲ್ಲ. ಮೊನ್ನೆ ಚರ್ಚಿಲ್ಲರು, ಶತ್ರುವು ಬಳಿಯಲ್ಲಿಯೇ ಬರದಿರುವುದರಿಂದ, ಆತನು ಎಂದಾದರೂ ಆಕ್ರಮಿಸುವ ಯತ್ನಮಾಡಬಹುದು. ಜನರು ಅದನ್ನು ಧೈರ್ಯದಿಂದ ಎದುರಿಸಿ ವಿಜಯವನ್ನು ಪಡೆಯಬೇಕೆಂದು ಬ್ರಿಟಿಷ ಜನರಿಗೆ ಎಚ್ಚರಿಕೆ ಕೊಟ್ಟಿರುವರು. ಬ್ರಿಟಿಷರಿಗೆ ಹಲವು ತೊಂದರೆಗಳನ್ನು ಕೊಟ್ಟು ಅವರು ಒಪ್ಪಂದಕ್ಕೆ ಬರುವಂತೆ ಮಾಡುವ ಹಿಟ್ಲರನ ವಿಚಾರಕ್ಕೆ ಬ್ರಿಟಿಷರು ಸೊಪ್ಪು ಹಾಕುವಂತಿಲ್ಲ. ಅಭೇದ್ಯವಾದ ಬ್ರಿಟಿಷ್ ಸೈನ್ಯವು ಹೆಚ್ಚುತ್ತಿರುವ ಪರಾಕ್ರಮದಿಂದ ಶತ್ರುವನ್ನು ಹಿಮ್ಮೆಟ್ಟಿಸಲು ನಿರ್ಧಾರ ಮಾಡಿದೆ.

ಸ್ಪೈನಿಗೆ ಒತ್ತಾಯ

ಲಂಡನನ್ನು ಆಕ್ರಮಿಸುವ ಹಿಟ್ಲರ ಆಲೋಚನೆಯೊಡನೆ, ಇತರ ಕೆಲವು ಹಂಚಿಕೆಗಳೂ ಕೂಡಿವೆ. ಬ್ರಿಟಿಷರನ್ನು ಎಲ್ಲೆಲ್ಲಿ ಕಡೆಯಬಹುದೆಂಬುದನ್ನು ತಿಳಿದು, ಆತನು ಮುಸಲಿನಿಯ ಸಹಾಯದಿಂದ ಬೇರೆ-ಬೇರೆ ಕಡೆಗಳಲ್ಲಿ ಕಣ್ಣಿಟ್ಟಿರುವನು. ಜಿಬ್ರಾಲ್ಟರ್ ಬ್ರಿಟಿಷರ ಪ್ರಾಮುಖ್ಯವಾದೊಂದು ಸಂದುಕಟ್ಟಿನ ಸ್ಥಳವಾಗಿದೆ. ಅದನ್ನು ಸ್ಪೈನು ತನ್ನ ಸ್ವಾಧೀನಪಡಿಸಿಕೊಳ್ಳಬೇಕೆಂದು ಮುಸಲಿನಿ ಹಿಟ್ಲರರು ಸ್ಪೈನನ್ನು ಒತ್ತಾಯಿಸುತ್ತಿದ್ದಾರೆ. ಜನರಲ್ ಫ್ರಾಂಕೊ ಬಹಿರಂಗ ಯುದ್ಧವನ್ನು ಬಯಸದಿದ್ದರೂ, ಆದರೆ ಸ್ಪೈನನ್ನು ಬಿಟ್ಟಿರಲು ಬ್ರಿಟಿಷರಿಗೆ ಇಷ್ಟವಿಲ್ಲದಿದ್ದರೂ ಯುದ್ಧ ಪ್ರಕಟನೆ ಮಾಡುವ ಒತ್ತಾಯ ನಡೆಯುತ್ತಿದೆ. ಸ್ಪೈನಿನ ಫೆಲ್ಯಾಂಗಿಸ್ಟ ಪಕ್ಷವು ಮುಸಲಿನಿಯ ಕೈಗೊಂಬೆ. ಹೀಗಾಗಿ ಒತ್ತಾಯವು ಫಲಿಸಿದರೂ ಫಲಿಸಬಹುದು. ಮಾತ್ರವಲ್ಲದೆ ಇಂದು ಸ್ಪೈನಿನ ಮುಖ್ಯ ಮಂತ್ರಿಯಾದ ಸೀನರ್ ಸುನರರನ್ನು ಬರ್ಲಿನಿಗೆ ಕರೆದು ವಿಚಾರ ವಿನಿಮಯವೂ ನಡೆಯಿತು. ಇಷ್ಟರಲ್ಲಿಯೇ ಬಹುಕಾಲದಿಂದ ಸ್ಪೈನಿನ ಗಡಿಯಲ್ಲಿರುವ ಜರ್ಮನ್ ಸೈನಿಕರು ಮುಂದೊತ್ತುತ್ತಿರುವರೆಂದೂ ವಾರ್ತೆ ಬಂದಿದೆ.

ಜಿಬ್ರಾಲ್ಟರು ಬ್ರಿಟಿಷರ ಪ್ರಾಮುಖ್ಯವಾದೊಂದು ಸಂದುಕಟ್ಟಿನ ಸ್ಥಳವಾದುದರಿಂದ, ಅದರ ರಕ್ಷಣೆಯಲ್ಲಿ ಬ್ರಿಟಿಷರು ಬಹಳ ಜಾಗರೂಕರಾಗಿರುವರು. ಇಂತಹ ಪರಿಸ್ಥಿತಿಯು ಬರಲು ಸಾಧ್ಯವಿದೆಯೆಂಬ ಕಲ್ಪನೆಯು ಮೊದಲಾಗಿಯೇ ರಾಜನೀತಿಜ್ಞರಿಗೆ ತಿಳಿದ ವಿಷಯವಾಗಿರುವುದರಿಂದ ಜಿಬ್ರಾಲ್ಟರಿನಲ್ಲಿ ಬ್ರಿಟಿಷರ ಭದ್ರ ಕಾವಲು ಇದೆ. ಹಿಂದೆ, ಸ್ಪೈನಿನಲ್ಲಿ ಸರ್ವಾಧಿಕಾರವನ್ನು ಸ್ಥಾಪಿಸುವಂದು ಜರ್ಮನ್-ಇಟಲಿಗಳ ಸರ್ವಾಧಿಕಾರಿಗಳಿಂದ ಪ್ರಯೋಜನ ಪಡೆದ ಋಣಕ್ಕಾಗಿ ಇಂದು ಫ್ರಾಂಕೋ ಬ್ರಿಟಿಷರ ವಿರುದ್ಧ ಯುದ್ಧಕ್ಕಿಳಿದರೆ ಸ್ಪೈನಿನ ವಿನಾಶವೇ ಸಿದ್ಧವಾದಂತಾಯಿತು.

ಇಟಲಿ ಈಜಿಪ್ತ್‌ಗಳ ಘರ್ಷಣೆ

ಇಟಲಿಯೂ ಇದರೊಡನೆ ಬ್ರಿಟನಿಗೆ ತೊಂದರೆ ಕೊಡುವ ಕಾರ್ಯವನ್ನು ಆರಂಭಿಸುತ್ತಿದೆ. ಮೆಡಿಟರೇನಿಯನಿನಲ್ಲಿ ಬ್ರಿಟಿಷರಿಗೆ ಇಟಲಿಯೊಡನೆ ಘರ್ಷಣೆಯುಂಟಾಗಬಹುದು. ಈಗಾಗಲೇ ಇಟಲಿಯು ಈಜಿಪ್ಟಿನೊಡನೆ ಕಲಹಕಾರಣವನ್ನು ಹುಟ್ಟಿಸಿಕೊಂಡಿದೆ. ಇಟಲಿಯ ಸೈನಿಕರು ಈಜಿಪ್ತಿನ ಕರಾವಳಿಯ ದಾರಿಯಲ್ಲಿ ಮುಂದೆ ಸಾಗುತ್ತಿರುವರು. ಈಜಿಪ್ತಿನ ಕೆಲವು ಭೂಭಾಗಗಳನ್ನೂ ಆಕ್ರಮಿಸಿಕೊಂಡಿರುವರು.

ಪಶ್ಚಿಮ ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಪ್ರಭುತ್ವವನ್ನು ತಪ್ಪಿಸುವುದು ಈ ಎಲ್ಲಾ ಹಂಚಿಕೆಗಳ ಉದ್ದೇಶವಾಗಿರಬೇಕು. ಅದಕ್ಕೆ ಅತ್ತ ಈಜಿಪ್ತನ್ನು ಮುತ್ತಿಗೆ ಹಾಕುತ್ತಿರುವಲ್ಲಿ, ಇತ್ತ ಸ್ಪೈನು ಬ್ರಿಟಿಷರೊಡನೆ ಯುದ್ಧ ಸಾರಿ ಜಿಬ್ರಾಲ್ಟರನ್ನು ಸ್ವಾಧೀನಪಡಿಸಲು ಹೋರಾಡಿದರೆ, ಇನ್ನೊಂದೆಡೆ ಜರ್ಮನಿಯು ಇಂಗ್ಲೆಂಡನ್ನು ಪ್ರಬಲವಾಗಿ ಆಕ್ರಮಿಸಿದರೆ ಬ್ರಿಟಿಷರು ಹಿಟ್ಲರನೊಡನೆ ಅಂಗಲಾಚಿ ಒಪ್ಪಂದಕ್ಕೆ ಬರಬಹುದೆಂದು ಹಿಟ್ಲರನು ಕನವರಿಸುತ್ತಿರಬಹುದು.

ಜಪಾನು-ಇಂಡೋ ಚೈನಾ

ದೂರದ ಪೂರ್ವದಲ್ಲಿಯೂ ಬ್ರಿಟನಿಗೆ ತೊಂದರೆ ಕೊಡಬೇಕೆಂದು ಹಿಟ್ಲರನು ಬಗೆದಂತಿದೆ. ಇತ್ತೀಚೆ ಜಪಾನಿನಲ್ಲಿ ರಾಜಕೀಯ ಬದಲಾವಣೆಯುಂಟಾಗಿ ಸರ್ವಾಧಿಕಾರ ಪ್ರಭುತ್ವವು ಸ್ಥಾಪಿತವಾಗಿದೆ. ಒಂದೇ ನಡತೆಯವರಲ್ಲಿ ಸಖ್ಯವು ಕೂಡಲೇ ಬೆಳೆಯುವುದಿಲ್ಲವೆ? ಇಷ್ಟೇ ಪೆಚ್ಚು ಬಿಲ್ಲದೆ ಸ್ವತಃ ಜಪಾನೇ ಹಿಟ್ಲರನಂತೆ ಸಾಮ್ರಾಜ್ಯಲಾಲಸೆಯಿಂದ ಚೈನವನ್ನು ಹಲಗಾಲದಿಂದ ಸೀಡಿಸುತ್ತಿರುವ ಸಂಗತಿಯು ಎಲ್ಲರಿಗೂ ತಿಳಿದುದೇ ಆಗಿದೆ. ಆದಕಾರಣ ಜಪಾನು ಇಂದು ಹೊಸ ಕಲಹವನ್ನು ಎಬ್ಬಿಸಿಕೊಂಡಿದೆ.

ಜಪಾನು ಚೀನವನ್ನು ಗೆಲ್ಲಲು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ಆದಾಗಿ ಇಂದು ಇಂಡೋಚೈನದ ಮೂಲಕ ಚೈನವನ್ನು ಹತ್ತಿಕ್ಕಬೇಕೆಂದು ಹೊಸ ಯೋಚನೆ ಮಾಡಿದೆ. ಅತ್ತ ಜಪಾನು ಆಸ್ಟ್ರೇಲಿಯದ ವರೆಗೂ ಕಣ್ಣಿಟ್ಟಿದೆಯೆಂದು ತಿಳಿದುಬಂದಿದೆ.

ಅಮೇರಿಕದ ಅಭಿಪ್ರಾಯ

'ನಾವು ಬ್ರಿಟನಿಗೆ ಸಹಾಯಮಾಡತಕ್ಕದು ನಮ್ಮ ಕರ್ತವ್ಯವಾಗಿದೆ. ನಾವಿಂದು ಬ್ರಿಟನಿಗೆ ಹೆಚ್ಚು ಹೆಚ್ಚಾಗಿ ಸಹಾಯ ಮಾಡಬೇಕು. ಈ ರೀತಿ ಸಹಾಯ ಮಾಡುವುದರಿಂದಲೇ ನಮ್ಮ ರಕ್ಷಣೆಯೂ ಬಲಗೊಳ್ಳುವುದು. ಇಷ್ಟು ಮಾತ್ರವಲ್ಲದೆ, ಇಂದು ನಮ್ಮ ಮಿತ್ರರಾಷ್ಟ್ರವಾಗಿ ಬ್ರಿಟನು 'ಒಂದೇ ಉಳಿದಿದೆ' ಹೀಗೆಂದು ಅಮೇರಿಕದ ಅಧ್ಯಕ್ಷ ಪೀಠಕ್ಕೆ ರೂಸ್‌ವೆಲ್ಟರ ಪ್ರತಿಸ್ಪರ್ಧಿಯಾಗಿರುವ ವೆಂಡೆಲ್ ವಿಲ್ಕಿಯವರು ಪರರಾಷ್ಟ್ರಗಳ ವಿಷಯದಲ್ಲಿ ಪ್ರಚಾರ ಭಾಷಣ ಮಾಡುತ್ತಾ ಹೇಳಿದರು. ಅವರ ಭಾಷಣದ ಹಲವು ಅಂಶಗಳು ಒಳ್ಳೆಯ ವಿಮರ್ಶೆಗೆ ಯೋಗ್ಯವಾಗಿವೆ.

ಅವರು ತಮ್ಮ ಭಾಷಣದಲ್ಲಿ ಚೀನವು ಸ್ವತಂತ್ರವಾಗಿರುವುದರಿಂದ ನಮ್ಮ ಉದ್ದೇಶವು ಸಫಲವಾಗುವುದೆಂದ ಹೇಳಿದ್ದರು. ಚೀನಕ್ಕೆ ಇಂದು ಜಪಾನಿನಿಂದ ತೊಂದರೆ ನಿರಂತರ ಒದಗುತ್ತದೆಯಾದರೂ, ಅದರ ಸ್ವಾತಂತ್ರ್ಯವು ಅಪಹಾರವಾಗಿ ಹೋಗದಂತೆ ನಾವು ಅಲ್ಲಿಗೂ ಸಹಾಯವನ್ನು ಕಳುಹಿಸತಕ್ಕದ್ದು ಅವಶ್ಯವೆಂದರು. ಚೀನಕ್ಕೆ ಅಮೇರಿಕವು ಆರ್ಥಿಕ ಸಹಾಯವನ್ನು ಕಳುಹಿಸಬೇಕಾಗಿದೆಯೆಂದೂ ಹೇಳಿದರು.

ಬ್ರಿಟನಿನ ವಿಷಯವಾಗಿ ಅವರು ಮಾತನ್ನು ಮುಂದುವರಿಸುತ್ತಾ, ಇಂದಿನ ಕಾಳಗದಲ್ಲಿ ಜರ್ಮನಿಯು ಬ್ರಿಟನು ಸೋಲಿಸಿದರೆ, ಜರ್ಮನಿಯಲ್ಲಿ ಖಂಡಿತವಾಗಿಯೂ ಹಿಟ್ಲರನ ವಿರುದ್ಧ ದಂಗೆ ಏಳುವುದೆಂದು ಹೇಳಿದರು. ಹಾಗಾಗದೆ ಒಂದು ಪಕ್ಷ ಜರ್ಮನಿಯೇ ಗೆದ್ದಲ್ಲಿ, ಮುಂದೆ ಹಿಟ್ಲರನ ಆಕ್ರಮಣ ಭೀತಿಯು ಅಮೇರಿಕಕ್ಕೂ ತಪ್ಪಿದ್ದಲ್ಲವೆಂದು ಸಾರಿದರು. ಆದಕಾರಣ ಮುಂದೆ ಏಕಾಕಿಯಾಗಿ ಜರ್ಮನಿಯೊಡನೆ ಹೊಡೆದಾಡುವುದಕ್ಕಿಂತ ಇಂದೇ ಬ್ರಿಟನಿಗೆ ಸಹಾಯ ಕೊಡುವುದು ನ್ಯಾಯವೂ ಯೋಗ್ಯವೂ ಆಗಿದೆಯೆಂದರು.

ಸಂಯಮಶಾಲಿಗಳಾಗಿರಿ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲನಿಯವರು ಒಂದು ಪ್ರಕಟಣೆ ಕೊಟ್ಟು ಅದರಲ್ಲಿ ಕಾಂಗ್ರೆಸಿನವರೆಲ್ಲ ಮಹಾತ್ಮರ ಆಜ್ಞೆಯನ್ನು ಪಾಲಿಸತಕ್ಕದ್ದೆಂದೂ, ಮುಂಚಿತವಾಗಿ ಯಾವುದೇ ಕಾರ್ಯವನ್ನು ಮಾಡಕೂಡದೆಂದೂ ತಿಳಿಸಿರುತ್ತಾರೆ. ಅವರು ಅದರಲ್ಲಿ ಇನ್ನೂ ಕೆಲವು ವಿಷಯಗಳನ್ನು ತಿಳಿಸಿದ್ದಾರೆ.

'ಮುಂಬಯಿಯಲ್ಲಿ ಸೇರಿದ ಕಾಂಗ್ರೆಸು ಗಾಂಧಿಜಿಯವರನ್ನು ಸರ್ವಸೇನಾಪತಿಯಾಗಿ ಆರಿಸಿದೆ. ಅವರಿಗೆ ಯಾವ ತೊಡಕಾಗದಂತೆ ನಾವು ಕೆಲಸ ಮಾಡಬೇಕು. ಆ ನಿರ್ಣಯದ ಅರ್ಥವನ್ನು ಜನರಿಗೆ ವಿವರಿಸಿ ಹೇಳಬೇಕು. ಈ ಕೆಲಸವನ್ನು ಹೊಣೆಗಾರರಾದ ಮುಖಂಡರುಗಳೇ ಮಾಡಬೇಕು.

'ಮುಂದೆ ಗಾಂಧಿಜಿಯವರು ಅಪ್ಪಣೆ ಕೊಟ್ಟಂತೆ ಸರ್ವರೂ ನಡೆಯಬೇಕು.

'ಆದ್ದರಿಂದ ದೇಶದಲ್ಲಿ ಎಲ್ಲರೂ ಮಹಾತ್ಮರ ಆಜ್ಞೆಯಾಗುವ ವರೆಗೆ ಸಂಯಮಶೀಲರಾಗಿಯೇ ಇರತಕ್ಕದ್ದು. ಯಾವ ತರದ ಯುದ್ಧ ವಿರುದ್ಧ ಪ್ರಚಾರಕ್ಕೂ ಹೋಗಕೂಡದು.

ಹರಿಜನ ಸೇವೆ

ಹೊಲೆಯರೆಂದು ದೂರವಿರಿಸಿದ ಬಂಧುಗಳನ್ನು ಮಹಾತ್ಮಾ ಗಾಂಧಿಜಿಯವರು ಹರಿಜನರೆಂಬ ನಿರ್ಮಲನಾಮದಿಂದ ಕರೆದು ಪರಿಶುದ್ಧಗೊಳಿಸಿದರು. ಹರಿಜನ ಸೇವೆ ಮಹಾತ್ಮಾಜಿಯವರ ಜೀವನೋದ್ದೇಶ. ತಮ್ಮ ಪ್ರಾಣವನ್ನಾದರೂ ಅದಕ್ಕಾಗಿ ಒಪ್ಪಿಸಲು ಅವರು ಸಿದ್ಧರಿದ್ದರು. ಮುಂದೆ ದೇಶದಲ್ಲಿ ಎಲ್ಲೆಡೆಯಲ್ಲಿಯೂ ಸಂಚಾರಮಾಡಿ ಹರಿಜನ ನಿಧಿಯನ್ನೆತ್ತಿ ಅವರು ಹರಿಜನರ ಸೇವೆಯ ಸಲುವಾಗಿ ಅಖಿಲಭಾರತ ಹರಿಜನ ಸೇವಕ ಸಂಘವೊಂದನ್ನು ಸ್ಥಾಪಿಸಿದರು.

ನಮ್ಮ ಜಿಲ್ಲೆಯಲಿ ೧೯೩೪ರಿಂದ ಹರಿಜನ ಸೇವಕ ಸಂಘವು ತನ್ನ ಕಾರ್ಯಕಲಾಪಗಳನ್ನು ನಡೆಸುತ್ತಿದೆ. ಈ ವರೆಗೆ ಅದು ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ಉಪಸಂಘಗಳನ್ನೂ ಸ್ಥಾಪಿಸಿಕೊಂಡು, ಮೂರು ವಿದ್ಯಾರ್ಥಿಭವನಗಳನ್ನು ತೆರೆದು ಒಂದು ಪ್ರತ್ಯೇಕ ಶಾಲೆಯನ್ನೂ ಆರಂಭಿಸಿ ನೂರಕ್ಕಿಂತಲೂ ಮಿಕ್ಕ ಬಡ ಹರಿಜನ ಬಾಲಕರಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಿ, ಹಲವರಿಗೆ ವಿದ್ಯಾರ್ಥಿವೇತನ ಕೊಡುತ್ತಾ ಬರುತ್ತಿರುವುದು ಸಂಘದ ನಿರಂತರ ಕರ್ತವ್ಯಪಾಲನೆಗೆ ಸಾಕ್ಷಿಯಾಗಿದೆ. ಮಹಾಜನರು ವಿಶೇಷವಾಗಿ ಹಿಂದೂಬಾಂಧವರು, ತಾವು ಹಿಂದೆ ಮಾಡಿದ ತಪ್ಪಿನ ಪ್ರಾಯಶ್ಚಿತ್ತವೆಂದು ಇತರದಾದರೂ ಮುಂದೆ ಬಂದು, ಹರಿಜನ ಸೇವೆಯಲ್ಲಿ ಹೆಚ್ಚು ಹೆಚ್ಚಿನ ಆಸಕ್ತಿ ವಹಿಸುವುದು ಅವಶ್ಯ ಕರ್ತವ್ಯವಾಗಿದೆ. ಸಂಘದ ಮೂಲಕ ದುಡಿಯುತ್ತಿರುವ ನಮ್ಮ ಜಿಲ್ಲೆಯ ಎಲ್ಲಾ ಹರಿಜನ ಸೇವಕರಿಗೂ ನಮ್ಮ ಅಭಿವಂದನೆಗಳು.

ಹಿಂದೂ--ಮುಸ್ಲಿಂ ಐಕ್ಯ

ಗಾಂಧಿಜಿಯವರ ಸ್ಪಷ್ಟೀಕರಣ

"ಮೊನ್ನೆ ಒಬ್ಬ ಮಹಾಶಯರು ಒಂದು ಜಾತೀಯ ಐಕ್ಯತೆಯು ಆಗದೆ, ಸ್ವರಾಜ್ಯವು ಪ್ರಾಪ್ತವಾಗದು ಎಂದು ನಾನು ಹೇಳಿದುದನ್ನು ಟೀಕಿಸುತ್ತ ಹೀಗೆ ನಾನು ಹೇಳಿದ್ದರಿಂದ ದೇಶದ ಮಹಾ ಅಹಿತ ಮಾಡಿದೆನೆಂದು ಹೇಳಿದರು. ಮುಸಲ್ಮಾನರನ್ನು ಸಂತೋಷ ಪಡಿಸುವುದಕ್ಕಾಗಿ ನಾನು ನನ್ನ ಆತ್ಮವನ್ನು ಮಾರಿದೆನೆಂದು ಕೊನೆಗೆ ಅವರು ನನ್ನ ಮೇಲೆ ಆರೋಪವನ್ನು ಹೊರಿಸಿದರು. ನಾನು ಇದನ್ನು ವಿರೋಧಿಸಿ ಭಾರತಕ್ಕೆ ಸ್ವರಾಜ್ಯ ದೊರೆಯುವುದಾದರೂ ನಾನು ನನ್ನ ಆತ್ಮವನ್ನು ಮಾರಲಾರೆನೆಂಬುದನ್ನು ಜಗತ್ತೇ ತಿಳಿದಿದೆ. ಮುಸಲ್ಮಾನರ ಸ್ನೇಹವನ್ನು ನಾನು ಇಚ್ಛಿಸುವೆನಾದರೆ, ಅದು ನನ್ನ ವ್ಯಕ್ತಿಗತ ಲಾಭಕ್ಕಾಗಿ ಇರುವುದಿಲ್ಲ. ಭಾರತದ ಸಾಮೂಹಿಕ ಹಿತಕ್ಕಾಗಿಯೇ ನಾನು ಹಿಂದೂ ಮುಸಲ್ಮಾನ ಸ್ನೇಹವನ್ನು ಇಚ್ಛಿಸುತ್ತೇನೆ ಎಂದು ಅದಕ್ಕೆ [illegible] ತಮ್ಮ ದೇಶಪ್ರೇಮವನ್ನು ನಾನು ಒಲ್ಲೆ [illegible] ನನಗೆ ತಿಳಿಯುದಿರ [illegible] ತಮ್ಮ ಬಳಿಗೆ ಚರ್ಚೆಗೆ ಬರುತಿದ್ದೆ [illegible] ದರೆ ದೇಶಪ್ರೇಮದಿಂದ ಅಂಧರಾಗಿ ತಾವು ತಪ್ಪು ಮಾಡುತಿದ್ದೀರಿ [illegible] ತಮ್ಮ ವಿಷಯದಲ್ಲಿ [illegible] ಹೇಳಿ ತಿದ್ದ [illegible] ರೆಂಬುದು [illegible] ಮುಸಲ್ಮಾನರನ್ನು [illegible] ಮಾಡುವ ಭಯದಿಂದ [illegible] ಅನೇಕ ಅನ್ಯಾಯ ಕಷ್ಟಗಳನ್ನು [illegible] ದ್ದಾರೆ [illegible] ನೋಯಿಸಲಿಕ್ಕೆ [illegible] ವುದಿಲ್ಲ. ಆದ ದರಿಂದ ತಾವು ಹಿಂದೂ ಮುಸಲ್ಮಾನ 'ಐಕ್ಯ' ಎಂಬ ಶಬ್ದದ ಬದಲಿಗೆ 'ನ್ಯಾಯ' ವೆಂಬ ಶಬ್ದವನ್ನಿಟ್ಟರೆ ಹಿಂದುಗಳಿಗೆ ಬಹಳ ಸಂತೋಷವಾಗುವುದು ಎಂದರು. ಅವರೊಡನೆ ಚರ್ಚಿಸಿ ಏನೂ ಲಾಭವಿದ್ದಿಲ್ಲ. [illegible] ಯದಲ್ಲಿ ಹರಿಜನದಲ್ಲಿ ಬರೆಯುತ್ತಿರುವೆನೆಂದು ಮಾತುಕೊಟ್ಟು ಅವರನ್ನು ಬೀಳ್ಕೊಟ್ಟೆ. ಈ ಭರವಸೆಯಿಂದ ಸಂತೋಷವಾಗಿ ಅವರು ಹಿಂದಿರುಗಿದರು. ಆದರೆ ನನ್ನ ಈ ಉತ್ತರದಿಂದ ಅವರಿಗೆ ಸಂತೋಷವಾಗುವುದೋ ಇಲ್ಲವೋ ಗೊತ್ತಿಲ್ಲ.

ಐಕ್ಯವಿಲ್ಲದೆ ಸ್ವರಾಜ್ಯವಿಲ್ಲ

"ಐಕ್ಯವಿಲ್ಲದೆ ಸ್ವರಾಜ್ಯವಿಲ್ಲವೆಂದು ನಾನು ಈಗ ಕೂಡ ಹೇಳುತ್ತೇನೆ. ಸಾಂಪ್ರದಾಯಿಕ ಐಕ್ಯದ ಮೇಲೆ ನನಗೆ ದೃಢ ವಿಶ್ವಾಸವಿದೆ. ಇದರ ಅರ್ಥ ಯಾವುದಾದರೂ ಜಾತಿಯು ಇನ್ನೊಂದು ಜಾತಿಯಿಂದ ಅನ್ಯಾಯ ಹೊಂದಿ ಐಕ್ಯ ಸ್ಥಾಪನೆಯಾಗಬೇಕೆಂದು ಹೇಳಿದಂತಾಗುವುದಿಲ್ಲ. ಒಂದು ಜಾತಿಯೊಡನೆ ಇನ್ನೊಂದು ಜಾತಿಯು ನ್ಯಾಯಭಾವನೆ ಇಲ್ಲದಿರುವವರೆಗೆ ನಿಜವಾದ ಐಕ್ಯವು ಉಂಟಾಗುವುದಿಲ್ಲ. ಮುಸಲ್ಮಾನ ಅಥವ ಬೇರೆಯಾವದಾದರೂ ಜಾತಿಗೆ ಲಂಚ ಕೊಟ್ಟು ಅಥವಾ ಆಸೆ ತೋರಿಸಿ ಅದರ ಸ್ನೇಹವನ್ನು ಸಂಪಾದಿಸಲಿಕ್ಕಾಗುವುದಿಲ್ಲ. ಲಂಚವೆಂಬುದರ ಅರ್ಥ ಭೀರುತೆ ಅಂದರೆ ಹಿಂಸೆ ಎಂದಾಗುತ್ತದೆ. ಆದರೆ ನನ್ನ ಒಡಹುಟ್ಟಿದ ಸಹೋದರನಿಗೆ ನಾನು ಅವನಿಗೆ ನ್ಯಾಯವಾಗಿ ದೊರೆಯ ಬೇಕಾದುದಕ್ಕಿಂತ ಹೆಚ್ಚಿಗೆ ಕೊಡುತ್ತೇನಾದರೆ, ಅದರಿಂದ ನಾನು ಅವನಿಗೆ ಲಂಚಕೊಟ್ಟಂತಾಗುವುದಿಲ್ಲ. ಉದಾರನಾಗಿಯೇ ಅವನಿಗೆ ನನ್ನ ಮೇಲಿರಬಹುದಾದ ಸಂದೇಹವನ್ನು ನಾನು ದೂರಮಾಡಬಹುದು. ಉದಾರತೆ ಇಲ್ಲದ ನ್ಯಾಯದಿಂದ ಯಾರಿಗೂ ಪ್ರಯೋಜನವಾಗ ವುದಿಲ್ಲ.

"ಆದುದರಿಂದ ನಾನು ಹಿಂದೂ ಮುಸಲ್ಮಾನ ಐಕ್ಯ ಸಂಬಂಧವಾದ ವಿಚಾರಿ [illegible] ಪ್ರಯತ್ನಗಳನ್ನು ಬಿಟ್ಟಿರಲಾರೆ. ಸಾಂಪ್ರದಾಯಿಕ ಐಕ್ಯತೆ ಇಲ್ಲದೆ ಅಹಿಂಸಾತ್ಮಕ ಸ್ವರಾಜ್ಯವು ಸಾಧ್ಯವಲ್ಲ. ಈಗ ನಾವು ಮಾಡಬೇಕಾದ್ದು ನ್ಯಾಯದಾನವಲ್ಲ [illegible] ಪರಿಸ್ಥಿತಿಗೆ ತಕ್ಕ [illegible] ಕೆಲಸವಾಗಿದೆ. ಜನ್ನರ ಧೋರಣೆಯು [illegible] ಸಮಾಜದ [illegible] ಪ್ರತಿಬಿಂಬಿಸುತ [illegible] ದರೆ ಹಿಂದೂ ಮುಸಲ್ಮಾನ ಪಕ್ಷದ [illegible] ತಿಳಿದು [illegible] ವುದ [illegible] ಹಿಂದುಸ್ಥಾನವು [illegible] ವಿಶಾಲ ದೇಶವಿದೆ. ಅದರಲ್ಲಿ ಭಿನ್ನ ಭಿನ್ನ ಧರ್ಮಗಳ ಅನೇಕ ಜಾತಿಗಳ [illegible] ಜಿನ್ನರ [illegible] ಮುಸಲ್ಮಾನ [illegible] ಲಾರ [illegible] ರಂಗವೇಕೆಂದು ಅವರನ ವರ [illegible] ನಿಜವಾದರೆ ಕಾಂಗ್ರೆಸ್ ೫೦ ವರ್ಷಗಳಿಂದ ಒಂದು ರಾಷ್ಟ್ರದ ನಿರ್ಮಾಣಕ್ಕೆ ಮಾಡಿದ ಭಗೀರಥ ಪ್ರಯತ್ನಗಳೆಲ್ಲ ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುವುದು. ಆದರೆ ಜಿನ್ನರು ಕ್ಷಣಿಕ ಉದ್ವೇಗದಿಂದ ಪ್ರೇರಿತರಾಗಿ ರಾಷ್ಟ್ರಕ್ಕೆ ವಿಘಾತಕವಾದ ಕೆಲಸಗಳನ್ನು ಮಾಡುತ್ತಿದ್ದಾರೆಂದು ನಾನು ನಂಬಿದ್ದೇನೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಮುಸಲ್ಮಾನರು ಅಲ್ಲಿಯ ಹಿಂದು ಅಥವಾ ಕ್ರೈಸ್ತ ಮೊದಲಾದ ಇತರ ಜಾತಿಗಳಿಂದ ಪ್ರತ್ಯೇಕವಾಗಿ ಇರಲಾರರು. ಮುಸಲ್ಮಾನರೂ ಕ್ರೈಸ್ತರೂ ಹಿಂದುಗಳ ವಂಶಜರೇ ಆಗಿದ್ದಾರೆ. ಅವರ ಧರ್ಮ ಪರಿವರ್ತನದಿಂದ ಹಿಂದುಗಳೊಡನೆ ಅವರ ಸಂಬಂಧವು ಕಡಿದು ಹೋಗುವುದಿಲ್ಲ. ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದ ಇಂಗ್ಲೀಷಜಾತಿಯು ಆ ಧರ್ಮಾಂತರದಿಂದ ಬೇರೆಯಾಗುವುದಿಲ್ಲ."

—ಹರಿಜನದಿಂದ

ಯಾಕೆ ಮೂಲವ್ಯಾಧಿಯ
ನೋವಿನಿಂದ ನರಳುತ್ತೀರಿ?
ಈ ದಿನವೇ ಜಾಂಬಕ್ ಲೇಪವನ್ನು
ದಿನನಿತ್ಯ ಉಪಯೋಗಿಸಿರಿ.

ನೋವನ್ನುಂಟುಮಾಡುವ, ಬಾತು ಕೊಂಡಿರುವ ಮೂಲವ್ಯಾಧಿಯ ಬಾಧೆಯಿಂದ ಯಾಕೆ ನರಳುತ್ತೀರಿ? ಜಾಂಬಕ್ ಮದ್ದು ಇರುವಾಗ, ಅದರ ನಿತ್ಯದ ಬಾಧೆಯಿಂದ ನೀವು ಬಲಹೀನರಾಗದೇಕೇಕೆ? ಈ ಅತ್ಯಂತ ಗುಣಕಾರಿಯಾದ ವನೌಷಧಿಗಳಿಂದಲೇ ತಯಾರಿಸಿದ ಲೇಪವು ಸಾವಿರಾರು ಮಂದಿಗೆ ಅಮೃತಸಮಾನವಾದ ಗುಣವನ್ನು ತಂದಿದೆ. ಇದರಲ್ಲಿರುವ ಮಹತ್ವದ ಔಷಧಿ ಗುಣದಿಂದ, ನೆತ್ತರು ಸುರಿಯುವುದು ನಿಂತು ಹೋಗಿ ಮೂಲವ್ಯಾಧಿಯು ಕೂಡಲೇ ಮಾಯವಾಗ್ಗುವುದು. [illegible] ದಕಾರಣ ಮುಂದೆ ಮೂಲವ್ಯಾಧಿಯಿಂದ ನರಳಬೇಡಿರಿ, ಜಾಂಬಕ್ ಪಡಕೊಳ್ಳಿರಿ. ಎಲ್ಲಾ ಮದ್ದಿನ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಮತ್ತು ಒಂದು ಕಾಲು ರೂಪಾಯಿಗಳಿಗೆ ಸಿಗುತ್ತವೆ.

ಏಜೆಂಟರು
ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಿ. ಟಿ. ಮದ್ರಾಸ್

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬಿನಿಂದ ವಿರಹಿತವಾದುದು

ಧರ್ಮದ ಹೆಸರಲ್ಲಿ ಅಧರ್ಮ

ಅನಾಗರಿಕರ ಮೇಲೆ ಅನ್ಯಾಯ!

ಕೇಂದ್ರ ಪ್ರಾಂತದ ಬಿಲ್ಲರನ್ನು ಕ್ರಿಶ್ಚಿಯನ್ ಮಿಶನರಿಗಳ [illegible] ಅನ್ಯಾಯದಿಂದ ಎಳಕೊಳ್ಳುವ ಹಲವು ತಪ್ಪು ರೀತಿಗಳ ಪ್ರಕಟವಾಗಿವೆ! ನ್ಯಾಯದ ಸತ್ಯದ ದೇವರ ಹೆಸರಲ್ಲಿ ಮತಾಂಧರಾದ ಈ ಜನರ ಪಾಪಾಚರಣೆ ಮಾಡುತ್ತಿರುವುದನ್ನು ಕಂಡು ಭಗವಾನ್ ಏಸುಕ್ರಿಸ್ತನು ನೋಡಿ [illegible] ಬಹುದು!

[illegible] ಈ ರೀತಿ [illegible] ಕಟ್ಟಿಸಿದ್ದಾರೆ!

[illegible] ಬಹಳ ಬಡವರು [illegible] ಬಹಳ ಕಾಲದಿಂದಲೇ ತಮ್ಮ [illegible] ಸಂಪ್ರದಾಯಗಳನ್ನು ಬಿಡದೆ [illegible] ಅವರ [illegible] ಹಿಂದೂ ಧರ್ಮದಲಿಯೇ ಇರುವರು. ಇವರ ಬಡತನ ಅನಾಗರಿಕತೆಯನ್ನು ಕಂಡು ಕ್ರಿಶ್ಚಿಯನ್ ಮಿಶನರಿಗಳು ಬೇರೆ ಬೇರೆ ಕಡೆ ಹೋಗಿ, ಬಿಲ್ಲರಿರುವ ಊರಲ್ಲಿ ಸಣ್ಣದೊಂದು ಮನೆಕಟ್ಟಿ ಉಳಕೊಳ್ಳುವರು. ಸಹಜವಾಗಿ ಬಡವರಾದ ಬಿಲ್ಲರು ಇವರಿಂದ ಹಣ ಸಾಲ ಪಡೆದುಕೊಳ್ಳುವರು! ಯಾವಾತನು ಕ್ರಿಶ್ಚಿಯನ್ ಜಾತಿಗೆ ಸೇರುವನೋ ಅವನಿಗೆ ಸಾಲವನ್ನು ಬಡ್ಡಿಯಿಲ್ಲದೆ ಕೊಡುವರು! ಹಾಗಾಗಿ ಅನೇಕ ಬಿಲ್ಲರು ಕ್ರಿಶ್ಚಿಯನರಾಗಿ ಬಡ್ಡಿಯಿಲ್ಲದೆ ಸಾಲ ಪಡೆದುಕೊಳ್ಳುವರು! ಆದರೆ ಅವರಿಗೆ ತಾವು ಮಾಡಿದ ಮತಾಂತರದ ವಿಷಯ ಪಶ್ಚಾತ್ತಾಪವಾಗಿ ತಿರುಗಿ ಅವರು ಧರ್ಮ ಸಂಸ್ಕಾರ ಹೊಂದಿದರೆ, ಅವರು ಕೂಡಲೇ ಆ ಹಣವನ್ನು ಬಹಳ ಬಡ್ಡಿಯಿಂದ ತಿರುಗಿಸಲಾಯಸಬೇಕು. ಕ್ರಿಶ್ಚಿಯನ್ ಜಾತಿಯಲ್ಲಿರುವವರೆಗೆ ಅವರಿಂದ ಸಾಲವನ್ನು ತಿರುಗಿ ಕೇಳುವ ಒತ್ತಾಯವನ್ನೇ ಮಾಡುವುದಿಲ್ಲ!

ಇಷ್ಟು ಮಾತ್ರವಲ್ಲ ಕೆಲವು ಕಡೆಗಳಲ್ಲಿ ಸಾಲಕ್ಕೆ ಮಕ್ಕಳನ್ನು ಆಡವಾಗಿ ಇಡುವರು. [illegible] ಸಣ್ಣ ಮಕ್ಕಳನ್ನು ಕ್ರಿಶ್ಚಿಯನ್ ಮಿಶನರಿಗಳ ಕೆಲಸಕ್ಕೆ ಇಟ್ಟುಕೊಳ್ಳುವರು. [illegible] ಮಕ್ಕಳು ಸಣ್ಣದಿರುವಾಗಲೇ ಕ್ರಿಶ್ಚಿಯನ್ ವಾತಾವರಣದಲ್ಲಿ ಬೆಳೆದು ದೊಡ್ಡದಾಗುವುದರೊಳಗೆ [illegible] ಜಾತಿಯವರೇ ಆಗಿಬಿಟ್ಟಿರುತ್ತಾರೆ ಎಂದಿಗಳ

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಬಹು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಿಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಯಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

ಹರಿಜನಸೇವಾ

ಮಹನೀಯರೇ!

ಮಹಾತ್ಮಾ ಗಾಂಧಿಯವರಿಗೆ ತಾ ೨-೧೦ ಕ್ಕೆ ೭೧ ವರ್ಷ ತುಂಬು ವುದು. ಆ ದಿನ ಅವರ ಜನ್ಮದಿನದ ಜಯಂತ್ಯುತ್ಸವಾಚರಣೆಯನ್ನು ದೇಶವಿದೇಶಗಳಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲಿದ್ದಾರೆ. ಹಿಂಸಾತ್ಮಕವಾದ ಮಹಾಯುದ್ಧವು ಲೋಕದಲ್ಲೆಲ್ಲಾ ಹಬ್ಬಿ ಅಶಾಂತಿಯು ತಾಂಡವವಾಡುತ್ತಿರುವ ಈ ಕಾಲದಲ್ಲಿ, ಅಹಿಂಸಾತತ್ವ ಪ್ರತಿಪಾದಕರಾದ ಮಹಾತ್ಮಾ ಗಾಂಧಿಯವರಂತಹ ಶಾಂತಮುನಿಯ ನೆನವರಿಕೆಯು ಇನ್ನಷ್ಟು ಹೆಚ್ಚಿ, ಅವರ ಯೋಗ್ಯತೆಯು ಬಹುದೂರ ಕಳೆಯೇರುವುದರಲ್ಲಿ ಅನುಮಾನವಿಲ್ಲ. ಅನೇಕ ಕಡೆಗಳಲ್ಲಿ ಅವರ ಆಯುಷ್ಯದ ಅಭಿವೃದ್ಧಿಗಾಗಿಯೂ, ಅವರ ಇಚ್ಛಾಪೂರ್ತಿಗಾಗಿಯೂ ಪ್ರಮುಖ ನಿರ್ಣಯಗಳೂ, ಪ್ರಾರ್ಥನೆಗಳೂ ಆಗಲಿವೆ.

ಹರಿಜನೋದ್ಧಾರವು ಲೋಕಗುರು ಗಾಂಧಿಜೀಯವರ ಅಚ್ಚುಮೆಚ್ಚಿನ ಕೆಲಸವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅವರೆಷ್ಟೋ ಮಹತ್ಕಾರ್ಯಗಳನ್ನು ಮಾಡಿರುವರು. ಆದರೆ ಹರಿಜನ ಸಮಸ್ಯೆಗಾಗಿ ತಮ್ಮ ಪವಿತ್ರ ಪ್ರಾಣವನ್ನೇ ಬಲಿದಾನ ಕೊಡಲು ಸಿದ್ಧರಾಗಿದ್ದರು. ೧೯೩೨ ನೇ ಸೆಪ್ಟೆಂಬರ್ ೨೪ನೇ ದಿನ ಬಾಪೂಜೀಯವರ ೭ ದಿನಗಳ ಉಪವಾಸದ ಮಹಿಮೆಯ ಬಲದಿಂದ ಪಂಡಿತ ಮದನ ಮೋಹನ ಮಾಳವೀಯರು ಅಧ್ಯಕ್ಷರಾಗಿ ಪೂನೆಯಲ್ಲಿ ನೆರೆದ ಸಾರ್ವಜನಿಕ ಸಮ್ಮೇಳನದಲ್ಲಿ ಹರಿಜನ ಪ್ರಶ್ನೆಯು ತೀರ್ಮಾನವಾಗಿ, ದೇಶದಲ್ಲೆಲ್ಲಾ ಗಾಂಧಿಜೀಯವರ ಸಂಚಾರವಾಗಿ, ಹರಿಜನ ನಿಧಿಯ ಸಂಗ್ರಹವಾಗಿ, ಅಖಿಲ ಹಿಂದುಸ್ಥಾನ್ ಹರಿಜನ ಸೇವಕ ಸಂಘದ ಸ್ಥಾಪನೆಯಾಯಿತು. ಅದರಡಿಯಲ್ಲಿ ಎಲ್ಲಾ ಪ್ರಾಂತ್ಯಗಳಲ್ಲಿಯೂ ಅನೇಕ ಜಿಲ್ಲೆ ಮತ್ತು ತಾಲೂಕುಗಳಲ್ಲಿಯೂ ಸಂಘಗಳು ಕೆಲಸಮಾಡುತ್ತಿವೆ.

ನಮ್ಮ ಜಿಲ್ಲೆಯಲ್ಲಿಯೂ ೧೯೩೪ನೆಯ ಇಸವಿಯಿಂದ ಹರಿಜನ ಸೇವಕ ಸಂಘದ ಕೆಲಸವು ನಡೆಯುತ್ತಿದೆ. ಈ ವರೆಗೆ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳಲ್ಲಿ ಸಂಘಗಳೂ, ೩ ವಿದ್ಯಾರ್ಥಿಭವನಗಳೂ, ನೂರಕ್ಕಿಂತಲೂ ಮಿಕ್ಕಿದ ಶಾಲಾಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುವ ವ್ಯವಸ್ಥೆಯೂ, ಇರುವುದಲ್ಲದೆ ಉಡುಪಿಯಲ್ಲೊಂದು ಪ್ರತ್ಯೇಕ ಶಾಲೆಯು ಕೂಡಾ ಇದೆ. ಕಾಸರಗೋಡು ತಾಲೂಕಿನ ಹೊಸದುರ್ಗ ಮತ್ತು ಮಂಜೇಶ್ವರಗಳಲ್ಲಿಯೂ, ಪುತ್ತೂರು ತಾಲೂಕಿನ ಸುಳ್ಯದಲ್ಲಿಯೂ ಸಾಮಾನ್ಯ ೧೫೦ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುವ ವ್ಯವಸ್ಥೆಯಿದೆ. ಹರಿಜನರಿಗೆ ಅಲ್ಲಲ್ಲಿ ಬೇರೆ ಬೇರೆ ಸಹಾಯಗಳನ್ನೂ, ಕೆಲವು ವಿದ್ಯಾರ್ಥಿಗಳಿಗೆ ವೇತನಗಳನ್ನೂ ಕೊಡುತ್ತಿದ್ದೇವೆ. ಇದಕ್ಕಿಂತಲೂ ಹೆಚ್ಚಿನ ಕೆಲಸಗಳನ್ನು ಮುಂದಕ್ಕೆ ಮಾಡಬೇಕೆಂದಿರುವೆವು. ಆದರೆ ನಮ್ಮ ಕೆಲಸಗಳಿಗೆ ಬೇಕಾದ ಧನಬಲವು ಮಾತ್ರ ಇಲ್ಲದಾಗಿದೆ. ಹರಿಜನ ಸೇವೆಗೆ ಬೇಕಾದ ಎಲ್ಲಾ ಸಹಾಯವೂ ಸ್ಥಳೀಕ ಹಿಂದೂ ಬಾಂಧವರಿಂದಲೇ ಒದಗಿ ಬರತಕ್ಕದೆಂದು ಗಾಂಧೀಜೀಯವರ ಖಂಡಿತವಾದ ಅಭಿಪ್ರಾಯ ವಿರುತ್ತದೆ.

ಆದ್ದರಿಂದ ಎಲ್ಲರೂ ಜಿಲ್ಲೆಯ ಮತ್ತು ತಾಲೂಕುಗಳ ಹರಿಜನ ಸೇವಕ ಸಂಘಗಳ ಕೆಲಸಕ್ಕೆ ನೆರವಾಗಬೇಕೆಂದೂ ಸೆಪ್ಟಂಬರ್ ೨೪ರಿಂದ (ಪೂನಾ ಒಪ್ಪಂದದ ದಿನ) ಅಕ್ಟೋಬರ್ ೨ರ ತನಕ (ಗಾಂಧಿಜೀಯವರ ಜನ್ಮ ದಿನ) ೯ ದಿನಗಳ ನಮ್ಮ ಎಲ್ಲಾ ಕೆಲಸಗಳಲ್ಲಿಯೂ ಸಹಭಾಗಿಗಳಾಗಿ, ಸಂಘಕ್ಕೆ ಸದಸ್ಯರಾಗಿ ಸಹಾಯ ಧನವಿತ್ತು—ಹೀಗೆಲ್ಲಾ ಸಹಕರಿಸಬೇಕಾಗಿ ವಿನಂತಿ.

(ಸಹಿ) ಡಾ। ಎಚ್ ವಿ ಅಡಪ್ಪ
ಅಧ್ಯಕ್ಷ, ಜಿ. ಹ. ಸೇ. ಸಂಘ

'ಯುದ್ಧದ ಭೀಕರತೆಯನ್ನು ಕೂಡಲೇ ತಡೆಯಬೇಕು'

ಗಾಂಧಿಜಿಯವರ ಹೇಳಿಕೆ

'ಇಂದು ಮಾನವ ಕೋಟಿಯು ಗಂಡಾಂತರದಲ್ಲಿದೆ, ಯುದ್ಧಪ್ರವೃತ್ತ ರಾಷ್ಟ್ರಗಳಲ್ಲಿ ಅನೇಕ ಕ್ರೂರ ಕೃತ್ಯಗಳು ಜರುಗುತ್ತಿವೆ. ಯುರೋಪಿನಲ್ಲಿ ಅಮಾನುಷ ಅತ್ಯಾಚಾರಗಳಾಗುತ್ತಿವೆ. ಈ ಭೀಕರತೆಯನ್ನು ಈಗಲೇ ತಡೆಯಬೇಕು. ಇಲ್ಲದಿದ್ದರೆ ಅದು ಜಗತ್ತನ್ನೆಲ್ಲಾ ವ್ಯಾಪಿಸುವುದು. ಆದ್ದರಿಂದ ಕಾಂಗ್ರೆಸು ಈ ಕೆಲಸಕ್ಕೆ ಕೈಹಾಕಿದೆ. ಒಣ ಸಹಾನುಭೂತಿಯಿಂದ ಅಥವಾ ಅಂಜಿಕೆಯಿಂದ ಕಾಂಗ್ರೆಸು ಈ ಕೆಲಸವನ್ನು ಮಾಡದಿದ್ದರೆ ಅಹಿಂಸೆಯ ಸಂಸ್ಥೆಯೆಂಬ ಅದರ ಹೆಸರೇ ನಿರ್ನಾಮವಾಗುವುದು' ಹೀಗೆಂದು ಮಹಾತ್ಮರು ಒಂದು ಲೇಖನದಲ್ಲಿ ಬರೆಯುತ್ತಾರೆ.

'ಬ್ರಿಟಿಷರ ಬಗ್ಗೆ ನನ್ನ ಸಹಾನುಭೂತಿಯು ಈಗ ಇನ್ನೂ ಹೆಚ್ಚಾಗಿದೆ. ಇಂಗ್ಲೆಂಡಿಗೆ ಗಂಡಾಂತರವಾಗಬಹುದೆಂದ ನಾನು ಹೇಳಿದ್ದೆ. ಅದ ಈಗ ಬಂದಿದೆ. ಗಂಡಾಂತರಕ್ಕೆಗುರಿಯಾದವರೊಡನೆ ನನ್ನ ಸಹಾನುಭೂತಿಯಿದೆ. ಆದರೆ ಆ ಸಹಾನುಭೂತಿಯ ಸ್ವರೂಪ ಮಾತ್ರ ಬದಲಾಗಿದೆ.

'ಬ್ರಿಟಿಷರ ಬಗ್ಗೆ ನಿಜವಾಗಿಯೂ ನನಗೆ ಸಹಾನುಭೂತಿಯಿರುವುದರಿಂದ ಅವರು ನನ್ನ ಬೇಡಿಕೆಯನ್ನು ಕೊಟ್ಟು ತಮ್ಮ ಯುದ್ಧವನ್ನು ಮುಂದುವರಿಸಬಹುದು. ನಾವು ಅವರಿಗೆ ಈ ಸಂಕಟಕಾಲದಲ್ಲಿ ಕೊಂದರೆ ಕೊಡಲು ಇಚ್ಛಿಸುವುದಿಲ್ಲ. ಪ್ರತಿಯೊಂದ ಪ್ರಜಾಪ್ರಭುತ್ವ ರಾಷ್ಟ್ರಕ್ಕೂ ವಾಕ್ ಸ್ವಾತಂತ್ರ್ಯವಿರಬೇಕು. ಅದನ್ನು ನಾವು ಕೇಳುತ್ತೇವೆ.

ಈ ನ್ಯಾಯವಾದ ಕೇಳಿಕೆಗೆ ಬ್ರಿಟಿಷರು ಒಪ್ಪುವರೆಂದು ನಾನು ನಂಬಿದ್ದೇನೆ. ಕಾಂಗ್ರೆಸು ತನ್ನ ಸ್ವಂತದ ಸಲುವಾಗಿ ಈ ಸ್ವಾತಂತ್ರ್ಯವನ್ನು ಕೇಳುವುದಿಲ್ಲ. ಅಹಿಂಸೆಯನ್ನು ನಂಬಿರುವ ಎಲ್ಲಾ ರಾಷ್ಟ್ರಗಳಿಗೂ ಈ ಸ್ವಾತಂತ್ರ್ಯ ಸಿಗಬೇಕೆಂದು ಕಾಂಗ್ರೆಸು ಇದನ್ನು ಕೇಳುತ್ತದೆ.

ಕಫ, ಶೀತ ಮತ್ತು ಚಳಿಗಳು ಕೂಡಲೇ ಗುಣವಾಗುವುದು

ತೊಂದರೆ ಕೊಡುವ ಕಫವು, ಸಿಪ್ಪು ಕೋಳಗಳನ್ನು ಬೇನೆಗೊಳಿಸುವುದು. ಕಫದಿಂದ ವಾಯುನಾಳವು ಉದ್ರೇಕಗೊಂಡು ಅಪಾಯ ಸಂಭವಿಸಬಹುದು. ಆದ್ದರಿಂದ ಕೂಡಲೇ ಕಫ ನಿವಾರಕವಾದ ಪೆಪ್ಸನ್ನು ತೆಗೆದುಕೊಳ್ಳಿರಿ. ಪೆಪ್ಸ ಕೂಡಲೇ ನಿಮ್ಮ ಬಾಯಿಯಲ್ಲಿ ಅವು ಕರಗುತ್ತವೆ. ಅದರಿಂದ ಔಷಧಿ ರಸವು ಹೊರಡುತ್ತದೆ. ಅದು ಶ್ವಾಸ ಮಾರ್ಗವಾಗಿ ಹೃದಯಕೋಶಕ್ಕೆ ಹಬ್ಬಲ್ಪಡುವುದು. ಹಾಗೆ ಪೆಪ್ಸರೋಗವನ್ನುಂಟುಮಾಡುವ ಕ್ರಿಮಿಗಳನ್ನು ನಿರ್ಮೂಲಗೊಳಿಸುವುದು. ಕಂಠನಾಳವನ್ನು ಶುದ್ಧಗೊಳಿಸುವುದು. ಎದೆಯನ್ನು ವಿಶಾಲಗೊಳಿಸುವುದು. ಕೆಟ್ಟ ಕಫವನ್ನು ಹೋಗಲಾಡಿಸುವುದು.



ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಬೆಲೆಗೆ ಸಿಗುವುದು.

ಏಜಂಟ್ಸ್

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು.

ಯಾವಾಗಲೂ ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

About Ourselves

For a long time it has been our policy to concentrate largely on loans on the security of jewellery and gold. For this we were criticized and even laughed at. Well-meaning friends advised us that we should give up mere pawn-broking and money lending and devote ourselves to 'real' banking.

But to-day all our friends are congratulating us because in a war-stricken world of ever-shifting values gold has remained a stable commodity.

RESOURCES OF A CRORE.

Estd: 1906

CANARA BANK, LIMITED.

ಕನ್ಯಾರತ್ನದ ಬಲಿದಾನ

ಮಾಳವದ ಮೋಢ ಜಾತಿಯಲ್ಲಿ ಅತ್ಯಂತ ಕ್ರೂರತಾಪೂರ್ಣವಾದ ಒಂದು ವೈವಾಹಿಕ ಸಮಾಚಾರವು ಬಂದಿರುವುದು. ಆ ಜಾತಿಯ ಒಬ್ಬ ೧೩ ವರ್ಷ ಪ್ರಾಯದ ಕನ್ಯಾರತ್ನವನ್ನು ಪೂನೆಯ ಲಕ್ಷ್ಮೀಪತಿ ಎಂಬ ೬೮ ವರ್ಷ ಪ್ರಾಯದ ೯ ಮಕ್ಕಳ ತಂದೆಗೆ ಕೊಟ್ಟು ವಿವಾಹ ವ್ಯಾಪಾರವು ನಡೆದಿದೆ. ವೃದ್ಧನ ಕಾಮ ಪಿಪಾಸೆಯ ಮೇಲೆ ಬಬ್ಬ ಅಬೋಧ ಕನ್ಯಾರತ್ನವು ಈ ರೀತಿ ಬಲಿದಾನವಾಯಿತು. ಸಮಾಜದಲ್ಲಿ ಇಂತಹ ಅನ್ಯಾಯಗಳು ಎಷ್ಟೋ ನಡೆಯುತ್ತಾ ಇವೆ!

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕೆ ಅನಂತ ಮಲ್ಯ ವಾದಿ.

ಮತ್ತು

೧ ಕೆ ಮಾಧವ ಭಟ್ಟ ೨ ಇ ಪುರುಷೋತ್ತಮ ಭಟ್ಟ ಪ್ರತಿವಾದಿರು

ಇವರೊಳಗೆ

ಇದ್ರಿ ವ್ಯಾಜ್ಯದ 2ನೇ ಪ್ರತಿವಾದಿ ಇ ಪುರುಷೋತ್ತಮ ಭಟ್ಟ, ಕಾರಡ್ಕ ಬಾಡೂರು ನಾರಾಯಣ ಭಟ್ಟರ ಮಗ ಕಾಸರಗೋಡು ಕಸಬೆ ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ಕೂಡಾ 1ನೇ ಪ್ರತಿವಾದಿಯು ಏಕಸ್ಥರಾಗಿ ತಾ 12—6—1937ರಲ್ಲು ರೂಪಾಯಿ 200/ ಕ್ಕೆ ವಾದಿಗೆ ಬರಕೊಟ್ಟ ಡಿಮಾಂಡು ಪ್ರೋನೋಟು ಪ್ರಕಾರ ಅಸಲು ಬಡ್ಡಿ ವಗೈರೆ ವಸೂಲು ಮಾಡಿಕೊಳ್ಳುವರೆ ದಾಖಲು ಮಾಡಿದ ಮೊಕದ್ದಮೆ ತಾ ೯—10—1940ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ನೀವು ಮೊಕದ್ದಮೆ ಕೋರ್ಟಿನಲ್ಲಿ ಹಾಜರಾಗದಿದ್ದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಇತ್ಯರ್ಥಪಡಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

(By order of the Court)

Kasaragod 19—9—40. (Sd) K. K. Mallaya, Advocate for Plaintiff.

ಈ ವಾರದ ಕಥೆ:

ಅತಿಥಿ!

ಬರೆದವರು ಶ್ರೀಮತಿ ಲೀಲಾಬಾಯಿ ಕಾಮತ್ ಉಡುಪಿ

ಒಂದು ದೊಡ್ಡ ಮನೆತನಕ್ಕೆ ಸೇರಿ ನಾಲ್ಕು ಜನ ಅಣ್ಣತಮ್ಮಂದಿರು ಇದ್ದರು. ತಂದೆಯ ಕಾಲದಲ್ಲಿ ಶ್ರೀಮಂತಿಕೆ ಇದ್ದರೂ, ಮಕ್ಕಳ ಕಾಲದಲ್ಲಿ ಆ ಶ್ರೀಮಂತಿಕೆ ಉಳಿಯಲಿಲ್ಲ. ಎಲ್ಲವೂ ನಷ್ಟವಾಗಿ ಮನೆತನದ ಹೆಸರು ಮಾತ್ರ ಉಳಿದಿತ್ತು

ನಾಲ್ಕು ಜನ ಅಣ್ಣತಮ್ಮಂದಿರೂ ಓದು ಬರಹ ಗೊತ್ತಿದ್ದವರಾಗಿದ್ದರೂ ಶ್ರೀಮಂತರ ಮಕ್ಕಳಾದ ತಾವು ಹೊಟ್ಟೆಗೋಸ್ಕರ ಪರರ ಕೈಕೆಳಗೆ ಕೆಲಸ ಮಾಡುವುದೆಂದರೆ ಅವಮಾನವೆಂದು ಎಣಿಸುತ್ತಿದ್ದರು. ದಿನ ಕಳೆದಂತೆ ಮನೆಯಲ್ಲಿದ್ದ ಮಕ್ಕಳು ಮರಿಗಳ ಆಭರಣವನ್ನು ದೊಡ್ಡಸ್ಥಿಕೆಯ ಕಾರಣದಿಂದ ಯಾರಿಗೂ ಗೊತ್ತಾಗದಂತೆ ವಿಕ್ರಯಕ್ಕೆ ಮಾರಿದರು ಆದರೂ ಅದು ಎಷ್ಟು ದಿನ ತಾನೇ ನಡೆದೀತು'

ಅವರ ತೋಟದಲ್ಲಿ ಒಂದು ದೊಡ್ಡ ನುಗ್ಗೆಮರವಿತ್ತು ಹೆಚ್ಚಾಗಿ ಅದರಲ್ಲಿ ಇಡೀ ವರ್ಷ ನುಗ್ಗೆಕೋಡು ತಪ್ಪುತ್ತಿರಲಿಲ್ಲ ಕತ್ತಲಾದ ಕೂಡಲೇ ಯಾರಾದರೊಬ್ಬನು ಮರ ಹತ್ತಿ ನುಗ್ಗೆಕೋಡು ಕೊಯ್ದು, ಮನೆಯ ಹತ್ತಿರವೇ ಇದ್ದ ಕಾಯಿಪಲ್ಯ ಮಾರುವವಳಿಗೆ ಬಹಳ ಕಡಿಮೆ ಕ್ರಯಕ್ಕೆ ಕೊಡುತ್ತಿದ್ದನು ಮಾರಿ ಬಂದ ದುಡ್ಡಿನಿಂದ ನಾಲ್ಕು ಜನ ಅಣ್ಣತಮ್ಮಂದಿರೂ, ಅವರ ಹೆಂಡತಿ ಮಕ್ಕಳು ಮೊತ್ತ ಮುದಿ ತಾಯೊಬ್ಬಳು ಇಷ್ಟೆಲ್ಲಾ ಜನರಿಗೆ ಅದರಿಂದಲೇ ಜೀವನ ನಡೆಯಬೇಕಿತ್ತು

ಹೀಗಿರುವಾಗ ಒಂದು ದಿನ ಅವರ ಮನೆಗೆ ಹತ್ತಿರದ ಸಂಬಂಧಿಕನೊಬ್ಬನು ಬಂದನು ಮನೆಯಲ್ಲಿ ಎಷ್ಟು ಬಡತನವಿದ್ದರೂ ಬಂದ ಅತಿಥಿಗೆ ಅದನ್ನು ತೋರ್ಪಡಿಸದೆ ಅವನನ್ನು ಯಥಾಪ್ರಕಾರ ಸತ್ಕರಿಸುವುದು ಪ್ರತಿಯೊಬ್ಬನ ಧರ್ಮವಾಗಿದೆ. ಇದೇ ರೀತಿಯಲ್ಲಿ ಈ ಅಣ್ಣತಮ್ಮಂದಿರು ಅತಿಥಿಗೋಸ್ಕರ ಒಳ್ಳೇ ತರದ ಭೋಜನವನ್ನು ತಯಾರಿಸಿದರು ಹಿರಿಯನು ಬಂದು ತನಗೆ ಇವತ್ತು ಜೀರ್ಣ ಸರಿಯಿಲ್ಲದುದರಿಂದ ತಾನು ಉಣ್ಣುವುದಿಲ್ಲವೆಂದನು ಎರಡನೆಯವನು ತನಗೆ ಇವತ್ತು ಸೋಮವಾರ ಒಂದೇ ಊಟ ಎಂದನು. ಮೂರನೆಯವನು ತನಗೆ ಮಿತ್ರರಲ್ಲಿ ಊಟಕ್ಕೆ ಆಮಂತ್ರಣವಿದೆ ಎಂದನು ಅತಿಥಿಯ ಸಂಗಡ ಊಟಕ್ಕೆ ಕಿರಿಯವನು ಕುಳಿತನು. ತಾಯಿಯು ಪ್ರತಿಯೊಂದು ವಸ್ತುವನ್ನು ಅತಿಥಿಗೆ ಬಳಸುವಾಗ ಕಿರೀ ಮಗನು ತನಗೆ ಹಸಿವು ಇಲ್ಲವೆಂದೂ, ಏನೂ ಬೇಡವೆಂದೂ ಹೇಳುತ್ತಿದ್ದನು

ಒಂದು ದಿನದೊಳಗೆ ಅತಿಥಿಗೆ ಇವರ ನಿಜಸ್ಥಿತಿ ಗೊತ್ತಾಗಿಹೋಯಿತು. ಮನೆಯಲ್ಲಿ ಮಕ್ಕಳು ಮರಿಗಳು ಉಪವಾಸ ಬಿದ್ದರೂ ಒಬ್ಬನಿಗಾದರೂ ಉದ್ಯೋಗವಿಲ್ಲದೆ ಇರುವುದನ್ನು ನೋಡಿ ಅತಿಥಿಗೆ ಆಶ್ಚರ್ಯವಾಯಿತು. ಈ ರೀತಿಯ ಶ್ರೀಮಂತಿಕೆಯಿಂದ ಸಮಾಜವು ಹಾಳಾಯಿತು. ಒಪ್ಪತ್ತು ಊಟವಿಲ್ಲದಿದ್ದರೂ ದುಡಿದು ಜೀವಿಸುವುದೆಂದ ಕೂಡಲೇ ಮಾನವೇ ಹೋಯಿತೆಂದು ಎಣಿಸುತ್ತಾರೆ. ತಮ್ಮ ತಮ್ಮ ಧರ್ಮದಲ್ಲಿದ್ದ ಯಾವುದೇ ಕೆಲಸ ಮಾಡಿದರೂ ಅದರಿಂದ ಅವಮಾನವೇನು? ಈ ನಾಲ್ಕು ಜನ ಅಣ್ಣತಮ್ಮಂದಿರೂ ಒಳ್ಳೇ ನಡತೆಯವರಾಗಿದ್ದೂ ಇವರಿಗೆ ಕೆಲಸ ಸಿಕ್ಕದಿರಲು ಕಾರಣವಿಲ್ಲ ಅತಿಥಿಗೆ ಅವರನ್ನು ನೋಡಿ ಮರುಕವಾಯಿತು

ಆ ದಿನ ಅತಿಥಿ ಮನೆಯಲ್ಲಿ ಇದ್ದುದರಿಂದ ನಿತ್ಯಕ್ರಮದಂತೆ ನುಗ್ಗೆಕೋಡು ಕೊಯ್ಯಲಿಕ್ಕೆ ಆಗಲಿಲ್ಲ ನಡುರಾತ್ರಿ ಹಿರೀ ಮಗನು ಅತಿಥಿಯು ಗಾಢನಿದ್ರೆಯಲ್ಲಿ ಇದ್ದಾನೆಂದು ಎಣಿಸಿ ಮರ ಏರಿ ನುಗ್ಗೆಕೋಡನ್ನು ತೆಗೆದು, ಕಾಯಿಪಲ್ಯ ಮಾರುವವಳನ್ನು ಕರೆದು ಕ್ರಯ ಹೇಳಿದನು ಅವಳಿಗೆ ಇವರ ಸ್ಥಿತಿ ಗೊತ್ತಿತ್ತು ಅವಳು ಕೂಡಾ ಎರಡಾಣೆಯ ನುಗ್ಗೆಕೋಡನ್ನು ಎರಡಾಣೆಗೆ ಕೇಳಿದಳು ಅದಕ್ಕೆ ಹಿರೀಮಗನು ನಮ್ಮ ಮನೆಯಲ್ಲಿ ಈ ದಿನ ಅತಿಥಿ ಇದ್ದುದರಿಂದ ದುಡ್ಡಿನ ಆವಶ್ಯಕತೆಯಿದೆ ಎಂದನು ಕಟ್ಟಕಡೆಗೆ ಹೆಚ್ಚು ಚರ್ಚೆ ಮಾಡಿದಲ್ಲಿ ಅತಿಥಿಗೆ ನಿದ್ರಾಭಂಗವಾಗಿ ತಮ್ಮ ಗುಟ್ಟು ರಟ್ಟಾದೀತೆಂದು ಎಣಿಸಿ ಮೂರಾಣೆಗೇ ಅದನ್ನು ಕೊಟ್ಟುಬಿಟ್ಟನು

ಇದನ್ನೆಲ್ಲಾ ಪ್ರಿಯ ಸೋಗಿನಲ್ಲಿದ್ದ ಅತಿಥಿಯು ಕೇಳುತ್ತಿದ್ದನು ಇದನ್ನು ನೋಡಿ ಅವನಿಗೆ ಬಹಳ ಬೇಸರವಾಯಿತು ಇಷ್ಟು ವಿದ್ಯಾವಂತರಾಗಿ ಶ್ರೀಮಂತಿಕೆಯ ಡಂಭಾಚಾರಕ್ಕೆ ಈ ಯುವಕರು ಬಲಿ ಬೀಳುತ್ತಾರಲ್ಲ! ಇದಕ್ಕೇನಾದರೂ ಉಪಾಯ ಮಾಡಬೇಕೆಂದು ಎಣಿಸಿ ಅತಿಥಿಯು ಸದ್ದು ಮಾಡದೆ ಎದ್ದು ಜಗಲಿಯಲ್ಲಿದ್ದ ಕೊಡಲಿಯಿಂದ ಆ ನುಗ್ಗೆಕೋಡಿನ ಮರವನ್ನು ಬುಡಸಹಿತ ಕಡಿದುಬಿಟ್ಟನು

ಮರುದಿನ ಬೆಳಗಾಗುತ್ತಲೇ ಎದ್ದು ನೋಡುವುದೇನು? ಅತಿಥಿಯು ಕಾಣೆ, ತೋಟದಲ್ಲಿದ್ದ ನುಗ್ಗೆಕೋಡಿನ ಮರವು ಕಡಿಯಲ್ಪಟ್ಟಿದೆ ಹಾಯ್! ಮನೆಯವರಿಗೆ ಆಕಾಶವೇ ತಲೆ ಮೇಲೆ ಕಳಚಿ ಬಿದ್ದಂತಾಯಿತು. ಕುಟುಂಬವನ್ನು ಪೋಷಿಸುವ ಯಜಮಾನನು ಸತ್ತರೆ ಹೇಗೆ ಮನೆಯಲ್ಲಿ ಶೋಕ ಮಾಡುತ್ತಾರೊ ಹಾಗೆ ಆ ದಿನ ಅವರಲ್ಲಿ ಯಾರೂ ಊಟ ಮಾಡಲಿಲ್ಲ ಮುಂದಿನ ದಿನ ಅತಿಥಿಯನ್ನು ಇಚ್ಛಾನುಸಾರ ಬೈದರು ಇವನು ಅತಿಥಿಯಲ್ಲ, ಪೂರ್ವಜನ್ಮದ ವೈರಿಯಾಗಿದ್ದಾನೆ ನಮ್ಮ ಬಡತನ ನೋಡಿ ಇವನಿಗೆ ಬೇಸರವಾದಲ್ಲಿ ನಾಲ್ಕು ಅಕ್ಕಿ ಮುಡಿ ಕಳುಹಿಸಿದಲ್ಲಿ ಮಕ್ಕಳು ಮರಿಗಳು ಎರಡು ಹೊತ್ತು ಊಟಮಾಡಿ ಇವನನ್ನು ಹರಸುತ್ತಿದ್ದರು ನಮ್ಮ ಏಕಮಾತ್ರ ಸಹಾಯಕವಾದ ನುಗ್ಗೆಮರ ಕಡಿದ ಇವನಿಗಾದ ಲಾಭ ಯಾವುದು?"

ಹಿರಿಯ ಮಗನು ಬಂದು 'ಅಮ್ಮಾ ಇದುವರೆಗೆ ದಿನ ಮನೆಯ ಮರ್ಯಾದೆ ಉಳಿಸಲಿಕ್ಕೆ ಪ್ರಯತ್ನ ಮಾಡಿದೆವು ಪರರ ನೌಕರಿ ಮಾಡದೆ ಬೇರೆಯವರ ಉಪಕಾರ ಪಡೆಯದೆ ಇಂದಿನ ತನಕ ಹೇಗೂ ದಿನಗಳ ಕಳೆದವು ಇನ್ನು ಹಾಗಲ್ಲ ನಾನೆಲ್ಲಿಯಾದರೂ ಕೆಲಸ ಹುಡುಕುತ್ತೇನೆ ಎಂದನು.

ಆ ಪೇಟೆಯಲ್ಲಿ ಈ ನಾಲ್ಕು ಜನ ಅಣ್ಣತಮ್ಮಂದಿರಿಗೆ ಒಳ್ಳೇ ಮರ್ಯಾದೆ ಸಿಗುತ್ತಿತ್ತು ಒಬ್ಬ ದೊಡ್ಡ ಸಾಹುಕಾರನು ಸಂತೋಷದಿಂದ ಹಿರಿಯ ಮಗನನ್ನು ಗುಮಾಸ್ತೆಯ ಕೆಲಸಕ್ಕೆ ನಿಲ್ಲಿಸಿದನು. ಹೀಗೆ ಉಳಿದವರಿಗೂ ಅವರವರ ಮರ್ಯಾದೆಗೆ ತಕ್ಕಂತೆ ಯೋಗ್ಯ ಕೆಲಸಗಳು ದೊರಕಿದುವು.

ಒಂದು ವರ್ಷ ಕಳೆಯಿತು ಈ ಅಣ್ಣತಮ್ಮಂದಿರು ಬಡತನವನ್ನು ಹೋಗಲಾಡಿಸಿಕೊಂಡು ಒಳ್ಳೆ ಸ್ಥಿತಿಯಲ್ಲಿ ಇರತೊಡಗಿದರು. ಮನೆಯಲ್ಲಿ ಎಲ್ಲವೂ ಸಮೃದ್ಧಿಯಾಗಿತ್ತು

ದೀಪಾವಳಿ ಸಮಯದಲ್ಲಿ ಆ ಅತಿಥಿಯು ತಿರುಗಿ ಇವರ ಮನೆಗೆ ಬಂದನು. ತೋಟದಲ್ಲಿದ್ದ ನುಗ್ಗೆಕೋಡಿನ ಮರವನ್ನು ತಾನೇ ಕಡಿದೆನೆಂದೂ, ಮರ ಕಡಿಯುವುದರಲ್ಲಿ ತಾನು ಕೇಡು ಬಗೆಯಲಿಲ್ಲವೆಂದೂ ಹೇಳಿಬಿಟ್ಟನು. ಅಣ್ಣತಮ್ಮಂದಿರು ಅತಿಥಿಯನ್ನು ಒಳ್ಳೇ ರೀತಿಯಿಂದ ಸತ್ಕರಿಸಿದರು ಅತಿಥಿ ಮರ ಕಡಿದುದರಿಂದ ಬಡತನ ಹೋಗಿ ತಮಗೆ ಈ ಸ್ಥಿತಿಯು ಬಂದಿತೆಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು ಎರಡು ದಿನಗಳಿದ್ದು ಅತಿಥಿಯು ಹೊರಟಾಗ ಹಿರಿಯ ಮಗನು ಹೇಳಿದನು 'ಆ ದಿನ ತಾವು ನುಗ್ಗೆಮರವನ್ನು ಕೊಯ್ದುದರಿಂದ ನಮಗೆ ತಾಗಿದ ದುರಾಚಾರವೆಂಬ ಮರವನ್ನೇ ಕೊಯ್ದು ನಮ್ಮನ್ನು ಉದ್ಧರಿಸಿದಂತೆ ಆಯಿತು. ಆ ದಿನ ತಾವು ನಮ್ಮ ಬಡತನ ನೋಡಿ ನಾಲ್ಕು ಅಕ್ಕಿ ಮುಡಿ ಕಳುಹಿಸಿದ್ದರೂ ನಾವು ಇನ್ನೂ ಕೆಟ್ಟ ನಡತೆ ಕಲಿತು ಮತ್ತೂ ದರಿದ್ರರಾಗುತ್ತಿದ್ದೆವು ನೀವು ಆ ದಿನ ಆ ಮರವನ್ನು ಕಡಿದು ಕಳೆದು ಹೋದ ನಮ್ಮ ಶ್ರೀಮಂತಿಕೆಯನ್ನು ದೊರಕಿಸಿ ಕೊಟ್ಟಿರಿ ಎಂದನು ಅತಿಥಿಗಳೆಂದರೆ ಇಂಥವರಿರಬೇಕು.

ಹಿಂದಿಯಿಂದ

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವೆ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/-
ಸರ್ವಸಾಧಾರಣ ಬೋನಸ್ ರೂ 11
ಹೀಗೆ ಜುಮ್ಲಾ ರೂ 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಎನ್ ನಾಯಕ್
ಆರ್ಗನೈಸರ್
ಪೆಂಟ್ಲೆಂಡ್ ಪೇಟೆ, ಮಂಗಳೂರು.

ಅಥವಾ

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್
4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ಹಿಂದೂಸ್ಥಾನದಲ್ಲಿ ಅಲ್ಪಸಂಖ್ಯಾತರ ಧಾರ್ಮಿಕ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಕ್ಕುಬಾಧ್ಯತೆಗಳಿಗೆ ರಕ್ಷಣೋಪಾಯಗಳು ಅವರು ನಿರೀಕ್ಷಿಸಬಹುದಾದುದಕ್ಕಿಂತಲೂ ಹೆಚ್ಚಿಗೆ ದೊರೆತಿವೆ. ಸ್ಥಳೀಯ, ಪ್ರಾಂತೀಯ ಮತ್ತು ಕೇಂದ್ರೀಯ ಸರಕಾರಗಳಲ್ಲಿ ಬೇರೆಲ್ಲಿಯೂ ದೊರೆಯದಷ್ಟು ಹೆಚ್ಚು ಹಕ್ಕು ಅಧಿಕಾರಗಳು ಅವರಿಗೆ ದೊರೆತಿವೆ. ಬಹುಸಂಖ್ಯಾಕ ಜಾತಿಗಳಿಂದ ಅವರ ಮೇಲೆ ಯಾವದೇ ತರದ ಅನ್ಯಾಯ ಅಥವಾ ದಬ್ಬಾಳಿಕೆ ನಡೆಯದ ಹಾಗೆ ಕಠಿಣವಾದ ಕಾನೂನು ಇದೆ. ಅವರು ಸಂಘಟಿತರಾಗಿ, ಒಂದಾಗಿ ಸುಖವಾಗಿ ಬಾಳಿಬರಲಿಕ್ಕೆ ಇಲ್ಲಿ ಯಾವ ಆತಂಕವೂ ಇಲ್ಲ. ವಿದೇಶಗಳ ಅಲ್ಪಸಂಖ್ಯಾಕರ ನಿಕೃಷ್ಟ ಸ್ಥಿತಿಯೊಂದಿಗೆ ಭಾರತೀಯ ಅಲ್ಪಸಂಖ್ಯಾಕರ ಸ್ಥಿತಿಯನ್ನು ಹೋಲಿಸಿದರೆ, ಭಾರತೀಯ ಅಲ್ಪಸಂಖ್ಯಾಕರು ಎಂಥ ಉತ್ತಮ ಸ್ಥಿತಿಯಲ್ಲಿ ಇದ್ದಾರೆಂಬುದು ತಿಳಿಯುತ್ತದೆ. ನಮ್ಮ ದೇಶದಲ್ಲಿ ಅಲ್ಪಸಂಖ್ಯಾಕ ಸಮಸ್ಯೆ ಎಂಬುದು ವಾಸ್ತವವಾಗಿ ಇದ್ದಿರುವುದಿಲ್ಲ.

ಎಂದು ಜನಾಬ್ ರಿಜೂಲ್ ಕರೀಮ್ ಎಂಬವರು ಒಂದು ಲೇಖನದಲ್ಲಿ ಬರೆಯುತ್ತಾರೆ. ಅವರು ತಮ್ಮ ಸ್ಫೂರ್ತಿಯುತವಾದ ಲೇಖನವನ್ನು ಮುಂದುವರಿಸಿ ಮತ್ತು ಹೀಗೆಂದಿರುವರು:

ರಾಷ್ಟ್ರದ್ರೋಹ

ಸ್ವಾರ್ಥಿಗಳು ಕೆಲವರು ಬೇಕೆಂದೇ ಅಲ್ಪಸಂಖ್ಯಾಕ ಭೂತವನ್ನು ಕಲ್ಪಿಸಿಕೊಂಡಿದ್ದಾರೆ. ದಿನನಿತ್ಯ ಹೊಸ ಹೊಸ ಅಲ್ಪಸಂಖ್ಯಾಕ ಜಾತಿಗಳು ನಾಯಿಕೊಡೆಗಳಂತೆ ನಮ್ಮ ದೇಶದಲ್ಲಿ ಹುಟ್ಟುತ್ತಲಿವೆ. ಆದರೆ ಅವರಿಗೂ ಪ್ರಯೋಜನವಾಗಿಲ್ಲ. ಇದರಿಂದ ವಿಭಜಿಸಿ ಆಳುವ ಪ್ರಭುತ್ವಕ್ಕೆ ಪ್ರಯೋಜನವಾಗಿದೆ. ಅಲ್ಪಸಂಖ್ಯಾಕ ಸಮಸ್ಯೆಗಳಿಗೆ ಇಲ್ಲದ ಪ್ರಾಮುಖ್ಯತೆಯನ್ನು ಕೊಟ್ಟವರೂ ಅವರೇ. ನಮ್ಮನ್ನು ನಮ್ಮಷ್ಟಕ್ಕೆ ಬಿಡುತಿದ್ದರೆ, ಈ ಸಮಸ್ಯೆಯು ಎಂದೋ ತೀರ್ಮಾನವಾಗುತಿತ್ತು.

ಅಲ್ಪಸಂಖ್ಯಾಕ ಸಮಸ್ಯೆಗೆ ಇಲ್ಲದ ಪ್ರಾಮುಖ್ಯತೆ ಕೊಟ್ಟು ರಾಷ್ಟ್ರಕ್ಕೆ ದ್ರೋಹ ಮಾಡಲಾಗಿದೆ. ಅಲ್ಪಸಂಖ್ಯಾಕರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟು ಪ್ರಭುತ್ವದವರು ನಮ್ಮ ಮೇಲೆ ಪ್ರಥಮ ವಿಜಯವನ್ನು ಸಂಪಾದಿಸಿದರು. ಅವರ ಎರಡನೆ ವಿಜಯವೆಂದರೆ ಕಮ್ಯೂನಲ್ ಎವಾರ್ಡು. ಈ ಎವಾರ್ಡಿನಿಂದಾಗಿ ಬೇರೆ ಬೇರೆ ಜಾತಿ ಪಂಗಡಿಗರು ಬೇರೆ ಬೇರೆ ಕಣಗಳಲ್ಲಿ ಪರಸ್ಪರ ಹೋರಾಡುವಂತಾಗಿದೆ. ಈ ಎವಾರ್ಡಿನ ಪರಿಣಾಮವಾಗಿಯೇ ಭಾರತೀಯ ಶುಭ್ರ ರಾಜಕೀಯ ಆಕಾಶವು ಕಾರ್ಮುಗಿಲುಗಳಿಂದ ಮುಚ್ಚಿಕೊಂಡಿರುವದು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಮುದಾಯಿಕ ಆಂದೋಲನವು ಇದರಿಂದ ಅಸಾಧ್ಯವೆಂಬಂತಾಗಿರುವದು.

ಸ್ವಾರ್ಥೀ ಮುಖಂಡರ ಅನ್ಯಾಯ

ಕೆಲವು ಸ್ವಾರ್ಥೀ ಮುಸಲ್ಮಾನ ಮುಖಂಡರು ನ್ಯಾಯಕ್ಕೂ ನೀತಿಗೂ ವಿರೋಧವಾದ ಹೊಸ ಹೊಸ ಬೇಡಿಕೆಗಳನ್ನು ಮುಂದಿಡುತ್ತಾ ಇದ್ದಾರೆ. ಬಹುಸಂಖ್ಯಾಕರ ಅಭಿಮತವನ್ನು ಧಿಕ್ಕರಿಸುವ ಸರ್ವಸ್ವಾತಂತ್ರ್ಯವು ಕೂಡ ಮುಸಲ್ಮಾನ ಅಲ್ಪಸಂಖ್ಯಾಕರಿಗೆ ಇರಬೇಕೆಂದು ಅವರು ಹೇಳುವರು. ಇದಕ್ಕೆ ಒಪ್ಪಿದುದಾದರೆ ಪ್ರಜಾಸತ್ತೆಯ ಸಿದ್ಧಾಂತವನ್ನು ನಿರ್ಮೂಲ ಮಾಡಿದಂತೆಯೇ ಸರಿ! ಅವರ ಈ ಬೇಡಿಕೆಯು ಅಪಾಯಕಾರಿ ಮತ್ತು ಅಸಹ್ಯವಾಗಿರುವದು. ಬ್ರಿಟನು ಇದನ್ನು ಧಿಕ್ಕರಿಸುವದೆಂದು ನಂಬಲಾಗಿತ್ತು. ಆದರೆ ಅದು ಈ ವಿಷಯದಲ್ಲಿ ಆಶ್ಚರ್ಯಕರವಾದ ಮೌನವನ್ನು ತಾಳಿದೆ. ಪಾಕಿಸ್ತಾನದ ವಿಷಯವಾಗಿಯೂ ಇದೇ ಮಾತು ಅನ್ವಯಿಸುತ್ತದೆ. ರಾಜಕೀಯದಲ್ಲಿ ಧರ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವ ಪುರಾತನ ಸ್ಥಿತಿಯನ್ನು ಮುಟ್ಟಬೇಕೆಂದು ಲೀಗು ಆಶಿಸಿರುವದು. ಕಾಂಗ್ರೆಸು ಮತ್ತು ಅದರಂಥ ಬೇರೆ ರಾಷ್ಟ್ರೀಯ ಸಂಸ್ಥೆಗಳು ಪಾಕಿಸ್ತಾನ ಯೋಜನೆಯನ್ನು ವಿರೋಧಿಸಿರುವದು ಸಹಜವಾಗಿದೆ. ಇವು ಮುಸಲ್ಮಾನ ಮುಖಂಡರ ಅಸಾಧ್ಯ ಬೇಡಿಕೆಗಳಾಗಿರುವವು. ಈ ಅನ್ಯಾಯದ ಬೇಡಿಕೆಗಳನ್ನು ಸಹಾನುಭೂತಿಯಿಂದ ಆಲೋಚಿಸಬೇಕೆಂದು ಸರಕಾರವು ನಮಗೆ ಬೋಧಿಸುತ್ತದೆ!

ಅಲ್ಪಸಂಖ್ಯಾಕರ ಸಮಸ್ಯೆಯಲ್ಲಿ ಅರ್ಥವಿಲ್ಲ!

ಮುಸಲ್ಮಾನ ಮುಖಂಡರ ಅಭಿಮತ!

ಬ್ರಿಟನಿನೊಡನೆ ಬಿನ್ನಹ!

ಜಿನ್ನರ ಅರಾಷ್ಟ್ರೀಯ ಮದ!

ಮುಸಲ್ಮಾನ ಅಲ್ಪಸಂಖ್ಯಾಕರ ಪ್ರಧಾನ ಮುಖಂಡರೆಂದರೆ ಜಿನ್ನರು. ಅವರು ಇತ್ತೀಚೆಗೆ ಪ್ರಜಾಸತ್ತೆಯ ಎಲ್ಲಾ ಸಿದ್ಧಾಂತಗಳಿಗೆ ತಿಲಾಂಜಲಿ ಕೊಟ್ಟು, ಕ್ರಮಜಾತಿವಾದಿಗಳಾಗಿರುವರು. ಅವರು ಒಪ್ಪದೆ ಯಾವ ರಾಜಕೀಯ ಘಟನೆಯನ್ನೂ ತಯಾರಿಸಬಾರದೆಂಬ ವಿಚಿತ್ರ ಮಾತನ್ನು ಅವರು ಹೇಳಿರುವರು. ಬ್ರಿಟಿಷ ಸರಕಾರವೂ ಅವರ ಮಾತಿಗೆ ಸೈಗುಟ್ಟಿದ ಹಾಗೆ ವೈಸರಾಯರ ಘೋಷಣೆಯಿಂದಲೂ ಎಮರಿಯವರ ಭಾಷಣದಿಂದಲೂ ತಿಳಿಯುತ್ತದೆ. ೮೦ ಕೋಟಿ ಭಾರತೀಯರ ಭವಿಷ್ಯ ನಿರ್ಮಾಣ ಮಾಡುವವರು ಇಲ್ಲಿಯ ಬಹುಸಂಖ್ಯಾಕರಲ್ಲ ಅಲ್ಪಸಂಖ್ಯಾಕರೆಂದೇ ಇದರಿಂದ ಅರ್ಥವಾಗಬಹುದೆ? ಅಲ್ಪಸಂಖ್ಯಾಕರು ಒಪ್ಪದ ಯಾವ ಸರಕಾರಕ್ಕೂ ಅಧಿಕಾರವನ್ನು ಬಿಟ್ಟುಕೊಡಲು ತಾವು ಸಿದ್ಧರಿಲ್ಲವೆಂದು ಬ್ರಿಟನು ಹೇಳಿದೆ. ಇದರಿಂದ ಅಲ್ಪಸಂಖ್ಯಾಕರನ್ನು ಸಮಾಧಾನಪಡಿಸಲಿಕ್ಕೆ ಬಹುಸಂಖ್ಯಾಕರು ತಮ್ಮ ಎಲ್ಲಾ ಹಕ್ಕು ಅಧಿಕಾರಗಳನ್ನು ಬಿಟ್ಟುಕೊಡಬೇಕೆಂದು ಬ್ರಿಟನ್ ಹೇಳಿದಂತಾಯಿತು. ಬಹುಸಂಖ್ಯಾಕರ ಆಶೆ ಮಹತ್ವಾಕಾಂಕ್ಷೆಗಳಿಗೆ ವಿರೋಧವಾಗಿ ಬ್ರಿಟಿಷ್ ಸರಕಾರವು ಅಲ್ಪಸಂಖ್ಯಾಕರನ್ನು ಎತ್ತಿ ಕಟ್ಟುವುದು ಪರಮ ಅನ್ಯಾಯವಲ್ಲವೆ? ಈ ನೀತಿಯು ದೇಶದ ನಿಶ್ಚಿತ ಶಾಂತಿ ಮತ್ತು ವ್ಯವಸ್ಥೆಯ ಸ್ಥಾಪನೆಗೆ ಸಹಾಯವನ್ನು ಮಾಡುವುದೆ? ಜಿನ್ನರ ಧೋರಣೆಯನ್ನು ಸಮ್ಮತಿಸಿದ್ದ, ಅವರ ಅನ್ಯಾಯ ಮತ್ತು ಅರಾಷ್ಟ್ರೀಯ ನೀತಿಯನ್ನು ಒಪ್ಪದ ಒಂದು ದೊಡ್ಡ ಮುಸಲ್ಮಾನ ಜನಸಮುದಾಯವು ಭಾರತದಲ್ಲಿ ಇದೆ ಎಂಬುದನ್ನು ಪ್ರಭುತ್ವದವರು ತಿಳಿಯದಿರುವುದು ಖೇದಕರವಾಗಿದೆ. ಮುಸ್ಲಿಂ ಲೀಗನ್ನು ಅಧಿಕ ಮುಸಲ್ಮಾನರು ಅಲ್ಲಗಳೆದಿದ್ದಾರೆ. ರಾಷ್ಟ್ರೀಯ ಮುಸಲ್ಮಾನರಿಗೆ ಪಾಕಿಸ್ತಾನವು ಬೇಕಾಗಿಲ್ಲ. ಮುಸಲ್ಮಾನರಿಗೆ ಬೇಕಾದುದೆಲ್ಲವೂ ಕಮ್ಯೂನಲ್ ಎವಾರ್ಡಿನಿಂದ ಅವರಿಗೆ ದೊರೆತಿದೆ. ಅದರಲ್ಲಿ ಕೊಟ್ಟಿರುವುದಕ್ಕಿಂತ ಹೆಚ್ಚಿಗೆ ಕೊಡುವುದರಿಂದ ಪ್ರಜಾಸತ್ತೆಗೆ ಕೊಡಲಿಯಿಟ್ಟಂತಾಗುವುದು. ಈ ನಷ್ಟವನ್ನು ಭಾರತೀಯ ಜನಾಂಗವು ತಾಳಲಾರದು. ಮುಸಲ್ಮಾನರ ಕಷ್ಟಗಳನ್ನು ದೂರಮಾಡುವ ವಿಷಯವು ಪ್ರತ್ಯೇಕವಾಗಿದೆ. ಇದಕ್ಕೂ ಲೀಗಿನ ಅರಾಷ್ಟ್ರೀಯ ಬೇಡಿಕೆಗಳಿಗೂ ಸಂಬಂಧವಿಲ್ಲ. ಅಲ್ಪಸಂಖ್ಯಾಕರು ಭಾರತದ ಸ್ವರಾಜ್ಯಸಾಧನೆಯನ್ನು ಸ್ವಲ್ಪ ಕಾಲದ ತನಕ ಆತಂಕಿಸಬಹುದು. ಆದರೆ ಅದನ್ನು ಅವರು ಎಂದೆಂದೂ ಕಾಲದ ತನಕ ದೂರವಿಡಲಾರರು. ಆದ ಕಾರಣ ಈ ಬ್ರಿಟನು ಬಹುಸಂಖ್ಯಾಕರೊಂದಿಗೆ ಒಂದು ಒಡಂಬಡಿಕೆಗೆ ಬಂದು ಇಲ್ಲಿ ಶಾಂತಿಯನ್ನು ಕಾಪಾಡುವುದು ಅವರ ಕರ್ತವ್ಯ ಧರ್ಮವಾಗಿದೆ.



ಆಯುರ್ವೇದಾಶ್ರಮಂ
1898ರಲ್ಲಿ ಸ್ಥಾಪಿತವಾದುದು. ಮದರಾಸು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಜಿಲ್ಲಾ ಸಮಾಚಾರ



ಮಂಗಳೂರು

ದಿವಂಗತ ಪ್ರೊ. ಜೋಸೆಫ್ ಮೊಳಿಯೊಲ್:- ಕಳೆದ ತಾ. ೯ರಂದು ಇವರು ಬಲ್ಮಠದ ತಮ್ಮ ಮನೆಯಲ್ಲಿ ತನ್ನ ೭೮ನೆಯ ವರ್ಷ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಹೊಂದಿ ಬಿ. ಎ.ಯಲ್ಲಿ ಇಂಗ್ಲಿಷಿನಲ್ಲಿ ಯುನಿವರ್ಸಿಟಿಯ ಬಂಗಾರದ ಮೆಡಲು ಪಡೆದವರಾಗಿದ್ದರು ಆ ಕಾಲೇಜಿನಲ್ಲಿ ಹಲಕಾಲ ಉಪಾಧ್ಯಾಯರಾಗಿ ಬಹಳ ಪ್ರಖ್ಯಾತಿಗೆ ಬಂದು ಮಲಬಾರ್ ಕಾಲೇಜಿನ ಪ್ರಿನ್ಸಿಪಾಲರಾದರು. ಕ್ರಿಶ್ಚಿಯನ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರರಾಗಿಯೂ ಇದ್ದರು ಮಲೆಯಾಳಿ ಭಾಷೆಯಲ್ಲಿ ಹಲವು ಪಠ್ಯ ಪುಸ್ತಕಗಳನ್ನು ಬರೆದು ಜನಪ್ರಿಯರಾಗಿದ್ದರು ಮದ್ರಾಸು ಯುನಿವರ್ಸಿಟಿಯಲ್ಲಿ ಬಹಳ ಗೌರವದ ಸ್ಥಾನಮಾನಗಳನ್ನು ಹೊಂದಿದವರಾಗಿದ್ದರು ಅವರ ಆತ್ಮಕ್ಕೆ ಶಾಂತಿಯಿರಲಿ

ಹೂ ತರಕಾರಿ ಪ್ರದರ್ಶನ -ಮಂಗಳೂರಿನ ಆನೇ ಹೂ ಮತ್ತು ತರಕಾರಿ ಪ್ರದರ್ಶನವು ಗವರ್ನಮೆಂಟ್ ಕಾಲೇಜಿನಲ್ಲಿ ಅಕ್ಟೋಬರ ತಿಂಗಳ ತಾ ೬ ೭ ಮತ್ತು ೮ರಲ್ಲಿ ಜರಗುವುದು

ಮಂಗಳೂರಲ್ಲಿ ಹರಿಜನವಾರದ ಕಾರ್ಯಕ್ರಮಗಳು

1 24—9—'40 ಸಾರ್ವಜನಿಕ ಸಭೆ (ಪೂನಾ ಒಪ್ಪಂದದ ದಿನ) ಶ್ಯಾಮ ಘಂಟೆ 5 30ಕ್ಕೆ (ಡಿ ಸಿ ಎಮ್ ಶಾಲೆಯಲ್ಲಿ) ಅಧ್ಯಕ್ಷರು-ಶ್ರೀ ಕೆ ಬಿ ಜಿನರಾಜ ಹೆಗ್ಗಡೆಯವರು, ಎಮ್ ಎಲ್ ಎ (ಸೆಂಟ್ರಲ್) 2 25 9- 40 ಮೆರವಣಿಗೆ, ಭಜನೆ, ಆಟಗಳು ಮತ್ತು ಸಾರ್ವಜನಿಕ ಸಭೆ ಶ್ಯಾಮ ಘಂಟೆ ೧ಕ್ಕೆ, ಬಜ್ಜೆ ಕೋಲನಿಯಲ್ಲಿ 3 26—9-40 ಬೆಲ್ಪೇಟೆ ಕೋಲನಿಯಲ್ಲಿ 4 27—9—40 ಬಾಬುಗುಡ್ಡ ಕೋಲನಿಯಲ್ಲಿ. 5 28—9—40 ಸೂಟರ್‌ಪೇಟೆ ಕೊಲನಿಯಲ್ಲಿ 5 29—9—'40 ನೀರೇಶ್ವಾಲ್ಯ ಕೊಲನಿಯಲ್ಲಿ 7. 30—9—40 ಯಕ್ಷಗಾನ ರಾತ್ರಿ ಘಂಟೆ 9ರಿಂದ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ. 8. 1—10—'40 ಆಟಗಳು ಮತ್ತು ಮಕ್ಕಳಿಗೆ ತಿಂಡಿ ಹಂಚೋಣ, ಶ್ಯಾಮ ಘಂಟೆ 4ಕ್ಕೆ ಕೆನರಾ ಹೈಸ್ಕೂಲಿನ ಕೊಡಿಯಾಲಬೈಲಿನಲ್ಲಿರುವ ಆಟದ ಸ್ಥಳದಲ್ಲಿ, (ಡಿ ಸಿ ಎಮ್ ಕದ್ರಿ ವಿದ್ಯಾಬೋಧಿನಿ, ಟ್ರೈನಿಂಗ್ ಶಾಲೆಯ ಮೋಡೆಲ್ ಶಾಲೆ ಮತ್ತು ಬೇರೆ ಕೆಲವು ಶಾಲಾ ಮಕ್ಕಳಿಗೆ) 9. 2—10—'40 ಸಾರ್ವಜನಿಕ ಸಭೆ (ಗಾಂಧಿ ಜಯಂತಿ) ಶ್ಯಾಮ ಗಂಟೆ 5-30ಕ್ಕೆ ಮಂಗಳೂರು ಮೈದಾನಿನಲ್ಲಿ. ಅಧ್ಯಕ್ಷರು, ಶ್ರೀ. ಎ. ಬಿ. ಶೆಟ್ಟಿ, ಯಂ ಎಲ್. ಎ.

ವಿ. ಸೂ.—ಮೇಲಿನ 9 ದಿನಗಳಲ್ಲಿಯೂ ಹರಿಜನ ಸಂಘಕ್ಕೆ ಸದಸ್ಯರನ್ನು ಸೇರಿಸುವುದು, ಹಣಸಂಗ್ರಹ ಮಾಡುವುದು ಮತ್ತು ತಾ. 30—9—'40ರ ಯಕ್ಷಗಾನಕ್ಕೆ ಟಿಕೇಟು ಮಾರಾಟಮಾಡುವುದು, ಇವೇ ಮೊದಲಾದ ಕೆಲಸಗಳು ನಡೆಯುವವು.

ಉಡುಪಿ

ಪ್ರಶಂಸನೀಯ ದಾನ:- ಉಡುಪಿಗೆ ರೇಡಿಯೋ ದಾನಮಾಡಿದ ಮದ್ರಾಸಿನ ಡಾ. ಯಲ್. ನಾರಾಯಣ ರಾಯರು ಉಪವನವೊಂದನ್ನು ರಚಿಸಲು ರೂ ೧೦೦೦ ದಾನ ಮಾಡಿರುವರೆಂದು ತಿಳಿದು ಬರುತ್ತದೆ.

ಸ್ಕೌಟು ಮಾಸ್ಟರರ ತರಬೇತಿ ಶಿಬಿರ:- ಮುಲ್ಕಿಯ ವಿಶಭಾಂಡೇಶ್ವರ ಬೋರ್ಡ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ಹಿಂದೂಸ್ತಾನೀ ಸ್ಕೌಟು ಏಸೋಸಿಯೇಶನಿನ ಆಶ್ರಯದಲ್ಲಿ ಅಕ್ಟೋಬರ ೫ರಿಂದ ೧೩ರ ತನಕ ಸ್ಕೌಟು ಮಾಸ್ಟರರ ತರಬೇತಿ ಶಿಬಿರವು ತೆರೆಯಲ್ಪಡುವುದು ಊಟ ವಸತಿಯ ಬಗ್ಗೆ ರೂ. ೪ನ್ನು ಸರ್ಟಿಫಿಕೇಟಿನ ಬಗ್ಗೆ ಆಣೆಯಂಟನ್ನು ಶಿಕ್ಷಣ ಹೊಂದುವವರು ತೆರಬೇಕು ಶಿಕ್ಷಣ ಹೊಂದಲು ಅಪೇಕ್ಷಿಸುವವರು ತಮ್ಮ ವಿದ್ಯೆ, ಪ್ರಾಯ, ಸ್ಕೌಟು ಅನುಭವ ವೃತ್ತಿ ವಿಳಾಸಗಳನ್ನು ತಿಳಿಸಬೇಕು ಅಕ್ಟೋಬರ ೧ರ ಒಳಗೆ ಅರ್ಜಿಗಳು ತಲಪಬೇಕು ಎಂದು ಶ್ರೀ ಬಿ. ಎಂ ಬಾಳಿಗ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ್ ಹಿಂದೂಸ್ಥಾನೀ ಸ್ಕೌಟು ಎಸೋಸಿಯೇಶನ್, ಬೋರ್ಡ ಹೈಸ್ಕೂಲ್ ಪುತ್ತೂರು ಇವರು ತಿಳಿಸುತ್ತಾರೆ

ಸ್ಕೌಟು ಸಮ್ಮೇಳನ:- ಉಡುಪಿ ಬೋರ್ಡ ಹೈಸ್ಕೂಲಿನಲ್ಲಿ ತಾ ೧೬ರಂದು ಸ್ಕೌಟು ಸಮ್ಮೇಳನವು ಜರಗಿತು. ಊರ ಪ್ರಮುಖರಲ್ಲದೆ ಮದ್ರಾಸ್ ಪ್ರಾಂತಿಕ ಅಸಿಸ್ಟಾಂಟ್ ಸ್ಕೌಟ್ ಕಮಿಶನರ್ ಶ್ರೀ ಎಮ್ ರಾಜಗೋಪಾಲನ್, ಜಿಲ್ಲಾ ಸ್ಕೌಟ್ ಕಮಿಶನರಾದ ಶ್ರೀ ಎಮ್ ಎಸ್ ಮಾಧವರಾವ್ ಕೊಯಮುತ್ತೂರು ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ ಆರ್ ಎಮ್ ಸಪ್ರೆ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪ ಮುಂತಾದ ಸನ್ಮಾನ್ಯ ಅತಿಥಿಗಳು ದಯಮಾಡಿಸಿದ್ದರು.

ಜಿಲ್ಲಾ ಅಸಿಸ್ಟಾಂಟ್ ಕಮಿಶನರಾದ ಶ್ರೀ ಬಿ ಎಮ್ ಬಾಳಿಗರು ಸಂಘವು ಸ್ಥಾಪನೆಯಾದ ಅಲ್ಪಸ್ವಲ್ಪ ಕಾಲದೊಳಗಾಗಿಯೇ ಅದು ತಾಲೂಕಿನೊಳಗೆ ೩೦ ಸ್ಕೌಟು ಸಂಘಗಳು ತೆರೆಯಲ್ಪಟ್ಟು ರಿಜಿಸ್ಟ್ರಿಯಾಗಿವೆ ಎಂದೂ, ಇನ್ನು ಅನೇಕ ಕೂಟಗಳು ರಿಜಿಸ್ಟ್ರಿಯಾಗಲಿಕ್ಕಿವೆಯೆಂದೂ, ಮಂಜೇಶ್ವರ ಮತ್ತು ಮಂಗಳೂರಲ್ಲಿ ಜರಗಿದ ಸ್ಕೌಟ್ ತರಬೇತಿ ಶಿಬಿರಗಳಿಗೆ ೬ ಮಂದಿ ಉಪಾಧ್ಯಾಯರಿಗೂ ೫ ಮಂದಿ ಉಪಾಧ್ಯಾಯಿನಿಯರಿಗೂ ಸಂಘವು ಸಹಾಯವಿತ್ತಿದೆಯೆಂದೂ, ಸಂಘಕ್ಕೆ ವಿದ್ಯಾಧಿಕಾರಿಗಳ, ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಉಡುಪಿ ಮುನ್ಸಿಪಲ್ ಕಮಿಶನರರವರ ಆರ್ಥಿಕ ಸಹಾಯವು ಇದೆಯೆಂದು ಹೇಳಿದುದಲ್ಲದೆ ಇದೇ ಬರುವ ಅಕ್ಟೋಬರ ತಿಂಗಳಲ್ಲಿ ತಾ. ೫ರಿಂದ ೧೩ರ ವರೆಗೆ ಸ್ಕೌಟು ಮಾಸ್ಟರರ ತರಬೇತಿಗಾಗಿ ಸಂಘದ ಕಡೆಯಿಂದ ಮುಲ್ಕಿಯ ವಿಶಭಾಂಡೇಶ್ವರ ಬೋರ್ಡ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ತೆರೆಯಲಾಗುವ ತರಬೇತಿ ಕ್ಲಾಸಿನ ಪ್ರಯೋಜನವನ್ನು ತಾಲೂಕಿನ ವ ಜಿಲ್ಲೆಯ ಎಲ್ಲಾ ಶಾಲೆಗಳು ಹೊಂದಬೇಕಾಗಿ ವಿನಂತಿಸಿಕೊಂಡರು.

ಪ್ರಾಂತಿಕ ಅಸಿಸ್ಟಾಂಟ್ ಕಮಿಶನರಾದ ಶ್ರೀ. ರಾಜಗೋಪಾಲನ್‌ರವರು ಹಿಂದೂಸ್ಥಾನ್ ಸ್ಕೌಟ್ ಮಹಾ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಆದರಿಂದ ಈ ವರೆಗೆ ನಡೆದಿರುವ ಕಾರ್ಯಭಾಗಗಳನ್ನು ವಿವರಿಸಿ ಹೇಳಿದುದಲ್ಲದೆ, ಮದ್ರಾಸು ಪ್ರಾಂತ್ಯದ ಸಕಲ ಜಿಲ್ಲೆಗಳಲ್ಲಿಯೂ ಸಂಚರಿಸಿ ಅಲ್ಲಲ್ಲಿಯ ಸ್ಕೌಟ್ ಚಳವಳಗಳನ್ನು ಪರಿಶೀಲಿಸಿದ ತನ್ನ ಅಭಿಪ್ರಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಪ್ರಥಮ ಸ್ಥಾನವನ್ನು ಹೊಂದಿದೆ ಎನಲು ತುಂಬಾ ಸಂತೋಷಪಡುವೆನೆಂದರು ಸಂಘದ ಅಧ್ಯಕ್ಷರಾದ ಶ್ರೀ. ವಿಠಲ್ ಕಾಮತರು ಧನ್ಯವಾದಗಳನ್ನು ಅರ್ಪಿಸಿದರು

ಕಾರ್ಕಳ

ರೆಡ್‌ಕ್ರಾಸ್ ಸಮಾರಂಭ:- ಶ್ರೀ. ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಇಂಡಿಯನ್ ಜೂನಿಯರ್ ರೆಡ್‌ಕ್ರಾಸ್ ಗ್ರೂಪಿನ ಸದಸ್ಯರಿಗೆ ಬೇಜುಗಳನ್ನು ಕೊಡುವ ಒಂದು ಸಮಾರಂಭವು ತಾ ೨೧-೯-೪೦ರ ದಿನ ಡಿ ಇ ಓ-ರಾದ ಶ್ರೀ. ಯು ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ವಿ. ವಿ ಶೆಣೈಯವರು ತಮ್ಮ ಖರ್ಚಿನಿಂದ ಮಕ್ಕಳಿಗೆ ಸಕ್ಕರೆ ಮಿಠಾಯಿ ಹಂಚಿ ಸಂತೋಷ ಪಡಿಸಿದರು ಅಧ್ಯಕ್ಷರು ಗ್ರೂಪಿಗೆ ಉತ್ತಮವಾದ ಸಲಹೆಗಳನ್ನು ಇತ್ತು ಭಾಷಣ ಮಾಡಿದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಯಂ. ಸರ್ವೋತ್ತಮ ಕಾಮತರು, ಧನ್ಯವಾದ ಸಮರ್ಪಣ ಮಾಡಿದರು. ಅವರ ಸಮ್ಮಾನಾರ್ಥ ಶ್ರೀ ವೆಂಕಟ್ರಮಣ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಪ್ರೀತಿ ಭೋಜನವೂ ಆಗಿ ಅದರಲ್ಲಿ ಶ್ರೀ ಕೆ ಕೃಷ್ಣ ಪೈಯವರ ಅಧ್ಯಕ್ಷತೆಯಲ್ಲಿ ತಾಲೂಕಿಗೋಸ್ಕರ ಒಂದು ಸ್ಕೌಟ್ ಎಸೋಸಿಯೇಶನು ಸ್ಥಾಪಿಸಲ್ಪಟ್ಟಿದೆ

ಕುಂದಾಪುರ

ಉಪಾಧ್ಯಾಯರ ಬೇಡಿಕೆ -ಕುಂದಾಪುರ ತಾಲೂಕು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಭೆಯೊಂದು ಸೇರಿತು ಡಿ ಕ. ಜಿ. ಬೋರ್ಡಿನ ಬಡ ಉಪಾಧ್ಯಾಯರ ಸಂಬಳದಲ್ಲಿ ಮಾತ್ರ ಕಡಿತ ಹಾಕಿದ ವಿಷಯವಾಗಿ ಬೋರ್ಡಿಗೆ ತಿರಿಗಿ ಮನವಿ ಮಾಡಿಕೊಳ್ಳುವಂತೆಯೂ, ಬೋರ್ಡ ಶಾಲಾ ಉಪಾಧ್ಯಾಯರಿಗೆ ೧೯೩೯ರಿಂದ ಸಿಗಬೇಕಾದ ಇಂಕ್ರಿಮೆಂಟಿನ ವಿಷಯವಾಗಿ ಬರೆದುಕೊಳ್ಳಬೇಕಾಗಿಯೂ ನಿರ್ಣಯಗಳಾದುವು.

ಕಾಸರಗೋಡು

ಶ್ರೀ. ಶಿಲ್ಲೆಯರ ಭಾಷಣ -ಶ್ರೀ ನಾರಾಯಣ ವಿಜಯ ಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣ ಪರಮಹಂಸರ ೮೬ನೇ ಜನ್ಮದಿನಾಚರಣೆಯಂದು ಶ್ರೀ ನಾರಾಯಣ ಶಿಲ್ಲೆಯವರು ಸ್ವಾಮಿಯರ ಜೀವನ ತತ್ವದ ಕುರಿತು ಒಂದು ಉದಾತ್ತ ಭಾಷಣವಿತ್ತರು ಶ್ರೀ ಎಸ್ ಕಳ್ಳಿಲ್ಲಾಯ, ಎಡ್ವೊಕೇಟ್ ಇವರು ಅಧ್ಯಕ್ಷರಾಗಿದ್ದರು

ಪ್ರತಿಷೇಧ ದಿನಾಚರಣೆ:- ವೈಸರಾಯರ ಹೇಳಿಕೆ ಮತ್ತು ಭಾರತ ಮಂತ್ರಿಗಳ ಭಾಷಣಗಳನ್ನು ನಿಷೇಧಿಸಿ ತಾ ೧೫ರಲ್ಲಿ ನಿಲೇಶ್ವರದಲ್ಲಿ ಮಹಾ ಸಭೆಯೊಂದು ಸೇರಿತು. ಶ್ರೀ. ಸಿ ಕೆ ರಾಘವನ್ ನಂಬಿಯಾರರು ಪ್ರಾರಂಭದಲ್ಲಿ ಭಾಷಣ ಮಾಡಿದರು. ಶ್ರೀ ಯಂ ಉಮೇಶರಾಯರು ಮಲೆಯಾಳದಲ್ಲಿ ಭಾಷಣ ಮಾಡಿ ಇಂದಿನ ಯುದ್ಧ, ಕಾಂಗ್ರೆಸಿನ ನಿರ್ಣಯ ಇತ್ಯಾದಿಗಳನ್ನು ವಿವರಿಸಿ, ದೇಶಹಿತಕ್ಕಾಗಿ ಹೋರಾಟ ಕೈಕೊಳ್ಳುವ ಸಂದರ್ಭ ಬಂದಾಗ ಅಪರಿಮಿತ ಸ್ವಾರ್ಥತ್ಯಾಗಕ್ಕಾದರೂ ಜನರು ಸಿದ್ಧರಿರಬೇಕೆಂದು ಹೇಳಿದರು. ಮತ್ತೆ ಶ್ರೀಗಳಾದ ಕುಂಞಾಂಬು ಮತ್ತು ಕೇಳು ನಾಯರರು ಮಾತನಾಡಿದರು. ವೈಸರಾಯರ ಹೇಳಿಕೆ ಮತ್ತು ಭಾರತ ಸಚಿವರ ಭಾಷಣವನ್ನು ಖಂಡಿಸಿ ಸರ್ವಾನುಮತದಿಂದ ಠರಾವು ಪಾಸಾಯಿತು.

ಪೆರಡಾಲ

ನಾಡ ಹಬ್ಬದ ಸಮಿತಿ:- ದಸರಾ ಪ್ರತಿ ಸಣ್ಣ ದೂಳದಲ್ಲಿ ಜರಗುತ್ತಿದ್ದ ದಸರಾ ಮಹೋತ್ಸವವನ್ನು, ಈ ವರ್ಷ ಇಲ್ಲಿನ ಉತ್ಸಾಹಿ ಕೆಲಸಗಾರರು ಕರ್ನಾಟಕ ನಾಡಹಬ್ಬದ ದೃಷ್ಟಿಯಲ್ಲಿ ವಿಶೇಷವಾಗಿ ಜರಗಿಸಬೇಕೆಂದು ನಿಶ್ಚಯಿಸಿರುತ್ತಾರೆ. ಕರ್ನಾಟಕ ಸಂಸ್ಕೃತಿ, ನಾಗರಿಕ ಹಕ್ಕು, ಕೃಷಿಯ ಸುಧಾರಣೆ ಹಿಂದೂ ಮುಸ್ಲಿಂ ಐಕ್ಯ ಸಾರ್ವಜನಿಕ ಆರೋಗ್ಯ ಮೊದಲಾದ ಉಪಯುಕ್ತ ವಿಷಯಗಳಲ್ಲಿ ಪ್ರಸಿದ್ಧರಾದ ಆಮಂತ್ರಿತ ಉಪನ್ಯಾಸಕರಿಂದ ಉಪನ್ಯಾಸಗಳನ್ನೂ, ನಾಟಕ ಸ್ಪರ್ಧೆ, ಆಟಗಳು ಮೊದಲಾದ ವಿನೋದಗಳನ್ನೂ ಏರ್ಪಡಿಸಿ ಮೂರು ದಿನದ ಕಾರ್ಯಕ್ರಮಗಳನ್ನು ಗೊತ್ತುಮಾಡಿದ್ದಾರೆ.

ಶಾಲಾ ಸಂದರ್ಶನ:- ಇಲ್ಲಿನ ಬೋರ್ಡ ಹಯ್ಯರ್ ಎಲಿಮೆಂಟರಿ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡ ಎಜ್ಯುಕೇಶನಲ್ ಆಫೀಸರರಾದ ಶ್ರೀ ಸಂಜೀವ ಭಟ್ಟರು ಸಂದರ್ಶಿಸಿ, ಶಾಲೆಯ ಪ್ರಗತಿಯ ವಿಷಯದಲ್ಲಿ ತೃಪ್ತಿಕರವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಯರ್ ಎಲಿಮೆಂಟರಿ ಶಾಲೆಗಾಗಿ ಊರವರು ಕಟ್ಟಿಸಿಕೊಟ್ಟ ಕಟ್ಟಡವು ಇಡೀ ಜಿಲ್ಲೆಯಲ್ಲಿಯೇ ಮೇಲ್ತರಗತಿಯದಾಗಿರುವುದೆಂದು ಅಭಿಪ್ರಾಯಪಟ್ಟಿರುವರು



ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತವೆ. ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ'ಸೇವನೆ ಬಿಟ್ಟರೆ ಬೇರೆ ದಾರಿಯಿಲ್ಲ. ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸುವಂತೆ ಮಾಡುವುದೆಂದರೆ,

'ಲೋಧ್ರ'

ಕೇಸರಿ ಕುಟೀರಂ

ರಾಯಪೇಟೆ ಮದರಾಸು.

ಮಂಗಳೂರು ಪ್ರವರ್ತಕರು,

ಪೊಪ್ಯುಲರ್ ಸ್ಟೋರ್ಸ್ ರಥಬೀದಿ.

ಜಪಾನು ಇಂಡೋ ಚೈನವನ್ನು ನುಗ್ಗಿತು!

★ ಯುದ್ಧ ವಾರ್ತೆ

ಜಪಾನು ಫ್ರೆಂಚು ಒಪ್ಪಂದ

ಮಸೀದಿಯ ಮೇಲೆ ಬಾಂಬು!

ಫ್ರಾಂಕೋ ಯುದ್ಧಕಿಳಿವನೆ?

ಇಟಲಿ ಈಜಿಪ್ಟ್ ಘರ್ಷಣೆ!

ಗೋಬೆಲ್ಸನ ಕೋಣೆಗೆ ಬಾಂಬು

ಯೂರೋಪಿನಲ್ಲಿ ದಿನದಿನವೂ ವಿಶೇಷ ಘಟನೆಗಳೇ ನಡೆಯುತ್ತಿವೆ. ಲಂಡನಿನ ಮೇಲೆ ಬಹಳ ತೀವ್ರತರ ದಾಳಿ ಆಗಿಲ್ಲವಾದರೂ, ನಿರಂತರ ದಾಳಿ ನಡೆಯುತ್ತದೆ. ಸ್ವತಃ ಗೋರಿಂಗನೇ ಲಂಡನಿನ ಮೇಲೆ ಹಾರಾಡುತ್ತಾ ವೈಮಾನಿಕ ಸಾಹಸವನ್ನು ಮಾಡುತ್ತಿರುವನೆಂದು ಸುದ್ದಿ. ಆದರೆ ವಿಮಾನದಾಳಿಗೆ ಹವಾಮಾನವು ಅಷ್ಟು ಯೋಗ್ಯವಾಗಿಲ್ಲವಂತೆ.

ಜಪಾನು ಇಂಡೋ-ಚೈನ

ಇಂಡೋ ಚೈನದಲ್ಲಿ ಜಪಾನು ಅತ್ಯಾಯವನ್ನು ಮಾಡಿ ೭೨ ತಾಸುಗಳ ಅವಧಿಯನ್ನು ಕೊಟ್ಟಿತು. ಈ ಅವಧಿ ಮುಗಿಯಲು ಕೇವಲ ಎರಡು ತಾಸುಗಳ ತನಕ ಯುದ್ಧವಾಗಿ ಕೂಡಲೇ ಫ್ರಾನ್ಸು ಜಪಾನುಗಳೊಳಗೆ ಒಪ್ಪಂದವಾಗಿದೆ. ಜಪಾನು ಇಂಡೋ ಚೈನದಲ್ಲಿ ಮುನ್ನುಗ್ಗಿದೆ.

ಇಟಲಿ-ಈಜಿಪ್ಟ್

ಇಟಲಿಯು ಈಜಿಪ್ಟಿನಲ್ಲಿ ಮುನ್ನುಗ್ಗುತ್ತಿದೆ. ಈಜಿಪ್ಟಿನ ಮಂತ್ರಿಮಂಡಳದಲ್ಲಿ ಯುದ್ಧ ಹೂಡಬೇಕೋ ಬೇಡವೋ ಎಂಬ ಭಿನ್ನಾಭಿಪ್ರಾಯ ಹುಟ್ಟಿದೆ. ನಿರ್ಣಯಕ್ಕೆ ಬಂದಿಲ್ಲ. ದೇಶದಲ್ಲೆಲ್ಲಾ ಮಾರ್ಶಲ್ ಲಾ ಜಾರಿಯಾಗಿದೆ.

ಸ್ಪೈನು ಇಳಿಯುವುದೆ?

ಸ್ಪೈನು ಬ್ರಿಟಿಷರೊಡನೆ ಕಾಳಗಕ್ಕೆ ಇಳಿವಂತೆ ಸರ್ವಾಧಿಕಾರಿಗಳ ಒತ್ತಾಯ ನಡೆಯುತ್ತಿದೆಯೆಂದು ಸುದ್ದಿ. ಸ್ಪೈನು ಯುದ್ಧಕ್ಕಿಳಿಯುವುದರಿಂದ ಬ್ರಿಟಿಷರಿಗೆ ಜಿಬ್ರಾಲ್ಟರಿನಲ್ಲಿ ಹೆಚ್ಚು ತೊಂದರೆಯುಂಟಾಗಬಹುದು.

ಜಪಾನು ಸೈನ್ಯ ಇಂಡೋ ಚೈನವನ್ನು ನುಗ್ಗಿತು

ಜಪಾನಿನ ಸೈನ್ಯವು ತಾನು ಕೊಟ್ಟ ಅವಧಿಯು ಎರಡು ತಾಸಿನ ಮೊದಲೇ ತಾ. ೨೨ರಂದು ಇಂಡೋಚೈನವನ್ನು ನುಗ್ಗಿತು. ಫ್ರೆಂಚ ಸೈನ್ಯಗಳು ಎರಡು ಕಡೆಗಳಲ್ಲಿ ತಡೆದರು. ಎರಡು ತಾಸಿನ ವರೆಗೆ ಯುದ್ಧ ನಡೆಯಿತು. ಆ ಮೇಲೆ ಒಪ್ಪಂದ ಮಾಡಿಕೊಂಡರು. ಒಪ್ಪಂದದಲ್ಲಿ ಟಾಂಕಿಂಗಿನಲ್ಲಿ ಫ್ರೆಂಚರು ಜಪಾನಿಗಳಿಗೆ ವಿಮಾನ ಗೃಹ ಕಟ್ಟಿಸಲು ಅಸ್ಪದ ಕೊಡಬೇಕೆಂದೂ ಆ ಬಗೆ ರಕ್ಷಣೆಗೆ [illegible] ಜಪಾನು ಸೈನಿಕರನ್ನು ಇಂಸಲು ಸಮ್ಮತಿಸಬೇಕೆಂದೂ ದಕ್ಷಿಣ ಚೀನದ ಜಪಾನೀ ಸೈನಿಕರಿಗೆ ಇಂಡೋ ಚೀನದಲ್ಲಿ ಹಾದುಹೋಗಲು ಮಾರ್ಗ ಕೊಡಬೇಕೆಂದೂ ಹೈಫಾಂಗದಲ್ಲಿ ಸೈನಿಕರನ್ನಿಡಲು ಸಮ್ಮತಿಸಬೇಕೆಂದೂ ಇದೆ.

ಆಫ್ರಿಕ ರಣಭೂಮಿಯಲ್ಲಿ

ಇಟಲಿಯು ವಿಜೃಂಭಿಸಿ ಯುದ್ಧ ಮಾಡುತ್ತಿರುವುದನ್ನು ಬ್ರಿಟಿಷ್ ದಳದವರು ತಡೆಯುತ್ತಿದ್ದಾರೆ. ಬ್ರಿಟಿಷ್ ವೈಮಾನಿಕರು ಇಟಲಿಯನ್ ಕೇಂದ್ರಗಳ ಮೇಲೆ ವಿಮಾನ ದಾಳಿ ನಡೆಸಿದರು.

ನಡುಲಂಡನಿಗೆ ಬಾಂಬು

ಜರ್ಮನ್ ವಿಮಾನಗಳು ಮತ್ತೂ ನಡುಲಂಡನಿನ ಮೇಲೆ ಬಾಂಬೆಸೆದರು ಅನೇಕ ಮನೆ ಅಂಗಡಿಗಳು ನಾಶವಾಗಿವೆ. ಕೆಲವರು ಮರಣಹೊಂದಿರುವರು.

ಬ್ರಿಟಿಷ್ ಹಡಗದ ಜಲಸಮಾಧಿ!

ಚಿಕ್ಕ ಮಕ್ಕಳನ್ನು ಒಯ್ಯುತ್ತಿತ್ತು!

ಬ್ರಿಟಿಷರ ಚಿಕ್ಕ ಮಕ್ಕಳನ್ನು ಕೆನಡಕ್ಕೆ ಒಯ್ಯುತ್ತಿದ್ದ ಬ್ರಿಟಿಷ ಹಡಗೊಂದು ಟಾರ್ಪಡೋ ಪೆಟ್ಟಿನಿಂದ ಮುಳುಗಿದೆ. ಸುಮಾರು ೨೬೪ ಜನರು ನೀರ ಪಾಲಾದರೆಂದು ತಿಳಿದುಬರುತ್ತದೆ. ಸಮುದ್ರವೂ ತುಫಾನಿನಿಂದ ಭೀಕರವಾಗಿದ್ದು ಹಡಗವನ್ನು ಉಳಿಸಲು ಮಾಡಿದ ಯತ್ನವು ನಿರಾಶವಾಯಿತು.



ಏರೋಪ್ಲೇನ್ ಎಂಜಿನನ್ನು ಬಹಳ ಆಶೆಯಿಂದ ಬ್ರಿಟನಿನ ಬಾಲಕರು ಪರೀಕ್ಷಿಸುತ್ತಿದ್ದಾರೆ. ಬ್ರಿಟನಿನ ಭವಿಷ್ಯವು ಇವರನ್ನು ಹೊಂದಿರುವುದಲ್ಲವೆ?

[ನಡುಲಂಡನಿಗೆ ಬಾಂಬು — ಮುಂದುವರಿದುದು] ...ವವು. ಜರ್ಮನರು ಡೋವರಿಗೆ ಬಾಂಬಿಟ್ಟರು. ಲಂಡನಿನ ಕೆಲ ಹಳ್ಳಿಗಳಿಗೆ ಬಾಂಬು ಬಿದ್ದು ಹಲವು ಮನೆಗಳು ನೆಲಸಮವಾಗಿವೆಯೆಂದು ತಿಳಿದಿದೆ. ಜನರೂ ವ್ಯಥೆಹೊಂದಿರುವರು.

ಮಸೀದಿಯ ಮೇಲೆ ಬಾಂಬುಗಳು

ಈಜಿಪ್ಟಿನ ಮೇಲೆ ದಾಳಿ ನಡೆಸಿದ ಇಟಲಿಯನ್ ವಿಮಾನಗಳು ಕೈಪಾದ ಮಸೀದಿಯ ಮೇಲೂ ಬಾಂಬುಗಳನ್ನೆಸೆದರು. ನಗರದಲ್ಲಿ ಅಲ್ಲಲ್ಲಿ ಬಾಂಬು ಬಿದ್ದಿತು.

ಗೋರಿಂಗರ ದಾಳಿ

ಲಂಡನಿನ ಮೇಲೆ ತಾ. ೨೨ರಂದು ಗೋರಿಂಗರ (ವಿಮಾನ) ದಾಳಿಗಳು ಆದುವು. ಗುಂಪು ಗುಂಪಾಗಿ ವಿಮಾನಗಳು ಬಂದು ಬಂದು ಬಾಂಬುಗಳನ್ನು ಚೆಲ್ಲಿದವು. ಬೇರೆ ಬೇರೆ ಕಡೆಗಳಲ್ಲಿ

ಈಜಿಪ್ಟ್ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯ

ಕಳೆದ ಕೆಲವು ದಿನಗಳಿಂದ ಈಜಿಪ್ಟ್ ಇಟಲಿಗಳೊಳಗೆ ಘರ್ಷಣೆಯುಂಟಾಗಿದೆ. ಇಟಲಿ ಮುಂದೊತ್ತಿ ಬರುತ್ತಿದೆ. ಈಜಿಪ್ಟ್ ಇಟಲಿ ವಿರುದ್ಧ ಯುದ್ಧ ಪ್ರಕಟಣೆ ಮಾಡಬೇಕೋ ಬೇಡವೋ ಎಂಬ ವಿಚಾರವಾಗಿ ಅಲ್ಲಿನ ಮಂತ್ರಿಮಂಡಲದ ಸಭೆ ಸೇರಿತು. ಈ ಕುರಿತು ಭಿನ್ನಾಭಿಪ್ರಾಯ ಹುಟ್ಟಿ ಮಂತ್ರಿಮಂಡಲದ ನಾಲ್ಕು ಜನ ಮಂತ್ರಿಗಳು ರಾಜೀನಾಮೆ ಕೊಟ್ಟಿರುವರೆಂದು ತಿಳಿದಿದೆ. ಅರಸರಾದ ಫರೂಕರು ಈ ಕುರಿತು ಸರಕಾರೀ ಪ್ರಕಟಣೆ ಹೊರಡಿಸಲಿರುವರು.

ವೆಸ್ಟ್‌ಮಿನ್‌ಸ್ಟರ್ ಅಬೆಗೆ ಬಾಂಬು

ಕಳೆದ ವಾರ ವೆಸ್ಟ್‌ಮಿನ್‌ಸ್ಟರ್ ಅಬೆಗೆ ಬಾಂಬು ಬಿದ್ದಿರುತ್ತದೆ. ಆದರೆ ಹೆಚ್ಚಿನ ಅಪಾಯಗಳೇನೂ ಆಗಿಲ್ಲವೆಂದು ತಿಳಿಯುತ್ತದೆ.

ಇಂಡೋ-ಚೈನ ಮಾತುಕತೆ ಮುರಿಯುವುದೇ?

ಇಂಡೋ-ಚೈನದ ವಿಷಯವಾಗಿ ಜಪಾನು ಕೊಟ್ಟ ೭೨ ತಾಸುಗಳ ಕಡೆಯ ನುಡಿಯ ಕುರಿತು ಮಾತುಕತೆ ನಡೆದು ಅದು ಮುರಿಯುವ ಮಟ್ಟಿಕ್ಕೆ ಇಂದು ಬಂದಿರುವುದಾಗಿ ತಿಳಿದು ಬರುತ್ತದೆ. ಟೋಕಿಯೋದಲ್ಲಿಯೂ ಹಾನಾಯದಲ್ಲಿ ಯೂ ಮಾತುಕತೆಗಳು ನಡೆದಿವೆ.

ಆಶಾವಾದಿಯಲ್ಲದಿದ್ದರೂ ವಿಶ್ವಾಸದಿಂದ ಕಾದಾಡಬೇಕು

ಅಟ್ಲೀಯವರ ಆಕಾಶವಾಣಿ

ಬ್ರಿಟನಿನ ಕೂಲಿಗಾರ ಮುಖಂಡರಾದ ಅಟ್ಲೀಯವರು ಆಕಾಶವಾಣಿಯಲ್ಲಿ ಒಂದು ಭಾಷಣವಿಯುತ್ತ ಇಂದಿನ ಹೋರಾಟದ ಕುರಿತು, ಬ್ರಿಟನು ಆಶಾವಾದಿಯಾಗುವ ಅಸ್ಪದವಿಲ್ಲದಿದ್ದರೂ ಹೆಚ್ಚಿನ ವಿಶ್ವಾಸದಿಂದ ಕಾದಾಡಬೇಕಾಗಿದೆಯೆಂದು ಹೇಳಿದರು. ಜರ್ಮನರ ನಾಶಕರ ದಾಳಿಯನ್ನು ಖಂಡಿಸಿ, ಇದು ಜೀವನ್ಮರಣದ ಯುದ್ಧವೆಂದು ಅಭಿಪ್ರಾಯಪಟ್ಟರು.

ವಿಜಯ ಸಿಗುವರೆಗೆ ಹೋರಾಡುವೆವು

ಲಂಡನಿನ ಲಾರ್ಡ್ ಮೇಯರರು ಒಂದು ಭಾಷಣ ಮಾಡುತ್ತಾ ಬ್ರಿಟಿಷರು ಜರ್ಮನಿಗೆ ಶರಣಾಗಲಾರರೆಂದೂ, ಬ್ರಿಟಿಷರು ವಿಜಯ ಸಿಗುವ ವರೆಗೆ ಹೋರಾಡುವರೆಂದೂ ಹೇಳಿದರು.

ದಾಳಿಯು ಕಡಿಮೆಯಾಗಿದೆ

ಕೆಲದಿನಗಳಿಂದ ಜರ್ಮನದ ತೀವ್ರವಾಗಿದ್ದ ವಿಮಾನ ದಾಳಿಯು ಅಬ್ಬರವು ಕಡಿಮೆಯಾಗಿದೆ. ಆದರೆ ಅಲ್ಲಲ್ಲಿ ಅಲ್ಪಸ್ವಲ್ಪ ನಡೆಯುತ್ತಲೇ ಇದೆ. ಜರ್ಮನರಿಗೆ ಹವಾಮಾನವು ಅಷ್ಟು ಅನುಕೂಲವಾಗಿಲ್ಲವೆಂದು ಊಹಿಸಲಾಗಿದೆ.

ಈಜಿಪ್ಟಿನಲ್ಲಿ ಮಾರ್ಶಲ್ ಲಾ

ಈಜಿಪ್ಟಿನಲ್ಲಿ ಮುಂಜಾಗರೂಕತೆಯ ಸಲುವಾಗಿ ಮಾರ್ಶಲ್ ಲಾ ಜಾರಿಮಾಡಲಾಗಿದೆ.

ಗೋಬೆಲ್ಸನ ಕೋಣೆಗೆ ಬಾಂಬು

ಜರ್ಮನಿಗೆ ಹಾರಿ ಬಾಂಬೆಸೆದ ಬ್ರಿಟಿಷ್ ವೈಮಾನಿಕರ ಹಲವು ಸಾಹಸದ ಕಾರ್ಯಗಳು ಪ್ರಕಟವಾಗಿವೆ. ಅವುಗಳಲ್ಲಿ ಒಂದು ಜರ್ಮನಿಯ ಪ್ರಚಾರ ಮಂತ್ರಿ ಗಾಬೆಲ್ಸನ ಕೋಣೆಗೆ ಬಾಂಬೆಸೆದುದಾಗಿದೆ.

ಫ್ರೆಂಚ್ ಕರಾವಳಿಯ ಮೇಲೆ ಬ್ರಿಟಿಷ್ ವಿಮಾನ ದಾಳಿ

ಫ್ರೆಂಚ್ ಚಾನಲ್ಲಿನ ಬಂದರುಗಳ ಮೇಲೆ ಬ್ರಿಟಿಷ್ ವೈಮಾನಿಕರು ಪ್ರಚಂಡ ವಿಮಾನ ದಾಳಿ ನಡೆಸಿದರೆಂದು ತಿಳಿದು ಬರುತ್ತದೆ. ಬ್ರಿಟಿಷರು ಬಿಟ್ಟ ಕೊಳ್ಳಿಗಳಿಂದ ಅನೇಕ ಕಟ್ಟಡಗಳು ಉರಿಯುತ್ತಿದ್ದುದು ಕಾಣುತ್ತಿತ್ತು.

ತಿಂಗಳಿಗೆ ೫೦೦ರಂತೆ ವಿಮಾನಗಳು ಅಮೇರಿಕದಿಂದ ಬ್ರಿಟನಿಗೆ

ಇಂದು ಬ್ರಿಟನಿಗೆ ಅಮೇರಿಕದವರು ಕೇವಲ ೨೦೦ ವಿಮಾನಗಳನ್ನು ತಯಾರಿಸಿಕೊಡಲು ಶಕ್ತರಾಗಿರುವರೆಂದೂ, ಮುಂದೆ ೫೦೦ರಂತೆ ವಿಮಾನಗಳನ್ನು ಕಳುಹಿಸುವರೆಂದೂ ತಿಳಿದಿದೆ.

ಅಮೇರಿಕಕ್ಕೆ ಬ್ರಿಟಿಷರ ಶಿಷ್ಟಮಂಡಲ

ಲಾರ್ಡ್ ವಿಲ್ಲಿಂಗ್ಡನರ ನೇತೃತ್ವ

ಹಿಂದೂಸ್ಥಾನದ ಹಿಂದಿನ ವೈಸರಾಯರಾಗಿದ್ದ ಲಾರ್ಡ್ ವಿಲ್ಲಿಂಗ್ಡನರ ನೇತೃತ್ವದಲ್ಲಿ ಅಕ್ಟೋಬರ ಮಧ್ಯದಲ್ಲಿ ದಕ್ಷಿಣ ಅಮೇರಿಕಕ್ಕೆ ಬ್ರಿಟಿಷರ ಒಂದು ಶಿಷ್ಟಮಂಡಲವು ಹೋಗುವುದಾಗಿ ತಿಳಿದು ಬರುತ್ತದೆ. ರಾಜಕೀಯ ಹಾಗೂ ವ್ಯಾಪಾರೀ ಸಂಬಂಧದ ಕಾರ್ಯಕಲಾಪಗಳಿಗಾಗಿ ಇದು ಹೋಗುವುದೆಂದು ತಿಳಿದಿದೆ.

ಅಂತರ್‌ರಾಷ್ಟ್ರೀಯ ಕೂಲಿಗಾರರ ಕಚೇರಿ

ಜಿನೀವಾದಿಂದ ಕೆನಡಕ್ಕೆ

ಯುದ್ಧ ಪರಿಸ್ಥಿತಿಯಿಂದ ಅಂಚೆ ವ್ಯವಹಾರವು ಜಿನೀವಾಕ್ಕೆ ಕಷ್ಟವಾಗಿ ಪರಿಣಮಿಸಿರುವುದರಿಂದ ಅಂತರ್ ರಾಷ್ಟ್ರೀಯ ಕೂಲಿಗಾರರ ಕಚೇರಿಯನ್ನು ಅಲ್ಲಿಂದ ಕೆನಡಾದ ಮಾಂಟ್ರೀಲದಲ್ಲಿರುವ ಮಾಕಗಿಲ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿರುವರು.

ಈ ವಾರ ಭಾರತ ರಾಜಕಾರಣದಲ್ಲಿ ಅಷ್ಟು ಮಹತ್ವದ ಘಟನೆಗಳಾವುವೂ ನಡೆದಿಲ್ಲ. ಗಾಂಧಿ ವೈಸರಾಯರ ಭೇಟಿಯ ಫಲಿತಾಂಶದ ಕಡೆಗೆ ಎಲ್ಲರ ದೃಷ್ಟಿಯೂ ಹರಿದೆ. ಆದು ಈ ದಿನ (ತಾ. ೨೭ರಂದು) ಜರಗುವುದೆಂದು ಗೊತ್ತಾಗಿದೆ.

ಹಿಂದೂ ಮಹಾಸಭೆ

ಡಾ. ಮುಂಜೆಯವರು ವೈಸರಾ

ಯುರನ … ವಿಷಯ … ಸಭೆ … ನೆಯು … ತ್ಯಾಹ … ರಾಯು … ಮಹಾ … ಕೊಡ … ಕೂಡ … ಬೇಕೆಂ … ವರು.

… ನೂನಿ … ಲ್ಲಿಯು … ವೈಸ … ನಾ …

… ಗುವ … ವೈಸರಾ … ದಲಿ … ಭಿಸುವ … ದು ಅ … ಗುವು … ಮತ್ತು … ವಾಗಿ … ಸಂಯ … ಯಲು … ಗಳಿಂ … ಕ್ಕೆ ಬ … ಯಿರು … ಗದೆ, … ವಿಶ್ವಾ … ಮುಂ … ಲಾರೆ … ದು … ತಾ. … ಗಾ … ಇದೆ … ದಲ್ಲಿ … ತ್ತದೆ. … ದಿಂದ … ಮ … ದಿಸ …



ಗಾಂಧಿ-ವೈಸರಾಯ್ ಭೇಟಿಯಾಗುವುದು

ಈ ತಿಂಗಳ ತಾ. ೨೭ರಂದು

'ವೈಸರಾಯರನ್ನು ಬೆದರಿಸಲು ನಾನು ಹೋಗುವುದಲ್ಲ'

ಹಿಂದೂ ಮಹಾಸಭೆಯ ನಿರ್ಣಯಗಳು

ಮುಂಬಯಿ ನಿರ್ಣಯದ ಕುರಿತು ರಾಷ್ಟ್ರಪತಿಗಳ ಅಭಿಪ್ರಾಯ

ಯರನ್ನು ಕಂಡು ಮಾತನಾಡಿದ ವಿಷಯ ಹಿಂದೂ ಮಹಾಸಭೆಯು ಸಭೆ ಸೇರಿ, ಪಾಕಿಸ್ತಾನ ಯೋಜನೆಯ ವಿಷಯ ಸರಕಾರವು ಪ್ರೋತ್ಸಾಹ ಕೊಡಬಾರದೆಂದೂ, ವೈಸರಾಯರ ಸದಸ್ಯಕೂಟದಲ್ಲಿ ಹಿಂದೂ ಮಹಾಸಭೆಯವರಿಗೆ ಬಹು ಸಂಖ್ಯೆ ಕೊಡಬೇಕೆಂದೂ ಯುದ್ಧ ಮುಗಿದ ಕೂಡಲೇ ಸಾಮಂತ ಸ್ವರಾಜ್ಯ ಕೊಡಬೇಕೆಂದೂ ನಿರ್ಣಯ ಮಾಡಿರುವರು.

ಬಂಧನಗಳು!

ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ದೇಶದ ಎಲ್ಲೆಡೆಗಳಲ್ಲಿಯೂ ಬಂಧನಗಳು ಆಗುತ್ತಿದೆ.

ವೈಸರಾಯರನ್ನು ಬೆದರಿಸಲು ನಾನು ಹೋಗುವುದಿಲ್ಲ!

ಸ್ಪಷ್ಟೀಕರಣಕ್ಕಾಗಿ ಹೋಗುವೆನು!

ಮಹಾತ್ಮರ ಹೇಳಿಕೆ!

"ನಾನು ವೈಸರಾಯರ ಭೇಟಿಗೆ ಹೋಗುವ ವಿಷಯ ತಪ್ಪು ತಿಳುವಳಿಕೆಯುಂಟಾದೆ. ವೈಸರಾಯರು ಭೇಟಿಯಾಗಲು ಒಪ್ಪಿದಲ್ಲಿ ಶಾಸನಭಂಗ ಚಳವಳವನ್ನು ಆರಂಭಿಸುವೆನೆಂದು ಅವರೆದೆಗೆ ಪಿಸ್ತೂಲು ಹಿಡಿದು ಅವರನ್ನು ಬೆದರಿಸಲು ನಾನು ಹೋಗುವುದಲ್ಲ. ವೈಸರಾಯರ ಹೇಳಿಕೆ ಮತ್ತು ಸರಕಾರದ ವರ್ತನೆಗಳ ವಿಷಯವಾಗಿ ನಾನು ಅರ್ಥಮಾಡಿಕೊಂಡದ್ದು ಸರಿಯೋ ಎಂದು ಅವರಿಂದ ಕೇಳಿ ತಿಳಿಯಲು ಹೋಗುವೆನು. ಯಾವ ಸಂಗತಿಗಳಿಂದ ನಾನು ಕೆಲವೊಂದು ನಿರ್ಣಯಕ್ಕೆ ಬಂದಿರುವೆನೋ ಆ ಸಂಗತಿಗಳು ಸರಿಯಿರುವವೆಂದು ನನಗೆ ಮನವರಿಕೆಯಾಗದೆ, ಕೈಕೊಂಡ ಕಾರ್ಯವನ್ನು ಆತ್ಮವಿಶ್ವಾಸದಿಂದ ಮತ್ತು ಸ್ಥೈರ್ಯದಿಂದ ಮುಂದುವರಿಸಲು ನಾನು ಸಮರ್ಥನಾಗಲಾರೆನು" ಹೀಗೆಂದು ಮಹಾತ್ಮರು ಒಂದು ಪ್ರಕಟಣೆ ಕೊಟ್ಟಿರುವರು.

ತಾ. ೨೭ರಂದು ಗಾಂಧಿ-ವೈಸರಾಯರ ಭೇಟಿ

ಗಾಂಧಿ ವೈಸರಾಯರ ಭೇಟಿಯು ಇದೇ ತಿಂಗಳ ತಾ. ೨೭ರಂದು ಸಿಮ್ಲಾದಲ್ಲಿ ನಡೆಯುವುದೆಂದು ತಿಳಿದುಬರುತ್ತದೆ. ಮಹಾತ್ಮರು ಬುಧವಾರ ವರ್ಧಾದಿಂದ ತೆರಳುವರಂತೆ.

ಮಹಾತ್ಮರ ಸಂದೇಶಗಳು

ಮಹಾತ್ಮರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಖಾದೀಧಾರವನ್ನು ಯಥಾಸ್ವಿಯಾಗಿ ಆಚರಿಸಬೇಕೆಂದೂ, ಎಲ್ಲರೂ ಕನ್ನಡ ಮತ್ತು ವೈಸರಾಯರ ಭೇಟಿಯು ಆನಂದದಾಯಕವಾಗುವಂತೆ ಕೊನೆಗೊಳ್ಳಲೆಂದು ಪ್ರಾರ್ಥಿಸಬೇಕೆಂದೂ, ಶಾಸನಭಂಗ ಚಳವಳವಾಗದಂತೆ ತಾನು ಸಾಧ್ಯವಾದ ಯತ್ನಮಾಡುವೆನೆಂದೂ, ಹೇಳಿದಲ್ಲದೆ ಜನರು ಖಾದಿಯ ಕಡೆಗೆ ಹೆಚ್ಚು ಗಮನಕೊಡಬೇಕಾಗಿ ತಿಳಿಸಿರುವರು.

ತ್ರಾವಂಕೂರಿನಲ್ಲಿ ರಾಜಕೀಯ ಕೈದಿಗಳ ಬಿಡುಗಡೆ

ರಾಜಕೀಯ ನಿಮಿತ್ತ ಬಂಧನದಲ್ಲಿರಿಸಲಾದವರನ್ನು ತ್ರಾವಂಕೂರಿನಲ್ಲಿ ಬಿಡುಗಡೆ ಮಾಡುತ್ತಿರುವುದು ವಿಶೇಷ ಸಂತೋಷದ ಸಂಗತಿಯಾಗಿದೆ.

(೧) ಪಾಕಿಸ್ತಾನ ಯೋಜನೆ ತಾವು ಒಪ್ಪಲಿಲ್ಲವೆಂದು ಅಥವಾ ಅದನ್ನು ಸ್ವೀಕರಿಸಲಿಲ್ಲವೆಂದು ವೈಸರಾಯರು ಸಾರಬೇಕು. (೨) ಮುಸ್ಲಿಂ ಲೀಗಿನವರಿಗೆ ಹೊಸ ಕಾರ್ಯಕಾರೀ ಮಂಡಲದಲ್ಲಿ ಎರಡು ಸ್ಥಳಗಳನ್ನೂ ಯುದ್ಧ ಸಲಹೆಯ ಸಮಿತಿಯಲ್ಲಿ ಐದು ಸ್ಥಾನಗಳನ್ನೂ ಕೊಡುವುದಾದರೆ ಹಿಂದೂ ಮಹಾಸಭೆಗೆ ಆರು ಮತ್ತು ಹದಿನೈದು ಸ್ಥಾನಗಳನ್ನು ಕೊಡಬೇಕು. (೩) ಕಾರ್ಯಕಾರಿ ಮಂಡಲದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಅರ್ಧದಷ್ಟು ತಮಗೆ ಕೊಡಬೇಕೆಂದು ಮುಸ್ಲಿಂ ಲೀಗಿನವರು ಕೇಳುವುದು ತೀರಾ ಅನ್ಯಾಯವಾಗಿದ್ದು ಅದಕ್ಕೆ ವೈಸರಾಯರು ಒಪ್ಪಬಾರದು."

ಏರೋಪ್ಲೇನಿನಲ್ಲಿ ವೈಮಾನಿಕರು ಬೆಳಕು ಕೊಡುವ 'ಫ್ಲೇರ್ಸ್'ಗಳನ್ನು ತೆಗೆದುಕೊಂಡು ಹೋಗುವದು. ಇದರಿಂದ ದೂರ ದೇಶದಲ್ಲಿ ಅವರಿಗೆ ಕತ್ತಲಾದರೂ ಗುರಿಯನ್ನು ದಿಟ್ಟಿಸಲು ಸಾಧ್ಯವಾಗುವುದು.

ಹಿಂದೂ ಮಹಾಸಭೆಯ ಸೂಚನೆಗಳು

ಮುಂಬಯಿಯಲ್ಲಿ ಈ ವಾರ ಮೂರು ದಿನಗಳ ವರೆಗೆ ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯ ಅಧಿವೇಶನವು ಜರಗಿತು. ಅದರಲ್ಲಿ ಡಾ। ಮುಂಜೆಯವರು ವೈಸರಾಯರನ್ನು ಕಂಡು ಮಾತನಾಡಿದ ವಿಷಯದಲ್ಲಿ ವರ್ಕಿಂಗ್ ಕಮಿಟಿಯವರು ದೀರ್ಘ ಪರ್ಯಾಲೋಚನೆ ಮಾಡಿ ಕೆಳಗಿನ ಠರಾವನ್ನು ಮಾಡಿದರು.

"ಹಿಂದೂ ಜನರಲ್ಲಿ ಸೈನಿಕ ಸಂಘಟನೆ ಮಾಡಲು ಈಗ ಯೋಗ್ಯ ಸಮಯವು ಬಂದಿದೆ. ಆದುದರಿಂದ ವೈಸರಾಯರು ಹೊಸ ಯೋಜನೆಯನ್ನು ಸ್ವೀಕರಿಸಿ ಅದರೊಡನೆ ಸಹಕರಿಸಲು ಹಿಂದೂ ಮಹಾಸಭೆಯವರು ಸಿದ್ಧರಿರುವರು. ಆದರೆ ಸರಕಾರದವರು ಮೊದಲು ಈ ಸೂಚನೆಗಳಿಗೆ ಮಾನ್ಯತೆ ಕೊಡಬೇಕು.

ಈ ಠರಾವನ್ನು ವೈಸರಾಯರಿಗೆ ಡಾ। ಮುಂಜೆಯವರು ಕಳುಹಿಸುವರು. ದೇಶದ ಪರಿಸ್ಥಿತಿ ಬದಲಾದುದರಿಂದ, ವೈಸರಾಯರಿಗೆ ಮಹಾಸಭೆಯ ಅಧ್ಯಕ್ಷರು ಈ ಮೊದಲೇ ತಿಳಿಸಿದ ಹೆಸರನ್ನು ಹಿಂದೆ ತೆಗೆದುಕೊಳ್ಳಬೇಕೆಂದಾಯಿತು.

ರಾಜಕೀಯ ಬೇಡಿಕೆಯ ಬಗ್ಗೆ ಆದ ಠರಾವಿನಲ್ಲಿ ವೈಸರಾಯರ ಪ್ರಕಟಣೆ ಹಾಗೂ ಎಮೆರಿಯವರ ಭಾಷಣಗಳನ್ನು ಟೀಕಿಸಿ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯದ ಹಕ್ಕಿನ ಬೇಡಿಕೆಯು ಅವುಗಳಲ್ಲಿ ಉಲ್ಲೇಖವಿಲ್ಲದಿರುವುದರಿಂದ ಅದು ನಿರಾಶಾಜನಕವಾಗಿದೆಯೆಂದು ಸಾರಲಾಗಿದೆ. ಅದು ಮಾತ್ರವಲ್ಲದೆ, ಮುಂದೆ ಕೊಡಲ್ಪಡುವುದೆಂದು ಹೇಳಲಾದ ಸಾಮಂತ ಸ್ವರಾಜ್ಯದ ವಿಷಯವೂ ಅಸ್ಪಷ್ಟವಾಗಿರುವುದೆಂದು ಅಭಿಪ್ರಾಯಪಟ್ಟು, ಯುದ್ಧ ಮುಗಿದ ಕೂಡಲೇ ಸಾಮಂತ ಸ್ವರಾಜ್ಯವನ್ನು ಕೊಡುವ ಪ್ರಕಟಣೆ ಮಾಡಬೇಕೆಂದು ಅದರ ಹೇಳಲಾಗಿದೆ.

ಬ್ರಿಟಿಷ ಸರಕಾರವು ಇಂತಹ ಸಮಯದಲ್ಲಿಯೂ ತನ್ನ ಹಳೆಯ ಸಾಮ್ರಾಜ್ಯಶಾಹೀ ನೀತಿಯನ್ನು ಬಿಟ್ಟು ಕೊಡ ಇಷ್ಟಪಡದಿರುವ ವಿಷಯ ವಿಷಾದ ವ್ಯಕ್ತಪಡಿಸಲಾಗಿದೆ. ಭಾರತದ ಜ ಮತವನ್ನು ತೃಪ್ತಿಪಡಿಸದೆ ಬ್ರಿಟ ದೊಡ್ಡದೊಂದು ಸುಸಂಧಿಯನ್ನು ಕಳೆ ಕೊಳ್ಳುವುದೆಂದು ಅದರಲ್ಲಿ ಎಚ್ಚ ಲಾಗಿದೆ. ಭಾರತದ ಆಡಳಿತವ ಭಾರತೀಯರಿಂದಲೇ ನಡೆಸ ಒಪ್ಪಿಗೆಯಿಲ್ಲವೆಂದು ಎಮೆರಿಯವ ಹೇಳಿದುದನ್ನು ಖಂಡಿಸಲಾಗಿ ಮುಸ್ಲಿಂ ಲೀಗು, ಸಂಸ್ಥಾನಗಳು, ಮ ಇತರ ಕೆಲ ಸ್ವಾರ್ಥಿಗಳು ಹಿಂದೂ ನ ಬಹು ಸಂಖ್ಯಾಕರ ಹಕ್ಕನ್ನು ಹರಿಸಲು ಇಚ್ಛೆ ಪಡುವುದನ್ನು ವಿರೋ ಸಲಾಗಿದೆ. ಎಮೆರಿಯವರ ಮಾತು ಬ ಸಂಖ್ಯಾಕರ ಹಕ್ಕಿನ ವಿರುದ್ಧ ಅಲ್ಪ ಸಂಖ್ಯಾಕರನ್ನು ಎತ್ತಿಕಟ್ಟುವಂತಹ ಧೋ ಯದ್ದೆಂದು ಸ್ಪಷ್ಟಪಡಿಸಿ ತಿಳಿಸಲಾಗಿ

ರಾಷ್ಟ್ರಪತಿಗಳ ಅಭಿಪ್ರಾಯ

ರಾಷ್ಟ್ರಪತಿ ಅಜಾದರು ಹೀಗೆಂದರು.

"ನಮಗೆ ಕೇಳದೆ, ನಮ್ಮ ಒಪ್ಪಿಗೆಯಿಲ್ಲದೆ ನಮ್ಮ ದೇಶವನ್ನು ಯುದ್ಧ ದೂಡಲಾಗಿದೆ. ಇಂಥ ಸಮಯದ ನಾವು ಗಾಂಧಿಜಿಯವರನ್ನೇ ಹಿಂಬಾ ಬೇಕು. ಅವರ ಮಾರ್ಗ ಆದರ್ಶ ... ಗೆ. ಹೋರಾಟ ಹೂಡಲೇಬೇಕೆಂ ಅನಿಸಿದರೂ ಅವರು ವೈಸರಾಯರ ... ಹೋಗಿ ಹೋರಾಟ ತಪ್ಪಿಸಲು ಸಾ ವಾದ ಯತ್ನ ಮಾಡುತ್ತಾರೆ. ಗಾಂ ಜಿಯವರ ಬೇಡಿಕೆಗೆ ವೈಸರಾಯ ಒಪ್ಪಿದರೆ ಜನರಿಗೆ ಸ್ವಲ್ಪ ಅಧಿಕಾ ದೊರೆತಂತೆಯೆ. ಒಂದು ವೇಳೆ ... ದಿದ್ದರೆ ಹೊಸ ಹೋರಾಟಕ್ಕೆ ಅವ ವಾಗುತ್ತದೆ."

ಮುಸಲ್ಮಾನರು ಕಾಂಗ್ರೆ... ಸೇರಬೇಕು

ಕಾಶ್ಮೀರದ ಪ್ರಸಿದ್ಧ ಮುಖಂಡ ಶೇಖ್ ಅಬ್ದುಲ್ಲಾರವರು ಲುಧಿಯಾನ ಸೇರಿದ ಸಭೆಯೊಂದರಲ್ಲಿ ಭಾಷಣ ಡುತ್ತಾ ಕಾಂಗ್ರೆಸು ಜಾತಿಮತ ... ವಿಲ್ಲದೆ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಹೋ ಡುವ ಸಂಸ್ಥೆಯಾಗಿರುವುದರಿಂದ ಮು ಮರು ಕಾಂಗ್ರೆಸಿಗೆ ಸೇರಿ ಭಾ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆ ನ್ನಾಂದರು.

ಯುದ್ಧ ನಿಧಿ

... ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ರೂ. 17—0—0

ಉಡುಪಿ ಬೋರ್ಡ್ ಹೈಸ್ಕೂಲು ಸಿಬಂದಿ,

ರೂ. 15—0—0

ಉಡುಪಿ ಮುನ್ಸಿಫ್ ಕೋರ್ಟಿನ ಸಿಬಂದಿ; ವೆಚ್, ಗಿಬ್ಸನ್, ಡಿ. ಸಿ ರಸೆಲ್; ಬೈಂದೂರು ಪಂಚಾಯುತ ಬೋರ್ಡು, ಗುತಿ ನರಸಿಂಹ ಪ್ರಭು ಎಂಡ್ ಬ್ರದರ್, ಡಾ. ವೈ. ಆರ್. ಶೆಟ್ಟಿ, ಕೋಟ ಮಂಜುನಾಥ ಶ್ಯಾನುಭಾಗ ಎಂಡ್ ಬ್ರದರ್ಸ್, ಚಂದ್ರರಾಜ ಸಾವಂತ ಮುದ್ದ ಹೆಗ್ಡೆ, ಅಬ್ದುಲ್ಲಾ ಭವಾನಿ ಸಾಹೇಬ್, ಸುಬ್ರಾಯ ಪಂಚಾಂದ್ರಿ, ಪದಿಯ ಮರಕಾಲ; ಕೊಳ್ಕರ್ಜೆ ಪಂಚಾಯತ ಬೋರ್ಡು,

ರೂ 12—8—0

ಫಲಿಮಾರು ಮಠದ ಶ್ರೀ ಪಾದಂಗಳವರು, ಅದಮಾರು ಮಠ ಶ್ರೀ ಪಾದಂಗಳವರು ಸೋದೆ ಮಠದ ಶ್ರೀ ಪಾದಂಗಳವರು

ರೂ 11—0—0

ಮಂಕ ಶೆಟ್ಟಿ

ರೂ 10—0—0

ಕೆ ರಾಮ ಭಟ್, ಬಿ ಶಿವರಾಮ ಹೊಳ್ಳ, ಬಿ ರಾಮಯ್ಯ ಪಾಯ್ಯ, ಕೇಶವ ಬೇರಿಂಜತ್ತಾಯ ರಾಮಚಂದ್ರ ರಾವ್, ಬೆಳ್ಳಿಪಾಡಿ ಆರ್ಶೈ, ರಿ ಖಾದರ್ ವಿ ಪತ್ರಾವ್, ಕೆ ಬಡ್ಡಾ ಕುಂಚಿ ಬ್ಯಾರಿ, ಹೊಸಮರ ಸುಬ್ರಾಯ ಹೆಬ್ಬಾರ, ಸಂಜೀವ ರೈ, ಬಿ ಪ್ರಭಾಕರ ರಾವ್, ಕುಂದಾಪುರ ಮುನ್ಸಿಫ್ ಕೋರ್ಟ್ ಸಿಬಂದಿ, ಪುತ್ತಿಗೆ ಪಂಚಾಯುತ ಬೋರ್ಡ್, ಸಾಣೂರು ಮುದ್ದಣ್ಣ ಶೆಟ್ಟಿ, ಪಿ ರಾಜಗೋಪಾಲಾಚಾರಿ ಖಾನ್ ಸಾಹೇಬ್ ಎಂ ಜೀಯಾಉದ್ದೀನ್, ರಾವ್‌ಬಹದೂರ್ ಯು ಆನಂದ ರಾವ್, ಎಂ ವೆಂಕಟೇಶ ಪೈ, ಪಾಪ್ಪಿ ಕಲ್ಯಾಣಿ ಕನ್ನಯ್ಯ, ಜಿ ದತ್ತಾತ್ರೇಯ ರಾವ್, ಕ್ಯಾಪ್ಟನ್ ಸಿ ಆ‍ರ್ ನಾಯ್ಡು, ನಿಕಲಜಿ ಮಾಧವ್ಜಿ, ಅಲ್ಬರ್ಟ್ ಸ್ಟೀವನ್ಸನ್, ಕೆ ಆರ್ ಗಜ್ಜರ್, ಕೆ ಪಿ ಜನಾರ್ಧನ ಪ್ರಭು ವೆಂ. ಕೆ ನಂಬಿಯಾರ್, ಡಬ್ಲ್ಯು ಕ್ರಾಗರ್, ಮಿ ಎಂಡ್ ಮಿಸೆಸ್ ಆರ್ ಎಂಡ್ ಜಿ ಮ್ಯಾಥ್ಯೂಸ್ ಮಿ ಎಂಡ್ ಮಿಸೆಸ್ ಪಿ ಈ ಎಂಡ್ ಎಂ ಬರ್ಕ್‌ಹಾರ್ಟ್ ವಿ ವಿ ಕಿಣ್ಣಿ, ಎಸ್ ಮುದ್ದಣ್ಣ ಶೆಟ್ಟಿ, ಕೆ ಖಾದರ್ ಎಸ್ ಡಿ'ಸೋಜ ಕಲ್ಯಾಡಿ ರಾಮ ರಾವ್ ಪುತ್ತೂರು ಸರಕಾರಿ ಆಸ್ಪತ್ರೆಯ ಸಿಬಂದಿ, ಟಿ ಕೆ ವಿಜಯನ್, ನಾರಾಯಣ ಅತಿಕಾರಿ ಭುಜಂಗ ಎಲ್ಲಾಳ, ಜಿ ಶಿವರಾಮ ಹೆಗಡೆ ಎಂ ಮಹಾಲಿಂಗ ಶೆಟ್ಟಿ, ಸೀತಾರಾಮ ದೊರೆ ಬಲ್ಲಾಳ ಕೆ ಲಕ್ಷ್ಮೀನಾರಾಯಣಯ್ಯ, ಉಳಿಯತಾಯ ನಾರಾಯಣ ಆಸ್ರ ಪಿ ಗೋವಿಂದ ಮೆನನ್, ಸೂರಪ್ಪ ಶೆಟ್ಟಿ, ಪೇಜಾವರ ಮಠ, ಚಾರ್ಲ್ಸ್ ಡಿ ರುಜಾರಿಯೊ, ಡಾ. ಕೆ ಇ ಫೋತನ್, ಸವ್ಯೂರು ನಾಗಪ್ಪ ಶೆಟ್ಟಿ, ಸೂರಪ್ಪ ಶೆಟ್ಟಿ, ಕೆ ರಾಮನ್ ನಾಯರ್ ಕೆ ಕುಂಜಿ ಅಬ್ದುಲ್ಲಾ, ಕೇಶವ ಬೇರಿಂಜತ್ತಾಯ, ಬಿ ಯಂ ಕುಂಜಂಬು ನಾಯರ್, ಕುಂಜಿಕಣನ್ ನಾಯರ್, ಕೆ ಮೊಯಿದಿನ್ ಕುಂಜಿ, ಕೆ ಪದ್ಮನಾಭ ತಂತ್ರಿ, ರಾಜಾರಾಮ್ ಪಾಡೀಸ್, ಕೆ ಕೇಳು ನಾಯರ್, ಕೆ. ಸುಬ್ಬಯ್ಯ ಪ್ರಭು, ವಿ. ಸಿ. ಕೇಳು ನಾಯರ್, ಪಿ ಸಿ ಕುಂಜಿಕಣ್ಣನ್ ನಂಬಿಯಾರ್, ಪಿ. ಗೋಪಾಲ ನಾಯಕ್, ವ್ಯಾ. ಎಸ್. ಕೃಷ್ಣ ಭಟ್, ಎಂ. ಶ್ರೀನಿವಾಸ ಆಚಾರ್ಯ, ಕೆ. ಖಾದ್ರಿ ಬ್ಯಾರಿ, ಶ್ರೀನಿವಾಸ ಉಪಾಧ್ಯಾಯ, ಟಿ. ಸಿ. ರಾಮ ತಿರ್ಮರಾಜ, ಡ್ವಾ. ಕೆ. ಎಸ್. ನಾಯಕ್, ಕುಂಜಿ ಮೊಯಿದಿನ್ ಕುಟ್ಟಿ, ಕುಂಜಮ್ಮದ್, ಎಂ. ಕೆ. ಮುಹಮ್ಮದ್, ಕೆ. ಕೇಶವ ಭಟ್ಟ, ಮಿಸೆಸ್. ಕಾರೂರು ಲಕ್ಷ್ಮೀನಾರಾಯಣ ರಾವ್, ವಾರಂಗ ಕೋಓಪರೇಟಿವ್ ಕ್ರೆಡಿಟ್ ಸೊಸೈಟಿ; ಪ್ರಭಾಕರ ಟೈಲ್ ವರ್ಕ್ಸ್, ಕೆ. ಐತಪ್ಪ ಮಲ್ಲಿ, ಡಿ. ನರಸಿಂಹ ಪೈ, ಕಾಮತ್ ಎಂಡ್ ಕೊ, ಜೆ. ಲೋಬೊ, ಬಿ. ರಾಜೀವ, ಎಸ್. ನಾಗರಾಜಯ್ಯ, ಎಂ. ಪದ್ಮನಾಭ ರಘುನಾಥ ಪೈ ಎಂಡ್ ಕೊ. ಮೂಡಬಿದ್ರೆ ಪಂಚಾಯತ ಬೋರ್ಡು, ಸುರತ್ಕಲ್ ಕೋಓಪರೇಟಿವ್ ಸೊಸೈಟಿ, ಐಡಿಯಲ್ ಫೋಟೊ ಹೌಸ್, ಜಯಲಕ್ಷ್ಮೀ ಬ್ಯಾಂಕ್, ಕೆ. ಶಂಕರ ರಾವ್, ಎಂ. ಎಸ್. ಶ್ರೀಕೃ.

(ಮುಂದುವರಿಯುವುದು)

ಡಿಫೆನ್ಸ್ ಲೋನ್ ಸ್ಕೀಮು

ಹಣವಿಡುವವರಿಗೆ ಒಂದು ಸಂದರ್ಭ

ಭಾರತವನ್ನು ಬಲಪಡಿಸಿರಿ; ಭಾರತದ ರಕ್ಷಣಾ ಸಾಲವನ್ನು ಪಡಕೊಳ್ಳಿರಿ' ಹೀಗೆಂದು ಸಾರುವ ಸಿಪಾಯಿಯು ಇರುವ ಚಿತ್ರವುಳ್ಳ ಜಾಹೀರಾತುಗಳನ್ನು ನಾವು ಎಲ್ಲೆಲ್ಲಿಯೂ ಇಂದು ಕಾಣಬಹುದು.

ಭಾರತದಲ್ಲಿರುವ ನಾಲ್ಕೂರು ಪತ್ರಿಕೆಗಳು ಪ್ರತಿಯೊಂದು ಭಾಷೆಯಲ್ಲಿಯೂ ಭಾರತದಲ್ಲಿಯೂ ಟೇಂಕುಗಳೂ, ಕೋವಿಗಳೂ ಆಗಬೇಕೆಂದು ಉದ್ಘೋಷಿಸುತ್ತಿವೆ. ಪತ್ರಿಕೆಗಳಲ್ಲಿ ನಾವು ಕೋವಿ ಟೇಂಕುಗಳ ಸಾವಿರಾರು ಚಿತ್ರಗಳನ್ನು ನೋಡುತ್ತೇವೆ. ಆದರೆ ನಾವು ಕೊಡುವ ದುಡ್ಡಿನಿಂದ ನಿಜವಾದ ಟೇಂಕುಗಳು, ನಿಜವಾದ ಕೋವಿಗಳು ತಯಾರಾದಲ್ಲಿ ಮಾತ್ರ ಆ ಪ್ರಚಾರದ ಪ್ರಯೋಜನವಾದಂತಾಯಿತು

ಹಣವನ್ನು ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟುಗಳ ಮೂಲಕ ಇಡಬಹುದು ೧೦ ರೂಪಾಯಿಯಿಂದ ೫೦೦೦ ರೂಪಾಯಿಗಳ ತನಕ ಹಣವಿಡಬಹುದು ಶೇಕಡಾ ೩ರ ಬಡ್ಡಿ ಸಿಗುವುದು ಪ್ರತಿಯೊಬ್ಬ ಭಾರತೀಯನೂ ಒಂದು ಲೋನನ್ನಾದರೂ ಕೊಂಡರೆ ನಾಳೆಗೆ ಭಾರತವು ಇಟಲಿ ಜರ್ಮನಿಗಳ ಆಕ್ರಮಣ ಭೀತಿಯಿಂದ ಮುಕ್ತವಾದಂತೆಯೇ ಎಂದು ತಿಳಿಯಬೇಕು. ಡಿಫೆನ್ಸ್ ಲೋನನ್ನು ಕೊಳ್ಳುವುದರಿಂದಲೆ ನಿಮ್ಮ ಹಣವು ಭದ್ರವಾಗಿ ಇರಿಸಲ್ಪಡುವುದು ಮಾತ್ರವಲ್ಲದೆ ಹಿಟ್ಲರನ ದುರಾಶೆಗೆ ಭಾರತವು ಬಲಿ ಬೀಳದಂತೆ ಮಾಡಲೂ ಸಹಾಯವಾದಂತಾಗುವುದು

ಭಾರತದ ಸೈನಿಕರು ಸಿದ್ಧರಾಗಿದ್ದಾರೆ. ಅವರಿಗೆ ಶಸ್ತ್ರಗಳನ್ನು ಒದಗಿಸಿ ಕೊಡಿರಿ. ಅವರು ನಿಮ್ಮನ್ನು ಕಾಪಾಡುವರು.

ಹಿಂದೂ ದೇಶವನ್ನು ಬಲಗೊಳಿಸಿರಿ

ರಾಷ್ಟ್ರಕ್ಕೆ ಒಂದು ಕರೆ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ರೂ. ೧೦, ರೂ. ೫೦, ರೂ. ೫೦೦ ಗಳಿಗೆ ಕೊಡುತ್ತಾರೆ. ಈ ಮೊತ್ತಗಳು ಹತ್ತು ವರ್ಷದ ನಂತರ ಪ್ರತಿ ರೂ. ೧೦ಕ್ಕೆ ೧೪—೯—೦ ಆಗಿ ವಾಪಸು ಸಿಗುವುದು. ಸುಮಾರು ಶೇಕಡ ೩½ ಚಕ್ರಬಡ್ಡಿಯು ದೊರೆಯುತ್ತದೆ. ಇದಕ್ಕೆ ಆದಾಯ ತೆರಿಗೆಯಿಲ್ಲ ಪ್ರತಿ ಒಬ್ಬರೂ ರೂ. ೫೦೦೦ಗಳಿಗಿಂತ ಹೆಚ್ಚು ಬಾಂಡ್ ಪಡೆಯಲು ಸಾಧ್ಯವಿಲ್ಲ. ನಿಮ್ಮ ಸಮೀಪದ ಅಂಚೆ ಕಚೇರಿಯಲ್ಲಿ ಕೇಳಿ.

೩ ವರ್ಷದ ಡಿಫೆನ್ಸ್ ಬಾಂಡ್‌ಗಳು ರೂ. ೧೦೦ ಅಥವಾ ನೂರರ ಅಪವರ್ತ್ಯಗಳಲ್ಲಿ ಸಿಗುವುವು ಈ ಹಣವು ೧೯೪೬ ಅಗಸ್ಟ ೧ನೇ ತಾರೀಖಿಗೆ ನೂರಕ್ಕೆ ೧೦೧ರಂತೆ ಹಿಂದಕ್ಕೆ ಕೊಡಲ್ಪಡುತ್ತೆ. ಶೇಕಡ ೩ರಂತೆ ಬಡ್ಡಿ ಆರು ತಿಂಗಳಿಗೊಂದು ಸಾರಿ ಪಡೆಯಬಹುದು. ಒಬ್ಬರೇ ಎಷ್ಟು ಬಾಂಡುಗಳನ್ನಾದರೂ ಕೊಳ್ಳಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸರ್ಕಾರಿ ಟ್ರೆಜರಿ ಇವುಗಳಲ್ಲಿ ಅರ್ಜಿಮಾಡಿಕೊಳ್ಳಿರಿ.

ಬಡ್ಡಿಯಿಲ್ಲದ ಬಾಂಡುಗಳು ರೂ. ೫೦ಕ್ಕೆ ಮೇಲ್ಪಟ್ಟು ಸಿಗುತ್ತವೆ. ೩ ವರ್ಷಗಳ ನಂತರ ಹಣವಾಪಸು ಪಡೆಯಬಹುದು. ೧ ವರ್ಷದ ನಂತರ ಹಣ ಪಡೆಯಬೇಕಾದರೆ ೩ ತಿಂಗಳಿಗೆ ಮುಂಚೆ ನೋಟೀಸ್ ಕೊಡಬೇಕು. ಅತ್ಯಗತ್ಯವಿದೆಯೆಂದು ರುಜುವಾತು ಮಾಡಿಕೊಟ್ಟರೆ ಯಾವಾಗಲಾದರೂ ಪಡೆಯಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಅಥವಾ ಸರ್ಕಾರಿ ಟ್ರೆಜರಿ ಇವುಗಳಲ್ಲಿ ಅರ್ಜಿ ಮಾಡಿಕೊಳ್ಳಿರಿ.

ರಾಷ್ಟ್ರದ ಭವಿಷ್ಯತ್ತಿಗೆ ನಿಮ್ಮ ಹಣವನ್ನು ವಿನಿಯೋಗಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಗಾಗಿ ಧನಸಂಗ್ರಹಿಸಿರಿ. ನಿಮ್ಮ ಹಣಕ್ಕೆ ಇಂಡಿಯಾ ಸರ್ಕಾರದ ಭರವಸೆಯೂ ಇದೆ ಮತ್ತು ನಿಮ್ಮ ದೇಶದ ಆಸರೆಯ ಬೆಂಬಲವೂ ಇದೆ. ಸುಸಜ್ಜಿತ ದಳಗಳನ್ನು ಹೆಚ್ಚಿಸಬೇಕೆಂಬ ಮತ್ತು ಆ ದಳಗಳನ್ನು ಸುಸಜ್ಜಿತವನ್ನಾಗಿ ಮಾಡಬೇಕೆಂಬ ಕರೆಯನ್ನು ಮನ್ನಿಸಿರಿ. ನಿಮ್ಮ ರಾಷ್ಟ್ರಕ್ಕೆ ಸೇವೆ ಸಲ್ಲಿಸಿ ನಿಮ್ಮ ಬಂಡವಾಳವನ್ನು ಹೆಚ್ಚಿಸಿಕೊಳ್ಳಿರಿ.

ಇಂಡಿಯಾ ಡಿಫೆನ್ಸ್ ಲೋನ್‌ಗಳನ್ನು ಕೊಳ್ಳಿರಿ

GI-H.6

ವಿಚಿತ್ರ ಪ್ರಪಂಚ

ಮೃತರೊಡನೆ ಹುಡುಗಿಯರ ವಿವಾಹ

ನಾಜೀ ಜರ್ಮನಿಯಲ್ಲಾಗಿರುವ ಒಂದು ಹೊಸ ಕಾಯದೆಯ ಪ್ರಕಾರ ಜರ್ಮನ್ ಹುಡುಗಿಯರು ಮೃತರನ್ನು ಮದುವೆಯಾದರೂ ಆ ವಿವಾಹವು ಸಿಂಧುವಾಗುವುದು. ಈ ಕಾನೂನು ಇಡೀ ಜಗತ್ತಿನಲ್ಲಿಯೇ ವಿಚಿತ್ರತರದ್ದಾಗಿದೆ. ಯುದ್ಧಕ್ಷೇತ್ರದಲ್ಲಿ ಹೋರಾಡುತ್ತಿರುವ ಒಬ್ಬ ಜರ್ಮನ್ ಸೈನಿಕನು ಯಾವುದಾದರೂ ಒಬ್ಬ ಹುಡುಗಿಯನ್ನು ಮದುವೆಯಾಗುವ ತನ್ನ ಆಸೆಯನ್ನು ಸೇನಾಧಿಪತಿಗೆ ತಿಳಿಸಿದರೆ, ಎರಡು ತಿಂಗಳಲ್ಲಿ ಆ ಹುಡುಗಿಯು ಅವನನ್ನು ಮದುವೆಯಾಗಿರುವಳೆಂದು ತನ್ನ ಹೆಸರನ್ನು ಮದುವೆ ರಿಜಿಸ್ಟ್ರಿಯಲ್ಲಿ ಬರಿಸಿಕೊಳ್ಳುವಳು. ಈ ಎರಡು ತಿಂಗಳ ಅವಧಿಯಲ್ಲಿ ಸೈನಿಕನು ರಣಕ್ಷೇತ್ರದಲ್ಲಿ ಸತ್ತುಹೋಗಿದ್ದರೂ ಆ ವಿವಾಹವು ಆ ಕಾರಣದಿಂದ ರದ್ದಾಗುವುದಿಲ್ಲ. ಯುದ್ಧವಾರಂಭವಾಗುವ ಮೊದಲು ಸೈನಿಕರೊಡನೆ ಶರೀರ ಸಂಬಂಧವನ್ನಿಟ್ಟುಕೊಂಡು ಗರ್ಭವತಿಯರಾದ ಅವಿವಾಹಿತ ಹುಡುಗಿಯರಿಗೆ ಹುಟ್ಟಿದ ಮಕ್ಕಳನ್ನು ಗತಿವಂತರನ್ನಾಗಿ ಮಾಡುವ ಉದ್ದೇಶದಿಂದ ಹಿಟ್ಲರನು ಈ ಕಾಯಿದೆಯನ್ನು ಮಾಡಿದ್ದಾನಂತೆ.

ಮದುವೆಯ ಮೇಲೂ ಸುಂಕ!

ಪಂಜಾಬಿನ ಸಿಕಂದರ ಹಯ್ಯಾತಖಾನರ ಪ್ರಾಂತಿಕ ಸರಕಾರಕ್ಕೆ ವರ್ಷಕ್ಕೆ ೫೦ ಲಕ್ಷ ರೂಪಾಯಿಗಳಷ್ಟು ಆಯಕ್ಕಿಂತ ವ್ಯಯವು ಅಧಿಕವಾಗುತ್ತದೆಯಂತೆ. ಈ ಹಣವನ್ನು ಭರ್ತಿಮಾಡುವಕ್ಕೋಸ್ಕರ ಕಮಿಟಿಯು ಹೊಸ ಕರಗಳನ್ನು ಹಾಕುವ ವಿಚಾರ ಮಾಡಿದೆ. ಮದುವೆ ಮುಂಜಿ ಶುಭ ಶೋಭನಾದಿ ಪ್ರಸಂಗಗಳನ್ನು ರಿಜಿಸ್ಟ್ರಿ ಮಾಡಿಸಲೇಬೇಕೆಂದು ಸರಕಾರವು ವಿಧಿಸಿ, ರಿಜಿಸ್ಟ್ರಿ ಬಗ್ಗೆ ಫೀಸು ಇಡುವುದಾದರೆ ಸರಕಾರಕ್ಕೆ ಕಡಿಮೆಯಾಗುವ ಈ ಹಣವು ತುಂಬಿ ಬರುವುದೆಂದು ಅದಕ್ಕಾಗಿ ಸಂಯುಕ್ತವಾದ ಕಮಿಟಿಯು ಸರಕಾರಕ್ಕೆ ಸಿಫಾರಸು ಮಾಡಿರುವರು. ಕಮಿಟಿಯ ಈ ಸಿಫಾರಸನ್ನು ಸರಕಾರವು ಒಪ್ಪಿದ್ದಾದರೆ ಪ್ರತಿಯೊಂದು ಮದುವೆ ಸಂದರ್ಭದಲ್ಲಿ ನವದಂಪತಿಗಳು ತಮ್ಮ ಪರಿಸ್ಥಿತಿಗೆ ಅನುಸಾರವಾಗಿ ಒಂದರಿಂದ ಹತ್ತು ರೂಪಾಯಿಗಳ ತನಕ ಮದುವೆ ಸುಂಕವನ್ನು ಕೊಡಬೇಕಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಬ್ರಹ್ಮಚಾರಿ-ಬ್ರಹ್ಮಚಾರಿಣಿಯರ ಮೇಲೆ ಸುಂಕ ಹಾಕಿದ್ದಾರೆ. ನಮ್ಮ ದೇಶದಲ್ಲಿ ವಿವಾಹಿತರ ಮೇಲೆ ಸುಂಕ ಹಾಕುವರು!

ಮದ್ದುಗುಂಡು ತಯಾರಿಸಲು ಹುಡುಗಿಯರು!

ಯುದ್ಧದ ದೆಸೆಯಿಂದ ಅನ್ನಬಟ್ಟೆಗಳು ಧಾರಾಳವಾಗಿ ದೊರೆಯುವುದಿಲ್ಲವಾದುದರಿಂದ ಜರ್ಮನಿಯ ಧವಸಧಾನ್ಯಗಳನ್ನೂ ಬಟ್ಟೆಬರೆಗಳ ಅಂಗಡಿಗಳನ್ನೂ ಮುಚ್ಚಬೇಕೆಂದೂ ಅವುಗಳನ್ನು ಸರಕಾರದ ಉಗ್ರಾಣಗಳಿಂದ ಜನರು ಪಡೆಯಬೇಕೆಂದೂ ಜರ್ಮನ್ ಸರಕಾರದ ಆಜ್ಞೆಯಾಗಿದೆ. ಹೀಗಾದ ಮೇಲಿಂದ ಇವುಗಳಲ್ಲಿ ದುಡಿಯುತ್ತಿದ್ದ ಲಕ್ಷಾಂತರ ಹುಡುಗಿಯರು ನಿರುದ್ಯೋಗಿಗಳಾಗಿ ಅಲೆಯುವರು. ಆದುದರಿಂದ ಅವರನ್ನೆಲ್ಲ ಗುಂಡುಮದ್ದಿನ ಕಾರ್ಖಾನೆಗಳಲ್ಲಿ ಯುದ್ಧ ಸಾಮಾಗ್ರಿಗಳನ್ನು ತಯಾರಿಸಲಿಕ್ಕೆ ನೇಮಿಸಬೇಕೆಂದು ಹಿಟ್ಲರನು ಸೂಚಿಸಿರುವನು. ಆದುದರಿಂದ ಈ ಹುಡುಗಿಯರನ್ನು ಶಸ್ತ್ರೋಪಕರಣಗಳನ್ನು ತಯಾರಿಸುವ ಶಿಕ್ಷಣ ಶಾಲೆಗಳಿಗೆ ಕಳಹಿಸುತ್ತಲಿರುವರು. ಸ್ತ್ರೀಯರಿಗೆ ಲೋಕ ಭಕ್ಷಣದ ವಿದ್ಯೆಯನ್ನು ಹಿಟ್ಲರನು ಕಲಿಸಹೊರಟಿದ್ದಾನೆ.

ಅನಾಚಾರವೋ ಸದಾಚಾರವೋ?

ಈಗ್ಗೆ ೫೦—೬೦ ವರ್ಷಗಳ ಹಿಂದೆ ಅಮೇರಿಕವು ಈಗಿನಂತೆ ಇದ್ದಿರಲಿಲ್ಲ. ಆಗ ಅಲ್ಲಿನ ಹೆಂಗಸರು ಅವಿವಾಹಿತರಾಗಿದ್ದರೂ, ತೊಡೆಯ ಮೇಲೆ ಕರ್ಪೂರದ ಒಂದೊಂದು ದೊಡ್ಡ ಗೊಂಬೆಯನ್ನಿಟ್ಟುಕೊಂಡು ಅದನ್ನು ಮುದ್ದಾಡಿಸುತ್ತ ರೈಲ್ವೆ ಪ್ರಯಾಣ ಮಾಡುತ್ತಿದ್ದರು. ರೈಲ್ವೆಗಳಲ್ಲಿ ತಮಗೆ ಕೂತುಕೊಳ್ಳಲಿಕ್ಕೆ ಹೆಚ್ಚು ಸ್ಥಳವು ದೊರೆಯಬೇಕೆಂಬ ಭಾವದಿಂದಲೂ ತಾಯಂದಿರೆಂದು ತಿಳಿದು ಪ್ರಾಯದ ಹುಡುಗರು ತಮ್ಮನ್ನು ಕಾಮೇಚ್ಛೆಯಿಂದ ದಿಟ್ಟಿಸದಿರಲೆಂದೂ ಅವರು ಹೀಗೆ ಮಾಡುತ್ತಿದ್ದರು. ಆದರೆ ಈಗ ಅಮೇರಿಕದ ಸ್ತ್ರೀಯರು ಮಕ್ಕಳಾಗಬಿದ್ದರೆ ಮಕ್ಕಳಾಗದವರಂತೆಯೂ, ವಿವಾಹಿತರಾಗಿದ್ದರೆ ಅವಿವಾಹಿತರಂತೆಯೂ ತೋರಿಸಿಕೊಂಡು ರೈಲ್ವೆ ಪ್ರಯಾಣ ಮಾಡುವುದರಲ್ಲಿಯೇ ಹೆಚ್ಚು ಸಂತೋಷವನ್ನು ಪ್ರಕಟಿಸುತ್ತಾರಂತೆ. ಪ್ರಾಯದ ಎಷ್ಟು ಹೆಚ್ಚು ತರುಣರು ಇವರನ್ನು ಎಷ್ಟು ಚೆನ್ನಾಗಿ ದಿಟ್ಟಿಸುವರೋ ಅಷ್ಟು ಹೆಚ್ಚಿಗೆ ಅವರಿಗೆ ಸುಖವೂ ತೃಪ್ತಿಯೂ ಆಗುತ್ತದಂತೆ. ಲೋಕದ ದೃಷ್ಟಿಯಿಂದ ತಮ್ಮನ್ನು ಮುಚ್ಚಿಸಿಕೊಳ್ಳುತ್ತಿದ್ದ ಆ ಹಿಂದಿನವರ ಮತ್ತು ಲೋಕದ ಮುಂದೆ ತಮ್ಮನ್ನು ಪ್ರದರ್ಶನಕ್ಕಿಟ್ಟುಕೊಂಡಿರುವ ಆ ಈಗಿನವರ ಮನೋಭಾವನೆಯಲ್ಲಿ ಎಷ್ಟು ಅಂತರವು ಕಂಡುಬರುವುದು!

ಪ್ರಪಂಚದ ಪ್ರಸಿದ್ಧ ಈಜುಗಾರ್ತಿ

ಡೆನ್ಮಾರ್ಕಿನ ಶ್ರೀಮತಿ ಆರ್ ಹವೇಗಾರ್ಡ ಎಂಬವಳೆಯು ೫೦೦ ಮೀಟರ ದೂರವನ್ನು ೬ ಮಿನಿಟು ೩೧.೮ ಸೆಕೆಂಡುಗಳಲ್ಲಿ ಈಜಾಡಿ ಪ್ರಪಂಚದ ಈಜುಗಾರ್ತಿಯರಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಳು. ಆದರೆ ಜೆಲ್ಜಿಯಮಿನ ಮಾರಿ ಫರನಾಡೆ ಕಾರೊಲಿನ್ ಎಂಬಾಕೆ ಈಗ ಇಷ್ಟೇ ದೂರವನ್ನು ಕೇವಲ ೬ ಮಿನಿಟು ೩೦.೪ ಸೆಕೆಂಡುಗಳಲ್ಲಿ ಈಜಾಡಿ ಮೊದಲಿನ ದಾಖಲೆಯನ್ನು ಮುರಿದು ಹಾಕಿರುವಳು. ಹೀಗಾದುದರಿಂದ ಪ್ರಪಂಚದ ಈಜುಗಾರ್ತಿಯರಲ್ಲಿ ಪ್ರಥಮ ಸ್ಥಾನವು ಈಗ ಈ ಮಹಿಳೆಗೆ ಲಭ್ಯವಾಗಿದೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟಿ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಜೀವಜ್ಯೋತಿಗಳು:

ರಾಜಾ ರಾಮಮೋಹನ ರಾಯ್

ಪ್ರಾಚೀನ ಸನಾತನ ಮತ್ತು ನೂತನ ಸುಧಾರಣೆಗಳ ನಡುವೆ, ಅಂಧಾಚಾರ ಮತ್ತು ವಿಚಿತ್ರ ವಿಜ್ಞಾನಗಳ ನಡುವೆ, ನಿರಂಕುಶ ಪ್ರಭುತ್ವ ಮತ್ತು ಪ್ರಜಾಧಿಕಾರಿಗಳ ನಡುವೆ, ಪಾಶ್ಚಾತ್ಯ ಪೌರ್ವಾತ್ಯಗಳ ನಡುವೆ, ಆಸ್ತಿಕ್ಯ ನಾಸ್ತಿಕ್ಯಗಳ ನಡುವೆ— ಎರಡು ಪಕ್ಷಗಳನ್ನೂ ಕಾದಾಡ ಬಿಡದೆ, ಸಮ ರಸದಿಂದ ಸಾಗಿ, ಆ ಎರಡು ಸಮಾಜಗಳಿಂದಲೂ ವಿಶಾಲವಾದ, ವಿಶೇಷವಾದ, ಇನ್ನೊಂದು ಹೊಸ ಸಮಾಜವನ್ನು ರಚಿಸಿದ, ಆಧುನಿಕ ಭಾರತದ ನಿರ್ಮಾತಾ ರಾಜಾರಾಮ ಮೋಹನ ರಾಯ್ ಇವರ ಜೀವನೇತಿಹಾಸವು ಅನೇಕ ಮಹತ್ವದ ಘಟನೆಗಳಿಂದ ಕೂಡಿದೆ. ಇಂದಿನ ಈ ಹೊಸ ಯುಗದಲ್ಲಿ ನಿಂತು, ಹಳೆಕಾಲದ ನಮ್ಮ ಹಿಂದಿನ ಹಿರಿಯರ ಜೀವನವನ್ನು ವಿಮರ್ಶಿಸುವ ನಮಗೆ ಈ ಎರಡು ಭಾವನೆಗಳ ಮಿಶ್ರಣ ಸಮಯದ ಚಿತ್ರವೊಂದನ್ನು ರಾಜಾರಾಮ ಮೋಹನರಾಯರ ಜೀವನವು ಕೊಡುತ್ತದೆ.

೧೭೭೨ನೆಯ ಇಸವಿಯಲ್ಲಿ ಬಂಗಾಳ ಪ್ರಾಂತದ ಹುಬ್ಬಳ್ಳಿಯೆಂಬ ಜಿಲ್ಲೆಯ ರಾಧಾನಗರವೆಂಬಲ್ಲಿ ಇವರು ಹುಟ್ಟಿದರು. ರಾಮಮೋಹನರು ೧೮೩೩ನೆಯ ಇಸವಿ ಸಪ್ಟಂಬರ ತಿಂಗಳ ೨೭ರಂದು ಬ್ರಿಸ್ಟಲಿನಲ್ಲಿ ಕಾಣ್ಮರೆಯಾದರು! ಅಂದಿನಿಂದ ಅವರ ಪುಣ್ಯ ದಿನವು ಸಪ್ಟಂಬರ ೨೭ರಂದು ಪ್ರಪಂಚದ ಹಲವು ಕಡೆಗಳಲ್ಲೂ ಆಚರಿಸಲ್ಪಡುತ್ತಿದೆ. ಅವರ ದಿವ್ಯ ಸ್ಮರಣೆಯನ್ನು ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ವಿಶಾಲಮತಿಗಳು

ಧಾರ್ಮಿಕ ವ್ಯಕ್ತಿಯಂತೆ ಕಂಡುಬಂದರೂ ಯೋಧನಂತೆ ಕಾರ್ಯ ಮಾಡುವವರವರು. ಹಲವರು ಸಮರ್ಥರು ಕೂಡಿ ಮಾಡಬಹುದಾದನ್ನು ಒಬ್ಬರೇ ಸಾಧಿಸಿಬಿಡುವಷ್ಟು ಘನ ನಿರ್ಣಯದವರು. ಮುಸಲ್ಮಾನರ ಮುಲ್ಲಾ, ಕ್ರೈಸ್ತರ ಪಾದ್ರಿ, ಹಿಂದುಗಳ ಋಷಿ ಇವರೆಲ್ಲರ ಶಕ್ತಿ ಅವರೊಬ್ಬರಲ್ಲಿ ಸಂಕೀರ್ಣವಾಗಿತ್ತು. ಪ್ರತಿಯೊಬ್ಬ ಮಾನವ ಜೀವಿಯ ಆತ್ಮವೂ ಪರಿಶುದ್ಧ, ಪ್ರತಿಯೊಬ್ಬನ ಕಾರ್ಯವೂ ಸತ್ಯ, ಧರ್ಮ, ಬ್ರಹ್ಮ ಸಮರ್ಪಕವಾಗಿರಬೇಕು; ಭಿನ್ನ ಧರ್ಮ, ಜಾತಿ, ಸಮಾಜ ಭೇದಗಳು ತಪ್ಪು ಕಲ್ಪನೆಗಳೆಂದು ಮನಗಂಡವರವರು.

ಅವರು ಪ್ರತಿಯೊಬ್ಬನನ್ನು ಪ್ರೀತಿಯಿಂದ ಕಾಣುವವರಾಗಿದ್ದರು. ಸ್ಪೈನಿಗೆ ಸ್ವತಂತ್ರ ಸರಕಾರವು ದೊರಕಿತು ಎಂಬ ವಾರ್ತೆ ಕೇಳಿದಾಗ, ಆ ಸಂತೋಷದಿಂದ ಉಬ್ಬಿಕೊಂಡು ಕಲ್ಕತ್ತದಲ್ಲಿ ಒಂದು ಸಾರ್ವಜನಿಕ 'ಊಟಕೂಟ'ವನ್ನೇರ್ಪಡಿಸಿ ತಮ್ಮ ವಿಶ್ವವಿಶಾಲ ಪ್ರೇಮವನ್ನು ವ್ಯಕ್ತಪಡಿಸಿದರು. [illegible] ಪಕ್ಷಪಾತ [illegible] ಸಂತೋಷ [illegible] ದರು. ಇಂಗ್ಲೆಂಡಿಗೆ ಹೋಗಿದ್ದಾಗ ಅವರು ಅಸೌಖ್ಯದಲ್ಲಿದ್ದರೂ, ಫ್ರಾನ್ಸಿಗೆ ಹೋಗಿ ಅಲ್ಲಿನ ಸ್ವತಂತ್ರ ಪತಾಕೆಗೆ ವಂದನೆಯನ್ನರ್ಪಿಸಬೇಕೆಂದು ಒತ್ತಾಯಪಡಿಸಿದ್ದರು. ಇಂಗ್ಲೆಂಡಿನಲ್ಲಿ ಸುಧಾರಣಾ ಕಾನೂನಿನ ವಿಷಯವಾಗಿ ಚರ್ಚೆ ನಡೆಯುತ್ತಿದ್ದಾಗ ಅದನ್ನು ಆಗ್ರಹದಿಂದ ನಿರೀಕ್ಷಿಸುತ್ತಿದ್ದರು. ಜನಾಂಗ ಸಂಘದ ಮೂಲತತ್ವಗಳಲ್ಲಿ ಕೆಲವನ್ನು ರಾಮಮೋಹನ ರಾಯರು ಇಂಗ್ಲೆಂಡಿನಲ್ಲಿದ್ದಾಗ ತಿಳಿಸಿದ್ದರಂತೆ.

ಭಾರತದ ಸೇವೆ

ಪ್ರಪಂಚದ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಅವರು ಭಾರತದ ದೀನ ಮಾನ ಸ್ಥಿತಿಯನ್ನು ಕಂಡು ಬಹಳವಾಗಿ ಮರುಕಪಟ್ಟಿದ್ದರು. ಭಾರತದ ಜನಮನವನ್ನು ಸತ್ವಪೂರ್ಣವಾಗಿಸಿ ಭಾರತೀಯರಲ್ಲಿ ಆತ್ಮಶಕ್ತಿಯ ತೇಜಸ್ಸು ಹೆಚ್ಚುವಂತೆ ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು. ಇದೇ ದೃಷ್ಟಿಯಿಂದ ಅವರು 'ಹಿಂದೂ ಕಾಲೇಜ್' 'ವೇದ ಮಂದಿರ'ಗಳನ್ನು ಸ್ಥಾಪಿಸಿ ಶುದ್ಧ ಭಾರತ ಸಂಸ್ಕೃತಿಯ ತಿರುಳು ಜನತೆಗೆ ಗೊತ್ತಾಗುವ ಏರ್ಪಾಡುಗಳನ್ನು ಮಾಡಿಕೊಟ್ಟರು.

ಆಧುನಿಕ ಭಾರತದ ರಾಜಕೀಯ ಜಾಗೃತಿಯ ಮೂಲಕಾರಣರು ಅವರೆಂದರೂ ಸರಿಯಾಗಬಹುದು. ಜನತೆಯ ಹಕ್ಕು ಬಾಧ್ಯತೆಗಳಿವು ಎಂಬುದನ್ನು ಸರಕಾರದ ಮುಂದೆ ಮೊಟ್ಟಮೊದಲಾಗಿ ನಿವೇದಿಸಿ ಸರಕಾರವನ್ನು ಎಚ್ಚರಿಸಿದವರು ಅವರು. ಭಾರತದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಅವರು ಈ ಬಗ್ಗೆ ಹಲವು ಕಾಲ ಸಾಹಸದಿಂದ ದುಡಿದರು.

ಮೊತ್ತಮೊದಲಾಗಿ ಸಮುದ್ರವನ್ನು ದಾಟಿ ವಿದೇಶ ಪ್ರವಾಸಮಾಡಿದ ಭಾರತೀಯರೆಂದರೆ ಅವರೇ. ಅವರು ಅದರ ಸಂಬಂಧ ಅಂಧಸನಾತನಿಗಳಿಂದ ಒದಗಿದ ವಿರೋಧವನ್ನು ಧೀರತೆಯಿಂದ ಎದುರಿಸಿದರು. ಹಿಂದೂ ಸಮಾಜದಲ್ಲಿ ಪ್ರಚಾರದಲ್ಲಿರುವ ಜಾತಿಬೇಧಗಳು ಹೋಗಬೇಕೆಂದು ಅವರು ಬಹಳವಾಗಿ ಸಾಧಿಸಿದರು. ಹಾಗೆಂದು, ಶಾಸ್ತ್ರಗಳ ಧರ್ಮಬೋಧೆಗಳನ್ನು ಅವರು ತಪ್ಪದೆ ಆಚರಿಸುತ್ತಿದ್ದರು.

'ಸತಿ'ಯ ನಿರೋಧ

ಅವರು ಮಾಡಿದ ಸುಧಾರಣೆಗಳಲ್ಲಿ ಅತ್ಯಂತ ಪ್ರಶಂಸಾರ್ಹವಾದ ಸುಧಾರಣೆಯೆಂದರೆ 'ಸತಿ' 'ಪದ್ಧತಿಯ' ನಿಷೇಧವು. ಅದಕ್ಕಿಂತ ಹಿಂದೆ ಗಂಡನ ಚಿತೆಯಲ್ಲಿ ಪತ್ನಿಯೂ ಬಿದ್ದು ಸಾಯುವುದು ಹಿಂದೂ ಸಮಾಜದಲ್ಲಿ ಆಚಾರವಾಗಿ ಬಂದಿತ್ತು. ಇಂತಹ ಕ್ರೂರ ಪದ್ಧತಿಯನ್ನು ಅವರು ಸರಕಾರದ ಶಾಸನದ ಮೂಲಕ ಯಶಸ್ವಿಯಾಗಿ ತಡೆದು ಅನೇಕ ಜೀವಿಗಳನ್ನು ಆಚಾರದ ಕ್ರೂರ ಬಲಿಯಿಂದ ಕಾಪಾಡಿದರು. ಇದು ಭಾರತದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಉಲ್ಲೇಖನೀಯವಾಗಿದೆ.

ವಿದ್ಯಾ ಸೇವೆ

ವಿದ್ಯಾಕ್ಷೇತ್ರದಲ್ಲಿಯೂ ಅವರು ತನ್ನ ಸೇವೆಯನ್ನು ಸಲ್ಲಿಸಿದ್ದಾರೆ. ಬಂಗಾಳೀ ಭಾಷೆಯಲ್ಲಿ ಅನೇಕ ಪಠ್ಯ ಪುಸ್ತಕಗಳನ್ನು ಬರೆದಿದ್ದಾರೆ. ಬಂಗಾಳದ ಗದ್ಯಸಾಹಿತ್ಯದಲ್ಲಿ ಅವರು ತುಂಬಾ ಹೆಸರುವಡೆದಿರುವರು. ಸಂಸ್ಕೃತ, ಇಂಗ್ಲಿಷ್, ಹಿಂದಿ, ಬಂಗಾಳಿ ಈ ನಾಲ್ಕು ಭಾಷೆಗಳಲ್ಲಿ ಅವರಿಗೆ ಪ್ರಭುತ್ವವಿತ್ತು. ಬಂಗಾಳದಲ್ಲಿ ಪತ್ರಿಕೋದ್ಯೋಗದ ಪ್ರಾರಂಭಕರ್ತರೆಂದರೆ ಅವರೇ. ೧೮೧೯ರಲ್ಲಿ ಅವರ ಮೊದಲು ಬಂಗಾಳೀ ಪತ್ರಿಕೆಯನ್ನು ಪ್ರಾರಂಭಿಸಿದ್ದರು.

ರಾಜಕೀಯದಲ್ಲಿ ಸುಧಾರಣೆಗಳನ್ನು ತರುವ ಹಲವು ಪ್ರಬಂಧಗಳನ್ನು ಬರೆದು ಸರಕಾರದವರ ಕಣ್ಣು ತೆರೆಸಿದರು.

ಅವರಿಗೆ ಇಂಗ್ಲೆಂಡಿನಲ್ಲಿ ಆಂಗ್ಲೇಯರ ಮಧ್ಯದಲ್ಲಿಯೂ ಬಹಳ ಗೌರವ ಸಿಗುತ್ತಿತ್ತು. ರಾಜಾರಾಮ ಮೋಹನ ರಾಯರು ಸ್ವದೇಶ ವಿದೇಶಗಳೆರಡರಲ್ಲಿಯೂ ಹೆಚ್ಚಿನ ಮನ್ನಣೆ ಪಡೆದಿದ್ದರು.

ಅವರು ಸ್ಥಾಪಿಸಿದ ಬ್ರಹ್ಮ ಸಮಾಜವು ಇಂದು ಎಲ್ಲೆಲ್ಲೂ ಹರಡಿದೆ. ಬಂಗಾಳದಲ್ಲಿ ತುಂಬಾ ಜನರು 'ಬ್ರಹ್ಮೊ'ಗಳೇ ಆಗಿರುವರು.

ಅವರ ನೂರೇಳನೆಯ ಜನ್ಮದಿನೋತ್ಸವವು ಈಗ ಬಂದಿದೆ!

THE

BANK OF MANGALORE LTD.,

MANGALORE

ESTD 1931

Branches

Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% on daily balances.

kinds of banking business transacted

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರ್ಡೇಪಿ.

P. O. Peridepi (ನೆಲ್ಲೂರು ಡಿ.)

ಸ್ವಾತಂತ್ರ್ಯ ಮೊದಲು: :: ಸಹಾಯ ಮತ್ತೆ!

ಮಾನ್ಯ ಖೇರರ ಪ್ರಚಂಡ ಭಾಷಣ!

ಕರ್ನಾಟಕದ ರೈತರಿಗೆ ಉಪದೇಶ!

ಬ್ರಿಟನಿಗೆ ಭಾರತದ ಸಹಾಯ ಪಡೆಯಬೇಕೆಂದಿದ್ದರೆ, ಭಾರತವು ಈ ಯುದ್ಧದಲ್ಲಿ ಸ್ವತಂತ್ರವಾದ ಭಾರತವಾಗಿ ಸಹಕರಿಸುವುದೆಂದು ಬ್ರಿಟನಿಗೆ ತಿಳಿದಿರಬೇಕು. ಬ್ರಿಟನು ಅಲ್ಪಸಂಖ್ಯಾಕರ ಸಮಸ್ಯೆಯನ್ನು ಸ್ವಾತಂತ್ರ್ಯದ ಹಾದಿಯಲ್ಲಿ ಅಡ್ಡಿಯಾಗಿಡುವುದು ಕೇವಲ ನೆವನ ಮಾತ್ರವಾಗಿದೆ. ಕಾಂಗ್ರೆಸು ಯಾವುದೇ ಅಲ್ಪಸಂಖ್ಯಾಕರಿಗೆ ಸಮ್ಮತವಾಗದ ಸ್ವರಾಜ್ಯವನ್ನು ಸ್ವೀಕರಿಸುವುದಿಲ್ಲ.

ಹೀಗೆಂದು ಮುಂಬಯಿಯ ಮಾಜಿ ಪ್ರಧಾನ ಮಂತ್ರಿ ಶ್ರೀ ಬಾಲಗಂಗಾಧರ ಖೇರರು ಗೋಕಾಕದಲ್ಲಿ ನೆರೆದ ಒಂದು ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಹೇಳಿದರು. ಅಂದಿನ ಸಭೆಗೆ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷರಾಗಿದ್ದರು.

ನಾವು ಯಾತಕ್ಕಾಗಿ ಹೋರಾಡಬೇಕು

ಶ್ರೀ ಖೇರರು ತಮ್ಮ ಸ್ಫೂರ್ತಿವತ್ತಾದ ಭಾಷಣದಲ್ಲಿ ಅಂದು ಯುದ್ಧಾರಂಭದ ಮೊದಲನೆಯ ದಿನಗಳನ್ನು ಹಿಡಿದು, ಅಬಿಸೀನಿಯದ ಆಕ್ರಮಣದಿಂದ ಆರಂಭಿಸಿ, ಇಂದಿನ ಇಂಗ್ಲೆಂಡಿನ ಮೇಲೆ ಬಾಂಬಿನ ಸುರಿಮಳೆ ಕರೆಯುವ ವರೆಗಿನ ಯೂರೋಪಿನ ರಾಜಕೀಯ ವಿಷಯವನ್ನು ಬಹಳ ಮುಂದಟ್ಟಾಗಿ ವಿವರಿಸಿ ಹೇಳಿದರು. ಇಂಗ್ಲೆಂಡು ಜೀವನ ಮರಣದ ಸಂಗ್ರಾಮದಲ್ಲಿ ಹೋರಾಡುತ್ತಿದ್ದರೂ, ಅದರ ಅಂತರ್ಗತ ಸ್ವರಾಜ್ಯಕ್ಕೆ ಸೇರಿದ ಐರ್ಲೆಂಡು, ಜರ್ಮನಿಯ ಧಾಳಿಯ ಭೀತಿ ಅದಕ್ಕೂ ಇದ್ದರೂ, ಇಚ್ಛೆಯಂತೆ ಇದುವರೆಗೆ ಇಂಗ್ಲೆಂಡಿನ ಪಕ್ಷಕ್ಕೂ ಬಾರದೆ, ತಟಸ್ಥವಾಗಿರುವಾಗ, ಭಾರತಕ್ಕೆ ಮಾತ್ರ ಅಭಿಪ್ರಾಯ ಸ್ವಾತಂತ್ರ್ಯವಿಲ್ಲವೇ ಎಂದು ಅಭಿಪ್ರಾಯ ಸೂಚಿಸಿದರು. ಸರಕಾರದವರು, ಪ್ರಾಂತಗಳಲ್ಲಿ ಜನರ ಪ್ರತಿನಿಧಿಗಳು ಸರಕಾರ ನಡೆಸುತ್ತಿರಲು, ಪ್ರಾಂತ ಮಂತ್ರಿಗಳನ್ನಾಗಲಿ, ಕೇಂದ್ರಾಧಿಕಾರಿಗಳನ್ನಾಗಲಿ ಹೇಳದೆ ಕೇಳದೆ ಒಮ್ಮಿಂದೊಮ್ಮೆಗೆ ಭಾರತವು ಜರ್ಮನಿಯ ವಿರುದ್ಧ ಹೋರಾಟಕ್ಕಿಳಿದಿದೆಯೆಂದು ಸಾರಿದುದರ ಬಗ್ಗೆ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಯಾವುದರ ಸಲುವಾಗಿ, ಭಾರತೀಯರು ಜರ್ಮನರ ವಿರುದ್ಧ ಯುದ್ಧಮಾಡಲು ರಣರಂಗಕ್ಕೆ ಇಳಿಯಬೇಕಾಗಿದೆಯೆಂಬುದನ್ನು, ಭಾರತವನ್ನು ಯುದ್ಧಕ್ಕಿಳಿಸಿದ ಬ್ರಿಟನು ವ್ಯಕ್ತಪಡಿಸದಿರುವುದು ಪರಮಾಶ್ಚರ್ಯವೆಂದರು. ಹೀಗೆ ಬ್ರಿಟಿಷರು ಭಾರತೀಯರಿಗೆ ಯುದ್ಧೋದ್ದೇಶವನ್ನು ತಿಳಿಸದೆ ಇರುವಾಗ, ನಾವು ಯಾತಕ್ಕೆಂದು ಯುದ್ಧಮಾಡಬೇಕಾಗಿದೆಯೆಂದೂ ಹೇಳಿದರು. ಮತ್ತೆ ಮಾತನಾಡುತ್ತಾ ಭಾರತೀಯರಿಗೆ ಹಿಟ್ಲರ್‌ವಾದವು ಬೇಕಾಗಿಲ್ಲವೆಂದೂ, ನಾಜಿನೀತಿಯನ್ನು ಸ್ವಲ್ಪವಾದರೂ ಬಲ್ಲವರಿಗೆ ಅದು ಹಿತವೆನಿಸದೆಂದೂ ಉಸುರಿದರು.

ಎಮೆರಿಯವರ ಹಾಸ್ಯಾಸ್ಪದವಾದ ಮಾತು!

ಅನಂತರ ಖೇರರು ಭಾರತ ಸಚಿವರಾದ ಎಮೆರಿಯವರ ಹೇಳಿಕೆಯ ವಿಷಯ ತಿಳಿಸುತ್ತಾ, ಅವರು ಸ್ವರಾಜ್ಯದ ಮಾರ್ಗದಲ್ಲಿ ಬೇಕುಬೇಕೆಂದು ಆತಂಕವನ್ನು ಒಡ್ಡುತ್ತಿರುವರೆಂದೂ, ಸಮುದ್ರದಲ್ಲಿ ನೀರಿರುವ ವರೆಗೆ ಭಾರತಕ್ಕೆ ಸ್ವರಾಜ್ಯವಿಲ್ಲವೆಂದು ಹೇಳುವ ಮಾತಿನಷ್ಟೇ ಅವರ ಮಾತೂ ಹಾಸ್ಯಾಸ್ಪದವಾದುದೆಂದೂ ಘೋಷಿಸಿದರು. ಮತ್ತೆ ಕಾಂಗ್ರೆಸ್ ಮಂತ್ರಿಮಂಡಲವು ಜನತೆಯ ಸಲುವಾಗಿ ಮಾಡಿದ ಉಪಕಾರಗಳನ್ನು ವಿವರಿಸಿ ಹೇಳಿದರು.

ಮಹಾತ್ಮರ ಮುಂದಾಳುತನ

ಕೊನೆಗೆ ಅವರು ಮೊನ್ನೆಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯಕಲಾಪಗಳ ವಿಷಯವನ್ನು ತಿಳಿಸುತ್ತಾ, ಈಗ ತಿರುಗಿ, ನಮ್ಮೆಲ್ಲರ ಪೂಜ್ಯ ಧುರೀಣರಾದ ಮಹಾತ್ಮರು ಮುಂದಾಳುತನ ವಹಿಸಲು ಬಂದಿರುವರೆಂದೂ ಅವರು ನಮ್ಮನ್ನು ಜಯದಿಂದ ವಿಜಯದ ಕಡೆಗೆ ಸಾಗಿಸುವ ಮಹಾ ಸೇನಾಪತಿಯೆಂದು ತಿಳಿಸಿದ್ದಲ್ಲದೆ, ಬೇಗನೇ ಆಗಲಿರುವ ಗಾಂಧಿ—ವೈಸರಾಯರ ಭೇಟಿಯ ಫಲಿತಾಂಶವು ಪ್ರಕಟವಾಗುವ ತನಕ ಯಾರೂ ದುಡುಕಿ ಯಾವ ಕಾರ್ಯಗಳನ್ನೂ ಕೈಕೊಳ್ಳಬಾರದಾಗಿ ಹೇಳಿದರು. ಮುಂದೊದಗಬಹುದಾದ ರಾಷ್ಟ್ರೀಯ ಸಂಗ್ರಾಮದಲ್ಲಿ ಕರ್ನಾಟಕವು ಹಿಂದೆ ನೆರವಾದಂತೆ ತನ್ನ ಉಜ್ವಲ ಪರಂಪರೆಯನ್ನು ಕಾಯ್ದುಕೊಳ್ಳತಕ್ಕದ್ದೆಂದೂ ತಿಳಿಸಿದರು.

ಶ್ರೀ ಖೇರರು ಬೆಳಗಾಂವಿಯಲ್ಲಿಯೂ ಪ್ರಚಂಡ ಭಾಷಣವೊಂದನ್ನು ಮಾಡಿದರು. ಅಲ್ಲಿಯ ಜನರಿಗೂ ಪ್ರಕೃತ ಯುದ್ಧ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಕನ್ನಡಿಗರ ಕರ್ತವ್ಯಗಳನ್ನು ಮುಂದಟ್ಟಾಗಿ ತಿಳಿಸಿದರು. ಅಲ್ಲಿನ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿಯೂ ಭಾಗ ತೆಗೆದುಕೊಂಡು ಯೋಗ್ಯ ಸಲಹೆಗಳನ್ನಿತ್ತರು.



ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದ ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಪ್ರಿಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ. ಕುಟಿಕೂರಾ ಟಾಲ್ಕಮು (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ, ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೇ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುದಿನದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮು (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER



ನಿಮಗೆ ನೆಟ್ಟಗಾಗದ ಕಾರಣ ಒಂದೇ. ಅಂದರೆ ಗುಣಪಡುವ ಆಶೆಯಿಂದ ನೀವು ಇಲ್ಲಿಯ ವರೆಗೆ ದೊರಕಿಸಿದ ಉಪಾಯಗಳೆಲ್ಲ ನಿರುಪಯೋಗಿಯಾಗಿದ್ದವು. 'ಪುರೋಹಿತ—ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ [illegible] ಬೇರು ಸಹಿತ ಕಿತ್ತುಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ಕೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿಬಂದು ಫುಪ್ಫುಸವು ಗಟ್ಟಿಮುಟ್ಟಾಗಿ ದಮ್ಮು ಪೂರಾ ನೆಟ್ಟಗಾಗುವುದು. ಪುರೋಹಿತ ಶ್ವಾಸಹಾರಿಯು [illegible] ಮತ್ತು [illegible] ಬಾಟ್ಲಿಗಳಲ್ಲಿ [illegible] ಎಲ್ಲಾ ಕಡೆಸಿಗುವುದು. [illegible]

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಮುಂಬಯಿಯ ಸೋಲ್ ಏಜಂಟರು:

ವನಮಾಳೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೩.



ದಮ್ಮಿಗೆ ಯಶಸ್ವಿಯಾದ ಡಾಕ್ಟರರ ಉಪಾಯ

ಪುರೋಹಿತ ಶ್ವಾಸಹಾರೀ

ಸಿನೆಮಾ ಪುಟ

ದೇವಿಕಾರಾಣಿಯ ಹೊಸ ಚಿತ್ರ

ಬೊಂಬಾಯಿ ಟಾಕೀಸಿನ ಮೆನೇಜರರಾದ ರಾಯಬಹದ್ದೂರ್ ಚುನ್ನಿಲಾಲರು ಪತ್ರಿಕಾಪ್ರತಿನಿಧಿಯು ಭೇಟಿಯಾದಾಗ ಹೀಗೆ ಹೇಳಿದರು, "ಈಗೀಗ ನನ್ನೊಡನೆ ಜನರು ವಿಶೇಷವಾಗಿ ಕೇಳುವ ಪ್ರಶ್ನೆಯೊಂದು ಶ್ರೀಮತಿ ದೇವಿಕಾರಾಣಿಯ ವಿಷಯ. ಪತಿಯ ಮರಣವು, ಆಕೆಗೆ ಬಹಳ ದೊಡ್ಡ ಆಘಾತವಾಗಿದೆ. ಆದರೆ 'ಸಿನೆಮಾಲೋಕದಲ್ಲಿರುವ ಭಾರತೀಯ ಮಹಿಳೆಯರಲ್ಲಿ ಪ್ರಥಮ ಸ್ಥಾನವನ್ನು ಪಡೆದ ಆಕೆಯು, ಬಂದ ಕಷ್ಟವನ್ನು ಧೈರ್ಯಪೂರ್ವಕ ಎದುರಿಸಿಕೊಂಡು, ತಿರುಗಿಯೂ ಕಲಾಸೇವೆಗೆ ಸಿದ್ಧಳಾಗಿ ಮುಂದೆ ಬಂದಿದ್ದಾಳೆ. ಮುಂದಿನ ಅವಳ ಚಿತ್ರವು ಬಂಧನ್ ಮತ್ತು ಕಂಗನ್‌ಗಳಿಂದಲೂ ವಿಶೇಷ ಯಶಸ್ವಿಯಾಗುವುದೆಂದು ನಾನು ನಂಬುತ್ತೇನೆ."

ಬೊಂಬೆ ಟಾಕೀಸಿನಲ್ಲೇ ಇದ್ದಾಳೆ, ಶ್ರೀಮತಿ ಲೀಲಾ ಚಿಟ್ನೀಸಳು

ಬಾಂಬೇ ಟಾಕೀಸಿನ ಪಬ್ಲಿಸಿಟಿ ಆಫೀಸರರು ಹೀಗೆಂದು ಬರೆಯುತ್ತಾರೆ: "ಇತ್ತೀಚೆಗೆ ಪತ್ರಿಕೆಗಳಲ್ಲಿ ಶ್ರೀಮತಿ ಚಿಟ್ನಿಸಳು ಬಾಂಬೆ ಟಾಕಿಸನ್ನು ಬಿಟ್ಟು ಹೊಸ ಕಂಪೆನಿಯನ್ನು ಸೇರಿದಳೆಂದು ವಾರ್ತೆ ಬಂದಿದೆ. ಆದರೆ ಚಿಟ್ನಿಸಳು ತನ್ನ ಒಪ್ಪಂದದಂತೆ, ಇದುವರೆಗೆ ಬೊಂಬೆ ಟಾಕೀಸಿನಲ್ಲಿಯೇ ಇರುವಳು. ಆಕೆಗೆ ಕಂಪೆನಿಯವರು, ಬೇರೊಂದು ಕಂಪೆನಿಯಲ್ಲಿ ಒಂದು ಚಿತ್ರದ ಮಟ್ಟಿಗೆ ಅಭಿನಯಿಸಲು ಅನುಮತಿಯಿತ್ತು ರಜೆಕೊಟ್ಟಿದ್ದರು. ಮುಂದಿನ ಚಿತ್ರದಲ್ಲಿ ಅವಳು ಅಭಿನಯಿಸುವಳೇ ಎಂಬ ವಿಚಾರವು ಕಾರ್ಯಕ್ರಮದ ಅನುಕೂಲತೆಯನ್ನು ಹೊಂದಿಕೊಂಡಿದೆ. ಆದರೆ ಚಿಟ್ನಿಸಳು ಬೊಂಬೇ ಟಾಕೀಸನ್ನು ಬಿಟ್ಟುಬಿಟ್ಟಳೆಂಬ ಸುದ್ದಿಗೆ ಆಧಾರವೇ ಇಲ್ಲ."

ಉದಯ ಶಂಕರನ ಭಾರತ ಯಾತ್ರೆ

ಆಲ್ಮೋರದ ನೃತ್ಯಕಲಾಕೇಂದ್ರದ ತನ್ನ ಅನುಯಾಯಿಗಳೊಡನೆ ಉದಯ ಶಂಕರರು ಬರುವ ಡಿಶೆಂಬರದಿಂದ ಕೊಡಗಿ ಬಾರತ ಸಂಚಾರಕ್ಕೆ ಹೊರಡುವರಾಗಿ ತಿಳಿದು ಬರುತ್ತದೆ.

ನವಾಬ್ ಸೈಗಲ್ ಮತ್ತು ಕನನ್

ಒಬ್ಬ ಪತ್ರಿಕೋದ್ಯಮಿಯ ಪ್ರಣಯ ಕಥೆಯು ನವಾಬ್ ಸೈಗಲ್ ಮತ್ತು ಕನನ್ ಇವರು ಅಭಿನಯಿಸುವ ಮುಂದಿನ ಚಿತ್ರದ ಸ್ವಾರೂಪ ಇದರಲ್ಲಿ ನಿರೂಪಿತವಾಗುವುದು. ನಿತಿನ್ ಬೋಸರು ಇದನ್ನು ನಿರ್ದೇಶಿಸುವರು.

ತುಳಸಿ

ಸ್ವರ್ಗೀಯ ಶರತ್ಚಂದ್ರರು ನಿರ್ದೇಶಕ ಗುಂಜಾಲರ ತುಳಸೀ ಚಿತ್ರದ ತಯಾರಿಕೆಗೆ ಕಳೆದ ವಾರದಿಂದ ಕೈಹಚ್ಚಿರುತ್ತಾರೆ.

ಶಕ್ತಿ ಫಿಲ್ಮ್ಸ

ಸೇಲಮಿನಲ್ಲಿ ಶಕ್ತಿ ಫಿಲ್ಮ್ಸ ಎಂಬ ಹೊಸ ಚಲಚ್ಚಿತ್ರ ಕಂಪೆನಿಯೊಂದು ಪ್ರಾರಂಭವಾಗಿದೆ. ಅವರ ಮೊದಲನೆಯ ಚಿತ್ರವು ದೀರ್ಘ ಹಾಸ್ಯ ಚಿತ್ರವಾಗಿರುವುದೆಂದು ಸುದ್ದಿ. ಬೇಗನೇ ಮದ್ರಾಸಿನ ಸ್ಟುಡಿಯೋ ಒಂದರಲ್ಲಿ ಇದರ ರಚನೆ ಪ್ರಾರಂಭವಾಗಲಿರುವುದು.

ಹಾಲಿವುಡ್ಡಿನಲ್ಲಿ ತುಕಾರಾಮ

ಹಾಲಿವುಡ್ಡು ಪಾಶ್ಚಾತ್ಯ ಚಲಚಿತ್ರ ಕೇಂದ್ರ. ಅಲ್ಲಿ ಜಗತ್ತಿನ ಬೇರೆ ಬೇರೆ ಕಡೆಯ ಪ್ರಸಿದ್ಧ ಚಿತ್ರಗಳು ಪ್ರದರ್ಶಿತವಾಗುತ್ತವೆ. ಪ್ರಭಾತ ಕಂಪನಿಯ 'ಸಂತ ತುಕಾರಾಮ'ವನ್ನು ಅಲ್ಲಿ ಪ್ರದರ್ಶಿಸುವ ಏರ್ಪಾಡಿಸುವ ಸಿದ್ಧತೆಯಾಗಿದೆಯೆಂದೂ ಅಲ್ಲಿನ ಚಿತ್ರಕಲಾಪ್ರೇಮಿಗಳೆಲ್ಲರೂ ಇದರ ದರ್ಶನಕ್ಕಾಗಿ ಅತ್ಯಂತ ಕತೂಹಲಗೊಂಡಿರುವರೆಂದೂ ತಿಳಿದುಬರುತ್ತದೆ.

ಲಾಹೋರಿನಲ್ಲಿ ಪ್ರದರ್ಶಿಸಕೂಡದು

ಪಶ್ಚಿಮ ರಣರಂಗದಲ್ಲಿ ಶಾಂತತೆಯಿದೆ' ಎಂಬೀ ಚಿತ್ರವನ್ನು ಲಾಹೋರಿನಲ್ಲಿ ಪ್ರದರ್ಶಿಸಕೂಡದಾಗಿ ಸರಕಾರವು ವಿಧಿಸಿದೆ. 'ಹಚ್ ಕಾಲದ ಮಸ್ಕ' ಎಂಬ ಈಜಿಪ್ಟಿನ ಚಿತ್ರವೊಂದೂ ಅಲ್ಲಿ ನಿರ್ಬಂಧಿತವಾಗಿದೆಯೆಂದ ಳಿದೆ.

ಸಾಬುವಿನ ಹೊಸ ಚಿತ್ರ

'ಬಗದಾದ ಕಳ್ಳ' ಚಿತ್ರವು ಮುಗಿದ ಮೇಲೆ ಸಾಬು 'ಅರಣ್ಯ ಕುಮಾರ' ಎಂಬೀ ಚಿತ್ರದಲ್ಲಿ ಅಭಿನಯಿಸುವನು. ಈ ಚಿತ್ರದಲ್ಲಿ ಆದಷ್ಟು ನೈಸರ್ಗಿಕತೆಯನ್ನು ಹೆಚ್ಚಿಸುವ ಸಲುವಾಗಿ ಮೈಸೂರ ಸಾಬುವು ಈಗ ಹಾಲಿವುಡ್ ಕ್ಲಬ್ಬಿನ ಕೆರೆಯೊಂದರಲ್ಲಿ ಬಹಳ ವಿಶೇಷವಾಗಿ ಈಜಾಡುತ್ತಿದ್ದಾನೆ.

ಲೀಲಾಚಿಟ್ನೀಸಳ ಸಂಬಳ ರೂ. ೪,೦೦೦

ಭಾರತೀಯ ಸಿನೆಮಾ ನಟಿಯರಲ್ಲಿ ಲೀಲಾಚಿಟ್ನಿಸಳೂ ಹೆಚ್ಚು ಸಂಬಳವನ್ನು ಪಡೆಯುತ್ತಿದ್ದಾಳೆ. ಈಗ ಅವಳಿಗೆ ತಿಂಗಳ ೪,೦೦೦ ರೂಪಾಯಿ ಸಂಬಳವಿದೆಯೆಂದು ತಿಳಿದು ಬರುತ್ತದೆ.

ಅಮೇರಿಕಕ್ಕೆ ಇಂಡಿಯನ್ ಫಿಲ್ಮುಗಳು

ಹೋಲಿವುಡ್ಡಿನಲ್ಲಿ ಭಾರತದ ನೈಜ ಜೀವನವನ್ನು ಚಿತ್ರಿಸುವ ಕಥೆಯೊಂದನ್ನು ಚಿತ್ರ ತೆಗೆಯಬೇಕೆಂಬ ಸಲುವಾಗಿ, ಬಂದಿದ್ದ ಶ್ರೀ ರಾಮ ಭಾಗೆಯುವರು ಈಗ ಪುನಃ ಹಾಲಿವುಡ್ಡಿಗೆ ತೆರಳುವರಿದ್ದಾರೆ.

ಹೋಗುವಾಗ ತನ್ನೊಡನೆ ಅಮೇರಿಕದಲ್ಲಿ ಪ್ರದರ್ಶಿಸಲು ಕೆಲವು ಭಾರತೀಯ ಚಿತ್ರಗಳನ್ನು ತೆಗೆದುಕೊಂಡು ಹೋಗುವರು. ಅವರು ಬಂದಿದ್ದ ವಿಷಯದಲ್ಲಿ ಹೆಚ್ಚಿನ ಪ್ರಯೋಜನಕಾರಿಯಾಗಲಿಲ್ಲ. ಪಾಶ್ಚಾತ್ಯ ದೇಶದ ಮೆಚ್ಚುಗೆಯನ್ನು ಪಡೆಯುವಂತಹ ಯಾವುದೇ ಒಂದು ಕಥೆಯೂ ಅವರಿಗೆ ದೊರಕಲಿಲ್ಲವಂತೆ. ದೊರಕಿದ ಕಥೆಗಳಲ್ಲಿ ಮೂರೋ ನಾಲ್ಕೋ ಕಥೆಗಳು ಕೇವಲ ಭಾರತದಲ್ಲಿ ನಿರ್ಮಾಣ ಮಾಡಲು ಯೋಗ್ಯವಾಗಿರುವವಂತೆ.

ಅವರ ಕೆಲವು ಮದ್ರಾಸೀ ಫಿಲ್ಮುಗಳನ್ನು ಅಮೇರಿಕಕ್ಕೆ ಒಯ್ಯಬೇಕೆಂದ ಬಯಸಿರುವರಾಗಿ ತಿಳಿದುಬರುತ್ತದೆ.

ಆಂಧಿ

ಆಂಧಿ ನ್ಯೂಥಿಯೇಟರ್ಸ್ಸಿನ ಹೊಸ ಚಿತ್ರ.

ಅಶೋಕ ಮತ್ತು ರಂಜನ ಇಂಬಿಬ್ಬರು ಸುಲತಾ ಎಂಬ ಬಾಲಿಕೆಯನ್ನು ಪ್ರೀತಿಸುತ್ತಾರೆ. ಆಕೆ ಪ್ರೀತಿಸುವುದು ರಂಜನನೊಬ್ಬನನ್ನೇ. ಒಮ್ಮೆ ಅಶೋಕನು ತನ್ನ ಪ್ರೇಮವನ್ನು ಆಕೆಯೊಡನೆ ತಿಳಿಸಿದ; ಅದಕ್ಕೆ ಆಕೆ ಮರ್ಯಾದೆಯಿಂದಲೇ ನಕಾರದ ಉತ್ತರ ಹೇಳಿದ್ದಳು.

ರಂಜನನು ಬಹಳ ದೂರ ದೇಶ ಒಂದರಲ್ಲಿ ಉದ್ಯೋಗವೊಂದನ್ನು ಸಂಪಾದಿಸುವನು. ಮಾರ್ಗಮಧ್ಯೇ, ಬಿರುಗಾಳಿಗೆ ಸಿಲುಕಿ ರಂಜನನು ಎತ್ತಲೋ ಒಯ್ಯಲ್ಪಟ್ಟು ಕೊನೆಗೆ ತುಳಸಿಯೆಂಬ ಹುಡುಗಿಯಿಂದಲೂ, ಆಕೆಯ ಕುರುಡ ತಂದೆಯಿಂದಲೂ ಸಂರಕ್ಷಿತನಾಗುತ್ತಾನೆ.

ರಂಜನನ ಅಗಲುವಿಕೆಯಿಂದ ಸುಲತಾ ವಿರಹಿಯಾಗಿರುವಳು. ಕೆಲಕಾಲದ ಮೇಲೆ ಆಕೆ ತನ್ನನ್ನು ವಿವಾಹ ಮಾಡಿಕೊಳ್ಳಬೇಕೆಂದು ಅಶೋಕನೊಡನೆ ಕೇಳುವಳು. ಅಶೋಕನು ಒಂದು ಗಾಯನಕೂಟದಲ್ಲಿ ತುಳಸಿಯೊಡನಿರುವ ರಂಜನನ್ನು ಕಾಣುವನು. ರಂಜನನು ಅಶೋಕನನ್ನು ಗುರುತು ಹಿಡಿಯಲಿಲ್ಲ. ಆದರೆ ಅಶೋಕನು, ಸುಲತೆ, ನಿಜವಾಗಿ ಪ್ರೀತಿಸುವುದು ರಂಜನನ್ನೆಂದು ತಿಳಿದಿದ್ದು ಆತನಿಗೆ ಹಿಂದಿನ ವಿಷಯಗಳನ್ನೆಲ್ಲಾ ನೆನಪು ಮಾಡುವನು. ನಿಜವಾದ ಗೆಳೆತನದ ಮುಂದೆ ಪ್ರೇಮವು ತಲೆಬಾಗುವುದು.

ಪಂಕಜಮಲ್ಲಿಕ್ ರಂಜನನ ಪಾತ್ರದಲ್ಲಿ, ನಜಮಿಲ್ ಅಶೋಕ ಪಾತ್ರದಲ್ಲಿ, ಶ್ರೀಲೇಖಾ ಸುಲತಾ ಪಾತ್ರದಲ್ಲಿ, ಮಲಿನಾ ತುಳಸೀ ಪಾತ್ರದಲ್ಲಿ, ಕೆ. ಸಿ. ಡೇ, ತುಳಸಿಯ ಕುರುಡ ತಂದೆಯ ಪಾತ್ರದಲ್ಲಿ ಅಭಿನಯಿಸುವರು.

ಪ್ರಪಂಚದಲ್ಲೇ ದೊಡ್ಡ ಥಿಯೇಟರ್!

ಬೆಬ್ಬೀನಸ್ ಏರಿಸಿನಲ್ಲಿ ಪ್ರಪಂಚದಲ್ಲಿಯೇ ಬಹಳ ಮಹತ್ತಾದ ಥಿಯೇಟರ್ ಒಂದು ಇದೆ. ಅದನ್ನು ಕೇವಲ ಮೂರೇ ತಾಸಿನೊಳಗೆ ಒಂದು ಸರ್ಕಸ್ ಡೇರೆಯಾಗಿಯೂ, ಪಂದ್ಯಾಟಸ್ಥಳವಾಗಿಯೂ ಮಾರ್ಪಡಿಸುವಂತಹ ಅನುಕೂಲತೆ ಇದೆ. ಹಲವಾರು ಸಲ ಈ ಥಿಯೇಟರಿನಲ್ಲಿ ಬೆಳಗ್ಗೆ ಸೈಕಲ್ ಪಂದ್ಯಾಟವಾಗಿ, ಮಧ್ಯಾಹ್ನ ಹೋರಿಕಾಳಗವಾಗಿ, ಸಂಜೆಗೆ ಸಿನೆಮಾ ಪ್ರದರ್ಶನವೂ ಆದುದುಂಟು!

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office UDIPI, S Kanara
Our attractive Rates on Deposits
FIXED DEPOSITS

3 to 6 months	2½% p. a
6 to 9 "	3% "
One year	3½% "
Two years	4% "
SHORT TERM Deposits	2¼% p. a
Current Account.	1% p. a.
Savings Bank:	2½% *

Particulars of other kinds of deposits on application.

HALFTONE & LINE
BLOCK MAKING
UNDERTAKEN
Sharada Press,
MANGALORE

ಕರ್ನಾಟಕ
ಈ ಸಲದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿ

ಮಹಿಳೆಯರೊಬ್ಬರ ಬಿನ್ನಹ

[ಬೆಂಗಳೂರಿನ ಶ್ರೀಮತಿ ಕಮಲಾದೇವಿ ಶ್ರೀಪಾದ ಇವರು ನಮಗೆ ಒಂದು ಲೇಖನ ಕಳುಹಿಸಿ ಅದರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಈ ವರುಷ ಮಹಿಳಾಧ್ಯಕ್ಷರಾಗಬೇಕೆಂದು ಒಂದು ವಿನಂತಿ ಮಾಡಿಕೊಂಡಿರುವರು. ಅದರಲ್ಲಿ ಎತ್ತಿ ತೋರಿಸಿರುವ ವ್ಯಕ್ತಿಗಳ ಪ್ರಶಂಸೆಯ ಅಂಶವನ್ನು ಬಿಟ್ಟು ಮಹಿಳೆಯರ ಪರವಾಗಿ ಅವರು ವಾದಿಸಿರುವ ಅಂಶವನ್ನು ಮಾತ್ರ ಪರಿಷತ್ ಸದಸ್ಯರ ಅವಶ್ಯ ಅವಗಾಹನೆಗಾಗಿ ಕೆಳಗೆ ಕೊಟ್ಟಿರುವೆವು.—]

"ಕನ್ನಡ ಸಾಹಿತ್ಯ ಪರಿಷತ್ತು ಜನ್ಮವೆತ್ತಿ ೨೫ ವರುಷಗಳಾದುವು. ಈ ಕಾಲದ ಶತಮಾನದಲ್ಲಿ ಒಬ್ಬರಾದರೂ ಮಹಿಳಾಧ್ಯಕ್ಷರಿಲ್ಲದೇ ಇರುವುದು ಕರ್ನಾಟಕ ಮಹಿಳೆಯರೆಲ್ಲರೂ ತಲೆತಗ್ಗಿಸಬೇಕಾದ ವಿಚಾರವಾಗಿದೆ"

"ಕನ್ನಡ ನಾಡಿನ ಸ್ತ್ರೀಯರು ಮಿಕ್ಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಕನ್ನಡಮ್ಮನಿಗೆ ಬಹು ಹಿಂದಿನಿಂದಲೂ ಸೇವೆ ಸಲ್ಲಿಸುತ್ತಿದ್ದಾರೆ. ಈಗೀಗಲಂತೂ ಕನ್ನಡ ಸಾಹಿತ್ಯದಲ್ಲಿ ಬರೆಯುತ್ತಿರುವ ಮಹಿಳೆಯರ ಸಂಖ್ಯೆ ಬೆಳೆಯುತ್ತಿದೆ. ಅಲ್ಲದೆ ಕನ್ನಡ ಸಾಹಿತ್ಯವನ್ನು ಓದುವವರೆಲ್ಲ ಹೆಂಗಸರೇ ಹೆಚ್ಚು ಉತ್ಸಾಹವನ್ನು ತೋರಿಸುತ್ತಿರುವರೆಂದರೆ ಅದು ಅಭಿಮಾನದ ಮಾತೇನೂ ಅಲ್ಲ.

"ಈ ಇಪ್ಪತ್ತೈದು ವರುಷಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿರುವ ಮಹನೀಯರುಗಳ ಪಟ್ಟಿಯನ್ನು ಪರಿಶೀಲಿಸಿದರೆ ಸಾಮಾನ್ಯವಾಗಿ ಕನ್ನಡ ನಾಡಿನ ವಿವಿಧ ಅಭಿಪ್ರಾಯಗಳ ಪ್ರತಿನಿಧಿಗಳೆಲ್ಲರೂ ಇರುವಂತೆ ವ್ಯಕ್ತವಾಗುತ್ತದೆ. ಆದರೆ ಆ ಪಟ್ಟಿಯಲ್ಲಿ ಇರುವ ದೊಡ್ಡ ಕೊರತೆಯೆಂದರೆ ಒಬ್ಬ ಮಹಿಳಾಧ್ಯಕ್ಷೆಯರಿಲ್ಲದೇ ಇರುವುದು. ×

"ಕನ್ನಡ ನಾಡಿನ ಮಹಿಳೆಯರು ತಮಗೆ ಬರಬೇಕಾದ ನ್ಯಾಯವಾದ ಹಕ್ಕನ್ನು ತಮ್ಮ ಅಣ್ಣತಮ್ಮಂದಿರಲ್ಲಿ ಕೇಳುತ್ತಿದ್ದಾರೆ. ಹಕ್ಕು ಕೇಳಬೇಕು ಎಂಬುದು ಹೇಳುವುದಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಂಡು ತಮ್ಮ ಸಹೋದರಿಯರ ನ್ಯಾಯವಾದ ಹಕ್ಕನ್ನು ನಮ್ಮ ಸಹೋದರರು ಕೊಡುವರೆಂದು ಕನ್ನಡ ಮಹಿಳೆಯರೆಲ್ಲಾ ನಿರೀಕ್ಷಿಸುತ್ತಿದ್ದಾರೆ.

ಭಾರತದ ರಾಷ್ಟ್ರೀಯ ಮಹಾಸಭೆಯಲ್ಲಿ ಯಾವರೂ ಎರಡು ಬಾರಿ ಮಹಿಳೆಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ ಭಾರತದ ಸ್ತ್ರೀಯರೆಲ್ಲರ ಆದರಕ್ಕೂ ಪಾತ್ರರಾಗಿದ್ದಾರೆಂಬ ವಿಚಾರವನ್ನು ಕನ್ನಡ ನಾಡಿನ ಮಹನೀಯರುಗಳೂ ಮನಗಾಣಬೇಕೆಂದು ವಿನಯದಿಂದ ಕೋರುತ್ತೇನೆ.

ನನ್ನ ಕನ್ನಡ ನಾಡಿನ ಸಹೋದರಿಯರಲ್ಲಿ ಒಂದು ಬಿನ್ನಹ. ನಾವು ಉಪೇಕ್ಷಿಸಲ್ಪಟ್ಟಿರುವುದಕ್ಕೆ ನಮ್ಮ ಮೌನವೇ ಕಾರಣ. ನಾವು ಮೌನದಿಂದಿದ್ದರೂ ನಮ್ಮ ನ್ಯಾಯವಾದ ಹಕ್ಕುಗಳನ್ನು ನಮಗೆ ಸಮಾಜವು ಈಚೀಚೆಗೆ ಕೊಡುವದೆಂಬುದು ತೋರುತ್ತಿದೆ. ಆದುದರಿಂದ ಮಹಿಳೆಯರು ಮೌನವನ್ನು ಬಿಟ್ಟು ಈ ಸಾರಿಯ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕಾದರೂ ಮಹಿಳಾಧ್ಯಕ್ಷೆಯರನ್ನು ಆರಿಸಬೇಕೆಂದು ಕನ್ನಡ ನಾಡಿನ ಅತ್ಯಂತವೂ ಚಳವಳಿ ಹೂಡುವುದು ನ್ಯಾಯವಾಗಿದೆ." × × × ×

"ಮೊದಲೇ ಅರಿಕೆ ಮಾಡಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಈ ಸಾರಿ ಒಬ್ಬ ಮಹಿಳೆಯರಾಗಬೇಕಾದುದೂ ಆಗತ್ಯವೂ ನ್ಯಾಯವೂ ಆಗಿದೆ ಮತ್ತು ನ್ಯಾಯವು ಮಹಿಳೆಯರಿಗೂ ದೊರೆಯುವುದೆಂದೂ ನಂಬಿದ್ದೇನೆ."



ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆಯು ತಾ. ೨೨ರಂದು ಬದಾಮಿಯಲ್ಲಿ ಸೇರಿತು. ಶ್ರೀಮತಿ ಕೃಷ್ಣಾಬಾಯಿ ಪಂಜೀಕರರ ಹಸ್ತದಿಂದ ಧ್ವಜವಂದನೆಯಾಗಿ ಡಾ. ನಾಗನಗೌಡರ ಅಧ್ಯಕ್ಷತೆಯಿಂದ ಸಭೆ ಜರಗಿತು. ಸಭೆಗೆ ಅನೇಕ ಸದಸ್ಯರೂ ಸತ್ಯಾಗ್ರಹಿಗಳೂ ಬಂದಿದ್ದರು. ಅನೇಕ ಮಂದಿ ಪ್ರೇಕ್ಷಕರು ಕೂಡಿದ್ದರು. ಕರ್ನಾಟಕ ಪ್ರಮುಖ ಮುಂದಾಳುಗಳು ಮುಂಬಯಿಯಲ್ಲಿ ಮಾಡಿದ ನಿರ್ಣಯದಂತೆ ಕರ್ನಾಟಕವು ಮಹಾತ್ಮರ ಆಜ್ಞೆಯನ್ನು ಪಾಲಿಸಬೇಕೆಂಬುದೂ, ಮುಂದಿನ ಹೋರಾಟದಲ್ಲಿ ಸರ್ವಸ್ವವನ್ನಾದರೂ ತ್ಯಾಗಮಾಡಲು ಸಿದ್ಧರಿರಬೇಕೆಂದೂ ನಿರ್ಣಯವಾಯಿತು.

ಅಧ್ಯಕ್ಷರಾದ ಡಾ. ನಾಗನಗೌಡರು ಪ್ರಾರಂಭ ಭಾಷಣ ಮಾಡಿ ಪ್ರಸ್ತುತದ ಪರಿಸ್ಥಿತಿಯನ್ನು ವಿವರಿಸಿದರು. ಕಾರ್ಯದರ್ಶಿಯವರು ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

"ಮಹಾತ್ಮಾ ಗಾಂಧಿಯವರು ಕಾಂಗ್ರೆಸಿನ ನೇತೃತ್ವ ವಹಿಸಿದ ಬಗ್ಗೆ ಈ ಸಭೆಯು ತನ್ನ ಸಂಪೂರ್ಣ ಸಮಾಧಾನವನ್ನು ವ್ಯಕ್ತಪಡಿಸುತ್ತದೆ ಮತ್ತು ಗಾಂಧೀಜಿಯವರ ಆಜ್ಞೆಯನ್ನು ಅಕ್ಷರಶಃ ಪಾಲಿಸುವುದೆಂದು ಅವರಿಗೆ ಆಶ್ವಾಸನೆ ಕೊಡುವುದಲ್ಲದೆ ಪ್ರಾಂತದಲ್ಲಿಯ ಎಲ್ಲಾ ಜನರೂ ಸಿದ್ಧರಾಗಿ ಗಾಂಧೀಜಿಯವರನ್ನೇ ಹಿಂಬಾಲಿಸಬೇಕೆಂದು ಅವರನ್ನು ಬಿನ್ನವಿಸಿಕೊಳ್ಳುತ್ತದೆ."

ಶ್ರೀ. ಪಠಮಪ್ಪ ಹೊಸಮನಿಯವರು ಈ ಸೂಚನೆಗೆ ಅನುಮೋದನೆಯಿತ್ತರು. ಶ್ರೀಗಳಾದ ದಿವಾಕರ, ವೀರನಗೌಡ, ನೇಶ್ವಿ, ಇಬ್ರಾಹಿಮ್ ಶಾಹಿದ್, ಜೋಶಿ ವಿಜಾಪುರ, ಶಂಕರ ಕುರ್ತಕೋಟಿ ಮತ್ತು ಶಾಂತನಾಥ ಇಂಗಳೆ ಇವರು ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ವರ್ಕಿಂಗ್ ಕಮಿಟಿಯ ನಿರ್ಣಯದ ಸ್ಪಷ್ಟೀಕರಣ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಭೆಯ ಮುಂದೆ ಬಂದ ನಿರ್ಣಯ ಇವುಗಳ ಮಹತ್ವವನ್ನು ವಿವರಿಸಿ ಭಾಷಣಗಳನ್ನಿತ್ತರು. ನಿರ್ಣಯವು ಒಮ್ಮತದಿಂದ ಅಂಗೀಕೃತವಾಯಿತು.

ಪ್ರಸಿದ್ಧ ವೈಜ್ಞಾನಿಕನ ಹೃದಯೋದ್ಗಾರ!

ವೈಜ್ಞಾನಿಕರ ಅದ್ಭುತಶೋಧಗಳ ಕುರಿತು ನಾವು ನಿತ್ಯವೂ ಅನೇಕ ಚಿತ್ರ ವಿಚಿತ್ರ ಸಂಗತಿಗಳನ್ನು ಓದಿ ಕೇಳುತಿದ್ದೇವೆ. ಈ ಸಂಬಂಧವಾಗಿ ಫ್ರಾನ್ಸಿನ ಒಬ್ಬ ಸುಪ್ರಸಿದ್ಧ ವೈಜ್ಞಾನಿಕ ಎಡಾಥರ್ಡ್ ನ್ಯೋಲನ್ ಎಂಬಾತನ ವಿಚಾರಗಳು ಬಹು ಮನೋರಂಜಕವಾಗಿರುವವು. ಅವರ ಹೇಳಿಕೆಯ ತಾತ್ಪರ್ಯ ಇಷ್ಟು—'ಬಾಹ್ಯ ಜಗತ್ತಿನ ಮೇಲೆ ನಾವು ನಮ್ಮ ವಿಜಯ ಮತ್ತು ಅಧಿಕಾರವನ್ನು ಸ್ಥಾಪಿಸುತ್ತ ಹೋದ ಹಾಗೆ, ನಮ್ಮ ಮತ್ತು ಸಂಗಡಿಗರ ಆಂತರಿಕ ಜೀವನವನ್ನು ನಾವು ದುರ್ಲಕ್ಷಿಸುತ್ತ ಇದ್ದೇವೆ. ಸಾವಿರಾರು ಮೈಲು ದೂರದ ಪ್ರಯಾಣವನ್ನು ಕೆಲವೇ ತಾಸುಗಳ ಒಳಗೆ ಮುಗಿಸುವ ಅವಸರದಲ್ಲಿ ನಾವು ನಮ್ಮ ಹೆಂಡತಿ ಮಕ್ಕಳು, ಬಂಧುಬಾಂಧವರು—ಎಲ್ಲರನ್ನೂ ಮರೆಯುತ್ತೇವೆ. ಅವರ ವಿಷಯವನ್ನು ಆಲೋಚಿಸಲಿಕ್ಕೆ ನಮಗೆ ಸಮಯವೇ ಉಳಿಯುವುದಿಲ್ಲ. ಆದ್ದರಿಂದ ಜಗತ್ತನ್ನು ಹತ್ತಿರದನ್ನಾಗಿ ಮಾಡುವ ಆತುರದಲ್ಲಿ ನಾವು ನಮ್ಮ ಸಮೀಪವರ್ತಿಗಳನ್ನು ದೂರಸ್ಥರನ್ನಾಗಿ ಮಾಡುತಿದ್ದೇವೆ! ನಾವು ಭೌತಿಕ ವಿಷಯಗಳ ಮೇಲೆ ವಿಜಯ ಸಂಪಾದನೆ ಮಾಡುವ ಲಾಲಸೆಯನ್ನು ಇಟ್ಟುಕೊಳ್ಳುವುದಕ್ಕಿಂತ ನಮ್ಮ ಸಮೀಪವರ್ತಿಗಳ ಹೃದಯ ಮನಸ್ಸುಗಳನ್ನು ಪ್ರಭಾವಿತ ಮಾಡವುದು ಹೆಚ್ಚು ಉಪಯುಕ್ತವಾಗಿದೆ. ಕೇವಲ ಭೌತಿಕ ಪ್ರಪಂಚದ ಮೇಲೆ ಮನುಷ್ಯನ ಒಡೆತನವನ್ನು ಸ್ಥಾಪಿಸುವದರಿಂದ ನಮಗೆ ನಿಜವಾದ ಶಾಂತಿಯು ದೊರೆಯಲಾರದು. ಪ್ರಕೃತಿಯ ವಿಜಯವನ್ನು ಸಂಪಾದಿಸುತ್ತ ಪರಮಾತ್ಮನಿಂದ ನಾವು ವಿಮುಖರಾಗುವೆವಾದರೂ, ನಿಜವಾದ ಶಾಂತಿಯು ನಮಗೆ ಆ ಪರಮಾತ್ಮನ ಸನ್ನಿಧಿಯಲ್ಲಿಯೇ ಪ್ರಾಪ್ತವಾಗಬೇಕು. ವಿಜ್ಞಾನಿಗಳು ಭೌತಿಕ ವಿಚಾರಗಳ ಕಡೆಗೆ ತಮ್ಮ ಲಕ್ಷ್ಯವನ್ನಿಟ್ಟಷ್ಟು ಪಾರಮಾರ್ಥಿಕ ವಿಚಾರಗಳ ಕಡೆಗೆ ಲಕ್ಷ್ಯವನ್ನಿಡದಿರುವುದು ಖೇದಕರವಾಗಿದೆ. ಜ್ಞಾನ ವಿಜ್ಞಾನಗಳ ಸಮನ್ವಯದಿಂದಲೇ ಲೋಕೋದ್ಧಾರವಾಗುವದು.

ಮೂರು ಕಾಲಿನ ಕೋಳಿ ಕೂಗಿತು!

ಛಲವಾದಿಗಳ ವಿಷಯವಾಗಿ, ಅಸಾಧ್ಯ ಅಥವಾ ಅಸಂಭವ ವಿಷಯಗಳನ್ನು ಕುರಿತು ಯಾರಾದರೂ ಛಲ ಹಿಡಿದರೆ—'ಅವನು ತನ್ನ ಕೋಳಿಗೆ ಮೂರು ಕಾಲು ಅನ್ನುತಿದ್ದಾನೆ' ಎಂದು ನಾವು ಹೇಳುವೆವು. ಆದರೆ ಈಗಿನ ವಿಜ್ಞಾನಿಗಳು ಅಸಾಧ್ಯ ಮತ್ತು ಅಸಂಭವ ಎಂದಿರುವದನ್ನೇ ಸಾಧ್ಯ ಮತ್ತು ಸಂಭವವನ್ನಾಗಿ ಮಾಡಿ ತೋರಿಸುತಿದ್ದಾರೆ. ಅವರು ಮೂರು ಕಾಲಿನ ಕೋಳಿಗಳನ್ನು ತಯಾರುಮಾಡಿರುವರು. ಕೋಳಿಮರಿಯು ಮೊಟ್ಟೆಯಲ್ಲಿದ್ದಾಗಲೇ, ಮೊಟ್ಟೆಯಲ್ಲಿ ಸಣ್ಣ ತೂತು ತೆಗೆದು, ಅದರೊಳಗಿನ ಮರಿಗೆ ಬೇರೆ ಒಂದು ಕೋಳಿಮರಿಯ ಸಣ್ಣ ಕಾಲನ್ನು ಕಸಿ ಕಟ್ಟುತ್ತಾರೆ. ಸ್ವಲ್ಪ ಸಮಯದ ನಂತರ ಉಳಿದ ಎರಡು ಕಾಲುಗಳೊಂದಿಗೆ ಕಸಿ ಕಟ್ಟಿದ ಈ ಕಾಲೂ ಕೂಡಿ ಬೆಳೆಯತೊಡಗುತದೆ. ಕಸಿಕಟ್ಟುವ ಈ ಕಾರ್ಯವನ್ನು ನಡೆಸಲಿಕ್ಕೆ ಬಹಳ ಹಸ್ತಕೌಶಲವೂ ತಾಳ್ಮೆಯೂ, ಸಹನಾಶಕ್ತಿಯೂ ಬೇಕು. ಆದ್ದರಿಂದ ಈ ಕೆಲಸ ಮಾಡುತ್ತಿರುವಾಗ ಅನೇಕ ಮರಿಗಳು ಸಾಯುತ್ತವೆ. ಪರಂತು ಬದುಕಿದವುಗಳ ಬಹಳ ಕುತೂಹಲವನ್ನುಂಟು ಮಾಡುವ ವಸ್ತುಗಳಾಗಿ ಉಳಿಯುತ್ತವೆ.

ಇಂಜಕ್ಷನಿಗೆ ಗಟ್ಟಿ ರಕ್ತ ಬೇಕು!

ಶರೀರದಲಿ ಗಾಯವಾಗಿ ರಕ್ತವು ಹೊರಗೆ ಹರಿಯತೊಡಗಿದಾಗ, ಗಾಳಿಯ ಸ್ಪರ್ಶದೊಂದಿಗೆ ಸ್ವಲ್ಪ ಸಮಯದಲ್ಲಿ ಹೆಪ್ಪು ಕಟ್ಟಿ ಅದು ಗಟ್ಟಿಯಾಗುತ್ತದೆ. ಆದರೆ ಹೆಪ್ಪುಕಟ್ಟಿದ ಈ ಗಟ್ಟಿ ರಕ್ತವು ಸ್ವಲ್ಪ ಸಮಯದೊಳಗಾಗಿಯೇ ಕೆಟ್ಟು ರಕ್ತದ ಗುಣವನ್ನು ಕಳೆದ ಕೊಳ್ಳುವದರಿಂದ ಮತ್ತೆ ಅದು ಯಾವ ಪ್ರಯೋಜನಕ್ಕೂ ಬಾರದೆ ವ್ಯರ್ಥವಾಗುತ್ತದೆ. ರಶ್ಯದ ವಿಜ್ಞಾನಿಗಳು ಬಹಳ ಸಮಯ ಕಳೆದರೂ ಕೆಟ್ಟುಹೋಗದಂತೆ ರಕ್ತವನ್ನು ಹೆಪ್ಪುಹಾಕಿ ಗಟ್ಟಿಮಾಡುವ ಒಂದು ಹೊಸ ವಿಧಾನವನ್ನು ಕಂಡುಹಿಡಿದಿರುವರು. ಯಾರಾದರೊಬ್ಬ ಸಿರ್ಬಲ ವ್ಯಕ್ತಿಯ ಶರೀರದಲ್ಲಿ ರಕ್ತವನ್ನು ಇಂಜೆಕ್ಷನ ಮಾಡಬೇಕಾದಾಗ ಈ ಗಟ್ಟಿ ರಕ್ತವನ್ನೇ ಬೇಕಾದಲ್ಲಿಂದ ತರಿಸಿಕೊಂಡು ಅದನ್ನು ಕರಗಿಸಿ ಅವನ ಮೈಯಲ್ಲಿ ಇಂಜೆಕ್ಷನ ಮಾಡಬಹುದು. ಈ ಕಾರ್ಯಕ್ಕೆ ಈಗಿನಂತೆ ಆಗಾಗಲೇ ತೆಗೆದ ಹೊಸ ದ್ರವರೂಪದಲ್ಲಿರುವ ರಕ್ತದ ಅಗತ್ಯವಿರವದಿಲ.

ಸರ್ಪದಲ್ಲಿ ಔಷಧಿಸತ್ವದ ವಿಷ

ಸರ್ಪದ ವಿಷದಲ್ಲಿ ಔಷಧಿ ಗುಣವು ಇರುವದೆಂದು ವೈಜ್ಞಾನಿಕರು ತಿಳಿದು ಈಗ ಸ್ವಲ್ಪ ಸಮಯ ಕಳೆದುಹೋಗಿದೆ. ಆದರೆ ಸರ್ಪದ ಬಾಯಿಯಿಂದ ಆ ವಿಷವನ್ನು ಹೀರಿ ತೆಗೆಯುವದು ಹೇಗೆಂಬುದು ಅವರಿಗೆ ಒಂದು ಸಮಸ್ಯೆಯಾಗಿತ್ತು. ಸರ್ಪದ ಬಾಯಿಯನ್ನು ಕಂಠದ ಹತ್ತಿರ ಒತ್ತಿದಾಗ ಅದು ತೆರೆಯುತಿತ್ತು. ಆಗ ವಿಷದ ಚೀಲಗಳನ್ನು ಒತ್ತಿ ವಿಷವನ್ನು ಸಂಗ್ರಹಿಸುತಿದ್ದರು. ಇದರಿಂದ ಅನೇಕ ಬಾರಿ ವಿಷ ತೆಗೆಯುವವರು ವಿಷವೇರಿ ಸಾಯುತಿದ್ದರು. ಅಲ್ಲದೆ ಚೆನ್ನಾಗಿ ಪಕ್ವವಾಗದ ವಿಷವೂ ಹೊರಬರುತಿತ್ತು. ಈಗ ವಿಜ್ಞಾನಿಗಳ ವಿದ್ಯುತಿನ ಬಲದಿಂದ ವಿಷವನ್ನು ಹೀರುವ ಉಪಾಯವನ್ನು ಕಂಡುಹಿಡಿದಿದ್ದಾರೆ. ಸರ್ಪದ ವಿಷವು ಕಿತ್ತಳೆ ಹಣ್ಣಿನ ರಸದಂತೆ ಇರುತ್ತದೆ. ಶೀತೋಷ್ಣ ಮತ್ತು ಉಷ್ಣವಲಯಗಳಲ್ಲಿರುವ ಸರ್ಪಗಳು ಹೆಚ್ಚು ವಿಷವನ್ನು ಕೊಡುತ್ತವೆ. ಎರಡೆರಡು ವಾರಗಳಿಗೊಮ್ಮೆ ಅವುಗಳ ವಿಷವು ಕೋಶಗಳಲ್ಲಿ ತುಂಬಿಕೊಂಡು ಪೂರ್ಣ ಪಕ್ವವಾಗುತದೆ. ಈ ವಿಷವನ್ನು ಸಂಗ್ರಹಿಸಿ ಬಾಟಲಿಗಳಲ್ಲಿ ತುಂಬಿಸಿಇಡುವರು. ಇದನ್ನು ಬಸವುರೋಗ ಅಥವಾ ಸಾಂಸರ್ಗಿಕ ರೋಗ ಗಾಯ ವ್ರಣಗಳಿರುವವರ ಸೇವಿಸಬಹುದು.

೧೯೩೯ರ ನೋಬಲ್ ಬಹುಮಾನ!

೧೯೩೯ನೆ ಇಸವಿಯ ವಿಜ್ಞಾನ ಸಂಬಂಧವಾದ ನೋಬಲ್ ಬಹುಮಾನವು ಅಮೇರಿಕಾ ಕೆಲಿಫ್ರೋರ್ನಿಯ ವಿಶ್ವವಿದ್ಯಾಲಯದ ಪ್ರೊಫೆಸರ ಅರ್ನೆಸ್ಟ ಆರಲೆಂಡೊ ಲಾರೆನ್ಸ ಎಂಬವರಿಗೆ ಪ್ರಾಪ್ತವಾಗಿದೆ. ಅವರು ಕಂಡುಹಿಡಿದಿರುವ ಸೈಕ್ಲೋಟ್ರೋನ ಎಂಬ ಗೋಲಿಯ ಬಗ್ಗೆ ಅವರಿಗೆ ಈ ಪುರಸ್ಕಾರವು ಪ್ರಾಪ್ತವಾಗಿದೆ. ಪದಾರ್ಥ ವಿಶೇಷಣದೊಂದಿಗೆ ಈ ಗೋಲಿಯ ಸಂಬಂಧವು ಇರುವದು. ರೇಡಿಯಮಿನಿಂದ ತಯಾರಾದ ಈ ಗೋಲಿಯನ್ನು ಅವರು ತಯಾರಿಸಿದ ಒಂದು ವಿಶೇಷ ಪ್ರಕಾರದ ಯಂತ್ರದಲ್ಲಿಟ್ಟು ಸುಟ್ಟಾಗ, ಅದು ಹೊಡೆತದಿಂದ ಒಂದು ಕಬ್ಬಿಣ ಅಥವಾ ಹಿತ್ತಾಳಿಯ ತಗಡಿನ ತುಂಡು, ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರ ನೋಡಬಹುದಾದಂಥ ಸಣ್ಣ ಮತ್ತು ಸೂಕ್ಷ್ಮ ಚೂರುಗಳಾಗಿ ಒಡೆಯುವದು. ಇದರಿಂದಾಗಿ ಪದಾರ್ಥ ವಿಜ್ಞಾನದ ಅನೇಕ ರಹಸ್ಯಗಳು ಇನ್ನು ಸುಲಭವಾಗಿ ತಿಳಿಯಬಹುದು.

೧,೦೦೦ ರೂಪಾಯಿಗಳ ಬಕ್ಷೀಸು

ಕೆಳಗಿನ ಔಷಧಗಳಲ್ಲಿ ಗುಣವಿಲ್ಲೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ. ಇನಾಮ

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು: ೪—೮—೦

ಪ್ರಮೇಹ ಮೈಯಲ್ಲಿ ಹೊಂದಿಸಿದರೆ ತಮ್ಮ ಮತ್ತು ತಮ್ಮ ಭಾವೀ ಪೀಳಿಗೆಯ ನಾಶವಾಗದೆ ಬಿಡಲಾರದು. ಇಂಥ ಮಹಾ ಹಾನಿಕಾರಕ ಎಲ್ಲ ತರ (ಇಷ್ಟತ್ರ) ಪ್ರಕಾರದ ಪ್ರಮೇಹ ಪರಮಾ ಅದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಅದೆ.

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತದೆ. ಮೂತ್ರ ಮಾರ್ಗ ಸ್ವಚ್ಛವಾಗಿ ಮೂತದ ಕಾಲಕೆ ಉಂಟಾಗುವ ವೇದನೆ ಹತ್ತು ಉರುಪು ಇಲ್ಲದಂತಾಗುತ್ತದೆ. ಕೀವು ಮತ್ತು ಪ್ರಮೇಹ ರೋಗ ಪಸ ಬಂದಾಗುತ್ತದೆ. ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರ ಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ. ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ ಏನೂ ಇಲ್ಲ. ಕಿಮ್ಮತ್ತಿನ ಹೊರತಾಗಿ ಅಂಚೆ ವೆಚ್ಚ ಬೇರೆ.

೨] ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪ್ರದರ ಶೆರಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ-ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಾದ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳದಿ, ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟುನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತೆ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟುದೋಷ ಇವುಗಳಿಂದ ಕಿಪ್ಪಟ್ಟೆ ಗರ್ಭಾಶಯ ಇಲ್ಲವೆ ಕುಸುಮದಲ್ಲಿ ಆಗುವ ವೇದನೆ, ನಡ, ತಲೆ, ತೊಡೆ ಮತ್ತು ಸಂದು ಇವುಗಳಲ್ಲಿ ನೋವು, ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ ಆಗದಿರುವಿಕೆ, ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಇಲ್ಲ. ಅಂ. ವೆ. ಬೇರೆ.

ಪತ್ತೆ:—**ವೈದ್ಯರಾಜ ಎ. ಬಿ. ಸಿದನಾಳ,**

ಮನೆ ನಂಬರ ೧೩೮೯, ಎಸ್. ಎಮ್. ಬಸವಣಗಲ್ಲಿ, ಬೆಳಗಾವಿ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 2—10—1940ರಿಂದ ತಾ. 10—10—1940ರ ವರೆಗೆ

ಮೈಸೂರು ದಸರಾ ಮಹೋತ್ಸವ

(ತಾರೀಕು 10—10—1940ರಲ್ಲು)

ಜಂಬೂಸವಾರಿ ಮೆರವಣಿಗೆಯ ಮನಮೋಹಕ ನೋಟ

ತಾರೀಕು 16—10—1940ರಲ್ಲು

ಮುಹೂರ್ತ ರಾತ್ರಿ 12 ಗಂಟೆಗೆ

"ಶ್ರೀ ತುಲಾಕಾವೇರಿ ಸಂಕ್ರಮಣ ಜಾತ್ರೆ... ಪುಣ್ಯ ತೀರ್ಥಸ್ನಾನ ಮಾಡುವ ಸುಸಂಧಿ"

ವಿವಿಧ ವಸ್ತುಪ್ರದರ್ಶನಾಲಯದ ನೋಟ—ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯ ಬೆಡಗು— ಶ್ರೀ ಜಯಚಾಮರಾಜೇಂದ್ರ ಒಡೆಯರವರ ದರ್ಬಾರದ ಚಿತ್ತಾಕರ್ಷಕ ಸೊಬಗು— ಜಂಬೂ ಸವಾರಿ ಮೆರವಣಿಗೆಯ ಗಂಭೀರತೆ— ಮೃಗಾಲಯದ ಶ್ರೀಸ್ವತೆ— ಜಗನ್ಮೋಹನ್ ಅರಮನೆಯ ಸೌಂದರ್ಯ—ಕನ್ನಾಂಬಾಡಿಕಟ್ಟೆಯ ನಿರ್ಮಾಣ ಚತುರತೆ—ಮನಸ್ಸನ್ನಾಕರ್ಷಿಸುವ ಕಾರಂಜಿಗಳ ಸ್ವಪ್ನಾ ಚಮತ್ಕಾರ—ಶ್ರೀ ಮಹಾಮಾಯಿ ಚಾಮುಂಡೇಶ್ವರೀ ದೇವಿಯ ದಿವ್ಯ ದರ್ಶನಲಾಭ—ಶ್ರೀರಂಗಪಟ್ಟಣದಲ್ಲಿರುವ ಟಿಪ್ಪುವಿನ ಕೋಟೆ—ಶಿವ ಸಮುದ್ರ—ಶ್ರೀ ನಂಜುಂಡೇಶ್ವರ ಸ್ವಾಮಿ, ದೇವಸ್ಥಾನಗಳನ್ನು ನೋಡುವಿಕೆ. ಅಲ್ಲದೆ ಬರುತ್ತಾ ಮಡಿಕೇರಿಯಿಂದ ಬರೇ 24 ಮೈಲು ದೂರದಲ್ಲಿರುವ ಭಾಗಮಂಡಲದ ಸಮೀಪವಿರುವ ಪುಣ್ಯ ಪ್ರವಾಹಿನಿ ಶ್ರೀ ಕಾವೇರಿ ನದಿಯಲ್ಲಿ ಮುಹೂರ್ತ ಸಮಯದಲ್ಲಿ ಸ್ನಾನಮಾಡಿ ಪುಣ್ಯಾರ್ಜನೆಯನ್ನು ಸಂಪಾದಿಸುವ ಸುಸಂಧಿ—

ಮಂಗಳೂರು ಮೈಸೂರು ಚಾರ್ಜು **4-8-0.**

— ಮೇಲ್ಕಂಡ ತಾರೀಕುಗಳಲ್ಲಿ ಸ್ಪೆಶ್ಯಲ್ ಸರ್ವಿಸುಗಳ ಏರ್ಪಾಡು ಮಾಡಲಾಗಿದೆ —

ಪ್ರಯಾಣಿಕರ ಸೌಖರ್ಯದ ಬಗ್ಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಬೇಕಾದರೆ ವಿಚಾರಮಾಡಿ ಔಷಧ ಬೇಡಿರಿ. ಡಜನ್ನು ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೇಳಿನೋಡಬಹುದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಲ್ಲದೆ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦

ವಿ ಪಿ. ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
,, ದುಯಂ ,, ,,	1—15—0	—
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡು ,,	4—12—0	4—14—0
,, ದುಯಂ ,, ,,	4—10—0	4—10—0
,, ಅವ್ವಲ್ ಸುಗ್ಗಿ ,,	4—8—0	4—10—0
,, ದುಯಂ ,, ,,	4—6—0	4—7—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	85—0—0	40—0—0
,, ಸಿಪ್ಪೆ ಇದ್ದದು ,,	87—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	47—8—0	
,, ದಿಲ್‌ಪಸಂದ ,,	—	—
ತೆಂಗಿನ ಎಣ್ಣೆ ಮುಡಿಕ್ಕೆ	8—10—0	8—10—0
ಸಿಪ್ಪೆಯದ್ದು ... 1000ಕ್ಕೆ	4—0—0	4—0—0
ಗೇರುಬೀಜ ಮುಡಿಗೆ	8—12—0	4—0—0
ಕೆಂಪಿನ ಬೆಲ್ಲ ಖಂಡಿಗೆ	85—0—0	42—8—0
ಒಳ್ಳೆಮೆಣಸು ಖಂಡಿ...	18—8—0	14—0—0

ಬಿಡಿ ಸಂಚಿಕೆ ಬೆಲೆ ಒಂದಾಣೆ. ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 ***Regd. No. M. 3406***

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 27—9—1940 [ಸಂಚಿಕೆ 39

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 1 42 Crores
Total Funds exceed	Rs. 1 52 Crores
Premium income during the year exceeds	Rs .37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time This is the unique opportunity to Agents to put through larger business To Insure or to Represent.

Please apply to any of our following Offices:

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs.

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.

Car Street, Mangalore.

Central Station Road, Trivandrum.

Gautam Nivas, Charni Road, Girgaum, Bombay No. 4.

Post Box No. 337 Mount Road, Madras.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಸ್ನಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯ ಶಾಲಾ ಬ್ರಾಂಚ್ ರಥಬೀದಿ ಮಂಗಳೂರ

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.